(B)025216

ಕರ್ನಾಟಕ ವಿಧಾನ ಸಭೆಯ ನಡವಳಿಕೆಗಳು

KARNATAKA LEGISLATIVE ASSEMBLY DEBATES

ಅಧಿಕೃತ ವರದಿ

Official Report

ಹತ್ತನೆಯ ವಿಧಾನಸಭೆಯ ಏಳನೆಯ ಅಧಿವೇಶನ

SEVENTH SESSION OF THE TENTH LEGISLATIVE ASSEMBLY

ಸಂಪುಟ-೩ (ಕ್ರಮಾಂಕ ೪ರಿಂದ ೫) ಭಾಗ-೨

Volume -III (No. 4 to 5) Part-2

(೨೫ನೇ ಮಾರ್ಚ್ ೧೯೯೮ ರಿಂದ ೨೬ನೇ ಮಾರ್ಚ್ ೧೯೯೮)

(25th March 1998 to 26th March 1998)

ಕರ್ನಾಟಕ ವಿಧಾನ ಮಂಡಲದ ಕಾರ್ಯಾಲಯ, ಬೆಂಗಳೂರು.

KARNATAKA LEGISLATURE SECRETARIAT BANGALORE

ವಿಷಯಾನುಕ್ರಮಣಿಕೆ

ಸಂಪುಟ-೩ (ಕ್ರಮಾಂಕ ೪ ರಿಂದ ೫) ಭಾಗ-೨

Volume -III (No. 4to5) Part-2

(೨೫ನೇ ಮಾರ್ಚ್ ೧೯೯೮ ರಿಂದ ೨೬ನೇ ಮಾರ್ಚ್ ೧೯೯೮)

(25th March 1998 to 26th March 1998)

ಬುಧವಾರ, 25ನೇ ಮಾರ್ಚ್ 1998

1)	ಪ್ರಶ್ನೋತ್ತರಗಳು	
	ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು	522-544
	ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು	545-661
2)	ಪ್ರಕಟಣೆ	662
3)	ಸಭೆಯ ಮುಂದಿಡಲಾದ ಕಾಗದ ಪತ್ರಗಳು	662-666
4)	ವರದಿಯನ್ನೊಪ್ಪಿಸುವುದು	667
5)	ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :-	667
	ಅ) ಕರ್ನಾಟಕ ಗೃಹ ಮಂಡಳಿಯ ನೌಕರರಾದ ಅಂದಾನಿಗೌಡರಿಗೆ ಸೈಟ್ ನೀಡುವ ಬಗ್ಗೆ -ಶ್ರೀ ಕೆ. ಎಸ್. ಪುಟ್ಟಣ್ಣಯ್ಯ -ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)	668

ಆ) ಆಟಾ, ಮೈದಾ, ಸೋಜಿ ಮೇಲೆ ಮಾರಾಟ ತೆರಿಗೆ ವಿಧಿಸಿರುವುದು 668

ಇ) ಮೈಸೂರಿನ ದೇವನೂರು ಕೆರೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು 669

-ಶ್ರೀ ಇ. ಮಾರುತಿರಾವ್ ಪವಾರ್

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಈ) ಸಿಂಧನೂರು ತಾಲ್ಲೂಕಿನಲ್ಲಿ ಕೆರೆ ನಿರ್ಮಿಸಲು ಭೂಮಿ ಖರೀದಿ 670

-ಶ್ರೀ ಕೆ. ವಿರೂಪಾಕ್ಷಪ್ಪ

ಉ) ಉಳ್ಳಾಲ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವಾಹನ ಚಾಲಕರ ಸದಸ್ಯರುಗಳಿಗೆ ಮನೆ ನಿವೇಶನ. 670

-ಶ್ರೀ ಕೆ. ಜಯರಾಮಶೆಟ್ಟಿ

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಊ) ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ 671

-ಶ್ರೀ ಜಗದೀಶ್ ಶೆಟ್ಟರ್

-ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು)

ಋ) ಮೈಸೂರಿನ ಮೆಟ್ರೋಪಾಲ್ ಹೋಟೆಲ್‌ನ್ನು ಖಾಸಗಿಯವರಿಗೆ ನೀಡದೆ ಇರಲು ಕ್ರಮ ಕೈಗೊಳ್ಳುವ ಬಗ್ಗೆ 671-672

-ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ

-ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು)

ಎ) ಮಂಗಳೂರಿನಲ್ಲಿ ವಿದ್ಯುತ್ ಕಡಿತ 673

-ಶ್ರೀ ಎನ್. ಯೋಗೇಶ್ ಭಟ್

-ಶ್ರೀ ಶರಣಬಸಪ್ಪ ದರ್ಶನಾಪುರ
(ವಿದ್ಯುತ್ ಖಾತೆ ರಾಜ್ಯ ಸಚಿವರು)

ಏ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯಿತಿ ರದ್ದು 673

-ಶ್ರೀ ಸಿ. ಆರ್. ಸಗೀರ್ ಅಹಮದ್

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಐ) ಕಿತ್ತೂರು ಉತ್ಸವದ ಬಗ್ಗೆ 674

-ಶ್ರೀ ಡಿ.ಬಿ. ಇನಾಂದಾರ್

-ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್

(ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಒ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ 674
ಬಗ್ಗೆ

-ಶ್ರೀ ಡಿ.ವಿ. ಸದಾನಂದಗೌಡ

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಓ) ಉಡುಪಿಯ ಆರಾಧನಾ ಸಮಿತಿ. 675

-ಶ್ರೀ ಯು. ಆರ್. ಸಭಾಪತಿ

-ಶ್ರೀ ಎಂ.ಸಿ. ನಾಣಯ್ಯ

(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಔ) ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವ ಬಗ್ಗೆ 676

-ಡಾ. ಎ.ಬಿ. ಮಲಕರೆಡ್ಡಿ

ಕ) ಮಾಗಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವುದು 677

-ಶ್ರೀ ಹೆಚ್.ಸಿ. ಬಾಲಕೃಷ್ಣ

-ಶ್ರೀ ಶರಣಬಸಪ್ಪ ದರ್ಶನಾಪುರ್

(ವಿದ್ಯುತ್ ರಾಜ್ಯ ಸಚಿವರು)

ಖ) ಹುಬ್ಬಳ್ಳಿಯಲ್ಲಿ ನೀರಿನ ಸಮಸ್ಯೆ 677

-ಶ್ರೀ ಅಶೋಕ ಕಾಟ್ವೆ

-ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಗ) ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸ್ವಾತಂತ್ರ್ಯ ಯೋಧರಿಗೆ 678
ಸೌಲಭ್ಯ

-ಶ್ರೀ ಡಿ. ಆರ್. ಪಾಟೀಲ್

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಚ) ಶಿವಮೊಗ್ಗದ ಆರೋಗ್ಯ ಅಧಿಕಾರಿಗಳ ಕಛೇರಿಯ ಗೋಡೌನ್‌ಗೆ ಬೆಂಕಿ ಬಿದ್ದಿರುವುದರ ಕುರಿತು 679

-ಶ್ರೀ ಅರಗ ಜ್ಞಾನೇಂದ್ರ

-ಡಾ. ಹೆಚ್.ಸಿ. ಮಹದೇವಪ್ಪ (ಆರೋಗ್ಯ ಸಚಿವರು)

ಛ) ಕೋಲಾರ ಜಿಲ್ಲೆಯಲ್ಲಿ ದ್ವಿಚಕ್ರ ವಾಹನ ಚಾಲಕರನ್ನು ಅಡ್ಡಗಟ್ಟಿ ಕೊಲೆ ಮಾಡುತ್ತಿರುವುದು 680

-ಶ್ರೀ ಜೆ.ಎ. ಶ್ರೀರಾಮರೆಡ್ಡಿ

-ಶ್ರೀ ಆರ್. ರೋಷನ್‌ಬೇಗ (ಗೃಹ ಸಚಿವರು)

ಜ) ಸಂತೇಮಾರನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 12.5 ಎಂ.ವಿ. ಟ್ರಾನ್ಸ್‌ಫಾರ್ಮರ್ ಅಳವಡಿಸುವುದು 681

-ಶ್ರೀ ಎ. ಆರ್. ಕೃಷ್ಣಮೂರ್ತಿ

-ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ರಾಜ್ಯ ಸಚಿವರು)

6)ಗಮನ ಸೆಳೆಯುವ ಸೂಚನೆಗಳು: 682

ಅ) ಬಿಜಾಪುರದಲ್ಲಿನ ಕೈಗಾರಿಕಾ ಅಭಿವೃದ್ಧಿ ಪ್ರದೇಶಗಳಲ್ಲಿ ನೀರಿನ ಹಾಗೂ ವಿದ್ಯುತ್ ಅಭಾವ 682-684

-ಶ್ರೀ ಶಿವಾನಂದ ಎಸ್. ಪಾಟೀಲ್

-ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು)

ಆ) ಬಳ್ಳಾರಿ - ಬೆಂಗಳೂರು ರಸ್ತೆಯನ್ನು ವಿಸ್ತರಿಸಲು ಬಳ್ಳಾರಿಯಲ್ಲಿ ಖಾಸಗಿ ಕಟ್ಟಡಗಳನ್ನು ಅಕ್ರಮವಾಗಿ ನೆಲಸಮ ಮಾಡಿರುವ ಬಗ್ಗೆ 685-686

-ಶ್ರೀ ಎಂ. ದಿವಾಕರ ಬಾಬು

-ಶ್ರೀ ಮಿರಾಜುದ್ದೀನ್ ಎನ್. ಪಟೇಲ್

(ನಗರಾಭಿವೃದ್ಧಿ ರಾಜ್ಯ ಸಚಿವರು)

ಇ) ಮಲಪ್ರಭಾ ಎಡದಂಡೆ ಕಾಲುವೆ ವ್ಯಾಪ್ತಿಯಲ್ಲಿ 37 ನೇ ಹಂಚಿಕೆಯ ಕಾಮಗಾರಿ ಮುಗಿದಿದ್ದರೂ ನೀರು ಹರಿಸದೇ ಇರುವುದು. 687-689

-ಶ್ರೀ ಬಿ.ಬಿ. ಚಿಮ್ಮನಕಟ್ಟಿ

-ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು)

ಈ) ಅಲಮಟ್ಟಿ ಜಲಾಶಯದಿಂದ ಬಿಜಾಪುರ ಹಾಗೂ ಬಾಗಲಕೋಟಿ ಜಿಲ್ಲೆಯ ಪ್ರಮುಖ ರಸ್ತೆಗಳ ಮೇಲೆ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಿರುವ ಕೋಳಾರಚಿಕ್ಕಪಡಿಸಲಗಿ ಸೇತುವೆಗಳು ಮುಳುಗಡೆಯಾಗುತ್ತಿರುವುದು. 690-691

-ಶ್ರೀ ಜೆ.ಟಿ. ಪಾಟೀಲ್

-ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು)

7) ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆ : 692

ಅ) ಮೈಸೂರು ಪೇಪರ್ ಮಿಲ್ಸ್‌ನಲ್ಲಿ ವಿದೇಶಿ ಪಲ್ಪ್ ಖರೀದಿಯಲ್ಲಿ ಆಗಿದೆ ಎನ್ನಲಾದ ಅವ್ಯವಹಾರ 692-726

-ಶ್ರೀ ಕೆ. ಎಸ್. ಈಶ್ವರಪ್ಪ

-ಶ್ರೀ ಅರಗ ಜ್ಞಾನೇಂದ್ರ

-ಶ್ರೀಮತಿ ಪ್ರಮೀಳಾ ನೇಸರ್ಗಿ

-ಶ್ರೀ ಎಸ್. ಸುರೇಶ್ ಕುಮಾರ್

-ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕೆ ಸಚಿವರು)

ಆ) ಅಬ್ಕಾರಿ ಇಲಾಖೆಯಲ್ಲಿ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿಕೊಂಡು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ಸುಂಕ ನಷ್ಟವಾಗುತ್ತಿರುವುದು 727-750

-ಶ್ರೀ ಎ.ಟಿ. ರಾಮಸ್ವಾಮಿ

-ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು)

-ಶ್ರೀ ವಾಟಾಳ್ ನಾಗರಾಜ್

-ಶ್ರೀ ಎಸ್. ಸುರೇಶ್ ಕುಮಾರ್

-ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

8) ಶಾಸನ ರಚನಾ ಕಾರ್ಯಕಲಾಪಗಳು :- 750

ಎ) ವಿಧೇಯಕ ಮಂಡನೆ

ಅ) ಕರ್ನಾಟಕ ವಿದ್ಯುಶ್ ಬಳಕೆ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕ, 1998

ಆ) ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 1998

(ಮಂಡಿಸಲಾಯಿತು)

9) ವಿತ್ತೀಯ ಕಾರ್ಯಕಲಾಪಗಳು 751-777

1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ
(ಮುಂದುವರೆದುದು)

-ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ

-ಶ್ರೀ ಹೆಚ್.ಡಿ. ಬಸವರಾಜ್

-ಶ್ರೀ ಸಿ. ಆರ್. ಸಗೀರ್ ಅಹಮದ್

-ಶ್ರೀ ವೈಜನಾಥ್ ಪಾಟೀಲ್

10) ನಿರ್ಣಯ 778-781

ಆ) ರಾಜ್ಯಾದ್ಯಂತ ಸಕಾಲಕ್ಕೆ ಮಳೆ ಬಾರದ ಕಾರಣದಿಂದ ಬೆಳೆ ಹಾಳಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ ಪರಿಶೀಲಿಸಲು ಜಂಟಿ ಸದನ ಸಮಿತಿ ರಚನೆ

-ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು)

-ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ

(ವಿರೋಧ ಪಕ್ಷದ ನಾಯಕರು)

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(11) ಅನುಬಂಧ 1 ಮತ್ತು 3 782-788

ಗುರುವಾರ, 26ನೇ ಮಾರ್ಚ್ 1998

1. ಸಂತಾಪ ಸೂಚನೆ 789
2. ವಿತ್ತೀಯ ಕಾರ್ಯಕಲಾಪ 789

1998-99 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ 789-846
(ಮುಂದುವರೆದುದು)

-ಶ್ರೀ ಜಿ.ವಿ.ಶ್ರೀರಾಮರೆಡ್ಡಿ

-ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು)

-ಶ್ರೀ ವಾಟಾಳ್ ನಾಗರಾಜ್
-ಶ್ರೀ ಡಿ.ಆರ್.ಪಾಟೀಲ್
-ಶ್ರೀ ಯು.ಆರ್.ಸಭಾಪತಿ
-ಶ್ರೀ ಜೆ.ಸಿ.ಮಾಧುಸ್ವಾಮಿ
-ಶ್ರೀ ಕೆ.ಎಸ್. ಪುಟ್ಟಣ್ಣಯ್ಯ
-ಶ್ರೀ ಎಸ್. ಸುರೇಶ ಕುಮಾರ್
-ಶ್ರೀ ಎನ್.ರಾಜಣ್ಣ
-ಶ್ರೀ ಎಲ್.ಆರ್. ಶಿವರಾಮೇಗೌಡ
-ಶ್ರೀ ಹೆಚ್.ಎನ್. ನಂಜೇಗೌಡ
-ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)

3. ಪ್ರಕಟಣೆ 847

4. 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ 848-852
(ಮುಂದುವರೆದುದು)
-ಶ್ರೀ ಕೆ. ಎಸ್. ಪುಟ್ಟಣ್ಣಯ್ಯ
- ಶ್ರೀ ಕೆ.ಎನ್. ನಾಗೇಗೌಡ
- ಶ್ರೀ ವಾಟಾಳ್ ನಾಗರಾಜ್
-ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು)

5. ವರದಿಗಳನ್ನೊಪ್ಪಿಸುವುದು 853

6. ವಿತ್ತೀಯ ಕಾರ್ಯಕಲಾಪ 853

(ಅ) 1998-99 ನೇ ಸಾಲಿನ ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಉತ್ತರ 853-901
- ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು)
- ಶ್ರೀ ಹೆಚ್.ಎನ್.ನಂಜೇಗೌಡ
-ಶ್ರೀ ಬಿ.ಎಸ್. ಯಡಿಯೂರಪ್ಪ
-ಶ್ರೀ ವಾಟಾಳ್ ನಾಗರಾಜ್
- ಶ್ರೀ ಜಿ.ವಿ.ಶ್ರೀರಾಮರೆಡ್ಡಿ
-ಶ್ರೀಜೆ.ಸಿ.ಮಾಧುಸ್ವಾಮಿ

-ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)
-ಶ್ರೀಮತಿ ಪ್ರಮೀಳಾ ನೇಸರ್ಗಿ
-ಶ್ರೀ ಜೆ.ಹೆಚ್. ಪಟೀಲ್ (ಮುಖ್ಯ ಮಂತ್ರಿಗಳು)
-ಶ್ರೀ ಡಿ.ವಿ. ಸದಾನಂದಗೌಡ
-ಶ್ರೀ ವಸಂತ ವಿ.ಸಾಲಿಯಾನ್
-ಶ್ರೀ ಎಸ್. ಯೋಗೇಶ್ ಭಟ್
(ಪ್ರಸ್ತಾಪ ಅಂಗೀಕರಿಸಲಾಯಿತು)

(ಆ) 1997-98 ನೇ ಸಾಲಿನ ಪೂರಕ ಅಂದಾಜುಗಳ(ಅಂತಿಮ ಕಂತು) ಮೇಲಿನ ಚರ್ಚೆ (ಮತಕ್ಕೆ ಹಾಕುವುದು) 902-906
-ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ
(ವಿರೋಧ ಪಕ್ಷದ ನಾಯಕರು)
-ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು)
(ಪ್ರಸ್ತಾಪ ಅಂಗೀಕರಿಸಲಾಯಿತು)

7. ಶಾಸನೆ ರಚನಾ ಕಾರ್ಯಕಲಾಪ 907
(ಎ) ವಿಧೇಯಕಗಳನ್ನು ಮಂಡಿಸುವುದು 907
(ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ್- 1998 907
(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು) 908
(ಆ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ- 1998 908-916
(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)
(ಇ) ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ- 1998
(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)
(ಈ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ- 1998
(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

ಅನುಬಂಧಗಳು

I)	ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ 1998	917-925
II)	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ - 1998	926-1012
III)	ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ- 1998	1013-1023
IV)	ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ - 1998	1024-1026

ಕರ್ನಾಟಕ ವಿಧಾನ ಸಭೆ

ಬುಧವಾರ 25ನೇ ಮಾರ್ಚ್ 1998ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಲಿಂಗಸುಗೂರಿನಲ್ಲಿ 100 ಹಾಸಿಗೆಯ ಆಸ್ಪತ್ರೆ ನಿರ್ಮಾಣ

100 (685) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ್ (ಲಿಂಗಸೂಗೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1) 1997-98 ನೇ ಸಾಲಿನಲ್ಲಿ ಲಿಂಗಸುಗೂರು ಪಟ್ಟಣಕ್ಕೆ ಮಂಜೂರಾದ 100 ಹಾಸಿಗೆಯ ಆಸ್ಪತ್ರೆಯ ಹೊಸ ಕಟ್ಟಡದ ಕಾಮಗಾರಿಯು ಯಾವ ಹಂತದಲ್ಲಿದೆ?

2) ಸದರಿ ಕಟ್ಟಡಕ್ಕೆ ಸರ್ಕಾರವು ನಿಗದಿಪಡಿಸಿರುವ ಹಣವೆಷ್ಟು?

3) ಸದರಿ ಕಟ್ಟಡದ ಕಾಮಗಾರಿ ಯಾವಾಗ ಪ್ರಾರಂಭವಾಗಿ, ಯಾವಾಗ ಮುಕ್ತಾಯವಾಗುತ್ತದೆ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.) :

1) ಅಂದಾಜು ಪಟ್ಟಿ ಮಂಜೂರಾಗಿದ್ದು ಕೆಲಸ ಇನ್ನೂ ಶುರುವಾಗಬೇಕಾಗಿದೆ.

2) ರೂ. 79.35 ಲಕ್ಷಗಳು

3) ಜರ್ಮನ್ ಸರ್ಕಾರದ ಸಹಯೋಗದ ಯೋಜನೆಯಡಿ ಶೀಘ್ರವಾಗಿ ಕಟ್ಟಲು ಪ್ರಾರಂಭಿಸಲಾಗುವುದು.

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸದರಿ ಕಟ್ಟಡದ ಕಾಮಗಾರಿಯು ಯಾವಾಗ ಪ್ರಾರಂಭವಾಗಿ ಯಾವಾಗ ಮುಕ್ತಾಯವಾಗುತ್ತದೆ ಎಂದು ಕೇಳಿದ್ದಕ್ಕೆ ಜರ್ಮನ್ ಸರ್ಕಾರದ ಸಹಯೋಗದ ಯೋಜನೆಯಡಿ ಶೀಘ್ರವಾಗಿ ಕಟ್ಟಲು ಪ್ರಾರಂಭಿಸಲಾಗುವುದು ಎಂದು ತಿಳಿಸಿದ್ದಾರೆ. ಆದ್ದರಿಂದ ದಿನಾಂಕವನ್ನು ನಿಖರವಾಗಿ ಹೇಳಿದರೆ ಅನುಕೂಲವಾಗುತ್ತದೆ ಎಂದು ಕೇಳಲಪೇಕ್ಷಿಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಸುಮಾರು 80 ಕೋಟಿ ರೂ.ಗಳ ಜರ್ಮನ್ ಯೋಜನೆಯು ಗುಲ್ಬರ್ಗ ವಿಭಾಗಕ್ಕೆ ಮಂಜೂರಾಗಿದ್ದು, ಮೊದಲನೇ ಹಂತದಲ್ಲಿ 26 ಮತ್ತು ಎರಡನೇ ಹಂತದಲ್ಲಿ 25 ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲು ಮಂಜೂರಾತಿ ಆಗಿದೆ. ಮೊದಲನೇ ಹಂತದಲ್ಲಿ ಲಿಂಗಸಗೂರಿನ 30 ಬೆಡ್‌ಗಳ ಆಸ್ಪತ್ರೆಯನ್ನು 100 ಬೆಡ್‌ಗಳಿಗೆ ಏರಿಸುವುದು ಇದೆ.

ಅಧ್ಯಕ್ಷರು: ಅವರಿಗೆ ಅಷ್ಟೆಲ್ಲಾ ಸವಿಸ್ತಾರವಾದ ಉತ್ತರವು ಬೇಕಾಗಿಲ್ಲ. ವಾತಾವರಣವು ಹೀಗೆ ಇದೆ. ನಮ್ಮ ಕ್ಷೇತ್ರದಲ್ಲಿ ಈ ಆಸ್ಪತ್ರೆಯ ಕೆಲಸವು ಬೇಗ ಆಗಬೇಕು. ಅದರ ಕೀರ್ತಿ ತಮಗೆ ಸಲ್ಲಬೇಕೆಂಬುದು ನಮ್ಮ ಆಸೆ ಎಂದು ಹೇಳಿ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಏಪ್ರಿಲ್ ಈ ಬೃಹತ್ ಯೋಜನೆಯು ಗ್ರಾ್ಯಂಟ್ ಆಗಿ 85 ಪರ್‌ಸೆಂಟ್‌ನಷ್ಟು ಅಂದರೆ 80 ಕೋಟಿ ರೂ.ಗಳನ್ನು ಕೋಟ್ಟಿದ್ದಾರೆ. ಅದು ಉತ್ತರ ಕರ್ನಾಟಕದ ಭಾಗಕ್ಕೆ ಏಪ್ರಿಲ್‌ನಲ್ಲ ಇದನ್ನು ಲಾಂಚ್ ಮಾಡುತ್ತೇವೆ.

ಅಧ್ಯಕ್ಷರು: ಶುರು ಮಾಡುತ್ತಾರೆ, ತೊಂದರೆ ಇಲ್ಲ.

ಪಾಂಡವಪುರದಲ್ಲಿ ಸರ್ಕಾರಿ ಕಾಲೇಜ್ ಮಂಜೂರಾತಿ

102 (720) ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಪಾಂಡವಪುರ ತಾಲ್ಲೂಕು ಮಂಡ್ಯ ಜಿಲ್ಲೆಯ ಉಪ ವಿಭಾಗದ ಮುಖ್ಯ ಕೇಂದ್ರವಾಗಿದ್ದು ಸರ್ಕಾರಿ ಪ.ಪೂ. ಕಾಲೇಜು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಮಂಜೂರು ಮಾಡದಿರಲು ಕಾರಣವೇನು?

2) 1998-99 ನೇ ಸಾಲಿನಲ್ಲಿ ಸರ್ಕಾರಿ ಕಾಲೇಜುಗಳನ್ನು ಮಂಜೂರು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸಂಬಂಧಿಸಿದಂತೆ ಯಾವುದೇ ಬೇಡಿಕೆ ಸ್ವೀಕೃತವಾಗಿರುವುದಿಲ್ಲ.

ಪಾಂಡವಪುರ ತಾಲ್ಲೂಕಿನಲ್ಲಿ ಪ್ರಸ್ತುತ 4 ಖಾಸಗಿ ಹಾಗೂ 2 ಸರ್ಕಾರಿ ಪ.ಪೂ. ಕಾಲೇಜುಗಳಿವೆ. ಅದರಲ್ಲಿ 2 ಖಾಸಗಿ ಪ.ಪೂ ಕಾಲೇಜುಗಳು ಪಾಂಡವಪುರದಲ್ಲಿಯೇ ಇರುತ್ತವೆ. ಸದರಿ ಕಾಲೇಜುಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನಿಸಿದಾಗ ಈಗ ಅಸ್ತಿತ್ವದಲ್ಲಿರುವ ಪ.ಪೂ. ಕಾಲೇಜುಗಳೇ ಸಾಕಾಗುವುದರಿಂದ ಇನ್ನೊಂದು ಪ.ಪೂ ಕಾಲೇಜಿನ ಅವಶ್ಯಕತೆ ಕಂಡು ಬರುವುದಿಲ್ಲ.

2) ಸರ್ಕಾರಿ ಪದವಿ ಕಾಲೇಜುಗಳ ಸ್ಥಾಪನೆ ಪರಿಶೀಲನೆಯಲ್ಲಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ತೆರೆಯಲು ಉದ್ದೇಶಿಸಿರುವುದಿಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೇ, ಮಂಡ್ಯ ಜಿಲ್ಲೆಯಲ್ಲಿ ಎರಡು ಉಪ ವಿಭಾಗಗಳಿವೆ. ಒಂದು ಮಂಡ್ಯ ಉಪ-ವಿಭಾಗ, ಇನ್ನೊಂದು ಪಾಂಡವಪುರ ಉಪ-ವಿಭಾಗ. ಅದರಲ್ಲಿ ಪದವಿಪೂರ್ವ ಕಾಲೇಜು ಇಲ್ಲ, ಪದವಿಗೆ ಸಂಬಂಧಪಟ್ಟ ಯಾವುದೇ ಕಾಲೇಜು ಇಲ್ಲದೇ ಇರುವುದರಿಂದ ಅವರು ಹೇಳುವಂತೆ ಅಲ್ಲಿ ಖಾಸಗಿ ಕಾಲೇಜು ಇರುವುದರಿಂದ ಸರಕಾರಿ ಕಾಲೇಜಿನ ಅವಶ್ಯಕತೆ ಇಲ್ಲ ಎಂದು ವಿದ್ಯಾರ್ಥಿಗಳ ಅಂಕಿ ಸಂಖ್ಯೆಗಳ ಆಧಾರವನ್ನು ಕೊಟ್ಟಿದ್ದಾರೆ. ನಿಜವಾಗಿಯೂ ಪಾಂಡವಪುರಕ್ಕೆ ಸರಕಾರಿ ಕಾಲೇಜಿನ ಅತ್ಯಾವಶ್ಯಕತೆ ಇದೆ. ಬಹಳ ಜನರು ಅಲ್ಲಿಂದ ಮೈಸೂರು ಶ್ರೀರಂಗಪಟ್ಟಣಕ್ಕೆ ಹೋಗುತ್ತಾ ಇದ್ದಾರೆ. ಆದ್ದರಿಂದ ತಾವುಗಳು ದಯಮಾಡಿ ಮುಂದಿನ ಸಾಲಿನಲ್ಲಿ ಪಾಂಡವಪುರಕ್ಕೆ ಒಂದು ಪದವಿಪೂರ್ವ ಕಾಲೇಜನ್ನಾದರೂ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಕೊಡಲು ಸಾಧ್ಯವಿಲ್ಲ ಎನ್ನುವ ಪ್ರಶ್ನೆ ಇಲ್ಲ, ಫ್ಯಾಕ್ಟ್, ಫಿಗರ್ಸ್, ಇದರ ಆಧಾರದ ಮೇಲೆ ಕೊಡಬೇಕೆಂದು ಮಾಡುತ್ತಾರೆ. ತಾವು ಕೇಳತಕ್ಕಂಥಾದ್ದರಲ್ಲಿಯೂ ಧರ್ಮ ಇದೆ. ಶಾಸಕರಾಗಿರತಕ್ಕಂಥವರು ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮನಸ್ಸಿಟ್ಟುಕೊಂಡು ಕೇಳುವುದು ಸರಿ. ಆದರೆ ನಾವೂ ಕೂಡ ನಮ್ಮ ಇತಿಮಿತಿಯಲ್ಲಿ ಎಲ್ಲಿ ಏನು ಕೊಡಬೇಕೆಂದು ಯೋಚನೆ ಮಾಡುವುದಾದರೆ ತಾವುಗಳು ತಪ್ಪು ತಿಳಿದುಕೊಳ್ಳದೇ ಹೋಗುವುದಾದರೆ, ಒಂದು ವಿವರವನ್ನು ಕೊಡುತ್ತೇನೆ. ವಿಜಯ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ 234 ಮಕ್ಕಳಿದ್ದಾರೆ. ಬಾಲಕಿಯರ ಪದವಿಪೂರ್ವ ಕಾಲೇಜು, ಪಾಂಡವಪುರದಲ್ಲಿ 189 ವಿದ್ಯಾರ್ಥಿಗಳಿದ್ದಾರೆ. ಜನಪರ ಸೇವಾ ಟ್ರಸ್ಟ್ ಪದವಿ ಪೂರ್ವ ಕಾಲೇಜು ಮೇಲುಕೋಟೆ ಇಲ್ಲಿ 87 ವಿದ್ಯಾರ್ಥಿಗಳಿದ್ದಾರೆ. ವಿಶ್ವೇಶ್ವರಯ್ಯ ಸ್ವತಂತ್ರ ಪದವೀಪೂರ್ವ ಕಾಲೇಜು ಕ್ಯಾತಹಳ್ಳಿ ಇಲ್ಲಿ 78 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜು, ಚಿನಕುರುಳಿ - ಇಲ್ಲಿ 26 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬೆಳ್ಳಾರಿ - ಇಲ್ಲಿ 39 ವಿದ್ಯಾರ್ಥಿಗಳಿದ್ದಾರೆ. ಇವೊತ್ತು ನಮ್ಮ ಶಾಸಕರು ಶಾಲೆಗಳನ್ನು ಕೇಳುವುದರಲ್ಲಿ ಧರ್ಮ ಮತ್ತು ನ್ಯಾಯ ಇದೆ. ಆದರೆ ನಾವು ಆಡಳಿತ ಮಾಡತಕ್ಕಂಥ ಜನ ಅವಶ್ಯಕತೆಯನ್ನು ಅರಿತುಕೊಂಡು ಕೆಲಸ ಮಾಡದಿದ್ದರೆ ಯಾರಿಗೋ ತೃಪ್ತಿಪಡಿಸಲು ಮಾಡಿದ ಹಾಗೆ ಆಗುವುದು ಬೇಡ. ನಿಮ್ಮ ಅವಶ್ಯಕತೆಯೂ ನಿಜವಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇವೊತ್ತು ರಾಜ್ಯದಲ್ಲಿನ ಅನೇಕ ಕಡೆಗಳಲ್ಲಿನ ಪದವಿಪೂರ್ವ ಕಾಲೇಜುಗಳನ್ನು ನೋಡುತ್ತಾ ಇದ್ದೇವೆ. ಡಿಟೀರಿಯರೇಟ್ ಆಗುತ್ತಾ ಇದ್ದಾವೆ. ಅಲ್ಲಿಗೆ 10-12 ವಿದ್ಯಾರ್ಥಿಗಳು ಬರುತ್ತಾ ಇದ್ದಾರೆ. ಈ ರೀತಿ ಇರುವುದರಿಂದ ಇದನ್ನು ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆ ಇದೆ ಎಂಬುದನ್ನು ತಾವು ಒಪ್ಪುತ್ತೀರಿ ಎಂದು ನಾವು ಭಾವಿಸುತ್ತೇನೆ. ಏತಕ್ಕೆಂದರೆ ಜವಾಬ್ದಾರಿಯು ತಮಗೆ ಗೊತ್ತಿದೆ. ನಮ್ಮ ಕಷ್ಟ ಏನೆಂಬುದು ತಮಗೆ ಗೊತ್ತಿದೆ. ಆದ್ದರಿಂದ ಪದವಿಪೂರ್ವ ಕಾಲೇಜು ಕೊಡುವ ಅವಶ್ಯಕತೆ ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ.

ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

103 (331) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರದ ಸಾರ್ವಜನಿಕ ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ?

2) ಹಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇಲ್ಲ

ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

2) ಉದ್ಭವಿಸುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ ಎಂದು ಹೇಳಿದ್ದಾರೆ. ಅವರಿಗೆ ನೆನಪಿಗೆ ತಂದು ಕೊಡುವುದೇನೆಂದರೆ, ನನಗೆ ಆರೋಗ್ಯ ನಿರ್ದೇಶಕರಿಂದ ಒಂದು ಪತ್ರ ಬಂದಿತ್ತು. ದಿನಾಂಕ 25-3-1997 ರಂದು ಅದರಲ್ಲಿನ ವಿಷಯ ಹೀಗೆ ಇದೆ. ''ಸಾಗರ ಸಾರ್ವಜನಿಕ ಆಸ್ಪತ್ರೆಯ ಹಾಸಿಗೆಯನ್ನು 150 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದು ಮತ್ತು ಸರಕಾರ ವಹಿಸಿಕೊಳ್ಳುವ ಬಗ್ಗೆ. ಎಂದು ಹೇಳಿ ಅವರು ಉತ್ತರ ಕೊಟ್ಟಿದ್ದಾರೆ. ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಪಂಚಾಯತ್‌ನಿಂದ ರಾಜ್ಯ ವಲಯಕ್ಕೆ ತೆಗೆದುಕೊಳ್ಳಲು ಈಗಾಗಲೇ ನಿರ್ದೇಶನ ನೀಡಿದ ಪತ್ರ ಸಂಖ್ಯೆ-28: 92-93, ದಿನಾಂಕ : 17-6-1995 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗ ಮತ್ತೆ ನೆನಪು ಪತ್ರವನ್ನು ಬರೆಯಲಾಗಿದೆ. ಜಿಲ್ಲಾ ಪಂಚಾಯತ್ ಅಧೀನದಿಂದ ಸರಕಾರದ ಅಧೀನಕ್ಕೆ ತೆಗೆದುಕೊಂಡ ತಕ್ಷಣ 150 ಹಾಸಿಗೆಗಳ ಮೇಲ್ದರ್ಜೆಗೆ ಏರಿಸುವ ವಿಚಾರವನ್ನು ಕೈಗೆತ್ತಿಕೊಳ್ಳಲಾಗುವುದು. ಈ ಪ್ರಸ್ತಾವನೆ ಸರಕಾರದ ಮುಂದೆ ಇದೆ. ತಮಗೆ ಬೇಕಾದರೆ ಕಡತದ ಸಂಖ್ಯೆಯನ್ನೂ ಕೂಡ ಹೇಳುತ್ತೇನೆ. ಆ.ಕು.ಕ: 256, ಆ.ಯೋ.ಸಂ-92. ಈ ಕಡತದಲ್ಲಿ 150 ಹಾಸಿಗೆಗಳನ್ನು ಮಂಜೂರು ಮಾಡುವುದಕ್ಕೆ ಬೇಕಾದಂಥ ಪ್ರಸ್ತಾವನೆಯನ್ನು ಎಲ್ಲಾ ಮಾಹಿತಿಗಳೊಂದಿಗೆ ಸರಕಾರಕ್ಕೆ ಬಂದಿದೆ ಮತ್ತು ಸರಕಾರದ ಕಡತದಲ್ಲಿದೆ. ತಾವುಗಳ ದಯಮಾಡಿ ಈ ಕಡತವನ್ನು ತರಿಸಿಕೊಂಡು ಅವರು ಯಾವ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಅದಕ್ಕೆ ಮಂಜೂರಾತಿಯನ್ನು ಕೊಡತಕ್ಕಂಥ ತೀರ್ಮಾನವನ್ನು ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಹಿಂದೆ ರಾಜ್ಯ ಸರಕಾರ ವಲಯದಿಂದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಇದ್ದೆವು. ವಿಶ್ವಬ್ಯಾಂಕ್ ಮತ್ತು ಜರ್ಮನಿಯ ಬೃಹತ್ ಯೋಜನೆಗಳು ಮಂಜೂರಾತಿಯಾದ ಮೇಲೆ ರಾಜ್ಯದ ಸುಮಾರು ಕೆ ಹೆಚ್ ಎಸ್ ಡಿಪಿ ಯಲ್ಲಿ 201, ಎಫ್ ಡಬ್ಲು ಸುಮಾರು 51, ಒಟ್ಟು 252 ಆಸ್ಪತ್ರೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದರಿಂದ ತಾಲ್ಲೂಕು ಸಬ್ ಡಿವಿಜನ್ ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಇರತಕ್ಕಂಥ ಒತ್ತಡವು ಕಡಿಮೆಯಾಗುತ್ತದೆ. ಇವೊತ್ತು ಸಾಗರ ಆಸ್ಪತ್ರೆಯು 100 ಹಾಸಿಗೆಗಳದ್ದಾಗಿದೆ. ಅದನ್ನು ಕಟ್ಟಿದಂಥ ಸಂದರ್ಭದಲ್ಲಿ 100 ಹಾಸಿಗೆಗಳ ವ್ಯವಸ್ಥೆಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಮಾಡದೇ ಇರುವುದರಿಂದ ಸುಮಾರು ಒಂದು ಕೋಟಿ ರೂ.ಗಳ ಅಂದಾಜಿನಲ್ಲಿ ಕೆ ಹೆಚ್. ಎಸ್. ಡಿ ಈ ಒಂದು ಯೋಜನೆಯನ್ನು ತೆಗೆದುಕೊಂಡು ಎಕ್ಸ್‌ಪ್ಯಾನ್‌ಶನ್ ಮತ್ತು ರಿನೋವೇಷನ್ ಮತ್ತು ಇತರ ಒಟಿ ಮುಂತಾದವುಗಳನ್ನು ದುರಸ್ತಿ ಮಾಡಿ, ಅಕ್ಕಪಕ್ಕದ ಎಲ್ಲಾ ಆಸ್ಪತ್ರೆಗಳು ಮೇಲ್ದರ್ಜೆಗೆ ಏರುವುದರಿಂದ ಸದ್ಯಕ್ಕೆ ಇದನ್ನು ಮೇಲ್ದರ್ಜೆಗೆ ಏರಿಸುವ ಅಗತ್ಯವಿಲ್ಲ. ವರ್ಕ್ ಲೋಡ್ ಅಲ್ಲಿ ತುಂಬಾ

ಇದೆ ಎಂದು ಮಾನ್ಯ ಸದಸ್ಯರ ಭಾವನೆಯಾದರೆ ಅಲ್ಲಿಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಕಳುಹಿಸಿ, ವರದಿಯನ್ನು ತರಿಸಿಕೊಂಡು, ರೋಗಿಗಳ ದಾಖಾಲಾತಿಗಳ ಮಾಹಿತಿಗಳನ್ನು ಪಡೆದು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಯತ್ನ ಮಾಡುತ್ತೇನೆ.

ಅಧ್ಯಕ್ಷರು : ಚು.ಗು. ಪ್ರಶ್ನೆ ಕ್ರಮಾಂಕ : 104 (377) - ಶ್ರೀ ರೇವುನಾಯಕ್ ಬೆಳಮಗಿ- ಇವರ ಪ್ರಶ್ನೆಗೆ ಸರಕಾರದವರು ಸಮಯವನ್ನು ಕೇಳಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಸ್ಥಾಪನೆ

105 (680) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ರಕ್ತನಿಧಿ ಬ್ಯಾಂಕ್ ಸ್ಥಾಪಿಸಲು ಕೈಗೊಂಡ ಕ್ರಮಗಳೇನು?

3) ಎಂದು ಎಲ್ಲೆಲ್ಲಿ ಅಸ್ತಿತ್ವಕ್ಕೆ ತರಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

1) ಬಂದಿದೆ

2) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಲ್ಲಿ ಕಾರವಾರ ಜಿಲ್ಲಾ ಆಸ್ಪತ್ರೆ ಮತ್ತು ಸಿರಸಿ ಆಸ್ಪತ್ರೆಗಳಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪಿಸುವ ಪ್ರಸ್ತಾವನೆ ಸೇರಿದೆ.

3) ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪನೆಗಾಗಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಟ್ಟಡ ನಿರ್ಮಿಸಲಾಗಿದ್ದು, ಇದಕ್ಕೆ ಬೇಕಾದ ಸಲಕರಣೆಗಳನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಿಂದ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಿರಸಿ ಆಸ್ಪತ್ರೆಯಲ್ಲಿ ರಕ್ತ ನಿಧಿ ಕಟ್ಟಡ ನಿರ್ಮಾಣಕ್ಕಾಗಿ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿದ್ದು, ತಯಾರಾದ ನಕ್ಷೆಗಳು ವಿಶ್ವಬ್ಯಾಂಕ್ ವಾಸ್ತು ಶಿಲ್ಪಿಗಳಿಂದ ಅನುಮೋದನೆಗೊಂಡಿದೆ. ಮುಂದಿನ ಅಗತ್ಯ ಕ್ರಮಕ್ಕಾಗಿ ಏರ್ಪಾಡು ಮಾಡಲಾಗುವುದು.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ದಾರಿ (1) ನಮ್ಮ ಕರಾವಳಿ ಭಾಗದಲ್ಲಿ ಹಾಯ್ದು ಹೋಗುತ್ತದೆ. ಅದರಲ್ಲಿ ರಸ್ತೆ ಅಪಘಾತಗಳಿಂದಾಗಿ ರಕ್ತ ದೊರೆಯದೆ ಅನೇಕ ಸಾವು-ನೋವುಗಳು ಉಂಟಾಗುತ್ತಿವೆ. ಹಾಗೆಯೇ ಹೆರಿಗೆ ಸಂಬಂಧಪಟ್ಟ ಚಿಕಿತ್ಸೆ ಸೂಕ್ತ ರೀತಿಯಲ್ಲಿ ಬೇಕಾಗುವ ರಕ್ತ ದೊರೆಯುತ್ತಿಲ್ಲದ ಕಾರಣ ಅನೇಕ ಸಾವುನೋವುಗಳು ಉಂಟಾಗುತ್ತಿವೆ. ಕುಮಟಾ, ಹೊನ್ನಾವರ, ಭಟ್ಕಳ - ಈ ಮೂರು ಕಡೆಗಳಲ್ಲಿ ಸಾಧಾರಣವಾಗಿ 250 ರಿಂದ 300 ಹಾಸಿಗೆಗಳು ಇರತಕ್ಕಂಥ ನರ್ಸಿಂಗ್ ಹೋಂಗಳು ಇದ್ದಾವೆ. ಅಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ, ಸರ್ಜನ್ಸ್ ಇದ್ದಾರೆ, ಅವರಿಗೆ ಸರ್ಜರಿ ಮಾಡಬೇಕಾಗಿದ್ದರೂ ಕೂಡ ರಕ್ತ ಬೇಕಾಗುತ್ತದೆ. ಆದ್ದರಿಂದ ಹೊನ್ನಾವರದಲ್ಲಿ ಬ್ಲಡ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಲು ತಾವು ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ. ಅದು ಹೊನ್ನಾವರದಲ್ಲಿ ಸೆಕೆಂಡ್ ಫೇಸ್‌ಗೆ ಇದೆ. ಅದನ್ನು ಫಸ್ಟ್ ಫೇಸ್‌ಗೆ ತರಲು ಕಾರ್ಯ ಪ್ರವೃತ್ತರಾಗುತ್ತೀರೋ?

ಡಾ॥ ಹೆಚ್.ಸಿ. ಮಹಾದೇವಪ್ಪ : ಸುಪ್ರೀಂ ಕೋರ್ಟ್ 1997ರ ಡಿಸೆಂಬರ್‌ನಲ್ಲಿ ಪ್ರೊಫೆಷನಲ್ ಬ್ಲಡ್ ಡೊನೇಷನ್ಸ್‌ಗಳನ್ನು ಬಂದ್ ಮಾಡಿದ ಮೇಲೆ, ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ ರಾಜ್ಯದಲ್ಲಿ ಸುಮಾರು 35 ಬ್ಲಡ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈಗ ಪ್ರತಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಏಳು ಹೊಸ ಜಿಲ್ಲಾ ಕೇಂದ್ರಗಳಲ್ಲಿ ಕೂಡ ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ, ಕಾರವಾರದಲ್ಲಿ ಈಗಾಗಲೇ ಕಟ್ಟಡ ಪೂರ್ಣಗೊಂಡಿದ್ದು, ಸಿರ್ಸಿಯಲ್ಲಿ ಮಾಡುವುದಕ್ಕೆ ಕೇಂದ್ರ ಡ್ರಗ್ ಕಂಟ್ರೋಲರ್, ರಾಜ್ಯ ಡ್ರಗ್ ಕಂಟ್ರೋಲರ್ ಮತ್ತು ಇನ್ನೊಬ್ಬ ಎಕ್ಸ್‌ಪರ್ಟ್ಸ್ ಪ್ರತಿನಿಧಿ, ಈ ಮೂರು ಜನರ ಅಭಿಪ್ರಾಯವನ್ನು ಪಡೆದು ಅಲ್ಲಿ ಅಗತ್ಯವಿದೆಯೇ ಎಂಬುದನ್ನು ನೋಡಿ ಒಂದು ವರ್ಷದಲ್ಲಿ ಅಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆ. ಹೊನ್ನಾವರದಲ್ಲಿ ಅಗತ್ಯ ಇದೆಯೇ ಎಂಬುದು ಗೊತ್ತಿಲ್ಲ. ಈ ಎಕ್ಸ್‌ಪರ್ಟ್ಸ್ ಸಮಿತಿ ಅಲ್ಲಿಗೆ ಭೇಟಿ ನೀಡಿ ವರದಿ ಕೊಟ್ಟ ಮೇಲೆ ಅದನ್ನು ಪರಿಶೀಲಿಸಬಹುದು.

ಡಾ॥ ಎಂ.ಪಿ. ಕರ್ಕಿ : ಹೊನ್ನಾವರದಲ್ಲಿ ಸೆಕೆಂಡ್ ಫೇಸಿನಲ್ಲಿ ಇದೆ. ಫಸ್ಟ್ ಫೇಸ್‌ನಲ್ಲಿ ಕಾರವಾರದಲ್ಲಿ ಮಾತ್ರ ಇತ್ತು ಸಿರಸಿ ಮತ್ತು ಹೊನ್ನಾವರ ಸೆಕೆಂಡ್ ಫೇಸಿನಲ್ಲಿ ಇದೆ. ಅದನ್ನು ಫಸ್ಟ್ ಫೇಸಿಗೆ ತಂದರೆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಬ್ಲಡ್ ತರಲಿಕ್ಕೆ ಈಗ ಗೋವಾಕ್ಕೆ ಇಲ್ಲವೇ ಮಣಿಪಾಲಿಗೆ ಹೋಗಬೇಕಾಗಿದೆ. ಕಾರವಾರದಲ್ಲಿ ಸ್ಥಾಪನೆ ಮಾಡಿದರೂ ಭಟ್ಕಳದವರಿಗೆ 120 ಕಿಲೋ ಮೀಟರ್ ಆಗುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ : ಪರ್ಯಾಯ ವ್ಯವಸ್ಥೆ ಎಷ್ಟು ಸಾಧ್ಯವಿದೆ ಅಷ್ಟು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. 1, 2, 3, 4 ನೇ ಹಂತವೆನ್ನುವ ಪ್ರಶ್ನೆ ಇಲ್ಲ. ಎಲ್ಲವನ್ನೂ ಒಂದೇ ಪ್ರಮಾಣದಲ್ಲಿ ಮಾಡಲಿಕ್ಕೆ ನಮ್ಮ ಕೆ. ಹೆಚ್.ಎಸ್.ಡಿ.ಪಿ ಅಧಿಕಾರಿಗಳು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ಆರೋಗ್ಯ ಸುಧಾರಣೆಗೆ ಬಂದಂತಹ ಯೋಜನೆಗಳನ್ನು ನಮ್ಮ ರಾಜ್ಯವೇ ಮೊದಲನೆಯದಾಗಿ ಕೆಲಸ ಮಾಡಿದೆ ಎಂಬ ಪ್ರಶಂಸೆಯನ್ನು ಪಡೆದಿದ್ದಾರೆ. ಕಾರವಾರ ಸಿರಸಿಯಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಹೊನ್ನಾವರದಲ್ಲಿ ಇದರ ಅಗತ್ಯ ಇದೆಯೇ ಎಂಬ ಬಗ್ಗೆ ವರದಿ ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ.

ಮೊಳಕಾಲ್ಮೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

106 (675) ಶ್ರೀ ಎಸ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ, ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

1) ಹೌದು

2) ಹೊಸ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ರೂ. 100.00 ಲಕ್ಷಗಳ ನಕ್ಷೆ ಮತ್ತು ಅಂದಾಜುಗಳ ಪಟ್ಟಿಯನ್ನು ಪಡೆಯಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ವೈ. ಗೋಪಾಲಕೃಷ್ಣ: ಮೊಳಕಾಲ್ಮೂರು ಟೌನ್‌ನಲ್ಲಿ ಫಸ್ಟ್ ಗ್ರೇಡ್ ಕಾಲೇಜು ಕೊಟ್ಟು ಸುಮಾರು 10-15 ವರ್ಷಗಳಾಗಿರಬೇಕು. ಕಾಲೇಜಿಗೆ ಕಟ್ಟಡ ಇಲ್ಲದೆ ಕಾಲೇಜು ಹುಡುಗರು ಎಲ್ಲಾ ವಂತಿಗೆ ಮೇಲೆ ಇಟ್ಟುಕೊಂಡಿರುವ ಶಾಲಾ ಕೊಠಡಿಗಳಲ್ಲಿ ಪ್ರೈಮರಿ ಶಾಲಾ ಕಟ್ಟಡಗಳಲ್ಲಿ ಕೆಲವು ಮರಗಳ ಕೆಳಗಡೆ ಕಾಲೇಜನ್ನು ನಡೆಸುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಕಾಲೇಜು ಕಟ್ಟಡಕ್ಕೋಸ್ಕರ ಏನು ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ ಅದೆಲ್ಲಾ ಅಂಡರ್ ಕನ್ಸಿಡರೇಷನ್ ಅಂಡರ್ ಎಕ್ಸಮಿನೇಷನ್ ಎಂದು ಹೇಳುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಸಕಾಲಕ್ಕೆ ಕೊಡುವುದಕ್ಕೆ ಆಗದಿದ್ದರೂ ಕೂಡ ಎಷ್ಟು ಸಾಧ್ಯವೋ ಅಷ್ಟನ್ನು ನೀಡಿ ಕನಿಷ್ಟ 2-3 ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಶಾಸಕರು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ನನಗೆ ಸಂತೋಷವಾಗುತ್ತದೆ. 50 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಇತ್ತು. ಲೋಕೋಪಯೋಗಿ ಇಲಾಖೆಯ ಒಂದು ಕಟ್ಟಡಕ್ಕೆ ಒಂದು ಕೋಟಿ ರೂಪಾಯಿ ಒದಗಿಸತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಇಂತಹ ವ್ಯವಸ್ಥೆ ಮಾಡಿದರೂ ಕೂಡ ಹಣ ನಮ್ಮಿಂದಲೇ ಹೋಗಬೇಕು. ತಾವೇನು ಅರ್ಥ ಮಾಡಿಕೊಂಡು ಹೇಳಿದ್ದೀರಿ, ಇದನ್ನು ಕಡಿಮೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಲೋಕೋಪಯೋಗಿ ಇಲಾಖಾಧಿಕಾರಿಗಳನ್ನು ಕರೆಯಿಸಿ ಈ ರೀತಿ ಅಂದಾಜು ಮಾಡಿದರೆ 25-30 ಕೋಟಿ ಕೂಡ ಸಾಕಾಗುವುದಿಲ್ಲ. ಮುಂದಿನ ಸಾಲಿಗೆ 3 ಕೋಟಿ ಇರತಕ್ಕಂಥಾದ್ದು ಸುಮಾರು 40 ಕೊಠಡಿಗಳ ಅರ್ಧಂಬರ್ಧವಾಗಿದೆ. ಒಂದೊಂದು ಕಟ್ಟಡಕ್ಕೆ 8-10 ಲಕ್ಷ ರೂಪಾಯಿ ಸ್ಪಿಲ್ ಓವರ್ ವರ್ಕ್ಸ್‌ಗೆ ಬೇಕಾಗುತ್ತದೆ. ಬೇರೆ ಕಡೆ ಶಾಲೆಗಳು ನಡೆಯುತ್ತಿದೆ ಅವರಿಗೆ ಗೊತ್ತಿದೆ ನನಗೂ ಗೊತ್ತಿದೆ. ಗ್ರಾಮ ಪಂಚಾಯಿತಿ ಕಛೇರಿಗಳು ಇನ್ನೊಂದು ಕಡೆ ಕಾಲೇಜುಗಳು ನಡೆಯುತ್ತಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಅಧಿಕಾರಿಗಳನ್ನು ಇನ್ನು 8-10 ದಿವಸದಲ್ಲಿ ಕರಿಸಿ ಕಡಿಮೆ ಖರ್ಚಿನಲ್ಲಿ 1-2 ರೂಮ್ಸ್‌ಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸುರತ್ಕಲ್ ಆಸ್ಪತ್ರೆಯ ಬಗ್ಗೆ

107 (352) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸುರತ್ಕಲ್ ಪೇಟೆಯ ಮಧ್ಯೆ ಇರುವ ಸರ್ಕಾರೀ ಆರೋಗ್ಯ ಕೇಂದ್ರದ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಔಷಧ ವಿತರಣೆಯಲ್ಲಿ ಅಸಮರ್ಪಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ನೀರಿನ ವ್ಯವಸ್ಥೆ ಇಲ್ಲದೆ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತು ರೋಗಿಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೆ?

4) ಕಟ್ಟಡ ರಿಪೇರಿಗಾಗಿ ಮತ್ತು ಇತರೇ ಕೊರತೆಗಳ ನಿವಾರಣೆಗಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳು

ಯಾವುವು? ಯಾವಾಗ ಕಾರ್ಯಕತಗೊಳ್ಳುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಬಂದಿದೆ

2) ಇಲ್ಲ

3) ಹೌದು

4) ನೀರಿನ ವ್ಯವಸ್ಥೆ ಮತ್ತು ಕಟ್ಟಡ ದುರಸ್ತಿ ಬಗ್ಗೆ 1998-99ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾಯೋಜನೆಯಲ್ಲಿ ಕಾಮಗಾರಿ ಅಳವಡಿಸಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಸರಕಾರದ ಉತ್ತರ ನೋಡುವಾಗ ಹೌದಾ ಬಸವಣ್ಣ ಹೌದು ಇಲ್ಲ ಬಸವಣ್ಣ ಇಲ್ಲ ಎನ್ನುವ ರೀತಿಯಲ್ಲಿ ಇದೆ. ಹೌದು ಬಂದಿದೆ ಎಲ್ಲ ಎಂದು ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಸೂರತ್ಕಲ್ ಈಗ ಬೆಳೆಯುತ್ತಿರುವ ನಗರ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಮಾನ್ಯ ಜನರ ಸಾಮಾನ್ಯ ಖಾಯಿಲೆಗಳಿಗೆ ಮೆಡಿಸನ್ನಿನ ತೊಂದರೆ ಇದೆ. ಬಹಳಷ್ಟು ಸಮಯದಿಂದ ಇಂತಹ ತೊಂದರೆಗಳಾಗುತ್ತಿದೆ. ಇದಕ್ಕೆ ಉತ್ತರ ತಮ್ಮಲ್ಲಿ ಇಲ್ಲ. ಇಲ್ಲಿಗೆ ಬೇಕಾದಂತಹ ಮಾತ್ರೆ ಔಷಧಿಗಳು ಸಿಗುತ್ತಿಲ್ಲ. ಅಲ್ಲಿ ಒಂದು ಶವಾಗಾರ ಇದೆ, ಅದು ಪೂರ್ಣ ಜೀರ್ಣಾವಸ್ಥೆಯಲ್ಲಿ ಇದೆ. ಅದಕ್ಕೆ ಕಿಟಕಿ, ಬಾಗಿಲುಗಳು, ತೆಗೆದಿದೆ ಅಲ್ಲಿ ನಾಯಿ ಬೆಕ್ಕುಗಳು ಒಳಗೆ ಬರುತ್ತದೆ. ಪೋಸ್ಟ್‌ಮರ್ಟಂ ಮಾಡುವುದಕ್ಕೆ ಆಗುವುದಿಲ್ಲ. ನೀರಿನ ವ್ಯವಸ್ಥೆಯೂ ಕೂಡ ಇಲ್ಲ. 1998-99 ರಲ್ಲಿ ಸಾಧ್ಯವಾದರೆ ಇದನ್ನು ಸೇರಿಸುತ್ತೇವೆಂದು ಹೇಳಿದ್ದೀರಿ. ಈ ವರ್ಷದ ಅನುದಾನದಲ್ಲಿ ಸಾಕಷ್ಟು ಹಣವನ್ನು ಇಟ್ಟು ಈ ಕೇಂದ್ರವನು ಸುಸಜ್ಜಿತಗೊಳಿಸಿ ಜನರಿಗೆ ತೊಂದರೆಯಾಗದ ಹಾಗೆ ನಿವಾರಿಸಬೇಕೆಂದು ವಿನಂತಿಸುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಸೂರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರ, ಕೇಂದ್ರ ಸರಕಾರದ ಪ್ಯಾಟ್ರನ್‌ನಲ್ಲಿ ಇರತಕ್ಕಂಥದ್ದಾಗಿದೆ. ಕಳೆದ ವರ್ಷ ತಾನೇ ಅದು ಮಂಗಳೂರಿನ ಕಾರ್ಪೊರೇಷನ್‌ಗೆ ಸೇರ್ಪಡೆಯಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಅಲ್ಲಿನ ಜಿಲ್ಲಾ ಪರಿಷತ್‌ನವರು ಮಾಡಬೇಕಾಗುತ್ತದೆ. ನಾವು ಅವರಿಗೆ ಬರೆದು ಬೋರ್‌ವೆಲ್ ಕೊಡಬೇಕೆಂದು ತಿಳಿಸಿದ್ದೇವೆ. ದುರಸ್ತಿ ಕೆಲಸಕ್ಕಾಗಿ ಐ.ಪಿ.ಪಿ. (9)ರ ಕೆಳಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆ ಆಸ್ಪತ್ರೆ ಜಿ ವೈಪಿ ಪ್ಯಾಟ್ರನ್ ಆಗಿರುವುದರಿಂದ 6 ಬೆಡ್ಸ್‌ಗಳು ಅಲ್ಲಿ ಇರುವುದರಿಂದ 50,000 ರೂಪಾಯಿಯ ಮೆಡಿಸನ್‌ಗಳಿಗೆ ಅನುದಾನ ಇದೆ. ಉಳಿದ ಹಣವನ್ನು ಬಿಡುಗಡೆ ಮಾಡುತ್ತೇವೆ. ಈಗ 30,000 ರೂಪಾಯಿ ಬಿಡುಗಡೆ ಮಾಡಿದ್ದೇವೆ. ಕ್ರಮ ತೆಗೆದುಕೊಳ್ಳುತ್ತೇವೆ. ಐ.ಪಿ.ಪಿ. (9)ರ ಅಡಿಯಲ್ಲಿ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಅಲ್ಲಿ ಎಕ್ಸ್‌ರೇ ಯೂನಿಟ್ ಇದೆ ಅಲ್ಲಿ ತಂತ್ರಜ್ಞರು ಇಲ್ಲದೇ

ಆಪರೇಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರು ಹಲವಾರು ತಿಂಗಳಿಂದ ತಮ್ಮನ್ನು ಕೇಳುತ್ತಿದ್ದಾರೆ ಅವರಿಗೆ ಅಸ್ವಸ್ಥತೆಯಿಂದ ಬರಲಿಕ್ಕಾಗಲಿಲ್ಲ. ಕ್ಷಯರೋಗ ಯೂನಿಟ್‌ಗೆ ಎಕ್ಸರೇ ಬಹಳ ಅವಶ್ಯಕತೆ ಇದೆ. ಎಕ್ಸರೇ ಯೂನಿಟ್ ಇಲ್ಲಿ ಬಂದಿದೆ ಅದಕ್ಕೆ ಸಂಬಂಧಪಟ್ಟ ತಂತ್ರಜ್ಞರು ಇಲ್ಲದೆ ತೊಂದರೆಯಾಗುತ್ತಿದೆ. ಯಾವಾಗ ಇದನ್ನು ಕೊಡುತ್ತೀರಿ?

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಸದ್ಯರು ಕಳೆದ ಸಾರಿ ಖುದ್ದಾಗಿ ಭೇಟಿ ಮಾಡಿ ಹೇಳಿದ್ದರು. ಹಳೆಯ ಎಕ್ಸರೇ ಯೂನಿಟ್ ಬದಲಾವಣೆ ಮಾಡಿ ಹೊಸದನ್ನು ಕೊಟ್ಟಿದ್ದೇವೆ. ತಂತ್ರಜ್ಞಾನದಲ್ಲಿ ಬಳಸುವುದಕ್ಕೆ ಬರದೆ ಪುನ: ಕೆಟ್ಟಿದೆ ಎಂದು ಹೇಳಿದ್ದರು. ಕಳೆದ ವಾರವೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅದು ಕೆಲಸ ಮಾಡುವ ರೀತಿ ಮಾಡುತ್ತೇನೆ.

ವಾಣಿಜ್ಯ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾಗುತ್ತಿರುವುದು

108 (715) ಶ್ರೀ ಅಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಾಣಿಜ್ಯ (ಬೆರಳಚ್ಚು ಮತ್ತು ಶೀಘ್ರಲಿಪಿ) ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹೆಚ್ಚಿನ ಬಂಡವಾಳದೊಂದಿಗೆ ಆರಂಭಿಸಿರುವ ಈ ಶಾಲೆಗಳ ವ್ಯವಸ್ಥಾಪಕರುಗಳು ಆರ್ಥಿಕ ಸಂಕಷ್ಟದಲ್ಲಿದ್ದು, ಅವರಿಗೆ ನೆರವು ನೀಡುವ ಬಗ್ಗೆ ಸರ್ಕಾರದ ಏನಾದರೂ ಯೋಜನೆ ರೂಪಿಸಿದೆಯೇ?

3) ಸರ್ಕಾರದ ನೇಮಕಾತಿಗಳಲ್ಲಿ ಬೆರಳಚ್ಚು ಜ್ಞಾನವನ್ನು ಕಡ್ಡಾಯಮಾಡುವ ಅಥವಾ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಿಕ್ಷಣಕ್ಕೆ ಸೇರಿಸಿ ಭೋದಿಸುವ ಪಠ್ಯ ಕ್ರಮ ಅಳವಡಿಸುವ ಕುರಿತು ಸರ್ಕಾರದ ಕಡೆಯಿಂದ ಏನಾದರೂ ಚಿಂತನೆ ನಡೆದಿದೆಯೇ, ಇಲ್ಲವಾದಲ್ಲಿ ಈ ಯೋಜನೆಗಳನ್ನು ಅಳವಡಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು.

ಡಾ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ಇಲ್ಲಾ

3) ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮದಲ್ಲಿ ಬೆರಳಚ್ಚು ಕಡ್ಡಾಯಗೊಳಿಸಿಲ್ಲ. ಪ್ರಾಥಮಿಕ ಹಂತದ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಾಲೆಗಳಲ್ಲಿ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಅರಗ ಜ್ಞಾನೇಂದ್ರ: ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ದೈನಂದಿನ ಕೆಲಸ ಸುಗಮವಾಗುವುದಕ್ಕೆ 1ನೇ, 2 ನೇ ದರ್ಜೆ ಗುಮಾಸ್ತರುಗಳಿಗೆ ಟೈಪಿಂಗ್ ತರಬೇತಿ ಕೊಡುವ ಮೂಲಕ ಹಲವಾರು ವರ್ಷಗಳಿಂದ ಈ ರಾಜ್ಯದಲ್ಲಿನ ಕಾಮರ್ಸ್ ಸಂಸ್ಥೆಗಳು ಒದಗಿಸುತ್ತಾ ಬಂದಿದೆ. ಸರಕಾರ ಇದಕ್ಕಾಗಿ ಅವರಿಗೆ ಯಾವುದೇ ಅನುದಾನ ಸಹಾಯ ಕೊಟ್ಟಿರುವುದಿಲ್ಲ. ಆದರೂ ಕೂಡ ಅವರು ಅನೂಚಾನವಾಗಿ ನಡಿಸಿಕೊಂಡು

ಬಂದಿದ್ದಾರೆ ಇದರಿಂದಾಗಿ ಬಹಳ ಸಹಾಯವಾಗಿದೆ. ಆದರೆ ಇಂದು ಆ ಸಂಸ್ಥೆಗಳಿಗೆ ಸೇರತಕ್ಕಂಥ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಅದರ ಮೇಲೆಯೇ ಅವಲಂಬಿತವಾಗಿರತಕ್ಕಂತಹ ಸಂಸ್ಥೆಗಳ ಮಾಲೀಕರು ಇಂದು ಅನ್ನ ಇಲ್ಲದೇ ಇರುವ ಸ್ಥಿತಿಗೆ ಇಳಿದಿದ್ದಾರೆ. ಸರಕಾರದ 1-2 ನೇ ದರ್ಜೆ ಗುಮಾಸ್ತರುಗಳಿಗೆ ಟೈಪಿಂಗ್ ತರಬೇತಿ ಅವಶ್ಯಕತೆ ಇದನ್ನು ಕಡ್ಡಾಯ ಮಾಡುವುದು ಸರಕಾರದ ಪರಿಶೀಲನೆಯಲ್ಲಿ ಇಲ್ಲವೆಂದು ಹೇಳಿದ್ದೀರಿ. ಆದರೆ ಕೇಂದ್ರ ಸರಕಾರ ಈಗಾಗಲೇ ಇದನ್ನು ಕಡ್ಡಾಯ ಮಾಡಿದೆ. ಅದೇ ರೀತಿ ಸರಕಾರವೂ ಕೂಡ 1-2 ನೇ ದರ್ಜೆ ಗುಮಾಸ್ತರಿಗೆ ಟೈಪಿಂಗ್ ತರಬೇತಿ ಕಡ್ಡಾಯಗೊಳಿಸುವುದಕ್ಕೆ ಆಗುವುದಿಲ್ಲವೇ? ಆ ಸಂಸ್ಥೆಗಳವರು ಕಂಪ್ಯೂಟರ್ ಶಿಕ್ಷಣವನ್ನು ಅಳವಡಿಸಲಿಕ್ಕೆ ತಾವು ಅನುಮತಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಇತ್ತೀಚೆಗೆ ಕಂಪ್ಯೂಟರ್ ಯುಗ ಹೆಚ್ಚುತ್ತಿದೆ. ಎಲ್ಲಾ ಕ್ಷೇತ್ರದಲ್ಲೂ ಇದು ಜಾರಿಗೆ ಬಂದಿದೆ. ಖಾಸಗಿಯವರೇನು ಪ್ರಾರಂಭಮಾಡಿದ್ದಾರೆ ಅದನ್ನು ಅವರೇ ನಡೆಸಿಕೊಳ್ಳುತ್ತಾರೆ. ನಾವೇನು ನಡೆಸುತ್ತಿದ್ದೇವೆ ಅದನ್ನು ನಾವೂ ನೋಡಿಕೊಂಡು ಮಾಡಬೇಕಾಗುತ್ತದೆ. ಪ್ರತಿಯೊಂದು ಕಡೆಯಲ್ಲೂ ಕಂಪ್ಯೂಟರ್‌ಗೆ ಹೆಚ್ಚು ಇಂಪಾರ್ಟೆನ್ಸ್ ಇದೆ. ಇದನ್ನು ಯಾರ್ಯಾರು ಪ್ರಾರಂಭ ಮಾಡಿದ್ದಾರೆ ಅವರೆ ನೋಡಿಕೊಂಡು ಬದಲಾವಣೆಗೆ ಅನುಗುಣವಾಗಿ ಅವರು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದರೆ ಹೆಚ್ಚು ಅನುಕೂಲವಾಗುತ್ತದೆ. ಸರಕಾರಕ್ಕೆ ಇದಕ್ಕೆ ಇನ್ನು ಮುಂದೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಇಲ್ಲ. ಈಗ ಏನು ನಾನು ತಮಗೆ ಹೇಳಿದ್ದೇನೆ ಅದರಂತೆ ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯ ನೇಮಕಾತಿಯ ವಿಚಾರದಲ್ಲಿ ಬೆರಳಚ್ಚು ಕಡ್ಡಾಯ ಮಾಡುವುದಕ್ಕೆ ಸರಕಾರ ಯೋಚನೆ ಮಾಡಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಅದನ್ನು ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರಕಾರ ಯಾವುದೇ ರೀತಿಯ ಪ್ರೋತ್ಸಾಹ ಕೊಡುವುದಕ್ಕಾಗುವುದಿಲ್ಲ ಈಗೇನು ಇದೆ ಅದನ್ನೇ ಕಂಟಿನ್ಯೂ ಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಕಛೇರಿಗಳಲ್ಲಿ 1-2 ನೇ ದರ್ಜೆ ಗುಮಾಸ್ತರುಗಳನ್ನು ಇಟ್ಟುಕೊಳ್ಳುವುದಲ್ಲದೆ ಸ್ಪೆನೋಗಳನ್ನು ಬೇರೆ ನೇಮಕಾತಿ ಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿರತಕ್ಕಂತಹ ಸಿಬ್ಬಂದಿಗೇ ಇದರ ತರಬೇತಿಯನ್ನು ಅಳವಡಿಸಿದರೆ ಅದನ್ನು ಪ್ರತ್ಯೇಕವಾಗಿ ಆಯ್ಕೆ ಮಾಡುವ ಕಷ್ಟ ಮತ್ತು ವೆಚ್ಚ ಕೂಡ ಕಡಿಮೆದಯಾಗುತ್ತದೆ. ಇದನ್ನು ಕಡ್ಡಾಯ ಮಾಡುವುದರಲ್ಲಿ ಸರಕಾರಕ್ಕೇನೂ ನಷ್ಟವಿಲ್ಲವೆಂದು ಅನ್ನಿಸುತ್ತದೆ. ತಾವು ಕಂಪ್ಯೂಟರ್ ತರಬೇತಿಗೆ ಅವಕಾಶ ಕೊಟ್ಟರೆ ಅದನ್ನು ಮಾಡಲಿಕ್ಕೆ ಅವರು ತಯಾರಿದ್ದಾರೆ. ಸರಕಾರ ಇದಕ್ಕೆ ಅನುಮತಿ ಕೊಟ್ಟು ಆದೇಶಕ್ಕಾಗಿ ಇದನ್ನು ಮಾಡಬೇಕು. ಇದನ್ನು ಯಾವಾಗ ಮಾಡುತ್ತೀರಿ ಸಧ್ಯದಲ್ಲೇ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇ ಗೌಡ : ಇದು ಹೊಸ ವಿಷಯವಾಗಿರುವುದರಿಂದ ಪರಿಶೀಲನೆ ಮಾಡಿ ನೋಡುತ್ತೇನೆ.

ನಂಜನಗೂಡಿನ ಬಳಿ ಇರುವ ಮ್ಯಾಕ್ಸ್ ಫಾರ್ಮಾ ಕಾರ್ಖಾನೆಯಲ್ಲಿ ವಿಷ ಅನಿಲ ಸೋರಿಕೆ

110 (710) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಪರಿಸರ, ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮೈಸೂರು ಜಿಲ್ಲೆಯ ನಂಜನಗೂಡಿನ ಬಳಿ ಇರುವ ಮ್ಯಾಕ್ಸ್ ಫಾರ್ಮಾ ಕಾರ್ಖಾನೆಯಲ್ಲಿ ವಿಷ ಅನಿಲ ಸೋರಿ ನಾಲ್ಕು ಜನರು ಸತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಏನು?

2) ಮರಣ ಹೊಂದಿರುವ ಕುಟುಂಬಗಳಿಗೆ ಸರ್ಕಾರ ನೀಡಿದ ಪರಿಹಾರವೇನು?

3) ಈ ಕಾರ್ಖಾನೆಯನ್ನು ಸರ್ಕಾರವು ಇದುವರೆವಿಗೂ ಮುಚ್ಚದಿರಲು ಕಾರಣವೇನು?

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ ಜೀವಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು)

1. ದಿನಾಂಕ 16- 12- 97 ರಂದು ನಂಜನಗೂರಿನ ಮ್ಯಾಕ್ಸ್ ಫಾರ್ಮ ಇಂಡಿಯಾ ಲಿ. ಕಾರ್ಖಾನೆಯಲ್ಲಿ ವಿಷ ಅನಿಲ ಸೋರಿಕೆಯಿಂದ ಉಂಟಾದ ಅಪಘಾತ ಸಂಭವಿಸಿರುತ್ತದೆ. ಈ ವಿಷಯದಲ್ಲಿ ಕೈಗೊಂಡ ಕ್ರಮಗಳು ಕೆಳಕಂಡಂತಿದೆ:

ಅ) ದಿನಾಂಕ 16- 12- 97 ರಂದು ಸರ್ಕಾರದ ಪರಿಸರ ಇಲಾಖೆಯ ಕಾರ್ಯದರ್ಶಿಗಳು, ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕಾರ್ಖಾನೆಗಳ ಮತ್ತು ಬಾಯ್ಲರ್ ಇಲಾಖೆಯ ಮುಖ್ಯ ಪರಿವೀಕ್ಷಕರು ಜಂಟಿಯಾಗಿ ಅಪಘಾತ ಸ್ಥಳಕ್ಕೆ ಭೇಟಿ ನೀಡಿರುತ್ತಾರೆ.

ಆ) ದಿನಾಂಕ 16- 12- 97 ರಿಂದ ಜಾರಿಗೆ ಬರುವಂತೆ ಉದ್ದಿಮೆಯನ್ನು ಮುಚ್ಚಲು ಅಂದೇ ಆದೇಶವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನೀಡಿರುತ್ತದೆ.

ದಿನಾಂಕ 17- 12- 97 ರಂದು ಸರ್ಕಾರದ ಪರಿಸರ ಇಲಾಖೆಯು ಪರಿಸರ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಉದ್ದಿಮೆಯು ತನ್ನ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸಲು ಆದೇಶಿಸಿರುತ್ತದೆ.

ಇ) ದಿನಾಂಕ 19- 12- 97 ರಂದು ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಇಲಾಖೆಯು ದುರ್ಘಟನೆಯ ಬಗ್ಗೆ ತನಿಖೆ ಮಾಡಿ ನಿರ್ದಿಷ್ಟ ಕಾರಣಗಳನ್ನು ತಿಳಿಯಲು ಎಂಟು ಜನ ಸದಸ್ಯರೊಳಗೆ ತಜ್ಞರ ಸಮಿತಿಯನ್ನು ರಚಿಸಿ 15 ದಿನದೊಳಗೆ ಸರ್ಕಾರಕ್ಕೆ ವರದಿ ನೀಡುವಂತೆ ಆದೇಶಿಸಿತ್ತು.

ಈ) ತಜ್ಞರ ಸಮಿತಿಯು ಅಪಘಾತದ ಸ್ಥಳವನ್ನ ಭೇಟಿ ಮಾತ್ರ ಪರಿಶೀಲಿಸಿ ದುರ್ಘಟನೆಯ ಬಗ್ಗೆ ವರದಿಯನ್ನು ಸಲ್ಲಿಸಿ ಮಾಡಿದ ಶಿಫಾರಸ್ಸುಗಳನ್ನು ಸರ್ಕಾರವು ಎರಡು ಭಾಗಗಳಾಗಿ ವಿಂಗಡಿಸಿ, ಮೊದಲನೆಯ ಭಾಗದಲ್ಲಿ ಬರುವ ಶಿಫಾರಸ್ಸುಗಳನ್ನು ಉದ್ದಿಮೆ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಹಾಗೂ ಉಳಿದ ಶಿಫಾರಸ್ಸುಗಳನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಆಚರಣೆಗೆ ತರಲು ಆದೇಶವನ್ನು ದಿನಾಂಕ 18. 1. 98 ರಂದು ಹೊರಡಿಸಿರುತ್ತದೆ.

ಅ) ಉದ್ದಿಮೆಯು ಕೂಡಲೇ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಜಾರಿಗೊಳಿಸಿದ ನಂತರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕಾರ್ಖಾನೆ ಮತ್ತು ಬಾಯ್ಲರುಗಳ ಮುಖ್ಯ ಪರಿವೀಕ್ಷಕರು ಜಂಟಿ ತಪಾಸಣೆ ನಡೆಸಿ, ಉದ್ದಿಮೆ ತೆಗೆದುಕೊಂಡ ಕ್ರಮಗಳು ಸಮರ್ಪಕವಾಗಿದೆ ಎಂದು ನೀಡಿದ ವರದಿಯ ಆಧಾರದ ಮೇಲೆ, ಉದ್ದಿಮೆಗೆ ನೀಡಿದ್ದ ಕಾರ್ಖಾನೆ ಮುಚ್ಚುವ ಆಜ್ಞೆಯನ್ನು ಹಿಂಪಡೆದುಕೊಂಡು ಉದ್ದಿಮೆ ಉತ್ಪಾದನೆ ಕಾರ್ಯವನ್ನು ಮುಂದುವರಿಸಲು ಸರ್ಕಾರವು ದಿನಾಂಕ 24.1.98 ರಂದು ಆದೇಶ ಹೊರಡಿಸಿರುತ್ತದೆ ಮಂಡಳಿಯು ಸಹ ದಿನಾಂಕ 31.1.98 ರಂದು ಹಿಂದೆ ಜಾರಿಗೊಳಿಸಿ ಮುಚ್ಚುವ ಆಜ್ಞೆಯನ್ನು ಹಿಂಪಡೆದಿರುತ್ತದೆ. ಈಗ ಉದ್ದಿಮೆ ಕಾರ್ಯ ನಿರ್ವಹಿಸುತ್ತಿದೆ.

2) ಮರಣಹೊಂದಿದ 4 ಜನ ನೌಕರರಿಗೆ ಉದ್ದಿಮೆಯಿಂದ ಎಕ್ಸ್‌ಗ್ರೇಸಿಯಾ ಕಾಂಪನ್‌ಸೇಸನ್, ಪರಸನಲ್ ಎಕ್ಸಿಡೆಂಟ್ ಇನ್ಸುರೆನ್ಸ್, ಇನ್ಸಿಡೆಂಟ್ ಎಕ್ಸ್‌ಪಿನಸೆಸನ್ ಗ್ರ್ಯಾಚುಟಿ ಪ್ರಾವಿಡೆಂಟ್ ಫಂಡ್ ವರ್ಕ್‌ಮನ್ಸ್ ಕಾಂಪನಸೆಸನ್ ಇತ್ಯಾದಿಗಳ ರೂಪದಲ್ಲಿ ಒಟ್ಟು 16 ಲಕ್ಷ 427 ರೂಪಾಯಿಗಳನ್ನು ನೀಡಿದೆ. ಇದಲ್ಲದೇ ಇ.ಎಸ್. ಐ. ಪೆನ್‌ಸೆನ್ ಸ್ಕೀಮಿನಡಿ ಮೂರು ಜನ ಮೃತರಾದ ಜನರಿಗೆ ಕ್ರಮವಾಗಿ ಮಾಹೆಯಾನ ರೂ. 400.00, ಹಾಗೂ ರೂ. 230.00 ಹಾಗೂ ರೂ. 96.00 ಗಳು ಅವರು ಬದುಕಿರುವವರೆಗೂ ಸಿಗಲಿದೆ. ಈ ಸೌಲಭ್ಯದಿಂದ ವಂಚಿತನಾದ ಒಬ್ಬ ಮೃತ ನೌಕರನಿಗೆ ವರ್ಕ್‌ಮೆನ್ ಕಾಂಪನಸೇಸನ್ ರೂಪದಲ್ಲಿ ಸದರಿ ಉದ್ದಿಮೆ ರೂ. 1 ಲಕ್ಷ 97 ಸಾವಿರದ 60 ರೂಪಾಯಿಗಳನ್ನು ನೀಡಿದೆ. ಇದಲ್ಲದೆ ಗಾಯಾಳುಗಳಾದ 7 ಜನ ನೌಕರರಿಗೆ ತಲಾ ರೂ. 5,000.00 ಖರ್ಚಿಗಾಗಿ ಮತ್ತು ಒಟ್ಟು 75,789 ರೂಪಾಯಿಗಳನ್ನು ಅವರ ವೈದ್ಯಕೀಯ ಖರ್ಚಿಗಾಗಿ ಉದ್ದಿಮೆ ನೀಡಿದೆ.

ಈಗಾಗಲೇ ಉದ್ದಿಮೆ ಮರಣ ಹೊಂದಿದ ನೌಕರರಿಗೆ ಸೂಕ್ತ ಪರಿಹಾರ ನೀಡಿರುವುದರಿಂದ ಸರ್ಕಾರದ ವತಿಯಿಂದ ಪರಿಹಾರ ನೀಡುವ ಸಾಧ್ಯತೆ ಇಲ್ಲ

3) ಈ ಕಾರ್ಖಾನೆಯನ್ನು ಸರ್ಕಾರವು ದಿನಾಂಕ 16.12.97 ರಿಂದ ಮುಚ್ಚುವಂತೆ ಆಜ್ಞೆ ಹೊರಡಿಸಿರುತ್ತದೆ. ತರವಾಯ 'ಅ' ಪ್ರಶ್ನೆಗೆ ಉತ್ತರದಲ್ಲಿ ಕಂಡಿಕೆ '5' ರಲ್ಲಿ ವಿವರಿಸಿದ ಕಾರಣಗಳಿಂದಾಗಿ ಉದ್ದಿಮೆಗೆ ನೀಡಿದ ನಿಷೇದಾಜ್ಞೆಯನ್ನು ಹಿಂದಕ್ಕೆ ಪಡೆಯಲಾಗಿದೆ.

ಶ್ರೀ ಪಾಟಾಳ್ ನಾಗರಾಜ್ : ಇದು ಅತ್ಯಂತ ಕರುಣಾಜನಕವಾದ ಕಣ್ಣೀರಿನ ಒಂದು ಕಥೆ. ನಂಜನಗೂಡಿನ ಮ್ಯಾಕ್ಸ್ ಫಾರ್ಮ್ ಕಾರ್ಖಾನೆಯಲ್ಲಿ ದುರಂತ ಸಂಭವಿಸುತ್ತಿರುವುದು ಇದು ಮೊದಲೇನಲ್ಲ. 1997 ರಲ್ಲಿಯೂ ಇಂತಹ ದುರಂತ ನಡೆದಿದೆ. ನಂಜನಗೂಡಿನ ಸುತ್ತ ಇರುವ ಕಾರ್ಖಾನೆಗಳಲ್ಲಿ ಈ ಕಾರ್ಖಾನೆಯು ಅತ್ಯಂತ ಅಪಾಯಕಾರಿ ವಿಷಯವನ್ನು ಬಿಡುಗಡೆ ಮಾಡುವಂತಹ ಕಾರ್ಖಾನೆ. ಈಗಾಗಲೇ ಅಲ್ಲಿ 4 ಜನ ಅಮಾಯಕರು ವಿಷದ ಅನಿಲ ಸೋರಿ ಸತ್ತಿದ್ದಾರೆ. ಆದರೆ ಸುಮಾರು 39 ದಿವಸಗಳ ಒಳಗಾಗಿ ಆ ಕಾರ್ಖಾನೆಗೆ ಮತ್ತೆ ಜೀವದಾನವನ್ನು ನೀಡಿದ್ದಾರೆ. ಈ ದುರಂತ ಸಂಭವಿಸಿದ ನಂತರ ಆ ಕಾರ್ಖಾನೆ ಮುಚ್ಚುತ್ತದೆ, ನಂತರ ಅದಕ್ಕೊಂದು ತಜ್ಞರ ಸಮಿತಿ ರಚನೆಯಾಗುತ್ತದೆ, ಆ ಸಮಿತಿ ತಕ್ಷಣ ತನ್ನ ವರದಿ ಸಲ್ಲಿಸುತ್ತದೆ, ಆ ವರದಿ ತೆಗೆದುಕೊಂಡು ತಕ್ಷಣ ಕಾರ್ಖಾನೆಯನ್ನು ಪ್ರಾರಂಭ ಮಾಡಿ ಎಂದು ಹೇಳುತ್ತಾರೆ. ನಾನು ತಮ್ಮನ್ನು ಕೇಳುವುದೇನೆಂದರೆ, ಈ ಕಾರ್ಖಾನೆಯನ್ನು ಸಂಪೂರ್ಣವಾಗಿ ಮುಚ್ಚಿ ಸಮಗ್ರವಾದ ತನಿಖೆಯಾದ ನಂತರ ಅದರಿಂದ ಆಗುವಂತಹ ದುರಂತವನ್ನು ಪರಿಶೀಲನೆ ಮಾಡುವಂತಹ ವ್ಯವಸ್ಥೆ ಮಾಡದೆ ಇಷ್ಟು ಬೇಗ ತರಾತುರಿಯಿಂದ ಕಾರ್ಖಾನೆಯನ್ನು ಆರಂಭಿಸಲು ಸರ್ಕಾರಕ್ಕೆ ಏಕೆ ಇಷ್ಟು ಕಾಳಜಿ? ಈ ಕಾರ್ಖಾನೆಯಿಂದ 4 ಜನರ ಪ್ರಾಣ ಹಾನಿಯಾಗಿದೆ. 1997ರಲ್ಲಿ ಕಪಿಲ್ ನದಿಗೆ

ಈ ಕಾರ್ಖಾನೆಯ ವಿಷಅನಿಲ ಧಾಟಿದ್ದರಿಂದ ದನಕರುಗಳು ಸತ್ತಿವೆ, ಜನರು ಪ್ರಜ್ಞೆ ಕಳೆದುಕೊಂಡಿದ್ದಾರೆ. ಈ ಪರಿಸ್ಥಿತಿ ನಿರ್ಮಾಣವಾದರೆ ಸರ್ಕಾರ ತುರಾತುರಿಯಿಂದ ಆ ಕಾರ್ಖಾನೆಯನ್ನು ತಕ್ಷಣ ಮುಚ್ಚ ತಜ್ಞರ ಸಮಿತಿಯನ್ನು ರಚಿಸಿ, ಅವರಿಂದ ತಕ್ಷಣ ವರದಿ ತಂದು ಕಾರ್ಖಾನೆಯನ್ನು ಮತ್ತೆ 39 ದಿವಸಗಳಲ್ಲಿ ತೆರೆಯುವ ವ್ಯವಸ್ಥೆ ಮಾಡಿ ಆ ವಿಷ ಅನಿಲ ದುರಂತದಲ್ಲಿ ಸತ್ತಂತಹ 4 ಜನರ ವಿಚಾರವನ್ನು ಸಮಾಪ್ತಿ ಮಾಡಿದ್ದಾರೆ. ಈ ವ್ಯವಸ್ಥೆಯ ಹಿಂದೆ ಇರುವಂತಹ ಉದ್ದೇಶವೇನು? ಇದಕ್ಕೆ ಸರ್ಕಾರದ ಕಾಳಜಿ ಏನು?

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ : ಮಾನ್ಯ ಅಧ್ಯಕ್ಷರೆ, ಈ ಮಾರ್ಕ್ಸ್ ಫಾರ್ಮ ಔಷಧ ತಯಾರಿಕಾ ಘಟಕದಲ್ಲಿ ದಿನಾಂಕ 15. 12. 1997 ರಲ್ಲಿ ಒಂದು ಆಕಸ್ಮಿಕ ಘಟನೆಯಿಂದ ಹೈಡ್ರೋಜನ್ ಸಲ್ಫೇಟ್ ವಿಷಅನಿಲ ಸೋರಿಕೆ ಉಂಟಾಗಿ ಆ ಬಗ್ಗೆ ಕಾರ್ಮಿಕರಿಗೆ ಪೂರ್ಣ ಮಾಹಿತಿ ಇಲ್ಲದಿದ್ದುದರಿಂದ ಕಾರ್ಖಾನೆಯಲ್ಲಿದ್ದಂತಹ ಅನಿಲವನ್ನು ಹೊರ ಹಾಕುವ ಸಂದರ್ಭದಲ್ಲಿ ಈ ಘಟನೆ ನಡೆದಿದೆ. ಇದರಲ್ಲಿ 4 ಜನ ಮರಣ ಹೊಂದಿದ್ದಾರೆ. ಐದಾರು ಜನರಿಗೆ ಗಾಯಗಳಾಗಿವೆ. ಆ ಘಟನೆ ನಡೆದ ತಕ್ಷಣವೇ ನಮ್ಮ ಇಲಾಖೆಯ ಕಾರ್ಯದರ್ಶಿಗಳು ಮತ್ತು ನಮ್ಮ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಖಾನೆಗಳ ಬಾಯ್ಲರ್ ಮುಖ್ಯ ಪರಿವೀಕ್ಷಕರು ಜಂಟಿಯಾಗಿ ಕಾರ್ಖಾನೆಗೆ ಭೇಟಿ ನೀಡಿ ಅಲ್ಲಿ ನಡೆದಿರುವ ಘಟನೆಯ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಪಡೆದು ಆ ಕಾರ್ಖಾನೆಯ ಚಟುವಟಿಕೆಗಳನ್ನೆಲ್ಲಾ ಅಂದೇ ಪರಿಸರ ಸಂರಕ್ಷಣಾ ಕಾಯಿದೆಯ ಅಡಿಯಲ್ಲಿ ಸ್ಥಗಿತಗೊಳಿಸಿದ್ದಾರೆ. ಅದರ ನಂತರ 15 ದಿವಸಗಳಲ್ಲಿ ವರದಿ ಪಡೆಯುವಲ್ಲಿ ಸರ್ಕಾರಕ್ಕಿದ್ದ ಕಾಳಜಿ ಏನೆಂದರೆ ಈ ಕಾರ್ಖಾನೆ ಉತ್ಪಾದಿಸುವಂತಹ ಔಷಧ " ಲೈಫ್ ಸೇವಿಂಗ್ ಡ್ರಗ್ಸ್" ಆದುದರಿಂದ ಇದು ಅತ್ಯಂತ ಅವಶ್ಯವಾದುದರಿಂದ ಸರ್ಕಾರದ ಇದರ ಬಗ್ಗೆ ಬೇಗನೆ ತಜ್ಞರ ಸಮಿತಿಯನ್ನು ರಚಿಸಿ ಅವರ ವರದಿಯನ್ನು ತರಿಸಿಕೊಂಡು ಅಲ್ಲಿ ನಡೆದಿರುವ ಘಟನೆಗೆ ಕಾರಣ ಆಡಳಿತ ಮಂಡಳಿಯವರು ಕಾರ್ಮಿಕರಿಗೆ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ವಹಿಸಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ತರಬೇತಿ ಕೊಡದೆ ಇದ್ದುದ್ದರಿಂದ ಈ ಅನಾಹುತ ಅಲ್ಲಿ ಸಂಭವಿಸಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಿದೆ. ಆ ಕಾರಣಕ್ಕಾಗಿ ಇವತ್ತು ಆ ಕಾರ್ಖಾನೆಗೆ ಪರ್ಮಿಷನ್ ಕೊಟ್ಟರೂ ಕೂಡ ಅದು ತನ್ನ ಉತ್ಪಾದನೆಯನ್ನು ಇನ್ನೂ ಕೂಡ ಪ್ರಾರಂಭ ಮಾಡಿಲ್ಲ. ಈಗಲಾದರೂ ಅವರು ಕಾರ್ಮಿಕರಿಗೆ ತರಬೇತಿ ಕೊಟ್ಟು ಅವರ ಜೀವ ರಕ್ಷಣೆಗೆ ಅನುಕೂಲ ಮಾಡಿಕೊಡಬೇಕೆಂಬ ಒಳ್ಳೆಯ ಉದ್ದೇಶದಿಂದ ನಾವು ಈ ರೀತಿಯ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ಇದರಲ್ಲಿ ಯಾರ ಹಿತಾಸಕ್ತಿಯೂ ಇಲ್ಲ. ಈ ಕಾರ್ಖಾನೆ ಜೀವ ರಕ್ಷಕ ಔಷಧವನ್ನು ಉತ್ಪಾದನೆ ಮಾಡುವಂತಹ ಕಾರ್ಖಾನೆಯಾದುದರಿಂದ ದಿನಾಂಕ 30. 1. 98 ರಿಂದ ಮತ್ತೆ ಪುನಾರಂಭಗೊಳ್ಳಲು ನಾವು ಅನುಮತಿ ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಈ ಕಾರ್ಖಾನೆ ಜೀವ ರಕ್ಷಕ ಮಾತ್ರವಲ್ಲ, ಜೀವ ಭಕ್ಷಕ ಕೂಡ ಹೌದು. ಒಂದು ಕಡೆ ಅಲ್ಲಿ ಮಾತ್ರೆಗಳನ್ನು ತಯಾರು ಮಾಡಿ ಜನರ ಜೀವ ರಕ್ಷಣೆ ಮಾಡಿದರೆ ಮತ್ತೊಂದು ಕಡೆ ಇದು ಜನರ ಜೀವ ಹಾನಿ ಮಾಡಿ ಜೀವ ಭಕ್ಷಕ ಕಾರ್ಖಾನೆಯಾಗಿದೆ. ನೀವು ತರಾತುರಿಯಿಂದ ನೇಮಿಸಿದಂತಹ ತಜ್ಞರು ಯಾರು, ಅವರ ಹಿನ್ನೆಲೆ ಏನು? ಯಾವ ಕಾರಣಕ್ಕಾಗಿ ಆ ತಜ್ಞರು 15 ದಿವಸಗಳೊಳಗಾಗಿ ವರದಿ ಕೊಟ್ಟರು ಎಂಬುದನ್ನು ಸ್ಪಷ್ಟಪಡಿಸಬೇಕು. ಇದರಿಂದ ಏನಾಗಿದೆ ಎಂದರೆ ಸರ್ಕಾರ ನೇರವಾಗಿ ಈ ಕಾರ್ಖಾನೆಯ ಮಾಲೀಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಅದನ್ನು ಮತ್ತೆ ತೆರೆದಿದೆ ಎಂದು ನಾನು ನೇರವಾಗಿ ಆರೋಪಣೆ ಮಾಡುತ್ತಿದ್ದೇನೆ.

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ: ಇದರಲ್ಲಿ ಹೊಂದಾಣಿಕೆ ಮಾಡಿಕೊಳ್ಳುವಂಥದ್ದು ಏನೂ ಇಲ್ಲ. ಸಮಿತಿಯಲ್ಲಿದ್ದಂತಹ ತಜ್ಞರ ಹೆಸರುಗಳನ್ನು ಮತ್ತು ಅವರು ಸಲ್ಲಿಸಿರುವ ವರದಿಯನ್ನು ತಮಗೆ ಒಪ್ಪಿಸುತ್ತೇನೆ. ತಾವು ಆ ಬಗ್ಗೆ ವಿಚಾರ ಮಾಡಿ;

ಶ್ರೀ ವಾಟಾಳ್ ನಾಗರಾಜ್ : ಅವರ ಕಡೆಗೆ ಕೊಡುವ ಮೊದಲು ಸದನದ ಮುಂದೆ ಆ ಸಮಿತಿಯಲ್ಲಿದ್ದಂತಹ ತಜ್ಞರುಗಳು ಯಾರು ಯಾರು? ಅವರ ಇತಿಹಾಸ ಏನು ಅದು ಹೇಗೆ ತನಿಖೆ ನಡೆಸಿತು ಎಂಬುದನ್ನು ಮಂಡಿಸಿ. ಏಕೆಂದರೆ ಈ ವಿಚಾರ ಅಷ್ಟು ಸುಲಭವಾಗಿ ಬಿಡುವಂಥದ್ದಲ್ಲ.

ಅಧ್ಯಕ್ಷರು: ಆ ಕಾರ್ಖಾನೆಯನ್ನು ಎಷ್ಟು ದಿನ ಮುಚ್ಚಲಾಗಿತ್ತು?

ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ: ಮಾನ್ಯ ಅಧ್ಯಕ್ಷರೆ, ಒಂದೂವರೆ ತಿಂಗಳ ನಂತರ ಅದು ಮತ್ತೆ ಪುನರಾರಂಭಗೊಂಡಿತು. ಆ ವರದಿ ಇಲ್ಲಿಯೇ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸಮಿತಿಯಲ್ಲಿದ್ದಂತಹ ತಜ್ಞರು ಯಾರು ಯಾರು ಎಂದು ಕೇಳಿದ್ದೇನೆ. ತಮ್ಮ ಗಮನಕ್ಕೆ ತರುವಂತಹ ಮತ್ತೊಂದು ವಿಚಾರವೆಂದರೆ, 1997 ರಲ್ಲಿ ಅಲ್ಲಿನ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚನೆಯಾಯಿತು. ಈಗಿನ ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಪಿ. ಎಂ. ರಾಮು ಎಂಬುವವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಿದ್ದು ಅದು ತನ್ನ ವರದಿಯನ್ನು ನೇರವಾಗಿ ಸರ್ಕಾರಕ್ಕೆ ಸಲ್ಲಿಸಿತ್ತು. ಆ ವರದಿಯಲ್ಲಿ ಮ್ಯಾಕ್ಸ್ ಫಾರ್ಮ ಕಾರ್ಖಾನೆಯನ್ನು ಮುಚ್ಚದೆ ಹೋದರೆ ಅದು ಪ್ರಾಣ ಬಲಿ ತೆಗೆದುಕೊಳ್ಳುತ್ತದೆ ಎಂದು ನೇರವಾಗಿ ತಿಳಿಸಿದೆ. ಆ ವರದಿ ಏನಾಯಿತು? ಆ ಸಮಿತಿಯ ವರದಿ ಸರ್ಕಾರಕ್ಕೆ ಯಾವಾಗ ಬಂತು ? ಅದನ್ನು ಯಾವಾಗ ಸರ್ಕಾರ ಕಾರ್ಯಗತಗೊಳಿಸುತ್ತದೆ?

ಅಧ್ಯಕ್ಷರು: ತಮ್ಮ ಆಪಾದನೆ ಏನೆಂದರೆ ಬಹಳ ತರಾತುರಿಯಲ್ಲಿ ಇದನ್ನೆಲ್ಲಾ ಮುಗಿಸಿ ವಿಚಾರಣೆ ಮಾಡಕ್ಕಂಥ ಶಾಸ್ತ್ರವನ್ನೂ ಕೂಡ ಆಚರಿಸಿ ತಕ್ಷಣ ಆ ಕಾರ್ಖಾನೆ ಪುನರಾರಂಭ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಎಂಬುದು. ಅದಕ್ಕೆ ಮಾನ್ಯ ಮಂತ್ರಿಗಳ ಉತ್ತರ ಏನೆಂದರೆ, ಅದು ಜೀವ ರಕ್ಷಕವಾದಂತಹ ಅತ್ಯಮೂಲ್ಯವಾದ ಔಷಧವನ್ನು ತಯಾರು ಮಾಡುವ ಕಾರ್ಖಾನೆಯಾದುದರಿಂದ ಅಲ್ಲಿ ಏನೇನು ದೂರುಗಳಿದ್ದವು. ವ್ಯತ್ಯಾಸಗಳಿದ್ದವು ಅವುಗಳನ್ನೆಲ್ಲಾ ತಜ್ಞರಿಂದ ವಿಚಾರಣೆ ಮಾಡಿಸಿ ಸರಿಪಡಿಸುವುದಕ್ಕೆ ಸೂಚನೆ ಕೊಟ್ಟು ಕೂಡಲೇ ಕಾರ್ಖಾನೆ ಪ್ರಾರಂಭ ಮಾಡಿಸಿದ್ದೇವೆ ಎಂದು ಸಚಿವರು ಹೇಳಿದ್ದಾರೆ. ಅದರ ಮೇಲೆ ಇನ್ನು ಏನಾದರೂ ಆಪಾದನೆಗಳಿದ್ದರೆ ತಾವು ಮಾಡಿ.

ಶ್ರೀ ವಾಟಾಳ್ ನಾಗರಾಜ್ : 15 ರಿಂದ 30 ದಿವಸಗಳೊಳಗೆ ತನಿಖೆ ನಡೆಸಿ ವರದಿ ಕೊಡುವುದಕ್ಕಾಗುವುದಿಲ್ಲ. ಒಂದು ಕಡೆ ಇದು ಜೀವರಕ್ಷಕ ಔಷಧವನ್ನು ತಯಾರು ಮಾಡಿ ಜನರ ಪ್ರಾಣ ಉಳಿಸುವುದು, ಮತ್ತೊಂದು ಕಡೆ ವಿಷ ಅನಿಲವನ್ನು ಹೊರಗೆ ಬಿಟ್ಟು ಜನರನ್ನು ಕೊಲ್ಲುವುದರಿಂದ ಇದು ಜೀವಭಕ್ಷಕ ಕಾರ್ಖಾನೆಯೂ ಹೌದು. ಆದುದರಿಂದ ಕೇವಲ 15 ದಿವಸಗಳಲ್ಲಿ ತಜ್ಞರ ಸಮಿತಿ ವರದಿ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು: ಅವರು ಎಂತಹ ತಜ್ಞರು ಎಂಬುದನ್ನು ಗಮನಿಸಬೇಕಾಗುತ್ತದೆ. ಅವರು ಬಹಳ ವೇಗವಾಗಿ ತನಿಖೆ ನಡೆಸಿ ವರದಿ ಕೊಡುವಂತಹ ತಜ್ಞರಾಗಿರಲೂ ಬಹುದು.

ಶ್ರೀ ವಾಟಾಳ್ ನಾಗರಾಜ್ : ನಂಜನಗೂಡಿನಲ್ಲಿ ಭೂಪಾಲ್‌ನಲ್ಲಿ ನಡೆದಂತಹ ದುರಂತ ಮತ್ತೆ ಆಗುತ್ತದೆ. ಸರ್ಕಾರ ಕೂಡಲೇ ಈ ಕಾರ್ಖಾನೆಯನ್ನು ಮುಚ್ಚಿ ಸಮಗ್ರವಾಗಿ ತನಿಖೆ ಮಾಡಿಸಬೇಕು. ಆ ಕಾರ್ಖಾನೆಯ ಮಾಲೀಕನನ್ನು ಇದುವರೆಗೂ ಬಂದಿಸಿಲ್ಲ. ಸುಮ್ಮನೆ ಮಾಲೀಕನನ್ನು ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋದಂತೆ, ಯಾರೋ ಬೈಲ್ ಕೊಟ್ಟಂತೆ ಮಾಡಿ ನಾಟಕವಾಡಿದರು.

ಅಧ್ಯಕ್ಷರು : ನಿಮ್ಮ ಜೂನಿಯರ್ ಮುನಿಸ್ಟರ್‌ಗೆ ಈ ಬಗ್ಗೆ ಪೂರ್ತಿ ಮಾಹಿತಿ ಗೊತ್ತಿರುವುದಿಲ್ಲ. ಆದುದರಿಂದ ಕಾನೂನು ಸಚಿವರಾಗಿ ತಾವು ಏನಾದರೂ ಹೇಳುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಇದು ಒಂದು ಲೈಫ್ ಸೇವಿಂಗ್ ಡ್ರಗ್ಸ್‌ನ್ನು ಉತ್ಪಾದನೆ ಮಾಡತಕ್ಕಂಥ ಕಾರ್ಖಾನೆಯಾಗಿದ್ದು ಇಡೀ ದೇಶದಲ್ಲಿಯೇ ಇದು ಪ್ರಥಮವಾಗಿರುವಂತಹ ಕಾರ್ಖಾನೆ ಕೂಡ ಹೌದು. ಇದು ಪ್ರಾರಂಭವಾಗಿ ಒಂದು ವರ್ಷವಾಗಿದೆ. ಅಲ್ಲಿ ಅಪಘಾತ ನಡೆದ ಮೇಲೆ ಅಲ್ಲಿಗೆ ತಜ್ಞರ ಸಮಿತಿ ಭೇಟಿ ನೀಡಿದೆ. ಆ ಸಮಿತಿಯಲ್ಲಿದ್ದಂಥವರು ಯಾರು ಯಾರು ಎಂದರೆ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಎಕ್ಸ್‌ಪರ್ಟ್, ಚೀಫ್ ಇನ್‌ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್‌ರವರು ಮತ್ತು ಇತರ ಇಬ್ಬರು ತಜ್ಞರು ಕಾರ್ಖಾನೆಗೆ ಭೇಟಿ ಕೊಟ್ಟು ಅದನ್ನು ಸಂಪೂರ್ಣವಾಗಿ ವೀಕ್ಷಿಸಿ ತಕ್ಷಣ ತೆಗೆದುಕೊಳ್ಳಬೇಕಾದ ಕ್ರಮವನ್ನು ತೆಗೆದುಕೊಂಡಿದ್ದಾರೆ. ಸುಮಾರು 45 ದಿವಸಗಳವರೆಗೆ ಕಾರ್ಖಾನೆಯನ್ನು ಮುಚ್ಚಲಾಗಿತ್ತು. ನಂತರ ತಜ್ಞರ ಸಮಿತಿ ಕಾರ್ಖಾನೆಗೆ ಭೇಟಿ ನೀಡಿ, ಸಂಪೂರ್ಣವಾಗಿ ವಿಚಾರಣೆ ಮಾಡಿ ಯಾವ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ತಿಳಿಸಿದ ಹಂತದ ಕಾರ್ಖಾನೆಯವರು ಕೆಲವು ಕ್ರಮಗಳನ್ನು ಕೈಗೊಂಡು ತಜ್ಞರ ಸಮಿತಿ ಆದೇಶದ ಮೇರೆಗೆ ಎಷ್ಟನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಿದೆ ಅಷ್ಟನ್ನು ಮಾತ್ರ ಉತ್ಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಉಳಿದುದನ್ನು ಅವರು ಉತ್ಪಾದನೆ ಮಾಡುತ್ತಿಲ್ಲ. ಆ ಕಾರ್ಖಾನೆ ಪ್ರಾರಂಭವಾಗಿ ಇನ್ನೂ ಒಂದು ವರ್ಷವಾಗಿರುವುದರಿಂದ ಹಾಗೆ ಬಾಕಿ ಉಳಿದಿರುವಂಥದ್ದನ್ನು ಉತ್ಪಾದನೆ ಮಾಡುವುದಕ್ಕೆ ಕೂಡ ಕ್ರಮ ಕೈಗೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಆ ಕಾರ್ಖಾನೆ ಪೂರ್ಣ ಪ್ರಮಾಣದಲ್ಲಿ ತನ್ನ ಉತ್ಪಾದನೆಯನ್ನು ಮಾಡುತ್ತಿಲ್ಲ. ಎಕ್ಸ್‌ಪರ್ಟ್ ಕಮಿಟಿಯವರು ಯಾವುದನ್ನು ಉತ್ಪಾದನೆ ಮಾಡಬಹುದು ಎಂದು ಹೇಳಿದ್ದಾರೆ ಅದನ್ನು ಮಾತ್ರ ಉತ್ಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಇನ್ನೂ ಮಾಡಬೇಕಾಗಿರುವ ಇತರ ಕೆಲಸಗಳನ್ನು ಅವರು ಸಂಪೂರ್ಣವಾಗಿ ತನಿಖೆ ಮಾಡಿದ ನಂತರ ಆ ಕೆಲಸವನ್ನೂ ಕೂಡ ಪ್ರಾರಂಭ ಮಾಡುತ್ತದೆ. But safeguards have been taken to protect..... ನಾನು ಮೊದಲೇ ಹೇಳಿದಂತೆ ಈ ಕಾರ್ಖಾನೆ ಪ್ರಾರಂಭವಾಗಿ ಇನ್ನೂ ಒಂದು ವರ್ಷವಷ್ಟೇ ಆಗಿರುವುದರಿಂದ ಅದರಲ್ಲಿ ಕೆಲವು ಟೀಥಿಂಗ್ ಪ್ರಾಬ್ಲಮ್‌ಗಳಿವೆ. ಈ ಕಾರ್ಖಾನೆ ಹಾರ್ಟ್ ಪೇಶೆಂಟ್ಸ್‌ಗಳಿಗಾಗಿ ಜೀವರಕ್ಷಕ ಔಷಧವನ್ನು ತಯಾರು ಮಾಡುತ್ತಿದೆ. ತಜ್ಞರ ಸಮಿತಿ ಮಾಡಿರುವಂತಹ ನಿಯಮಗಳಿಗೆ ಅನುಸಾರವಾಗಿ ಆ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಬಾಕಿ ಇರುವುದನ್ನು ತಜ್ಞರ ಸಮಿತಿ ತನಿಖೆ ಮಾಡಿ ವರದಿ ಸಲ್ಲಿಸಿದ ನಂತರ ಪೂರ್ಣ ಉತ್ಪಾದನಾ ಕಾರ್ಯವನ್ನು ಮಾಡಲು ಪ್ರಾರಂಭಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅವರು ಎರಡು ವಿಧದಲ್ಲಿ ತನಿಖೆ ಮಾಡಿದ್ದಾರೆ. ಒಂದು ವಿಧದ ತನಿಖೆಯಲ್ಲಿ ಈಗಾಗಲೇ ಉತ್ಪಾದನೆ ಮಾಡಬಹುದು ಎಂಬುದಾಗಿಯೂ ಮತ್ತೊಂದು ವಿಧದ ತನಿಖೆಯಲ್ಲಿ ಶಿಫಾರಸ್ಸು ಮಾಡಿರುವಂತಹ ಸಮಿತಿಯ ವರದಿಯನ್ನು ಬಹಳ ದಿವಸಗಳ ನಂತರ ಕಾರ್ಯರೂಪಕ್ಕೆ ತರಬೇಕೆಂಬುದಾಗಿಯೂ ಹೇಳಿದ್ದಾರೆ. ನಾನು ತಮಗೆ ಹೇಳುವುದೇನೆಂದರೆ, ಈ

ಕಾರ್ಖಾನೆಯನ್ನು ಇಷ್ಟು ಬೇಗನೆ ಪ್ರಾರಂಭ ಮಾಡಿರುವುದು ಮನುಷ್ಯನ ಜೀವವನ್ನು ಉಳಿಸಬೇಕು ಎಂಬ ಉದ್ದೇಶದಿಂದ ಅಲ್ಲ, ಆ ಕಾರ್ಖಾನೆಯ ಮಾಲೀಕನನ್ನು ಉಳಿಸುವಂತಹ ಒಂದು ಸಮಗ್ರವಾದ ವ್ಯವಸ್ಥೆ ಸರ್ಕಾರದಲ್ಲಿ ನಡೆದಿದೆ. ಆ ಮಾಲೀಕ ಬಹಳ ಪ್ರಭಾವಿತನಾದ ವ್ಯಕ್ತಿ. ಈ ಕೂಡಲೇ ನ್ಯಾಯಾಂಗ ತನಿಖೆ ಮಾಡಲು ಸರ್ಕಾರ ಒತ್ತಾಯ ಮಾಡುತ್ತದೆಯೇ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಒಂದನ್ನು ಹೇಳುತ್ತೇನೆ. ತಜ್ಞರು ಹೋಗಿರುವವರು ಯಾರು ಎಂದು ನಾನು ಹೇಳಿದ ಮೇಲೆ ಬಹುಶ: ಅವರು ಹೋಗಿ ಮಾಡಿರುವ ಕೆಲಸದ ಬಗ್ಗೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಡಾ: ಲಹೇರಿ, ಭಾರತೀಯ ವಿಜ್ಞಾನ ಸಂಸ್ಥೆ, ಇದರ ಅಧ್ಯಕ್ಷರು, ಡಾ: ಜಿ. ಹೆಚ್. ನಂಜಪ್ಪ, ಹಿಂದಿನ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, Director, Regional Centre for Occupational Health, ಡಾ: ವೆಂಕಟೇಶ್, ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜು, ಬೆಂಗಳೂರು, ಡಾ: ಕೃಷ್ಣಮೂರ್ತಿ, ನಿವೃತ್ತ ಮುಖ್ಯ ಪರಿವೀಕ್ಷಕರು, ಕಾರ್ಖಾನೆ ಮತ್ತು ಬಾಯ್ಲರ್ಸ್ ಇಲಾಖೆ, ಡಾ: ಹಾಲಪ್ಪಗೌಡ, ಪ್ರೊಫೆಸರ್, ಜಿ. ಎಸ್. ಎಸ್. ಕಾಲೇಜು ಆಫ್ ಇಂಜಿನಿಯರ್ ಮತ್ತು ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ, ಬೆಂಗಳೂರು, ಶ್ರೀ ಜಿ.ಎಸ್. ಸುಬ್ಬರಾವ್, ಆರೋಗ್ಯ ವಿಜ್ಞಾನ ಸಂಸ್ಥೆ, ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯಮಾಲಿನ್ಯ ನಿಯಂತ್ರಣ ಮಂಡಳಿ, ಈ ಒಂದು ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದೇವೆ. ಮಾನ್ಯ ವಾಟಾಳರೇ, ತಾವು ಎತ್ತಿರುವ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಗಿರುವ ಘಟನೆಯನ್ನೂ ಒಪ್ಪಿಕೊಳ್ಳುತ್ತಿದ್ದೇವೆ. ಕಡೆಗೆ ಇಲ್ಲಿ ನಡೆದಿರುವ ಘಟನೆಯಾದ ಮೇಲೆ ಒಂದು ಎಕ್ಸ್‌ಪರ್ಟ್ಸ್ ಟೀಮನ್ನು ಕಳುಹಿಸಿದ್ದೇವೆ. ಈ ಎಕ್ಸ್‌ಪರ್ಟ್ಸ್ ಬಗ್ಗೆ, ಇವರ ಬಗ್ಗೆ ಯಾರೂ ಕೂಡ ಆಪಾದನೆ ಮಾಡುವುದಕ್ಕಾಗುವುದಿಲ್ಲ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿರುವ ಮೂರು ಜನ ಎಕ್ಸ್‌ಪರ್ಟ್ಸ್‌ನ್ನು ನಾವು ಕಳುಹಿಸಿದ್ದೇವೆ. ಅವರು ಹೋಗಿ ಅಲ್ಲಿ ಮಾಡಬೇಕಾಗಿರುವ ಕ್ರಮಗಳೇನು ಎಂದು ಹೇಳುವುದನ್ನು ನೋಡಿ ಆದ ಮೇಲೆ 45 ದಿವಸ ಫ್ಯಾಕ್ಟರಿಯನ್ನು ಮುಚ್ಚಿಯಾದ ಮೇಲೆ ಆ ಕೆಲಸ ಮಾಡಬೇಕಾಗಿರುವುದು ಇವರ ವರದಿಯ ಮೇಲೆ ಆಧರಿಸಿ ಮಾಡಬೇಕಾಗುತ್ತದೆ. ಅದನ್ನು ಈಗ ಶುರುಮಾಡಿದ್ದಾರೆ. ಬಾಕಿ ಇರುವ ಕೆಲಸವನ್ನು ಈ ಒಂದು ಎಕ್ಸ್‌ಪರ್ಟ್ಸ್ ಕಮಿಟಿಯವರು ಏನನ್ನು ಹೇಳಿದ್ದಾರೆ, ಅದನ್ನು ಪೂರ್ಣ ಮಾಡಿದಮೇಲೆ ಈ ಕೆಲಸವನ್ನು ಶುರು ಮಾಡುತ್ತಾರೆ. ನಾವು ಇಷ್ಟು ಹೇಳಿದ ಮೇಲೂ ತಾವು ಈ ರೀತಿ ಹೇಳಿದರೆ ಹೇಗಾಗುತ್ತದೆ?

ಶ್ರೀ ವಾಟಾಳ್ ನಾಗರಾಜ್: ರಾಮು ಅವರು ಕೊಟ್ಟಿರುವ ಜಿಲ್ಲಾ ಪಂಚಾಯಿತಿ ವರದಿ ಏನಾಯಿತು?

ಅಧ್ಯಕ್ಷರು: ಜಿಲ್ಲಾ ಪಂಚಾಯಿತಿಯವರು ಏನಾದರೂ ಕೊಡಲಿ. He has replied satisfactorily. ಅವರು ತಜ್ಞರು ಹೋಗಿ ಬಂದು ಬಹಳ ಅಗತ್ಯ ಇರುವುದಕ್ಕೆ ತಮ್ಮ ಎಲ್ಲಾ ಬುದ್ಧಿವಂತಿಕೆಯನ್ನು ಉಪಯೋಗಿಸಿ ಏನು ವರದಿಯನ್ನು ಕೊಟ್ಟಿದ್ದಾರೆ, ಅದರ ಮೇಲೆ ಮಾಡಿರುವುದು. ಸುಮ್ಮನೆ ಅದನ್ನು ಬೆಳೆಸಿಕೊಂಡು ಹೋಗುವುದು ಬೇಡ. ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಮುಚ್ಚಬೇಕು ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆಂದು ಸರಿಯಲ್ಲ. ನನಗಂತೂ ಬಹಳ ನೋವಾಗಿದೆ. ನೀವು ಮಾಡುತ್ತಿರುವುದು ತಪ್ಪು. ಆ ಮಾಲೀಕನ ರಕ್ಷಣೆ ಮಾಡುವ ವ್ಯವಸ್ಥೆ ನಡೆದಿದೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ರವರು ಸಭಾತ್ಯಾಗ ಮಾಡಿದರು.)

ಹಾಸನ ಜಿಲ್ಲೆಯ ಆಲೂರು ನಗರದಲ್ಲಿ ಕಟ್ಟುತ್ತಿರುವ ಆಸ್ಪತ್ರೆ ಕಟ್ಟಡದ ಬಗ್ಗೆ

112 (380) ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಹಾಸನ ಜಿಲ್ಲೆ ಆಲೂರು ನಗರದಲ್ಲಿ ಆಸ್ಪತ್ರೆ ಕಟ್ಟಡ ಕಟ್ಟಲು ಪ್ರಾರಂಭಿಸಲಾಗಿದೆಯೇ?

2) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗಿದೆ?

3) ಅದರ ಅಂದಾಜು ವೆಚ್ಚವೆಷ್ಟು?

4) ಇದುವರೆಗೆ ಆಗಿರುವ ಖರ್ಚು ಎಷ್ಟು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇನ್ನೂ ಪ್ರಾರಂಭವಾಗಿಲ್ಲ

2) ಉದ್ಭವಿಸುವುದಿಲ್ಲ

3) ರೂ. 46.40 ಲಕ್ಷಗಳು

4) ಯೋಜನೆಯು ನಕ್ಷೆ ತಯಾರಿಸುವ ಹಂತದಲ್ಲಿರುವುದರಿಂದ ಸದ್ಯಕ್ಕೆ ಯಾವುದೇ ವೆಚ್ಚ ಆಗಿರುವುದಿಲ್ಲ.

ಶ್ರೀ ಬಿ. ಬಿ. ಶಿವಪ್ಪ: ಮಾನ್ಯ ಅಧ್ಯಕ್ಷರೇ, ಉತ್ತರ ಸಿಕ್ಕಿದೆ. ಈ ಉತ್ತರ ನೋಡಿದ ನಂತರ ನಾನೊಂದು ರೀತಿ ದಿಗ್ಭ್ರಾಂತನಾಗಿದ್ದೇನೆ.

ಅಧ್ಯಕ್ಷರು : ಏಕೆ?

ಶ್ರೀ ಬಿ. ಬಿ. ಶಿವಪ್ಪ : ನಾನು ಎಲ್ಲಿದ್ದೇನೆ ಎನ್ನುವುದೇ ನನಗೆ ಅರ್ಥವಾಗುತ್ತಿಲ್ಲ. ಆಲೂರಿನ ತಾಲ್ಲೂಕಿನ ಕ್ಷೇತ್ರವನ್ನು ಪ್ರತಿನಿಧಿಸತಕ್ಕಂಥ ಒಬ್ಬ ಸದಸ್ಯ. ಆಲೂರು ತಾಲ್ಲೂಕಿನ ಒಂದು ಮುಖ್ಯ ಕೇಂದ್ರ. ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಗಿದೆ. ಅಲ್ಲಿರುವುದು ಒಂದೇ ಆಸ್ಪತ್ರೆ ನನಗೆ ತಿಳಿದ ಮಟ್ಟಿಗೆ. ಈ ಉತ್ತರ ನೋಡಿದರೆ ನನ್ನ ಪ್ರಶ್ನೆ ತಪ್ಪಾಗಿದೆಯೋ ಉತ್ತರ ತಪ್ಪಾಗಿದೆಯೋ ಗೊತ್ತಾಗುತ್ತಿಲ್ಲ. ಉತ್ತರದಲ್ಲಿ ಏನು ಇದೆ ಎಂದರೆ ಆಸ್ಪತ್ರೆ ಕಟ್ಟಡ ಇನ್ನೂ ಪ್ರಾರಂಭವಾಗಿಲ್ಲ. ಮುಕ್ಕಾಲು ಭಾಗ ತೀರಿದೆ. ಎರಡು ವರ್ಷಗಳಾಯಿತು. ಹಾಗಿದ್ದಲ್ಲಿ ಯಾವುದೂ ಉದ್ಭವಿಸುವುದಿಲ್ಲ. ಅಂದಾಜು 46 ಲಕ್ಷ ರೂಪಾಯಿಗಳು. ಅದು ಸರಿ ಇದೆ. ಯೋಜನೆ ನಕ್ಷೆ ತಯಾರಿಸುವ ಹಂತದಲ್ಲಿರುವುದರಿಂದ ಸದ್ಯಕ್ಕೆ ಯಾವುದೇ ವೆಚ್ಚ ಆಗಿರುವುದಿಲ್ಲ. ಸನ್ಮಾನ್ಯ ಪ್ರಕಾಶ್‌ರವರ ಸುಮಾರು ಎರಡು ವರ್ಷಗಳ ಹಿಂದೆ ಒಂದು ಸಾರಿ ಅಲ್ಲಿಗೆ ಬಂದು ಆ ಕಟ್ಟಡವನ್ನು ನೋಡಿ ಅವರ ಒಪ್ಪಿಗೆಯನ್ನು ಸೂಚಿಸಿ ಹೋಗಿದ್ದಾರೆ. ಇದು ಅದಷ್ಟು ಜಾಗ್ರತೆ ಆಗಬೇಕು. ಚೆನ್ನಾಗಿದೆ. ಒಳ್ಳೆಯ ಕೆಲಸವಾಗುತ್ತಿದೆ ಎಂದು ಹೇಳಿ. ಮೊನ್ನೆ ಉಪಮುಖ್ಯ ಮಂತ್ರಿಗಳ ಜೊತೆಯಲ್ಲಿ ನಮ್ಮ ಜಿಲ್ಲೆಗೆ ಸಮೀಕ್ಷೆಗೆ ಬಂದಾಗ ಆ ಕಟ್ಟಡ ನಿಂತು ಹೋಗಿದೆ. ಕಾರಣ ಗೊತ್ತಿಲ್ಲ. ತಕ್ಷಣ ಅದರ ಕೆಲಸವನ್ನು ಪ್ರಾರಂಭಿಸಬೇಕು ಎಂದು ನಾನು ಕೇಳಿಕೊಂಡಾಗ ಆದೇಶ ಇತ್ತಿದ್ದಾರೆ. ಅದು ಆಗಲಿಲ್ಲ. ಮೊನ್ನೆ ಕೂಡ ನಾನು ಪ್ರಕಾಶ್‌ರವರಲ್ಲಿ ಮಾತನಾಡಿದ್ದೇನೆ. ಏತಕ್ಕೋಸ್ಕರ ಈ ಕಟ್ಟಡವನ್ನು ನಿಲ್ಲಿಸಿದ್ದೀರಿ. ತಕ್ಷಣ ಪ್ರಾರಂಭ ಮಾಡಿ ಎಂದು ಕೇಳುತ್ತಿದ್ದೇನೆ. ಈಗ ಅದನ್ನು ಲ್ಯಾಂಡ್ ಆರ್ಮಿಗೆ ವಹಿಸಿದ್ದೇನೆ. ಸ್ವಲ್ಪ ತಕರಾರು ಇದೆ ಎಂದು ಹೇಳಿದ್ದಾರೆ. ಅಂದ ಮೇಲೆ ಈ ಆಸ್ಪತ್ರೆ ಜಿಲ್ಲಾ ಪರಿಷತ್ ಮತಿಯಿಂದ ಏನು

ಪ್ರಾರಂಭವಾಗಿದೆ, ಅದಲ್ಲದೆ ಮತ್ತೊಂದು ಕಟ್ಟಡವನ್ನು ಇವರೇನಾದರೂ ಕಟ್ಟುತ್ತಿದ್ದಾರೋ ಎನ್ನುವುದು ನನಗೆ ಬೇಕು. ಕಾರಣ, ಒಂದೇ ಆಸ್ಪತ್ರೆ ಇರುವುದು ಅಲ್ಲಿ. ಸರ್ಕಾರಿ ಆಸ್ಪತ್ರೆ ಇರುವುದು ಆ ತಾಲ್ಲೂಕಿನಲ್ಲಿ ಒಂದೇ ಅಂದ ಮೇಲೆ ಉತ್ತರ ಎಷ್ಟು ವಿಚಿತ್ರವಾಗಿದೆ ಎಂದರೆ ನಾನು ಏನು ಹೇಳಬೇಕೋ ಅರ್ಥವಾಗುತ್ತಿಲ್ಲ. ಉದ್ಘವಿಸುವುದೇ ಇಲ್ಲ ಎಂದು ಹೇಳುತ್ತಾರೆ, ಪ್ರಾರಂಭವೇ ಆಗಿಲ್ಲ ಎಂದು ಹೇಳುತ್ತಾರೆ. ಮುಕ್ಕಾಲು ಭಾಗ ಪ್ರಾರಂಭವಾಗಿದೆ.

ಡಾ॥ ಹೆಚ್. ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರು ಹೇಳತಕ್ಕಂಥದ್ದು ಸರಿಯಾಗಿಯೇ ಇದೆ. ಕಾರಣ ನೂರು ಹಾಸಿಗೆಗಿಂತ ಕಡಿಮೆ ಇರುವ ಎಲ್ಲಾ ಆಸ್ಪತ್ರೆಗಳು ನಮ್ಮ ರಾಜ್ಯದಲ್ಲಿ ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೆ ಬರತಕ್ಕಂಥದ್ದು. ಮಾನ್ಯ ಹಿರಿಯ ಸದಸ್ಯರು ಹೇಳಿದ ಹಾಗೆ ಪ್ರಕಾಶ್ ರವರು ಹೋಗಿ ಅದನ್ನು ನೋಡಿ ಕಟ್ಟಡವನ್ನು ಬೇಗ ಮಾಡಬೇಕು ಎಂದು ಹೇಳಿದ್ದಾರೆ. ಹಿಂದೆ ನಡೆಯುತ್ತಿದ್ದ ಜಿಲ್ಲಾ ಪರಿಷತ್ತು ಮತ್ತು ರಾಜ್ಯ ಶೀರ್ಷಿಕೆಯಡಿ ಇರುವ ಆಸ್ಪತ್ರೆಗಳ ಕಟ್ಟಡಗಳನ್ನು ಸ್ಥಗಿತಗೊಳಿಸಿ ಕರ್ನಾಟಕ ಹೆಲ್ತ್ ಸಿಸ್ಟಂನಲ್ಲಿ ಮತ್ತೆ ನಾವು ಹಣವನ್ನು ಅದೇ ಆಸ್ಪತ್ರೆಗಳಿಗೆ ತಾಲ್ಲೂಕು, ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಕೆಲಸವನ್ನು ಈ ಯೋಜನೆ ಕೈಗೊಂಡಿರುವುದರಿಂದ ಡೂಪ್ಲಿಕೇಷನ್ ಆಗಬಾರದು ಎಂದು ಹೇಳಿ ಮತ್ತು ಜಿಲ್ಲಾ ಪರಿಷತ್ತು ಮತ್ತು ರಾಜ್ಯಸರ್ಕಾರದ ವತಿಯಿಂದ ಕಟ್ಟಿರತಕ್ಕಂಥ ಆಸ್ಪತ್ರೆಗಳ ವೆಚ್ಚವನ್ನು ರೀ ಇಂಬರ್ಸ್ ಮಾಡಲಿಕ್ಕೆ ಇಲ್ಲಿ ಸಾಧ್ಯವಿರುವುದರಿಂದ ಈ ಒಂದು ಆಸ್ಪತ್ರೆಯನ್ನು ಕೆ. ಹೆಚ್. ಎಸ್. ಟಿ. ಪಿ. ವ್ಯಾಪ್ತಿಯೊಳಗಡೆ ಅಪ್‌ಗ್ರೇಡ್ ಮಾಡಲಿಕ್ಕೆ ಬರುವುದರಿಂದ ಅದಕ್ಕೆ ಆಗುವ ಉಳಿದ ವೆಚ್ಚವನ್ನು ಭರಿಸಿ ಅದನ್ನು ಪೂರ್ಣ ಮಾಡುವುದಕ್ಕೆ.

ಅಧ್ಯಕ್ಷರು : ಅವರ ಪ್ರಶ್ನೆ ಏನೆಂದರೆ ಪ್ರಾರಂಭವಾಗಿಲ್ಲ ಎಂದು ಹೇಳಿದ್ದೀರಿ. ಮುಕ್ಕಾಲು ಭಾಗ ಕೆಲಸವಾಗಿದೆ. ಇನ್ನಾರಿಗಾದರೂ ಇದನ್ನು ಬೇರೆಯವರಿಗೆ ಕೊಟ್ಟಿಬಿಟ್ಟಿರೇನು? ಎಂಬುದು ಪ್ರಶ್ನೆ.

ಡಾ॥ ಹೆಚ್. ಸಿ. ಮಹಾದೇವಪ್ಪ : ಮಾನ್ಯ ಸದಸ್ಯರು ಹೇಳಿದುದ್ದು ಸರಿಯಾಗಿದೆ.

ಅಧ್ಯಕ್ಷರು : ಈ ಆಸ್ಪತ್ರೆಯೇ ತಾನೇ ಮುಕ್ಕಾಲು ಭಾಗವಾಗಿರುವುದು.

ಡಾ॥ ಹೆಚ್. ಸಿ. ಮಹಾದೇವಪ್ಪ : ಸರಿ ಇದೆ. ಜಿಲ್ಲಾ ಪರಿಷತ್ತಿನಿಂದ ಮಾಡಿದ್ದಾರೆ. ನಾವು ಕೆ. ಹೆಚ್. ಎಸ್. ಡಿ. ಪಿ. ಬಂದ ಮೇಲೆ.....

ಅಧ್ಯಕ್ಷರು : ಈ ಉತ್ತರ ಇನ್‌ಕರೆಕ್ಟ್ ಅಲ್ಲವೇ?

ಡಾ॥ ಹೆಚ್. ಸಿ. ಮಹಾದೇವಪ್ಪ : ಸಭಾಧ್ಯಕ್ಷರೇ, Whatever answer is given it is correct because it is not taken up under KHSDP. ಅದನ್ನು ಮೊದಲು ಮಾಡಿದ್ದರು. ಈಗ ನಾವು ಕೆ. ಹೆಚ್. ಎಸ್. ಟಿ. ಪಿ. ಯಿಂದ ಪ್ರಾವಿಷನ್ ಮಾಡಿ ಏನು ಖರ್ಚಾಗಿದೆ, ಅದನ್ನು ರೀ ಇಂಬರ್ಸ್ ಮಾಡಿ ಅದನ್ನು ಸರ್ಕಾರಕ್ಕೆ ಮಾಡಿಕೊಂಡು ಮತ್ತೆ ಉಳಿದ ಹಣವನ್ನು ಇಲ್ಲಿಗೆ ಖರ್ಚು ಮಾಡಿ ಮೂರು - ನಾಲ್ಕು ತಿಂಗಳಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಈ ಆಸ್ಪತ್ರೆ ಆಗುತ್ತದೆಯೇ?

ಅಧ್ಯಕ್ಷರು: ಮಾನ್ಯ ಸದಸ್ಯರು ದಿಗ್ಭ್ರಾಂತರಾಗಬೇಕಾಗಿಲ್ಲ. ನೀವು ಭಾವ ಪರವಶರಾಗಬೇಕಾಗಿಲ್ಲ. ನಿಮ್ಮ ಆಸ್ಪತ್ರೆ ಆಗುತ್ತದೆ.

ಡಾ॥ ಹೆಚ್.ಸಿ. ಮಹಾದೇವಪ್ಪ : ಬೇರೆ ಯಾರಿಗೋ ಕೊಡುವುದಾಗಲಿ ಅಥವಾ ಜಿಲ್ಲಾ ಪರಿಷತ್ತಿನಿಂದ ಕಟ್ಟಲಿಕ್ಕೆ ಕೆ. ಹೆಚ್.ಎಸ್.ಪಿ. ಯಿಂದ ಅವಕಾಶ ಇಲ್ಲ. ಇಂಟರ್‌ನ್ಯಾಷನಲ್ ಬಿಡ್ ಮುಖಾಂತರ ನಾವೇ ಮಾಡುವುದರಿಂದ ಈಗ ಅದು ಡೂಪ್ಲಿಕೇಷನ್ ಆಗಬಾರದು ಎಂದು ಹೇಳಿ ಸ್ಥಗಿತಗೊಳಿಸಿದ್ದಾರೆ. ಉಳಿದ ಕೆಲಸವನ್ನು ಮೂರು - ನಾಲ್ಕು ತಿಂಗಳಲ್ಲಿ ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಶಿವಪ್ಪ : ಇದು ಆಗುವುದಿಲ್ಲ. ಮೂರು - ನಾಲ್ಕು ತಿಂಗಳೆಂದರೆ ಆಗುವುದಿಲ್ಲ. ಇನ್ನು ಎರಡು ತಿಂಗಳೇ ಇರುವುದು. ಮತ್ತೆ ಮಳೆ ಹಿಡಿಯುತ್ತದೆ.

ಧಾರವಾಡ ಜಿಲ್ಲೆಯಲ್ಲಿನ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮಕ್ಕೆ ಕುಡಿಯುವ ನೀರು ಸರಬರಾಜು

113 (344) ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಜಾಕಲಬ್ಬಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಹುಬ್ಬಳ್ಳಿ ನಗರದಿಂದ ಟ್ಯಾಂಕರ್‌ಗಳ ಮೂಲಕ 2-3 ದಿನಗಳಿಗೊಮ್ಮೆ ನೀರು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಟ್ಯಾಂಕರ್‌ಗಳಿಂದ ಒದಗಿಸುವ ನೀರು ಸಮಯಕ್ಕೆ ಹಾಗೂ ಸರಿಯಾಗಿ ಸಾಕಷ್ಟು ದೊರೆಯದೆ ಗ್ರಾಮದ ನಿವಾಸಿಗಳು ಕುಡಿಯುವ ನೀರಿಗಾಗಿ ಕೋಲಾಹಲವಾಗುತ್ತಿರುವ ಬಗ್ಗೆ ಸಾಕಷ್ಟು ದಿನಪತ್ರಿಕೆಗಳಲ್ಲಿ (ಸಂಯುಕ್ತ ಕರ್ನಾಟಕ ದಿನಪತ್ರಿಕೆ) ಪ್ರಕಟಣೆ ಯಾಗಿದ್ದರೂ ಸಹ ಸರ್ಕಾರದವರು ಇದುವರೆವಿಗೂ ಕುಡಿಯುವ ನೀರಿನ ಪರಿಹಾರಕ್ಕಾಗಿ ಯಾವುದೇ ಕ್ರಮ ಕೈಗೊಳ್ಳದಿರುವುದು ನಿಜವಲ್ಲವೆ?

3) ಹಾಗಿದ್ದಲ್ಲಿ ಇಂತಹ ಅತಿ ದೊಡ್ಡ ಪ್ರಮಾಣದ ಕುಡಿಯುವ ನೀರಿನ ಸಮಸ್ಯೆಯನ್ನು ಇದುವರೆವಿಗೂ ಪರಿಹರಿಸದಿರುವುದರಿಂದ ಸರ್ಕಾರದವರು ಈ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಶಾಶ್ವತ ಕುಡಿಯುವ ನೀರನ್ನು ಒದಗಿಸಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಬಂದಿದೆ.

2) ಈ ಬಗ್ಗೆ ಜಿಲ್ಲಾಧಿಕಾರಿಗಳು, ಧಾರವಾಡ ಈಗಾಗಲೇ ಸೂಕ್ತ ಕ್ರಮ ತೆಗೆದುಕೊಂಡಿದ್ದು, ಫೆಬ್ರವರಿ - 98ರ ಕೊನೆಯವಾರದಿಂದ ಟ್ಯಾಂಕರ್‌ಗಳ ಮೂಲಕ ಸಾಕಷ್ಟು ಕುಡಿಯುವ ನೀರನ್ನು ಗ್ರಾಮಸ್ಥರಿಗೆ ಒದಗಿಸಲಾಗುತ್ತಿದೆ.

3) ಈ ಗ್ರಾಮವು ಸವಳು ನೀರಿನ ವಲಯದಲ್ಲಿದ್ದು, ಗ್ರಾಮದಿಂದ 8-10 ಕಿ.ಮೀ ಪರಿಮಿತಿಯೊಳಗೆ ಸಿಹಿನೀರು ಸಿಗುವ ಸಂಭವವಿಲ್ಲದ ಕಾರಣ, ಕೊಳವೆಬಾವಿಯಿಂದ ಶಾಶ್ವತ ನೀರು ಸರಬರಾಜು ಮಾಡುವುದು ಕಾರ್ಯಸಾಧ್ಯವಿರುವುದಿಲ್ಲ. ಇಂತಹ ಗ್ರಾಮಗಳಲ್ಲಿ ಕುಡಿಯುವ ನೀರಿನ ಕೆರೆಯ ಅಂಗಳ ಹೂಳನ್ನು ತೆಗೆದು ಕುಡಿಯುವ ನೀರಿನ ತೊಂದರೆ ನಿವಾರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈ ಉತ್ತರದಲ್ಲಿ ಆ ಗ್ರಾಮದಿಂದ ಎಂಟು - ಹತ್ತು ಕಿಲೋ ಮೀಟರ್‌ವರೆಗೆ ಯಾವುದು ಸೋರ್ಸ್ ಸಿಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಸೋರ್ಸ್ ಹುಡುಕಿ ಅವರಿಗೆ ಪೈಪ್ ವಾಟರ್ ಸಪ್ಲೈ ಮಾಡುವುದೇ ಸರ್ಕಾರದ ಜವಾಬ್ದಾರಿ. ರಾಜೀವ್ ಗಾಂಧಿ ಟೆಕ್ನಾಲಜಿ ಮಿಷನ್‌ನೊಳಗೂ ಸಹಿತ ಈ ರೀತಿ ಪ್ರಾಬ್ಲಾಮ್ಯಾಟಿಕ್ ವಿಲೇಜಸ್‌ಗೆ ವಾಟರ್ ಸಪ್ಲೈ ಮಾಡುವ ಯೋಜನೆ ಇದೆ. ಇದಕ್ಕೆ ದಯವಿಟ್ಟು ಸೋರ್ಸ್ ಹುಡುಕಿ ಇದನ್ನು ಪ್ರಾರಂಭ ಮಾಡುತ್ತೇವೆ ಎನ್ನುವ ಭರವಸೆಯನ್ನೂ ಕೊಡಿ. ಮತ್ತೆ ಟ್ಯಾಂಕರ್‌ನಿಂದ ಕುಡಿಯುವ ನೀರಿಗೆ ವ್ಯವಸ್ಥೆ ಮಾಡುತ್ತೇವೆ ಎನ್ನುವುದು ಸರಿಯಾಗುವುದಿಲ್ಲ. ಅಥವಾ ಕೆರೆ ಹೂಳು ತೆಗೆಸಿ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇವೆ ಎನ್ನುವುದು ಸರಿಯಾಗುವುದಿಲ್ಲ. ನಿನ್ನೆ ನೀವು ಟ್ಯಾಂಕರ್‌ನಿಂದ ಸಪ್ಲೈ ಮಾಡುವ ನೀರನ್ನು ಕುಡಿದು ನಿನ್ನೆ ಅಲ್ಲಿ ಒಂದು ಸಾವಾಗಿದೆ. ಅದಕ್ಕೆ ದಯವಿಟ್ಟು ಬೇಗ ನಾವು ಸೋರ್ಸ್ ಹುಡುಕಿ ಪೈಪ್ಡ್ ವಾಟರ್‌ನ್ನು ಸಪ್ಲೈ ಮಾಡುತ್ತೇನೆ ಎನ್ನುವ ಕಮಿಟ್‌ಮೆಂಟನ್ನು ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಇವರು ಈಗ ನೇರವಾಗಿ ಭರವಸೆ ಕೊಡಿ ಎನ್ನುತ್ತಾರೆ. ವಾಟರ್ ಸೋರ್ಸ್ ನಿಮಗೆ ಗೊತ್ತಿದೆ. ಆ ಸ್ಥಳದಲ್ಲಿ ಇಲ್ಲ. ಏಳು ಕೊಳವೆಬಾವಿಗಳನ್ನು ತೆರೆದಾಯಿತು. ಅದರಲ್ಲಿ 6 ಕೊಳವೆಬಾವಿಗಳಲ್ಲಿ ನೀರು ಇಲ್ಲ, ಒಂದರಲ್ಲಿ ನೀರು ಇದೆ. ಅದು ಸಲೈನ್ ವಾಟರ್. ಅದನ್ನು ಉಪಯೋಗ ಮಾಡುವುದಕ್ಕಾಗುವುದಿಲ್ಲ. ಅದನ್ನು ಪೈಪ್ ವಾಟರ್ ಸಪ್ಲೈ ಮುಖಾಂತರ ಕೊಡುತ್ತಿದ್ದಾರೆ. ಅದನ್ನು ಡೊಮೆಸ್ಟಿಕ್‌ಗೆ ನೇರ ಪರಪಸ್‌ಗೆ ಯೂಸ್ ಮಾಡುತ್ತಾರೆ. ಒಂದು ಕೆರೆ ಇತ್ತು. ಅಲ್ಲಿ 3 ಲಕ್ಷ ರೂಪಾಯಿ ಖರ್ಚು ಮಾಡಿ ಹೂಳು ತೆಗೆಸಿದೆವು. ಕಳೆದ ಎರಡು ವರ್ಷದಿಂದ ಮಳೆ ಇಲ್ಲ. ಆ ಕೆರೆಯಲ್ಲಿ ನೀರು ಇಲ್ಲ. ಈಗ ಏನಾಗಿದೆ ಎಂದರೆ the whole area is saline ನೀರು ಸಿಗುವುದಿಲ್ಲ. ಈಗ ನಾವು ಏನು ಮಾಡುತ್ತಿದ್ದೇವೆ, ಟ್ಯಾಂಕ್ ವಾಟರ್‌ನಲ್ಲಿ ಪ್ರತಿ ದಿವಸ 20 ಸಾವಿರ ಲೀಟರ್ ನೀರನ್ನು ನಾವು ಸಪ್ಲೈ ಮಾಡುತ್ತಿದ್ದೇವೆ. As on date we are supplying ,..ಆಸ್ ಆನ್ ಡೇಟ್ ನಾವು ಜಿಲ್ಲಾಧಿಕಾರಿಗಳ ಜೊತೆ ಸಂಪರ್ಕ ಮಾಡಿದಾಗ ಅವರು ಮಾಹಿತಿ ಕೊಟ್ಟಿದ್ದಾರೆ. ಒಟ್ಟಾರೆ ಆ ಗ್ರಾಮದಲ್ಲಿ 1692 ಜನರು ಇದ್ದಾರೆ. ಅವರು ಹೇಳಿರುವ ಒಂದು ವಿಚಾರವನ್ನು ಒಪ್ಪುತ್ತೇನೆ. ಸೋರ್ಸ್‌ನ್ನು We will have to find out,ಎಲ್ಲೋ ಒಂದು ಕಡೆ ಸ್ವೀಟ್ ವಾಟರ್ ಸಿಗುವ ಕಡೆ ಜಾಗ ಮಾಡಿ ಅದನ್ನು ಪರಿಶೀಲನೆ ಮಾಡಿ we will have to take up this. We will make an attempt to do that. But don't ask me to make a commitment to give within 3 or 6 months.

ಶ್ರೀ ಮಹದೇವಪ್ಪ ಅಕ್ಕಿ: ಮಾನ್ಯ ಅಧ್ಯಕ್ಷರೆ, ಈ ಜಾಕಲೆಬ್ಬಿ ಗ್ರಾಮ ನಮ್ಮ ಕ್ಷೇತ್ರದಲ್ಲಿ ಬರುವುದರಿಂದ ಜಾಕಲೆಬ್ಬಿ ಗ್ರಾಮಕ್ಕೆ ಅಷ್ಟೇ ಅಲ್ಲ, ನಾವು ನೀರು ಟ್ಯಾಂಕರ್‌ಗಳ ಮುಖಾಂತರ ಸಪ್ಲೈ ಮಾಡುತ್ತಿಲ್ಲ, ಬೇರೆ ಹಳ್ಳಿಗಳಿಗೆ ಸಹಿತ ನಾವು ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡುತ್ತಿದ್ದೇವೆ. ಈಗಾಗಲೇ ನಾವು ನಾಲ್ಕೈದು ಬೋರು ಹೊಡೆಸಿದರೂ ಸಹಿತ ಆ ಗ್ರಾಮಕ್ಕೆ ನೀರು ಬೀಳಲಿಲ್ಲ. ಆ ಗ್ರಾಮದ ಸುತ್ತಲೂ ಎಂಟು ಹತ್ತು ಕಿಲೋ ಮೀಟರ್ ನಾವು ನೀರು ಸಿಗುತ್ತದೆಯೇ ಎಂದು ಪರೀಕ್ಷೆ ಮಾಡಿಸಿದರೂ ಸಹಿತ ಅಲ್ಲಿ ನೀರು ಸಿಗದೇ ಇದ್ದ ಕಾರಣ ಟ್ಯಾಂಕರ್ ಮೂಲಕ ನೀರನ್ನು ಆ ಊರಿಗೆ ಸರಬರಾಜು ಮಾಡುತ್ತಿದ್ದೇವೆ. ಅದರಂತೆ ಎರೆಬುದಾಳ, ಬಾಗವಾಡ ಹಾಗೂ ಕೊಡಲಿವಾಡ ಅಲ್ಲಿಯೂ ಸಹಿತ ನೀರಿನ ಸಮಸ್ಯೆ ಇದೆ. ಈ ವರಹಾ ನದಿಯಿಂದ ಏನಾದರೂ ಒಂದು ಸ್ಕೀಮನ್ನು ಮಾಡಿ ಶಾಶ್ವತವಾಗಿ ಅಲ್ಲಿ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ನಾವು ಈಗಾಗಲೇ ಆ ಕೆರೆಯ ಹೂಳನ್ನು

ತೆಗೆಸಿದ್ದೇವೆ. ಆದರೂ ಹೋದ ವರ್ಷ ಆ ಕೆರೆಗೆ ನೀರು ಬರಲಿಲ್ಲ. ಆದ್ದರಿಂದ ಕೆಲವೊಂದು ಸಮಸ್ಯಾತ್ಮಕ ಹಳ್ಳಿಗಳು ಇದ್ದಾವೆ, ಆ ಹಳ್ಳಿಗಳಿಗೆ ಶಾಶ್ವತವಾಗಿ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಹೇಳಿ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, Whatever answer is given it is correct because it is not taken up under KHSDP. ಅದನ್ನೇ ನಾನು ಹೇಳಿದೆ. ನಿಜ ಪಾಪ ದೂರದಿಂದ ನೀರನ್ನು ತರಬೇಕಾಗುತ್ತದೆ. ಇದರ ಸಾಧಕ ಭಾದಕಗಳನ್ನು ವಿಚಾರ ಮಾಡಬೇಕಾಗುತ್ತದೆ. ಇವೆಲ್ಲಾ ಹಳ್ಳಿಗಳು ಸಮಸ್ಯಾತ್ಮಕ ಹಳ್ಳಿಗಳು. ಏಕೆಂದರೆ ಅಲ್ಲಿ ನೀರು ಇಲ್ಲ. ಸಿಗುತ್ತಿರುವ ನೀರು ಸಲೈನ್ ವಾಟರ್. ಈ ಪರಿಸ್ಥಿತಿ ನಮಗೆ ಗೊತ್ತಿದೆ. These are all problematic villages. We will make honest attempts to do something.

ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ನಿಯಂತ್ರಣ

(341) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

2) ಆ ಪರಿಸರ ಮಾಲಿನ್ಯ ಹೆಚ್ಚಲು ಪ್ರಮುಖ ಕಾರಣಗಳೇನು?

3) ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಪರಿಸರ ಮಾಲಿನ್ಯದಿಂದ ನಾಗರೀಕರ ಮೇಲೆ ವಿಶೇಷವಾಗಿ ಚಿಕ್ಕಮಕ್ಕಳ ಮೇಲೆ ಆಗುತ್ತಿರುವ ದುಷ್ಪರಿಣಾಮವನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಸವರಾಜ್ ನೀ ಶಿವಣ್ಣನವರ್ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ, ಅಸಂಪ್ರದಾಯಕ ಇಂಧನ ಸಚಿವರು)

1) ಈ ಪರಿಸರ ಮಾಲಿನ್ಯಕ್ಕೆ ಮುಖ್ಯ ಕಾರಣಗಳು.

ಅ) ತೆರೆದ ಚರಂಡಿಗಳಲ್ಲಿ ಹರಿಯುವ ಗೃಹ ಬಳಕೆಯ ಕಲುಷಿತ ನೀರು.

ಆ) ಹೊಸ ಬಡಾವಣೆಗಳಿಂದ ಹೊಳಚರಂಡಿ ಮಾಡದೆ ಹರಿದು ಬರುವ ಕಲುಷಿತ ನೀರು.

ಇ) ಗೃಹಗಳಿಂದ ಬರುವ ಅಸಮರ್ಪಕವಾದ ರೊಚ್ಚಿನ ವಿಲೇವಾರಿ

ಈ) ಆಸ್ಪತ್ರೆ, ಹೋಟೆಲ್ ಹಾಗೂ ಕಲ್ಯಾಣ ಮಂಟಪಗಳಿಂದ ಹೊರ ಹೊಮ್ಮುವ ನಿರುಪಯುಕ್ತ ಘನ ವಸ್ತುಗಳು

ಉ) ಭಾರಿ, ಮಧ್ಯಮ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದ ಹೊರಹೊಮ್ಮುವ ಮಾಲಿನ್ಯ.

ಊ) ಕಟ್ಟಡ ನಿರ್ಮಾಣ ಕಾರ್ಯದಿಂದ ಉತ್ಪತ್ತಿಯಾಗುವ ಘನ ಪದಾರ್ಥಗಳ ಅಸಮರ್ಪಕ ವಿಲೇವಾರಿ.

ii) ಬಡಾವಣೆಗಳಲ್ಲಿ ಮಾಲಿನ್ಯಕಾರಕ ಉದ್ದಿಮೆಗಳ ಸ್ಥಾಪನೆ

iii) ವಾಹನದ ಇಂಧನದಲ್ಲಿ ಕಲಬೆರಿಕೆ.

iv) ಬೆಂಗಳೂರು ನೀರು ಪೂರೈಕೆ ಹಾಗು ಒಳಚರಂಡಿ ಮಂಡಲಿ ನಿರ್ಮಿಸಿರುವ 3 ಸಂಸ್ಕರಣ ಘಟಕಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸದಿರುವಿಕೆ.

2) ಅ) ರಾಜ್ಯದ ವಿವಿಧ ಇಲಾಖೆಗಳು ಪರಿಸರ ಮಾಲಿನ್ಯವನ್ನು ತಡೆಯಲು ಈ ಕೆಳಕಂಡ ಕ್ರಮಗಳನ್ನು ತೆಗೆದು ಕೊಳ್ಳುತ್ತಿದೆ.

ಆ) ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ನಗರದಲ್ಲಿ ಕಲುಷಿತ ನೀರನ್ನು ಶುದ್ಧೀಕರಿಸುವ ಘಟಕಗಳನ್ನು 3 ಕಡೆ ನಿರ್ಮಿಸಲಾಗುತ್ತಿದೆ. ಸರ್ಕಾರವು ಈ ಘಟಕಗಳನ್ನು ಕಾಲ ಮಿತಿಯೊಳಗೆ ಪೂರ್ಣಗೊಳಿಸಲು ಒತ್ತಡವನ್ನು ಹಾಕಲಾಗುತ್ತಿದೆ. ಅದರೊಂದಿಗೆ ತೆರೆದ ಚರಂಡಿಗಳಲ್ಲಿ ಹರಿಯುವ ಕಲುಷಿತ ನೀರನ್ನು ಒಳಚರಂಡಿ ವ್ಯವಸ್ಥೆಗೆ ಜೋಡಿಸಲು ಮತ್ತು ಈ ಮಧ್ಯೆ ಅದನ್ನು ಪಂಪುಗಳ ಮೂಲಕ ಶುದ್ಧೀಕರಣ ಘಟಕಕ್ಕೆ ಹೊಂದಿಸಲು ಸೂಚಿಸಲಾಗಿದೆ. ಹೊಸ ಬಡಾವಣೆ ಗಳಲ್ಲಿ ಅವರದೇ ಆದ ಸಂಸ್ಕರಣ ಘಟಕಗಳನ್ನು ಅಳವಡಿಸುವುದನ್ನು ಕಡ್ಡಾಯ ಮಾಡಿದೆ. ಬೆಂಗಳೂರು ಪ್ರದೇಶದಲ್ಲಿರುವ 3 ಕೆರೆಗಳಿಗೆ (ಮಡಿವಾಳ, ಅಗ್ರಹಾರ, ಹೆಬ್ಬಾಳ) ಸೇರುವ ಗೃಹಬಳಕೆಯ ಕಲುಷಿತ ನೀರನ್ನು ತಡೆದು ಈ ಕೆರೆಗಳನ್ನು ಸ್ವಚ್ಛಗೊಳಿಸಲು ನಾರ್ವೇಯನ್ ಸಹಕಾರದೊಂದಿಗೆ ಒಂದು ಯೋಜನೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಬೆಂಗಳೂರು ನಗರ ಮಾಲಿಕೆಗೆ ನಗರದ ರೊಚ್ಚನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ಕಾಲಬದ್ಧ ಕ್ರಮ ತೆಗೆದುಕೊಳ್ಳಲು ಆದೇಶಿಸಲಾಗಿದೆ. ಸಾಮೂಹಿಕವಾಗಿ ಉದ್ದಿಮೆಗಳಿಂದ ಬರುವ ಕಲುಷಿತಗಳಿಗೆ ಸಾಯುತ್ವ ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಮಾಲಿನ್ಯ ನಿಯಂತ್ರಣ ಮಂಡಳಿಯು ಪ್ರೋತ್ಸಾಹಿಸುತ್ತಿದೆ.

ಇ) ಸಾರಿಗೆ ಇಲಾಖೆಯು ವಾಹನಗಳಿಂದ ಹೊರಸೂಸುವ ಮಾಲಿನ್ಯವನ್ನು ಹತೋಟಿಯಲ್ಲಿಡಲೂ ತಪಾಸಣೆ ಕಾರ್ಯವನ್ನು ಪಥೋಟಿಯಲ್ಲಿಡಲೂ ತಪಾಸಣೆ ಕಾರ್ಯವನ್ನು ತೀಕ್ಷ್ಣಗೊಳಿಸಿದೆ ಮತ್ತು ವಾಹನದಾರರಿಂದ "ಮಾಲಿನ್ಯ ಹತೋಟಿಯಲ್ಲಿದೆ" ಎಂಬ ಪ್ರಮಾಣ ಪತ್ರವನ್ನು 6 ತಿಂಗಳಿಗೊಮ್ಮೆ ಪಡೆಯುವುದನ್ನು ಕಡ್ಡಾಯ ಮಾಡಿದೆ. ಕೇಂದ್ರ ಸರ್ಕಾರ ಇಂಧನದಲ್ಲಿ ಇರುವ ಸೀಸದಿಂದ ಚಿಕ್ಕ ಮಕ್ಕಳ ಮೇಲೆ ದುಷ್ಪರಿಣಾಮವನ್ನು ತಡೆಯಲು "ಸೀಸವಿಲ್ಲದ ಇಂಧನವನ್ನು" ಸರಬರಾಜು ಮಾಡಲು ನಿರ್ದಿಷ್ಟ ಕ್ರಮವನ್ನು ಹಾಕಿಕೊಂಡಿದೆ. ಬೆಂಗಳೂರು ನಗರದಲ್ಲಿ ಒಂದು ಪೆಟ್ರೋಲ್ ಬಾಂಕ್ ಮೂಲಕ ಇಂಥಹ ಇಂಧನವನ್ನು ಸರಬರಾಜು ಮಾಡುತ್ತಿದೆ ಮತ್ತು ದಿನಾಂಕ 1-4-2000 ರೊಳಗೆ ರಾಜ್ಯದ ಎಲ್ಲಾ ಕಡೆ ಸೀಸರಹಿತ ಇಂಧನವನ್ನು ಸರಬರಾಜು ಮಾಡಲು ಕ್ರಮವನ್ನು ಹಾಕಿಕೊಂಡಿದೆ.

ಈ) ಪರಿಸರ ಸಂರಕ್ಷಣೆಗಾಗಿ, ಜಲ, ವಾಯು ಮಾಲಿನ್ಯವನ್ನು ತಡೆಯಲು ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ (ಮಾಲಿನ್ಯ, ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1974 ವಾಯು (ಮಾಲಿನ್ಯ ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ 1981 ಹಾಗೂ ಪರಿಸರ (ಸಂರಕ್ಷಣೆ) ಕಾಯ್ದೆ 1986ರ ಅಡಿಯಲ್ಲಿ ಕೆಲವು ನಿಯಮಗಳನ್ನು ಅನುಷ್ಠಾನಕ್ಕೆ ತಂದಿರುತ್ತದೆ. ಈ ನಿಯಮಗಳಡಿ ಪ್ರತಿ ಮಾಲಿನ್ಯಕಾರಕ ಉದ್ದಿಮೆ ತನ್ನ

ಕಲುಷಿತ ನೀರು ಹಾಗೂ ಗಾಳಿಯನ್ನು ವಿಸರ್ಜಿಸಲು ಬೇಕಾದ ಸಂಸ್ಕರಣ ಘಟಕಗಳನ್ನು ಅಳವಡಿಸುವಂತೆ ಮಂಡಳಿ ಪರವಾನಿಗೆ, ಮೂಲಕ ಹಾಗು ಷರತ್ತುಗಳನ್ನು ಹಾಕಿ ಆದರ ಪಾಲನೆ ಬಗ್ಗೆ ನಿಗಾ ವಹಿಸುತ್ತಿದೆ. ಈ ನಿಯಮಗಳನ್ನು ಪಾಲಿಸದಿದ್ದ ಉದ್ದಿಮೆ : ಪುರಸಭೆಗಳ ವಿರುದ್ಧ ಕಾರಣ ಕೇಳುವ ಪತ್ರ, ಕಾನೂನು ರೀತಿ ಕ್ರಮ, ನಿಷೇದಾಜ್ಞೆ, ಕ್ರಿಮಿನಲ್ ಕೇಸುಗಳು, ಮೊಕ್ಕದಮೆಯನ್ನು ಹೂಡುವ ಕ್ರಮವನ್ನು ಮಂಡಳಿಯು ಕೈಗೊಂಡಿದೆ. ಕೆಲವು ಸಂದರ್ಭಗಳಲ್ಲಿ ಕಾರ್ಖಾನೆಗಳನ್ನು ಮುಚ್ಚಲು ಆದೇಶ ಹಾಗೂ ಕಾರ್ಯಾಚರಣೆ ತಡೆಗೆ ಆದೇಶವನ್ನು ನೀಡುತ್ತಿದೆ.

ಅಧ್ಯಕ್ಷರು : ಮಾನ್ಯ ಸುರೇಶ್ ಕುಮಾರ್ ಅವರೇ, ಆಕ್ಚುಯಲಿ ಈ ಪ್ರಶ್ನೆಯನ್ನು ನಮ್ಮವರು ಅನ್‌ಸ್ಟಾರ್ಡ್ ಮಾಡಬೇಕಾಗಿತ್ತು. ಸ್ಟಾರ್ಡ್ ಮಾಡಿದ್ದಾರೆ. ಇದರ ಬಗ್ಗೆ ಎಲಾಬರೇಟಿವ್ ಚರ್ಚೆ ಆಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ : ಸಭಾಧ್ಯಕ್ಷರೆ, ನಾನು ಮೂರೇ ಪ್ರಶ್ನೆಗಳನ್ನು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಇದು ಬಹಳ ಪ್ರಮುಖವಾದಂತಹ ಪ್ರಶ್ನೆ. ನಾನು ಅದನ್ನು ಹೇಳುತ್ತಿರತಕ್ಕದ್ದು ಏನು ಎಂದರೆ ರೂಲ್ 59 ಕೆಳಗಡೆ ನಾವು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಂಡರೆ ಒಳ್ಳೆಯದು, because it involves lot of other departments also. ಒಂದು ಕಡೆ ನಾನು ಹೇಳುತ್ತೇನೆ. ಟ್ರಾಫಿಕ್ ಕಂಜೆಷನ್ ಮತ್ತು ಟ್ರಾಫಿಕ್ ಪೊಲ್ಯೂಷನ್ ಆಗುತ್ತಿರತಕ್ಕದ್ದು. Water Supply Board ಎಲ್ಲಾ ಸೇರಿಸಿಕೊಂಡು ಏಳೆಂಟು ಇಲಾಖೆಗಳು ಬರುತ್ತವೆ. Therefore, ಅರ್ಧ ಗಂಟೆ ಚರ್ಚೆಗೆ ತೆಗೆದುಕೊಂಡರೆ we can have purposeful discussion on this.

MR. SPEAKER :- We can do justice. You can table the question now.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ, ಉತ್ತರದಲ್ಲಿ ಇದೆ ಎಂದು ಹೇಳಿದ್ದಾರೆ. ಅದಕ್ಕೆ ಸುಮಾರು 9 ಕಾರಣಗಳನ್ನು ತಿಳಿಸಿದ್ದಾರೆ, ಪರಿಸರ ಮಾಲಿನ್ಯಕ್ಕೆ ಏನು ಕಾರಣ ಎಂದು ತಿಳಿಸಿದ್ದಾರೆ. ನಾಲ್ಕು ಪರಿಹಾರ ಕೂಡ ಹೇಳಿದ್ದಾರೆ. ನನ್ನ ಪ್ರಶ್ನೆ ಬೆಂಗಳೂರು ನಗರದಲ್ಲಿ ಪರಿಸರ ಮಾಲಿನ್ಯ ಜಾಸ್ತಿ ಆಗುತ್ತಿದೆ. ಬೆಂಗಳೂರು ನಗರದಲ್ಲಿ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಇದೆ. ಈ ಪರಿಸರ ಮಾಲಿನ್ಯಕ್ಕೆ ಈ ನಿಯಂತ್ರಣ ಮಂಡಲಿಯೇ ಕಾರಣನೋ ಅಥವಾ ಅದೇ ಪರಿಹಾರನೋ? ಅದು ನನ್ನ ಬಹಳ ಮುಖ್ಯವಾದಂತಹ ಪ್ರಶ್ನೆ. ಏಕೆಂದರೆ ತಾವು ಹೇಳಿದ ಹಾಗೆ ಯಾವುದೇ ಒಂದು ಕೋ ಆರ್ಡಿನೇಷನ್ ಕಮಿಟಿ ಇಲ್ಲ. ಬಿಸಿಸಿ ಜೊತೆ, ಜಲಮಂಡಳಿ ಜೊತೆ, ಫುಡ್ ಅಂಡ್ ಸಿವಿಲ್ ಸಪ್ಲೈಸ್ ಜೊತೆ, ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಜೊತೆ ಕೋ ಆರ್ಡಿನೇಷನ್ ಕಮಿಟಿ ಇಲ್ಲ. ಬರೇ ಒಂದಷ್ಟು ಕಾರಣಗಳನ್ನು ಹುಡುಕಿದ್ದಾರೆ. ನನ್ನ ಪ್ರಶ್ನೆ ಬೆಂಗಳೂರಿನಲ್ಲಿ ಸುಮಾರು ಪರ್ ಡೇ ನಾಲ್ಕು ನೂರು ವೆಹಿಕಲ್‌ಗಳು ರಿಜಿಸ್ಟ್ರೇಷನ್ ಆಗುತ್ತಿದೆ. ಬಹಳ ಸಂಖ್ಯೆ ಟೂ ವೀಲರ್ಸ್. ಈ ಬಗ್ಗೆ ಒಂದು ಕಾಂಟ್ರಹೆನ್ಸೀವ್ ಯೋಜನೆಯನ್ನು ಮಾಡಲಿಕ್ಕೆ ಸಾಧ್ಯ ಇದೆಯಾ? ಬೆಂಗಳೂರು ನಗರದ ಪರಿಸರ ಮಾಲಿನ್ಯ ತಡೆಯಲಿಕ್ಕೆ ಯೋಜನೆ ಇದೆಯೇ? ಇದಕ್ಕೆ ಉತ್ತರ ಕೊಟ್ಟು ಬಿಡಿ.

ಶ್ರೀ ಎಂ.ಸಿ. ನಾಣಯ್ಯ : ಬಹಳ ಗಂಭೀರವಾಗಿರತಕ್ಕಂಥ ಪ್ರಶ್ನೆ ಇದು, ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಬೆಂಗಳೂರು ನಗರದ ಜನಸಂಖ್ಯೆ 65 ಲಕ್ಷ. ಬೆಂಗಳೂರು ನಗರದಲ್ಲಿ ಸುಮಾರು 20 ಲಕ್ಷ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳು ಓಡಾಡುತ್ತಿವೆ ಎಲ್ಲ ಸೇರಿ 2 ಲಕ್ಷ ದ್ವಿಚಕ್ರ ವಾಹನಗಳು ಇವೆ. 8-9 ಲಕ್ಷ ನಾಲ್ಕು ಚಕ್ರದ ವಾಹನಗಳು ಒಟ್ಟು ಸೇರಿ 20 ಲಕ್ಷ ವಾಹನಗಳು. ಈ ಪರಿಸ್ಥಿತಿಯ ಬಗ್ಗೆ ನಾವು ಚರ್ಚೆ ಮಾಡಬೇಕಾಗಿದೆ ಬಹುಶ: ಇದನ್ನು ನಾವು ನಿಯಮ 69ರ ಅಡಿಯಲ್ಲಿ ತೆಗೆದುಕೊಂಡು ಸಮಗ್ರವಾಗಿ ಚರ್ಚೆ ಮಾಡುವ.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಎಂಟನೇ ಪ್ರಶ್ನೆಗಳ ಪಟ್ಟಿಯಲ್ಲಿನ 110 ಪ್ರಶ್ನೆಗಳ ಪೈಕಿ 80 ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಹುಬ್ಬಳ್ಳಿ ನಗರದ ಸಾರ್ವಜನಿಕ ಶಿಕ್ಷಣ ಇಲಾಖೆಗೆ ಉಪ ನಿರ್ದೇಶಕರ ಹುದ್ದೆ ಮಂಜೂರು ಮಾಡುವುದು

380 (652) ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ ನಗರ): ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ ನಗರದಲ್ಲಿರುವ ಪ್ರಾಥಮಿಕ, ಪ್ರೌಢ ಹಾಗೂ ಪದವಿಪೂರ್ವ ಶಾಲಾ ಕಾಲೇಜುಗಳ ಒಟ್ಟು ಸಂಖ್ಯೆ ಎಷ್ಟು; ಇದರಲ್ಲಿ ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳು ಎಷ್ಟು; ಮಂಜೂರಾದ ಶಿಕ್ಷಕರ ಸಂಖ್ಯೆ ಎಷ್ಟು, ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇವೆ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು;

2) ಈ ನಗರದಲ್ಲಿರುವ ಶಾಲೆಗಳ ಸ್ವಂತ ಹಾಗೂ ಬಾಡಿಗೆ ಕಟ್ಟಡಗಳಲ್ಲಿರುವ ಶಾಲೆಗಳ ಸಂಖ್ಯೆ ಎಷ್ಟು, ಬಾಡಿಗೆ ಕಟ್ಟಡದಲ್ಲಿ ಇರುವ ಶಾಲೆಗಳಿಗೆ ಪ್ರತಿವರ್ಷ ಎಷ್ಟು ಬಾಡಿಗೆ ಸಂದಾಯವಾಗುತ್ತದೆ. (ಸಂಪೂರ್ಣ ವಿವರ ಒದಗಿಸುವುದು) ಸ್ವಂತ ಕಟ್ಟಡಗಳನ್ನು ಹೊಂದುವಂತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

3) ಪರಿಶಿಷ್ಟ ಜಾತಿ : ಪಂಗಡ ಹಿಂದುಳಿದ ವರ್ಗದ ಶಾಲೆಗಳಿಗೆ ಅನುದಾನ ಯಾವ ರೀತಿ ಬಿಡುಗಡೆ ಮಾಡಲಾಗುತ್ತಿದೆ; ಬಿಡುಗಡೆ ಮಾಡಲು ಯಾವ ಆಧಾರ ಅನುಸರಿಸಲಾಗುತ್ತಿದೆ;

4) ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಬೆಂಗಳೂರಿನ ಮಾದರಿಯಂತೆ ಪ್ರತ್ಯೇಕ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಹುದ್ದೆ ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೆ (ವಿವರ ನೀಡುವುದು).

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ,ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

1) ಹುಬ್ಬಳ್ಳಿ ನಗರದಲ್ಲಿರುವ ಪ್ರಾಥಮಿಕ, ಪ್ರೌಢ ಹಾಗೂ ಪ.ಪೂ. ಕಾಲೇಜುಗಳ ಸಂಖ್ಯೆ :

1.	ಸರ್ಕಾರಿ ಪ್ರಾಥಮಿಕ ಶಾಲೆಗಳು	75
2.	ಅನುದಾನಿತ ಪ್ರಾ. ಶಾಲೆಗಳು	21
3.	ಅನುದಾನ ರಹಿತ ಪ್ರಾ. ಶಾಲೆಗಳು	32
4.	ಸರ್ಕಾರಿ ಪ್ರೌಢ ಶಾಲೆಗಳು	05
5.	ಅನುದಾನಿತ ಪ್ರೌಢ ಶಾಲೆಗಳು	32
6.	ಅನುದಾನ ರಹಿತ ಪ್ರೌಢ ಶಾಲೆಗಳು	26
7.	ಸರ್ಕಾರಿ ಪ.ಪೂ. ಕಾಲೇಜುಗಳು	-
8.	ಅನುದಾನಿತ ಪ.ಪೂ. ಕಾಲೇಜುಗಳು	01
	ಒಟ್ಟು	**192**

ಶಾಲೆಗಳ ವಿವರ	ಮಂಜೂರಾದ ಹುದ್ದೆ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಸರ್ಕಾರಿ ಪ್ರಾ. ಶಾಲೆ	1098	127
ಸರ್ಕಾರಿ ಪ್ರೌಢಶಾಲೆ	46	03

(ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ)

ಖಾಸಗಿ ಶಾಲೆಗಳಲ್ಲಿನ ಹುದ್ದೆಗಳನ್ನು ತುಂಬುವುದು ಆಡಳಿತ ಮಂಡಳಿಗಳ ಜವಾಬ್ದಾರಿ

2)	ಸ್ವಂತ ಕಟ್ಟಡ ವಿರುವ ಶಾಲೆ	ಬಾಡಿಗೆ ಕಟ್ಟಡ ದಲ್ಲಿರುವ ಶಾಲೆ	ಬಾಡಿಗೆ ಕಟ್ಟಡದಲ್ಲಿರುವ ಶಾಲೆಗಳ ಬಾಡಿಗೆ
ಸರ್ಕಾರಿ ಪ್ರಾಥಮಿಕ ಶಾಲೆ :			
	95	13	57,288.00
ಸರ್ಕಾರಿ ಪ್ರೌಢ ಶಾಲೆ :			
	02	03	-

(ಸರ್ಕಾರಿ ಪ್ರೌಢಶಾಲೆ ಪ್ರಾ. ಶಾಲೆ ಕಟ್ಟಡದಲ್ಲಿ ನಡೆಯುತ್ತಿದೆ)

ನಿವೇಶನಗಳು ಲಭ್ಯವಾದಲ್ಲಿ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲಾಗುವುದು.

3) ದಿ : 1.6.1987 ಕ್ಕೆ ಪೂರ್ವದಲ್ಲಿ ಪ್ರಾರಂಭವಾದ ಪರಿಶಿಷ್ಟ ಜಾತಿ : ಪಂಗಡ ಮತ್ತು ಹಿಂದುಳಿದ ವರ್ಗಗಳ ಶಾಲೆಗಳೂ ಸೇರಿದಂತೆ ಶಿಕ್ಷಣ ಸಂಸ್ಥೆಗಳು ನಡೆಸುತ್ತಿರುವ ಶಾಲೆಗಳು ಅನುದಾನ ಸಂಹಿತೆಯ ನಿಯಮಾವಳಿಗಳನ್ನು ಹಾಗೂ ಮೀಸಲಾತಿ ನಿಯಮಗಳನ್ನು ಪಾಲಿಸಿದ್ದಲ್ಲಿ, ಜೇಷ್ಟತೆಯ ಆಧಾರದ ಮೇಲೆ ಜಿಲ್ಲಾ ಪಂಚಾಯತ್‌ನಲ್ಲಿನ ಹಣದ ಲಭ್ಯತೆಗೆ ಒಳಪಟ್ಟು ವೇತನಾನುದಾನಕ್ಕೆ ಒಳಪಡಿಸಲಾಗುತ್ತದೆ.

4) ಈ ವಿಚಾರ ಸರ್ಕಾರದ ಮುಂದೆ ಇಲ್ಲ.

ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಅನುದಾನ ಬಿಡುಗಡೆ

381 (653) ಶ್ರೀ ಅಶೋಕ್ ಶಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಇದುವರೆವಿಗೆ ಬಿಡುಗಡೆಯಾದ ಅನುದಾನ ಎಷ್ಟು?

ಅನುದಾನ ಯಾರ ಹೆಸರಿನಿಂದ ಬಿಡುಗಡೆಯಾಗಿದೆ ಅವರಿಗೆ ನೀಡಿದ ಅಧಿಕಾರಗಳಾವುವು?

2) ಈ ಆಸ್ಪತ್ರೆಗೆ ಈಗ ಯಾರು ಮುಖ್ಯಸ್ಥರು? ಆಸ್ಪತ್ರೆಗೆ ಬೇಕಾಗುವ ವಸ್ತುಗಳನ್ನು ಯಾವ ರೀತಿಯಲ್ಲಿ ಖರೀದಿಸಲಾಗುತ್ತದೆ?

3) ಈವರೆಗೆ ಯಾವ ಯಾವ ವಸ್ತುಗಳನ್ನು ಖರೀದಿಸಲಾಗಿದೆ. ಅವುಗಳ ಮೌಲ್ಯವೆಷ್ಟು? (ಸಂಪೂರ್ಣ ವಿವರ ನೀಡುವುದು)

4) ಔಷಧ ಹಾಗೂ ಇತರೆ ವಸ್ತುಗಳನ್ನು ಎಸ್‌ಪಿಡಿ ದರದಂತೆ ಅನುಮೋದಿತ ಗುತ್ತಿಗೆದಾರರಿಂದ ಖರೀದಿಸಲು ನಿರ್ದೇಶನ ನೀಡಲಾಗಿದೆಯೇ?

ಡಾ|| ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ರೂ. 12,93,91,500.00 (ಹನ್ನೆರಡು ಕೋಟಿ, ತ್ರೊಂಭತ್ತಮೂರು ಲಕ್ಷದ ತ್ರೊಂಭತ್ತೊಂದು ಸಾವಿರದ ಐದು ನೂರು ರೂಪಾಯಿಗಳು)

ರೂ. 4,31,30,500.00 (3ನೇ ಕಂತಿನ ಹಣ ಮಂಜೂರಾಗಿದೆ ಖಜಾನೆಯಿಂದ ಪಾವತಿಯಾಗಿರುವುದಿಲ್ಲ)

ನಿರ್ದೇಶಕರು, ಕಿಮ್ಸ್ ಇವರ ಹೆಸರಿನಲ್ಲಿ ಅನುದಾನ ಬಿಡುಗಡೆಯಾಗಿದೆ.

ಕಿಮ್ಸ್ ಬೈಲಾ ಪ್ರಕಾರ, ಅಧಿಕಾರವನ್ನು ಕಿಮ್ಸ್ ಅಧಿಕಾರಿಗಳು ಹೊಂದಿರುತ್ತಾರೆ.

2) ಕಿಮ್ಸ್ ಆಸ್ಪತ್ರೆಯ ಮುಖ್ಯಸ್ಥರು, ನಿರ್ದೇಶಕರು, ಕಿಮ್ಸ್ ಹುಬ್ಬಳ್ಳಿ ಮತ್ತು ಸರ್ಕಾರದ ನಿಯಮಾವಳಿಗಳ ಪ್ರಕಾರ ಖರೀದಿ ಸಮಿತಿಯ ಹಾಗೂ ಲಿನನ್ ಖರೀದಿ ಸಲಹಾ ಸಮಿತಿಯ ಅನುಮತಿ ಪ್ರಕಾರ ಈ ಆಸ್ಪತ್ರೆಗೆ ಬೇಕಾಗುವ ವಸ್ತುಗಳನ್ನು ಖರೀದಿಸಲಾಗುತ್ತಿದೆ.

3)	ಕಛೇರಿ ವೆಚ್ಚ	-	21, 13,094.00
	ಔಷಧ ಹಾಗೂ ರಾಸಾಯನ	-	69,67,448.00
	ಆಸ್ಪತ್ರೆ ಪರಿಕರಣಗಳು	-	4, 58,416.00
	ಹಾಸಿಗೆ ಹಾಗೂ ಹೊದಿಕೆಗಳು	-	1,96,507.00
	ಪತ್ಯೆ ಆಹಾರ	-	26,48,006.00
	ಸಾಧನ ಸಲಕರಣೆ	-	17,84,773.00
	ವಿದ್ಯುತ್ ಹಾಗೂ ನೀರಿನ ವೆಚ್ಚ	-	33, 14,507.00
	ವೈದ್ಯಕೀಯ ಮರುಪಾವತಿ	-	45, 165.00
	ಪ್ರವಾಸ ವೆಚ್ಚ	-	66,281.00
	ಒಟ್ಟು ರೂ.	-	**1,75,96, 197.00**

4) ಕರ್ನಾಟಕ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಅಧೀನದ ಉದ್ದಿಮೆಗಳಿಂದ ಮೊದಲ ಪ್ರಶ್ಯಸ್ಯ ಮತ್ತು ಉತ್ಪಾದಕ ಕಂಪನಿಗಳಿಂದ ಮತ್ತು ಹಳೇ ದರದ ಗುತ್ತಿಗೆ ದಾರದಿಂದ ಖರೀದಿ ನಿಯಮಾವಳಿಗಳ ಪ್ರಕಾರ ಖರೀದಿಸಲಾಗುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಮಿದುಳು ಜ್ವರ ನಿಯಂತ್ರಣ

383 (645) ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬಳ್ಳಾರಿ ಜಿಲ್ಲೆಯಲ್ಲಿ 1997 ರಲ್ಲಿ ಮಿದುಳು ಜ್ವರದಿಂದ ಪೀಡಿತರಾದವರ ಸಂಖ್ಯೆ ಎಷ್ಟು? ಹಾಗೂ ಅದರಿಂದ ಪ್ರಾಣ ಕಳೆದುಕೊಂಡವರೆಷ್ಟು?

2) ಬಳ್ಳಾರಿ ಜಿಲ್ಲೆಯಲ್ಲಿ ಮಿದುಳು ರೋಗವನ್ನು ನಿಯಂತ್ರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಬಳ್ಳಾರಿ ಜಿಲ್ಲೆಯಲ್ಲಿ 1997ರಲ್ಲಿ ಒಟ್ಟು 200 ಜನರು ಮೆದುಳು ಜ್ವರದ ಸಂಶಯಾಸ್ಪದದಿಂದ ಪೀಡಿತರಾಗಿದ್ದು ಅವರಲ್ಲಿ 40 ಜನರು ಮೃತ ಪಟ್ಟಿರುತ್ತಾರೆ.

2) ಬಳ್ಳಾರಿ ಜಿಲ್ಲೆಯಲ್ಲಿ ಮೆದುಳು ಜ್ವರ ರೋಗವನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಈ ರೋಗ ತಗುಲಿದ ಹಳ್ಳಿಗಳಲ್ಲಿ ಸೊಳ್ಳೆ ನಿಯಂತ್ರಣದ ಸಲುವಾಗಿ ಡಿ. ಡಿ. ಟಿ. ಕೀಟನಾಶಕವನ್ನು ಸಿಂಪಡಿಸಲಾಗಿದೆ.

ಆ) ಪಟ್ಟಣ ಪ್ರದೇಶ ಮತ್ತು ಹಳ್ಳಿಗಳಲ್ಲಿ ತಾಂತ್ರಿಕ ಮೇಲಾಧಿಯಾನ್ ದ್ರಾವಣದ ಹೊಗೆಯನ್ನು ಫಾಗಿಂಗ್ ಯಂತ್ರಗಳಿಂದ ಬಿಟ್ಟು ಸೊಳ್ಳೆಗಳ ನಿಯಂತ್ರಣ ಕೈಗೊಳ್ಳಲಾಗಿದೆ.

ಇ) ರೋಗ ತಗುಲಿದ ಪ್ರಕರಣಗಳಿಗೆ ಕೂಡಲೇ ಸೂಕ್ತ ಚಿಕಿತ್ಸೆಗಾಗಿ ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ. ಹಾಗೂ ಔಷಧಿ ಮತ್ತು ಸಾಮಾಗ್ರಿಗಳ ಸರಬರಾಜು ಸಾಕಷ್ಟು ಪ್ರಮಾಣದಲ್ಲಿ ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯಲ್ಲಿ ಕಂಡುಬಂದ ಪ್ರಕರಣಗಳನ್ನು ಸೂಕ್ತ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆ ಬಳ್ಳಾರಿಗೆ ವರ್ಗಾಯಿಸಲು ವ್ಯವಸ್ಥೆ ಮಾಡಲಾಗಿದೆ.

ಈ) ಮುಂಜಾಗ್ರತಾ ಕ್ರಮವಾಗಿ ಹಂದಿಗಳನ್ನು ಮನುಷ್ಯರ ಸಂಪರ್ಕದಿಂದ 3 ಕಿ.ಮೀ ದೂರಕ್ಕೆ ಸ್ಥಳಾಂತರಿಸಲಾಗಿದೆ.

ಉ) ನಗರ ಸಭೆಯ ಮೂಲಕ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೀಟನಾಶಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

ಊ) ಬಳ್ಳಾರಿ ನಗರದ ವಿಜಯನಗರ ವೈದ್ಯಕೀಯ ಸಂಸ್ಥೆಯಲ್ಲಿ ಮೆದುಳು ಜ್ವರ ಪೀಡಿತರ ಚಿಕಿತ್ಸೆಗಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿದೆ.

ಋ) ಸಾರ್ವಜನಿಕರಿಗೆ ಈ ರೋಗದ ಬಗ್ಗೆ ಜನ ಜಾಗೃತಿ ಮೂಡಿಸಲು ವ್ಯಾಪಕವಾದ ಆರೋಗ್ಯ ಶಿಕ್ಷಣವನ್ನು ನೀಡಲಾಗಿದೆ.

ಕೊಡಗಿನಲ್ಲಿ ವೈದ್ಯರ ಕೊರತೆ

384 (705) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್, (ಸೋಮವಾರಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕೊಡಗಿನಲ್ಲಿ ಡಾಕ್ಟರ್‌ಗಳ ಕೊರತೆ ಎಷ್ಟು ಇದೆ? (ತಾಲ್ಲೂಕುವಾರು ವಿವರ ನೀಡುವುದು)

2) ಖಾಲಿ ಹುದ್ದೆಗಳನ್ನು ಯಾವಾಗ ತುಂಬಲಾಗುವುದು?

ಡಾ: ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 104 ವೈದ್ಯರ ಹುದ್ದೆಗಳ ಪೈಕಿ 54 ಹುದ್ದೆಗಳು ಖಾಲಿ ಇವೆ. ತಾಲ್ಲೂಕುವಾರು ವಿವರಣಾ ಪಟ್ಟಿ ಲಗತ್ತಿಸಿದೆ.

2) ಏಪ್ರಿಲ್ ಮತ್ತು ಮೇ ತಿಂಗಳ ಸಾಮಾನ್ಯ ವರ್ಗಾವಣೆಯಲ್ಲಿ ಹಾಗೂ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ನೇಮಕಾತಿಗಾಗಿ ಬರುವ ವೈದ್ಯರಿಂದ ತಾಲ್ಲೂಕು ಮಟ್ಟದ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಹಾಗೂ ಗ್ರಾಮಾಂತರ ಆಸ್ಪತ್ರೆಗಳಲ್ಲಿ ಗುತ್ತಿಗೆ ವೈದ್ಯರ ನೇಮಕಾತಿಯಿಂದ ಖಾಲಿ ಹುದ್ದೆಗಳನ್ನು ತುಂಬಲಾಗುವುದು.

ಕೊಡಗು ಜಿಲ್ಲೆಯಲ್ಲಿ ಇರುವ ವೈದ್ಯರ ಹುದ್ದೆಗಳ ವಿವರ :

1) ಜಿಲ್ಲಾ ಆಸ್ಪತ್ರೆ, ಮಡಿಕೇರಿ	23
2) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಮಡಿಕೇರಿ	
ಅ) ಎಲ್.ಸಿ. ಡಿ. ಆರ್. ಹುದ್ದೆಗಳು	4
ಆ) ಜಿಲ್ಲಾ ಪ್ರಯೋಗಶಾಲಾ ಕೇಂದ್ರ	1
ಇ) ಜಿಲ್ಲಾ ಕ್ಷಯರೋಗ ಕೇಂದ್ರ	1
3) ಸೋಮವಾರ ಪೇಟೆ ತಾಲ್ಲೂಕು :	
ಅ) ಪ್ರಾಥಮಿಕ ಆರೋಗ್ಯ ಕೇಂದ್ರ, ಹುಬ್ಬಳಿ:	1
ಆ) ಪ್ರಾಥಮಿಕ ಆರೋಗ್ಯ ಕೇಂದ್ರ, ಶಾಂತಿಹಳ್ಳಿ	1
ಇ) ಪ್ರಾಥಮಿಕ ಆರೋಗ್ಯ ಕೆಂದ್ರ, ಆಲೂರು ಸಿದ್ದಾಪುರ	1
ಈ) ಪ್ರಾಥಮಿಕ ಆರೋಗ್ಯ ಘಟಕ ಹೌಡಹಳ್ಳಿ	1
ಉ) ಪ್ರಾಥಮಿಕ ಆರೋಗ್ಯ ಕೇಂದ್ರ, ಕುಡಿಗೆ	1
ಊ) ಪ್ರಾಥಮಿಕ ಆರೋಗ್ಯ ಕೇಂದ್ರ, ಮಾದಾಪುರ	1
4) ವಿರಾಜಪೇಟೆ ತಾಲ್ಲೂಕು :	
ಅ) ಪ್ರಾಥಮಿಕ ಆರೋಗ್ಯ ಕೇಂದ್ರ, ಗೋಣಿಕೊಪ್ಪ	2
ಆ) ಪ್ರಾಥಮಿಕ ಆರೋಗ್ಯ ಕೇಂದ್ರ, ಹುಡಿಕೇರಿ	2
ಇ) ಪ್ರಾಥಮಿಕ ಆರೋಗ್ಯ ಕೇಂದ್ರ, ಬಿರಾನಾನಿ	1
ಈ) ಪ್ರಾಥಮಿಕ ಆರೋಗ್ಯ ಕೇಂದ್ರ, ಚನ್ನಕೋಟಿ	1
ಉ) ಪ್ರಾಥಮಿಕ ಆರೋಗ್ಯ ಕೇಂದ್ರ, ಸಿದ್ದಾಪುರ	4
ಊ) ಪ್ರಾಥಮಿಕ ಆರೋಗ್ಯ ಘಟಕ, ಕಲ್ಲಹಳ್ಳಿ	1
ಋ) ಪ್ರಾಥಮಿಕ ಆರೋಗ್ಯ ಕೇಂದ್ರ, ಕುಟ್ಟ	2
ೠ) ಪ್ರಾಥಮಿಕ ಆರೋಗ್ಯ ಕೇಂದ್ರ, ಪಾಲಿ ಬೆಟ್ಟ	3
ಎ) ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಳೆಲೆ	1
ಏ) ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಕೋಟು ಪರಂಬು	1
ಐ) ಪ್ರಾಥಮಿಕ ಆರೋಗ್ಯ ಕೇಂದ್ರ, ಕಾನೂರು	1
ಒಟ್ಟು	54

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ವಿಶ್ವಬ್ಯಾಂಕ್ ಸಹಾಯದಿಂದ ಕುಡಿಯುವ ನೀರಿನ ಯೋಜನೆ

385 (382) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಿಶ್ವಬ್ಯಾಂಕ್ ಸಹಾಯದಿಂದ ಕುಡಿಯುವ ನೀರಿನ ಯೋಜನೆ ಕಾರ್ಯಕ್ರಮದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮಂಜೂರಾಗಿರುವ ಗ್ರಾಮಗಳು ಯಾವುವು:

2) ಮಂಜೂರಾಗಿ ಎಷ್ಟು ಸಮಯವಾಗಿದೆ ಈ ಕಾಮಗಾರಿಗಳಿಗೆ ಇದುವರೆಗೂ ಖರ್ಚು ಮಾಡಲಾದ ಹಣ ಎಷ್ಟು? ಇದರಿಂದ ಯಾವ ಕಾಮಗಾರಿಗಳನ್ನು ಮಾಡಿದೆ : ವಿಳಂಬಕ್ಕೆ ಕಾರಣಗಳೇನು?

3) ಯಾವಾಗ ಮುಗಿಸಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಯೋಜನೆಯ ಕಾರ್ಯಕ್ರಮದಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 1ನೇ ಹಂತದಲ್ಲಿ ಮಂಜೂರಾದ ಗ್ರಾಮಗಳು - 2

1. ಮೇಗರವಳ್ಳಿ ಮತ್ತು

2. ಕೊಣಂದೂರು

2ನೇ ಹಂತದಲ್ಲಿ ಮಂಜೂರಾದ ಗ್ರಾಮಗಳು - 1

1. ಮೇಲಿನ ಕುರುವಳ್ಳಿ

2. ಈ ಯೋಜನೆಗೆ ಯೋಜನಾ ಒಪ್ಪಂದವನ್ನು ದಿನಾಂಕ 4.6.98 ರಂದು ಸಹಿ ಮಾಡಲಾಗಿದೆ. ಮೇಗರವಳ್ಳಿ ಮತ್ತು ಕೊಣಂದೂರು ಗ್ರಾಮಗಳ ನೀರು ನೀರು ಸರಬರಾಜು ಕಾರ್ಯಕ್ರಮಗಳು ಯೋಜನೆಯ ಮೊದಲ ಹಂತದ ಸ್ಲೈಸ್ ನಂ. 3 ರಲ್ಲಿ ಒಳಗೊಂಡಿದ್ದು, ಇದಕ್ಕೆ ದಿನಾಂಕ 21.1.95 ರಂದು ಜನಾರೋಗ್ಯ ಶಿಲ್ಪಕಾರ್ಯ ವಲಯದ ಪ್ರಧಾನ ಇಂಜಿನಿಯರ್ ರವರು ತಾಂತ್ರಿಕ ಅನುಮೋದನೆ ನೀಡಿದ್ದು ಜೂನ್-95 ರಲ್ಲಿ ಟೆಂಡರ್ ಗಳನ್ನು ಅನುಮೋದಿಸಲಾಗಿದೆ.

ಮೇಗರವಳ್ಳಿ ಗ್ರಾಮದ ನೀರು ಸರಬರಾಜು ಕಾಮಗಾರಿಗಳಿಗಾಗಿ 11.00 ಲಕ್ಷ ರೂಪಾಯಿಗಳನ್ನು ಪರಿಸರ ನೈರ್ಮಲ್ಯ ಕಾಮಗಾರಿಗಳಿಗಾಗಿ 5.40 ಲಕ್ಷ ರೂಪಾಯಿಗಳನ್ನು ಈವರೆವಿಗೆ ಖರ್ಚು ಮಾಡಲಾಗಿದೆ. ಗ್ರಾಮದ ಒವರಹೆಡೆ ಟ್ಯಾಂಕ್‌ನ ನಿರ್ಮಾಣ ಕಾರ್ಯ ಮುಕ್ತಾಯ ಹಂತದಲ್ಲಿದ್ದು, ರೈಸಿಂಗ್ ಮೈನ್ ಕಾರ್ಯ ಶೇ. 95 ರಷ್ಟು ಹಾಗೂ ವಿತರಣಾ ಕೊಳವೆ ಅಳವಡಿಸುವ ಕಾರ್ಯ ಶೇ. 50 ರಷ್ಟು ಮುಗಿದಿದೆ. ಕೊಳವೆ ಬಾವಿ ಅಳವಡಿಸಬೇಕಾದ 12 ಕೈಪಂಪುಗಳ ಪೈಕಿ ಈಗಾಗಲೇ 5 ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಅಳವಡಿಸಲಾಗಿದೆ.

ಕೊಣಂದೂರು ಗ್ರಾಮದಲ್ಲಿ ನೀರು ಸರಬರಾಜು ಕಾಮಗಾರಿಗಳಿಗಾಗಿ 10.50 ಲಕ್ಷ ರೂ.ಗಳು ಹಾಗೂ ಪರಿಸರ ನೈರ್ಮಲ್ಯ ಕಾಮಗಾರಿಗಳಿಗಾಗಿ 1.65 ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ. ನೆಲಮಟ್ಟದ

ನೀರಿನ ತೊಟ್ಟಿಯ ನಿರ್ಮಾಣಕಾರ್ಯ ಪ್ರಾರಂಭವಾಗಿದ್ದು, ರೈಸಿಂಗ್‌ಮೈನ್ ಕಾರ್ಯ ಶೇ. 50 ರಷ್ಟು ಹಾಗೂ ವಿತರಣಾ ವ್ಯವಸ್ಥೆಯ ಶೇ. 90 ರಷ್ಟು ಕಾಮಗಾರಿಗಳು ಮುಕ್ತಾಯಗೊಂಡಿವೆ. ಆ ಹೊಳವೆ ಬಾವಿಗಳಿಗೆ ಕೈ ಪಂಪುಗಳನ್ನು ಅಳವಡಿಸಲಾಗಿದ್ದು, ಅವುಗಳು ಉಪಯೋಗದಲ್ಲಿರುತ್ತದೆ. ಗುತ್ತಿಗೆದಾರರೊಂದಿಗೆ ಮಾಡಿಕೊಂಡಿರುವ ಒಪ್ಪಂದದಂತೆ ನೀರು ಸರಬರಾಜು ಕಾಮಗಾರಿಗಳು ದಿನಾಂಕ 17-1-98 ಕ್ಕೆ ಮುಕ್ತಾಯವಾಗಬೇಕಾಗಿತ್ತು. ಆದರೆ ನಿಗದಿತ ಅವಧಿಯಲ್ಲಿ ಗುತ್ತಿಗೆದಾರರು ಕಾಮಗಾರಿಗಳನ್ನು ಮುಗಿಸಿರುವುದಿಲ್ಲ.

ಎರಡನೇ ಹಂತದಲ್ಲಿ ಒಳಗೊಂಡಿರುವ ಮೇಲಿನ ಕುರುವಳ್ಳಿ ಗ್ರಾಮದ ನೀರು ಸರಬರಾಜು ಕಾಮಗಾರಿಗಳಿಗೆ ಈಗ ಟೆಂಡರ್ ಕರೆಯಲಾಗಿದೆ.

3) ಕಾಮಗಾರಿಗಳನ್ನು ತ್ವರಿತವಾಗಿ ಆದ್ಯತೆಯ ಮೇಲೆ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಬಿಜಾಪುರ ತಾಲ್ಲೂಕಿನಲ್ಲಿ ದಶಲಕ್ಷ ಬಾವಿ ಯೋಜನೆ

386 (709) ಶ್ರೀ ಬಸವನಗೌಡ ಆರ್. ಪಾಟೀಲ್ (ಬಿಜಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬಿಜಾಪುರ ತಾಲ್ಲೂಕು ಪಂಚಾಯತ್ ಮುಖಾಂತರ 1994-95, 95-96, 96-97 ರವರೆಗೆ ದಶಲಕ್ಷ ಬಾವಿ ಯೋಜನೆ ಯಡಿಯಲ್ಲಿ ನೀಡಲಾದ ಫಲಾನುಭವಿಗಳ ಸಂಖ್ಯೆ ಎಷ್ಟು : (ವಿಧಾನಸಭಾವಾರು ಫಲಾನುಭವಿಗಳ ಹೆಸರುಗಳ ವಿವರ ನೀಡುವುದು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ಬಿಜಾಪುರ ತಾಲ್ಲೂಕು ಪಂಚಾಯತ್ ಮುಖಾಂತರ 1994-95, 1995-96, 1996-97ನೇ ಸಾಲಿನಲ್ಲಿ ದಶಲಕ್ಷ ಬಾವಿ ಯೋಜನೆಯಡಿಯಲ್ಲಿ ನೀಡಿದ ಫಲಾನುಭವಿಗಳ ಸಂಖ್ಯೆ ಈ ಕೆಳಗಿನಂತಿದೆ.

ವರ್ಷ	ಫಲಾನುಭವಿಗಳ ಸಂಖ್ಯೆ
1) 1994-95	95
2) 1995-96	48
3) 1996-97	94

ವಿಧಾನಸಭೆ ಕ್ಷೇತ್ರವಾರು ಫಲಾನುಭವಿಗಳ ಹೆಸರುಗಳು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ತಿಕೋಟಾ ಮಕ ಕ್ಷೇತ್ರ : 1994-95

ಕ್ರಮ ಸಂಖ್ಯೆ	ಫಲಾನುಭವಿಯ ಹೆಸರು	ಗ್ರಾಮ
1)	ರಾಮು ಕೇಸು ಲಮಾಣಿ	ಅತಾಲಟ್ಟಿ
2)	ಉಮರಸಿಂಗ ಪರಶುರಾಮ ಲಮಾಣಿ	ಅತಾಲಟ್ಟಿ
3)	ನಾಮದೇವ ದಾಮಲಾ ಲಮಾಣಿ	ಶಿರನಾಳ
4)	ದೇವುಗನು ಲಮಾಣಿ	ನಾಗಠಾಣ
5)	ಶೀತು ಶಂಕರು ಲಮಾಣಿ	ಜಾಲಗೇರಿ
6)	ಮಲ್ಲಪ್ಪ ಗೋವಿಂದಪ್ಪ ಮಾದರ	ತಿಕೋಟಾ
7)	ಚಂದ್ರಾಮ ಹಣಮಂತ ಭಜಂತ್ರಿ	ಲೋಹಗಾಂವ್
8)	ಹುಸೇನಪ್ಪ ತಿಪ್ಪಣ್ಣ ಬಂಡಿವಡ್ಡರ	ಲೋಹಗಾಂವ್
9)	ವಿಠಲ್ ಯಮನಪ್ಪ ಜೋಲಿ	ಕನಮಡಿ
10)	ದಶರಥ ಗಣಪತಿ ಜಾಮೀರ	ಅಲೆಯಾಬಾದ್
11)	ವಾಲು ಹರಸಿಂಗ ಲಮಾಣಿ	ಅಲೆಯಾಬಾದ್
12)	ಚಂದು ಮನ್ನು ಲಮಾಣಿ	ಅರಕೇರಿ
13)	ಉಮಲಾ ಲಚಮ ಲಮಾಣಿ	ಅರಕೇರಿ
14)	ವಾಲು ಜುಮಾಜಿ ಲಮಾಣಿ	ಅರಕೇರಿ
15)	ಧನಸಿಂಗ ಲಾಲು ಲಮಾಣಿ	ಆಹೇರಿ
16)	ಶೇವು ಲಚ್ಚು ಲಮಾಣಿ	ಆಹೇರಿ
17)	ಸೋಮಸಿಂಗ ಬೀರು ರಾಠೋಡ್	ಬೊಮ್ಮನಹಳ್ಳಿ
18)	ವಾಸುದೇವ ಗಣ್ಣು ಲಮಾಣಿ	ಬೊಮ್ಮನಹಳ್ಳಿ
19)	ವಿಠ್ಠಲ ದುರ್ಗಪ್ಪ ಜೆಂಡೆ	ತಿಕೋಟಾ
20)	ಮೋತಿಲಾಲ ಮನ್ನು ಲಮಾಣಿ	ಭೂತನಾಳ
21)	ಲಾಲಸಿಂಗ ತುಕಾರಾಮ ಲಮಾಣಿ	ಭೂತನಾಳ
22)	ಪ್ರೇಮಸಿಂಗ ಠಾಕರು ಲಮಾಣಿ	ತಿಡಗುಂದಿ
23)	ಸಿದ್ದಪ್ಪ ಮಲಕಪ್ಪ ಹರಿಜನ	ತಿಡಗುಂದಿ
24)	ಧಾಮಲು ತುಳಜಾ ಲಮಾಣಿ	ತಿಡಗುಂದಿ

25)	ಬಾಳು ಉಮಲಾ ಲಮಾಣಿ	ತಿಡಗುಂದಿ
26)	ದುರಗಪ್ಪ ಪರಮಣ್ಣ ಹೊಸಮನಿ	ಜಂಬಗಿ
27)	ಚನ್ನಪ್ಪ ಪರಮಣ್ಣ ಹಿಟ್ನಳ್ಳಿ	ಜಂಬಗಿ
28)	ನೀಲವ್ವ ಹಣಮಂತ ಹಿಟ್ನಳ್ಳಿ	ಜಂಬಿಗಿ
29)	ಧನಸಿಂಗ ಹುಜರು ಲಮಾಣಿ	ಹುಬನೂರ
30)	ಸೀಮು ಡಾಕು ಲಮಾಣಿ	ಹಂಚನಾಳ
31)	ಶಂಕರ ಮನ್ನು ಲಮಾಣಿ	ಹಂಚನಾಳ
32)	ಮಾದು ಚಂದು ರಾಠೋಡ್	ದೊಮನಾಳ
33)	ವಾಸುದೇವ ಹಾಮು ಲಮಾಣಿ	ದೊಮನಾಳ
34)	ಗಂಗು ವೆನು ಲಮಾಣಿ	ಮುಖಣಾಪೂರ
35)	ಶೇವು ಬೋಜು ಲಮಾಣಿ	ಮುಖಣಾಪೂರ
36)	ನಾರಾಯಣ ಹೀರು ಲಮಾಣಿ	ಮಖಣಾಪೂರ
37)	ಹುನ್ನು ಲಾಲು ಲಮಾಣಿ	ಮಖಣಾಪೂರ
38)	ವಾಜು ಟಾಕರು ಲಮಾಣಿ	"
39)	ತಾತು ರತ್ನು ಲಮಾಣಿ	"
40)	ದೇಸು ಬಾವಸು ಲಮಾಣಿ	"
41)	ಉಮಲಾ ನೂರು ಲಮಾಣಿ	"
42)	ಪೇಮು ಖೀರು ಲಮಾಣಿ	"
43)	ಸೋಮಲಾ ಮಾನಸಿಂಗ ಲಮಾಣಿ	"
44)	ಸೋಮಲಾ ಮಾನಸಿಂಗ ಲಮಾಣಿ	"
45)	ಶೇವು ಗೋಪು ಲಮಾಣಿ	"
46)	ಹರಿಶ್ಚಂದ್ರ ಲಾಲಸಿಂಗ್ ಲಮಾಣಿ	ಕನ್ನೂರ
47)	ಸೋಮಣ್ಣ ಶಂಕ್ರಪ್ಪ ಹರಿಜನ	"
48)	ಸಿದ್ರಾಮ ಭೀಮಣ್ಣ ಕೊರವೇರ	"
49)	ಸುಂದರಾಬಾಯಿ ಯಲ್ಲಪ್ಪ ಹಾದಿಮನಿ	ಅಹೇರಿ
50)	ದೇಸು ಗಣು ಲಮಾಣಿ	ಮುಖಣಾಪೂರ
51)	ರತ್ನಾಬಾಯಿ ತುಕಾರಾಮ ಕಾಂಬಳೆ	ತಿಡಿಗುಂದಿ
52)	ರಾಮಪ್ಪ ಧೂಳಪ್ಪ ಗುರುಸಿದ್ಧನವರ	ಕನಮಡಿ
53)	ವಿಠ್ಠಲ ಹರಸಿಂಗ ಚವ್ಹಾಣ	ಅಲಿಯಾಬಾದ್

54)	ಸೋನುಬಾಯಿ ಪಾಂಡು ಲಮಾಣಿ	ಬರಟಗಿ
55)	ವಾಸುದೇವ ಗಣಿ ಲಮಾಣಿ	ಬೋಮ್ಮನಹಳ್ಳಿ
56)	ಸಿದ್ರಾಮ ರಾಚಪ್ಪ ಶೇರಖಾನೆ	ಕನ್ನೂರ
57)	ದುರಗಪ್ಪ ಭೀಮಪ್ಪ ಹರಿಜನ	"
58)	ಅಮಸಿದ್ದ ಭೀಮಪ್ಪ ಹರಿಜನ	"
59)	ಲಕ್ಷ್ಮಣ ಪರಸಪ್ಪ ಕೊರವೇರ	"
60)	ಬಾಸು ರತ್ನು ರಾಠೋಡ	"
61)	ನಾಥು ಜಗನು ರಾಠೋಡ	"
62)	ಶಂಕರ ಡಾಕು ಪವಾರ	"
63)	ವೆಂಕು ಅ ಲಮಾಣಿ	"
64)	ಸೋಮಣ್ಣ ಭೀಮಣ್ಣ ವಡ್ಡರ	"
65)	ಸಾದು ಸೋಮಣ್ಣ ವಡ್ಡರ	"
66)	ಹಣವಂತ ಕೃಷ್ಣ ವಡ್ಡರ	"
67)	ಈಶ್ವರ ಮಿಟ್ಟು ಜಾಧವ	"
68)	ತಿಮ್ಮಣ್ಣ ಯಲ್ಲಪ್ಪ ಭಜಂತ್ರಿ	"
69)	ಪರಶುರಾಮ ಅಮೃತ ಲಮಾಣಿ	"
70)	ರಾಮು ರೂಪು ಲಮಾಣಿ	"
71)	ಕಲ್ಲಪ್ಪ ಶೀತರಾಮ ಚಲವಾದಿ	"
72)	ಶರಣಪ್ಪ ಮರೆಪ್ಪ ಹೊಲೇರ	"
73)	ಶಿವುಬಾಯಿ ಲಕ್ಷ್ಮಣ ಮಾದರ	"
74)	ಟೋಪು ಭೀಮು ರಾಠೋಡ	ಮಖಣಾಪೂರ
75)	ಕಮಲಾಬಾಯಿ ಪೀಮು ರಾಠೋಡ	"
76)	ಛಾಜುದರು ರಾಠೋಡ	"
77)	ದ್ವಾರಕಾಬಾಯಿ ಭೀಮಣ್ಣ ಮಾಯವಂಶಿ	ತಿಡಗುಂದಿ
78)	ಭಾಸ್ಕರ್ ಯಲ್ಲಪ್ಪ ಹೊಲೇರ	ಶಿರನಾಳ
79)	ಅಪ್ಪಾಸಾಬ ಬಾಸು ಲಮಾಣಿ	ಕಳ್ಳಕವಟಗಿ
80)	ನೂರು ಹಾಮಾ ಲಮಾಣಿ	ಮಖಣಾಪೂರ
81)	ಮಾಳಪ್ಪ ಭೀಮಪ್ಪ ಮಾದರ	ಶಿರನಾಳ
82)	ಭೀಮಗೊಂಡ ರಾಲಸಿಂಗ ಲಮಾಣಿ	ಹುಬನೂರ

83)	ಗೋವಿಂದ ಸೋಮಣ್ಣ ಮಾದರ	ಕನಮ್ನಾರ
84)	ವಾಸು ಟೋಪು ರಾಠೋಡ	"
85)	ಚಂದು ಶಂಕರ ರಾಠೋಡ	ಮುಖಿಣಾಪೂರ
86)	ಖೀಮು ಉಮಲು ಲಮಾಣಿ	ಕನ್ನೂರ

ವಿಜಾಪೂರ ಮತಕ್ಷೇತ್ರ : 1994-95

1)	ಸಾಬು ಯಲ್ಲಪ್ಪ ಹರಿಜನ	ಕುಮಟಗಿ
2)	ಮಿಲಿಂದ ಲಾಯಪ್ಪ ಜಿಂಚಲಕರ	ಬುರಣಾಪೂರ
3)	ಖೀರು ಕಾಸು ಲಮಾಣಿ	ಕಗ್ಗೋಡ
4)	ನಾರಾಯಣ ಧನಜು ಲಮಾಣಿ	ಹಡಗಲಿ
5)	ರೇಖು ತೋಳು ಚವಾಣ	ಹಡಗಲಿ
6)	ಪ್ರೇಮಸಿಂಗ ಲಾಲಸಿಂಗ ಲಮಾಣಿ	ಮದಭಾವಿ
7)	ಶ್ರೀಮಂತ ಲಾಲಸಿಂಗ ಲಮಾಣಿ	"
8)	ಅಶೋಕ ಲಾಲಸಿಂಗ ಲಮಾಣಿ	"
9)	ವಿಜಯಸಿಂಗ ಲಾಲಸಿಂಗ ಲಮಾಣಿ	"

ಬಸವನಬಾಗೇವಾಡಿ ಮತಕ್ಷೇತ್ರ 1994-95

ಯಾವುವು ಇರುವುದಿಲ್ಲ.

ತಿಕೋಟಾ ಮತ ಕ್ಷೇತ್ರ 1995-96

1)	ಫುಲಸಿಂಗ ಹುಮಲಾ ರಾಠೋಡ	ಕಳ್ಳಕವಟಗಿ
2)	ಸಿದ್ದಪ್ಪ ರಾಮಪ್ಪಾ ಮಾದರ	ನಾಗಠಾಣ
3)	ದೊಂಡು ಭೀಮು ಲಮಾಣಿ	ಕನ್ನೂರ
4)	ನಿಂಗಪ್ಪ ಈರಪ್ಪ ಬಗಲಿ	ಶಿರನಾಳ
5)	ಸಿದ್ದಪ್ಪ ಬಸಪ್ಪಾ ವಾಲಿಕಾರ	ಅಲಿಯಾಬಾದ
6)	ಶ್ರೀಮತಿ ಬಸವ್ವಾ ಹುಸನಪ್ಪ ಲಿಂಗದಳ್ಳಿ	ಸಾರವಾರ
7)	ರಾಮು ಡಾಕು ರಾಠಫಡ	ಮಿಂಚನಾಳ
8)	ರಾಮಗೊಂಡ ಅಮಗೊಂಡ ಪೂಜೇರಿ	ಮದಸನಾಳ
9)	ನೂರಅಹ್ಮದ್ ಮೊದಿನಸಾಬ ತಿಗಣಿಬಿದರಿ	ಹೊನವಾಡ
10)	ಬಾಳು ಹರಸಿಂಗ ಚವಾಣ	ಅಲಿಯಾಬಾದ
11)	ವಿಲಾಸ ಹಾವರು ಲಮಾಣಿ	ಜಾಲಗೇರಿ

12)	ಈಶ್ವರಪ್ಪ ದುಂದಪ್ಪಾ ಸಾವಳಗಿ	ಸಾರವಾಡ
13)	ಬಾಳವ್ವ ಮಲ್ಲಪ್ಪಾ ನಾವಿ	ಸಂಗಾಪೂರ (ಅ)
14)	ಸುಭಾಷ ಚಂದ್ರ ಭೀಮಣ್ಣ ಬಿಸನಾಳ	ಹೊನ್ನಳ್ಳಿ
15)	ಕಾಶೀರಾಮ ರಾಮಚಂದ್ರ ಹತ್ತಳ್ಳಿ	ಜಂಬಗಿ (ಅ)
16)	ಸಂಗಪ್ಪ ಹಿರಿದಣ್ಣಾ ಮನ್ನಾಗೋಳ	ಗುಣಕಿ
17)	ಖಿಜೇನು ರಾಮಸಿಂಗ ಲಮಾಣಿ	ಮಿಂಚನಾಳ
18)	ಮಹಾದೇವ ಮಲ್ಲಪ್ಪಾ ಜೊಲೇರ	ಶಿರನಾಳ
19)	ಗುರಸಿದ್ದಪ್ಪಾ ಸಾಬು ಚಿಂಗ್ಯಾಗೋಳ	ಬಿಜ್ಜರಗಿ
20)	ಗುಲಾಬಿ ಚೋಡಲು ಲಮಾಣಿ	ಇಟ್ಟಂಗಿಹಾಳ
21)	ಶ್ಯಾಮು ಗಣು ಲಮಾಣಿ	ಅಲಿಯಾಬಾದ
22)	ನಾನುರಾಮು ಲಮಾಣಿ	ಬರಟಗಿ
23)	ಖೇಮು ಪಾಂಡು ಲಮಾಣಿ	"
24)	ನೂರಹೇಮಲು ಲಮಾಣಿ	ಮುಖಣಾಪೂರ
25)	ಹಣಮಂತ ಗುರಲಿಂಗಪ್ಪ ಬಿರಾದಾರ	ಬಿಜ್ಜರಗಿ
26)	ಗುರಲಿಂಗಪ್ಪ ಸಿದ್ದಪ್ಪ ಬಿರಾದಾರ	"
27)	ರೇವಣಸಿದ್ದಪ್ಪ ಮಲ್ಲವ್ವ ಕಸ್ತೂರಿ	ಅಲಿಯಾಬಾದ
28)	ಅಶೋಕ ಶಿವಪ್ಪ ಸಾವುಕಾರ	ಜಂಬಗಿ (ಅ)
29)	ರತ್ನು ರೂಪಲಾ ಲಮಾಣಿ	ಬರಟಗಿ
30)	ಸೋಮುರಾಮ ಲಮಾಣಿ	ಕನ್ನೂರ
31)	ಗಂಗಾರಾಮ ಲಾಲು ಲಮಾಣಿ	ಕನ್ನೂರ
32)	ಬೋಜು ತೇಜು ಲಮಾಣಿ	ಅಲಿಯಾಬಾದ್
33)	ದುಂಡಪ್ಪಾ ಯಮನಪ್ಪಾ ನಾಟೀಕಾರ	ಅಂಕಲಗಿ
34)	ಚಂದು ಉಮಲಾ ಲಮಾಣಿ	ಭೂತನಾಳ
35)	ಖೇಮು ಹರಿಸಿಂಗ ಲಮಾಣಿ	"
36)	ಕೃಷ್ಣ ಕೇಸು ಲಮಾಣಿ	ಅರಕೇರಿ ಎಲಟಿ
37)	ದುಸಂತಪ್ಪಾ ಶಿವಪ್ಪ ನಾಟೀಕಾರ	ಅಂಕಲಗಿ
38)	ಪುರುಷೋತ್ತಮ ನಾರಾಯಣ ಪುತೇದಾರ	ಅರಕೇರಿ
39)	ಬಿಳವಣಗಿ ತಮ್ಮಣ್ಣಾ ವಡೆಯರ	ಮುಖಣಾಪೂರ
40)	ಚಿದಾನಂದ ಭೀಮರಾಯ ಪೋಳ	ಭೂತನಾಳ

ವಿಜಾಪುರ ಮತಕ್ಷೇತ್ರ 1995-96

1)	ಸೀತಾರಾಮ ಹೇಮಲು ಲಮಾಣಿ	ಕಗ್ಗೋಡ
2)	ಬಸಪ್ಪ ಶಿವಪ್ಪ ಹಾದಿಮನಿ	ಹಡಗಲಿ
3)	ಹನುಮಂತ ಸಂಗಪ್ಪ ಪಟ್ಟಣ	ಕವಲಗಿ
4)	ವಿಠಲ ಮಲಗೊಂಡ ತಮಗೊಂಡ	ಹಿಟ್ನಳ್ಳಿ
5)	ಶಿವಕುಮಾರ ಮಲ್ಲಪ್ಪ ಕುಮಟಗಿ	ಕುಮಟಗಿ ಎಲ್‌ಟಿ
6)	ನೂರು ಕೇಸು ಪವಾರ	ಕುಮಟಗಿ
7)	ಮಲ್ಲಪ್ಪ ಪರಪ್ಪ ಹತ್ತಿರಹಾಳ	ಹೆಗಡಿಹಾಳ
8)	ಶಾರದಾಬಾಯಿ ತುಳಜಾರಾಮ ಕದಂ	ದ್ಯಾಬೇರಿ

ತಿಕೋಟಾ ಮತ ಕ್ಷೇತ್ರ 1996-97

1)	ಸೀತು ಭಾವಲು ರಾಠೋಡ	ಡೊಮನಾಳ
2)	ಹೀರು ಲಚ್ಚು ಲಮಾಣಿ	"
3)	ಕಸ್ತೂರಬಾಯಿ ಅಪ್ಪಣ್ಣ ಬಿರಾದಾರ	ಬರಟಗಿ
4)	ಲಚ್ಚು ಶ್ಯಾಮು ಲಮಾಣಿ	ಕನ್ನೂರ
5)	ತಾವರು ಮನ್ನು ಲಮಾಣಿ	ಜಾಲಗೇರಿ
6)	ಶಾಂತಾಬಾಯಿ ಓಗೆಪ್ಪ ಬಿರಾದಾರ	ಬಿಜ್ಜರಗಿ
7)	ಸೀನಾರಾಮ ಬಯರಾಮ ಲಮಾಣಿ	ಟಕ್ಕಳಕಿ
8)	ಸಿದ್ದು ಚಿತ್ತು ಲಮಾಣಿ	ಗೋಣಸಗಿ
9)	ಮಾರುತಿ ಯಮನಪ್ಪ ಜಾಧವ	ತೊರವಿ
10)	ಗೋವಿಂದ ಪುನ್ನು ಲಮಾಣಿ	ಜಾಲಗೇರಿ
11)	ರಂಗು ಲೋಕು ಲಮಾಣಿ	ಭೂತನಾಳ
12)	ಸಾಹೇಬಗೌಡ ಶಿವನಗೌಡ ಪಾಟೀಲ	ಡೊಮನಾಳ
13)	ಗನಸಿಂಗ ಲಕ್ಕು ಲಮಾಣಿ	ಬರಟಗಿ
14)	ಧನಸಿಂಗ ಲಕ್ಕು ಲಮಾಣಿ	ಅಲಿಯಾಬಾದ ಎಲ್‌ಟಿ 2
15)	ಮಹ್ಮದಘೀರ ಕಾಸೀಮಸಾಹೆ ಪಾಗವಾನ	ಕನ್ನೂರ
16)	ದಿಲೀಪ ಲಾಯಪ್ಪ ಹೊಲೇರ	ಹುಬನೂರ
17)	ಗಣು ರೂಪಸಿಂಗ ರಾಠೋಡ	ಬರಟಗಿ

18)	ದುಂಡಪ್ಪ ಗುರುಲಿಂಗಪ್ಪ ಗೊರನಾಳ	ನಾಗಠಾಣ
19)	ತಾರಾಸಿಂಗ ಗಣು ಲಮಾಣಿ	ಅರಕೇರಿ ಎಲ್ ಟಿ 3
20)	ಜೇಮ್ಲು ಉಮಲು ಲಮಾಣಿ	ಕನ್ನೂರ ಎಲ್‌ಟಿ
21)	ದಾದು ಶಂಕರ ಕಾಟಕರ	ಬರಟಗಿ
22)	ಪತ್ತು ರತ್ನು ರಾಠೋಡ	ದೊಮನಾಳ
23)	ಲಚ್ಚು ಕೃಷ್ಣ ಲಮಾಣಿ	ಭೂತನಾಳ
24)	ಮಾನಸಿಂಗ ಚಂದು ಲಮಾಣಿ	ಬರಟಗಿ ಎಲ್ ಟಿ 3
25)	ಪತ್ತು ದಾಮಲು ಲಮಾಣಿ	ಮಖಣಾಪುರ ಎಲ್ ಟಿ 1
26)	ಈಶ್ವರ ಹೇಮಲು ಲಮಾಣಿ	ಹುಬನೂರ ಎಲ್ ಟಿ 1
27)	ಅಶೋಕ ಸೋಮಲಾ ಲಮಾಣಿ	ಜಾಲಗೇರಿ
28)	ಉಮೇಶ ಚಂದ್ರಶೇಖರ ಲಮಾಣಿ	ಕನ್ನೂರ
29)	ಬಾಬಿರಾಯ ಬಾಲಪ್ಪ ಮೂಡಲಗಿ	ಯಕ್ಕುಂಡಿ
30)	ಅಪ್ಪಾಸಾಹೇಬ ಸತ್ಯಪ್ಪ ಹೊಲೇರ	ಮರಸನಾಳ
31)	ಮುತ್ತಪ್ಪ ಬದಪ್ಪ ಹರಿಜನ	ಭೂತನಾಳ
32)	ಭಾಗವ್ವ ಕುಶೇಬಾ ಅರೇದ	ಅರ್ಜುಣಗಿ
33)	ಧರ್ಮಣ್ಣ ಈರಪ್ಪ ಹೊಲೇರ	ಮರಸನಾಳ
34)	ಸಿದರಾಯ ಮಾರುತಿ ಸಮಗಾರ	ಸಿದ್ದಾಪೂರ (ಕೆ) (ತಿಕೋಟಾ)
35)	ಭೀಮು ಸೋಮಲು ಲಮಾಣಿ	ಅಹೇರಿ ಎಲ್ ಟಿ 1
36)	ದೇಸು ಸುಬ್ಬು ಲಮಾಣಿ	ಮುಖಣಾಪೂರ ಎಲ್ ಟಿ 1
37)	ಶರಣಪ್ಪ ಭೀಮಪ್ಪ ಸಾತಿಹಾಳ	ಅಹೇರಿ
38)	ಹುನ್ನು ಬಂಗು ಲಮಾಣಿ	ಬರಟಗಿ
39)	ರಾಮಪ್ಪ ಶೆಟ್ಟಿಪ್ಪ ತಳವಾರ	ಬಬಲೇಶ್ವರ
40)	ರಮಣಬಾಯಿ ಸೋಮಲು ಲಮಾಣಿ	ಬರಟಗಿ ಎಲ್ ಟಿ 3
41)	ಬಸಪ್ಪ ಧರೆಪ್ಪ ಪೂಜಾರಿ	ತಿಕೋಟಾ
42)	ಶಂಕರಪ್ಪ ಹರಿಜನ	ಕಳ್ಳಕವಟಗಿ
43)	ಗುರುಪಾದಪ್ಪ ಶಿವಣ್ಣ ಸಜ್ಜನ	ಅರಕೇರಿ
44)	ಲಚ್ಚು ಹರಿಸಿಂಗ ಲಮಾಣಿ	ಭೂತನಾಳ
45)	ರಾಜು ರಾಮಸಿಂಗ ಲಮಾಣಿ	ಕನ್ನೂರ

46)	ಅಲ್ಲಪ್ಪ ಮಳಗೊಂಡ ಬಿರಾದಾರ	ತಿಗಣಿಬಿದರಿ
47)	ಭಗವಾನ ಯಲ್ಲಪ್ಪ ಶೇಗಜಾನಿ	ಕನ್ನೂರ
48)	ಅರ್ಜುನ ಹೀರು ಲಮಾಣಿ	ಅರಕೇರಿ ಎಲ್‌ಟಿ 3
49)	ಮುರ್ತುಜ ಇಮಾಮಹುಸೇನ ಮೋಮಿನ	ಹೊನವಾಡ
50)	ರಾಮು ರಾಮಸಿಂಗ ಲಮಾಣಿ	ಶಿರನಾಳ
51)	ಮುತ್ತಪ್ಪ ದೇವಪ್ಪ ರಾಮೋಜಿ	ಮಹದೇವಕಟ್ಟಿ
52)	ರಾಮಜಿ ಮಾನಸಿಂಗ ಲಮಾಣಿ	ಟಕ್ಕಳಕಿ
53)	ಹಣಮಂತ ಸಿದ್ರಾಮು ತಳವಾರ	ಕನಮಡಿ
54)	ಹೇಮಲು ಸಖಾರಾಮ ಲಮಾಣಿ	ಟಕ್ಕಳಕಿ
55)	ರಮೇಶ ಪುಲಸಿಂಗ ಲಮಾಣಿ	ಕನ್ನೂರ ಎಲ್‌ಟಿ
56)	ಬಾಳಪ್ಪ ಬಸಪ್ಪ ಸೊನ್ನದ	ಅತಾಲಟ್ಟಿ
57)	ಅಂಬು ಚಂದು ರಾಠೋಡ	ಕನ್ನೂರ ಎಲ್‌ಟಿ
58)	ರತ್ನಾಬಾಯಿ ಶಾಂತಪ್ಪ ನಾಗನೂರ	ಬಬಲೇಶ್ವರ
59)	ಖೀರು ಶಂಕರ ಲಮಾಣಿ	ಅಹೇರಿ ಎಲ್‌ಟಿ
60)	ಅಣ್ಣಪ್ಪ ಹೇಮಲು ಲಮಾಣಿ	ಸಿದ್ದಾಪೂರ(ಕೆ)
61)	ಸಿದಾರಾಯ ಭೈರಪ್ಪ ಮಡಸನಾಳ	ಬಿಜ್ಜರಗಿ
62)	ಭಾವಸಿಂಗ ದರ್ಮು ಲಮಾಣಿ	ಬರಟಗಿ ಎಲ್‌ಟಿ
63)	ಮೇತಾಬಾಯಿ ಶಂಕರ ಲಮಾಣಿ	ಮಖಣಾಪೂರ ಎಲ್‌ಟಿ 1
64)	ಭೀಮಣ್ಣ ವಿಠ್ಠಲ ಪಾಂಡ್ರೆ	ಕನಮಡಿ
65)	ಹುಸೇನಿ ಬಲವಂತ ಹರಿಜನ	ಮಿಂಚನಾಳ
66)	ಚಂದು ಶಂಕರ ಲಮಾಣಿ	ಬರಟಗಿ ಎಲ್‌ಟಿ 4
67)	ಶಂಕರ ರಾಮು ಲಮಾಣಿ	ಜಾಲಗೇರಿ ಎಲ್‌ಟಿ 4
68)	ಅಮಸಿದ್ದ ಕುಸಪ್ಪ ಹರಿಜನ	ಜಾಲಗೇರಿ
69)	ಶಕುಂತಲಾ ಸಿದ್ದನಗೌಡ	ಕನ್ನೂರ
70)	ಶಂಕರ ಬದ್ದು ಲಮಾಣಿ	ಬರಟಗಿ ಎಲ್‌ಟಿ 1
71)	ಸೀನಾರಾಮ ಹಾವರು ಲಮಾಣಿ	ಜಾಲಗೇರಿ ಎಲ್‌ಟಿ 1
72)	ಲಕ್ಷಣ ಚಾಪಲು ಲಮಾಣಿ	ಟಕ್ಕಳಕಿ
73)	ಧರ್ಮ ಭರಮು ಲಮಾಣಿ	ಟಕ್ಕಳಕಿ
74)	ಪರಸಪ್ಪ ಬದ್ದಪ್ಪ ಹಳ್ಳಿ	ನಾಗಠಾಣ
75)	ಶಾಮು ಭೀಮು ಲಮಾಣಿ	ಹುಬನೂರ

ವಿಜಾಪೂರ ಮತ ಕ್ಷೇತ್ರ 1996-97

1)	ಶಂಕರ ಬಸಪ್ಪ ಮಾದರ	ಕಗ್ಗೋಡ
2)	ಭೀಮಶಿ ದುಂಡಪ್ಪ ಬಳಗಾನೂರ	ಐನಾಪೂರ
3)	ಮಲ್ಲಪ್ಪ ಸೀತಪ್ಪ ಇಂಡಿ	ಹಡಗಲಿ
4)	ಧರೆಪ್ಪ ಶಿವಪ್ಪ ಸಾಹೇಬಗೌಡ	ಮುಧಬಾವಿ
5)	ಯಮನಪ್ಪ ತಾ: ಭೀಮನ್ನ ಹರಿಜನ	ಕುಮಟಗಿ
6)	ಸುರೇಶ ಪರಸಪ್ಪ ಮನಗೊಳಿ	ಮದಬಾವಿ
7)	ಮಲ್ಲಪ್ಪ ತುಕಾರಾಮ ನಾಗಪ್ಪಗೋಳ	ಹಡಗಲಿ
8)	ಪದಮು ಮಾಲು ರಾಠೋಡ	ಕುಮಟಗಿ ಎಲ್ ಟಿ
9)	ಗಣಪತಿ ನರಸಿಂಹ ಲಮಾಣಿ	ಹಡಗಲಿ ಎಲ್ ಟಿ
10)	ಸುನೀಲಕುಮಾರ ವಿನೋದ ಸಾವಿ	ದ್ಯಾಬೇರಿ
11)	ಲೋಕು ಲಚ್ಚು ಲಮಾಣ	ಕುಮಟಗಿ ಎಲ್ ಟಿ
12)	ಲಾಲಸಿಂಗ ಬದ್ರು ಲಮಾಣಿ	ಐನಾಪೂರ ಎಲ್ ಟಿ
13)	ಮಾಂತಪ್ಪ ಭೀಮಪ್ಪ ಕುಂಬಾರ	ಕುಮಟಗಿ
14)	ಪಾಂಡುರಂಗ ನಾರಾಯಣ ಭಾರತೆ	ದ್ಯಾಬೇರಿ

ಬಸವನಬಾಗೇವಾಡಿ ಮತ ಕ್ಷೇತ್ರ (1996-97)

1)	ಸಿದ್ದಪ್ಪ ಯಮನಪ್ಪ ಹರಿಜನ	ಕಾತ್ರಾಳ
2)	ಸಿದ್ರಾಮ ಹಣಮಂತ ಮಾರ್ದ	ಹೊನಗನಹಳ್ಳಿ
3)	ಭೀಮಪ್ಪ ಯಮನಪ್ಪ ಹಿರೇಕುರಬ	ಕಾಖಂಡಕಿ
4)	ರಾಜೇಸಾಬ ಹುಸೇನಸಾಬ ಪಾಟೀಲ	ದೂಡಿಹಾಳ
5)	ಭೀಮಪ್ಪ ತುಕ್ಕಪ್ಪ ಕೊಕಟನೂರ	ಕಾತ್ರಾಳ

ಬೆಂಗಳೂರು ಶೇಷಾದ್ರಿಪುರಂ ಶಿಕ್ಷಣ ದತ್ತಿಯವರು ಪರಿಶಿಷ್ಟ ಜನಾಂಗದವರಿಂದ ಡೊನೇಷನ್ ಪಡೆದು ಸೀಟುಗಳನ್ನು ನೀಡುತ್ತಿರುವುದು

389 (763) ಶ್ರೀ ಯು. ಬಿ. ಬಣಕಾರ (ಹಿರೇಕೆರೂರು) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಬೆಂಗಳೂರಿನ ಶೇಷಾದ್ರಿಪುರಂ ಶಿಕ್ಷಣ ದತ್ತಿಯವರು ನಡೆಸುತ್ತಿರುವ ಮಾಧ್ಯಮಿಕ ಶಾಲೆ, ಬಾಲಕಿಯರ ಪ್ರೌಢಶಾಲೆ ಮತ್ತು ಬಾಲಕರ ಪ್ರೌಢಶಾಲೆಯವರು ಸರ್ಕಾರದವರಿಂದ ಶೇಕಡ 100 ರಷ್ಟು ಅನುದಾನ ಪಡೆಯುತ್ತಿದ್ದು, ಪರಿಶಿಷ್ಟ ಜಾತಿ ಜನಾಂಗದವರಿಗೆ ಡೊನೇಷನ್ ಪಡೆದು ಸೀಟುಗಳನ್ನು ನೀಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಅನುದಾನ ಪಡೆಯುತ್ತಿರುವ ಶಾಲೆಗಳು ಶೇಕಡ 18 ರಷ್ಟು ಸೀಟುಗಳನ್ನು ಪರಿಶಿಷ್ಟ ಜಾತಿ ಜನಾಂಗದವರಿಗೆ ಉಚಿತವಾಗಿ ನೀಡಬೇಕಾಗಿದ್ದರೂ ಅದನ್ನು ಉಚಿತವಾಗಿ ನೀಡದೆ ವಂತಿಗೆ ಪಡೆಯುವ ಮೂಲಕ ಸೀಟುಗಳನ್ನು ನೀಡುತ್ತಿರುವುದರಿಂದ ಕಾನೂನು ಉಲ್ಲಂಘನೆ ಮಾಡಿದಂತೆ ಆಗುವುದಿಲ್ಲವೆ?

3) ಹಾಗಿದ್ದಲ್ಲಿ 1998-99ನೇ ಸಾಲಿನಿಂದ ಈ ಜನಾಂಗದವರಿಗೆ ಡೊನೇಷನ್ ಇಲ್ಲದೆ ಶೇಕಡ 18 ರಷ್ಟು ಉಚಿತ ಸೀಟುಗಳನ್ನು ನೀಡುವುದಕ್ಕೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ: ಹೆಚ್. ಜಿ. ಗೋವಿಂದೇಗೌಡ : (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಬಂದಿಲ್ಲ

2) ಅನುದಾನ ಪಡೆಯುತ್ತಿರುವ ಶಾಲೆಗಳು ಶೇ. 18 ರಷ್ಟು ಸೀಟುಗಳನ್ನು ಪರಿಶಿಷ್ಟ ಜಾತಿ : ಜನಾಂಗದವರಿಗೆ ಉಚಿತವಾಗಿ ನೀಡಬೇಕಾಗುತ್ತದೆ. ಆದರೆ ಶೇಷಾದ್ರಿ ಪುರಂ ಶಿಕ್ಷಣ ಸಂಸ್ಥೆಯ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಶಾಲೆಗಳಲ್ಲಿ ಯಾವುದೇ ವಿದ್ಯಾರ್ಥಿಗಳಿಂದಾಗಲೀ ಸರ್ಕಾರದಿಂದ ನಿಗಧಿಪಡಿಸಿದ ಶುಲ್ಕ ಹೊರತುಪಡಿಸಿ ಬೇರಾವ ವಿಧವಾದ ಡೊನೇಷನ್ ವಸೂಲಿ ಮಾಡಿರುವ ಬಗ್ಗೆ ಪರಿಶೀಲನಾ ಸಂದರ್ಭದಲ್ಲಿ ಕಂಡು ಬಂದಿಲ್ಲ.

3) ಈ ಬಗ್ಗೆ ಎಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೂ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗುವುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಶಾಲಾ ಕಟ್ಟಡಗಳ ನಿರ್ಮಾಣ

390 (690) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಸರ್ಕಾರವು ನಿರ್ಮಿಸಲು ಉದ್ದೇಶಿಸಿರುವ ಶಾಲಾ ಕಟ್ಟಡಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

2) ಇದಕ್ಕೆ ತಗಲುವ ಒಟ್ಟು ಅಂದಾಜು ವೆಚ್ಚವೆಷ್ಟು ಈಗಾಗಲೇ ಈ ಸಂಬಂಧ ಜಿಲ್ಲಾ ಪಂಚಾಯಿತಿಗೆ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

3) ಉಳಿದ ಹಣವನ್ನು ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ: ಈ ಹಣವನ್ನು ಯಾವಾಗ ಬಿಡುಗಡೆ ಮಾಡಿ ಕಾಮಗಾರಿ ಪೂರ್ಣಗೊಳಿಸಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಒಟ್ಟು 40 ಕೊಠಡಿಗಳು.

ತಾಲ್ಲೂಕುವಾರು ವಿವರ

1)	ದೊಡ್ಡಬಳ್ಳಾಪುರ	-	5
2)	ದೇವನಹಳ್ಳಿ	-	5
3)	ರಾಮನಗರಂ	-	5
4)	ಕನಕಪುರ	-	5
5)	ಚೆನ್ನಪಟ್ಟಣ	-	5
6)	ಮಾಗಡಿ	-	5
7)	ಹೊಸಕೋಟೆ	-	5
8)	ನೆಲಮಂಗಲ	-	5

2) ಒಂದು ಕೊಠಡಿ ನಿರ್ಮಾಣಕ್ಕೆ ರೂ. 95,000.00 ಗಳೆಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ನಿಗಧಿಪಡಿಸಿಕೊಂಡಿದೆ. ರೂ. 30.00 ಲಕ್ಷಗಳು ಬಿಡುಗಡೆಯಾಗಿದೆ. ಒಂದು ಕೊಠಡಿಗೆ ರೂ. 75,000.00 ಗಳಂತೆ ಶಿಕ್ಷಣ ಇಲಾಖೆಯಿಂದ ಬಿಡುಗಡೆ ಮಾಡಲಾಗಿದೆ. ಉಳಿದ ರೂ. 20,000.00 ಗಳನ್ನು ಜಿಲ್ಲಾ ಪಂಚಾಯತ್‌ನಿಂದ ಭರಿಸಬೇಕಾಗಿದೆ.

3) ಸರ್ಕಾರವು ತನ್ನ ಪಾಲಿನ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಿದೆ. ಉಳಿದ ಹಣವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ತನ್ನ ಜಿಲ್ಲಾ ವಲಯ ಅನುದಾನದಿಂದ ಬಿಡುಗಡೆ ಮಾಡಲು ಸೂಚಿಸಲಾಗಿದೆ.

1998-99 ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿ ಕೆಲಸ ಪೂರ್ಣಗೊಳಿಸಲಾಗುವುದು.

ಮಾಗಡಿ ತಾಲ್ಲೂಕಿನ ಕುದೂರು ಸರ್ಕಾರಿ ಕಾಲೇಜಿಗೆ ಸ್ವಂತ ಕಟ್ಟಡ, ಹಾಗೂ ಉಪನ್ಯಾಸಕರ ಕೊರತೆ ನಿವಾರಿಸುವ ಬಗ್ಗೆ

391 (689) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಮಾಗಡಿ ತಾಲ್ಲೂಕು ಕುದೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಸ್ವಂತ ಕಟ್ಟಡ ಹಾಗೂ ಉಪನ್ಯಾಸಕರು ಇಲ್ಲದಿರುವುದರಿಂದ ವಿದ್ಯಾರ್ಥಿಗಳಿಗೆ ಭಾರಿ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಸದರಿ ಕಾಲೇಜಿನ ಸ್ವಂತ ಕಟ್ಟಡ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

3) ರಾಜ್ಯ ಉಚ್ಚನ್ಯಾಯಾಲಯವು ನಿರ್ದೇಶನ ನೀಡಿದ್ದರೂ ಕೂಡ ಸರ್ಕಾರ ಈ ಕಾಲೇಜಿಗೆ ಉಪನ್ಯಾಸಕರನ್ನು ನಿಯೋಜಿಸದಿರಲು ಕಾರಣವೇನು?

4) ಸದರಿ ಕಾಲೇಜಿಗೆ ಎಷ್ಟು ಉಪನ್ಯಾಸಕರ ಕೊರತೆ ಇದೆ? (ವಿಷಯವಾರು ವಿವರ ನೀಡುವುದು)

5) ಈ ಉಪನ್ಯಾಸಕರ ಕೊರತೆಯನ್ನು ಯಾವಾಗ ನಿವಾರಿಸಲಾಗುವುದು?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1) ಬಂದಿದೆ

2) ಕಾಲೇಜಿನ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನವನ್ನು ಪಡೆದಿದ್ದು, ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ಪಡೆಯುವುದಕ್ಕಾಗಿ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ. ನಕ್ಷೆ ಮತ್ತು ಅಂದಾಜು ಪಟ್ಟಿ ಬಂದ ಕೂಡಲೇ ಮುಂದಿನ ಕ್ರಮ ಕೈಗೊಳ್ಳಲಾಗುವುದು.

3) ಈ ವಿಷಯದಲ್ಲಿ ಸರ್ಕಾರಕ್ಕೆ ರಾಜ್ಯ ಉಚ್ಚ ನ್ಯಾಯಾಲಯದಿಂದ ಯಾವುದೇ ನಿರ್ದೇಶನ ಇರುವುದಿಲ್ಲ.

4) ಇಬ್ಬರು ವಾಣಿಜ್ಯ ಶಾಸ್ತ್ರ ಉಪನ್ಯಾಸಕರ ಕೊರತೆ ಇದೆ.

5) ಕಾಲೇಜುಗಳಲ್ಲಿ ಕಡಿಮೆ ಕಾರ್ಯಭಾರ ಇದ್ದ ಹೆಚ್ಚುವರಿ ಬೋಧಕರನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ನಿಯೋಜಿಸಲು ಹಾಗೂ ಕಾಲೇಜುಗಳಲ್ಲಿ ಉದ್ಭವಿಸುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ. ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಮಾಗಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ

342 (662) ಶ್ರೀ ಹೆಚ್. ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮಾಗಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ :ಘಟಕ ಹಾಗೂ ತಾಲ್ಲೂಕು ಆಸ್ಪತ್ರೆಗಳ ಸಂಖ್ಯೆ ಎಷ್ಟು? ಅವು ಯಾವುವು.

2) ಈ ಕೇಂದ್ರಗಳಲ್ಲಿನ ಸಿಬ್ಬಂದಿ ಸ್ವರೂಪವೇನು? (ಸ್ಟಾಫ್ ಪ್ಯಾಟ್ರನ್) ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? (ಪ್ರತಿ ಆಸ್ಪತ್ರೆಯ ಸಿಬ್ಬಂದಿಯ ಸ್ವರೂಪ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ನೀಡುವುದು)

3) ಈ ಹುದ್ದೆಗಳು ಖಾಲಿ ಇರುವುದರಿಂದ ಸಾರ್ವಜನಿಕರಿಗೆ ತೀವ್ರವಾದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಮಾಗಡಿ ತಾಲ್ಲೂಕಿನಲ್ಲಿ 1 ಸಮುದಾಯ ಆರೋಗ್ಯ ಕೇಂದ್ರ, 10 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 3 ಪ್ರಾಥಮಿಕ ಆರೋಗ್ಯ ಘಟಕಗಳು ಇರುತ್ತದೆ. (ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ)

2) ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

3) ಬಂದಿದೆ.

4) ವರ್ಗಾವಣೆ ಮೂಲಕ, ಹೊಸ ನೇಮಕಾತಿ ಮೂಲಕ ಸ್ನಾತಕೋತ್ತರ ವ್ಯಾಸಂಗದಿಂದ ಹಿಂದುರುಗಿ ಬಂದ ವೈದ್ಯರನ್ನು ನೇಮಿಸುವ ಮೂಲಕ ಮತ್ತು ಗುತ್ತಿಗೆ ಆಧಾರದ ವೈದ್ಯರನ್ನು ನೇಮಿಸುವ ಮೂಲಕ ಭರ್ತಿ ಮಾಡಲಾಗುವುದು.

ಮಾಗಡಿ ತಾಲ್ಲೂಕಿನಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ

1. ಸಮುದಾಯ ಆರೋಗ್ಯ ಕೇಂದ್ರ, ಮಾಗಡಿ.
2. ಪ್ರಾಥಮಿಕ ಆರೋಗ್ಯ ಕೇಂದ್ರ, ವೀರೇಗೌಡನದೊಡ್ಡಿ
3. ಪ್ರಾಥಮಿಕ ಆರೋಗ್ಯ ಕೇಂದ್ರ, ಸಂಕೇಘಟ್ಟ
4. ಪ್ರಾಥಮಿಕ ಆರೋಗ್ಯ ಕೇಂದ್ರ, ಕುದೂರು
5. ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಣಾವಾಡಿ
6. ಪ್ರಾಥಮಿಕ ಆರೋಗ್ಯ ಕೇಂದ್ರ, ಚಕ್ಕಬಾವಿ
7. ಪ್ರಾಥಮಿಕ ಆರೋಗ್ಯ ಕೇಂದ್ರ, ತಿಪ್ಪಸಂದ್ರ
8. ಪ್ರಾಥಮಿಕ ಆರೋಗ್ಯ ಕೇಂದ್ರ, ಮಣಿಗಾನಹಳ್ಳಿ
9. ಪ್ರಾಥಮಿಕ ಆರೋಗ್ಯ ಕೇಂದ್ರ, ಸುಗ್ಗನಹಳ್ಳಿ
10. ಪ್ರಾಥಮಿಕ ಆರೋಗ್ಯ ಕೇಂದ್ರ, ಸೋಲೂರು
11. ಪ್ರಾಥಮಿಕ ಆರೋಗ್ಯ ಕೇಂದ್ರ, ತಗ್ಗಿಕುಪ್ಪೆ
12. ಪ್ರಾಥಮಿಕ ಆರೋಗ್ಯ ಘಟಕ, ಗುಡೇಮಾರನಹಳ್ಳಿ
13. ಪ್ರಾಥಮಿಕ ಆರೋಗ್ಯ ಘಟಕ, ಗೆಜ್ಜೆಗಾರಗುಪ್ಪೆ
14. ಪ್ರಾಥಮಿಕ ಆರೋಗ್ಯ ಘಟಕ, ಮರೂರು.

ಮಾಗಡಿ ತಾಲ್ಲೂಕಿನಲ್ಲಿ ಖಾಲಿ ಇರುವ ಗ್ರೂಪ್ 'ಡಿ' ಹಾಗೂ ಚಾಲಕರ ಹುದ್ದೆಗಳ ವಿವರ.

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಗ್ರೂಪ್ 'ಡಿ'			ಚಾಲಕರು		
		ಮಂಜೂರಾದ			ಮಂಜೂರಾದ	ಕೆಲಸ ನಿರ್ವಹಿಸುತ್ತಿ	ಖಾಲಿ
ಕೆಲಸ ನಿರ್ವಹಿಸುತ್ತಿ ಸಂಖ್ಯೆ	ಖಾಲಿ ರುವವರ ಸಂಖ್ಯೆ	ಸಂಖ್ಯೆ	ರುವವರ ಸಂಖ್ಯೆ				
1.	ಪ್ರಾಥಮಿಕ ಆರೋಗ್ಯ ಕೇಂದ್ರ, ಮಾಗಡಿ	9	4	5	2	1	1
2.	ಪ್ರಾಥಮಿಕ ಆರೋಗ್ಯ ಕೇಂದ್ರ, ಸೋಲೂರು	3	1	2	1	-	1
3.	ಪ್ರಾಥಮಿಕ ಆರೋಗ್ಯ ಕೇಂದ್ರ, ಸಂಕಘಟ್ಟ	1	-	1	-	-	-
4.	ಪ್ರಾಥಮಿಕ ಆರೋಗ್ಯ ಕೇಂದ್ರ, ವೀಜಿದೊಡ್ಡಿ	2	2	-	-	-	-
5.	ಪ್ರಾಥಮಿಕ ಆರೋಗ್ಯ ಘಟಕ, ಗುಡೇಮಾರನಹಳ್ಳಿ	2	2	-	-	-	-
6.	ಪ್ರಾಥಮಿಕ ಆರೋಗ್ಯ ಘಟಕ, ಮಡರೂರು	2	1	1	-	-	-
7.	ಪ್ರಾಥಮಿಕ ಆರೋಗ್ಯ ಘಟಕ, ಚಕ್ಕಬಾವಿ	3	1	2	-	-	-
8.	ಪ್ರಾಥಮಿಕ ಆರೋಗ್ಯ ಕೇಂದ್ರ, ಮಣಗಾನಹಳ್ಳಿ	1	-	1	-	-	-

1	2	3	4	5	6	7	8
9.	ಪ್ರಾಥಮಿಕ ಆರೋಗ್ಯ ಘಟಕ ಗೆಜ್ಜಿಗಾರುಗುಪ್ಪೆ	3	1	2	-	-	-
10.	ಪ್ರಾಥಮಿಕ ಆರೋಗ್ಯ ಕೇಂದ್ರ ತಿಪ್ಪಸಂದ್ರ	1	-	1	-	-	-
11.	ಪ್ರಾಥಮಿಕ ಆರೋಗ್ಯ ಕೆಂದ್ರ ತಗ್ಗೀಕುಪ್ಪೆ	1	-	1	-	-	-
12.	ಪ್ರಾಥಮಿಕ ಆರೋಗ್ಯ ಘಟಕ ಕುದೂರು	2	1	1	1	-	1
13.	ಪ್ರಾಥಮಿಕ ಆರೋಗ್ಯ ಘಟಕ, ಬಾಣವಾಡಿ	1	-	1	-	-	-
14.	ಪ್ರಾಥಮಿಕ ಆರೋಗ್ಯ ಘಟಕ ಸುಗ್ಗನಹಳ್ಳಿ	1	-	1	-	-	-

ಹೆಚ್ಚುವರಿ ಟಿ.ಸಿ.ಹೆಚ್. ಸೀಟುಗಳಲ್ಲಿ ಅವ್ಯವಹಾರ

394 (691) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಹೆಚ್ಚುವರಿ ಟಿಸಿ ಹೆಚ್ ಸೀಟುಗಳನ್ನು ಯಾವ ಕಾಲೇಜುಗಳಿಗೆ ನೀಡಲಾಗಿದೆ. ಇವುಗಳ ಒಟ್ಟು ಸಂಖ್ಯೆ ಎಷ್ಟು?

2) ಈ ವಿದ್ಯಾರ್ಥಿಗಳಿಗೆ ಬಿಡುಗಡೆ ಮಾಡಲಾದ ತಲಾ ಒಟ್ಟು ಹಣವೆಷ್ಟು; (ಪ್ರತಿ ವಿದ್ಯಾರ್ಥಿಗೆ ವೆಚ್ಚ ಮಾಡಿದ ವಿವರ ನೀಡುವುದು)

3) ಈ ಹಣವನ್ನು ಕಾಲೇಜಿನ ಯಾರ ಹೆಸರಿಗೆ ಬಿಡುಗಡೆ ಮಾಡಲಾಗಿದೆ?

4) ರಾಜ್ಯಾದ್ಯಂತ ಈ ಹಣವು ಡಯೆಟ್‌ನಲ್ಲಿ ಅಧಿಕಾರಿಗಳಿಂದ ದುರುಪಯೋಗವಾಗಿರುವುದು ನಿಜವೇ?

5) ಹಾಗಿದ್ದಲ್ಲಿ, ಅವ್ಯವಹಾರದ ಒಟ್ಟು ಮೊತ್ತವೆಷ್ಟು; ಇವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಕಾಲೇಜುಗಳ ಹೆಸರುಗಳ ಪಟ್ಟಿಯನ್ನು ಲಗತ್ತಿಸಿದೆ.

ಒಟ್ಟು 117 ಕಾಲೇಜುಗಳಲ್ಲಿ 8723 ವಿದ್ಯಾರ್ಥಿಗಳನ್ನು ಹಂಚಿಕೆ ಮಾಡಲಾಗಿದೆ.

2) ರೂ. 2.51,45,960.00 ಗಳು. ತಲಾ ವಿದ್ಯಾರ್ಥಿಗೆ ರೂ. 2883.00ಗಳನ್ನು ವೆಚ್ಚ ಮಾಡಲಾಗಿದೆ.

3) ಸಂಬಂಧಿಸಿದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಿಗೆ ಬಿಡುಗಡೆ ಮಾಡಲಾಗಿದೆ.

4) ಇಲ್ಲ.

5) " ಈ " ನಲ್ಲಿ ನೀಡಿದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಸೀಟ್‌ಗಳನ್ನು ಹಂಚಿರುವ ಸಂಸ್ಥೆಗಳ ಹೆಸರುಗಳು ವಿದ್ಯಾರ್ಥಿಗಳ ಸಂಖ್ಯೆ

1) ರಾಯಚೂರು

(1)	ಡಯಟ್ ಯರಮರನ್	69
(2)	ಸರ್ಕಾರಿ ಟಿ.ಟಿ.ಐ. ಕೊಪ್ಪಳ	69

2) ಬೀದರ್

(3)	ಡಯಟ್ ಬೀದರ್	126 ಎರಡು ವಿಭಾಗ

3) ಗುಲ್ಬರ್ಗಾ

(4)	ಡಯಟ್ ಕವಲಾಪುರ	82
(5)	ಸರ್ಕಾರಿ ಟಿ.ಟಿ.ಐ. ಗುಲ್ಬರ್ಗಾ (ಗಂಡು)	80
(6)	ಸರ್ಕಾರಿ ಟಿ.ಟಿ.ಐ. ಗುಲ್ಬರ್ಗಾ (ಹೆಣ್ಣು)	90
(7)	ಆಶಾ ಜ್ಯೋತಿ ಟಿ.ಟಿ.ಐ. ಗುಲ್ಬರ್ಗಾ	63
(8)	ಸರ್ಕಾರಿ ಟಿ.ಟಿ.ಐ. ಯಾದಗಿರಿ	99

4) ಬಳ್ಳಾರಿ :

(9)	ಡಯಟ್ ಬಳ್ಳಾರಿ	126
(10)	ಶರಣಬಸವೇಶ್ವರ ಟಿ.ಟಿ.ಐ. ಕಾನಮಡುಗು	65
(11)	ಟಿ. ಎಂ. ಎ. ಇ. ಸೊಸೈಟಿ, ಹರಪ್ಪನಹಳ್ಳಿ	60

5) ಬಿಜಾಪುರ :

(12)	ಅಂಜುಮಾನ್ ಟಿ.ಟಿ.ಐ. ಇಂಡಿ	79
(13)	ಉರ್ದು ಟಿ.ಟಿ.ಐ. ವಿಜಾಪುರ	151
(14)	ಬಸವೇಶ್ವರ ಟಿ.ಟಿ.ಐ. ಬಾಗಲಕೋಟೆ	84
(15)	ಸರ್ಕಾರಿ ಟಿ.ಟಿ.ಐ. ಹುನಗುಂದ	98
(16)	ಡಯಟ್ ಇಲಕಲ್	54

6) ಬೆಳಗಾಂ

(17)	ಬಿನಾನ್‌ಸ್ಮಿತ್ ಟಿ.ಟಿ.ಐ. ಬೆಳಗಾಂ	59
(18)	ಎಸ್. ಎಸ್. ಬಸವನಾಳ ಟಿ.ಟಿ. ಐ. ಬೆಳಗಾಂ	64
(19)	ಶ್ರೀಮತಿ ಎಸ್. ಡಿ. ಇನಾಂದಾರ್ ಟಿ.ಟಿ.ಐ. ಬೈಲಹೊಂಗಲ	115
(20)	ಶಿವಯೋಗೇಶ್ವರ ಟಿ.ಟಿ.ಐ. ಇಂಚಲ	59
(21)	ಬಿನಾನ್‌ಸ್ಮಿತ್ ಟಿ.ಟಿ.ಐ. ಮರಾಠಿ	60
(22)	ಮರಾಠಿ ಟಿ.ಟಿ.ಐ. ಬೆಳಗಾಂ	38

7) ಚಿಕ್ಕಮಗಳೂರು

(23)	ಡಯಟ್ ಚಿಕ್ಕಮಗಳೂರು	215 (4 ವಿಭಾಗ)
(24)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಡೂರು	64
(25)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೀರೂರು	120 (2 ವಿಭಾಗ)
(26)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಜ್ಜಂಪುರ	131 (2 ವಿಭಾಗ)
(27)	ಸರ್ಕಾರಿ ಹೆಣ್ಣು ಮಕ್ಕಳ ಕಿರಿಯ ಕಾಲೇಜು, ತರೀಕೆರೆ	58

8) ದಾವಣಗೆರೆ (ಚಿತ್ರದುರ್ಗ)

(28)	ಡಯಟ್ ದಾವಣಗೆರೆ	60
(29)	ಬಿ.ಇ. ಎ. ಕಛೇರಿ, ಉತ್ತರ ವಲಯ, ದಾವಣಗೆರೆ	60
(30)	ಬಿ.ಇ. ಎ. ಕಛೇರಿ ಉತ್ತರ ವಲಯ, ಹರಿಹರ	48
(31)	ಬಿ. ಇ. ಎ. ಕಛೇರಿ ಉತ್ತರ ವಲಯ, ಜಗಳೂರು	81
(32)	ಬಿ. ಇ. ಎ. ಕಛೇರಿ ಉತ್ತರ ವಲಯ, ಮೊಳಕಾಲ್ಮೂರು	50
(33)	ಬಿ. ಇ. ಎ. ಕಛೇರಿ ಉತ್ತರ ವಲಯ, ಚಳ್ಳಕೆರೆ	50
(34)	ಶರಣಹರಳಯ್ಯ, ಚಳ್ಳಕೆರೆ	43
(35)	ಬಿ. ಇ. ಓ. ಕಛೇರಿ, ಹಿರಿಯೂರು	73
(36)	ಬಿ. ಇ. ಓ. ಕಛೇರಿ, ಚಿತ್ರದುರ್ಗ	59
(37)	ಸರ್ಕಾರಿ ಟಿ. ಟಿ. ಐ. ಚಿತ್ರದುರ್ಗ	82
(38)	ಬಿ. ಇ. ಓ. ಕಛೇರಿ, ಹೊಳಲ್‌ಕೆರೆ	74
(39)	ಶ್ರೀ ಸರ್ವಸೇನ ಭೋಧಕ ಟಿಟಿಐ, ಹೊಳಲ್‌ಕೆರೆ ತಾ:	50
(40)	ಬಿ.ಇ. ಓ. ಕಛೇರಿ, ಹೊಸದುರ್ಗ	72
(41)	ಸರ್ಕಾರಿ ಟಿ. ಟಿ. ಐ. ಹೊಸದುರ್ಗ	133 (2 ವಿಭಾಗ)
(42)	ಡಯಟ್ ದಾವಣಗೆರೆ, ಉರ್ದು ವಿಭಾಗ	18

9) ಡಯಟ್ ಹಾಸನ :

(43)	ಬಿ. ಇ. ಓ. ಹಾಸನ, ಕುವೆಂಪುನಗರ	54
(44)	ಡಯಟ್ ತಂಡ ಅಗ್ರಹಾರ ಹಿರಿಯ ಪ್ರಾಥಮಿಕ ಶಾಲೆ, ಹಾಸನ.	61
(45)	ಡಯಟ್ ತಂಡ, ಆರ್. ಸಿ. ರೋಡ್, ಹಾಸನ	56
(46)	ಡಯಟ್ ತಂಡ, ಕೆ. ಆರ್. ಪುರಂ, ಹಾಸನ	58
(47)	ಡಯಟ್ ತಂಡ ರಂಗೋಲಿ ಹಳ್ಳಿ, ಹಾಸನ	57
(48)	ಡಯಟ್ ತಂಡ ಜಿ. ಹೆಚ್. ಪಿ. ಎಸ್., ಜೆ. ಹೆಚ್. ಹಳ್ಳಿ, ಅರಸೀಕೆರೆ	73
(49)	ಡಯಟ್ ತಂಡ, ರಾ.ವಿ. ಸಂಸ್ಥೆ, ಲಕ್ಷ್ಮೀಪುರ ಅರಸೀಕೆರೆ	71
(50)	ಡಯಟ್ ತಂಡ, ಚನ್ನರಾಯಪಟ್ಟಣ	60
(52)	ಡಯಟ್ ತಂಡ, ಹರಳೇಪೇಟೆ, ಹೊಳೆನರಸೀಪುರ	51

(53) ಬಿ. ಇ. ಒ. ತಂಡ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಹುಳಿಯಾರ ರಸ್ತೆ, ಅರಸೀಕೆರೆ 68

(54) ಬಿ. ಇ. ಒ. ತಂಡ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, (ಬಾಲಕರ) ಚನ್ನರಾಯಪಟ್ಟಣ 60

(55) ಬಿ. ಇ. ಒ. ಹೊಳೆನರಸೀಪುರ 48

(56) ಬಿ. ಇ. ಒ. ತಂಡ, ಸಕಲೇಶಪುರ 60

(57) ಬಿ. ಇ. ಒ. ಅರಸೀಕೆರೆ, ಅರಕಲಗೂಡು 56

(58) ಬಿ. ಇ. ಒ. ತಂಡ, ಬೇಲೂರು 60

(59) ಬಿ. ಇ. ಒ. ತಂಡ, ಆಲೂರು 49

(60) ಜಿ. ಎಸ್. ಎಸ್. ಟಿ. ಟಿ. ಐ. ದೊಡ್ಡ ಕಾಡನೂರು 48

(61) ದಶ್ತಾತ್ರೇಯ ಟಿ. ಟಿ. ಐ. ಚನ್ನರಾಯಪಟ್ಟಣ 63

10) ಮಂಡ್ಯ

(62) ಡಯಟ್ ಮಂಡ್ಯ 60

(63) ಬಿ. ಇ. ಒ. ಕಛೇರಿ, ಮಂಡ್ಯ 60

(64) ಬಿ. ಇ. ಒ. ಕಛೇರಿ, ನಾಗಮಂಗಲ 64

(65) ಬಿ. ಇ. ಒ. ಕಛೇರಿ, ಪಾಂಡವಪುರ 61

(66) ಬಿ. ಇ. ಒ. ಕಛೇರಿ, ಶ್ರೀರಂಗಪಟ್ಟಣ 72

(67) ಬಿ. ಇ. ಒ. ಕಛೇರಿ, ಕೆ. ಆರ್. ಪೇಟೆ 72

(68) ಬಿ. ಇ. ಒ. ಕಛೇರಿ, ಮಳವಳ್ಳಿ 65

(69) ಬಿ. ಇ. ಒ. ಕಚೇರಿ ನಾಗಮಂಗಲ 64

(70) ಬಿ. ಇ. ಒ. ಕಛೇರಿ, ಕೆರೆಗೋಡು 58

11) ಮೈಸೂರು

(71) ಡಯಟ್ ವಸಂತ ಮಹಾಲ್ 468 (8 ವಿಭಾಗ)

(72) ಮಹಾರಾಣಿ ಟಿ. ಟಿ. ಐ. ಮೈಸೂರು 53

(73) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ತಮಿಳು) ಶಿವರಾಂಪೇಟೆ, ಮೈಸೂರು 55

(74) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಕನ್ನಡ) ಶಿವರಾಂಪೇಟೆ, ಮೈಸೂರು 56

(75) ಎನ್. ಟಿ. ಎಂ. ಎಸ್. (ಹೆಚ್. ಸಿ. ಎಸ್) ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು 56

12) ಶಿವಮೊಗ್ಗ

(76)	ಬಿ. ಇ. ಒ. ಕಛೇರಿ, ಭದ್ರಾವತಿ	57
(77)	ಬಿ. ಇ. ಒ. ಕಛೇರಿ, ಹೊನ್ನಾಳಿ	63
(78)	ಬಿ. ಇ. ಒ. ಕಛೇರಿ, ಚನ್ನಗಿರಿ	104
(79)	ಬಿ. ಇ. ಒ. ಕಛೇರಿ, ಶಿಕಾರಿಪುರ	60
(80)	ಬಿ.ಇ.ಒ. ಕಛೇರಿ, ಹೊಸನಗರ	52
(81)	ಬಿ. ಇ. ಒ. ಕಛೇರಿ, ತೀರ್ಥಹಳ್ಳಿ	84
(82)	ಪ್ರಾಥಮಿಕ ಟಿ. ಟಿ. ಐ. ಮಕ್ಕಳ ವಿದ್ಯಾಸಂಸ್ಥೆ, ಶಿವಮೊಗ್ಗ	59
(83)	ಸರ್ಕಾರಿ ಟಿ. ಟಿ. ಐ. ಅನವಟ್ಟಿ	49
(84)	ಡಯಟ್ ಶಿವಮೊಗ್ಗ	79

13) ಕೋಲಾರ

(85)	ಡಯಟ್ ಕೋಲಾರ	120 (2 ವಿಭಾಗ)
(86)	ಎಸ್. ಎಲ್. ವಿ. ಟಿ. ಟಿ. ಐ. ಬಂಗಾರಪೇಟೆ	60
(87)	ನೇತಾಜಿ ಟಿ. ಟಿ. ಐ. ಮಾಲೂರು	120 (2 ವಿಭಾಗ)
(88)	ಕೆ. ವಿ. ಟಿ. ಟಿ. ಐ. ಚಿಕ್ಕಬಳ್ಳಾಪುರ	180 (3 ವಿಭಾಗ)
(89)	ಅಣ್ಣೈ ಪಾತೀಮ ಟಿ. ಟಿ. ಐ., ಗೌರಿಬಿದನೂರು	55

ಬೀದರ್ ಜಿಲ್ಲಾ ಪಂಚಾಯತ್‌ನಲ್ಲಿ ಅವ್ಯವಹಾರ

396 (723) ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಬೀದರ್ ಜಿಲ್ಲಾ ಪಂಚಾಯಿತಿಯಲ್ಲಿ 1996-97 ರ ಸಾಲಿನಲ್ಲಿ ಲಕ್ಷಾಂತರ ರೂಪಾಯಿಯ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ?

2) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

3) ಈ ಹಗರಣದಲ್ಲಿ ಭಾಗಿಯಾದ ತಪ್ಪಿತಸ್ಥರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

1) ಇಲ್ಲ

2) ಮೇಲೆ (1) ರಲ್ಲಿ ನೀಡಿರುವ ಉತ್ತರದಲ್ಲಿ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

3) ಮೇಲೆ (1) ರಲ್ಲಿ ನೀಡಿರುವ ಉತ್ತರದ ಹಿನ್ನೆಲೆಯಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಮಂಜೂರಾಗಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ

397 (727) ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿ ಮಂಜೂರಾತಿಯಾಗಿರುವ ಮೊರಾರ್ಜಿದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

2) ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಗೆ ಕಡ್ಡಾಯವಾಗಿ ವಸತಿ ಶಾಲೆಯನ್ನು ಒದಗಿಸುವುದು ಸರ್ಕಾರದ ನಿಯಮವಲ್ಲವೆ?

3) ಹಾಗಿದ್ದಲ್ಲಿ ಹೊಸ ಜಿಲ್ಲೆ ಬಾಗಲಕೋಟೆಯಲ್ಲಿ ಐತಿಹಾಸಿಕ ಪ್ರಸಿದ್ಧ ಬಾದಾಮಿಗೆ ಈ ವರ್ಷ 1998-99ರಲ್ಲಿ ಮಂಜೂರಾತಿ ನೀಡಿ ವಸತಿ ಶಾಲೆ ಪ್ರಾರಂಭ ಮಾಡಲಾಗುವುದೇ?

4) ಹಾಗಿದ್ದಲ್ಲಿ ನಿರ್ದಿಷ್ಟವಾದ ಶಾಲೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

1) ರಾಜ್ಯದಲ್ಲಿ ಜಿಲ್ಲೆಗೆ ಒಂದರಂತೆ 20 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮಂಜೂರಾಗಿದೆ. ಜಿಲ್ಲಾವಾರು ವಿವರ ಈ ಕೆಳಕಂಡಂತೆ ಇದೆ.

(1) ಬೆಂಗಳೂರು ದಕ್ಷಿಣ	(2) ಬೆಂಗಳೂರು ಗ್ರಾಮಾಂತರ	(3) ಕೋಲಾರ
(4) ತುಮಕೂರು	(5) ಚಿತ್ರದುರ್ಗ	(6) ಶಿವಮೊಗ್ಗ
(7) ಮೈಸೂರು	(8) ಮಂಡ್ಯ	(9) ಕೊಡಗು
(10) ದಕ್ಷಿಣ ಕನ್ನಡ	(11) ಹಾಸನ	(12) ದಕ್ಷಿಣ ಕನ್ನಡ
(13) ಬೆಳಗಾಂ	(14) ಬಿಜಾಪುರ	(15) ಧಾರವಾಡ
(16) ಉತ್ತರ ಕನ್ನಡ	(17) ಗುಲ್ಬರ್ಗ	(18) ರಾಯಚೂರು
(19) ಬಳ್ಳಾರಿ	(20) ಬೀದರ್	

2) 1995-96 ರಲ್ಲಿ ಈ ಶಾಲೆಗಳನ್ನು ಪಾರಂಭಿಸಿದಾಗ ಜಿಲ್ಲೆಗೊಂದರಂತೆ ನೀಡಲು ಉದ್ದೇಶಿಸಲಾಗಿತ್ತು. ಅದರಂತೆ ಕ್ರಮ ಕೈಗೊಂಡಿದೆ.

3) ಇಲ್ಲ

4) ಉದ್ಭವಿಸುವುದಿಲ್ಲ.

ಮುರಾರ್ಜಿ ವಸತಿ ಶಾಲೆಗಳಿಗೆ ಕಟ್ಟಡ ವ್ಯವಸ್ಥೆ

402 (355) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಮೊರಾರ್ಜಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ (ಜಿಲ್ಲಾವಾರು ವಿವರ ನೀಡುವುದು)

2) ಮೊರಾರ್ಜಿ ವಸತಿ ಶಾಲೆಗಳಿಗೆ ಕಟ್ಟಡ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

3) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ರಾಜ್ಯದಲ್ಲಿ 20 ಜಿಲ್ಲೆಗಳಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ:

(1) ಬೆಂಗಳೂರು ದಕ್ಷಿಣ	(2) ಬೆಂಗಳೂರು ಗ್ರಾಮಾಂತರ	(3) ಕೋಲಾರ
(4) ತುಮಕೂರು	(5) ಶಿವಮೊಗ್ಗ	(6) ಚಿತ್ರದುರ್ಗ
(7) ಮೈಸೂರು	(8) ಚಿಕ್ಕಮಗಳೂರು	(9) ಕೊಡಗು
(10) ದಕ್ಷಿಣ ಕನ್ನಡ	(11) ಬಿಜಾಪುರ	(12) ಧಾರವಾಡ
(13) ಉತ್ತರ ಕನ್ನಡ	(14) ಗುಲ್ಬರ್ಗಾ	(15) ಬಳ್ಳಾರಿ
(16) ರಾಯಚೂರು	(17) ಬೀದರ್	(18) ಮಂಡ್ಯ
(19) ಹಾಸನ		

2) ಹೌದು, ಹಲವು ಸ್ಥಳಗಳಲ್ಲಿ

3) ಈ ವಸತಿ ಶಾಲೆಗಳನ್ನು ಕೆಳಕಂಡಂತೆ ನಡೆಸಲಾಗುತ್ತಿದೆ. ರಾಜ್ಯದಲ್ಲಿರುವ 5 ವಿದ್ಯಾಪೀಠ ಕಟ್ಟಡಗಳಲ್ಲಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಇನ್ನುಳಿದ 9 ಶಾಲೆಗಳನ್ನು ಅನುಕೂಲವಾದ ಸರ್ಕಾರಿ ಕಟ್ಟಡಗಳನ್ನು ಕಂಡು ಹಿಡಿದು ತಾತ್ಕಾಲಿಕವಾಗಿ, ಉಳಿದ 6 ಶಾಲೆಗಳನ್ನು ಖಾಸಗಿ ಕಟ್ಟಡಗಳಲ್ಲಿ ಬಾಡಿಗೆಗೆ ಪಡೆದು ನಡೆಸಲಾಗುತ್ತಿದೆ. ಆಯವ್ಯಯದ ಕೊರತೆಯಿಂದ ಸ್ವಂತ ಕಟ್ಟಡಗಳನ್ನು ಸದ್ಯದಲ್ಲಿ ನಿರ್ಮಿಸಲು ಸಾಧ್ಯವಿಲ್ಲ.

ಜಿಲ್ಲಾ ಪಂಚಾಯತ್ 87-88 ನೇ ಸಾಲಿನಲ್ಲಿ ಮಂಜೂರಾದ ಶಾಲೆಗಳಿಗೆ ಅನುದಾನ

403 (375) ಶ್ರೀ ಎಲ್. ಕೆ. ಚವಾನ್ (ಹುಲೂರೂ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 1987-88ನೇ ಸಾಲಿನಲ್ಲಿ ಜಿಲ್ಲಾಪಂಚಾಯತ್‌ನವರು 16 ಖಾಸಗಿ ಸಂಸ್ಥೆಗಳಿಗೆ ಅನುದಾನ ಸಹಿತ ಶಾಲೆಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಶಾಲೆಗಳಿಗೆ ಅನುದಾನ ನೀಡುವ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು):

1) ಹೌದು

2) ದಿನಾಂಕ 1.6.87 ರ ನಂತರ ಮಂಜೂರಾದ ಶಾಲೆಗಳನ್ನು ಶಾಶ್ವತ ಅನುದಾನ ರಹಿತ ಶಾಲೆಗಳೆಂದು ಪರಿಗಣಿಸಿರುವುದರಿಂದ, ಈ ಶಾಲೆಗಳಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾಲೂರು ತಾಲ್ಲೂಕಿನಲ್ಲಿ ಕಿರುನೀರು ಸರಬರಾಜು

404 (656) ಶ್ರೀ ಹೆಚ್. ಬಿ. ದ್ಯಾವೀರಪ್ಪ (ಮಾಲೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಮಾಲೂರು ತಾಲ್ಲೂಕಿನಲ್ಲಿ ಕಿರುನೀರು ಸರಬರಾಜು ಯೋಜನೆ ಮತ್ತು ಕೈಪಂಪುಗಳನ್ನು ಅಳವಡಿಸಿರುವ ಕೊಳವೆಬಾವಿಗಳ ಸಂಖ್ಯೆ ಎಷ್ಟು?

2) ಆ ಪೈಕಿ ನೀರಿಲ್ಲದೆ ಬತ್ತಿ ಹೋಗಿರುವ ಕೊಳವೆ ಬಾವಿಗಳೆಷ್ಟು?

3) ತಾಲ್ಲೂಕಿನಲ್ಲಿ ಹಿಂದೆ ಕೊರೆದಿದ್ದ 150 ರಿಂದ 250 ಅಡಿಗಳ ಕೊಳವೆಬಾವಿಗಳು ಅಂತರ್ಜಲ 500 ಅಡಿಗಳ ಆಳದವರೆಗೂ ಹೋಗಿರುವುದರಿಂದ ನೀರು ಬತ್ತಿ ಹೋಗಿರುವುದು ನಿಜವೇ?

4) ಇದನ್ನು ಪುನ: ಶ್ಚೇತನಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು?

5) 500 ಅಡಿಗಳ ಆಳದಿಂದ ನೀರೆತ್ತುವ ಕೈಪಂಪುಗಳು ನಿಷ್ಕ್ರಿಯವಾಗಿರುವ ಪ್ರಯುಕ್ತ ಎಲ್ಲಾ ಹಳ್ಳಿಗಳಿಗೂ ಕಿರು ನೀರು ಸರಬರಾಜು ಯೋಜನೆಯನ್ನು ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

1) ಮಾಲೂರು ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ 35 ನಳನೀರು ಸರಬರಾಜು 120 ಕಿರುನೀರು ಸರಬರಾಜು ಹಾಗೂ 750 ಕೈಪಂಪು ಕೊಳವೆಬಾವಿಗಳು ಕಾರ್ಯನಿರ್ವಹಿಸುತ್ತಿವೆ.

2) ಮೇಲ್ಕಂಡ ಎಲ್ಲಾ 905 ಕೊಳವೆಬಾವಿಗಳು ಸುಸ್ಥಿತಿಯಲ್ಲಿದ್ದು, ಯಾವುದೂ ಬತ್ತಿ ಹೋಗಿರುವುದಿಲ್ಲ.

3) ತಾಲ್ಲೂಕಿನಲ್ಲಿ ಹಿಂದೆ 150 ರಿಂದ 250 ಅಡಿ ಆಳದವರೆಗೆ ಕೊರೆದಿದ್ದ ಕೆಲವ ಬಾವಿಗಳಲ್ಲಿ ನೀರಿನ ಮಟ್ಟ ಕೆಳಕ್ಕೆ ಹೋಗಿರುವುದು ನಿಜ.

4) ಇಂತಹ ಕೊಳವೆ ಬಾವಿಗಳ ಇಳುವರಿಯನ್ನು ಹೈಡ್ರೋಫ್ರಾಕ್ಚರ್ ವಿಧಾನದಿಂದ ಹೆಚ್ಚಿಸಲು ಪ್ರಯತ್ನಿಸಲಾಗುತ್ತಿದೆ.

5) ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಕೈಪಂಪು ನೀರೆತ್ತುವ ಸಾಮರ್ಥ್ಯಕ್ಕಿಂತ ಕೆಳಗೆ ಹೋದ ಗ್ರಾಮಗಳಲ್ಲಿ ಕೊಳವೆ ಬಾವಿಗಳ ಇಳುವರಿಯನ್ನು ಹೈಡ್ರೋಫ್ರಾಕ್ಚರ್ ಮುಖಾಂತರ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು.

ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಹೊಸಕಟ್ಟಡಗಳು

405 (704) ಶ್ರಿ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿವಮೊಗ್ಗ ಮೇಗ್ಗಾನ್ ಆಸ್ಪತ್ರೆ ಹೊಸ ಕಟ್ಟಡಗಳು ಯಾವಾಗ ಪೂರ್ಣಗೊಳಿಸಲಾಗುವುದು?

2) ಆಸ್ಪತ್ರೆ ಅಭಿವೃದ್ಧಿಗೆ ರೂ. 2 ಕೋಟಿ ಹಣ ಯಾವಾಗ ಬಿಡುಗಡೆ ಮಾಡಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಈ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖಾ ವತಿಯಿಂದ ರಾಜ್ಯದ ಯೋಜನೆಯಲ್ಲಿ ಕೈಗೊಳ್ಳಲಾಗಿದ್ದು ಹಲವಾರು ಕಾರಣಗಳಿಂದ ಈ ಕಾಮಗಾರಿಯನ್ನು ಇದುವರೆವಿಗೂ ಪೂರೈಸಲು ಸಾಧ್ಯವಾಗಿಲ್ಲ. ಈ ಹೊಸ ಕಟ್ಟಡದ ಕಾಮಗಾರಿಯು ವಿಶ್ವಬ್ಯಾಂಕ್ ಯೋಜನೆಯಲ್ಲಿ ಸೇರಿಲ್ಲದೇ ಇರುವುದರಿಂದ ಈ ಕಾಮಗಾರಿಯನ್ನು ಪೂರೈಸಲು ವಿಶ್ವಬ್ಯಾಂಕ್ ಅನುಮೋದನೆಯನ್ನು ಕೋರಲು ಆಲೋಚಿಸಲಾಗಿದೆ.

2) ವಿಶ್ವಬ್ಯಾಂಕ್ ಈ ಪ್ರಸ್ತಾವನೆಗೆ ಒಪ್ಪಿದಲ್ಲಿ ಕಾಮಗಾರಿ ಪೂರೈಸಲು ಬೇಕಾಗುವ ಹಣವನ್ನು ಕೂಡಲೇ ಬಿಡುಗಡೆ ಮಾಡಲಾಗುವುದು ಹಾಗೂ ಈಗ ಅನುಮೋದಿತವಾಗಿರುವಂತೆ ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಾಲಿ ಇರುವ ಆಸ್ಪತ್ರೆ ಹಾಗೂ ವಸತಿ ಗೃಹಗಳ ಜೀರ್ಣೋದ್ಧಾರಕ್ಕೆ 180 ಲಕ್ಷ ರೂ ಒದಗಿಸಲಾಗಿದೆ. ಈ ಕಾಮಗಾರಿಗಾಗಿ ವಿಶ್ವಬ್ಯಾಂಕ್ ನಿಯಮಗಳಿಗೆ ಅನುಗುಣವಾಗಿ ವಾಸ್ತುಶಿಲ್ಪಿಗಳಿಂದ ನಕ್ಷೆ ತಯಾರಿಸಲಾಗುತ್ತಿದ್ದು ವಿಶ್ವಬ್ಯಾಂಕ್ ವಾಸ್ತುಶಿಲ್ಪಿಗಳ ಒಪ್ಪಿಗೆ ಪಡೆದ ನಂತರ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಮೊಳಕಾಲ್ಮೂರಿನಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕುರಿತು

406 (674) ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಯಿತು?

2) ಈ ಕಾಲೇಜಿಗೆ ವಿವಿಧ ವಿಭಾಗಗಳಲ್ಲಿ ಮಂಜುರಾಗಿರುವ ಉಪನ್ಯಾಸಕರ ಹುದ್ದೆಗಳೆಷ್ಟು?

3) ಈ ಪೈಕಿ ಯಾವ ಯಾವ ವಿಭಾಗಗಳಲ್ಲಿ ಉಪನ್ಯಾಸಕರು ಕೆಲಸ ನಿರ್ವಹಿಸುತ್ತಿದ್ದರು?

4) ಖಾಲಿ ಇರತಕ್ಕ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) 1985 ರಲ್ಲಿ

2) ಮಂಜೂರಾದ ಒಟ್ಟು ಹುದ್ದೆಗಳು 05. ವಿವರಗಳು ಕೆಳಕಂಡಂತೆ ಇವೆ :-

(1) ಕನ್ನಡ - 01 (2) ಇಂಗ್ಲೀಷ್ - 01 (3) ಇತಿಹಾಸ - 01
(4) ಅರ್ಥಶಾಸ್ತ್ರ - 01 (5) ರಾಜ್ಯಶಾಸ್ತ್ರ - 01

3) ಈ ಕೆಳಕಂಡ ವಿಭಾಗಗಳಲ್ಲಿ ಉಪನ್ಯಾಸಕರು ಕೆಲಸ ನಿರ್ವಹಿಸುತ್ತಿದ್ದರು.

ಕನ್ನಡ - 01, ಇತಿಹಾಸ - 01 ಮತ್ತು ರಾಜ್ಯಶಾಸ್ತ್ರ - 01

4) ಕಾಲೇಜುಗಳಲ್ಲಿ ಕಡಿಮೆ ಕಾರ್ಯಭಾರ ಇದ್ದ ಕಡೆ ಹೆಚ್ಚುವರಿ ಬೋಧಕರನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ನಿಯೋಜಿಸಲು ಹಾಗೂ ಕಾಲೇಜುಗಳಲ್ಲಿ ಉದ್ಭವಿಸುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ. ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಮೊಳಕಾಲ್ಮೂರಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ

407 (676) ಶ್ರೀ ಎನ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಮೊಳಕಾಲ್ಮೂರು ತಾಲ್ಲೂಕಿನಲ್ಲಿರುವ ಸರ್ಕಾರೀ ಆಸ್ಪತ್ರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಘಟಕಗಳ ಸಂಖ್ಯೆ ಎಷ್ಟು?

2) ಇವುಗಳಿಗೆ ಮಂಜೂರಾದ ವೈದ್ಯರ ಸಂಖ್ಯೆ ಎಷ್ಟು?

3) ಇವುಗಳ ಪೈಕಿ ಎಷ್ಟು ಆರೋಗ್ಯ ಕೇಂದ್ರ ಹಾಗೂ ಘಟಕಗಳಲ್ಲಿ ವೈದ್ಯರ ಕೊರತೆ ಇದೆ.

4) ಖಾಲಿ ಇರತಕ್ಕ ವೈದ್ಯರುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಮೊಳಕಾಲ್ಮೂರು ತಾಲ್ಲೂಕಿನಲ್ಲಿ 1 ಸಾರ್ವಜನಿಕ ಆಸ್ಪತ್ರೆ,

3 ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು

3 ಪ್ರಾಥಮಿಕ ಆರೋಗ್ಯ ಘಟಕಗಳಿರುತ್ತವೆ.

2) 12 ವೈದ್ಯರ ಹುದ್ದೆಗಳು ಮಂಜೂರಾಗಿರುತ್ತವೆ.

3) ಪ್ರಾಥಮಿಕ ಆರೋಗ್ಯ ಕೇಂದ್ರ	-	1
ಪ್ರಾಥಮಿಕ ಆರೋಗ್ಯ ಘಟಕ	-	1
ಒಟ್ಟು	-	**2**

4) ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ: 18-3-98 ರಂದು ಭರ್ತಿ ಮಾಡಲಾಗಿದೆ.

ರಾಜ್ಯದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಂಜೂರಾತಿ

409 (669)ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಮಂಜೂರು ಆಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಅವುಗಳು ಯಾವುವು (ವಿವರಗಳನ್ನು ನೀಡುವುದು)

2) ಈ ರೀತಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಅನುಸರಿಸಿದ ಅಳತೆಗೋಲುಗಳೇನು?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಕಳೆದ 3 ವರ್ಷಗಳಲ್ಲಿ 244 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. (ವಿವರ ಅನುಬಂಧದಲ್ಲಿ ಸಲ್ಲಿಸಲಾಗಿದೆ).

2) ಭಾರತ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಬಯಲುಸೀಮೆ ಪ್ರದೇಶದಲ್ಲಿ 30,000 ಜನಸಂಖ್ಯೆಗೆ ಹಾಗೂ ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶಗಳಲ್ಲಿ 20,000 ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗುತ್ತಿದೆ. ಸರ್ಕಾರದ ಈಗಿನ ನಿಬಂಧನೆಯ ಪ್ರಕಾರ ರೂ. 1.00 ಲಕ್ಷ ಜನಜನಿತ ವಂತಿಕೆ 2 ಎಕರೆ ಜಮೀನು ಹಾಗೂ ತಾತ್ಕಾಲಿಕವಾಗಿ ಬಾಡಿಗೆ ರಹಿತ ಕಟ್ಟಡವನ್ನು ನೀಡುವ ಸ್ಥಳಗಳಿಗೆ ಮಂಜುರಾತಿಯಲ್ಲಿ ಆದ್ಯತೆ ನೀಡಲಾಗುವುದು.

ಅನುಬಂಧ - 1

ರಾಜ್ಯದಲ್ಲಿ 1995-96 ನೇ ಸಾಲಿನಲ್ಲಿ ಕ್ಷೇತ್ರವಾರು ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವಿವರ ಈ ಕೆಳಗಿನಂತಿರುತ್ತದೆ.

ಕ್ರ. ಸಂ.	ಕ್ಷೇತ್ರ	ತಾಲ್ಲೂಕು	ಮಂಜೂರು ಮಾಡಲಾಗಿರುವ ಪ್ರಾಥಮಿಕ ಆ.ಕೇಂದ್ರಗಳು
1.	ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	ದೊಡ್ಡತುಮಕೂರು
2.	ಚನ್ನಪಟ್ಟಣ	ಚನ್ನಪಟ್ಟಣ	ಮೈನಾಕನಹೊಸಹಳ್ಳಿ
3.	ಕನಕಪುರ	ಕನಕಪುರ	ದೊಂಬಲದೊಡ್ಡಕ್ಯಾಸ್
4.	ಬೈಲಹೊಂಗಲ	ಬೈಲಹೊಂಗಲ	ಹೊನ್ನೂರು
5.	ಬೆಳಗಾಂ	ಬೆಳಗಾಂ	ಕಡೋಲಿ
6.	ರಾಯಬಾಗ್	ಸೌದತ್ತಿ	ಅಸುಂದಿ
7.	ಹೊಸಪೇಟೆ	ಹೊಸಪೇಟೆ	ಚಿತ್ತನವಾಡಿ
8.	ಹೊಸಪೇಟೆ	ಹೊಸಪೇಟೆ	ದೇವಸಮುದ್ರ
9.	ಔರಾದ್	ಔರಾದ್	ಹೆಗ್ಗಳಾಪುರ
10.	ಬಸವಕಲ್ಯಾಣ	ಬಸವಕಲ್ಯಾಣ	ಮೆಂಡಗಾಲ

11.	ಇಂಡಿ	ಇಂಡಿ	ಜಿಗುಜೇವಂಗಿ
12.	ಬಸವನ ಬಾಗೇವಾಡಿ	ಬಸವನಬಾಗೇವಾಡಿ	ಮೆಂದಗಾಲ
13.	ಮುದ್ದೆಬಿಹಾಳ್	ಮುದ್ದೆಬಿಹಾಳ್	ಬಂಟನೂರ
14.	ಕಡೂರು	ಕಡೂರು	ಹುಲ್ಲಿಕೇರಿ
15.	ಕಡೂರು	ಕಡೂರು	ಮಾಚೇಹಳ್ಳಿ
16.	ಚಿತ್ರದುರ್ಗ	ಚಿತ್ರದುರ್ಗ	ರೋವನಹಳ್ಳಿ
17.	ಚಿತ್ರದುರ್ಗ	ಚಿತ್ರದುರ್ಗ	ವಿಜಯಪುರ
18.	ಹರಿಹರ	ಹರಿಹರ	ಹೊಳೆಸಿಂದರಿ
19.	ಬೆಳ್ತಂಗಡಿ	ಬೆಳ್ತಂಗಡಿ	ಪಾಂಡುಗಡಿ
20.	ಕಲ್‌ಘಟಕಿ	ಕಲ್‌ಘಟಕಿ	ಹಂಜಿಘಟ್ಟ
21.	ನರಗುಂದ	ನರಗುಂದ	ಜಗಾಪುರ
22.	ಹಾನಗಲ್	ಹಾನ್‌ಗಲ್	ಪಾಡಗುಪ್ಪಿ
23.	ಮುಂಡರಗಿ	ಮುಂಡರಗಿ	ಜನತಿಲ್‌ರೂರು
24.	ಗುರುಮಿಟಕಲ್	ಗುರುಮಿಟಕಲ್	ಕೋಟಿಗೇರಾ
25.	ಶಹಪೂರ್	ಶಹಪೂರ್	ವನದುರ್ಗ
26.	ಶ್ರವಣಬೆಳಗೊಳ	ಚನ್ನರಾಯಪಟ್ಟಣ	ಆನೆಕೆರೆ
27.	ಶ್ರವಣಬೆಳಗೊಳ	ಚನ್ನರಾಯಪಟ್ಟಣ	ಕಲ್ಕೆರೆ
28.	ಹೊಳೆನರಸಿಪುರ	ಹೊಳೆನರಸೀಪುರ	ಹರಿಹರ
29.	ಸೋಮವಾರಪೇಟೆ	ಸೋಮವಾರಪೇಟೆ	ಬಿಳಿಗೆರೆ
30.	ಶ್ರೀನಿವಾಸಪುರ	ಶ್ರೀನಿವಾಸಪುರ	ಕುಲಗುರುಕೋಟೆ
31.	ಚಿಂತಾಮಣಿ	ಚಿಂತಾಮಣಿ	ಚೆನ್ನಸಂದ್ರ
32.	ಮಂಡ್ಯ	ಮಂಡ್ಯ	ಹೊನಗಾನಹಳ್ಳಿ
33.	ಮಳವಳ್ಳಿ	ಮಳವಳ್ಳಿ	ತಡವಾಡಿ
34.	ಟಿ. ನರಸೀಪುರ	ಟೀ. ನರಸೀಪುರ	ಮಾದಾಪುರ
35.	ಬನ್ನೂರು	ಟೀ ನರಸೀಪುರ	ರಂಗಸಮುದ್ರ
36.	ಗುಂಡ್ಲುಪೇಟೆ	ಗುಂಡುಪೇಟೆ	ಬೂಮಲಪುರ
37.	ಹೆಚ್.ಡಿ.ಕೋಟೆ	ಹೆಚ್.ಡಿ. ಕೋಟೆ	ದಡದಹಳ್ಳಿ
38.	ನಂಜನಗೂಡು	ನಂಜನಗೂಡು	ಹುರ
39.	ಪಿರಿಯಾಪಟ್ಟಣ	ಪಿರಿಯಾಪಟ್ಟಣ	ಕಮಲಾಪುರ
40.	ಲಿಂಗಸಬೂರು	ಲಿಂಗಸಬೂರು	ಮದಿಕೆನಾಳ್
41.	ಯಲಬುರ್ಗ	ಯಲಬುರ್ಗ	ಬನ್ನಿಕೊಪ್ಪ
42.	ಚನ್ನಗಿರಿ	ಚನ್ನಗಿರಿ	ದಾಸಿನಕಟ್ಟಿ
43.	ಶಿಕಾರಿಪುರ	ಶಿಕಾರಿಪುರ	ಕಪನಹಳ್ಳಿ
44.	ಮದುಗಿರಿ	ಮದುಗಿರಿ	ದೊಡ್ಡೇರಿ
45.	ಕುಣಿಗಲ್	ಕುಣಿಗಲ್	ಹಾಲಪ್ಪನಗುಡ್ಡ

46.	ಪಾವಗಡ	ಪಾವಗಡ	ಕೊಂಡೆದಿಮ್ಮನಹಳ್ಳಿ
47.	ಹಳಿಯಾಳ	ಹಳಿಯಾಳ	ಮಂಗಳವಾಡ
48.	ರಾಮನಗರ	ರಾಮನಗರ	ಹಿಟ್ಟಾಮಡು
49.	ನಂಜನಗೂಡು	ನಂಜನಗೂಡು	ಗುಂಬಳ್ಳಿ
50.	ಹುಕ್ಕೇರಿ	ಹುಕ್ಕೇರಿ	ಅರ್ಜುನವಾಡಿ

ಅನುಬಂಧ -2

ಕ್ರ. ಸಂ.	ಮತಕ್ಷೇತ್ರ	ತಾಲ್ಲೂಕು	ಮಂಜೂರು ಮಾಡಲಾಗಿರುವ ಪ್ರಾ. ಆ. ಕೇಂದ್ರಗಳು
1	2	3	4
1.	ಆನೇಕಲ್	ಆನೇಕಲ್	ಹಾರಗದ್ದೆ
2.	ಆನೇಕಲ್	ಆನೇಕಲ್	ಹೆಬ್ಬಗೋಡಿ
3.	ದೇವನಹಳ್ಳಿ	ದೇವನಹಳ್ಳಿ	ಕಾರೇಹಳ್ಳಿ
4.	ದೊಡ್ಡಬಳ್ಳಾಪುರ	ದೊಡ್ಡಬಳ್ಳಾಪುರ	ಘಾಟಿ ಸುಬ್ರಮಣ್ಯ
5.	ಸಾತನೂರು	ಕನಕಪುರ	ವೆಂಕಟರಾಯನದೊಡ್ಡಿ
6.	ನೆಲಮಂಗಲ	ನೆಲಮಂಗಲ	ಮಾರಗೊಂಡನಹಳ್ಳಿ
7.	ಚಿಳ್ಳಕೆರೆ	ಚಿಳ್ಳಕೆರೆ	ಮುಸಲಗುಮ್ಮಿ
8.	ಚಿತ್ರದುರ್ಗ	ಚಿತ್ರದುರ್ಗ	ಹಾಯ್‌ಕಲ್ಲು
9.	ಹಿರಿಯೂರು	ಹಿರಿಯೂರು	ರಂಗೇನಹಳ್ಳಿ
10.	ಹರಿಹರ	ಹರಿಹರ	ಬನವಳ್ಳಿ
11.	ಶ್ರೀನಿವಾಸಪುರ	ಶ್ರೀನಿವಾಸಪುರ	ಓಬಳಗೆರೆ
12.	ಬಾಗೇಪಲ್ಲಿ	ಬಾಗೇಪಲ್ಲಿ	ಶಿವಪುರ
13.	ಗೌರಿಬಿದನೂರು	ಗೌರಿಬಿದನೂರು	ಕಲ್ಕುಪುರ
14.	ಚಿಂತಾಮಣಿ	ಚಿಂತಾಮಣಿ	ಚೆನ್ನಸಂದ್ರ
15.		ಗೌರಿಬಿದನೂರು	ನಕಲಹಳ್ಳಿ
16.	ಚೆನ್ನಗಿರಿ	ಚೆನ್ನಗಿರಿ	ಕಾರಿಗನೂರು
17.	ಶಿವಮೊಗ್ಗ	ಶಿವಮೊಗ್ಗ	ಗೊಂದಿಚಟ್ನಳ್ಳಿ
18.	ಹೊಸನಗರ	ಹೊಸನಗರ	ಮಾರುತಿಪುರ
19.	ಭದ್ರಾವತಿ	ಭದ್ರಾವತಿ	ದೂಣಬಘಟ್ಟ
20.	ಶಿಕಾರಿಪುರ	ಶಿಕಾರಿಪುರ	ಹೊಸೂರು
21.	ಚೆನ್ನಗಿರಿ	ಚೆನ್ನಗಿರಿ	ಹಿರೇಕೊಬಲೂರು
22.	ತುಮಕೂರು	ತುಮಕೂರು	ರಾಮಗೊಂಡನಹಳ್ಳಿ
23.	ಕೊರಟಗೆರೆ	ಕೊರಟಗೆರೆ	ಎಲಚೆಗೆರೆ

24.	ತಿಪಟೂರು	ತಿಪಟೂರು	ತಾಳ್ಕೆ
25.	ಕಳ್ಳಂಬೆಳ್ಳ	ಗುಬ್ಬಿ	ಹಾಗಲವಾಡಿ
26.	ಟಿ. ನರಸೀಪುರ	ಟಿ. ನರಸೀಪುರ	ದೊಡ್ಡಮೆಳಗೋಡು
27.	ಚಾಮರಾಜನಗರ	ನಂಜನಗೂಡು	ದೊಡ್ಡಕಾಲಂದೆ
28.	ನಂಜನಗೂಡು	ನಂಜನಗೂಡು	ಹಿಡಿಯಾಲ
29.	ಚಾಮರಾಜ	ಮೈಸೂರು	ಮದ್ದೂರು
30.	ಸಂತೆಮಾರಳ್ಳಿ	ಚಾಮರಾಜನಗರ	ಚಂದಕವಾಡಿ
31.	ಚಾಮರಾಜನಗರ	ಚಾಮರಾಜನಗರ	ಹರದನಹಳ್ಳಿ
32.	ಹೆಚ್. ಡಿ. ಕೋಟೆ	ಹೆಚ್. ಡಿ. ಕೋಟೆ	ದೊಡ್ಡಬೈರನಹಟ್ಟಿ
33.	ಕೊಳ್ಳೇಗಾಲ	ಕೊಳ್ಳೇಗಾಲ	ಮೆದುವನಹಳ್ಳಿ
34.	ಕಡೂರು	ಕಡೂರು	ಗರ್ಜೆ
35.	ಮೂಡಿಗೆರೆ	ಮೂಡಿಗೆರೆ	ಬೆಟ್ಟಗೆರೆ
36.	ತರೀಕೆರೆ	ತರೀಕೆರೆ	ಮುಡುಗೋಡು
37.	ತರೀಕೆರೆ	ತರೀಕೆರೆ	ಶಿವನಿ
38.	ಬೆಳ್ತಂಗಡಿ	ಬೆಳ್ತಂಗಡಿ	ಇಂದಬೆಟ್ಟು
39.	ಬಂಟ್ವಾಳ	ಬಂಟ್ವಾಳ	ಅಳಿಕೆ
40.	ಕಾಪುರ	ಕಾರ್ಕಳ	ಈದು
41.	ಕುಂದಾಪುರ	ಕುಂದಾಪುರ	ಕೊರ್ಗಿ
42.	ಅರಕಲಗೂಡು	ಅರಕಲಗೂಡು	ಹುಲಿಕಲ್
43.	ಹೊಳೆನರಸೀಪುರ	ಹೊಳೇನರಸೀಪುರ	ಓಡನಳ್ಳಿ
44.	ಸಕಲೀಪುರ	ಸಕಲೀಪುರ	ಒಣಗೂರಕೂಡ ರಸ್ತೆ
45.	ಅರಸೀಕೆರೆ	ಅರಸೀಕೆರೆ	ಹಿರಿಸಾದರಹಳ್ಳಿ
46.	ಮದ್ದೂರು	ಮದ್ದೂರು	ಬೆಟ್ಟಳಲಿ
47.	ಕಿರಿಗಾವಲು	ಮಳವಳ್ಳಿ	ಕುಂದೂರು
48.	ಕೆ. ಆರ್. ಪೇಟೆ	ಕೆ. ಆರ. ಪೇಟೆ.	ಆಫ್‌ಲಯ
49.	ಕಿರಿಗಾವಲು	ಮಳವಳ್ಳಿ	ಚಿನ್ನಪಿಳ್ಳೆಕೊಪ್ಪಲು
50.	ಮಳವಳ್ಳಿ	ಮಳವಳ್ಳಿ	ರಾಗಿಬೊಮ್ಮನಹಳ್ಳಿ
51.	ಕೆರೆಗೋಡು	ಮಂಡ್ಯ	ಬಿ. ಹೊಸೂರು
52.	ಗೋಕಾಕ್	ಗೋಕಾಕ್	ತವಗಾ
53.	ಅಥಣಿ	ಅಥಣಿ	ಶಿವಗೂರು
54.	ಬೈಲಹೊಂಗಲ	ಬೈಲಹೊಂಗಲ	ಬುಡರಕಟ್ಟಿ
55.	ರಾಮದುರ್ಗ	ರಾಮದುರ್ಗ	ಮುದಕವಿ
56.	ಚಿಕ್ಕೋಡಿ	ಚಿಕ್ಕೋಡಿ	ಇಂಗಳಿ
57.	ಹುಕ್ಕೇರಿ	ಹುಕ್ಕೇರಿ	ಬಡಕುಂದ್ರಿ
58.	ಗುಳೇದಗುಡ್ಡ	ಹುನಗುಂದ	ನಾಗೂರು

59.	ಇಂಡಿ	ಇಂಡಿ	ಲಚ್ಯಾಣ
60.		ಬಿಜಾಪುರ	ಕಣ್ಣೂರು
61.	ಮುದ್ದೇಬಿಹಾಳ್	ಮುದ್ದೇಬಿಹಾಳ್	ಅಡವಿಸೋಮನಾಳ್
62.	ಚಳಗಿ	ಜಮಖಂಡಿ	ಗೋಟಿ
63.	ಬಾದಾಮಿ	ಬಾದಾಮಿ	ಅಲುಕುರ್ಕಿ
64.	ಮುದೋಳ್	ಮುದೋಳ್	ಮುಳಗುಡ್ಡ
65.	ತಿಕ್ಕೋಟ	ಬಿಜಾಪುರ	ಹೊನಗನಹಳ್ಳಿ
66.	ಹುಬ್ಬಳ್ಳಿ (ಗ್ರಾಮೀಣ)	ಹುಬ್ಬಳ್ಳಿ	ಶಿರಗುಪ್ಪಿ
67.	ಬ್ಯಾಡಗಿ	ರಾಣಿಬೆನ್ನೂರು	ಸುಣಕಲ್ ಬಿದರಿ
68.	ರೋಣ	ರೋಣ	ಹಿರೇಹಾಳ್
69.	ಶಿರಹಟ್ಟಿ	ಶಿರಹಟ್ಟಿ	ಯಳವತ್ತಿ
70.	ಹಾವೇರಿ	ಹಾವೇರಿ	ಕುರುಬಗೊಂಡ
71.	ಮುಂಡರಗಿ	ಮುಂಡರಗಿ	ಕಲಕೇರಿ
72.	ಗದಗ	ಗದಗ	ನಾಗವಿ
73.	ನವಲಗುಂದ	ನವಲಗುಂದ	ಜಾಪೂರು
74.	ಕಾರವಾರ	ಮುಂಡಗೋಡ	ಹರಿಶಿನಕೇರಿ
75.	ಕಾರವಾರ	ಜೋಯಿಡಾ	ಡಿಗ್ಗಿ
76.	ಶಿರ್ಸಿ	ಸಿದ್ದಾಪುರ	ದೊಡ್ಡಮನೆ
77.	ಅಳಂದ	ಅಳಂದ	ಇಲ್ಲಳ್ಳಿ
78.	ಯಾದಗಿರಿ	ಯಾದಗಿರಿ	ಲಿಂಗೇರಿ ಸ್ಟೇಷನ್
79.	ದೇವರ್ಗಿ	ದೇವರ್ಗಿ	ಮುಂದೇವಾಡ
80.	ಶಹಾಪೂರ್	ಶಹಾಪೂರ್	ಚಾಮನಾಳ
81.	ಸುರಪುರ	ಸುರಪುರ	ಶ್ರೀನಿವಾಸಪುರ
82.	ಸೇಡಂ	ಸೇಡಂ	ಮದನಗ್ರಾಮ
83.	ಹರಪನಹಳ್ಳಿ	ಹರಪನಹಳ್ಳಿ	ಜಗ್ಗೀಹಳ್ಳಿ
84.	ಕುರುಗೋಡು	ಬಳ್ಳಾರಿ	ನಂಗನಡಕಲ್ಲು
85.	ಶಿರಗುಪ್ಪಿ	ಶಿರಗುಪ್ಪಿ	ಹಡ್ಡೊಪಳಿ
86.	ಬಸವಕಲ್ಯಾಣ	ಬಸವಕಲ್ಯಾಣ	ಬೇಲೂರ
87.	ಕಲ್ಮಳ	ರಾಯಚೂರು	ಹಿರೇಕೊಟ್ಟಕಲ್
88.	ಸಿಂಧನೂರು	ಸಿಂಧನೂರು	ಹಾಲಾಪುರ
89.	ಕುಷ್ಟಗಿ	ಕುಷ್ಟಗಿ	ಹಿರೇಮನ್ನಾಪುರ
90.	ಕೊಟ್ಟಳ	ಕೊಟ್ಟಳ	ಗಿಗ್ಗೇದ್ದಲ
91.	ಗಂಗಾವತಿ	ಗಂಗಾವತಿ	ಮುಪ್ಪೂರು
92.	ದೇವಿದುರ್ಗ	ದೇವಿದುರ್ಗ	ಹಿರೇಬೂದನೂರು

ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಹೆಬಸೂರು ಗ್ರಾಮಕ್ಕೆ ಆಯುರ್ವೇದ ಆಸ್ಪತ್ರೆ ಮಂಜೂರಾತಿ

411 (657) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದ ಹೆಬಸೂರ್ ಗ್ರಾಮಕ್ಕೆ ಆಯುರ್ವೇದ ಆಸ್ಪತ್ರೆಯ ಅವಶ್ಯಕತೆಯಿದೆಯೆಂದು ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಸದರಿ ಆಸ್ಪತ್ರೆ ಮಂಜೂರು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ: ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು)

1) ಹೌದು

2) ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ತೆರಯಲು ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಯ ಅನುಮೋದನೆಯೊಂದಿಗೆ ಕಳುಹಿಸಬೇಕಾಗಿದೆ. ಪ್ರಸ್ತುತದಲ್ಲಿ ಧಾರವಾಡ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿಯ ಅನುಮೋದನೆಯು ಇನ್ನೂ ಸ್ವೀಕೃತವಾಗಿರುವುದಿಲ್ಲ. ಸ್ಥಾಯಿ ಸಮಿತಿಯ ಅನುಮೋದನೆಯು ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿ ಮಹಾನಗರದ ಕಿಮ್ಸ್ ಸಂಸ್ಥೆಯ ನಿರ್ದೇಶಕರ ಕುರಿತು

412 (670) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಹುಬ್ಬಳ್ಳಿ ಮಹಾನಗರದ ಕಿಮ್ಸ್ ಸಂಸ್ಥೆಗೆ ನಿರ್ದೇಶಕರನ್ನು ಯಾವಾಗ ನೇಮಕ ಮಾಡಲಾಗುವುದು?

2) ಸದರಿ ನಿರ್ದೇಶಕರ ಸ್ಥಾನಕ್ಕೆ ಡಾ: ನಾಗಲೋಠಿ ಮಠ್ ಇವರನ್ನು ನೇಮಿಸಲಾಗುವುದೆಂಬುದು ನಿಜವೇ?

3) ನಿರ್ದೇಶಕರನ್ನು ಆದಷ್ಟು ಶೀಘ್ರ ನೇಮಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳುವುದೇ?

ಡಾ: ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ಕಿಮ್ಸ್ ಸಂಸ್ಥೆಗೆ ನಿರ್ದೇಶಕರನ್ನು ನೇಮಕ ಮಾಡುವ ಪ್ರಕ್ರಿಯೆ ಪ್ರಾರಂಭವಾಗಿದೆ.

2) ಇಲ್ಲ

3) ತೆಗೆದುಕೊಳ್ಳಲಾಗುವುದು.

ಮಂಗಳೂರು ನಗರದಲ್ಲಿ ಮಲೇರಿಯಾ ರೋಗ ತಡೆಗಟ್ಟುವುದು

413 (721) ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) 1997ನೇ ಡಿಸೆಂಬರ್ ನಿಂದ ಜನವರಿ 98ರ ವರೆಗೆ ಮಂಗಳೂರು ಮಹಾನಗರದಲ್ಲಿ ಮಲೇರಿಯಾ ರೋಗಿಗಳು ಎಷ್ಟು?

2) ಸರ್ಕಾರಿ ಆಸ್ಪತ್ರೆ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿರುವ ಸಂಖ್ಯೆ ಎಷ್ಟು?

3) ಆರೋಗ್ಯ ಇಲಾಖೆಯ ವತಿಯಿಂದ ಮಲೇರಿಯಾ ರೋಗವನ್ನು ತಡೆಗಟ್ಟಲು ಮಂಗಳೂರು ಉಳ್ಳಾಲ, ಸೂರತ್ಕಲ್ ಪ್ರದೇಶಗಳಲ್ಲಿ ಕೈಗೊಂಡಿರುವ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಮಂಗಳೂರು ಮಹಾನಗರದಲ್ಲಿ ಡಿಸೆಂಬರ್ 97 ರಿಂದ ಜನವರಿ 98ರ ವರೆಗೆ ಒಟ್ಟು 1270 ಮಲೇರಿಯಾ ಪ್ರಕರಣಗಳು ವರದಿಯಾಗಿರುತ್ತವೆ.

2) ಮೇಲ್ಕಂಡ ಎಲ್ಲಾ 1270 ಮಲೇರಿಯಾ ಪ್ರಕರಣಗಳು ಸರ್ಕಾರಿ ಆಸ್ಪತ್ರೆ ಮತ್ತು ಆರೋಗ್ಯ ಸಿಬ್ಬಂದಿಯ ಮೂಲಕ ಪತ್ತೆ ಹಚ್ಚಲಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಕಂಡು ಬಂದ ಮಲೇರಿಯಾ ಪ್ರಕರಣಗಳ ಅಂಕಿ ಅಂಶಗಳು ವರದಿ ಆಗಿರುವುದಿಲ್ಲ.

3) ಆರೋಗ್ಯ ಇಲಾಖೆಯ ವತಿಯಿಂದ ಮಲೇರಿಯಾ ನಿಯಂತ್ರಿಸಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಅ) ಮಂಗಳೂರು ನಗರದಲ್ಲಿ ನಾಲ್ಕು ಸ್ಥಳಗಳಲ್ಲಿ ಮಲೇರಿಯಾ ಚಿಕಿತ್ಸಾಲಯಗಳನ್ನು ಸ್ಥಾಪಿಸಿ ಕಾರ್ಯನಿರ್ವಹಿಸುತ್ತಿವೆ. ಇಲ್ಲ ಜ್ವರ ಪೀಡಿತರ ರಕ್ತ ತಪಾಸಣೆ ನಡೆಸಿ ಕೂಡಲೇ ಚಿಕಿತ್ಸೆ ನೀಡಲಾಗುತ್ತಿದೆ. ಸಾಕಷ್ಟು ಪ್ರಮಾಣದಲ್ಲಿ ಮಲೇರಿಯಾ ನಿರೋಧಕ ಔಷಧಿ ಗುಳಿಗೆಗಳನ್ನು ಸರಬರಾಜು ಮಾಡಲಾಗಿದೆ.

ಆ) ಮಂಗಳೂರು ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಪ್ರದೇಶದಲ್ಲಿ ಕಾರ್ಮಿಕರ ಸಕ್ರೀಯ ರಕ್ತ ಲೇಪಣೆ ಸಂಗ್ರಹಣೆ ಪರೀಕ್ಷೆ ಮತ್ತು ಮಲೇರಿಯಾ ಪ್ರಕರಣಗಳಿಗೆ ಚಿಕಿತ್ಸೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ನಗರ ಪ್ರದೇಶದಲ್ಲಿ ಸೊಳ್ಳೆ ನಿಯಂತ್ರಣ ಕಾರ್ಯಕ್ರಮಕ್ಕೆ ಕೀಟನಾಶಕಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡಲಾಗಿದೆ.

ಈ) ಉಳ್ಳಾಲ ಮತ್ತು ಸೂರತ್ಕಲ್ ಪ್ರದೇಶಗಳಲ್ಲಿ ಸಕ್ರಿಯ ರಕ್ತ ಲೇಪನ ಸಂಗ್ರಹಣೆಗಾಗಿ ಆರೋಗ್ಯ ಕಾರ್ಯಕರ್ತರು ಮನೆ, ಮನೆಗೆ ಭೇಟಿ ನೀಡಿ ಜ್ವರ ಪೀಡಿತರಿಗೆ ಮತ್ತು ಮಲೇರಿಯಾ ಪ್ರಕರಣಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಮಲೇರಿಯಾ ಪರೀಕ್ಷೆ ಮತ್ತು ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.

ಉ) ಮಲೇರಿಯಾ ರೋಗ ಮತ್ತು ನಿಯಂತ್ರಣದ ಬಗ್ಗೆ ಜನ ಜಾಗೃತಿ ಮೂಡಿಸಲು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

ಸುರತ್ಕಲ್ ಕ್ಷೇತ್ರದ ಪೆರ್ಮುದೆ ಪಂಚಾಯತ್ ಕಾರ್ಯಾಲಯದ ಬಗ್ಗೆ

414 (353) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸುರತ್ಕಲ್ ಕ್ಷೇತ್ರದ ಪೆರ್ಮುದೆ ಪಂಚಾಯತ್‌ನ ಕಾರ್ಯಾಲಯ ಗ್ರಾಮದ ಕೊನೆಯಲ್ಲಿದ್ದು ಸಾರ್ವಜನಿಕರು ತೊಂದರೆಗೊಳಗಾಗುತ್ತಿರುವುದು ನಿಜವೆ?

2) ಸದರಿ ಪಂಚಾಯತ್ ಆಫೀಸನ್ನು ಸ್ಥಳಾಂತರಿಸಿ ಕುತ್ತೆತ್ತೂರು ಪ್ರದೇಶಕ್ಕೆ ಸ್ಥಳಾಂತರಿಸುವ ಬೇಡಿಕೆ ಸರಕಾರದ ಪರಿಶೀಲನೆಯಲ್ಲಿದೆಯೇ?

3) ಪಕ್ಕದ ಬಾಳ ಪಂಚಾಯತಿನ ಹೆಚ್ಚಿನ ಭಾಗ ಎಂ. ಆರ್. ಪಿ. ಎಲ್. ಗೆ ಹೋಗಿರುವುದರಿಂದ ಪೆರ್ಮುದೆ ಪಂಚಾಯತ್‌ನ್ನು ವಿಭಜಿಸಿ ಬಾಳಕ್ಕೆ ಸೇರಿಸುವ ಪ್ರಸ್ತಾವ ಸರಕಾರದ ಮುಂದೆ ಇದೆಯೇ?

4) ಹಾಗಿದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

1) ಹೌದು

2) ಇಲ್ಲ

3) ಹೌದು

4) ಜಿಲ್ಲಾಧಿಕಾರಿ, ಮಂಗಳೂರು ರವರು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರಡಿಯಲ್ಲಿ ಕ್ರಮ ಕೈಗೊಳ್ಳುತ್ತಿದ್ದಾರೆ.

ರಾಜ್ಯದಲ್ಲಿರುವ ಆಯುರ್ವೇದ ಆಸ್ಪತ್ರೆಗಳ ಕುರಿತು

415 (354) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ 1996 ರಿಂದ ಇದುವರೆವಿಗೂ ಎಷ್ಟು ಆಯುರ್ವೇದ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ? ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲಿ ವೈದ್ಯರು ಇದ್ದಾರೆಯೇ? ಸ್ವಂತ ಕಟ್ಟಡಗಳು ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

2) ಆಯುರ್ವೇದ ವೈದ್ಯ ಪದ್ಧತಿಯ ಪ್ರಚಾರಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳು ಯಾವುವು?

3) ಶಾಸಕರ ಭವನದ ಆಯುರ್ವೇದ ಆಸ್ಪತ್ರೆಯ ಉಪಯೋಗಕ್ಕೆ ಔಷಧ ವಿತರಣೆಯ ವಾರ್ಷಿಕ ಮೊತ್ತವೆಷ್ಟು?

4) ಈ ಮೊತ್ತದಿಂದ ಸಾಕಷ್ಟು ಔಷಧ ಸಂಗ್ರಹ ಇಲ್ಲದೆ ಶಾಸಕರು ತೊಂದರೆ ಇದಾಗುತ್ತಿರುವುದು ನಿಜವೇ? ಈ ಬಗ್ಗೆ ಪರಿಹಾರ ಕ್ರಮ ಕೈಗೊಳ್ಳಲಾಗುವುದೆ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 1996 ರಿಂದ ಇದುವರೆವಿಗೂ ರಾಜ್ಯದಲ್ಲಿ ಒಂದು ಜಿಲ್ಲಾಮಟ್ಟದ ಆಯುರ್ವೇಧ ಆಸ್ಪತ್ರೆಯನ್ನು ಬೀದರ್‌ನಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ 16 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳನ್ನು ಸ್ಥಾಪಿಸಲಾಗಿದೆ. ರಾಜ್ಯದ ಸರ್ಕಾರಿ ಆಯುರ್ವೇದ ಆಸ್ಪತ್ರೆ : ಚಿಕಿತ್ಸಾಲಯಗಳಲ್ಲಿ ಒಟ್ಟು 31 ವೈದ್ಯರ ಹುದ್ದೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಹುದ್ದೆಗಳು ಭರ್ತಿಯಾಗಿವೆ. ಪ್ರಸ್ತುತದಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಜಿಲ್ಲಾ ಆಸ್ಪತ್ರೆಗಳ ಸಂಖ್ಯೆ : 5

2) ಸರ್ಕಾರಿ ಆಯುರ್ವೇದ ಕಾಲೇಜುಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಆರೋಗ್ಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಶಿಬಿರಗಳಲ್ಲಿ ಸಾರ್ವಜನಿಕರಿಗೆ ಚಿಕಿತ್ಸೆ ಗಿಡಮೂಲಿಕೆಗಳ ಮಹತ್ವದ ಬಗ್ಗೆ ಪ್ರಚಾರ ನೀಡಲಾಗುತ್ತಿದೆ. ಇದರ ಜೊತೆಗೆ ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ ನಿರ್ದೇಶನಾಲಯದಲ್ಲಿರುವ ಪ್ರಕಟಣಾ ವಿಭಾಗದಿಂದ ಕಿರು ಹೊತ್ತಿಗೆಗಳನ್ನು ವಿವಿಧ ವಿಷಯಗಳ ಬಗ್ಗೆ ಪ್ರಕಟಿಸಲಾಗುತ್ತಿದೆ. ರೇಡಿಯೋ ಹಾಗೂ ದೂರದರ್ಶನ ಮಾಧ್ಯಮದಲ್ಲೂ ಸಹ ಇಲಾಖೆಯ ವೈದ್ಯಾಧಿಕಾರಿಗಳ ಅಧ್ಯಾಪಕರುಗಳ ಗ್ರಾಮೀಣ ಆರೋಗ್ಯದ ಬಗ್ಗೆ ಭಾಷಣಗಳು ಪ್ರಚಾರಗೊಳ್ಳುತ್ತಿವೆ.

3) ಪ್ರಸಕ್ತ ಸಾಲಿನಿಂದ ಈ ಚಿಕಿತ್ಸಾಲಯದ ಉಪಯೋಗಕ್ಕೆ (1997-98) ಔಷಧ ವಿತರಣೆಯ ಮೊತ್ತ ರೂ. 50,000.00 ಗಳು.

4) 1996-97 ನೇ ಸಾಲಿನವರೆಗೆ ಈ ಚಿಕಿತ್ಸಾಲಯಕ್ಕೆ ಔಷಧಗಳ ಖರೀದಿಗಾಗಿ ರೂ. 25,000.00 ಗಳ ಆಯವ್ಯಯವನ್ನು ಒದಗಿಸಲಾಗುತ್ತಿತ್ತು. ಆದರೆ ಈ ಆಯವ್ಯಯವು ಔಷಧಿಗಳಿಗಾಗಿ ಕಡಿಮೆಯಾಗಿದೆ ಹಾಗೂ ಇದರಿಂದ ಮಾನ್ಯ ಶಾಸಕರುಗಳಿಗೆ ತೊಂದರೆಯಾಗಿದೆ ಎಂದು ಕಂಡು ಬಂದ ಕಾರಣ 1997-98ನೇ ಸಾಲಿನಿಂದ ಈ ಆಯವ್ಯಯವನ್ನು ರೂ. 25,000.00 ಗಳಿಂದ ರೂ. 50,000.00 ಗಳಿಗೆ ಹೆಚ್ಚಿಸಲಾಗಿದೆ. ಒಂದು ವೇಳೆ ಇನ್ನು ಮುಂದೆಯೂ ಔಷಧ ಖರೀದಿಗೆ ಈ ಆಯವ್ಯಯವು ಕೊರತೆಯೆಂದು ಕಂಡು ಬಂದರೆ ಆಯವ್ಯಯ ಅವಕಾಶ ಹೆಚ್ಚಿಸಲು ಪ್ರಸ್ತಾಪಿಸಲಾಗುವುದು.

ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಬಡ್ತಿ

417 (345) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) 1994-95 ನೇ ಸಾಲಿನಲ್ಲಿ ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ ಮುಖ್ಯೋಪಾಧ್ಯಾಯರಾಗಿ ಒಟ್ಟು ಎಷ್ಟು ಮಂದಿಗೆ ಬಡ್ತಿ ನೀಡಲಾಗಿದೆ.

2) 1994 ರ ಮೊದಲು ಬಡ್ತಿ ನೀಡಿದವರಲ್ಲಿ ಎಷ್ಟು ಮಂದಿ ಬಡ್ತಿಯ ಆದೇಶವನ್ನು ಪಾಲಿಸಿದ್ದಾರೆ. ಇವರಲ್ಲಿ ನಿರಾಕರಿಸಿದ ಶಿಕ್ಷಕರಿಗೆ ಅನೇಕ ಸಲ ಆದೇಶಗಳನ್ನು ನೀಡಿ ಅವರಿಗೆ ಬಡ್ತಿಯನ್ನು ಕೊಡಲು ಕಾರಣವೇನು?

3) ಆದರೆ 1994-95 ರಲ್ಲಿ ಈ ಬಡ್ತಿ ಹೊಂದಿದವರಿಗೆ ಒಂದೇ ಬಾರಿ ಆದೇಶವನ್ನು ನೀಡಿ ಅವರ ಬಡ್ತಿ ಮತ್ತು ಸ್ಥಗಿತ ವೇತನವನ್ನು ತಡೆ ಹಿಡಿಯಲಾಗಿದೆಯೇ? ಈ ರೀತಿ ನಿಯಮ ಬದಲಾಯಿಸಲು ಕಾರಣಗಳೇನು?

4) ಕೆ. ಸಿ. ಎಸ್. ಆರ್. ನಿಯಮ ಪ್ರಕಾರ ಮುಂಬಡ್ತಿಗೂ ಸ್ಥಗಿತ ವೇತನಕ್ಕೂ ಯಾವ ಸಂಬಂಧವಿಲ್ಲದಿದ್ದರೂ ಸ್ಥಗಿತ ವೇತನವನ್ನು ತಡೆ ಹಿಡಿಯಲು ಕಾರಣವೇನು:

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 1994-95 ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಸಹ ಶಿಕ್ಷಕರಿಗೆ 2860 ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಲಾಗಿದೆ.

2) 1994ರ ಮೊದಲು ಬಡ್ತಿ ನೀಡಿದವರಲ್ಲಿ ಒಟ್ಟು 7867 ಶಿಕ್ಷಕರು ಬಡ್ತಿಯ ಆದೇಶವನ್ನು ಪಾಲಿಸಿದ್ದಾರೆ. ಬಡ್ತಿ ನಿರಾಕರಿಸಿದ ಶಿಕ್ಷಕರಿಗೆ ಮತ್ತೆ ಬಡ್ತಿ ಆದೇಶಗಳನ್ನು ನೀಡಿರುವುದಿಲ್ಲ.

3) ಬಡ್ತಿ ನಿರಾಕರಿಸಿರುವ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮತ್ತೆ ಬಡ್ತಿಯನ್ನು ನೀಡಿರುವುದಿಲ್ಲ. ಬಡ್ತಿ ನಿರಾಕರಿಸಿರುವ ಶಿಕ್ಷಕರಿಗೆ ಸರ್ಕಾರದ ಆದೇಶ ಸಂಖ್ಯೆ : ಎಫ್ ಡಿ 3 : ಎಸ್ ಆರ್ ಪಿ 96 : ದಿನಾಂಕ : 18.03.96ರ ಕಂಡಿಕೆ 4 ರಲ್ಲಿ ಬಡ್ತಿ ನಿರಾಕರಿಸಿದವರಿಗೆ ಸ್ಥಗಿತ ವೇತನ ಬಡ್ತಿಯನ್ನು ಕೊಡಬಾರದೆಂಬ ಆದೇಶದ ಹಿನ್ನೆಲೆಯಲ್ಲಿ ಸ್ಥಗಿತ ವೇತನ ಬಡ್ತಿಯನ್ನು ನೀಡಿರುವುದಿಲ್ಲ.

4) ಬಡ್ತಿಯನ್ನು ನಿರಾಕರಿಸಿದವರಿಗೆ ಸ್ಥಗಿತ ವೇತನ ಬಡ್ತಿಯನ್ನು ಸರ್ಕಾರದ ಆದೇಶ ಸಂಖ್ಯೆ : ಎಫ್ ಡಿ 3 : ಎಸ್ ಆರ್ ಪಿ 96 : ದಿನಾಂಕ 18.03.96 ರ ಕಂಡಿಕೆ - 4ರ ಪ್ರಕಾರ ಸ್ಥಗಿತ ವೇತನ ಬಡ್ತಿಯನ್ನು ತಡೆ ಹಿಡಿಯಲಾಗಿದೆಯೇ ಹೊರತು ಕೆ.ಸಿ. ಎಸ್. ಆರ್. ನಿಯಮವನ್ನು ಇಲ್ಲಿ ಅಳವಡಿಸಲಾಗುತ್ತಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1994-95 ನೇ ಸಾಲಿನಲ್ಲಿ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡಿದ ಸಹ ಶಿಕ್ಷಕರ ಸಂಖ್ಯೆ	1994ರ ಮೊದಲು ಬಡ್ತಿಯ ಆದೇಶವನ್ನು ಪಾಲಿಸಿದವರು
1)	ಬೆಂಗಳೂರು ಉತ್ತರ ಜಿಲ್ಲೆ	14	14
2)	ಬೆಂಗಳೂರು ದಕ್ಷಿಣ	65	38
3)	ಬೆಂಗಳೂರು ಗ್ರಾಮಾಂತರ	ಬಡ್ತಿ ನೀಡಿಲ್ಲ	-
4)	ಕೋಲಾರ	187	956
5)	ತುಮಕೂರು	650	650
6)	ಶಿವಮೊಗ್ಗ	107	801
7)	ಚಿತ್ರದುರ್ಗ	ಬಡ್ತಿ ನೀಡಿಲ್ಲ	980
8)	ಮೈಸೂರು	194	185
9)	ಮಂಡ್ಯ	61	518
10)	ಹಾಸನ	123	81
11)	ಚಿಕ್ಕಮಗಳೂರು	112	196
12)	ಕೊಡಗು	24	134
13)	ದಕ್ಷಿಣ ಕನ್ನಡ	177	428

14)	ಬೆಳಗಾಂ	210	73
15)	ಬಿಜಾಪುರ	194	442
16)	ಧಾರವಾಡ	238	1414
17)	ಉತ್ತರ ಕನ್ನಡ	98	436
18)	ಗುಲ್ಬರ್ಗಾ	110	40
19)	ಬಳ್ಳಾರಿ	107	236
20)	ರಾಯಚೂರು	126	122
21)	ಬೀದರ್	63	123
	ಒಟ್ಟು	**2860**	**7867**

ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ವಿಸ್ತರಣಾ ಯೋಜನೆ

418 (330) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಯ ವಿಸ್ತರಣಾ ಕಾರ್ಯಕ್ರಮದ ಅಂಗವಾಗಿ ಪ್ರಾರಂಭಿಸಲಾಗಿರುವ ಹೊಸ ಆಸ್ಪತ್ರೆಯ ಕಟ್ಟಡದ ಅಂದಾಜು ಮೊತ್ತ ಎಷ್ಟು ಮತ್ತು ಯಾವ ವರ್ಷದಲ್ಲಿ ಸದರೀ ಆಸ್ಪತ್ರೆ ಕಟ್ಟಡದ ಕಾಮಗಾರಿಯನ್ನು ಪ್ರಾರಂಭ ಮಾಡಲಾಯಿತು?

2) 1995-96, 1996-97 ಮತ್ತು 1997-98 ನೇ ಸಾಲುಗಳಲ್ಲಿ ಈ ಕಟ್ಟಡ ನಿರ್ಮಾಣಕ್ಕೆ ಒದಗಿಸಿದ ಹಣವೆಷ್ಟು?

3) ಮೇಲ್ಕಂಡ ಮೂರು ಸಾಲುಗಳಲ್ಲಿ ಸಾಧಿಸಿದ ಆರ್ಥಿಕ ಮತ್ತು ಭೌತಿಕ ಸಾಧನೆ ಎಷ್ಟು?

4) ಆಸ್ಪತ್ರೆ ಕಟ್ಟಡವನ್ನು ಪೂರೈಸಲು ಇನ್ನೂ ಹಣ ಎಷ್ಟು ಬೇಕು ಮತ್ತು ಯಾವಾಗ ಪೂರೈಸಲಾಗುವುದು?

ಡಾ: ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ರೂ. 18.50 ಕೋಟಿಗಳ ಅಂದಾಜು ವೆಚ್ಚದಲ್ಲಿ 1992-93ರಲ್ಲಿ ಪ್ರಾರಂಭ ಮಾಡಲಾಯಿತು.

2) 1995-96 ರಲ್ಲಿ 100.00 ಲಕ್ಷ ರೂ.ಗಳು

1996-97 ರಲ್ಲಿ 50.00 ಲಕ್ಷ ರೂ.ಗಳು

1997-98 ರಲ್ಲಿ 15.00 ಲಕ್ಷ ರೂ.ಗಳು

ಅನುದಾನ ಈ ಕಾಮಗಾರಿಗೆ ನಿಗಧಿಪಡಿಸಿದೆ.

3) 1995-96 ರ ಸಾಲಿನಲ್ಲಿ ರೂ. 92.52 ಲಕ್ಷಗಳು

1996-97 ರ ಸಾಲಿನಲ್ಲಿ ರೂ. 50.83 ಲಕ್ಷಗಳು

ಹಾಗೂ 1997-98ರ ಸಾಲಿನಲ್ಲಿ (ಡಿಸೆಂಬರ್ 1997 ರವರೆಗೆ) ರೂ. 23.56 ಲಕ್ಷಗಲನ್ನು ಖರ್ಚು ಮಾಡಲಾಗಿದ್ದು ಪ್ರಸ್ತುತ ನೆಲಮಹಡಿ ಕಟ್ಟಡ ಹಾಗೂ ಇತರ ವಿಭಾಗಗಳ ಕಾಮಗಾರಿ ಪ್ರಗತಿಯಲ್ಲಿದೆ.

3) ಇನ್ನು ರೂ. 20.00 ಕೋಟಿ ರೂಪಾಯಿಗಳ ಅನುದಾನ ಅಗತ್ಯವಿದ್ದು ಅದನ್ನು ಒದಗಿಸಿಕೊಂಡು ಕಾಮಗಾರಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡ ಕುರಿತು

420 (333) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಎಷ್ಟು ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳ ಕಟ್ಟಡಗಳು ಅಪೂರ್ಣವಾಗಿವೆ?

2) ಅಪೂರ್ಣವಾಗಿದ್ದರೆ, ಸದರಿ ಪ್ರಥಮ ದರ್ಜೆ ಸರ್ಕಾರಿ ಕಾಲೇಜುಗಳ ಕಟ್ಟಡಗಳನ್ನು ಪೂರ್ಣಗೊಳಿಸಬೇಕಾದರೆ, ಬೇಕಾಗಿರುವ ಹಣ ಎಷ್ಟು? (ಕಾಲೇಜುವಾರು ವಿವರಗಳನ್ನು ನೀಡುವುದು)

3) 1996-97 ಮತ್ತು 1997-98 ನೇ ಸಾಲಿನಲ್ಲಿ ಪ್ರಗತಿಯಲ್ಲಿರುವ ಮೇಲ್ಕಂಡ ಕಾಲೇಜು ಕಟ್ಟಡಗಳಿಗೆ ಒದಗಿಸಿದ್ದ ಹಣ ಎಷ್ಟು? (ಪ್ರತಿ ಕಾಲೇಜು ಕಟ್ಟಡಗಳ ವಿವರಗಳನ್ನು ನೀಡಬೇಕು)

4) 1996-97 ಮತ್ತು 1997-98 ನೇ ಸಾಲಿನಲ್ಲಿ ಅಗತ್ಯ ಹಣವನ್ನು ಒದಗಿಸದೇ ಇದ್ದ ಕಾರಣ, ಕಳೆದ ಎರಡು ವರ್ಷಗಳಲ್ಲಿ ಕಾಮಗಾರಿ ಕುಂಟಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) 27

2) ರೂ. 324.00 ಲಕ್ಷ ಹಣ. (ಕಾಲೇಜುವಾರು ವಿವರವನ್ನು ಅನುಬಂಧ - 1 ರಲ್ಲಿ ನೀಡಲಾಗಿದೆ)

3) 1996-97 ನೇ ಸಾಲಿನಲ್ಲಿ ರೂ. 303.00 ಲಕ್ಷ

1997-98 ನೇ ಸಾಲಿನಲ್ಲಿ ರೂ. 50.00 ಲಕ್ಷ

(ಕಾಲೇಜುವಾರು ಪಟ್ಟಿಯನ್ನು ಅನುಬಂಧ - 2 ರಲ್ಲಿ ನೀಡಲಾಗಿದೆ)

4) ಹೌದು. ಈ ಕಾಮಗಾರಿಗಳಿಗೆ ರೂ. 324.00 ಲಕ್ಷಗಳು ಬೇಕಾಗಿದ್ದು, ಸಾಧ್ಯವಾದಷ್ಟು ಮಟ್ಟಿಗೆ 1998-99 ನೇ ಸಾಲಿನಲ್ಲಿ ಈ ಹಣವನ್ನು ಒದಗಿಸಿಕೊಂಡು ಕಾಮಗಾರಿಗಳನ್ನು ಹಂತಹಂತವಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ 1

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಕಾಲೇಜಿನ ಹೆಸರು	1995-96	1996-97	1997-98
1	2	3	4	5
1.	ಶ್ರೀನಿವಾಸಪುರ	3.29	0.35	0.10
2.	ಸಿರಾ	1.00	1.00	-
3.	ಅರಕಲಗೂಡು	1.50	-	-
4.	ಕೊಪ್ಪ, ಚಿಕ್ಕಮಗಳೂರು	0.50	-	-
5.	ಶ್ರೀರಂಗಪಟ್ಟಣ	0.10	1.00	0.20
6.	ಚನ್ನಪಟ್ಟಣ	2.00	0.50	0.10
7.	ಕೆ. ಆರ್. ಪುರಂ (ಮೊದಲ ಮಹಡಿ)	1.00	3.00	0.10
8.	ಮೂಡಿಗೆರೆ	0.15	4.69	-
9.	ಹೆಗ್ಗಡದೇವನಕೋಟೆ	1.00	1.00	0.50
10.	ಕಾರ್ಕಳ	1.00	-	0.50
11.	ಹೊಸಕೋಟೆ	1.00	5.00	0.50
12.	ಕೋಲಾರ ಮಹಿಳಾ ಕಾಲೇಜು	1.00	0.10	0.50
13.	ಮಂಡ್ಯ ಮಹಿಳಾ ಕಾಲೇಜು (ಹೆಚ್ಚುವರಿ ಕೊಠಡಿ)	0.50	-	-
14.	ನರಸಿಂಹರಾಜಪುರ ಮಹಿಳಾ ಕಾಲೇಜು	1.00	6.00	0.50
15.	ದೇವನಹಳ್ಳಿ	0.50	0.75	0.10
16.	ಸೊರಬ (ಹೆಚ್ಚುವರಿ ಕೊರಡಿ)	1.00	1.00	-
17.	ವಿಜ್ಞಾನ ಕಾಲೇಜು, ಹಾಸನ	1.00	1.00	0.20
18.	ಸಕಲೇಶಪುರ	1.00	3.00	0.20
19.	ಶಿಡ್ಲಘಟ್ಟ	2.00	1.00	0.50
20.	ಹೊಸದುರ್ಗ	2.00	4.00	2.00
21.	ವಿಜಯನಗರ, ಬೆಂಗಳೂರು	1.00	15.00	0.50
22.	ಹೋಂ ಸೈನ್ಸ್, ಬೆಂಗಳೂರು (ಲೈಬ್ರರಿ)	1.00	13.00	2.00
23.	ಕೊಣನೂರು (ಲೈಬ್ರರಿ ಹಾಲ್)	1.50	1.00	-
24.	ಹೊಸನಗರ (ಲೈಬ್ರಿ ಹಾಲ್)	1.00	3.00	0.20
25.	ಜಾವಗಲ್	1.00	1.00	0.50
26.	ತುರುವೇಕೆರೆ	1.00	2.00	0.50
27.	ಪಾವಗಡ	1.00	1.00	0.50

1	2	3	4	5
28.	ಚಳ್ಳಕೆರೆ	0.20	-	-
29.	ಕಲಾ ಕಾಲೇಜು, ಹಾಸನ (ಹೆಚ್ಚುವರಿ ಕೊರಡಿ)	1.60	0.10	0.50
30.	ವಿಜ್ಞಾನ ಕಾಲೇಜು, ಹಾಸನ (ಹೆಚ್ಚುವರಿ ಕೊರಡಿ)	1.61	-	-
31.	ಕುಣಿಗಲ್ (ಮೂರು ಮಹಡಿ)	1.00	0.50	0.50
32.	ಹೋಂ ಸೈನ್ಸ್ (ವಿದ್ಯಾರ್ಥಿ ನಿಲಯ)	2.00	-	-
33.	ಬೆಟ್ಟಂಪಾಡಿ	1.00	2.00	0.50
34.	ಕುಶಾಲನಗರ	1.00	5.00	0.10
35.	ಜಯಮಹಲ್	1.00	7.00	1.00
36.	ಮಹಾರಾಣಿ ಕಲಾ ಕಾಲೇಜು (ಲೈಬ್ರರಿ ಹಾಲ್)	1.00	6.00	0.50
37.	ಮಹಾರಾಣಿ ವಿಜ್ಞಾನ ಕಾಲೇಜು (ಲೈಬ್ರರಿ ಹಾಲ್)	1.00	8.00	0.50
38.	ಪಿರಿಯಾಪಟ್ಟಣ	1.00	2.00	0.50
39.	ಬೆಳ್ತಂಗಡಿ	1.00	2.00	0.10
40.	ಹಾಸನ (ಲೈಬ್ರರಿ ಬ್ಲಾಕ್)	1.00	1.20	0.10
41.	ಕೊಪ್ಪ (ಹೆಚ್ಚುವರಿ ಕೊರಡಿ)	1.00	-	-
42.	ಚಿಕ್ಕನಾಯಕನಹಳ್ಳಿ	1.00	1.00	0.20
43.	ಮುಳಬಾಗಿಲು	1.00	2.00	0.50
44.	ಹುಣಸೂರು	1.00	12.00	1.00
45.	ನ್ಯಾಮತಿ	1.00	5.00	1.40
46.	ಹೊಳೆಹೊನ್ನೂರು	1.00	2.00	0.50
47.	ಹಳೆಯಂಗಡಿ	1.00	2.00	-
48.	ಚನ್ನಗಿರಿ	1.00	2.00	-
49.	ಮಾಗಡಿ	1.00	2.00	0.50
50.	ಗುಬ್ಬಿ	1.00	8.00	0.10
51.	ಕೊರಟಗೆರೆ	2.00	2.00	-
52.	ಚಾಮರಾಜನಗರ	1.00	0.25	-
53.	ಬೆಟ್ಟಂಪಾಡಿ	1.00	1.00	0.50
54.	ಬೆಳ್ಳಾರೆ	1.60	0.50	-
55.	ಗಂಡಸಿ	1.00	2.00	0.20
56.	ಶಿಕಾರಿಪುರ	1.00	2.00	-
57.	ಚಿತ್ರದುರ್ಗ (ವಿಜ್ಞಾನ) ಗ್ರಂಥಾಲಯ ಲೈಬ್ರರಿ)	1.90	-	-
58.	ಮಂಡ್ಯ ಕಾಲೇಜು	0.50	-	-
59.	ವಾಮನಪದವು	2.00	6.00	0.50
60.	ಶಂಕರನಾರಾಯಣ	2.00	3.00	0.10
61.	ಹಿರಿಯೂರು	2.00	8.00	0.50

1	2	3	4	5
62.	ವಿಟ್ಲ	-	2.00	0.20
63.	ಸಾಗರ	-	5.00	0.50
64.	ಮೊಳಕಾಲ್ಮೂರು	-	2.00	0.50
65.	ಕಡೂರು	-	4.00	0.50
66.	ಕಾಪು	-	4.00	0.20
67.	ಶಿಡ್ಲಘಟ್ಟ (ಮೊದಲ ಮಹಡಿ)	-	4.00	0.20
68.	ರಾಮನಗರ	-	4.00	0.20
69.	ಕಲಾ ಕಾಲೇಜು ಮೈಸೂರು (ಹೆಚ್ಚುವರಿ ಕೊಠಡಿ)	-	5.00	0.20
70.	ನೇಸರ್ಗಿ	4.54	4.46	5.00
71.	ಯಲ್ಬರ್ಗಾ ಮಹಿಳಾ ಕಾಲೇಜು	2.50	20.13	-
72.	ಗಜೇಂದ್ರಗಡ	1.00	8.00	3.00
73.	ಅಕ್ಕಿಆಲೂರು	0.64	4.00	0.25
74.	ರೋಣ	0.75	-	1.75
75.	ಯಲ್ಲಾಪುರ	0.50	2.25	0.60
76.	ಬೀಳಗಿ	1.00	4.84	0.50
77.	ಕಾರವಾರ ಕಲಾ ಮತ್ತು ವಿಜ್ಞಾನ ಕಾಲೇಜು (ಹೆಚ್ಚುವರಿ ಕೊಠಡಿ)	-	4.00	1.00
78.	ಅಕ್ಕಿಆಲೂರು (ಮೊದಲ ಮಹಡಿ)	-	-	3.00

ANNEXURE - II

(Rs. In Lakhs)

Sl. No.	Name of the College	District	Budget required for completion 1998-99 (Provision List)
1	2	3	4
1.	G.F.C. Devanahally	Bangalore	02.60
2.	" H.G. Kote	Mysore	12.00
3.	" Karkala	D.K.	2.00
4.	" Hosakote	Bangalore	20.00
5.	" Narasimharajapura	Chikkamagalur	09.00
6.	" Hosangar	Shimoga	02.00

1	2	3	4
7.	" Javagal	Hasan	12.00
8.	" Turuvekere	Tumkur	6.50
9.	" Bettampadi	D.K.	6.00
10.	" Beelagi	Bijapur	5.00
11.	" Akkialur	Dharwad	1.50
12.	" Rona	"	8.20
13.	" Koratagere	Tumkur	1.00
14.	" Vamanapadavu	D.K.	33.00
15.	" Yellapur	U.K.	4.00
16.	" Gajendragad	Dharwad	3.00
17.	" Nesargi	Belgam	4.00
18.	" Sakaleshpura	Hassan	10.00
19.	" Mulbagal	Kolar	3.50
20.	" Chennagiri	Shimoga	3.60
21.	" Hunsur	Mysore	47.00
22.	" Srirang Patna	Mandya	12.00
23.	" Ramanagar	Bangalore	06.00
24.	" Ajjampura	Chikkamagalore	18.00
25.	" Vittala	D.K.	52.00
26.	" Shankaranarayan	D.K.	28.00
27.	" Kushalanagar	Kodagu	18.00
		Total	**342.00**

ಅನಿವಾಸಿ ಭಾರತೀಯರಿಗೆ ವೈದ್ಯಕೀಯ ಪ್ರವೇಶದಲ್ಲಿ ಮೀಸಲಾತಿ

422 (682) ಶ್ರೀ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಹಾಗೂ ಇವುಗಳಲ್ಲಿರುವ ಸೀಟುಗಳ ಸಂಖ್ಯೆ ಎಷ್ಟು?

2) ಸರ್ಕಾರಿ ಕಾಲೇಜುಗಳಲ್ಲಿ ಅನಿವಾಸಿ ಭಾರತೀಯರಿಗೆ ಸೀಟುಗಳನ್ನು ಮೀಸಲಿಡಲಾಗಿದೆಯೇ?

3) ಹಾಗಿದ್ದಲ್ಲಿ ಪ್ರತಿ ಸರ್ಕಾರಿ ಕಾಲೇಜುಗಳಲ್ಲಿ ಎಷ್ಟು ಸೀಟುಗಳನ್ನು ಮೀಸಲಿಡಲಾಗಿದೆ?

4) ಕಳೆದ 3 ವರ್ಷಗಳಲ್ಲಿ ಇದರಲ್ಲಿ ಭರ್ತಿಯಾದ ಸೀಟುಗಳೆಷ್ಟು?

ಡಾ॥ ಎಂ. ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

1) ರಾಜ್ಯದಲಿ ಒಟ್ಟು 4 ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳು ಮತ್ತು ಒಂದು ಸರ್ಕಾರಿ ದಂತ ವಿದ್ಯಾಲಯವು ಇರುವುವು ಮತ್ತು ಈ ವಿದ್ಯಾಲಯಗಳಲ್ಲಿ ಇರುವ ಪ್ರವೇಶ ಸಾಮರ್ಥ್ಯ ಈ ಕೆಳಕಂಡಂತಿದೆ.

ಅ)	ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು	-	150
ಆ)	ಮೈಸೂರು ವೈದ್ಯಕೀಯ ಮಹಾ ವಿದ್ಯಾಲಯ, ಮೈಸೂರು	-	100
ಇ)	ವಿಜಯನಗರ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಬಳ್ಳಾರಿ	-	100
ಈ)	ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಹುಬ್ಬಳ್ಳಿ	-	50
ಉ)	ಸರ್ಕಾರಿ ದಂತ ವೈದ್ಯಕೀಯ ವಿದ್ಯಾಲಯ ಬೆಂಗಳೂರು	-	60

2) ಇಲ್ಲ

3) ಉದ್ಭವಿಸುವುದಿಲ್ಲ

4) ಉದ್ಭವಿಸುವುದಿಲ್ಲ

ಕಾಲೇಜು ಶಿಕ್ಷಕರ ನೇಮಕಾತಿಯಲ್ಲಿ ಎನ್.ಇ.ಟಿ. ಪರೀಕ್ಷೆ ಕಡ್ಡಾಯ

423 (681) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕಾಲೇಜು ಶಿಕ್ಷಕರ ನೇಮಕಾತಿಯಲ್ಲಿ ಸರ್ಕಾರ ಎನ್. ಇ.ಟಿ. ಪಾಸಾಗಿರಬೇಕೆಂಬ ಅಂಶವನ್ನು ಕಡ್ಡಾಯಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2) ಎನ್.ಇ.ಟಿ. ಪರೀಕ್ಷೆಯನ್ನು ನಡೆಸುವ ಪೂರ್ವದಲ್ಲಿ ನೇಮಕಗೊಂಡ ಶಿಕ್ಷಕರಿಗೆ ಈ ಅಂಶ ಕಡ್ಡಾಯಗೊಳಿಸುವುದು ಸರಿಯೆ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ದಿನಾಂಕ 19-09-91 ರಲ್ಲಿ ಯು.ಜಿ.ಸಿ. ರೆಗ್ಯೂಲೇಷನ್‌ಗಳು ಜಾರಿಗೆ ಬಂದಿದ್ದು, ಅದಕ್ಕೂ ಮೊದಲು ಮಂಜೂರಾದ ಖಾಲಿ ಹುದ್ದೆಗಳಲ್ಲಿ ಖಾಯಂ ನೇಮಕಾತಿ ಹೊಂದಿದ ಶಿಕ್ಷಕರಿಗೆ ಈ ಅಂಶವನ್ನು ಕಡ್ಡಾಯಗೊಳಿಸಿರುವುದಿಲ್ಲ.

ವಿಶ್ವಬ್ಯಾಂಕಿನಿಂದ ಹಾಲಿಟೆಕ್ನಿಕ್ ಅಭಿವೃದ್ಧಿಗಾಗಿ ಹಣ ಬಿಡುಗಡೆ

424 (642) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಇದುವರೆವಿಗೂ ವಿಶ್ವಬ್ಯಾಂಕಿನಿಂದ ಪಾಲಿಟೆಕ್ನಿಕ್ ಅಭಿವೃದ್ಧಿಗಾಗಿ ಎಷ್ಟು ಹಣ ಬಂದಿದೆ ಹಾಗೂ ಯಾವ ಯಾವ ಕಾಲೇಜಿನ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗಿದೆ?

2) ಅಭಿವೃದ್ಧಿಯ ಕಾರ್ಯವನ್ನು ಸರ್ಕಾರ ಪರಿಶೀಲಿಸಿದೆಯೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು)

1) ಪಾಲಿಟೆಕ್ನಿಕ್ ಗುಣಮಟ್ಟ ಅಭಿವೃದ್ಧಿಗೊಳಿಸಲು ವಿಶ್ವಬ್ಯಾಂಕಿನಿಂದ ರೂ. 44.60 ಕೋಟಿ ಹಣ ಇದುವರೆವಿಗೆ ಬಂದಿದೆ. ಈ ಯೋಜನೆ ಅಡಿ ರಾಜ್ಯದ 30 ಸರ್ಕಾರಿ ಮತ್ತು 06 ಅನುದಾನಿತ ಪಾಲಿಟೆಕ್ನಿಕ್‌ಗಳಿಗೆ ವಿನಿಯೋಗಿಸಲಾಗಿದೆ. (ಪಟ್ಟಿ ಲಗತ್ತಿಸಿದೆ)

2) ಈ ಯೋಜನೆಯನ್ನು ರಾಜ್ಯ ಮಟ್ಟದಲ್ಲಿ ಕಾರ್ಯಗತಗೊಳಿಸಲಾಗಿದ್ದು, ಈ ಯೋಜನೆಯ ಸಮೀಕ್ಷೆಯನ್ನು ರಾಜ್ಯಮಟ್ಟ ಮತ್ತು ಕೇಂದ್ರ ಸರ್ಕಾರದಿಂದ ಸಮೀಕ್ಷೆ ಮಾಡಲಾಗುತ್ತದೆ.

REPLIES TO UNSTARRES L.C. QUESTION NO. 642 BY DR. M.P. KARKI

LIST OF GOVERNMENT AND AIDED POLYTECHNICS COVERED UNDER WORLD BANK ASSISTED PROJECT

I.GOVERNMENT POLYTECHNICS:

1. S.J. Govt. Polytechnic Bangalore.
2. Govt. G.R.I.C.Polytechnic, Bangalore - 560001.
3. Inst. of Printing Technology, Bangalore - 560001.
4. Inst. of Textile Technology, Bangalore - 560001.
5. Govt. Polytechnic for women, Bangalore - 560001
6. Govt. Polytechnic, Belgaum.
7. Govt. Polytechnic, Bellary.
8. Govt. Polytechnic, Bidar.
9. Govt. Polytechnic, Bijapur.
10. Govt. Polytechnic, Channapatna.
11. D.A.C.G. Polytechnic, Chickmagalore.
12. Govt. Polytechnic, Chintamani.
13. D.R.R. Polytechnic, Davanagere.
14. Govt. Polytechnic, Hassan.
15. Women's Polytechnic, Hassan.
16. Smt. L.V. Polytechnic, Hassan.

17. School of Mines, K.G.F.
18. Govt. Polytechnic, Karwar.
19. Govt. Polytechnic, Kushalnagar.
20. Govt. Polytechnic, K.R.Pet.
21. Karnataka Polytechnic, Mangalore.
22. Women's Polytechnic, Mangalore.
23. C.R.C. Polytechnic, Mysore.
24. Govt. Polytechnic, Raichur.
25. Govt. Polytechnic, Tumkur.
26. Govt. Polytechnic, Bhadravathi.
27. Govt. Polytechnic, Chamarajnagar.
28. Women's Polytechnic, Hassan.
29. Women's Residential Polytechnic, Shimoga.
30. Film & T.V. Institute, Bangalore.

AIDED POLYTECHNICS :

1. A.P.S. Polytechnic, Bangalore.
2. M.E.I. Polytechnic, Bangalore.
3. B.V.V.S. Polytechnic, Bagalkot.
4. K.H.K. Institute of Engg. Dharwad.
5. JSS Polytechnic for Women, Mysore.
6. JSS Polytechnic for Physically Handicapped Mysore.

ಕೊಡಗು ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ನೇಮಕಾತಿ

426 (295) ಶ್ರೀ ಡಿ. ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಕೊಡಗು ಜಿಲ್ಲೆಯಲ್ಲಿರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಸಾಕಷ್ಟು ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಮಡಿಕೇರಿ ಜಿಲ್ಲಾ ಕೇಂದ್ರ ಸರ್ಕಾರಿ ಆಸ್ಪತ್ರೆಯಲ್ಲಿ ಲ್ಯಾಬ್, ಆ್ಯಂಬುಲೆನ್ಸ್, ಮತ್ತು ಇನ್ನಿತರ ಔಷಧಿ ಸಾಮಾಗ್ರಿಗಳಿಗೆ ಕೊರತೆ ಇದೆಯೇ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಬಂದಿದೆ

2) ಲ್ಯಾಬ್ ಸೌಲಭ್ಯವಿದೆ;

ಆ್ಯಂಬುಲೆನ್ಸ್ ಒಂದು ಲಭ್ಯವಿದೆ;

ಔಷಧ ಸಾಮಾಗ್ರಿಗಳು ಲಭ್ಯ ಇದೆ;

ಕೊರತೆ ಇರುವುದಿಲ್ಲ.

ಹಾವೇರಿ ಜಿಲ್ಲಾ ಶಿಗ್ಗಾಂವ ತಾಲ್ಲೂಕ ಪಂಚಾಯತ್ ವಿಸರ್ಜನೆ

427 (685) ಶ್ರೀ ಮಂಜುನಾಥ ಸಿ. ಕನ್ನೂರ್ (ಶಿಗ್ಗಾಂವ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಶಿಗ್ಗಾಂವ್ ತಾಲ್ಲೂಕು ಪಂಚಾಯತ್ ಸಮಿತಿಯನ್ನು ವಿಸರ್ಜಿಸಲು ಧಾರವಾಡ ಜಿಲ್ಲಾ ಪಂಚಾಯತ್ ದಿಂದ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆಯೇ?

2) ಶಿಗ್ಗಾಂವ ತಾಲ್ಲೂಕು ಪಂಚಾಯತ್ ವಿಸರ್ಜಿಸಲು ಶಿಗ್ಗಾಂವ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯದರ್ಶಿ ಹಾಗೂ ಅಧಿಕಾರಿಗಳಿಂದ ಹಾಗೂ ಧಾರವಾಡ ಜಿಲ್ಲಾ ಪಂಚಾಯತ್ ದಿಂದ ಎಷ್ಟು ಬಾರಿ ಸರ್ಕಾರಕ್ಕೆ ವರದಿ ಮಾಡಲಾಗಿದೆ?

3) ಶಿಗ್ಗಾಂವ ತಾಲ್ಲೂಕು ಪಂಚಾಯತ್ ಸಮಿತಿಯವರು ತೆಗೆದುಕೊಂಡ ಕಾನೂನು ಬಾಹಿರ ನಿರ್ಣಯಗಳೇನು?

4) ಈ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿನ ಶಿಫಾರಸ್ಸುಗಳು ಏನು?

5) ಶಿಗ್ಗಾಂವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ವರ್ಗಾವಣೆ 3 ವರ್ಷಗಳಲ್ಲಿ ಎಷ್ಟು ಬಾರಿ ಮಾಡಲಾಗಿದೆ?

6) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಇಲ್ಲ

2) ಇಲ್ಲ

3) ದಿನಾಂಕ 7.7.97ರ ಸಭೆಯಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದವರಿಗೆ ಕಲ್ಪಿಸಿದ ಮೀಸಲಾತಿ ಪ್ರಮಾಣವನ್ನು ಸಡಿಲಿಸಬೇಕೆಂಬ ತಿರ್ಮಾನ ತೆಗೆದುಕೊಂಡಿದ್ದು ನಂತರ ಅಂತರಹ ನಿರ್ಣಯ ನಿಯಮಗಳಿಗೆ ವ್ಯತಿರಿಕ್ತ ಎಂದು ಕಂಡು ಬಂದದ್ದರಿಂದ ತೀರ್ಮಾನವನ್ನು ತಾಲ್ಲೂಕು ಪಂಚಾಯಿತಿಯು ರದ್ದುಪಡಿಸಲು ಉದ್ದೇಶಿಸಿದೆ. ಮತ್ತು ತೀರ್ಮಾನವನ್ನು ಕಾರ್ಯಗತಗೊಳಿಸಿರುವುದಿಲ್ಲ.

4) ಎರಡು ಬಾರಿ

5) ತಾಲ್ಲೂಕು ಪಂಚಾಯತ್‌ಗೆ ಸೂಕ್ತ ತಿಳುವಳಿಕೆ ನೀಡಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಇ.ಎ.ಎಸ್. ಯೋಜನೆಯಡಿ ಕೈಗೊಂಡ ಪ್ರಗತಿ

428 (687) ಶ್ರೀ ಮಂಜುನಾಥ ಸಿ.ಕನ್ನೂರ್ (ಶಿಗ್ಗಾಂವ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿ 1996-97 ರಲ್ಲಿ ಇ ಎ ಎಸ್ ಯೋಜನೆಯಡಿ ನೀಡಲಾದ ಹಣವೆಷ್ಟು ಅದರಲ್ಲಿ ಮಾಡಿದ ಸಾಧನೆ ಎಷ್ಟು; ಸಂಪೂರ್ಣ ಹಣ ಬಳಕೆಯಾಗಿದೆಯೇ;

2) ಧಾರವಾಡ ಜಿಲ್ಲೆಯಲ್ಲಿ (ಇ ಎ ಎಸ್) ಉದ್ಯೋಗ ಭರವಸೆ ಯೋಜನೆಯಡಿ 1997-98ರಲ್ಲಿ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಅವುಗಳಿಗೆ ತಗಲಿದ ಖರ್ಚು ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು) :

1) 1996-97ನೇ ಸಾಲಿನಲ್ಲಿ ಲಭ್ಯವಿದ್ದ ಹಣ ಹಾಗೂ ಖರ್ಚಾದ ಹಣದ ಮೊತ್ತ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

1) ಪ್ರಾರಂಭದ ಶಿಲ್ಕು	4750.47
2) ಬಿಡುಗಡೆಯಾದ ಮೊತ್ತ	14469.66
3) ಒಟ್ಟು ಲಭ್ಯವಿದ್ದ ಮೊತ್ತ	19220.13
4) ಖರ್ಚಾದ ಮೊತ್ತ	14307.22

ಒಟ್ಟು ಲಭ್ಯವಿದ್ದ ಹಣದಲ್ಲಿ ಶೇಕಡಾ 74 ರಷ್ಟು ಹಣವನ್ನು ಖರ್ಚು ಮಾಡಲಾಗಿದೆ.

2) ವಿವರಗಳನ್ನು ಅನುಬಂಧದಲ್ಲಿ ನಮೂದಿಸಲಾಗಿದೆ.

ಅನುಬಂಧ - 1

ಕ್ರಮ ಸಂಖ್ಯೆ	ತಾಲ್ಲೂಕು	ರಸ್ತೆ ಕಾಮಗಾರಿಗಳು			ಚಿಕ್ಕ ನೀರಾವರಿ ಕೆಲಸಗಳು			ಶಾಲಾ ಕೊಠಡಿಗಳು			ಅಂಗನವಾಡಿ ಕಟ್ಟಡಗಳು		
		ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು	ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು	ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು	ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು
1	2	3	4	5	6	7	8	9	10	11	12	13	14
1)	ಬ್ಯಾಡಗಿ	13	11	33.859	14	9	16.059	30	14	12.883	8	7	8.632
2)	ಧಾರವಾಡ	26	20	27.663	10	6	11.360	40	17	15.640	8	-	8.477
3)	ಗದಗ	42	11	27.652	6	3	11.480	62	21	14.347	8	6	9.470
4)	ಹುಬ್ಬಳ್ಳಿ	24	12	50.593	7	2	17.860	30	13	18.963	8	6	12.000
5)	ಹಾವೇರಿ	28	14	23.883	9	7	14.261	32	16	14.720	9	3	11.425
6)	ಹಾನಗಲ್	20	17	19.702	17	2	12.153	40	18	16.560	8	4	18.528
7)	ಹಿರೇಕೆರೂರ್	19	13	56.864	16	7	15.826	35	17	14.461	8	4	6.910
8)	ಕುಂದಗೋಳ	21	10	40.227	6	2	12.500	30	19	18.480	8	4	8.740
9)	ಕಲಘಟಕಿ	31	18	49.796	21	2	16.750	30	14	13.682	8	6	8.2651
10)	ಮುಂದರಗಿ	32	10	26.203	6	4	14.040	59	31	27.523	8	-	8.117
11)	ನರಗುಂದ	29	17	18.033	7	6	10.190	16	9	10.286	5	2	6.849

1	2	3	4	5	6	7	8	9	10	11	12	13	14
12)	ನವಲಗುಂದ	27	14	28.091	13	0	13.030	60	28	24.367	8	3	9.025
13)	ರೋಣ	31	19	32.235	11	5	12.820	65	26	23.925	8	7	10.067
14)	ರಾಣೆಬೆನ್ನೂರು	30	17	43.476	35	3	13.455	35	15	13.800	9	7	17.369
15)	ಸವಣೂರು	20	18	41.451	10	1	12.214	30	13	11.900	8	-	6.775
16)	ಶಿಗ್ಗಾಂವ್	20	20	40.630	17	4	15.620	30	14	14.362	8	1	11.160
17)	ಶಿರಹಟ್ಟಿ	28	17	31.713	14	5	12.710	71	25	26.425	8	5	7.954
	ಒಟ್ಟು	**441**	**258**	**592.071**	**219**	**77**	**232.858**	**695**	**310**	**290.384**	**135**	**65**	**169.773**

ಕ್ರಮ ಸಂಖ್ಯೆ	ತಾಲ್ಲೂಕು	ಜಲಾನಯನ ಅಭಿವೃದ್ಧಿ			ಅರಣ್ಯ ಕಾಮಗಾರಿಗಳು			ಒಟ್ಟು		
		ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು	ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು	ತೆಗೆದು ಕೊಂಡ ಕೆಲಸಗಳು	ಪೂರ್ಣ ಗೊಂಡ ಕೆಲಸಗಳು	ಖರ್ಚು
1	2	15	16	17	18	19	20	21	22	23
1.	ಬ್ಯಾಡಗಿ	9	8	7.022	10	5	1.115	84	54	79.57
2.	ಧಾರವಾಡ	20	17	18.122	15	5	3.418	119	65	84.68
3.	ಗದಗ	30	30	14.256	5	2	0.805	153	73	78.01
4.	ಹುಬ್ಬಳ್ಳಿ	13	9	6.899	8	-	1.215	90	42	105.04
5.	ಹಾವೇರಿ	58	58	6.415	11	5	2.426	147	103	73.13
6.	ಹಾನಗಲ್	4	-	6.142	13	4	1.335	102	45	74.82
7.	ಹಿರೇಕೆರೂರ್	40	40	4.678	8	5	1.351	1261	86	98.09
8.	ಕುಂದಗೋಳ	14	11	3.365	7	2	0.768	86	48	84.08
9.	ಕಲಘಟಗಿ	1	-	7.641	12	4	2.746	103	44	97.88
10.	ಮುಂಡರಗಿ	19	19	9.367	13	3	3.030	109	67	88.31
11.	ನರಗುಂದ	2	2	1.795	3	-	1.187	62	36	48.34

1	2	15	16	17	18	19	20	21	22	23
12.	ನವಲಗುಂದ	1	1	2.201	8	4	0.746	117	59	77.46
13.	ರೋಣ	4	4	5.563	10	4	1.1901	129	65	85.80
14.	ರಾಣೆಬೆನ್ನೂರು	4	4	5.890	11	5	2.580	124	51	96.57
15.	ಸವಣೂರ	3	-	5.008	9	5	1.152	77	37	78.56
16.	ಶಿಗ್ಗಾಂವ್	2	-	2.128	9	3	1.470	86	42	85.37
17.	ಶಿರಹಟ್ಟಿ	3	3	4.580	13	5	2.138	137	80	85.52
	ಒಟ್ಟು	**224**	**206**	**108.632**	**165**	**61**	**28.072**	**1879**	**977**	**1421.23**

ಶಿಗ್ಗಾಂವ ಸವಣೂರು, ಬಂಕಾಪುರ ಆಸ್ಪತ್ರೆಗಳ ಕಾಮಗಾರಿ

429 (688) ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕುಗಳ ಆಸ್ಪತ್ರೆ ಮೇಲ್ದರ್ಜೆ ಗೇರಿಸಿದ್ದು ಅವುಗಳ ಕಾರ್ಯ ಯಾವಾಗ ಆಗುವುದು ? ಅದಕ್ಕನುಗುಣವಾಗಿ ಯಾವಾಗ ಸಿಬ್ಬಂದಿ ನಿಯಮಿಸಲಾಗುವುದು?

2) ಶಿಗ್ಗಾಂವ್ ತಾಲ್ಲೂಕು ಬಂಕಾಪುರ, ಪಿಹೆಚ್ಸಿ, ಸಮುದಾಯ ಆರೋಗ್ಯ ಕೇಂದ್ರ ಕಟ್ಟಡ ಹಾಗೂ ಸಿಬ್ಬಂದಿಗಳನ್ನು ಯಾವಾಗ ವರ್ಗಾಯಿಸಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಟೆಂಡರ್ ಮುಗಿದಿದ್ದು, ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ. ಕಟ್ಟಡ ಕಾಮಗಾರಿ ಮುಗಿದ ನಂತರ ಸಿಬ್ಬಂದಿ ನೇಮಿಸಲಾಗುವುದು.

2) ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿಯು ಪೂರ್ಣಗೊಂಡ ನಂತರ ಸಿಬ್ಬಂದಿಯನ್ನು ನೇಮಿಸಲಾಗುವುದು.

ಕುಣಿಗಲ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ಶಿಕ್ಷಕರ ಕೊರತೆ

431 (665) ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕುಣಿಗಲ್ ಪ್ರಥಮ ದರ್ಜೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ಮತ್ತು ಇತರೆ ವಿಭಾಗಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಕೈಗೊಂಡ ಅಥವಾ ಕೈಗೊಳ್ಳಲಿರುವ ಕ್ರಮವೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1) ಬಂದಿದೆ.

2) ಕಾಲೇಜುಗಳಲ್ಲಿ ಕಡಿಮೆ ಕಾರ್ಯಭಾರ ಇದ್ದ ಕಡೆ ಹೆಚ್ಚುವರಿ ಬೋಧಕರನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ನಿಯೋಜಿಸಲು ಹಾಗೂ ಕಾಲೇಜುಗಳಲ್ಲಿ ಉದ್ಭವಿಸುವ ಹೆಚ್ಚುವರಿ ಕಾರ್ಯ ಭಾಗವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ.

ಪರಿಸರ ಮಾಲಿನ್ಯದ ನಿಯಮಗಳ ಉಲ್ಲಂಘನೆ

432 (666) ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಪರಿಸರ ಮಾಲಿನ್ಯದ ಕಾನೂನಿನ ಉಲ್ಲಂಘನೆ ಬಗ್ಗೆ ನ್ಯಾಯಾಲಯದಲ್ಲಿ ಹೂಡಿರುವ ಮೊಕದ್ದಮೆಗಳೆಷ್ಟು?

2) ಹಾಗಿದ್ದಲ್ಲಿ ಯಾವುದಾದರೂ ಪ್ರಕರಣದಲ್ಲಿ: ಶಿಕ್ಷೆಯಾಗಿದೆಯೇ?

1) ಜೈಲು ಶಿಕ್ಷೆ

2) ದಂಡ

ಶ್ರೀ ಬಸವರಾಜ್ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು):

1) ಪರಿಸರ ಮಾಲಿನ್ಯದ ಕಾನೂನಿನ ಉಲ್ಲಂಘನೆ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುವ ಒಟ್ಟು ಪ್ರಕರಣ ಸಂಖ್ಯೆ: 157.

ಅ) ಜಲ ಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಪ್ರಕರಣಗಳ ಸಂಖ್ಯೆ: 107

ಆ) ವಾಯುಮಾಲಿನ್ಯ ನಿಯಂತ್ರಣ ಕಾಯಿದೆಯ ಅಡಿಯಲ್ಲಿ ಹೂಡಲಾದ ಒಟ್ಟು ಪ್ರಕರಣಗಳ ಸಂಖ್ಯೆ: 50

2) ಹೌದು

ಇಲ್ಲ.

ಅ) ಮಾನ್ಯ ಸಿ. ಎಂ. ಎಂ. ನ್ಯಾಯಾಲಯ, ಬೆಂಗಳೂರಿನಲ್ಲಿ ಲೈಮ್ ಕಿಲ್ನ, ಬೆಂಗಳೂರು ಇದರ ವಿರುದ್ಧ ಹೂಡಲಾದ ಸಿ.ಸಿ. ಸಂಖ್ಯೆ: 2022-92 ರ ಪ್ರಕರಣದಲ್ಲಿ ದಿನಾಂಕ: 12.2.93 ರ ಪ್ರಕರಣದಲ್ಲಿ ದಿನಾಂಕ: 12-2-93 ರಂದು ಹೊರಡಿಸಿದ ಆದೇಶದಲ್ಲಿ ಶಿಕ್ಷೆಯಾಗಿದ್ದು ಮಾನ್ಯ ನ್ಯಾಯಾಲಯವು ಅಪರಾಧಿಗೆ ರೂ. 1000.00 ದಂಡವನ್ನು ವಿಧಿಸಿರುತ್ತದೆ.

ಆ) ಮಾನ್ಯ ಜೆ. ಎಂ. ಎಫ್.ಸಿ. ನ್ಯಾಯಾಲಯದಲ್ಲಿ (ಕೊಪ್ಪಳ) ಮುನಿರಾಬಾದ್ ಕೆಮಿಕಲ್ಸ್ ಕಂ. ಇದರ ವಿರುದ್ಧ ಹೂಡಲಾಗಿರುವ ಕ್ರಿಮಿನಲ್ ಪ್ರಕರಣದ ಸಂಖ್ಯೆ: ಸಿ.ಸಿ. 117-89 ಕ್ಕೆ ದಿನಾಂಕ 30. 12. 93 ರಲ್ಲಿ ಶಿಕ್ಷೆಯಾಗಿ ಆರೋಪಿಗೆ ರೂ. 1000.00 ದಂಡವನ್ನು ವಿಧಿಸಲಾಗಿದೆ.

ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದಿರುವ ಆಸ್ಪತ್ರೆಗಳು

433 (667) ಶ್ರೀ ಎಸ್. ಪಿ. ಮುದ್ದು ಹನುಮೇಗೌಡ (ಕುಣಿಗಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಸ್ವಂತ ಕಟ್ಟಡಗಳಿಲ್ಲದೆ ಇರುವ ಆಸ್ಪತ್ರೆಗಳು ಎಷ್ಟು?

2) ತುಮಕೂರು ಜಿಲ್ಲಾ ಹಾಗೂ ಕುಣಿಗಲ್ ವಿಧಾನಸಭಾ ಕ್ಷೇತ್ರದಲ್ಲಿ ಈ ಸಂಖ್ಯೆ ಎಷ್ಟು?

3) ಈ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1)	ಅ) ಪ್ರಾಥಮಿಕ ಆರೋಗ್ಯ ಕೇಂದ್ರ	-	499
	ಆ) ಸಮುದಾಯ ಆರೋಗ್ಯ ಕೇಂದ್ರ	-	71
	ಇ) ಉಪ ಕೇಂದ್ರ	-	2660

ಗಳು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ

2) ತುಮಕೂರು ಜಿಲ್ಲೆಯಲ್ಲಿ;

	1) ಪ್ರಾಥಮಿಕ ಆರೋಗ್ಯ ಕೇಂದ್ರಗಳು	-	21
	2) ಸಮುದಾಯ ಆರೋಗ್ಯ ಕೇಂದ್ರಗಳು	-	3
	3) ಉಪ ಕೇಂದ್ರಗಳು	-	250

ಹಾಗೂ ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಟ್ಟಡ ಇರುವುದಿಲ್ಲ.

3) ತುಮಕೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಹೊಸ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಬೇಕಿದ್ದು, ಹಂತ ಹಂತವಾಗಿ ಜಿಲ್ಲಾ ಪಂಚಾಯತ್‌ನಲ್ಲಿನ ಆಯವ್ಯಯದಲ್ಲಿ ಅನುದಾನದ ಲಭ್ಯತೆ ಮೇರೆಗೆ ಮುಂಬರುವ ಸಾಲಿನಲ್ಲಿ ಕಟ್ಟಡ ಕಾಮಗಾರಿ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುವುದು.

ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ವಿಶ್ವಬ್ಯಾಂಕ್ ಯೋಜನೆಯಲ್ಲಿನ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನ

434 (668) ಶ್ರೀ ಎನ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ಯೋಜನೆಗಳ ಅನುಷ್ಠಾನದಲ್ಲಿ ತೀವ್ರ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

2) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ಇಂತಹ ಯೋಜನೆಗಳ ವಿವರ ಹಾಗೂ ಪ್ರಗತಿಯನ್ನು ನೀಡುವುದು.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

1) ಈ ಯೋಜನೆಯ ಮೊದಲನೆಯ ಹಂತದಲ್ಲಿ ವಿಳಂಬವಾಗಿದ್ದರೂ ಒಟ್ಟಾರೆ ಯೋಜನೆಯನ್ನು ನಿಗಧಿಯಾದ ವೇಳೆಗೆ ಪೂರ್ಣಗೊಳಿಸುವ ಸಂಭವವಿದೆ.

2) ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ

ಯೋಜನೆಯಲ್ಲಿ ನೀರು ಸರಬರಾಜು , ಪರಿಸರ ನೈರ್ಮಲ್ಯ ಆರೋಗ್ಯ ನೈರ್ಮಲ್ಯ ಶಿಕ್ಷಣ ಇತ್ಯಾದಿ ಘಟಕಗಳು ಒಳಗೊಂಡಿರುತ್ತದೆ. ಯೋಜನೆಯಲ್ಲಿ ಕುಣಿಗಲ್ ವಿಧಾನ ಸಭಾ ಕ್ಷೇತ್ರದ ಈ ಕೆಳಕಂಡ 5 ಗ್ರಾಮಗಳು ಒಳಗೊಂಡಿರುತ್ತದೆ.

1. ಗುಳೂರು
2. ಎಂ.ಬಿ. ಹಳ್ಳಿ
3. ಹೊನ್ನುಡಿಕೆ
4. ದೊಡ್ಡ ಪಾರಂಗಿ
5. ಬಾಗೇನಹಳ್ಳಿ

ಈ ಗ್ರಾಮಗಳ ನೀರು ಸರಬರಾಜು ಕಾಮಗಾರಿಗಳ ಟೆಂಡರ್‌ಗಳನ್ನು ಮೇ-97 ರಿಂದ ಫೇಬ್ರವರಿ 98ರ ಅವಧಿಯಲ್ಲಿ ಅನುಮೋದಿಸಲಾಗಿದ್ದು, ಕಾಮಗಾರಿಗಳು ಗುಳೂರು ಗ್ರಾಮದಲ್ಲಿ ಪ್ರಗತಿಯಲ್ಲಿವೆ. ಉಳಿದ ಗ್ರಾಮಗಳಲ್ಲಿ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.

ಶಾಲಾ ಕೊಠಡಿ ನಿರ್ಮಾಣ

435 (327) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) In which constituencies the construction of classrooms have been completed, under the programme of construction of 45 class rooms in each Assembly Constituency;

2) What is the reason for non-construction (class rooms)? What is the action taken by the Government?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

1) At the rate of 30 classroom in each constituency a total of 6720 classrooms is sanctioned during 1997-98. The Construction of programme of these classrooms is under various stages.

2) For Construction of 30 classrooms in each Assembly Constituencies an amount of Rs. 50,000/- per classroom has to be released by Government as Education Department's share. In this regard an amount of Rs. 20.00 crores has already been released in two instalments, and action has been taken for releasing the balance amount of Rs. 13.60 crores. The delay in completion of construction is due to the fact that Zillapanchayats have to mobilised the remaining funds from J.R.Y. and other sources, and also due to the fact

ZillaPanchayats have to mobilised the remaining funds from J.R.Y. and other sources,and also due to the fact of identification of sides, preparation of plans and estimates. Now the construction is under progress in various stages. However 5115 classrooms undertaken during previous years have been completed this year.

ನರಸಿಂಹರಾಜ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ವಿದ್ಯಾಭ್ಯಾಸಕ್ಕೆ ಸರ್ಕಾರಿ ಎಸ್. ಎಸ್. ಎಲ್.ಸಿ. ಹಾಗೂ ಪಿ.ಯು.ಸಿ. ಮಂಜೂರು ಮಾಡುವ ಬಗ್ಗೆ

436 (325) ಶ್ರೀ ಇ. ಮಾರುತಿರಾವ್ ಪವಾರ್ : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ನರಸಿಂಹರಾಜ ಕ್ಷೇತ್ರಕ್ಕೆ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಲು ಬಡಕುಟುಂಬದ ಕೂಲಿ ಕಾರ್ಮಿಕವರ್ಗ, ಅಲ್ಪಸಂಖ್ಯಾತರು, ಪರಿಶಿಷ್ಟ ಜನಾಂಗದ ಹಾಗೂ ಇತರ ವರ್ಗದ ವಿದ್ಯಾಭ್ಯಾಸಕ್ಕೆ ಸರ್ಕಾರಿ ಎಸ್ ಎಸ್ ಎಲ್‌ಸಿ ಹಾಗೂ ಪಿಯುಸಿ ಶಾಲೆ ಮಂಜೂರಾತಿ ಅತ್ಯವಶ್ಯಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ 1998 ನೇ ಸಾಲಿನಲ್ಲಿ ಮಂಜೂರಾತಿ ನೀಡುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ. ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ನರಸಿಂಹರಾಜ ಕ್ಷೇತ್ರದಲ್ಲಿ 2 ಸರ್ಕಾರಿ ಪದವಿ ಪೂರ್ವ ಕಾಲೇಜುಗಳು, 3 ಅನುದಾನಿತ ಖಾಸಗಿ ಪ.ಪೂ. ಕಾಲೇಜುಗಳು ಹಾಗೂ 6 ಅನುದಾನ ರಹಿತ ಖಾಸಗಿ ಪ.ಪೂ. ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಈಗಿರುವ ಕಾಲೇಜುಗಳ ಸಂಖ್ಯೆಯನ್ನು ಗಮನಿಸಿದಾಗ ನರಸಿಂಹರಾಜ ಕ್ಷೇತ್ರಕ್ಕೆ ಮತ್ತೊಂದು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಅಗತ್ಯಕತೆ ಇರುವುದಿಲ್ಲ.

ನರಸಿಂಹರಾಜ ಕ್ಷೇತ್ರದಲ್ಲಿ ಒಟ್ಟು 23 ಪ್ರೌಢಶಾಲೆಗಳಿದ್ದು, ಅವುಗಳಲ್ಲಿ 10 ಅನುದಾನಿತ ಪ್ರೌಢಶಾಲೆಗಳು 3 ಸರ್ಕಾರಿ ಪ್ರೌಢಶಾಲೆಗಳು ಸಹಾಗೂ 10 ಅನುದಾನ ರಹಿತ ಪ್ರೌಢಶಾಲೆಗಳು ಇವೆ. 1997-98ನೇ ಸಾಲಿನಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಬಾರದೆಂದು ಸರ್ಕಾರದ ನೀತಿಯ ಹಿನ್ನೆಲೆಯಲ್ಲಿ ಯಾವುದೇ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿಲ್ಲ. ಈ ಕ್ಷೇತ್ರಕ್ಕೆ ಮತ್ತೊಂದು ಪ್ರೌಢಶಾಲೆಯ ಅಗತ್ಯತೆ ಇದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಸ್ತಾವನೆ ಪಡೆದು ಸೂಕ್ತ ಸಮಯದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ನರಸಿಂಹರಾಜ ಕ್ಷೇತ್ರದಲ್ಲಿ ಸೂಪರ್ ಸ್ಪೆಷಲ್ 150 ಹಾಸಿಗೆಯುಳ್ಳ (ಆಕ್ಸಿಡೆಂಟ್ ಹಾಸ್ಪಿಟಲ್) ಕಟ್ಟಡ ನಿರ್ಮಾಣ

437 (329) ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ನರಸಿಂಹರಾಜ್ ಕ್ಷೇತ್ರದ ತಿಲಕ್‌ನಗರ ಸೂಪರ್ ಸ್ಪೆಷಲ್ 150 ಹಾಸಿಗೆಯುಳ್ಳ (ಆಕ್ಸಿಡೆಂಟ್) ಹಾಸ್ಪಿಟಲ್ ಕಟ್ಟಡದ ಬಗ್ಗೆ ಕಳೆದ ವಿಧಾನ ಸಭೆಯಲ್ಲಿ ಸಚಿವರು 40 ಲಕ್ಷ ಕಟ್ಟಡದ ನಿರ್ಮಾಣಕ್ಕೆ ಬಿಡುಗಡೆಯಾಗಿದೆ ಎಂದು ಭರವಸೆ ನೀಡಿರುವುದು ನಿಜವಲ್ಲವೆ? ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

2) ತಿಲಕ್‌ನಗರದ ಸಾಂಕ್ರಾಮಿಕ ರೋಗದ ಆಸ್ಪತ್ರೆ ಇದ್ದ ಸ್ಥಳ ಖಾಲಿ ಇದ್ದು, ಹಣ ಬಿಡುಗಡೆಯಾಗಿದ್ದು, ಸೂಪರ್ ಸ್ಪೆಷಲ್ 150 ಹಾಸಿಗೆಯ ಕಟ್ಟಡ ನಿರ್ಮಾಣ ಪ್ರಾರಂಭವಾಗದಿರಲು ಕಾರಣವೇನು?

3) ಈ ಆಸ್ಪತ್ರೆ ನಿರ್ಮಾಣ ಕಾರ್ಯ ಯಾವಾಗ ಪ್ರಾರಂಭಿಸಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) 150 ಹಾಸಿಗೆಗಳುಳ್ಳ ಸೂಪರ್ ಸ್ಪೆಷಲ್ ಆಸ್ಪತ್ರೆ ಕಟ್ಟಡ ನಿರ್ಮಾಣ ಕಾಮಗಾರಿಯ ರೂ. 120.00 ಳ ಅಂದಾಜಿಗೆ ಅಪೆಂಡಿಕ್ಸ್ - '' ಇ '' ನಲ್ಲಿ 1995-96ನೇ ಸಾಲಿನಲ್ಲಿ ರೂ. 40.00 ಲಕ್ಷಗಳನ್ನು ನಿಗದಿಪಡಿಸಲಾಗಿತ್ತು. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಅಗತ್ಯವಾದ ಅಂದಾಜು ಪಟ್ಟಿ, ನಕ್ಷೆ, ವಗೈರೆಗಳು ಬರಲಿಲ್ಲವಾಗಿ ಮುಂದೆ ಯಾವುದೇ ಕ್ರಮ ಜರುಗಿರುವುದಿಲ್ಲ.

2) ಈಗಾಗಲೇ ಮೇಲೆ ಹೇಳಿದಂತರ ಮುಖ್ಯ ವಾಸ್ತು ಶಿಲ್ಪಿಯವರಿಂದ ತಯಾರಿಸಿದ ಸವಿವರವಾದ ಅಂದಾಜು ಪಟ್ಟಿ ಹಾಗೂ ನಕ್ಷೆಗಳನ್ನೊಳಗೊಂಡ ಪ್ರಸ್ತಾವನೆ ಬರಲಿಲ್ಲವಾಗಿ ಆಡಳಿತಾತ್ಮಕ ಮಂಜೂರಾತಿಯಾಗಿರುವುದಿಲ್ಲ ಮತ್ತು ಕಟ್ಟಡದ ಕಾಮಗಾರಿ ಪ್ರಾರಂಭವಾಗಿರುವುದಿಲ್ಲ.

3) ಆಯವ್ಯಯದಲ್ಲಿ ಅವಶ್ಯಕ ಅನುದಾನ ಒದಗಿಸಿಕೊಂಡು ಅಗತ್ಯ ಅಂದಾಜು ಪಟ್ಟಿ ಹಾಗೂ ನಕ್ಷೆಗಳೊಂದಿಗೆ ಆಡಳಿತಾತ್ಮಕ ಮಂಜೂರಾತಿಗಾಗಿ ಶೀಘ್ರ ಸರ್ಕಾರವನ್ನು ಸಂಪರ್ಕಿಸುವಂತೆ ಸಂಬಂಧಪಟ್ಟ ಜಿಲ್ಲಾ ಪಂಚಾಯ್ತಿಗೆ ಪತ್ರ ಬರೆಯಲಾಗುತ್ತಿದ್ದು ಅದು ಬಂದ ನಂತರ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು.

ನರಸಿಂಹರಾಜ ಕ್ಷೇತ್ರದಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡುವ ಕುರಿತು

438 (328) ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ನರಸಿಂಹರಾಜ ಕ್ಷೇತ್ರಕ್ಕೆ ಕಳೆದ ಸಾಲಿನಲ್ಲಿ ಪ್ರಥಮ ದರ್ಜೆ ಕಾಲೇಜು ಮಂಜೂರು ಮಾಡಿದ್ದು ಕಾರಣಾಂತರದಿಂದ ಬೇರೆಡೆಗೆ ಸ್ಥಾಪಿತವಾಯಿತು, ಈ ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅತ್ಯಾವಶ್ಯಕವಾಗಿದ್ದು ಈ ಸಾಲಿನಲ್ಲಿ ಮಂಜೂರು ಮಾಡುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

1) A Government First Grade College sanctioned to Narashimharaja Constituency was started in some other area. A Govt. First Grade College is essential in this Constituency, the intention of sanctioning during this year has come to the notice of the Govt.;

2) If so, what is the action taken by the Govt.?

ಶ್ರೀ. ಹೆಚ್. ಜಿ. ಗೋವಿಂದೇಗೌಡ (ಶಿಕ್ಷಣ ಸಚಿವರು) :

1) ಇಲ್ಲ

2) ಉದ್ಭವಿಸುವುದಿಲ್ಲ

1) No.

2) Does not arise.

ಜಿಲ್ಲಾ ಪಂಚಾಯತಿಗಳು ವ್ಯಾಪ್ತಿ ಮೀರಿ ನಿರ್ಣಯಗಳನ್ನು ಮಾಡುವುದನ್ನು ತಡೆಗಟ್ಟುವ ಬಗ್ಗೆ

440 (643) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಜಿಲ್ಲಾ ಪಂಚಾಯತ್‌ಗಳು ಅವರ ವ್ಯಾಪ್ತಿಮೀರಿ ನಿರ್ಣಯಗಳನ್ನು ಮಾಡುತ್ತಿರುವುದನ್ನು ತಡೆಯಲು ಕಾನೂನಿನಲ್ಲಿ ಅವಕಾಶವಿದೆಯೇ?

2) ಹಾಗಿದ್ದಲ್ಲಿ, ಆಶ್ರಯ ಸಮಿತಿಯ ಹಾಗೂ ಇತರ ಶಾಸನಬದ್ಧ ಸಮಿತಿಯ ನಡವಳಿಕೆಗಳ ಬಗ್ಗೆ ಹಾಗೂ ಪೋಲೀಸಿನಲ್ಲಿ ದಾಖಲಾಗಿ ನ್ಯಾಯಾಲಯದ ಮುಂದೆ ಇಡಬಹುದಾದ ಪ್ರಕರಣಗಳ ಬಗ್ಗೆ ತುಮಕೂರು ಜಿಲ್ಲಾ ಪಂಚಾಯತ್‌ನವರು ನಿರ್ಣಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ, ಸದರಿ ಜಿಲ್ಲಾ ಪಂಚಾಯಿತಿ ಮೇಲೆ ಕಾನೂನಿನ ಕ್ರಮ ಜರುಗಿಸಲಾಗಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

1) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1998ರ ಪ್ರಕರಣ 197 (3)ರನ್ವಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಇಂತಹ ವಿಷಯಗಳಲ್ಲಿ ಜಿಲ್ಲಾ ಪಂಚಾಯತ್‌ಗಳಿಗೆ ಸೂಕ್ತ ಸಲಹೆಯನ್ನು ನೀಡಬೇಕು.

2) ಇಲ್ಲ.

3) ಉದ್ಭವಿಸುವುದಿಲ್ಲ.

ಐ. ಆರ್. ಇ.ಪಿ. ಕಾರ್ಯಕ್ರಮ ನಿರ್ವಹಣೆ

441 (644) ಶ್ರೀ ಮಾಧೂ ಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿ ಐ. ಆರ್. ಇ. ಪಿ. ಕಾರ್ಯಕ್ರಮ ನಿರ್ವಹಣೆಗಾಗಿ ದಿನಗೂಲಿ ಅಥವಾ ತಾತ್ಕಾಲಿಕ ಹುದ್ದೆಯ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಇಂಜಿನಿಯರುಗಳ ಸಂಖ್ಯೆ ಎಷ್ಟು?

2) ಎಷ್ಟು ವರ್ಷಗಳಿಂದ ಈ ರೀತಿ ಕಾರ್ಯನಿರ್ವಹಿಸುತ್ತಿದ್ದಾರೆ? ಇವರನ್ನು ಖಾಯಂ ಮಾಡಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ದಿ ಮತ್ತು ಪಂ.ರಾಜ್ ಸಚಿವರು)

1) ರಾಜ್ಯದಲ್ಲಿ ಐ. ಆರ್.ಇ.ಪಿ ಕಾರ್ಯಕ್ರಮದಡಿ ನಿರ್ವಹಣೆಗಾಗಿ ದಿನಗೂಲಿ ಅಥವಾ ತಾತ್ಕಾಲಿಕ ಹುದ್ದೆಯ ಮೇಲೆ ಯಾವುದೇ ಇಂಜಿನಿಯರುಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ.

2) ಹಾಲಿ 20 ಜನ ಇಂಜಿನಿಯರುಗಳು ಕೆ ಎಸ್ ಸಿ ಎಸ್ ಟಿ ಯಿಂದ ಎರವಲು ಸೇವೆಯ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಇಂಜಿನಿಯರುಗಳು 1984-85 ರಿಂದ (ಅಂದರೆ ಸುಮಾರು 13 ವರ್ಷಗಳಿಂದ) ಸೇವೆ ಸಲ್ಲಿಸುತ್ತಿದ್ದಾರೆ. ಸದ್ಯಕ್ಕೆ ಈ ಬಗ್ಗೆ ಯಾವುದೇ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಆನೇಕಲ್ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಉಪಾಧ್ಯಾಯರುಗಳ ನೇಮಕಾತಿ

442 (702) ಶ್ರೀ ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಆನೇಕಲ್ ತಾಲ್ಲೂಕಿನಲ್ಲಿ ಪ್ರಾಥಮಿಕ , ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಉಪಾಧ್ಯಾಯರ ಸ್ಥಾನಗಳೆಷ್ಟು?

2) ಹಾಗಿದ್ದಲ್ಲಿ ಈ ಸ್ಥಾನಗಳನ್ನು ಭರ್ತಿಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೆ?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು)

1)	ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಂಖ್ಯೆ	-	132
	ಪ್ರೌಢ ಶಾಲೆಗಳ ಉಪಾಧ್ಯಾಯರ ಸಂಖ್ಯೆ	-	18

2) ಶಿಕ್ಷಕರ ನೇಮಕಾತಿ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ. ಈ ಎಲ್ಲಾ ಹುದ್ದೆಗಳನ್ನು ಆದಷ್ಟು, ಬೇಗನೆ ತುಂಬಲು ಕ್ರಮ ಕೈಗೊಳ್ಳಲಾಗಿದೆ.

''ಸ್ವಸ್ತಿ'' ಗ್ರಾಮ ಯೋಜನೆ

445 (719) ಶ್ರೀ ಡಿ. ಆರ್. ಪಾಟೀಲ್ (ಗದಗ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸ್ವಸ್ತಿ ಗ್ರಾಮ ಯೋಜನೆಯಲ್ಲಿ ಅಳವಡಿಸಲು ಆಯ್ಕೆಗೊಂಡ ಗ್ರಾಮಗಳು ಯಾವುವು;

2) ಈ ವರ್ಷ ಯಾವ ಯಾವ ಗ್ರಾಮಗಳಲ್ಲಿ ಕಾರ್ಯಪ್ರಾರಂಭವಾಗಿದೆ;

3) ಕಾರ್ಯಪ್ರಾರಂಭಿಸಿದ ಸ್ವಸ್ತಿ ಗ್ರಾಮಗಳ ಒಟ್ಟು ಯೋಜನಾ ವೆಚ್ಚವೆಷ್ಟು; ಇವುಗಳಲ್ಲಿ ಗ್ರಾಮದ ಸರ್ಕಾರದ ಹಾಗೂ ಪ್ರಾಯೋಜಕರ ಪಾಲು ಎಷ್ಟು; ಇಲ್ಲಿಯವರೆಗೆ ಈ ಗ್ರಾಮಗಳಿಗಾಗಿ ಖರ್ಚಾದ ಹಣವೆಷ್ಟು?

4) ಉಳಿದ ಗ್ರಾಮಗಳ ಪ್ರಾಯೋಜಕರು ಯಾರು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

1) ಆಯ್ಕೆಗೊಂಡ ಗ್ರಾಮಗಳ ಪಟ್ಟಿಯನ್ನು ಲಗತ್ತಿಸಿದೆ. ಅನುಬಂಧ - 1

2) ಮೈಸೂರು ತಾಲ್ಲೂಕು ಉದ್ಬೂರು ಮತ್ತು ಬಳ್ಳಾರಿ ಜಿಲ್ಲೆ ಚಿಂತ್ರಪಳ್ಳಿ ಗ್ರಾಮಗಳಲ್ಲಿ 1997-98 ನೇ ಸಾಲಿನಲ್ಲಿ ಕಾಮಗಾರಿಗಳು ಪ್ರಾರಂಭವಾಗಿದ್ದು, ಉಳಿದ (ಅನುಬಂಧ - 1 ರಲ್ಲಿನ) ಹಳ್ಳಿಗಳ ಪ್ರಾಥಮಿಕ ಯೋಜನಾ ಕಾರ್ಯ ಮುಗಿದಿದೆ ಹಾಗೂ ಅನುಷ್ಠಾನಗೊಳಿಸಲು ಯೋಜನೆ ಸಿದ್ಧವಾಗಿದೆ.

3) ಯೋಜನಾ ವರದಿಯಂತೆ ಅಂದಾಜು ವೆಚ್ಚ ಈ ಕೆಳಗಿನಂತಿದೆ.

	ಯೋಜನಾ ವೆಚ್ಚ	(ರೂ. ಲಕ್ಷಗಳಲ್ಲಿ)
1)	ಉದ್ಬೂರು ಗ್ರಾಮ	261.83
2)	ಚಿಂತ್ರಪಳ್ಳಿ ಗ್ರಾಮ	100.77
3)	ಸರ್ಕಾರದ ಪಾಲು	ಶೇ. 50
	ಪ್ರಾಯೋಜಕರ ಪಾಲು	ಶೇ. 40
	ಗ್ರಾಮಸ್ಥರ ಪಾಲು	ಶೇ. 10

	ಖರ್ಚು	(ರೂ. ಲಕ್ಷಗಳಲ್ಲಿ)
1)	ಉದ್ಬೂರು	3.20
2)	ಚಿಂತ್ರಪಳ್ಳಿ	ಪ್ರಗತಿಯಲ್ಲಿದೆ.

4) ದಾನಿಗಳ : ಪ್ರಾಯೋಜಕರ ಪಟ್ಟಿ ಲಗತ್ತಿಸಿದೆ.

ಅನುಬಂಧ - 2

ಅನುಬಂಧ - 1

ಸ್ವಸ್ತಿ ಗ್ರಾಮ ಯೋಜನೆಗೆ ಆಯ್ಕೆಯಾಗಿರುವ ಗ್ರಾಮಗಳ ಪಟ್ಟಿ

ಕ್ರಮ ಸಂಖ್ಯೆ	ಗ್ರಾಮ	ಜಿಲ್ಲೆ
1.	ಸಿಂಗರಾಜಪುರ	ಬೆಂಗಳೂರು ಗ್ರಾಮಾಂತರ
2.	ತೊರವಿ	ಬಿಜಾಪುರ
3.	ಕುರುದಗಿ	ಧಾರವಾಡ
4.	ಕಗ್ಗರೆ	ತುಮಕೂರು
5.	ಈಸೂರು	ಶಿವಮೊಗ್ಗ

6.	ದೂಳಿಹೊಳೆ	ಚಿತ್ರದುರ್ಗ
7.	ಗೊಂಡೇನಹಳ್ಳಿ	ಚಿಕ್ಕಮಗಳೂರು
8.	ಮಾದಿನೂರ್	ಕೊಪ್ಪಳ
9.	ಉದ್ಬೂರು	ಮೈಸೂರು
10.	ಗುಡ್ಡದನೇರಳೆಕರೆ	ಚಿತ್ರದುರ್ಗ
11.	ವೆಂಕಟಾಪುರ	ಗದಗ(ಧಾರವಾಡ)
12.	ಹೊನಗಾನಹಳ್ಳಿ	ಮಂಡ್ಯ
13.	ಪಾಲ	ಉತ್ತರಕನ್ನಡ
14.	ದೇವರಹಳ್ಳಿ	ದಾವಣಗೆರೆ
15.	ಜಾನಮಟ್ಟಿ	ಬೆಳಗಾಂ
16.	ಶಿರವಾಡ	ಧಾರವಾಡ
17.	ಕೋಣಮೇಳರುಂಡ	ಬೀದರ್
18.	ಶಿರವಾರ	ಬಳ್ಳಾರಿ
19.	ಬಿ. ಎಸ್. ಜೋವೇರಿ	ಧಾರವಾಡ
20.	ಶ್ರೀನಿವಾಸ ಪರ್ದಗಿ	ಗುಲ್ಬರ್ಗಾ
21.	ಚಿಂತ್ರಪಳ್ಳಿ	ಬಳ್ಳಾರಿ
22.	ಸೇರಿಗೆ	ಬೆಂಗಳೂರ(ನಗರ)
23.	ಕಮರವಾಡಿ	ಗುಲ್ಬರ್ಗಾ
24.	ಮದಿಹಾಳ	ಗುಲ್ಬರ್ಗಾ
25.	ಬೆಟಗೇರಾ(ಬಿ)	ಗುಲ್ಬರ್ಗಾ
26.	ಹರದನಹಳ್ಳಿ	ಹಾಸನ
27.	ಹೊಸಬಂದಿಹರಳಾಪುರ	ರಾಯಚೂರು

ಅನುಬಂಧ - 2

"ಸ್ವಸ್ತಿ" ಗ್ರಾಮಗಳ ಪ್ರಾಯೋಜಕರ ಪಟ್ಟಿ

ಕ್ರಮ ಸಂಖ್ಯೆ	ಗ್ರಾಮ	ಜಿಲ್ಲೆ	ಪ್ರಾಯೋಜಕರ
1.	ಹೊಸಬಂದಿಹರಳಾಪುರ	ರಾಯಚೂರು	ಬರೂಕಗ್ರೂಪ್
2.	ಹರದನಹಳ್ಳಿ	ಹಾಸನ	ಹುಡ್ಕೋ
3.	ಸಿಂಗರಾಜಪುರ	ಬೆಂಗಳೂರು(ಗ್ರಾ)	ಹುಡ್ಕೋ
4.	ಸೇರಿಗೆ	ಬೆಂಗಳೂರು(ನಗರ)	ಬರೂಕ ಗ್ರೂಪ್
5.	ಪಾಲಾ	ಉತ್ತರಕನ್ನಡ	ಎಂ.ಎಸ್. ಐ. ಎಲ್

6.	ಬೆಟಗೇರಾ (ಬಿ)	ಗುಲ್ಬರ್ಗಾ	ವಾಸವದತ್ತ ಸಿಮೆಂಟ್ ಲಿಮಿಟೆಡ್
7.	ಕಮರವಾಡಿ	ಗುಲ್ಬರ್ಗಾ	ಎ.ಸಿ.ಸಿ. ಸಿಮೆಂಟ್, ವಾಡಿ
8.	ಮುದಿಬಾಳ	ಗುಲ್ಬರ್ಗಾ	ಬರೂಕ ಗ್ರೂಪ್
9.	ದೇವರಹಳ್ಳಿ	ದಾವಣಗೆರೆ	ಮೈಸೂರು ಕಾಗದ ಕಾರ್ಖಾನೆ
10.	ಹೊನಗಾನಹಳ್ಳಿ	ಮಂಡ್ಯ	ಮೈಸುಗರ್ ಮತ್ತು ಮೈಸೂರು ಮಿನರಲ್ಸ್
11.	ಗೊಂಡೇನಹಳ್ಳಿ	ಚಿಕ್ಕಮಗಳೂರು	ಕುದುರೆಮುಖ ಕಬ್ಬಿಣ ಕಾರ್ಖಾನೆ

ಬೀಳಗಿ ಮತ ಕ್ಷೇತ್ರದಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಗ್ರಂಥಾಲಯಗಳ ನಿರ್ಮಾಣ

446 (694) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 1996-97 ನೇ ಸಾಲಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಹೊಸದಾಗಿ ಮಂಜೂರಾದ ಗ್ರಂಥಾಲಯಗಳು ಎಷ್ಟು?

2) ಅವುಗಳಲ್ಲಿ ಪ್ರಾರಂಭಿಸಲಾದ ಗ್ರಂಥಾಲಯಗಳು ಎಷ್ಟು?

3) ಗ್ರಂಥಾಲಯಗಳನ್ನು ಯಾವ ಆಧಾರದ ಮೇಲೆ ಹಂಚಿಕೆ ಮಾಡಿದ್ದೀರಿ (ವಿವರಣೆ ನೀಡುವುದು)

4) ಬೀಳಗಿ ಕ್ಷೇತ್ರದ ಜಮಖಂಡಿ ತಾಲ್ಲೂಕಿನ ಹುವ್ವಾಳ ಹಾಗೂ ಬೀಳಗಿ ತಾಲ್ಲೂಕಿನ ನಾಗರಾಳ ಗ್ರಾಮಕ್ಕೆ ಗ್ರಂಥಾಲಯದ ಬೇಡಿಕೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

5) 1997-98ನೇ ಸಾಲಿನಲ್ಲಾದರೂ ಹುವ್ವಾಳ ಹಾಗೂ ನಾಗರಾಳಕ್ಕೆ ಗ್ರಂಥಾಲಯಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

1) 100

2) 100

3) ಗ್ರಾಮ ಪಂಚಾಯಿತಿಗೆ ಒಂದು ಗ್ರಂಥಾಲಯ ಯೋಜನೆಯಂತೆ ಸಂಸತ್ ಸದಸ್ಯರು, ಶಾಸಕರು ಹಾಗೂ ಗ್ರಾಮ ಪಂಚಾಯಿತಿಗಳ ಸದಸ್ಯರ ಮನವಿಯ ಮೇಲೆ ಅಗತ್ಯತೆಗೆ ಅನುಗುಣವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲು ಹಂಚಿಕೆ ಮಾಡಲಾಗಿದೆ.

4) ಬಂದಿದೆ.

5) 1997-98 ನೇ ಸಾಲಿನಲ್ಲಿ ಹುವ್ವಾಳ ಗ್ರಾಮದಲ್ಲಿ ಗ್ರಂಥಾಲಯಗಳನ್ನು ಮಂಜೂರು ಮಾಡಲು ಪರಿಗಣಿಸಲಾಗಿದೆ. ನಾಗರಾಳವು ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನವಾಗಿಲ್ಲವಾದ್ದರಿಂದ ಆಯ್ಕೆ ಮಾಡಿರುವುದಿಲ್ಲ.

ಬೀಳಗಿ ಮತ ಕ್ಷೇತ್ರಕ್ಕೆ ಉರ್ದು ಶಾಲೆ ಮಂಜೂರಾತಿ

447 (695) ಜೆ.ಎ. ಪಾಟೀಲ (ಬೀಳಗಿ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕಳೆದ 3 ವರ್ಷಗಳಿಂದ ಬೀಳಗಿ ಕ್ಷೇತ್ರದಲ್ಲಿ ಸರಕಾರಿ ಉರ್ದು ಮಾಧ್ಯಮಿಕ ಶಾಲೆ (ಉರ್ದು ಸೆಕೆಂಡರಿ ಸ್ಕೂಲ್) ಮಂಜೂರಾಗಿ ಕೋರಿದ್ದರೂ ಮಾಡದಿರಲು ಕಾರಣವೇನು?

2) 1998-99ನೇ ಸಾಲಿಗೆ ಪ್ರಾರಂಭವಾಗುವಂತೆ ಬೀಳಗಿ ತಾಲ್ಲೂಕಾ ಸ್ಥಳದಲ್ಲಿ ಪ್ರಾರಂಭಿಸಲು ಅನುಮತಿ ನೀಡಲಾಗುವುದೆ?

3) ಬೀಳಗಿ ಕ್ಷೇತ್ರದಲ್ಲಿ ಸರಕಾರೀ ಜೂನಿಯರ್ ಕಾಲೇಜುಗಳ ಅವಶ್ಯಕತೆ ಇದ್ದು 1998-99ನೇ ಸಾಲಿಗೆ ಪ್ರಾರಂಭವಾಗುವಂತೆ ಅನುಮತಿ ನೀಡಲಾಗುವುದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು)

1) ಬೀಳಗಿ ಕ್ಷೇತ್ರದಲ್ಲಿ ಉರ್ದು ಸರ್ಕಾರಿ ಪ್ರೌಢಶಾಲೆ ಪ್ರಾರಂಭಿಸಲು 1997 ನೇ ಸಾಲಿನಲ್ಲಿ ಪ್ರಸ್ತಾವನೆ ಬಂದಿದ್ದು. ಆದರೆ, ಸರ್ಕಾರವು 1997-98ನೇ ಸಾಲಿನಲ್ಲಿ ಯಾವುದೇ ಹೊಸ ಸರ್ಕಾರಿ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡಬಾರದೆಂಬ ನೀತಿ ನಿರ್ಧಾರ ಕೈಗೊಂಡಿದ್ದು, ಅದರಂತೆ ಬೀಳಗಿ ಕ್ಷೇತ್ರದಲ್ಲಿ ಉರ್ದು ಸರ್ಕಾರಿ ಪ್ರೌಢಶಾಲೆಯ ಮಂಜೂರಾತಿಯ ಪ್ರಸ್ತಾವನೆಯನ್ನು ಪರಿಶೀಲಿಸಲಿಲ್ಲ.

2) ಪರಿಶೀಲಿಸಲಾಗುವುದು

3) ಬೀಳಗಿಯಲ್ಲಿ ಈಗಾಗಲೇ ಒಂದು ಖಾಸಗಿ ಸಂಯುಕ್ತ ಪದವಿಪೂರ್ವ ಕಾಲೇಜು ಇದ್ದು ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇರುವುದರಿಂದ ಮತ್ತೊಂದು ಸರ್ಕಾರಿ ಪದವಿಪೂರ್ವ ಕಾಲೇಜಿನ ಅವಶ್ಯಕತೆ ಇರುವುದಿಲ್ಲ.

ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ ವೈದ್ಯಾಧಿಕಾರಿಗಳ ಹಾಗೂ ಮಹಿಳಾ ವೈದ್ಯಾಧಿಕಾರಿಗಳ ನೇಮಕಾತಿ

448 (696) ಶ್ರೀ ಜೆ.ಟಿ. ಪಾಟೀಲ (ಬೀಳಗಿ) : ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ವೈದ್ಯಾಧಿಕಾರಿಗಳು ಹಾಗೂ ಮಹಿಳಾ ವೈದ್ಯಾಧಿಕಾರಿಗಳ ಕೊರತೆ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

2) ಎಷ್ಟು ವರ್ಷಗಳಿಂದ ವೈದ್ಯಾಧಿಕಾರಿಗಳ ಕೊರತೆ ಇದೆ? ಹುದ್ದೆಗಳನ್ನು ಸಂಪೂರ್ಣವಾಗಿ ತುಂಬದೇ ಇರಲು ಕಾರಣವೇನು?

3) ಕಳೆದ ಒಂದು ವರ್ಷದಿಂದ ಬೀಳಗಿ ತಾ: ಕೇಂದ್ರ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬೀಳಗಿ ಕ್ಷೇತ್ರದ ಸಾವಳಗಿಯಲ್ಲಿಯೂ ವೈದ್ಯಾಧಿಕಾರಿ ಹಾಗೂ ಮಹಿಳಾ ವೈದ್ಯಾಧಿಕಾರಿಗಳು ಇಲ್ಲದಿರುವುದನ್ನು ಸಾರ್ವಜನಿಕರು ಸರ್ಕಾರದ ಗಮನಕ್ಕೆ ತಂದರೂ ಅಲ್ಲಿ ಖಾಯಂ ಡಾಕ್ಟರನ್ನು ತುಂಬದೆ ಇರಲು ಕಾರಣವೇನು?

5) ಸಾವಳಗಿ ತಾ: ಕೇಂದ್ರವಾಗುವ ಎಲ್ಲಾ ಲಕ್ಷಣಗಳು ಹೊಂದಿದ್ದು ಕಳೆದ 2 ವರ್ಷಗಳಿಂದ ಅಲ್ಲಿನ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಲು ಒತ್ತಾಯಿಸಿದ್ದರೂ ಇದುವರೆಗೂ ಮೇಲ್ದರ್ಜೆಗೆ ಏರಿಸದಿರಲು ಕಾರಣವೇನು? ಹಾಗಿದ್ದಲ್ಲಿ ಕೂಡಲೇ ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು) :

1) 715 ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿ ಇವೆ.

2) ಸುಮಾರು 6 ತಿಂಗಳಿಂದ 1 ವರ್ಷದವರೆಗೆ ವೈದ್ಯರ ಕೊರತೆ ಇದೆ. ನೇಮಕಗೊಂಡ ವೈದ್ಯರು ಕರ್ತವ್ಯಕ್ಕೆ ಹಾಜರಾಗದೆ ಇರುವುದು ವಯೋ ನಿವೃತ್ತಿಯಿಂದ ಸ್ನಾತಕೋತ್ತರ ವ್ಯಾಸಾಂಗಕ್ಕೆ ತೆರಳುವುದರಿಂದ ಬಡ್ತಿ ಹೊಂದುವುದರಿಂದ ಹುದ್ದೆಗಳು ಖಾಲಿಯಾಗುತ್ತಲೇ ಇರುತ್ತವೆ. ಆದ್ದರಿಂದ ಹುದ್ದೆಗಳನ್ನು ಸಂಪೂರ್ಣವಾಗಿ ತುಂಬಲು ಸಾಧ್ಯವಾಗುವುದಿಲ್ಲ.

3) ಬಂದಿದೆ. ಬೀಳಗಿ ಆರೋಗ್ಯ ಕೇಂದ್ರಕ್ಕೆ 2 ಹುದ್ದೆಗಳು ಮಂಜೂರಾಗಿದ್ದು 2 ರಲ್ಲಿ ಪುರುಷ ವೈದ್ಯರು ಕಳೆದ 5 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಹುದ್ದೆ ಖಾಲಿ ಇರುವುದಿಲ್ಲ. ಮಹಿಳಾ ರೋಗಿಗಳಿಗೆ ಅನಾನುಕೂಲವಾಗದಂತೆ ನೋಡಿಕೊಳ್ಳಲು ಡಾ: ಜಯಶ್ರೀ ಮಹಿಳಾ ಗುತ್ತಿಗೆ ವೈದ್ಯರನ್ನು ನಿಯೋಜಿಸಿದ್ದು, ಈ ವೈದ್ಯರ ಸೇವೆ ಖಾಯಂ ಆಗಿರುವುದರಿಂದ ಇವರನ್ನು ಮೂಲಾಸ್ಥಾನಕ್ಕೆ ಹಿಂದಿರುಗಿಸಲಾಗಿದೆ.

4) ಸಾವಳಗಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯರನ್ನು ಅಮಾನತ್ತಿನಲ್ಲಿ ಇಡಲಾಗಿದೆ. ಮಹಿಳಾ ವೈದ್ಯರ ಹುದ್ದೆಯಲ್ಲಿ ಹಾಲಿ ಪುರುಷ ಗುತ್ತಿಗೆ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮಹಿಳಾ ವೈದ್ಯರನ್ನು ನೇಮಿಸಲು ಏಪ್ರಿಲ್, ಮೇ ತಿಂಗಳಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು.

5) ಸಾವಳಗಿಯು ಜಮಖಂಡಿ ತಾಲ್ಲೂಕಿನ ಗ್ರಾಮವಾಗಿರುತ್ತದೆ. ಜಮಖಂಡಿ ತಾಲ್ಲೂಕಿನಲ್ಲಿ ಗ್ರಾಮೀಣ ಜನ ಸಂಖ್ಯೆಗೆ ಅನುಗುಣವಾಗಿ 2 ಸಮುದಾಯ ಆರೋಗ್ಯ ಕೇಂದ್ರಗಳು ಈಗಾಗಲೇ ಕಾರ್ಯನಿರ್ವಹಿಸುತ್ತಿದೆ.

ಡಿ. ಡಿ. ಟಿ. ಮಾರಾಟ ನಿಷೇಧ

450 (673) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿ ಎನ್ ಸಿ - 10 ಶೇಕಡ ಮತ್ತು ಡಿ. ಡಿ. ಟಿ. ಬ್ಯಾಂಡ್ ಆರೋಗ್ಯದ ದೃಷ್ಟಿಯಲ್ಲಿ ಬ್ಯಾನ್ ಮಾಡಿರುವುದು ನಿಜವೇ?

2) ಈ ಬಗ್ಗೆ ಆರೋಗ್ಯ ಇಲಾಖೆ ತೆಗೆದುಕೊಂಡ ಕ್ರಮವೇನು;

3) ಬ್ಯಾನ್ ಮಾಡಿದರೂ ಮಾರುಕಟ್ಟೆಯಲ್ಲಿ ಡಿ. ಡಿ. ಟಿ. ಮಾರಾಟವಾಗುತ್ತಿರಲು ಕಾರಣವೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಭಾರತದಲ್ಲಿ ಜನಾರೋಗ್ಯ ಕಾರ್ಯಕ್ರಮದಲ್ಲಿ ಬಿ. ಹೆಚ್. ಸಿ. ಕೀಟನಾಶಕದ ಬಳಕೆ 1-1-97 ರಿಂದ ನಿಷೇಧಿಸಲಾಗಿದೆ.

ಡಿ. ಡಿ. ಟಿ. ಕೀಟನಾಶಕವು ಭಾರತದಲ್ಲಿ ಜನಾರೋಗ್ಯ ಕಾರ್ಯಕ್ರಮದಲ್ಲಿ ನಿಷೇಧಿಸಿರುವುದಿಲ್ಲ.

2) ಆರೋಗ್ಯ ಇಲಾಖೆಯು ಭಾರತ ಸರ್ಕಾರದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿದೆ.

3) ಡಿ. ಡಿ. ಟಿ. ಮಾರಾಟ ಆರೋಗ್ಯ ಇಲಾಖೆಗೆ ಸಂಬಂಧಿಸಿರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಔಷಧಿಗಳನ್ನು ವಿತರಿಸದಿರುವುದು

451 (661) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 1997-98 ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ರಾಜ್ಯ ಮತ್ತು ಜಿಲ್ಲಾ ಮಧ್ಯಗಳಿಂದ ಔಷಧಿಗಳನ್ನು ವಿತರಣೆ ಮಾಡಲಾಗಿದೆಯೆ; ವಿತರಣೆ ಮಾಡಲಾದ ಔಷಧಿಗಳ ಪ್ರಮಾಣವೆಷ್ಟು; ಇನ್ನೂ ಎಷ್ಟು ಪ್ರಮಾಣದ ಔಷಧಿಗಳನ್ನು ವಿತರಿಸಬೇಕಾಗಿದೆ;

2) ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬೇಡಿಕೆ ಸಲ್ಲಿಸಿದ ಔಷಧಿಗಳನ್ನು ವಿತರಿಸದಿರಲು ಸಲ್ಲಿಸಿದ ಔಷಧಿಗಳನ್ನು ವಿತರಿಸದಿರಲು ಕಾರಣವೇನು; ಮತ್ತು ಈ ಬೇಡಿಕೆಯನ್ನು ಕೇಳುವ ಔಜಿತ್ಯವೇನು;

3) ಬೇಡಿಕೆಯ ಆಧಾರದ ಮೇಲೆ ಔಷಧಿಗಳನ್ನು ವಿತರಿಸದೇ ಇರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) :

1) ಹೌದು

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬರುವ ಒಟ್ಟು 110 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ 1997-98ನೇ ಸಾಲಿನಲ್ಲಿ ಔಷಧಿಗಳನ್ನು ವಿತರಿಸಲಾದ ಹಾಗೂ ಇನ್ನೂ ವಿತರಿಸಬೇಕಾದ ವಿವರ ಈ ಕೆಳಗಿನಂತಿದೆ:

ಜಿಲ್ಲೆ	ವಿತರಿಸಲಾದ ಮೊತ್ತ	ವಿತರಿಸಲಾದ ಮೊತ್ತ
ದಕ್ಷಿಣ ಕನ್ನಡ	5,90,662-00	2,61,692-00
ಉಡುಪಿ	4,43,070-00	3,42,800-00

2) ಇತ್ತೀಚಿನ ದರಗುತ್ತಿಗೆಯನ್ನು ಆಡಳಿತಾತ್ಮಕ ಕಾರಣಗಳಿಂದಾಗಿ ಸಕಾಲದಲ್ಲಿ ನಿಗಧಿಪಡಿಸಲಾಗಲಿಲ್ಲ. ಆದರೂ ಸರ್ಕಾರಿ ಔಷಧಿ ಮಳಿಗೆ ಬೆಂಗಳೂರು ಇಲ್ಲಿ ಹಾಲಿ ದಾಸ್ತಾನಿನಲ್ಲಿರುವ

ಔಷಧಿಗಳಿಂದ (ದಿನನಿತ್ಯ) ಪ್ರಾಥಮಿಕ ಆರೋಗ್ಯ ಕೇಂದ್ರಗಳವರ ಬೇಡಿಕೆ ಪಟ್ಟಿಯಂತೆ ಔಷಧಿಗಳನ್ನು ವಿತರಿಸಲಾಗುತ್ತಿದೆ.

3) ಉದ್ಭವಿಸುವುದಿಲ್ಲ.

ಗುಳೇದಗುಡ್ಡ ಕ್ಷೇತ್ರದಲ್ಲಿ ಕೆ.ಡಿ.ಪಿ. ಸಭೆಗಳಲ್ಲಿ ಶಾಸಕರ ಸ್ಥಾನ ಹಾಗೂ ಅಧಿಕಾರ ವ್ಯಾಪ್ತಿ ಬಗ್ಗೆ

452 (683) ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಉಪಮುಖ್ಯ ಮಂತ್ರಿಗಳು ಮತ್ತು ಹಣಕಾಸು ಯೋಜನೆ ಮತ್ತು ಕಾರ್ಮಿಕರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಗುಳೇದಗುಡ್ಡ ಮತಕ್ಷೇತ್ರದ ಶಾಸಕರು 20 ಅಂಶಗಳ ಶಾಸಕರ ಕೆ.ಡಿ.ಪಿ. ಸಭೆಗಳಲ್ಲಿ ಭಾಗವಹಿಸಲು ಯಾವ ಯಾವ ತಾಲ್ಲೂಕು ಕೇಂದ್ರಗಳಲ್ಲಿ ಭಾಗವಹಿಸಬೇಕು.

2) ಸದರಿ ಸಭೆಯಲ್ಲಿ ಗುಳೇದಗುಡ್ಡ ಶಾಸಕರ ಸ್ಥಾನ ಏನು? ಅವರ ಅಧಿಕಾರದ ವ್ಯಾಪ್ತಿ ಏನು?

3) ಬಾದಾಮಿ, ಹುನಗುಂದ, ಬಾಗಲಕೋಟೆಯಲ್ಲಿ ನಡೆಯುವ ಕೆ.ಡಿ.ಪಿ. ಸಭೆಗಳಲ್ಲಿ ಭಾಗವಹಿಸುವುದಾದರೆ ಸರಕಾರದಿಂದ ನಿರ್ದಿಷ್ಟವಾದ ಸೂಚನೆ ಇದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು ಯೋಜನೆ ಮತ್ತು ಕಾರ್ಮಿಕ ಸಚಿವರು) :

1) ಗುಳೇದಗುಡ್ಡ ಮತಕ್ಷೇತ್ರ ಯಾವ ಯಾವ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವುದೋ ಆಯಾ ತಾಲ್ಲೂಕುಗಳ ತ್ರೈಮಾಸಿಕ ಕೆ.ಡಿ.ಪಿ. ಸಭೆಗಳಲ್ಲಿ ಭಾಗವಹಿಸಬಹುದು.

2) ಸದರಿ ಸಭೆಯಲ್ಲಿ ಗುಳೇದಗುಡ್ಡ ಶಾಸಕರು ಸಹ ಅಧ್ಯಕರು. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತ್ರೈಮಾಸಿಕ ಸಭೆಗಳಲ್ಲಿ ಸಹ ಅಧ್ಯಕ್ಷರಾಗಿ ಭಾಗವಹಿಸುವುದರ ಮೂಲಕ ಪ್ರಗತಿಯನ್ನು ಪರಿಶೀಲಿಸಿ ಅನುಷ್ಠಾನದಲ್ಲಿ ಉದ್ಭವಿಸಬಹುದಾದ ಕುಂದುಕೊರತೆಗಳನ್ನು ನಿವಾರಿಸಿ ಸೂಕ್ತ ಪರಿಹಾರಗಳನ್ನು ಸೂಚಿಸುವುದು.

3) ಸರ್ಕಾರಿ ಆದೇಶ ಸಂಖ್ಯೆ: ಪಿಡಿ 309 ಪಿಟಿಪಿ 94, ದಿನಾಂಕ 7.8.95 ರ ಮಾರ್ಗಸೂಚಿಗಳನ್ವಯ ಶಾಸಕರು ಸಭೆಗಳಲ್ಲಿ ಭಾಗವಹಿಸುವ ಅವಕಾಶ ನಿರ್ಮಿಸಿದೆ.

ಶಾಲಾ ಕಾಲೇಜುಗಳಲ್ಲಿ ಶಿಕ್ಷಕೇತರರ ನಿಬ್ಬಂದಿ ನೇಮಕಾತಿ

454 (714) ಶ್ರೀ ರಾಜಶೇಖರ ವಿ. ಶೀಲವಂತ (ಗುಳೇದಗುಡ್ಡ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಕೇತರ ನಿಬ್ಬಂದಿ ನೇಮಿಸುವ ಸಲುವಾಗಿ ಸರ್ಕಾರದಿಂದ ಈ ವರ್ಷದ ಆಯವ್ಯಯದಲ್ಲಿ ಅವಕಾಶ ಕೊಡಲಾಗುವುದೇ?

2) ಅವಕಾಶ ಕಲ್ಪಿಸಿಕೊಟ್ಟಲ್ಲಿ ನೇಮಕಾತಿ ಯಾವಾಗ ಕೈಗೊಳ್ಳಲಾಗುವುದು?

3) ಅವಕಾಶ ಕಲ್ಪಿಸಿಕೊಡದಿದ್ದಲ್ಲಿ ನಿವೃತ್ತಿ ಮರಣ ನಂತರ ಉದ್ಭವಿಸುವ ಸ್ಥಾನಗಳನ್ನು ಹೇಗೆ ನಿಭಾಯಿಸಬೇಕು? ಅದಕ್ಕೇನಾದರೂ ಸರ್ಕಾರ ಪರ್ಯಾಯ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು)

1) ಶಿಕ್ಷಕೇತರ ಸಿಬ್ಬಂದಿಯ ನೇಮಕಾತಿ ಅಥವಾ ವೇತನ ನೀಡುವ ಸಲುವಾಗಿ ಪ್ರತ್ಯೇಕವಾಗಿ ಆಯವ್ಯಯದಲ್ಲಿ ಅವಕಾಶ ಮಾಡಲಾಗುವುದಿಲ್ಲ.

ಸರ್ಕಾರಿ ಶಾಲಾ ಕಾಲೇಜುಗಳಿಗೆ ಸಂಬಂಧಿಸಿದಂತೆ ಮಂಜೂರಾಗಿ ಮತ್ತು ಭರ್ತಿಯಾಗಿರುವ ಶಿಕ್ಷಕೇತರ ಹುದ್ದೆಗಳಿಗೆ ವೇತನಾವಕಾಶವನ್ನು ಆಯವ್ಯಯದಲ್ಲಿ ಮಾಡಲಾಗಿದೆ. ಖಾಸಗಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಈಗಾಗಲೇ ಸರ್ಕಾರದಿಂದ ಅನುಮೋದಿತವಾಗಿರುವ ಶಿಕ್ಷಕೇತರ ಹುದ್ದೆಗಳಿಗೆ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ.

2) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವ ಕಾರಣ ಶಿಕ್ಷಕೇತರ ಸಿಬ್ಬಂದಿ ನೇಮಕಾತಿಗೆ ಅವಕಾಶವಿಲ್ಲದಿರುವುದರಿಂದ ಸದ್ಯದಲ್ಲಿ ನೇಮಕಾತಿ ಮಾಡಲಾಗುವುದಿಲ್ಲ.

3) ಎಲ್ಲಾ ತೆರನಾದ ಬೋಧಕೇತರ ಸಿಬ್ಬಂದಿಯನ್ನು ತುಂಬಲು ಅವಕಾಶವಿಲ್ಲ. ಆದರೂ ಕನಿಷ್ಠ ಶಿಕ್ಷಕೇತರ ಸಿಬ್ಬಂದಿಯನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರವು ಯಾವುದೇ ಶಿಕ್ಷಕೇತರ ಸಿಬ್ಬಂದಿ ಇಲ್ಲದಿರುವ ಅನುದಾನಿತ ಪ್ರೌಢಶಾಲೆಗಳಲ್ಲಿ ಹಾಗು ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ಒಂದು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯನ್ನು ತುಂಬಲು ಅವಕಾಶ ಕಲ್ಪಿಸಿದೆ. ವಿಜ್ಞಾನ ಬೋಧನೆಗೆ ಪ್ರಯೋಗಾಲಯವಿರುವ ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಒಂದು ಪ್ರಯೋಗಶಾಲಾ ಸಹಾಯಕ ಹುದ್ದೆಯನ್ನು ತುಂಬಲು ಅವಕಾಶ ಕಲ್ಪಿಸಲಾಗಿದೆ. ಸರ್ಕಾರಿ ಶಾಲಾ ಕಾಲೇಜುಗಳಲ್ಲಿಯೂ ಕನಿಷ್ಠ ಶಿಕ್ಷಕೇತರ ಸಿಬ್ಬಂದಿ ಒದಗಿಸುವ ವ್ಯವಸ್ಥೆ ಮಾಡಲಾಗುತ್ತಿದೆ.

ಸರ್ಕಾರವು ಆರ್ಥಿಕ ಮಿತವ್ಯಯ ಆದೇಶವನ್ನು ಜಾರಿಗೆ ತಂದಿರುವ ಹಿನ್ನೆಲೆಯಲ್ಲಿ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಅಧಿಕ ಆದ್ಯತೆ ನೀಡುವ ಕಾರಣದಿಂದ ಖಾಲಿ ಇರುವ ಶಿಕ್ಷಕೇತರ ಹುದ್ದೆಗಳನ್ನು ತುಂಬದಿರಲು ತೀರ್ಮಾನಿಸಿರುವುದರಿಂದ ಎಲ್ಲಾ ಶಿಕ್ಷಕೇತರ ಹುದ್ದೆಗಳನ್ನು ತುಂಬಲು ಸಾಧ್ಯವಾಗುವುದಿಲ್ಲ.

ಕಮಲಾಪುರ ಕ್ಷೇತ್ರದಲ್ಲಿ ಜೂನಿಯರ್ ಕಾಲೇಜು ಕಟ್ಟಡ

456 (378) ಶ್ರೀ. ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಕಮಲಾಪುರ ಕ್ಷೇತ್ರ ವಿ.ಕೆ. ಸಲಗರ್, ಖಜೂರಿ ನರೋಣ, ಇಷ್ಟು ಸ್ಥಳಗಳಲ್ಲಿ ಜೂನಿಯರ್ ಕಾಲೇಜು ಕಟ್ಟಡಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ ಯಾವಾಗ ಕಟ್ಟಡಗಳನ್ನು ಕಟ್ಟಲಾಗುವುದು?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಶಿಕ್ಷಣ ಸಚಿವರು)

1) ಬಂದಿದೆ

2) ವಿ.ಕೆ. ಸಲಗರ ಮತ್ತು ಖಜೋರಿ ಗ್ರಾಮಗಳಲ್ಲಿ ಇರುವ ಪ.ಪೂ. ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಲ್ಲದೆ ಸರಿಯಾಗಿ ನಡೆಯುತ್ತಿಲ್ಲವೆಂದು ವರದಿಯಾಗಿದೆ.

3) ನರೋಣ ಗ್ರಾಮದಲ್ಲಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದ್ದರೂ ಸಹ ಅಭಿವೃದ್ಧಿ ಹೊಂದುವ ಸಾಧ್ಯತೆ ಇರುವುದರಿಂದ ನರೋಣ ಗ್ರಾಮದಲ್ಲಿ ಪ್ರತ್ಯೇಕ ಕಟ್ಟಡ ಕಟ್ಟುವ ಬಗ್ಗೆ ಆಯವ್ಯಯದಲ್ಲಿನ ಹಣದ ಲಭ್ಯತೆಗೆ ಒಳಪಟ್ಟು ಅಗತ್ಯತೆ ಮತ್ತು ಜೇಷ್ಠತೆಯ ಆಧಾರದ ಮೇಲೆ ಪರಿಗಣಿಸಲಾಗುವುದು.

ಕಮಲಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ಹೈಸ್ಕೂಲ್ ಕಟ್ಟಡದ ನಿರ್ಮಾಣ

457 (376) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸ್ವಂತ, ಮುದ್ದಡಗ, ನಾಗೂರು, ನರೋಣ ಬೆಳಮಗಿ ಅನೇಕ ಹಳ್ಳಿಗಳಲ್ಲಿ ಪ್ರೌಢಶಾಲೆ ಮತ್ತು ಪ್ರಾಥಮಿಕ ಶಾಲೆಗಳ ಕಟ್ಟಡಗಳು ಇರುವುದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಹಾಗಿದ್ದಲ್ಲಿ ಯಾವಾಗ ಕಟ್ಟಡಗಳನ್ನು ನಿರ್ಮಿಸಲಾಗುವುದು?

ಶ್ರೀ ಹೆಚ್. ಜಿ. ಗೋವಿಂದಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ಮುದ್ದಡಗ, ನಾಗೂರು ಮತ್ತು ಬೆಳಮಗಿಯಲ್ಲಿನ ಪ್ರೌಢಶಾಲೆಗಳಿಗೆ ಮಾತ್ರ ಸ್ವಂತ ಕಟ್ಟಡ ಇರುವುದಿಲ್ಲ. ಉಳಿದ ಶಾಲೆಗಳಿಗೆ ಸ್ವಂತ ಕಟ್ಟಡಗಳು ಇರುತ್ತವೆ.

2) ಬೆಳಮಗಿಯಲ್ಲಿ ಹೊಸ ಕಟ್ಟಡ ಪೂರ್ಣಗೊಂಡಿದೆ. ಉಳಿದ ಪ್ರೌಢಶಾಲೆಗಳ ಕಟ್ಟಡಗಳಿಗೆ ಸರ್ಕಾರ ಜಿಲ್ಲಾ ಪಂಚಾಯತ್‌ಗಳಿಗೆ ಒದಗಿಸಲಾದ ಹಣದಲ್ಲಿ ಕಟ್ಟಡ ನಿರ್ಮಿಸಲಾಗುವುದು.

ಕಮಲಾಪುರ ವಿಧಾನ ಸಭಾ ಕ್ಷೇತ್ರದಲ್ಲಿ ವೈದ್ಯರುಗಳ ಕೊರತೆ

458 (712) ಶ್ರೀ ರೇವುನಾಯಕ್ - ಬೆಳಮಗಿ (ಕಮಲಾಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಕಮಲಾಪುರ ಕ್ಷೇತ್ರದಲ್ಲಿ ಬಹಳಷ್ಟು ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

2) ನರೋಣಾ, ಮಹಾಗಾಂವ್, ಕಮಲಾಪುರ, ಡೊಂಗರ್‌ಗಾಂವ್, ಈ ಮೇಲ್ಕಂಡ ಆಸ್ಪತ್ರೆಗಳಿಗೆ ಡಾಕ್ಟರ್‌ಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

3) ಈ ಕ್ಷೇತ್ರದಲ್ಲಿ ಹೊಸ ಆಸ್ಪತ್ರೆಗಳ ಬಹಳ ಅವಶ್ಯಕತೆ ಇದ್ದು ಈ ಆಸ್ಪತ್ರೆಗಳನ್ನು ಯಾವಾಗ ಪ್ರಾರಂಭಿಸಲಾಗುವುದು.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು) :

1) ಬಂದಿದೆ

2) ಅ) ಪ್ರಾ. ಆ. ಕೇಂದ್ರ, ಡೊಂಗರ್‌ಗಾಂವ್, ಇಲ್ಲಿ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಪ್ರಾ. ಆ. ಕೇಂದ್ರ, ನರೋಣಾದಲ್ಲಿ ಒಬ್ಬ ವೈದ್ಯರು ಕಾರ್ಯನಿರ್ವಹಿಸುತ್ತಿದ್ದು, ಇನ್ನೊಬ್ಬ ವೈದ್ಯರು ಗೈರುಹಾಜರಾಗಿರುತ್ತಾರೆ.

ಇ) ಪ್ರಾ. ಆ. ಕೇಂದ್ರ, ಮಹಾಗಾಂವ್‌ನಲ್ಲಿ ಒಂದು ಹುದ್ದೆ ಖಾಲಿ ಇದೆ.

ಈ) ಪ್ರಾ. ಆ. ಕೇಂದ್ರ, ಕಮಲಾಪುರ, ಇಲ್ಲಿಯ ಎರಡು ಹುದ್ದೆಗಳ ಪೈಕಿ 1 ಹುದ್ದೆ ಖಾಲಿ ಇದೆ.

ಉ) ಅಂಬಲಗಾದಲ್ಲಿ ಒಂದು ಹುದ್ದೆ ಖಾಲಿ ಇದೆ.

ಗುಲ್ಬರ್ಗಾ ಜಿಲ್ಲಾಧಿಕಾರಿಯವರು ಈ ಖಾಲಿ ಹುದ್ದೆಗಳನ್ನು ತುಂಬಲು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಕಾತಿ ಮಾಡಲು ಸಂದರ್ಶನ ನಡೆಸಲು ದಿನಾಂಕವನ್ನು ನಿಗಧಿಪಡಿಸಿದ್ದಾರೆ.

3) ಈ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಜಿಲ್ಲಾ ಪಂಚಾಯತ್ ಅನುಮೋದನೆಯೊಂದಿಗೆ ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ.

ನಿರ್ಮಲಗ್ರಾಮ ಯೋಜನೆಯಡಿಯಲ್ಲಿ ಕಟ್ಟಿಸಿರುವ ಶೌಚಗೃಹಗಳ ಸಂಖ್ಯೆ

459 (658) ಶ್ರೀ ಎಸ್. ರಾಜಣ್ಣ (ಭಾರತೀನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಲಗ್ರಾಮ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಕಟ್ಟಿಸಿರುವ ಶೌಚಾಗೃಹಗಳ ಸಂಖ್ಯೆ ಎಷ್ಟು?

2) ಈ ಶೌಚಾಗೃಹಗಳ ವೇಸ್ಟ್ ಅನ್ನು ಯಾವ ರೀತಿ ಹೊರಹಾಕಲಾಗುತ್ತಿದೆ;

3) ಇವುಗಳೆಲ್ಲವನ್ನೂ ಗ್ರಾಮದ ಹೊರಭಾಗದಲ್ಲಿ ಪರಿಷ್ಕರಿಸಿ ಅದನ್ನು ಸದುಪಯೋಗ ಪಡಿಸಿಕೊಳ್ಳುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಲ ಗ್ರಾಮ ಯೋಜನೆಯಡಿಯಲ್ಲಿ 2. 10. 95 ರಿಂದ 31. 1. 98ರವರೆಗೆ ಒಟ್ಟು 3. 67, 979 ಶೌಚಾಗೃಹಗಳನ್ನು ಕಟ್ಟಲಾಗಿದೆ.

2) ಶೌಚಾಗೃಹಗಳ ಮಲವನ್ನು ಸೋಕ್ ಪಿಟ್‌ನಲ್ಲಿ ಸಂಗ್ರಹಿಸಲಾಗುತ್ತಿದ್ದು, ಸುಮಾರು (1 1/2 (ಒಂದೂವರೆ) ವರ್ಷ ಅವಧಿಯಲ್ಲಿ, ಗೊಬ್ಬರವಾಗಿ ಮಾರ್ಪಾಡಾಗುತ್ತದೆ.

3) ಇಲ್ಲ.

ನಂಜನಗೂಡಿನಲ್ಲಿರುವ ಮ್ಯಾಕ್ಸ್ ಫಾರ್ಮ ಕೈಗಾರಿಕೆಯಿಂದ ಬರುವ ವಿಷಾನಿಲ ತಡೆಗಟ್ಟುವಿಕೆ

460 (708) ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ: ಮ್ಯಾಕ್ಸ್ ಫಾರ್ಮ ಕೈಗಾರಿಕೆಯಿಂದ ವಿಷಾನಿಲದಿಂದ ಪ್ರಾಣಾಪಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಕಳೆದ ಒಂದು ವರ್ಷದಿಂದಲೂ ಸಾರ್ವಜನಿಕರಿಂದ ಈ ಬಗ್ಗೆ ದೂರುಗಳು ಬಂದಿಲ್ಲವೇ, ಪಲ್ಯೂಷನ್ ಬೋರ್ಡ್ ಅಧಿಕಾರಿಗಳನ್ನೊಳಗೊಂಡ ಕ್ರಮಗಳೇನು?

3) ಈ ಕಾರ್ಖಾನೆಯ ಸುತ್ತಮುತ್ತ ಪ್ರದೇಶದಲ್ಲಿ ಬಯದ ವಾತಾವರಣ ಇದ್ದು, ಇದಕ್ಕೆ ಸರ್ಕಾರದಿಂದ ನೀಡಲಾಗುವ ಪರಿಹಾರವೇನು?

ಶ್ರೀ ಬಸವರಾಜ್ ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಿಕ ಇಂಧನ ರಾಜ್ಯ ಸಚಿವರು)

1) ಬಂದಿದೆ

2) ಹೌದು, ದೂರುಗಳು ಬಂದಿವೆ. ಮ್ಯಾಕ್ಸ್‌ಫಾರ್ಮ ಕೈಗಾರಿಕೆಯಲ್ಲಿ ಇದುವರೆವಿಗೂ 3 ಅಪಘಾತಗಳು ಸಂಭವಿಸಿದ್ದು, ಇದರ ವಿವರಗಳು ಹಾಗೂ ಕೈಗೊಂಡ ಕ್ರಮಗಳು ಕೆಳಕಂಡಂತೆ ಇದೆ:

1) ದಿನಾಂಕ : 9.4.97 ರಂದು ಉದ್ದಿಮೆಯ ತನ್ನ ಸರಹದ್ದಿನಲ್ಲಿ ಹಾದು ಹೋಗುವ ಮಳೆ ನೀರಿನ ಚರಂಡಿಯ ಮೇಲ್ಭಾಗದಲ್ಲಿ ಸಂಗ್ರಹಿಸಿ ಇಟ್ಟಿದ್ದ ಘನ ತ್ಯಾಜ್ಯ ವಸ್ತುಗಳ ಮಳೆ ನೀರಿನೊಂದಿಗೆ ಚರಂಡಿ ಸೇರಿ, ಉದ್ದಿಮೆಯ ಸರಹದ್ದಿನಿಂದ ಆಚೆ ಹೋಗಿ ಹಸುಗಳು ಈ ನೀರನ್ನು ಕುಡಿದು ಅಸುನೀಗಿರುತ್ತವೆ. ಈ ಸಮಯದಲ್ಲಿ ಉದ್ದಿಮೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಕಾಯ್ದೆಯಡಿ ಕಲಂ 32(1)(ಸಿ) ರಡಿಯಲ್ಲಿ ನಿಷೇದಾಜ್ಞೆಯನ್ನು ಜಾರಿ ಮಾಡಿರುತ್ತದೆ. ಈ ಸತ್ತ ಹಸುಗಳ ಮಾಲೀಕರಿಗೆ ಉದ್ದಿಮೆಯು ಪರಿಹಾರವನ್ನು ನೀಡಿರುತ್ತದೆ. ಘನ ತ್ಯಾಜ್ಯವಸ್ತುಗಳ ನಿರ್ವಹಣೆ ಕುರಿತು ಉದ್ದಿಮೆಯು ಈಗ ಕ್ರಮ ಕೈಗೊಂಡು ಸುರಕ್ಷಿತ ಸ್ಥಳದಲ್ಲಿ ಶೇಖರಿಸಿ, ಇನ್‌ಸಿನರೇಟರ್ (Incinerator) ಎಂಬ ಘಟಕವನ್ನು ಅಳವಡಿಸಿದ್ದು, ಇದರಲ್ಲಿ ಘನ ತ್ಯಾಜ್ಯವಸ್ತುಗಳನ್ನು ವೈಜ್ಞಾನಿಕವಾಗಿ ಸುಡಲಾಗುತ್ತಿದೆ.

2) ದಿನಾಂಕ 7. 10.97 ರಂದು ಕಾರ್ಖಾನೆಯ ರಿಯಾಕ್ಟರ್ಸ್ ವಿಭಾಗದಲ್ಲಿ ಕೆಲಸಗಾರರು ವೇಸ್ಟ್ ಗ್ಯಾಸ್ ರವಾನಿಸುವ ಕೊಳವೆ ದುರಸ್ತಿ ಮಾಡುವಾಗ ಆ ಕೊಳವೆಯನ್ನು ಕತ್ತರಿಸಿದಾಗ, ಅದರಲ್ಲಿ ಅಡಗಿದ್ದ ಅನಿಲದಿಂದ ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸುಮಾರು 7 ಜನ ಕೆಲಸಗಾರರಿಗೆ ಅಸ್ವಸ್ಥತೆ ಉಂಟಾಗಿ ಅದರಲ್ಲಿ ಇಬ್ಬರನ್ನು ಆಸ್ಪತ್ರೆಗೆ ಸೇರಿಸಿದ ಘಟನೆ ಸಂಭವಿಸಿರುತ್ತದೆ. ಅದನ್ನು ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆಯವರು ಕೂಲಂಕುಷವಾಗಿ ತನಿಖೆ ಮಾಡಿ, ಕಂಡುಬಂದಂತಹ ಲೋಪದೋಷಗಳನ್ನು ಮತ್ತು ಉಲ್ಲಂಘನೆಗಳನ್ನು ಗುರುತಿಸಿ ಅವುಗಳ ಬಗ್ಗೆ ನ್ಯಾಯಾಲಯದಲ್ಲಿ ವ್ಯವಸ್ಥಾಪಕ ವರ್ಗದವರ ಮೇಲೆ

ಮೊಕದ್ದಮೆಯನ್ನು ಹೂಡಲಾಗಿದೆ. ಸದರಿ ಇಬ್ಬರು ಕೆಲಸಗಾರರು ಆಸ್ಪತ್ರೆಯಲ್ಲಿ ಕೆಲವು ದಿನಗಳ ಚಿಕಿತ್ಸೆ ಪಡೆದು ಸಾಮಾನ್ಯ ಸ್ಥಿತಿಗೆ ಬಂದು ಕಾರ್ಖಾನೆಯಲ್ಲಿ ಕೆಲಸ ಮುಂದುವರೆಸುತ್ತಿದ್ದಾರೆ.

3) ದಿನಾಂಕ 16. 12. 98 ರಂದು ವಾಯು ಮಾಲಿನ್ಯ ನಿಯಂತ್ರಣ ಉಪಕರಣವಾದ ಸ್ಕ್ರಬರ್ ದುರಸ್ತಿ ಸಮಯದಲ್ಲಿ ಮತ್ತೊಂದು ಅನಾಹುತ ಸಂಭವಿಸಿದ್ದು ಮಂಡಳಿಯು ಉದ್ದಿಮೆಯನ್ನು ದಿ: 16. 10. 97 ರಿಂದ 31. 1. 98 ರವರೆಗೆ ವಾಯು ಕಾಯ್ದೆ ಕಲಂ 31 (ಎ) ರಡಿಯಲ್ಲಿ ಮುಚ್ಚಿಸಿತ್ತು. ಈ ಅಪಘಾತವು ಕಾರ್ಖಾನೆಯ ಸಿಬ್ಬಂದಿ ಹಾಗೂ ಆಡಳಿತ ವರ್ಗವು ಸೂಕ್ತ ಸುರಕ್ಷಿತ ಕ್ರಮಗಳನ್ನು ಅಳವಡಿಸದ ಕಾರಣ ಸಂಭವಿಸಿದ ಈ ಅನಾಹುತದಲ್ಲಿ 4 ಜನ ಕಾರ್ಮಿಕರು ಮರಣ ಹೊಂದಿರುತ್ತಾರೆ. ಈ ಅನಾಹುತವನ್ನು ಕಾರ್ಖಾನೆ 1948ರಡಿ ಪರಿಗಣಿಸಿ ಈ ಬಗ್ಗೆ ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯ ಪರಿವೀಕ್ಷಕರು ಕಾನೂನು ರೀತ್ಯ ಕ್ರಮ ಜರುಗಿಸಿರುತ್ತಾರೆ.

4) ಅಪಘಾತದ ವರದಿ ತಿಳಿದ ತಕ್ಷಣ, ಇಲಾಖಾ ಕಾರ್ಯದರ್ಶಿ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು, ಹಾಗೂ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯ ಮುಖ್ಯ ಪರಿವೀಕ್ಷಕರೊಂದಿಗೆ ಸ್ಥಳ ಭೇಟಿ ಮಾಡಿ, ವಿಷಯದ ಮಹತ್ವದ ಆಧಾರದ ಮೇಲೆ ದಿ: 17. 12. 97 ರಂದು ಪರಿಸರ ಸಂರಕ್ಷಣಾ ಕಾಯಿದೆ ನಿಯಮ 5 ರಡಿ ಉದ್ದಿಮೆಯ ವಿರುದ್ಧ ನಿಷೇದಾಜ್ಞೆಯನ್ನು ನೀಡಲಾಗಿದೆ.

5) ಸರ್ಕಾರದ ಈ ಅಪಘಾತದ ಕಾರಣಗಳನ್ನು ಕಂಡು ಹಿಡಿದು ಇಂತಹ ಅಪಘಾತವು ಮರುಕಳಿಸಿದಂತೆ ಕ್ರಮ ಕೈಗೊಳ್ಳಲು ಒಂದು ತಜ್ಞರ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಕೆಲವೊಂದು ಸಲಹೆಗಳನ್ನು ಮಾಡಿದ್ದು ಇದರಲ್ಲಿ ತಕ್ಷಣವೇ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಉದ್ದಿಮೆಯು ಅಳವಡಿಸಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಮುಖ್ಯ ಪರಿವೀಕ್ಷಕರು ಜಂಟಿ ತಪಾಸಣೆ ನಡೆಸಿ, ಉದ್ದಿಮೆ ತೆಗೆದುಕೊಂಡ ಕ್ರಮಗಳು ಸಮರ್ಪಕವಾಗಿವೆ ಎಂದು ನೀಡಿದ ವರದಿಯ ಆಧಾರದ ಮೇಲೆ ಉದ್ದಿಮೆಗೆ ನೀಡಿದ್ದ ಕಾರ್ಖಾನೆ ಮುಚ್ಚುವ ಆಜ್ಞೆಯನ್ನು ಹಿಂಪಡೆದುಕೊಂಡು ಉದ್ದಿಮೆ ಉತ್ಪಾದನೆಯ ಕಾರ್ಯವನ್ನು ಮುಂದುವರಿಸಲು ಸರ್ಕಾರವು ದಿ: 24. 1. 98ರಲ್ಲಿ ಆದೇಶ ಹೊರಡಿಸಿರುತ್ತದೆ. ಉಳಿದ ದೀರ್ಘಕಾಲಿಕ ಶಿಫಾರಸ್ಸುಗಳನ್ನು ಕಾರ್ಖಾನೆಯು ಕಾರ್ಯರೂಪಕ್ಕೆ ತರುತ್ತಿದೆ.

ಕಾರ್ಖಾನೆಯು ಈಗಾಗಲೇ ವಾಯುಮಾಲಿನ್ಯ ಹಾಗೂ ಜಲ ಮಾಲಿನ್ಯ ವ್ಯವಸ್ಥೆಗಳನ್ನು ಅಳವಡಿಸಿರುತ್ತದೆ. ಈ ವ್ಯವಸ್ಥೆಗಳು ಸಮರ್ಪಕವಾಗಿ ಹಾಗೂ ವ್ಯವಸ್ಥಿತವಾಗಿ ಕಾರ್ಯಾಚರಣೆ ಮಾಡುವ ಬಗ್ಗೆ ಮಂಡಳಿಯು ನಿರಂತರ ಪರಿವೀಕ್ಷಣೆ ನಡೆಸುತ್ತಿದೆ. ಹಾಗೂ ತಜ್ಞರ ಸಮಿತಿಯು ನೀಡುವ ಸಲಹೆಯು ಪಾಲನೆಯನ್ನು ಮಂಡಳಿಯು ಮಾಪನ ಮಾಡುತ್ತಿದೆ. ಉದ್ದಿಮೆ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಇಲಾಖಾ ಕಾರ್ಯದರ್ಶಿಗಳು 2 ತಿಂಗಳಿಗೊಮ್ಮೆ ಪರಿಶೀಲಿಸುತ್ತಾರೆ. ಕಾರ್ಖಾನೆ ಮತ್ತು ಬಾಯ್ಲರ್ ಇಲಾಖೆಯು ಉದ್ದಿಮೆಯ ಸುತ್ತಮುತ್ತ ಪ್ರದೇಶದ ಸುರಕ್ಷತೆಗಾಗಿ ಉದ್ದಿಮೆ ತಯಾರಿಸದೆ ಆನ್‌ಸೈಟ್ ಎಮರ್ಜೆನ್ಸಿ ಪ್ಲಾನ್ ಅನ್ನು ಅನುಮೋದಿಸಿ ಅದಿರ, ನಿರ್ವಹಣೆಯ ಮೇಲೆ ನಿಗಾ ಇಡುತ್ತದೆ.

ದಾವಣಗೆರೆ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ

461 (706) ಶ್ರೀ ಎಸ್. ಎ. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ದಾವಣಗೆರೆಯಲ್ಲಿ ಡಿ. ಆರ್. ಎಂ. ಸಿ. ಕಾಲೇಜು ಬಿಲ್ಡಿಂಗ್ ಇರುವುದು ನಿಜವೇ?

2) ಈಗ ಪ್ರಥಮ ದರ್ಜೆ ಕಾಲೇಜಿಗೆ ಬಿಲ್ಡಿಂಗ್ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಹಾಗಿದ್ದಲ್ಲಿ ಸದರಿ ಕಟ್ಟಡವನ್ನು ಸರ್ಕಾರ ಬಿಡಿಸಿ ಕೊಡಲು ಸಹಾಯ ಮಾಡುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1) ನಿಜ

2) ಬಂದಿದೆ

3) ಪರಿಶೀಲಿಸಲಾಗುವುದು.

ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರ ನೇಮಕಾತಿ

462 (651) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದ ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹಿಂದಿ ಶಿಕ್ಷಕರ ಹುದ್ದೆಯನ್ನು ಭರ್ತಿ ಮಾಡಲಾಗಿದೆಯೇ?

2) ಮಾಡದಿದ್ದಲ್ಲಿ ಕಾರಣಗಳೇನು?

3) ಸದರಿ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ವಿವರ ನೀಡುವುದು).

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು) :

1) ಸರ್ಕಾರಿ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹಿಂದಿ ಶಿಕ್ಷಕರ ಹುದ್ದೆ ಭರ್ತಿ ಮಾಡುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ.

ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ಆಡಳಿತ ಮಂಡಳಿಗಳು ನೇಮಕಾತಿ ನಿಯಮ ಹಾಗೂ ಮೀಸಲಾತಿ ನಿಯಮಗಳನುಸಾರ ನೇಮಕ ಮಾಡಿಕೊಂಡಲ್ಲಿ, ಇಂತಹ ನೇಮಕಾತಿಗಳನ್ನು ಅನುಮೋದಿಸುವ ಬಗ್ಗೆ ಸಕ್ಷಮ ಪ್ರಾಧಿಕಾರಿಯು ಪರಿಶೀಲಿಸುವರು.

2) ಸರ್ಕಾರಿ ಪ್ರೌಢಶಾಲೆಗಳ ಖಾಲಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದ್ದು, ಆಯ್ಕೆಯ ಕಾರ್ಯವು ಪ್ರಗತಿಯಲ್ಲಿದೆ.

3) ಆದಷ್ಟು ತ್ವರಿತವಾಗಿ ಭರ್ತಿ ಮಾಡಲಾಗುವುದು.

ಉಡುಪಿ ತಾಲ್ಲೂಕಿನಲ್ಲಿ ಪದವಿ ಪೂರ್ವ ಶಿಕ್ಷಣ ತರಗತಿಗಳ ಪ್ರವೇಶಕ್ಕೆ ಹೆಚ್ಚುತ್ತಿರುವ ವಿದ್ಯಾರ್ಥಿಗಳ ಒತ್ತಡ

464 (649) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಉಡುಪಿ ತಾಲ್ಲೂಕಿನಲ್ಲಿ ಕಳೆದ ವರ್ಷಗಳಲ್ಲಿ (1972 ರಿಂದ) ಪ್ರಾರಂಭವಾಗಿರುವ ಪ್ರೌಢ ಶಾಲೆಗಳು ಎಷ್ಟು; ಪದವಿಪೂರ್ವ ಶಿಕ್ಷಣ ಶಾಲೆಗಳು ಎಷ್ಟು; (ಖಾಸಗಿ, ಖಾಸಗಿ ಅನುದಾನಿತ ಮತ್ತು ಸರಕಾರದ ಶಾಲೆಗಳ ಪ್ರತ್ಯೇಕವಾದ ವಿವರ ನೀಡುವುದು);

2) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಯಿಂದ ಉಡುಪಿ ತಾಲ್ಲೂಕಿನಲ್ಲಿ ಆರಂಭವಾಗಿರುವ ಖಾಸಗಿ ಹಾಗೂ ಸರಕಾರಿ ಪ್ರೌಢಶಾಲೆಗಳ ಪ್ರಮಾಣಕ್ಕೆ ಹೋಲಿಸಿದರೆ ಖಾಸಗಿ ಅಥವಾ ಸರಕಾರದ ಪದವಿ ಪೂರ್ವ ಶಿಕ್ಷಣದ ತರಗತಿಗಳು ಕಡಿಮೆ ಪ್ರಮಾಣದಲ್ಲಿರುವುದು ಸರಕಾರದ ಗಮನಕ್ಕೆ ಬಂದಿದೆಯೆ;

3) ಹೊಸ ಪದವಿ ಪೂರ್ವ ಶಿಕ್ಷಣ ತರಗತಿ ಪ್ರಾರಂಭಿಸಲು ಅನುಮತಿ ನೀಡದಿರುವುದರಿಂದ, ಪ್ರಥಮ ಪಿಯುಸಿ ಪ್ರವೇಶಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ನಿಜವೇ;

4) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1) ಉಡುಪಿ ತಾಲ್ಲೂಕಿನಲ್ಲಿರುವ ಪ್ರೌಢಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಕೆಳಕಂಡಂತಿದೆ:- (1972 ರಿಂದ ಪ್ರಾರಂಭವಾಗಿರುವ ಪ್ರೌಢಶಾಲೆಗಳು)

	ಪ್ರೌಢಶಾಲೆ	ಪ.ಪೂ. ಕಾಲೇಜು
ಸರ್ಕಾರಿ	16	09
ಖಾಸಗಿ ಅನುದಾನಿತ	15	10
ಖಾಸಗಿ ಅನುದಾನ ರಹಿತ	-	03
ಒಟ್ಟು	**31**	**22**

2) ಉಡುಪಿ ತಾಲ್ಲೂಕಿನಲ್ಲಿ ಒಟ್ಟು 22 ಪದವಿ ಪೂರ್ವ ಕಾಲೇಜುಗಳಿದ್ದು, ಸದರಿ ಕಾಲೇಜುಗಳಲ್ಲಿನ ವಿದ್ಯಾರ್ಥಿ ಸಂಖ್ಯೆಯನ್ನು ಗಮನಿಸಿದಾಗ ಇನ್ನೂ ಹೆಚ್ಚಿನ ಪದವಿ ಪೂರ್ವ ಕಾಲೇಜಿನ ಅಗತ್ಯತೆ ಕಂಡು ಬರುವುದಿಲ್ಲ.

3) ಈಗಾಗಲೇ ಸಾಕಷ್ಟು ಪದವಿ ಪೂರ್ವ ಕಾಲೇಜುಗಳನ್ನು ಆರಂಭಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

4) ಮೇಲೆ ಹೇಳಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಫಾರ್ಮಸಿಸ್ಟ್‌ಗಳು ಖಾಸಗಿ ಔಷಧಿ ಅಂಗಡಿಗಳನ್ನು ನಡೆಸುತ್ತಿರುವುದು

465 (650) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿಯಲ್ಲಿರುವ ಫಾರ್ಮಾಸಿಸ್ಟ್‌ಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

2) 5 ವರ್ಷಗಳಿಗಿಂತ ಹೆಚ್ಚಾಗಿ ಒಂದೇ ಸ್ಥಳದಲ್ಲಿ ಕೆಲಸ ಮಾಡುತ್ತಿರುವ ಫಾರ್ಮಾಸಿಸ್ಟ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

3) ಬಹಳಷ್ಟು ಸರ್ಕಾರಿ ಫಾರ್ಮಾಸಿಸ್ಟ್‌ಗಳು ಔಷಧಿ ಅಂಗಡಿಗಳನ್ನು ಖಾಸಗಿ ಯಾಗಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

4) ಹಾಗಿದ್ದಲ್ಲಿ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು; (ವಿವರ ನೀಡುವುದು)

ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) 1752

ಜಿಲ್ಲಾವಾರು ವಿವರ ಪಟ್ಟಿ ಲಗತ್ತಿಸಿದೆ.

2) 1087

ವಿವರ ಲಗತ್ತಿಸಿದೆ

3) ಬಂದಿರುವುದಿಲ್ಲ

4) ಉದ್ಭವಿಸುವುದಿಲ್ಲ.

Statement shwoing the District-Wise Vacancy Position of PHARMACISTS posts as on 21-8-98.

	District	Sanctioned	Working	Vacancy
1.	Bangalore (Urban)	135	125	10
2.	Bangalore (Rural)	120	76	44
3.	Kolar	137	91	46
4.	Tumkur	137	94	43
5.	Shimoga	157	91	66
6.	Chitradurga	176	120	56

1	2	3	4	5
7.	Mysore	205	133	72
8.	Mandya	141	85	56
9.	Madikeri	61	22	39
10.	Mangalore	176	84	92
11.	Hassan	154	85	69
12.	Chickmagalur	102	60	42
13.	Belgaum	155	123	32
14.	Karwar	137	111	26
15.	Dharwad	156	127	29
16.	Bijapur	134	99	35
17.	Gulbarga	152	96	56
18.	Bidar	70	60	10
19.	Bellary	90	60	30
20.	Raichur	96	66	30
	Total	**2661**	**1752**	**909**

Statement Showing the District Wise Information, Pharmacists/ working in the same place since five years in the State.

	District	Above five years working as Pharmacist in the Dept.
1.	Bangalore (Urban)	62
2.	Bangalore (Rural)	40
3.	Kolar	46
4.	Tumkur	50
5.	Shimoga	55
6.	Chitradurga	68
7.	Mysore	51
8.	Mandya	48
9.	Madikeri	15
10.	Mangalore	58

1	2	3
11.	Hassan	59
12.	Chickmagalur	47
13.	Belgaum	77
14.	Karwar	76
15.	Dharwad	81
16.	Bijapur	80
17.	Gulbarga	55
18.	Bidar	43
19.	Bellary	38
20.	Raichur	40
	Total	**1087**

ಶಾಲಾ ಕೊಠಡಿಗಳ ಕೊರತೆ

466 (647) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿರುವ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾ ಕೊಠಡಿಗಳ ಕೊರತೆ ಇರುವ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)

2) 1998-99ನೇ ಸಾಲಿನಲ್ಲಿ ಈ ಎಲ್ಲಾ ಕೊರತೆಗಳನ್ನು ನಿವಾರಿಸಲಾಗುವುದೇ, (ವಿವರ ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1) ಅನುಬಂಧದಲ್ಲಿ ನೀಡಿದೆ

2) 1998-99ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾಗಿರುವ ಆಯವ್ಯಯದಲ್ಲಿ ಕೊಠಡಿಗಳನ್ನು ನಿರ್ಮಿಸಲು ವಿವಿಧ ಯೋಜನೆಯಡಿಯಲ್ಲಿ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳಲಾಗುವುದು.

1993-94ನೇ ಸಾಲಿನಿಂದ ಇಲ್ಲಿಯವರೆಗೆ 23,781 ಪ್ರಾಥಮಿಕ ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದು 11,178 ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

224 ಪ್ರೌಢಶಾಲೆಗಳ ಕಟ್ಟಡಗಳ ನಿರ್ಮಾಣ ಕಾರ್ಯವೂ ಸಹ ಪ್ರಗತಿಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 647 ಕ್ಕೆ
ಅನುಬಂಧ

	ಜಿಲ್ಲೆ	ಶಾಲಾ ಕೊಠಡಿಗಳ ಕೊರತೆ ಇರುವ ಪ್ರಾಥಮಿಕ ಶಾಲೆಗಳ ಸಂಖ್ಯೆ	ಪ್ರೌಢಶಾಲೆಗಳಲ್ಲಿ ಕೊರತೆ ಇರುವ ಕೊಠಡಿಗಳ ಸಂಖ್ಯೆ
1.	ಕಾರವಾರ	301	64
2.	ಚಿಕ್ಕಮಗಳೂರು	455	105
3.	ರಾಯಚೂರು	913	203
4.	ಮಡಿಕೇರಿ	01	05
5.	ಮಂಡ್ಯ	120	20
6.	ಬೆಂಗಳೂರು ಗ್ರಾಮಾಂತರ	905	218
7.	ಶಿವಮೊಗ್ಗ	1144	361
8.	ಧಾರವಾಡ	495	150
9.	ತುಮಕೂರು	400	70
10.	ಬೆಳಗಾವಿ	2387	192
11.	ಬೀದರ್	200	78
12.	ಮೈಸೂರು	662	55
13.	ಬಿಜಾಪುರ	2149	116
14.	ಗುಲ್ಬರ್ಗಾ	170	65
15.	ಹಾಸನ	144	40
16.	ಕೋಲಾರ	510	125
17.	ದಕ್ಷಿಣ ಕನ್ನಡ	336	40
18.	ಬೆಂಗಳೂರು ದಕ್ಷಿಣ	345	143
19.	ಬಳ್ಳಾರಿ	61	09
20.	ಚಿತ್ರದುರ್ಗ	390	144
21.	ಬೆಂಗಳೂರು ಉತ್ತರ	69	10
	ಒಟ್ಟು	**12086**	**2340**

ಪುತ್ತೂರು ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು

467 (697) ಶ್ರೀ ಡಿ.ವಿ. ಸದಾನಂದೇಗೌಡ (ಪುತ್ತೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಪುತ್ತೂರು ಸರ್ಕಾರಿ ಆಸ್ಪತ್ರೆಯನ್ನು 100 ಬೆಡ್ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾಪವು ಯಾವ ಹಂತದಲ್ಲಿದೆ?

2) ಈ ಕಾರ್ಯವನ್ನು ಪ್ರಸ್ತುತ ವರ್ಷವೇ ಕಾರ್ಯರಂಭ ಮಾಡಲಾಗುವುದೇ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಈ ಪ್ರಸ್ತಾವನೆಯು ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ಪದ್ಧತಿಗಳ ಅಭಿವೃದ್ಧಿ ಯೋಜನೆಯ ಮೊದಲನೇ ಹಂತದಲ್ಲಿ ಸೇರ್ಪಡೆಯಾಗಿದ್ದು, ಇದಕ್ಕೆ ರೂ. 99.90 ಲಕ್ಷ ನಿಗಧಿಪಡಿಸಲಾಗಿದೆ.

2) ನಕ್ಷೆಗಳು ವಿಶ್ವಬ್ಯಾಂಕ್ ವಾಸ್ತು ಶಿಲ್ಪಿಗಳಿಂದ ಅನುಮೋದಿತವಾಗಿದ್ದು ಅಂದಾಜುಗಳಿಗೆ ಅನುಮೋದನೆ ಪಡೆದು ಕಾಮಗಾರಿಯನ್ನು ಇನ್ನು 6 ತಿಂಗಳಲ್ಲಿ ಪ್ರಾರಂಭಿಸಲಾಗುವುದು.

ಗ್ರಾಮ ಪಂಚಾಯತ್ ನೌಕರರಿಗೆ ಕನಿಷ್ಠ ವೇತನ ಮಂಜೂರಾತಿ

470 (699) ಶ್ರೀ ಜಿ.ವಿ. ರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿನ ಗ್ರಾಮಪಂಚಾಯತ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಸ ಗುಡಿಸುವವರು, ಬಿಲ್ ಕಲೆಕ್ಟರ್, ಪಂಪ್ ಆಪರೇಟರ್, ಸಿಪಾಯಿ, ಎಲೆಕ್ಟ್ರಿಷಿಯನ್‌ಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಇವರುಗಳಲ್ಲಿ ಎಸ್.ಸಿ., ಎಸ್.ಟಿ. ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

3) ಗ್ರಾಮಪಂಚಾಯಿತಿ ನೌಕರರಿಗೆ ಜೀವನಾವಶ್ಯಕ ಕನಿಷ್ಠ ಕೂಲಿ ಕೊಡಲಾಗುತ್ತಿದೆಯೇ?

4) ಜೀವನಾವಶ್ಯಕ ಕನಿಷ್ಠ ವೇತನ ಕೊಡುವಂತೆ ಗ್ರಾಮಪಂಚಾಯತ್ ನೌಕರರ ಬೇಡಿಕೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

5) ಈ ಗ್ರಾಮಪಂಚಾಯತ್ ನೌಕರರಿಗೆ ಈಗ ವಿವಿಧ ಹುದ್ದೆವಾರು ನೀಡುತ್ತಿರುವ ಮಾಸಿಕ ವೇತನ ಎಷ್ಟು?

6) ಗ್ರಾಮಪಂಚಾಯತ್ ನೌಕರರಿಗೆ ಸೇವಾ ನಿಯಮಾವಳಿ ರಚಿಸಿ ಸೇವಾ ಭದ್ರತೆ ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಜಿಲ್ಲಾವಾರು ವಿವರ ಲಗತ್ತಿಸಿದೆ.

2) ಜಿಲ್ಲಾವಾರು ವಿವರ ಲಗತ್ತಿಸಿದೆ.

3) ಸರ್ಕಾರದ ಆದೇಶ ಸಂಖ್ಯೆ: ಆರ್ ಡಿಪಿ. 102. ವಿ ಇ ಎಲ್. 90 ದಿನಾಂಕ 10. 1. 94 ರಲ್ಲಿ ಸಿಬ್ಬಂದಿ ಮಾದರಿಯನ್ನು ಹಾಗೂ ಅವರಿಗೆ ನೀಡಬೇಕಾಗಿರುವ ವೇತನವನ್ನು ನಿಗಧಿಪಡಿಸಲಾಗಿದೆ.

2) ಹೌದು

3) ಗ್ರಾಮಪಂಚಾಯಿತಿ ನೌಕರರಿಗೆ ಜೀವನಾವಕಾಶ ನೀಡುವ ಕೂಲಿ ಗರಿಷ್ಠ

1) ಕ್ಲರ್ಕ್ : ಅಕೌಂಟೆಂಟ್ : ಕಂ ಬೆರಳಚ್ಚುಗಾರ	-	900.00
2) ಬಿಲ್ ಕಲೆಕ್ಟರ್ - ಕಂ-ಕ್ಲರ್ಕ್	-	900.00
3) ವಾಲ್ವ್‌ಮೆನ್ : ಪಂಪ್ ಆಪರೇಟರ್ ಕಂ- ಮೆಕಾನಿಕ್	-	600.00
4) ಜವಾನ : ಆಟೆಂಡರ್ : ಕಸ ಗುಡಿಸುವವರು	-	500.00

6) ಸೇವಾ ನಿಯಮಗಳ ಬಗ್ಗೆ ಮಾದರಿ ಬೈಲಾಗಳನ್ನು ರಚಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಗ್ರಾಮಪಂಚಾಯಿತಿಯ ನೌಕರರ ವಿವರ (ವರ್ಗವಾರು)

ಕ್ರಮ ಸಂಖ್ಯೆ	ಜಿಲ್ಲೆ	ದ್ವಿತೀಯ ದರ್ಜೆ ಸಹಾಯಕ	ಕ್ಲರ್ಕ್ ಕಂ ಟೈಪಿಸ್ಟ್	ಬಿಲ್ ಕಲೆಕ್ಟರ್ ಟೈಪಿಸ್ಟ್	ಪಂಪ್ ಆಪರೇಟರ್ ವಾಚ್‌ಮನ್	ಸ್ವೀಪರ್	ಜವಾನರು	ಕ್ಲರ್ಕ್ ಕಂ ಅಕೌಂಟೆಂಟ್	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಜಾತಿ
1	2	3	4	5	6	7	8	9	10	11	12
1.	ಬೆಂಗಳೂರ(ನ)	-	-	163	389	70	90	2	714	275	34
2.	ಬೆಂಗಳೂರು(ಗ್ರಾ)	24	4	208	854	45	163	14	1312	303	88
3.	ಬೆಳಗಾಂ	64	53	171	758	468	374	211	2099	603	117
4.	ಬೀದರ್	1	1	188	503	200	158	9	1055	225	-
5.	ಬಿಜಾಪುರ	11	64	378	826	487	443	56	2265	640	178
6.	ಬಳ್ಳಾರಿ	-	-	181	642	155	105	112	1195	244	282
7.	ಚಿತ್ರದುರ್ಗ	-	-	191	661	178	178	12	1220	449	429
8.	ಚಿಕ್ಕಮಗಳೂರು	6	-	150	313	42	202	-	713	188	40
9.	ಧಾರವಾಡ	4	-	99	790	266	522	276	1957	417	291
10.	ದಕ್ಷಿಣಕನ್ನಡ	119	14	162	233	101	169	120	918	131	148
11.	ಗುಲ್ಬರ್ಗಾ	-	1	346	838	401	357	-	1949	661	141
12.	ಹಾಸನ	7	-	269	679	99	226	-	1280	281	55
13.	ಕೋಲಾರ	-	11	305	686	81	262	-	1345	527	198
14.	ಕೊಡಗು	11	7	89	109	107	55	5	383	157	004
1	2	3	4	5	6	7	8	9	10	11	12
15.	ಮೈಸೂರು	-	6	314	995	440	206	8	1969	56	01
16.	ಮಂಡ್ಯ	3	-	210	647	347	170	55	1482	352	79

1	2	3	4	5	6	7	8	9	10	11	12
17.	ರಾಯಚೂರು	-	1	278	593	346	329	25	1572	452	331
18.	ಶಿವಮೊಗ್ಗ	-	-	220	555	25	309	4	1113	283	125
19.	ತುಮಕೂರು	-	-	304	877	269	289	6	1745	496	183
20.	ಉತ್ತರಕನ್ನಡ	8	-	62	180	15	153	47	465	044	005
	ಒಟ್ಟು	**258**	**162**	**4288**	**12128**	**4142**	**4755**	**968**	**26701**	**6784**	**2729**

ಹೆಪಟೈಟಿಸ್, ಬಿ, ವೈರಾಣು ಸೋಂಕಿಗೆ ಉಚಿತ ಲಸಿಕೆ ವಿತರಣೆ

472 (725) ಹೆಚ್. ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ರಾಜ್ಯದಲ್ಲಿ ಹೆಪಟೈಟಿಸ್ ''ಬಿ'' ವೈರಾಣು ಸೋಂಕಿಗೆ ತುತ್ತಾಗಿರುವ ರೋಗಿಗಳು ಇದ್ದಾರೆಯೆ? ಇದನ್ನು ತಡೆಗಟ್ಟಲು ಯಾವ ಕ್ರಮ ಕೈಗೊಳ್ಳಲಾಗಿದೆ.

2) ಈ ವೈರಾಣು ತಡೆಗಟ್ಟಲು ಪ್ರತಿ ವ್ಯಕ್ತಿಯು ತೆಗೆದುಕೊಳ್ಳಬೇಕಾಗಿರುವ ಲಸಿಕೆಯ ಈಗಿನ ದರ ಎಷ್ಟು?

3) ಇದನ್ನು ಸರ್ಕಾರದ ವತಿಯಿಂದ ಉಚಿತವಾಗಿ ಸಾರ್ವಜನಿಕರಿಗೆ ನೀಡುವ ವ್ಯವಸ್ಥೆ ಮಾಡಲಾಗುವುದೇ? ಈ ಬಗ್ಗೆ ಸರ್ಕಾರದ ನಿಲುವೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ಎಲ್ಲಾ ಜಿಲ್ಲೆಯಿಂದ ದಿನನಿತ್ಯ ಬರುವ ವರದಿಗಳ ಆಧಾರದಂತೆ ಹೆಪಟೈಟಿಸ್ ''ಬಿ'' ವೈರಾಣುವಿನ ಸೋಂಕಿಗೆ ತುತ್ತಾದ ರೋಗಿಗಳ ವರದಿಯಾಗಿರುವುದಿಲ್ಲ.

2) ಮಾರುಕಟ್ಟೆಯ ಬೆಲೆ:

ದೊಡ್ಡವರಿಗೆ	ರೂ. 520.00 (ಒಂದು ಡೋಸ್)
ಮಕ್ಕಳಿಗೆ	ರೂ. 262.00 (ಒಂದು ಡೋಸ)

3) ಇಲ್ಲ, ಶಸ್ತ್ರ ಚಿಕಿತ್ಸೆಯಲ್ಲಿ ಪಾಲ್ಗೊಳ್ಳುವ ಸರ್ಕಾರಿ ಸಿಬ್ಬಂದಿಗಳು ಈ ಔಷಧಿಯನ್ನು ತೆಗೆದುಕೊಂಡಲ್ಲಿ ಆ ಮೊತ್ತವನ್ನು ಮರುಪಾವತಿ ಮಾಡಲಾಗುವುದು.

ಖಾಸಗಿ ನರ್ಸಿಂಗ್ ಹೋಂಗಳಲ್ಲಿ ತ್ಯಾಜ್ಯ ವಸ್ತುಗಳ ವಿಲೇವಾರಿ

473 (677) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

1) ರಾಜ್ಯದಲ್ಲಿ ಎಷ್ಟು ಖಾಸಗಿ ನರ್ಸಿಂಗ್ ಹೋಂಗಳಿವೆ

2) ರಾಜ್ಯದಲ್ಲಿ ನರ್ಸಿಂಗ್ ಹೋಂ ಪ್ರಾರಂಭಿಸಲು ಏನಾದರೂ ನಿಯಮಗಳನ್ನು ರೂಪಿಸಲಾಗಿದೆಯೆ?

3) ನರ್ಸಿಂಗ್ ಹೋಂಗಳಲ್ಲಿ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ರೂಪಿಸಿರುವ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಅಂದಾಜು 1,7 14 ಖಾಸಗಿ ನರ್ಸಿಂಗ್ ಹೋಂಗಳಿವೆ (ಆಗಸ್ಟ್ 1997ರ ಪ್ರಕಾರ)

2) ಪರಿಶೀಲನೆಯಲ್ಲಿದೆ

3) ಸದ್ಯಕ್ಕೆ ಯಾವುದೇ ಕ್ರಮ ರೂಪಿಸಿಲ್ಲ. ಖಾಸಗಿ ನರ್ಸಿಂಗ್ ಹೋಂ ನಿಯಂತ್ರಣ ಕಾಯಿದೆ ಜಾರಿಗೆ ತರುವ ವಿಷಯ ಪರಿಶೀಲನೆಯಲ್ಲಿದ್ದು ಅದರೊಂದಿಗೆ ಇದನ್ನು ಪರಿಶೀಲಿಸಬಹುದಾಗಿದೆ.

ಪಿ.ಯು.ಸಿ. ಪ್ರವೇಶದಲ್ಲಿ ಸುಧಾರಣೆ ತರುವ ಬಗ್ಗೆ

474 (679) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಪ್ರತಿವರ್ಷ ಕಾಲೇಜುಗಳಿಗೆ ಪ್ರವೇಶ ಅವಧಿಯಲ್ಲಿ ಪಿಯುಸಿ ತರಗತಿಗಳಿಗೆ ವಿಶೇಷವಾಗಿ ನೂಕುನುಗ್ಗಲು ಕಾಣುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಬೆಂಗಳೂರು ನಗರದಲ್ಲಿ ಪಿಯುಸಿ ತರಗತಿಗಳಿರುವ ಕಾಲೇಜುಗಳ ಸಂಖ್ಯೆ ಎಷ್ಟು?

3) ಈ ತರಗತಿಗಳಲ್ಲಿ ಲಭ್ಯವಿರುವ ಪ್ರವೇಶಾವಕಾಶವೆಷ್ಟು?

4) ಈ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕುರಿತು ಸರ್ಕಾರ ಏನಾದರೂ ಕಾರ್ಯಕ್ರಮ ರೂಪಿಸಿದೆಯೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು) :

1) ಪ್ರತಿವರ್ಷ ಪ್ರವೇಶ ಅವಧಿಯಲ್ಲಿ ಪಿಯುಸಿ ತರಗತಿಗಳಿಗೆ ಪ್ರವೇಶಕ್ಕಾಗಿ ನೂಕುನುಗ್ಗಲು ಕಾಣುತ್ತಿದೆ ಎನ್ನುವ ಮಾತು ಸರಿಯಲ್ಲ. ಬೆಂಗಳೂರಿನಲ್ಲಿ ಸುಮಾರು 10 ಕಾಲೇಜುಗಳಿಗೆ ಮತ್ತು ರಾಜ್ಯದ ವಿವಿದೆಡೆಗಳಲ್ಲಿ ಕೆಲವೊಂದು ಕಾಲೇಜುಗಳಿಗೆ ಪೋಷಕರು ಮತ್ತು ವಿದ್ಯಾರ್ಥಿಗಳು ಪ್ರವೇಶ ಪಡೆಯಲಿಚ್ಛಿಸುವುದರಿಂದ ಕೃತಕ ನೂಕುನುಗ್ಗಲು ಸೃಷ್ಟಿಸುತ್ತಿರುವುದು ನಿಜ ಆದರೆ, ಬೆಂಗಳೂರಿನಲ್ಲಿಯೇ ಸಾಕಷ್ಟು ಸಂಖ್ಯೆಯಲ್ಲಿ ಬಹಳ ಉತ್ತಮ ಪದಿವಪೂರ್ವ ಕಾಲೇಜುಗಳಿದ್ದು, ಅವುಗಳು ವಿದ್ಯಾರ್ಥಿಗಳಿಲ್ಲದೆ ಕಡೆಗಣಿಸಲ್ಪಟ್ಟಿರುತ್ತದೆ.

2) 235

3) ಸುಮಾರು 42,000

4) ಆಯಾ ವರ್ಷದ ಪ್ರಾರಂಭದಲ್ಲಿ ದಾಳಲಾತಿಗಾಗಿ ಇಲಾಖೆಯು ಮಾರ್ಗದರ್ಶಿ ಸೂತ್ರಗಳನ್ನು ಕಳುಹಿಸುತ್ತದೆ.

ಗುಬ್ಬಿ ತಾಲ್ಲೂಕು ಪಂಚಾಯಿತಿಗೆ ಹಣ ಬಿಡುಗಡೆ

475 (339) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) 1997-98 ನೇ ಸಾಲಿನಲ್ಲಿ ತುಮಕೂರು ಜಿಲ್ಲಾ ಪಂಚಾಯಿತಿಯವರು, ಗುಬ್ಬಿ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಸದಸ್ಯರುಗಳಿಗೆ ಯಾವ ಯಾವ ಯೋಜನೆಗಳ ಮೂಲಕ ಯಾವ ಯಾವ ಕೆಲಸಗಳಿಗೆ ಹಣ ಮಂಜೂರು ಮಾಡಲಾಗಿದೆ; ಮಂಜೂರಾದ ಹಣವೆಷ್ಟು?

2) ಜಿಲ್ಲಾ ಪರಿಷತ್ ಅಧ್ಯಕ್ಷರು, 1997-98ನೇ ಸಾಲಿನಲ್ಲಿ ಉದ್ಯೋಗ ದೃಢೀಕರಣ ಯೋಜನೆ ಅಡಿಯಲ್ಲಿ ಎಷ್ಟು ಕೆಲಸಗಳನ್ನು ಮಂಜೂರು ಮಾಡಿಕೊಂಡಿರುತ್ತಾರೆ. ಅವುಗಳಿಗೆ ತಗಲಿದ ವೆಚ್ಚವೆಷ್ಟು?

3) ಇ. ಎ. ಎಸ್. ನಲ್ಲಿ ಶಾಸಕರುಗಳಿಗೆ ಮಂಜೂರು ಮಾಡಿದ ಕೆಲಸಗಳೆಷ್ಟು; ಮತ್ತು ಮಂಜೂರಾದ ಹಣವೆಷ್ಟು? (ಪೂರ್ಣ ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) 1997-98ನೇ ಸಾಲಿನಲ್ಲಿ ಯಾವುದೇ ಕಾರ್ಯಕ್ರಮದ ಅಡಿಯಲ್ಲಿ ಗುಬ್ಬಿ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರುಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ.

2) ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ನಿರ್ದಿಷ್ಟವಾಗಿ ಯಾವುದೇ ಕೆಲಸಗಳನ್ನು ಮಂಜೂರು ಮಾಡಿರುವುದಿಲ್ಲ.

3) ಉದ್ಯೋಗ ಭರವಸೆ ಯೋಜನೆಯಡಿ ಶಾಸಕರಿಗೆ ಪ್ರತ್ಯೇಕವಾಗಿ ಕಾಮಗಾರಿಗಳನ್ನು ಮಂಜೂರು ಮಾಡಿರುವುದಿಲ್ಲ.

ಗುಬ್ಬಿ ವಿಧಾನ ಸಭಾ ಕ್ಷೇತ್ರದ ಚಿಂಗಾವಿ ಗ್ರಾಮದಲ್ಲಿ ವೈದ್ಯಾಧಿಕಾರಿಗಳ ವಸತಿ ಗೃಹ ನಿರ್ಮಾಣ

476 (338) ಬಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಗುಬ್ಬಿ ಕ್ಷೇತ್ರದ ಸಿ. ಎಸ್. ಪುರ ಹೋಬಳಿ ಚಿಂಗಾವಿ ಗ್ರಾಮದಲ್ಲಿ ಪಿ ಹೆಚ್ ಯು ಯಾವಾಗ ಸ್ಥಾಪಿಸಲಾಯಿತು?

2) ಸದರೀ ಗ್ರಾಮದಲ್ಲಿ ಯಾರಾದರೂ ವೈದ್ಯಾಧಿಕಾರಿಗಳು ವಾಸ ಮಾಡುತ್ತಿದ್ದಾರೆಯೇ?

3) ಇಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು?

4) ವೈದ್ಯಾಧಿಕಾರಿಗಳಿಗೆ ವಸತೀಗೃಹ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

5) ಹಾಗಿದ್ದಲ್ಲಿ ವೈದ್ಯಾಧಿಕಾರಿಗಳ ವಸತೀ ಗೃಹವನ್ನು ಕಟ್ಟಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಲಾಗುವುದೇ?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ದಿನಾಂಕ 21.3.78 ರಂದು ಚಿಂಗಾವಿ ಆರೋಗ್ಯ ಘಟಕವನ್ನು ಪ್ರಾರಂಭಿಸಲಾಯಿತು.

2) ಇಲ್ಲ

3) ದೊಡ್ಡ ಚಿಂಗಾವಿ ಗ್ರಾಮದಲ್ಲಿ ವೈದ್ಯಾಧಿಕಾರಿಗಳಿಗೆ ವಸತೀ ಗೃಹ ಇಲ್ಲದಿರುವ ಕಾರಣ ವೈದ್ಯಾಧಿಕಾರಿಗಳು ವಾಸಿಸುತ್ತಿರುವುದಿಲ್ಲ.

4) ಬಂದಿದೆ

5) ವಸತಿಗೃಹ ಕಟ್ಟಡ ನಿರ್ಮಿಸುವ ಕೆಲಸ ಜಿಲ್ಲಾ ಪಂಚಾಯಿತಿಗೆ ಸೇರಿದ್ದು ಅವರೊಂದಿಗೆ ವ್ಯವಹರಿಸಲಾಗುತ್ತಿದೆ.

ಶಿರಾ ತಾಲ್ಲೂಕಿನ ದೊಡ್ಡ ಹುಲಿ ಕುಂಟೆಯಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆ ವಿರುದ್ಧ ದೂರು.

477 (336) ಶ್ರೀ ಬಿ. ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಶಿರಾ ತಾಲ್ಲೂಕು ದೊಡ್ಡ ಹುಲಿಕುಂಟೆ ಗ್ರಾಮದಲ್ಲಿ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಖಾಸಗಿ ಪ.ಪೂ. ಕಾಲೇಜು ನಡೆಯುತ್ತಿರುವುದು ನಿಜವೇ? ಇದನ್ನು ಯಾರು ನಡೆಸುತ್ತಿದ್ದಾರೆ? ಸದರ ಸಂಸ್ಥೆ ಎಂದು ಇಲ್ಲಿ ಯಾವಾಗ ಮತ್ತು ನೋಂದಣಿಯಾಗಿರುತ್ತದೆ? ಹಿಂದಿನ ಹಾಗೂ ಈಗಿನ ಸಂಸ್ಥೆಯ ಪದಾಧಿಕಾರಿಗಳ ವಿವರ ನೀಡುವುದು.

2) ಮೇಲ್ಕಂಡ ಶಾಲಾ ಕಾಲೇಜಿನ ಮಾನ್ಯತೆಗೆ ಯಾವಾಗ ಅರ್ಜಿ ಸಲ್ಲಿಸಿರುತ್ತಾರೆ ಹಾಗೂ ಅನುದಾನ ನೀಡಲಾಗಿದೆಯೇ?

3) ಈ ಸಂಸ್ಥೆಯ ಬಗ್ಗೆ ಸಾರ್ವಜನಿಕರ ದೂರಿನ ಮೇಲೆ ತುಮಕೂರು ಹಿಂದಿನ ಜಿಲ್ಲಾಧಿಕಾರಿಗಳು ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುವುದು ನಿಜವೇ? ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದು ಕೊಂಡಿದೆ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು)

1) ದೊಡ್ಡ ಹುಲಿಕುಂಟೆ ಗ್ರಾಮದಲ್ಲಿ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಮಂಜೂರಾಗಿರುವುದಿಲ್ಲ, ಹಾಗೂ ನಡೆಯುತ್ತಿಲ್ಲ. ದೊಡ್ಡ ಹುಲಿಕುಂಟೆ ಗ್ರಾಮದಲ್ಲಿ ಖಾಸಗಿ ಪ.ಪೂ. ಕಾಲೇಜು ನಡೆಯುತ್ತಿಲ್ಲ. ಆದೇ ಶಿರಾ ತಾಲ್ಲೂಕಿನ ಹುಲಿಕುಂಟೆ ಗ್ರಾಮದಲ್ಲಿ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ಪ.ಪೂ. ಕಾಲೇಜೆಂಬ ಹೆಸರಿನಲ್ಲಿ ನಡೆಯುತ್ತಿದೆ. ಶಿರಾ ತಾಲ್ಲೂಕು ಹುಲಿಕುಂಟೆಯ ಲೋಕಪಾಲ ವಿದ್ಯಾಸಂಸ್ಥೆ (ರಿ) ಇವರು ನಡೆಸುತ್ತಿದ್ದಾರೆ. ಸದರಿ ಸಂಸ್ಥೆಯು ದಿ: 9. 10. 85 ರಂದು ತುಮಕೂರು ಜಿಲ್ಲಾ ಸಂಘಗಳ ನೋಂದಾಣಾಧಿಕಾರಿಯವರ ಕಾರ್ಯಾಲಯದಲ್ಲಿ ನೋಂದಣಿಯಾಗಿರುತ್ತದೆ.

ಈಗಿನ ಪದಾಧಿಕಾರಿಗಳು

1. ಎಸ್. ವೇದಾವತಮ್ಮ, ಅಧ್ಯಕ್ಷರು
2. ಹೆಚ್. ಆರ್. ಶಂಕರಮ್ಮ, ಕಾರ್ಯದರ್ಶಿ
3. ಸುಶೀಲಮ್ಮ, ಖಜಾಂಬಿ
4. ಕೆಂಚಮ್ಮ, ಸದಸ್ಯರು
5. ಶಾರದ, ವಿ. ಟಿ. ಸದಸ್ಯರು
6. ಪುಷ್ಪ, ಸದಸ್ಯರು
7. ರೇಖಾ ಡಬ್ಲ್ಯೂ.ಹೆಚ್. ಅನಿಲ್‌ಕುಮಾರ್, ಸದಸ್ಯರು
8. ಕಮಲಮ್ಮ, ಸದಸ್ಯರು
9. ಡಿ. ಶಾರದಮ್ಮ, ಸದಸ್ಯರು

ಹಿಂದಿನ ಪದಾಧಿಕಾರಿಗಳು

1. ಎಸ್. ವೇದಾವತಮ್ಮ, ಅಧ್ಯಕ್ಷರು
2. ಹೆಚ್. ಆರ್. ಶಂಕರಮ್ಮ, ಕಾರ್ಯದರ್ಶಿ
3. ಕೆಂಚಮ್ಮ, ಉಪಾಧ್ಯಕ್ಷ
4. ಡಿ. ಕಮಲಮ್ಮ, ಸಹಕಾರ್ಯದರ್ಶಿ
5. ಸುಶೀಲಮ್ಮ, ಖಜಾಂಬಿ
6. ಹನುಮಕ್ಕ, ಸದಸ್ಯರು
7. ಜಾನಕಮ್ಮ, ಸದಸ್ಯರು
8. ಪುಷ್ಪ, ಸದಸ್ಯರು
9. ಬಿ.ವಿ. ಶಾರದಮ್ಮ, ಸದಸ್ಯರು
10. ಬಿ. ಶಾರದಮ್ಮ, ಸದಸ್ಯರು
11. ರೇಖಾ ಡಬ್ಲ್ಯೂ.ಹೆಚ್. ಅನಿಲ್ ಕುಮಾರ್, ಸದಸ್ಯರು

2. ಕಿರಿಯ ಪ್ರಾಥಮಿಕ ಶಾಲೆಗೆ ತುಮಕೂರು ಜಿಲ್ಲಾ ಉಪನಿರ್ದೇಶಕರಿಂದ ದಿ: 25-9-91 ರಂದು 1 ನೇ ತರಗತಿಗೆ ಅನುಮತಿ ಪಡೆದಿರುತ್ತದೆ. ಹಾಗೂ ಸದರಿ ಶಾಲೆಗೆ ಮಾನ್ಯತೆಗೆ ಅರ್ಜಿ ಸಲ್ಲಿಸಿರುವುದಿಲ್ಲ. ಹಾಗೂ 92-93 ನೇ ಸಾಲಿನಿಂದ ಮುಚ್ಚಲ್ಪಟ್ಟಿರುತ್ತದೆ. ಪ.ಪೂ. ಕಾಲೇಜಿನ ಮಾನ್ಯತೆಗೆ ದಿ: 27.9.94 ರಂದು ಅರ್ಜಿ ಸಲ್ಲಿಸಿರುತ್ತಾರೆ. (ಲೋಕಪಾಲ ಶಿಕ್ಷಣ ಸಂಸ್ಥೆ (ರಿ) ಹುಲಿಕುಂಟೆ ಮತಿಯಿಂದ) ಅನುದಾನ ನೀಡಿರುವುದಿಲ್ಲ.

3. ಹೌದು.

ತುಮಕೂರು ಜಿಲ್ಲಾಧಿಕಾರಿಗಳ ಸದರಿ ವರದಿಯ ಬಗ್ಗೆ ಸಾರ್ವಜನಿಕ ಶಿಕ್ಷಣ ಆಯುಕ್ತರ ಅಭಿಪ್ರಾಯವನ್ನು ಪಡೆದು ಅವರ ಅಭಿಪ್ರಾಯದ ಮೇರೆಗೆ ಪ್ರಕರಣವನ್ನು ಸರ್ಕಾರದ ಹಂತದಲ್ಲಿ ಮುಕ್ತಾಯಗೊಳಿಸಿದೆ.

ಆದಾಗ್ಯೂ ಈ ಬಗ್ಗೆ ಮತ್ತೆ ಕೆಲವು ದೂರುಗಳು ಬಂದ ಕಾರಣ ಆಯುಕ್ತರು, ಸಾರ್ವಜನಿಕ ಶಿಕ್ಷಣಕರ ಅಭಿಪ್ರಾಯವನ್ನು ಕೋರಿದ್ದು ಅವರಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ.

ಮೈಸೂರಿನ ದಸರಾ ವಸ್ತು ಪ್ರದರ್ಶನದಲ್ಲಿ ತುಮಕೂರು ಜಿಲ್ಲಾ ಆರೋಗ್ಯ ಘಟಕವು ಭಾಗವಹಿಸುವ ಬಗ್ಗೆ

478 (337) ಶ್ರೀ ಬಿ. ಎನ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೈಸೂರಿನಲ್ಲಿ 97-98ನೇ ಸಾಲಿನಲ್ಲಿ ನಡೆದ ದಸರಾ ವಸ್ತು ಪ್ರದರ್ಶನದಲ್ಲಿ ತುಮಕೂರು ಜಿಲ್ಲಾ ಆರೋಗ್ಯ ಘಟಕದಿಂದ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದು ನಿಜವೇ?

2) ಹಾಗಿದ್ದಲ್ಲಿ ಘಟಕಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು? (ಪೂರ್ಣ ವಿವರ ಕೊಡುವುದು)

3) ತುಮಕೂರು ಜಿಲ್ಲೆಯ ಆಸ್ಪತ್ರೆಗಳಲ್ಲಿ 96-97, 97-98 ನೇ ಸಾಲಿನಲ್ಲಿ ಒದಗಿಸಿರುವ ಹಾಸಿಗೆಗಳನ್ನು ಖರೀದಿಸಿದವರು ಯಾರು ಮತ್ತು ಅನುಸರಿಸಿದ ನಿಯಮವೇನು?

4) ಈ ಬಗ್ಗೆ ಗುಣಮಟ್ಟ ಸರಿ ಇಲ್ಲವೆಂದು ಸಾರ್ವಜನಿಕರಿಂದ ದೂರು ಬಂದಿರುವುದು ನಿಜವೇ?

5) ತುಮಕೂರು ಜಿಲ್ಲೆಯಲ್ಲಿರುವ ಯಾವ ಯಾವ ಆಸ್ಪತ್ರೆಗಳಿಗೆ 96-97 ರಲ್ಲಿ ಯಾವ ಯಾವ ಔಷಧಿಗಳನ್ನು ಸರಬರಾಜು ಮಾಡಲಾಗಿದೆ. ಮತ್ತು ಖರ್ಚಾಗಿರುವ ಹಣದ ವಿವರ ನೀಡುವುದು.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಹೌದು. (ತುಮಕೂರು ಜಿಲ್ಲಾ ಅಭಿವೃದ್ಧಿ ಬಗ್ಗೆ (30.9.97 ರಿಂದ 1.1.98 ರವರೆಗೆ)

2) ಜಿಲ್ಲಾ ಪಂಚಾಯತ್ ಮತಿಯಿಂದ ರೂ. 75,000.00ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

3) 1996-97 ನೇ ಸಾಲಿನಲ್ಲಿ ಖರೀದಿಸಿರುವುದಿಲ್ಲ.

1997-98 ನೇ ಸಾಲಿನಲ್ಲಿ ಖರೀದಿ ಪ್ರಸ್ತಾವನೆ ಜಿಲ್ಲಾ ಪಂಚಾಯತ್‌ನಲ್ಲಿ ಬಾಕಿ ಇರುತ್ತದೆ.

4) ಉದ್ಭವಿಸುವುದಿಲ್ಲ.

5) ಶೇಕಡ 60 ರಷ್ಟು ರೂ. 52.00 ಲಕ್ಷ ಮೊಬಲಗಿನ ಔಷಧಿಗಳನ್ನು ಹಾಗೂ ಅವರುಗಳಿಗೆ ಬಿಡುಗಡೆಯಾದ ಒಟ್ಟು ಅನುದಾನದ ಶೇ. 40 ರಷ್ಟು ರೂ. 41.67 ಲಕ್ಷ ಮೌಲ್ಯದ ಔಷಧಿಗಳನ್ನು ತುಮಕೂರು ಜಿಲ್ಲೆಯಲ್ಲಿ ಬರುವ ಸರ್ಕಾರಿ ಆಸ್ಪತ್ರೆಗಳಿಗೆ 1996-97ರಲ್ಲಿ ಸರಬರಾಜು ಮಾಡಲಾಗಿದೆ. ಆಸ್ಪತ್ರೆಗಳ ವಿವರ ಹಾಗೂ ಔಷಧಿಗಳ ಪಟ್ಟಿಯನ್ನು ಲಗತ್ತಿಸಲಾಗಿದೆ.

ANNEXURE

List of drugs procured and supplied to government hospitals, Primary health centres and other health institutions from government medical stores, Bangalore during 1996-97.

1.	103404 Metoprodol 50 mg	Tablet
2.	125807 Detamethasonl with Nebmycente	Cream
3.	115701 Metronidazole Benzoylsuspension equivalent 200	Suspension
4.	116655 Abbendazole 200 mg/5 ml	Suspension
5.	12292 Salbutamol 2 mg/5 ml	Syrup
6.	12420 Oatropine 1% (Eye) IP.(100 tubls in cdd)	Ointment
7.	124300 Glycerin IP	Illquid
8.	125300 Cetrimide Cream BP	Ointment
9.	125800 Betamcthasone 0.1 % (Brin)	Ointment
10.	125805 Detamethasone Valaraiwiob 18 Minoform 3% Cream	Cream
11.	125809 Dexamethosone Acetatleqamycanon Sulphate Base 1%	Cream
12.	127600 Miconazole Nitrate 2%	Ointment
13.	128400 Hydrogen Peroxide (Inabnbrdark Bottle)IP	Liquid

14. 129700 (Ther Analsthetic IP (In Amber Coloure) Bottles	Liquid
15. 129900 Halothane BP	Liquid
16. 140700 Gumpaint-TP.S. Aconite-Benzo In Mentho	Gum Paint
17. 141602 Dextoose Anhydrous (Free From Physical)	Powder
18. 141700 Mannitol Power for Poly Bag IP/USP	Powder
19. 145901 Antiseptic Scrub Solution	Solution
20. 148705 Framycetic sulphate 1% w/w IP	Ointment
21. 108700 Insulin 40 IU/ML TP	Injection
22. 108900 Insulin Zinc Suspension IP	Injection
23. 1110000 XYTO In 5 IU/ML IP	Injection
24. 100800Valathamate Bromide Sampal 1 Ml	Injection
25. 10300 Mephentermine 30 Mg/ML IP	Injection
26. 105100 Pentazocine Lactate 30 Mg/Ml	Injection
27. 10600 Diazepam 20Mg 2 Ml IP	Injection
28. 107212 Diclofenac Sodium 25 Mg/Ml	Injection
29. 107800 Neostigmine 0.5 Mg/Ml IP	Injection
30. 108301 Hydroxy Progesteronl() Mg/Ml	Injection
31. 108500 Hydrocortisone Sodium Injection 134 Mgequiv	Injection
32. 110600 Methlergometrine 0.2 Mg/Ml IP	Injection
33. 111305 CE Potaxime 1Gm	Injection
34. 122500Aminophylline 2.5% IV IP	Injection
35. 122900 Hydrocortisone Nasal Sterile	Drops

36. 123800 Framycetin Sulphate IP 5 Mg	Drops
37. 123800 Betamethasone 0.1% (Eye) NFI. Sterile	Drops
38. 12400 Pilocarpine 2% (Eye) Sterile (100, Bottles In CBB)	Drops
39. 127601 Miconazole Nitrate 2% Ear	Drops
40. 129525 Ketamine 10 Mg/Ml USP	Injection
41. 130000 Lignocaine 1% W/V IP	Injection
42. 130100 Lignocaine 2% With Adrenaline	Injection
43. 130200 Lignocaine 2% W/V Plain BP	Injection
44. 131000 Thiapentone Sodium 500Mg IP	Injection
45. 143600 Ranitidine 50Mg/2Ml	Injection
46. 144300 Liophylin 169.4 Mg IM/IV IP/BP	Injection
47. 147900 Betamethazone INJ 4 Mg/Ml IP/BP	Inj-Iv
48. 148100 Dopamine Hydrochloridml 4 OVM BP/USP	Injection
49. 151500Aqueous Soln of Venomof (Botropase)	Injection
50. 111751 Ciprofloxacin 2Mg/Ml FFS Technology	Inj-IV
51. 115850 Tinidazole	Inj-IV
52. 125400 Chlorohixidine Gluxonviv with Cetramie 15%W/V	Liquid
53. 126255 Povisone Lotion USP 5%	Liquid
54. 127200 Turbentine Lintment IP	Liquid
55. 127900 Benzoin Co TR IP	Liquid
56. 100200 Magnesium Trisilicatebroomg	Tablet
57. 103401Inefedipine 10Mg	Tablet
58. 103403 DI Hydraleaxine 25 Mg USP	Tablet

59.	103406 Frusemide 40 Mg Amilor 5 Mg HCl	Tabs
60.	103457 Phenformin HCL 50 Mgioptimed Distintegration	Capsule
61.	10500 Paracetamol 500 Mg BP/IP	Tablet
62.	105300 Phenobarbirone 30 Mg IP	Tablet
63.	105400 Phenobardirone 60 Mg IP	Tablet
64.	105700 Chlopromazine 25 Mg IP	Tablet
65.	106700 Phenytion Sodium 100 Mg IP	Tablet
66.	107200 Ibuprofen 400 MG BP	Tablet
67.	107201 Ibuprofen 200 MG IP	Tablet
68.	107209 Diclofenac Sodium 50 MG	Tablet
69.	109103 Gliclazide 30 Mg	Tab
70.	109300 Tdlbutamide 0.5 MG IP/BP	Tablet
71.	100900 Frusemide 40 MG IP	Tablet
72.	110700 Methyl Ergdmetrine 0.125 MG IP	Tablet
73.	111350 Doxycycline HCL 100 MG	Caps
74.	111725 Norfloxac In 400MG	Tablet
75.	111730 Nalidixic Acid 500 MG	Tablet
76.	111750 Ciprofloxacin 500 MG	Tablet
77.	111800 Ampicillin 250 MG IP/BP	Capsule
78.	112200 Cloxacillin 250 MG IP/Bluminium Foil Packing	Capsule
79.	112400 Erythroyycin Estolate 50 MG	Tablet
80.	113901 Ethambutol 400 MGIP	Tablet
81.	11400 Isoniazid 100 MG IP	Tablet

82. 114100 Isoniazid 300 MG IP	Tablet
84. 114300 Refampicin 150 MG IP	Capsule
85. 114400 Refampcin 300 MG IP	Capsule
86. 114401 Refampicin 450 MG IP	Capsule
87. 115201 Ketaconazoee 200 MG IP	Tablet
88. 115900 Metronidazole 400 MG BP/IP	Tablet
89. 116200 PR Imaguine 7.5 MG BP	Tablet
90. 116201 Primaguine 2.5 MG IP	Tablet
91. 116400 Diethyl Carbamazine IP/BP USP	Tablet
92. 116650 Albenadaole 200 MG	Tablet
93. 116651 Albendazole 400 MG	Tablet
94. 121800 Vitamin C 500 MG IP	Tablet
95. 121800 Calcium Tab Containool GLU.IP 500 MG VITc	Tablet
96. 12200 Salbutamol 4 MG IP	Tablet
97. 122400 Terbultalin 2.5 MG USP	Tablet
98. 124600 Chlorpheniramine Maleate 4 MG	Tablet
99. 138200 Halozine USP	Tablet
100.143600 Ranitidine 150 MG IP	Tablet
101. 144200 Pyrazinamidf 750 MG BP/IP 500	Tablet
102. 144401 Haldperidol 5MG IP	Tablet
103. 144601 Embramine 25 MG	Tablet
104. 147902 Betametrazone 0.5 MG IP	Tablet
105. 149600 Metoclorpramide HCL 10 MG BP	Tablet
106. 149705 Domperidone An Tiemetic	Tablet

107. 150200 Acetazolamide 250 MG IP	Tablet
108. 118900 Dextrose 5% IP 540 ML	I.V.Inj
109. 119900 Sodium Chloride 9% IP	I.V. Inj
110. 120200 Dextrose with Sodium Chloride IP	I.V. Inj
111. 120000Ringer Lactate IP 540 ML	I.V. Inj
112. Mannitol IV 20% 350 ML	I.V. Inj
113. Benzyl PenciLLine 5 Lakhs	Injection
114. -do- 10 Lakhs	Inj
115. Procaine Pencilline 4 Lakhs	Inj
116. -do- 20 Lakhs	Inj
117. -do- 40 Lakhs	Inj
118. Benzathene Pencelline 6 Lakhs	Inj
119. -do- 12 Lakhs	Inj
120. Ampicillin 250 MG	Inj
121. -do- 250 Mg	Capsule
122. -do- 500 MG	Inj
123. -do- 500 MG	Capsule
124. Strptomycin.75MG	Inj
125. Gentamycin 80 MG	Inj
126. Ciprofloxacin 500 MG	Tab
127. Amoxycillin 250MG	Capsule
128. Cotrimoxazole (Sulpha Methoxazole + Trimethoprim)	Tab
129. Tetracycline 250 MG	Capsule
130. Alumeg (Aluminium Hydroxide + Magnesium Tricilicate	Tab
131. Vitamin B Complex	Tab

ANNEXURE

List of Health Institution in Tumkur District

604	2526 District Hospital	Tumkur	Tumkur
605	2527 Dist. Hospital CMD/DDC	Tumkur	Tumkur
606	2540 District.T.D. Centre	Tumkur	Tumkur
607	2541 District T.D. Centre	Anti TB Drugs	Tumkur
608	2542 ADDH Dist. T.B. Centre	Sira	Tumkur
609	2600 Primary Health Centre	Chikkanayakana Halli	C.N. Halli
610	2610 Primary Health Centre	Huliyar	C.N. Halli
611	2612 Primary Health Centre	Huliyaru (Maternity)	C.N. Halli
612	2618 Primary Health Centre	Settikere	C.N. Halli
613	2626 Primary Health Centre	Chelur	Gubbi
614	2628 Primary Health Centre	Chadraseknarapura	Gubbi
615	2630 Primary Health Centre	Chikkakunala	Gubbi
616	2632 Primary Health Centre	Doddachangavi	Gubbi
617	2634 Primary Health Centre	(Taluk Level Gubbi)	Gubbi
618	2640 Primary Health Centre	Hosekere	Gubbi
619	2642 Primary Health Centre	Kadaba	Gubbi
620	2644 Primary Health Centre	Kallur	Gubbi
621	2646 Primary Health Centre	Nittur	Gubbi
622	2647 Primary Health Centre	Thyagatur	Gubbi
623	2652Primary Health Centre	Holavanahalli	Koratagere
624	2654 Primary Health Centre	Kolala	Koratagere

625	2656	P.H.C.(MaternityWard)	Kolala	Koratagere
626	2658	General Hospital	Koratagere	Koratagere
627	2664	Primary Health Centre	Yelleramapura	Koratagere
628	2666	Primary Health Centre	Amrthur	Kunigal
629	2668	Primary Health Centre	Bhaktarahalli	Kunigal
630	2670	Primary Health Centre	Chanana Kuppe	Kunigal
631	2672	Primary Health Centre	Uthridurga	Kunigal
632	2674	Primary Health Centre	Huliyurdurga	Kunigal
633	2676	Primary Health Centre	Kunigal	Kunigal
634	2679	Primary Health Centre	K.Honnamachahalli	Kunigal
635	2680	Primary Health Centre	Yediyur	Kunigal
636	2681	Primary Health Centre	Theradakuppe	Kunigal
637	2686	Primary Health Centre	Badavanahalli	Madhugiri
638	2688	Primary Health Centre	Byala	Madhugiri
639	2690	Primary Health Centre	Hosakere	Madhugiri
640	2692	Primary Health Centre	I.D. Halli	Madhugiri
641	26962	Primary Health Centre	Kodaganahalli	Madhugiri
642	2697	Primary Health Centre	Dodderi	Madhugiri
643	2698	Primary Health Centre	Kodalapur	Madhugiri
644	2700	Primary Health Centre	Madhugiri	Madhugiri
645	2709	Primary Health Centre	Maruvanakere	Madhugiri
646	2710	Primary Health Centre	Midigeshi	Madhugiri
647	2712	Primary Health Centre	Muddehal Halli	Madhugiri
648	2713	Primary Health Centre	Merelekere	Madhugiri
649	2718	Primary Health Centre	Koteguere	Pavagada

650	2720 Primary Health Centre	Lingadahalni	Pavagada
651	2722Primary Health Centre	Mangalawada	Pavagada
652	2724 Community Health Centre	Pavagada	Pavagada
653	2732 Primary Health Centre	Thirumani	Pavagada
654	2734 Primary Health Centre	Venkatapura	Pavagada
655	2738 Primary Health Centre	Y.N. Hosakote	Pavadaga
656	2740 Primary Health Centre	Y.N. Hosakote	Pavagada
657	2746 Primary Health Centre	Bargur	Sira
658	2750 PHC (Maternity Ward_	Bukkapatha	Sira
659	2748 Primary Health Centre	Bukkapatha	Sira
660	2752 Primary Health Centre	Doddagrahara	Sira
662	2754 Primary Health Centre	Kallabella	Sira
662	2755 PHC(Met. Ward)	Kallambella	Sira
663	2756 Primary Health Centre	Pattanayakana Halli	Sira
664	2758 Primary Health Centre	Sira	Sira
665	2766 Primary Health Centre	Taverekere	Sira
666	2767 Primary Health Centre	Doddahulikonte	Shira
667	2768 Primary Health Centre	Chirathahalli	Shira
668	2770 Primary Health Centre	Biligere	Tiptur
669	2772 Primary Health Centre	Halepalya	Tiptur
670	2776 Primary Health Centre	Dongelakshmi Kshetra	Tiptur
671	2782 Primary Health Centre	Sugur.	Tiptur
672	2783Primary Health Centre	Aralaguppe	Tiptur
673	2784 General Hospital	Tiptur	Tiptur
674	2790Primary Health Centre	Bellavi	Tumkur

675	2794Primary Health Centre	Hebbur	Tumkur
676	2792Primary Health Centre	Gulur	Tumkur
677	2796Primary Health Centre	Hokkadukke	Tumkur
678	2798Primary Health Centre	Kyatasandra	Tumkur
679	2804Primary Health Centre	Siruvara	Tumkur
680	2806P.H.C. (Maternity Ward)	Urdegere	Tumkur
681	2808Primary Health Centre	Urdigere	Tumkur
682	2810Primary Health Centre	Banasandra	Turuvekere
683	2814Primary Health Centre	Dandinashivara	Turuvekere
684	2818Primary Health Centre	Mavinakere	Turuvekere
685	2820Primary Health Centre	Mayasandra	Turuvekere
686	2824Primary Health Centre	Turuvekere	Turuvekere
687	2840 Primary Health Unit	Godekere	Chikkanayak -ana Halli
688	2846 Primary Health Unit	Jayachamaraja pura	Chikkanayak-ana Halli
689	2848 Primary Health Unit	Kappur	Chikkanayakana Halli
690	2850 Primary Health Unit	Thirthapura	Chikkanaya -kana Halli
691	2852 Primary Health Unit	Yellakdu	Chickkanaya -kana Halli
692	2852 Primary Health Unit	Alalaghatta	Gubbi
693	2858 Primary Health Unit	Bidre	Gubbi
694	2862 Primary Health Unit	Hagalwadi	Gubbi
695	2864 Primary Health Unit	Mavinahalli	Gubbi

696	2866 Primary Health Unit	Muganayakanakote	Gubbi
697	2868 Primary Health Unit	Tiptur	Gubbi
698	2874 Primary Health Unit	Doddasaggere	Koratgere
699	2876 Primary Health Unit	Ankanahalli Mata	Kunigal
700	2878 Primary Health Unit	Kittanagamangala	Kunigal
701	2880 Primary Health Unit	Nagasandra	Kunigal
702	2882 Primary Health Unit	Nidasale	Kunigal
703	2884 Primary Health Unit	Santhema.Vithur	Kunigal
704	2886 Primary Health Unit	T.V.R. Kere	Kunigal
705	2888 Primary Health Unit	Ujjani	Kunigal
706	2890 Primary Health Unit	Yedeyur	Kunigal
707	2892 Primary Health Unit	Bramhasandra	Sira
708	2894 Primary Health Unit	Neralagudda	Sira
709	2896 Primary Health Unit	Panjiganahalli	Sira
710	2902 Primary Health Unit	Rangapura	Tiptur
711	2910 Primary Health Unit	Kora	Tumkur
712	2912 Primary Health Unit	Thogadageri	Tumkur
713	2914 Primary Health Unit	Manchenahalli	Turuvekere
714	2916 Primary Health Unit	Sampige	Turuvekere
715	2918 Primary Health Unit	Thandaga	Turuvekere
716	2946 Dental Unit (P.H.C)	Sira	Sira

ಭಟ್ಕಳ ವಿಧಾನ ಸಭಾ ಕ್ಷೇತ್ರದಲ್ಲಿ ನೀರು ಸರಬರಾಜು ಯೋಜನೆ

479 (713) ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಭಟ್ಕಳ ಕ್ಷೇತ್ರಕ್ಕೆ 1996-97, 1997-98 ನೇ ಸಾಲಿನಲ್ಲಿ ನೀರು ಸರಬರಾಜು ಯೋಜನೆಗೆ ಸಂಬಂಧಿಸಿದಂತೆ ಯಾವ ಯಾವ ಯೋಜನೆ ಕಾಮಗಾರಿಗಳನ್ನು ಮಂಜೂರು ಮಾಡಲಾಗಿದೆ.;

2) ಯಾವ ಯಾವ ಗ್ರಾಮಕ್ಕೆ ಎಷ್ಟು ಹಣ ಮಂಜೂರು ಮಾಡಲಾಗಿದೆ; (ಗ್ರಾಮ ಪಂಚಾಯತ್‌ವಾರು ವಿವರ ನೀಡುವುದು);

3) ಈ ಯೋಜನೆಗಳ ಅನುಷ್ಠಾನಕ್ಕೆ ತರುವಾಗ ಸ್ಥಳೀಯ ಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುತ್ತಿದೆಯೇ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

1) ವಿವರಗಳನ್ನು ಅನುಬಂಧ - 1 ರಲ್ಲಿ ನೀಡಲಾಗಿದೆ.

2) ಗ್ರಾಮಪಂಚಾಯತ್‌ವಾರು ವಿವರಗಳನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ.

3) ಹೌದು.

ಅನುಬಂಧ - 1

ಮಂಜೂರಾದ ಯೋಜನೆಗಳ ವಿವರ (1996-97)

1. ಭಟ್ಕಳ ಕ್ಷೇತ್ರ (1. ಹೊನ್ನಾವರ ತಾಲ್ಲೂಕು) : ಕಿರುನೀರು ಸರಬರಾಜು ಯೋಜನೆ (ಕಿನೀಸಯೋ)- ರಾಜ್ಯ ಸಾಮಾನ್ಯ: ತಾಳಮಕ್ಕಿ ದಿಬ್ಬಣಗಲ್ಲು ಮಕ್ಕೇರಕೇರಿ, ಭಾಸಗೇರಿ. ವಿಶೇಷ ಘಟಕ ಯೋಜನೆ (ವಿಘಯೋ) (ಕೇಂದ್ರ) : ಮುಗ್ವಾ ಹರಿಜನಕೇರಿ, ಕೆಳಗನೂರು - ಅಸತೋಟ.

2. ಭಟ್ಕಳ ಕ್ಷೇತ್ರ (ಭಟ್ಕಳ ತಾಲ್ಲೂಕು) : ಕಿನೀಸಯೋ: ರಾಜ್ಯ ಸಾಮಾನ್ಯ : ಯಲವಡಿ ಡಾವೂರ ಸರ್ಪನಕಟ್ಟಾ ಕೋಡಿನಾಳ, ದಿವಗಿರಿ. ಕಿನೀಸಯೋ (ಕೇಂದ್ರ) : ತಟ್ಟಿಹಕ್ಕಲ ಬೆಳಲಖಂಡ, ಕೈಕಿಣಿ ಕೆರೆಗದ್ದೆ, ಪುನ: ಶ್ವೇತನ (ರಾಜ್ಯ): ದೊಡ್ಡಬೆಳಸೆ . ವಿಘಯೋ (ಕಿನೀಸಯೋ) ರಾಜ್ಯ - ಕುಕ್ಕನೀರ, (ಕೆಂದ್ರ) ಕೋಣಾರದಿಂದ ಬೆಳೂರುಮನೆ, ಎನ್ ಆರ್ ಡಬ್ಲ್ಯು ಎಸ್ (ರಾಜ್ಯ) ಶಿರಾಲಿ, ಜಾಲ್ (ಪುನ: ಶ್ವೇತನ): ಮಾವಳ್ಳಿ (ಹೆಚ್ಚಳ) : ಹೆಬ್ಬೆ ಬೆಳೂರುಮನೆ. ಎನ್ ಆರ್ ಡಬ್ಲ್ಯು ಎಸ್ : ಮುಂಡಳ್ಳಿ, ಪುರವಗ, ಗೊರಟೆ, ಜಾಲಿ ಹಾಮಿಯಾ

1997-98 :

1. ಭಟ್ಕಳ ಕ್ಷೇತ್ರ (1. ಹೊನ್ನಾವರ ತಾಲ್ಲೂಕು) : ಎನ್ ಆರ್ ಡಬ್ಲ್ಯು ಎಸ್ : ಸರಳಗಿ ಬಿರನಗೋಡು ಬಾಳೆಮಠ ಮಾಗೋಡ (ಪುನ: ಶ್ವೇತನ) ಗೇರಸೊಪ್ಪಾ. ವಿಶೇಷ ಘಯೋ ಕಿನೀಸಯೋ (ರಾಜ್ಯ) ಕುದ್ರಿಗಿ ಮಾಲ್ಕಲಮಕ್ಕಿ ಕಿನೀಸಯೋ (ಕೇಂದ್ರ) ಸಾಮಾನ್ಯ: ಮಠ್ಯಾ ಗುಂಡಬಾಳಾ ಕೆಪ್ಪಾನಹಿತ್ತಲ ಸಣ್ಣಗುಂದ.

2. ಭಟ್ಕಳ ಕ್ಷೇತ್ರ (ಭಟ್ಕಳ ತಾಲ್ಲೂಕು) : ಕಿನೀಸಯೋ ರಾಜ್ಯಸಾಮಾನ್ಯ : ಕೋಟೆಬಾಗಿಲ, ಮಾವಿನಕುರ್ವೆ, ಪುನ: ಶ್ವೇತನ (ರಾಜ್ಯ) : ವೆಂಕಟಾಪುರ (ಕೇಂದ್ರ) :ಹಡಿಲಹಗಿರಮಕ್ಕಿ, ಕೊಣಾರ, ಕಿನೀಸಯೋ ವಿಫಯೋ (ಕೇಂದ್ರ) : ಹೆಬ್ಬೈ ಹೊನ್ನೆಗಡ್ಡೆ, ಎನ್ ಆರ್ ಡಬ್ಲ್ಯೂ ಎಸ್ (ರಾಜ್ಯ): ವೆಂಕಟಾಪುರ.

ಅನುಬಂಧ -2

ಗ್ರಾಮಪಂಚಾಯತವಾರು ಮಂಜೂರು ಮಾಡಿರುವ ಹಣದ ವಿವರ

1. ಭಟ್ಕಳ ಕ್ಷೇತ್ರ (1. ಹೊನ್ನಾವರ ತಾಲ್ಲೂಕು) :- ಮಂಕಿ - 0.70 ಲಕ್ಷ, ಖರ್ವಾ - 0.50 ಲಕ್ಷ, ಮುಗ್ವಾ -0.50 ಲಕ್ಷ ಕೆಳಗಿನೂರು - 0.35, ಉಪ್ಪೊಣಿ - 3.00, ಕೊಡಾಣಿ - 2.25, ನಗರಬಸ್ತಿಕೆರೆ -0.50, ಕುದ್ರಿಗಿ - 1.10, ಹಡಿನಬಾಳ -0.60, ಚಿಕ್ಕನಕೋಡು - 0.91, ಮಂಕಿ - 0.50 ಲಕ್ಷ

2. ಭಟ್ಕಳ ಕ್ಷೇತ್ರ (ಭಟ್ಕಳ ತಾಲ್ಲೂಕು) :- ಯಲವಡಿ ಕಾವೂರ ಗ್ರಾ. ಪಂ. - 6.58, ಮಾವಳ್ಳಿ - 5.00, ಬೈಲೂರು 0.50, ಕೈಕಿಣಿ - 2.00, ಶಿರಾಳಿ - 28.50, ಜಾಲಿ - 23.34, ಹೆಬ್ಬೈ - 7.50, ಮಾವಿನಕುರ್ವೆ - 4.00 ಮುಟ್ಟಳ್ಳಿ - 2.00, ಮುಂಡಳ್ಳಿ - 9.36. ಬೆಳ್ಕ - 4.00, ಕೊಣಾರ - 4.50.

ಬೆಂಗಳೂರು ನಗರದ ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು

481 (342) ಶ್ರೀ ಎಸ್. ಸುರೇಶ ಕುಮಾರ್ (ರಾಜಾಜಿನಗರ) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಬೆಂಗಳೂರು ನಗರದಲ್ಲಿ ಇರುವ ಅನುದಾನಿತ ಹಾಗೂ ಅನುದಾನ ರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

2) ಅನುದಾನ ರಹಿತ ಶಾಲೆಗಳಲ್ಲಿ ವಂತಿಗೆ ಪಿಡುಗನ್ನು ತಡೆಗಟ್ಟಲು ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

3) ಈ ಹಿಂದೆ ಸಚಿವರು ಬೆಂಗಳೂರು ನಗರದಲ್ಲಿ ಅನಿರೀಕ್ಷಿತವಾಗಿ ಹಾಗೂ ಹಠಾತ್ತನೆ ಭೇಟಿ ನೀಡಿ ಕೆಲವು ಶಾಲೆಗಳಲ್ಲಿ ನಡೆಯುತ್ತಿದ್ದ ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಿದ್ದು ಸರಿಯಷ್ಟೆ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಶಿಕ್ಷಣ ಹಾಗೂ ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು)

1)	ಅನುದಾನ		ಅನುದಾನ ರಹಿತ	
	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ
ಬೆಂಗಳೂರು ಉತ್ತರ	287	110	327	269
ಬೆಂಗಳೂರು ದಕ್ಷಿಣ	304	126	520	344

2) ಯಾವುದೇ ಖಾಸಗಿ ಶಾಲೆಗಳಲ್ಲಿ ವಂತಿಗೆ ವಸೂಲು ಮಾಡಬಾರದೆಂಬ ಬಗ್ಗೆ ಸರ್ಕಾರದ ಆದೇಶದನ್ವಯ ಕಾಲ ಕಾಲಕ್ಕೆ ಸಂಬಂಧಪಟ್ಟ ಸಂಸ್ಥೆಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಈ ಬಗ್ಗೆ ಕರ್ನಾಟಕ ಶಿಕ್ಷಣ ವಸೂದೆ ಜಾರಿಗೆ ತಂದು ವಂತಿಗೆ ತಡೆಗಟ್ಟುವ ಬಗ್ಗೆ ನಿಯಮಾವಳಿಗಳನ್ನು ರೂಪಿಸಲಾಗಿದೆ.

3) ಬೆಂಗಳೂರು ನಗರ ದಕ್ಷಿಣ ಜಿಲ್ಲೆಯ ವ್ಯಾಪ್ತಿಯಲ್ಲಿನ ಶ್ರೀ. ಅರಬಿಂದೋ ಪ್ರಾಥಮಿಕ ಶಾಲೆ ಮತ್ತು ಪ್ರೌಢ ಶಾಲೆಗಳಲ್ಲಿನ ಡೊನೇಷನ್ ಪಡೆಯುತ್ತಿರುವ ಬಗ್ಗೆ ಪೋಷಕರಿಂದ ದೂರು ಬಂದಿದ್ದು, ಶಾಲೆಗೆ ಅನಿರೀಕ್ಷಿತವಾಗಿ ಭೇಟಿ ನೀಡಿದ್ದು, ದಾಖಲೆಗಳನ್ನು ಪರಿಶೀಲಿಸಿ, ಶಾಲಾ ಆಡಳಿತ ಮಂಡಳಿಯ ಮೇಲೆ ಶಿಕ್ಷಣ ಮಸೂದೆ ಪ್ರಕಾರ ಆರಕ್ಷಕ ಠಾಣೆಯಲ್ಲಿ ಮೊಕದ್ದಮೆ ದಾಖಲು ಮಾಡಲಾಗಿದೆ. ಈ ಬಗ್ಗೆ ಆರಕ್ಷಕ ಇಲಾಖೆಯಿಂದ ವರದಿ ಬಂದ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಲು ಕೈಗೊಂಡ ಕ್ರಮಗಳು

483 (700) ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ (ಬಾಗೇಪಲ್ಲಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿರುವ ಒಟ್ಟು ಗ್ರಾಮಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಕುಡಿಯುವ ನೀರು ಇಲ್ಲದ ಗ್ರಾಮಗಳೆಷ್ಟು?(ಜಿಲ್ಲಾವಾರು ವಿವರ ನೀಡುವುದು)

3) ಕಳೆದ 3 ವರ್ಷಗಳಿಂದ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲಾಗಿದೆ?

4) ಉಳಿದ ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

1) ರಾಜ್ಯದಲ್ಲಿ ಒಟ್ಟು 27066 ಕಂದಾಯ ಗ್ರಾಮಗಳಿವೆ (ಜಿಲ್ಲಾವಾರು ವಿವರಗಳನ್ನು ಅನುಬಂಧ- 1ರಲ್ಲಿ ನೀಡಲಾಗಿದೆ)

2) ರಾಜ್ಯದ ಪ್ರತಿಯೊಂದು ಕಂದಾಯ ಗ್ರಾಮದಲ್ಲೂ ಕನಿಷ್ಠ ಒಂದು ಕುಡಿಯುವ ನೀರಿನ ಮೂಲದ ಸೌಲಭ್ಯವಿದೆ. ಉತ್ತರ ಕನ್ನಡ ಜಿಲ್ಲೆಯ 43 ಗ್ರಾಮಗಳಲ್ಲಿ ಮಾತ್ರ ಖಾಸಗಿ ಕುಡಿಯುವ ನೀರಿನ ಸೌಕರ್ಯಗಳಿದ್ದು, ರಾಜ್ಯದ ಉಳಿದ ಎಲ್ಲಾ ಗ್ರಾಮಗಳಲ್ಲಿ ಸರ್ಕಾರದಿಂದ ಒದಗಿಸಲಾದ ಕುಡಿಯುವ ನೀರಿನ ಯೋಜನೆಗಳಿವೆ.

3) ಕಳೆದ 3 ವರ್ಷಗಳಲ್ಲಿ 10380 ಗ್ರಾಮ : ಜನವಸತಿಗಳಿಗೆ ದಿನಂಪ್ರತಿ ತಲಾ 40 ಲೀಟರ್ ಪ್ರಮಾಣದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಒದಗಿಸಲಾಗಿದೆ.

4) ರಾಜ್ಯದ ಎಲ್ಲಾ ಗ್ರಾಮ : ಜನವಸತಿಗಳಿಗೆ 9ನೇ ಪಂಚಾರ್ಷಿಕ ಯೋಜನೆಯ ಅವಧಿಯಲ್ಲಿ ಸಮರ್ಪಕ ಕುಡಿಯುವ ನೀರನ್ನು ಒದಗಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ.

ಅನುಬಂದ - 1

ಜಿಲ್ಲಾವಾರು ಗ್ರಾಮಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕಂದಾಯ ಗ್ರಾಮಗಳ ಸಂಖ್ಯೆ
1.	ಬೆಂಗಳೂರು (ಗ್ರಾಮ)	1713
2.	ಬೆಂಗಳೂರು (ನಗರ)	681
3.	ಕೋಲಾರ	2889
4.	ತುಮಕೂರು	2537
5.	ಚಿತ್ರದುರ್ಗ	1289
6.	ಶಿವಮೊಗ್ಗ	1785
7.	ಚಿಕ್ಕಮಗಳೂರು	1021
8.	ಮೈಸೂರು	1649
9.	ಮಂಡ್ಯ	1365
10.	ಹಾಸನ	2369
11.	ದಕ್ಷಿಣ ಕನ್ನಡ	615
12.	ಕೊಡಗು	291
13.	ಬೆಳಗಾಂ	1138
14.	ಧಾರವಾಡ	1344
15.	ಉತ್ತರ ಕನ್ನಡ	1264
16.	ಬಿಜಾಪುರ	1247
17.	ಗುಲ್ಬರ್ಗಾ	1295
18.	ಬೀದರ್	587
19.	ರಾಯಚೂರು	1396
20.	ಬಳ್ಳಾರಿ	591
	ಒಟ್ಟು	**27066**

ಪುತ್ತೂರು ಗ್ರಂಥಾಲಯ ಕಟ್ಟಡ ವಿಸ್ತರಣೆ

484 (716) ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು): ಮಾನ್ಯ ವಯಸ್ಕರ, ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಪುತ್ತೂರು ಗ್ರಂಥಾಲಯದಲ್ಲಿ ಒಟ್ಟು ಇರುವ ಪುಸ್ತಕಗಳೆಷ್ಟು; ಪ್ರಸ್ತುತ ಹೊಸದಾಗಿ ನಿರ್ಮಾಣ ಮಾಡಿರುವ ಕಟ್ಟಡದಲ್ಲಿ ಎಷ್ಟು ಪುಸ್ತಕಗಳನ್ನು ಶೇಖರಿಸಬಹುದು?

2) ಪ್ರಸ್ತುತ ನಿರ್ಮಾಣ ಮಾಡಿರುವ ಕಟ್ಟಡದಲ್ಲಿ ಪುಸ್ತಕಗಳನ್ನು ಸಾಕಷ್ಟು ಶೇಖರಿಸಲು ಸ್ಥಳಾವಕಾಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಬಂದಿದ್ದಲ್ಲಿ ಈ ಕಟ್ಟಡವನ್ನು ವಿಸ್ತರಿಸುವ ಯೋಜನೆ ಸರ್ಕಾರಕ್ಕಿದೆಯೇ; ಇದ್ದರೆ ಯಾವ ವರ್ಷದಲ್ಲಿ ಕಾರ್ಯಾರಂಭ ಮಾಡಲಾಗುವುದು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು)

1) ಪುಸ್ತಕಗಳ ಸಂಖ್ಯೆ: 45, 164.

ಗರಿಷ್ಠ 25,000 ಪುಸ್ತಕಗಳನ್ನು ಶೇಖರಿಸಬಹುದು.

2) ಹೌದು

3) ಇಲ್ಲ.

ಸದ್ಯಕ್ಕೆ ಹೊಸದಾಗಿ ನಿರ್ಮಿಸಿದ ಕಟ್ಟಡದಲ್ಲಿ ನಿಯತಕಾಲಿಕೆ ವಿಭಾಗ ಪ್ರಾರಂಭಿಸಿ ಹಾಲಿ ಹಳೆ ಕಟ್ಟಡದಲ್ಲಿಯೇ ಗ್ರಂಥಾಲಯ ಸೇವೆ ಮುಂದುವರಿಸಲಾಗುವುದು.

ಸಕಲೇಶಪುರ ಹಾಗೂ ಆಲೂರು ತಾಲ್ಲೂಕಿನಲ್ಲಿ ಮಿನಿ ವಾಟರ್ ಸ್ಕೀಂ ಮಂಜೂರಾತಿ

485 (711) ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸಕಲೇಶಪುರ ಮತ್ತು ಆಲೂರು ತಾಲ್ಲೂಕಿನಲ್ಲಿ ಇರುವ ಬೋರ್‌ವೆಲ್‌ಗಳ ಸಂಖ್ಯೆ ಎಷ್ಟು? (ಬೇರೆ ಬೇರೆ ವಿವರ ನೀಡುವುದು)

2) ಮಿನಿ ವಾಟರ್ ಸ್ಕೀಂ ಎಷ್ಟು ಇದೆ; ಇವುಗಳಲ್ಲಿ ಎಷ್ಟು ಉಪಯೋಗವಾಗುತ್ತಿವೆ;

3) ರೂರಲ್ ವಾಟರ್ ಸ್ಕೀಂನಲ್ಲಿ ಮಂಜೂರಾಗಿರುವ ನೀರಿನ ಟ್ಯಾಂಕ್‌ಗಳ ಸಂಖ್ಯೆ ಎಷ್ಟು; ಇವುಗಳಲ್ಲಿ ಪೂರ್ಣಗೊಂಡಿರುವ ಹಾಗೂ ಪೂರ್ಣಗೊಳ್ಳದಿರುವ ಹಾಗೂ ಖರ್ಚಾಗಿರುವ ಹಣ ಎಷ್ಟು (ವಿವರ ನೀಡುವುದು)?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ತಾಲ್ಲೂಕು	ಜಿ.ಪಂ. ಕಾರ್ಯಕ್ರಮದಡಿ ಕೊರೆಯಲಾದ ಕೊಳವೆ ಬಾವಿಗಳು	ಬರ ಪರಿಹಾರ ಕಾರ್ಯಕ್ರಮ ದಡಿ ಕೊರೆಯಲಾದ ಕೊಳವೆ ಬಾವಿಗಳು	ಒಟ್ಟು
ಸಕಲೇಶಪುರ	1104	57	1161
ಆಲೂರು	952	54	1006

2) ಆರಂಭದಿಂದ ಇಲ್ಲಿಯವರೆಗೆ	ಸಕಲೇಶಪುರ	ಆಲೂರು
ಮಂಜೂರಾಗಿರುವ ಕಿರು ನೀರಿ ಸರಬರಾಜು ಯೋಜನೆಗಳು :	72	43
ಯೋಜನೆ ಪೂರ್ಣಗೊಂಡು ಉಪಯೋಗವಾಗುತ್ತಿರುವ ಯೋಜನೆಗಳು :	41	27
ಪ್ರಗತಿಯಲ್ಲಿರುವ ಯೋಜನೆಗಳು :	28	16

3)	ಎನ್ ಆರ್ ಡಬ್ಲ್ಯು ಎಸ್		ಎ ಆರ್ ಡಬ್ಲ್ಯು ಎಸ್	
	ಸಕಲೇಶಪುರ	ಆಲೂರು	ಸಕಲೇಶಪುರ	ಆಲೂರು
1	2	3	4	5	61.
1.	ಪ್ರಾರಂಭದಿಂದ ಇದುವರೆಗೆ ಮಂಜೂರಾಗಿರುವ ಗ್ರಾಮೀಣ ನೀರು ಸರಬರಾಜು ಯೋಜನೆಯ ನೀರಿನ ಟ್ಯಾಂಕ್ ಸಂಖ್ಯೆಗಳು	12	22	24	17
2.	ಪೂರ್ಣಗೊಂಡಿರುವ ಯೋಜನೆಗಳು	1	12	17	12
3.	ಪ್ರಗತಿಯಲ್ಲಿರುವ ಯೋಜನೆಗಳು	11	10	07	05
4.	ಪೂರ್ಣಗೊಂಡಿರುವ ಮತ್ತು ಪ್ರಗತಿ-ಯಲ್ಲಿರುವ ಯೋಜನೆಗಳಿಗೆ ಖರ್ಚಾಗಿರುವ ಒಟ್ಟು ಹಣ (ಲಕ್ಷ ರೂ.ಗಳಲ್ಲಿ)	38.331	78.568	58.099	73.707

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಧಾರಣಾ ಶಕ್ತಿ ಅಧ್ಯಯನ

486 (222) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ದಕ್ಷಿಣ ಕನ್ನಡ ಜಿಲ್ಲೆಯ ಧಾರಣಾ ಶಕ್ತಿ ಅಧ್ಯಯನ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

2) ಧಾರಣಾ ಶಕ್ತಿ ಅಧ್ಯಯನ ಮಾಡುವ ತನಕ ಯಾವುದೇ ಹೊಸ ಕೈಗಾರಿಕೆಗಳಿಗೆ ಅನುಮತಿ ಕೊಡದಿರಲು ಸರ್ಕಾರ ನಿರ್ಧರಿಸಿದೆಯೇ.

3) ಧಾರಣಾ ಶಕ್ತಿ ಅಧ್ಯಯನ ಎಷ್ಟು ಸಮಯದೊಳಗೆ ಮಾಡಲಾಗುವುದು?

ಶ್ರೀ ಬಸವರಾಜ್ ನೀ. ಶಿವಣ್ಣನವರ್ (ಪರಿಸರ, ಜೀವಿಶಾಸ್ತ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಅಸಂಪ್ರದಾಯಕ ಇಂಧನ ರಾಜ್ಯ ಸಚಿವರು)

1) ದಕ್ಷಿಣ ಕನ್ನಡ ಜಿಲ್ಲೆಯ ಧಾರಣಾ ಶಕ್ತಿಯನ್ನು ಅಧ್ಯಯನ ಮಾಡಲು ಬಂದ ಪ್ರಸ್ತಾವನೆಗಳಲ್ಲಿ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಪ್ರೊ. ಮಾಧವ ಗಾಡ್ಗೀಲ್ ರವರ ನೇತೃತ್ವದ ಸಮಿತಿ ರಚಿಸಲಾಗಿತ್ತು.

ಬಂದ ಪ್ರಸ್ತಾವನೆಗಳು ಸೂಕ್ತವಾಗಿಲ್ಲವೆಂದೂ ಈ ಅಧ್ಯಯನವನ್ನು ಹೇಗೆ ನಡೆಸಬೇಕೆಂದು ಸೂಚಿಸುವ ಅತ್ಯವಿದೆ ಎಂದೂ, ಆ ರೀತಿಯ ಪ್ಯಾರ ಮೀಟರ್‌ಗಳನ್ನು ನಿರ್ಧರಿಸಲು - ಡಾ: ಸುಬ್ರಮಣ್ಯಂ ನೇತೃತ್ವದ ಸಮಿತಿ ರಚಿಸಲು ಸೂಚಿಸಿತು.

ಹಾಗೆಯೇ ಡಾ: ಸುಬ್ರಮಣ್ಯಂ ನೇತೃತ್ವದಲ್ಲಿ ಸಮಿತಿ ರಚಿಸಿದ್ದು, ಅದರ ವರದಿಯನ್ನು ಇಷ್ಟರಲ್ಲೇ ನಿರೀಕ್ಷಿಸಲಾಗಿದೆ. ವರದಿ ಬಂದ ಕೂಡಲೇ ಪ್ರಸ್ತಾವನೆ ಕರೆದು ದಕ್ಷಿಣ ಕನ್ನಡ ಜಿಲ್ಲೆಯ ಧಾರಣಾ ಶಕ್ತಿಯನ್ನು ನಿರ್ಧರಿಸಲು ಕೆಲಸ ವಹಿಸಲಾಗುವುದು.

2) ಹೌದು.

3) ಇದು ಒಂದು ವಿಶೇಷ ಅಧ್ಯಯನ ಆಗಿದ್ದು ನಿರ್ದಿಷ್ಟ ಸಮಯದಲ್ಲಿ ಅಧ್ಯಯನ ಮುಗಿಸಲು ಆಗುತ್ತಿಲ್ಲ.

ಶಿರಾ ತಾಲ್ಲೂಕಿನ ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

488 (738) ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಶಿರಾ ತಾಲ್ಲೂಕು ತರೂರು ಗ್ರಾಮಸ್ಥರುಗಳು ತರೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕಾಗಿ ಹಣ ಸಂದಾಯ ಮಾಡಿದ್ದರೂ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಬಗ್ಗೆ ಸರ್ಕಾರದ ಕ್ರಮವೇನು?

2) ಸದರಿ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡಲು ಸಾಧ್ಯವಿಲ್ಲದೇ ಇದ್ದರೆ ಹೆರಿಗೆ ಆಸ್ಪತ್ರೆ ಅಥವಾ ಆಯುರ್ವೇದಿಕೆ ಆಸ್ಪತ್ರೆಯನ್ನಾದರೂ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1) ತರೂರು ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

2) ಉದ್ಭವಿಸುವುದಿಲ್ಲ.

ಪ್ರಾಥಮಿಕ ಶಾಲಾ ದೈಹಿಕ ಶಿಕ್ಷಕರ ತರಬೇತಿ ಶಿಕ್ಷಣ ಪ್ರವೇಶ

489 (818) ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) 1996-97 ನೇ ಶೈಕ್ಷಣಿಕ ದೈಹಿಕ ಶಿಕ್ಷಣ ತರಬೇತಿ ಮಹಾವಿದ್ಯಾಲಯ (ಪ್ರಾಥಮಿಕ ಶಾಲಾ ಶಿಕ್ಷಕರ) ಪ್ರವೇಶಕ್ಕೆ ಸರ್ಕಾರ ಅಗತ್ಯ ಮಾರ್ಗದರ್ಶಿ ಸೂಚನಾ ಪತ್ರವನ್ನು ಹೊರಡಿಸಲಾಗಿತ್ತೆ (ಮಾರ್ಗದರ್ಶಿ ಸೂಚನಾ ಪ್ರತಿ ನೀಡುವುದು)

2) ಒಂದು ಜಿಲ್ಲೆಯ ಆಯ್ಕೆ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿರುವ ಜಿಲ್ಲಾ ದೈಹಿಕ ಶಿಕ್ಷಣ ಮೇಲ್ವಿಚಾರಕರು ಆ ಸಮಿತಿಯ ಅಧ್ಯಕ್ಷರಾಗಿರುವ ಉಪ ನಿರ್ದೇಶಕರ ಪರವಾಗಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಬಹುದೇ?

3) ಹಾಗಿಲ್ಲದಿದ್ದಲ್ಲಿ, ಆ ರೀತಿ ಕರ್ತವ್ಯ ಲೋಪ ತೋರಿಸಿರುವ ಜಿಲ್ಲಾ ಉಪ ನಿರ್ದೇಶಕ (ಸಾ.ಶಿ.ಇ) ವಿರುದ್ಧ ಅಗತ್ಯ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಹೌದು (ಮಾರ್ಗದರ್ಶಿ ಸೂಚನಾ ಪ್ರತಿ ಲಗತ್ತಿಸಿದೆ)

2) ಅವಕಾಶವಿರುವುದಿಲ್ಲ.

3) ಸರಕಾರದ ಗಮನಕ್ಕೆ ಬಂದಿರುವುದಿಲ್ಲ.

ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು , ನೃಪತುಂಗ ರಸ್ತೆ, ಬೆಂಗಳೂರು - 1.

ಸಂಖ್ಯೆ : ದೈಶಿ ಸಿಪಿ ಇಡಿ ಕಾ.ವಿ.ದಾ. ನಿಯಮಾವಳಿ 6 ಇತರೆ : 96-97, ದಿ : 15.05.96.

ಸುತ್ತೋಲೆ

ವಿಷಯ : 1996-97 ನೇ ಸಾಲಿಗೆ ರಾಜ್ಯದಲ್ಲಿರುವ ದೈಹಿಕ ಶಿಕ್ಷಣ ಕಾಲೇಜುಗಳ ದೈಹಿಕ ಶಿಕ್ಷಣ ತರಬೇತಿಗಾಗಿ ಅಭ್ಯರ್ಥಿಗಳ ಆಯ್ಕೆ ಮತ್ತು ದಾಖಲಾತಿ ನಿಯಮಗಳ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ: ಇಡಿ 109 ಇ ಎಸ್ ಡಬ್ಲ್ಯೂ 89, ದಿನಾಂಕ: 30.6.96.

2) ಸ ಕ ಇ 150 ಜಿ ಸಿ ಎ : ವಿ 4 ದಿನಾಂಕ 17.9.94 (ಮೀಸಲಾತಿಗಳ ವರ್ಗೀಕರಣದ ಬಗ್ಗೆ).

3) ಈ ಕಛೇರಿ ಪತ್ರ ಸಂಖ್ಯೆ : ದೈಶಿ 1 ಸಿ ಪಿ ಇ ಡಿ ದಾಖಲಾತಿ ನಿಯಮಾವಳಿ 1: 95-96, ದಿನಾಂಕ 3.6.95.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 1996-97 ನೇ ಸಾಲಿಗೆ ರಾಜ್ಯದಲ್ಲಿರುವ ದೈಹಿಕ ಶಿಕ್ಷಣ ಕಾಲೇಜುಗಳಲ್ಲಿ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಸಮಯದಲ್ಲಿ ಉಲ್ಲೇಖ (1) ಮತ್ತು (2) ರಲ್ಲಿ ಸರ್ಕಾರಿ ಆದೇಶಗಳಲ್ಲಿನ ದಾಖಲಾತಿ ನಿಯಮಗಳನ್ನು ಹಾಗೂ ಈ ಕೆಳಕಂಡ ಸೂಚನೆಗಳನ್ನು ಚಾಚೂ ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಲು ಸೂಚಿಸಲಾಗಿದೆ.

1) ದಾಖಲಾತಿ ಕೊನೆಯ ದಿನಾಂಕ :

ಅ. ವಿದ್ಯಾರ್ಥಿಗಳ ಸಂದರ್ಶನ ಮತ್ತು ಆಯ್ಕೆಗೆ ಕೊನೆಯ ದಿನಾಂಕ - 10.7.96.

ಆ. ವಿದ್ಯಾರ್ಥಿಗಳ ದಾಖಲಾತಿಗೆ ಕೊನೆಯ ದಿನಾಂಕ - 20.7.96.

2) ವಿಷಯ ಸೂಚಿ :

ಸಹ ಕಾರ್ಯದರ್ಶಿಯಾದ ಆಯಾ ಕಾಲೇಜಿನ ಪ್ರಾಚಾರ್ಯರು ಆಯ್ಕೆ ಸಮಿತಿಯ ಅಧ್ಯಕ್ಷರ ಒಪ್ಪಿಗೆ ಪಡೆದು ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರ ಸೂಚನೆಯಂತೆ ಆಯ್ಕೆಯ ದಿನಾಂಕ, ಸದಸ್ಯರ ನೇಮಕಾತಿ ಇತ್ಯಾದಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು.

3) ಅಭ್ಯರ್ಥಿಗಳ ದಾಖಲಾತಿಗೆ ಅರ್ಹತೆಗಳು :

ಅ. ದೈಹಿಕ ಶಿಕ್ಷಣ ತರಬೇತಿ ಕಾಲೇಜಿಗೆ ದಾಖಲಾಗಲು 2 ವರ್ಷದ ಪಿ.ಯು.ಸಿ. ಪಾಸಾಗಿರಬೇಕು.

ಆ. ಸಿಪಿ ಇಡಿ ತರಬೇತಿಗೆ ದಾಖಲಾತಿ ಬಯಸುವ ಸಾಮಾನ್ಯ ಅಭ್ಯರ್ಥಿಗಳ ವಯಸ್ಸು 17 ವರ್ಷದಿಂದ 30 ವರ್ಷದವರೆಗೆ (ಆಯಾ ವರ್ಷದ ಜೂನ್ 1ನೇ ದಿನಾಂಕದಂತೆ).

ಇ. ಎಸ್.ಸಿ. : ಎಸ್. ಟಿ. ಅಭ್ಯರ್ಥಿಗಳಿಗೆ 35 ವರ್ಷ ವಯಸ್ಸು ನಿಗಧಿಪಡಿಸಿದೆ.

4) ಸೀಟುಗಳ ಹಂಚಿಕೆ:

ಅ. ನಿಗಧಿತ ಸಂಸ್ಥೆಯ ವಿದ್ಯಾರ್ಥಿಗಳನ್ನು ಮಾತ್ರ ದಾಖಲಾತಿ ಮಾಡಿಕೊಳ್ಳತಕ್ಕದ್ದು.

ಆ. ಸರ್ಕಾರದಿಂದ ನಿಗಧಿಪಡಿಸಿರುವ ಗರಿಷ್ಠ ಮಿತಿಯ ಶೇ. 80 ರಷ್ಟು ಕರ್ನಾಟಕ ಅಭ್ಯರ್ಥಿಗಳಿಗೂ ಮತ್ತು ಶೇ. 20 ರಷ್ಟು ಕರ್ನಾಟಕೇತರ ಅಭ್ಯರ್ಥಿಗಳಿಗೆ ಮೀಸಲಿಡಬೇಕು. ಒಂದು ವೇಳೆ ಕರ್ನಾಟಕ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಆ ಸ್ಥಳಗಳನ್ನು ಕರ್ನಾಟಕೇತರ ಅಭ್ಯರ್ಥಿಗಳಿಂದ ತುಂಬುವುದಕ್ಕೆ ಮೊದಲು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರವರಿಂದ ಪೂರ್ವಾನುಮತಿ ಪಡೆಯತಕ್ಕದ್ದು. ಉಪ ನಿರ್ದೇಶಕರು ನಿಗಧಿತ ಮಿತಿಗಿಂತ ಹೆಚ್ಚಿಗೆ ಕರ್ನಾಟಕೇತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದಲ್ಲಿ ಕರ್ನಾಟಕ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಸಾಕಷ್ಟು ಅವಕಾಶ ಕೊಟ್ಟಿರುವುದನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಪಟ್ಟಿಯನ್ನು ಅನುಮೋದನೆಗೆ ಕಳುಹಿಸುವಾಗ ಈ ಬಗ್ಗೆ ದೃಢೀಕರಿಸುವುದು. ಅನುಮತಿ ಪಡೆಯದೆ ದಾಖಲಾತಿ ಮಾಡಿಕೊಂಡಲ್ಲಿ ದಾಖಲಾತಿ ಪಟ್ಟಿ ಅನುಮೋದಿಸಲಾಗುವುದಿಲ್ಲ. ಅನುಮತಿ ಪಡೆದ ಬಗ್ಗೆ ಆಯ್ಕೆ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳು ಅಂತಿಮವಾಗಿ ತಯಾರಿಸಿದ ಪಟ್ಟಿಯನ್ನು ದೃಢೀಕರಿಸಿ, ಸಹಿ ಮಾಡಿ ಆಯುಕ್ತರ ಅನುಮೋದನೆ ಸಲ್ಲಿಸಬೇಕು.

ಇ. ಕನಿಷ್ಟ 20 ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ದಾಖಲಾತಿ ಮಾಡಿಕೊಳ್ಳಬೇಕು. ಅದಕ್ಕಿಂತ ಕಡಿಮೆ ಇದ್ದಲ್ಲಿ ದಾಖಲಾತಿ ಪಟ್ಟಿಯನ್ನು ತಿರಸ್ಕರಿಸಲಾಗುವುದು.

5) ದಾಖಲಾತಿ ಪಟ್ಟಿ :

ಅ. ದಾಖಲಾತಿಯ ಕೊನೆಯ ದಿನಾಂಕ ಮುಗಿದ ಕೂಡಲೇ ಆಯಾ ದೈಹಿಕ ಶಿಕ್ಷಣ ಕಾಲೇಜಿನ ಪ್ರಾಚಾರ್ಯರು ಅಂತಿಮವಾಗಿ ತಯಾರಿಸಿದ ದಾಖಲಾತಿ ಪಟ್ಟಿಯನ್ನು ಎಲ್ಲಾ ಸದಸ್ಯರ ಸಹಿ ಪಡೆದು ಆಯ್ಕೆ ಸಮಿತಿಯ ಅಧ್ಯಕ್ಷರಿಗೆ (ಉಪ ನಿರ್ದೇಶಕರಿಗೆ) 5 ಪ್ರತಿಗಳನ್ನು ಜುಲೈ 31ನೇ ತಾರೀಖಿನೊಳಗೆ ತಲುಪುವಂತೆ ತಪ್ಪದೆ ಕಳುಹಿಸಿ ಕೊಡತಕ್ಕದ್ದು.

ಆ. ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು 5 ಪ್ರತಿಗಳಲ್ಲಿ ಸ್ಪಷ್ಟವಾಗಿ, ಸರಿಯಾಗಿ ಕಾಣುವಂತೆ ತಪ್ಪಿಲ್ಲದೆ ಬೆರಳಚ್ಚು ಮಾಡಿಸಿ ಸಂಬಂಧಿಸಿದ ಉಪ ನಿರ್ದೇಶಕರ, ಸದಸ್ಯ ಕಾರ್ಯದರ್ಶಿಯವರ ಹಾಗೂ ಸದಸ್ಯರ ಸಹಿಯೊಂದಿಗೆ ಸೂಕ್ತ ದೃಢೀಕರಣಗಳೊಂದಿಗೆ ಆಗಸ್ಟ್ 1ನೇ ದಿನಾಂಕದೊಳಗಾಗಿ ಉಪ ನಿರ್ದೇಶಕರು ಈ ಕಛೇರಿಗೆ ಅನುಮೋದನೆಗಾಗಿ ಒಪ್ಪಿಸತಕ್ಕದ್ದು.

6. ನಿಯಮದಂತೆ ರೋಸ್ಟರ್ ಪ್ರಕಾರ :

ಪ್ರವರ್ಗ	-	ಶೇ. 4
ಪ್ರವರ್ಗ 2 ಎ	-	ಶೇ. 15
ಪ್ರವರ್ಗ 2 ಬಿ	-	ಶೇ. 4
ಪ್ರವರ್ಗ 3 ಎ	-	ಶೇ. 4
ಪ್ರವರ್ಗ 3 ಬಿ	-	ಶೇ. 5
ಪ.ಜಾತಿ	-	ಶೇ. 15
ಪ.ವರ್ಗ	-	ಶೇ. 3
ಸಾಮಾನ್ಯ ವರ್ಗ	-	ಶೇ. 50

ಪ್ರಕಾರ ವರ್ಗೀಕರಿಸಿ, ಗುಂಪುಗಳಿಗೆ ಅನುಗುಣವಾಗಿ ಶೇಕಡವಾರು ನಿಗಧಿತ ಅಭ್ಯರ್ಥಿಗಳನ್ನು ಕಡ್ಡಾಯವಾಗಿ ದಾಖಲಾತಿ ಮಾಡಿಕೊಳ್ಳತಕ್ಕದ್ದು. ರೋಸ್ಟರ್ ಪದ್ಧತಿಯನ್ನು ಉಲ್ಲಂಘಿಸಿದಲ್ಲಿ ದೈಹಿಕ ಶಿಕ್ಷಣ ಕಾಲೇಜುಗಳ ದಾಖಲಾತಿ ಪಟ್ಟಿಯನ್ನು ಅನುಮೋದಿಸಲಾಗುವುದಿಲ್ಲ. ದಾಖಲಾತಿ ನಿಯಮ ಉಲ್ಲಂಘನೆ ಎಂದು ಪರಿಗಣಿಸಿ ಹಾಗೂ ಮಾನ್ಯತೆಯನ್ನು ರದ್ದುಪಡಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗುವುದು. ಆಯ್ಕೆ ಅಭ್ಯರ್ಥಿಗಳ ಬೆರಳಚ್ಚು ಪ್ರತಿಗಳು ಸ್ಪಷ್ಟವಾಗಿರಬೇಕು. ಪ್ರತಿ ಅಭ್ಯರ್ಥಿಯ ವಿವರಕ್ಕೂ ಮತ್ತೊಂದು ಅಭ್ಯರ್ಥಿಯ ವಿವರಕ್ಕೂ ಸ್ವಲ್ಪ ಹೆಚ್ಚು ಜಾಗದ ಅಂತರವಿರಲಿ. ಅಲ್ಲದೆ

ಈ ಕೆಳಕಂಡ ಕಾಲಂಗಳನ್ನು ಚಾಚು ತಪ್ಪದೆ ಪಾಲಿಸಿ ಕಳುಹಿಸುವುದು.

ಕ್ರ. ಸಂ.	ವಿದ್ಯಾರ್ಥಿಯ ಹೆಸರು	ತಂದೆಯ ಹೆಸರು ಮತ್ತು ವಿಳಾಸ	ವಿದ್ಯಾರ್ಥಿಯ ಜನ್ಮ ದಿನಾಂಕ	ವಿದ್ಯಾರ್ಹತೆ ಪಿಯುಸಿ ಶೇಕಡಾವಾರು	ಅಂಕದ	ಹಾಗೂ ಜಾತಿ: ವರ್ಗೀಕರಣ ಗುಂಪು	ಷರಾ
1	2	3	4	5		6	7

ಹಾಗೂ ದಾಖಲಾತಿ ಪಟ್ಟಿಯ ಪ್ರತಿ ಪುಟದಲ್ಲೂ ಆಯ್ಕೆ ಸಮಿತಿ ಸದಸ್ಯರುಗಳ ದೃಢೀಕರಣವಿರಬೇಕು. ಅಲ್ಲದೆ ಸಂದರ್ಶನ ಪಟ್ಟಿಯಲ್ಲಿ ಸಂದರ್ಶಿಸಿದ ಅಭ್ಯರ್ಥಿಗಳ ವಿವರ, ಆಯ್ಕೆಗಾಗಿ ಕಾದಿರಿಸಿದ ವಿದ್ಯಾರ್ಥಿಗಳ ವಿವರಗಳನ್ನು ಪ್ರತ್ಯೇಕವಾಗಿ ಕಳುಹಿಸುವುದು. ಈ ವಿವರಗಳನ್ನು ಆಯ್ಕೆ ವಿದ್ಯಾರ್ಥಿಗಳ ದಾಖಲಾತಿ ಪಟ್ಟಿಯಲ್ಲಿ ಸೇರಿಸಬಾರದು.

7) ಅಭ್ಯರ್ಥಿಗಳ ಆಯ್ಕೆ ಸಂದರ್ಶನ ಮತ್ತು ದಾಖಲಾತಿ :

ಅ. ದೈಹಿಕ ಶಿಕ್ಷಣ ಕಾಲೇಜುಗಳ ಅಭ್ಯರ್ಥಿಯ ಆಯ್ಕೆಗಳನ್ನು ನಿಗಧಿತ ದಿನಾಂಕದೊಳಗಾಗಿ ಮುಗಿಸಬೇಕು. ನಿಗಧಿತ ವೇಳೆಯ ನಂತರ ದಾಖಲಾತಿ ಮಾಡಿಕೊಂಡಲ್ಲಿ ದಾಖಲಾತಿ ಪಟ್ಟಿಯಲ್ಲಿ ಅನುಮೋದಿಸಲಾಗುವುದಿಲ್ಲ.

ಆ. ಆಯ್ಕೆ ಮತ್ತು ಸಂದರ್ಶನ ನಡೆದ ದಿನವೇ ಅಂತಿಮವಾಗಿ ಆಯ್ಕೆಯಾದ ವಿದ್ಯಾರ್ಥಿಗಳ ಪಟ್ಟಿಯನ್ನು ಆಯಾ ಕಾಲೇಜಿನ ಪ್ರಕಟಣಾ ಫಲಕದಲ್ಲಿ ಪ್ರಕಟಿಸಬೇಕು. ಅದರ ಒಂದು ಪ್ರತಿಯನ್ನು ಮರುದಿನ ಆಯುಕ್ತರ ಕಛೇರಿಗೆ ಕಳುಹಿಸತಕ್ಕದ್ದು.

ಇ. ದೈಹಿಕ ಶಿಕ್ಷಣ ಕಾಲೇಜುಗಳು ಜುಲೈ 16ನೇ ತಾರೀಖಿನಿಂದ ಪ್ರಾರಂಭವಾಗಬೇಕು.

ಈ. ಆಯ್ಕೆ ಮತ್ತು ಸಂದರ್ಶನ ದಿನದಂದು ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳಿಗೆ ದೈಹಿಕ ಮತ್ತು ಕ್ರೀಡಾ ಪರೀಕ್ಷೆಗಳನ್ನು ನಡೆಸಿ ಒಟ್ಟು ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ, ಆಯಾ ಕಾಲೇಜಿಗೆ ನಿಗಧಿಪಡಿಸಿರುವ ದಾಖಲಾತಿ ಗರಿಷ್ಠ ಮಿತಿಗಿಂತ ಹೆಚ್ಚು ಅಭ್ಯರ್ಥಿ ಇದ್ದಲ್ಲಿ ಅವರುಗಳನ್ನು ಕಾಯ್ದಿರಿಸಿ ಪಟ್ಟಿಯನ್ನು ಇಟ್ಟು ಕೊಂಡಿರಬೇಕು.

ಉ. ಯಾವುದೇ ಕಾರಣದಿಂದಲೂ ಅರ್ಹತಾ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಹೊರತು ಪಡಿಸಿ ಬೇರೆ ಅಭ್ಯರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

ಊ. ಆಯ್ಕೆ ಪಟ್ಟಿ ಮತ್ತು ದಾಖಲಾತಿ ಪಟ್ಟಿಗಳಿಗೆ ಈ ಕೆಳಕಂಡ ದೃಢೀಕರಣಗಳನ್ನು ನಮೂದಿಸಬೇಕು.

1) ಆಯ್ಕೆಗೆ ಸರ್ಕಾರ ಹಾಗೂ ಇಲಾಖಾ ನಿಯಮದಂತೆ ಪೂರ್ವಭಾವಿ ಪರೀಕ್ಷೆಗಳನ್ನು ಲಿಖಿತ ಪರೀಕ್ಷೆಗಳನ್ನು ಮತ್ತು ಮೌಖಿಕ ಸಂದರ್ಶನಗಳನ್ನು ನಡೆಸಲಾಯಿತೆಂದು ದೃಢೀಕರಿಸಬೇಕು.

2) ಪ್ರತಿಯೊಬ್ಬ ಅಭ್ಯರ್ಥಿಯ ವಿದ್ಯಾರ್ಹತೆ, ವಯಸ್ಸು, ಮೂಲ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) ಅಂಕಪಟ್ಟಿ ಮತ್ತು ವೈದ್ಯಕೀಯ ದೃಢತಾ ಪತ್ರಗಳನ್ನು ಪರಿಶೀಲಿಸಿ ತೆಗೆದುಕೊಳ್ಳಲಾಗಿದೆ ಎಂದು ದೃಢೀಕರಿಸಬೇಕು.

3) ನಿಯಮದಂತೆ ವಯೋಮಿತಿ ಮೀರಿರುವ ಯಾರನ್ನು ಆಯ್ಕೆ ಮಾಡಿರುವುದಿಲ್ಲ ಎಂದು ದೃಢೀಕರಿಸಬೇಕು.

8) ದಾಖಲಾತಿಯಾದ ಎಲ್ಲಾ ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ, ಟಿ.ಸಿ. ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಚಾರ್ಯರು ಕ್ರೋಢೀಕರಿಸಿ ಈ ಕಛೇರಿಗೆ ದಿನಾಂಕ: 30.8.90ರ ಒಳಗಾಗಿ ಪರಿಶೀಲನೆಗಾಗಿ ಖುದ್ದಾಗಿ ಈ ಕಛೇರಿಗೆ ಒಪ್ಪಿಸಿ ಪರಿಶೀಲನೆ ಮಾಡಿದ ನಂತರ ವಾಪಸ್ಸು ಪಡೆದುಕೊಂಡು ಹೋಗುವಂತೆ ತಿಳಿಸಿದೆ. ಒಂದು ವೇಳೆ ವಿಳಂಬವಾದಲ್ಲಿ ಸದರಿ ದಾಖಲಾತಿ ಪಟ್ಟಿಯನ್ನು ತಿರಸ್ಕರಿಸಲಾಗುವುದು.

9) ದಾಖಲಾತಿ ಸಮಿತಿ ಸದಸ್ಯರು :

1) ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು	-	ಅಧ್ಯಕ್ಷರು
2) ಆಯಾ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು	-	ಸದಸ್ಯ ಕಾರ್ಯದರ್ಶಿ
3) ಸಂಬಂಧಿಸಿದ ಸಿ.ಪಿ. ಇಡಿ ಕಾಲೇಜಿನ ಪ್ರಾಚಾರ್ಯರು	-	ಸದಸ್ಯ ಕಾರ್ಯದರ್ಶಿ
4) ಸ್ಥಳಿಯವಾಗಿ ಲಭ್ಯವಿರುವ ಜೇಷ್ಠತೆಯಲ್ಲಿ ಹಿರಿಯರಾದ ಒಬ್ಬ ಪದವೀಧರ ದೈಹಿಕ ಶಿಕ್ಷಣ ಶಿಕ್ಷಕ: ಶಿಕ್ಷಕಿ	-	

10) ಮಾನ್ಯತೆ ನವೀಕರಣ :-

ದೈಹಿಕ ಶಿಕ್ಷಣ ಕಾಲೇಜುಗಳು ಪ್ರಾರಂಭದ ವರ್ಷದಿಂದ ಹಾಗೂ ಪ್ರಸಕ್ತ ಸಾಲಿನವರೆಗೆ ಮಾನ್ಯತೆ ನವೀಕರಣವನ್ನು ಕಡ್ಡಾಯವಾಗಿ ಪಡೆದಿರಬೇಕು. ಮಾನ್ಯತೆ ನವೀಕರಣ ಪ್ರಸ್ತಾವನೆಯನ್ನು ಅಗತ್ಯ ದಾಖಲೆಗಳೊಡನೆ ಸಂಬಂಧಿಸಿದ ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕರು ಹಾಗೂ ಉಪ ನಿರ್ದೇಶಕರು ಇವರುಗಳ ಸ್ಪಷ್ಟ ಅಭಿಪ್ರಾಯಗಳೊಡನೆ ತಪಾಸಣಾ ವರದಿಯೊಂದಿಗೆ ದಿನಾಂಕ: 30.8.96ರ ಒಳಗೆ ನವೀಕರಣಕ್ಕಾಗಿ ಪ್ರಸ್ತಾವನೆಯನ್ನು ಸಲ್ಲಿಸತಕ್ಕದ್ದು. ಅಲ್ಲದೆ, 1995-96ನೇ ಸಾಲಿನ ಮಾನ್ಯತೆ ನವೀಕರಣದಲ್ಲಿ ಆದೇಶಿಸಲಾದ ಎಲ್ಲಾ ಷರತ್ತುಗಳನ್ನು ಕಾಲೇಜಿನವರು ಪೂರೈಸಿರುವರೇ ಎಂಬುದನ್ನು ಆಯಾ ಜಿಲ್ಲಾ ಉಪ ನಿರ್ದೇಶಕರುಗಳು ತಮ್ಮ ಹಂತದಲ್ಲಿಯೇ ಪರಿಶೀಲಿಸಿ ಷರತ್ತುಗಳನ್ನು ಪೂರೈಸಿದ ಕಾಲೇಜುಗಳ ಪ್ರಸ್ತಾವನೆಯನ್ನು ಕಡ್ಡಾಯವಾಗಿ ಅವರ ಸ್ಪಷ್ಟ ಅಭಿಪ್ರಾಯದೊಡನೆಯೇ ಸಲ್ಲಿಸುವುದು ಎಂದು ಸೂಚಿಸಲಾಗಿದೆ.

ಅಲ್ಲದೆ 95-96ನೇ ಪರೀಕ್ಷೆಗಾಗಿ ಕಾಲೇಜುಗಳ ದಾಖಲಾತಿ ಪಟ್ಟಿಯನ್ನು ಅನುಮೋದಿಸುವ ಬಗ್ಗೆ ಈ ಕಛೇರಿಗೆ ಸಕಾಲದಲ್ಲಿ ಕಳುಹಿಸದೇ ವಿಳಂಬವಾಗಿದ್ದು ಅದರಿಂದ ತುಂಬಾ ಗೊಂದಲವುಂಟಾಗಿದೆ. ಆದ್ದರಿಂದ ಆಯಾ ಜಿಲ್ಲಾ ಉಪ ನಿರ್ದೇಶಕರುಗಳು ಅನುಮೋದಿತ ದಾಖಲಾತಿ ಪಟ್ಟಿಯನ್ನು ತಪ್ಪದೆ 15-8-96ರ ಒಳಗೆ ಕಳುಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆಯೂ ತಿಳಿಸಿದೆ.

ಮೇಲೆ ತಿಳಿಸಿರುವ ಸರ್ಕಾರದ ಹಾಗೂ ಇಲಾಖೆಯು ಸಾದರಪಡಿಸಿರುವ ದೈಹಿಕ ಶಿಕ್ಷಣ ತರಬೇತಿಗೆ ಅಭ್ಯರ್ಥಿಗಳ ದಾಖಲಾತಿ ನಿಯಮಗಳನ್ನು ಯಾವುದೇ ರೀತಿಯಲ್ಲಿ ಉಲ್ಲಂಘಿಸಿದರೆ ಅಂತಹ ದೈಹಿಕ ಶಿಕ್ಷಣ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸುವುದರ ಜೊತೆಗೆ ದಾಖಲಾತಿ ಪಟ್ಟಿಯನ್ನು ತಿರಸ್ಕರಿಸಲಾಗುವುದು ಎಂದು ತಿಳಿಸಿ ಆದೇಶಿಸಲಾಗಿದೆ. ಜೆ.ಓ.ಸಿ. ತೇರ್ಗಡೆಯಾದ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಸರ್ಕಾರದ ಆದೇಶ ಕೋರಲಾಗಿದೆ. ಅಲ್ಲಿಯವರೆಗೂ ಸದರಿ ವಿದ್ಯಾರ್ಥಿಗಳ ಪಟ್ಟಿಯನ್ನು ಕಾಯ್ದಿರಿಸುವುದು.

ಗ್ರಾಮೀಣ ಪ್ರದೇಶದ ಬಡವರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಖರ್ಚು ಮಾಡಿದ ಹಣ

490 (347) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1. ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯದ ಯೋಜನೆಗಳಾವುವು?

2. ರಾಜ್ಯ ಸರ್ಕಾರದ ಈ ಯೋಜನೆಗಳ ಅನುಷ್ಠಾನಕ್ಕಾಗಿ 1996-97, 1997-98 ನೇ ಆಯವ್ಯಯದಲ್ಲಿ ಒಟ್ಟು ಇಟ್ಟ ಹಣವೆಷ್ಟು? ಇದುವರೆವಿಗೂ ಮಾಡಿದ ಖರ್ಚು ಎಷ್ಟು?

3. ಗ್ರಾಮೀಣ ಪ್ರದೇಶದ ಬಡವರ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಕಳೆದ 3 ವರ್ಷಗಳಲ್ಲಿ ಯಾವ ಯಾವ ಯೋಜನೆಗೆ ಕೇಂದ್ರ ಸರ್ಕಾರದಿಂದ ಪಡೆಯಲಾಗಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಬಡವರ ಅಭಿವೃದ್ಧಿಗಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಈ ಕೆಳಕಂಡ ಯೋಜನೆಗಳನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

1. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ ಆರ್ ಡಿಪಿ)
2. ಟ್ರೈಸಂ
3. ಗ್ರಾಮೀಣ ಮಹಿಳೆಯರ ಮತ್ತು ಮಕ್ಕಳ ಅಬಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ)
4. ಗ್ರಾಮೀಣ ಗುಂಪು ಜೀವ ವಿಮೆ ಯೋಜನೆ

5. ಗ್ರಾಮೀಣ ಕುಶಲ ಕರ್ಮಿಗಳಿಗೆ ಸುಧಾರಿತ ಉಪಕರಣಗಳ ಸರಬರಾಜು
6. ಜವಾಹರ್ ರೋಜ್‌ಗಾರ್ ಯೋಜನೆ
7. ಇಂದಿರಾ ಆವಾಜ್ ಯೋಜನೆ
8. ದಶಲಕ್ಷ ಬಾವಿ ಯೋಜನೆ
9. ಉದ್ಯೋಗ ಭರವಸೆ ಯೋಜನೆ

2) (ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಯೋಜನೆ	1996-97		1997-98(ಫೆಬ್ರವರಿ 98ರ ಅಂತ್ಯಕ್ಕೆ)	
		ಆಯವ್ಯಯ ದಲ್ಲಿ ಒದಗಿಸಿರುವ ಮೊಬಲಗು	ಖರ್ಚು ಮಾಡಿರುವ ಹಣ	ಆಯವ್ಯಯ ದಲ್ಲಿ ಒದಗಿಸಿರುವ ಹಣ	ಖರ್ಚು ಮಾಡಿರುವ ಹಣ
1.	ಸ.ಗ್ರಾ.ಅ.	5271.00	6083.030	5401.38	4472.800
2.	ಟ್ರೈಸಂ.	540.00	594.745	574.88	419.210
3.	ಡ್ವಾಕ್ರಾ	167.88	452.806	374.20	323.400
4.	ಗ್ರಾ.ಗು.ಜು.ವಿ.ಯೋ	200.00	129.701	200.00	84.994
5.	ಸುಧಾರಿತ ಉಪಕರಣ		177.642	-	222.924
6.	ಜೆ. ಆರ್. ವೈ	12636.57	12015.30	12332.80	8946.040
7.	ಇಂ.ಆ.ಯೋ	7445.39	8484.84	7502.90	7398.030
8.	ದ.ಬಾಯೋ	2915.54	2750.864	3141.20	2147.120
9.	ಉ.ಭ.ಯೋ	10000.00	14307.22	14000.00	14217.27

3) ಕೇಂದ್ರ ಸರ್ಕಾರದಿಂದ ಪಡೆದ ಹಣ (ಲಕ್ಷ ರೂ.ಗಳಲ್ಲಿ)

ಕ್ರ.ಸಂ.	ಯೋಜನೆ	1994-95	1995-96	1996-97
1.	ಸ.ಗ್ರಾ.ಅ.	2466.327	2506.288	2883.255
2.	ಟ್ರೈಸಂ	339.230	283.325	157.670
3.	ಡ್ವಾಕ್ರಾ	28.245	91.00	77.704

4. ಗ್ರಾ.ಗು.ಜು.ವಿ.ಯೋ ಕೇಂದ್ರ ಸರ್ಕಾರವು ಹಣವನ್ನು ಜೀವವಿಮಾ ನಿಗಮಕ್ಕೆ ನೇರವಾಗಿ ಬಿಡುಗಡೆ ಮಾಡುತ್ತದೆ.

5.	ಸುಧಾರಿತ ಉಪಕರಣ	144.00	151.72	243.27
6.	ಜೆ ಆರ್. ವೈ	14775.37	18211.77	8873.18
7.	ಇಂ. ಆ. ಯೋ	1516.36	6213.30	6883.89
8.	ದ. ಬಾ. ಯೋ	4438.60	2332.45	2108.50
9.	ಉ. ಭ. ಯೋ	6606.40	10970.00	11560.00

ಷರಾ 8 ದಿನಾಂಕ 1.1.96 ರಿಂದ ದಶಲಕ್ಷ ಬಾವಿ ಯೋಜನೆ ಮತ್ತು ಇಂದಿರಾ ಆವಾಸ್ ಯೋಜನೆಗಳು ಜವಹರ್ ರೋಜ್‌ಗಾರ್ ಯೋಜನೆ ಕಾರ್ಯಕ್ರಮದಿಂದ ಬೇರ್ಪಟ್ಟಿರುತ್ತವೆ.

ಅಧ್ಯಕ್ಷರು : ಮಂಡಿಸಲಾಯಿತು.

2) ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ:

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 24 ನೇ ಮಾರ್ಚ್ 1998 ರಂದು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಶಿಕ್ಷಣ ತಿದ್ದುಪಡಿ ವಿಧೇಯಕ, 1996

2. ಕರ್ನಾಟಕ ಗಿರವಿದಾರರ ತಿದ್ದುಪಡಿ ವಿಧೇಯಕ, 1997

3) ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಶ್ರೀ ಎಂ. ಸಿ. ನಾಣಯ್ಯ (ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯ ಮಂತ್ರಿ) ಅವರ ಪರವಾಗಿ

1978 ರ ಕರ್ನಾಟಕ ನಾಗರೀಕ ಸೇವೆಗಳ ಅಧಿನಿಯಮ 8 (3) ನೇ ಪ್ರಕರಣದ ಮೇರೆಗೆ;

1. 1957ರ ಕರ್ನಾಟಕ ನಾಗರೀಕ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳಿಗೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 20.9.97 ರಂದು ಹೊರಡಿಸಲಾದ ಡಿಪಿ ಎ ಆರ್ 20 ಎಸ್ ಡಿ ಇ 96ನೇ ಕ್ರಮಾಂಕದ ಅಧಿಸೂಚನೆ;

2. 1977ರ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 21.1.98 ರಂದು ಹೊರಡಿಸಲಾದ ಡಿಪಿ ಎ ಆರ್ 44 ಎಸ್ ಆರ್ ಆರ್ 96 ನೇ ಕ್ರಮಾಂಕದ ಅಧಿಸೂಚನೆ;

3. 1957ರ ಕರ್ನಾಟಕ ನಾಗರೀಕ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳಿಗೆ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 21.1.98 ರಂದು ಹೊರಡಿಸಲಾದ ಡಿಪಿ ಎ ಆರ್ 7 ಎಸ್ ಡಿ ಇ 97 ನೇ ಕ್ರಮಾಂಕದ ಅಧಿಸೂಚನೆ;

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20 ನೇ ಪ್ರಕರಣದ ಮೇರೆಗೆ

4. ಕೊಡಗು, ಹಾಸನ, ಶಿವಮೊಗ್ಗ, ಧಾರವಾಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕ್ರಮವಾಗಿ 1997ರ ಡಿಸೆಂಬರ್ , ನವೆಂಬರ್ ಸೆಪ್ಟೆಂಬರ್ ಹಾಗೂ ಜನವರಿ 1998ರಲ್ಲಿ ಮಕ್ಕಳ ಚಲನಚಿತ್ರ ಮಹೋತ್ಸವವನ್ನು ಆಚರಿಸಲು 'ನ್ಯಾಷನಲ್ ಸೆಂಟರ್ ಆಫ್ ಫಿಲ್ಮ್ಸ್ ಫಾರ್ ಚಿಲ್ಡ್ರನ್ ಅಂಡ್ ಯಂಗ್ ಪೀಪಲ್ ' ಅವರಿಗೆ ವಿನಾಯಿತಿ ನೀಡುವ ಸಂಬಂಧದಲ್ಲಿ ದಿನಾಂಕ 1.9.97 ರಂದು ಹೊರಡಿಸಲಾದ ಹೆಚ್ ಡಿ 70 ಸಿ ಎನ್ ಎ 97 ನೇ ಕ್ರಮಾಂಕದ ಅಧಿಸೂಚನೆ.

5. ಸಾಕ್ಷರತಾ ಆಂದೋಳನದ ಮೇಲೆ ಚಿತ್ರೀಕರಿಸಿರುವ 'ಕರಿಮಲೆಯ ಕಗ್ಗತ್ತಲು' ಎಂಬ ಚಲನಚಿತ್ರವನ್ನು ಪ್ರದರ್ಶಿಸಲು ಅಧ್ಯಕ್ಷರು, ಸಿರಿಗನ್ನಡ ವಿಕಾಸ-ವೇದಿಕೆ, ಕರ್ನಾಟಕ ಪೂಜಾರಿ ದೊಡ್ಡಿ, ಹೊರಳಗಲ್ಲು ಅಂಚೆ, ಕನಕಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಚಿತ್ರಮಂದಿರಗಳಲ್ಲಿ ದಿನಾಂಕ 10. 12. 97 ರಿಂದ 9. 2. 98 ರವರೆಗೆ ದಿನವಹಿ 5ನೇ ಪ್ರದರ್ಶನವಾಗಿ ಚಲನಚಿತ್ರ ಪ್ರದರ್ಶನ ನಡೆಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 1. 12. 97 ರಂದು ಹೊರಡಿಸಲಾದ ಹೆಚ್ ಡಿ 114 ಸಿ ಎನ್ ಎ 97 ನೇ ಕ್ರಮಾಂಕದ ಅಧಿಸೂಚನೆ;

6. ಕುಣಿಗಲ್ ತಾಲ್ಲೂಕಿನ ಅಮೃತ್ತೂರು ಗ್ರಾಮದಲ್ಲಿ ಶ್ರೀನಿವಾಸ ಟಾಕೀಸ್ ಚಿತ್ರಮಂದಿರದ ಮಾಲೀಕರಾದ ಶ್ರೀ ಎ. ಎನ್. ಮರಿಯಪ್ಪನವರಿಗೆ ನೀಡಲಾದ ನಿರಾಕ್ಷೇಪಣಾ ಪತ್ರದ ಅವಧಿಯನ್ನು ಮೂರೂವರೆ ವರ್ಷಗಳವರೆಗೆ ವಿಸ್ತರಿಸಿರುವ ಸಂಬಂಧದಲ್ಲಿ ದಿನಾಂಕ 1. 12. 97 ರಂದು ಹೊರಡಿಸಲಾದ ಹೆಚ್ ಡಿ 117 ಸಿ ಎನ್ ಎ 94ನೇ ಕ್ರಮಾಂಕದ ಅಧಿಸೂಚನೆ;

1957ರ ಕರ್ನಾಟಕ ಮುದ್ರಾಂಕ ಅಧಿನಿಯಮದ 9(2) ನೇ ಪ್ರಕರಣದ ಮೇರೆಗೆ;

7. ದಿನಾಂಕ 27. 5. 86 ರಂದು ಹೊರಡಿಸಲಾದ ಆರಡಿ 403 ಇ ಎಸ್ ಆರ್ 85ರ ಅಧಿಸೂಚನೆಗೆ, ಇಂಪ್ಯಾಕ್ಸ್ ಚಾರಿಟಬಲ್ ಸೊಸೈಟಿ, ಬೆಂಗಳೂರು ಈ ಸಂಸ್ಥೆಗೆ ಬುದ್ಧಿಮಾಂದ್ಯ ಮಕ್ಕಳ ಪಾಲನೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಹೆಚ್. ಬಿ. ಆರ್. ಬಡಾವಣೆಯಲ್ಲಿ ನಿವೇಶನವೊಂದನ್ನು 30 ವರ್ಷಗಳ ಅವಧಿಗೆ ಗೇಣಿಗೆ ನೀಡುವ ಸಂಬಂಧದಲ್ಲಿ, ಗೇಣಿ ಕರಾರು ಪತ್ರದ ನೋಂದಣಿಗಾಗಿ ತಗಲುವ ನೋಂದಣಿ ಶುಲ್ಕದಲ್ಲಿ ರೂ. 1, 100ಗಳ ವಿನಾಯಿತಿ ನೀಡಿರುವುದನ್ನು ಸೇರಿಸಿ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 28. 1. 98 ರಂದು ಹೊರಡಿಸಲಾದ ಕಂ ಇ 76 ಮುನೋಮು 97ನೇ ಕ್ರಮಾಂಕದ ಆದೇಶ;

8. ಬೆಂಗಳೂರು ಮಹಾನಗರಪಾಲಿಕೆ ಮತ್ತು ಮೆ: ಶ್ಯಾಮರಾಜು ಮತ್ತು ಕಂಪನಿ, ಬೆಂಗಳೂರು, ಇವರುಗಳು ಜಂಟಿ ಒಪ್ಪಂದಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅಕ್ಕಿತಿಮ್ಮನಹಳ್ಳಿಯಲ್ಲಿ ನಿರ್ಮಿಸುವ ವಾಣಿಜ್ಯ ಸಂಕೀರ್ಣ ಕಟ್ಟಡಗಳ ನಿರ್ಮಾಣಧ ಸಲುವಾಗಿ ನೊಂದಣಿಗಾಗಿ ತಗಲುವ ಒಟ್ಟಾರೆ ಮುದ್ರಾಂಕ ಶುಲ್ಕದಲ್ಲಿ ಶೇ. 50 ರಷ್ಟು ಮುದ್ರಾಂಕ ಶುಲ್ಕಕ್ಕೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 12. 3. 98 ರಂದು ಹೊರಡಿಸಲಾದ ಕಂ ಇ 199 ಮುನೋಮು 96ನೇ ಕ್ರಮಾಂಕದ ಆದೇಶ.

1965ರ ಕರ್ನಾಟಕ ಅಬಕಾರಿ ಕಾಯ್ದೆಯ 71 (4)ನೆ ಪ್ರಕರಣದ ಮೇರೆಗೆ;

9. ಐ1969ರ ಕರ್ನಾಟಕ ಅಬಕಾರಿ (ಮದ್ಯಗಳನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಗುತ್ತಿಗೆ ಹಕ್ಕಿನ) ನಿಯಮಗಳನ್ನು ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 19.7.97 ರಂದು ಹೊರಡಿಸಲಾದ ಎಫ್ ಡಿ 6 ಪಿ ಇ ಎಸ್ 97ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಆ) ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿ) ಅವರ ಪರವಾಗಿ:

1957 ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 39ನೇ ಕಲಮಿನ ಮೇರೆಗೆ;

1. ಹೊಸ ಮಾಹಿತಿ ತಂತ್ರಜ್ಞಾನ ಕೈಗಾರಿಕಾ ಘಟಕಗಳು ಇವರು ವಾಣಿಜ್ಯ ಉತ್ಪಾದನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ತಯಾರಿಸಿ ಮಾರಾಟ ಮಾಡುವ ವಸ್ತುಗಳ ಮೇಲೆ 9 ವರ್ಷಗಳ ಕಾಲ ತೆರಿಗೆಗೆ ವಿನಾಯಿತಿ ನೀಡಿರುವ ಅಥವಾ 12 ವರ್ಷಗಳ ಕಾಲ ಪಾವತಿಸಬೇಕಾದ ತೆರಿಗೆಯನ್ನು ಮುಂದೂಡಲ್ಪಟ್ಟಿರುವ ಸಂಬಂಧದಲ್ಲಿ ದಿನಾಂಕ, 21.8.97 ರಂದು ಹೊರಡಿಸಲಾದ ಎಫ್ ಡಿ 57 ಸಿ ಎಸ್ ಎಲ್ 97ನೇ ಕ್ರಮಾಂಕದ ಅಧಿಸೂಚನೆ- 1;

2. ಹೊಸ ಮಾಹಿತಿ ತಂತ್ರಜ್ಞಾನ ಕೈಗಾರಿಕಾ ಘಟಕಗಳು ಇವರು ತಯಾರಿಸಿ ಅಂತರ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯಕ್ಕಾಗಿ ಮಾರಾಟ ಮಾಡುವ ಸರಕುಗಳ ಮೇಲೆ 1956ರ ಕೇಂದ್ರ ಮಾರಾಟ ತೆರಿಗೆಯನ್ವಯ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿರುವ ಅಥವಾ ಮುಂದೂಡಲ್ಪಟ್ಟಿರುವ ಸಂಬಂಧದಲ್ಲಿ ದಿನಾಂಕ 21.8.97 ರಂದು ಹೊರಡಿಸಲಾದ ಎಫ್ ಡಿ 57 ಸಿ ಎಸ್ ಎಲ್ 97ನೇ ಕ್ರಮಾಂಕದ ಅಧಿಸೂಚನೆ- 2;

3. ಹೊಸ ಮಾಹಿತಿ ತಂತ್ರಜ್ಞಾನ ಕೈಗಾರಿಕಾ ಘಟಕಗಳಿಗೆ ಮಾರಾಟವಾಗುವ ಕಂಪ್ಯೂಟರ್ ಹಾರ್ಡ್‌ವೇರ್, ಕಂಪ್ಯೂಟರ್ ಪೆರಿಫೆರಲ್, ಇತರ ಬಂಡವಾಳ ಸರಕುಗಳ ಹಾಗೂ ಕ್ಯಾಪ್ಟಿವ್ ಜನರೇಷನ್ ಸೆಟ್‌ಗಳ ಮೇಲೆ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 21.8.97 ರಂದು ಹೊರಡಿಸಲಾದ ಎಫ್ ಡಿ 57 ಸಿ ಎಸ್ ಎಲ್ 97ನೇ ಕ್ರಮಾಂಕದ ಅಧಿಸೂಚನೆ - 3;

4. ಹೊಸ ಮಾಹಿತಿ ತಂತ್ರಜ್ಞಾನ ಘಟಕಗಳು ಇವರಿಗೆ ಕ್ಯಾಪ್ಟಿವ್ ಪವರ್ ಜನರೇಷನ್‌ಗಳಿಗೆ ಉಪಯೋಗಿಸುವ ಇಂಧನವನ್ನು ಮಾರಾಟ ಮಾಡುವ ವರ್ತಕರಿಗೆ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 21.8.97 ರಂದು ಹೊರಡಿಸಲಾದ ಎಫ್ ಡಿ 57 ಸಿ ಎಸ್ ಎಲ್ 97 97ನೇ ಕ್ರಮಾಂಕ ಅಧಿಸೂಚನೆ- 4;

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ 31ನೇ ಪ್ರಕರಣದ ಮೇರೆಗೆ;

5. ಹೊಸ ಮಾಹಿತಿ ತಂತ್ರಜ್ಞಾನ ಘಟಕಗಳು ಇವರು ಸ್ಥಳೀಯ ಸ್ಥಳಗಳಿಗೆ ಬಿಡುಗಡೆ ಮಾಡುವ ಕಂಪ್ಯೂಟರ್ ಹಾರ್ಡ್‌ವೇರ್ ಕಂಪ್ಯೂಟರ್ ಪೆರಿಫೆರಲ್ಸ್, ಕ್ಯಾಪ್ಟಿವ್ ಗೂಡ್ಸ್ ಹಾಗೂ ಕ್ಯಾಪ್ಟಿನ್ ಜನರೇಷನ್ ಸೆಟ್ಸ್‌ಗಳ ಮೇಲೆ ವಸೂಲು ಮಾಡುವ ಪ್ರವೇಶ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 21.8.97 ರಂದು ಹೊರಡಿಸಲಾದ ಎಫ್ ಡಿ 57 ಸಿ ಎಸ್ ಲ್ 97 ನೇ ಕ್ರಮಾಂಕದ ಅಧಿಸೂಚನೆ - 5;

6. ಚಿನಿವಾರ ಹಾಗೂ ವಂಶ (ಜಾತಿ) (ಬುಲಿಯನ್ ಮತ್ತು ಸ್ಪೇಸಿ) ಮಾರಾಟದ ಮೇಲೆ ನೋಂದಾಯಿತ ವರ್ತಕರು ಕೇಂದ್ರ ಮಾರಾಟ ತೆರಿಗೆಯನ್ವಯ ಅಂತರ ರಾಜ್ಯ ವ್ಯಾಪಾರ ಹಾಗೂ ವಾಣಿಜ್ಯದ ಸಂಬಂಧದಲ್ಲಿ ಪಾವತಿಸಬೇಕಾದ ಮಾರಾಟ ತೆರಿಗೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡ ಅರ್ಧ ದಷ್ಟನ್ನು 31ನೇ ಮಾರ್ಚ್ 1998 ರವರೆಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 7.3.98 ರಲ್ಲಿ ಹೊರಡಿಸಲಾದ ಎಫ್ ಡಿ 23 ಸಿ ಎಸ್ ಎಲ್ 98 (1) ನೇ ಕ್ರಮಾಂಕದ ಅಧಿಸೂಚನೆ;

7. ದಿನಾಂಕ 7.1.98 ರಂದು ಹೊರಡಿಸಿರುವ ಎಫ್ ಡಿ 214 ಸಿ ಇಟಿ 97ನೇ ಅಧಿಸೂಚನೆಯಲ್ಲಿನ ''ಆಯಿಲ್ ಕೇಕ್'' ಎಂಬ ಪದಗಳ ನಂತರ ''ಬುಲಿಯನ್ ಮತ್ತು ಸ್ಪೇಸಿ'' ಎಂಬುದನ್ನು ಸೇರಿಸಿ ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 7.3.98 ರಂದು ಹೊರಡಿಸಲಾದ ಎಫ್ ಡಿ 23 ಸಿ ಎಸ್ ಎಲ್ 98 (2) ನೇ ಕ್ರಮಾಂಕದ ಅಧಿಸೂಚನೆ;

1958ರ ಕರ್ನಾಟಕ ಮನರಂಜನಾ ತೆರಿಗೆ ಕಾಯ್ದೆಯ 18ನೇ ಪ್ರಕರಣದ ಮೇರೆಗೆ;

8. 1959ರ ಕರ್ನಾಟಕ ಮನರಂಜನಾ ತೆರಿಗೆ ನಿಯಮಗಳನ್ನು ಮತ್ತಷ್ಟು ತಿದ್ದುಪಡಿ ಮಾಡಿರುವ ಸಂಬಂಧದಲ್ಲಿ ದಿನಾಂಕ 7.3.98 ರಂದು ಹೊರಡಿಸಲಾದ ಎಫ್ ಡಿ 52 ಸಿ ಇ ಎಕ್ಸ್ 97ನೇ ಕ್ರಮಾಂಕದ ಅಧಿಸೂಚನೆ;

9. 1979ರ ಕರ್ನಾಟಕ ವಿಲಾಸ ತೆರಿಗೆ (ಹೋಟೆಲ್‌ಗಳು ಮತ್ತು ಅತಿಥಿ ಗೃಹಗಳು) ಕಾಯ್ದೆಯ 17ನೇ ಪ್ರಕರಣದ ಕಲಂ 2ರಲ್ಲಿ ಅಧಿಕಾರಿಗಳನ್ನು ಗೊತ್ತುಪಡಿಸುವ ಸಂಬಂಧದಲ್ಲಿ ದಿನಾಂಕ 10.3.98 ರಂದು ಹೊರಡಿಸಲಾದ ಎಫ್ ಡಿ 1 ಸಿ ಎಸ್ ಟಿ 98ನೇ ಕ್ರಮಾಂಕದ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಇ) ಶ್ರೀ ಎಂ.ಸಿ ನಾಣಯ್ಯ (ಕಾನೂನು ಸಚಿವರು)

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) ಮಂತ್ರಿ ಅವರ ಪರವಾಗಿ: 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 320ನೇ ಪ್ರಕರಣದ ಮೇರೆಗೆ;

1. 1997ರ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯಿತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಹುದ್ದೆಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ 5.3.98 ರಂದು ಹೊರಡಿಸಲಾದ ಗ್ರಾಅಪ 369 ಜಿ ಪಸ 97ನೇ ಕ್ರಮಾಂಕದ ಅಧಿಸೂಚನೆ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262 (3) ನೇ ಪ್ರಕರಣದ ಮೇರೆಗೆ;

2. 1995-96ನೇ ಸಾಲಿನ ತುಮಕೂರು ಜಿಲ್ಲಾ ಪಂಚಾಯತ್‌ನ ಪ್ರಮಾಣೀಕೃತ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸುತ್ತೇನೆ.

ಈ. ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಮಂತ್ರಿ) ಅವರ ಪರವಾಗಿ

1957 ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮದ 16(2) ನೇ ಪ್ರಕರಣದ ಮೇರೆಗೆ;

1. ಕರ್ನಾಟಕ ಜನಪದ ಪರಿಷತ್, ಬೆಂಗಳೂರು ಇವರ ವಾಹನ ಸಂಖ್ಯೆ ಕೆ. ಎ. -04-3321 ಕ್ಕೆ ವಾಹನ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 12.03.97 ರಂದು ಹೊರಡಿಸಲಾದ ಹೆಚ್ ಟಿಡಿ 96 ಟಿ ಎಂ ಟಿ 93ನೇ ಕ್ರಮಾಂಕದ ಅಧಿಸೂಚನೆ;

2. ಶ್ರೀ ಮಲ್ಲಿಕಾರ್ಜುನ ಸ್ವಾಮಿ ವಿದ್ಯಾ ಸಂಸ್ಥೆ (ರಿ), ಶ್ರೀ ಗವಿಮಠ, ಬೆಟ್ಟದ ಹಳ್ಳಿ, ಗುಬ್ಬಿ ತಾಲ್ಲೂಕು, ತುಮಕೂರು ಇವರ ವಾಹನ ಸಂಖ್ಯೆ ಕೆ. ಎ. -06-ಎಂ- 197ಕ್ಕೆ ವಾಹನ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 4.2.97 ರಂದು ಹೊರಡಿಸಲಾದ ಹೆಚ್ ಟಿಡಿ 158 ಟಿ ಎಂ.ಸಿ 95ನೇ ಕ್ರಮಾಂಕದ ಅಧಿಸೂಚನೆ;

3. ಶ್ರೀ ರಂಭಾಪುರಿ ಜಗದ್ಗುರುಗಳು, ಬಾಳೆಹೊನ್ನೂರು, ಚಿಕ್ಕಮಗಳೂರು ಇವರ ವಾಹನ ಸಂಖ್ಯೆ ಕೆ. ಎ. - 18 - ಎಂ-2238 ಕ್ಕೆ ವಾಹನ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 15.9.97 ರಂದು ಹೊರಡಿಸಲಾದ ಹೆಚ್ ಟಿಡಿ 219 ಟಿ ಎಂಟಿ 95ನೇ ಕ್ರಮಾಂಕದ ಅಧಿಸೂಚನೆ;

4. ಮೆ: ಚೇತನ್ ಟ್ರಸ್ಟ್, ಮೈಸೂರು ಇವರ ವಾಹನ ಟಾಟಾ 609, ಇಂಜಿನ್ ನಂಬರ್ 497 - ಡಿ 22- ಹೆಚ್ ಯುಬಿ - 770547, ಚಾಕೀಸ್ ನಂಬರ್ 379035 - ಹೆಚ್ ಯೂಕ್ಯೂ - 825802ನ್ನು "ವಿಶೇಷವೆಂದು" ಪರಿಗಣಿಸಿ ವಾಹನ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 21.1.97 ರಂದು ಹೊರಡಿಸಲಾದ ಹೆಚ್ ಟಿಡಿ 225 ಟಿ ಎಂಟಿ 96ನೇ ಕ್ರಮಾಂಕದ ಅಧಿಸೂಚನೆ;

5. ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ ಅಂಡ್ ಸೆಂಟರ್, ಬೆಂಗಳೂರು ಇವರ ವಾಹನ ಸಂಖ್ಯೆ ಸಿ ಎ ಹೆಚ್ 2299ಕ್ಕೆ ದಿನಾಂಕ 1.8.94 ರಿಂದ 31.7.94 ರವರೆಗೆ ತೆರಿಗೆ ಹಣ ರೂ. 60,495.00ಗಳನ್ನು ರದ್ದುಗೊಳಿಸಿರುವ ಸಂಬಂಧದಲ್ಲಿ ದಿನಾಂಕ 7.2.97 ರಂದು ಹೊರಡಿಸಲಾದ ಹೆಚ್ ಟಿಡಿ 274 ಟಿ ಎಂಟಿ 92ನೇ ಕ್ರಮಾಂಕದ ಅಧಿಸೂಚನೆ;

6. ಕಿದ್ವಾಯಿ ಮೆಮೊರಿಯಲ್ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ, ಬೆಂಗಳೂರು ಇವರ ವಾಹನ ಸಂಖ್ಯೆ ಕೆ. ಎ. -05- ಟಿ. ಆರ್. -4172:94-95ಕ್ಕೆ ತೆರಿಗೆ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 31.1.97 ರಮದು ಹೊರಡಿಸಲಾದ ಹೆಚ್ ಟಿಡಿ 184 ಟಿ ಎಂಟಿ 95ನೇ ಕ್ರಮಾಂಕದ ಅಧಿಸೂಚನೆ;

ಉ) ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು)

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಮಂತ್ರಿ) ಅವರ ಪರವಾಗಿ

1996ರ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆಯ 153ನೇ ಪ್ರಕರಣದ ಮೇರೆಗೆ;

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮ ನಿಯಮಿತಿ, ಬೆಂಗಳೂರು ಇವರಿಗೆ ರಾಜ್ಯದ ವಿವಿಧ ತಾಲ್ಲೂಕುಗಳಲ್ಲಿ ವಿತರಿಸುವ ಉರವಲು ಕಟ್ಟಿಗೆಯ ಮೌಲ್ಯದ ಮೇಲಿನ ಮಾರುಕಟ್ಟೆ ಶುಲ್ಕ ತುಂಬುವುದರಿಂದ ವಿನಾಯಿತಿ ನೀಡಿರುವ ಸಂಬಂಧದಲ್ಲಿ ದಿನಾಂಕ 8.7.97 ರಂದುಹೊರಡಿಸಲಾದ ಸಿ ಎಂಡಬ್ಲ್ಯೂ 1 ಎಂ ಎಲ್ ಡಬ್ಲ್ಯೂ 97 ನೇ ಕ್ರಮಾಂಕದ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಊ) ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು):

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನೆ ರಾಜ್ಯ ಮಂತ್ರಿ) ಅವರ ಪರವಾಗಿ:

1973ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಅಧಿನಿಯಮ 24ನೇ ಪ್ರಕರಣದ ಮೇರೆಗೆ;

1. 1996-97ನೇ ಸಾಲಿನ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ;

1956ರ ಕಂಪನಿಗಳ ಕಾಯ್ದೆಯ 619 ಎ ಪ್ರಕರಣದ ಮೇರೆಗೆ;

2. ದಿನಾಂಕ 31.3.97ಕ್ಕೆ ಅಂತ್ಯಗೊಳ್ಳುವ ಕರ್ನಾಟಕ ಮಾಂಸ ಮತ್ತು ಕೋಳಿ ಮಾರಾಟ ನಿಗಮ ನಿಯಮಿತದ 23ನೇ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳನ್ನು ಮಂಡಿಸುತ್ತೇನೆ.

4) ವರದಿಗಳನ್ನು ಒಪ್ಪಿಸುವುದು

ಶ್ರೀ ವಿ. ಎಸ್. ಕೌಜಲಗಿ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕ ಪತ್ರ ಸಮಿತಿ ಅಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಅಧ್ಯಕ್ಷನಾದ ನಾನು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಸಮಿತಿಯ 32ನೇ ಮತ್ತು 33ನೇ ವರದಿಗಳನ್ನು ಈ ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು (ಶ್ರೀ ಬಸವರಾಜ ಪಾಟೀಲ್ ಅಟ್ಟೂರ್‌ರವರ ಪರವಾಗಿ): ಸಾರ್ವಜನಿಕ ಉದ್ದಿಮೆ ಸಮಿತಿಯ 75, 76 ಹಾಗೂ 77ನೇ ವರದಿಯನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

(ವರದಿಗಳನ್ನು ಮಂಡಿಸಲಾಯಿತು)

5) ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

ಅಧ್ಯಕ್ಷರು : ಈಗ 17 ಜನ ಮಾನ್ಯ ಸದಸ್ಯರು ಶೂನ್ಯ ವೇಳೆಯ ವಿಚಾರವನ್ನು ಪ್ರಸ್ತಾಪ ಮಾಡಲು ಅನುಮತಿ ಕೋರಿದ್ದಾರೆ. ಒಂದೊಂದು ನಿಮಿಷ ಚರ್ಚೆಗೆ ಅವಕಾಶ ಇಲ್ಲದಂತೆ ಪ್ರಸ್ತಾಪ ಮಾಡಿದರೆ ಅನುಕೂಲ. ಏಕೆಂದರೆ ನಾಳೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವವರು ಇದ್ದಾರೆ. ಬಜೆಟ್ ಮೇಲೆ ಚರ್ಚೆ ಮಾಡುವುದಕ್ಕೆ ಹೆಚ್ಚು ಸಮಯ ಕೊಡಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಜಯರಾಮಶೆಟ್ಟಿ : ನಾನು ಮೊನ್ನೆ ಸೋಮವಾರ ಶೂನ್ಯ ವೇಳೆಯಲ್ಲಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತೇನೆಂದು ಹೇಳಿದ್ದರು. ಕೊಡಲಿಲ್ಲ. ಕಳೆದ 12ನೇ ತಾರೀಖಿನ ನನ್ನ ಪ್ರಶ್ನೆಗೆ ತಾವು ಉತ್ತರ ತರಿಸಿಕೊಡುತ್ತೇನೆಂದು ಹೇಳಿದ್ದೀರಿ. ಉತ್ತರ ಕೊಡಿಸಲಿಲ್ಲ. ಗಂಭೀರವಾಗಿ ಪರಿಶೀಲನೆ ಆಗಬೇಕು. ಐದು ತಿಂಗಳು ಆರು ತಿಂಗಳಾದ ನಂತರ ಉತ್ತರ ಬಂದರೆ ಏನು ಪ್ರಯೋಜನ ಅಧ್ಯಕ್ಷರೆ; ತಾವು ದಯವಿಟ್ಟು ಇದರ ಬಗ್ಗೆ ವ್ಯವಸ್ಥೆ ಮಾಡಬೇಕು.

ಶ್ರೀ ಅರಗ ಜ್ಞಾನೇಂದ್ರ : ನಾನು ನಿನ್ನೆ ಶೂನ್ಯ ವೇಳೆಯ ವಿಚಾರ ಪ್ರಸ್ತಾಪ ಮಾಡಿದ್ದೆ. ಇವತ್ತು ಉತ್ತರ ಕೊಡುತ್ತೇನೆಂದು ಹೇಳಿದ್ದರು.

ಅಧ್ಯಕ್ಷರು : ಶೂನ್ಯ ವೇಳೆಯ ವಿಚಾರದಲ್ಲಿ ಅನೇಕ ಮಾನ್ಯ ಸ್ನೇಹಿತರುಗಳು ಏನು ಮಾಡುತ್ತಾರೆಂದರೆ ಆಗಿಂದಾಗ್ಗೆ ತಂದು ಕೊಡುತ್ತಾರೆ. ಮೊದಲೇ ನೋಟೀಸ್ ಕೊಟ್ಟಿರುವುದಿಲ್ಲ. ಈಗ ಕೆಲವರು ಇದ್ದಕ್ಕಿದ್ದ ಹಾಗೆ ಕೊಟ್ಟಿದ್ದಾರೆ. ನಾನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇರಲಿ ಎಂದು ಹೇಳಿ ಅವಕಾಶ ಕೊಟ್ಟಿರುತ್ತೇನೆ. ಮೊದಲೇ ನೋಟೀಸ್ ಕೊಟ್ಟಿದ್ದಾರೆ ಅವರು ಉತ್ತರ ತರಿಸಿಕೊಂಡು ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ನಾನು ನಾಲ್ಕು ದಿವಸ ಮೊದಲೇ ಕೊಟ್ಟಿದ್ದೆ.

ಅಧ್ಯಕ್ಷರು : ದಯಮಾಡಿ ಕೇಳಿ. ಒಂದೊಂದು ಸಲ ಹಾಗೆ ಆಗುತ್ತದೆ. ಉತ್ತರ ತರಿಸಿ ಕೊಂಡು ಹೇಳುತ್ತಾರೆ. ಅದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗ ಮೊದನೆಯದಾಗಿ ಮಾನ್ಯ ಪುಟ್ಟಣ್ಣಯ್ಯನವರು. ಒಂದು ನಿಮಿಷಕ್ಕಿಂತ ಹೆಚ್ಚು ಯಾರೂ ತೆಗೆದುಕೊಳ್ಳುವ ಹಾಗೆ ಇಲ್ಲ. ಒಂದು ನಿಮಿಷದಲ್ಲಿ ಪ್ರಸ್ತಾಪ ಮಾಡಬೇಕು, ದಯಮಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನಾನು ಎರಡು ಮೂರು ವಿಚಾರದಲ್ಲಿ ಕೊಟ್ಟಿದ್ದೆ.

ಅಧ್ಯಕ್ಷರು : ಈಗ ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ, ಆಮೇಲೆ ಮಿಕ್ಕ ವಿಚಾರ ನೋಡೋಣ . ಏಕೆಂದರೆ 17 ವಿಚಾರಗಳು ಇವೆ.

ಅ) ಕರ್ನಾಟಕ ಗೃಹ ಮಂಡಳಿಯ ನೌಕರರಾದ ಅಂದಾನಿಗೌಡರಿಗೆ ಸೈಟು ನೀಡುವ ಬಗ್ಗೆ

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಲಿಯಲ್ಲಿ ಅಂದಾನಿ ಗೌಡ ಎಂದು ಹೇಳಿ ದ್ವಿತೀಯ ದರ್ಜೆ ಸಹಾಯಕ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ. ಪಾಪ ಆತ ಸೈಟು ಕೊಡಬೇಕೆಂದು ಹೇಳಿ ತನ್ನ ಅರ್ಜಿಯನ್ನು ಗೃಹ ಮಂಡಲಿಯಲ್ಲಿ ಸಲ್ಲಿಸಿದ್ದರೆ, ಆತನಿಗೆ ಸೈಟ್ ಕೊಡದೇ ನಿಯಮಾವಳಿ ಪ್ರಕಾರ 24 ಸೈಟನ್ನು ಹರಾಜು ಮಾಡಬಾರದು ಎಂದು ಕಾನೂನು ಇದ್ದರೂ ಆತ ಹರಾಜು ಹಾಕುತ್ತಿದ್ದಂತಹ ಸಮಯದಲ್ಲಿ ಗೃಹ ಮಂಡಲಿಯವರು ಕೋರ್ಟ್‌ಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿ ಸ್ಟೇ ತಂದಿದ್ದಕ್ಕೆ ಆತನನ್ನು ಸಸ್ಪೆಂಡ್ ಮಾಡಿ ಆತನ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆ. ಈಗ ನಿಯಮಾವಳಿ ಪ್ರಕಾರ ಗೃಹ ಮಂಡಳಿಯಲ್ಲಿ ಎಲ್ಲಾ ಜನರಿಗೆ ಕೊಟ್ಟು ಆತನಿಗೆ ಕೊಟ್ಟಿಲ್ಲ. ತಕ್ಷಣದಲ್ಲಿ ಕಾನೂನಿನ ಪ್ರಕಾರ ಎಲ್ಲರಿಗೂ ಕೊಟ್ಟು ಆತನಿಗೆ, ಅಂದಾನಿ ಗೌಡನಿಗೆ ಕೊಡದೇ ಇರುವುದರಿಂದ ನ್ಯಾಯ ಬದ್ಧವಾಗಿ ಸೈಟ್ ಕೊಡಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಿರತಕ್ಕ ವ್ಯಕ್ತಿ ಮೇಲೆ ಅಧಿಕಾರಿಗಳು, ಅವನ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಕೈಬಿಟ್ಟು ನ್ಯಾಯವಾಗಿ ಅವನಿಗೆ ಸೈಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಕಾನೂನಿನ ಅಡಿಯಲ್ಲಿ ಅವನಿಗೆ ನಿವೇಶನ ಸಿಗಲಿಕ್ಕೆ ಇರತಕ್ಕ ಅರ್ಹತೆ ಇದ್ದರೆ, ನಿಯಮಗಳ ಅಡಿಯಲ್ಲಿ ಅದಕ್ಕೆ ಕ್ರಮವನ್ನು ಕೈಗೊಳ್ಳುತ್ತೇನೆ.

ಆ) ಆಟಾ, ಮೈದಾ ಸೋಜಿ ಮೇಲೆ ಮಾರಾಟ ತೆರಿಗೆ ವಿಧಿಸಿರುವುದು.

ಶ್ರೀ ವಸಂತ ಎ ಸಾಲಿಯಾನ (ಕಾ.ಪು) : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ 58 ರೋಲರ್ಸ್ ಫ್ಲೋರ್ ಮಿಲ್ ಇದೆ. ಅದರ ಮಂತ್ಲಿ ಪ್ರೊಡಕ್ಷನ್ ಕೆಪ್ಯಾಸಿಟಿ ಒಂದು ಲಕ್ಷ ಟನ್ ಇದೆ. ಇತ್ತೀಚಿನ ಬಜೆಟ್‌ನಲ್ಲಿ ಅದರಲ್ಲಿ ತಯಾರಾದಂತಹ ಆಟಾ, ಮೈದಾ, ಸೋಜಿ ಏನು ಇದೆ. ಇದು ಜನ ಸಾಮಾನ್ಯರು ಉಪಯೋಗ ಮಾಡುವಂತಹ ವಸ್ತು. ಇದರ ಮೇಲೂ ಸಹ ಸೇಲ್ ಟ್ಯಾಕ್ಸ್ 2 ಪರ್ಸೆಂಟ್ 19 ರೂಪಾಯಿಗಳು. ಟಿ ಒಟಿ ಟ್ಯಾಕ್ಸ್ 3 ಪರ್ಸೆಂಟ್ 27 ರೂಪಾಯಿ, ಅದೇ ರೀತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ಒಂದು ಕ್ವಿಂಟಲ್‌ಗೆ 56 ರೂಪಾಯಿಗಳಂತಹ ಟ್ಯಾಕ್ಸ್‌ನ್ನು ಹಾಕಿದ್ದಾರೆ. ಈ ವಸ್ತುಗಳು ಜನ ಸಾಮಾನ್ಯರು ಪ್ರತಿನಿತ್ಯ ಉಪಯೋಗಿಸುವಂತಹ ವಸ್ತುಗಳು.

ಅಧ್ಯಕ್ಷರು : ಈ ವಿಷಯವನ್ನು ಬಜೆಟ್ ಟೈಂನಲ್ಲಿ ತರಬೇಕು. ಆದರೆ ನೀವು ಶೂನ್ಯ ವೇಳೆಯಲ್ಲಿ ಮಾತನಾಡಿದರೆ ಹೇಗೆ? ಅದಕ್ಕೆ ಇನ್ನು ಫೈನಾನ್ಸ್ ಮಿನಿಸ್ಟರ್ ರಿಪ್ಲೈ ಕೊಡಬೇಕಾಗಿದೆ. ಬಜೆಟ್ ಮೇಲೆ ಡಿಸ್‌ಕಷನ್ ಆಗಬೇಕಾಗಿದೆ.

ಶ್ರೀ ವಸಂತ ವಿ. ಸಾಲಿಯಾನ : ನಾಳೆ ರಿಪ್ಲೈ ಕೊಡುವ ಮೊದಲು ದಯವಿಟ್ಟು ಮಾನ್ಯ ಉಪ ಮುಖ್ಯ ಮಂತ್ರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡು ಇಡೀ ಕರ್ನಾಟಕ ರಾಜ್ಯದಲ್ಲಿ ಜನ ಸಾಮಾನ್ಯರಿಗೆ ಏನು ತೊಂದರೆಯಾಗಿದೆ ಅದನ್ನು ಖಂಡಿತವಾಗಿ ಸರಳಗೊಳಿಸಬೇಕಾಗಿ ಕೋರುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ತಮ್ಮ ಅಭಿಪ್ರಾಯವನ್ನು ನಾನು ಗ್ರಹಿಸಿಕೊಂಡಿದ್ದೇನೆ. ಈಗ ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ, ಬಜೆಟ್ ಮೇಲೆ ಚರ್ಚೆ ಮಾಡುವಾಗ ಇದರ ಬಗ್ಗೆ ಮಾತನಾಡುತ್ತೇನೆ. ನಮ್ಮ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸರ್ಕಾರದಿಂದ ಈ ಭರವಸೆಯನ್ನು ಕೇಳಿಕೊಳ್ಳಿ.

ಅಧ್ಯಕ್ಷರು : ನಿಮ್ಮ ಭಾವನೆಗಳನ್ನು ಸರ್ಕಾರಕ್ಕೆ ತಿಳಿಸಲಾಯಿತು, ಉತ್ತರ ಕೊಡುವ ವೇಳೆಗೆ ಏನು ಹೇಳಬೇಕು ಎಂದು ಇದ್ದೀರಾ ಅದನ್ನು ಹೇಳಿ.

ಇ) ಮೈಸೂರಿನ ದೇವನೂರು ಕೆರೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸುವುದು.

ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ದೇವನೂರು ಎಂಬ ಕೆರೆ ಇದೆ; ಇದರ ಸುತ್ತಾ - ಮುತ್ತಾ ಬಡಾವಣೆಗಳು ಅಭಿವೃದ್ಧಿಯಾಗಿದೆ. ಆ ಕೆರೆ ಯಾವುದೇ ಒಂದು ಬೇಸಾಯಕ್ಕೆ ಅನುಕೂಲ ಇಲ್ಲದೆ, ಮತ್ತು ಆ ಕೆರೆಯಲ್ಲಿ ನೀರೂ ಸಹ ಇಲ್ಲದೆ ಅಲ್ಲಿ ಬರೀ ಗಲೀಜು ತುಂಬಿಕೊಂಡು ಆ ಬಡಾವಣೆಯ ಸುತ್ತಾ-ಮುತ್ತಾ ವಾಸ ಮಾಡುವಂತಹವರಿಗೆ ಸೊಳ್ಳೆ ಕಾಟ ವಿಪರೀತವಾಗಿದೆ. ಆದುದರಿಂದ ಅಲ್ಲಿ ವಾಸ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, ಆ ಕೆರೆಯನ್ನು ನಮ್ಮ ನಗರಾಭಿವೃದ್ಧಿ ಪ್ರಾಧಿಕಾರದವರು ನಮಗೆ ವಹಿಸಿಕೊಡಿ ನಾವು ಅದನ್ನು ಅಭಿವೃದ್ಧಿ ಮಾಡಿ, ಮತ್ತು ಅಲ್ಲಿ ಒಂದು ಈಜುಕೊಳ ಹಾಗೂ ಕ್ರೀಡಾ ಸಮುಚ್ಚಯ ಮಾಡುತ್ತೇವೆ ಎಂಬ ಮನವಿಯನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು ಇದಕ್ಕೆ ಪರಿಸರ ಮಾಲೀನ್ಯ ಇಲಾಖೆಯಿಂದ ಒಂದು ಸರ್ಟಿಫಿಕೇಟ್ ಬೇಕು ಎಂದರು. ನಂತರ ಸರ್ಟಿಫಿಕೇಟ್ ಕೊಟ್ಟ ನಂತರ ಈಗ ಅದನ್ನು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಮತ್ತು ಅದಕ್ಕೆ ಬೆಲೆ ನಿಗಧಿಯಾಗಬೇಕು ಎಂದು ಹೇಳಿದರು. ಆದರೆ ಸಬ್ ರಿಜಿಸ್ಟ್ರಾರ್ ಅವರಿಂದ ಬೆಲೆ ನಿಗಧಿಯಾಗಿದೆ. ಇದನ್ನು ಖಾಸಗಿ ಅವರಿಗೂ ಕೊಡುತ್ತಿಲ್ಲ. ಆದರಿಂದ ಅಲ್ಲಿರುವಂತಹ ಸುತ್ತಾ -ಮುತ್ತಾ ವಾಸ ಮಾಡುವಂತಹ ಜನರಿಗೆ ಬಹಳಷ್ಟು ಹಿಂಸೆಯಾಗಿದೆ, ಅಲ್ಲಿ ಸೊಳ್ಳೆ ಕಾಟ ಒಂದೇ ಅಲ್ಲ, ಕೆಟ್ಟ ವಾಸನೆಯೂ ಸಹ ಇದೆ. ಆದಕಾರಣ ದಯಮಾಡಿ ತಕ್ಷಣ ಆ ಕೆರೆಯನ್ನು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಿಕೊಟ್ಟು ನೈರ್ಮಲ್ಯವನ್ನು ಕಾಪಾಡುವ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಈಗ ಮೂಡಾದವರು ಕೇಳುತ್ತಾರೆ, ನಾವೇ ಅದನ್ನು ಈಜುಕೊಳ ಮಾಡುತ್ತೇವೆ. ಅದನ್ನು ನಡೆಸುತ್ತೇವೆ. ಎಂದು. ಬಹುಶ: ಈಗ ನಾವು ನಮ್ಮ ಯುವ ಜನ ಸೇವಾ ಇಲಾಖೆಗೆ ಹೇಳಿ ಈ ಕೆಲಸ ಮಾಡಬೇಕು. ಮಾನ್ಯ ಸಭಾಧ್ಯಕ್ಷರೆ, ಇದು ಬಹಳ

ಒಳ್ಳೆಯ ಸಲಹೆ, ನಾವು ಇದನ್ನು ಸರ್ಕಾರಕ್ಕೆ ತಿಳಿಸಿ, ಮೂಡಾಗೆ ಕೊಡುವುದಕ್ಕೆ, ಇಲಾಖೆಯ ನಿಯಮಾನುಸಾರ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಇ. ಮಾರುತಿರಾವ್ ಪವಾರ್ : ಸಭಾಧ್ಯಕ್ಷರೆ,.....

ಅಧ್ಯಕ್ಷರು : ಚರ್ಚೆಗೆ ಅವಕಾಶವಿಲ್ಲ.

ಈ) ಸಿಂಧನೂರು ತಾಲ್ಲೂಕಿನಲ್ಲಿ ಕೆರೆ ನಿರ್ಮಿಸಲು ಭೂಮಿ ಖರೀದಿ :

ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದಂತಹ ಸಿಂಧನೂರು ತಾಲ್ಲೂಕಿನಲ್ಲಿ ಸುಮಾರು 60 ರಿಂದ 70 ಪರ್ಸೆಂಟ್ ಹಳ್ಳಿಗಳಲ್ಲಿ ಅಂತರ್‌ಜಲದಲ್ಲಿ ಸಿಹಿ ನೀರು ಸಿಗುತ್ತಿಲ್ಲ. ಆದರೆ ಅನಿವಾರ್ಯವಾಗಿ ನಾವು ಕೆರೆ ಮಾಡಿ, ಕುಡಿಯುವ ನೀರನ್ನು ಪೂರೈಸಬೇಕು ಎಂದರೂ ಸಹ ತಾವು ಬೇರೆ ಬೇರೆ ಯೋಜನೆಗಳಲ್ಲಿ ಕೆರೆ ಮಾಡುವುದಕ್ಕೆ ಹಣ ಒದಗಿಸಿದರೂ ಸಹ ಆ ಕೆರೆ ಮಾಡಬೇಕಾದಂತಹ ಭೂಮಿ ಖರೀದಿ ಮಾಡುವುದಕ್ಕೆ ಯಾವುದೇ ಯೋಜನೆಯಲ್ಲಿ ಅವಕಾಶ ಇರುವುದಿಲ್ಲ. ಆ ಕಾರಣದಿಂದ ಇವತ್ತು ಕೆರೆ ಮಾಡುವುದಕ್ಕೆ ಬೇಕಾಗಿರುವಂತಹ ಭೂಮಿ ಖರೀದಿ ಮಾಡುವುದಕ್ಕೆ ಸರ್ಕಾರ ಹಣದ ಅವಶ್ಯಕತೆಯನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇದು ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂತಹ ಕೆಲಸ. ನೀರಾವರಿಯನ್ನು ಕೊಡಬೇಕಾಗಿರುವಂತಹುದು, ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸ ಬೇಕಾಗಿರುವಂತಹ ಜಿಲ್ಲಾಪಂಚಾಯತ್ ವತಿಯಿಂದ ಮಾಡಬೇಕಾಗಿರುವಂಥ ಕೆಲಸ. ಕೆರೆಯನ್ನು ನಿರ್ಮಾಣ ಮಾಡುವುದಕ್ಕೆ ಜಮೀನನ್ನು ಖರೀದಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಹಣವನ್ನು ಒದಗಿಸಬೇಕೆಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಸಭಾಧ್ಯಕ್ಷರೆ, ಈ ವಿಷಯವನ್ನು ಇಲಾಖೆಯ ಮುಖಾಂತರ ಜಿಲ್ಲಾ ಪಂಚಾಯತ್‌ಗೆ ತಿಳಿಸಿ ಈ ಕಾರ್ಯಕ್ರಮವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ ಎಂಬ ವಿಚಾರವನ್ನು ಹೇಳಬಯಸುತ್ತೇನೆ.

ಉಲ್ಲಾಳ ಕ್ಷೇತ್ರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ವಾಹನ ಚಾಲಕರ ಸದಸ್ಯರಿಗೆ ನಿವೇಶನ ನೀಡುವ ಬಗ್ಗೆ

ಶ್ರೀ ಕೆ. ಜಯರಾಂ ಶೆಟ್ಟಿ (ಉಲ್ಲಾಳ) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕ್ಷೇತ್ರದ ಸೋಮೇಶ್ವರ ಗ್ರಾಮದಲ್ಲಿ ಸರ್ವೆ ನಂ 221, ಮತ್ತು 222 ಎ, ಸುಮಾರು ಮೂರು ಎಕರೆ, 70 ಎಕರೆ ಸೆಂಟ್ಸ್‌ನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ವಾಹನ ಚಾಲಕರ ಸಂಘ, ದಕ್ಷಿಣ ಕನ್ನಡ ಜಿಲ್ಲೆ, ಇವರು ಮನೆ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಮತ್ತು ಮೈಸೂರು ವಿಭಾಗ ಅಧಿಕಾರಿಗಳು ಈ ಅರ್ಜಿಯನ್ನು ಪುರಸ್ಕರಿಸಿ, ರಾಜ್ಯ ಸರ್ಕಾರಕ್ಕೆ ನಿವೇಶನ ಕೊಡುವುದಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಈಗಾಗಲೇ ಈ ಅರ್ಜಿಯನ್ನು ಕಳುಹಿಸಿ ಸುಮಾರು 2-3 ವರ್ಷ ಕಳೆದಿದೆ. ಕಳೆದ ವರ್ಷ ಊರಿನ ಮತ್ತು ಆಸುಪಾಸಿನ ಜನ ಎಲ್ಲಾ ಬಂದು ಈ ಜಾಗವನ್ನು ಎನ್‌ಕ್ರೋಚ್ ಮಾಡಿದ್ದರು. ಆದರೆ ಜಿಲ್ಲಾಧಿಕಾರಿಗಳ ಪ್ರಯತ್ನದಿಂದ ಅದನ್ನು ತೆರವುಗೊಳಿಸಿ ಅಲ್ಲಿ ಫೆನ್ಸಿಂಗ್ ಮಾಡಲಾಗಿತ್ತು. ಆದರೆ ಇದುವರೆಗೆ ರಾಜ್ಯ ಸರ್ಕಾರದ ಈ ನೌಕರರಿಗೆ ಮನೆ ನಿವೇಶನ ಕೊಡುವ ಬಗ್ಗೆ ಯಾವುದೇ ರೀತಿಯಾದಂತಹ ವ್ಯವಸ್ಥೆ ಮಾಡಿಲ್ಲ. ರಾಜ್ಯ

ಸರ್ಕಾರದ ಇಲಾಖೆಯಲ್ಲಿ ಆರ್ ಡಿ ಐ 57, ಎಲ್ ಜಿ ಐ 97ರ ಪ್ರಕಾರ ಇಲ್ಲಿ ಕಡತ ಬಾಕಿ ಇದೆ. ಆದಕಾರಣ ದಯವಿಟ್ಟು ಈ ನೌಕರರಿಗೆ ತಕ್ಷಣ ನಿವೇಶನ ಕೊಡುವ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಇಲ್ಲಿರುವಂತಹ ವಿಚಾರ ಸರ್ಕಾರ ವಾಹನ ಚಾಲಕರ ಸಂಘದ ಸದಸ್ಯರಿಗೆ ನಿವೇಶನಗಳಿಗೆ ಸಂಬಂಧಪಟ್ಟಿರುವಂಥದ್ದು, ವಿಭಾಗಾಧಿಕಾರಿಗಳು ಸಹ ಇದನ್ನು ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಇದು ರೆವಿನ್ಯೂ ಇಲಾಖೆಯಲ್ಲಿ ಇದೆ, ಇದಕ್ಕೆ ಇನ್ನು ಮಂಜೂರಾತಿಯನ್ನು ಕೊಟ್ಟಿಲ್ಲ ಎನ್ನುವ ವಿಚಾರ ತಿಳಿದು ಬಂದಿದೆ, ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಊ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಸಭಾಧ್ಯಕ್ಷರೆ, ಹುಬ್ಬಳ್ಳಿ - ಧಾರವಾಡ ಮಹಾ ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ತಲೆದೋರಿದೆ. ನೀರಸಾಗರ ಮತ್ತು ಮಲಪ್ರಭಾ ಜಲಾಶಯದಿಂದ 7 ಎಂಜಿಡಿ ಮತ್ತು 11 ಎಂಜಿಡಿ ನೀರು ಪೂರೈಕೆಯಾಗುತ್ತಿದ್ದರೂ ಸಹ ಇವತ್ತಿನ ದಿವಸ ವಿತರಣಾ ವ್ಯವಸ್ಥೆಯಲ್ಲಿ ನೀರನ್ನು ಸರಿಯಾಗಿ ವಿತರಣೆ ಮಾಡದೇ ಇರುವುದರಿಂದ ಮತ್ತು ವಿದ್ಯುಚ್ಛಕ್ತಿಯ ಅಭಾವದಿಂದ , ಹಾಗೂ ಕಡಿತದಿಂದ ಅಲ್ಲಲ್ಲಿ ಕೊಳವೆಯಿಂದ ನೀರು ಸೋರಿ ಹೋಗುತ್ತಿರುವುದರಿಂದ ಇವತ್ತಿನ ದಿವಸ ಈ ನೀರಿನ ತೊಂದರೆ ಉಂಟಾಗಿದೆ. ಆದಕಾರಣ ತಾವು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕು. ಏಕೆಂದರೆ ಇವತ್ತಿನ ದಿವಸ ರಸ್ತಾರೋಕೋ ನಗರದಲ್ಲಿ ನಡೆಯುತ್ತಿದೆ. ಮತ್ತೊಂದು ವಿಷಯವೇನೆಂದರೆ, ಈಗಿನ ವ್ಯವಸ್ಥೆಗೆ ಒಂದನೇ ಯೋಜನೆ ಮತ್ತು ಎರಡನೆ ಯೋಜನೆ ಮುಗಿದಿದೆ, ಮೂರನೆ ಹಂತದ ಯೋಜನೆಯನ್ನು 120 ಕೋಟಿ ರೂ.ಗಳ ವೆಚ್ಚದಲ್ಲಿ ತೀವ್ರಗತಿಯಿಂದ ಸರ್ಕಾರ ತೆಗೆದುಕೊಂಡರೆ ಖಾಯಂ ಆಗಿ ನೀರಿನ ಆಹಾಕಾರವನ್ನು ಪರಿಹರಿಸಬಹುದು. ಆದಕಾರಣ ಸರ್ಕಾರ ಇದರ ಬಗ್ಗೆ ಗಮನ ಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಸರ್ಕಾರ ಈಗಾಗಲೇ ಇದರ ಬಗ್ಗೆ ಕ್ರಮ ಕೈಗೊಂಡಿರುವುದು. ತಮ್ಮ ಗಮನಕ್ಕೆ ಬಂದಿರಬಹುದು. ಮೂರನೆ ಯೋಜನೆಯನ್ನು ತಾವು ತೆಗೆದುಕೊಳ್ಳಬೇಕಾಗಿದೆ. ಇದಕ್ಕೆ ತಕ್ಕಂತಹ ಹಣವನ್ನು ತಾವು ಒದಗಿಸಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ತ್ವರಿತ ಗತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ ಮಾಡೋಣ. ಆದರೆ ನಾವು ಇಷ್ಟೇ ಅವಧಿಯಲ್ಲಿ ಮಾಡುತ್ತೇವೆ ಎಂದು ಹೇಳುವುದಿಲ್ಲ, ಏಕೆಂದರೆ, ಹಣದ ಸಂಪನ್ಮೂಲವನ್ನು ನೋಡಿಕೊಂಡು ಕೆಲಸ ಮಾಡಬೇಕು, ಆ ಹಿನ್ನೆಲೆಯನ್ನು ನೋಡಿಕೊಂಡು ಕ್ರಮ ಕೈಗೊಳ್ಳುತ್ತೇವೆ.

ಎ) ಮೈಸೂರಿನ ಮೆಟ್ರೋಪೋಲ್ ಹೋಟೆಲ್‌ನ್ನು ಖಾಸಗಿಯವರಿಗೆ ನೀಡದೇ ಇರಲು ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಮೈಸೂರಿನ ಮೆಟ್ರೋಪೋಲ್ ಹೋಟೆಲ್ ಇಂದು ವಿವಾದಾತ್ಮಕ ಸ್ಥಿತಿಯಲ್ಲಿ ಇದೆ. ಮೊದಲು ಸರ್ಕಾರ ಈ ಹೋಟೆಲನ್ನು ಖಾಸಗಿಯವರಿಗೆ ಕೊಟ್ಟು ಲಕ್ಷಾಂತರ ರೂಪಾಯಿ ಕೈಸುಟ್ಟುಕೊಂಡಿದೆ. ಇಂತಹ ಪರಿಸ್ಥಿತಿಯಲ್ಲಿ ಪುನ: ಖಾಸಗಿ ಅವರಿಗೆ ಕೊಡುವುದಕ್ಕೆ ಟೆಂಡರ್ ಮೂಲಕ ಆಹ್ವಾನಿಸಲಾಗಿದೆ ಎಂದು ಕನ್ನಡ ಪ್ರಭ

ದಿನಪತ್ರಿಕೆಯಲ್ಲಿ ಬಂದಿದೆ. ಅಲ್ಲದೆ ಸದನ ಸಮಿತಿಯು ಸಹ ಇದನ್ನು ಖಾಸಗಿ ಅವರಿಗೆ ಕೊಡಬಾರದು, ಅದನ್ನು ಮಾನ್ಯಮೆಂಟಾಗಿ ಇಟ್ಟುಕೊಳ್ಳಬೇಕು ಎಂಬ ಸಲಹೆಯನ್ನು ಕೊಟ್ಟಿದೆ. ಹಿಂದೆ ಈ ಸದನದಲ್ಲಿ ''ಮೆಟ್ರೋಪೋಲ್ ಹೋಟೆಲಿನ ಮೇಲೆ ರಣಹದ್ದುಗಳ ಹಾರಾಟ ಎಂಬ ಪದವನ್ನು ತಾವು ಸಹ ಉಚ್ಚರಿಸಿದ್ದೀರಿ. ಈಗ ಆ ರಣಹದ್ದುಗಳ ಹಾರಾಟ'' ಎಂಬ ಪದವನ್ನು ತಾವು ಸಹ ಉಚ್ಚರಿಸಿದ್ದೀರಿ. ಈಗ ಆ ರಣಹದ್ದುಗಳ ಕೈಗೆ ಸಿಗುತ್ತಿದೆ, ಆದಕಾರಣ ದಯಮಾಡಿ ಅದನ್ನು ಮೈಸೂರಿನಿಂದ ಮಹಾರಾಣಿ ಕಾಲೇಜಿಗೋ, ಅಥವಾ ನಮ್ಮ ಕೆ ಎಸ್ ಟಿಡಿಗೊ ಪ್ರವಾಸೋದ್ಯಮ ಇಲಾಖೆಯವರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ಅದು ಮಹಾರಾಜರಿಂದ ಬಳುವಳಿಯಾಗಿ ಬಂದಿರುವಂತಹ ಕಟ್ಟಡ, ಇದು ನಿಜವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಸಹ ಹೊಂದಿಕೊಂಡಿರುತ್ತದೆ ಎಂಬ ವಿಷಯವನ್ನು ತಿಳಿಯಬಯಸುತ್ತೇನೆ. ಆದಕಾರಣ ಈ ಹೋಟೆಲ್ ಅನ್ನು ಟೆಂಡರ್ ಮುಖಾಂತರ ಖಾಸಗಿಯವರಿಗೆ ಕೊಡಬಾರದು ಎಂದು ತಮ್ಮಲ್ಲಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು): ಹೋಟೆಲ್ ಮೆಟ್ರೋಪೋಲ್ ಮತ್ತು ಕೆ ಆರ್ ಎಸ್ ಹೋಟೆಲ್‌ಗಳನ್ನು ಹಿಂದೆ ಖಾಸಗಿ ಅವರಿಗೆ ಲೀಸ್ ಆಧಾರದ ಮೇಲೆ ನೀಡಲಾಗಿತ್ತು. ಅದನ್ನು ಪುನ: 1996ರಲ್ಲಿ ಸರ್ಕಾರ ವಾಪಸ್ಸು ಪಡೆಯಲಾಯಿತು. ನಂತರ ಇದನ್ನು ಪ್ರವಾಸೋದ್ಯಮ ಇಲಾಖೆಗೆ ಕೊಡಬೇಕೆಂದು ಪ್ರಸ್ತಾಪ ಮಾಡಲಾಗಿತ್ತು. ಇದರ ಬಗ್ಗೆ ತೀರ್ಮಾನ ಕೈಗೊಳ್ಳಲು 1997ರ ಮೇ ತಿಂಗಳಲ್ಲಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಿದ್ದ ಸಮಿತಿಯು, ಈ ಹೋಟೆಲ್‌ಗಳು ಸರ್ಕಾರದ ಮುಖ್ಯ ಸ್ವತ್ತುಗಳಾಗಿದ್ದು, ಹಾಗೂ ಇದು ಮೈಸೂರಿನಲ್ಲಿ ಒಳ್ಳೆಯ ಕೇಂದ್ರ ಸ್ಥಾನದಲ್ಲಿದ್ದು ಇವುಗಳಿಗೆ ಗುತ್ತಿಗೆ ಕರೆದು, ಖಾಸಗಿ ಉದ್ಯಮಿಗಳಿಗೆ ನೀಡಿದ್ದಲ್ಲಿ ಲಾಭದಾಯಕವಾಗುವುದು ಎಂಬ ಅಭಿಪ್ರಾಯ ಪಟ್ಟಿತ್ತು. ಮೇಲಿನ ಎಲ್ಲಾ ಸಾಧಕ-ಬಾಧಕಗಳನ್ನು ಕೂಲಂಕಷವಾಗಿ ಚರ್ಚಿಸಿ ಪರಿಶೀಲಿಸಿದ ನಂತರ ಸಚಿವ ಸಂಪುಟವು 1997ರ ಅಕ್ಟೋಬರ್‌ನಲ್ಲಿ ಖಾಸಗಿಯವರಿಗೆ ಗುತ್ತಿಗೆ ಕರೆದು ಹೋಟೆಲ್ ವಹಿಸಿಕೊಡಲು ತೀರ್ಮಾನಿಸಲಾಗಿತ್ತು. ಇದರಂತೆ ಗುತ್ತಿಗೆ ಕರೆದು ತೀರ್ಮಾನಿಸಬೇಕಾದ ಪೂರ್ವಭಾವಿ ಕ್ರಮವನ್ನು ನಿರ್ಧರಿಸಲು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜೊತೆಯಲ್ಲಿ ಒಂದು ಸಮಿತಿ ರಚಿಸಿದ್ದು, ಅದು ಗುತ್ತಿಗೆದಾರರಿಗೆ ನೀಡಬೇಕಾಗಿದ್ದ ವಿವರಗಳು, ಅವರ ಯೋಗ್ಯತೆಗಳು ಮತ್ತು ಇತ್ಯಾದಿಗಳನ್ನು ಪರಿಶೀಲಿಸಿ ಅನುಮೋದಿಸಿದ ನಂತರ ವೃತ್ತ ಪತ್ರಿಕೆಗಳಲ್ಲಿ ಸಾಕಷ್ಟು ಪ್ರಚಾರ ಹಾಗೂ ಕಾಲಾವಕಾಶ ಕೊಟ್ಟು ಈ ಪ್ರಕಟಣೆ ನೀಡಲಾಗಿತ್ತು. ಹಾಗೂ ಅದರಂತೆ 30.3.98 ರಂದು ಗುತ್ತಿಗೆ ಪಡೆದು ಕೊನೆಯ ದಿನವೆಂದು ಪರಿಗಣಿಸಲಾಗಿದೆ. ಈ ಪ್ರಕಟಣೆಯಂತೆ 22 ಜನ ಗುತ್ತಿಗೆ ವಿಧಿಗಳನ್ನು ಖರೀದಿಸಿದ್ದು, ಅದರಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯೂ ಸಹ ಸೇರಿರುತ್ತದೆ. ಈ ವಿಷಯದ ವಿಚಾರವಾಗಿ 12.3.98 ರಂದು ಪ್ರೀ ಬಿಡ್ಡ್ ಸಭೆ ಕರೆದು ಭಾಗವಹಿಸಿದ ಎಲ್ಲರಿಗೂ ವಿವರಗಳನ್ನು ನೀಡಲಾಗಿದೆ. ಈ ಪರಿಸ್ಥಿತಿಯಲ್ಲಿ ನೇರವಾಗಿ ಕೆ ಎಸ್ ಟಿಡಿಸಿಗೆ ಹೋಟೆಲ್ ನೀಡಲು ಬರುವುದಿಲ್ಲ. ಹೋಟೆಲ್ ಮೆಟ್ರೋಪೋಲ್ ಮತ್ತು ಅದರ ಸುತ್ತ ಮುತ್ತ ಮೈಸೂರಿನ ವಾಣಿಜ್ಯ ಕೇಂದ್ರವಿದ್ದು, ಇದು ಜನನಿಬಿಡ ಪ್ರದೇಶದಲ್ಲಿ ಇರುವುದರಿಂದ ಇದನ್ನು ಶಿಕ್ಷಣ ಇಲಾಖೆಗೆ ನೀಡಲು ಬರುವುದಿಲ್ಲ. ಗುತ್ತಿಗೆದಾರರನ್ನು ನೇಮಿಸುವಾಗ, ಆರ್ಥಿಕವಾಗಿ ಮತ್ತು ಹೋಟೆಲ್ ನಡೆಸಲು ಪರಿಣತಿ ಇರುವವರನ್ನು ಗುರುತಿಸಿ ನಂತರ ಇದರಲ್ಲಿ ಸರ್ಕಾರಕ್ಕೆ ಲಾಭದಾಯಕವಾಗುವಂತೆ ಗುತ್ತಿಗೆ ನೀಡಲು ಸರ್ಕಾರಕ್ಕೆ ಕಷ್ಟವಾಗುವುದಿಲ್ಲ.

ಅಧ್ಯಕ್ಷರು : ತಾವು ಸಹಕರಿಸಬೇಕು.

ಶ್ರೀ ಹೆಚ್. ಎಸ್. ಶಂಕರ್‌ಲಿಂಗೇಗೌಡ : ಸದನ ಸಮಿತಿ ಮಾಡಿದ ಶಿಫಾರಸ್ಸಿಗೆ ತಾವು ಕಿಂಚಿತ್ತು ಆದರೂ ಬೆಲೆ ಕೊಡುವುದಿಲ್ಲವೇ? ಪಕ್ಕದಲ್ಲೇ ಮಹಾರಾಣಿಸ್ ಕಾಲೇಜು ಇದೆ.

ಅಧ್ಯಕ್ಷರು : ತಾವು ದಯಮಾಡಿ ಆಮೇಲೆ ನನ್ನ ಆಫೀಸಿಗೆ ಬನ್ನಿ, ಅವರನ್ನು ಕರೆಯಿಸುತ್ತೇನೆ, ನೀವು ಏನು ಕೇಳಿರುವಿರಿ, ಅದಕ್ಕೆ ಅವರು ತದ್ ವಿರುದ್ಧವಾಗಿ ಉತ್ತರ ಕೊಟ್ಟಿದ್ದಾರೆ, ಬೇರೆ ಯಾವ ರೂಪದಲ್ಲಿ ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕು ಅದರಂತೆ ನಾನು ಅವಕಾಶ ಮಾಡಿಕೊಡುತ್ತೇನೆ.

ಎ) ಮಂಗಳೂರಿನಲ್ಲಿ ವಿದ್ಯುತ್ ಕಡಿತದ ಬಗ್ಗೆ

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಅಧ್ಯಕ್ಷರೆ, ಕೆ ಇ ಬಿ ಲೋಡ್ ಡಿಸ್‌ಪ್ಯಾಚ್ ಸೆಕ್ಷನ್‌ನ ಅಧಿಕಾರಿಗಳು ಒಂದು ತಾರತಮ್ಯ ನೀತಿಯನ್ನು ಅನುಸರಿಸುತ್ತಾ ಇದ್ದಾರೆ. ಬೆಂಗಳೂರಿನಲ್ಲಿ, ಮೈಸೂರಿನಲ್ಲಿ ಅಥವಾ ರಾಜ್ಯದ ಪ್ರಮುಖ ನಗರಗಳಲ್ಲಿ ಇಲ್ಲದಂತಹ ರಾತ್ರಿ ವೇಳೆಯ ವಿದ್ಯುತ್ ಕಡಿತ ಮಂಗಳೂರಿನಲ್ಲಿ ಮಾತ್ರ ಸತತವಾಗಿ ಮಾಡುತ್ತಿದ್ದಾರೆ. ಕಳೆದ ಕೆಲವು ದಿವಸಗಳಿಂದ ರಾತ್ರಿ ಹತ್ತು ಗಂಟೆಯಿಂದ ಬೆಳಿಗ್ಗೆ ಐದು ಗಂಟೆಯವರೆಗೆ ಸತತವಾಗಿ ವಿದ್ಯುತ್ ಕಡಿತವಾಗುತ್ತಿದೆ. 15ಮೆ.ವ್ಯಾ.ಗಿಂತ ಹೆಚ್ಚಿನ ವಿದ್ಯುತ್ ಕಡಿತ ಮಾಡಬೇಕೆಂಬ ಆದೇಶವನ್ನು ಸಹ ಹೊರಡಿಸಿದ್ದಾರೆ. ಆದ್ದರಿಂದ ಈ ರೀತಿಯಾದಂತಹ ತಾರತಮ್ಯವನ್ನು ಮಾಡುವುದು ಸರಿಯಲ್ಲವೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಖಾತೆ ರಾಜ್ಯ ಸಚಿವರು) :- ಅಧ್ಯಕ್ಷರೇ, ಲೋಕಲ್‌ನಲ್ಲಿ ಸ್ವಲ್ಪ ಪ್ರಾಬ್ಲಂ ಇರುವುದರಿಂದ ಹಾಗಾಗಿದೆ. ಇನ್ನು ಒಂದೆರಡು ದಿವಸದಲ್ಲಿ ಇಲಾಖೆಯಿಂದ ಅದನ್ನು ನಿವಾರಿಸಿಕೊಡುತ್ತೇವೆ.

ಐ) ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯತಿಯನ್ನು ರದ್ದುಗೊಳಿಸುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಟೌನ್ ಪಂಚಾಯಿತಿ ರದ್ದುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಶಿಫಾರಸ್ ಮಾಡಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರ ಯಾವುದೇ ತೀರ್ಮಾನ ತೆಗೆದುಕೊಳ್ಳದಿರುವ ಬಗ್ಗೆ ಸರ್ಕಾರದ ಗಮನಕ್ಕೆ ತರುವಂಥದೇನೆಂದರೆ ಬಹಿರಂಗವಾಗಿ ನಿವೇಶನಗಳನ್ನು ಹರಾಜು ಮಾಡಿರುವ ಸಂದರ್ಭದಲ್ಲಿ ಮುಖ್ಯ ಅಧಿಕಾರಿಗಳ ನಾದಿನಿಯ ಹೆಸರಿನಲ್ಲಿ ಅನಧಿಕೃತವಾಗಿ ತೆಗೆದುಕೊಂಡಿರುವ ನಿದರ್ಶನ ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ. ಬಹಿರಂಗ ಮಳಿಗೆ ಹರಾಜಿನ ವಿಚಾರದಲ್ಲಿ ಅವ್ಯವಹಾರ ನಡಿದಿದೆ ಎಂಬ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿರುತ್ತಾರೆ. ನಾಗರೀಕ ಸವಲತ್ತುಗಳನ್ನು ಒದಗಿಸಿಕೊಡುವುದರಲ್ಲಿ ಈ ಪಟ್ಟಣ ಪಂಚಾಯಿತಿ ವಿಫಲವಾಗಿದೆ ಎಂಬ ಬಗ್ಗೆ ಸಹ ಸರ್ಕಾರಕ್ಕೆ ವರದಿ ಸಲ್ಲಿಸಿಯಾಗಿದೆ. ಜಿಲ್ಲಾಧಿಕಾರಿಗಳು ನೇರವಾಗಿ ನಿಯಮ 316ರ ಪ್ರಕಾರ ಈ ಪಟ್ಟಣ ಪಂಚಾಯಿತಿಯನ್ನು ರದ್ದು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದಾರೆ. ಇದಾಗಿ 6 ತಿಂಗಳಾದರೂ ಇಲ್ಲಿಯವರೆಗೆ ಯಾವುದೇ ತರಹದ ಉತ್ತರ ಸಾರ್ವಜನಿಕರಿಗೆ ಸಿಕ್ಕದೇ ಇರುವ ಕಾರಣ ಸರ್ಕಾರ ನಿಯಮ 316ರ ಅಡಿ ಪಟ್ಟಣ ಪಂಚಾಯಿತಿಯನ್ನು ರದ್ದುಗೊಳಿಸುವಂತೆ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಂ.ಸಿ .ನಾಣಯ್ಯ : ಕಾನೂನಿನಡಿ ಒಂದು ಸಲ ರದ್ದುಮಾಡಬೇಕೆಂದು ನಾವು ತೀರ್ಮಾನ ತೆಗೆದುಕೊಳ್ಳಬೇಕಾದರೆ ಅದಕ್ಕೆ ಬೇಕಾಗುವಷ್ಟು ಕಾರ್ಯಕ್ರಮಗಳನ್ನು ಹಾಕಬೇಕು. ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಯನ್ನು ನಾವು ಪರಿಶೀಲಿಸಿ ಮುಂದಿನ ಕ್ರಮವನ್ನು ಕಾನೂನಿನಡಿಯಲ್ಲಿ ಕೈಗೊಳ್ಳುತ್ತೇವೆ.

ಒ) ಕಿತ್ತೂರು ಉತ್ಸವದ ಬಗ್ಗೆ

ಶ್ರೀ ಡಿ.ಬಿ. ಇನಾಂದಾರ್ (ಕಿತ್ತೂರು): ಅಧ್ಯಕ್ಷರೇ, ಕಿತ್ತೂರು ಉತ್ಸವವನ್ನು ಬೆಳಗಾಂನಲ್ಲಿ ಮಾಡುವುದಕ್ಕೆ ಹೊರಟಿದ್ದಾರೆ, ಯಾವ ರೀತಿ ಹಂಪಿ ಉತ್ಸವ ಹಂಪಿಯಲ್ಲಿ , ಕರಾವಳಿ ಉತ್ಸವ ಕಾರವಾರದಲ್ಲಿ ಮಾಡುತ್ತಾರೆ ಅದೇ ರೀತಿ ಕಿತ್ತೂರು ಉತ್ಸವ ಕಿತ್ತೂರಿನಲ್ಲಿ ಮಾಡಬೇಕು, ಬೆಳಗಾಂನಲ್ಲಿ ಮಾಡುವುದರಿಂದ ಅಲ್ಲಿ ಜನರ ಸೆಂಟಿಮೆಂಟ್‌ನ ಹರ್ಟ್ ಮಾಡುತ್ತಿದ್ದಾರೆ. ಜನರು ಸಂಪು ಹೂಡುವ ಸಾಧ್ಯತೆ ಇದೆ. ಆದ್ದರಿಂದ ಕಿತ್ತೂರು ಉತ್ಸವವನ್ನು ಕಿತ್ತೂರಿನಲ್ಲಿ ಮಾಡಿ ಮತ್ತೆಲ್ಲೂ ಮಾಡಬೇಡಿ ಎಂದು ಸಚಿವರನ್ನು ಕೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವರು):- ಬೆಳಗಾವಿಯಲ್ಲಿ ಕಿತ್ತೂರು ಉತ್ಸವ ಮಾಡಬೇಕೆಂದು ನಾನು ಇಲಾಖೆ ವಹಿಸಿಕೊಂಡ ಮೇಲೆ ಅಕ್ಟೋಬರ್ 23 ರಂದು ಕಿತ್ತೂರಿನಲ್ಲೇ ಕಿತ್ತೂರು ಉತ್ಸವ ಪ್ರತಿವರ್ಷ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಾದಮೇಲೆ ನಮ್ಮ ಇಲಾಖೆಯಿಂದ ಪ್ರತಿಜಿಲ್ಲೆಯಲ್ಲೂ ಜಿಲ್ಲಾ ಉತ್ಸವ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಬೆಳಗಾಂ ಜಿಲ್ಲಾ ಉತ್ಸವವನ್ನು ಮುಂದಿನ ತಿಂಗಳೂ 18, 19 ಕ್ಕೆ ಬೆಳಗಾಂನಲ್ಲಿ ಮಾಡುತ್ತೇವೆ. ಕಿತ್ತೂರು ಉತ್ಸವವೇ ಬೇರೆ ಜಿಲ್ಲಾ ಉತ್ಸವವೇ ಬೇರೆ.

ಶ್ರೀ ಡಿ.ಬಿ. ಇನಾಂದಾರ: ಬೆಳಗಾಂ ಉತ್ಸವವನ್ನು ಕಿತ್ತೂರು ಉತ್ಸವ ಎಂದು ಕರೆಯಬೇಡಿ ಎಂದು ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ಕೊಡಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಸಂದೇಶ ಕಳುಹಿಸಿದ್ದೇನೆ. ಅದರ ಬಗ್ಗೆ ಯಾವ ಸಂಶಯವೂ ಪಡಬೇಕಾಗಿಲ್ಲ.

ಓ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಬಗ್ಗೆ

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಅಧ್ಯಕ್ಷರೇ, ಪ್ರಕೃತ ಕೆ ಎಸ್ ಆರ್ ಟಿಸಿ ಯಲ್ಲಿ 95ನೇ ಇಸವಿಯಿಂದ ನೂರಾರು ಯುವಕರನ್ನು ಶಿಕ್ಷಕರನ್ನಾಗಿ ನೇಮಕ ಮಾಡಿದ್ದು ಅವರ ಅವಧಿ ಮಾರ್ಚ್ 31ಕ್ಕೆ ಅಂತ್ಯಗೊಳ್ಳುತ್ತದೆ. ಇವರು ನಿರುದ್ಯೋಗಿಗಳಾಗುವ ಸಂಭವ ಇದೆ. ಪ್ರಕೃತ ಕೆ ಎಸ್ ಆರ್ ಟಿಸಿ ಯಲ್ಲಿ ಹಲವಾರು ಹುದ್ದೆಗಳು ಖಾಲಿ ಇದ್ದು ಈಗಾಗಲೇ ನೇಮಕಾತಿ ಅವುಗಳಿಗೆ ನಡೆದಿದೆ. ಈ ಸಂದರ್ಭದಲ್ಲಿ ತರಬೇತಿ ಪಡೆದಂಥ ಇವರಿಗೆ ಮೊದಲ ಆದ್ಯತೆ ನೀಡಬೇಕೆಂತಲೂ ಮತ್ತೆ ತರಬೇತಿ ಆದವರಿಗೆ ಯಾವುದೇ ವಿದ್ಯಾರ್ಹತೆ ಗಣನೆಗೆ ತೆಗೆದುಕೊಳ್ಳದೆ ಅವರ ಸೇವೆಯನ್ನು ಗಣನೆಗೆ ತೆಗೆದುಕೊಂಡ ಅವರನ್ನು ಖಾಯಂಗೊಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):- ಅಧ್ಯಕ್ಷರೇ, ಸದಾನಂದಗೌಡರು ಹೇಳಿದ ವಿಚಾರ ಸಾರಿಗೆ ಸಂಸ್ಥೆ ಅಧಿಕಾರಿಗಳ ಜೊತೆ ನಾನು ಮಾತನಾಡಿದ್ದೇನೆ. ಈ ಶಿಕ್ಷಕರು ನನ್ನನ್ನು ಭೇಟಿ ಮಾಡಿದ್ದರು

ನಾನು ಅವರಿಗೆ ಹೇಳಿದ್ದೇನೆ. ಈಗಿನ ಕೆ ಎಸ್ ಆ ರ್ ಟಿ ಸಿ ಕಾನೂನು ವ್ಯಾಪ್ತಿಯಲ್ಲಿ ನೇಮಕಾತಿ ಮಾಡುವಾಗ ಇವರಿಗೆ ಆದ್ಯತೆ ಕೊಡಲು ಅವಕಾಶ ಇಲ್ಲ. ಅದಿರಬೇಕಾಗಿತ್ತು. ಮುಂದೆ ನೇಮಕಾತಿ ಮಾಡುವಾಗ ಕಾನೂನು ಬದಲಾವಣೆ ಮಾಡುವುದಕ್ಕೆ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಕಾನೂನು ಬದಲಾವಣೆ ತರುತ್ತೇವೆ. ಇವರಿಗೇ ಪ್ರಿಫರೆನ್ಸ್ ಕೊಡಬೇಕೆಂಬುದು ನಮ್ಮ ಅಭಿಪ್ರಾಯ. ಎರಡನೆಯದಾಗಿ ಈಗಿನವರನ್ನು ತೆಗೆದು ಹಾಕಬೇಕು ಅನ್ನುವ ಆಸೆ ನನಗಿಲ್ಲ. ಇವರದು ಕೇಂದ್ರ ಸರ್ಕಾರ ಕೊಡುವ ಸ್ಟೈಪೆಂಡರಿ ಸ್ಕೀಂ, ನಮ್ಮ ಸರ್ಕಾರದ ಎಂಪ್ಲಾಯ್ಮೆಂಟ್ ಅಂಡ್ ಟ್ರೈನಿಂಗ್ ಇಲಾಖೆ ಸ್ಟೈಪೆಂಡ್ ಕೊಡುವ ಮೂಲಕ ಇವರನ್ನು ನಡೆಸುತ್ತಿದ್ದೇವೆ ಈ ಮೂಲಕ ಕೆಲಸ ಕಲಿತುಕೊಳ್ಳುವುದಕ್ಕೆ ಒಂದು ಬಗೆಯ ತರಬೇತಿ ಕೊಟ್ಟಿದ್ದೇವೆಯೇ ಹೊರತು ಕೆಲಸ ಕೊಡುತ್ತೇವೆ ಎಂಬುದು ಎಲ್ಲೂ ಭರವಸೆ ಕೊಟ್ಟಿಲ್ಲ. ಆದರೂ ತಾವು ಇವತ್ತು ಹೇಳುವ ವಿಚಾರ ಸರಿಯಿದೆ. ಪ್ರಾಮಾಣಿಕವಾಗಿ ಇವರಿಗೆ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಡುಪಿಯ ಆರಾಧನಾ ಸಮಿತಿ ಬಗ್ಗೆ

ಶ್ರೀ ಯು. ಆರ್. ಸಭಾಪತಿ (ಉಡುಪಿ) :- ಅಧ್ಯಕ್ಷರೇ, ಎಲ್ಲೆಲ್ಲಿ ಕಾನೂನುಬಾಹಿರ ನೇಮಕಾತಿ ಮಾಡಬೇಕೋ ಅದನ್ನೆಲ್ಲಾ ನಮ್ಮ ಮುಜರಾಯಿ ಸಚಿವರು ಮಾಡುತ್ತಾರೆ. ಆದರೆ ಕಾನೂನಿನ ಪ್ರಕಾರ ನನ್ನ ಕ್ಷೇತ್ರದ ಆರಾಧನಾ ಸಮಿತಿಗೆ ಕಳೆದ ಮೂರು ವರ್ಷಗಳಿಂದ ಕೇಳುತ್ತಿದ್ದೇನೆ ಇವತ್ತಿನವರೆಗೂ ಆಗಲಿಲ್ಲ. ನಮ್ಮ ಕ್ಷೇತ್ರದ ದೇಗುಲಗಳು ಭಜನಾಮಂದಿರಗಳಿಗೆ ಸಮಾಜ ಮಂದಿರಗಳು ಸರ್ಕಾರದ ಅನುದಾನ ವಿತರಣೆ ಮಾಡುವಲ್ಲಿ ನಮ್ಮ ಜನ ಅವಕಾಶವಂಚಿತರಾಗಿದ್ದಾರೆ. ಜಿಲ್ಲಾ ಪ್ರಗತಿಪರಿಶೀಲನಾಸಭೆಯಲ್ಲಿ ಕೇಳಿಕೊಂಡೆ. ಆಮೇಲೆ ಮುಖ್ಯಮಂತ್ರಿಗಳು ಮಂಗಳೂರಿಗೆ 7 ತಿಂಗಳ ಹಿಂದೆ ಬಂದಿದ್ದಾಗ ಕೇಳಿಕೊಂಡೆ. ಮುಂದಿನ ವಾರ ಮಾಡುತ್ತೇವೆ ಎಂದು ಹೇಳುತ್ತಾ ಹೋದರೆ ವಿನಹ ಇವತ್ತಿನವರೆಗೂ ಆರಾಧನಾ ಸಮಿತಿ ಆಗಲಿಲ್ಲ ನಾನು ಶಾಸಕ ಅಧ್ಯಕ್ಷರು ಎಂದು ಪ್ರಚಾರ ಮಾಡಿದ್ದಾರೆ, ಅಲ್ಲಿ ಜನ ನನ್ನ ಹತ್ತಿರ ಕೇಳುತ್ತಿದ್ದಾರೆ ನಮಗೆ ಅನುದಾನ ಯಾವಾಗ ಕೊಡುತ್ತೀರಿ ಎಂದು ಸರ್ಕಾರ ಏನು ಉತ್ತರ ಕೊಡುತ್ತದೆಯೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :- ಆರಾಧನಾ ಸಮಿತಿಗೆ ಶಾಸಕರೇ ಅಧ್ಯಕ್ಷರು, ಸಮಿತಿ ಸದಸ್ಯರನ್ನು ನೇಮಕ ಮಾಡಿಲ್ಲ. ಆದ್ದರಿಂದ ಸಭೆ ಸೇರಿ ಹಣ ಕೊಡಲಿಕ್ಕಾಗಲಿಲ್ಲ ಅಂತ. ಇದು ಏತಕ್ಕೋಸ್ಕರ ವಿಳಂಬ ಆಯಿತೋ ನನಗೆ ಗೊತ್ತಿಲ್ಲ. 15 ದಿವಸದಲ್ಲಿ ಆರಾಧನಾ ಸಮಿತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಸಭಾಪತಿಗಳೇ, ನೀವೇ ಚೇರ್ಮನ್. ಸಮಿತಿ ಮಾಡಬೇಕಾಗುವುದು ಸರ್ಕಾರದ ಜವಾಬ್ದಾರಿ. ನೀವು ಕಮಿಟಿಯಿಂದ ಪಿಟಿಶನ್ಸ್ ತೆಗೆದುಕೊಳ್ಳಿ ಎಲ್ಲೆಲ್ಲಿ ಮಾಡಬೇಕೋ ಅಲ್ಲಿ ಮಾಡಿ ಕಳುಹಿಸಿ.

ಶ್ರೀ ಎಂ. ಸಿ. ನಾಣಯ್ಯ : ಇಲ್ಲ ಅಧ್ಯಕ್ಷರೇ, ಸಮಿತಿ ಸದಸ್ಯರಾಗಬೇಕು, ಚೇರ್ಮನ್ನೇ ಮಾಡುವುದಕ್ಕೆ ಆಗುವುದಿಲ್ಲ. ನಾಲ್ವರು ಸದಸ್ಯರಿರಬೇಕು. ಖಾಸಗಿ ಸದಸ್ಯರೂ ಇರುತ್ತಾರೆ 15 ದಿವಸದಲ್ಲಿ ಆ ಕೆಲಸ ಮಾಡುತ್ತೇವೆ.

ಮಾಗಡಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವ ಬಗ್ಗೆ

ಶ್ರೀ ಎಚ್.ಸಿ. ಬಾಲಕೃಷ್ಣ (ಮಾಗಡಿ) : ಅಧ್ಯಕ್ಷರೇ, ಕಳೆದ ಮೂರ್ನಾಲ್ಕು ದಿವಸಗಳಿಂದ ನನ್ನ ಕ್ಷೇತ್ರದಲ್ಲಿ ವಿದ್ಯುತ್ ಸಂಪೂರ್ಣ ನಿಂತುಹೋಗಿ ಕುಡಿಯುವ ನೀರಿಗೆ ಮತ್ತು ಮಕ್ಕಳಿಗೆ ಓದಲು ಬಹಳ ತೊಂದರೆ ಆಗಿದೆ. ಏಕೆ ಆಗಿದೆ ಮತ್ತು ಅದನ್ನು ಹೇಗೆ ಸರಿಪಡಿಸಲಾಗುವುದು ಎಂದು ಸದನದ ಮೂಲಕ ತಿಳಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಸಚಿವರು ಇಲ್ಲ, ಕೂತುಕೊಳ್ಳಿ ಸಚಿವರನ್ನು ಕರೆಸುತ್ತೇನೆ.

ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದು

ಡಾ। ಎ.ಬಿ. ಮಲಕರೆಡ್ಡಿ (ಯಾದಗಿರಿ) : ಜಿಲ್ಲಾ ಪುನರ್ ವಿಂಗಡಣಾ ಸಮಿತಿ ಶಿಫಾರಸಿನ ಮೇರೆಗೆ ಸರ್ಕಾರ ಒಂದು ವರ್ಷದ ಹಿಂದೆ ಏಳು ಜಿಲ್ಲೆಗಳನ್ನು ಘೋಷಣೆ ಮಾಡಿತು. ಆಗಸ್ಟ್ ತಿಂಗಳಿಂದ ಅವು ಅಸ್ತಿತ್ವಕ್ಕೆ ಬಂದುವು ಕೆಲವು ಹೊಸ ಜಿಲ್ಲೆಗಳು ಶಿಫಾರಸ್‌ನಲ್ಲಿಲ್ಲದಿದ್ದರೂ ಅಸ್ತಿತ್ವಕ್ಕೆ ಬಂದವು. ಗುಲ್ಬರ್ಗಾವನ್ನೂ ಯಾದಗೀರ್ ಕೇಂದ್ರ ಸ್ಥಳವನ್ನಾಗಿ ಮಾಡಿ ಜಿಲ್ಲೆ ಮಾಡಬೇಕೆಂದು ಶಿಫಾರಸ್‌ನಲ್ಲಿತ್ತು. ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ಪ್ರತಿಪಕ್ಷದ ಧುರೀಣ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೂ ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ನಾನೂ ಪ್ರಸ್ತಾಪ ಮಾಡಿದ್ದೇನೆ. ಈಗ ಒಂದು ವರ್ಷ ಮುಗಿದುಹೋಯಿತು. ಯಾದಗಿರಿ ಎಲ್ಲಾ ಅಂಶಗಳನ್ನೂ ಫುಲ್‌ಫಿಲ್ ಮಾಡುತ್ತದೆ. ಎಲ್ಲಾ ಇಲಾಖೆಗಳ ಸಬ್ ಡಿವಿಜನ್ ಕೇಂದ್ರಕಛೇರಿಗಳಿವೆ, ಕೆಲವಂತೂ ಡಿವಿಜನಲ್ ಪೆಡ್‌ಕ್ವಾರ್ಟರ್ಸ್ 20 ವರ್ಷದಿಂದ ಇದೆ ಪಿಡಬ್ಲ್ಯುಡಿ ಜೆಡ್‌ಪಿಕೆ ಇಬಿಗಳ ಡಿವಿಜನಲ್ ಹೆಡ್ ಕ್ವಾರ್ಟರ್ಸ್ ಇವೆ. ಮತ್ತು ಒಳ್ಳೆಯ ಹಿನ್ನೆಲೆ ಕೂಡ ಇದೆ. ನೀರಿನ ತೊಂದರೆ ಇಲ್ಲ. ಜನಸಂಖ್ಯೆ 2-3 ಲಕ್ಷವಾದರೂ ತೊಂದರೆ ಬರುವುದಿಲ್ಲ. ಏಕೆಂದರೆ ಯಾದಗಿರಿ ಭೀಮಾನದಿ ದಂಡೆ ಮೇಲೆ ಇದೆ. ಸರ್ಕಾರ 8-10 ಕೋಟಿ ಖರ್ಚುಮಾಡಿ ಜಲಪೂರೈಕೆ ಯೋಚನೆ ಪೂರೈಸಿದೆ. ರೈಲ್ವೆ ಲೈನ್ ಇದೆ, ರಾಜಧಾನಿ ಮತ್ತು ರಾಷ್ಟ್ರದ ರಾಜಧಾನಿಗೆ ಹೋಗಲು ರೈಲ್ವೆ ಲೈನ್ ಇದೆ. ಇಷ್ಟೆಲ್ಲಾ ಅನುಕೂಲಗಳಿದ್ದರೂ ಇದನ್ನು ಮಾಡಲು ಏಕೆ ವಿಳಂಬ ಮಾಡುತ್ತಿದ್ದೀರಿ; ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದರೆ ಇನ್ನೊಂದರೆರಡು ತಿಂಗಳಲ್ಲಿ ಮಾಡುವುದಾಗಿ ಹೇಳುತ್ತಾರೆ. ವಿಳಂಬವಾಗುತ್ತಿರುವುದಕ್ಕೆ ಕಾರಣವನ್ನು ಅರ್ಥವಾಗುತ್ತಿಲ್ಲ ಜನರಲ್ಲಿ ಕಳವಳ ಉಂಟಾಗಿದೆ. ಅವರು ಅಸಹಾಯಕರಾಗಿದ್ದಾರೆ. ಮತ್ತೆ ಗದ್ದಲವಾಗತಕ್ಕ ಪ್ರಸಂಗವಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಸಿ ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 7 ಹೊಸ ಜಿಲ್ಲೆಗಳನ್ನು ಮಾಡಿರತಕ್ಕದನ್ನು ನೀವೆಲ್ಲಾ ಸ್ವಾಗತ ಮಾಡಿದಿರಿ. ಗುಲ್ಬರ್ಗಾ ಮತ್ತು ಬೆಳಗಾಂಗೆ ಸಂಬಂಧಪಟ್ಟಂತೆ ಮಾಡಲು ಆಗಲಿಲ್ಲ. Government is seized of the matter. The Government is aware of this and ultimately let there be a unanimous decision about Gulbarga also. I think Government is seized of the matter.... ಭಾವನಾತ್ಮಕವಾದ ವಿಚಾರವನ್ನು ಎತ್ತಿ ಅಲ್ಲಿ ಇಲ್ಲಿ ಗದ್ದಲದ ಪರಿಸ್ಥಿತಿ ನಿರ್ಮಾಣ ಮಾಡಬಾರದು ಎನ್ನತಕ್ಕ ಉದ್ದೇಶದಿಂದ, ಇದರ ಬಗ್ಗೆ ಸ್ವಲ್ಪಮಟ್ಟಿಗೆ ಯೋಚನೆ ಮಾಡಿ ತಿರ್ಮಾನ ತೆಗೆದು ಕೊಳ್ಳುತ್ತೇವೆ.

ಗ) ಮಾಗಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವುದು

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಅಧ್ಯಕ್ಷರೆ, ನಮ್ಮ ಭಾಗದಲ್ಲಿ ಮೂರು ದಿವಸಗಳಿಂದ ವಿದ್ಯುತ್ ಸರಬರಾಜು ಸ್ಥಗಿತಗೊಂಡಿದೆ. ಕುಡಿಯುವ ನೀರಿಗೆ ಮತ್ತು ಓದತಕ್ಕ ಮಕ್ಕಳಿಗೆ ಅನಾನುಕೂಲವಾಗಿದೆ. ದಯಮಾಡಿ ವಿದ್ಯುತ್ ಏಕೆ ಸ್ಥಗಿತಗೊಂಡಿದೆ, ಅದನ್ನು ಯಾವಾಗ ಸರಿಮಾಡುತ್ತೀರಿ ಎಂಬ ಬಗ್ಗೆ ಸರ್ಕಾರದಲ್ಲಿ ಕೇಳಬಯಸುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ವಿದ್ಯುತ್ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾಗಡಿಗೆ ವಿದ್ಯುತ್ ಸರಬರಾಜಾಗದಿರುವ ಬಗ್ಗೆ ತಿಳಿಸಿದ್ದಾರೆ. ಅಲ್ಲಿರುವ ಎ.ಡಬ್ಲ್ಯೂ.ಎ, ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಮುಖ್ಯ ಅಭಿಯಂತರನ್ನು ಈಗಾಗಲೇ ಬರಲು ಹೇಳಿದ್ದೇನೆ. ಒಂದೂವರೆ ಗಂಟೆಗೆ ಮಾನ್ಯ ಸದಸ್ಯರೊಂದಿಗೆ ಅಧಿಕಾರಿಗಳೂ ಸೇರಿದಂತೆ ಚರ್ಚೆ ಮಾಡಿ ಅಲ್ಲಿ ಏನು ತೊಂದರೆಯಾಗಿದೆ ಅದನ್ನು ಸರಿಪಡಿಸಲು ವ್ಯವಸ್ಥೆ ಮಾಡುತ್ತೇನೆ.

ಘ) ಹುಬ್ಬಳ್ಳಿಯಲ್ಲಿ ನೀರಿನ ಸಮಸ್ಯೆ

ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿ ಕೆಲವೊಂದು ವಾರಗಳಿಂದ ನೀರಿನ ಹಾಹಾಕಾರ ಆಗಿದೆ. ಹೋದ ತಿಂಗಳು ಮಂತ್ರಿಗಳಾದ ಮಾನ್ಯ ಬಚ್ಚೇಗೌಡರು ಬಂದಿದ್ದರು. ಆಗ ನಾನು ಮೂರನೇ ಹಂತದ ಯೋಜನೆಯ ಬಗ್ಗೆ ಕೇಳಿದಾಗ ತಕ್ಷಣ ಮಂತ್ರಿಗಳು ಪರಿಶೀಲನೆಯಲ್ಲಿದೆ ಎಂದು ಹೇಳಿದರು. ಆದರೆ ಅದರ ಬಗ್ಗೆ ನಾನು ಪ್ರಶ್ನೆ ಕೇಳಿದಾಗ, ಅದು ಉದ್ಭವಿಸುವುದಿಲ್ಲ, ಯಾವುದೇ ರೀತಿಯ ಯೋಜನೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ನನಗೂ ಕೂಡ 120 ಕೋಟಿ ರೂಪಾಯಿಯ ಅಷ್ಟೋಂದು ದೊಡ್ಡ ಮೊತ್ತವನ್ನು ಯೋಜನೆಗೆ ಖರ್ಚು ಮಾಡುವುದು ಸಮಂಜಸವಲ್ಲವೆಂದು ನನಗನ್ನಿಸುತ್ತದೆ. ಅದೇ ರೀತಿ ಮಾನ್ಯ ಬಚ್ಚೇಗೌಡರು ಹೋದಸಲ ಹುಬ್ಬಳ್ಳಿಗೆ ಬಂದಾಗ ತಾತ್ಕಾಲಿಕವಾಗಿ ಜೋಗದಿಂದ ಒಂದು ಡೈರೆಕ್ಟ್ ಲೈನ್ ಮಲಪ್ರಭಾಕ್ಕೆ ತಂದುಕೊಂಡರೆ ಯಾವುದೇ ರೀತಿಯ ಅಡೆತಡೆ ಇಲ್ಲದೆ ವಿದ್ಯುಚ್ಛಕ್ತಿ ಸರಬರಾಜು ಆದರೆ ಹುಬ್ಬಳ್ಳಿ ನಗರಕ್ಕೆ ನೀರಿನ ಅಭಾವ ಆಗುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ವಿದ್ಯುಚ್ಛಕ್ತಿ ಅಭಾವವನ್ನು, ಅಡೆತಡೆಯನ್ನು ನಿಲ್ಲಿಸಲಿಕ್ಕೆ ಯಾವುದಾದರೊಂದು ಸಣ್ಣ ಯೋಜನೆಯನ್ನು ಮಾಡಿ ಆ ಡೈರೆಕ್ಟ್ ಲೈನನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡರು (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಲಪ್ರಭಾ ಮತ್ತು ನೀಲಸಾಗರದಿಂದ ಧಾರವಾಡ, ಹುಬ್ಬಳ್ಳಿ ಈ ಎರಡೂ ಪಟ್ಟಣಗಳಿಗೆ ನೀರನ್ನು ಕೊಡುತ್ತಿದ್ದೇವೆ. ಸುಮಾರು ಹದಿನಾರರಿಂದ ಹದಿನೆಂಟು ಲಕ್ಷ ಮಿಲಿಯನ್ ಗ್ಯಾಲನ್ಸ್ ಪರ್ ಡೇ ನೀರನ್ನು ನಾವು ಕೊಡುತ್ತಿದ್ದೇವೆ. ಆದರೆ ಅಲ್ಲಿ ಬಲ್ಕ್ ಸಪ್ಲೈಯರ್ಸ್, ನಾವು ಹಾಗೂ ಅಲ್ಲಿನ ವಿತರಣಾ ವ್ಯವಸ್ಥೆಯನ್ನು ಅಲ್ಲಿನ ಕಾರ್ಪೊರೇಷನ್ ಮಾಡುವಂಥ ವ್ಯವಸ್ಥೆ ಇದೆ. ಆದರೆ ವಿತರಣಾ ವ್ಯವಸ್ಥೆಯಲ್ಲಿ ಸ್ವಲ್ಪ ಅವ್ಯವಸ್ಥೆಗಳು ಆಗಿವೆ, ಅವರು ಕೆಲವು ಭಾಗಗಳಲ್ಲಿ ನೀರನ್ನು ಸಪ್ಲೈ ಮಾಡುತ್ತಾರೆ, ಕೆಲವು ಭಾಗಗಳಿಗೆ ನೀರನ್ನು ಸಪ್ಲೈ ಮಾಡುವುದಿಲ್ಲ ಎಂಬ ದೂರು ಕೇಳಿಬರುತ್ತಿದೆ. ಅದು ನನಗೆ ಗೊತ್ತಿದೆ. ಆದರೆ ಈಗ ಪವರ್ ಸಪ್ಲೈನಲ್ಲಿ ಏರು ಪೇರು ಆಗಿರುವುದರಿಂದ ಎರಡು ದಿವಸಕ್ಕೊಮ್ಮೆ ನೀರನ್ನು ಕೊಡುತ್ತಿದ್ದಾರೆ ಅದನ್ನು ಸರಿ ಮಾಡಿ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಮಾನ್ಯ ಎಸ್. ಎಸ್. ಪಾಟೀಲರು ಕೂತು ಅಲ್ಲಿನ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ

ಚೀಫ್ ಇಂಜಿನಿಯರ್‌ರವರನ್ನು ಕರೆಯಿಸಿ ಮಾತನಾಡಿದ್ದೇವೆ. 35 ಲಕ್ಷ ರೂಪಾಯಿ ಹಣ ಕಾರ್ಪೊರೇಷನ್‌ನವರು ತುಂಬುವಂಥದ್ದು ಏನು ಇದೆ ಅದನ್ನು ವರ್ಕ್ಸ್ ಎಕ್ಸಿಕ್ಯೂಟ್ ಮಾಡಿ ಒಂದು ಎಕ್ಸ್‌ಪ್ರೆಸ್ ಫೀಡರ್ ಹಾಕಿ ಕೊಡಬೇಕು ಎಂದು ಹೇಳಿದ್ದೇವೆ. ನಾನು ಅಧಿಕಾರಿಗಳ ಜೊತೆಗೆ ಚರ್ಚೆ ಮಾಡಿ ಆ ಎಕ್ಸ್‌ಪ್ರೆಸ್ ಫೀಡರ್ ವ್ಯವಸ್ಥೆ ಏನಾಗಿದೆ ಎಂದು ತಿಳಿದುಕೊಂಡು ನೀರಿನ ವ್ಯವಸ್ಥೆಯನ್ನು ಸಮರ್ಪಕವಾಗಿ ವಿತರಣೆ ಮಾಡುವಂತೆ ಕಾರ್ಪೊರೇಷನ್‌ಗೆ ತಿಳಿಸಿ ಆ ವ್ಯವಸ್ಥೆಯನ್ನು ಸರಿ ಮಾಡಿಸಿಕೊಡುತ್ತೇನೆ.

ಚ) ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಸ್ವಾತಂತ್ರ್ಯ ಯೋಧರಿಗೆ ಸೌಲಭ್ಯ

ಶ್ರೀ ಡಿ. ಆರ್. ಪಾಟೀಲ್ (ಗದಗ) : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಕೆ. ಎಸ್. ಆರ್.ಟಿ.ಸಿ. ಬಸ್ಸಿನಲ್ಲಿ ಸ್ವಾತಂತ್ರ್ಯ ಯೋಧರಿಗೆ ಪ್ರಯಾಣ ಮಾಡಲಿಕ್ಕೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ನಮ್ಮ ಕಡೆಯವರು ತಿರುಪತಿ, ಶ್ರೀಶೈಲಂ ಹಾಗೂ ಮಂತ್ರಾಲಯಕ್ಕೆ ಹೋಗುತ್ತಿದ್ದಾರೆ. ಆದರೆ ಅವರು ಕರ್ನಾಟಕ ಬಸ್ಸಿನಲ್ಲಿ ಹೋದರೆ ಕರ್ನಾಟಕ ಬಾರ್ಡರ್ ಬಂದ ಕೂಡಲೇ ಅವರನ್ನು ಇಳಿಸುತ್ತಾರೆ. ಅವರು ಕರ್ನಾಟಕದಲ್ಲಿ ಮಾತ್ರ ಪ್ರವಾಸ ಮಾಡಬೇಕು ಎಂದು ಆದೇಶ ಇದೆ. ಆದರೆ ಕರ್ನಾಟಕದವರ ಬಸ್ಸು ತಿರುಪತಿಗೂ, ಮಂತ್ರಾಲಯಕ್ಕೂ ಶ್ರೀಶೈಲಕ್ಕೂ ಹೋಗುತ್ತವೆ. ಅದಕಾರಣ ನಮ್ಮ ಕರ್ನಾಟಕದ ಬಸ್ಸು ಎಲ್ಲಿಯವರೆಗೆ ಹೋಗುತ್ತವೆ, ಅಲ್ಲಿಯವರೆಗೆ ಅವರಿಗೆ ಪ್ರಯಾಣ ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಅದರ ಜೊತೆಗೆ ಮಾನ್ಯ ಸಾರಿಗೆ ಸಚಿವರು ನನಗೆ ಒಂದು ಭರವಸೆಯನ್ನು ಕೊಟ್ಟಿದ್ದರು. ಅದು ಏನೆಂದರೆ ಸ್ವಾತಂತ್ರ್ಯ ಯೋಧರಿಗೆ ಈಗಾಗಲೇ ವಯಸ್ಸಾಗಿದೆ ಆದಕಾರಣ ಅವರಿಗೆ ಒಂದು ಕಂಪ್ಯಾನಿಯನ್‌ನ್ನು ತೆಗೆದುಕೊಂಡು ಹೋಗಲು ಅವಕಾಶ ಮಾಡಿ ಕೊಡುತ್ತೇನೆ ಎಂದು. ಆದರೆ ಅದು ಇದುವರೆಗೆ ಇಂಪ್ಲಿಮೆಂಟ್ ಆಗಿಲ್ಲ. ಆದಕಾರಣ ಇವೆರಡನ್ನು ಮುಂದಿನ ಆಗಸ್ಟ್ ಹದಿನೈದರ ಒಳಗಾಗಿ ಇಂಪ್ಲಿಮೆಂಟ್ ಆದರೆ ಬಹಳ ಸಂತೋಷವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಸ್ವಾತಂತ್ರ್ಯ ಯೋದರಿಗೆ ಕರ್ನಾಟಕದ ಬಸ್ಸಿನಲ್ಲಿ ಪ್ರಯಾಣ ಮಾಡಲಿಕ್ಕೆ ಅವಕಾಶ ಇದೆ, ಆದರೆ ಅವರನ್ನು ಬಾರ್ಡರ್ ಬಂದ ತಕ್ಷಣ ಇಳಿಸುತ್ತಾರೆ, ಅಲ್ಲಿಂದ ಮುಂದಕ್ಕೆ ಅವರನ್ನು ಪ್ರಯಾಣ ಮಾಡುವ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಮುಂಚೆ ನಮ್ಮ ಶಾಸಕರಿಗೂ ಕೂಡ ಇದೇ ರೀತಿ ಇತ್ತು. ಅದನ್ನು ಸ್ವಲ್ಪಮಟ್ಟಿಗೆ ತಿದ್ದುಪಡಿ ಮಾಡಿದ್ದೇವೆ. ಅದರ ಬಗ್ಗೆ ನಾವು ವಿಚಾರ ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್ : ಅದರಲ್ಲಿ ವಿಚಾರ ಮಾಡುವುದು ಏನು ಇದೆ? ಮಾಡುತ್ತೇವೆ ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಅದರ ಬಗ್ಗೆ ಕೆ. ಎಸ್. ಆರ್. ಟಿ.ಸಿ. ಯವರ ಜೊತೆ ಹಾಗೂ ಮಂತ್ರಿಗಳ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಮತ್ತು ಅದರಿಂದ ಹಣಕಾಸಿನ ತೊಂದರೆ ಎಷ್ಟಾಗುತ್ತದೆ ಎಂದೂ ಕೂಡ ನೋಡಬೇಕಾಗುತ್ತದೆ. ಅದರ ಬಗ್ಗೆ ವಿಚಾರ ಮಾಡುತ್ತೇವೆ.

ಶ್ರೀ ಡಿ. ಆರ್. ಪಾಟೀಲ್ : ನಾಳೆ ಸದನಕ್ಕೆ ತಿಳಿಸುತ್ತೇನೆ ಎಂದು ಹೇಳಿ.

ಶ್ರೀ ಎಂ.ಸಿ. ನಾಣಯ್ಯ : ಸ್ವಾತಂತ್ರ್ಯ ಯೋಧರು ಬಹಳ ಕಡಿಮೆ ಇರತಕ್ಕಂಥ ಜನರು ಅವರ ಬಗ್ಗೆ ವಿಚಾರ ಮಾಡೋಣ. ನಾವು ನೀವು ಜೊತೆಯಲ್ಲಿಯೇ ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಡಿ. ಆರ್. ಪಾಟೀಲ್ : ನಾಳೆ ಅಥವಾ ನಾಡಿದ್ದು ಸದನಕ್ಕೆ ತಿಳಿಸುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ : ನಾಳೆ ನಾಡಿದ್ದು ಎಂದು ಹೇಳಬೇಡಿ. ಅದಕ್ಕೆ ಸ್ವಲ್ಪ ಸಮಯ ಇದೆ.

ಜ) ಶಿವಮೊಗ್ಗ ಆರೋಗ್ಯ ಅಧಿಕಾರಿಗಳ ಕಛೇರಿಯ ಗೋಡಾನ್‌ಗೆ ಬೆಂಕಿ

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ನೆನ್ನೆ ಬೆಳಗಿನ ಜಾವ ಶಿವಮೊಗ್ಗ ಜಿಲ್ಲೆಯ ಆರೋಗ್ಯ ಅಧಿಕಾರಿಗಳ ಕಚೇರಿಯ ಔಷಧದ ಗೋಡಾನ್‌ಗೆ ಬೆಂಕಿ ಬಿದ್ದಿದೆ. ಸುಮಾರು 20ಲಕ್ಷ ರೂಪಾಯಿಗಳ ಔಷಧಿ ಮತ್ತು ಸಂಬಂಧಪಟ್ಟ ದಾಖಲಾತಿಗಳು ನಾಶವಾಗಿದೆ. ಎರಡು ದಿವಸ ಮೊದಲಷ್ಟೇ ಶನಿವಾರದ ದಿವಸ ಜಿಲ್ಲಾಪರಿಷತ್ತಿನಲ್ಲಿ ಗೋಡಾನ್‌ನಲ್ಲಿ ಇದ್ದಂಥ ಸಿಬ್ಬಂದಿಯವರ ಮೇಲೆ ಅನುಮಾನ ಇದೆ, ಅಲ್ಲಿರತಕ್ಕಂಥ ಔಷಧಿಗಳನ್ನು ಓಪನ್ ಮಾರ್ಕೆಟ್‌ನಲ್ಲಿ ಅವರು ಮಾರಾಟ ಮಾಡುತ್ತಿದ್ದಾರೆ, ಬೇರೆ ಬೇರೆ ಆಸ್ಪತ್ರೆಗಳಿಗೆ ಹೋಗತಕ್ಕಂಥ ಔಷಧಿಯನ್ನು ಅಲ್ಲೇ ಇಟ್ಟು, ಅಲ್ಲಿರತಕ್ಕಂಥ ಬೇರೆ ಬೇರೆ ಔಷಧಿಗಳನ್ನು ತೆಗೆದುಕೊಂಡು ಹೋಗಲಿಕ್ಕೆ ಬರತಕ್ಕಂಥ ಸಿಬ್ಬಂದಿಯವರಿಗೆ ಹಣ ಕೊಟ್ಟು ಆ ಔಷಧಿಗಳನ್ನು ಬೇರೆ ಪ್ರೈವೇಟ್ ಪ್ರಾಕ್ಟೀಸ್ ಮಾಡುವವರಿಗೆ ಮಾರುತ್ತಿದ್ದಾರೆಂದು ಪೂರ್ಣವಾಗಿ ಚರ್ಚೆ ನಡೆಯಿತು. ಆ ಚರ್ಚೆಯಲ್ಲಿ ಆ ಗೋಡಾನ್‌ನ್ನು ಚೆಕ್ ಮಾಡಬೇಕೆಂದು ಒಂದು ಸಮಿತಿಯನ್ನು ಮಾಡಿದರು. ಆದರೆ ಸಮಿತಿ ನೇಮಕವಾದ ಮೂರನೇ ದಿವಸ ಗೋಡಾನ್‌ಗೆ ಬೆಂಕಿ ಬಿದ್ದಿದೆ. ಇವೊತ್ತು ಶಾರ್ಟ್ ಸರ್ಕ್ಯೂಟ್ ಆಗಿ ಬೆಂಕಿ ಬಿದ್ದಿದೆ ಎಂದು ರೆಕಾರ್ಡ್ ಮಾಡುವ ಎಲ್ಲಾ ಪ್ರಯತ್ನಗಳು ನಡೆದಿವೆ. ಅಲ್ಲಿರತಕ್ಕಂಥ ಸಿಬ್ಬಂದಿ ಅಲ್ಲೇ ಸುಮಾರು ಎಂಟು ಹತ್ತು ವರ್ಷದಿಂದ ಇದ್ದಾರೆ. ಅಲ್ಲಿ ನಡೆಯತಕ್ಕಂಥ ಅವ್ಯವಹಾರದಲ್ಲಿ ಅವರು ಶಾಮೀಲಾಗಿದ್ದಾರೆ ಎಂದು ಇಡೀ ಶಿವಮೊಗ್ಗ ಜಿಲ್ಲೆಯ ಜನತೆಗೆ ಗೊತ್ತಿದೆ. ದಯಮಾಡಿ ಇದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು. ಇಪ್ಪತ್ತು ಲಕ್ಷ....

ಅಧ್ಯಕ್ಷರು : ಸಮಿತಿ ನೇಮಕ ಮಾಡಿದ ಮೇಲೆ ಬೆಂಕಿ ಬೀಳುವುದಕ್ಕಿಂತ ಶಾರ್ಟ್‌ಸ್ಪ್ ಸರ್ಕ್ಯೂಟ್ ಇನ್ನು ಯಾವುದು ಇದೆ ಹೇಳಿ?

ಶ್ರೀ ಅರಗ ಜ್ಞಾನೇಂದ್ರ : ಇದು ಮೇಲ್ನೋಟಕ್ಕೆ ನೇರವಾಗಿ ಬೇಕೆಂತಲೇ ಮಾಡಿದ್ದಾರೆ ಎಂದು ಸಾಬೀತಾಗುತ್ತದೆ. ವಿವಿಧ ಜಿಲ್ಲೆಯ ವಿವಿಧ ಆಸ್ಪತ್ರೆಗಳಿಗೆ ಹೋಗಬೇಕಾದ ಔಷಧಿಗೆ ಇವೊತ್ತು ಬೆಂಕಿ ಬಿದ್ದಿದೆ.....

ಅಧ್ಯಕ್ಷರು : ಈಗಾಗಲೇ ಅದರ ಬಗ್ಗೆ ಹೇಳಿದ್ದೀರಿ. ಅದರ ಬಗ್ಗೆ ಸರ್ಕಾರದಿಂದ ಉತ್ತರ ಕೇಳೋಣ. ನಿಮ್ಮ ವಿಷಯ ಏನು ಎಂದರೆ, ಇನ್‌ವೆಸ್ಟಿಗೇಷನ್ ಕಮಿಟಿ ಮಾಡಿದ ತಕ್ಷಣ ಬೆಂಕಿ ಬಿದ್ದಿದೆ ಎಂದು.

ಶ್ರೀ ಅರಗ ಜ್ಞಾನೇಂದ್ರ : ಅಷ್ಟೇ ಅಲ್ಲ ಮಾನ್ಯ ಅಧ್ಯಕ್ಷರೆ, ಅಲ್ಲಿ ಡಿ. ಹೆಚ್. ಓ. ಇಲ್ಲದೆ ಒಂದು ವರ್ಷ ಆಗಿದೆ. ಅದರ ಬಗ್ಗೆ ಜಿಲ್ಲಾ ಪರಿಷತ್ತಿನಲ್ಲಿ ಚರ್ಚೆಯಾಗಿದೆ. ರೆಸಲ್ಯೂಷನ್ ಆಗಿದೆ. ಈಗಾಗಲೇ....

ಅಧ್ಯಕ್ಷರು : ಮೊದಲು ಫೈಯರ್ ಎಕ್ಸ್‌ಟಿಂಗ್ವಿಷರ್ ಕಳುಹಿಸೋಣ, ಬೆಂಕಿಯನ್ನು ನಂದಿಸಿ ಬಿಡೋಣ. ನಂತರ ಡಿ. ಹೆಚ್. ಓ.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಪತ್ರಿಕೆಗಳಲ್ಲಿ ವರದಿಯಾಗಿದ್ದು ನನ್ನ ಗಮನಕ್ಕೆ ಬಂದಿದೆ. ತಕ್ಷಣ ನಾನು ಇವೊತ್ತು ನಾಳೆಯೋ ಎರಡು ದಿವಸಗಳಲ್ಲಿ ವರದಿಯನ್ನು ತರಿಸಿ ಸಮಗ್ರವಾಗಿ ಸದನದ ಮುಂದೆ ಹೇಳುತ್ತೇನೆ.

Mr. Speaker : It is a very serious matter. Responsible Members of this House, ಏನು ಹೇಳುತ್ತಿದ್ದಾರೆಂದರೆ ಅಲ್ಲಿ ಕೆಲವು ಅವ್ಯವಹಾರಗಳು ನಡೆದಿವೆ ಎಂದು ಹೇಳಿ ಒಂದು ಕಮಿಟಿ ಕಾನ್ಸಿಟಿಟ್ಯೂಟ್ ಮಾಡಬೇಕು ಎಂದು ಹೇಳಿ ಜಿಲ್ಲಾಪರಿಷತ್ತಿನಲ್ಲಿ ತೀರ್ಮಾನ ಆಗಿದೆ. ಅವರು ಎನ್‌ಕ್ವಾಯರಿ ಕಮೆನ್ಸ್ ಮಾಡುವ ಮೊದಲೇ ಅಲ್ಲಿ ಶಾರ್ಟ್ ಸರ್ಕ್ಯೂಟ್ ಆಗಿದೆ ಹಾಗೂ ಬೆಂಕಿ ಬಿದ್ದಿದೆ ಎಂದು ಹೇಳಿದರೆ, ಪತ್ರಿಕೆಗಳಲ್ಲಿ ನೋಡಿದ್ದೇನೆ, ವರದಿ ತರಿಸಿಕೊಡುತ್ತೇನೆ ಎಂದು ಹೇಳಿದರೆ....it is a very serious matter,

ಶ್ರೀ ಕೆ. ಎಸ್. ಈಶ್ವರಪ್ಪ : ಇದನ್ನು ಸಿ. ಓ. ಡಿ. ತನಿಖೆ ಮಾಡುತ್ತೇವೆಂದು ಹೇಳಲಿ.

ಯ) ಕೋಲಾರ ಜಿಲ್ಲೆಯಲ್ಲಿ ದ್ವಿಚಕ್ರ ವಾಹನ ಚಾಲಕರನ್ನು ಅಡ್ಡಗಟ್ಟಿ ಮಾಡುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ಧಾರುಣವಾದ ಒಂದು ಘಟನೆ ನಡೆದಿದೆ. ರಾಷ್ಟ್ರೀಯ ಹೆದ್ದಾರಿ ಏಳು ಮತ್ತು ಗೌರಿಬಿದನೂರು ರಸ್ತೆಯಲ್ಲಿ ದ್ವಿಚಕ್ರ ವಾಹನಗಳಲ್ಲಿ ಹೋಗುತ್ತಾ ಇರತಕ್ಕಂಥವರನ್ನು ಅಡ್ಡಗಟ್ಟಿ ಭೀಕರವಾಗಿ ಕೊಲೆ ಮಾಡಿರುವಂಥದ್ದು ವರದಿಯಾಗಿದೆ. ರಾಷ್ಟ್ರೀಯ ಹೆದ್ದಾರಿ ಏಳು ಮತ್ತು ಚಿಕ್ಕಬಳ್ಳಾಪುರ ಗೌರಿಬಿದನೂರು ರಸ್ತೆಯಲ್ಲಿ ಸಂಜೆ ಹೊತ್ತು ದ್ವಿಚಕ್ರ ವಾಹನದಲ್ಲಿ ಹೋಗುತ್ತಾ ಇದ್ದಂಥ ಶಿಕ್ಷಕರಾದ ಈಶ್ವರಪ್ಪ ಮತ್ತು ಟಿ. ಎ. ಪಿ. ಸಿ. ಎಂ. ಎನ್. ಸದಸ್ಯ ರಾಮಕೃಷ್ಣಪ್ಪ ಎನ್ನುವಂಥವರನ್ನು ಕೊಲೆ ಮಾಡಿದ್ದಾರೆ. ಇಬ್ಬರು ದಂಪತಿಗಳ ಮೇಲೆ ಹಲ್ಲೆ ಮಾಡಲಾಗಿದ್ದು ಅವರನ್ನು ಈಗ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಒಂದೇ ದಿವಸ ನಾಲ್ಕು ಕಡೆ ದ್ವಿಚಕ್ರ ವಾಹನಗಳ ಮೇಲೆ ಹೋಗುತ್ತಾ ಇರತಕ್ಕಂಥವರ ಮೇಲೆ ಹಲ್ಲೆ ನಡೆಸಿದ್ದಾರೆ. ಇಬ್ಬರು ಸ್ಥಳದಲ್ಲಿಯೇ ಸತ್ತಿದ್ದಾರೆ. ಇದು ಕೋಲಾರ ಜಿಲ್ಲೆಯಲ್ಲಿ ವ್ಯಾಪಕವಾಗಿ ನಡೆದಿರತಕ್ಕಂಥ ಘಟನೆ. ಕೋಲಾರ ಜಿಲ್ಲೆಯಲ್ಲಿ ಚಿಂತಾಮಣಿಯಲ್ಲಿ ಮದನಪಲ್ಲಿಗೆ ಹೋಗುತ್ತಾ ಇರತಕ್ಕಂಥ ರಸ್ತೆನಲ್ಲಿ ಕಳೆ ನಾಲ್ಕೈದು ತಿಂಗಳುಗಳಿಂದ ಏಳೆಂಟು ಜನರನ್ನು ಸಾಯಿಸಿದ್ದಾರೆ. ಚಿಂತಾಮಣಿಯಿಂದ ಶ್ರೀನಿವಾಸಪುರದಲ್ಲಿ ಹೋಗುತ್ತಾ ಇರತಕ್ಕಂಥ ರಸ್ತೆನಲ್ಲಿ ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ. ಅದೇ ರೀತಿ ಚಿಂತಾಮಣಿಯಿಂದ ಬಾಗೇಪಲ್ಲಿಗೆ ಹೋಗುವ ರಸ್ತೆಯಲ್ಲೂ ಕೂಡ ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ. ನಿನ್ನೆ ಭೀಕರವಾದಂತಹ ರೀತಿಯಲ್ಲಿ ಇಬ್ಬರನ್ನೂ ಒಂದೇ ವೇಳೆಯಲ್ಲಿ ಎಂದರೆ 7-8 ರ ಸಮಯದಲ್ಲಿ ಕೊಲೆ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೆ, ಇದನ್ನು ಅಲ್ಲಿರತಕ್ಕಪೋಲಿಸಿನವರ ಗಮನಕ್ಕೂ ತಂದಿದ್ದೇವೆ, ಆದರೆ ಇದುವರೆವಿಗೂ ಸರ್ಕಾರ ಇದರ ಬಗ್ಗೆ ಯಾವ ರೀತಿಯ ಕ್ರಮವನ್ನು ಕೈಗೊಂಡಿಲ್ಲ. ನಾಣಯ್ಯನವರೇ ದಯವಿಟ್ಟು ಈ ಕಡೆ ಗಮನಹರಿಸಿ, ಈ ಪ್ರಶ್ನೆಗೆ ತಾವೇ ಉತ್ತರಿಸಬೇಕು.

ಅಧ್ಯಕ್ಷರು : ಗೃಹಮಂತ್ರಿಗಳು ಇದ್ದಾರಲ್ಲಾ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಏನಾಗಿದೆ ಎಂದರೆ ಎಲ್ಲಾ ಸದಸ್ಯರ ಗಮನ ಇರುವುದು ನಾಣಯ್ಯನವರ ಕಡೆ, ಸಂಬಂಧಪಟ್ಟ ಮಂತ್ರಿಗಳು ಇದ್ದರೂ ಸಹಿತ ಸದಸ್ಯರುಗಳ ಗಮನ ಅವರ ಕಡೆ, ಮಾನ್ಯ ನಾಣಯ್ಯನವರು ಅಷ್ಟೇ, ಮಂತ್ರಿಗಳಿದ್ದರೂ ಸಹಿತ ನೀವು ಕುಳಿತುಕೊಳ್ಳಿ ನಾನು ಉತ್ತರ ಹೇಳುತ್ತೇನೆ ಎನ್ನುವ ಹಾಗೆ ಮಾಡಿ, ಇವತ್ತು ಎಲ್ಲಾ ಸದಸ್ಯರಿಗೂ ನಾಣಯ್ಯನವರೇ ಬೇಕು ಎನ್ನುವಂತಾಗಿದೆ.

ಅಧ್ಯಕ್ಷರು : ನನಗಂತೂ ಸದಾ ಹಸನ್ಮುಖರಾಗಿರುವ ಅವರು ನನ್ನ ಎದುರಿಗೆ ಇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಶೂನ್ಯ ವೇಳೆಯಲ್ಲಿ 20 ಜನರು ಎತ್ತಿದಂಥ ಪ್ರಶ್ನೆಗಳಿಗೆ 20 ನಿಮಿಷದಲ್ಲಿ ಉತ್ತರವನ್ನು ಕೊಟ್ಟದ್ದಾರೆ ಅದು ಎಷ್ಟರಮಟ್ಟಿಗೆ ಪರಿಹಾರವಾಗುತ್ತಿವೆ ಎಂಬುದನ್ನು ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೆ, ಹೀಗಾಗಿ ಕೋಲಾರ ಜಿಲ್ಲೆಯಲ್ಲಿ ಇದೊಂದು ವ್ಯಾಪಕವಾದ ಸಮಸ್ಯೆಯಾಗಿದೆ. ಚಿಕ್ಕಬಳ್ಳಾಪುರ ಉಪವಿಭಾಗದಲ್ಲಂತೂ ಬಹಳ ಗಂಭೀರವಾದಂತಹ ಪರಿಸ್ಥಿತಿ. ಕೋಲಾರ ಉಪವಿಭಾಗದ ರಾಯಲ್‌ಪಾಡ್ ರಸ್ತೆಯಲ್ಲಿ ಐದಾರು ಕೊಲೆಗಳನ್ನು ಮಾಡಿದ್ದಾರೆ. ಆದರೆ ಇದುವರೆವಿಗೂ ಕೂಡ ಪೋಲಿಸಿನವರು ಯಾರನ್ನು ಹಿಡಿದಿಲ್ಲ, ಕೇಸ್ ದಾಖಲು ಮಾಡಿದ್ದಾರೆಯೇ ಹೊರತು ಯಾರನ್ನೂ ಪತ್ತೆ ಹಚ್ಚಿಲ್ಲ. ಅಲ್ಲಿ ಶಿಕ್ಷಕರನ್ನು ಕೊಲೆ ಮಾಡಿದ್ದಾರೆ, ದಂಪತಿಗಳ ಮೇಲೆ ಹಲ್ಲೆ ಮಾಡಿದ್ದಾರೆ. ಏನು ಇದರ ಬಗ್ಗೆ ವರದಿ ತರಿಸಿದ್ದೀರಿ, ಇದಕ್ಕೆ ಕಾರಣ ಏನು ಎಂದು ಹುಡುಕಿದ್ದೀರಿ ಸರ್ಕಾರ ದಯವಿಟ್ಟು ಅದನ್ನು ಹೇಳಬೇಕು. ಇದು ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಸಂಜೆ ಏಳು ಗಂಟೆಯ ನಂತರ ಯಾರು ದ್ವಿಚಕ್ರ ವಾಹನದಲ್ಲಿ ಓಡಾಡಲಿಕ್ಕೆ ಆಗದಂಥ ಪರಿಸ್ಥಿತಿ ಇದೆ. ಅಡ್ಡಗಟ್ಟಿ ಕೊಲೆ ಮಾಡುತ್ತಾರೆ, 10 ರೂಪಾಯಿಯನ್ನು ದೋಚಿ ಕೊಂಡು ಹೋಗುತ್ತಾರೆ. ಚಿಕ್ಕಬಳ್ಳಾಪುರ ಉಪವಿಭಾಗದ ಪೋಲೀಸರಂತೂ ಸಂಪೂರ್ಣ ನಿಷ್ಕ್ರಿಯರಾಗಿದ್ದಾರೆ. ಏನು ಕೆಲಸ ಮಾಡುತ್ತಾ ಇಲ್ಲ. ಸರ್ಕಾರ ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ಕೊಡಬೇಕು. ಮತ್ತು ಸಂಜೆ ವೇಳೆಯಲ್ಲಿ ಓಡಾಡುವ ಜನರಿಗೆ ಯಾವ ರೀತಿಯ ಭದ್ರತೆಯನ್ನು ಸರ್ಕಾರ ಕೊಡುತ್ತದೆಂದು ಹೇಳಬೇಕು.

ಶ್ರೀ ಆರ್. ರೋಷನ್ ಬೇಗ್ : ಸನ್ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಚಿಕ್ಕಬಳ್ಳಾಪುರ ಉಪವಿಭಾಗದಲ್ಲಿ ನಡೆದಿರತಕ್ಕಂಥ ಘಟನೆಗಳು ಸರ್ಕಾರದ ಗಮನಕ್ಕೆ ಬಂದಿವೆ. ನಿನ್ನೆ ಡಿ.ಜಿ.ಪಿ. ಶ್ರೀನಿವಾಸುಲುರವರು ಹೋಗಿ ಅಲ್ಲಿ ಸುತ್ತಮುತ್ತಲಿನ ಸ್ಪಾರ್ ನೋಡಿಕೊಂಡು ಅಲ್ಲಿನ ಅಧಿಕಾರಿಗಳೊಂದಿಗೆ ಮೀಟಿಂಗ್ ಮಾಡಿಕೊಂಡು ಬಂದಿದ್ದಾರೆ. ಬರೀ ಚಿಕ್ಕಬಳ್ಳಾಪುರ ಒಂದೇ ಅಲ್ಲದೆ ಶ್ರೀನಿವಾಸಪುರ, ಕೋಲಾರದ ಹೈವೇಗಳಿಗೆ ಒಂದು ಜಿಗ್‌ಜಾಗ್ ಪೆಟ್ರೋಲಿಂಗ್ ಮಾಡಬೇಕೆಂದು ಅಲ್ಲಿಗೆ 18 ಜೀಪ್‌ಗಳನ್ನು ಕಳುಹಿಸಿದ್ದೇವೆ. ಡಿ.ಸಿ.ಪಿ. ಕೂಡ ಭೇಟಿ ನೀಡಿ ಬಂದಿದ್ದಾರೆ. ಕೆಲವು ವೈಟಲ್ ಕ್ಲೂ ಸಿಕ್ಕಿದೆ ಅದರ ಆಧಾರದ ಮೇಲೆ ತನಿಖೆ ನಡೆಯುತ್ತಿದೆ.

ಅಧ್ಯಕ್ಷರು : ಶ್ರೀನಿವಾಸಪುರದಲ್ಲಿ ಇನ್ಸ್‌ಪೆಕ್ಟರ್‌ಗಳಿಗೆ, ಸಬ್-ಇನ್ಸ್‌ಪೆಕ್ಟರ್‌ಗಳಿಗೆ ಜೀಪ್ಸ್ ಕೊಟ್ಟಿಲ್ಲ, ಕೊಟ್ಟಿರುವ ಜೀಪ್‌ಗಳು ಹೋಗತಕ್ಕ ಸ್ಥಿತಿಯಲ್ಲಿ ಇಲ್ಲ. ಆದುದರಿಂದ ಅವರಿಗೆ ತಕ್ಷಣ ಹೊಸ ಜೀಪ್ಗಳ ವ್ಯವಸ್ಥೆಯನ್ನು ಮಾಡಿ.

ರ) ಸಂತೆಮಾರನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ 12.5 ಎಂ.ವಿ. ಟ್ರಾನ್ಸ್ ಫಾರ್ಮರ್ ಅಳವಡಿಸುವುದು.

ಶ್ರೀ ಎ.ಆರ್. ಕೃಷ್ಣಮೂರ್ತಿ (ಕಡೂರು) : ಸನ್ಮಾನ್ಯ ಅಧ್ಯಕ್ಷರೆ, ಇಂದಿನ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಕ್ಷೇತ್ರದಲ್ಲಿನ ವಿದ್ಯುತ್ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಮ್ಮ ಕ್ಷೇತ್ರದಲ್ಲಿ 66.11 ಕೆ.ವಿ.ಯ ಉಪಕೇಂದ್ರವನ್ನು ಪ್ರಾರಂಭಿಸಬೇಕೆಂದು ಈ ಸದನದಲ್ಲಿ ನಾನು 1986 ರಲ್ಲೇ ಕೇಳಿಕೊಂಡಿದ್ದೆ, ಅದಕ್ಕೆ ಅಂದಿನ ಉಪ ಮುಖ್ಯಮಂತ್ರಿಗಳು ಲಿಖಿತ ಮೂಲಕ ಉತ್ತರವನ್ನು ಸಹ ಕೊಟ್ಟಿದ್ದರು, 1996ರ ಡಿಸೆಂಬರ್‌ಗೆ ಪೂರ್ಣಗೊಳಿಸುತ್ತೇವೆ ಎಂದು ಹೇಳಿದ್ದರು. ಆದರೆ ಅದು ಇದುವರೆವಿಗೂ ಪೂರ್ಣಗೊಂಡಿಲ್ಲ. ಇವತ್ತು ಉಪಕೇಂದ್ರವನ್ನು ಪೂರ್ಣಗೊಳಿಸುವ ಹಂತದಲ್ಲಿ, ಚಾರ್ಜ್ ಮಾಡುವ ಹಂತದಲ್ಲಿ ಟ್ರಾನ್ಸ್‌ಫಾರ್ಮರ್ ಹೆಚ್ಚು ಕಡಿಮೆ ಸಿಡಿದು ಹೋಗಿದೆ. From tech-

nical point of view, ಇವತ್ತು ನಾವು 66.11 ಕೆ.ವಿಯ ಉಪ ಕೆಂದ್ರಕ್ಕೆ 12.5 ಎಂ.ವಿ.ಯನ್ನು ಅಳವಡಿಸಬೇಕಾಗಿತ್ತು. ಆದರೆ ಅವರು 6.3 ಎಂ.ವಿಯನ್ನು ಟ್ರಾನ್ಸ್‌ಫಾರ್ಮರ್ ಅಳವಡಿಸಿ ವಿದ್ಯುತ್ತಿನ ಸಮಸ್ಯೆಯನ್ನು ನಿವಾರಿಸುವ ಬದಲು ಇನ್ನು ಹೆಚ್ಚು ಮಾಡಿದ್ದಾರೆ. ಆದುದರಿಂದ technical point of view 66.11 ಕೆ.ವಿ.ಯ ಉಪಕೇಂದ್ರಕ್ಕೆ 12.5 ಎಂ.ವಿಯ ಟ್ರಾನ್ಸ್‌ಫಾರ್ಮರ್ ಅನ್ನು ಅಳವಡಿಸಿ ನಮ್ಮ ಕ್ಷೇತ್ರದಲ್ಲಿರುವ ವಿದ್ಯುತ್ ಸಮಸ್ಯೆಯನ್ನು ಪರಿಹರಿಸಬೇಕೆಂದು ತಮ್ಮ ಮೂಲಕ ಘನ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) .- ಮಾನ್ಯ ಸದಸ್ಯರು ಈಗಾಗಲೇ ಇದರ ಬಗ್ಗೆ ತಿಳಿಸಿದ್ದಾರೆ. ಇದರ ಬಗ್ಗೆ ನಿನ್ನೆ ಚೀಫ್ ಇಂಜಿನಿಯರ್, ಜನರಲ್ ಅವರಿಗೆ ಹೇಳಿದ್ದೇನೆ, ಅವರು ಈ ದಿನ ಸಮಸ್ತ ವರದಿಗಳನ್ನು ತರುತ್ತೇವೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರ ಜೊತೆ ಕೂತು ಇದರ ಬಗ್ಗೆ ವರದಿ ಬಂದ ಮೇಲೆ ಚರ್ಚೆ ಮಾಡುತ್ತೇನೆ.

Mr. Speaker : Hon'ble Minister Mr. Mohiddin, are you ready with the Mysore Paper Mills matter? You had promised the other day.

Sri. B.A. Mohiddin (Hon'ble Minister for Industries): After the calling attention matter, Sir.

6) ಗಮನ ಸೆಳೆಯುವ ಸೂಚನೆಗಳು

ಅ) ಬಿಜಾಪುರದಲ್ಲಿನ ಕೈಗಾರಿಕಾ ಅಭಿವೃದ್ಧಿ ಪ್ರದೇಶಗಳಲ್ಲಿ ನೀರಿನ ಹಾಗೂ ವಿದ್ಯುತ್ ಅಭಾವದ ಬಗ್ಗೆ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟಾ) : ಬಿಜಾಪುರದ ಕೈಗಾರಿಕ ಅಭಿವೃದ್ಧಿ ಕ್ಷೇತ್ರದಲ್ಲಿರುವ ಕೈಗಾರಿಕೆಗಳು ನೀರಿನ ಮತ್ತು ವಿದ್ಯುತ್ತಿನ ಅಭಾವದಿಂದ ಮುಚ್ಚತಕ್ಕ ಸ್ಥಿತಿಗೆ ಬಂದಿವೆ. ಅದರ ಬಗ್ಗೆ ನಾನು ಕೈಗಾರಿಕೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

★ ಶ್ರೀ ಬಿ. ಎ. ಮೋಹಿದ್ದಿನ್ (ಕೈಗಾರಿಕೆ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಿಜಾಪುರ ನಗರದ ಸಮೀಪ 218 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಮಹಾಲ್ ಬಗಾಯತ್ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಗೊಳಿಸಲಾಗಿದೆ. ಸದರಿ ಕೈಗಾರಿಕಾ ಪ್ರದೇಶದಲ್ಲಿ 11 ಕೊಳವೆ ಬಾವಿಗಳನ್ನು ಕೊರೆಯಲಾಗಿದ್ದು, 5 ಕೊಳವೆ ಬಾವಿಗಳು ಕಾರ್ಯರೂಪದಲ್ಲಿರುತ್ತವೆ. ಎರಡು ಕೊಳವೆ ಬಾವಿಗಳ ಪಂಪ್‌ಗಳು ರಿಪೇರಿಯಲ್ಲಿದ್ದು, ಉಳಿದ 4 ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿ ಕಾರ್ಯರೂಪಕ್ಕೆ ತರಬೇಕಾಗಿದೆ. ಕೈಗಾರಿಕಾ ಪ್ರದೇಶದಲ್ಲಿ ಸ್ಥಾಪಿತವಾಗಿರುವ ಕೈಗಾರಿಕಾ ಘಟಕಗಳಿಗೆ ನೀರು ಸರಬರಾಜು ಮಾಡಲು ಶ್ರದ್ಧಾಪೂರ್ವಕವಾಗಿ ಪ್ರಯತ್ನಿಸಲಾಗಿದೆ. ಆದರೆ ಸದರಿ ಕೈಗಾರಿಕಾ ಪ್ರದೇಶದಲ್ಲಿ ಅಂತರ್‌ಜಲ ಸಮೃದ್ಧಿಯೂ ಪ್ರೋತ್ಸಾಹಿಕವಾಗಿ ಇಲ್ಲದಿರುವುದರಿಂದ ಪರ್ಯಾಯವಾಗಿ ಅಡೆತಡೆ ಇಲ್ಲದೆಯೇ ಕೈಗಾರಿಕೆಗಳಿಗೆ ನೀರು ಸರಬರಾಜು ಮಾಡಲು ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಕ.ನ. ನೀ.ಸ. ಮತ್ತು ಒ.ಚ.ಮಂ) ಯವರನ್ನು ಕೃಷ್ಣಾ ನದಿಯಿಂದ ಮಹಾಲ್ ಬಾಗಾಯತ್ ಕೈಗಾರಿಕಾ ಪ್ರದೇಶಕ್ಕೆ ದಿನಂಪ್ರತಿ 0.50 ಮಿಲಿಯ ಗ್ಯಾಲನ್ ನೀರನ್ನು ಒದಗಿಸಲು ಕೋರಲಾಗಿದೆ.

ಈ ಸಂಬಂಧವಾಗಿ ಕರ್ನಾಟಕ ನ.ನೀ.ಸ. ಮತ್ತು ಒ.ಚ.ಮಂ. ಬಿಜಾಪುರ ಇವರು ರೂ. 177.00 ಲಕ್ಷಗಳನ್ನು ಪಾವತಿ ಮಾಡಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕ.ನ.ನೀ.ಸ. ಮತ್ತು ಒ.ಚ.ಮಂಡಳಿ, ಬಿಜಾಪುರ, ಇವರಿಗೆ ಸಂಬಂಧಪಟ್ಟ ಅಂದಾಜು ಪಟ್ಟಿಯನ್ನು ಕಳುಹಿಸಿಕೊಡಲು ಕೇಳಲಾಗಿದ್ದು, ಸದರಿ ಅಂದಾಜು ಪಟ್ಟಿಯೂ ಅವರಿಂದ ಬರಬೇಕಾಗಿದೆ. ಸದರಿ ಅಂದಾಜು ಪಟ್ಟಿಯು ಬಂದ ಕೂಡಲೇ ಹಣವನ್ನು ಪಾವತಿಸಲಾಗುವುದು.

ಈಗಾಗಲೇ ಒಬ್ಬರು ಸಹಾಯಕ ಇಂಜಿನಿಯರು ಮತ್ತು ಇತರೆ ಕ್ಷೇತ್ರ ಸಿಬ್ಬಂದಿಯನ್ನು ಮಹಾಲ್ ಬಾಗಾಯತ್ ಕೈಗಾರಿಕಾ ಪ್ರದೇಶದಲ್ಲಿ ನಿಯೋಜಿಸಲಾಗಿದೆ. ಸದರಿ ಸಹಾಯಕ ಇಂಜಿನಿಯರ್‌ರವರು ಕೈಗಾರಿಕಾ ಪ್ರದೇಶದ ಕಛೇರಿಯಲ್ಲಿ ಕಾರ್ಯನಿರ್ವಹಣೆಯಲ್ಲಿ ಗೈರುಹಾಜರಿ ಹಾಗೂ ನಿರ್ಲಕ್ಷತನ ತೋರಿಸುತ್ತಿಲ್ಲವೆಂದು ತಿಳಿದುಬಂದಿದೆ.

★ಶ್ರೀ ಶಿವಾನಂದ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಗೆ ಗೊತ್ತಿರುವ ಹಾಗೆ ನಮ್ಮ ಸರ್ಕಾರ ಬಂದ ಮೇಲೆ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಎರಡನೇ ಕುಡಿಯುವ ನೀರಿನ ಯೋಜನೆಯನ್ನು ಈಗಾಗಲೇ ಮಾಡಿದ್ದಾರೆ. ಅದರಲ್ಲಿ ಟ್ರಿಯಲ್ ರನ್ ಕೂಡ ಆಗುತ್ತಿದೆ. ಈ ನೀರನ್ನು ಕೊಡತಕ್ಕ ಶಕ್ತಿ ನಗರಸಭೆ ಮತ್ತು ಕರ್ನಾಟಕ ನೀರು ಸರಬರಾಜು ಮಂಡಲಿಗೆ ಇದೆ. ಆದರೆ ತಮ್ಮಿಂದ ಅವರಿಗೆ ಹಣ ಸಿಗುತ್ತಾ ಇಲ್ಲ. ನಿಮಗೂ ಗೊತ್ತಿರುವ ಬಿಜಾಪುರದ ಕೈಗರಿಕಾ ಪ್ರದೇಶದಲ್ಲಿ ಕೇವಲ 50 ಇಂಡಸ್ಟ್ರೀಸ್ ಮಾತ್ರ ಇದ್ದಾವೆ. ಅಲ್ಲಿ ಬರೀ 500 ಜನ ಉದ್ಯೋಗಿಗಳು ಇದ್ದಾರೆ. ಅಲ್ಲಿಗೆ ಕೈಗಾರಿಕೆಗಳು ಏಕೆ ಬರುತ್ತಿಲ್ಲವೆಂದರೆ ಅಲ್ಲಿ ನೀರಿನ ವ್ಯವಸ್ಥೆ ಇಲ್ಲ, ಮತ್ತು ವಿದ್ಯುತ್ತನ್ನು ಒದಗಿಸಲಿಕ್ಕೆ ಆಗುತ್ತಿಲ್ಲ. ಇವೆರಡರ ಬಗ್ಗೆ ತಾವು ಪರಿಗಣನೆ ಮಾಡಬೇಕು. ಮತ್ತು ಅದಕ್ಕಾಗಿ 1 ಕೋಟಿ 77 ಲಕ್ಷ ರೂಪಾಯಿಗಳನ್ನು ತುಂಬುತ್ತೇವೆ ಎಂದು ಏನು ವಾಗ್ದಾನ ಮಾಡಿದ್ದಿರಿ, ಅದನ್ನು ಈ ವರ್ಷದ ಆಯವ್ಯದಲ್ಲಿ ತುಂಬುತ್ತೇನೆ ಎಂದು ನೀವು ವಾಗ್ದಾನ ಮಾಡಿದರೆ, ಅಲ್ಲಿರತಕ್ಕ 50 ಇಂಡಸ್ಟ್ರೀಸ್ ಆದರೂ ಉಳಿಯುತ್ತವೆ. ಇಲ್ಲದಿದ್ದರೆ ಈ 50 ಇಂಡಸ್ಟ್ರೀಸ್ ಕೂಡ ಮುಚ್ಚುತ್ತವೆ. ನೀವೇ ಹೇಳಿದ ಹಾಗೆ ಅಲ್ಲಿರತಕ್ಕ 5 ಬೋರ್‌ವೆಲ್‌ಗಳಲ್ಲಿ 2 ಮಾತ್ರ ಕೆಲಸ ಮಾಡುತ್ತಿವೆ. ಅವು ದಿನಕ್ಕೆ ಕನಿಷ್ಠ ಎರಡೂವರೆ ಲಕ್ಷ ಲೀಟರ್‌ನಷ್ಟು ನೀರನ್ನು ಹೊರಗಡೆಯಿಂದ ಖರೀದಿ ಮಾಡಿಕೊಂಡು ಅಲ್ಲಿರತಕ್ಕ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಇದೇ ಪರಿಸ್ಥಿತಿ ಮುಂದುವರೆದರೆ ಅವರು ಅದನ್ನು ಮುಚ್ಚಿ, ಬೇರೆ ಎಲ್ಲಾದರೂ ಸ್ಥಾಪನೆ ಮಾಡುವ ಪರಿಸ್ಥಿತಿ ಬರುತ್ತದೆ. ಕರ್ನಾಟಕದ ಗಡಿ ಭಾಗದಲ್ಲಿ ಇರತಕ್ಕಂಥ ಜಿಲ್ಲೆಗಳಿಗೆ ಬರೀ ಘೋಷಣೆಗಳನ್ನು ಯೋಜನೆಗಳನ್ನು ಘೋಷಣೆ ಮಾಡುತ್ತೀರೇ ಏನ: ಅದರ ಪ್ರಗತಿಗಾಗಿ ಪರಿಶೀಲನೆ ಮಾಡುವುದಿಲ್ಲ. ನೀವು 218 ಎಕರೆಯ ಒಂದು ಪಾಲ್ ಭಾಗ ಕೈಗಾರಿಕೆ ಪ್ರದೇಶಾಭಿವೃದ್ಧಿಯ ಯೋಜನೆಯನ್ನು ಘೋಷಣೆ ಮಾಡಿದ್ದೀರಿ , ಆದರೆ ಅದರ ಪ್ರಗತಿ ಒಂದು ವರ್ಷದಲ್ಲಿ ಎಷ್ಟಾಗಿದೆ ಎಂಬುದನ್ನು ನೀವು ಹೇಳಬೇಕು. ಸ್ವಲ್ಪ ಈ ಎರಡು ಮೂರು ಪ್ರಶ್ನೆಗಳಿಗೆ ತಾವು ಉತ್ತರವನ್ನು ಕೊಡಬೇಕು.

ಶ್ರೀ ಬಿ. ಎ. ಮೋಹಿದ್ದೀನ್ : ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಅಲ್ಲಿ ಅಂತರ್‌ಜಲದ ಅಭಾವವಿದೆ ಎನ್ನುವುದನ್ನು ನಾವು ನೀವು ಎಲ್ಲರೂ ಒಪ್ಪಿಕೊಳ್ಳಬೇಕಾದಂಥ ವಿಚಾರ. ಬಿಜಾಪುರದಲ್ಲಿ ಇಲ್ಲಿಯವರೆಗೆ ಕುಡಿಯುವ ನೀರೂ ಸಹ ಇರಲಿಲ್ಲ. ತಾವೇ ಹೇಳಿದ್ದೀರಿ, ನಮ್ಮ ಸರ್ಕಾರ ಬಂದ ಮೇಲೆ 35 ಕೋಟಿ ರೂಪಾಯಿ ಖರ್ಚು ಮಾಡಿ ಅಲ್ಲಿ ಕುಡಿಯುವ ನೀರನ್ನು ಕೊಡತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಇಲ್ಲಿ ನೀವು ಏನು ಕೇಳಿದ್ದೀರಿ ಎಂದರೆ, ಈಗಾಗಲೇ ನಮ್ಮ ಮುನಿಸಿಪಾಲಿಟಿಯವರು

1 ಕೋಟಿ 77 ಲಕ್ಷ ರೂಪಾಯಿಗಳನ್ನು ಪೈಪ್‌ಲೈನ್ ಹಾಕಲು ಖರ್ಚು ಮಾಡಿದ್ದು, ಅದನ್ನು ನಮಗೆ ಕೊಡಬೇಕು ಎಂದು ಕೇಳಿಕೊಂಡಿದ್ದೀರಿ. ಕೆ. ಐ.ಎ.ಡಿ.ಬಿ. ಉದ್ಯಮಿಗಳಿಗೆ ನೀರು ಕೊಡುವಾಗ ಅದು ನೋ ಲಾಸ್ ನೋ ಪ್ರಾಫಿಟ್ ಆಧಾರದ ಮೇಲೆ ಕೊಡಬೇಕು. ಆದ್ದರಿಂದ ಈ ಒಂದು ವೆಚ್ಚವನ್ನು ಉದ್ಯಮಿಗಳ ಮೇಲೆ ಹಾಕಬೇಕಾಗುತ್ತದೆ. ಅದಕ್ಕೆ ಅಲ್ಲಿರುವಂಥ ಅಸೋಸಿಯೇಷನ್‌ನವರು ಒಪ್ಪುವುದಿಲ್ಲ. ಕೆ ಐ ಎ ಡಿ ಬಿ ಕಾರ್ಯಾಚರಣೆ ಬಗ್ಗೆ ಹೇಳಬೇಕಾದರೆ ಅದು ಯಾವತ್ತೂ ಲಾಭ ಮಾಡತಕ್ಕಂಥ ಸಂಸ್ಥೆಯಲ್ಲ. ಅದು ಲಾಭವನ್ನೂ ಮಾಡುವುದಿಲ್ಲ, ನಷ್ಟವನ್ನೂ ಮಾಡಿಕೊಳ್ಳುವುದಿಲ್ಲ. ಅದು ಒಂದು ಸೇವಾ ಸಂಸ್ಥೆ. ಈ ರೀತಿಯ ಪರಿಸ್ಥಿತಿಯಲ್ಲ ಅಲ್ಲಿ ನಿಮಗೆ ನೀರನ್ನು ಕೊಡಬೇಕಾಗಿದೆ. ಅದನ್ನು ಹೇಗೆ ಕೊಡಬಹುದು ಎನ್ನುವುದರ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಜಿಲ್ಲಾಧಿಕಾರಿಗಳು ಈಗಾಗಲೇ ಒಂದು ಸಭೆಯನ್ನು ಮಾಡಿದ್ದಾರೆ. ಪುನ: ಒಂದು ಸಭೆ ಮಾಡಿ ಈ ನೀರಿನ ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು ಎನ್ನುವುದರ ಬಗ್ಗೆ ಬಹಳ ತ್ವರಿತವಾಗಿ ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ, ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುವುದು ಏನೆಂದರೆ, ಅಲಿಯಾಬಾದ್‌ನಲ್ಲಿ ನಾವು ಈಗಾಗಲೇ ಕೇಂದ್ರ ಸರ್ಕಾರದಿಂದ 2 ಕೋಟಿ ರೂಪಾಯಿ ಮತ್ತು ಸಿಡ್ಬಿ (ಎಸ್ ಐ ಡಿ ಬಿ ಐ) ಯಿಂದ 3 ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟು ಒಂದು ಒಳ್ಳೆಯ ಫುಡ್ ಪ್ರೋಸೆಸಿಂಗ್ ಏರಿಯಾವನ್ನು ಡೆವಲಪ್ ಮಾಡಿದ್ದೇವೆ. ಬಿಜಾಪುರ ಕೈಗಾರಿಕೆಗಳ ಹಿಂದುಳಿದ ಪ್ರದೇಶವೆಂದು ಅಲ್ಲಿ ಇದನ್ನು ಡೆವಲಪ್ ಮಾಡಿದ್ದೇವೆ. ಅಲ್ಲಿಗೂ ಕೂಡ ನೀರನ್ನು ಕೊಡತಕ್ಕಂಥ ಕೆಲಸವನ್ನು ನಾವು ಮಾಡುತ್ತಿದ್ದೇವೆ ಎನ್ನುವ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಇಷ್ಟಪಡುತ್ತೇನೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ಕಳೆದ 3-4 ವರ್ಷಗಳಿಂದ ಬಿಜಾಪುರ ಜಿಲ್ಲೆಗೆ ಮೂರುವರೆ ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡಬೇಕು. ಅದನ್ನು ಇದುವರೆಗೆ ಪೆಂಡಿಂಗ್ ಇಟ್ಟುಕೊಂಡು ಕುಳಿತಿದ್ದಾರೆ.

ಅಧ್ಯಕ್ಷರು : ಅವರು ಪೆಂಡಿಂಗ್ ಇಟ್ಟುಕೊಂಡಿಲ್ಲ. ಅವರಿಗೆ ದುಡ್ಡು ಬಂದಿಲ್ಲ. ಬಂದ ತಕ್ಷಣ ಕೊಟ್ಟುಬಿಡುತ್ತಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ಈಗ 218 ಎಕರೆ ಏರಿಯಾವನ್ನು ಡೆವೆಲಪ್ ಮಾಡುತ್ತಿದ್ದಾರೆ, ತಮ್ಮ ಮೂಲಕ ನಾನು ಒಂದು ವಿಷಯವನ್ನು ಕೇಳುತ್ತೇನೆ,

ಅಧ್ಯಕ್ಷರು : ಶಿವಾನಂದ ಪಾಟೀಲರೇ , ಕೈಗಾರಿಕಾ ಇಲಾಖೆಗೆ ಜಮಾ ಆಗಿದ್ದು, ಅವರು ವಿತರಣೆ ಮಾಡದೇ ಇಟ್ಟುಕೊಂಡಿದ್ದರೆ, ಅವರು ಪೆಂಡಿಂಗ್ ಇಟ್ಟುಕೊಂಡ ಹಾಗೆ ಆಗುತ್ತದೆ. ಅವರಿಗೆ ಹಣ ಬಂದಿಲ್ಲ. ಅದರಿಂದಾಗಿ ಪೆಂಡಿಂಗ್ ಆಗಿದೆ. ಬಂದ ತಕ್ಷಣ ಕೊಟ್ಟು ಬಿಡುತ್ತಾರೆ. ಮೊದಲು ಬಿಜಾಪುರದ್ದು ಕೊಟ್ಟುಬಿಡಿ, ಕೋಲಾರದ್ದು ನಿಧಾನವಾಗಿ ಕೊಟ್ಟರೂ ಆಗುತ್ತದೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ನಾನು ಏನು ಹೇಳುತ್ತೇನೆಂದರೆ, ಈಗ ಇರತಕ್ಕಂಥ 50 ಎಕರೆ ಕೈಗಾರಿಕಾ ಪ್ರದೇಶಕ್ಕೇ ನೀರು ಇಲ್ಲ. ಹೀಗಿರುವಾಗ ಈಗ ಹೊಸದಾಗಿ 218 ಎಕರೆ ಅಭಿವೃದ್ಧಿ ಮಾಡಲು ಹೊರಟಿದ್ದಾರೆ. ಈಗಿರತಕ್ಕಂಥ 50 ಎಕರೆಗೇ ನೀರಿಲ್ಲ. ಮೊದಲು ಅಲ್ಲಿಗೆ ನೀರು ಕೊಟ್ಟು ನಂತರ 218 ಎಕರೆ ಅಭಿವೃದ್ಧಿ ಮಾಡಲಿ.

ಅಧ್ಯಕ್ಷರು : ಅದು ಅವರ ಹಣೆಬರಹ. ಅದಕ್ಕೆ ಅವರು ವ್ಯವಸ್ಥೆ ಮಾಡುತ್ತಾರೆ.

ಶ್ರೀ ಶಿವಾನಂದ ಎಸ್ ಪಾಟೀಲ್ : ಮೊದಲು 1 ಕೋಟಿ 77 ಲಕ್ಷ ರೂಪಾಯಿಗಳನ್ನು ಜಮಾ ಮಾಡಿ ಆಮೇಲೆ ವ್ಯವಸ್ಥೆ ಮಾಡಿ.

ಆ) ಬಳ್ಳಾರಿ-ಬೆಂಗಳೂರು ರಸ್ತೆಯನ್ನು ವಿಸ್ತರಿಸಲು ಬಳ್ಳಾರಿಯಲ್ಲಿ ಖಾಸಗೀ ಕಟ್ಟಡಗಳನ್ನು ಅಕ್ರಮವಾಗಿ ನೆಲಸಮ ಮಾಡಿರುವ ಬಗ್ಗೆ.

ಶ್ರೀ ಎಂ. ದಿವಾಕರ ಬಾಬು (ಬಳ್ಳಾರಿ) : ಮಾನ್ಯ ಅಧ್ಯಕ್ಷರೇ, ಬಳ್ಳಾರಿ-ಬೆಂಗಳೂರು ರಸ್ತೆಯನ್ನು ಅಗಲ ಮಾಡಬೇಕೆಂದು ಬಳ್ಳಾರಿಯಲ್ಲಿ ಅನಧಿಕೃತ ಕಟ್ಟಡ ಎಂದು ಹೇಳಿ, ಪಟ್ಟಾ ಜಮೀನುಗಳಲ್ಲಿರುವಂಥ ಕಟ್ಟಡಗಳನ್ನು ನೋಟೀಸ್ ಕೊಡದೆ, ಬುಲ್ಡೋಜರ್‌ಗಳನ್ನು ತೆಗೆದುಕೊಂಡು ಬಂದು ಕಟ್ಟಡಗಳನ್ನು ನೆಲಸಮ ಮಾಡಿದ್ದಾರೆ. ಈ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಬಳ್ಳಾರಿ ನಗರದಲ್ಲಿ, ಬೆಂಗಳೂರು ರಸ್ತೆ ಒಂದು ಮುಖ್ಯ ರಸ್ತೆಯಾಗಿದ್ದು, ನಗರದ ವಾಣಿಜ್ಯ ಉದ್ಯಮದ ಕೇಂದ್ರವಾಗಿರುತ್ತದೆ. ಈ ರಸ್ತೆಯು ತುಂಬಾ ಇಕ್ಕಟ್ಟಿನಿಂದ ಕೂಡಿರುವುದರಿಂದ ರಸ್ತೆಯ ಬಹಳಷ್ಟು ಕಡೆ ಸಂಚಾರಕ್ಕೆ ವ್ಯತ್ಯಯ ಉಂಟಾಗುತ್ತದೆ. ಈ ಬೆಂಗಳೂರು ರಸ್ತೆಯನ್ನು ಅಗಲ ಮಾಡುವ ಸಲುವಾಗಿ ಸುಮಾರು 25 ವರ್ಷಗಳಿಂದಲೂ ಪ್ರಸ್ತಾವನೆ ಇದ್ದು, 1970 ರಲ್ಲಿಯೇ ಬೆಂಗಳೂರು ರಸ್ತೆಯಲ್ಲಿ ಇದ್ದ ಕಟ್ಟಡಗಳ ಮೇಲೆ ಗುರುತುಗಳನ್ನು ಹಾಕಿ ರಸ್ತೆಯನ್ನು ಎಷ್ಟು ಅಗಲ ಮಾಡಬೇಕು? ಎಂಬುದನ್ನು ಕಾಣಿಸಲಾಗಿತ್ತು. ಆದ್ದರಿಂದ ಲೋಕೋಪಯೋಗಿ ಇಲಾಖೆ, ಪೋಲೀಸ್ ಇಲಾಖೆ ಹಾಗು ಇತರ ಪ್ರಾಧಿಕಾರಗಳ ಜೊತೆ ಈ ವಿಚಾರ ವಿನಿಮಯ ನಡೆಸಿ ಬೆಂಗಳೂರು ರಸ್ತೆಯನ್ನು ಅಗಲಗೊಳಿಸುವ ಕಾರ್ಯವನ್ನು ದಿನಾಂಕ 18.03.98 ರಿಂದ ಕೈಗೆತ್ತಿಕೊಳ್ಳಲಾಗಿದೆ. ಪ್ರಸ್ತುತ ಈ ರಸ್ತೆಯನ್ನು 45 ಅಡಿಗಳವರೆಗೆ ಅಗಲ ಮಾಡಲಾಗುತ್ತಿದೆ. ಈ ಬೆಂಗಳೂರು ರಸ್ತೆಯಲ್ಲಿ ಗುರುತು ಮಾಡಿರುವ ಭಾಗಗಳನ್ನು ಸಾಕಷ್ಟು ಜನ ತಾವೇ ತೆಗೆದಿದ್ದಾರೆ. ಸಾರ್ವಜನಿಕರಿಂದ ಯಾವುದೇ ವಿಧದ ವಿರೋಧವಾಗಲೀ ಅಥವಾ ಅಸಮಧಾನವಾಗಲೀ ಕಂಡು ಬಂದಿರುವುದಿಲ್ಲ. ರಸ್ತೆಯನ್ನು ಅಗಲಗೊಳಿಸುವ ಕಾರ್ಯ ತುಂಬಾ ಶಾಂತ ರೀತಿಯಿಂದ ನಡೆಯುತ್ತಿದ್ದು, ಬೆಂಗಳೂರು ರಸ್ತೆಯಲ್ಲಿನ ಸಾರ್ವಜನಿಕರು ಈ ಕೆಲಸದಲ್ಲಿ ಜಿಲ್ಲಾ ಆಡಳಿತ ಜೊತೆ ತುಂಬು ಹೃದಯದಿಂದ ಸಹಕಾರ ನೀಡಿರುತ್ತಾರೆ. ಈ ಬೆಂಗಳೂರು ರಸ್ತೆಯನ್ನು ಅಗಲಗೊಳಿಸುವ ಕಾರ್ಯವು ಬಹಳಷ್ಟು ವರ್ಷಗಳಿಂದ ಹಾಗೆಯೇ ಬಾಕಿ ಇದ್ದುದರಿಂದ ಬಳ್ಳಾರಿ ನಗರದ ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ.

ಈ ರಸ್ತೆಯನ್ನು ಡಾಂಬರೀಕರಣ ಹಾಗೂ ಅಸ್ಥಾಲ್ಟಿಂಗ್ ಮಾಡಲು, ಚರಂಡಿಗಳ ನಿರ್ಮಾಣ ಹಾಗೂ ಪಾದಚಾರಿಗಳಿಗೆ ಫುಟ್‌ಪಾತ್ ನಿರ್ಮಾಣದ ಕೆಲಸವನ್ನು ಇಷ್ಟರಲ್ಲಿಯೇ ಕೈಗೊಳ್ಳಲಾಗುವುದು.

ಶ್ರಿ ಎಂ. ದಿವಾಕರಬಾಬು : ಮಾನ್ಯ ಅಧ್ಯಕ್ಷರೇ, ರಸ್ತೆಯನ್ನು ವಿಸ್ತಾರ ಮಾಡಬೇಕು, ಅಗಲ ಮಾಡಬೇಕು ಎಂದು ಹೇಳುತ್ತಾರೆ. ಖಾಸಗಿ ಸ್ವತ್ತಿನಲ್ಲಿ ನೀವು ಬುಲ್ಡೋಜರ್‌ಗಳನ್ನು ತೆಗೆದುಕೊಂಡು ಹೋಗಿ ಅವರ ಕುತ್ತಿಗೆಯ ಮೇಲೆ ಕುಳಿತು, ಬುಲ್ಡೋಜರ್ ಅನ್ನು ಅವರ ಕಟ್ಟಡದ ಮುಂದೆ ಇಟ್ಟು ನೀವೇ ಒಡೆಯುತ್ತೀರೋ, ಇಲ್ಲವೋ ಎಂದರೆ ಯಾರೇ ಆಗಲೀ, ಅವರ ಕಟ್ಟಡಗಳನ್ನು ಅವರೇ ಒಡೆದುಕೊಳ್ಳ ಬೇಕಾಗುತ್ತದೆ. ರಸ್ತೆಯನ್ನು ಅಗಲ ಮಾಡುವ ಸಲುವಾಗಿ ನೀವು ಖಾಸಗೀ ಸ್ವತ್ತನ್ನು ಅಕ್ವಿಸಿಷನ್ ಮಾಡಿಕೊಂಡಿರುವಿರಾ? ಅವರಿಗೆ ಏನಾದರೂ ಪರಿಹಾರ ಕೊಟ್ಟಿದ್ದಿರಾ? ನೋಟೀಸ್ ಕೊಡದೇ

ನೀವು ರಸ್ತೆಯನ್ನು ಅಗಲ ಮಾಡಬೇಕು ಎಂದು ಕಟ್ಟಡಗಳನ್ನು ಡೆಮಾಲಿಷ್ ಮಾಡುತ್ತೇವೆ ಎಂದರೆ ಹೇಗೆ? ಏಕೆಂದರೆ ಖಾಸಗೀ ಸ್ವತ್ತನ್ನು ಸರ್ಕಾರ ತೆಗೆದುಕೊಳ್ಳಬೇಕಾದರೂ ಅದಕ್ಕೆ ಪರಿಹಾರ ಕೊಡಬೇಕಾಗುತ್ತದೆ. ಇದಕ್ಕೆ ನೀವು ನೋಟೀಸ್ ಕೂಡ ಕೊಟ್ಟಿಲ್ಲ. ಇದಕ್ಕೆ ಯಾರು ಪರಿಹಾರ ಕೊಡುತ್ತಾರೆ? ಅದು ಸುಮಾರು ಎರಡು ಕಿ.ಮೀ ನಷ್ಟು ಉದ್ದದ ರಸ್ತೆಯಾಗಿದ್ದು, ಹೋಟೆಲ್, ಬಜಾರ್ ಎಲ್ಲವೂ ಆ ರಸ್ತೆಯಲ್ಲೇ ಇವೆ. ಆ ರಸ್ತೆಯಲ್ಲಿ ಇರುವಂಥ ಅಂಗಡಿಗಳಿಗೆ ಪರಿಹಾರ ಕೊಡುವವರು ಯಾರು? ನೀವು ಅಕ್ವಿಸಿಷನ್ ಮಾಡದೇ, ಪರಿಹಾರವನ್ನು ಕೊಡದೇ ಡೆಮಾಲಿಷ್ ಮಾಡುತ್ತೇವೆ ಎಂದರೆ ಹೇಗೆ?

ಶ್ರೀ ಮಿರಾಜುದ್ದೀನ್ ಎನ್ ಪಟೇಲ್ : ಸನ್ಮಾನ್ಯ ಸಭಾಧ್ಯಕ್ಷರೇ, ಇದು ಮುನಿಸಿಪಾಲಿಟಿಯ ರಸ್ತೆ ಅಲ್ಲ. ಇದು ಲೋಕೋಪಯೋಗಿ ರಸ್ತೆ. ಇವತ್ತು ಅಲ್ಲಿ ಜನರ ಕಡೆಯಿಂದ ಯಾವುದೇ ದೂರು ಬಂದಿಲ್ಲ. ಸಾರ್ವಜನಿಕರ ಸಹಕಾರದಿಂದಲೇ ಈ ಕೆಲಸ ಆಗುತ್ತಿದೆ. ವಾಲೆಂಟರಿಯಾಗಿ ಮಾಡುವಂಥ ಕೆಲಸವಿದು. ಇದಕ್ಕೆ ಪರಿಹಾರ ಕೊಡುವಂಥಾದ್ದೇನೂ ಇಲ್ಲ. ಈ ರಸ್ತೆ ಸಂಪೂರ್ಣವಾಗಿ ಲೋಕೋಪಯೋಗಿ ಇಲಾಖೆಗೆ ಸೇರಿದ್ದು. ಇದು ಮುನಿಸಿಪಾಲಿಟಿ ರಸ್ತೆ ಅಲ್ಲ.

ಶ್ರೀ ಎಂ. ದಿವಾಕರ ಬಾಬು : ಪೋಲೀಸರು, ಜಿಲ್ಲಾಧಿಕಾರಿಗಳು ಎಲ್ಲರೂ ಇದರಲ್ಲಿ ಶಾಮೀಲಾಗಿದ್ದಾರೆ. ಹೀಗಿರುವಾಗ ದೂರನ್ನು ತೆಗೆದುಕೊಳ್ಳುವವರು ಯಾರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಇಲ್ಲಿ ಏನಾಗಿದೆ ಎಂದರೆ, ಜಿಲ್ಲಾಧಿಕಾರಿಗಳು, ಎಸ್.ಪಿ. ಯವರು ಮುನಿಸಿಪಾಲಿಟಿಯ ಕಮೀಷನರ್ ಹೀಗೆ ಸಂಬಂಧಪಟ್ಟವರೆಲ್ಲರೂ ಒಂದು ಮೀಟಿಂಗ್ ಮಾಡಿಯೇ ಈ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಹೀಗಿರುವಾಗ, ಸಹಜವಾಗಿಯೇ ಯಾರು ಕಂಪ್ಲೇಂಟ್ ಕೊಟ್ಟರೂ ಕೂಡ ಅದನ್ನು ಎಂಟರ್‌ಟೈನ್ ಮಾಡಬಾರದು. ಅದರಿಂದ ಇದರಲ್ಲಿ ಇಂಟರ್‌ಫಿಯರೆನ್ಸ್ ಆಗುತ್ತದೆ, ಆಗ ಕೆಲಸ ನಿಂತು ಹೋಗುತ್ತದೆ ಎಂದು ಅವರವರೇ ಮಾತನಾಡಿಕೊಂಡು ಈ ಕೆಲಸವನ್ನು ಮಾಡಿದ್ದಾರೆ. ಅದಕ್ಕಾಗಿಯೇ , ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಲು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಾಗ ನಿಮಗೆ ಎಲ್ಲಾ ಕಾಗದ ಪತ್ರಗಳನ್ನು ಒದಗಿಸಿದ್ದಾರೆ. ಅಂದರೆ ಯಾವ ಸರ್ವೆ ನಂಬರಿನಿಂದ, ಯಾವ ವಾರ್ಡ್‌ನಲ್ಲಿ ಯಾರ ಸ್ವತ್ತು ಇದೆ, ಯಾವ ಸ್ವತ್ತಿನ ಮೂಲಕ ಈ ರಸ್ತೆ ಹೋಗುತ್ತದೆ ಎನ್ನುವಂಥ ಸಂಪೂರ್ಣವಾದ ಮಾಹಿತಿಯನ್ನು ಅವರು ಇಲಾಖೆಗೆ ಕೊಟ್ಟಿದ್ದಾರೆ. ಆದುದರಿಂದ, ಸರ್ಕಾರದವರು ಇದು ನಿಮಗೆ ಗೊತ್ತಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಒಬ್ಬ ಶಾಸಕರು ಈ ವಿಷಯವನ್ನು ಸದನಕ್ಕೆ ತರುವುದಕ್ಕೆ ಮುಂಚೆ ಸರ್ಕಾರದ ಗಮನಕ್ಕೆ ತಂದರೂ ಕೂಡ, ಯಾವುದೇ ಕಂಪ್ಲೇಂಟ್ ಇಲ್ಲ, ಅದಕ್ಕಾಗಿ ನಾವು ಕಟ್ಟಡಗಳನ್ನು ಒಡೆಯುತ್ತಿದ್ದೇವೆ ಎನ್ನುವುದು ಸರಿಯಲ್ಲ. ಅದಕ್ಕಾಗಿ ದಯವಿಟ್ಟು ಆ ಸ್ವತ್ತು ಖಾಸಗಿಯವರದ್ದೋ, ಸಾರ್ವಜನಿಕರದ್ದೋ, ಅದಕ್ಕೆ ಪರಿಹಾರ ಕೊಟ್ಟಿದ್ದಾರೋ, ಇಲ್ಲವೋ ಸಂಬಂಧಪಟ್ಟವರಿಗೆ ನೋಟೀಸ್ ಸರ್ವೆ ಆಗಿದೆಯೋ ಇಲ್ಲವೋ ಎನ್ನುವಂಥಾದ್ದನ್ನು ಪರಿಶೀಲನೆ ಮಾಡಲು ಇದನ್ನು ಅರ್ಜಿ ಸಮಿತಿಗೆ ಒಪ್ಪಿಸಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ಇದರಿಂದಾಗಿ ಅಲ್ಲಿ ಸುಮ್ಮನೆ ಗುಂಪು ಘರ್ಷಣೆಯಾಗುವುದು ಬೇಡ. ಯುಗಾದಿ ಹಬ್ಬ ಹತ್ತಿರದಲ್ಲೇ ಇದೆ, ಆಗ ಜಗಳವಾಗುತ್ತದೆ, ಅದಾದ ಮೇಲೆ ಬಕ್ರೀದ್ ಆಗುವಾಗ ಮತ್ತೆ ಜಗಳ. ಅದಕ್ಕಾಗಿ ನನ್ನ ಸಲಹೆಯೆಂದರೆ ಇದನ್ನು ಅರ್ಜಿ ಸಮಿತಿಗೆ ಕೊಡಿ. ಅವರು ಅಲ್ಲಿಗೆ ವಿಸಿಟ್ ಮಾಡಿ, ಪರಿಹಾರ ಕೊಡದೇ ಇರತಕ್ಕಂಥಾದ್ದನ್ನು ನೋಡಲಿ, ನೋಟೀಸ್ ಕೊಟ್ಟಿದ್ದಾರೋ, ಇಲ್ಲವೋ ಎನ್ನುವುದನ್ನು ನೋಡಲಿ ಮತ್ತು ಜನರ ದೂರುಗಳು ಏನಿವೆ ಅದನ್ನೂ ನೋಡಿಕೊಂಡು ವರದಿಯನ್ನು ಕೊಟ್ಟಾಗ ಮುಂದಿನ

ಕಾರ್ಯಕ್ರಮವನ್ನು ತಾವು ಹಾಕಿಕೊಳ್ಳಿ, ಅರ್ಜಿ ಸಮಿತಿಯವರು ಅದು ಸರಿ ಎಂದು ಹೇಳಿದರೆ ತಾವು ಮುಂದಿನ ಕಾರ್ಯಕ್ರಮ ಹಾಕಿಕೊಳ್ಳಿ. ಏಕೆಂದರೆ ಅರ್ಜಿ ಸಮಿತಿಯಲ್ಲಿ ಸ್ವತಃ ಉಪಾಧ್ಯಕ್ಷರು ಇರುತ್ತಾರೆ. ಅವರು ಮತ್ತು ಸಮಿತಿಯ ಇತರ ಸದಸ್ಯರು ಹೋಗಿ ನೋಡಿಕೊಂಡು ಬಂದ ಮೇಲೆ ತಾವು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ, ಆದರೆ ನಾವು ಏನೋ ಒಂದು ಮಾಡಿ ತೋರಿಸಬೇಕು ಎಂದು ಅಲ್ಲಿ ಬುಲ್ಡೋಜರ್‌ಗಳನ್ನು ಹಚ್ಚಿದರೆ, ಯುಗಾದಿ ಹಬ್ಬದ ಸಂದರ್ಭದಲ್ಲಿ ಎಲ್ಲವನ್ನೂ ನಾಶ ಮಾಡಲು ಹೊರಟರೆ ಆಗ ಅಲ್ಲಿ ದಂಗೆಯಾಗುತ್ತದೆ. ನಾಳೆ ಯಾರಾದರೊಬ್ಬರು ಪ್ರಚೋದನೆ ಮಾಡುವವರು ಸಿಕ್ಕರೆ ಸಾಕು ಅದು ಏಳುತ್ತದೆ. ಅದಕ್ಕೆ ದಯವಿಟ್ಟು ಅಲ್ಲಿ ದಂಗೆಯಾಗಬೇಕೆಂದು ನಿಮಗೆ ಇಚ್ಛೆ ಇದ್ದರೆ ಮುಂದುವರೆಸಿ. ಇಲ್ಲ ಅಲ್ಲಿ ಶಾಂತಿಯುತವಾಗಿ ಕೆಲಸ ಆಗಬೇಕು, ವೈಡನಿಂಗ್ ಆಗಬೇಕು, ಜನರಿಗೆ ಸಹಾಯ ಸಿಗಬೇಕೆಂದರೆ ಪಿಟಿಷನ್ ಕಮಿಟಿಗೆ ರೆಫರ್ ಮಾಡಿ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) : ಬಳ್ಳಾರಿ ನಗರದಲ್ಲಿ ರಸ್ತೆಯ ಅತೀಕ್ರಮಣ ತಡೆಯುವಂತಹ ಕಾರ್ಯಕ್ರಮ ನಡೆಯುತ್ತಿದೆ. ಅತೀಕ್ರಮಣ ಮಾಡಿರುವುದನ್ನು ಗುರುತಿಸಬೇಕು, ರಸ್ತೆ ಮಧ್ಯದಿಂದ 22ವರೆ ಫೂಟ್ ಎರಡೂ ಬದಿಯಲ್ಲಿ ಗುರುತು ಹಾಕಿಸಿ 1970 ನೆ ಇಸವಿಯಲ್ಲಿ ಗುರುತುಮಾಡಲಾಗಿತ್ತು. ಗುರುತು ಮಾಡಿದಂತಹ ವಿಚಾರವನ್ನು ಎಲ್ಲರ ಸಭೆ ಕರೆದು ಚರ್ಚೆ ಮಾಡಿ ಒಂದು ರಸ್ತೆಯಲ್ಲಿ ಮಾಡಿರುವಂತಹ ಅತಿಕ್ರಮಣವನ್ನು ತೆಗೆಯಬೇಕಾದ ಕಾರ್ಯಕ್ರಮ ಜಾರಿಗೊಳಿಸಬೇಕು. ಎಲ್ಲರೂ ಸ್ವಯಂ ಬುದ್ಧಿಯಿಂದ ಒಪ್ಪಿಕೊಂಡ ಮೇಲೆ ತೆಗೆಯುವಂತಹ ಕಾರ್ಯಕ್ರಮ ನಡೆದಿದೆ ಎಂದು ನಮಗೆ ಮಾಹಿತಿ ದೊರಕಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರ ಸ್ವಂತ ಆಸ್ತಿಯನ್ನು ಅತಿಕ್ರಮಣ ಮಾಡಿ ರಸ್ತೆಗೆ ತೆರವು ಮಾಡಿಸುತ್ತಿದ್ದಾರೆಂದರೆ, ಆಗ ಪರಿಹಾರ ಕೊಡುವ ಪ್ರಶ್ನೆ ಬರುತ್ತದೆಯೇ, ಹೊರತು ಅತಿಕ್ರಮಣ ಮಾಡಿದ ಸ್ಥಳದಲ್ಲಿ ತೆರವು ಮಾಡಿದರೆ ಕೊಡುವಂತಹ ಸಂದರ್ಭ ಬರುವುದಿಲ್ಲ ಎನ್ನುವುದನ್ನು.....

ಅಧ್ಯಕ್ಷರು : ನೀವು ಹೇಳಿದ್ದನ್ನು ಅವರು ಇಲ್ಲವೆಂದು ಹೇಳಲಿಲ್ಲ, Alright, let this matter go before the Committee on Petition. There is no problem. This will be referred to the Petition Committee. There is no necessity of any further discussion on this. No clarification from the Government on this is necessary now.

★ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಲಪ್ರಭ ಎಡದಂಡೆ ಕಾಲುವೆ ವ್ಯಾಪ್ತಿಯಲ್ಲಿ 37ನೇ ಹಂಚಿಕೆಯ ಕಾಮಗಾರಿ ಮುಗಿಸಿ ಬಹಳ ವರ್ಷಗಳಾದರೂ ಇದುವರೆವಿಗೂ ಸದರಿ ಕಾಲುವೆಯಲ್ಲಿ ನೀರು ಹರಿಸದೇ ಇರುವ ಬಗ್ಗೆ ಭಾರೀ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

★ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : 37ನೇ ಡಿಸ್ಟ್ರಿಬ್ಯೂಟರಿಯು 1981-82 ರಲ್ಲಿ ಪ್ರಾರಂಭವಾಗಿ 1984-85 ರಲ್ಲಿ ಪೂರ್ಣಗೊಂಡಿರುತ್ತದೆ. ಮತ್ತು ಈ ಕಾಲುವೆಗೆ ರೂ. 367.62 ಲಕ್ಷ ಖರ್ಚಾಗಿರುತ್ತದೆ. ಈ ಡಿಸ್ಟ್ರಿಬ್ಯೂಟರಿಯ ಅಧಿಸೂಚಿತ ಕ್ಷೇತ್ರ 3676 ಹೆ. ಇರುತ್ತದೆ. ಇಂದಿನವರೆಗೆ 2376 ಹೆ. ಪ್ರದೇಶಕ್ಕೆ ಸರಿಯಾಗಿ ನೀರು ಸರಬರಾಜು ಆಗುತ್ತಿದ್ದು ಉಳಿದ 1320 ಹೆ. ಪ್ರದೇಶಕ್ಕೆ ಸರಿಯಾಗಿ ನೀರು ಪೂರೈಕೆ ಆಗುತ್ತಿಲ್ಲ. ಈ ಹಂಚಿಕೆಯು 18ನೇ ಉಪ ಹಂಚಿಕೆಯ ನಂತರ

ನೀರು ಹರಿಯುವ ಸಾಮರ್ಥ್ಯ ಕ್ಷೀಣಗೊಳ್ಳುತ್ತದೆ. 19 ರಿಂದ 32ನೇ ಉಪ ಹಂಚಿಕೆಗಳಿಗೆ ನೀರನ್ನು ಸರಿಯಾಗಿ ಹರಿಯುವಂತೆ ಮಾಡಲು 1 ರಿಂದ 18ರವರೆಗಿನ ಉಪ ಹಂಚಿಕೆಗಳನ್ನು ಮುಚ್ಚಬೇಕಾಗುತ್ತದೆ. ನೀರಾವರಿ ಉಸ್ತುವಾರಿಯಲ್ಲಿ ಎಲ್ಲ ಉಪ ಹಂಚಿಕೆಗಳಿಗೆ ನೀರೊದಗಿಸಲು ರೊಟೇಶನ್ ಪದ್ಧತಿ ಅನುಸರಿಸಲಾಗುತ್ತಿದೆ. ಈ ಹಂಚಿಕೆಯಲ್ಲಿ ಸರಿಯಾಗಿ ನೀರು ಪೂರೈಸದಿರುವುದಕ್ಕೆ ಅಲ್ಲಲ್ಲಿ ಮುಖ್ಯ ಕಾಲುವೆಯಲ್ಲಿ ನೀರು ಸೋರಿ ಹೋಗುತ್ತಿರುವುದರಿಂದ ಹಾಗೂ ಕಿ.ಮೀ 1 ರಿಂದ 5 ರವರೆಗೆ ಪ್ರತಿಕೂಲ ಶ್ರೇಣಿಯಿಂದ (uneven slope) ಕಾಲುವೆ ಏರಿಯಾಗಿರುವುದು ಕಾರಣಗಳಾಗಿವೆ. ಸದರಿ ತಾಂತ್ರಿಕ ಸಮಸ್ಯೆಗಳನ್ನು ಸರಿಪಡಿಸಲು 20.00 ಲಕ್ಷ ರೂ.ಗಳು ಬೇಕಾಗಿದ್ದು 1998-99ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸದರಿ ಕಾಮಗಾರಿಯನ್ನು ಸೇರಿಸಿ ಕೈಗೆತ್ತಿಕೊಳ್ಳಲು ಸೂಕ್ತ ಕ್ರಮ ಜರುಗಿಸಲಾಗುವುದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಸನ್ಮಾನ್ಯ ಅಧ್ಯಕ್ಷರೆ, ಇದನ್ನು ತಾವು ಪರಿಹಾರೋಪಾದಿಯಲ್ಲಿ ತಾವು ಕ್ರಮ ತೆಗೆದುಕೊಂಡಿದ್ದೀರಿ, ಬಹಳ ಸಂತೋಷ. ಆದರೆ ಇದನ್ನು 17 ಕಿ.ಮೀ. ಇರತಕ್ಕಂತಹ ಈ ಡಿಸ್ಟ್ರಿಬ್ಯೂಟರಿಗೆ ಸುಮಾರು 1984 ರಿಂದ ಇಲ್ಲಿಯವರೆಗೆ ಅವರು ಏನು ಹೇಳುತ್ತಾರೆ, ಅದರಲ್ಲಿ 20 ಪರ್ಸೆಂಟ್ ನೀರಾವರಿ ಮಾಡುತ್ತಾರೆ. ಆ ಕಾಲುವೆ ಮಾಡುವಂತಹ ಸಂದರ್ಭ ಬಂದಾಗ ಯಾರು ಮೆಷರ್‌ಮೆಂಟ್ ಬುಕ್ ಮಾಡಿದರು, ಬಿಲ್ ಯಾರು ಪೇಮೆಂಟ್ ಮಾಡಿದರು, ಅದಕ್ಕೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಯಾರೂ ಕೂಡ ಇದನ್ನು ನೋಡಲಿಲ್ಲವೇ ಹೇಗೆ? ತಪ್ಪಿತಸ್ಥರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸುಮಾರು 10 ವರ್ಷಗಳಿಂದ ಆ ಪ್ರದೇಶದಲ್ಲಿರತಕ್ಕಂತಹ ರೈತರು ಬಹಳ ತೊಂದರೆಗೀಡಾಗಿದ್ದಾರೆ. ಪ್ರತಿಯೊಬ್ಬ ರೈತರೂ ಕೂಡ ಇಲಾಖೆಯ ಮುಖ್ಯಸ್ಥರನ್ನು ಭೇಟಿ ಆದರೂ ಕೂಡ ಯಾವುದೇ ರೀತಿಯ ಪರಿಹಾರ ಸಿಗಲಿಲ್ಲ. ಈ ದೃಷ್ಟಿಯಿಂದ ಯಾರು ತಪ್ಪಿತಸ್ಥರ ಎನ್ನುವುದನ್ನು ತನಿಖೆ ಮಾಡಿ, ಗುರುತರವಾದ ಜವಾಬ್ದಾರಿ ವಹಿಸಬೇಕು. ಆ ತಪ್ಪನ್ನು ತಿದ್ದುವುದಕ್ಕೆ ತಾವು ಈಗ ಏನು ರಿಪೇರಿ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ಆದಷ್ಟು ಶೀಘ್ರವಾಗಿ ಮಾಡಬೇಕು. ಅದರ ಜೊತೆಗೆ ಮಲಪ್ರಭ ಎಡದಂಡೆ ಕಾಲುವೆಯಲ್ಲಿ ಫೆನಾನ್ಸ್‌ಷಿಯಲ್ಲಾಗಿ ಮತ್ತು ಫಿಸಿಕಲ್ಲಾಗಿ ಏನು ಪ್ರೋಗ್ರೆಸ್ ನಡೆಯುತ್ತಿದೆ ಎಂದು ದಯವಿಟ್ಟು ತಿಳಿಸಿ.

ಶ್ರೀ ಕೆ. ಎನ್. ನಾಗೇಗೌಡ: ಸನ್ಮಾನ್ಯ ಅಧ್ಯಕ್ಷರು, ಸುಮಾರು 37 ಡಿಸ್ಟ್ರಿಬ್ಯೂಟರಿಗಳಲ್ಲಿ 32 ಉಪ ಹಂಚಿಕೆಗಳಿವೆ. 3,676 ಎಕರೆಗೆ ನೀರು ಕೊಡುತ್ತಿದ್ದೇವೆ. ಇನ್ನು ಉಳಿದಿರತಕ್ಕಂಥದ್ದು 1,320 ಹೆಕ್ಟೇರ್ ಮಾತ್ರ. ಅದು ರೊಟೇಷನ್ ಸಿಸ್ಟಮ್. ಈ ಪ್ರಾಜೆಕ್ಟ್‌ನ್ನು ಮತ್ತೆ ಬ್ಲಾಕ್ ವೈಸ್ ಸಿಸ್ಟಮ್‌ನಲ್ಲಿ ಈ ಪ್ರಾಜೆಕ್ಟ್ ಮಾಡಿದ್ದೇವೆ. ಒಂದರಿಂದ 18ನೇ ಬ್ಲಾಕ್‌ವರೆಗೆ ಮುಚ್ಚಿ 'ಎ' ಬ್ಲಾಕ್ ಮುಚ್ಚಿದ ಮೇಲೆ 'ಬಿ' ಬ್ಲಾಕ್‌ಗೆ ಕೊಡಬೇಕು. ಮೇಲ್ಭಾಗದಲ್ಲಿ ಇರುವ ರೈತರು ಕೆಳಗಡೆ ಬಿಡುವುದಿಲ್ಲ. ಈ ಸಮಸ್ಯೆಯಾಗಿದೆ. ರೊಟೇಷನ್ ಪದ್ಧತಿಯಿಂದ ಟೈಲ್ ಎಂಡರ್ಸ್ ಇರುವ ಕಡೆ ಬಹಳಷ್ಟು ತೊಂದರೆಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಅದರ ಅನುಭವ ಇದೆ. ಮಾನ್ಯ ಚಿಮ್ಮನಕಟ್ಟಿಯವರು ಏನು ಕೇಳಿದ್ದಾರೆ, 20 ಪರ್ಸೆಂಟ್ ಇಲ್ಲ, We have already achieved about 60-70%. ಉಳಿದಿರತಕ್ಕಂತಹ 1,320 ಎಕರೆಗೆ ರೀಮಾಡೆಲ್ ಮಾಡಬೇಕಾಗಿದೆ, ಯಾರೂ ಸರಿಯಾಗಿ ಮಾಡಿಲ್ಲ, ಇದು ಏಕೆ, ಟೆಕ್ನಿಕಲ್ಲಾಗಿ ಪ್ರಾಪರ್ ಆಗಿ ಸರ್ವೇ ಮಾಡಿಲ್ಲ, ಲೈನ್ ಮಾಡಿಲ್ಲ ಎನ್ನುವುದನ್ನು ರೀಮಾಡಲ್ ಮಾಡುವುದಕ್ಕೆ 20 ಲಕ್ಷ ರೂಪಾಯಿ ಇಟ್ಟುಕೊಂಡಿದ್ದೇವೆ. ಅದನ್ನು ನಾನು ಎಕ್ಸಾಮಿನ್ ಮಾಡಿಸಿ ಅದು ಏಕೆ ಆಯಿತು ಎಂದು ನೋಡಿ ಈ ವರ್ಷ 1998-99 ರಲ್ಲಿ It is not a big issue. It is a small one. ನಾನು ಸಾರ್ಟ್ ಔಟ್ ಮಾಡಿ ಕೊಡುತ್ತೇನೆಂದು ಹೇಳುವುದು ಒಂದು. ತಾವು ಈ ಸಾರಿ ನಮ್ಮ ಮಲಪ್ರಭ ಯೋಜನೆಗೆ ಏನು

ಕೇಳಿದ್ದೀರಿ, ಮಲಪ್ರಭಕ್ಕೆ ಇಲ್ಲಿಯವರೆಗಿನ ಟೋಟಲ್ ಕಾಸ್ಟ್ 606 ಕೋಟಿ, ಅದರಲ್ಲಿ ಎಕ್ಸ್‌ಪೆಂಡಿಚರ್ ಮಾರ್ಚ್ 1997ರವರೆಗೆ 427 ಕೋಟಿ, ನಾವು ನೀರು ಕೊಡಬೇಕಾಗಿರುವುದು ಎರಡು ಲಕ್ಷ 20,000 ಹೆಕ್ಟೇರ್‌ಗೆ. ಈಗ ಕೊಟ್ಟಿರತಕ್ಕಂಥದ್ದು ಒಂದು ಲಕ್ಷ 64,000 ಎಕರೆಗೆ. ಈ ವರ್ಷ 50 ಕೋಟಿ ರೂಪಾಯಿ ನಾವು ಬಡ್ಜೆಟ್‌ನಲ್ಲಿ ಇಟ್ಟಿದ್ದೇವೆ. ಇಷ್ಟೊಂದು ದೊಡ್ಡ ಪ್ರಮಾಣದ ಬಡ್ಜೆಟನ್ನು ಮಲಪ್ರಭ ಯೋಜನೆಗೆ ಇಟ್ಟಿರುವುದು ಇದೇ ಮೊದಲು. ಹೋದ ವರ್ಷ ನಾವು ಜನವರಿಯಲ್ಲಿ ಮಲಪ್ರಭ ಯೋಜನೆಗೆ 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತುಂಬಾ ಒಳ್ಳೆಯ ಪ್ರೊಗ್ರೆಸ್ ಇದೆ. ಹೋದ ವರ್ಷ ಭಾರತ ಸರ್ಕಾರದಿಂದ 24 ಕೋಟಿ ರೂಪಾಯಿ ಬಂದಿತ್ತು. ಆದರೆ 12 ಕೋಟಿ ರಿಲೀಸ್ ಆಗಿದೆ, ನಾವು ಈ ಪ್ರಾಜೆಕ್ಟ್‌ನ್ನು 2,000 ಇಸವಿ ಒಳಗೆ ಪೂರ್ಣಗೊಳಿಸುತ್ತೇವೆ.

ಶ್ರೀ ಚಂದ್ರಶೇಖರ್ ಎಂ. ಮಾಮನಿ (ಉಪಾಧ್ಯಕ್ಷರು) : ಮಾನ್ಯ ಅಧ್ಯಕ್ಷರೆ, ಮಲಪ್ರಭ ಯೋಜನೆಯನ್ನು ಈಗಾಗಲೇ 2000 ಇಸವಿಯೊಳಗೆ ಕೃಷ್ಣ ಬೇಸಿನ್‌ನಲ್ಲಿ ಬರುತ್ತದೆ, ಹೋದ ವರ್ಷವೇ 32 ಕೋಟಿ ರೂಪಾಯಿ ತಾವು ಬಡ್ಜೆಟ್‌ನಲ್ಲಿ ಇಟ್ಟ ಮೇಲೆ 12 ಕೋಟಿ ರೂಪಾಯಿ ಮಾತ್ರ ರಿಲೀಸ್ ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನು 12 ಕೋಟಿ ರೂಪಾಯಿ ರಿಲೀಸ್ ಮಾಡಿಲ್ಲ. ಕೇಂದ್ರ ಸರ್ಕಾರದಿಂದ 24 ಕೋಟಿ ರೂಪಾಯಿ ಬಂದಿದೆ, ನಮ್ಮ ಸರ್ಕಾರದಿಂದ 24 ಕೋಟಿ ರೂಪಾಯಿ ನಾವು ಬಡ್ಜೆಟ್‌ನಲ್ಲಿ ಇಟ್ಟಿದ್ದೇವೆಂದು ಪದೇ ಪದೇ ಹೇಳಿಕೊಂಡು ಬಂದಿದ್ದೇವೆ. ನೀವು ಅದನ್ನು ಬಿಡುಗಡೆ ಮಾಡಿಲ್ಲ. ನಿಮ್ಮ ಬಡ್ಜೆಟ್ ಇಲ್ಲವೇ ಇಲ್ಲ. 32 ಕೋಟಿ ರೂಪಾಯಿ ಬಡ್ಜೆಟ್‌ನಲ್ಲಿ 16 ಕೋಟಿ ಎಸ್ಟಾಬ್ಲಿಷ್‌ಮೆಂಟ್‌ಗೆ ಇದೆ, 16 ಕೋಟಿ ರೂಪಾಯಿ ಇದರಲ್ಲಿ ಕೆಲಸವಾಗಬೇಕು. ಅದಕ್ಕೆ ಈ ವರ್ಷ ಮತ್ತೆ 50 ಕೋಟಿ ರೂಪಾಯಿ ಎಂದು ಹೇಳುತ್ತೀರಿ, ಮತ್ತೆ ಅರ್ಧವೂ ಆಗಲಿಲ್ಲವೆಂದರೆ ಎರಡು ಸಾವಿರ ಇಸವಿಯೊಳಗೆ ಅದು ಮುಗಿಯುವುದಕ್ಕೆ ಸಾಧ್ಯವಿಲ್ಲ. ಮಲಪ್ರಭ, ಘಟಪ್ರಭ, ಮತ್ತು ಹಿಡ್ಕಲ್ ಇವೆಲ್ಲಾ ಕೂಡಿ 143 ಟಿ ಎಮ್ ಸಿಗೆ ನೀರನ್ನು ನಾವು ಶೇಖರಣೆ ಮಾಡಬೇಕಾಗುತ್ತದೆ. ಬರೀ ಕೃಷ್ಣ ಬೇಸಿನ್‌ನಲ್ಲಿ ಇವೆಲ್ಲಾ ಬರುತ್ತವೆ. 104 ಟಿ ಎಮ್‌ಸಿ ಇದು 534 ಟಿ ಎಮ್‌ಸಿ ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಾನು ತಮ್ಮ ಮುಖಾಂತರ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ತಾವು ಮುಂದಿನ ಎರಡು ವರ್ಷಗಳಲ್ಲಿ ಇದನ್ನು ಮಾಡಿ ಕೊಡಬೇಕು. ಇನ್ನು 180 ಕೋಟಿ ರೂಪಾಯಿಗಳನ್ನು ತಾವು ಖರ್ಚು ಮಾಡಬೇಕು, ಆದರೆ ವರ್ಷಕ್ಕೆ 50-50 ಕೋಟಿ ರೂಗಳಂತೆ ಖರ್ಚು ಮಾಡಿದರೆ ಈ ಕೆಲಸ ಯಾವಾಗ ಆಗಬೇಕು? ಅದಕ್ಕೆ ದಯಮಾಡಿ ನಿರ್ದಿಷ್ಟವಾಗಿ ಉತ್ತರ ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ನಮ್ಮ ಉಪಾಧ್ಯಕ್ಷರು, ಕೇಳಿದ ಪ್ರಶ್ನೆಗೆ ಹೋದ ವರ್ಷ 1997-98ಕ್ಕೆ ನಾವು ಬಡ್ಜೆಟ್ ಇಟ್ಟಿದ್ದು 33 ಕೋಟಿ, ಅದರಲ್ಲಿ ನಾವು ಜನವರಿಗೆ we have already made an expenditure of Rs. 32 crores. 33 ಕೋಟಿ ಆದ ಮೇಲೆ, ಫೆಬ್ರವರಿ, ಮಾರ್ಚ್ ಈ ಎರಡು ತಿಂಗಳ ಬಿಲ್ ಸೇರಿಲ್ಲ, ಇದು ಒಂದು ಹೋದ ವರ್ಷ ಕೇಂದ್ರ ಸರ್ಕಾರದಿಂದ ನಮಗೆ 24 ಕೋಟಿ ಬಂದಿತ್ತು, 50 ಪರ್ಸೆಂಟ್ ಸ್ಟೇಟ್ ಗವರ್ನಮೆಂಟ್ 50 ಪರ್ಸೆಂಟ್ ಭಾರತ ಸರ್ಕಾರದಿಂದ, ಈ 12 ಕೋಟಿ ಅವರು ರಿಲೀಸ್ ಮಾಡಿದ್ದಾರೆ, ಅದನ್ನು ಖರ್ಚು ಮಾಡಿದ್ದೇವೆ. ನಮಗೆ ಈ ಪ್ರಾಜೆಕ್ಟ್ ತೆಗೆಯುವುದಕ್ಕೆ ಬೇಕಾಗಿರುವುದು 175 ಕೋಟಿ, 175 ಕೋಟಿ ರೂಪಾಯಿಗಳಲ್ಲಿ ಕ್ರಿಟಿಕಲ್ ಮತ್ತು ನಾನ್ ಕ್ರಿಟಿಕಲ್ ಎಂದು ಮಾಡಿದ್ದೇವೆ, ಅಂದರೆ 2,000 ಒಳಗೆ ವಾಟರ್ ಯುಟಲೈಸ್ ಮಾಡಿಕೊಳ್ಳುವುದಕ್ಕೆ ನಾನ್ ಕ್ರಿಟಿಕಲ್, ಮತ್ತು ಮುಗಿಸಲೇ ಬೇಕಾದ ಕೆಲಸಗಳಿಗೆ ಎಂದು ಮಾಡಿದ್ದೇವೆ. For that work Rs. 100 crores are required. 100 ಕೋಟಿಯಲ್ಲಿ ಈ ಸಾರಿ 50 ಕೋಟಿ ಇಟ್ಟಿದ್ದೇವೆ. ಇನ್ನು ಎರಡು ವರ್ಷಗಳಿವೆ, ಈ ಎರಡು ವರ್ಷಗಳಲ್ಲಿ ಖಂಡಿತವಾಗಿ ಮುಗಿಸುತ್ತೇವೆ.

ಈ) ಆಲಮಟ್ಟಿ ಜಲಾಶಯದಿಂದ ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಯ ಪ್ರಮುಖ ರಸ್ತೆಗಳ ಮೇಲೆ ಕೃಷ್ಣ ನದಿಗೆ ಅಡ್ಡಲಾಗಿ ಕಟ್ಟಿರುವ ಕೊಲಾರ -ಚಿಕ್ಕಪಡಸಲಗಿ ಸೇತುವೆಗಳು ಮುಳುಗಡೆಯಾಗುತ್ತಿರುವ ಬಗ್ಗೆ.

ಶ್ರೀ ಜೆ.ಟಿ. ಪಾಟೀಲ್ (ಬೀಳಗಿ): ಆಲಮಟ್ಟಿ ಜಲಾಶಯದಿಂದ ಬಿಜಾಪುರ ಹಾಗೂ ಬಾಗಲ ಕೋಟೆ ಜಿಲ್ಲೆಯ ಪ್ರಮುಖ ರಸ್ತೆಗಳ ಮೇಲೆ ಕೃಷ್ಣಾ ನದಿಗೆ ಅಡ್ಡಲಾಗಿ ಕಟ್ಟಿರುವ ಕೋಲಾರ- ಚಿಕ್ಕಪಡಲಗಿ ಸೇತುವೆಗಳು ಮುಳುಗಡೆಯಾಗುತ್ತಿರುವ ಬಗ್ಗೆ ಭಾರೀ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

★ಶ್ರೀ ಕೆ. ಎನ್. ನಾಗೇಗೌಡ (ಭಾರೀ ನೀರಾವರಿ ಸಚಿವರು) : ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಕೋಲಾರ ಹಾಗೂ ಚಿಕ್ಕಪಡಸಲಗಿ ಸೇತುವೆಗಳು ಮುಳುಗಡೆಗೊಳ್ಳುವುದಾದರೂ, ಈ ಸೇತುವೆಗಳನ್ನು ಎತ್ತರಿಸುವ ಕಾಮಗಾರಿಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ನಿಗಧಿತ ಕಾಮಗಾರಿಗಳಲ್ಲಿ ಸೇರಿರುವುದಿಲ್ಲ. ಆದಾಗ್ಯೂ ಕೋಲಾರ ಸೇತುವೆ ಎತ್ತರಿಸುವ ಬಗ್ಗೆ ಬಂದ ಬೇಡಿಕೆಗಳನ್ನು ಮನ್ನಿಸಿ, ಅದನ್ನು ನಿರ್ಮಿಸುವ ಸಂಬಂಧ ಸರ್ವೆ ಮತ್ತು ವಿನ್ಯಾಸದ ಕಾಮಗಾರಿಯನ್ನು ತಾಂತ್ರಿಕ ಪರಿಣತರ ಸಂಸ್ಥೆಗೆ ಫೆಬ್ರವರಿ 1998 ರಲ್ಲಿ ವಹಿಸಲಾಗಿದೆ.

ಚಿಕ್ಕಪಡಸಲಗಿ ಸೇತುವೆಯನ್ನು ಎತ್ತರಿಸಿ ನಿರ್ಮಿಸುವ ಬಗ್ಗೆ ಆ ಭಾಗದ ಜನರ ಅಗತ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮೇಲು ಸೇತುವೆ ನಿರ್ಮಾಣದ ಬಗ್ಗೆ ಇಲಾಖೆ ಪರಿಶೀಲಿಸುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಗಲಗಲಿ ಸೇತುವೆಯ ಬಲದಂಡೆ ಸಂಪರ್ಕ ರಸ್ತೆಯ ಕಾಮಗಾರಿಯನ್ನು ಶೀಘ್ರವೇ ಪ್ರಾರಂಭಿಸಿ 1999ರ ಜೂನ್ ತಿಂಗಳಿಗಿಂತಲೂ ಮೊದಲಿಗೆ ಮುಗಿಸಲು ಉದ್ದೇಶಿಸಿದೆ. ಕೋಲಾರ ಹಾಗೂ ಚಿಕ್ಕಪಡಸಲಗಿ ಸೇತುವೆಗಳನ್ನು ಪರಿಣಿತ ಸಂಸ್ಥೆಯ ವರದಿಯು ಬಂದ ನಂತರ ಕ್ರಮ ಕೈಗೊಳ್ಳಲಾಗುವುದು. ಸದರಿ ಸೇತುವೆಗಳು ವಿಶೇಷ ಸೇತುವೆಗಳಾಗುತ್ತಿದ್ದು, ಅವುಗಳನ್ನು ಜಲಾಶಯದಲ್ಲಿ ಹಿನ್ನೀರು ನಿಂತಾಗಲೂ ನಿರ್ಮಿಸಬೇಕಾಗುವುದರಿಂದ, ಅಂತಹ ವಿಶೇಷ ಸಂಸ್ಥೆಗೆ ವಹಿಸಿ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಭಾರಿ ನೀರಾವರಿ ಸಚಿವರು ಈ ರೀತಿಯಾಗಿ ನಿರ್ಲಕ್ಷ್ಯದಿಂದ ಉತ್ತರ ಕೊಟ್ಟಿರುವುದರಿಂದ ನನಗೆ ಸಮಾಧಾನ ಇಲ್ಲ. ಇದನ್ನು ನಾನು ಪ್ರತಿಭಟನೆ ಮಾಡಿ ಧರಣಿಯನ್ನು ಕೊಡುತ್ತೇನೆ. ಅವರು ಸ್ಪಷ್ಟವಾಗಿ ಹೇಳಬೇಕು ಯಾವ ಯಾವ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದಾರೆ ಎಂದು. ಅಲ್ಲಿಯವರೆಗೆ ನಾನು ಧರಣಿ ಮಾಡುತ್ತೇನೆ.

ಅಧ್ಯಕ್ಷರು : ಜಗದೀಶ್‌ರವರೆ, ಧರಣಿ ಬೇಡ, ಒಂದು ನಿಮಿಷ ಕುಳಿತುಕೊಳ್ಳಿ, ನಾನು ಇದ್ದೇನೆ, ಸರಿಯಾದ ಉತ್ತರ ಕೊಡಲು ಅವರಿಗೆ ಹೇಳುತ್ತೇನೆ ಮಾನ್ಯ ನಾಗೇಗೌಡರೆ, ನಮ್ಮ ಸ್ನೇಹಿತರಾದ ಜಗದೀಶ್ ರವರು ಒಳ್ಳೆಯ ಮನುಷ್ಯ ಅವರಿಗೆ ಸ್ಪಷ್ಟವಾದ ಉತ್ತರವನ್ನು ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಒಟ್ಟು 534 ಮೀಟರ್ ಎತ್ತರದ ಡ್ಯಾಂನಲ್ಲಿ ನೀರು ಪೂರ್ಣವಾದಾಗ ಹಿಂದಿನ ಯಾವುದೇ ಭಾಗ ನೀರಿನಲ್ಲಿ ಮುಳುಗಡೆಯಾಗುವುದಿಲ್ಲ. ಅವರ ಏರಿಯಾದಲ್ಲಿ ಎರಡು ಡ್ಯಾಂಗಳು ಬರುತ್ತವೆ, ಒಂದು ಜಮಖಂಡಿ ಹತ್ತಿರ ಇರುವ ಚಿಕ್ಕಪಡಸಲಗಿ ಮತ್ತು ಕೋಳಾರ. ಈ ಎರಡು ಬ್ರಿಡ್ಜ್‌ಗಳನ್ನು ಮಾಡಬೇಕಾದರೆ ಕನಿಷ್ಠ 530 ಲೆವಲ್‌ಗೆ ಹೈಲೆವಲ್ ಬ್ರಿಡ್ಜ್‌ಸ್

ಮಾಡಬೇಕು. ಇದನ್ನು ಮಾಡಲು ನಾವು ಪರಿಣಿತ ತಂತ್ರಜ್ಞರನ್ನು ತರದೆ ಹೋದರೆ ಸುಮಾರು 40 ರಿಂದ 45 ಹಳ್ಳಿಗಳಲ್ಲಿ ಟ್ರಾನ್ಸ್‌ಪೋರ್ಟ್ ಆಗಲು ಮತ್ತೆ ತೊಂದರೆ ಬರುತ್ತದೆ. ಅದಕ್ಕೆ ನಾನು ಹೇಳುವುದು ಈ ವಿಷಯವನ್ನು ಪರಿಣಿತರಿಗೆ ಒಪ್ಪಿಸಿದ್ದೇವೆ, ಅವರು ಸರ್ವೆ ಮಾಡಿ ನಮಗೆ ಸ್ಟೇಟ್‌ಮೆಂಟ್ ಕೊಡುತ್ತಾರೆ. It may go upto Rs. more than 150 crores for two bridges. ಲೋಕೋಪಯೋಗಿಯವರಿಗೆ ಮಾಡಿ ಎಂದು ಹೇಳಿದರೆ ಅವರು ಮಾಡಲಿಲ್ಲ. ಆ ಎರಡು ಬ್ರಿಡ್ಜ್‌ಗಳಿಗೆ 99 ರಲ್ಲಿ ನೀರು ನಿಲ್ಲಿಸುವುದಕ್ಕಿಂತ ಮುಂಚಿತವಾಗಿ ಎರಡು ವರ್ಷದಲ್ಲಿ ಈ ಕೆಲಸ ಮಾಡುತ್ತೇವೆ. ನಮ್ಮ ಹತ್ತಿರ ಹಣ ಇದೆ ಏನು ತೊಂದರೆ ಇಲ್ಲ Only we need expert's technical opinion. After technical experts opinion within two years, ie. 99ರ ಮಾನ್ಸೂನ್‌ಗಿಂತ ಮುಂಚಿತವಾಗಿ ಮುಗಿಸಿ ಕೊಡುತ್ತೇವೆ ಎಂದು ಅವರಿಗೆ ಹೇಳುತ್ತೇನೆ. ಇನ್ನೊಂದು ಈ ಬ್ರಿಡ್ಜ್‌ನ ಪಕ್ಕದಲ್ಲಿರುವ ಗಲಗಲಿ ಬ್ರಿಡ್ಜ್‌ನ್ನು ಮುಗಿಸಿದ್ದೇವೆ. ಅದಕ್ಕೆ ಬರೀ ಅಪ್ರೋಚ್ ಮಾಡಬೇಕು. ಅಪ್ರೋಚನ್ನು ಮಾಡಿಕೊಡುತ್ತೇವೆ. 99 ಕ್ಕಿಂತ ಮುಂಚಿತವಾಗಿ ಖಂಡಿತವಾಗಿ ಮುಗಿಸುತ್ತೇವೆ. ಧರಣಿ ಬೇಡ.

ಅಧ್ಯಕ್ಷರು: ಅವರ ಹತ್ತಿರ ಹಣ ಇದೆ, ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ಮಾಡತಕ್ಕಂತಹ ಕೆಲಸ ಸ್ವಲ್ಪ ನಾಜೂಕಾಗಿ ಮಾಡಬೇಕು ಎನ್ನುವ ಉದ್ದೇಶದಿಂದ ಅವರು ಕಾಯಿಸುತ್ತಿದ್ದಾರೆ. ಯಾವ ಕಾರಣದಿಂದ ಅದು ಒಂದು ದೊಡ್ಡ ರಾದ್ಧಾಂತವಾಗಬಾರದು ಎಂದು ಅವರ ಉದ್ದೇಶ.

ಶ್ರೀ ಕೆ.ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರೆ, Normal Engineers' can't do. I want purely expert engineers to tackle this.

Mr. Speaker : I appreciate it.

ಶ್ರೀ ಜಗದೀಶ ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನನ್ನ ಕಳಕಳಿ ಏನು ಎಂದರೆ, ಇನ್ನು ಒಂದು ವರ್ಷ ಉಳಿದಿದೆ, 1999ರ ಜೂನ್‌ನಲ್ಲಿ 519 ಮೀಟರ್ ಡ್ಯಾಂ ಎತ್ತರವಾಗಿದೆ, ಗೇಟ್ ಕೆಲಸವನ್ನು ಮುಗಿಸಿದ್ದಾರೆ. ಈಗ ಸುಮಾರು ಒಂದು ವರ್ಷ ಮೂರು ತಿಂಗಳಲ್ಲಿ ಮಾಡದೆ ಹೋದರೆ ಸಂಪೂರ್ಣವಾಗಿ ಅಂತರರಾಜ್ಯ , ಅಂತರ ಜಿಲ್ಲೆಯ ಸಂಪರ್ಕವನ್ನು ಕಳೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು : ಆ ಎಲ್ಲಾ ಅರಿವು ಇದೆ, ಇಂತಹ ಗಡುವಿನಲ್ಲಿ ಮಾಡಬೇಕು ಎನ್ನುವ ಕಲ್ಪನೆ ಇವರಿಗೆ ಇದೆ, ಆತುರ - ಆತುರವಾಗಿ ಮಾಡಲು ಹೋಗಿ ಅದು ಒಂದು ಹಗರಣವಾಗಿ ಮತ್ತೆ ನಾಳೆ ಅವರು ಕೋರ್ಟ್‌ಗೆ ಹೋಗಿ ಬೈಲ್ ತೆಗೆದುಕೊಳ್ಳುವುದು ಆಗಬಾರದು, ತಾವು ನೋಡುತ್ತಿದ್ದೀರಿ ಈಗಿನ ಯುಗ ಹೇಗೆ ಇದೆ ಎಂದು. ಅವರು ನಮ್ಮ ಸ್ನೇಹಿತರು ಅವರಿಗೆ ಕೆಟ್ಟ ಹೆಸರು ಬರಬಾರದು ಎನ್ನುವುದು ನನ್ನ ಉದ್ದೇಶ, ಅವರಿಗೂ ಒಳ್ಳೆಯದಾಗಬೇಕು. ಗೌಡ್ರೇ, ನಾನು ನಿಮಗೆ ಕೆಟ್ಟದಾಗಿ ಹೇಳಲಿಲ್ಲ, ನಿಮ್ಮ ಒಳ್ಳೆಯದಕ್ಕೆ ಹೇಳಿದ್ದೇನೆ, ಹಾಗೆ ಆಗಬಾರದು ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಮಾಡುತ್ತಿದ್ದೀರಿ ಎಂದು ಹೇಳಿದ್ದೇನೆ.

ಶ್ರೀ ಕೆ. ಎನ್. ನಾಗೇಗೌಡ: ಮಾನ್ಯ ಅಧ್ಯಕ್ಷರೆ, ತಾವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಾವಧಿ ಚರ್ಚೆ. ಮಾನ್ಯ ಈಶ್ವರಪ್ಪನವರೇ ತಾವು ಏನು ಹೇಳಬೇಕು ಹೇಳಿ.

7) ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ

ಮೈಸೂರು ಪೇಪರ್ ಮಿಲ್‌ನಲ್ಲಿ ವಿದೇಶಿ ಫಲ್ಪ್ ಖರೀದಿಯಲ್ಲಿ ಆಗಿದೆ ಎನ್ನಲಾದ ಅವ್ಯವಹಾರ

★ ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೆ, ಮೈಸೂರು ಪೇಪರ್ ಮಿಲ್‌ನ ಖರೀದಿ ಮತ್ತು ವ್ಯಾಪಾರ ಎರಡರಲ್ಲೂ ಸಾಕಷ್ಟು ಪೋಸ್ ಆಗಿರುವಂತಹ ದಾಖಲೆಗಳನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತೇನೆ. ಏಕ್‌ಮನ್ ಆ್ಯಂಡ್ ಕೋ-ಸ್ವೀಡನ್ ಈ ಸಂಸ್ಥೆಯ ಭಾರತದ ಎಜೆಂಟ್ ಕಂಪನಿಯಾದ ಶ್ರೀರಂಗ ಮರ್ಕಂಟೈಲ್ ಇಂಡಿಯಾ ಎನ್ನತಕ್ಕಂತಹ ಸಂಸ್ಥೆಯು ವಿದೇಶಿ ಫಲ್ಪ್‌ನ್ನು ಮೈಸೂರು ಪೇಪರ್ ಮಿಲ್‌ಗೆ ಕಳುಹಿಸುತ್ತಾ ಇದೆ. ಈ ಸಂಸ್ಥೆಯು ಮೈಸೂರ ಪೇಪರ್ ಮಿಲ್‌ನ ಮ್ಯಾನೇಜ್‌ಮೆಂಟನ್ನು ಸಂಪೂರ್ಣವಾಗಿ ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ ಎನ್ನುವುದಕ್ಕೆ ಅನೇಕ ದಾಖಲೆಗಳನ್ನು ತಮ್ಮ ಮುಂದೆ ಕೊಡಲು ನಾನು ಇಚ್ಛೆಪಡುತ್ತೇನೆ. ಮೈಸೂರ ಪೇಪರ್ ಮಿಲ್‌ನ ಮ್ಯಾನೇಜ್‌ಮೆಂಟ್ ಈ ಕಂಪನಿಗೆ ಯಾವ ರೀತಿಯ ಅನುಕೂಲಗಳನ್ನು ಕೊಟ್ಟಿದೆ ಎಂದರೆ, ಮೈಸೂರ್ ಪೇಪರ್ ಮಿಲ್‌ನ ಕೋಟ್ಯಂತರ ರೂಪಾಯಿಗಳನ್ನು ಈ ಕಂಪನಿ ಲೂಟಿ ಮಾಡಿದೆ ಎನ್ನುವಂತಹ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಕಳೆದ 9 ವರ್ಷಗಳಿಂದ ಈ ಶ್ರೀರಂಗ ಮರ್ಕಂಟೈಲ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಕಂಪನಿ ಇದು ಮೈಸೂರ್ ಪೇಪರ್ ಮಿಲ್‌ಗೆ ವಿದೇಶಿ ಫಲ್ಪ್ ಅನ್ನು ಸರಬರಾಜು ಮಾಡುತ್ತಾ ಬಂದಿದೆ. ಇದರ ಒಂದೊಂದು ಅವ್ಯವಹಾರಗಳನ್ನು ಇಲ್ಲಿ ಹೇಳುತ್ತಾ ಹೋದರೆ ಬಹಳ ಇವೆ. 15.11.89ರ ದಿನಾಂಕದಲ್ಲಿ ಇಲ್ಲಿಯ ಸೀನಿಯರ್ ಮ್ಯಾನೇಜರ್ ಹೇಳುತ್ತಾರೆ, ಈ ಸಂಸ್ಥೆ ಜೊತೆಗಿನ ಎಂಪಿ ಎಂಬ ಅನುಭವ ಮೊದಲಿನಿಂದ ಒಳ್ಳೆಯದಿಲ್ಲ ಎಂದು ಸ್ಪಷ್ಟವಾದ ರಿಕಾಡ್‌ನೊಂದಿಗೆ ಹೇಳುತ್ತಾರೆ. 6.2.89ಕ್ಕೆ since our experience with Srirang Corporation was not good, ಇದು ತುಂಬಾ ಸ್ಪಷ್ಟವಾಗಿ ದಾಖಲೆಯಲ್ಲಿ ಇದೆ. ಇದೇ ರೀತಿ 5.12.89 ಕ್ಕೆ 1600 ಮೆಟ್ರಿಕ್ ಟನ್ 365 ಯು ಎಸ್ ಡಾಲರ್ ಪ್ರಕಾರ ಕೊಂಡುಕೊಳ್ಳಲು ಆರ್ಡರ್ ಕೊಟ್ಟಿದ್ದಾರೆ. ಅದೇ ರೀತಿ 13.1.90 ರಲ್ಲಿ ಜನರಲ್ ಮ್ಯಾನೇಜರ್ ಹೇಳಿರುವ ರಿಪೋರ್ಟ್ ನನ್ನ ಹತ್ತಿರ ಇದೆ. ಆ ರಿಪೋರ್ಟ್‌ನ ಪ್ರಕಾರ ಆ ವಸ್ತುವಿನ ಗುಣ ಮಟ್ಟ ಸರಿಯಿಲ್ಲ ಎನ್ನುವುದು ಅದರಲ್ಲಿ ಇದೆ. ಹಾಗೆಯೇ 11.11.91 ರಲ್ಲಿ ಲೋಕಾಯುಕ್ತದಲ್ಲಿ ಇದರ ವಿಚಾರಣೆ ನಡೆದಿದೆ. ಇದು ಸಂಸ್ಥೆಯ ಇತಿಹಾಸ. 1994 ರಲ್ಲಿ 375 ಯು ಎಸ್ ಡಾಲರ ಮೇ: ಎಲೋಗ್ ಹ್ಯಾನ್‌ಸನ್ ಎನ್ನುವಂತಹ ಕಂಪನಿ, ಅದು ಕಡಿಮೆ ರೇಟಿನ ಟೆಂಡರ್ ಕೊಟ್ಟರೂ ಕೂಡ 398 ಯು ಎಸ್ ಡಾಲರ್ ಇರುವಂತಹ ಈ ಶ್ರೀರಂಗ ಮರ್ಕಂಟೈಲ್ ಕಂಪನಿಗೆ ಆರ್ಡರ್ ಕೊಟ್ಟಿದ್ದಾರೆ. 15.7 ಕೋಟಿ ರೂಪಾಯಿಗಳಷ್ಟು ಆರ್ಡರ್ ಕೊಟ್ಟಿದ್ದಾರೆ. ಮತ್ತೆ 15.7 ಕೋಟಿ ರೂ.ಗಳ ಆರ್ಡರ್ ಕೊಟ್ಟಿದ್ದಾರೆ. ಹೀಗೆ ಆರ್ಡರ್ ಕೊಡುವ ಸಂದರ್ಭದಲ್ಲಿ 1994 ರೊಳಗಡೆ ಫಲ್ಪಗಳು ಬರಬೇಕು ಎನ್ನುವಂತಹ ಕಂಡಿಷನ್ ಹಾಕಿದರೂ ಕೂಡ ಮೇ ತಿಂಗಳಲ್ಲಿ ಬಾರದೆ ಜೂನ್ ತಿಂಗಳಲ್ಲಿ ಬಂದಿದೆ, ಎರಡು ತಿಂಗಳು ತಡವಾಗಿ ಬಂದಿದೆ. ಅಲ್ಲದೆ ನಾವು ಹೇಳಿದ ಪ್ರಕಾರ ವಸ್ತುಗಳ ಗುಣಮಟ್ಟ ಇಲ್ಲ ಎನ್ನುವಂತಹ ವರದಿ ನನ್ನ ಹತ್ತಿರ ಇದೆ. ಇದರಿಂದ ಸಂಸ್ಥೆಗೆ 9 ಕೋಟಿ ರೂ.ಗಳಷ್ಟು ನಷ್ಟವಾಗಿದೆ. ಈ ರೀತಿ 29.7.94ರ ಟಿಸ್ಟ್ ರಿಪೋರ್ಟ್‌ನಲ್ಲಿ ಕಳಪೆ ದರ್ಜೆಯ ಫಲ್ಪ್ ಬಂದಿದೆ ಎಂದು ಎಫ್ ಓ ಆರ್ ಡಿ 102 ಸಿ ಪಿ ಎಂ ಪಿ ಯಿಂದ ರಿಪೋರ್ಟ್ ಬಂದಿದೆ. ಕೊನೆಗೆ ಈ ಸಂಸ್ಥೆ 81.24 ಲಕ್ಷಗಳಷ್ಟು ದಂಡ ಕಟ್ಟಬೇಕು ಎಂದು ಇರುವ ದಾಖಲೆ ಕೂಡ ನನ್ನ ಹತ್ತಿರ ಇದೆ, ಆ ಸಂಸ್ಥೆಯಿಂದ ಇಲ್ಲಿಯವರೆಗೆ ದಂಡವನ್ನು ಕೂಡ ವಸೂಲಿ ಮಾಡಿಲ್ಲ. ಇಷ್ಟೆಲ್ಲಾ ಹಳೆಯ

ದಾಖಲೆಗಳು ಇವೆ, ಒಳ್ಳೆಯ ಗುಣಮಟ್ಟ ಕೊಟ್ಟಿಲ್ಲ, ಸಮಯಕ್ಕೆ ಸರಿಯಾಗಿ ಕೊಟ್ಟಿಲ್ಲ, ಟೆಂಡರ್ ಕಡಿಮೆ ಇದ್ದರೂ ಕೂಡ ಜಾಸ್ತಿ ಕೊಟ್ಟಿದ್ದಾರೆ. ಈ ರೀತಿ ಅಧಿಕಾರಿಗಳು ಕೊಟ್ಟವರದಿ ನನ್ನ ಹತ್ತಿರ ಇದೆ. ಈ ಸಂಸ್ಥೆ ಸರಿಯಾಗಿ ಇಲ್ಲ ಎಂದು ಗೊತ್ತಿದ್ದರೂ ಕೂಡ ಈಗ ಬಂದಿರುವ ಸಿ ಎಂ ಡಿ 21.9.96ರ ಇಚ್ಛೆಗೆ 5000 ಎ ಡಿ ಎಂಟಿ 7.65 ಕೋಟಿಯಷ್ಟು ಆರ್ಡರ್ ಕೊಟ್ಟಿದ್ದಾರೆ. 8.9.97 ರಲ್ಲಿ 5500 ಎ ಡಿ ಎಂಟಿ ಅಂದರೆ 8.47 ಕೋಟಿಯಷ್ಟು ಆರ್ಡರ್ ಕೊಟ್ಟಿದ್ದಾರೆ. 4.7.97 ರಲ್ಲಿ ಎರಡು ಸಾವಿರ ಎ ಡಿ ಎಂಟಿ ಅಂದರೆ 3.64 ಕೋಟಿ ಯಷ್ಟು ಆರ್ಡರ್ ಕೊಟ್ಟಿದ್ದಾರೆ. ಒಟ್ಟು 19.37 ಕೋಟಿಯಷ್ಟು ಆರ್ಡರ್ ಕೊಟ್ಟಿದ್ದಾರೆ. ಆರ್ಡರ್ ಕೊಡುವ ಸಂದರ್ಭದಲ್ಲಿ ಎಲೋಗ್ ಹ್ಯಾನ್‌ಸನ್ 409 ಯು ಎಸ್ ಡಾಲರ್‌ಗೆ ಟೇಷನ್ ಕೊಟ್ಟಿದ್ದರೂ ಸಹ ಆರ್ಡರ್ ದಾಖಲೆ ನನ್ನ ಹತ್ತಿರ ಇದೆ. ಈ ರೀತಿ ಆರ್ಡರ್ ಕೊಟ್ಟ ನಂತರ ಶ್ರೀ ರಂಗ ಮಾರ್ಕೆಂಟೈಲ್ ಕಂಪೆನಿಯವರು ಒಂದು ಪತ್ರ ಬರೆದಿದ್ದಾರೆ. ನಮಗೆ ಆ ರೀತಿ ಇನ್ಸ್‌ಪೆಕ್ಷನ್ ಮಾಡದೆ ಫಲ್ಪ್‌ನ್ನು ಸಪ್ಲೈ ಮಾಡಲು ಅವಕಾಶ ಕೊಡಿ ಎಂದು ಪತ್ರವನ್ನು ಬರೆಯುತ್ತಾರೆ. 20. 10.95 ರಲ್ಲಿ ಡೈರೆಕ್ಟರ್, ಫೆನಾನ್ಸ್‌ರವರು ಅದಕ್ಕೆ ಉತ್ತರವನ್ನು ಬರೆಯುತ್ತಾರೆ. "After a detailed deliberation, MPM has taken a policy decision to take this third party inspection and hence you are hereby advised to strictly follow our instructions regarding third party inspection clause in our purchase orders". ಈ ರೀತಿ ಪಾಲಿಸಿ ಆರ್ಡರ್ ಇದೆ, ಅದರ ಪ್ರಕಾರ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಮಾಡಿಸಲೇ ಬೇಕೆಂದು ಹೇಳುತ್ತಾರೆ. ಆದರೂ ಮತ್ತೊಮ್ಮೆ ಅವರು ನಮ್ಮ ಸಾಮಾಗ್ರಿಗಳು ಈಗಾಗಲೇ ರೆಡಿಯಾಗಿದೆ, ಶಿಫ್‌ನಲ್ಲಿ ಬರುವುದಕ್ಕೆ ತಕ್ಷಣ ಅವಕಾಶ ಮಾಡಿಕೊಡಿ, ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಬೇಡವೆಂದು ಬರೆಯುತ್ತಾರೆ ಆಗ ಜನರಲ್ ಮ್ಯಾನೇಜರ್, ಪ್ರೊಡಕ್ಷನ್‌ರವರು 10. 11.96ರಲ್ಲಿ ಒಂದು ರಿಪೋರ್ಟ್‌ನ್ನು ಹಾಕುತ್ತಿದ್ದಾರೆ. "..... but with a provision to levy penalty if the specifications are not met. Please note that this is only a one time arrangement." ಇದೊಮ್ಮೆ ಮಾತ್ರ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಇಲ್ಲದೆ ತಮ್ಮ ಮಾಲನ್ನು ತರಲು ಅವಶ್ಯಕ ಮಾಡಿ ಕೊಡುತ್ತಿದ್ದೇವೆ; ತಾವು ಸ್ಪೆಸಿಫಿಕೇಷನ್ ಪ್ರಕಾರ ಮಾಲನ್ನು ಒದಗಿಸದಿದ್ದರೆ ನಿಮಗೆ ಪೆನಾಲ್ಟಿಯನ್ನು ಹಾಕುತ್ತೇವೆಂದು ಆ ಕಂಡೀಷನ್ ಪ್ರಕಾರ ಅವರಿಗೆ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಇಲ್ಲದೆ ಮಾಲನ್ನು ತರಲು ಅವಕಾಶ ಮಾಡಿಕೊಡಬಹುದೆಂದು ಜನರಲ್ ಮ್ಯಾನೇಜರ್, ಇನ್ಸ್‌ಪೆಕ್ಷನ್‌ರವರು ಸಿ ಎಂ. ಡಿ. ರವರಿಗೆ 13. 11.96 ರಲ್ಲಿ ವರದಿ ಕೊಡುತ್ತಾರೆ. 13. 11.96 ರಲ್ಲಿ ಸಿ. ಎಂ. ಡಿ ರವರು ಆರ್ಡರ್ ಮಾಡುತ್ತಾರೆ. ಆ ರೀತಿ ಆರ್ಡರ್‌ನ್ನು 13. 11.96ಕ್ಕೆ ಮಾಡಿದ್ದರೂ ಸಹ ಆ ಕಂಪನಿಯವರಿಗೆ ಎರಡು ದಿವಸ ಮುಂಚೆ ಅಂದರೆ 11. 11.96ಕ್ಕೆ ಆ ಪತ್ರ ಬಹಳ ಆಶ್ಚರ್ಯವಾಗಿ ಹೋಗಿರುತ್ತದೆ. ಸಾಮಾಗ್ರಿಯನ್ನು ಮೂರು ಕನ್‌ಸೈನ್‌ಮೆಂಟ್‌ನಲ್ಲಿ ಕಳುಹಿಸಿಕೊಟ್ಟಿದ್ದಾರೆ. 25. 3. 97 ರಲ್ಲಿ ಒಂದು ಬಂದಿದೆ, ಅದರಲ್ಲಿ the pulp properties are appreciably good except for permix and tear factor. Premix is lower than specification, 150 ml against 200 pulp 25 or 75. ಈ ರೀತಿ ಕ್ವಾಲಿಟಿ ಸರಿಯಾಗಿಲ್ಲವೆಂದು ಅಲ್ಲಿಯ ಡಿ. ಎನ್. ಉಪಾಧ್ಯಾಯ ಎನ್ನತಕ್ಕ ಕ್ವಾಲಿಟಿ ಕಂಟ್ರೋಲರ್‌ರವರು ವರದಿ ಕೊಡುತ್ತಾರೆ. ಎಂದೂ ಸಹ ಅವರು ವರದಿಯನ್ನು ಕೊಟ್ಟಿದ್ದಾರೆ. The matter may be taken up with supplier ಎರಡನೆಯ ವರದಿಯನ್ನು ಸಹ ಅದೇ ರೀತಿ ಕೊಟ್ಟಿದ್ದಾರೆ. Fearlessly lower than the specification - 120 as against 200 plus 25 ಎಂದು ವರದಿಯನ್ನು ಕೊಟ್ಟಿದ್ದಾರೆ. ಮೂರನೇ ಕನ್‌ಸೈನ್‌ಮೆಂಟ್

ಸಹ ಕ್ವಾಲಿಟಿ ಸರಿಯಾಗಿಲ್ಲದೆ ಬಂದಿದೆಯೆಂದು ವರದಿ ಕೊಡುತ್ತಾರೆ. ಆದರೆ ಈ ಮ್ಯಾನೇಜಿಂಗ್ ಕಮಿಟಿಯವರು ಶ್ರೀ ರಂಗ್ ಎಂಟರ್‌ಪೈಸರ್ಸ್ ಮರ್ಕಂಟೈಲ್ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಿಲ್ಲ. ಲ್ಯಾಬೊರೇಟರಿ ವರದಿಯನ್ನು ಯಾವ ಐ.ಜಿ. ಎಂ., ಡಿ. ಎನ್. ಉಪಾಧ್ಯಾಯ ಎಂಬುವವರು ಕಳುಹಿಸುತ್ತಾರೋ ಅವರನ್ನು ಡಿಸ್‌ಮಿಸ್ ಮಾಡುತ್ತಾರೆ. ನೀನು ಕ್ವಾಲಿಟಿ ಸರಿಯಾಗಿಲ್ಲವೆಂದು ವರದಿ ಕೊಟ್ಟಿದ್ದೀಯ ಆದ್ದರಿಂದ ಡಿಸ್‌ಮಿಸ್ ಮಾಡಿದ್ದೇವೆಂದು ಆರ್ಡರ್ ಮಾಡುತ್ತಾರೆ. ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಬೇಕು ಎಂದು ಯಾವ ಪಾಲಿಸಿ ಡಿಸಿಷನ್ ಇತ್ತೋ ಅದನ್ನು ಕ್ವಾಲಿಟಿ ಸರಿಯಾಗಿಲ್ಲದಿದ್ದರೂ ಓವರ್‌ಲುಕ್ ಮಾಡಿ ಹತ್ತೊಂಭತ್ತು ಮುಕ್ಕಾಲು ಕೋಟಿಯನ್ನು ಆರ್ಡರ್‌ನ್ನು ಅವರಿಗೆ ಕೊಡುತ್ತಾರೆ. ಈ ಕಂಪನಿಯ ಕೃಪಾಕಟಾಕ್ಷದಿಂದ ಸಿ. ಎಂ. ಡಿ. ಯವರು ಮತ್ತು ಕೆಲವರು ವಿದೇಶಕ್ಕೆ ಹೋಗಿಬರುತ್ತಾರೆ. ಆ ಏರ್ ಟಿಕೇಟುಗಳು ನನ್ನ ಹತ್ತಿರ ಇದೆ. ಸುಮಾರು 25 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಬಂದಿದ್ದಾರೆ. ಒಂದು ತಿಂಗಳು ವಿದೇಶ ಪ್ರವಾಸ ಮಾಡಿಕೊಂಡು ಬಂದಿದ್ದಾರೆ. ಅನಂತರ ಬೋರ್ಡ್‌ನಲ್ಲಿ ಒಂದು ಮಾಹಿತಿಯನ್ನು ಕೊಟ್ಟಿದ್ದಾರೆ. 6.1.98 ರ ಪ್ರೊಸೀಡಿಂಗ್ಸ್ ನನ್ನ ಹತ್ತಿರ ಇದೆ, ಅದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. 6.1.98ರ ಬೋರ್ಡ್ ಮೀಟಿಂಗ್‌ನಲ್ಲಿ ಸಿ ಎಂ. ಡಿ. ಯವರು ಈ ರೀತಿ ವರದ ಕೊಡುತ್ತಾರೆ.

" It was informed to the Board that the Company has been importing CTMP from Canada. Because of some baseless complaints being made by certain quarters earlier with regard to the quality, the company appointed a third party M/s SGS Canada to test the quality of pulp for which 2 dollars per tonne of CTMP was being paid to them as inspection fee. The company is spending nearly Rs. 30 to 40 lakhs every year on this account only. Eventhough the pulp received from Canada is of very good quality, due to poor supply from the past 9 years the company was insisting for inspection. During the visit enquiry was made about the quality control system that is being follwed by the mill and it is found to be absolutely satisfactory and hence it was felt that there is no need to waste our money for third party inspection."

ಈ ಒಂದೇ ಕಂಪನಿ ಅನೇಕ ವರ್ಷಗಳಿಂದ ಎಂ. ಪಿ. ಎಂ. ಗೆ ಕೋಟಿಗಟ್ಟಲೆ ನಷ್ಟವನ್ನು ಮಾಡಿಕೊಂಡು ಬಂದಿತ್ತೋ, ಪಲ್ಪ್ ಪರ್ಚೇಸ್‌ನಲ್ಲಿ ಮೊನೊಪಲಿ ಮಾಡಿಕೊಂಡಿದ್ದರೋ, ಮ್ಯಾನೇಜಿಂಗ್ ಕಮಿಟಿ ಮತ್ತು ಈ ಸಂಸ್ಥೆಗೂ ಹೊಂದಾಣಿಕೆಯಿದೆಯೆಂದು ಅನೇಕ ದಾಖಲೆಗಳಿದ್ದರೂ, ಹಿಂದೆ ಒದಗಿಸಿದ್ದಂಥ ಸಾಮಾಗ್ರಿಗಳ ಕ್ವಾಲಿಟಿ ಸರಿಯಾಗಿಲ್ಲವೆಂದು ಅನೇಕ ವರದಿಗಳಿದ್ದರೂ ಹಣವನ್ನು ಹೆಚ್ಚಿಗೆ ಕೊಟ್ಟಿದ್ದಂಥ ವರದಿಗಳಿದ್ದರೂ, ಸಮಯಕ್ಕೆ ಸರಿಯಾಗಿ ಮಾಲನ್ನು ಕೊಟ್ಟಿಲ್ಲದಿರುವ ಬಗ್ಗೆ ವರದಿಗಳಿದ್ದರು, ಆ ಸಂಸ್ಥೆಯ ಬಗ್ಗೆ ಸಿ ಎಂ. ಡಿಯವರು ಶಹಭಾಶ್ ಗಿರಿಯನ್ನು ಕೊಟ್ಟು ಇದುವರೆಗೇನು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಆಗುತ್ತಿತ್ತೋ ಅದು ಬೇಡ ಎಂದು ವರದಿಯನ್ನು ಕೊಡುವಂಥ ಮ್ಯಾನೇಜಿಂಗ್ ಕಮಿಟಿಯ ಸಿ ಎಂ. ಡಿ ಇದ್ದರೆ ಈ ಸಂಸ್ಥೆಯು ಉದ್ಧಾರವಾಗುತ್ತದೆಯೇ ಎಂಬ ಪ್ರಶ್ನೆಯನ್ನು ಸರ್ಕಾರದಲ್ಲಿ ಕೇಳಬಯಸುತ್ತೇನೆ.

ಈ ರೀತಿ ಆಗಿರುವ ಈ ಸಂಸ್ಥೆಯು ಉಳಿಯಬೇಕಾದರೆ, ಈ ರೀತಿ ಮಾಹಿತಿಯನ್ನು ಕೊಟ್ಟು ಪ್ರೊಸೀಡಿಂಗ್ಸ್ ಮಾಡಿಸಿದ್ದಾರೆ. ಅದರಂತೆ ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಬೇಡ ಎನ್ನತಕ್ಕ ತೀರ್ಮಾನ ಒಂದು ವೇಳೆ ಪಾಲಿಸಿ ಡಿಸಿಷನ್ ಆಗಿಹೋದರೆ, ಅದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟರೆ ಆ ಮೈಸೂರು ಕಾಗದದ ಕಾರ್ಖಾನೆಯನ್ನು ಮುಚ್ಚುವ ಉದ್ಘಾಟನಾ ಸಮಾರಂಭಕ್ಕೆ ನಾಂದಿಯನ್ನು ಹಾಕಿದಂತಾಗುತ್ತದೆ. ಖಂಡಿತವಾಗಿ ಈ ಸಂಸ್ಥೆ ಮುಚ್ಚಿಹೋಗುತ್ತದೆ. ಈ ರೀತಿ ಇನ್ಸ್‌ಪೆಕ್ಷನ್ ಇದ್ದಾಗಲೇ ಇಷ್ಟು ಕೆಟ್ಟ ಕ್ವಾಲಿಟಿ ಸಾಮಾಗ್ರಿಯನ್ನು ಕಳುಹಿಸಿಕೊಡುತ್ತಿದ್ದಾರೆ. ಇನ್ನು ಇನ್ಸ್‌ಪೆಕ್ಷನ್ ಇಲ್ಲದಿದ್ದರೆ ಯಾರು ಎಷ್ಟು ಬೇಕಾದರೂ ಮೇಯಬಹುದು ಎನ್ನತಕ್ಕ ವಾತಾವರಣ ನಿರ್ಮಾಣವಾಗುತ್ತದೆ. ಕಳೆದ ಒಂಭತ್ತು ವರ್ಷಗಳಲ್ಲಿ ಈ ಸಂಸ್ಥೆಗೆ ಯಾವ್ಯಾವ ರೀತಿಯಲ್ಲಿ ದ್ರೋಹವನ್ನು ಮಾಡಿಕೊಂಡು ಬಂದಿದ್ದಾರೆ ಎಂಬ ಬಗ್ಗೆ ಸ್ವಷ್ಟವಾದ ದಾಖಲೆಗಳನ್ನು ಇಟ್ಟಿದ್ದೇನೆ. ಮೊದಲನೆಯದಾಗಿ, ಇದರ ವ್ಯವಹಾರ ಸರಿಯಾಗಿಲ್ಲವೆಂದು ಅದರ ಸೀನಿಯರ್ ಮ್ಯಾನೇಜರ್‌ರವರೇ ಹೇಳಿದ್ದಾರೆ. ಎರಡನೇಯದಾಗಿ ಅದರ ಬಗ್ಗೆ ಲೋಕಾಯುಕ್ತದಲ್ಲಿ ವಿಚಾರಣೆ ನಡೆಯುತ್ತಿದೆ. ಮೂರನೇಯದಾಗಿ ಪ್ರೊಡಕ್ಷನ್ ಕ್ವಾಲಿಟಿ ಸರಿಯಾಗಿ ಇಲ್ಲವೆಂಬ ಬಗ್ಗೆ ಅನೇಕ ದಾಖಲೆಗಳಿವೆ. ಇಷ್ಟೆಲ್ಲಾ ಇದ್ದರು ಸಹ ಈ ಸಂಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಬಹಳ ಕಷ್ಟವಾಗುತ್ತದೆ. ಈ ಸಂಸ್ಥೆಯವರು ಶ್ರೀ ರಂಗ ಮರ್ಕೆಂಟೈಲ್ ಕಂಪನಿಯೊಂದಿಗೇನು ವ್ಯವಹಾರವನ್ನು ಇಟ್ಟುಕೊಂಡಿದ್ದಾರೆ ಅದನ್ನು ಬ್ಲಾಕ್ ಲಿಸ್ಟ್‌ನಲ್ಲಿಟ್ಟು ಈ ಸಂಸ್ಥೆಯ ಜೊತೆಗೆ ಪತ್ರವ್ಯವಹಾರವನ್ನು ನಿಲ್ಲಿಸಿ ಇದುವರೆಗೆ ಏನು ಎಂ.ಪಿ. ಎಂ.ಗೆ ನಷ್ಟವಾಗಿದೆ ಅದನ್ನು ಆ ಕಂಪನಿಯಿಂದ ಭರಿಸಿಕೊಳ್ಳಬೇಕು. ಎರಡನೆಯದಾಗಿ, ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಬೇಡವೆಂದು ಇಲ್ಲಿನ ಸಿ ಎಂ. ಡಿ. ಯವರೇನು ವರದಿ ಕೊಡುತ್ತಿದ್ದಾರೆ ಅದಕ್ಕೆ ಬದಲಾಗಿ ನಾವು ಥರ್ಡ್ ಪಾರ್ಟಿ ಇನ್ಸ್‌ಪೆಕ್ಷನ್ ಇಟ್ಟುಕೊಂಡೇ ತೀರುತ್ತೇವೆ ಎನ್ನತಕ್ಕ ಭರವಸೆಯನ್ನು ಸರ್ಕಾರದಿಂದ ನಿರೀಕ್ಷಿಸುತ್ತೇನೆ. ಮೂರನೆಯದಾಗಿ, ಈ ಸಂಸ್ಥೆಯನ್ನು ಶ್ರೀ ರಂಗ ಮರ್ಕೆಂಟೈಲ್ ಕಂಪನಿ ಮತ್ತು ಎಕ್‌ಮನ್ ಅಂಡ್ ಸ್ವೀಡರ್ಸ್ ಎನ್ನತಕ್ಕ ವಿದೇಶಿ ಕಂಪನಿಯ ಜೊತೆಗೆ ಹೊಂದಾಣಿಕೆ ಮಾಡಿಕೊಂಡು ಸಂಸ್ಥೆಯ ಖರೀದಿಯಲ್ಲಿ ಆ ಕಂಪನಿಗಳೊಂದಿಗೆ ಶಾಮೀಲಾಗಿದ್ದಾರೆ ಅಂಥ ಸಿ. ಎಂ. ಡಿ. ಯವರನ್ನು ಅಮಾನತ್ತಿನಲ್ಲಿಡಬೇಕು ಮತ್ತು ಅವರ ಬಗ್ಗೆ ವಿಚಾರಣೆ ಮಾಡಬೇಕು. ಎನ್‌ಕ್ವೈರಿ ಯಾರ ಮುಖಾಂತರ ಆಗಬೇಕೆಂದರೆ, ಇದು ವಿದೇಶಿ ಫಲ್ಪ್ ಬರುತ್ತಿರತಕ್ಕಂಥ ಸಂದರ್ಭವಾಗಿರುವುದರಿಂದ ಅಂತರರಾಷ್ಟ್ರೀಯ ವ್ಯವಹಾರವೂ ಕೂಡ ಆಗಿರುವ ಸಂದರ್ಭವಾಗಿರುವುದರಿಂದ ಇದನ್ನು ಸಿ. ಬಿ. ಐ. ಮುಖಾಂತರವೇ ತನಿಖೆಯಾಗಬೇಕೆಂದು ಒತ್ತಾಯಪಡಿಸುತ್ತೇನೆ. ಇವಿಷ್ಟು ಖರೀದಿಗೆ ಸಂಬಂಧಪಟ್ಟದ್ದು. ಇನ್ನು ಮಾರಾಟಕ್ಕೆ ಸಂಬಂಧಪಟ್ಟಿರುವ ಹಾಗೆ ಒಂದೇ ಒಂದು ಮುಖ್ಯವಾದ ಅಂಶವನ್ನು ತಮ್ಮ ಮೂಲಕ ಹೇಳಬಯಸುತ್ತೇನೆ. ಈ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿದ್ದ ಅಧಿಕಾರಿಗಳಿಂದ ಸ್ವ ಇಚ್ಛೆ ರಾಜೀನಾಮೆಯನ್ನು ಪಡೆದುಕೊಂಡು ಅವರು ಮಾಡಿರುವ ಅಂಬಿಕಾ ಎಂಟರ್‌ಪೈಸಸ್‌ಗೆ ಪೇಪರ್‌ನ್ನು ಮಾರಾಟ ಮಾಡುವಂಥ ವ್ಯವಹಾರವನ್ನು ಮಾಡುತ್ತಿದ್ದಾರೆ. ಅಂಬಿಕಾ ಎಂಟರ್ ಪೈಸಸ್‌ನ ಇಬ್ಬರು ವ್ಯಕಿಗಳು ಅಂದರೆ ಈ ಹಿಂದೆ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಕೆಲಸ ಮಾಡುತ್ತಿದ್ದವರು ಆ ಸಂಸ್ಥೆಯಲ್ಲಿ ಪಾಲುದಾರರಾಗಿದ್ದಾರೆ. ಆ ಸಂಸ್ಥೆಗೆ ಪೇಪರ್‌ನ್ನು ಮಾರಾಟ ಮಾಡುವಂಥ ಸಂದರ್ಭದಲ್ಲಿ ಸ್ಟ್ಯಾಂಡರ್ಡ್ ವಾರ್ತಾ ಮುದ್ರಣದ ಕಾಗದದ ಬೆಲೆ 21,897-33 ಪೈಸೆ ಇತ್ತು ಅದನ್ನು ರಿಯಾಯಿತಿ ದರಕ್ಕೆ ಅಂದರೆ 15,000.00 ರೂ. ಗಳಂತೆ ಕೊಟ್ಟಿದ್ದಾರೆ. ಅದೇ ರೀತಿ ಹಳೇ ವಾರ್ತಾ ಮುದ್ರಣದ ಕಾಗದದ ಬೆಲೆ 21,897.33 ಪೈಸೆ ಇತ್ತು, ಅದನ್ನು 15,500.00 ರೂ. ಗಳಂತೆ ಕೊಟ್ಟು ಒಟ್ಟು 2.7 ಕೋಟಿ ರೂ. ಗಳಷ್ಟು

ಹಣದ ನಷ್ಟವನ್ನು ಈ ಸಂಸ್ಥೆಯಲ್ಲಿ ಆಗಿದೆ. ಅದರ ಬಗ್ಗೆ ದಾಖಲೆ ನನ್ನ ಹತ್ತಿರ ಇದೆ. ಇದರ ಜೊತೆಗೆ ಈ ಸಂಸ್ಥೆಯ ಜೊತೆಗೆ ಯಾವುದೇ ಟೆಂಡರ್ ಕರೆಯದೇ ಕೇವಲ ಒಂದು ಪತ್ರದ ಮುಖಾಂತರ ದಿನಾಂಕ 16.5.97 ರಲ್ಲಿ ಅಂಬಿಕಾ ಎಂಟರ್ ಪೈಸಸ್, ಬಾಂಬೆ, ಇವರಿಗೆ ಮೈಸೂರು ಪೇಪರ್ ಮಿಲ್ಸ್‌ನವರು ಪತ್ರ ಬರೆದಿದ್ದಾರೆ. ಅದರಲ್ಲಿ ಏನು ಹೇಳಿದ್ದಾರೆಂದರೆ, ನಿಮ್ಮ ಪತ್ರ ಸಂಖ್ಯೆ ಎ: ಇ: ಎಮ್ .ಪಿ. ಎಲ್. 97: ದಿನಾಂಕ ಮಾರ್ಚ್ 97, ಇದರ ಪ್ರಕಾರ ನಿಮ್ಮನ್ನು ಕಂಟ್ರಾಕ್ಟ್ ರೀತಿಯಲ್ಲಿ ತೆಗೆದುಕೊಂಡಿದ್ದೇವೆ ಎನ್ನುವಂಥ ಅಂಶವನ್ನು ಹೇಳಿದ್ದಾರೆ. ಈ ರೀತಿಯಲ್ಲಿ ಯಾವುದೇ ಟೆಂಡರ್ ಕರೆಯದೇ ಒಂದೇ ಸಂಸ್ಥೆಗೆ 19.350-00 ರೂ. ಗಳಂತೆ ಅವರಿಗೆ ಮಾರಾಟ ಮಾಡಿದ್ದಾರೆ. ಆ ಸಂದರ್ಭದಲ್ಲಿ ಇದ್ದಂಥ ಬೆಲೆ 21,900 ರೂ. ಇತ್ತು ಅದು ಈಗಿನ ಬೆಲೆ 22,400-00 ಇದೆ. ಈ ರೀತಿಯಲ್ಲಿ ಸುಮಾರು 5.6 ಕೋಟಿ ರೂ. ಗಳ ನಷ್ಟ ಈ ಒಂದು ವ್ಯಾಪಾರದಿಂದ ಆಗಿದೆ. ಒಟ್ಟಾರೆ ಈ ರೀತಿಯಲ್ಲಿ ಕೋಟ್ಯಾಂತರ ರೂ. ಗಳ ಅವ್ಯವಹಾರಕ್ಕೆ ಖರೀದಿ ಮಾಡುವುದಕ್ಕೆ ಒಂದು ಸಂಸ್ಥೆಯನ್ನು ಇವರು ಇಟ್ಟುಕೊಂಡಿದ್ದಾರೆ. ಅದೇ ರೀತಿ ಮಾರಾಟ ಮಾಡುವುದಕ್ಕೂ ಒಂದು ಸಂಸ್ಥೆಯನ್ನು ಇಟ್ಟುಕೊಂಡು ಅವರ ಜೊತೆಯಲ್ಲಿ ಕೀಳು ಮಟ್ಟದ ಅವ್ಯವಹಾರವನ್ನು ನಡೆಸುತ್ತಾ ಈ ಮೈಸೂರು ಪೇಪರ್ ಮಿಲ್ಸ್‌ನ್ನು ಒಂದು ರೀತಿಯಲ್ಲಿ ಮುಚ್ಚುವುದಕ್ಕೆ ಮತ್ತು ದಿವಾಳಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದಾರೆ. ಒಂದು ಅಚ್ಚರಿಯ ಸಂಗತಿಯೆಂದರೆ ಈ ಅಂಬಿಕಾ ಎಂಟರ್ ಪೈಸಸ್ ಜೊತೆ ಸುಮಾರು 40 ಕೋಟಿ ರೂ. ಗಳ ವ್ಯವಹಾರ ಆಗುತ್ತಿದೆ. ಅವರಿಂದ ಡೆಫಾಸಿಟ್ ಪಡೆದಿರುವುದು ಕೇವಲ 1 ಲಕ್ಷ ರೂ. ಗಳು ಮಾತ್ರವೇ ಆಗಿದೆ. ಅವರು ಕೊಡಬೇಕಾದ ಬಾಕಿ 15 ದಿವಸಗಳಲ್ಲಿಯೇ ಎಂದು ಹೇಳಿದ್ದರೂ ಕೂಡ 120 ದಿವಸಗಳಾದರೂ ಪೇಮೆಂಟ್ ಮಾಡಿಲ್ಲ. ಸುಮಾರು ಒಂದು ಕೋಟಿ ರೂ. ಗಳಷ್ಟು ಬಡ್ಡಿಯನ್ನೇ ಅವರು ಕೊಡಬೇಕಾಗಿದೆ. ಇವೆಲ್ಲವನ್ನು ಕೂಡ ಮನ್ನಾ ಮಾಡುತ್ತಾ ಈ ಅಂಬಿಕಾ ಟ್ರೇಡಿಂಗ್ ಸಂಸ್ಥೆಯ ಜೊತೆಗೆ ಯಾರು ಈ ಹಿಂದೆ ಎಂ.ಪಿ. ಎಮ್. ನಲ್ಲಿ ಅಧಿಕಾರಿಗಳಾಗಿದ್ದರೋ ಅವರ ಜೊತೆಯಲ್ಲಿಯೇ ಹೊಂದಾಣಿಕೆ ಮಾಡಿಕೊಂಡು ಪೇಪರ್ ಮಾರಾಟ ಮಾಡುತ್ತಾ ಫಲ್ಪ್‌ನ್ನು ಒಂದು ವಿದೇಶಿ ಸಂಸ್ಥೆಯ ಜೊತೆಗೆ ಖರೀದಿ ಮಾಡುತ್ತಾ ಎಲ್ಲಾ ನೀತಿ ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಮತ್ತು ಆ ಮೂಲಕ ಕೋಟ್ಯಾಂತರ ರೂ. ಗಳ ನಷ್ಟವಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆವಿಗೆ ನಾನು ಏನು ವಿಚಾರಗಳ ಬೇಡಿಕೆಯನ್ನು ನಾನು ಇಟ್ಟಿನೋ ಆ ಪ್ರಕಾರ ಸರ್ಕಾರ ನಡೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಕೆಮಿಕಲ್ಸ್‌ನಲ್ಲಿ, ಬ್ಯಾಂಬೂ ಖರೀದಿಯಲ್ಲಿ, ಕೋಲ್ ಖರೀದಿಯಲ್ಲಿ ಟೆಂಡರ್ ಕರೆಯದೇ ಸಾಕಷ್ಟು ಅವ್ಯವಹಾರ ಗಳಾಗುತ್ತಿದೆಯೆಂದು ನಾನು ದಾಖಲೆ ಸಮೇತ ಸಂಗ್ರಹ ಮಾಡುತ್ತಿದ್ದೇನೆ. ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯಪಡಿಸುವುದೇನೆಂದರೆ ಈ ಸಂಸ್ಥೆಯ ಸಿ. ಎಮ್. ಡಿ. ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಸಿ. ಬಿ. ಐ. ತನಿಖೆಯನ್ನು ನಡೆಸಬೇಕು ಮತ್ತು ಯಾವ ಸಂಸ್ಥೆಗಳು ಈ ಅವ್ಯವಹಾರದಲ್ಲಿ ತೊಡಗಿವೆ ಆ ಸಂಸ್ಥೆಗಳನ್ನು ಬ್ಲ್ಯಾಕ್‌ಲಿಸ್ಟ್‌ನಲ್ಲಿ ಇಟ್ಟು ಈಗಾಗಲೇ ಲೂಟಿಯಾಗಿರತಕ್ಕಂಥ ಹಣವನ್ನು ಅವರಿಂದ ವಾಪಸ್ಸು ಪಡೆದು ಆ ಬಗ್ಗೆ ತನಿಖೆಯನ್ನು ಮಾಡಿಸಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯಮಾಡುತ್ತೇನೆ.

★ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ, ನನಗೆ ಅನುಮಾನ ಬರುತ್ತಿದೆ. ಏಕೆಂದರೆ ಈ ಎಮ್. ಪಿ. ಎಮ್.ನ ಸಿ. ಎಮ್. ಡಿ. ಯಾದ ಶ್ರೀಯುತ ಗಂಗಾಧರಪ್ಪನವರು ನಮ್ಮ ಸೊರಬದವರೇ ಆಗಿದ್ದಾರೆ. ಎಮ್. ಪಿ. ಎಮ್. ಇರತಕ್ಕಂಥದ್ದು ಶಿವಮೊಗ್ಗ ಜಿಲ್ಲೆಯ ಭದ್ರಾವತಿಯಲ್ಲಿ. ಗಂಗಾಧರಪ್ಪನವರು ಸೊರಬದವರೇ ಆಗಿದ್ದ ಕಾರಣ ಅವರನ್ನೇ ಈ ಕಂಪನಿಯ ಸಿ. ಎಮ್. ಡಿ. ಯಾಗಿ ಹಾಕುವುದರಿಂದ ಆ ಸಾರ್ವಜನಿಕ ಉದ್ದಿಮೆಯನ್ನು ಈತ ಮೇಲಕ್ಕೆ ತರಬಹುದು ಎನ್ನುವ ಉದ್ದೇಶದಿಂದ

ಅಲ್ಲಿಯೇ ಅವರನ್ನು ಸಿ. ಎಮ್. ಡಿಯಾಗಿ ಹಾಕಲಾಗಿದೆ ಎಂದು ನಾವು ತಿಳಿದುಕೊಂಡಿದ್ದೆವು. ಆದರೆ ಈ ವ್ಯಕ್ತಿ ಬಂದ ಮೇಲೆ ಈ ಸಂಸ್ಥೆ ಬಹಳ ಕೆಳಮಟ್ಟಕ್ಕೆ ಹೋಗಿದೆ. ನನಗೆ ಅನುಮಾನ ಏನು ಬರುತ್ತಿದೆಯೆಂದರೆ ಈ ವ್ಯಕ್ತಿ ಅಂದರೆ ಗಂಗಾಧರಪ್ಪನವರು ಎಕ್‌ಮನ್ ಕಂಪನಿಯ ಅಧಿಕಾರಿಯೋ ಅಥವಾ ಕರ್ನಾಟಕ ಸರ್ಕಾರದ ಅಧಿಕಾರಿಯೋ ಎಂಬುದೇ ಆಗಿದೆ. ಸಂಬಳವನ್ನು ಯಾರು ಕೊಡುವುದು ಎಂಬ ಬಗ್ಗೆ ನಮಗೆ ಅಂದಾಜಿಲ್ಲ. ಅಥವಾ ಶ್ರೀಯುತ ಗಂಗಾಧರಪ್ಪನವರಿಗೆ ಮತ್ತು ಹಣಕಾಸು ವಿಭಾಗದ ಅಧಿಕಾರಿಯಾಗಿರತಕ್ಕಂಥ ಸನ್ಮಾನ್ಯ ಜಿ. ಎಸ್. ವೆಂಕಟರಾಮನ್ ರವರಿಗೆ ಮತ್ತು ಮಾರಾಟ ವಿಭಾಗದಲ್ಲಿರತಕ್ಕಂಥ ಎಸ್. ಎಮ್. ಫತಾವುಲ್ಲರವರಿಗೆ, ಅಂದರೆ ಈ ಮೂರು ಜನರಿಗೆ ಸರ್ಕಾರದವರೇನಾದರೂ ತಿಳಿಸಿ ನೀವುಗಳೇ ಎಮ್. ಪಿ. ಎಮ್. ನ್ನು ಹೇಗಾದರೂ ನಡೆಸಿ ಕೊಳ್ಳಿ ನಮಗೆ ಮಾತ್ರ ರಗಳೆ ಉಂಟು ಮಾಡಬೇಡಿ, ಇದರಿಂದ ಆಗುವಂಥ ನಷ್ಟವನ್ನು ನಾವು ಬಡ ಬೋರೇಗೌಡ ಕೊಡುವಂಥ ತೆರಿಗೆಹಣದಲ್ಲಿ ನಿಮಗೆ ತುಂಬಿಸಿಕೊಡುತ್ತೇವೆ ಎಂದು ಏನಾದರೂ ಅಗ್ರಿಮೆಂಟ್ ಮಾಡಿಕೊಂಡಿದ್ದೀರಾ? ಎಂದು ಆ ರೀತಿಯಲ್ಲಿ ನಾನು ಹೇಳಬೇಕಾಗುತ್ತದೆ. ಏಕೆಂದರೆ ಈ ಅಧಿಕಾರಿಗಳು ಲಂಗುಲಗಾಮಿಲ್ಲದೇ ಯಾವುದೇ ಸರ್ಕಾರಕ್ಕೆ ಮರ್ಯಾದೆ ತರದೇ ಇರತಕ್ಕಂಥ ರೀತಿಯಲ್ಲಿ ವ್ಯವಹಾರವನ್ನು ಮಾಡಿದ್ದಾರೆ. ಎಲಾಫ್ ಕಂಪನಿಯವರು 375 ಡಾಲರ್ಸ್‌ಗೆ ಟೆಂಡರ್‌ನ್ನು ಕೊಟ್ಟಿದ್ದರೂ 400 ಡಾಲರ್ಸ್‌ಗೆ ಟೆಂಡರ್ ಕೊಟ್ಟು ಎಕ್‌ಮೆನ್ ಕಂಪನಿಯವರಿಗೆ ಕೋಟಿಗಟ್ಟಲೆ ಫಲ್ವನ್ನು ಸರಬರಾಜು ಮಾಡುವುದಕ್ಕೆ ಕೊಡುತ್ತಾರೆ. ಪದೇ ಪದೇ ಕ್ವಾಲಿಟಿ ಕಂಟ್ರೋಲ್‌ನ ವ್ಯಕ್ತಿ ಇದರ ಗುಣಮಟ್ಟ ಸರಿಯಿಲ್ಲ, ಇದರಿಂದ ನಷ್ಟವಾಗುತ್ತದೆ ಎಂದು ಹೇಳಿದರೂ ಕೂಡ ಇವರು ಪುನ: ಪುನ: ಎಕ್‌ಮನ್ ಕಂಪನಿಯವರಿಗೇ ಕೊಡುತ್ತಾರೆ. ಅವರ ಹಣದಲ್ಲಿ ಇವರುಗಳು ವಿದೇಶ ಯಾತ್ರೆಯನ್ನು ಮಾಡುತ್ತಾರೆ ಮತ್ತು ವಿದೇಶದಲ್ಲಿ ನಾವು ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್ ಅನ್ನು ನಾನು ತೆಗೆದು ಹಾಕಿದ್ದೇವೆ ಎನ್ನುವಂಥ ಮಾತನ್ನು ವಿದೇಶದಲ್ಲಿ ಹೇಳಿಬರುತ್ತಾರೆ. ಇವರಿಗೆ ಈ ರೀತಿ ಹೇಳುವುದಕ್ಕೆ ಎಷ್ಟು ಧೈರ್ಯ ಎಂದು ನನಗಂತೂ ಗೊತ್ತಾಗುತ್ತಿಲ್ಲ. ಯಾವ ಸರ್ಕಾರ ಇವರಿಗೆ ಈ ಅಧಿಕಾರವನ್ನು ಕೊಟ್ಟಿದೆ? ಇವೊತ್ತು ಸಾರ್ವಜನಿಕ ಉದ್ದಿಮೆಗಳು ಸಾಕಷ್ಟು ಹಳ್ಳಹರಿದು ಹೋಗುತ್ತಿವೆ, ತೆರಿಗೆ ಹಣದಲ್ಲಿ ಇವಕ್ಕೆ ಹಣವನ್ನು ತೊಡಗಿಸಿ ನಡೆಸುವಂಥ ಒಂದು ದುರ್ಗತಿ ಸರ್ಕಾರಕ್ಕೆ ಮತ್ತು ಕರ್ನಾಟಕ ಜನಕ್ಕೆ ಬಂದಾಗ ಇಂಥ ದುಷ್ಟ ಅಧಿಕಾರಿಗಳನ್ನು ಆದರಲ್ಲಿ ನೇಮಕ ಮಾಡಿಕೊಂಡು ಈ ರೀತಿ ಪದೇ ಪದೇ ನಷ್ಟ ಆಗುತ್ತಿದ್ದರೂ ಕೂಡ ಯಾರೂ ಕೂಡ ಅದರ ಬಗ್ಗೆ ತಪಾಸಣೆಯನ್ನು ಮಾಡದೇ ಇರುವಂಥ ರೀತಿಯಲ್ಲಿ ಇವರು ನಡೆಸುತ್ತಿದ್ದಾರೆ ಎಂದು ಹೇಳಿದರೆ ಇದರಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಕಮಿಷನ್ ಹೊಡೆಯುತ್ತಿದ್ದಾರೆ ಎನ್ನುವ ವಿಷಯ ಕರ್ನಾಟಕ ಜನತೆಗೆ ಗೊತ್ತಾಗಬೇಕಾಗಿದೆ. ಇನ್ನು ಮಾರಾಟ ವಿಭಾಗಕ್ಕೆ ಬಂದಾಗ ಅಲ್ಲೂ ಕೂಡ ಅವ್ಯವಹಾರವಾಗಿದೆ. 1980 ರಿಂದಲೂ ಎಂ.ಪಿ. ಎಮ್. ಮುದ್ರಣ ಕಾಗದವನ್ನು ತಯಾರು ಮಾಡುತ್ತಾ ಬಂದಿದೆ. ಅಲ್ಲಿಂದ ಇಲ್ಲಿಯವರೆವಿಗೂ ಕೂಡ ಮಾರಾಟ ಮಾಡುವುದಕ್ಕಾಗಿ ಯಾವುದೇ ಏಜೆಂಟ್‌ರನ್ನು ನೇಮಕ ಮಾಡಿರಲಿಲ್ಲ . ಆದರೆ ಇದೇ ಸಂಸ್ಥೆಯಬಾಂಬೆ ರೀಜನಲ್ ಮ್ಯಾನೇಜರ್‌ರಾಗಿ 1994 ರವರೆಗೂ ಕೆಲಸ ನಿರ್ವಹಿಸಿದ ಮತ್ತು ಸ್ವ ಇಚ್ಛೆಯಿಂದ ಸಂಸ್ಥೆಯಿಂದ ನಿವೃತ್ತಿ ಹೊಂದಿದ ಅಧಿಕಾರಿಯಾದ ಹರಿಪುರ್‌ಕರ್‌ರವರು ಮತ್ತು ಬೆಂಗಳೂರು ರೀಜನಲ್ ಮ್ಯಾನೇಜರ್‌ರವರಾಗಿ 1994 ರವರೆಗೂ ಕೆಲಸ ನಿರ್ವಹಿಸಿ ಸ್ವ ಇಚ್ಛೆಯಿಂದ ನಿವೃತ್ತಿ ಪಡೆದ ಶ್ರೀಯುತರಾದ ರವಿಶಂಕರ್‌ರವರು, ಈ ಇಬ್ಬರೂ ಸೇರಿ ಅಂಬಿಕಾ ಟ್ರೇಡಿಂಗ್ ಸಂಸ್ಥೆಯೆಂದು ಮಾಡಿಕೊಂಡಿದ್ದಾರೆ. ಪ್ರಥಮ ಬಾರಿಗೆ ಇವರನ್ನು ಕಮೀಷನ್ ಏಜೆಂಟ್‌ರನ್ನಾಗಿ ಮಾರಾಟ ಮಾಡುವುದಕ್ಕಾಗಿ ನೇಮಕ ಮಾಡಿಕೊಳ್ಳುತ್ತಾರೆ. ಇವರ ಮುಖಾಂತರ ಮಾರಾಟ ಮಾಡಿದಾಗ ಪ್ರತಿ

ಟನ್‌ಗೆ ಎಷ್ಟು ನಷ್ಟವಾಗಿದೆ ಎಂಬುದನ್ನು ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ. ಆದ ಕಾರಣ ನಾನು ಮತ್ತೊಮ್ಮೆ ಹೇಳುವುದಿಲ್ಲ. ಇವರು ಎಷ್ಟು ಗರ್ವದಿಂದ ವರ್ತನೆ ಮಾಡುತ್ತಿದ್ದಾರೆಂದರೆ ಇತ್ತೀಚೆಗೆ ಒಬ್ಬ ಕೇನ್ ಡೆವಲಪ್‌ಮೆಂಟ್ ಆಫೀಸರ್ ಎಂದು ನೇಮಕ ಮಾಡಿದ್ದಾರೆ. ಇವರಿಗೆ ಯಾವುದೇ ವಿದ್ಯಾರ್ಹತೆಯಿಲ್ಲ. ಇವರಿಗೆ ಸಾಕಷ್ಟು ಸಂಬಳವನ್ನು ಕೊಟ್ಟು ಯಾರದೋ ಒತ್ತಡದ ಮೇಲೆ ಒತ್ತಾಯದ ಮೇಲೆ ಈ ಅಧಿಕಾರಿಯನ್ನು ನೇಮಕ ಮಾಡಿದ್ದಾರೆ. ಸರ್ಕಾರಕ್ಕೆ ಇದರಿಂದ ಬಹಳ ನಷ್ಟವಾಗುತ್ತಿದೆ. ಇವರ ಕೆಲಸ ಏನು ಎಂಬುದು ನಮಗ್ಯಾರಿಗೂ ಗೊತ್ತಿಲ್ಲ. ಹೀಗೆ ಬೇಕಾಬಿಟ್ಟಿಯಾಗಿ ಆ ಎಂ.ಪಿ. ಎಂ. ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇವೊತ್ತು ಅಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲ. ಆ ನೌಕರರುಗಳು ಸಂಬಳಕ್ಕಾಗಿ ಹೋರಾಟ ಮಾಡುತ್ತಿದ್ದಾರೆ. ಇದರ ಜೊತೆಗೆ ಪ್ರಮೋಷನ್ ಗೋಸ್ಕರ ಕೂಡ ಹೋರಾಟ ಮಾಡುತ್ತಿದ್ದಾರೆ. ಅರಣ್ಯ ವಿಭಾಗದಲ್ಲಿ ಇಂದು ನೂರಾರು ಜನ ನೌಕರರು ಕಾಡುಮೇಡುಗಳಲ್ಲಿ ಸುತ್ತಿ ಕೆಲಸ ಮಾಡುತ್ತಿದ್ದಾರೆ, ಸುಮಾರು 12-13 ವರ್ಷಗಳಿಂದ ಎಂ.ಪಿ. ಎಮ್‌ನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಅವರು ಏನು ಹೇಳುತ್ತಾರೆಂದರೆ ಮೊದಲು ಕೆಲಸವನ್ನು ಖಾಯಂ ಮಾಡಿ, ಏಕೆಂದರೆ ಕೇವಲ 700-800 ರೂ.ಗಳಿಗೆ ನಾವು ಎಷ್ಟು ದಿವಸ ಕೆಲಸ ಮಾಡಬೇಕು ಎನ್ನುತ್ತಾರೆ. ಸರ್ಕಾರ ನಿಯಮಿಸಿರುವ ಸಿ. ಎಂ. ಡಿ. ಮನೆಯ ನಾಯಿಯೊಂದಕ್ಕೇ ಪ್ರತಿ ತಿಂಗಳು ಸುಮಾರು 5 ಸಾವಿರ ರೂ.ಗಳು ಖರ್ಚಾಗುತ್ತದೆ. ಹೀಗಿರುವಾಗ ನಾವುಗಳು ಕೇವಲ 700 ರೂ.ಗಳಿಂದ 800 ರೂ.ಗಳವರೆಗೆ ನಾವು ಹೇಗೆ ಸಂಸಾರ ನಡೆಸಬೇಕು ಎಂದು ನೌಕರರು ಕೇಳುತ್ತಾರೆ. ಈ ರೀತಿಯಲ್ಲಿ ಕೇಳಿದರೆ ನೌಕರರಿಗೆ ಇವರು ಬೆದರಿಸಿ ಹೆಚ್ಚು ಮಾತನಾಡಿದರೆ ನಿಮ್ಮನ್ನು ಡಿಸ್‌ಮಿಸ್ ಮಾಡಿಕಳುಹಿಸುತ್ತೇವೆ ಎನ್ನುವ ಮಾತನ್ನು ಸಿ. ಎಂ. ಡಿ. ಯವರು ಹೇಳುತ್ತಾರೆ. ನೌಕರರಿಗೆ ಸಂಬಳ ಕೊಡುವುದಕ್ಕೆ ಹಣವಿಲ್ಲವೆನ್ನುತ್ತಾರೆ. ಆದರೆ ಇವರು ಮಾಡುವಂಥ ಅವ್ಯವಹಾರಗಳಿಂದ ಕೋಟಿಗಟ್ಟಲೆ ನಷ್ಟವಾಗುತ್ತಿದೆ. ಇವರು ಯಾರು? ಇವರನ್ನೇತಕ್ಕೆ ಇನ್ನೂ ಕಂಪನಿಯಲ್ಲಿ ಇಟ್ಟುಕೊಂಡಿದ್ದೀರಿ? ಇವರಿಗೆ ಯಾರು ಹೇಳುವವರು, ಕೇಳುವವರಿಲ್ಲವೇ? ಸರ್ಕಾರದ ಅಂಕಿತಗಳು ಇವರ ಮೇಲೆ ಇಲ್ಲವೇ? ಯಾವ ಅಧಿಕಾರಿ ಹೇಗಾದರೂ ನಡೆಸಿದರೆ ಅದೇ ನಡೆಯುತ್ತದೆ ಎನ್ನುವುದಾದರೆ ಏನು ಸಿಗ್ನಲ್ ಜನತೆಗೆ ಹೋಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಸಾರ್ವಜನಿಕರ ಹಣ ಈ ರೀತಿಯಲ್ಲಿ ಪೋಲಾಗಿ ನಷ್ಟವಾಗುತ್ತಿದೆ. ಅಲ್ಲಿಯ ಕಾರ್ಖಾನೆಯ ಬಾಗಿಲು ಮುಚ್ಚುವಂಥ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ದಯಮಾಡಿ ಈ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಮಾಡಿರುವಂಥ ಈ ಅವ್ಯವಹಾರದ ಬಗ್ಗೆ ಸಿ. ಬಿ. ಐ. ತನಿಖೆ ಆಗಬೇಕು.

ಮಾನ್ಯ ಅಧ್ಯಕ್ಷರೆ, ಇವತ್ತು ಕೇರಳದಲ್ಲಿ ನಮ್ಮ ಹಾಗೆ ಮುದ್ರಣ ಕಾಗದವನ್ನು ತಯಾರು ಮಾಡುತ್ತಿರತಕ್ಕಂಥ ಕಂಪನಿ ಸ್ವದೇಶಿ ಪಲ್ಪ್‌ನ್ನೇ ಉಪಯೋಗಿಸುತ್ತಿದ್ದಾರೆ. ಈ ಕಂಪನಿ ನಮಗಿಂತ ಹೆಚ್ಚು ಮುದ್ರಣ ಕಾಗದವನ್ನು ತಯಾರು ಮಾಡುತ್ತಿದೆ. ಆದರೆ ಈ ಎಂ.ಪಿ. ಎಂ. ನವರು ಬೇಕು ಬೇಕಂತಲೇ ವಿದೇಶಿ ಪಲ್ಪ್‌ನ್ನು ಸರಬರಾಜು ಮಾಡಿಕೊಳ್ಳುತ್ತಿದ್ದಾರೆ. ಈ ಎಲ್ಲಾ ಅವ್ಯವಹಾರಗಳ ಹಿನ್ನೆಲೆಯಲ್ಲಿ ಇದನ್ನು ಸಿ. ಬಿ. ಎ. ತನಿಖೆಗೆ ಒಪ್ಪಿಸಬೇಕು ಮತ್ತು ಗಂಗಾಧರಪ್ಪ, ವೆಂಕಟರಾಮನ್ ಮತ್ತು ಜಿ. ಎಂ. ಫತಾವುಲ್ಲಾ ಇವರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಮಹಾನ್ ವ್ಯಕ್ತಿಗಳಾದ ಇವರುಗಳು ಭಾರಿ ಸಂಬಳ, ಬಂಗಲೆ, ಹೊಂದಿದ್ದಾರೆ. ಇವರ ಕಛೇರಿ ಬೆಂಗಳೂರಿನಲ್ಲಿದೆ, ಆದರೆ ಕಾರ್ಖಾನೆ ಭದ್ರಾವತಿಯಲ್ಲಿದೆ. ಈ ರೀತಿಯಲ್ಲಿ ಕಾರ್ಖಾನೆ ಒಂದು ಕಡೆ ಆದರೆ ಕಛೇರಿ ಇನ್ನೊಂದು ಕಡೆ ಇಟ್ಟು ಕೊಂಡು ಏನು ಅಡ್ಮಿನಿಸ್ಟ್ರೇಷನ್ ನಡೆಸುತ್ತಾರೋ ನನಗಂತೂ ಗೊತ್ತಿಲ್ಲ. ಕಾರ್ಖಾನೆಯ ಹತ್ತಿರವೆ ಕಚೇರಿ ಇದ್ದರೆ ಕಾರ್ಖಾನೆಯ ವಾಸನೆ

ಇವರುಗಳಿಗೆ ತಗುಲಿ ಆರೋಗ್ಯ ಕೆಡುತ್ತದೆ ಎನ್ನುವ ದೃಷ್ಟಿಯಿಂದ ಕಛೇರಿಯನ್ನು ಬೆಂಗಳೂರಿನಲ್ಲಿಟ್ಟಿದ್ದಿರಿನೋ? ನಾನು ಹೇಳುವುದೇನೆಂದರೆ ಈ ಕ್ಷಣ ಆಡಳಿತ ಕಛೇರಿಯನ್ನು ಭದ್ರಾವತಿಗೆ ಕಾರ್ಖಾನೆಯ ಹತ್ತಿರ ವರ್ಗಾಯಿಸಬೇಕು. ಆ ಮೂಲಕ ಕಂಟ್ರೋಲ್ ಇಟ್ಟುಕೊಂಡು ಅಲ್ಲಿ ನಡೆಯತಕ್ಕಂತಹ ಅವ್ಯವಹಾರಗಳನ್ನು ನಿರ್ಮೂಲನೆ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ತಾವು ಇದನ್ನು ಸಿ ಬಿ ಐಗೆ ಒಪ್ಪಿಸಬೇಕು. ತಕ್ಷಣ ಈ ಮೂವರು ವ್ಯಕ್ತಿಗಳನ್ನು ಸಸ್ಪೆನ್ಷನ್‌ನಲ್ಲಿಟ್ಟು ಸರಿಯಾದಂತಹ ಎನ್‌ಕ್ವೊರಿಯನ್ನು ಮಾಡಬೇಕು. ಈ ಒಂದು ಸರ್ಕಾರಕ್ಕೆ ಸಾರ್ವಜನಿಕ ಉದ್ದಿಮೆಯನ್ನು ಮೇಲಕ್ಕೆ ಎತ್ತಬೇಕು ಎನ್ನುವ ಪ್ರಾಮಾಣಿಕ ಬದ್ಧತೆ ಇದ್ದಲ್ಲಿ ಈ ಮೇಲಿನ ಕೆಲಸಗಳನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

★ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಇದೊಂದು ಅಂತರರಾಷ್ಟ್ರೀಯ ಅಗ್ರಿಮೆಂಟ್. ಇಂಪೋರ್ಟ್ ಪಾಲಿಸಿ ಮತ್ತು ಎಕ್ಸ್‌ಪೋರ್ಟ್ ಪಾಲಿಸಿಯ ಬಗ್ಗೆ ಮಾಹಿತಿ ಇರುವವರಿಗೆ, ಇವರು ಏನಾದರೂ ಅಡ್ವೈಸ್ ತೆಗೆದುಕೊಂಡಿದ್ದಾರಾ ಎನ್ನುವ ಆಶ್ಚರ್ಯ ನನಗೆ ಉಂಟಾಗುತ್ತದೆ. ನಾನು ಇಲ್ಲಿರತಕ್ಕಂತಹ ಅಗ್ರಿಮೆಂಟನ್ನು ನೋಡಿದೆ. Time is the essence of the contract. ಇದು ಕಂಟ್ರಾಕ್ಟ್‌ನಲ್ಲಿ ಯಾವಾಗಲೂ ಇರುತ್ತದೆ. ಯಾವುದೇ ಅಗ್ರಿಮೆಂಟ್‌ನಲ್ಲಿ Time will be the essence of the contract. ಇಲ್ಲಿ ಒಂದೇ ಒಂದು ಕಂಟ್ರಾಕ್ಟ್‌ನಲ್ಲಿ 9 ವರ್ಷಗಳಿಂದ ಕಂಟ್ರಾಕ್ಟ್‌ನ್ನು ಫುಲ್‌ಫಿಲ್ ಮಾಡಿಲ್ಲ, ಟೈಂ ಒಳಗಡೆ ಯಾವುದನ್ನು ಕೂಡ ಸಪ್ಲೈ ಮಾಡಿಲ್ಲ, ಆದಾಗ ಅವನು ಸಪ್ಲೈ ಮಾಡದಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಂಡು ತಕ್ಷಣ ಅವರನ್ನು ವಜಾ ಮಾಡಬೇಕಾಗಿತ್ತು, ಆದರೂ ಕೂಡ ಮಾಡಿಲ್ಲ. ಆ ರೀತಿ ಮಾಡದಿರುವಾಗ ನಿಮ್ಮನ್ನು ನಾನು ಒಂದು ಪ್ರಶ್ನೆ ಕೇಳುತ್ತೇನೆ. ಫರ್‌ಫಾರ್ಮೆನ್ಸ್ ಗ್ಯಾರಂಟಿಯನ್ನು ತೆಗೆದುಕೊಂಡಿದ್ದೀರಾ? In any international convenant international agreement ಆಗಬೇಕಾದರೆ ಸಪ್ಲೈ ತೆಗೆದುಕೊಳ್ಳಬೇಕಾದರೆ ಫರ್‌ಫಾರ್ಮೆನ್ಸ್ ಗ್ಯಾರಂಟಿಯನ್ನು ತೆಗೆದುಕೊಳ್ಳಬೇಕು. It is a must. ನಾನು ಎಲ್ಲಾ ಪೇಪರ್‌ಗಳನ್ನು ಕೂಡ ನೋಡಿದೆ. ಫರ್‌ಫಾರ್ಮೆನ್ಸ್ ಗ್ಯಾರಂಟಿಯನ್ನು ಎಲ್ಲೂ ಕೂಡ ಕಾಣಿಸಲಿಲ್ಲ. ಒಂದು ಕಂಡಿಷನ್ ಕೂಡ ಇಲ್ಲ. ಇಂಥ ಕಂಡಿಷನ್‌ನಲ್ಲಿ, ಇಷ್ಟೇ ವೇಳೆಯಲ್ಲಿ ನಾವು ಸಪ್ಲೈ ಮಾಡುತ್ತೇವೆ ಎನ್ನುವ ಫರ್‌ಫಾರ್ಮೆನ್ಸ್ ಗ್ಯಾರಂಟಿ ಒಂದು ಕಡೆಯೂ ಇಲ್ಲ, ಎಲ್ಲೂ ಕೂಡ ಕಾಣುತ್ತಿಲ್ಲ, ಕೋಟ್ಯಾಂತರ ರೂಗಳ ವ್ಯವಹಾರವನ್ನು ಮಾಡಿದ್ದೀರಿ, ಗ್ಯಾರಂಟಿ ಕೊಟ್ಟಿಲ್ಲ, ಅದು ಇಲ್ಲ. Time is the essence of the contract. ಥರ್ಡ್ ಪಾರ್ಟಿ ಕಾವೆನೆಂಟ್, ಇನ್ಸ್‌ಪೆಕ್ಷನ್ ಇದು ಇರಲೇಬೇಕು. ನಾವೇನಾದರೂ ಪದಾರ್ಥಗಳನ್ನು ಎಕ್ಸ್‌ಪೋರ್ಟ್ ಮಾಡಬೇಕಾದರೆ, ಆದೇಶದ ಏಜೆಂಟ್ ನಮ್ಮ ದೇಶಕ್ಕೆ ಒಂದು ಮಾಲುಗಳನ್ನು ಇನ್‌ಸ್ಪೆಕ್ಟ್ ಮಾಡಿ ಅವರು ಗುಣಮಟ್ಟದ ಬಗ್ಗೆ ಸರ್ಟಿಫೈ ಮಾಡಿದರೆ ಮಾತ್ರ ಮಾಲು ಎಕ್ಸ್‌ಪೋರ್ಟ್ ಆಗುತ್ತದೆ. ಆ ರೀತಿಯಲ್ಲಿ ನೀವು ಮಾಡಿದ್ದೀರಾ? ಆದರೆ ನೀವು ಎಲ್.ಸಿ.ಯನ್ನು ಕೊಟ್ಟುಬಿಟ್ಟಿದ್ದೀರಿ. ಅದು ಇರ್ರಿಕವಬಲ್ ಎಲ್.ಸಿ.ಯೋ ಏನೋ ಗೊತ್ತಾಗುತ್ತಿಲ್ಲ. ಆದರೆ ನೀವು ಎಲ್.ಸಿ. ಯನ್ನು ಕೊಟ್ಟಿದ್ದೀರಿ. ಎಲ್.ಸಿ.ಯನ್ನು ನೀವು ಕೊಟ್ಟ ಮೇಲೆ ಅವರು ಮಾಲನ್ನು ಸರಬರಾಜು ಮಾಡಬೇಕು. ನಿಮ್ಮ ಹಣ ಹೋಯಿತು, ಮಾಲು ಬಂತು, ಇನ್ಸ್‌ಪೆಕ್ಷನ್ ಆಗಿದೆ, ನಿಮ್ಮ ಲ್ಯಾಬೋರೇಟರಿಯಲ್ಲಿ ಆ ಮಾಲು ಕಳಪೆ ಮಟ್ಟದ್ದು ಎಂದು ತೀರ್ಮಾನವಾಗಿದೆ. ಡ್ಯಾಮೇಜಸ್‌ನ್ನು ನೀವು ವಾಪಸ್ಸು ತೆಗೆದುಕೊಂಡಿಲ್ಲ. ಇದರ ಬಗ್ಗೆ ಯಾವುದೇ ಕ್ರಮವನ್ನು ಕಳೆದ 9 ವರ್ಷಗಳಿಂದ ತೆಗೆದುಕೊಂಡಿಲ್ಲ. ಯಾವ ವ್ಯಕ್ತಿ ಅನ್ಯಾಯವನ್ನು ಮಾಡಿಕೊಂಡು ಬಂದಿದ್ದನೋ ಅದೇ ವ್ಯಕ್ತಿಗೆ ಹಿಂದೆ ಇದ್ದಂತಹ ಎಂ.ಡಿ. ಯವರಾದ ಸನ್ಯಾನ್ಯ ಶ್ರೀ

ಘೋರೆಯವರು ಮತ್ತು ಈಗಿರತಕ್ಕಂತಹ ಎಂ. ಡಿ. ಯವರಾದ ಗಂಗಾಧರಪ್ಪನವರು ಇಬ್ಬರೂ ಕೂಡ ಏತಕ್ಕೋಸ್ಕರ ಇದೇ ವ್ಯಕ್ತಿಗೆ ಸಪ್ಲೈ ಮಾಡುವುದಕ್ಕೆ ಕೊಟ್ಟಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಆದ್ದರಿಂದ ಇವುಗಳ ಬಗ್ಗೆ ಸಮಗ್ರವಾಗಿ ತನಿಖೆಯಾಗಬೇಕು. ಇದು ಯಾವ ಕಾರಣದಿಂದ ಹೀಗೆ ಆಗಿದೆ; ಇದರಲ್ಲಿ ಇಂಟರ್‌ನ್ಯಾಷನಲ್ ರೂಲ್ಸ್ ವೈಯಲೀಷನ್ ಆಗಿದೆಯೇ ಎಂಬುದನ್ನು ತಾವು ನೋಡಬೇಕಾಗಿದೆ. ತಮಗೂ ಕೂಡ ಗೊತ್ತಿದೆ. ಎರಡು ವರ್ಷಗಳ ಹಿಂದೆ ನ್ಯೂಸ್ ಪ್ರಿಂಟ್ ಮತ್ತೆ ಪೇಪರ್‌ಗಳಿಗೆ ಬಹಳ ಅಭಾವವಿತ್ತು. 42 ಸಾವಿರ ರೂಗಳವರೆಗೆ ಬೆಲೆ ಒಂದು ಟನ್‌ಗೆ ಇತ್ತು. ಈ ಬಗ್ಗೆ ಮಾನ್ಯ ಈಶ್ವರಪ್ಪನವರು ಒಂದು ಟನ್‌ಗೆ 22 ಸಾವಿರ ಎಂದು ಏನು ಹೇಳಿದರೋ ಅದು ಮೇಲ್ನೋಟಕ್ಕೆ ಇತ್ತು. ಆದರೆ ಒಂದು ಟನ್‌ಗೆ 42 ಸಾವಿರ ರೂಗಳವರೆಗೂ ಅದು ಹೋಗಿತ್ತು. ಆದರೆ ಅಂಬಿಕಾ ಎಂಟರ್‌ಪೈಸಸ್‌ನವರಿಗೆ 15 ಸಾವಿರ ರೂಗಳಂತೆ ಕೊಟ್ಟು ಅವರಿಗೆ 3 ರಷ್ಟು ಲಾಭವನ್ನು ಮಾಡಿಕೊಡುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆ. ಇದರಲ್ಲಿ ಕಾಣದಕೈ ಏನು ವ್ಯವಹಾರ ಮಾಡಿದೆ ಎಂಬುದನ್ನು ನಾವು ನೋಡಬೇಕಾದರೆ ಆದು ನಮ್ಮಿಂದ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಇಂಟರ್‌ನ್ಯಾಷನಲ್ ಏಜೆನ್ಸಿ ಇದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಬಾಂಬೆ ಏಜೆನ್ಸಿ ಇದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಅದಕ್ಕೆ ಸಂಬಂಧಪಟ್ಟಂತೆ ಸರಿಯಾಗಿ ತನಿಖೆಯಾಗಬೇಕಾದರೆ ಸಿ ಬಿ ಐ ಮೂಲಕವೇ ಮಾಡಿಸಬೇಕು. ಇಂಟರ್‌ಪೋಲ್ ಏಜೆನ್ಸಿ ಮುಖಾಂತರ ಮಾಹಿತಿಯನ್ನು ತರಿಸಿಕೊಂಡರೆ ಮಾತ್ರ ಸರಿಯಾದ ವಿಷಯಗಳು ಗೊತ್ತಾಗುತ್ತದೆ. ಆದ್ದರಿಂದ ಪ್ರಮುಖವಾದ ಎರಡು ದಾಖಲೆಗಳಾದ ಫರ್‌ಫಾರ್ಮೆನ್ಸ್ ಗ್ಯಾರಂಟಿಯ ಬಗ್ಗೆ ಮತ್ತು ಟೈಂ ಎಸ್ ದಿ ಎಸೆನ್ಸ್ ಆಫ್ ಕಾಂಟ್ರಾಕ್ಟ್ ಎಂಬ ಬಗ್ಗೆ ಮತ್ತು ಕ್ವಾಲಿಟಿ ಕಂಟ್ರೋಲ್ ಬಗ್ಗೆ ಅಗ್ರಿಮೆಂಟ್‌ಗಳ ಕಾಪಿ ಇದ್ದರೆ ಅದನ್ನು ದಯವಿಟ್ಟು ಈ ಸದನಕ್ಕೆ ಒಪ್ಪಿಸಬೇಕೆಂದು ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

★ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ): ನನ್ನದು 3 ಪ್ರಶ್ನೆಗಳು ಇವೆ. Most favoured supplier ಇವರು ಏಕೆ? ಸಮಯಕ್ಕೆ ಸರಿಯಾಗಿ ಪಲ್ಪ್‌ನ್ನು ಸರಬರಾಜು ಮಾಡಿಲ್ಲ. ಗುಣಮಟ್ಟ ಸರಿಯಾಗಿಲ್ಲ, ದರ ಕೂಡ ಜಾಸ್ತಿಯಾಗಿದೆ. ಈ ರೀತಿ ಕಳೆದ 10 ವರ್ಷಗಳಿಂದಲೂ ಮಾಲನ್ನು ಪಡೆದುಕೊಂಡು ಇವರಿಗೆ ಮಾಲನ್ನು ಕೊಡಬೇಕೆನ್ನುವ ಒಂದಂಶದ ಕಾರ್ಯಕ್ರಮ ಏಕೆ? ಇದನ್ನು ಏತಕ್ಕಾಗಿ ಈ ಎಂ.ಪಿ. ಎಂ.ನ್ನು ಇಟ್ಟುಕೊಂಡಿದ್ದರು. ಈ ಎರಡು ವರ್ಷಗಳ ಹಿಂದೆ 33 ಕೋಟಿ ರೂಗಳ ಲಾಭ ಗಳಿಸಿದಂಥ ಈ ಎಂ.ಪಿ. ಎಂ. ಇವತ್ತಿನ ದಿವಸ ನಷ್ಟವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಸಿ ಎಂಡಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಒಟ್ಟು ಹಗರಣದ ಬಗ್ಗೆ ಸಿ ಬಿ ಐ ತನಿಖೆ ಆಗಬೇಕೆಂದು ಆಗ್ರಹ ಮಾಡುತ್ತೇನೆ. ಈ ಕಾಗದದ ಕಾರ್ಖಾನೆ ವಿಶ್ವೇಶ್ವರಯ್ಯನವರ ಕನಸಿನ ಕೂಸಾಗಿದೆ. ಇಂತಹ ಕಾರ್ಖಾನೆ ಗಂಗಾಧರಪ್ಪನವರಂತಹ ಸಿ ಎಂಡಿಗೆ ಸಿಕ್ಕಿ ನಲುಗಬಾರದು ಎಂಬುದು ನಮ್ಮ ಅಭಿಲಾಷೆ. ಅದಕ್ಕೆ ಅವಕಾಶ ಕೊಡಬಾರದು; ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

★ಶ್ರೀ ಬಿ. ಎಂ. ಮೊಯಿದ್ದಿನ್ (ಸಣ್ಣ ಕೈಗಾರಿಕೆಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ನಮ್ಮ ಈಶ್ವರಪ್ಪನವರು, ಅರಗ ಜ್ಞಾನೇಂದ್ರರವರು, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಶ್ರೀ ಸುರೇಶ್‌ರವರು ಈ ಕಾರ್ಖಾನೆಯ ಬಗ್ಗೆ ಹಲವಾರು ವಿಚಾರಗಳನ್ನು ಹೇಳಿದ್ದಾರೆ. ಇದನ್ನು ನಾನು ಗಮನಿಸಿದ್ದೇನೆ. ಇದಕ್ಕೆ ಸಮಂಜಸವಾದ ಉತ್ತರವನ್ನು ನಾನು ಕೊಡುತ್ತೇನೆ. ಅದಕ್ಕಿಂತ ಮುಂಚೆ ಒಂದು ಸ್ಟೇಟ್‌ಮೆಂಟ್‌ನ್ನು ಸದನದಲ್ಲಿ ತಮ್ಮ ಮುಖಾಂತರ ಇಡುವುದಕ್ಕೆ ಇಷ್ಟಪಡುತ್ತೇನೆ. ''ಚೆನ್ನೈ, ಮುಂಬೈ, ಕಲ್ಕತ್ತಾ, ನವದೆಹಲಿಗಳಲ್ಲಿ ಎಂಪಿ ಎಂ ತನ್ನ ನಾಲ್ಕು ಪ್ರಾಂತೀಯ ಕಛೇರಿಗಳನ್ನು ಹೊಂದಿದ್ದು, ಇವುಗಳು ವಿತ್ತೀಯ ಸಂಸ್ಥೆಯೊಂದಿಗಿನ

ಸಂಬಂಧ ಮಾತುಕತೆಗಳು ಸಾಮಾಗ್ರಿಗಳ ಪಡೆದುಕೊಳ್ಳುವಿಕೆ ಹಾಗೂ ಮಾರಾಟದ ನಿರ್ವಹಣೆಯಲ್ಲಿ ತೊಡಗಿವೆ. ಇದುವರೆಗೆ, ಕಂಪನಿಯ ಸೇವೆಯನ್ನು ತ್ಯಜಿಸಿದ ಅಥವಾ ನಿವೃತ್ತಿ ಹೊಂದಿದ ಅಧಿಕಾರಿಯು ಕಂಪನಿಯ ಉತ್ಪನ್ನಗಳ ಅಧಿಕೃತ ಮಾರಾಟದ ಪರವಾನಗಿ ಕೋರಿದಾಗ ಅಂತಹ ಮನವಿಯನ್ನು ತಿರಸ್ಕರಿಸಲಾಗಿಲ್ಲ. ಅಂತೆಯೆ ಮೆ: ಅಂಬಿಕಾ ಎಂಟರ್ ಪ್ರೈಸಸ್ ಸಂಸ್ಥೆಯನ್ನು ನಡೆಸುತ್ತಿರುವ ಅಧಿಕಾರಿಗಳಿಗೂ ಸಹ ಆದಾಗ್ಯೂ ಸಂಸ್ಥೆಯ ಅಧಿಕೃತ ಮಾರಾಟಗಾರರನ್ನಾಗಿ ಮಾಡುವಲ್ಲಿನ ಅವರ ಸಾಮರ್ಥ್ಯ ಅವರ ಆರ್ಥಿಕ ಸುಭದ್ರತೆ ಮತ್ತು ಮಾರುಕಟ್ಟೆಯಲ್ಲಿನ ಅವರ ಸ್ಥಾನಮಾನಗಳು ಇವುಗಳನ್ನು ಪರೀಕ್ಷಿಸಿ ಅರ್ಜಿದಾರರುಗಳ ಮನವಿಯ ನೈಜತೆಯ ಬಗ್ಗೆ ತೃಪ್ತಿಕರವೆನಿಸಿದಲ್ಲಿ ಮಾತ್ರ, ಅಧಿಕೃತ ಮಾರಾಟಗಾರರು ನೇಮಕಕ್ಕಾಗಿ ಜಾಹೀರಾತು ನೀಡುವುದು ಉದ್ಯಮದಲ್ಲಿನ ಸಂಪ್ರದಾಯವಲ್ಲ. ಅಂತೆಯೇ ಎಂಪಿ ಎಂ ಸಹ ಕಳೆದ 50 ವರ್ಷಗಳಿಂದಲೂ (ಸುಮಾರು 93 ಮಂದಿ ಡೀಲರುಗಳು) ತನ್ನ ಅಧಿಕೃತ ಮಾರಾಟಗಾರರನ್ನು, ಕಂಪನಿಯ ಉತ್ಪನ್ನಗಳನ್ನು ಮಾರಾಟ ಮಾಡುವಲ್ಲಿನ ಶಕ್ತಿ ಸಾಮರ್ಥ್ಯಗಳು ಅವರ ಆರ್ಥಿಕ ಸುಭದ್ರತೆ ಮತ್ತು ಅವರ ಮಾರುಕಟ್ಟೆಯಲ್ಲಿನ ಸ್ಥಾನಮಾನಗಳನ್ನು ಆಧರಿಸಿಯೇ ನೇಮಕ ಮಾಡಿಕೊಳ್ಳುತ್ತಿದೆ. ಮೆ: ಅಂಬಿಕಾ ಎಂಟರ್‌ಪ್ರೈಸಸ್‌ರವರಿಗೆ ಡೀಲರ್‌ಷಿಪ್ ನೀಡುವ ಸಂದರ್ಭದಲ್ಲಿ ಅವರಿಗೆ ಕಂಪನಿಯಿಂದ 12ನೇ ಮೇ 1997 ರಂದು ಒಂದು ಪತ್ರವನ್ನು ನೀಡಲಾಗಿದ್ದು ಅದರಲ್ಲಿ ಕಂಪನಿಯೊಂದಿಗೆ ನೇರ ವ್ಯವಹಾರಿಕ ಸಂಪರ್ಕ ಹೊಂದಿದ, ದೇಶದ ಹತ್ತು ಪ್ರಮುಖ ವಾರ್ತಾ ಮುದ್ರಣ ಗ್ರಾಹಕರ ಪಟ್ಟಿಯೊಂದನ್ನು ನೀಡಲಾಗಿದೆ. ಹಾಗೂ ಈ ಹತ್ತು ಪ್ರಮುಖ ಗ್ರಾಹಕರಿಗೆ ಮೆ:: ಅಂಬಿಕಾ ಎಂಟರ್‌ಪ್ರೈಸಸ್ ಅವರೂ ಸೇರಿದಂತೆ ಯಾವುದೇ ಅಧಿಕೃತ ಮಾರಾಟಗಾರರ ಮೂಲಕವೂ ಒಂದೇ ಒಂದು ಕೆ.ಜಿ. ವಾರ್ತಾ ಮುದ್ರಣವನ್ನು ಮಾರಾಟ ಮಾಡಲಾಗಿಲ್ಲ. 1997ರ ಏಪ್ರಿಲ್‌ನಿಂದ 1998ರ ಫೆಬ್ರವರಿಯವರೆವಿಗೆ ಮಾರಾಟವಾದ ಸುಮಾರು 10,000 ಮೆಟ್ರಿಕ್ ಟನ್ ವಾರ್ತಾ ಮುದ್ರಣದ ಪೈಕಿ ಸುಮಾರು 14,000 ಮೆಟ್ರಿಕ್ ಟನ್‌ಗಳಷ್ಟು ವಾರ್ತಾ ಮುದ್ರಣವನ್ನು ಮೆ: ಅಂಬಿಕಾ ಎಂಟರ್‌ಪ್ರೈಸಸ್‌ರವರ ಮೂಲಕ ವಿವಿಧ ವೃತ್ತ ಪತ್ರಿಕಾ ಪ್ರಕಾಶಕರುಗಳಿಗೆ ಮಾರಲಾಗಿದೆ. ಈ ರೀತಿ ವಾರ್ತಾ ಮುದ್ರಣ ಸರಬರಾಜು ಮಾಡಲ್ಪಟ್ಟ ಗ್ರಾಹಕರು ನಮ್ಮ ನಿಯಂತ್ರಿತ ಗ್ರಾಹಕರಲ್ಲ ಹಾಗೂ ಅವರುಗಳಲ್ಲಿ ಯಾರೊಂದಿಗೂ ನಾವು ಯಾವುದೇ ವಾರ್ಷಿಕ ಒಪ್ಪಂದಗಳನ್ನು ಮಾಡಿಕೊಂಡಿಲ್ಲ. They are all open for anybody to be approached. ಅಲ್ಲದೇ ಮೆ: ಅಂಬಿಕಾ ಎಂಟರ್‌ಪ್ರೈಸಸ್‌ರವರು ಈ ಮಾರಾಟವನ್ನು ಸಾಧಿಸಿರುವುದರಿಂದ, ಅವರಿಲ್ಲವಾಗಿದ್ದಲ್ಲಿ ಕಂಪನಿಗೆ ಈ ಮೊತ್ತದ ಮಾರಾಟವು ದಕ್ಕುತ್ತಿರಲಿಲ್ಲ. ಮೇಲಿನ ಪರಿಸ್ಥಿತಿಯಲ್ಲಿ ದೇಶೀಯ ವಾರ್ತಾ ಮುದ್ರಣದ ಉತ್ಪಾದಕರಾದ ಇತರ ಸ್ವರ್ದಿಗಳಂತೆ ಎಂಪಿ ಎಂ ಸಹ ವರ್ತಿಸಿ ಸ್ಪರ್ಧಾತ್ಮಕ ಬೆಲೆಗಳೂ ಹಾಗೂ ಸೂಕ್ತ ಪ್ರೋತ್ಸಾಹಕರಗಳೊಂದಿಗೆ ಮಾರಾಟದ ಹೆಚ್ಚಳವನ್ನು ಕಾಯ್ದಿಟ್ಟುಕೊಳ್ಳಲು ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುವುದು ಅತ್ಯಂತ ಅನಿವಾರ್ಯವಾಯಿತು. ಹಾಗಾಗಿ ಎಂ ಪಿ ಎಂ ಸಹ ವಿವಿಧ ಪ್ರಮಾಣದ ಮಾರಾಟಗಳಿಗೆ ವಿವಿಧ ರೀತಿಯ ರಿಯಾಯಿತಿಗಳನ್ನು ನೀಡಬೇಕಾಗಿ ಬಂದಿತು. ಮೆ: ಶ್ರೀರಂಗ ಮರ್ಕಂಟೈಲ್ ಕಾರ್ಪೊರೇಷನ್‌ನವರು ಇನ್ನಿತರ ಸಂಸ್ಥೆಗಳೊಂದಿಗೆ ಕಳೆದ 9 ವರ್ಷಗಳಿಗೂ ಮೀರಿದ ಸಮಯದಿಂದಲೂ ತಿರುಳನ್ನು ಸರಬರಾಜು ಮಾಡುತ್ತಿದ್ದಾರೆ. ಎಲ್ಲಾ ತಿರುಳನ್ನು ಪರೀಕ್ಷಿಸಿದ ನಂತರ ಎಂಪಿಎಂ ಈ ಸಂಸ್ಥೆ ಸರಬರಾಜು ಮಾಡಿದ ಫ್ಯಾಬ್ರಿಕೋ ಪಲ್ಪ್ ಅನ್ನು ಪಡೆಯಲು ನಿರ್ಧರಿಸಿದೆ. ಪ್ರತಿ ಮಿಲ್‌ಗೂ ತನ್ನದೇ ಆದ ತಿರುಳನ್ನು ನಿರ್ದಿಷ್ಟ ಗುಣ ಲಕ್ಷಣಗಳಿದ್ದು ಸರಬರಾಜುದಾರರು ಈ ಬಗೆಯ ತಿರುಳನ್ನು ನೀಡುತ್ತಿರುವುದರಿಂದ ಎಂಪಿ ಎಂ ಅವರುಗಳಿಂದಲೂ ತಿರುಳನ್ನು ಖರೀದಿಸುತ್ತಿದೆ. ಮೆ: ಶ್ರೀರಂಗ ಮರ್ಕಂಟೈಲ್ ಕಾರ್ಪೊರೇಷನ್‌ನವರು ಎಂಪಿಎಂನ ನಿರ್ದಿಷ್ಟ ಗುಣಲಕ್ಷಣಗಳಿಗೆ

ಅನುಗುಣವಾಗಿ ಸರಕನ್ನು ಸರಬರಾಜು ಮಾಡುತ್ತಿದ್ದು ಅವುಗಳ ಗುಣಮಟ್ಟ ತೃಪ್ತಿಕರವಾಗಿದೆ. ಈ ಸಂಸ್ಥೆ ಹಲವು ಭಾರಿ ವಿಫಲವಾಗಿದೆ ಎಂಬುದು ನಿಜವಲ್ಲ. ಆದಾಗ್ಯೂ ಸುಮಾರು 4 ವರ್ಷಗಳ ಹಿಂದೆ ಈ ಸಂಸ್ಥೆ ರಷ್ಯನ್ ಮೂಲಕ ತಿರುಳನ್ನು ನೀಡಲು ಮುಂದಾದ ಸಂದರ್ಭದಲ್ಲಿ ರಷ್ಯದಲ್ಲಿನ ನೀತಿಗಳ ಪರಿವರ್ತನೆಗಳಿಂದಾಗಿ the political changes that has taken place in Russia ಹಾಗೂ ಅಲ್ಲಿನ ಕಾರ್ಖಾನೆಗಳ ಮುಚ್ಚುವಿಕೆಯಿಂದಾಗಿ ಅವರು ತಿರುಳನ್ನು ಸರಬರಾಜು ಮಾಡಲಾಗಲಿಲ್ಲ. ಹಾಗೂ ಅದಕ್ಕಾಗಿ ಪರಿಹಾರವನ್ನು ಆ ಕಂಪನಿಯವರು ನೀಡಿರುತ್ತಾರೆ. 1989 ರಲ್ಲಿ ಖರೀದಿಯಲ್ಲಿನ ಅವ್ಯವಹಾರಗಳ ಬಗ್ಗೆ ಯಾವ ರೀತಿಯ ಲೋಪದೋಷಗಳೂ ಕಂಡುಬಾರದೇ ಇದ್ದುದರಿಂದ ಫಿರ್ಯಾದುದಾರರು ತಮ್ಮ ದೂರನ್ನು ಹಿಂತೆಗೆದುಕೊಂಡಿದ್ದು ಲೋಕಾಯುಕ್ತದಿಂದ ಈ ಕೇಸು ಮುಕ್ತಾಯವಾಗಿದೆ. ಯಾರು ಫಿರ್ಯಾರುದಾರರು ಕೇಸ್ ಲೋಕಾಯುಕ್ತಕ್ಕೆ ಕೊಟ್ಟಿದ್ದರು. ಅವರ ವಾಪಸ್ಸು ತೆಗೆದುಕೊಂಡಿದ್ದಾರೆ. ಎಂಪಿ ಎಂ ತಿರುಳನ್ನು ಅವರ ಅಂತರಿಕ ಪರೀಕ್ಷಣಾ ಪ್ರಮಾಣ ಪತ್ರವನ್ನು ಆಧರಿಸಿಕೊಳ್ಳುತ್ತಿದೆಯಲ್ಲದೇ ಈ ಗುಣಮಟ್ಟದ ಪ್ರಮಾಣ ಪತ್ರ ಕೈಸೇರಿದ ನಂತರವೇ ತಿರುಳನ್ನು ಸ್ವೀಕರಿಸಲಾಗುತ್ತದೆ. ಆದಾಗ್ಯೂ ಗುಣಮಟಕ್ಕೆ ಸಂಬಂಧಿಸಿದಂತೆ ಇನ್ನೂ ಹೆಚ್ಚಿನ ಬಿಗಿಯಾದ ನಿಯಂತ್ರಣ ಸಾಧಿಸುವ ದೃಷ್ಟಿಯಿಂದ ತನಗೆ ಪ್ರತಿ ಮೆಟ್ರಿಕ್ ಟನ್‌ಗೆ 2 ರಿಂದ 3 ಅಮೇರಿಕನ್ ಡಾಲರ್‌ಗಳ ಹೆಚ್ಚಿನ ವೆಚ್ಚ ತಗಲಿದ್ದಾಗ್ಯೂ ಸಹ ಎಂಪಿ ಎಂ ಬೇರೊಬ್ಬರ ತಪಾಸಣೆಗೆ ಥರ್ಡ್‌ಪಾರ್ಟಿ ಇನ್ಸ್‌ಪೆಕ್ಷನ್ ಅನ್ನು ಜಾರಿಗೆ ತಂದಿತು. ಈ ಸರಬರಾಜುದಾರರ ಮೂಲಕ ತಪಾಸಣೆ ಮಾಡುವ ಸಂಸ್ಥೆಗಳಿಗೆ ನೀಡುವ ಹಣದ ಬಾಬ್ತು ಸುಮಾರು 12.00 ಲಕ್ಷ ರೂ.ಗಳಿಂದ 15 ಲಕ್ಷ ರೂಪಾಯಿಗಳಿಗೆ ಖರ್ಚಾಗುತ್ತಿತ್ತು. ಅಂದರೆ ಸಮನಾದ ಯು ಎಸ್ ಡಾಲರ್ 30 ಸಾವಿರ ಮೊತ್ತದ ವರ್ಷಂಪ್ರತಿ ಅಧಿಕಹೊರೆ ಎಂಪಿ ಎಂಗೆ ಬೀಳುತ್ತಿತ್ತು. ಇದನ್ನು ನಾವು ಇವತ್ತು ಈ ಒಂದು ವೆಚ್ಚ ಈ ಕಂಪನಿ ಮೇಲೆ ಭಾರ ಆಗುತ್ತದೆ ಇದನ್ನು ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ಈ ಒಂದು ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್ ಬೇಡ ಎನ್ನುವ ಅಭಿಪ್ರಾಯಕ್ಕೆ ಕಂಪನಿ ಬಂದಿತು. ಇದನ್ನು ತೆಗೆದುಹಾಕಿದಲ್ಲಿ ಸರಬರಾಜುದಾರರಿಗೆ ಯಾವುದೇ ಅನುಕೂಲವು ಇಲ್ಲ. ಈ ಸಂಸ್ಥೆಯಲ್ಲಿನ ಆಂತರಿಕ ಗುಣಮಟ್ಟಗಳ ಬಗ್ಗೆ ಖಾತರಿ ಪಡಿಸಿಕೊಂಡ ನಂತರ, ವಾರ್ಷಿಕ 30 ಸಾವಿರ ಯು ಎಸ್ ಡಾಲರ್‌ಗಳನ್ನು ಉಳಿಸುವ ಉದ್ದೇಶದಿಂದ ಈ ತಪಾಸಣೆಯನ್ನು ಕೈಬಿಡುವ ನಿರ್ಧಾರವನ್ನು ಎಂಪಿ ಎಂ ಕೈಗೊಂಡಿತ್ತು. ತೀವ್ರ ಸ್ಪರ್ಧೆಗಳ ವಾತಾವರಣದಿಂದಾಗಿ ಎಂಪಿ ಎಂ ವೆಚ್ಚಗಳನ್ನು ಮಿತಗೊಳಿಸುವ ಪ್ರಕ್ರಿಯೆಯಲ್ಲಿದೆ. ಈ ಮೊತ್ತದ ವೆಚ್ಚಗಳನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗುತ್ತದೆ. ಕಾರ್ಯಶೀಲತೆಯ ಖಾತರಿಯ ಕಲಮನ್ನು ಸೇರಿಸಿ ಒಂದು ವೇಳೆ ಕಳಪೆ ಗುಣಮಟ್ಟದ ಸರಕು ಸರಬರಾಜು ಆದಲ್ಲಿ ಪರಿಹಾರದ ನೀಡಿಕೆಯ ನಿರ್ಬಂಧನೆಯನ್ನು ಸೇರಿಸುವಂತಹ ಹೆಚ್ಚಿನ ಎಚ್ಚರಿಕೆಗಳನ್ನು ವಹಿಸಿದ ನಂತರ ಬೇರೆಯವರಿಂದ ತಪಾಸಣೆ ನಡೆಸುವುದನ್ನು ಕೈಬಿಡಲಾಗಿದೆಯೇ ವಿನ: ಸದರಿ ಸಂಸ್ಥೆಗೆ ಯಾವುದೇ ರೀತಿಯ ವಿಶೇಷ ಅನುಕೂಲಗಳನ್ನು ತೋರಿಸಲಾಗಿಲ್ಲ. ಫೇವರ್ ಮಾಡಬೇಕೆಂದು ಆ ಸಂಸ್ಥೆಗೆ ಇರಲಿಲ್ಲ. ಪ್ರತಿ ಖರೀದಿಯ ಪ್ರಮಾಣವನ್ನು ಅನುಸರಿಸಿ ಮೌಲ್ಯವು ಬದಲಾವಣೆಯಾಗುತ್ತದೆ. ಅಂತಿಮವಾಗಿ ಉತ್ಪಾದಿತವಾದ ವಾರ್ತಾ ಮುದ್ರಣದ ಗುಣಮಟ್ಟವನ್ನು ಅನುಸರಿಸಿ ತಿರುಳಿನ ಬೇಡಿಕೆಯು ನಿರ್ಧಾರಿತವಾಗುತ್ತದೆ. ಸಾಮಾನ್ಯವಾಗಿ ಶೇ. 20 ರಷ್ಟು ಆಮದಿತ ತಿರುಳನ್ನು ಸೇರಿಸುವುದರಿಂದಾಗಿ ಖರೀದಿಸಲಾದ ತಿರುಳಿನ ಮೌಲ್ಯವು ವಾರ್ತಾ ಮುದ್ರಣದ ಗುಣಮಟ್ಟವನ್ನು ಅವಲಂಬಿಸುತ್ತದೆ. ನಾವು ಪ್ರತೀ ಟನ್‌ಗೂ ಬೇರೆಯವರಿಂದ ತಪಾಸಣೆಗೆ ಒಳಪಡಿಸುವ ಒತ್ತಾಯ ಹೇರಿದರೆ ಸರಬರಾಜುದಾರರು ಪ್ರತಿ ಟನ್‌ಗೂ 2 ರಿಂದ 3 ಯು ಎಸ್ ಡಾಲರ್‌ಗಳ ಹೆಚ್ಚಿನ ಬೆಲೆ ಸೇರಿಸುತ್ತಾರೆ. ಮಾನ್ಯ ಅಧ್ಯಕ್ಷರೇ, ಇದು ನಾನು ಲಿಖಿತ ಮೂಲಕ ನನಗೆ ನನ್ನ ಇಲಾಖೆಯಿಂದ

ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್‌ನ್ನು ಓದಿ ಹೇಳಿದ್ದೇನೆ. ಮಾನ್ಯ ಅಧ್ಯಕ್ಷರೇ, ಕ್ಷಮಿಸಬೇಕು, ನಮ್ಮ ಮುದ್ರಣ ರಾಕ್ಷಸನ ಧಾಳಿಯಿಂದಾಗಿ ನನಗೆ ಸರಿಯಾಗಿ ಓದುವುದಕ್ಕೆ ಆಗಲಿಲ್ಲ. ನನ್ನದು ಏನೂ ತಪ್ಪಿಲ್ಲ. ನನಗೆ ಕನ್ನಡ ಬರುವುದಿಲ್ಲವೆಂದು ತಿಳಿದು ಕೊಳ್ಳಬೇಕು. ನಮ್ಮಲ್ಲಿ ಇರತಕ್ಕಂಥ ಯಂತ್ರಗಳು ನೋಡಿದರೆ ನಾವು ಎಲ್ಲಿದ್ದೇವೆ ಇನ್ನು? ನಾವು ಇನ್ನು 18ನೇ ಶತಮಾನದಲ್ಲಿ ಇದ್ದೇವೆಂದು ನಿಮಗೆ ಗೊತ್ತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಏಕೆ ಇದ್ದೀರಿ? ನಿಮ್ಮನ್ನು ಇರು ಎಂದು ಹೇಳಿದವರು ಯಾರು? ಯಾರಾದರೂ ನಿಮ್ಮನ್ನು ಇರಿ ಎಂದು ಹೇಳಿದೆವಾ? ನಿಮಗೆ ಅಧಿಕಾರ ಕೊಟ್ಟಿದ್ದೇವೆ. ಆ ಶತಮಾನಕ್ಕೆ ಏಕೆ ಹೋಗಬೇಕು?

ಶ್ರೀ ಬಿ. ಎ. ಮೊಹಿದ್ದೀನ್ : ಇವತ್ತು ಸಂಪನ್ಮೂಲಗಳು ಇಲ್ಲ. ಸಂಪನ್ಮೂಲಗಳ ಕೊರತೆ ನಿಮಗೆ ಎದ್ದು ಕಾಣುತ್ತದೆ. ನಾವು ಕಂಪ್ಯೂಟರ್ ಅಳವಡಿಸಿ ಟೈಪ್ ಮಾಡುವಂತಹ ಸ್ಥಿತಿಯಲ್ಲಿ ಇಲ್ಲ ಎನ್ನುವಂತಾದ್ದು ಗಮನಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಆಡಳಿತದಲ್ಲಿ ಸೋಲು ಒಪ್ಪಿಕೊಳ್ಳುತ್ತಿದ್ದೀರಿ. ನೀವು ಸುಂದರವಾಗಿ ಕನ್ನಡದಲ್ಲಿ ಟೈಪ್ ಮಾಡುವುದಕ್ಕೆ ಅನುಕೂಲವಿಲ್ಲವೆಂದು ಹೇಳಿದಿರೆ, ಏನು ಪರಿಸ್ಥಿತಿ ನಿಮ್ಮದು?

ಶ್ರೀ ಬಿ.ಎ. ಮೊಹಿದ್ದೀನ್ : ವಿಚಾರಗಳನ್ನು ನಾವು ನಿಮ್ಮ ಜೊತೆಯಲ್ಲಿ ಹಂಚಿ ಕೊಳ್ಳಬೇಕು. ನೀವು ನಮ್ಮ ಸಹೋದರರು ತಾನೇ?

ಅಧ್ಯಕ್ಷರು : ವಾಟಾಳ್‌ರವರೇ, ನಾವು ಮತ್ತು ಮೊಹಿದ್ದೀನ್‌ರವರು ಸುಮಾರು 28 ವರ್ಷಗಳ ಕಾಲ ಸ್ನೇಹಿತರು. ಪ್ರಾರಂಭದಲ್ಲಿ ನನಗೆ ಸರಿಯಾಗಿ ಕನ್ನಡ ಬರುತ್ತಿರಲಿಲ್ಲ. ನನಗೆ ಕನ್ನಡವನ್ನು ಆಲ್‌ವೂಸ್ ಇವರೇ ಹೇಳಿಕೊಟ್ಟುವರು. ಇವರು ಅವರು ಓದಿದ್ದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಇವರಿಗೆ ಏನಾದರೂ ಹೆಚ್ಚು ಕಡಿಮೆ ಆಯಿತಾ ಅಥವಾ ಬರೆದು ಕೊಟ್ಟಿಲ್ಲವಾ? ಇವರೇನು ಭಯ ಬಿದ್ದಿದ್ದಾರಾ? ಏನೂ ಅರ್ಥವಾಗಲಿಲ್ಲ. ಆಮೇಲೆ ಅಧಿಕಾರಿಗಳಿಗೆ ಹೇಳಿ ಕಳುಹಿಸಿದೆ ಯಾರಪ್ಪ ಇಷ್ಟು ಮಾತ್ರ ಪುಣ್ಯ ಕಟ್ಟಿಕೊಂಡವರು ಎಂದು ಹೇಳಿ. ಆ ರೀತಿ ಟೈಪ್ ಮಾಡಿ ಅವರಿಗೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಏನಾಯಿತೆಂದರೆ ಇವರು ಇಂಗ್ಲೀಷ್‌ನಲ್ಲಿ ಇದ್ದದ್ದನ್ನು ಕನ್ನಡದಲ್ಲಿ ತುರ್ಜಮೆ ಮಾಡಿಕೊಳ್ಳುತ್ತಿದ್ದಾರೋ ಏನೋ ಎಂದು ನನಗೆ ಅನುಮಾನ ಬಂತು. ಇಂಗ್ಲಿಷ್‌ನಲ್ಲಿ ಇದ್ದದ್ದನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಕೊಳ್ಳುತ್ತಿದ್ದರೆ ಪದಗಳು ಸ್ವಲ್ಪ ವ್ಯತ್ಯಾಸವಾಗುತ್ತವೆ.

ಶ್ರೀ ಅರಗ ಜ್ಞಾನೇಂದ್ರ : ಮಂತ್ರಿಗಳು ತಪ್ಪು ಹೇಳಲಿ ಎಂದು ತಪ್ಪು ತಪ್ಪೆಲ್ಲಾ ಮಾಡಿದ್ದಾರೆ.

ಅಧ್ಯಕ್ಷರು : ಯಾರು ಬಂದರೂ ಅವರೇ ಟೈಪ್ ಮಾಡಿಕೊಡುವುದು. ನೀವು ಬಂದರೂ ಅವರೇ ಟೈಪ್ ಮಾಡಿಕೊಡುವುದು. You can meet the points raised by the Hon'ble Members orally.

ಶ್ರೀ ಬಿ. ಎ. ಮೊಹಿದ್ದೀನ್ : ಈಗ ಬಹಳ ಮುಖ್ಯವಾದ ವಿಚಾರವನ್ನು ಹೇಳಿದ್ದೀರಿ. We will be reint reducing the third party inspection. ತಮ್ಮ ಗಮನಕ್ಕೆ ನಾನು ಮಾನ್ಯ ಅಧ್ಯಕ್ಷರ ಮೂಲಕ ತರುವುದಕ್ಕೆ ಇಷ್ಟಪಡುತ್ತೇನೆ. ಎಲ್ಲಾ ಸರ್ಕಾರಿ ಪರ್‌ಚೇಸಸ್ ನಾವೇನು ಒಂದು ಬೆಂಚು, ಕುರ್ಚಿ,

ಇನ್ನೊಂದು , ಮತ್ತೊಂದು ಮಾಡಿದರೂ ನಮ್ಮ ಮೇಲೆ ಗೂಬೆ ಕೂರಿಸತಕ್ಕಂಥಾದ್ದು. ಯಾವ ಪರ್‌ಚೇಸಸಶನಲ್ಲೂ ಕೂಡ ಗೂಬೆ ಕೂರಸತಕ್ಕಂಥಾದ್ದು ಆಗಬಾರದು ಎಂದೇಳಿ ಇವತ್ತು ನಮ್ಮ ಇಲಾಖೆ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೀವೆ. The Government is the biggest Consumer today. ಸರ್ಕಾರ ಪರ್‌ಚೇಸ್ ಮಾಡತಕ್ಕಂಥ ಸಾಮಾಗ್ರಿಗಳು ಏನಿವೆ ಅವು ಕಳಪೆ, ಜಿಲ್ಲಾ ಪಂಚಾಯತ್‌ನಲ್ಲಿ ಪರ್‌ಚೇಸ್ ಮಾಡಿದರೆ ಕಳಪೆ ಕಾಣುತ್ತದೆ, ಸರ್ಕಾರಿ ಇಲಾಖೆಗಳಲ್ಲಿ ಪರ್‌ಚೇಸ್ ಮಾಡಿದರೆ ವಸ್ತುಗಳು ಕಳಪೆ ಕಾಣುತ್ತದೆ. ಲಂಚರುಷುವತ್ತು ಎಲ್ಲಾ ಇದೆ ಎನ್ನುವ ಕಾರಣಕ್ಕೆ ನಮ್ಮಲ್ಲಿ ಇರತಕ್ಕಂಥ ಉದ್ಯಮಗಳನ್ನು ಬಿಟ್ಟುಬಿಟ್ಟು ಹೊರಗಿನಪಿನೋಲೆಕ್ಸ್‌ನಿಂದ ಪೈಪ್ ತರಬೇಕು. ಏಕೆಂದರೆ ಕೋಲಾರದಲ್ಲಿ ಇರತಕ್ಕಂಥ ಪಿ.ವಿ.ಸಿ. ಪೈಪ್ ಬೇಡ ನಮಗೆ. ಏಕೆ ಬೇಡ. ಅಲ್ಲಿ ಪಿನೋಲೆಕ್ಸ್ ಪೈಪ್ ಬಂದರೆ ನಮಗೆ ಬಹಳ ಒಳ್ಳೆಯದು. ಪಿನೋಲೆಕ್ಸ್‌ದ್ದು ಒಂದು ಸೀಲ್ ಹಾಕಿಕೊಟ್ಟರೂ ಕೂಡ ಅಧಿಕಾರಿಗಳು ತೆಗೆದುಕೊಂಡು ಬಿಡುತ್ತೇವೆ. ಇದನ್ನು ನಾವು ನಿರ್ಬಂಧ ಮಾಡಿದ್ದೇವೆ. ನಾವು ಏನು ಮಾಡಿದ್ದೇವೆ ಎಂದರೆ ನಮ್ಮ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗತಕ್ಕಂಥ ವಸ್ತುಗಳನ್ನು ನಮ್ಮ ರಾಜ್ಯದಲ್ಲೇ ನಾವು ಸರ್ಕಾರದವರಾಗಿ ದೊಡ್ಡ ಗ್ರಾಹಕರಾಗಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಆದ್ದರಿಂದ ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್ ಬಗ್ಗೆ ತಾವು ಏನು ಒತ್ತನ್ನು ಕೊಟ್ಟಿದ್ದೀರಿ ಅದನ್ನು we will be re-introducing in MPM ಈಗ ಥರ್ಡ್ ಪಾರ್ಟಿ ಇನ್‌ಸ್ಪೆಕ್ಷನ್ ಇದ್ದೇ ಇರುತ್ತದೆ. ಅದು ಎಷ್ಟೇ ಖರ್ಚುವೆಚ್ಚ ಆದರೂ ಚಿಂತೆ ಇಲ್ಲ. ಆಮೇಲೆ ಅನೇಕ ಬೇರೆ ವಿಚಾರಗಳನ್ನು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೆ, ಇವೊತ್ತು ಈ ದೇಶದಲ್ಲಿ ನಾವು ಒಪ್ಪಿದ್ದೇವೊ ಇಲ್ಲವೋ ಗೊತ್ತಿಲ್ಲ ಅನೇಕ ಜನ ಇವೊತ್ತಿನ ನಮ್ಮ ಔಧ್ಯಮಿಕ ನೀತಿಯ ಬಗ್ಗೆ ಪ್ರಶ್ನೆ ಮಾಡಬಹುದು. ಇದು ನಮ್ಮ ಮೇಲೆ ಹೇರಲ್ಪಟ್ಟದ್ದು. 1992 ರಲ್ಲಿ ನಮ್ಮ ಮೇಲೆ ಜಾಗತೀಕರಣ, ಉದಾರೀಕರಣ ಇದೆಲ್ಲಾ ಬಂತು. ಈ ಜಾಗತೀಕರಣ ಉದಾರೀಕರಣ ಎನ್ನತಕ್ಕಂಥದ್ದು ನಾವು ಕೇವಲ ಹೊರಗಿನಿಂದ ಬರತಕ್ಕಂಥ ಉದ್ಯಮಗಳಿಗೆ ಮಾತ್ರ ಸೀಮಿತಗೊಳಿಸಿ ನಮ್ಮ ಬಾಗಿಲನ್ನು ತೆರೆಯುವುದು ಮಾತ್ರವಲ್ಲ, ನಮ್ಮಲ್ಲಿ ಇರತಕ್ಕಂಥ ಉದ್ಯಮಗಳ ಅದರಲ್ಲೂ ಪಬ್ಲಿಕ್ ಅಂಡರ್‌ಟೇಕಿಂಗ್ ಕಂಪನಿಗಳು ಏನಾಗಿದೆ, ಮುಖ್ಯವಾಗಿ ನಾನು ಒಂದು ವಿಚಾರವನ್ನು ಹೇಳುತ್ತೇನೆ. ಸರ್ಕಾರ ಅಥವಾ ಜನಪ್ರತಿನಿಧಿಗಳು ಆಗಿಂದಾಗ್ಗೆ ಮೂಗು ತೂರಿಸುವುದರಿಂದಲೂ ಕೂಡ ಅನೇಕ ಸಂದರ್ಭದಲ್ಲಿ ಈ ಕಂಪನಿಗಳು ರೋಗಗ್ರಸ್ಥವಾಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ, ಹೇಗೆ ಎಂದು ನೀವು ಕೇಳಬಹುದು? ಈಗ ಮೈಸೂರು ಲ್ಯಾಂಪ್ಸ್ ತೆಗೆದುಕೊಳ್ಳಿ, ಮೈಸೂರು ಲ್ಯಾಂಪ್ಸ್ ಕಾರ್ಖಾನೆ ಇವೊತ್ತು ಏತಕ್ಕೆ ರೋಗಗ್ರಸ್ಥವಾಗಿದೆ? ಅಲ್ಲಿ ಎಷ್ಟು ಕಾರ್ಮಿಕರ ಅವಶ್ಯಕತೆ ಇದೆಯೋ ಅದಕ್ಕಿಂತ ಎರಡು ಪಾಲು, ಮೂರು ಪಾಲು ಕಾರ್ಮಿಕರು ಇವೊತ್ತು ಅಲ್ಲಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆ ರೀತಿ ನೇಮಕ ಮಾಡಿದವರು ಯಾರು?

ಶ್ರೀ ಬಿ. ಎ. ಮೊಹಿದ್ದೀನ್ : ಯಾರೇ ಆಗಲೀ, ನಾನು ಯಾರು ಎಂದು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ರಾಜಕಾರಣಿಗಳನ್ನು ಏಕೆ ಹೇಳುತ್ತಿದ್ದೀರಿ? ಮೈಸೂರು ಲ್ಯಾಂಪ್ಸ್ ಕಾರ್ಖಾನೆಗೆ ಹೆಚ್ಚಿನ ಕಾರ್ಮಿಕರನ್ನು ನೇಮಕ ಮಾಡಿದವರು ನಿಮ್ಮ ಐ. ಎ. ಎಸ್. ಅಧಿಕಾರಿಗಳು ತಮ್ಮ ಇಚ್ಛೆ ಬಂದಂತೆ ಬಂದ ಬಂದವರನ್ನು ನೇಮಕ ಮಾಡಿಕೊಂಡು ಹೋದರೇ ಹೊರತು ಯಾವ ಶಾಸಕರಾಗಲಿ, ಮಂತ್ರಿಗಳಾಗಲಿ ಹೇಳಿದವರಿಗೆ ನೀವ್ಯಾರೂ ಕೊಟ್ಟಿಲ್ಲ, ಅದು ಗೊತ್ತಿದೆ. ಆರುನೂರು- ಏಳುನೂರು

ಜನರನ್ನು ಎರಡು ತಿಂಗಳಿನಲ್ಲಿ ನೀವು ನೇಮಕ ಮಾಡಿ ಆ ಉನ್ನತವಾದಂಥ ಮೈಸೂರು ಲ್ಯಾಂಪ್ಸ್ ಕಾರ್ಖಾನೆಯನ್ನು ಮುಚ್ಚುವ ಮಟ್ಟಕ್ಕೆ ಬಂದಿರಬೇಕಾದರೆ ಅದಕ್ಕೆ ಕಾರಣ ನಿಮ್ಮ ಅಧಿಕಾರಿಗಳು. ಇದರಲ್ಲಿ ರಾಜಕಾರಣಿಗಳು ಯಾರು ಮೂಗನ್ನು ತೂರಿಸಿಲ್ಲ.

ಶ್ರೀ ಬಿ. ಎ. ಮೊಹಿದ್ದೀನ್ : ಈಗ ನಾವು ಕೊಟ್ಟಿರತಕ್ಕಂಥ ನಾಲ್ಕನ್ನು ಸೇರಿಸಿ, ನಮ್ಮನ್ನು ಸಂತೋಷಗೊಳಿಸಿ ನೇಮಕ ಮಾಡಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದು ಇಲ್ಲವೇ ಇಲ್ಲ.

ಶ್ರೀ ಬಿ. ಎ. ಮೊಹಿದ್ದೀನ್ : ಇಲ್ಲ ಎಂದರೆ ನಾನು ಅದನ್ನು ಒಪ್ಪುವುದಿಲ್ಲ. ಅದಕ್ಕೆ ನಾವೂ ಕಾರಣರಿದ್ದೀವೆ. ಅಂದರೆ ಅದರ ಅರ್ಥ ಇವೊತ್ತು ಈ ದೇಶದಲ್ಲಿ ಉದಾರೀಕರಣ ಏನಾಗಿದೆ, ಇದು ಅಲ್ಲಿನ ಆಡಳಿತದ ಮಟ್ಟಕ್ಕೂ ಕೂಡ ಉದಾರೀಕರಣ ಆಗಬೇಕು. ಈಗ ಮೈಸೂರು ಪೇಪರ್ ಮಿಲ್ಸ್ ನಲ್ಲಿ ಒಂದು ಬೋರ್ಡ್ ಇದೆ. ಈ ಬೋರ್ಡ್‌ನಲ್ಲಿ ಯಾರಿದ್ದಾರೆ? ಬೋರ್ಡ್ ಎಂದು ಹೇಳಿದರೆ ಅದು ಕಂಪನಿಯ ನೀತಿಗಳನ್ನು ರೂಪಿಸತಕ್ಕಂಥದ್ದು, ಅಧಿಕಾರಿಗಳು ನೀತಿಗಳನ್ನು ರೂಪಿಸುವುದಿಲ್ಲ, ಬೋರ್ಡ್ ರೂಪಿಸುತ್ತದೆ. ಈ ಬೋರ್ಡ್‌ನಲ್ಲಿ ಯಾರ್ಯಾರಿದ್ದಾರೆ ಎಂದರೆ ಪ್ರಿನಿಪಲ್ ಸೆಕ್ರೆಟರಿ - 2, ಸಿ ಅಂಡ್ ಐ, ಆರ್ಥಿಕ ಕಾರ್ಯದರ್ಶಿ, ಫೈನಾನ್ಷಿಯಲ್ ಎಕ್ಸ್‌ಪೆನ್ಸಸ್, ಆಮೇಲೆ ನಿಮ್ಮ ಫಾರೆಸ್ಟ್ ಸೆಕ್ರೆಟರಿ ಈ ಅಧಿಕಾರಿಗಳೆಲ್ಲಾ ಇರತಕ್ಕಂಥ ಉಚ್ಚಮಟ್ಟದ ಬೋರ್ಡ್, ಇದು ಪಾಲಿಸಿ ಆಗುತ್ತದೆ. ರಾಜಕಾರಣಿಗಳೂ ಕೂಡ 2- 3 ಜನ ಇದ್ದಾರೆ ಇಲ್ಲ ಎಂದು ಇಲ್ಲ.

ಶ್ರೀ ಅರಗ ಜ್ಞಾನೇಂದ್ರ : ಯಾರ್ಯಾರು ಇದ್ದಾರೆ ಎಂದು ಹೇಳಿ?

ಶ್ರೀ ವಾಟಾಳ್ ನಾಗರಾಜ್ : ಎಲ್ಲಾ ಸಾರ್ವಜನಿಕ ಉದ್ಯಮಗಳಲ್ಲಿ ಈ ಅಧಿಕಾರಿಗಳು ಒಂದು ಭೂತಾಕಾರವಾಗಿ ಬೆಳೆದಿದ್ದಾರೆ. ಇಡೀ ಸಾರ್ವಜನಿಕ ಉದ್ದಿಮೆ ಅದು ರೋಗಗ್ರಸ್ಥವಾಗಬೇಕಾದರೆ ಅದಕ್ಕೆ ನೇರವಾಗಿ ಅಧಿಕಾರಿಗಳೇ ಕಾರಣ. ಅದರಲ್ಲಿ ಬೇರೆ ಮಾತೇ ಇಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಬೋರ್ಡ್‌ನಲ್ಲಿ ರಾಜಕಾರಣಿಗಳು ಇಲ್ಲ, ಬರೀ ಅಧಿಕಾರಿಗಳು ಇದ್ದಾರೆ ಎಂಬುದಕ್ಕೆ ನಿಮಗೆ ದಾಖಲೆ ಗಳನ್ನು ಕೊಡುತ್ತಿದ್ದೇನೆ. ಬೋರ್ಡ್‌ನಲ್ಲಿ ಇರುವಂತಹವರು ಯಾರ್ಯಾರು ಎಂದರೆ, ಎಸ್. ಎಲ್ ಗಂಗಾಧರಪ್ಪ, ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು., ಎನ್. ಬಿ. ವಿಶ್ವನಾಥ್, ನಿರ್ದೇಶಕರು, ಶಿವಶಂಕರ್, ಎಂ. ಚಂದ್ರಶೇಖರ್ ಶೆಟ್ಟಿ, ಆರ್. ಕೆ. ಪಾಂಡೆ, ವಿ. ಡಿ. ಹೆಗಡೆ, ಡಿ. ಹೆಚ್. ಚಬ್ಬಿ, ನರೇಂದ್ರ, ಎಂ. ಕಿಣಿ, ಜಿ.ವಿ. ವೆಂಕಣ್ಣ, ಎಸ್. ಪರಮೇಶ್ವರಪ್ಪ ಎಂಬ ಇಷ್ಟು ಜನ ಇದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನ್ ಅಫಿಷಿಯಲ್ಸ್ ಎಷ್ಟು ಜನ ಇದ್ದಾರೆಂಬುದನ್ನು ಹೇಳಿ?

ಶ್ರೀ ವಾಟಾಳ್ ನಾಗರಾಜ್ : ಎಷ್ಟು ಜನ ರಾಜಕಾರಣಿಗಳಿದ್ದಾರೆ ಸ್ವಲ್ಪ ಹೇಳಿ? ಎಷ್ಟು ಜನ ಶಾಸಕರಿದ್ದಾರೆ ಹೇಳಿ. ನಿಮ್ಮ ಈ ಗುಂಪಿನಲ್ಲಿ 12 ಜನ ಅಧಿಕಾರಿಗಳ ಮಧ್ಯೆ ಒಬ್ಬ ಕುಳಿತುಕೊಂಡರೆ ಏನು ಮಾಡುವುದಕ್ಕಾಗುತ್ತೆದೆ? ಇದನ್ನೆಲ್ಲಾ ತಾವು ಸ್ವಲ್ಪ ದಯವಿಟ್ಟು ಹೇಳಿ. ಈಗಾಗಲೇ ರಾಜಕಾರಣಿಗಳ ಬಗ್ಗೆ ದೊಡ್ಡ ಭೂತ ಸೃಷ್ಟಿ ಮಾಡಿದ್ದಾರೆ, ಅಧಿಕಾರಿಗಳು ಪರಮ ಪವಿತ್ರರು ಎನ್ನತಕ್ಕಂಥದು ನಿರ್ಮಾಣವಾಗಿದೆ, ಅದು ಆಗಬಾರದು.

ಶ್ರೀ ಬಿ. ಎ. ಮೊಹಿದ್ದೀನ್ : ಹಾಗಾಗಿ ಈಗತಾನೇ ನನ್ನ ಸ್ಟೇಟ್‌ಮೆಂಟ್‌ನಲ್ಲೂ ಕೂಡ ಓದಿದ್ದೇನೆ. ಮಾನ್ಯ ಅಧ್ಯಕ್ಷರೆ, ಈ ಒಂದು ಉದಾರೀಕರಣ ನೀತಿ, ನಾವು ಎಲ್ಲಿಗೆ ಬಂದೆವು ಎಂದರೆ, ಆ್ಯಂಟಿ ಡಂಪಿಂಗ್ ಡ್ಯೂಟಿ ಎಂದು ಇತ್ತು. ನಮಗೆ ಪತ್ರಿಕೆಯವರು ಬೇಕು, ನಾವು ಮಾತನಾಡಿದ್ದೆಲ್ಲಾ ಪತ್ರಿಕೆಯಲ್ಲಿ ಬರಬೇಕು ಇದೆಲ್ಲಾ ಆ್ಯಂಟಿ ಡಂಪಿಂಗ್ ಡ್ಯೂಟಿ. ಆಗೆಲ್ಲಾ ಜೀರೋ ಎಕ್ಸ್‌ಛೇಂಜ್ ಡ್ಯೂಟಿ ಮಾಡಿದ್ದೆವು. ಎಲ್ಲಾ ವಿದೇಶಿಗಳ ನ್ಯೂಸ್ ಪೇಪರ್‌ಗೆ ಬೇಕಾಗಿರತಕ್ಕಂಥ ಪ್ರಿಂಟಿಂಗ್ ಮೆಟೀರಿಯಲ್ಸ್ ಈ ದೇಶದಲ್ಲಿ ಬಂದು ಡಂಪ್ ಆಯಿತು. ಅದರ ಪರಿಣಾಮವಾಗಿ ಬೆಲೆಯಲ್ಲಿ ಇಳಿತ ಆಯಿತು. ಆ ಪರಿಣಾಮವಾಗಿ ಕಾಂಪಿಟ್ ಮಾಡಬೇಕಾಯಿತು.....

ಶ್ರೀ ವಾಟಾಳ್ ನಾಗರಾಜ: ನಾವು ಕೇಳುತ್ತಿರುವುದು ಏನು? ನಿಮ್ಮ ಉದಾರೀಕರಣದ ಬಗ್ಗೆ ಆಮೇಲೆ ಮಾತನಾಡೋಣ. ಈಗ ಮೈಸೂರು ಪೇಪರ್ ಮಿಲ್ಸ್ ದಿವಾಳಿತನವಾಗಿರುವ ಬಗ್ಗೆ, ದರೋಡೆಯಾಗಿರುವ ಬಗ್ಗೆ ಮೊದಲು ಹೇಳಿ ಸ್ವಾಮಿ?

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಮಾನ್ಯ ಅಧ್ಯಕ್ಷರೆ, ಉದಾರೀಕರಣದಿಂದ ಇಷ್ಟೆಲ್ಲಾ ನಷ್ಟ ಆಗುತ್ತಿದೆ ಎಂದು ಹೇಳುತ್ತಿದ್ದೀರಿ, ಉದಾರೀಕರಣವನ್ನು ನೀವೂ ಕೂಡ ಒಪ್ಪಿಕೊಂಡಿದ್ದೀರಿ, ಅದಕ್ಕೆ ವಿರೋಧ ಏನೂ ಮಾಡಲಿಲ್ಲ. ನೀವು ಉದಾರೀಕರಣದ ಮೇಲೆ ಏಕೆ ತಪ್ಪಿಸಿಕೊಳ್ಳುತ್ತಿದ್ದೀರಿ?

ಶ್ರೀ ಬಿ. ಎ. ಮೊಹಿದ್ದೀನ್ :ನಾನು ಒಪ್ಪಿಕೊಂಡಿಲ್ಲ ಎಂದು ಹೇಳಲಿಲ್ಲ. ಅದರ ಪರಿಣಾಮಗಳನ್ನು ನಿಮ್ಮಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :ನಮಗೆ ಬೇರೆ ವಿಚಾರ ಬೇಡ. ಮೈಸೂರು ಪೇಪರ್ ಮಿಲ್ಸ್‌ನಲ್ಲಿ ನಡೆದಿರತಕ್ಕಂಥ ವ್ಯವಹಾರಗಳನ್ನು ಪಟ್ಟಿ ಮಾಡಿ ಸರ್ಕಾರಕ್ಕೆ ಕೇಳಿದ್ದೇವೆ, ಅದು ಉಂಟೇ ಇಲ್ಲವೇ? ಸಿ.ಬಿ.ಐ. ತನಿಖೆ ಮಾಡುತ್ತೀರೋ ಅಥವಾ ಇಲ್ಲವೇ? ಇಷ್ಟು ಹೇಳಿ ಮಿಕ್ಕಿದ್ದನ್ನು ಆಮೇಲೆ ನೋಡಿಕೊಳ್ಳೋಣ.

ಶ್ರೀ ಅರಗ ಜ್ಞಾನೇಂದ್ರ : ಇಲ್ಲಿ ಉದಾರೀಕರಣ ನಷ್ಟ ಆಗಲಿಲ್ಲ. 375 ಡಾಲರ್ ಕೊಡುವವನಿಗೆ ಟೆಂಡರ್ ಕೊಡದೆ, 385 ಡಾಲರ್ ಕೊಟ್ಟವನಿಗೆ ಟೆಂಡರ್ ಅಕ್ಸೆಪ್ಟ್ ಮಾಡಿ ಕೊಂಡರೆ ಇಲ್ಲಿ ಉದಾರೀಕರಣದಿಂದ ನಷ್ಟ ಹೇಗೆ ಆಗುತ್ತದೆ ಹೇಳಿ? ನಾವು ಇಲ್ಲಿ ದಾಖಲೆಗಳನ್ನು ಕೊಡುತ್ತಿದ್ದೇವಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವ ರಾಜಕಾರಣಿ ವಿದೇಶಕ್ಕೆ ಹೋಗಿ ಇಪ್ಪತ್ತೈದು ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಈ ಮೈಸೂರು ಪೇಪರ್ ಮಿಲ್ಸ್‌ನ ಅಧ್ಯಕ್ಷರು ಹಾಗು ವ್ಯವಸ್ಥಾಪಕ ನಿರ್ದೇಶಕರು ವಿದೇಶ ಪ್ರವಾಸಕ್ಕಾಗಿ 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದು ನೇರವಾಗಿ ಆಪಾದನೆ ಮಾಡುತ್ತಿದ್ದೇವೆ. ಈ 25 ಲಕ್ಷ ರೂಪಾಯಿಗಳನ್ನು ಯಾವ ಕಾರಣಕ್ಕೋಸ್ಕರ ಖರ್ಚು ಮಾಡಿದ್ದುದು, ಅದರಿಂದ ಆಗಿರತಕ್ಕಂಥ ಲಾಭ ಏನು? ಅದನ್ನು ತಾವು ಸ್ಪಷ್ಟಪಡಿಸಿ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಇದು ಕೇಂದ್ರ ಸರ್ಕಾರದ ಉದಾರೀಕರಣದ ಬಗ್ಗೆ ನಾವು ಮಾತನಾಡುತ್ತಿಲ್ಲ, ಇದು ಗಂಗಾಧರಪ್ಪನವರ ಉದಾರೀಕರಣ ಅವರ ಉದಾರೀಕರಣದಿಂದ ಇವೊತ್ತು ಪೇಪರ್ ಮಿಲ್ ಮುಚ್ಚಿಹೋಗುತ್ತಿರುವುದು.

ಶ್ರೀ ಅರಗ ಜ್ಞಾನೇಂದ್ರ : ಇದಕ್ಕೆ ಹಿನ್ನೆಲೆಬೇಕು. ಕಾರಣ ಏನು? ಕೇವಲ ಒಂದು ಮಿಸ್ ಮ್ಯಾನೇಜ್‌ಮೆಂಟ್ ಕಂಪನಿ ಇರುವುದರಿಂದಲೇ ಇದೆಲ್ಲಾ ಆಯಿತು ಎಂದು ಹೇಳಿದರೆ ಈ ಬೋರ್ಡ್ ಇರುವುದು ಏತಕ್ಕೆ?

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಇದು ವ್ಯವಸ್ಥಾಪಕ ನಿರ್ದೇಶಕರ ದುರಾಡಳಿತವಾಗಿದೆ.

ಶ್ರೀ ವಾಟಾಳ್ ನಾಗರಾಜ್ : 35 ಕೋಟಿ ರೂಪಾಯಿ ಲಾಭ ಮಾಡುತ್ತಿದ್ದುದು 2 ಕೋಟಿ ರೂಪಾಯಿಗೆ ಇಳಿಯಬೇಕಾದರೆ ಇಲ್ಲಿ ವ್ಯವಸ್ಥಾಪಕ ಮಂಡಳಿಯ ಅವ್ಯವಹಾರ ಆಗಿದೆ, ಅಧಿಕಾರಿಗಳ ದುರ್ವರ್ತನೆ ಆಗಿರತಕ್ಕಂಥದ್ದು ಇದು.

ಶ್ರೀ ಅರಗ ಜ್ಞಾನೇಂದ್ರ : ಅಧ್ಯಕ್ಷರೆ, ಈ ಕಂಪನಿಯನ್ನು ಮಿಸ್ ಮ್ಯಾನೇಜ್‌ಮೆಂಟ್ ಮಾಡಿರುವುದು ಮಾತ್ರವಲ್ಲ, ಒಳ್ಳೆಯ ಪ್ರಾಮಾಣಿಕ ಮಂತ್ರಿಯನ್ನು ಕೂಡ ಮಿಸ್‌ಗೈಡ್ ಮಾಡಿದ್ದಾರೆ. ಇದು ನನಗೆ ಬೇಜಾರಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮೊನ್ನೆ ತಾನೇ ಅಧ್ಯಕ್ಷರು ಪ್ರಾಮಾಣಿಕ ಮಂತ್ರಿ ಎಂದು ಹೇಳಿದರು, ನಿಮ್ಮ ಹೇಳಿಕೆ ನೋಡಿದರೆ ಅನುಮಾನ ಬರುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಇಲಾಖೆಯನ್ನು ಅವರು ಹೊಸದಾಗಿ ವಹಿಸಿಕೊಂಡಿದ್ದಾರೆ, ಮಾನ್ಯ ಸದಸ್ಯರು ಮೈಸೂರು ಪೇಪರ್ ಮಿಲ್ಸ್‌ನಲ್ಲಿ ನಡೆದಿರತಕ್ಕಂಥ ಕೆಲವು ವ್ಯವಹಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈಗ ತಕ್ಷಣ ಅವರು ಉತ್ತರವನ್ನು ಹೇಳುವುದಕ್ಕೆ ಆಗದೇ ಇರುವ ಸಂದರ್ಭ ಇದ್ದರೂ ಇರಬಹುದು. ಇಲ್ಲ ಎಂದು ಹೇಳುವುದಿಲ್ಲ.

ಅಧ್ಯಕ್ಷರು : ನೀವು ಬಹಳ ಜಾಣರು, ಅನುಭವಿಗಳು, ವಾಗ್ಮಿಗಳು ಎಂಬುದು ನಮಗೆಲ್ಲಾ ಗೊತ್ತಿದೆ, ಮೊಹಿದ್ದೀನ್‌ರವರು ಅವರಿಗೆ ಗೊತ್ತಿರತಕ್ಕಂಥ ಎಲ್ಲಾ ವಿಚಾರವನ್ನು ಹೇಳಿದ್ದಾರೆ. ಇವರು ಪ್ರಸ್ತಾಪ ಮಾಡಿರತಕ್ಕಂಥ ವಿಚಾರಗಳಿಗೆ ಕೆಲವೊಂದಕ್ಕೆ ಉತ್ತರವನ್ನು ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅದಕ್ಕೆ ನಾನು ಹೇಳುತ್ತಿರುವುದು ಈಗ ತಕ್ಷಣ ಉತ್ತರವನ್ನು ಹೇಳುವುದಕ್ಕೆ ಸಾಧ್ಯವಿಲ್ಲದಿದ್ದರೆ....

ಅಧ್ಯಕ್ಷರು : ನಾಣಯ್ಯನವರು ಅಧಿಕಾರಿಗಳು ಹತ್ತಿರ ಬ್ರೀಫಿಂಗ್ ತೆಗೆದುಕೊಳ್ಳುತ್ತಿದ್ದಾರೆ, ಅವರು ಏನಾದರೂ ಸಹಾಯ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ಬೇಕಾದರೆ ಅವರು ಎಲ್ಲಾ ವಿವರಗಳನ್ನು ಸಂಗ್ರಹ ಮಾಡಿ ನಾಳೆ ಹೇಳಲಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಪರವಾಗಿ ಯಾರೂ ಬೇಕಾದರೂ ಉತ್ತರವನ್ನು ಕೊಡಬಹುದು. ಆದರೆ ನಮಗೆ ಮಾನ್ಯ ನಾಣಯ್ಯನವರು ಎಂದರೆ ಬಹಳ ಗೌರವವಿದೆ. ಅವರು ಯಾವ ಪ್ರಶ್ನೆಯನ್ನಾದರೂ ತಲೆಯಿಂದ ಕಾಲಿಗೆ ಮಾಡುತ್ತಾರೆ ಕಾಲಿನಿಂದ ತಲೆಗೆ ಮಾಡುತ್ತಾರೆ. ಅದು ಅವರ ವೈಶಿಷ್ಟವಾಗಿದೆ, ನಾನು ಅವರು ವಿರೋಧ ಪಕ್ಷದ ನಾಯಕರಾಗಿದ್ದಾಗಲೂ ಅವರ ಭಾಷಣವನ್ನು ಕೇಳಿದ್ದೇನೆ. ಅವರು ಎಲ್ಲಾ ಪಾತ್ರಗಳನ್ನು ಸೊಗಸಾಗಿ, ನಾಜೂಕಾಗಿ ಎಲ್ಲರೂ ಮೆಚ್ಚುವ ರೀತಿಯಲ್ಲಿ ಮಾಡುತ್ತಾರೆ. ಆದರಲ್ಲಿ ಎರಡು ಮಾತಿಲ್ಲ, ಅವರು ಮತ್ತೆ ಮತ್ತೆ ಶಾಸನಸಭೆಗೆ ಬರಬೇಕು, ಆದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ ಆದರೆ ಅವರನ್ನು ಈ ರಂಗಕ್ಕೆ ಎಳೆಯಬೇಡಿ, ಇದಕ್ಕೆ ಮಾನ್ಯ ಮಂತ್ರಿಯವರೇ ಉತ್ತರವನ್ನು ಕೊಡಲಿ,

ಅಧ್ಯಕ್ಷರು : ಸನ್ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಈ ಇಲಾಖೆಯನ್ನು ಮಾನ್ಯ ಮಂತ್ರಿಯವರು ವಹಿಸಿಕೊಂಡಿರುವಂಥಾದ್ದು ಇತ್ತೀಚೆಗೆ, ಈಗ ಮಾನ್ಯ ಸದಸ್ಯರುಗಳು ಬಹಳ ಗಂಭೀರ

ಸ್ವರೂಪದ ಆರೋಪಗಳನ್ನು ಮಾಡಿದ್ದಾರೆ. ಅವರು ಏನು ಲಿಖಿತ ರೂಪದಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ, ಅದನ್ನು ಬಹಳ ಪ್ರಾಯಾಸದಿಂದ ಸರಿಯಾಗಿರಲಿಲ್ಲವೆಂದು ಓದಿದ್ದಾರೆ. ಮಾನ್ಯ ಸದಸ್ಯರುಗಳು ಅಪಾದನೆ ಮಾಡಿದಾಗ ಅಲ್ಲಿನ ಆಫೀಸರ್‌ಗಳು ಅದಕ್ಕೆಲ್ಲಾ ಉತ್ತರಗಳನ್ನು ಮಾನ್ಯ ನಾಣಯ್ಯನವರು ಹತ್ತಿರದಲ್ಲಿ ಕುಳಿತ್ತಿದ್ದಾರೆಂದು ಅವರಿಗೆ ಕೊಡುತ್ತಿರುವುದನ್ನು ನಾನು ಕಣ್ಣಾರೆ ನೋಡಿದೆ. ನಾನು ಮಾನ್ಯ ನಾಣಯ್ಯನವರನ್ನು ನೀವು ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡಿದ್ದಿರಾ ಎಂದು ಕೇಳಿದೆ. ಅವರಿಗೆ ಬ್ರೀಫಿಂಗ್ ಆಗಿಲ್ಲ, ಸದನದಲ್ಲಿ ನನ್ನ ಉದ್ದೇಶವೇನೆಂದರೆ ಆರೋಪಗಳಿಗೆ ಉತ್ತರ ಬರಬೇಕೆಂಬುದೇ ಆಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಅವರಿಗೆ ಇನ್ನು ಬ್ರೀಫ್ ಮಾಡಿಲ್ಲವೆಂದರೆ ಹೇಗೆ? ಇದಕ್ಕೆ ಸಂಬಂಧಪಟ್ಟಂತಹ ಸಚಿವರು ತಯಾರಾಗಿರಬೇಕಲ್ಲವೇ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಸದ್ಯರುಗಳು ಗಂಭೀರವಾದಂತಹ ಆಪಾದನೆಯನ್ನು ಮಾಡಿದ್ದಾರೆ, ಬೇಕಾದರೆ ಸಮಯವನ್ನು ತೆಗೆದುಕೊಂಡರೆ ಉತ್ತರ ಕೊಡಲಿ.

ಅಧ್ಯಕ್ಷರು: ಸಮಯಾವಕಾಶವನ್ನು ತೆಗೆದುಕೊಳ್ಳುವುದು ಅಲ್ಲ.

Sri. B.A. Mohideen : I am coming to the point.

(Interruptions)

ಶ್ರೀಮತಿ ಪ್ರಮೀಳ ನೇಸರ್ಗಿ : ಸಭಾಧ್ಯಕ್ಷರೇ, They are taking you for a ride....

ಶ್ರೀ ಬಿ. ಎ. ಮೊಯಿದ್ದೀನ್ : ಇಲ್ಲ. I am coming to every point. ತಾವು ಪರ್‌ಫಾರ್ಮೆನ್ಸ್ ಗ್ಯಾರಂಟಿ ಬಗ್ಗೆ ಕೇಳಿದ್ದೀರಿ. ನಾವು ಮೂರು ವರ್ಷಗಳಿಂದ ಈ ಪರ್‌ಫಾರ್ಮೆನ್ಸ್ ಗ್ಯಾರಂಟಿಯನ್ನು ಎಂ.ಪಿ. ಎಂ.ನಲ್ಲಿ ಇಂಪ್ಲಿಮೆಂಟ್ ಮಾಡುತ್ತಿದ್ದೇವೆ. ಮತ್ತೆ ತಾವು ಅಂಬಿಕಾ ಎಜೆನ್ಸಿಯ ಕೆಲವು ಅಧಿಕಾರಿಗಳು, ಅವರು ರಿಟೈರ್ ಅಧಿಕಾರಿಗಳಿಗೆ ಈ ಒಂದು ಎಜೆನ್ಸಿಯನ್ನು ಕೊಟ್ಟು ಕೆಲಸವನ್ನು ಮಾಡಿದ್ದೀರಿ ಎನ್ನತಕ್ಕಂಥಾದ್ದು ಮತ್ತು ಅಲ್ಲಿ ಹದಿನಾಲ್ಕು ಸಾವಿರ ಮೆಟ್ರಿಕ್ ಟನ್‌ಗಳನ್ನು ಕೊಟ್ಟಿದ್ದೀರಿ ಎನ್ನತಕ್ಕಂಥಾದ್ದು ಹೇಳಿದ್ದೀರಿ. ನಾನು ಅದನ್ನೇ ಹೇಳಿದ್ದು, because of this dumping there was a glut in the newspaper market. ಆಗ ನಮ್ಮ ಕಮಾಡಿಟಿಯನ್ನು ಪುಷ್ ಮಾಡತಕ್ಕಂಥ ಅಗತ್ಯವಿತ್ತು. ನಮ್ಮಲ್ಲಿರುವಂತಹ ರೆಗ್ಯೂಲರ್ ಎಜೆಂಟ್ಸ್ ಯಾರಿದ್ದಾರೆ ಈ ಎಂ.ಪಿ. ಎಂ.ನ ಕನ್ಸೂಮರ್ಸ್ ಯಾರಿದ್ದಾರೆ ಅವರನ್ನು ಬಿಟ್ಟು ಹೊರಗೆ ಇರತಕ್ಕಂಥವರಿಗೆ ಕೊಟ್ಟಿದ್ದಾರೆ. ಇದು ಒಂದೇ ಅಲ್ಲ, ಈ ಕಂಪನಿಯಲ್ಲಿ.....

ಶ್ರೀ ಅರಗ ಜ್ಞಾನೇಂದ್ರ : ಪ್ರಜಾವಾಣಿಗೆ, ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಅವರೆ ಕೊಟ್ಟಿರುವಂಥಾದ್ದು.

ಶ್ರೀಮತಿ ಪ್ರಮೀಳ ನೇಸರ್ಗಿ : ಆ ಎಜೆಂಟ್ಸ್ ಏತಕ್ಕೆ ಬೇಕಿತ್ತು?

ಶ್ರೀ ವಾಟಾಳ್ ನಾಗರಾಜ್ : ನಮ್ಮ ರಾಜ್ಯದ ಪತ್ರಿಕೆಗಳಿಗೆ ಮೈಸೂರು ಪೇಪರ್ ಮಿಲ್ಸ್‌ನವರೇ ನೇರವಾಗಿ ಕೊಡಬಹುದಾಗಿತ್ತು. ಅವರಿಗೆ ಏಕೆ ಕಮೀಷನ್ ಕೊಡಬೇಕು, ಅವರಿಗೆ ಕಮೀಷನ್ ಬರಲಿ

ಎಂದು ಇವರು ಏಜೆನ್ಸಿ ಮೂಲಕ ಏಕೆ ಮಾಡಬೇಕು? ಅವರಿಗೆ ಕಮೀಷನ್ ಬರಲೆಂದು ಇವರು ಮಾಡಬೇಕೇನು?

ಶ್ರೀ ಕೆ. ಎಸ್. ಈಶ್ವರಪ್ಪ : ಹಿಂದೆ ಶೇ. 90 ರಷ್ಟು ಮೈಸೂರು ಕಾಗದ ಕಾರ್ಖಾನೆಯ ಮುಖಾಂತರ ಖರೀದಿ ಮಾಡುತ್ತಿದ್ದರೊ ಅದೇ ಜನರಿಗೆ ಈ ಏಜೆಂಟ್ ಮುಖಾಂತರ ಖರೀದಿ ಮಾಡುತ್ತಿದ್ದಾರೆ. ನಮ್ಮ ಬಳಿ ಅದರ ಹೆಸರಿನ ಪಟ್ಟಿಯು ಇದೆ, ಅವರು ಕೊಟ್ಟಿರುವಂತಹ ದಾಖಲೆಯನ್ನು ಇಲ್ಲಿ ಓದಿಬಿಟ್ಟರೆ ನಮ್ಮ ಗತಿ ಏನು?

ಶ್ರೀ ಬಿ.ಎ. ಮೊಯಿದ್ದೀನ್ : ಮಾನ್ಯ ಅಧ್ಯಕ್ಷರೆ, ಇದನ್ನು ಮೊಟಕುಗೊಳಿಸೋಣ, ನಾನು ತಮ್ಮಲ್ಲಿ ವಿಜ್ಞಾನೆ ಮಾಡಿಕೊಳ್ಳುವುದೇನೆಂದರೆ ಅವರ ಅಲಿಗೇಷನ್ಸ್ ಏನು ಇದೆ, ಅದೆಲ್ಲವನ್ನೂ ನನ್ನ ಕೈಯಲ್ಲಿ ಕೊಡಲಿ. I will see that it is enquired by the Additional Chief Secretary.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ಸಿ ಬಿ ಐ ತನಿಖೆಯಾಗಬೇಕು.

(ಗೊಂದಲ)

ಅಧ್ಯಕ್ಷರು : ಈ ಸದನದಲ್ಲಿ ನಮಗೆ ಒಂದು ವಿಶಿಷ್ಟವಾದಂತಹ ಜವಾಬ್ದಾರಿ ಇದೆ. ವ್ಯಕ್ತಿಗಳ ಪರಿಚಯ, ವಿಷಯ ಬರತಕ್ಕಂಥ ಸನ್ನಿವೇಶ, ಪ್ರತಿ ವಿಷಯದಲ್ಲಿ ಅಡಗಿರುವಂತಹ ಗಾಂಭೀರ್ಯವನ್ನು ಗಮನಿಸಿ, ನಾನು ನನ್ನ ವಿವೇಚನೆಯನ್ನು ಉಪಯೋಗಿಸಿ ನಾನು ಈ ಸದನವನ್ನು ನಡೆಸಬೇಕಾಗುತ್ತದೆ. ಅವರ ವೈಯಕ್ತಿಕ ಪರಿಚಯವಿರುವುದರಿಂದ ವಿಷಯದಲ್ಲಿ ಅಡಕವಾಗಿರುವ ಗಾಂಭೀರ್ಯ ಕೂಡ ನನಗೆ ಗೊತ್ತಿರುವುದಿಲ್ಲ. ಅವರ ಪ್ರಾಮಾಣಿಕ ಉದ್ದೇಶವೇನಿದೆ ಇದನ್ನು ವಿಚಾರಣೆ ಮಾಡಿಸುತ್ತೇನೆ. ಇದರಲ್ಲಿ ಯಾವುದು ಮುಚ್ಚಿಡುವುದು ನನಗಿಷ್ಟವಿಲ್ಲವೆಂಬುದು ಇಲ್ಲಿ ಸ್ಪಷ್ಟವಾಗಿದೆ. ಈಗ ನೀವು ಯಾವ ಆರೋಪಗಳನ್ನು ಮಾಡಿದ್ದೀರಿ, ಅದಕ್ಕೆ ಅವರು ಉತ್ತರವನ್ನು ಕೊಡುತ್ತಾ ಇಲ್ಲ. ಅದಕ್ಕೆ ಕಾರಣವೇನೆಂದರೆ ಅವರು ಬೇರೆ ತಯಾರಿಯಲ್ಲಿ ಇದ್ದರು. ಇಲ್ಲಿ ಸರ್ಕಾರದ ಜವಾಬ್ದಾರಿ ಇರುತ್ತದೆ, ಇಲ್ಲಿ ಯಾರು ಉತ್ತರವನ್ನು ಕೊಟ್ಟರೂ ನುಸುಳಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಇಲ್ಲಿ ನೀವು ಮಾಡಿರುವಂತಹ ಆರೋಪಗಳಿಗೆ ಸ್ಪಷ್ಟವಾಗಿ, ನಿಖರವಾದಂತಹ ಉತ್ತರವನ್ನು ಕೊಡಬೇಕಾಗುತ್ತದೆ. ಆದುದರಿಂದ ಇಲ್ಲಿ ಮಾನ್ಯ ನಾಣಯ್ಯನವರು ಬ್ರೀಫಿಂಗ್ ತೆಗೆದುಕೊಂಡಿರುವುದರಿಂದ ಅವರಿಗೆ ಉತ್ತರವನ್ನು ಕೊಡಲು ಅವಕಾಶವನ್ನು ಕೊಡುತ್ತೇನೆ. ಅವರು ಉತ್ತರ ಕೊಡಲಿ, ಅನಂತರ ಅವರು ನಿಮ್ಮ ಬೇಡಿಕೆಯನ್ನು ಮಂಜೂರು ಮಾಡುತ್ತಾರೋ, ಇಲ್ಲವೊ, ಅದು ಬೇರೆ ಪ್ರಶ್ನೆ. ಮಾನ್ಯ ಮೊಯಿದ್ದೀನ್‌ರವರಿಗೆ ಏನಾಗುತ್ತಿದೆ ಎಂದರೆ he want to prove his innocence. But the house is not willing to charge him. ನಾನು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದನಂತರ ಮಾತನ್ನು ಪುಷ್ಟೀಕರಿಸಿಯೇ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಆದುದರಿಂದ ಈ ವಿಚಾರವನ್ನು ಪೆಂಡಿಂಗ್ ಇಡುವಂಥಾದ್ದು ಬೇಡ. ಅವರ ಪ್ರಾಮಾಣಿಕ ಉದ್ದೇಶವೇನೆಂದರೆ ಅದನ್ನು ವಿಚಾರಣೆ ಮಾಡಿಸಬೇಕೆಂಬುದು ಇದೆ. Let us hear the Hon'ble Law Minister. He has taken the brief as I could see.

ಶ್ರೀ ಕಾಗೋಡು ತಿಮ್ಮಪ್ಪ : ಆಗ ಮಾನ್ಯ ನಾಣಯ್ಯನವರು ಇರಲಿಲ್ಲ.

ಅಧ್ಯಕ್ಷರು : ಮಾನ್ಯ ನಾಣಯ್ಯನವರು ಇದ್ದರು, ಅವರು ಬ್ರೀಫಿಂಗ್ ಅಧಿಕಾರಿಗಳಿಂದ ತೆಗೆದುಕೊಂಡಿದ್ದು ನಾನು ಇಲ್ಲಿಂದ ಗಮನಿಸಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಇಂತಹ ಕೆಟ್ಟ ಕೆಲಸಗಳಿಗೆ ಮಾನ್ಯ ನಾಣಯ್ಯನವರು ಒಳ್ಳೆಯ ವಕೀಲರು ಆಗುತ್ತಾರೆಂಬುದು ಅಧಿಕಾರಿಗಳಿಗೂ ಗೊತ್ತಾಗಿದೆ. ಬಹಳ ಚೀಟಿಗಳು ಅವರಿಗೆ ಬರುತ್ತದೆಯೆ ವಿನ: ಮಾನ್ಯ ಮೊಯಿದ್ದೀನ್‌ರವರಿಗೆ ಬರುವುದಿಲ್ಲ.

ಅಧ್ಯಕ್ಷರು : ಯಾರು ಒಳ್ಳೆಯ ವಕೀಲರಾದರೂ, ಯಾರು ಕೆಟ್ಟ ವಕೀಲರು ಆದರೂ ಎಂಬುದು ಕೇಸ್‌ನಲ್ಲಿರುವಂತಹ ಅಂಶ ಹೊರಗೆ ಬಿದ್ದಾಗ ಜಡ್ಜ್‌ಗೆ ತನ್ನ ಮೇಲೆ ಏನಿದೆ ಎಂಬುದು ನೆನಪಾದಾಗ ಜಡ್ಜ್‌ಮೆಂಟ್ ತಪ್ಪಾಗುವುದಿಲ್ಲ. ನೀವು ಜಡ್ಜ್ ಅನ್ನು ನೋಡಬೇಕಾದಂಥದ್ದು, ಲಾಯರ್‌ಗಳು ಏನು ಮಾಡುತ್ತಾರೆ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಾನು ಯಾರ ಮೇಲೂ ಆರೋಪಣೆಯನ್ನು ಮಾಡುವುದಿಲ್ಲ. ಒಂದೊಂದು ಸಾರಿ ಕೊಲೆ ಮಾಡಿರುವವರು ತಪ್ಪಿಸಿಕೊಳ್ಳುತ್ತಾರೆ, ಕೊಲೆ ಮಾಡದೇ ಇರುವವರು ಸಿಕ್ಕಿಕೊಳ್ಳುತ್ತಾರೆ.

ಅಧ್ಯಕ್ಷರು : ನಾನೇ ಇಲ್ಲಿ ಹೇಳಲಿಲ್ಲವೇ, ಯಾವುದೋ ಒಂದು ವಿಚಾರದಲ್ಲಿ ಸಾಕ್ಷ್ಯಧಾರಗಳು ಇಲ್ಲದೆ ಇರುವುದರಿಂದ ವಿಷಾದ ವ್ಯಕ್ತಪಡಿಸುತ್ತೇನೆಂದರೆ ಹೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಣಯ್ಯನವರು ಎರಡು ಕೆಲಸವನ್ನು ಮಾಡುತ್ತಾರೆ. ಒಂದು ಕನ್ವಿನ್ಸ್ ಮಾಡುವಂತಹ ಪ್ರಯತ್ನ ಮಾಡುತ್ತಾರೆ, ಕನ್ವಿನ್ಸ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದರೆ ಕನ್‌ಫ್ಯೂಸ್ ಮಾಡಿ ಬಿಟ್ಟು ಬಿಡುತ್ತಾರೆ.

Mr. Speaker : The House is unanimous in acknowledging the capacity and talent of the Parliamentary Affairs Minister. I think I must compliment him on this occasion.

Sri. M.C. Nanaiah : I think what job they are doing is the very much the same what we were doing.

ಶ್ರೀ ಸಿ. ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಈ ಸಭೆಯನ್ನು ಕನ್‌ಫ್ಯೂಷನ್‌ನಲ್ಲಿಟ್ಟು ನಮ್ಮ ಈ ಕೇಸ್ ಇಷ್ಟೇ ಎನ್ನುವ ತೀರ್ಮಾನಕ್ಕೆ ಬರುವ ಹಾಗೆ ಮಾನ್ಯ ನಾಣಯ್ಯನವರು ತಮ್ಮ ವಾದವನ್ನು ಇಟ್ಟು ಬಿಡುತ್ತಾರೆ.

ಅಧ್ಯಕ್ಷರು : ನಾನು ಮತ್ತು ಮಾನ್ಯ ನಾಣಯ್ಯನವರು ಒಟ್ಟಿಗೆ ಈ ಸದನಕ್ಕೆ 1978 ರಲ್ಲಿ ಬಂದವರು. ಅವರ ಕನ್‌ಫ್ಯೂಷನ್ ಪ್ರಯತ್ನ ನಿಮ್ಮ ಮೇಲೆ ನಡೆಯಬಹುದು ನನ್ನ ಹತ್ತಿರ ಅವರು ಆ ರೀತಿ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅವರು ಈ ಸದನಕ್ಕೆ ಬರಬೇಕೆಂದು ನಾನೇ ಸೂಚಕನಾಗಿದ್ದೇನೆ. ಅವರು ವಿಧಾನ ಪರಿಷತ್ತಿಗೆ ಬರಬೇಕೆಂದು ಪ್ರಪ್ರಥಮವಾಗಿ ನಾನು ಹೇಳಿದ್ದು.

Sri. M. C. Nanaiah: I think I must be very much grateful to Mr. Vatal Nagaraj. ಅವರು ಮೊದಲು ನನ್ನ ನಾಮ ಪತ್ರಕ್ಕೆ ಸಹಿ ಮಾಡಿದಂಥವರು ಮಾನ್ಯ ವಾಟಾಳ್ ನಾಗರಾಜ್‌ರವರು, ನಾನು ಪ್ರಥಮವಾಗಿ ವಿಧಾನ ಪರಿಷತ್ತಿಗೆ ಹೋಗುವ ನಾಮ ಪತ್ರಕ್ಕೆ ಸಹಿ

ಹಾಕಿದಂಥವರು, ಇವತ್ತಿಗೂ ಇದೇ ಪ್ರೀತಿಯನ್ನು ಇಟ್ಟುಕೊಂಡಿದ್ದಾರೆ. ಇನ್ನು ಮುಂದೆಯೂ ಇಟ್ಟು ಕೊಳ್ಳುತ್ತಾರೆ, ನಿಮ್ಮೆಲ್ಲರ ಪ್ರೀತಿಯೂ ಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅದರಲ್ಲಿ ಏನೂ ತೊಂದರೆ ಇಲ್ಲ, ಕೊಡೋಣ. ಆದರಲ್ಲಿ ನಮ್ಮ ತಕರಾರು ಏನೂ ಇಲ್ಲ.

ಶ್ರೀ ಎಂ.ಸಿ ನಾಣಯ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಮಿತ್ರರಾಗಿರತಕ್ಕಂಥ ಮಾನ್ಯ ಈಶ್ವರಪ್ಪನವರು, ಮಾನ್ಯ ಅರಗ ಜ್ಞಾನೇಂದ್ರರವರು, ಮಾನ್ಯ ಸುರೇಶ್ ಕುಮಾರ್‌ರವರು, ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಒಂದು ವಿಚಾರವನ್ನು ಎತ್ತಿದ್ದಾರೆ. ನಿಜ, ಅವರಿಗೆ ಸಿಕ್ಕಿರುವಂತಹ ಮಾಹಿತಿಗಳ ಹಿನ್ನೆಲೆಯಲ್ಲಿ ಮತ್ತು ಅವರಲ್ಲಿರುವಂತಹ ದಾಖಲೆಗಳ ಹಿನ್ನೆಲೆಯಲ್ಲಿ ಅವರ ಮನಸ್ಸಿನಲ್ಲಿ ಬಂದಿರುವಂಥಾದ್ದು ಇದರಲ್ಲಿ ಏನೋ ಒಂದು ದೊಡ್ಡ ಅವ್ಯವಹಾರವಾಗಿದೆ; ಎಂಬುದು ತಪ್ಪಲ್ಲ. ನಾವು ವಿರೋಧಪಕ್ಷದಲ್ಲಿದ್ದು ಕೆಲವು ವಿಚಾರಗಳು ನಮ್ಮ ಗಮನಕ್ಕೆ ಬಂದಾಗ ನಮಗೆ ಕೊಡುತ್ತಾ ಇರುವಂತಹ ಮಾಹಿತಿಗಳನ್ನು ನಾವು ನೋಡಿದಾಗ ಮತ್ತು ಇದರ ಜೊತೆಗೆ ಕೆಲವು ಅಧಿಕಾರಿಗಳು ಮತ್ತು ವ್ಯಕ್ತಿಗಳು ನಮಗೆ ಕೆಲವು ವಿಚಾರಗಳನ್ನು ಹೇಳಿದಾಗ ನಾವು ನೋಡಿದ ಮೇಲೆ ನಮಗೆ ನೇರವಾಗಿ ಮನಸ್ಸಿಗೆ ಏನೋ ನಡೆದಿದೆ ಎಂದು ಅನ್ನಿಸುತ್ತದೆ. ನಾವು ಈ ಮಾಹಿತಿಗಳನ್ನು ಯಾರಿಂದ ಪಡೆಯುತ್ತೇವೆಂದರೆ ಮೊದಲನೆಯದಾಗಿ ಆ ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳ ಮುಖಾಂತರ ಅಥವಾ ನೇರವಾಗಿ ಆ ಅಧಿಕಾರಿಗಳು ಬಂದು ಈ ರೀತಿಯಾಗಿ ನಡೆದಿದೆ ಎಂಬುದನ್ನು ಹೇಳಿಕೊಂಡು ಬರುತ್ತಾರೆ. ಯಾವುದೋ ಒಂದು ಸಂಸ್ಥೆಯಲ್ಲಿ ಈ ರೀತಿ ನಡೆಯುವಂಥಾದ್ದು ಗುಂಪುಗಳು ಇರುವಂಥಾದ್ದು, ಅಧಿಕಾರ ವರ್ಗದವರಲ್ಲಿ ಇರುವಂತಹ ಅಸೋಸಿಯೇಷನ್‌ಗಳು ಮತ್ತು ಅಲ್ಲಿ ಆಡಳಿತದಲ್ಲಿ ಬಿಗಿ ಮಾಡಬೇಕೆಂದು ಇರುವಂತಹ ಸಂದರ್ಭದಲ್ಲಿ ಆಡಳಿತ ವರ್ಗದವರ ವಿರುದ್ಧವಾಗಿ ಹೋರಾಟ ಮಾಡಿಕೊಂಡು ಬಂದಿರುವಂಥಾದ್ದನ್ನು ನಾವು ಹತ್ತಾರು ವರ್ಷಗಳಿಂದ ನೋಡಿಕೊಂಡು ಬಂದಿದ್ದೇವೆ. ನೀವು ಆಡಳಿತ ಪಕ್ಷದಲ್ಲಿದ್ದಾಗ ನಾವು ವಿರೋಧಪಕ್ಷದಲ್ಲಿದ್ದು ಯಾವ ರೀತಿ ಮಾಡಿಕೊಂಡು ಬಂದಿದ್ದೇವೆ, ಅದನ್ನು ಈಗ ನೀವು ಮಾಡುತ್ತಿರುವಂಥಾದ್ದು. ಅವರು ಎತ್ತಿರುವ ಪ್ರಶ್ನೆಗೆ ಸಂಬಂಧಿಸಿದಂತೆ, ನಾವು ಕಾನೂನಿನ ಚೌಕಟ್ಟಿನೊಳಗೆ ಸ್ವಲ್ಪ ಪ್ರಯತ್ನವನ್ನು ಮಾಡಿದ್ದೇವೆ. ಮಿತ್ರರಾಗಿರತಕ್ಕಂಥ ಮೊಹಿದ್ದೀನ್‌ರವರು ಹೇಳಿದ ಹಾಗೆ ಈ ಫಲ್ಪ್ ಅನ್ನು ಖರೀದಿ ಮಾಡುತ್ತಿರುವುದು ನಿಜ. ಇವತ್ತು ಈ ನಮ್ಮ ರಾಷ್ಟ್ರದಲ್ಲಿ ಈ ಒಂದೇ ಒಂದು ಪೇಪರ್ ಕಂಪನಿ ಸ್ವಲ್ಪ ಲಾಭದಾಯಕವಾಗಿ ಕೆಲಸ ಮಾಡುತ್ತಿರತಕ್ಕಂಥದ್ದು, No other company is working under profit now. It is under profit. Let me tell you. but not to the expected extent.

ಶ್ರೀ ವಾಟಾಳ್ ನಾಗರಾಜ್ : ಈಗ ತಲೆ ನೋವು ಬಂದಿದೆ, ಆಮೇಲೆ ಹೊಟ್ಟೆ ನೋವು ಬಂದು ಸತ್ತು ಹೋಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ : ನಲವತ್ತೆರಡು ಕೋಟಿ ಇದ್ದದ್ದು ಕಳೆದ ವರ್ಷ ಎರಡು ಕೋಟಿಗೆ ಬಂದಿದೆ ಇನ್ನು ಸ್ವಲ್ಪ ದಿನಗಳಲ್ಲಿ ಅದೂ ಹೋಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ : ಫೋರೆಯವರು ಅಲ್ಲಿ ನಿರ್ದೇಶಕರಾಗಿದ್ದಂಥ ಸಂದರ್ಭದಲ್ಲೂ ಕೂಡ ಇದೇ ಕಾರ್ಮಿಕ ಸಂಘದವರು ಗುರುತರವಾದ ಆಪಾದನೆಗಳನ್ನು ಮಾಡಿರುವುದು ವಿರೋಧ ಪಕ್ಷದ

ನಾಯಕನ ಸ್ಥಾನದಲ್ಲಿದ್ದಂಥ ನನಗೂ ಗೊತ್ತಿದೆ. ಆ ಸಂದರ್ಭದಲ್ಲಿ ಪೂರ್ತಿ ದಾಖಲೆಗಳನ್ನು ತಂದಿದ್ದರು. ಇದೇ ರೀತಿ ಫಲ್ಪಿಂಗ್ ವ್ಯವಹಾರದಲ್ಲಿ ಇಷ್ಟನ್ನು ಹೊಡೆದು ಕೊಂಡು ಬರುತ್ತಿದ್ದಾರೆಂದು ಹೇಳಿಕೊಂಡು ಸುಮಾರು ವರ್ಷಗಳಿಂದ ಬರುತ್ತಿರತಕ್ಕಂಥದ್ದು. ಆದರೆ, ಇವತ್ತು ನೇರವಾಗಿ ಕೇಳುವ ವಿಚಾರವಿಷ್ಟೆ, ಇವತ್ತು ಈ ಒಂದು ಸಂಸ್ಥೆಯಲ್ಲಿ ಪಲ್ಪನ್ನು ಖರೀದಿ ಮಾಡುವ ಸಂದರ್ಭದಲ್ಲಿ ಪ್ರತಿವರ್ಷ ಅವರು ನ್ಯೂಸ್ ಪ್ರಿಂಟ್ ಅನ್ನು ಎಷ್ಟು ಮಾಡಬೇಕೆನ್ನುವ ಆಧಾರದ ಮೇಲೆ ಅವರು ಪಲ್ಪನ್ನು ತಯಾರು ಮಾಡಬೇಕಾಗುತ್ತದೆ. ಇವರು ನೂರು ಟನ್ ಪೇಪರ್ ಮಾಡಬೇಕೆಂದರೆ ಇಪ್ಪತ್ತು ಟನ್ ಪಲ್ಪ್ ಬೇಕಾಗುತ್ತದೆ, ಇದೆ ಆಧಾರದ ಮೇಲೆ ಮಾಡಬೇಕಾಗುತ್ತದೆ. ಪ್ರತಿ ಆರು ತಿಂಗಳಿಗೆ, ದಯವಿಟ್ಟು ನೋಡಿ, ನಾವು ದಾಖಲೆಗಳನ್ನು ತಮಗೆ ಕೊಡುವ ಪ್ರಯತ್ನ ಮಾಡುತ್ತೇವೆ. ಪ್ರತಿ ಆರು ತಿಂಗಳಿಗೆ ಒಂದು ಸಾರಿ ಯಾವ್ಯಾವಾಗ ಪಲ್ಪ್ ಬೇಕು ಆವಾಗ ಗ್ಲೋಬಲ್ ಟೆಂಡರ್ ಇನ್‌ವೈಟ್ ಮಾಡಿಯೆ ಮಾಡುತ್ತಾರೆ. Without calling for global tenders, it will not be done. ಸುಮಾರು ಹದಿನೈದು, ಹದಿನಾರು ಜನ ಗ್ಲೋಬಲ್ ಟೆಂಡರ್ ಅರ್ಜಿಗಳನ್ನು ತೆಗೆದುಕೊಂಡು ಹೋದರೂ ಕೂಡ ಅದರಲ್ಲಿ ಎರಡು, ಮೂರು ಜನ ಮಾತ್ರ ಟೆಂಡರ್ ಅನ್ನು ಹಾಕುವುದು. ಇವತ್ತು ಏನಾಗಿದೆ ಎಂದರೆ ಈ ಕಂಪನಿಗೆ ಸುಮಾರು ಏಳೆಂಟು ವರ್ಷಗಳಿಂದ ಒಂದು ಕಡೆ ಇವರು ಸ್ವೀಡನ, ಇನ್ನೊಂದು ಕಡೆ ಕೆನರಾದಿಂದ ಮಾಡುತ್ತಿರತಕ್ಕಂಥ ಅಂಬಿಕಾ ಎನ್ನತಕ್ಕಂಥ ಒಂದು ಕಂಪನಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಂಬಿಕಾ ಕಂಪನಿಯವರು ಪರ್ಸೇಸ್ ಮಾಡುತ್ತಿರುವುದು, ಕೆನಡಾದಿಂದ ತೆಗೆದುಕೊಳ್ಳುತ್ತಿಲ್ಲ, ಬರೀ ಸ್ವೀಡನ್‌ನಿಂದ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಸ್ವೀಡನ್ ಕಂಪನಿಯಿಂದಲೇ ತೆಗೆದುಕೊಳ್ಳುತ್ತಿರುವುದು, ಇಲ್ಲಿ ಅವರ ಏಜೆಂಟ್ಸ್ ಇರುತ್ತಾರೆ. These are all the foreign companies. ವಿದೇಶದಲ್ಲಿರುವವರು ಇಲ್ಲಿ ಬಂದು ನೇರವಾಗಿ ಮಾಡುವುದಕ್ಕಾಗುವುದಿಲ್ಲ, Their agents in India, who are authorised agents, to negotiate with this company. ಈ ಸಂದರ್ಭದಲ್ಲಿ ಇವರಿಂದದ ಪರ್ಚೇಸ್ ಮಾಡಿದ್ದಾರೆ. ಇವರು ಎತ್ತಿರತಕ್ಕಂಥ ಒಂದೇ ಒಂದು ಅಂಶ ಯಾವುದೆಂದರೆ, ಮೂರನೇ ವ್ಯಕ್ತಿ ತಪಾಸಣೆ ಮಾಡಬೇಕೆನ್ನುವುದು. ಮುಂಚೆಯಿಂದಲೂ ಮೂರನೆ ವ್ಯಕ್ತಿಯೇ ತಪಾಸಣೆ ಮಾಡಿಕೊಂಡು ಬರುತ್ತಿದ್ದುದ್ದು, ಈ ಸಂದರ್ಭದಲ್ಲಿ ಅದನ್ನು ಮಾಡಲಿಲ್ಲ. ಏತಕ್ಕೆ ಮೂರನೆ ವ್ಯಕ್ತಿಯಿಂದ ತಪಾಸಣೆ ಮಾಡಿಸಲಿಲ್ಲವೆನ್ನುವುದಕ್ಕೆ ಕಾರಣವೇನೆಂದರೆ, ಈ ಕಂಪನಿಯವರು ಫಲ್ಪ್ ಅನ್ನು ಸರಬರಾಜು ಮಾಡಿಕೊಂಡೇ ಬಂದಿದ್ದಾರೆ. ಆ ಒಂದು ಮೂರನೆ ವ್ಯಕ್ತಿಯ ತಪಾಸಣೆಯನ್ನು ಮಾಡಿದರೆ ಅವರ ಒಂದು ಟನ್‌ಗೆ, ಎರಡು ಡಾಲರ್ ಆಗುತ್ತದೆ. ನಾವು ಪರ್ಚೇಸ್ ಮಾಡುತ್ತಿರುವ ಪಲ್ಪ್‌ಗೆ ಸುಮಾರು ಹನ್ನೆರಡು ಲಕ್ಷ ರೂಪಾಯಿಗಳನ್ನು ಕಮಿಷನ್ ರೂಪದಲ್ಲಿ ಮೂರನೆ ವ್ಯಕ್ತಿಯ ಕನ್ಸಲ್ಟೆನ್ಸಿ ಶುಲ್ಕ ಯಾವುದಿರುತ್ತದೆ, ಅದನ್ನು ಕೊಡಬೇಕಾಗುತ್ತದೆ, This is to save that twelve lakhs or thirteen lakhs. ಆದುದರಿಂದ ಮೂರನೇ ವ್ಯಕ್ತಿಯ ತಪಾಸಣೆ ಬೇಕಾಗಿಲ್ಲವೆನ್ನುವ ಹಿನ್ನೆಲೆಯಲ್ಲಿ ಇದು ಮಾಡಿರುವುದು. ಪರ್ಫಾರ್ಮೆನ್ಸ್ ಗ್ಯಾರೆಂಟಿ ಬಗ್ಗೆ ನೀವು ಹೇಳಿದಿರಿ, In every agreement, this Performance Guarantee is inbuilt. ಪರ್ಫಾರ್ಮೆನ್ಸ್ ಗ್ಯಾರೆಂಟಿ ಎಂದು ಹೇಳುವುದು ಇನ್‌ಬಿಲ್ಟ್, ನಾನು ಅಗ್ರಿಮೆಂಟ್ ಪ್ರತಿಯನ್ನೆ ಕಳುಹಿಸಿಕೊಡುತ್ತೇನೆ, ಅದನ್ನು ಓದಿ ನೋಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾಧ್ಯಕ್ಷರೇ, They have not enforced the Performance Guarantee, to discharge their performance in time. ಅಡ್ಡಿಟಿಡ್ಲಿ ಹೇಳಿದ್ದಾರೆ, ಎರಡು ತಿಂಗಳಲ್ಲಿ ಡಾಕ್ಯುಮೆಂಟ್ಸ್ ಇದೆ, ಅವರು ಟೈಂನಲ್ಲಿ ಸಪ್ಲೈ ಮಾಡಲಿಲ್ಲ, They have not enforced the Performance Guarantee.

Sri. M.C. Nanaiah : We have got information on record. We have no objection ಮೂರನೇ ವ್ಯಕ್ತಿಯ ತಪಾಸಣೆ ಇಲ್ಲವೆನ್ನುವ ಅಂಶವನ್ನು ಎತ್ತಿದ್ದಾರೆ, we will agree. ಅವರು ಮೂರನೆ ವ್ಯಕ್ತಿಯ ತಪಾಸಣೆಯನ್ನು ಪ್ರಾಮಾಣಿಕವಾಗಿ ಮಾಡದೇ ಇದ್ದುದ್ದರಿಂದ ಇದರಲ್ಲಿ ಏನೋ ಅವ್ಯವಹಾರ ನಡೆದಿದೆ ಎನ್ನುವುದು. ಒಂಭತ್ತು ವರ್ಷಗಳಿಂದ ಈ ಕೆಲಸವನ್ನು ನಡೆಸಿಕೊಂಡೇ ಬಂದಿದ್ದಾರೆ. ಗ್ಲೋಬಲ್ ಟೆಂಡರ್ ಅನ್ನು ಇನ್‌ವೈಟ್ ಮಾಡಿಕೊಂಡೇ ಬಂದಿದ್ದಾರೆ, ಲೋಯೆಸ್ಟ್ ಟೆಂಡರ್‌ದಾರ ಎನ್ನುವವರಿಗೆ ಕೊಡುತ್ತಾ ಬಂದಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಕಮ್ಮಿ ಇರುವವರಿಗೆ ಕೊಟ್ಟಿಲ್ಲ, ಜಾಸ್ತಿ ಇರುವವರಿಗೆ ಕೊಟ್ಟಿರುವ ಬಗ್ಗೆ ಮಾಹಿತಿ ನನ್ನಲ್ಲಿ ಇದೆ.

Sri. M.C. Nanaiah : It is not correct.

ಶ್ರೀ ಕೆ. ಎಸ್. ಈಶ್ವರಪ್ಪ : ಈಗ ಇದನ್ನು ನಾನು ಕೊಡುತ್ತೇನೆ, ಅದಕ್ಕೇ ಸಿಬಿಐ ತನಿಖೆ ಮಾಡಿಸಿ ಎಂದು ನಾನು ಹೇಳಿದ್ದುದು, ಅಧ್ಯಕ್ಷರೆ, ನನ್ನ ಹತ್ತಿರ ದಾಖಲೆ ಇದೆ ಕೊಡುತ್ತಿದ್ದೇನೆಂದು ಹೇಳುತ್ತಿದ್ದೇನೆ.

(Interruptions)

ಅಧ್ಯಕ್ಷರು : ಈಶ್ವರಪ್ಪನವರೆ, ನಾವು ಲೊಯೇಸ್ಟ್ ಟೆಂಡರ್‌ದಾರರಿಗೆ ಕೊಡದೆ ಹೆಚ್ಚಿಗೆ ಕೋಟ್ ಮಾಡಿದ ಟೆಂಡರ್‌ದಾರರಿಗೆ ಕೊಟ್ಟಿದ್ದೀರೆಂಬ ಆರೋಪ ಮಾಡಿದಿರಿ. ಮಾನ್ಯ ಮಂತ್ರಿಗಳು ಇಲ್ಲಿ ನಿಂತುಕೊಂಡು ತಮ್ಮ ವಶದಲ್ಲಿರುವ ದಾಖಲೆಗಳನ್ನಿಟ್ಟುಕೊಂಡು ಇಲ್ಲ ಅದು ಸತ್ಯಕ್ಕೆ ದೂರವಾದ ಮಾತು, ಲೋಯೆಸ್ಟ್ ಟೆಂಡರ್‌ದಾರರಿಗೆ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆಮೇಲೆ, ಬೇಕಾದರೆ ತಾವು ಒಂದು ದಾಖಲೆಗಳನ್ನು ಪರೀಕ್ಷೆ ಮಾಡಿ ಎಂದು ಒಂದು ಮಾತು ಹೇಳಿದ್ದಾರೆ. ಅದರಿಂದ, You should concede. When he denies the allegations, when he is prepared to provide you an access to look into the documents, I have every reason to believe it.

ಶ್ರೀ ಎಂ.ಸಿ. ನಾಣಯ್ಯ : ನಾನು ಕೊಡುತ್ತೇವೆ, We have got a team of officers, who are here to tell that these things have been done in accordance with the Rules, lowest tenders have been accepted ಸರ್, ನಾನು ಹೇಳುತ್ತಿರುವುದೇನೆಂದರೆ, ಆ ನಿರ್ದಿಷ್ಟ ಕಂಪನಿಗೆ ಕೊಟ್ಟಿರುವ ಹಿನ್ನೆಲೆಯಲ್ಲಿ ಮಾಡಿಕೊಂಡು ಬರುತ್ತಿರುವುದನ್ನು ಮಾಡಿಕೊಂಡು ಬರುತ್ತಿದ್ದೇವೆ, ಒಂಭತ್ತು ವರ್ಷಗಳಿಂದ ಕಂಪನಿಯವರು ಈ ಕೆಲಸವನ್ನು ಮಾಡುತ್ತಾ ಬಂದಿದ್ದಾರೆ. ಆ ಕಂಪನಿ ಎಂದರೆ ಐಡೆಂಟ್, ಎಲ್ಲಾ ಟರ್ಮ್ಸ್ ಅಂಡ್ ಕಂಡಿಷನ್ಸ್ ಮಾಡಿಕೊಂಡೇ ನಾನು ಈ ಕೆಲಸವನ್ನು ಮಾಡುತ್ತಾ ಬಂದಿದ್ದೇವೆ.

ಶ್ರೀ ಎಸ್. ಸುರೇಶ್ ಕುಮಾರ್ : ಎಲ್ಲರೂ ಹೇಳಿದ್ದನ್ನು ನೀವು ಸತ್ಯ ಮಾಡುತ್ತಿದ್ದೀರಿ. You are using your wit and intelligence to confuse us. ದಯವಿಟ್ಟು ನೋಡಿ ದಿನಾಂಕ: 1. 12. 1989 ಅವತ್ತೇ ಈ ಕಂಪನಿಯವರು ಏನು ಹೇಳುತ್ತಿದ್ದಾರೆಂದರೆ, "Our experience with Sriranga Corporation was not good earlier, since 1989." ನೀವು ಒಂಭತ್ತು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆಂದು ಹೇಳುತ್ತಿದ್ದೀರಾ, ಇದನ್ನೇ ಮಾಡಿ ಕೊಂಡು ಬರುತ್ತಿರುವುದು.

(Interruption)

Sri. S. Suresh Kumar : " Again, in 1994 - the quality was lower than the specification. Again, in 1994 - two grades of inferior quality pulp both of which were not conforming to the orders placed were supplied. "This has been the history

Sri. M.C. Nanaiah : In any Public Sector undertaking for your information,

ಈ ರೀತಿ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಕ್ವಾಲಿಟಿ ಟಿಸ್ಟ್, ಇವ್ಯಾಲ್ಯುವೇಷನ್ ಟಿಸ್ಟ್ ಅನ್ನು ಮಾಡುತ್ತಿರತಕ್ಕಂಥದ್ದು, ಆ ಸಂದರ್ಭದಲ್ಲಿ ಕಂಡು ಬಂದಿರುವ ಏನಾದರೂ ಲ್ಯಾಪ್ಸ್ ಇದ್ದರೆ ಅದನ್ನು ಆ ಸಂದರ್ಭದಲ್ಲಿ ನೋಟ್ ಮಾಡುವುದು This is the regular feature in every public sector undertaking now. ಈ ಸಂದರ್ಭದಲ್ಲಿ ನೀವು ಒಂದನ್ನು ಯೋಚನೆ ಮಾಡಬೇಕು, ಫಲ್ಪ್ ಅನ್ನು ಸರಬರಾಜು ಮಾಡುತ್ತಿರುವ ಸಂದರ್ಭದಲ್ಲಿ , The pulp is a common pulp. ನಮಗೆ ಈ ನಿರ್ದಿಷ್ಟ ಕಂಪನಿಗೆ ಬೇಕಾಗಿರುವ ಫಲ್ಪ್ ಯಾವುದಿದೆ ಅದು ಪ್ರತ್ಯೇಕ ಸ್ಪೆಸಿಫಿಕೇಷನ್ ಇರುವುದು. ಈ ಪೇಪರ್ ತಯಾರು ಮಾಡಬೇಕಾದ ಹಿನ್ನೆಲೆಯಲ್ಲಿ ನಮಗೆ ಆ ರೀತಿಯಾದ ಪಲ್ಪ್ ಬೇಕಾಗುತ್ತದೆ.

ಶ್ರೀ ಕೆ. ಎಸ್. ಈಶ್ವರಪ್ಪ: ಟೆಂಡರ್ ಕೊಟ್ಟಿದ್ದಾರೆ, ಟೆಂಡರ್ ಬಂದಿದೆ, ಬೇರೆ ಕಂಪನಿಗಳಿಂದ ಅದೇ ರೀತಿಯ ಸ್ಪೆಸಿಫಿಕೇಷನ್ ಬಂದಿದೆ.

Sri. M.C. Nanaiah : We have got official records, I am prepared to give all the official records to them. Let them have a look at it.

(Interruption)

Sri. M.C. Nanaiah : I have got the same set of records with me of 1989.

(ಗೊಂದಲ)

ಅಧ್ಯಕ್ಷರು : ಅಲ್ಲಿ ಸಂಘಗಳಿದ್ದಾವೆಯೇ?

ಶ್ರೀ ಎಂ.ಸಿ. ನಾಣಯ್ಯ : ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸರ್, ಸಂಘಗಳ ಪ್ರಶ್ನೆ ಬೇರೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಬೇಕಾದಷ್ಟು ಇದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇಲ್ಲಿ ಸಂಘಕ್ಕೆ ಜೋಡಿಸುವಂಥ ಪ್ರಯತ್ನ ಮಾಡುತ್ತಿದ್ದಾರೆ, ಇದಕ್ಕೆ ಸಂಬಂಧವಿಲ್ಲ, ನಾವು ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಿರುವುದು, ಸಂಘದ್ದು ಬೇರೆ.

ಅಧ್ಯಕ್ಷರು : ಸಂಘ, ಕಾರ್ಮಿಕರದಿದ್ದರೆ ಏನಾಗುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಬೇರೆ ಬೇರೆ ಸಂಘಗಳಿದ್ದಾವೆ, ನಾವು ಆ ಸಮಸ್ಯೆಗೆ ಇನ್ನೂ ಬಂದಿಲ್ಲ, ಅದಕ್ಕೆ ನಾವು ಸದ್ಯಕ್ಕೆ ಬರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಂಘಕ್ಕೂ ಇದಕ್ಕೂ ಯಾವುದೇ ರೀತಿಯಾದ ಸಂಬಂಧವಿಲ್ಲ, ಅಲ್ಲಿ ನಾಲ್ಕು ಸಂಘಗಳಿದ್ದಾವೆ, ಅವುಗಳ ಸಮಸ್ಯೆಗಳು ಬೇರೆ ಇವೆ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೂ, ಕಾರ್ಮಿಕರ ಸಮಸ್ಯೆಗಳು ಬೇರೆ ವಿಚಾರ, ಕಾರ್ಮಿಕರ ಕರ್ಮಕಾಂಡ ಅದು., ಅದಕ್ಕೊಂದು ಕಥೆ ಇದೆ.

ಅಧ್ಯಕ್ಷರು : ಯಾವುದೇ ಸಂಸ್ಥೆಯಲ್ಲಿ ಕಾರ್ಮಿಕರ ಸಂಘಗಳಿದ್ದರೆ, ಅದರ ಸಮಸ್ಯೆಗಳು ಬೇರೆ ಇರುತ್ತವೆ, ಅಧಿಕಾರಿಗಳ ಸಂಘಗಳಿದ್ದರೆ ಅವರ ಸಮಸ್ಯೆಗಳು ಬೇರೆ ಇರುತ್ತವೆ, We have an idea, we are all in public life.

ಶ್ರೀ ಕೆ. ಎಸ್. ಈಶ್ವರಪ್ಪ : ಅವರು ಅದನ್ನು ಇಲ್ಲಿ ಬೇರೆಸುವುದಕ್ಕೆ ಹೊರಟ್ಟಿದ್ದಾರೆ, ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ.

Mr. Speaker : It is alright. I don't want to prejudice.

ಶ್ರೀ ಎಸ್. ಸುರೇಶ್ ಕುಮಾರ್ : ಸಭಾಧ್ಯಕ್ಷರೆ, ತಮ್ಮ ಮೂಲಕ ಕಾನೂನು ಸಚಿವರ ಗಮನಕ್ಕೆ ಒಂದು ಅಂಶವನ್ನು ತರುವುದೇನೆಂದರೆ, ಜನರಲ್ ಮ್ಯಾನೇಜರ್‌ರವರು ದಿನಾಂಕ 30. 1. 90 ರಲ್ಲಿ ಒಂದು ಪತ್ರವನ್ನು ಶ್ರೀ ರಂಗ ಮರ್ಕಂಟೈಲ್‌ಗೆ ಬರೆಯುತ್ತಾರೆ.

"We have considered the entire transaction. Please note that originally you have offered pulp of much better specification. We offered a price of U.S. $ 365 per tonne of pulp of that specification. However, while accepting our offer of U.S. $ 365 dollars per tonne. you did not mention that the pulp being offered is of lower specification. By oversight, we also did not notice it and placed an order on the basis of original specification."

ಅಧ್ಯಕ್ಷರು : ಈಗ ನೀವು ಓದುತ್ತಿರುವ ಪತ್ರವನ್ನು ಬರೆದಿರುವವರು ಯಾರು?

ಶ್ರೀ ಎಸ್. ಸುರೇಶ್ ಕುಮಾರ್ : ಕಾರ್ಖಾನೆಯ ಜನರಲ್ ಮ್ಯಾನೇಜರ್‌ರವರು ಈ ಪತ್ರವನ್ನು ಬರೆದಿದ್ದಾರೆ. "You requested us" ನಾವು ಯಾರ ಮರ್ಜಿಯಲ್ಲಿ ಇದ್ದೀರಿ ಎನ್ನುವುದಕ್ಕೆ ಇದೊಂದು ಸಾಕ್ಷಿ. "Later you requested us to change the specification. Under the circumstances, we were left with little scope to comply with your request. Now, however, specification changed."

ಸ್ಪೆಸಿಫಿಕೇಷನ್ ಚೇಂಜ್ ಆಯಿತು, ಚೇಂಜ್ ಆದ ಮೇಲೆ "However, we noticed that pulp despatched does not even meet the changed specification. " My question is, who was dictating terms ಅವರು ಸ್ಪೆಸಿಫಿಕೇಷನ್ ಚೇಂಜ್ ಮಾಡುವುದಕ್ಕೆ ಒಪ್ಪಿಕೊಂಡರು. ಆ ಸ್ಪೆಸಿಫಿಕೇಷನ್ ಪ್ರಕಾರ ಪಲ್ಪ್ ಕೊಳ್ಳಲು ನಾವು ಒಪ್ಪಿಕೊಂಡೆವು. ಹೀಗಾದರೆ ಕಾಗದ ಕಾರ್ಖಾನೆ ಮುಚ್ಚದೇ ಇನ್ನೇನಾಗುತ್ತದೆ?

ಅಧ್ಯಕ್ಷರು : ಈಗ ನಾವು ಒಂದು ಕೆಲಸ ಮಾಡೋಣ. Both of you seem to be in need of some more time. ಈಗಾಗಲೇ ಸಮಯ 2.30 ಆಗಿದೆ. Can we come back after one hour?

Sri M.C. Nanaiah : Agreed, We will decide it this way.....

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ನಾಣಯ್ಯನವರೇ, ನೀವು ಜನರಲ್ ಟರ್ಮ್ಸ್‌ನಲ್ಲಿ ವಾದ ಮಾಡುತ್ತಿದ್ದೀರಿ?

ಶ್ರೀ ಎಂ.ಸಿ. ನಾಣಯ್ಯ : ಹಾಗೇನಿಲ್ಲ, ನಾನು ಸ್ಪೆಸಿಫಿಕ್ಕಾಗಿಯೇ ಆ ವಿಚಾರಕ್ಕೆ ಬರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಯಾವಾಗ ಟೆಂಡರ್ ಕರೆದರು? ಆಗ ಒಟ್ಟು ಎಷ್ಟು ಟೆಂಡರ್‌ಗಳು ಬಂದವು? ಅದರಲ್ಲಿ ಯಾರ್ಯಾರು ಎಷ್ಟೆಷ್ಟು ದರ ಕೋಟ್ ಮಾಡಿದ್ದಾರೆ? ಇದರಲ್ಲಿ ಲೋಯೆಸ್ಟ್ ಟೆಂಡರ್ ಯಾವುದು ಎಂಬ ಬಗ್ಗೆ ಮಾಹಿತಿಯನ್ನು ಸರ್ಕಾರದವರು ಈ ಸದನದ ಮುಂದಿಟ್ಟರೆ ಏನಾಗುತ್ತದೆ?

ಶ್ರೀ ಎಂ.ಸಿ. ನಾಣಯ್ಯ : ನಾಳೆ ಆ ಎಲ್ಲಾ ವಿವರಗಳನ್ನು ನಾನು ಸದನಕ್ಕೆ ಕೊಡುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಒದಗಿಸಲು ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತೇನೆ. ಅಧಿಕಾರಿಗಳು ಸಂಬಂಧಪಟ್ಟ ದಾಖಲೆ ಕೊಟ್ಟ ಮೇಲೆ ಅವರ ಒಂದು ಪ್ರತಿಯನ್ನು ಅವರಿಗೆ ನಾನು ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಕೈಯಲ್ಲಿ ಹೋಗುವುದಕ್ಕೆ ಕೊಡಲಿ ಬಳಸುತ್ತಿದ್ದೀರಿ.

ಅಧ್ಯಕ್ಷರು : ಯಾವ ಸರ್ಕಾರ ಬಂದರೂ ಅಧಿಕಾರಿಗಳೇ ಸ್ಲಿಪ್ ಕೊಡುವುದು. ಆದ್ದರಿಂದಲೇ ಅವರ ವಿಚಾರದಲ್ಲಿ ನಾವು ಜಾಗೃತರಾಗಿರಬೇಕೆಂದು ನಾನು ದಿವಸ ಹೇಳುವುದು ವಾಟಾಳರೇ, ನೀವು ಮುಖ್ಯಮಂತ್ರಿಗಳಾದರೆ, ನಾನು ಸ್ಲಿಪ್ ಕೊಡಲು ಆಗುತ್ತದೆಯೇ?

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ: ಆ ರೀತಿ ಏನೂ ಇಲ್ಲ. They wanted to make a mountain out of a small mole. In 1989, in respect of the same company, on account of the allegations made by the Officers Association, there was a Lokayukta enquiry. The Lokayukta enquired into the whole matter and ultimately it was found that it was not true. The charges were dropped in the year 1989.

(Interruptions)

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತದಿಂದ ವಾಪಸ್ ತೆಗೆದುಕೊಂಡಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಲೋಕಾಯುಕ್ತಕ್ಕೂ ಕೂಡ ಅವರು ಮೋಸ ಮಾಡಿದ್ದಾರೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮತ್ತೆ ಮಾನ್ಯ ಮಂತ್ರಿಗಳ ಆಫೀಸರ್ಸ್ ಅಸೋಸಿಯೇಷನ್ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು: ಆಫೀಸರ್ಸ್ ಯಾರೋ, ಅವರ ಅಸೋಸಿಯೇಷನ್ ಯಾವುದೋ, ನಮಗೂ ಅದಕ್ಕೂ ಸಂಬಂಧ ಇಲ್ಲ. ನಮ್ಮ ಸದನದ ಗೌರವಾನ್ವಿತ ಸದಸ್ಯರುಗಳು ಆ ವಿಚಾರವನ್ನು ಇಲ್ಲಿ ಪ್ರಸ್ತಾಪಮಾಡಿದ್ದಾರೆ. ಆ ವಿಷಯಕ್ಕೆ ಸರ್ಕಾರಕ್ಕೆ ಉತ್ತರ ಕೊಡತಕ್ಕಂತಹ ಜವಾಬ್ದಾರಿ ಇದೆ. ಮಾನ್ಯ ಮಂತ್ರಿಗಳು ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಸೂಚಿಸಿದಂತೆ ಟೆಂಡರ್ ಡೀಟೈಲ್ಸ್ ಹಾಗೂ ಉಳಿದೆಲ್ಲವನ್ನೂ ಕೂಡ ನಾಳೆ ದಿವಸ ಸದನದ ಮುಂದೆ ಮಂಡಿಸುತ್ತೇವೆಂದು ಹೇಳಿದ್ದಾರೆ. I think we will close it there.

ಶ್ರೀ ಅರಗ ಜ್ಞಾನೇಂದ್ರ: ನಾಳೆ ಮತ್ತೆ ಇದರ ಬಗ್ಗೆ ಚರ್ಚೆಗೆ ಅವಕಾಶ ಇದೆಯೇ?

ಅಧ್ಯಕ್ಷರು: ಮತ್ತೆ ನಾಳೆ ಇದರ ಬಗ್ಗೆ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೇ, ಹಾಗಾದರೆ ಮುಂದಿನ ಗತಿ ಏನು? ಯಾರು ಇಷ್ಟು ವರ್ಷಗಳಿಂದ ಇಷ್ಟೊಂದು ಹಣ ಲೂಟಿ ಮಾಡುತ್ತಿದ್ದಾರೆ, ಅವರನ್ನು ಸಸ್ಪೆಂಡ್ ಮಾಡುತ್ತೀರಾ ಅಥವಾ ಟೆಂಡರ್ ಅನ್ನು ಹಾಗೆಯೇ ಮುಂದುವರೆಸುತ್ತೀರೋ?

ಅಧ್ಯಕ್ಷರು: ನೀವು ಮೊದಲು ಅದಕ್ಕೆ ಸಂಬಂಧಪಟ್ಟ ಪೇಪರ್ಸ್ ನೋಡಬೇಕಲ್ಲವೇ? How can you come to the conclusion? ಮಾನ್ಯ ಸುರೇಶ್ ಕುಮಾರ್‌ರವರೇ, ನಾನೇನು ಹೇಳುತ್ತೇನೆ ಎಂದರೆ you have placed your arguments. ಡಿಫೆನ್ಸ್‌ಗೆ ಅವರ ಹತ್ತಿರ ದಾಖಲೆಗಳ ಇವೆ, ನಾಳೆ ಅವುಗಳನ್ನು ಸದನದಲ್ಲಿ ಪ್ಲೇಸ್ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ನಿಮಗೆ if you can still substantiate, you please tell me. I will tell the Government as to what they should do. ನಾಳೆ ಮತ್ತೆ ಇದರ ಬಗ್ಗೆ ಚರ್ಚೆಯನ್ನು

ಮುಂದುವರೆಸಿಕೊಂಡು ಹೋಗುವುದಕ್ಕಾಗುವುದಿಲ್ಲ. ನಾಳೆ ಸರ್ಕಾರದವರು ಏನು ಮಾಹಿತಿಯನ್ನು ಒದಗಿಸುತ್ತಾರೋ ಅದನ್ನು ಅವಲಂಬಿಸಿ, ನೀವು ಹೇಳಿರತಕ್ಕಂಥದ್ದೇ ಸತ್ಯ ಎನ್ನುವುದಾದರೆ ನಾನು ನನ್ನ ಕಛೇರಿಗೆ ಅವರನ್ನು ಕರೆಯುತ್ತೇನೆ, ನಿಮ್ಮನ್ನು ಕೂಡ ಕರೆಯುತ್ತೇನೆ. We will take a decision. ಅಲ್ಲಿ ಏನೂ ತೀರ್ಮಾನವಾಗದಿದ್ದರೆ ನಾವು ವಾಪಸ್ ಇಲ್ಲಿಗೆ ಬರೋಣ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ಥರ್ಡ್ ಪಾರ್ಟಿಯಿಂದ ಇನ್ಸ್‌ಪೆಕ್ಷನ್ ಮಾಡಬೇಕು ಎನ್ನುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಸಂದರ್ಭಕ್ಕೆ ಸಂಬಂಧಪಟ್ಟ ಹಾಗೆ ಮಾರ್ಚ್ 31ರೊಳಗೆ ನಾವು ಮಾಡಬೇಕಾಗಿತ್ತು. ಈಗ ಹಾಲಿ ನಾವು ಮಾಡಿರುವುದಕ್ಕೆ ಸಂಬಂಧ ಪಟ್ಟ ಹಾಗೆ what action they have taken ಎಂಬ ಬಗ್ಗೆ ವಿವರ ಕೊಡುತ್ತೇವೆ. ಅದರಲ್ಲಿ ಏನು ತಪ್ಪಿದೆ? There is nothing wrong in it. What is there to suppress from you?

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅದು ಮುಗಿಯುವ ತನಕ ಟೆಂಡರ್ ನೋಟಿಫಿಕೇಷನ್ ಆಗಬಾರದು.

ಅಧ್ಯಕ್ಷರು : ನಾನು ಆ ರೀತಿ ಸರ್ಕಾರಕ್ಕೆ ಹೇಳಲು ಆಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ನಾನು ಹೇಳುವುದನ್ನು ಕೇಳಿ. ಮೊನ್ನೆ ಈ ವಿಚಾರ ಇಲ್ಲಿ ಪ್ರಸ್ತಾಪವೇ ಆಗಲಾರದಂತೆ ಏನಾದರೂ ತರಾತುರಿಯಲ್ಲಿ ಆಗುತ್ತದೆ ಎನ್ನುವ ಕಾರಣಕ್ಕೆ ನಾನು ಇಂಟರ್‌ವೀನ್ ಆದೆ. It does not behove well for the Chair to intervene into the day to day administration of the Government. I cannnot do it.

(ಗೊಂದಲ)

Mr. Speaker : Tomorrow, he is placing the documents

(Interruptions)

ಅದನ್ನೆಲ್ಲಾ ಹೇಳಿದರೆ ಮಾಡುವುದಕ್ಕಾಗುವುದಿಲ್ಲ. ಈ ಕಂಟ್ರಾಕ್ಟಗೆ ಸಂಬಂಧಪಟ್ಟ ಹಾಗೆ....

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಅಷ್ಟೊಂದು ಹಣ ಲೂಟಿಯಾಗುವುದನ್ನು ಹಾಗೇ ಬಿಟ್ಟು ಬಿಡುತ್ತೀರಾ? 16 ಕೋಟಿ ರೂ.ಗಳ ಅವ್ಯವಹಾರಕ್ಕೆ ಅವಕಾಶ ಮಾಡಿ ಕೊಡುತ್ತೀರಾ? ಇದರ ಬಗ್ಗೆ ಚರ್ಚೆ ಮಾಡಿ; ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಎಂ.ಸಿ. ನಾಣಯ್ಯ : ಕಳೆದ ಹತ್ತು ವರ್ಷಗಳಿಂದ ಇದು ನಡೆಯುತ್ತಿದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಇಲ್ಲಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಿ. ಈ ರೀತಿ ಲೂಟಿ ಆಗುತ್ತಿರುವುದನ್ನು ನೋಡಿಕೊಂಡು ನಾವು ವಿಧಾನಸೌಧದಲ್ಲಿ ಏಕೆ ಕುಳಿತುಕೊಳ್ಳಬೇಕು? ಭ್ರಷ್ಟಾಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ....

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ತಾವು ಮತ್ತು ನಾನು ವಿಧಾನ ಸೌಧದಲ್ಲಿ ನಮ್ಮ ನಿಗದಿತ ಕಲಾಪವನ್ನು ನಿರ್ವಹಣೆ ಮಾಡಲಿಕ್ಕೆ ಕುಳಿತಿದ್ದೇವೆ. ಮೊನ್ನೆ ಈ ವಿಚಾರ ತಾವು ಪ್ರಸ್ತಾಪ ಮಾಡಿದಿರಿ. ಒಂದು ದಿವಸ ರಜಾ ಬರುವುದು ಇತ್ತು, ಬಹಳ ಅರ್ಜೆಂಟ್ ವಿಚಾರ ಎಂದು ಹೇಳಿ ನಾನು ಕೂಡ ಅಲ್ಲಿಯವರೆಗೆ ದಯಮಾಡಿ ಆತುರ ಪಟ್ಟು ಏನೂ ಫೈನಲೈಸ್ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳಿ ಒಂದು ಸೂಚನೆಯನ್ನು ಅವರಿಗೆ ಕೊಟ್ಟಿ, ಅದಕ್ಕಾಗಿಯೇ ಈ ದಿವಸ ಇದು ಅಜೆಂಡಾದಲ್ಲಿ ಹಿಂದೆ ಇದ್ದರೂ ಕೂಡ ನಾನು ಈ ವಿಷಯವನ್ನು ಮೊದಲೇ ಚರ್ಚೆಗೆ ತೆಗೆದುಕೊಂಡೆ. ಈಗ ಅವರು ಎಲ್ಲಾ ದಾಖಲೆಗಳನ್ನು ನಾಳೆ ಸದನದ ಮುಂದೆ ಇಡುತ್ತೇವೆ ಎಂದು ಹೇಳಿದ್ದಾರೆ. ಈಗ ಮತ್ತೆ ಇಂಟರೀಯಮ್ ಆರ್ಡರ್ಸ್ ಅನ್ನು ನಾನು ಸರ್ಕಾರಕ್ಕೆ ನೀವು ಅದನ್ನು ಫೈನಲೈಸ್ ಮಾಡಬೇಡಿ, ಇದನ್ನು ಫೈನಲೈಸ್ ಮಾಡಬೇಡಿ ಎಂದು ಹೇಳಿ I cannot get into the administration.

(ಗೊಂದಲ)

Sri. S. Suresh Kumar : You need not....

(ಗೊಂದಲ)

Mr. Speaker : That will not be within jurisdiction.

(ಗೊಂದಲ)

Sri. M.C. Nanaiah : On behalf of the Government, I cannot give that undertaking now.

ಅವರು ಇಲ್ಲಿ ಪ್ರಸ್ತಾಪ ಮಾಡಿರುವಂತಹ ವಿಚಾರಕ್ಕೆ ನಾವು ಉತ್ತರ ಕೊಡಲಿಕ್ಕೆ ತಯಾರಿದ್ದೇವೆ. Within 31st, the Contract will have to be finalised.

31 ರೊಳಗೆ ಕಾಂಟ್ರಾಕ್ಟ್ ಫೈನಲೈಸ್ ಆಗಬೇಕು. ನಿಮಗೆ ನಾವು ಉತ್ತರ ಕೊಡುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಜವಾಬ್ದಾರಿಯಿಂದ ಉತ್ತರ ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಾಟಾಳ್‌ರವರೇ, ಸರ್ಕಾರ ಜವಾಬ್ದಾರಿಯಿಂದಲೇ ಉತ್ತರ ಕೊಡುತ್ತದೆ.

(ಗೊಂದಲ)

ಅಧ್ಯಕ್ಷರು : ನಾನೇನು ಹೇಳುತ್ತೇನೆ ಎಂದರೆ, you should not fight in vaccum. Let there be no dispute or arguments in vaccum. ಇವತ್ತು ಮತ್ತು ನಾಳೆ ನಡುವೆ ದೊಡ್ಡ ಅಂತರ ಏನೂ ಆಗಿ ಹೋಗಿ ಬಿಡುವುದಿಲ್ಲ. ಅವರು ಹೇಳಿದ್ದೇನು ಎಂದರೆ, ನಾಳೆಯೇ ಡಾಕ್ಯುಮೆಂಟ್ಸ್ ಎಲ್ಲಾ ಕೊಡುತ್ತೇವೆ ಎಂದು ಹೇಳಿದ್ದಾರೆ. ನಾನು ನಿಮಗೆ ಏನು ಹೇಳಿದೆ ಎಂದರೆ ಅವನ್ನೆಲ್ಲಾ ನೋಡಿ, you come back to me ನಮ್ಮ ಛೇಂಬರ್ಸ್‌ಗೆ ಅವರನ್ನೇ ಕರೆಸೋಣ, ಫರ್ದರ್ ಕ್ಲಾರಿಫಿಕೇಷನ್

ಏನಾದರೂ ಇದ್ದರೆ ಎಂದು ನಾನು ಆಗಲೇ ಹೇಳಿದೆ. ಅದರ ಮೇಲೆ ಸಾಲ್ವ್ ಆಗದೇ ಹೋದರೆ let us come here ಅನ್ನುವ ಮಾತನ್ನೂ ಕೂಡ ನಾನು ಹೇಳಿದೆ. ಇವತ್ತು ಹೋಗಿ ರಾತ್ರಿಯೆಲ್ಲಾ ಕುಳಿತು ಇವರು ಟೆಂಡರ್ ಫೈನಲೈಸ್ ಮಾಡಿ ಬಿಡುವುದೇನೂ ಇರುವುದಿಲ್ಲ. ನಾನೇನು ಹೇಳುತ್ತೇನೆ ಎಂದರೆ, ಇದು ಎಲ್ಲಾ ವಿನಡಂ ಅಷ್ಟೆ. ಇದೆಲ್ಲಾ unspelt wisdom by chance ಇವರು ನಾನು ಅಂಡರ್ ಟೇಕಿಂಗ್ ಕೊಡುವುದಿಲ್ಲ ಎಂದು ಹೇಳಿ, ಇವತ್ತು ರಾತ್ರೋರಾತ್ರಿ ಇವರು ಟೆಂಡರ್ ಫೈನಲೈಸ್ ಮಾಡಿ ಬಿಡತಕ್ಕದ್ದು ಆದರೆ, ಯಾರೂ ಏನೂ ಹೇಳಲೇಬೇಕಾಗಿಲ್ಲ. there is something ಎಂದು ಆಗುತ್ತದೆ. It would be even worse for them. Why do you talk about it? ಅಧ್ಯಕ್ಷರಾದವರು ಇದಕ್ಕಿಂತ ಹೆಚ್ಚು ಹೆಲ್ಪ್ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ದಯಮಾಡಿ ನಾಳೆ ಮತ್ತೆ ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಕೊಡುತ್ತೀರೋ?

ಶ್ರೀ ಕೆ. ಎಸ್. ಈಶ್ವರಪ್ಪ : ಚರ್ಚೆಗೂ ಅವಕಾಶ ಇಲ್ಲ, ನೆಗೋಷಿಯೇಷನ್ಸ್ ಅವರು ಮಾಡುತ್ತಾರೆ...

ಅಧ್ಯಕ್ಷರು : ನಾನೇನು ಹೇಳಿದೆ ಎಂದು ತಾವು ಕೇಳಿಸಿಕೊಳ್ಳಲಿಲ್ಲ. ಅವರು ಆ ಡಾಕ್ಯುಮೆಂಟ್ಸ್ ಎಲ್ಲಾ ತಮ್ಮ ಹತ್ತಿರ ಕೊಟ್ಟ ಮೇಲೆ ತಾವು ಅದನ್ನು ನೋಡಿ, ಫರ್ದರ್ ಅನುಮಾನಗಳು ಏನಾದರೂ ಇದ್ದರೆ ದಯಮಾಡಿ ಅವರು, ತಾವು ನಮ್ಮ ಛೇಂಬರ್ಸ್‌ಗೆ ಬನ್ನಿ, ಅಲ್ಲಿ ಎಲ್ಲಾ ಸ್ಪಷ್ಟೀಕರಣ ಕೊಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ, ಅಲ್ಲಿ ಇತ್ಯರ್ಥ ಆಗದೇ ಹೋದರೆ ಇಲ್ಲಿಗೆ ಬರೋಣ ಎಂದು ನಾನು ಹೇಳುತ್ತಿದ್ದೇನೆ. ಏಕೆ ಎಂದರೆ ನನ್ನ ತೊಂದರೆ ಇಷ್ಟೆ. ಇವತ್ತು 25 ನೇ ತಾರೀಖು, ನಾಳೆ 26ನೇ ತಾರೀಖು, ನಾಳೆ ಸಂಜೆಯೊಳಗೆ ಮಾನ್ಯ ಹಣಕಾಸಿನ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿಗಳಿಂದ ನಾನು ಬಜೆಟ್ ಮೇಲಿನ ಚರ್ಚೆಗೆ ಉತ್ತರ ಕೊಡಿಸಬೇಕು. ನಾಡಿದ್ದು ಅದನ್ನು I have to send it to the Council. ಸಮಯದ ಅಭಾವದಿಂದ ನಾನು ಆ ಮಾತನ್ನು ಹೇಳುತ್ತಿದ್ದೇನೆಯೇ ಹೊರತು, ಆ ವಿಷಯ ಇಲ್ಲಿ ಚರ್ಚೆಯಾದರೆ ನನಗೆ ಅಗತಕ್ಕ ತೊಂದರೆ ಏನೂ ಇಲ್ಲ. ಆ ಕಾರಣಕ್ಕೆ ನಾನು ಆ ಮಾತನ್ನು ಹೇಳಿದೆ. ನನ್ನ ಛೇಂಬರ್ಸ್‌ನಲ್ಲಿ ಚರ್ಚೆ ಮಾಡೋಣ. ಅಲ್ಲಿ ಇತ್ಯರ್ಥ ಆಗದೇ ಹೋದರೆ ಮತ್ತೆ ಇಲ್ಲಿಗೆ ಬರೋಣ, ಇದು ಸಾರ್ವಜನಿಕ ಮಹತ್ವದ ವಿಷಯ, ಆಮೇಲೆ ಇಲ್ಲಿ ಚರ್ಚೆ ಮಾಡುವ ಬಗ್ಗೆ ಆಲೋಚನೆ ಮಾಡೋಣ ಎಂದು ಆಗಲೇ ನಾನು ಹೇಳಿದೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು : ಅದೇನು ಹೇಳಿ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಾವು ಸದನದ ಕಾರ್ಯಕಲಾಪಗಳ ನಿಯಮಾವಳಿ ಪ್ರಕಾರ ಕಲಾಪ ನಡೆಸಬೇಕಾಗುತ್ತದೆ. ಈಗ ಒಂದು ಪಬ್ಲಿಕ್ ಸೆಕ್ಟಾರ್ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಅದಕ್ಕೆ ಷೇರ್ ಹೋಲ್ಡರ್ಸ್ ಇದ್ದಾರೆ. ಜನರಲ್ ಬಾಡಿ ಮೀಟಿಂಗ್ ಇರುತ್ತದೆ. ಈ ಎರಡು ವಿಷಯಗಳನ್ನು ನಾವು ನೆನಪಿನಲ್ಲಿಡಬೇಕು. ಟೆಂಡರ್ ಬಗ್ಗೆ ಅಥವಾ ಕಂಪನಿಯ ಅಡ್ಮಿನಿಸ್ಟ್ರೇಟಿವ್ ಮ್ಯಾಟರ್ಸ್ ಬಗ್ಗೆ ಸದನದಲ್ಲಿ ಡಿಸ್ಕಸ್ ಮಾಡಿದರೆ ಈ ಸದನಕ್ಕೆ ಗೌರವ ಇರುವುದಿಲ್ಲ. ಖಂಡಿತವಾಗಿ ಗೌರವ ಇರುವುದಿಲ್ಲ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ : ಒಂದು ನಿಮಿಷ, I will argue my point.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಸದನಕ್ಕೆ ಇರತಕ್ಕಂತಹ ಸಾರ್ವಭೌಮತ್ವವನ್ನು ಕಡೆಗಣಿಸಬೇಡಿ. ಇದೇನು ಪುರಸಭೆ ಅಲ್ಲ. ಈ ಸದನಕ್ಕೆ ಅನೇಕ ಶಕ್ತಿಗಳಿವೆ, ಅಧಿಕಾರಗಳಿವೆ.

ಅಧ್ಯಕ್ಷರು : ಮಾನ್ಯ ನಾಗೇಗೌಡರು ಅವರ ಅಭಿಪ್ರಾಯ ಹೇಳಲಿ ಬಿಡಿ.

ಶ್ರೀ ಕೆ. ಎನ್. ನಾಗೇಗೌಡ (ಬೃಹತ್ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಪಾಲಿಸಿ ಮೇಟರ್ಸ್‌ನ್ನು, ಅಡ್ಮಿನಿಸ್ಟ್ರೇಟೀವ್ ಮೇಟರ್ಸ್‌ನ್ನು ಪಬ್ಲಿಕ್ ಸೆಕ್ಟಾರ್ಸ್‌ನಲ್ಲಿ ಎಷ್ಟು ಚರ್ಚೆ ಮಾಡಬೇಕೆಂದು ನಮ್ಮ ರೂಲ್ಸ್ ಹೇಳಿದೆ. ಆ ರೂಲ್ಸ್ ಪ್ರಕಾರ ಟೆಂಡರುಗಳನ್ನು ಫೈನಲೈಸ್ ಮಾಡಬೇಡಿ ಎಂದು ಸದನ ಡೈರೆಕ್ಷನ್ ಕೊಡುವಂಥದ್ದು ಇದ್ದರೆ ತಾವು ರೂಲಿಂಗ್ ಕೊಡಿ ಸರ್. ಸದನದ ನಿಯಮಾವಳಿಗಳು ಇವೆ. ಆ ಕಾರ್ಖಾನೆ ಪಬ್ಲಿಕ್ ಸೆಕ್ಟಾರ್ ಆಗಿರುತ್ತದೆ. ಅದಕ್ಕೆ ಶೇರ್ ಹೋಲ್ಡರ್ಸ್ ಇದ್ದಾರೆ, ಜನರಲ್ ಬಾಡಿ ಮೀಟಿಂಗ್ ಆಗುತ್ತದೆ, There are Committees. If you say, direct the Government to stop the tender, how can we do it Sir?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಕಾರ್ಖಾನೆಯಲ್ಲಿ ಲಕ್ಷಾಂತರ ರೂಪಾಯಿ ಲಾಸ್ ಆಗುವಾಗ ಅದನ್ನು ಮುಂದುವರೆಸಿಕೊಂಡು ಹೋಗಬೇಡಿ ಎಂದು ಹೇಳುವುದು ತಪ್ಪೇ?

ಶ್ರೀ ವಾಟಾಳ್ ನಾಗರಾಜ್ : ಒಂದು ಸಾರ್ವಜನಿಕ ಉದ್ದಿಮೆಯಲ್ಲಿ ಲೂಟಿ ಮಾಡಿರುವಂಥದ್ದನ್ನು ಇಲ್ಲಿ ಚರ್ಚೆ ಮಾಡುವ ಹಾಗಿಲ್ಲ. ಅವರು ಮಾಡಿರುವ ಅನ್ಯಾಯದ ಬಗ್ಗೆ ಚರ್ಚೆ ಮಾಡುವ ಹಾಗಿಲ್ಲ. ಇವೆಲ್ಲವನ್ನೂ ಸದನದಲ್ಲಿ ಚರ್ಚೆ ಮಾಡುವ ಹಾಗಿಲ್ಲ ಎಂದು ಹೇಳಿದರೆ ಇದು ಯಾವ ನೀತಿ? ಈ ಸದನ ಇನ್ನು ಏತಕ್ಕೆ ಇರುವುದು?

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ಪಾಯಿಂಟ್ ಹೇಳಿಬಿಡುತ್ತೇನೆ. ಇದು ಬಹಳ ಮಹತ್ವವಾದ ವಿಚಾರ. ಅವರಿಗೆ ನಾನು ಅಲಿಗೇಷನ್ ಮಾಡಬೇಡಿ 'ಎಂದು ಹೇಳುವುದಿಲ್ಲ. ಅವರು ಸಿ.ಬಿ.ಐ. ಎನ್‌ಕ್ವೈರಿ ಮಾಡಿಸಿ ಎಂದು ಕೇಳಬೇಡಿ ಎಂದು ಹೇಳುವುದಿಲ್ಲ. ಆ ಕಂಪನಿಯ ಅಕೌಂಟ್ಸ್‌ನ್ನು ಕೇಳಬೇಡಿ ಎಂದು ಹೇಳುವುದಿಲ್ಲ. ಆದರೆ ಆ ಕಂಪನಿಯ ವ್ಯವಹಾರವನ್ನು, ಆ ಕಂಪನಿ ಒಳಗಡೆ ಇರತಕ್ಕಂಥ ಅಡ್ಮಿನಿಸ್ಟ್ರೇಟೀವ್ ಮೇಟರ್ಸ್‌ನ್ನು ಕೇಳಬೇಡಿ ಎಂದು ಸಹ ಹೇಳುವುದಿಲ್ಲ. ಪಾಲಿಸಿ ಮ್ಯಾಟರ್ಸ್ ಮಾತ್ರ ' Direct the Government to stop tender ', ಎಂದು ಹೇಳಿ ಆ ಮಟ್ಟಕ್ಕೆ ನಮ್ಮ ಬಿಸಿನೆಸ್ ರೂಲ್‌ನಲ್ಲಿ ನಮಗೆ ಅವಕಾಶವಿದ್ದರೆ ' to direct pulic sector ', kindly direct us.

(Interruptions)

Sri. K.N. Nage Gowda : It is the most relevant point.

Mr. Speaker : Let me hear him.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಾಗೇಗೌಡರ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಏನೂ ಅರ್ಥವಿಲ್ಲ. ಏಕೆಂದರೆ ಪ್ರತಿಯೊಂದು ಸಾರ್ವಜನಿಕ ಉದ್ದಿಮೆಗಳ ವಾರ್ಷಿಕ ಲೆಕ್ಕ ಪತ್ರಗಳು ಅಂದರೆ ಲಾಭ ಮತ್ತು ನಷ್ಟದ ಲೆಕ್ಕಗಳನ್ನೂ ಸಹ ಸಭೆಯ ಮುಂದಿಡಲಾಗುತ್ತದೆ. ಅದೇ ರೀತಿಯಾಗಿ ಪಬ್ಲಿಕ್ ಅಂಡರ್‌ಟೇಕಿಂಗ್ ಬಗ್ಗೆ ಸದನದ ಸಮಿತಿ

ಕೂಡ ಇರುತ್ತದೆ. ಅದರಿಂದ, ಅಲ್ಲಿ ನಡೆದಂಥ ವ್ಯವಹಾರಗಳ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಎಲ್ಲಾ ಸಾರ್ವಜನಿಕ ಉದ್ದಿಮೆಗಳ ವ್ಯವಹಾರಗಳ ಬಗ್ಗೆ ಈ ಸದನದಲ್ಲ ಚರ್ಚೆ ಮಾಡುವುದಕ್ಕೆ ಅವಕಾಶವಿದೆ, ಆ ಉದ್ದಿಮೆಗಳ ಆಗುಹೋಗುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಇಲ್ಲಿ ಅವಕಾಶವಿದೆ, ಅಲ್ಲಿ ನಡೆದಂಥ ಅವ್ಯವಹಾರವನ್ನು ಎತ್ತಿ ತೋರಿಸುವುದಕ್ಕೆ ದಿನವೂ ಗಮನ ಸೆಳೆಯುವ ಸೂಚನೆ ಅಡಿಯಲ್ಲಿ ಕೊಡುತ್ತೇವೆ. ಮತ್ತು ಅನೇಕ ಸಾರಿ ಇಲ್ಲಿ ಪ್ರಸ್ತಾಪ ಮಾಡುತ್ತೇವೆ. ಆದ್ದರಿಂದ ಸದನದ ನಿಯಮಾವಳಿಯಲ್ಲಿ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ ವ್ಯವಹಾರಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಹೇಳುವ ಹಾಗಿಲ್ಲ. ಆ ಪಾಯಿಂಟ್ ಆಫ್ ಆರ್ಡರ್‌ನಲ್ಲಿ ಏನೂ ತಿರುಳು ಇಲ್ಲ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ದಯಮಾಡಿ ಒಂದು ನಿಮಿಷ ಅವಕಾಶ ಕೊಡಿ. ರಾಜ್ಯದ ಅಥವಾ ಇನ್ಯಾವುದೇ ಪಬ್ಲಿಕ್ ಸೆಕ್ಟಾರ್ಸ್ ಇರಲಿ, ನಾವು ಡಿಸ್‌ಕಸ್ ಮಾಡುವುದಕ್ಕೆ ಜನರಲ್ ಬಾಡಿ ಮೀಟಿಂಗ್ ಇದೆ, ವಾರ್ಷಿಕ ಲೆಕ್ಕ ಪತ್ರಗಳ ವರದಿ ಇದೆ, ಸದನ ಸಮಿತಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ, ಸದನದ ನಿಯಮಾವಳಿಗಳ ಪ್ರಕಾರ ಸದನದಲ್ಲಿ ಚರ್ಚೆ ಮಾಡುವುದಕ್ಕೆ ಕೂಡ ಅವಕಾಶವಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು ಅದನ್ನು ಒಪ್ಪಿಕೊಳ್ಳೋಣ. All the public sector undertakings are accountable to the Legislature. No doubt about it. ಅದರ ಬಗ್ಗೆ ನನ್ನ ಡಿಸ್‌ಪ್ಯುಟ್ ಅಲ್ಲ. ಮಾನ್ಯ ಈಶ್ವರಪ್ಪನವರು ಏನು ಹೇಳಿದರು ಎಂದರೆ - 'ನೀವು ಸರ್ಕಾರಕ್ಕೆ ಆದೇಶ ಕೊಟ್ಟು ಟೆಂಡರ್ಸ್‌ನ್ನು ಮುಂದೂಡಿ' ಎಂದರು.

Mr. Speaker : It is an academic point. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ ಇದರಲ್ಲಿ 'ಕಮಿಟಿ ಆನ್ ಪಬ್ಲಿಕ್ ಅಂಡರ್ ಟೇಕಿಂಗ್ಸ್' ಎನ್ನುವ ಎಂದು ಚಾಪ್ಟರ್ ಇದೆ. The Committee is the House in itself. It is representative of the House. We repose our confidence in the Committee and ask them to work.

ಅದರಲ್ಲಿ ಏನು ಹೇಳುತ್ತಾರೆಂದರೆ ಅವರ ಕರ್ತವ್ಯಗಳನ್ನೆಲ್ಲಾ ಹೇಳಿಬಿಟ್ಟು,

Provided that the Committee shall not examine and investigate any of the following namely:

1) Matters of major Government policy as distinct from business or commercial functions of the Public Undertakings.

2) Matters of day to day administration.

3) Matters for the consideration of which machinery is established by any special statute under which a particular public undertaking is established. ಎಂದು ಹೇಳಿದ್ದಾರೆ. ನಾನು ಅದನ್ನೇ ನನ್ನ ಮಾತಿನಲ್ಲಿ ಇಲ್ಲಿ ಹೇಳಿರುವುದು. as rightly pointed out by the Hon'ble Minister for major irri-

ಟೆಂಡರ್ ಫೈನಲೈಸ್ ಮಾಡುವುದು ಅಥವಾ ಮಾಡದೇ ಇರುವುದು that becomes a matter of day to day administration. I will be going beyond my jurisdiction to give any kind of direction. The other day what I said was, it was a request conveyed to them; in view of the public importance the matter had come. In the available time, I appealed to Govt not to finalise anything in a hurry and they had also agreed and we have raised that matter In fact I preponed the subject. You sent the requisition. Further they have agreed to give all the information before the House tomorrow. You can come back and seek clarifications on that. Officers will be present. Concerned Minister will be present. Furthermore if you are not satisfied on the clarifications made available to you, I will examine the possibilities of coming back again here to allow you. That is what I am telling.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ಇವತ್ತಿನಿಂದ ನಾಳೆಯವರೆಗೆ ದಯಮಾಡಿ ನೆಗೋಸಿಯೇಷನ್ಸನ್ನು ಮಾತ್ರ ಮಾಡಬೇಡಿ ಎಂದು ನಾವು ಕೇಳಿರುವಂಥದ್ದು ಹೊರತು ಟೆಂಡರ್‌ನ್ನು ಅಲ್ಲ. ಈ ಸಭೆಯಲ್ಲಿ ನಾವು ತೀರ್ಮಾನ ಮಾಡತಕ್ಕಂಥ ಸಮಯದಲ್ಲಿ they must hold their hands, otherwise it will be faitaccompli,

ಅಧ್ಯಕ್ಷರು : ಸಭೆಯೂ ಕೂಡ ತನ್ನ ವ್ಯಾಪ್ತಿಯನ್ನು ಅರಿತು ಕೆಲಸ ಮಾಡಬೇಕಾಗುತ್ತದೆ. ತನ್ನ ವ್ಯಾಪ್ತಿಯನ್ನು ಮರೆತು ಸಭೆ ತನ್ನ ಕೆಲಸ ಮಾಡಿದರೂ ಕೂಡ ಅದು ಸಭೆಗೆ ಶೋಭೆ ತರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೆ, ನಾವು ನಿಮ್ಮನ್ನು ಆದೇಶ ಕೊಡಿ ಎಂದು ಕೇಳುತ್ತಿಲ್ಲ ಆದರೆ ಇದು inbuilt understanding. ಅವರು ಕೂಡ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ನಾಳೆ ಚರ್ಚೆ ಮಾಡೋಣ ಎಂದು ತಾವು ಹೇಳಿದಿರಿ. ಈ ವರ್ಷ ಖರೀದಿ ಮಾಡಿರತಕ್ಕಂಥದ್ದರ ಬಗ್ಗೆ ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. Technically evaluation tender ಯಾವುದು ಇದೆ. ಅದಕ್ಕೆ ಸಂಬಂಧಪಟ್ಟ ಹಾಗೆ ದಾಖಲೆಗಳನ್ನು ಕೊಡುತ್ತೇನೆಂದು ಹೇಳಿದ್ದೇನೆ. ಬಹುಶ: ತಾವು ಹೇಳುತ್ತಿರತಕ್ಕಂಥದ್ದು ನಮ್ಮ ಸರ್ಕಾರದ ಗಮನಕ್ಕೂ ಬರುತ್ತದೆ. ಅಧಿಕಾರಿ ವರ್ಗದವರೂ ಸಹ ಇದ್ದಾರೆ. ರಾತ್ರೋರಾತ್ರಿ ತರಾತುರಿಯಲ್ಲಿ ಮಾಡಲಿಕ್ಕೆ ಇರತಕ್ಕಂಥದ್ದಕ್ಕೆ ಯಾರೂ ಆ ರೀತಿ ಮಾಡಲಿಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಸದಸ್ಯರುಗಳು ಕೇಳಿರತಕ್ಕಂಥ ಪ್ರಶ್ನೆ ಯಾವುದು ಇದೆ, ಅದಕ್ಕೆ ನಾನು ಸರ್ಕಾರದಿಂದ ನೆಗೋಸಿಯೇಷನ್‌ನನ್ನು ಮಾಡುವುದಿಲ್ಲವೆಂದು ಹೇಳಿ ತಕ್ಕಂಥ ಭರವಸೆಯನ್ನು ಕೊಡಲಿಕ್ಕೆ ಇರತಕ್ಕಂಥ ಮಟ್ಟದಲ್ಲಿ ನಾನು ಇಲ್ಲ, ಯಾವುದನ್ನು ಮಾಡಬೇಕು ಅದನ್ನು ನಾನು ಹೇಳುತ್ತೇನೆ, ಅದನ್ನು ನಿಯಮಿತ ನಿಯಮಗಳ ಒಳಗೆ ಮಾಡಲಿಕ್ಕೆ ಇರತಕ್ಕಂಥದ್ದು ನಮಗೂ ಗೊತ್ತಿದೆ.

ಅಧ್ಯಕ್ಷರು : ಒಂದೇ ಸಲಕ್ಕೆ ಅವರು ಟೆಂಡರುಗಳನ್ನು ಕರೆದು ನೆಗೋಸಿಯೇಷನ್ ಮಾಡುವುದಕ್ಕೆ ಆಗುವುದಿಲ್ಲ.

Sri. M.C. Nanaiah : We can't make any such assurance.

Mr. Speaker : Let them submit their documents tomorrow.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ್ದನ್ನು ಒಪ್ಪಿಕೊಳ್ಳೋಣ. ಆದರೆ in Page 98 - Committee on Public Undertakings : Functions of the Committee.

ಇದರ ಪ್ರಕಾರ ನಾವು ಸದನದಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಬಗ್ಗೆ ಡಿಸ್‌ಕಷನ್ ಮಾಡುವುದಕ್ಕೆ ಏನೂ ತೊಂದರೆ ಇಲ್ಲ. These are the restrictions put to the Committee not to the House. The House has every power.

Mr. Speaker : I endorse that. I don't have to read it again. I have read it just now.

ಪ್ರಾರಂಭಕ್ಕೆ ಪೀಠಿಕೆ ಹಾಕುತ್ತಾ ನಾನು ಅದನ್ನೇ ನನ್ನ ಮಾತಿನಲ್ಲಿ ಹೇಳಿದ್ದುದು. the Committee is an House itself, It is a Miniature of this House. It is after getting the confidence of this House they are nominated to the Committee in discharging all its duties on behalf of the house.

Sri. M. Mallikarjuna Kharge : But certain powers, the House has delegated to the Committee. Even this house discusses the Committee's report.

Mr. Speaker : That is the power, privilege

ಡೇ-ಟುಡೇ ಅಡ್ಮಿನಿಸ್ಟ್ರೇಷನ್‌ಗೆ ಮಾತ್ರ ಸೀಮಿತವಾಗಿ ನಾನು ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, The Committee has got limitations

ಡೇ ಟುಡೇ ಅಡ್ಮಿನಿಸ್ಟ್ರೇಷನ್ ಎಂದರೆ House can discuss.

ಈಗ ಏನಾಗುತ್ತದೆ ಎಂದರೆ ಒಂದು ಟೆಂಡರ್..... Not administration, I am telling, exorbitant, ಇಲ್ಲಿ ಪರ್ಟಿಕ್ಯುಲರ್ ಒಂದು ಟೆಂಡರ್ suppose it is ಕೋಟಿಗಟ್ಟಲೆ ಲಾಸ್ ಆಗುತ್ತಿದ್ದು, ಅದನ್ನು ಈ ಸದನದಲ್ಲಿ ಡಿಸಕಸ್ ಮಾಡಲೇ ಬೇಡಿ ಎಂದು ಹೇಳಿದರೆ ಹೇಗೆ? ಅದಕ್ಕೆ ಅರ್ಥ ಇದೆಯೇ? ಗ್ರಾಜ್ಯುಯಲಿ ತಪ್ಪಾಗಬಹುದು.

Mr. Speaker: I endorse with your views. I agree with your point..

Sri. M. Mallikarjuna Kharge : To prevent such things, the Government has to take some decision, to prevent such losses.

Sri. M.C. Nanaiah : To put an end to it, it comes directly under the control of the committee. Let it be looked into by the Public undertakings Committee. Ultimately, that is the Committee which will look into that.

ಇವತ್ತು ಮಾನ್ಯ ಸದಸ್ಯರು ಈ ಸದನದಲ್ಲಿ ಚರ್ಚೆ ಮಾಡುತ್ತಿರತಕ್ಕಂಥದ್ದು, ಸದನವೇ ರಚನೆ ಮಾಡುತ್ತಿರತಕ್ಕಂಥ ಸಮಿತಿ ಈ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ.....

It is nothing but a miniature of the House itself. Let the Committee on Public undertakings look into it. We have no objections on this.

ಶ್ರೀ ವಾಟಾಳ್ ನಾಗರಾಜ್ : ಎಷ್ಟು ವಿಷಯಗಳ ಮೇಲೆ ಚರ್ಚೆ ಆಯಿತು? ಎಷ್ಟು ವರದಿಗಳು ಬಂದವು? ಆದರ ಮೇಲೆ ಸದನದಲ್ಲಿ ಎಷ್ಟು ಚರ್ಚೆ ಆಯಿತು? ಇವೆಲ್ಲವನ್ನೂ ನೋಡಿದ್ದೇವೆ.

Sri. M.C. Nanaiah : Don't you have confidence in the Committee? It is our Committee.

ಶ್ರೀ ವಾಟಾಳ್ ನಾಗರಾಜ್ : ಸಮಿತಿ ಬಗ್ಗೆ ನಂಬಿಕೆ ಇದೆ.

ಶ್ರೀ ಜಿ.ಬಿ. ಶ್ರೀರಾಮರೆಡ್ಡಿ : ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಗೆ ಇದನ್ನು ಒಪ್ಪಿಸುವುದರಿಂದ ತಕ್ಷಣ ಆ ಸಮಸ್ಯೆ ಪರಿಹಾರವಾಗುವುದಿಲ್ಲ. ಕಮಿಟಿಗೆ ಒಪ್ಪಿಸಿದರೆ ತಕ್ಷಣ ರಿಲೀಫ್ ಸಿಗುವುದಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ನಾನು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ರೆಡ್ಡಿಯವರೆ, ನಾವು ಸರ್ಕಾರದ ಕಡೆಯಿಂದ ಎಲ್ಲಿಯವರೆಗೆ ಹೋಗಬಹುದೆಂದರೆ, ತಾವೆಲ್ಲಾ ಪ್ರಸ್ತಾಪ ಮಾಡಿರತಕ್ಕಂಥ ವಿಚಾರಕ್ಕೆ ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ಮಾನ್ಯ ರೆಡ್ಡಿಯವರೇ ಸಮಿತಿಗಳ ಬಗ್ಗೆ ಆ ತರಹವೆಲ್ಲಾ ಆತುರವಾಗಿ ಮಾತನಾಡಿದರೆ, ನಾಳೆಯ ದಿವಸ ನೀವೆಲ್ಲಾ ಹೋಗಿ ಸಮಿತಿಗಳಲ್ಲಿ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಮಿತಿಗಳ ಬಗ್ಗೆ ನಾವು ಹಗುರವಾಗಿ ಮಾತನಾಡಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಸಮಿತಿಗಳ ಬಗ್ಗೆ ನಾವು ಅಪನಂಬಿಕೆ ವ್ಯಕ್ತಪಡಿಸಿಲ್ಲ. ಸಮಿತಿಗಳ ಬಗ್ಗೆ ನಾವು ಅಗೌರವ ತೋರಿಸಿಲ್ಲ. ಈ ಪರಿಸ್ಥಿತಿಯಲ್ಲಿ ತಕ್ಷಣಕ್ಕೆ ಪರಿಹಾರ ಸಿಗಬೇಕು ಎಂದು ಅಷ್ಟೇ ಹೊರತು ನಾವು ಸಮಿತಿಯನ್ನು ತಳ್ಳಿಹಾಕತಕ್ಕಂಥ ಪ್ರಶ್ನೆ ಇಲ್ಲ.

ಅಧ್ಯಕ್ಷರು : ಈಗ ಪರಿಹಾರವನ್ನು ಹೇಳಿದರಲ್ಲಾ, ನಾಳೆಯ ದಿವಸ ಡಾಕ್ಯುಮೆಂಟ್‌ಗಳನ್ನೆಲ್ಲಾ ಕೊಡಲಿ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಖಂಡಿತವಾಗಿ ಕಮಿಟಿಗಳ ಬಗ್ಗೆ ನಮಗೆ ಸಮಪೂರ್ಣವಾದಂತಹ ಗೌರವ ಇದೆ. ಕಮಿಟಿಯಲ್ಲಿ ನಾವುಗಳೇ ಕುಳಿತುಕೊಂಡು ಚರ್ಚೆಯನ್ನು

ಮಾಡುತ್ತೇವೆ, ಯೋಚನೆಯನ್ನು ಮಾಡುತ್ತೇವೆ. ಆದರೆ ಇಲ್ಲಿ ಏನಾಗಿದೆ ಎಂದರೆ 18 ನೇ ತಾರೀಖು ಟೆಂಡರ್, ನೆಗೋಸಿಯೇಷನ್‌ನ್ನು 24ನೇ ತಾರೀಖು ಇಟ್ಟುಕೊಂಡಿದ್ದರು. ಇಲ್ಲಿ ಪ್ರಸ್ತಾಪವನ್ನು ಮಾಡಿದ್ದಕ್ಕೆ ಇವತ್ತಿನವರೆಗೂ ಹೋಗಿದೆ. ನಾವು ಸುಮ್ಮನೆ ಕುಳಿತುಕೊಂಡರೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಇವತ್ತು ನಾಳೆ ಆಗಲಿಲ್ಲ ಎಂದರೆ ಪಬ್ಲಿಕ್ ಅಂಡರ್ ಟೇಕಿಂಗ್ ಹೋದರೆ ಅಲ್ಲಿ ಯಾವ ವಿಷಯ ಬರಬೇಕು, ಯಾವಾಗ ಚರ್ಚೆ ಮಾಡಬೇಕು ಅಷ್ಟರವರೆಗೆ ಲೂಟಿಗಳು ಆಗುತ್ತಾ ಹೋಗುತ್ತದೆ. ಕಮಿಟಿಗಳ ಬಗ್ಗೆ ನಮಗೆ ಏನು ಅನುಮಾನ ಇಲ್ಲ, ಅಪನಂಬಿಕೆಯೂ ಇಲ್ಲ.

ಅಧ್ಯಕ್ಷರು : ಕೆಲವು ಪದಗಳನ್ನು ಸೂಕ್ತವಾಗಿ ಯೂಸ್ ಮಾಡಿದರೆ ಬಹಳ ಹೆಚ್ಚು ಬೆಲೆ ಬರುತ್ತದೆ. ನೀವು ಕುಳಿತುಕೊಂಡರೆ, ನಿಂತರೆ ಲೂಟಿ, ಲೂಟಿ ಎಂದು ಹೇಳಿದರೆ ಹೇಗೆ? ಅದು ಸಾಮಾನ್ಯ ಪದವಾಗಿ ಬಿಡುತ್ತದೆ. ಲೂಟಿ ಅಪರೂಪದ ಕೆಲಸ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಬೇರೆ ಯಾವ ಪದವನ್ನು ಹೇಳಬೇಕು? ಏನು ಹಣವನ್ನು ತಿಂದು ಹಾಕುತ್ತಿದ್ದಾರೆಂದು ಹೇಳಬೇಕೇ? ಇಲ್ಲ, ಯಾವ ಪದವನ್ನು ಉಪಯೋಗ ಮಾಡಬೇಕೆಂಬುದನ್ನು ನೀವೇ ಹೇಳಿ.

ಅಧ್ಯಕ್ಷರು : ನನಗೆ ಭಾಷೆಯಲ್ಲಿ ಅಷ್ಟು ವಿದ್ವತ್ ಇಲ್ಲ. ನಾನು ಹೇಳಿದ್ದು ಏನೆಂದರೆ ಕೆಲವು ಪದಗಳನ್ನು ಅಪರೂಪಕ್ಕೆ ಉಪಯೋಗ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೆಲವು ಪದಗಳನ್ನು ಸಂಸದೀಯ ಪದಗಳೇ ಅಲ್ಲವೆಂದು ಹೇಳುತ್ತೀರಿ. ಅದಕ್ಕೆ ಬೇರೆ ಯಾವುದಾದರೂ ಪದಗಳನ್ನು ತಾವು ಹೇಳಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರ ಭಾಷೆಯನ್ನು ಉಪಯೋಗ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ನನ್ನ ಭಾಷೆಯನ್ನು 1967 ರಿಂದಲೂ ಉಪಯೋಗ ಮಾಡುತ್ತಿದ್ದೇನೆ. ಹೊಸದಾಗಿ ಏನೂ ಉಪಯೋಗಿಸಬೇಕಾಗಿಲ್ಲ. ಆದ್ದರಿಂದ ತಮ್ಮಲ್ಲಿ ಮನವಿಯನ್ನು ಮಾಡುವುದೇನೆಂದರೆ, ಇದು ಬಹಳ ನಿಧಾನವಾಗುವುದು ಬೇಕಾಗಿಲ್ಲ, ಇದು ತೀವ್ರವಾಗಿ ಆಗಬೇಕು. ಇದನ್ನು ಸಮಿತಿಗೆ ಒಪ್ಪಿಸುವುದರಲ್ಲಿ ನನ್ನದು ಏನೂ ವಿರೋಧ ಇಲ್ಲ.

ಅಧ್ಯಕ್ಷರು : ಸಮಿತಿಗೆ ಒಪ್ಪಿಸುವುದು ಬಿಡುವುದು ಎರಡನೆಯ ವಿಚಾರ. ಈಗ 3 ಗಂಟೆಯಾಗುತ್ತಿದೆ ಸಭೆಯನ್ನು ಮುಕ್ತಾಯ ಮಾಡೋಣ.

ಈಗ ಸಭೆಯನ್ನು ಮುಕ್ತಾಯ ಮಾಡಿ ಮತ್ತೆ ಮಧ್ಯಾಹ್ನ 4,00 ಗಂಟೆಗೆ ಸಭೆಯು ಸಮಾವೇಶಗೊಳ್ಳುವುದು.

(ಸದನವು ಮಧ್ಯಾಹ್ನ 2 ಗಂಟೆ 52 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 4 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

ಆ) ಅಬಕಾರಿ ಇಲಾಖೆಯಲ್ಲಿ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಸಿಕೊಂಡು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟವಾಗುತ್ತಿರುವುದು.

★ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಅಬಕಾರಿ ಇಲಾಖೆಯಲ್ಲಿ ಈ ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿಮಾಡಿಕೊಂಡು ಕಾನೂನು ಬಾಹಿರವಾಗಿ ವ್ಯವಹಾರ ನಡೆಯುತ್ತಿರುವುದರಿಂದ ಸರ್ಕಾರಕ್ಕೆ ನನ್ನ ಅಂದಾಜಿನ ಪ್ರಕಾರ ಸುಮಾರು 400 ಕೋಟಿ ರೂಪಾಯಿಗಳ ಸುಂಕ ನಷ್ಟವಾಗಿದೆ. ಇದು ತಮಾಷೆ ಅಲ್ಲ, ತಮಾಷೆ ಆದರೂ ಕೂಡ ಸತ್ಯ ನಾವು ಇದನ್ನು ಸ್ವಲ್ಪ ತಿಳಿದುಕೊಳ್ಳಿ. ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ತಾವು ಅನುಮತಿ ಕೊಟ್ಟಿದ್ದಕ್ಕೆ ಪ್ರಥಮವಾಗಿ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇತ್ತೀಚಿನ ವರ್ಷಗಳಲ್ಲಿ ಇದು ಒಂದು ಬಹಳ ದೊಡ್ಡ ಹಗರಣ. ಈ ವಿಷಯ ಸರ್ಕಾರಕ್ಕೆ ಗೊತ್ತಿದ್ದರು ಕೂಡ ಸುಮ್ಮನಿದೆ. ಇದರಲ್ಲಿ ಸರ್ಕಾರ ಶಾಮೀಲಾಗಿದೆ. ಸರ್ಕಾರಗಳ ವಿಶ್ವಾಸಾರ್ಹತೆ ಹಿಂದೆ ನಡೆದಿರಬಹುದು. ದಿನೇ ದಿನೇ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ನಾಶವಾಗಲಿಕ್ಕೆ ಈ ಹಗರಣಗಳನ್ನು ತಪ್ಪಿಸಲಿಕ್ಕೆ ಸಾಧ್ಯವಾಗದ ಕಾರಣ ಈ ಸಂದರ್ಭದಲ್ಲಿ ತಮ್ಮ ಮೂಲಕ ನಾನು ಸದನದ ಗಮನಕ್ಕೆ ತರಲಿಚ್ಚಿಸುತ್ತೇನೆ. ಇವತ್ತು ನನಗೂ ಕೂಡ ಈ ಭಾಗದಲ್ಲಿ ನಿಂತು ಈ ಒಂದು ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ನಾಚಿಕೆಯಾಗುತ್ತದೆ. ಏಕೆ ಎಂದು ತಾವು ಯಾರಾದರೂ ಕೇಳಬಹುದು. ಈ ಸದನದಿಂದ ಸರ್ಕಾರ ಸೃಷ್ಟಿಯಾಗಿದೆ. ನಾವು ಈ ಭಾಗದ ಈ ಸದನದ ಒಬ್ಬ ಸದಸ್ಯ, ಇಷ್ಟು ವರ್ಷಗಳು ಇಂತಹ ಪ್ರಕರಣಗಳು ನಡೆದುಕೊಂಡು ಬಂದಿವೆ ಈ ಮೂರು ವರ್ಷಗಳವರೆಗೆ ಈ ಸ್ಥಾನದಲ್ಲಿ ನಾವು ಕುಳಿತು ಕೊಳ್ಳಲು ವಿಫಲರಾಗಿದ್ದೇವೆ. ಸರ್ಕಾರಕ್ಕೆ ಒದ್ದು ಬುದ್ದಿ ಕಲಿಸಲಿಲ್ಲ, ಒದ್ದು ಎಂದರೆ ಮಾತಿನಲ್ಲಿ ಬುದ್ಧಿ ಹೇಳುವುದಕ್ಕಾಗಲಿಲ್ಲ. ಅದಕ್ಕಾಗಿ ನಾವು ಕೂಡ ವಿಫಲರಾಗಿದ್ದೇವೆ. ಅದಕ್ಕಾಗಿ ನನಗೂ ಕೂಡ ನಾಚಿಕೆಯಾಗುತ್ತದೆ. ಈ ಮಾತನ್ನು ನಾನು ಪೂರ್ವಾಭಿಯಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ತಮಗೆ ನಾಚಿಕೆ ಆಗಬೇಕಾಗಿದ್ದರೆ, ಆಡಳಿತ ನಡೆಸತಕ್ಕಂಥ ಸರ್ಕಾರಕ್ಕೆ ಘನತೆ, ಗೌರವ ಇದ್ದರೆ ಮುಂದಕ್ಕೆ ಹೋದರೆ ಮರ್ಯಾದೆ ಇದ್ದರೆ, ನೈತಿಕತೆ ಇದ್ದರೆ, ಈ ಹಗರಣಗಳನ್ನು ಸರ್ಕಾರ ಕಿವಿ, ಕಣ್ಣು ಮುಚ್ಚಿಕೊಂಡು ಕೇಳಿ, ನೋಡಿ, ಜವಾಬ್ದಾರಿಯಿಂದ ಏನು ಕಠಿಣವಾದ ತೀರ್ಮಾನವನ್ನು ತೆಗೆದುಕೊಳ್ಳುತ್ತೀರಿ ಎಂದು ನಿಮಗೇ ಬಿಡುತ್ತೇನೆ. ಸರ್ಕಾರ ಜೀವಂತವಾಗಿ ಇದೆ ಎನ್ನುವುದಾದರೆ ಇದರ ಬಗ್ಗೆ ಕಠಿಣ ತೀರ್ಮಾನ ತೆಗೆದುಕೊಂಡಿಲ್ಲವೆಂದು ಈ ಮಾತನ್ನು ಈ ಸಂದರ್ಭದಲ್ಲಿ ಬಹಳ ಅತ್ಯಂತ ನೋವಿನಿಂದ ಪ್ರಸ್ತಾಪ ಮಾಡುತ್ತಿದ್ದೇನೆ. ಈ ಒಂದು ನಕಲಿ ಇನ್‌ವಾಯ್ಸ್ ಹಗರಣದಲ್ಲಿ ಮೋಸ, ವಂಚನೆ, ದರೋಡೆ, ಚೀಟಿಂಗ್ ಎಲ್ಲಾ ನಡೆದಿದೆ. ಈ ವಿಷಯ ಸರ್ಕಾರಕ್ಕೆ ಗೊತ್ತಿಲ್ಲವೆಂದು ನಾನು ಭಾವಿಸಿಕೊಂಡಿಲ್ಲ. ನಾನು ಹೇಳುವುದನ್ನು ಹೇಳುತ್ತೇನೆ. ಮಧ್ಯವರ್ತಿಗಳು ಮತ್ತು ಸರ್ಕಾರಗಳು ಶಾಮೀಲಾಗಿ ಈ ಮಾತು ನೂರಕ್ಕೆ ನೂರರಷ್ಟು ಸತ್ಯವೆಂದು ನಾನು ಭಾವಿಸಿಕೊಂಡಿದ್ದೇನೆ. ಈ ವಿಷಯ ನನ್ನ ಗಮನಕ್ಕೆ ಬಂದ ಮೇಲೆ, ನನ್ನ ಮನಸ್ಸಿಗೆ ಒಂದು ವಿಷಯ ಹೊಳೆಯಿತು. ಈ ಹಗರಣ ಮೂಲಕ ದುಡ್ಡು ಮಾಡುತ್ತಾರೆ. ದುಡ್ಡು ಕೊಟ್ಟರೆ ಹಗರಣ ಮುಚ್ಚಿ ಹಾಕುತ್ತಾರೆ. ಇಂತಹ ವ್ಯವಸ್ಥೆ ಇಂತಹ ಜನ ನಮ್ಮ ರಾಜ್ಯದಲ್ಲಿ, ನಮ್ಮ ಸಮಾಜದಲ್ಲಿ ಇದ್ದಾರೆ ಎಂದರೆ ನಿಜವಾಗಿಯೂ ಕೂಡ ನನಗೆ ಅತ್ಯಂತ ದುರ್ಧೈವ ಸಂಗತಿಯಾಗಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಬಹಳ ನೋವಿನಿಂದ ಹೇಳಬೇಕಾಗಿದೆ. ಏಕೆಂದರೆ ಬಡಬಗ್ಗರಿಂದ ಬೆಂಕಿಪೊಟ್ಟಣದ ಮೇಲೆ ತೆರಿಗೆ ಹಾಕಿ ದುಡ್ಡು ತೆಗೆದುಕೊಳ್ಳುತ್ತೇವೆ. ಬುಡ್ಡಿ ಊರಿಸುವವರು, ಬಡಜನರು, ಗುಡಿಸಲುಗಳಲ್ಲಿ ವಾಸ ಮಾಡುವವರು ಅವರು ಉಪಯೋಗಿಸುವಂತಹ ಸೀಮೆ ಎಣ್ಣೆಮೇಲೆ ತೆರಿಗೆ ಹಾಕಿ ನಾವು ದುಡ್ಡು ತೆಗೆದುಕೊಳ್ಳುತ್ತೇವೆ. ಸರ್ಕಾರ ನಡೆಸುವುದಕ್ಕೆ ಅವರು ಹಾಕಿಕೊಳ್ಳುವಂತಹ ಬಟ್ಟೆ

ಮೇಲೆ ನಾವು ತೆರಿಗೆಯನ್ನು ಹಾಕುತ್ತೇವೆ. ಆದರೆ ಈ ರೀತಿ ನಕಲಿ ಇನ್‌ವಾಯ್ಸ್‌ಗಳನ್ನು ಮಾಡಿಕೊಂಡು ಸುಮಾರು 400 ಕೋಟಿ ರೂಪಾಯಿಗಳನ್ನು ರಾಜಾರೋಷವಾಗಿ ಲೂಟಿ ಮಾಡುತ್ತಿರುವವರ ಬಗ್ಗೆ ನಾವು ಶಾಮೀಲಾಗಿ ನಡೆಯುತ್ತಿದ್ದೇವೆ ಅಂದರೆ ನಿಜಕ್ಕೂ ಕೂಡ ನಾವು ಈ ಸದನದಲ್ಲಿ ಕುಳಿತು ಕೊಳ್ಳುವುದಕ್ಕೆ ಲಾಯಕ್ಕಾ ಎಂದು ನಾವೆಲ್ಲರೂ ಕೂಡ ಒಂದು ಆತ್ಮವಿಮರ್ಶೆಯನ್ನು ಬಹಳ ಗಂಭೀರವಾಗಿ ಮಾಡಬೇಕು. ಇದು ಬಹಳ ಗಂಭೀರವಾದ ಸಮಸ್ಯೆ ಇದೆ. ಅದು ನಾವೇ ಅಲ್ಲ. ಆ ಭಾಗದಲ್ಲಿರತಕ್ಕಂಥವರೂ ಕೂಡ ಆತ್ಮವಿಮರ್ಶೆಯನ್ನು ಮಾಡಿಕೊಂಡು ಈ ಒಂದು ವಿಷಯವನ್ನು ನಾನು ಏನು ಪ್ರಸ್ತಾಪ ಮಾಡುತ್ತಿದ್ದೇನೆ ತಾವೂ ಕೂಡ ದಯಮಾಡಿ ಈ ಒಂದು ಚರ್ಚೆಯಲ್ಲಿ ಪಾಲ್ಗೊಳ್ಳಿ, ಈ ಹಗರಣ ಎಷ್ಟರ ಮಟ್ಟಿಗೆ ನಡೆದಿದೆ? ಏನು ಆಗಿದೆ ಎನ್ನುವ ಬಗ್ಗೆ ಚರ್ಚೆ ಮಾಡಿ ಸರಿಯಾಗಿ ಬೆಳಕನ್ನು ಚೆಲ್ಲಿ, ಕಠಿಣವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ತಾವು ಕೂಡ ಸಹಕಾರವನ್ನು ಕೊಡಬೇಕೆಂದು ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಹಗರಣಗಳಲ್ಲಿ ಹಣ ಮಾಡುತ್ತಾರೆ. ಹಣ ಮಾಡುವವರಿಗೆ ಶಾಮೀಲಾಗಿರುವವರೂ ಕೂಡ ಇರುತ್ತಾರೆ. ಆಮೇಲೆ ಹಣ ಮಾಡಿರುವವರು ಮತ್ತು ಹಣ ಮಾಡುವುದಕ್ಕೆ ಶಾಮೀಲಾಗಿರುವವರ ಜೊತೆಗೆ ಹಣ ಮಾಡಿರುವವರನ್ನು ಮತ್ತು ಶಾಮೀಲಾಗಿರುವವರನ್ನು ಮುಚ್ಚಿ ಹಾಕಲಿಕ್ಕೆ ಕಾರಣಕರ್ತರೂ ಕೂಡ ಇದ್ದಾರೆ. ಡಿಸ್ಟಿಲರಿಯಿಂದ ಹಿಡಿದು ಹೋಲ್ ಸೇಲ್ ಮತ್ತು ರಿಟೈಲ್ ಪಾಯಿಂಟ್‌ವರೆಗೂ ಈ ಒಂದು ದಂದೆಯಲ್ಲಿ ಒಳಗಾಗಿದ್ದಾರೆ. ಇದನ್ನು ಮುಚ್ಚಿ ಹಾಕುವುದಕ್ಕೆ ಕಮೀಷನರ್‌ನಿಂದ ಹಿಡಿದು ಕೆಳಗಡೆ ರೇಂಜ್ ಆಫೀಸರ್ ಯಾರು ಇದ್ದಾರೆ, ಅಥವಾ ನಿಮ್ಮ ಸ್ಕ್ವೇಟ್ ಇಂಟಲಿಜೆನ್ಸ್ ಸ್ಕ್ವಾಡ್‌ಗಳು ಕೆಳಗಡೆಯವರಿಗೂ ಏನು ಇವೆ ಅವೆಲ್ಲವು ಕೂಡ ಶಾಮೀಲಾಗಿದ್ದಾಮೆ. ಮತ್ತೇ ಈ ಹಗರಣಗಳು ಬಯಲಿಗೆ ಬಾರದಂತೆ ಮುಚ್ಚಿ ಹಾಕಲಿಕ್ಕೆ ಮೂರನೇ ಮಹಡಿಯಿಂದ ಕೂಡ ಕುತಂತ್ರ ನಡೆಯುತ್ತಿದೆ ಅಂದರೆ ನಾವು ನಾಚಿಕೆ ಪಟ್ಟುಕೊಳ್ಳಬಾರದಾ ಹೇಳಿ. ಸರ್ಕಾರಕ್ಕೆ ಗುಂಡಿಗೆ ಇದ್ದರೆ ತಾವು ಹೇಳಬೇಕು. ನಾವು ಯಾರು ಕಿಲುಬೇ ಕಾಸನ್ನು ಕೂಡ ಮುಟ್ಟಿಲ್ಲ ಎಂದು ಹೇಳಿ. ಆ ಒಂದು ಆತ್ಮವಿಶ್ವಾಸ ಇವತ್ತು ಯಾರಿಗೂ ಕೂಡ ಉಳಿದಿಲ್ಲ. ನಾನು ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಸರಾಯಿ ಮಾರಾಟ ಮಾಡಿ ನಾವು ಸರ್ಕಾರವನ್ನು ನಡೆಸುವಂತಹ ಪರಿಸ್ಥಿತಿಗೆ ಬಂದಿದ್ದೇವೆ. ನಾನು ಈ ವಿಷಯವನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಂತಹ ಕೆಟ್ಟ ದಂಧೆ ಮಾಡುವವರ ಹತ್ತಿರ ದುಡ್ಡು ತೆಗೆದುಕೊಂಡು ನಾವು ರಾಜಕೀಯ ಮಾಡುವುದಾದರೆ ನಾವು ಎಂತಹ ರಾಜಕಾರಣಿಗಳು ಆಗುತ್ತೇವೆ. ನಾನು ಮೊಟ್ಟಮೊದಲ ಬಾರಿಗೆ ಈ ವಿಧಾನ ಸೌಧಕ್ಕೆ 1989 ರಲ್ಲಿ ಬಂದಾಗ ವಿಧಾನ ಸೌಧದ ಮೆಟ್ಟಲು ಹತ್ತಬೇಕಾದರೆ ಪ್ರತಿಯೊಂದು ಮೆಟ್ಟಲಿಗೂ ನಮಸ್ಕಾರ ಮಾಡಿ ಹತ್ತಿದೆ. ಇವತ್ತು ಸಾಕಪ್ಪ ಎಂದು ಅನಿಸಿಬಿಟ್ಟಿದೆ ಇವೆಲ್ಲವನ್ನೂ ನೋಡಿ. ಈಗ ಕೆಲವು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಹೋಲ್ ಸೇಲ್ ಮತ್ತು ಚಿಲ್ಲರೆ ಮಧ್ಯದ ಅಂಗಡಿಗಳಲ್ಲಿ ಇಂಡೆಂಟ್ ಮೂಲಕ ಎನು ಕ್ವಾಂಟಿಟಿಯನ್ನು ಪಡೆದುಕೊಂಡರು ಆ ಪ್ರಮಾಣದ ವ್ಯತ್ಯಾಸ ನಡೆದುಕೊಂಡು ಬರುತ್ತದೆ. ಡಿಸ್ಟ್ರಿಲರಿ ಇರಬಹುದು, ಹೋಲ್‌ಸೇಲ್ ಪಾಯಿಂಟ್ ಇರಬಹುದು ಅಥವಾ ರಿಟೇಲ್‌ಪಾಯಿಂಟ್ ಇರಬಹುದು. ಅವರಲ್ಲಿ ವ್ಯತ್ಯಾಸಗಳು ಅಂಕಿ ಅಂಶಗಳು ಟ್ಯಾಲಿ ಆಗುವುದೇ ಇಲ್ಲ. ಈ ವ್ಯತ್ಯಾಸಗಳು ಬಹಳ ದಿವಸಗಳಿಂದ ನಡೆದುಕೊಂಡು ಬಂದಿದೆ. ಇದು ಬೋಗಸ್ ಇನ್‌ವಾಯ್ಸ್‌ಗಳಿಂದ ಈ ವ್ಯತ್ಯಾಸಗಳು ಆಗಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಹೇಗಪ್ಪಾ ಬೋಗಸ್ ಇನ್‌ವಾಯ್ಸ್‌ಗಳು? 400 ಕೇಸ್‌ಗಳನ್ನು ಎಲ್ಲೋ ಕೊಂಡುಕೊಳ್ಳುತ್ತಾರೆ. ಟ್ಯಾಕ್ಸ್ ಕೊಟ್ಟು, ತದನಂತರ ಅದನ್ನು 4 ಸಾವಿರ ಎಂದು ಮಾಡಿಕೊಳ್ಳುತ್ತಾರೆ. ಮುಂದಕ್ಕೆ ಒಂದು ಸೊನ್ನೆ ಹಾಕಿಕೊಂಡು. ಅಂದರೆ ಟ್ಯಾಕ್ಸ್ ಕಟ್ಟಿಕೊಂಡುಕೊಂಡಿರುವುದು 400 ಕೇಸ್‌ಗಳಿಗೆ

. ಅದನ್ನು 4 ಸಾವಿರ ಕೇಸ್ ಗಳು ಅಂತ ಮಾಡಿಕೊಂಡು ಅನಧಿಕೃತವನ್ನು ಅಧಿಕೃತ ಎಂದು ಮಾಡಿಕೊಂಡು ಬೋಗಸ್ ಇನ್‌ವಾಯ್ಸ್‌ಗಳ ಮುಖಾಂತರ 3600 ಕೇಸ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಇಂಥಾದ್ದಕ್ಕೆ ನಾನು ಮೊದಲೇ ಹೇಳಿದ್ದೇನೆ ಇದನ್ನು ಮೋಸ ಅಂತ ಕರೆಯುತ್ತೀರೋ, ದಗಾ ಅಂತ ಕರೆಯುತ್ತಿರೋ, ವಂಚನೆ ಅಂತಿರೋ, ಚೀಟಿಂಗ್ ಅಂತೀರೋ, ಅಷ್ಟರಮಟ್ಟಿಗೆ ಕೆಟ್ಟ ಒಂದು ವ್ಯವಹಾರ ಇದರಲ್ಲಿ ನಡೆಯುತ್ತಿದೆ. 1996ನೇ ಇಸವಿಯಲ್ಲಿ ನನಗೆ ಗೊತ್ತಿರುವ ಮಾಹಿತಿಯ ಪ್ರಕಾರ ಅಧಿಕೃತವಾಗಿ ಇಲಾಖೆಯ ಗಮನಕ್ಕೆ ಬಂದಿದೆ ಎಂದು ನಾನು ತಿಳಿದು ಕೊಂಡಿದ್ದೇನೆ. 1996ನೇ ಇಸವಿಯಲ್ಲಿ ಈ ತರಹ ಬೋಗಸ್ ಇನ್‌ವಾಯ್ಸ್‌ಗಳ ಮೂಲಕ ಸರ್ಕಾರಕ್ಕೆ ಬರಬೇಕಾದ ಶುಂಕವನ್ನು ತಪ್ಪಿಸುವುದಕ್ಕೆ ದಂಧೆ ನಡೆಯುತ್ತಿದೆ ಎಂದು ಹೇಳಿ ಅಧಿಕೃತವಾಗಿ ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅನಧಿಕೃತವಾಗಿ ಮೊದಲಿನಿಂದಲೂ ಗೊತ್ತಿದೆ. ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದೇ ಇಲ್ಲ. ಈ ವಿಷಯ ಸರ್ಕಾರದ ಇಲಾಖೆಯ ಗಮನಕ್ಕೆ ಬಂದ ಮೇಲೆ ಕೆಲವು ಹೋಲ್ ಸೇಲ್ ಲೈಸನ್ಸ್‌ಗಳು ಎನು ಇದ್ದವು ಅವುಗಳನ್ನು ಒಬ್ಬರೋ ಇಬ್ಬರೋ ಅಧಿಕಾರಿಗಳು ಅಮಾನತ್ತು ಮಾಡಿ ಎಂದು ಹೇಳಿ, ಅವರು ಆ ಅಮಾನತ್ತಿನ ವಿರುದ್ಧ ಅಬಕಾರಿ ಆಯುಕ್ತರಿಗೆ 10.7.97 ರಲ್ಲಿ ಆ ಆದೇಶದ ವಿರುದ್ಧ ಅರ್ಜಿ ಹಾಕುತ್ತಾರೆ. ಆ ಅಮಾನತ್ತು ಆದೇಶವನ್ನು ತೆರವು ಮಾಡಲಿಕ್ಕೆ ಅದೇ ದಿನ 10.7.97 ರಲ್ಲಿ ನಿಮ್ಮ ಅಬಕಾರಿ ಆಯುಕ್ತರು ಆದೇಶ ಕೊಡುತ್ತಾರೆ. ಎಷ್ಟು ತ್ವರಿತವಾಗಿ ನಡೆಯುತ್ತದೆ ನೋಡಿ ಸ್ಪಿರಿಟ್. 10.7.97ರಲ್ಲಿ ಅರ್ಜಿ ಹಾಕುತ್ತಾರೆ. ನಮ್ಮ ಲೈಸೆನ್ಸ್‌ಗಳನ್ನು ಎನು ಅಮಾನತ್ತು ಮಾಡಿದ್ದಾರೆ ಅವುಗಳನ್ನು ತೆರವು ಮಾಡಿ ಎಂದು ಹೇಳಿ, ಎಂತಹ ಹಗರಣ ಇದು? ಇಂತಹ ಹಗರಣಗಳ ಬಗ್ಗೆ ವಿವೇಚನೆ ಇಲ್ಲದೆ ಅದೇ ದಿನ ಅಮಾನತ್ತು ಮಾಡಿರುವ ಲೈಸನ್ಸ್‌ಗಳನ್ನು ತೆರವು ಮಾಡಿ ಎಂದು ಆ ಆಯುಕ್ತರು ಮಹಾಶಯರು ಆದೇಶವನ್ನು ಹೊರಡಿಸುತ್ತಾರೆ. ಅವರು ಯಾರು ಇದ್ದರೋ ನನಗೆ ಗೊತ್ತಿಲ್ಲ ಸ್ವಾಮಿ, ಅವರ ಫೋಟೋ ತಂದು ಮಹಾತ್ಮಗಾಂಧಿ ಫೋಟೋ ಮೇಲೆ ಹಾಕಿಬಿಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಹಾತ್ಮಾಗಾಂಧೀ ಫೋಟೋ ಮೇಲೆ ಬೇಡ. ಆ ಯೋಗ್ಯತೆ ಅವರಿಗೆ ಇಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಆ ಮಟ್ಟಕ್ಕೆ ನಾವು ಬಂದು ತಲುಪಿದ್ದೇವೆ ನಾಗರಾಜ್ ಅವರೇ ಸರ್ಕಾರ ಎನು ಉಳಿಸಿಕೊಂಡಿದೆ ಹೇಳಿ? ನಾವು ಅವರಿಗೆ ಅಪಚಾರ ಮಾಡುತ್ತಿದ್ದೇವೆ.

ಶ್ರೀವಾಟಾಳ್ ನಾಗರಾಜ್ : ನಾವು ಅವರ ಫೋಟೋಗಳನ್ನು ಸಾರಾಯಿ ಅಂಗಡಿಗಳಲ್ಲಿ ಹಾಕೋಣ.

ಶ್ರೀ ಎ.ಟಿ. ರಾಮಸ್ವಾಮಿ :ಮಾನ್ಯ ಅಧ್ಯಕ್ಷರೇ, ಇದನ್ನು ನಾನು ವ್ಯಂಗಕ್ಕೆ ಹೇಳುತ್ತಿದ್ದೇನೆ. ಎಷ್ಟರ ಮಟ್ಟಿಗೆ ಆಡಳಿತ ನಡೆಯುತ್ತಿದೆ ನೋಡಿ ನಾವು ಇಲ್ಲಿ ಕುಳಿತುಕೊಂಡು ಇದನ್ನು ಕೇಳಿಕೊಂಡು ಹೋಗಬೇಕೇ? ಇದನ್ನು ನೋಡಿಕೊಂಡು ಸುಮ್ಮನೇ ಕೊಡಬೇಕೇ, ನಮ್ಮ ಹೊಟ್ಟೆ ಉರಿಯುವುದಿಲ್ಲವೇ? ಮೈ ರೋಮ ನಿಮಿರಿ ನಿಲ್ಲುವುದಿಲ್ಲವೇ? ಆ ಬಡವನು ಉಪಯೋಗಿಸುವ ಬೆಂಕಿಪಟ್ಟಣದ ಮೇಲೆ ತೆರಿಗೆಯನ್ನು ಹಾಕುತ್ತೇವೆ. ಗುಡಿಸಲಲ್ಲಿ ವಾಸ ಮಾಡುವ ಬಡವ ಉಪಯೋಗಿಸುವ ಸೀಮೆ ಎಣ್ಣೆಯ ಮೇಲೆ ತೆರಿಗೆಯನ್ನು ಹಾಕುತ್ತೇವೆ. 400 ಕೋಟಿ ರೂಪಾಯಿಗಳ ಬೋಗಸ್ ಇನ್‌ವಾಯ್ಸ್ ಮಾಡಿ, ನಕಲಿ ಇನ್‌ವಾಯ್ಸ ಮಾಡಿ ಕೊಂಡು ವ್ಯವಹಾರ ನಡೆಸುತ್ತಿದ್ದಾರಲ್ಲಾ ಅವರನ್ನು ಎಲ್ಲಿ ನೇಣು ಹಾಕಬೇಕು ಹೇಳಿ? ಅಂತಹವರ ಲೈಸೆನ್ಸ್‌ಗಳನ್ನು ಒಬ್ಬರು ಅಮಾನತ್ತಿನಲ್ಲಿಟ್ಟರೆ ಅಮಾನತ್ತಾದ ಲೈಸೆನ್ಸ್‌ಗಳನ್ನು ತೆರವು ಮಾಡಿಸಲು ಅರ್ಜಿ ಹಾಕಿದರೆ ಅರ್ಜಿ ಹಾಕಿದ ದಿವಸವೇ ಅಮಾನತ್ತು ಲೈಸೆನ್ಸ್‌ಗಳನ್ನು ತೆರವು ಮಾಡುತ್ತಾರೆ.

ಯಾರು ಆಯುಕ್ತರು ಇದ್ದವರು ಆ ಸಮಯದಲ್ಲಿ, ಅವರಿಗೆ ವಿಚೇಚನೆ ಇರಲಿಲ್ಲ, ಸರ್ಕಾರದ ಬಗ್ಗೆ ಗಮನ ಇರಲಿಲ್ಲ, ಸಾರ್ವಜನಿಕರ ಹಿತದ ಬಗ್ಗೆ ಗಮನ ಇರಲಿಲ್ಲ. ಅಬಕಾರಿ ಇಲಾಖೆಯಿಂದ ಎನು ತೆರಿಗೆ ಬರುತ್ತಿತ್ತು, ಅದರ ಕಡೆಗಮನ ಕೊಡಲಿಲ್ಲ. ಅದು ವಂಚನೆ ಆಗಿದ್ದರ ಬಗ್ಗೆ ಗಮನ ಕೊಡಲಿಲ್ಲ. ಸವಲತ್ತು ಮತ್ತು ಸೌಲಭ್ಯಕ್ಕಾಗಿ ಅವರನ್ನು ಕರೆದುಕೊಂಡು ಬಂದು ಕೂರಿಸಿದ್ದೀರಾ? ಆ ಮಹಾಶಯ ಯಾರು ಎಂಬುದು ನನಗೆ ಗೊತ್ತಾಗಬೇಕು ಈ ಸದನಕ್ಕೆ ಗೊತ್ತಾಗಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಒತ್ತಾಯ ಮಾಡುತ್ತೇನೆ. ಈ ವಿಷಯದಲ್ಲಿ ಮೊದಕ್ಕಮೆ ದಾಖಲು ಮಾಡಿದರು. ದಾಖಲು ಮಾಡಿದ ಮೇಲೆ ಅದು ತನಿಖೆ ಆಗಲಿಲ್ಲ. ಹಾಗೆಯೇ ಸ್ಥಗಿತಗೊಂಡಿತು. ಇದು ಸ್ಥಗಿತಗೊಳ್ಳುವುದಕ್ಕೆ ಯಾರು ಕಾರಣರು ಎಂಬುದನ್ನು ದಯಮಾಡಿ ತಿಳಿಸಬೇಕು. ಡಿಸ್ಟಿಲರಿಗಳಿಂದ ಮದ್ಯದ ಅಂಗಡಿಗಳಿಗೆ ಸಾಗಾಣಿಕೆಯಾದ ಮದ್ಯಕ್ಕೆ ನೀಡಿರುವ ರಹದಾರಿಗಳು, ದಾಖಲಾತಿಗಳು ಇನ್‌ವಾಯ್ಸ್‌ಗಳು ಎಲ್ಲವೂ ನಕಲಿ ಆಗಿವೆ. ಅದನ್ನು ನಾನು ಮೊದಲಿನಿಂದ ಹೇಳಿದ್ದುದು ಡಿಸ್ಟಿಲರಿ, ಹೋಲ್ ಸೇಲ್ ಪಾಯಿಂಟ್ ರಿಟೇಲ್ ಪಾಯಿಂಟ್, ಈ ಮೂರೂ ಕಡೆ ನಕಲಿ ಇನ್‌ವಾಯ್ಸ್‌ಗಳನ್ನು ಮಾಡಿಕೊಂಡು ಈ ದಂದೆಯನ್ನು ನಡೆಸಿದ್ದಾರೆ. 1996ನೇ ಇಸವಿಯಲ್ಲಿ ಇದು ಸರ್ಕಾರದ ಗಮನಕ್ಕೆ ಅಧಿಕೃತವಾಗಿ ಬಂತು ಎಂದು ಹೇಳಿ. ಸರ್ಕಾರ ಎನು ಮಾಡಬೇಕಾಗಿತ್ತು. ಕಳಕಳಿ ಇದಿದ್ದರೆ ಶಾಮೀಲಾಗಿರದಿದ್ದರೆ ಮಿಂಚಿನ ವೇಗದಲ್ಲಿ ಇಡಿ ರಾಜ್ಯದಲ್ಲಿ ನಿಮ್ಮ ಜಾಲವನ್ನು ಬೀಸಬೇಕಾಗಿತ್ತು. ಎಲ್ಲೆಲ್ಲಿ ಈ ತರಹದ ಕೆಟ್ಟ ಪ್ರಕರಣಗಳು ಆಗಿವೆ ಅವುಗಳನ್ನು ಕಂಡು ಹಿಡಿಯಬೇಕಾಗಿತ್ತು. ಅದಕ್ಕೆ ನಾನು ಮಾತನಾಡುತ್ತಾ ಹೇಳಿದ್ದು ಮಿಂಚೇ ಇಲ್ಲದಿದ್ದರೆ ವೇಗ ಎಲ್ಲಿರುತ್ತದೆ ಎಂದು ಹೇಳಿ. ಈಗ ಜೀವವೇ ಇಲ್ಲದಿದ್ದರೆ ಉಸಿರು ಎಲ್ಲಿ ಇರುತ್ತದೆ? ಅದಕ್ಕೆ ಸರ್ಕಾರ ಎನಾದರೂ ಜೀವಂತವಾಗಿದೆಯೇ? ಎಂದರೆ ಇಲ್ಲ ಎಂದು ಹೇಳಬೇಕಾಗುತ್ತದೆ. ನಾನು ಬೇರೆ ಪದವನ್ನು ಉಪಯೋಗ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮೊದಲೇ ಹೇಳಿದೆ ನನ್ನ ಹೊಟ್ಟೆ ಹುರಿಯುತ್ತಿದೆ ಎಂದು. ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ. ಇದು ಎಲ್ಲರಿಗೂ ಕೂಡ ಗೊತ್ತಿದೆ. ಯಾರಿಗೂ ಕೂಡ ಗೊತ್ತಿಲ್ಲ ಎಂದು ಇಲ್ಲ. ಗೊತ್ತಿದ್ದೂ ನಾವು ಕಿವುಡರಾಗಿ ಮೂಕರಾಗಿ ಇಲ್ಲಿ ಕುಳಿತುಕೊಂಡರೆ ಭಗವಂತ ಒಳ್ಳೆಯದನ್ನು ಮಾಡುವುದಿಲ್ಲ. ತಮಗೆ ಗೊತ್ತಾದ ಮೇಲೆ ಇಡೀ ರಾಜ್ಯದಲ್ಲಿ ಮಿಂಚಿನ ವೇಗದಲ್ಲಿ ಎಲ್ಲೆಲ್ಲಿ ಬಲೆ ಬೀಸಿದ್ದೀರಿ ಹೇಳಿ? ಎಲ್ಲೆಲ್ಲಿ ಇದರ ಜಾಲವನ್ನು ಗೊತ್ತು ಮಾಡಿದ್ದೀರಿ ಹೇಳಿ? ಏಕೆ ಮಾಡಲಿಲ್ಲ ಹೇಳಿ. ಅಂದರೆ ಅದರ ಅರ್ಥ ನಾನು ಮೊದಲೇ ಹೇಳಿದಂತೆ ಶಾಮೀಲಾಗಿದ್ದೀರಿ ಎಂದು ನಾನು ಮೊದಲೇ ಹೇಳಿದೆ ನನಗೂ ಕೂಡ ಇಲ್ಲಿ ನಿಂತು ಮಾತನಾಡಲು ನಾಚಿಕೆಯಾಗುತ್ತದೆ ಎಂದು ಏಕೆಂದರೆ ವಿರೋಧಪಕ್ಷದಲ್ಲಿ ನಾವಿದ್ದು ಇಂತಹ ಹಗರಣಗಳನ್ನು ಸರ್ಕಾರದ ಗಮನಕ್ಕೆ ತಂದು ಒದ್ದು ಬುದ್ದಿ ಹೇಳಬೇಕಾಗಿತ್ತು, ನಾವು ಅದರಲ್ಲಿ ವಿಫಲರಾಗಿದ್ದೇವೆ. ಮೂರು ವರ್ಷಗಳ ಕಾಲ ನಮ್ಮ ಕರ್ತವ್ಯವನ್ನು ಮಾಡಲಿಲ್ಲ. ನಮ್ಮ ಕರ್ತವ್ಯದಲ್ಲಿ ನಾವು ವಿಫಲರಾಗಿದ್ದೇವೆ. ಈ ರಾಜ್ಯದಲ್ಲಿ ಈ ಒಂದು ದಂಧೆಯನ್ನು ಗುರುತು ಮಾಡಿ ಪತ್ತೆ ಹಚ್ಚಲಿಕ್ಕೆ ಮತ್ತು ಅನಧಿಕೃತ ಅಂಗಡಿಗಳನ್ನು ಗುರುತು ಮಾಡುವುದಕ್ಕೆ ರಾಜ್ಯದಲ್ಲಿ ಸ್ಟೇಟ್ ಎಕ್ಸ್‌ಸೈಸ್ ಇಂಟಲಿಜೆನ್ಸ್ ಬ್ಯೂರೋ ಇದೆ. ಮಾಮೂಲಿ ವಸೂಲಿ ಮಾಡುವುದಾ ಈ ಇಲಾಖೆ ಕೆಲಸ? ಕಳೆದ ಹತ್ತಾರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಇಲ್ಲೀಗಲ್ ಆಗಿ ನಡೆಯತಕ್ಕಂಥ ಈ ದಂದೆ ಮತ್ತು ಅನಧಿಕೃತ ಅಂಗಡಿಗಳನ್ನು ಈ ಇಲಾಖೆಯವರು ಎಷ್ಟು ಪತ್ತೆ ಹಚ್ಚಿದ್ದಾರೆ? ಮಾಮೂಲಿ ವಸೂಲು ಮಾಡುವುದಕ್ಕೋಸ್ಕರ ಈ ಇಲಾಖೆ ಬೇಕಾ? ಡಿವಿಷನ್ ಮಟ್ಟದಲ್ಲೂ ಎನ್‌ಫೋರ್ಸ್‌ಮೆಂಟ್ ವಿಂಗ್ ಇದೆ. ಇಲ್ಲೀಗಲ್ ಇವರು ಗುರುತು ಹಚ್ಚಿದ್ದಾರೆ? ಇವರು ಏನು ಮಾಡುತ್ತಿದ್ದಾರೆ? ಸರ್ಕಾರದ ಋಣ ತಿಂದುಕೊಂಡಿರತಕ್ಕಂಥ ಅವರು ಸರ್ಕಾರದ ಋಣ ತೀರಿಸತಕ್ಕಂಥ ಬಗೆನಾ ಇದು?

ಸರ್ಕಾರದವರಿಗೂ ಮಾನ, ಮರ್ಯಾದೆ ಇಲ್ಲ, ಅದಕ್ಕೂ ಮೊದಲು ಅವರಿಗೂ ಮಾನ, ಮರ್ಯಾದೆ ಇಲ್ಲ. ಆಮೇಲೆ ಡಿಸ್ಟ್ರಿಕ್ಟ್ ಲೆವಲ್‌ನಲ್‌ನಲ್ಲಿ ಎಕ್ಸ್‌ಸೈಸ್ ಇಂಟಲಿಜೆನ್ಸ್ ಬ್ಯೂರೋ ಇದೆ, ಸಬ್ ಡಿವಿಷನ್ ಲೆವಲ್‌ನಲ್ಲೂ ಎಕ್ಸ್‌ಸೈಸ್ ಇಂಟಲಿಜೆನ್ಸ್ ಬ್ಯೂರೋ ಇದೆ. ಹಾಗಾದರೆ ಇವರ ಕೆಲಸಗಳೇನು? ಇವರು ಏನು ಕೆಲಸ ಮಾಡುತ್ತಿದ್ದಾರೆ? ಇದಕ್ಕೆ ಅಂಕಿ ಅಂಶ ಇಲಾಖೆ ಬೇರೆ, ಅದಕ್ಕೇ ಒಂದು ವಿಭಾಗವನ್ನು ಮಾಡಲಾಗಿದೆ. ಡಿಸ್ಟಿಲರಿಗಳಿಂದ ಎಷ್ಟು ಹೋಯಿತು, ಹೊಲ್‌ಸೇಲ್ ಪಾಯಿಂಟ್‌ನಿಂದ ಎಷ್ಟು ಖರ್ಚಾಯಿತು? ರಿಟೇಲ್ ಪಾಯಿಂಟ್‌ನಿಂದ ಎಷ್ಟು ಖರ್ಚಾಯಿತೆಂದು ತಾಳೆ ನೋಡಲಿಕ್ಕಾಗಿ ಈ ಅಂಕಿ ಅಂಶದ ವಿಭಾಗ ಇದೆ. ಈ ಅಂಕಿ ಅಂಶದ ವಿಭಾಗದವರು ಕತ್ತೆ ಕಾಯುತ್ತಿದ್ದರೇನು? ಇದರ ಬಗ್ಗೆ ಕಠಿಣವಾದ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳದೇ ಇದ್ದರೆ ನಾವು ಬೇರೆ ತರಹ ಯೋಚನೆ ಮಾಡಬೇಕಾಗುತ್ತದೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಾ ಈ ವಿಷಯದ ಬಗ್ಗೆ ವಿಧಾನ ಮಂಡಲದ ವಿಷಯ ಸಮಿತಿಯವರು ಕೂಡಾ ಪ್ರಸ್ತಾಪ ಮಾಡಿದ್ದಾರೆ. ''ಪ್ರತಿಯೊಂದು ಜಿಲ್ಲೆಯಲ್ಲಿ ಕಛೇರಿಗಳಿದ್ದು ಅದರಲ್ಲಿ ಇಲಾಖಾ ಸಿಬ್ಬಂದಿಯವರಿದ್ದರೂ ಸಹಾ ತೆರಿಗೆ ಕೊಡದೆ ಐ.ಎಂ.ಎಲ್, ಹೊರಗೆ ಬರುತ್ತಿರುವುದು ಸಮಿತಿಯವರ ಗಮನಕ್ಕೆ ಬಂದಿರುತ್ತದೆ. ಅಂದರೆ, ತೆರಿಗೆ ಕೊಡದೆ ಡಿಸ್ಟಿಲರಿಗಳಿಂದ ಇದು ಹೊರಗೆ ಬರುತ್ತದೆ. ಡಿಸ್ಟಿಲರಿಯಲ್ಲಿರತಕ್ಕಂಥ ಸರ್ಕಾರದ ಯೂನಿಟ್ ಆಫೀಸ್‌ನವರು ಇದರ ಬಗ್ಗೆ ನೋಡದೆ ಕತ್ತೆ ಕಾಯುತ್ತಿದ್ದರಾ? ಡಿಸ್ಟಿಲರಿಗಳಲ್ಲಿರತಕ್ಕಂಥ ಯೂನಿಟ್ ಆಫೀಸ್‌ನವರು ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದಿದ್ದರೆ ಈ ರೀತಿ ತೆರಿಗೆ ಹೊರಗೆ ಬರತಕ್ಕಂಥಾದ್ದನ್ನು ತಪ್ಪಿಸಬಹುದಾಗಿತ್ತು. ಇದರ ಬಗ್ಗೆ ವಿಷಯ ಸಮಿತಿಯವರು ಏನು ಹೇಳಿದ್ದಾರೆಂದರೆ'' ಡಿಸ್ಟಿಲರಿಗಳ ಮಾಲೀಕರ ಜೊತೆ ಸಹಕರಿಸುವವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಅವರನ್ನೇ ಹೊಣೆಗಾರರನ್ನಾಗಿ ಮಾಡಬೇಕೆಂದು ಸಮಿತಿಯ ಶಿಫಾರಸ್‌ನ್ನು ಮಾಡುತ್ತದೆ. ಡಿಸ್ಟಿಲರಿಗಳಲ್ಲಿರತಕ್ಕಂಥ ಯೂನಿಟ್ ಆಫೀಸ್‌ಗಳು ಇದರ ಬಗ್ಗೆ ಏನು ಮಾಡುತ್ತಿದ್ದವು? ಹೇಗೆ ಕಳ್ಳ ಮಾಲು ಹೊರಗೆ ಹೋಗುವುದಕ್ಕೆ ಅವಕಾಶವಾಯಿತು? ಮತ್ತೊಂದು ವಿಷಯವನ್ನು ಸಬ್ಜೆಕ್ಟ್ ಕಮಿಟಿಯವರು ಹೇಳಿದ್ದಾರೆ, ''ರಾಜ್ಯದ ಎರಡು ಡಿಸ್ಟಿಲರಿಗಳಲ್ಲಿ ನಕಲಿ ಚಲಾನ್‌ಗಳನ್ನು ಹಾಜರ್ಪಡಿಸಿ ಭಾರತದಲ್ಲಿ ತಯಾರಾದ ಮದ್ಯವನ್ನು ಪಡೆದಿರುವ ಬಗ್ಗೆ ದುರ್ವ್ಯವಹಾರ ನಡೆದು ಸರ್ಕಾರದ ಆದಾಯದಲ್ಲಿ ನಷ್ಟ ಉಂಟಾಗುತ್ತಿರುವ ವಿಷಯವನ್ನು ಸಮಿತಿಯು ತೀವ್ರವಾಗಿ ಪರಿಶೀಲಿಸಿ, ಇನ್ನು ಮುಂದೆ ಪಾವತಿ ಮಾಡಿದ ಚಲಾನ್‌ಗಳನ್ನು ರಾಜ್ಯ ಖಜಾನೆಯ ಶೆಡ್ಯುಲ್‌ಗಳೊಂದಿಗೆ ತಾಳೆ ಮಾಡುವಂತೆ ಸಂಬಂಧ ಅಧಿಕಾರಿಗಳಿಗೆ ಸುತ್ತೋಲೆ ಮೂಲಕ ಸೂಕ್ತ ಮಾರ್ಗ ಸೂಚಿಯನ್ನು ನೀಡಬೇಕೆಂದು ಸಮಿತಿಯ ಅಭಿಪ್ರಾಯಪಡುತ್ತದೆ. '' ಅಂದರೆ, ಈ ವಿಷಯದ ಬಗ್ಗೆ ವಿಷಯ ಸಮಿತಿಯಲ್ಲೂ ಕೂಡ ಚರ್ಚೆಯಾಗಿದೆ. ಇದರ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಇದು ಸರ್ಕಾರದ ಗಮನಕ್ಕೆ ಬಂದಿದೆ, ಡಿಸ್ಟಿಲರಿಗಳಲ್ಲಿ ಯೂನಿಟ್ ಆಫೀಸ್ ಇರುತ್ತದೆ, ಡಿಸ್ಟ್ರಿಕ್ಟ್‌ಗಳಲ್ಲಿ ರೇಂಜ್ ಆಫೀಸ್ ಇರುತ್ತವೆ. ಈ ರೀತಿಯ ದಂಧೆಯಿಂದ ಬರೀ ಅಬಕಾರಿ ಸುಂಕ ಮಾತ್ರ ಸೋರಿಹೋಗುವುದಿಲ್ಲ, ಇದರ ಜೊತೆಗೆ ಸೇಲ್ಸ್ ಟ್ಯಾಕ್ಸ್ ಕೂಡ ಕೈತಪ್ಪಿಹೋಗುತ್ತದೆ. ಈ ದಂಧೆಯಲ್ಲಿ ಸರ್ಕಾರ ಶಾಮೀಲಾಗಿದೆಯೆಂದು ನಾನು ಮೊದಲೇ ಹೇಳಿದ್ದೇನೆ. ನನಗೆ ಬಂದಿರುವ ಮಾಹಿತಿ ಪ್ರಕಾರ ಬೆಂಗಳೂರು ಜಿಲ್ಲೆ ಒಂದರಲ್ಲೇ ಇಂಥಾ ಬೋಗಸ್ ವ್ಯವಹಾರಗಳಿಂದ ಸರ್ಕಾರಕ್ಕೆ 20 ಕೋಟಿ ರೂಪಾಯಿಗಳಷ್ಟು ನಷ್ಟವುಂಟಾಗಿದೆ. ಇಡೀ ರಾಜ್ಯದಲ್ಲಿ 20 ಜಿಲ್ಲೆಗಳ ಪೈಕಿ ತಲಾ 20 ಕೋಟಿ ಎಂದು ಅವರ ಇಲಾಖೆಯವರೇ ಹಾಕಿದ ಲೆಕ್ಕದ ಪ್ರಕಾರ ಕನಿಷ್ಠ 400 ಕೋಟಿ ರೂಪಾಯಿ ಅಬಕಾರಿ ಸುಂಕ ನಷ್ಟವಾಗಿದೆ. ಪ್ರತಿ ಬಜೆಟ್‌ನಲ್ಲಿ ಕೊರತೆ ಬಜೆಟ್‌ನ್ನು ತೋರಿಸಲಾಗುತ್ತದೆ. ಈ ವಿಷಯದ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದಿದ್ದರೆ ಬಜೆಟ್‌ನಲ್ಲಿ ಕೊರತೆಯೇ ಬರುತ್ತಿರಲಿಲ್ಲ. ಇದು ಬಹಳ

ಗಂಭೀರವಾದ ಸಮಸ್ಯೆ. ಎಲೆಕ್ಷನ್ ಟೈಮ್‌ನಲ್ಲಿ ಒಬ್ಬರು 90 ಎಂ. ಎಲ್, ಹಂಚಿರಬಹುದು, ಇನ್ನೊಬ್ಬರು 30 ಎಂ. ಎಲ್, ಹಂಚಿರಬಹುದು, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಮಾತನಾಡುವುದಕ್ಕೆ ಹೋದರೆ ದೊಡ್ಡ ಮಾತಾಗುತ್ತದೆ.

ಶ್ರೀ ಡಿ. ಆರ್. ಪಾಟೀಲ್ : ಅಬಕಾರಿ ಸುಂಕ ಸೋರಿ ಹೋಗುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಾ, ಡಿಸ್ಟಿಲರಿಯಲ್ಲಿ ಸರ್ಕಾರದವರು ಇಟ್ಟಿರತಕ್ಕಂಥ ಯೂನಿಟ್‌ನ ಆಫೀಸರ್‌ಗಳು ಮಾಮೂಲು ತೆಗೆದುಕೊಂಡು ಬಿಡುತ್ತಾರೆಂದು ಹೇಳಿದ್ದಾರೆ. ಅಂದರೆ, ಈ ಸೋರಿಕೆಯನ್ನು ನಿಲ್ಲಿಸುವುದಕ್ಕೆ ಗೌರ್ನಮೆಂಟಿನಿಂದ ಆಗುವುದಿಲ್ಲವೆಂದಾಗ, ಆ ವಸೂಲಿಯನ್ನು ಹರಾಜು ಮಾಡುವುದರ ಮೂಲಕ ಪ್ರೈವೇಟೈಸ್ ಮಾಡಿದರೆ ಹೆಚ್ಚು ತೆರಿಗೆ ಬರುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಬಗ್ಗೆ ಯೋಚನೆ ಮಾಡಬೇಕು.

ಶ್ರೀ ಯು. ಆರ್. ಸಭಾಪತಿ : ಇದರ ಬಗ್ಗೆ ನಾನು ಪ್ರಶ್ನೆ ಹಾಕಿದ್ದೆ, ಅದಕ್ಕೆ ಉತ್ತರವೇ ಬರಲಿಲ್ಲ.

ಶ್ರೀ ಎ.ಟಿ. ರಾಮಸ್ವಾಮಿ : ಇದರ ಬಗ್ಗೆ ಈ ಸದನದಲ್ಲಿ ಹತ್ತಾರು ಬಾರಿ ಪ್ರಸ್ತಾಪವಾಗಿದೆ. ಅನಧಿಕೃತವಾಗಿರುವುದನ್ನೇ ಅಧಿಕೃತ ಮಾಡಿಕೊಂಡು ಮಾರಾಟ ಮಾಡುತ್ತಿದ್ದಾರೆ. ಇದನ್ನೆಲ್ಲಾ ನಕಲಿ ಇನ್‌ವಾಯ್ಸ್ ಮಾಡಿರುವುದರ ಮೂಲಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ ಸುಮ್ಮನಿರುವುದು ಏಕೆ? ಇದು ಸಣ್ಣ ಪುಟ್ಟ ಹಗರಣವಾ? ನೈತಿಕತೆಯ ಜವಾಬ್ದಾರಿ ಹೊತ್ತುಕೊಂಡು ಸರ್ಕಾರ ರಾಜೀನಾಮೆ ಕೊಡಬೇಕು. ಇಲ್ಲವೆಂದರೆ, ಇದರ ಬಗ್ಗೆ ಕಳಕಳಿ ಇದ್ದು ನಾವು ಇದರಲ್ಲಿ ಶಾಮೀಲಾಗಿಲ್ಲವೆಂಬ ಭಾವನೆ ಇದ್ದರೆ, ಅತ್ಯಂತ ಎತ್ತರದ ಸ್ಥಾನದ ಅಧಿಕಾರಿಯಿಂದ ಈ ವಿಷಯದಲ್ಲಿ ತನಿಖೆ ಮಾಡಿಸಬೇಕು. ಇದು ಸಣ್ಣ ಪುಟ್ಟ ವ್ಯವಹಾರವಲ್ಲ, ನನಗೆ ಗೊತ್ತಿರುವ ಹಾಗೆ ಇದರಲ್ಲಿ 400 ಕೋಟಿ ರೂಪಾಯಿಗಳ ಹಗರಣ ನಡೆದಿದೆ. ಈ ಹಗರಣದ ಬಗ್ಗೆ ಸರ್ಕಾರ ನೈತಿಕತೆ ಹೊತ್ತುಕೊಂಡರ ಇಂಥಾ ಪುಣ್ಯಾತ್ಮರು ಇನ್ನೂ ಇದ್ದಾರೆಂದು ನಾನಂತೂ ಸಂತೋಷಪಡುತ್ತೇನೆ. ಇದು ಅವರ ಕೈಯಲ್ಲಿ ಸಾಧ್ಯವಾಗುವುದಿಲ್ಲವೆಂದು ನನಗೆ ಗೊತ್ತಿದೆ. ಹೋಗಲಿ ನೈತಿಕ ಮೌಲ್ಯಗಳನ್ನು ಕಾಪಾಡಲಿಕ್ಕಾದರೂ ಕೂಡ ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಿಸುವುದಕ್ಕೆ ಸರ್ಕಾರ ಒಪ್ಪಿಕೊಳ್ಳಬೇಕು. ಇಲ್ಲವೆಂದರೆ, ಈ ವಿಷಯದಲ್ಲಿ ರಾಜ್ಯದ ಜನತೆ ಅವರನ್ನು ಕ್ಷಮಿಸುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಕತೆಯನ್ನು ಹೇಳದೆ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಉತ್ತರವನ್ನು ಸರ್ಕಾರ ಕೊಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಇದರ ಬಗ್ಗೆ ನನಗೆ ಸಮಾಧಾನವಾಗುವ ಹಾಗೆ ಉತ್ತರ ಕೊಟ್ಟರೆ ಮತ್ತೆ ನಾನು ಚಕಾರ ಎತ್ತಲಿಕ್ಕೆ ಹೋಗದೆ ಸುಮ್ಮನೆ ಕುಳಿತುಕೊಂಡುಬಿಡುತ್ತೇನೆ.

★ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್ : ಎಲ್ಲದಕ್ಕೂ ಇವರೇ ಉತ್ತರ ಕೊಡುತ್ತಿದ್ದಾರೆ. ಇವರಿಗೆ ಮತ್ತು ಬಂದು ಉತ್ತರ ಕೊಟ್ಟರೆ ಪರಿಸ್ಥಿತಿ ಏನು?

ಶ್ರೀ ಎಂ. ಸಿ. ನಾಣಯ್ಯ : 'ಮತ್ತು' ಮತ್ತು ಬಂದಾಗಲೇ ಇದು ಹೆಚ್ಚು ಸೆನ್ಸಿಟೀವ್ ಆಗಿರುತ್ತದೆ. ಸೂಕ್ಷ್ಮತೆ ಬರುವುದು ಯಾವಾಗ ಎಂಬುದರ ಬಗ್ಗೆ ಅನುಭವ ಇರತಕ್ಕಂಥವರನ್ನು ಕೇಳಲಿ.

ಶ್ರೀ ವಾಟಾಳ್ ನಾಗರಾಜ್ : ಅವರೇ ಇದರಲ್ಲಿ ಅತ್ಯಂತ ಅನುಭವಿಗಳು, ಅದರ ಬಗ್ಗೆ ಅವರೇ ವ್ಯಾಖ್ಯಾನ ಮಾಡಲಿ.

ಶ್ರೀ ಎಂ.ಸಿ. ನಾಣಯ್ಯ : ಬಹಳ ಅನುಭವ ಏನಿಲ್ಲ. ಒಟ್ಟಿನಲ್ಲಿ ಅವರಿಗಿಂಥಾ ಸ್ವಲ್ಪ ಹೆಚ್ಚು ಅನುಭವ ಇದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಹಕ್ಕು ಚ್ಯುತಿ ತರಬೇಕಾಗುತ್ತದೆ. ನಾನು ಯಾವತ್ತೂ ಕುಡಿದೇ ಇಲ್ಲ. ಮಾನ್ಯ ನಾಣಯ್ಯನವರು ಈ ಮಾತನ್ನು ವಾಪಸ್ ತೆಗೆದುಕೊಳ್ಳಲಿಲ್ಲವೆಂದರೆ ನಾನು ಧರಣಿ ಮಾಡಬೇಕಾಗುತ್ತದೆ. ಇಲ್ಲವೆಂದರೆ ಈ ವಿಷಯದಲ್ಲಿ ತನಿಖೆ ನಡೆಸಬೇಕು.

ಶ್ರೀ ಎಂ.ಸಿ. ನಾಣಯ್ಯ : ಈ ವಿಷಯದ ಬಗ್ಗೆ ಇನ್ನೊಂದು ದಿವಸ ಮಾನ್ಯ ಸಭಾಧ್ಯಕ್ಷರ ಜೊತೆ ನಾವೂ ಅವರು ಚರ್ಚೆ ಮಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಮಾಸ್ವಾಮಿಯವರು ಎತ್ತಿರತಕ್ಕಂಥ ವಿಚಾರದಲ್ಲಿ ಹೇಳುವುದಾದರೆ, ಅಬಕಾರಿ ಇಲಾಖೆಯಲ್ಲಿ ಕೆಲವು ಮದ್ಯ ಮಾರಾಟಗಾರರು ನಕಲಿ ಇನ್‌ವಾಯ್ಸ್‌ಗಳನ್ನು ಸೃಷ್ಟಿ ಮಾಡಿಕೊಂಡು ಅಕ್ರಮವಾಗಿ ವ್ಯವಹಾರ ನಡೆಸುತ್ತಿದ್ದಾರೆಂದು ಮಾಹಿತಿ ಬಂದ ಮೇಲೆ, ಈ ಅಂಶವನ್ನು ಕೂಲಂಕಷವಾಗಿ ಪರಿಶೀಲನೆ ಮಾಡಲು ಉನ್ನತ ಮಟ್ಟದ ಇಲಾಖಾ ಅಧಿಕಾರಿಗಳನ್ನೊಳಗೊಂಡ ಒಂದು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಈ ವ್ಯವಹಾರವು ಮುಖ್ಯವಾಗಿ ಸಗಟು ಮಾರಾಟ ಮಾಡತಕ್ಕಂಥವರ ಮಟ್ಟದಲ್ಲಿ ನಡೆಯುತ್ತಿದೆಯೆಂದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಈ ತನಿಖಾ ತಂಡವು ತನ್ನ ತನಿಖೆಯನ್ನು ಪ್ರಾರಂಭಿಸಿರುತ್ತದೆ. ಈ ತನಿಖೆಯು ಕಳೆದ ಎರಡು ವರ್ಷಗಳ ಅಂದರೆ 1995-96, 1996-97 ವರ್ಷಗಳನ್ನು ಒಳಗೊಂಡಿರುತ್ತದೆ. ಒಟ್ಟು 15 ಸಗಟು ಮಳಿಗೆಗಳನ್ನು ಈ ತನಿಖಾ ತಂಡದ ವ್ಯಾಪ್ತಿಗೆ ವಹಿಸಿದ್ದು, ಅಂದರೆ, ಯಾವ ಯಾವ ಸಗಟು ಮಳಿಗೆಗಳು ಈ ಕೆಲಸವನ್ನು ಮಾಡುತ್ತಿವೆಯೆಂದು ಮಾಹಿತಿ ಬಂತೋ ಆ ಎಲ್ಲಾ ಮಳಿಗೆಗಳ ಮೇಲೆ ತನಿಖೆ ಮಾಡಬೇಕೆಂದು ಹೇಳಲಾಗಿದೆ. ಆ ರೀತಿ ಒಳಪಡಿಸಿದ ಮೇಲೆ ರಾಜ್ಯದಲ್ಲಿ ಇನ್ನೂ ಉಳಿದಂತಹ ಎಲ್ಲಾ ಸಗಟು ಮದ್ಯದ ಅಂಗಡಿಗಳ ವ್ಯವಹಾರವನ್ನೂ ಸಹ ಪರಿಶೀಲಿಸಲು ನಿಶ್ಚಯಿಸಿ ಆ ಬಗ್ಗೆ ಪರಿಶೀಲನೆ ನಡೆಸಲು ಆಯಾ ಜಿಲ್ಲೆಯ ಉಪ ಆಯುಕ್ತರುಗಳು ಮತ್ತು ಜಂಟಿ ಆಯುಕ್ತರುಗಳಿಗೆ ಸೂಚನೆಯನ್ನು ನೀಡಲಾಗಿದೆ. ಈಗ ನಿಮ್ಮ ಮನಸ್ಸಿನಲ್ಲಿ ಇಲಾಖೆಯ ಈ ಅಧಿಕಾರಿಗಳು ನಿರ್ವಹಿಸುತ್ತಿರುವಂತಹ ಈ ಕೆಲಸ ಕೆಲವು ಸಂದರ್ಭದಲ್ಲಿ ಸರಿಯಾಗಿಲ್ಲ ಎಂಬ ಭಾವನೆ ಬರಬಹುದು. ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತಿನ ಬಜೆಟ್ ಭಾಷಣದಲ್ಲಿ ಒಂದು ಪ್ರಮುಖವಾದ ಬದಲಾವಣೆಯನ್ನು ಮಾಡಿದ್ದಾರೆ. ಅದು ಯಾವುದೆಂದರೆ ಇನ್ನು ಮುಂದೆ ಜಿಲ್ಲಾ ಆಡಳಿತದಲ್ಲಿ ಅಬಕಾರಿ ಇಲಾಖೆಗೆ ಸಂಬಂಧಪಟ್ಟಂತೆ ರೆವಿನ್ಯೂ ಜಿಲ್ಲಾಧಿಕಾರಿಗಳಿಗೆ ಇದರ ಹೊಣೆಯನ್ನು ಕೊಡಲಾಗಿದೆ ಎಂಬುದನ್ನು ನಾವು ಈ ವರ್ಷದ ಬಜೆಟ್ ಭಾಷಣದಲ್ಲಿ ಅವರು ಹೇಳಿದ್ದಾರೆ. ಬಹುಶ: ಇದನ್ನು ತಾವೆಲ್ಲರೂ ಸ್ವಾಗತ ಮಾಡುತ್ತೀರಿ ಎಂದು ನಾನು ಆಶಿಸುತ್ತೇನೆ. ಈ ಕಛೇರಿಯಿಂದ ನೇಮಿಸಿದಂತಹ ತನಿಖಾ ತಂಡಗಳ ಪರಿಶೀಲನೆ ಹಾಗೂ ಸೂಚನೆಗಳಿಗೆ ಅನುಸಾರವಾಗಿ 12 ಸಗಟು ಮದ್ಯದ ಅಂಗಡಿಗಳು, 39 ಚಿಲ್ಲರೆ ಮದ್ಯದ ಅಂಗಡಿಗಳು ಹಾಗೂ 3 ಡಿಸ್ಟಿಲರಿಗಳು ಇಂತಹ ಅವ್ಯವಹಾರದಲ್ಲಿ ಶಾಮೀಲಾಗಿರುವ ಬಗ್ಗೆ ಪುರಾವೆ ದೊರಕಿದೆ. ನಾವು ಇದರಲ್ಲಿ ಏನನ್ನೂ ಮುಚ್ಚಿಡುವುದಕ್ಕೆ ಹೋಗುತ್ತಿಲ್ಲ. ನೇರವಾಗಿ ನೀವು ಹೇಳಿದ ವಿಷಯಕ್ಕೆ ಬರುತ್ತಿದ್ದೇನೆ. ಈ ಸನ್ನದುದಾರರು ನಡೆಸಿರುವ ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಿದ ಈ ವರ್ಷಗಳಲ್ಲಿ ಸುಮಾರು 16 ಕೋಟಿ 59 ಲಕ್ಷ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ನೀವು ಅದು 20 ಕೋಟಿ ರೂಪಾಯಿಗಳೆಂದು ಹೇಳಿದಿರಿ. ಆದರೆ ನಮಗೆ ತನಿಖೆ ನಂತರ ಸಿಕ್ಕಿರುವಂತಹ ಮಾಹಿತಿಯಲ್ಲಿ 16 ಕೋಟಿ 59 ಲಕ್ಷ ಎಂದು ತಿಳಿದುಬಂದಿದೆ. ಬಹುಶ: ಇದಕ್ಕಿಂತ ಹೆಚ್ಚು ಇರುವುದಕ್ಕೂ ಸಾಧ್ಯವಿದೆ. ನಾನು ಇಲ್ಲವೆಂದು

ಹೇಳುತ್ತಿಲ್ಲ. ಈ ಒಟ್ಟು ಮೊತ್ತದಲ್ಲಿ ಮದ್ಯದ ಬೆಲೆ, ಅಬಕಾರಿ ಸುಂಕ ಹಾಗೂ ವಾಣಿಜ್ಯ ತೆರಿಗೆ ಅಂಶಗಳೂ ಕೂಡ ಒಳಗೊಂಡಿವೆ. ಈ ಪೈಕಿ 6. 18 ಕೋಟಿ ಅಬಕಾರಿ ಸುಂಕ, ಹಾಗು 8. 82 ಕೋಟಿ ವಾಣಿಜ್ಯ ತೆರಿಗೆ; ಈ ಮೇಲ್ಕಂಡ ಆವ್ಯವಹಾರ ಇಲಾಖೆಯ ಗಮನಕ್ಕೆ ಬಂದ ಮೇಲೆ ನಾವು 47 ಮೊಕದ್ದಮೆಗಳನ್ನು ದಾಖಲು ಮಾಡಿದ್ದೇವೆ. ತನಿಖೆಗಳು ಪ್ರಗತಿಯ ಹಂತದಲ್ಲಿವೆ. ಈ ಪೈಕಿ 60 ಲಕ್ಷ ರೂಪಾಯಿಗಳನ್ನು ಈಗಾಗಲೇ ವಸೂಲು ಮಾಡಲಾಗಿದೆ. ಉಳಿದ ಮೊತ್ತವನ್ನು ವಸೂಲು ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನೂ ಇಲಾಖೆಯ ವತಿಯಿಂದ ಕೈಗೊಳ್ಳಲಾಗಿದೆ. ಇದು ಎರಡು ವರ್ಷಕ್ಕೆ ಸಂಬಂದಪಟ್ಟಂತೆ ನಮಗೆ ಬಂದಿರುವ ಮಾಹಿತಿಯ ಹಿನ್ನೆಲೆಯಲ್ಲಿ ಈ ಮದ್ಯದ ಅಂಗಡಿಗಳು ಸಗಟು ವ್ಯಾಪಾರಗಳನ್ನು ಬೇರೆ ಮಾಡಿರತಕ್ಕಂತದ್ದು. ಈಗ ವ್ಯಾಪಕವಾಗಿ ರಾಜ್ಯದಲ್ಲಿ ಸಗಟು ವ್ಯಾಪಾರಿಗಳು ಯಾರು ಇದ್ದಾರೆ, ಇದು ಚಿಲ್ಲರೆ ವ್ಯವಹಾರದಲ್ಲಿ ನಡೆಯುವುದಿಲ್ಲ. ರಿಟೈರ್ ಶಾಪ್ನಲ್ಲಿ ನಡೆಯುವುದು ಬಹಳ ಕಷ್ಟ, ಇದು ಹೋಲ್ಸೇಲ್ನಲ್ಲಿ ಮತ್ತು ಕೆಲವೇ ಸಂದರ್ಭಗಳಲ್ಲಿ ಡಿಸ್ಟ್ರೀರಿಗಳಲ್ಲಿ ನಡೆಯತಕ್ಕದ್ದು ಈ ಅವ್ಯವಹಾರವನ್ನು ಕಟ್ಟು ನಿಟ್ಟಾಗಿ ತಡೆಯಲು ವಿಫಲರಾದ ಆರೋಪದ ಮೇಲೆ ಇಲಾಖೆಯ ಸಿಬ್ಬಂದಿಯ ಮೇಲೆ ಶಿಸ್ತು ಕ್ರಮವನ್ನು ಅನುಗುಣವಾಗಿ ಜರುಗಿಸಿ, 10 ಜನ Superintendents of Excise ಇವರನ್ನು ಅಮಾನತ್ತಿನಲ್ಲಿ ಇಡಲಾಗಿದೆ. 5 ಜನ ಗೆಜೆಟೆಡ್ ಅಧಿಕಾರಿಗಳು ಸೇರಿದಂತೆ, 7 ಅಧಿಕಾರಿಗಳಿಗೆ ಕಾರಣವನ್ನು ಕೊಡುವಂತಹ ನೋಟೀಸ್ನ್ನು ಜಾರಿ ಮಾಡಲಾಗಿದೆ. ಮತ್ತು ಮುಂದಿನ ಶಿಸ್ತಿನ ಕ್ರಮವೂ ಕೂಡ ಪ್ರಗತಿಯಲ್ಲಿರುತ್ತದೆ. ಈ ಅವ್ಯವಹಾರದಲ್ಲಿ ವಾಣಿಜ್ಯ ತೆರಿಗೆಯಂಥ ಪ್ರಮುಖವಾದಂತಹ ಮೂಲವನ್ನು ಹೊಂದಿರುವುದರಿಂದ ವಿಶೇಷ ತನಿಖಾ ತಂಡಗಳು ಸಲ್ಲಿಸುವ ವರದಿಯ ನಕಲುಗಳನ್ನು ವಾಣಿಜ್ಯ ಇಲಾಖೆಗೆ ಕಳುಹಿಸಿ ಕೊಟ್ಟು ಅವರಿಂದಲೂ ಕೂಡ ಸೂಕ್ತ ಕ್ರಮವನ್ನು ಜರುಗಿಸಲು ಕೋರಲಾಗಿದೆ. ಮಾನ್ಯ ರಾಮಸ್ವಾಮಿಯವರು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚಿತವಾಗಿಯೇ ಸರ್ಕಾರದ ಗಮನಕ್ಕೆ ಇದು ಬಂದಿದ್ದು 1995-96, 1996-97, 1997-98ನೇ ಸಾಲುಗಳಲ್ಲಿ ನಾವು ಇದನ್ನು ನಿರಂತರವಾಗಿ ಮುಂದುವರೆಸುತ್ತಿದ್ದೇವೆ. ನೀವು ಹೇಳುತ್ತಿರುವುದು ನಿಜ. ನಡೆಯುತ್ತಿರತಕ್ಕಂಥದ್ದು ಯಾವ್ಯಾವ ಭಾಗದಲ್ಲಿ ಮೋಡಸ್ ಅಪರಂಡಿ ಈ ಒಂದು ನಕಲಿಯ ಇನ್ವಾಯ್ಸ್ಗಳನ್ನು ಮಾಡುತ್ತಿರತಕ್ಕಂಥದ್ದು ಒಂದು ಭಾಗವಾದರೆ, ಇನ್ನೊಂದು ಭಾಗ ಎಂದರೆ, ಡಿಸ್ಟಿಲರಿಯಿಂದ ಫಸ್ಟ್ ಪಾಯಿಂಟ್ ಟ್ಯಾಕ್ಸ್ನ್ನು ಕಟ್ಟಿ ಬಿಡುತ್ತಾರೆ. ಒಂದು ಲೀಟರ್ಗೆ 45 ರೂಪಾಯಿಗಳಂತೆ ಡಿಸ್ಟಿಲರಿಯಲ್ಲಿ ಎಕ್ಸೈಜ್ ಡ್ಯೂಟಿಯನ್ನು ಕಟ್ಟುತ್ತಾರೆ. ಅದರ ಜೊತೆಯಲ್ಲಿ ಫಸ್ಟ್ ಪಾಯಿಂಟ್ ಟ್ಯಾಕ್ಸ್ 6 ಪರ್ಸೆಂಟ್ನ್ನು ಕಟ್ಟುತ್ತಾರೆ. ಸೆಕೆಂಡ್ ಪಾಯಿಂಟ್ ಮತ್ತು ಲಾಸ್ಟ್ ಪಾಯಿಂಟ್ ಟ್ಯಾಕ್ಸ್ನ್ನು ಕಟ್ಟಬೇಕಾಗಿರುವಂಥದ್ದು ಹೋಲ್ಸೇಲ್ ಆಗಿ ತೆಗೆದುಕೊಂಡು ಹೋಗುತ್ತಾರೆ ಅಲ್ಲಿ ಏನು ಮಾಡುತ್ತಾರೆಂದರೆ ಅವರು ಟ್ಯಾಕ್ಸ್ನ್ನು ಕಟ್ಟುವುದಿಲ್ಲ. ಆದರೆ ವ್ಯಾಪಾರ ಮಾಡುತ್ತಾರೆ. ಇನ್ನೊಂದು ಮೋಡನ್ ಆಪರೆಂಡಿಯನ್ನು ನಾನು ಹೇಳುತ್ತೇನೆ. ಪಾಂಡಿಚೇರಿ ಮತ್ತು ಮಾಹೆ, ಪಾಂಡಿಚೇರಿಯಿಂದ ಮಾಹೆಗೆ ಇನ್ವಾಯ್ಸ್ನ್ನು ಹಾಕಿಕೊಳ್ಳುತ್ತಾರೆ. ಒಂದು ಪರ್ಮಿಟ್ನ್ನು ಹಾಕಿಕೊಳ್ಳುತ್ತಾರೆ. ಒಂದು ತಿಂಗಳು ಸಮಯವನ್ನು ಕೊಡುತ್ತಾರೆ. ಮಾಹೆಗೆ ಹೋಗಬೇಕಾದರೆ ಕರ್ನಾಟಕದ ರಾಜ್ಯದೊಳಗೆ ಹೋಗಬೇಕಾಗುತ್ತದೆ. ಇಲ್ಲಿಂದ ಬರುತ್ತಿರತಕ್ಕಂಥದನ್ನೆಲ್ಲಾ ಕರ್ನಾಟಕದೊಳಗೆ ದಂಪ್ ಮಾಡಿಕೊಳ್ಳುತ್ತಾರೆ. ಇಲ್ಲಿ ಡಂಪ್ ಮಾಡಿಕೊಂಡು ಇಲ್ಲಿಯೇ ಮಾರಾಟ ಮಾಡುವಂದ ವ್ಯವಸ್ಥೆಯನ್ನು ಕೂಡ ಮಾಡುತ್ತಿದ್ದಾರೆ. ಆದ್ದರಿಂದ ಮೂರು ರೀತಿಯಲ್ಲಿ ಈ ವ್ಯವಹಾರ ನಡೆಯುತ್ತಿದೆ ಇನ್ನೊಂದು ತಾವು ಹೇಳುತ್ತಿರುವಂಥದ್ದು ಸೆಕೆಂಡ್ಸ್ ವ್ಯವಹಾರ. ನಾವೇನು ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುವುದಿಲ್ಲ. ಈ ಅವ್ಯವಹಾರ ನಡೆಯುವುದಿಲ್ಲವೆಂದು ಹೇಳುತ್ತಿಲ್ಲ.

ನೀವು ಹೇಳುತ್ತಿರುವ ಒಂದಕ್ಕೆ ಮಾತ್ರ ಅದು ಯಾವುದೆಂದರೆ ಸುಮಾರು 400 ಕೋಟಿ ರೂಪಾಯಿಗಳೆಂದು ಏನು ಹೇಳಿದಿರಿ ಅದಕ್ಕೆ, ನೀವು ಹೇಳಿರತಕ್ಕಂತಹ ಸಂಖ್ಯೆಗೆ ಸಂಬಂಧಪಟ್ಟಂತೆ ಮಾತ್ರ ವಿರೋಧ ಪಕ್ಷದಲ್ಲಿದ್ದಾಗ ನಾವು ಸ್ವಲ್ಪ ಇನ್‌ಫ್ಲೇಟ್ ಮಾಡದೇ ಇದ್ದರೆ ತಪ್ಪಾಗುತ್ತದೆ. ಅದನ್ನು ಇನ್‌ಫ್ಲೇಟ್ ಮಾಡಿಯೇ ಹೇಳಬೇಕು. 20 ಇದ್ದರೆ 200 ಎಂದು 40 ಇದ್ದರೆ 400 ಎಂದು ಹೇಳಬೇಕು. ಆ ರೀತಿಯಾಗಿ ಹೇಳಿದಾಗಲೆ ಅದಕ್ಕೆ ಗಂಭೀರತೆ ಬಂದು ಉತ್ತರವನ್ನು ಹೇಳುವಾಗ ಸ್ವಲ್ಪಮಟ್ಟಿಗೆ ಚುರುಕಾಗುತ್ತದೆ. ಆದ್ದರಿಂದ.....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಅನುಭವವನ್ನು ಬಹಳ ಚೆನ್ನಾಗಿ ಹೇಳುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ನಾಣಯ್ಯನವರು ವಿರೋಧ ಪಕ್ಷದಲ್ಲಿದ್ದಾಗ ಇದ್ದಂತಹ ಅನುಭವವನ್ನು ಬಹಳ ಚೆನ್ನಾಗಿ ಈಗ ಹೇಳುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಈಗ ನೀವು ಮಾಡುತ್ತಿರುವುದಾದರೋ ಏನು? ಅದನ್ನೇ ಮಾಡುತ್ತಿದ್ದೀರಿ. ನಾನು ವಿರೋಧ ಪಕ್ಷದಲ್ಲಿದ್ದಾಗ ಮಾಡುತ್ತಿದ್ದಕ್ಕಿಂತ ಭಿನ್ನವಾಗಿ ಮಾಡುತ್ತಿದ್ದೀರಾ? ಒಳ್ಳೆಯ ತಮಾಷೆಯಾಯಿತು. ನೀವು ಅಂತೂ ಆಡಳಿತ ಪಕ್ಷದ ಕಡೆಗೆ ಬರುವುದಿಲ್ಲ, ವಿರೋಧ ಪಕ್ಷ ಕಡೆಯಲ್ಲಿಯೇ ಕುಳಿತುಕೊಳ್ಳಬೇಕಾಗುತ್ತದೆ. ಈ ತರಹದ ಅವ್ಯವಹಾರಗಳು ನಡೆಯುತ್ತಿರುವುದು ನಿಜ. ಸರ್ಕಾರ ಇದರ ಬಗ್ಗೆ ಕ್ರಮವನ್ನು ಹಮ್ಮಿಕೊಂಡಿರುವಂಥದ್ದು, ಇದನ್ನು ತಡೆಗಟ್ಟುವುದಕ್ಕೆ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡುತ್ತಿರತಕ್ಕಂಥದ್ದೆ, ಶ್ರೀಮಾನ್ ಸಿದ್ದರಾಮಯ್ಯನವರು ಇದಕ್ಕೆ ಜಿಲ್ಲೆಯಲ್ಲಿ ಅಬಕಾರಿ ಇಲಾಖೆಯ ಶಾಮೀಲಾಗಿ ಕೆಲಸವನ್ನು ಮಾಡುತ್ತಿರತಕ್ಕಂಥದ್ದು ನಿಜ. ಇನ್ನುಕೆಲವು ಸಂದರ್ಭದಲ್ಲಿ ತಾವು ಹೇಳುತ್ತಿರತಕ್ಕಂಥದ್ದು ಇಲ್ಲಿ ಒಂದನ್ನು ಹೇಳುತ್ತೇನೆ. 300 ಇದ್ದರೆ 3,000 ಮಾಡುವುದು. 3,000 ಆಗುವುದಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ಮಾಡುವುದಕ್ಕಾಗುವುದಿಲ್ಲ. 'ಅವರು ಎಲ್ಲೋ 100 ಕೇಸ್‌ಗಳನ್ನು ತಂದಿರುತ್ತಾರೆ. ಅಥವಾ 200 ಅಥವಾ 300 ಈ ರೀತಿಯಾಗಿ ಮಾಡುತ್ತಾರೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಅದನ್ನು ನೋಡಬೇಕಾಗಿರತಕ್ಕಂಥದ್ದು ಓಪನಿಂಗ್ ಸ್ಟಾಕ್ ಮತ್ತು ಕ್ಲೊಸಿಂಗ್ ಬ್ಯಾಲೆನ್ಸ್‌ನ್ನು ಅಲ್ಲಿರತಕ್ಕಂತಹ ಆಯುಕ್ತರು ಅಥವಾ ಎಕ್ಸೈಜ್ ಇನ್‌ಸ್ಪೆಕ್ಟರ್ ಹೋಗಿ ನೋಡಿದರೆ ಗೊತ್ತಾಗುತ್ತದೆ. ಆದರೆ ಅವರೂ ಅವರ ಜೊತೆಯಲ್ಲಿ ಸೇರಿಕೊಳ್ಳುತ್ತಾರೆ, ಅದನ್ನು ನಾನು ಇಲ್ಲವೆಂದು ಹೇಳುವುದಿಲ್ಲ, ಆದ್ದರಿಂದ ಮಾನ್ಯ ರಾಮಸ್ವಾಮಿಯವರು ಎತ್ತಿರತಕ್ಕಂತಹ ವಿಚಾರದಲ್ಲಿ ಸಂಪೂರ್ಣವಾಗಿ ಅವರು ಹೇಳತಕ್ಕಂತಹ ಅಂಕಿ ಸಂಖ್ಯೆಯನ್ನು ನಾನು ಒಪ್ಪಿಕೊಳ್ಳದೇ ಇದ್ದರೂ ಸಹ ಅಲ್ಲಿ ನಡೆಯುತ್ತಿರತಕ್ಕಂತಹ ಅವ್ಯವಹಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕೋಸ್ಕರವಾಗಿ ನೇರವಾಗಿ ಕೆಲಸವನ್ನು ಮಾಡುತ್ತಿರತಕ್ಕಂಥದ್ದು ನಿಜ. ಸಮಗ್ರವಾಗಿ ಇವತ್ತು ರಾಜ್ಯದಲ್ಲಿ 62 ಡಿಸ್ಟಿಲರಿಗಳಿವೆ. ಅದರಲ್ಲಿ 54 ಡಿಸ್ಟಿಲರಿಗಳು ಕೆಲಸವನ್ನು ನಿರ್ವಹಿಸುತ್ತಿವೆ. 8 ಡಿಸ್ಟಿಲರಿಗಳು ಕೆಲಸವನ್ನು ಮಾಡುತ್ತಿಲ್ಲ. ಬೇಕಾದಷ್ಟು ಕಾರಣಗಳಿಂದ ಅವು ಕೆಲಸ ಮಾಡದೇ ಮುಚ್ಚಿವೆ. ನಮ್ಮ ರಾಜ್ಯದಲ್ಲಿ ಸುಮಾರು 362 ಹೋಲ್‌ಸೇಲ್ ಪಾಯಿಂಟ್‌ಗಳಿದ್ದು ಅದರಲ್ಲಿ 100 ಹೋಲ್‌ಸೇಲ್ ಪಾಯಿಂಟ್‌ಗಳು ಬೆಂಗಳೂರು ನಗರದಲ್ಲಿಯೇ ಇವೆ. ಬಹುತೇಕವಾಗಿ ಅವ್ಯವಹಾರಗಳು ಹೋಲ್‌ಸೇಲ್‌ಗಳಲ್ಲಿಯೇ ಆಗುತ್ತಿರುವಂಥದ್ದು. ಅದರಿಂದ ಇದರ ಬಗ್ಗೆ ಸಂಪೂರ್ಣ ನಿಗಾ ವಹಿಸಿ ನಾವು ಅಂದರೆ ರಾಜ್ಯಸರ್ಕಾರದವರು 1996ನೇ ಇಸವಿಯಿಂದ ಈ ಕಾರ್ಯಕ್ರಮವನ್ನು ಮಾಡಿ ಈ ವರ್ಷದಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ನಡೆಯುತ್ತಿರುವ

ವ್ಯವಹಾರವನ್ನು ಕೂಡ ಎಲ್ಲಾ ಹೋಲ್‌ಸೇಲ್‌ಗೂ ಸಂಬಂಧಪಟ್ಟ ಹಾಗೆ ಅವರು ಎಷ್ಟನ್ನು ಡ್ರಾ ಮಾಡಿದ್ದಾರೆ, ಅವರ ಇನ್‌ವಾಯ್ಸ್‌ಗಳೇನು, ಅಕೌಂಟ್‌ಗೆ ತಂದಿರತಕ್ಕಂಥದ್ದು ಯಾವುದು? ಅದನ್ನು ತಂದ ಮೇಲೆ ಅಲ್ಲಿ ಎನ್‌ಫೋರ್ಸ್‌ಮೆಂಟ್ ಮಾಡಿರತಕ್ಕಂಥದ್ದು ನೀವು ಹೇಳಿದಿರೆಲ್ಲಾ 300ರನ್ನು 3000 ಮಾಡಿರತಕ್ಕಂತದ್ದು, ಮತ್ತು ಕೆಲವು ಸಂದರ್ಭದಲ್ಲಿ ನಾನ್ ಡ್ಯೂಟಿ ಪೈಡ್ ಕೆಲವು ಸಂದರ್ಭದಲ್ಲಿ adhesive stickers ಹಾಕುತ್ತಾ ಇರತಕ್ಕಂಥದ್ದು ಅದನ್ನು ಪ್ರಿಂಟ್ ಮಾಡುತ್ತಾರೆ. ಪ್ರತಿಯೊಂದು ಡಿಸ್ಟಿಲರಿಯಿಂದ ಹೊರಗಡೆ ಬರಬೇಕಾದರೆ ಅದಕ್ಕೆ ಲೇಬಲ್ ಹಾಕ ಬೇಕಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಅದನ್ನು ಪ್ರಿಂಟ್ ಮಾಡಿ ಮಾಡುತ್ತಾ ಇರತಕ್ಕಂಥದ್ದು ಇದೆ. ಪ್ರತಿಯೊಂದು ಲೇಬಲ್‌ಗೆ ಒಂದು ಕೋಡ್ ನಂಬರ್ ಇದೆ. ಆ ಕೋಡ್ ನಂಬರ್‌ನ್ನು ನೋಡಿದಾಗ ಆ ಲೇಬಲ್ ಫೇಕ್ ಹೌದೋ ಅಲ್ಲವೋ ಎನ್ನುವುದನ್ನು ಕಂಡು ಹಿಡಿಯುವುದಕ್ಕೂ ಅವಕಾಶ ಇದೆ. ಆ ಕೇಸ್‌ನಲ್ಲಿಯೂ ಕೂಡ ಕೆಲವು ಅಧಿಕಾರಿಗಳು ಶಾಮೀಲಾಗಿ ಮಾಡಿರತಕ್ಕಂಥದ್ದು ನಿಜ. ಆದ್ದರಿಂದ ರಾಮಸ್ವಾಮಿಯವರೇ, ನೀವು ಹೇಳಿದಂತೆ ಕಣ್ಣು ಇದ್ದು, ಕಿವಿ ಇದ್ದು, ಕಾಲು ಇದ್ದು ನೀವು ಏನು ಮಾಡುವುದಿಲ್ಲ, ನೈತಿಕ ಹೊಣೆಯನ್ನು ಹೊತ್ತು ರಾಜೀನಾಮೆಯನ್ನು ಕೊಡಿ ಎಂದು ಹೇಳಿದಿರಿ. ಆದರೆ ನಾವು ರಾಜೀನಾಮೆಯನ್ನು ಕೊಡುವುದಿಲ್ಲ. ರಾಜೀನಾಮೆಯನ್ನು ಕೊಡುವುದಕ್ಕೆ ನಾವು ಇಲ್ಲಿಗೆ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಷ್ಟು ಭಂಡತನವನ್ನು ಯಾವ ಸರ್ಕಾರದಲ್ಲಿಯೂ ಸಹ ನಾನು ನೋಡಿರಲಿಲ್ಲ. ಇಷ್ಟು ಬಹಿರಂಗವಾಗಿ.....

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ವಾಟಾಳ್ ನಾಗರಾಜ್‌ರವರೆ ನೀವು ಎಷ್ಟು ಭಂಡತನದಲ್ಲಿ ಕೆಲವೊಂದು ವಿಚಾರಗಳನ್ನು ಹೇಳಿತ್ತೀರಿ. ನಾವು ಅಷ್ಟೇ ಭಂಡತನದಲ್ಲಿ ಉತ್ತರವನ್ನು ಕೊಡಬೇಕಾಗುತ್ತದೆ. ಶ್ರೀಮಾನ್ ರಾಮಸ್ವಾಮಿಯವರು ಎತ್ತಿರತಕ್ಕಂತಹ ವಿಷಯದ ಬಗ್ಗೆ ಎರಡು ವರ್ಷಗಳಿಗಿಂತಲೂ ಮುಂಚೆ ಸರ್ಕಾರದ ಗಮನಕ್ಕೆ ಬಂದಿರತಕ್ಕಂಥದ್ದು ಅದನ್ನು ಗಮನ ವಹಿಸುತ್ತಿರತಕ್ಕಂತದ್ದು. ಇದನ್ನು ತಡೆಗಟ್ಟಲು ಪ್ರತಿಯೊಂದು ಜಿಲ್ಲೆಯಲ್ಲಿಯೂ ನಾವು ಹಂತ ಹಂತವಾಗಿ ಕಾರ್ಯಕ್ರಮ ಮಾಡುತ್ತಿರತಕ್ಕಂಥದ್ದು ಮತ್ತು ಇದರ ಬಗ್ಗೆ ಜಿಗಿಯನ್ನು ಮಾಡುತ್ತಿರತಕ್ಕಂಥದ್ದು. ಇದರ ಜೊತೆ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕಂತಹ ಜಿಲ್ಲಾಧಿಕಾರಿಗಳಿಗೆ ಅಧಿಕಾರಿಗಳನ್ನು ಕೊಡುವುದರ ಮೂಲಕ ಇನ್ನು ಹೆಚ್ಚು ಪರಿಣಾಮವಾಗಿ ಈ ಟ್ಯಾಕ್ಸ್‌ನ್ನು ವಸೂಲಿ ಮಾಡಲಿಕ್ಕೆ ಇರತಕ್ಕಂಥದ್ದು, ಬೋಗಸ್ ಬಿಲ್ಲನ್ನು ಕಂಡು ಹಿಡಿಯುವುದಕ್ಕೆ ಕ್ರಮವನ್ನು ಕೈಗೊಳ್ಳುವುದನ್ನು ಮಾಡಿದ್ದೇವೆ. ಇಷ್ಟೆಲ್ಲಾ ಮಾಡಿದ ಮೇಲೆ ಸರ್ಕಾರದ ಪ್ರಾಮಾಣಿಕತನವನ್ನು ಏಕೆ ಪ್ರಶ್ನೆ ಮಾಡುತ್ತಾರೆ? ನಾವು ಇದನ್ನು ತಡೆಗಟ್ಟಲು ಮಾಡಿದ ಕ್ರಮವನ್ನು ಹೇಳಿದ್ದೇವೆ ಮತ್ತು ಇನ್ನು ಮಾಡಬೇಕಾಗಿರುವುದನ್ನು ಹೇಳಿದ್ದೇವೆ. ಇನ್ನೂ ಅದನ್ನು ತಡೆಗಟ್ಟುತ್ತೇವೆ. ಆದ್ದರಿಂದ ದಯವಿಟ್ಟು ಸರ್ಕಾರದ ಮೇಲೆ ವಿಶ್ವಾಸವನ್ನು ಇಡಿ ಎಂದರೆ ನೀವು ಇಡುವುದಿಲ್ಲವೆಂದು ನನಗೆ ಗೊತ್ತಿದೆ. ಆದರೆ ನಾವು ಮಾಡಬೇಕಾಗಿರುವಂತಹ ಕಾರ್ಯಕ್ರಮವನ್ನು ನೀವು ಹೇಳಿದ ಮೇಲೆ ಮಾಡುತ್ತಿರತಕ್ಕಂಥದ್ದು ಅಲ್ಲ. ಇದನ್ನು ಹೆಚ್ಚು ನಿಗವನ್ನು ವಹಿಸಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸೋರಿ ಹೋಗತಕ್ಕಂಥ ಹಣವು ಅದು ಎಕ್ಸೆಸ್ ಇಲಾಖೆಯೇ ಇರಲಿ, ಅಥವಾ ಯಾವ ಭಾಗದಲ್ಲಿಯೇ ಇರಲಿ, ಅದನ್ನು ತಡೆಹಿಡಿದು ಅದರ ಹಿಂದೆ ಯಾವ ಒಂದು ಜಾಲ ಇದೆ, ಆ ಜಾಲದಲ್ಲಿ ಬಹಳಷ್ಟು ಜನರು ಶಾಮೀಲಾಗಿದ್ದಾರೆ, This is a big rocket. I do honestly admit it is a big rocket. Lot of people are involved. ಹೀಗೆ ಬೇಕಾದಷ್ಟು ಜಾಲಗಳು ಇರುತ್ತವೆ. ಈ ಸಂದರ್ಭದಲ್ಲಿ ಪ್ರಮಾಣವಾಗಿ, ಪ್ರಾಮಾಣಿಕತನದಿಂದ ಕೆಲಸವನ್ನು ಮಾಡಿ ಈ ರಾಜ್ಯದ ಬೊಕ್ಕಸಕ್ಕೆ

ಸೋರಿಹೋಗುತ್ತಿರುವಂಥ ಹಣವನ್ನು ಕೂಡಿಸಿಕೊಡುವುದರಲ್ಲಿ ನಾವು ಪ್ರಾಮಾಣಿಕ ಯತ್ನವನ್ನು ಮಾಡುತ್ತೇವೆ. ತಾವುಗಳು ಒಬ್ಬ ಅಧಿಕಾರಿಯ ಬಗ್ಗೆ ಹೇಳಿದ್ದೀರಿ. ಅವರನ್ನು ಅಮಾನತ್ತಿನಲ್ಲಿಟ್ಟಿದ್ದರು; ಈ ವ್ಯವಹಾರದಲ್ಲಿ ತೊಡಗಿಸಕೊಂಡಿದ್ದವರು ಅವರು. ಯಾವುದೋ ಒಂದು ತಾರೀಖಿನಲ್ಲಿ ಅವರು ಒಂದು ಪತ್ರವನ್ನು ಕೊಟ್ಟರು, ಅದೇ ತಾರೀಖಿನಲ್ಲಿ ಅವರನ್ನು ರಿ-ಇನ್‌ಸ್ಟೇಟ್ ಮಾಡಿದರು ಎಂಬ ಮಾತನ್ನು ಹೇಳಿದ್ದೀರಿ. ಅದರ ಬಗ್ಗೆ ತಾವು ಗಮನವನ್ನು ಸೆಳೆದ್ದೀರಿ. ಇಲಾಖೆಯ ಮತಿಯಿಂದ ನಾವು ಚರ್ಚೆ ಮಾಡಿ, ವಿಚಾರಣೆ ಮಾಡಿ, ಅದರಲ್ಲಿನ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಇರತಕ್ಕಂಥ ಪ್ರಯತ್ನವನ್ನು ಮಾಡುವುದರ ಜೊತೆಗೆ, ಯಾವುದೇ ಅಧಿಕಾರಿ ಈ ವ್ಯವಹಾರದಲ್ಲಿ ಶಾಮೀಲಾಗಿ ರಾಜ್ಯದ ಬೊಕ್ಕಸಕ್ಕೆ ಬರತಕ್ಕಂಥ ಹಣವನ್ನು ಕೊರತೆ ಮಾಡುವುದರಲ್ಲಿ ಸಹಾಯ ಮಾಡಿರತಕ್ಕ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮವನ್ನು ಸರಕಾರವು ಕೈಗೊಳ್ಳುತ್ತದೆ. ನೀವು ನಿಮ್ಮ ಸಹಕಾರವನ್ನು ಕೊಡಿ. ನಿಮಗೂ ಕೂಡ ನಿಮ್ಮ ಜಿಲ್ಲೆಯಲ್ಲೋ, ಇತರ ಜಿಲ್ಲೆಯಲ್ಲೋ ಅಂದರೆ ಸಾಮಾನ್ಯವಾಗಿ ಎಲ್ಲಾ ಜಿಲ್ಲೆಗಳ ಡಿಸ್ಪಿಲರೀಸ್ ಇದ್ದಾವೆ. ನಮ್ಮ ಕೊಡಗು ಜಿಲ್ಲೆಯಲ್ಲಿ ಡಿಸ್ಪಿಲರೀಸ್ ಇಲ್ಲ. ಹಾಸನ ಜಿಲ್ಲೆಯಲ್ಲಿ ಮಾಡತಕ್ಕಂಥವರು, ಶಿವಮೊಗ್ಗ, ಚಿತ್ರದುರ್ಗ, ಬೀದರ್ ಬೆಂಗಳೂರಲ್ಲಿ ಮಾಡತಕ್ಕಂಥವರು ಬೇಕಾದಷ್ಟು ಜನರು ಇದ್ದಾರೆ. ಈ ಕುರಿತಾಗಿ ತಮ್ಮಲ್ಲಿ ಯಾವುದೇ ಮಾಹಿತಿಗಳು ಇದ್ದಲ್ಲಿ ಅದನ್ನು ದಯಮಾಡಿ ನನಗೆ ಕಳುಹಿಸಿಕೊಡಿ. ನಮಗೆ ಗೊತ್ತಿಲ್ಲದೆ ಇರುವ ಮಾಹಿತಿಗಳು ತಮ್ಮ ಹತ್ತಿರ ಇದ್ದರೆ ಅದನ್ನು ನಮಗೆ ಕಳುಹಿಸಿಕೊಡಿ. ಅದನ್ನು ಕೂಡ ತನಿಖೆ ಮಾಡಲು ಇರುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಿ, ಮಾನ್ಯ ರಾಮಸ್ವಾಮಿಯವರಿಗೆ ಈ ವಿಚಾರವನ್ನು ಹೇಳುತ್ತಾ ಅವರಿಗೆ ನಮ್ಮ ಮೇಲೆ ಅಷ್ಟು ಮಟ್ಟಿಗೆ ವಿಶ್ವಾಸವಿಲ್ಲದಿದ್ದರೂ ಕೂಡ ನಾವು ಮಾಡುತ್ತಾ ಇರತಕ್ಕಂಥ ಕಾರ್ಯಕ್ರಮಕ್ಕೆ ಗಮನಿಸಿ, ಇವರು ಏನೋ ಹೇಳುತ್ತಿದ್ದಾರೆ, ಏನೋ ಮಾಡುತ್ತಿದ್ದಾರೆ, ನೀವು ಹೇಳಿದ್ದನ್ನು ಪ್ರಾಮಾಣಿಕವಾಗಿ ಹೌದು ಎಂದು ಒಪ್ಪಿ ಕೊಂಡಿದ್ದೇವೆ ಅಂದರೆ ಇದು ಪ್ರಾಮಾಣಿಕತನವಲ್ಲವೇ? ಇಷ್ಟಕ್ಕಾದರೂ ಸ್ವಲ್ಪಮಟ್ಟಿಗೆ ನಮ್ಮ ಮೇಲೆ ನಿಗಾ ಇಟ್ಟು ಕೊಳ್ಳಿ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುವಾಗ ಸರಕಾರದ ಮೇಲೆ ವಿಶ್ವಾಸವನ್ನು ಇಡಿ ಎಂಬ ಮಾತನ್ನು ಹೇಳಿದ್ದಾರೆ. ಸರಕಾರಗಳ ಬಗ್ಗೆ ನಮಗೆ ಬಿಡಿ, ಜನಗಳಿಗೆ ವಿಶ್ವಾಸವೇ ಹೋಗಿ ಬಿಟ್ಟಿದೆ. ಸರಕಾರಗಳಲ್ಲಿ ವಿಶ್ವಾಸಾರ್ಹತೆಯು ಏನಾದರೂ ಉಳಿದಿದೆಯೇ? ಅದಕ್ಕಾಗಿಯೇ ನಾನು ಪ್ರಸ್ತಾಪ ಮಾಡುವಾಗ ನನನಗೂ ಕೂಡ ನಾಚಿಕೆ ಆಗುತ್ತದೆ ಎಂದು ಹೇಳಿದ್ದೆ. ಈ ಸದನಕ್ಕೆ ಬಂದು ಈ ಸಾಲಿನಲ್ಲಿ ಕುಳಿತುಕೊಂಡು ಮೂರು ವರ್ಷಗಳಾಯಿತು. ಇಂಥ ದೊಡ್ಡ ಹಗರಣಗಳು ನಡೆದಿವೆ, ಅದನ್ನು ಸರಕಾರದ ಗಮನಕ್ಕೆ ತಂದು ಬುದ್ಧಿ ಹೇಳುವ ಶಕ್ತಿ ನಮಗೆ ಬರಲಿಲ್ಲ, ಆ ವಿಚಾರದಲ್ಲಿ ತಾವು ವಿಫಲರಾಗಿದ್ದೇವೆ ಎಂಬ ಮಾತನ್ನು ಹೇಳಲು ನನಗೂ ನಾಚಿಕೆಯಾಗುತ್ತದೆ ಎಂಬ ಮಾತನ್ನು ಹೇಳಿದ್ದೆ. ಈಗ ಅವಾಸ್ತವಿಕವಾದ ವಿಚಾರವನ್ನು ಹೇಳುತ್ತಿದ್ದಾರೆ, 20 ಕೋಟಿ ಆಗಿದೆ, ಆದರೆ ಸದಸ್ಯರು 400 ಕೋಟಿ ಅವ್ಯವಹಾರ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ ಎಂದು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ನಾನು ಲಘುವಾಗಿ ಮಾತನಾಡತಕ್ಕಂಥ ಅಭ್ಯಾಸವನ್ನು ಮಾಡಿಕೊಂಡಿಲ್ಲ. ನನಗೆ ಇರತಕ್ಕಂಥಾದ್ದು ಒಂದೇ ನಾಲಿಗೆ. I will throw a challenge. ನಾನು ಮೊದಲೇ ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಿಸಿ ಎಂದು ಹೇಳಿದ್ದೆ. ಇದರಲ್ಲಿ 400 ಕೋಟಿ ಅವ್ಯವಹಾರವಾಗಿಲ್ಲ.... ನನಗೆ ರಾಜ್ಯದ ಹಿತಕ್ಕಿಂತ ನನ್ನ ವೈಯ್ಯಕ್ತಿಕ ಹಿತವು ಮುಖ್ಯ ಅಲ್ಲ. 1989 ರಲ್ಲಿ ಈ

ವಿಧಾನಸೌಧಕ್ಕೆ ಬರುವಾಗ ಪ್ರತಿಯೊಂದು ಮೆಟ್ಟಲನ್ನು ಹತ್ತುವಾಗ ನಮಸ್ಕಾರ ಮಾಡಿಕೊಂಡು ಬಂದಿದ್ದೇನೆ. ಆದರೆ ಇವೊತ್ತು ವಿಧಾನಸೌಧದ ಮೂರನೇ ಮಹಡಿಯಿಂದ ಎಂಥ ಸಂದೇಶಗಳು ಹೋಗುತ್ತಿವೆ? ಮುಖ್ಯಮಂತ್ರಿಗಳವರ ಕಛೇರಿಗೆ ಈ ಫೈಲ್ ಬಂದು ಎಷ್ಟು ದಿವಸಗಳು ಆಯಿತು? ಎಷ್ಟು ದಿವಸಗಳಿಂದ ಇದು ಪೆಂಡಿಂಗ್‌ನಲ್ಲಿದೆ? ಏಕೆ ಹೀಗೆ ಆಗಿದೆ? ಏಕೆ ಇದನ್ನು ಇಟ್ಟುಕೊಂಡಿದ್ದಾರೆ? ನಾವು ಅದನ್ನು ಕೇಳಬಾರದೇ? ಇವೊತ್ತು ಇಂಥ ಬೋಗಸ್ ದಂಧೆಯನ್ನು ಪಾಯಿಂಟ್‌ಗಳನ್ನು ಮಾಡತಕ್ಕಂಥ ಹೋಲ್‌ಸೇಲ್ ಅವರ ಲೈಸನ್ಸ್‌ಗಳನ್ನು ಅಮಾನತ್ತು ಮಾಡಿದರೆ, ಆ ಲೈಸನ್ಸ್ ಅಮಾನತ್ತಿನ ವಿರುದ್ಧ ಕಮಿಷನರ್‌ಗೆ ಅರ್ಜಿ ಹಾಕುತ್ತಾರೆ. ಯಾವೊತ್ತು? 10.7.97 ರಲ್ಲಿ ಆ ಅಮಾನತ್ತು ಆದೇಶವನ್ನು ರದ್ದು ಮಾಡಬೇಕೆಂದು ಅರ್ಜಿ ಹಾಕುತ್ತಾರೆ. ಅವೊತ್ತು ಕಮೀಷನರ್ ಮಹಾಶಯರು ಯಾರಿದ್ದರು ಎಂಬುದು ನನಗೆ ಗೊತ್ತಿಲ್ಲ. ಅದೇ ದಿವಸ ಆ ಅಮಾನತ್ತು ಆದೇಶವನ್ನು ರದ್ದು ಮಾಡಿ ಎಂದು ಲೈಸನ್ಸ್‌ನ್ನು ರಿನ್ಯೂ ಮಾಡಿ ಎಂದು ಹೇಳುತ್ತಾರೆ. ಅಂದರೆ ಎಷ್ಟುಮಟ್ಟಿಗೆ ಮಿಂಚಿನ ವೇಗದಲ್ಲಿ ಕೆಲಸವಾಗಿದೆ ಎಂಬುದನ್ನು ನೋಡಿ. ಯಾವ ಯಾವ ಹೋಲ್‌ಸೇಲ್ ಪಾಯಿಂಟ್‌ಗಳನ್ನು ಈ ತರಹ ಬೋಗಸ್ ಇನ್ವಾಯಿಸ್‌ಗಳ ಮೂಲಕ ದಂದೆ ನಡೆಸಿದ್ದಾರೆ ಎಂದು ನಿಮ್ಮ ಇಲಾಖೆಯವರು 1996ರಲ್ಲಿ ಗುರುತು ಮಾಡಿದ್ದಾರಲ್ಲಾ? ಅದೇ ಅಂಗಡಿಗಳನ್ನು ಅದೇ ರಸೀತಿಗಳನ್ನು ಬೋಗಸ್ ಇಷ್ಯೂ ಮಾಡಿ ವ್ಯವಹಾರಗಳನ್ನು ನಡೆಸಿದ್ದಾರೆ. ಇನ್ವಾಯ್ಸ್‌ಗಳ ಮೂಲಕ ಇಂಥ ಬೋಗಸ್ ವ್ಯವಹಾರವನ್ನು ನಡೆಸಿದ್ದಾರಲ್ಲ? ಇಂಥ ಎಷ್ಟು ಅಂಗಡಿಗಳನ್ನು ನೀವು ರದ್ದು ಮಾಡಿದ್ದೀರಿ? ಇಂಥ ಪ್ರಕರಣಗಳ ವಿಲೇಯನ್ನು ನೀವು ತಡೆಹಿಡಿದಿದ್ದೀರಿ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ಹೋಗಲಿಲ್ಲ. ಯಾಕೆ? ಮಾನ್ಯ ಅಧ್ಯಕ್ಷರೇ, ನನಗೆ ಈ ವಿಚಾರವನ್ನು ಪ್ರಸ್ತಾಪಿಸುವುದಕ್ಕೆ ಹೊಟ್ಟೆ ಉರಿಯುತ್ತಾ ಇದೆ. ಮಾನ್ಯ ಅಧ್ಯಕ್ಷರು ಆಗ ಇರಲಿಲ್ಲ, ನಾವು ಬಡವರು ಉಪಯೋಗಿಸುವ ಬೆಂಕಿಪೊಟ್ಟಣದ ಮೇಲೆ ತೆರಿಗೆಯನ್ನು ಹಾಕುತ್ತೇವೆ. ಯಾರು ಗುಡಿಸಲುಗಳಲ್ಲಿ ಸೀಮೆ ಎಣ್ಣೆ ಬುಡ್ಡಿ ಉರಿಸಿಕೊಂಡು ಜೀವನ ಮಾಡುತ್ತಾರೆ. ಆ ಸೀಮೆ ಎಣ್ಣೆಯ ಮೇಲೆ ನಾವು ತೆರಿಗೆ ಹಾಕುತ್ತೇವೆ. ಆದರೆ ಇಂಥ ಅವ್ಯವಹಾರ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಲು 2-3 ವರ್ಷಗಳು ಬೇಕಾಯಿತು? ಬೋಗಸ್ ಇನ್‌ವಾಯ್ಸ್‌ಗಳ ಮೇಲೆ ದಂಧೆ ಮಾಡುತ್ತಿದ್ದಾರಲ್ಲಾ? ಅವರ ಮೇಲೆ ಕ್ರಮ ತೆಗೆದುಕೊಳ್ಳಲು ನಿಮಗೆ ಮೂರು ವರ್ಷಗಳು ಬೇಕಾಯಿತೇ? ಅದೂ ಆಗದೇ ಇನ್ನೂ ಪೆಂಡಿಂಗ್ ಇಟ್ಟುಕೊಂಡಿದ್ದೀರಲ್ಲವೇ? ನೀವು ಎಷ್ಟು ಜನ ಹೋಲ್‌ಸೇಲ್ ಡೀಲರ್ಸ್ ಮೇಲೆ ಕ್ರಮ ತೆಗೆದುಕೊಂಡಿದ್ದಿರಿ? ಎಷ್ಟು ಜನರ ಲೈಸನ್ಸ್‌ನ್ನು ಸ್ಟಾಪ್ ಮಾಡಿದ್ದೀರಿ? ಯಾಕೆ ಮಾಡಿಲ್ಲ? ಕಾರಣ ಏನು? ಆದ್ದರಿಂದ ನಾನು ಇದರಲ್ಲಿ ಸರಕಾರ ಶಾಮೀಲಾಗಿದೆ ಎಂದು ಹೇಳಬಾರದೇ? ನೈತಿಕತೆ ನಿಮ್ಮಲ್ಲಿ ಇದ್ದರೆ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡಿ ಎಂದು ಕೇಳಬಾರದೇ? ನಿಮ್ಮಲ್ಲಿ ನೈತಿಕತೆ ಇಲ್ಲ ಎಂದು ನಮಗೆ ಗೊತ್ತಿದೆ. ಈ 400 ಕೋಟಿ ರೂಪಾಯಿಗಳ ಹಗರಣಕ್ಕೆ ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಿ ಎಂದು ಕೇಳಿದ್ದೆ. ಇಲ್ಲಿ ಯಾವ ಪಕ್ಷ, ಯಾವ ರಾಜಕೀಯವೂ ಬೇಡ. ನಮಗೆಲ್ಲರಿಗೂ ರಾಜ್ಯ ಹಿತವು ಮುಖ್ಯವಾದುದು. ತನಿಖೆ ಮಾಡಿಸಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ನಾವು ರಾಜ್ಯದ ಬಜೆಟ್‌ನಲ್ಲಿ ಎಷ್ಟು ಕೊರತೆಯನ್ನು ತೋರಿಸುತ್ತಾ ಇದ್ದೇವೆ? ನಮ್ಮಲ್ಲಿ ಎಷ್ಟು ತೆರಿಗೆಗಳು ಸೋರಿ ಹೋಗುತ್ತಾ ಇದೆ? ಆದ್ದರಿಂದ ತಾವುಗಳೆಲ್ಲರೂ ಕೂಡ ಈ ವಿಚಾರಕ್ಕೆ ಬೆಂಬಲ ಕೊಡಿ. ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಲು ಸರಕಾರದವರು ಮುಂದಾಗಬೇಕೆನ್ನುವ ಮಾತನ್ನು ನಾನು ಮತ್ತೊಮ್ಮೆ ಅತ್ಯಂತ ಕಳಕಳಿಯಿಂದ ಸಭಾಧ್ಯಕ್ಷರ ಮೂಲಕ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವೊತ್ತು ಇಷ್ಟೊಂದು ದೊಡ್ಡ ಹಗರಣ ಬೆಂಗಳೂರು ಜಿಲ್ಲೆಯಲ್ಲಾಯಿತು. ಬೇರೆ ಜಿಲ್ಲೆಗಳ ಸೂಕ್ತ ಮಾಹಿತಿ ಈಗ ನನ್ನಲ್ಲಿಲ್ಲ. ಇದಕ್ಕೆ ಮಿಂಚಿನ ವೇಗದಲ್ಲಿ ಈ ರೀತಿಯ ಕಾರ್ಯಾಚರಣೆಯಾಗ ಬೇಕಾಗಿತ್ತು. ನೀವು ತರಿಸುತ್ತೇವೆ. ಆದೇಶ ಮಾಡಿದ್ದೇವೆ

ಎಂದು ಅಲ್ಲ. ಒಂದು ವಾರದಲ್ಲಿ 10- 15 ದಿವಸಗಳಲ್ಲಿ ಮಿಂಚಿನ ವೇಗದಲ್ಲಿ ಎಲ್ಲಾ ಕಡೆಗಳಲ್ಲಿ ರೈಡ್ ಮಾಡಿಸಿ, ಈ ತರಹ ಬೋಗಸ್ ಇನ್‌ವಾಯ್ಸ್‌ಗಳ ಮೂಲಕ, ನಕಲಿ ಇನ್‌ವಾಯ್ಸ್‌ಗಳ ಮೂಲಕ, ಕೃತಕ ಇನ್‌ವಾಯ್ಸ್‌ಗಳ ಮೂಲಕ, ಎಲ್ಲೆಲ್ಲಿ ದಂಧೆ ನಡೆದಿದೆ ಅದನ್ನು ತರಿಸಿಕೊಳ್ಳ ಬೇಕಾಗಿತ್ತು. ಹೀಗೆ ನೀವು ಅವರಿಗೆ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟರೆ ಅವರು ಮುಚ್ಚಿಹಾಕಿಕೊಳ್ಳುತ್ತಾರೆ. ಹೀಗೆ ನೀವೇ ಮುಚ್ಚಿ ಹಾಕಿಕೊಳ್ಳಲು ಅವಕಾಶ ಮಾಡಿಕೊಟ್ಟ ಹಾಗೆ ಆಯಿತು. ಹಾಗಾದರೆ ನಿಮ್ಮ ಅಧಿಕಾರಿಗಳು ಶಾಮೀಲಾಗಿಲ್ಲವೇ? ನಿಮ್ಮ ಇಂಟಲಿಜೆನ್ಸ್ ಸ್ಕ್ವಾಡ್‌ಗಳು ಏನು ಮಾಡುತ್ತಿವೆ? ನಿಮ್ಮ ಎನ್‌ಫೋರ್ಸ್‌ಮೆಂಟ್ ವಿಂಗ್ ಏನು ಮಾಡುತ್ತಿತ್ತು? ಅವರೇನು ಕತ್ತೆ ಕಾಯುತ್ತಾ ಇದ್ದರೆ? ಬೆಂಗಳೂರಿನಲ್ಲಿ ಯಾರೋ 7-8 ಜನರು ಸಿಕ್ಕಿದರು ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ. ಹಾಗಾದರೆ ಇಂಥ ಅವ್ಯವಹಾರ ಬೇರೆ ಯಾವ ಜಿಲ್ಲೆಗಳಲ್ಲಿಯೂ ಆಗಿಲ್ಲವೇ? ಅವರ ಮೇಲೆ ಏಕೆ ಕ್ರಮವನ್ನುತೆಗೆದುಕೊಂಡಿಲ್ಲ? ನಾನು ಅದಕ್ಕೇ ಹೇಳುತ್ತಿದ್ದೇನೆ. ಈ ಒಂದು ದಂಧೆಯಲ್ಲಿ ಸರಕಾರ ಶಾಮೀಲಾಗಿದೆ. ಈ ಆರೋಪವನ್ನು ನಾನು ನೇರವಾಗಿ ಮಾಡುತ್ತಿದ್ದೇನೆ. ನಾನು ನನ್ನ ಜವಾಬ್ದಾರಿಕೆ ಮತ್ತು ಹೊಣೆಗಾರಿಕೆಯನ್ನು ಅರಿತುಕೊಂಡೇ ಆರೋಪವನ್ನು ಮಾಡುತ್ತಿದ್ದೇನೆ. ನಾನು ಇದರಿಂದ ಓಡಿ ಹೋಗುವುದಕ್ಕೆ ಸಿದ್ಧನಿಲ್ಲ. ನಾನು ಬೇಕಾದರೆ ಇದನ್ನು ಸಾಬೀತು ಮಾಡುತ್ತೇನೆ. ಸರಕಾರಕ್ಕೆ ನಾನು ಮೊದಲೇ ಹೇಳಿದ ಹಾಗೆ ನೈತಿಕತೆ ಇದ್ದರೆ ರಾಜೀನಾಮೆ ಕೊಡಬೇಕು. ಇಲ್ಲವಾದರೆ ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಲು ದಯಮಾಡಿ ಸರಕಾರವು ಮುಂದೆ ಬರಬೇಕು. ಮಾನ್ಯ ಸಭಾಧ್ಯಕ್ಷರು ದಯಮಾಡಿ ಸರಕಾರಕ್ಕೆ ಈ ಬಗ್ಗೆ ನಿರ್ದೇಶನವನ್ನು ಕೊಡಬೇಕು, ರಾಜ್ಯದ ಹಿತದೃಷ್ಟಿಯಿಂದ ಇದೊಂದು ದೊಡ್ಡ ಹಗರಣ. ಇತ್ತೀಚಿನ ವರ್ಷಗಳಲ್ಲಿನ ಒಂದು ದೊಡ್ಡ ಹಗರಣ. ದಯಮಾಡಿ ಸರಕಾರಕ್ಕೆ ತಾವು ಕಿವಿ ಹಿಂಡಿ ನಿರ್ದೇಶನವನ್ನು ನೀಡಿ ಒಂದು ಉನ್ನತ ಮಟ್ಟದ ತನಿಖೆಯನ್ನು ಆದಷ್ಟು ಬೇಗ ಮಾಡಲು ವ್ಯವಸ್ಥೆ ಮಾಡಬೇಕು. ಯಾಕೆಂದರೆ ಮುಂದಾದರೂ ಕೂಡ ಇಂಥ ಅಕೃತ್ಯಗಳು ನಡೆಯದ ಹಾಗೆ ಒಂದು ಫುಲ್‌ಸ್ಟಾಪ್ ಹಾಕೋಣ. ದಯಮಾಡಿ ಈ ತನಿಖೆ ಮಾಡಲು ಸರಕಾರವು ಮುಂದೆ ಬರಬೇಕೆಂದು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, 16 ಕೋಟಿ, ರೂ.ಗಳ ಹಗರಣ ಎಂದು ಅವರೇ ಒಪ್ಪಿಕೊಳ್ಳುತ್ತಿದ್ದಾರೆ. ಅದರಲ್ಲಿ ಕೇವಲ 66 ಲಕ್ಷ ರೂ.ಗಳು ರಿಕವರಿಯಾಗಿದೆ ಎಂದು ಹೇಳುತ್ತಾರೆ. ಹಾಗಾದರೆ ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ ಎಂದು ಅವರೇ ಹೇಳಿದ ಹಾಗೆ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಅವರು ಓಪನ್ನಿ ಚಾಲೆಂಜ್ ಮಾಡುತ್ತಾ ಇದ್ದಾರೆ. ಮತ್ತು ಅನೇಕ ಸಾರಿ ಸದನದಲ್ಲಿ ಬೇರೆ ರೀತಿಯಾಗಿ ಪ್ರಸ್ತಾಪವಾಗಿದೆ. ಯಾವ ರೀತಿಯಾಗಿ ಎಕ್ಸೈಸ್ ಡ್ಯೂಟಿ ಸೋರುತ್ತಾ ಇದೆ ಎಂಬ ಬಗ್ಗೆ ಪದೇ ಪದೇ ಪ್ರಸ್ತಾಪವನ್ನು ಮಾಡಿದ್ದೇವೆ ಮತ್ತು ಸುಮಾರು 750 ಕೋಟಿ ರೂಪಾಯಿಗಳು ಹೇಗೆ ಹೋಗುತ್ತಾ ಇದೆ ಎನ್ನುವುದರ ಬಗ್ಗೆ ಸಾಕಷ್ಟು ಸಾರಿ ಸದನದಲ್ಲಿ ಪ್ರಸ್ತಾಪ ಮಾಡಿ ಸುಪ್ರೀಂ ಕೋರ್ಟ್ ಆರ್ಡರ್ ಹಿಡಿದುಕೊಂಡು ಎಲ್ಲವೂ ಬಂದಿದೆ. ಇಲ್ಲಿ ಅವರು ನೇರವಾಗಿ ನಿಮ್ಮ ಮುಂದೆ ನಿರ್ದಿಷ್ಟವಾದ ಉದಾಹರಣೆಗಳನ್ನು ಕೊಟ್ಟು, 400 ಕೋಟಿ ರೂ.ಗಳು ಇದರಲ್ಲಿ ಸೋರಿಕೆಯಾಗಿದೆ, ಅದನ್ನು ನಾನು ಸಾಬೀತು ಪಡಿಸದೇ ಹೋದರೆ ಈ ಸದನಕ್ಕೆ ಬರುವುದಿಲ್ಲ ಎಂಬ ಚಾಲೆಂಜ್ ಕೂಡ ಕೊಟ್ಟಿದ್ದಾರೆ. ಅದಕ್ಕೆ ಇವೊತ್ತು ಒಂದು ಉನ್ನತವಾದ ಇನ್‌ಕ್ವೈರಿ ಕಮಿಟಿಯನ್ನು ನೇಮಿಸಬೇಕು, ಇಲ್ಲವಾದರೆ ಇದು ನಮ್ಮ ಕೈಯಲ್ಲಿ ಆಗುವುದಿಲ್ಲ. ನಾವು ಬಿಟ್ಟು ಹೋಗುತ್ತೇವೆ ಎಂದಾದರೂ ಹೇಳಬೇಕು. ನೀವು ಆಗಲೇ ಹೇಳಿದ್ದೀರಿ, ನಾವು ರಾಜಿನಾಮೆ

ಕೊಡುವುದಿಲ್ಲ, ಎಂದು. ಮಾನ್ಯ ಮುಖ್ಯಮಂತ್ರಿಯವರೂ ಕೂಡ ಯಾರೇ ಏನೇ ಹೇಳಿದರೂ ಕೂಡ ನಮ್ಮ ಜಾಗ ಖಾಲಿ ಮಾಡುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ.ಸಿ ನಾಣಯ್ಯ : ಒಂದು ವೇಳೆ ನೀವೇ ಇದ್ದರೆ ಬಿಡುತ್ತಿದ್ದೀರೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ನಿಮಗೆ ಇದು ಸವಾಲಾಗಿದೆ. 400 ಕೋಟಿ ರೂಪಾಯಿ ಅದರಲ್ಲಿ ಉದುರಿ ಹೋಗಿದೆ. ಇದೊಂದೇ ಅಲ್ಲ. ತಪ್ಪು ಕಲ್ಪನೆ ಕೂಡ ಆಗಬಾರದು. ಯಾವ ರೀತಿಯಾಗಿ ಸೋರಿಕೆಯಾಗುತ್ತಿದೆ ಎನ್ನುವುದನ್ನು ಅವರು ಬಿಡಿಸಿ ಬಿಡಿಸಿ ಹೇಳಿದ್ದಾರೆ. ವಿಚಾರಣೆಯಾಗುವುದಕ್ಕೆ ನಿಮಗೆ ಅದು ಸ್ಟ್ರೆಂಗ್ತನ್ ಆಗಲೀ ಎಂಬ ದೃಷ್ಟಿಯಿಂದ ಇನ್ನೊಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಅಂದಾಜಿನ ಪ್ರಕಾರ 6 ಲಕ್ಷ ಕೇಸುಗಳು ಸೆಕೆಂಡಿನಲ್ಲಿ ಹೋಗುತ್ತವೆಂದು ಇದೆ. ಆ ಆರು ಲಕ್ಷ ಕೇಸುಗಳಲ್ಲಿ 1- 1 ಕೇಸಿನಲ್ಲಿ 9 ಲೀಟರ್ ಕ್ವಾಂಟಿಟಿ ಇರುತ್ತದೆ. ಇಂತಹ ಒಂದು ಕೇಸನ್ನು ಲೆಕ್ಕಕ್ಕೆ ತೆಗೆದುಕೊಂಡು 6 ಲಕ್ಷ ಕೇಸುಗಳನ್ನು ಲೆಕ್ಕ ಹಾಕಿ. ಒಂದೇ ಒಂದು ಉದಾಹರಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಸುಮಾರು 1 ಕೇಸಿನ ಬಿಲ್ 225 ರೂಪಾಯಿ 50 ಕೇಸಿನ ಬಿಲ್ ಅಂದರೆ 11250. ರೂಪಾಯಿಯಾಗುತ್ತದೆ ಇವರ ಅಬಕಾರಿ ಶುಲ್ಕ 17 ರಂತೆ ಅಂದರೆ 19440 ರೂಪಾಯಿ ಒಟ್ಟು 30690 ರೂಪಾಯಿ ಆಗುತ್ತದೆ. ಇದರ ಮೇಲೆ ಮಾರಾಟ ತೆರಿಗೆ ಕೆ. ಎಸ್ ಟಿಸಿ 50 ರೂಪಾಯಿಯಂತೆ ಇದು ಎರಡೂ ಸೇರಿದರೆ 2301 ರೂಪಾಯಿ ಇತರೇ 792 ರೂಪಾಯಿ ಒಟ್ಟು 42, 129 ರೂಪಾಯಿಯಾಗುತ್ತದೆ. ಇದು 30 ಕೇಸಿಗೆ ಹಾಕತಕ್ಕಂಥಾದ್ದು. ಹೊರಗೆ ಸಿಗತಕ್ಕಂಥಾದ್ದು ಅಥವಾ ಹೋಲ್‌ಸೇಲ್ ಅಥವಾ ಕಲ್ಯೂಟ್ ಆಗಿ ಏನು ಡಿಸ್ಟಿಲರೀಸ್‌ಗಳು ಮಾಡುತ್ತಾರೆ. ಅದರಲ್ಲಿ ಸಿಗತಕ್ಕಂಥಾದ್ದು 11250 ರೂಪಾಯಿ ಅಂದರೆ ಹೆಚ್ಚು ಕಡಿಮೆ 37, 878 ರೂಪಾಯಿ ಈ 30 ಕೇಸಿಗೆ ಲೋಪವಾಗುತ್ತದೆ. ಈ ದೃಷ್ಟಿಯಿಂದ ಲೆಕ್ಕ ಹಾಕಿದರೆ 750 ಕೋಟಿ ರೂಪಾಯಿ ಇದರಿಂದ ಸೋರಿ ಹೋಗುತ್ತಿದೆ. ನಿಮ್ಮಲ್ಲಿ 4 ಲಕ್ಷ ಕನ್ಸೂಮ್ ಆಗುತ್ತದೆಂದು ತಿಳಿಯಿರಿ. ನಾವು ಹೇಳತಕ್ಕಂಥಾದ್ದನ್ನು ಬಿಟ್ಟು ಬಿಡಿ. ಇದನ್ನು ಎಲ್ಲಾ ಸಾರಾಂಶವನ್ನು ತೆಗೆದುಕೊಂಡರೆ ಕೋಟ್ಯಾಂತರ ರೂಪಾಯಿ ಅದರಲ್ಲಿ ಹೋಗುತ್ತದೆ. ವಿಚಾರಣೆಯಾಗತಕ್ಕಂಥ ಬೇರೆ ವಿಚಾರ ಅದನ್ನು ನಂತರ ನಾನು ಪ್ರಸ್ತಾಪ ಮಾಡುತ್ತೇನೆ. ಇವತ್ತು ನೇರವಾಗಿ ಬೋಗಸ್ ಲೇಬಲ್ ಅನ್ನು ಪ್ರಿಂಟ್ ಮಾಡಿಕೊಂಡು ಯಾವ ರೀತಿಯಾಗಿ ಹೋಲ್‌ಸೇಲ್‌ನವರೇ 400 ಕೋಟಿ ರೂಪಾಯಿಗಳ ಸರಕಾರಕ್ಕೆ ವಂಚನೆ ಮಾಡಿದ್ದಾರೆ, ಇದರ ಬಗ್ಗೆ ಇಂದು ತನಿಖೆಯಾಗಲಿ. ಉಳಿದುದನ್ನು ತಾವು ಒಪ್ಪುವುದಿಲ್ಲ. ಮಾನ್ಯ ರಾಮಸ್ವಾಮಿಯವರು ತಂದಂತಹ ಉದಾಹರಣೆಯನ್ನಾದರೂ ಒಪ್ಪಿಕೊಂಡು ವಿಚಾರಣೆ ಮಾಡಬೇಕು. ಇಲ್ಲದಿದ್ದರೆ ನಾವು ಪ್ರಸ್ತಾಪ ಮಾಡಿದ್ದರ ಲಾಭವಾದರೂ ಏನು? ಅನೇಕ ಸಲ ಇಲ್ಲಿ ಧರಣ ಮಾಡಿದ್ದು ವಾಕೌಟ್ ಮಾಡಿ ಆಯಿತು. ಇವರಿಗೇನು ಹಿಡಿದುಕೊಮಡು ಹೊಡೆಯುವುದಕ್ಕಾಗುತ್ತದೆಯೇ? ಇದಕ್ಕೇನಾದರೂ ಬೇಕಲ್ಲವೇ? ಪರಿಹಾರ ಇದಕ್ಕೆ ಎಲ್ಲಿ ನಾವು ಹುಡುಕಬೇಕು? ತಪ್ಪು ಇದೆ ಎಂದು ನಿಮ್ಮ ಗಮನಕ್ಕೆ ಬಂದ ಮೇಲೂ ಅದರ ಬಗ್ಗೆ ವಿಚಾರಣೆ ಮಾಡುವುದಿಲ್ಲ. ಯಾವ ಅಧಿಕಾರಿ ತಪ್ಪು ಮಾಡಿದ್ದಾನೆ ಆ ಕಡತದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಅದು ಮಾನ್ಯ ಮುಖ್ಯ ಮಂತ್ರಿಯವರ ಕಛೇರಿಯಲ್ಲಿ ವರ್ಷಾನುಗಟ್ಟಲೆಯಿಂದ ಧೂಳು ತಿನ್ನುತ್ತಾ ಬಿದ್ದಿದೆ. ನಾವು ಏನು ಮಾಡುವುದು ಯಾರಿಗೆ ಇದನ್ನು ಹೇಳಬೇಕು? ಏಕೆ ಅಲ್ಲಿ ಕಡತ ಉಳಿಯಿತು ಏಕೆ ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ? ಮುಂದೆ ಇದರ ಬಗ್ಗೆ ಏನು ಕ್ರಮ ಜರುಗಿಸುತ್ತೀರಿ? ಅವರು ವಿಚಾರಣೆಗೆ ರಿಮ್ಯಾಂಡ್ ಮಾಡಿದ್ದಾರೆ. ತಾವು ಸ್ಪಷ್ಟವಾಗಿ ಇದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ (ಚಾಮರಾಜನಗರ) : ಮಾನ್ಯ ರಾಮಸ್ವಾಮಿಯವರು ಹೇಳಿರತಕ್ಕಂತಹ ಅಂಕಿ ಸಂಖ್ಯೆಗಳ ಬಗ್ಗೆ ಅವರು ಸಾರಾಸಗಟಾಗಿ ತಳ್ಳಿಹಾಕಲಿಲ್ಲ. ಜಾಸ್ತಿ ಹೇಳಿದ್ದೀರಿ ಆದರೆ ನಡೆಯತಕ್ಕಂಥಾದ್ದು ಕಡಿಮೆ ಎಂದು ಹೇಳಿ ನಡೆಯತಕ್ಕಂತಾದ್ದು ಸತ್ಯ ಎಂದು ಹೇಳಿ ಅದನ್ನು ಸರಕಾರ ಒಪ್ಪಿಕೊಳ್ಳುತ್ತಿದೆ. ಈ ಸರಕಾರದ ಹಿತದೃಷ್ಟಿಯಿಂದ ಒಂದು ತನಿಖಾ ಆಯೋಗವನ್ನು ರಚನೆ ಮಾಡುವುದರಲ್ಲಿ ಕ್ರಮ ಕೈಗೊಳ್ಳಬೇಕು. ನೀವೆಲ್ಲ ಅಲ್ಲಿ ಕೋಟಾ ಲೇಬರ್ ಪ್ರಿಂಟ್ ಆಗುತ್ತಿದೆ ಅನ್ಯಾಯ ನಡೆಯುತ್ತಿದೆ ಎಂದು ಹೇಳಿದ್ದೀರಿ. ಅಲ್ಲಿ ಎಕ್ಸೈಸ್ ಸೂಪರಿಟೆಂಡೆಂಟ್ ಯಾರಿದ್ದಾರೆ ಅವರು ಮಾಲೀಕರ ಒಂದು ಭಾಗವೇ ಆಗಿದ್ದಾರೆ. ಇದರ ಬಗ್ಗೆ ಎರಡನೇ ಅಭಿಪ್ರಾಯ ಇಲ್ಲ. ಆ ಡಿಸ್ಟಿಲರಿಯಲ್ಲಿ ಎಕ್ಸೈಸ್ ಸೂಪರಿಟೆಂಡೆಂಟ್ ಎಂದು ಬೋರ್ಡ್ ಇರುವುದು ಎಲ್ಲಾ ಬೋಗಸ್ ಅವರು ಮಾಲೀಕರ ಒಂದು ಭಾಗ. ಎಷ್ಟು ಎಲ್ಲಿ ಹೋಗುತ್ತದೆಂದು ಅವರಿಗೆ ಗೊತ್ತೇ ಆಗುವುದಿಲ್ಲ. ತಿಂಗಳಿಗೆ ಇಂತಿಷ್ಟು ಎಂದು ಕೊಡುತ್ತಾರೆ ಬೇರೆ ಮಾತಿಲ್ಲ. ಇಷ್ಟು ಹೋದರೆ ನಿಮಗೆ ಇಷ್ಟು ಎಂದು ಗಂಭೀರವಾಗಿ ಇರಿ ನೀವೇನೂ ಮಾತನಾಡಬೇಡಿ ಎಂದು ಹೇಳುತ್ತಾರೆ. ಒಂದು ರೀತಿಯಲ್ಲಿ ಹಗಲು ದರೋಡೆಯಾಗುತ್ತದೆ. ಮಾನ್ಯ ಖರ್ಗೆಯವರು ಮಾನ್ಯ ರಾಮಸ್ವಾಮಿಯವರು ಒಂದೊಂದು ಅಂಕಿ ಅಂಶವನ್ನು ಹೇಳುತ್ತಿದ್ದಾರೆ. ನನ್ನ ಪ್ರಕಾರ ಬೆಂಗಳೂರು ಒಂದರಲ್ಲೇ ಎರಡೂವರೆ ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಹೀಗಿರುವಾಗ 20 ಜಿಲ್ಲೆಯಲ್ಲಿ ಎಷ್ಟು ಇದೆ ಎಂಬುದನ್ನು ವಿಚಾರ ಮಾಡಿ. ಒಂದು ಸವಾಲನ್ನು ಅವರು ಒಡ್ಡಿ ಇದು ಪ್ರಾಮಾಣಿಕವಾದುದು ಎಂದು ಹೇಳಿದ್ದಾರೆ. ಚುನಾವಣಾ ಸಂದರ್ಭದಲ್ಲಿ ಆ ಡಿಸ್ಟಿಲರೀಸ್‌ಗಳಲ್ಲಿ ತಯಾರಾದಂತಹ ಮದ್ಯ ಎಷ್ಟು ವಿಚಾರ ಮಾಡಿ. 62 ರಲ್ಲಿ 54 ಡಿಸ್ಟಿಲರೀಸ್‌ಗಳು ರಾಜ್ಯದಲ್ಲಿ ನಡೆಯುತ್ತಿವೆ. ಈ 54 ಡಿಸ್ಟಿಲರೀಸ್‌ಗಳಲ್ಲಿ ತಯಾರಾದಂತಹ ಮದ್ಯ ಯಾವ ರೀತಿಯಲ್ಲಿ ಹಂಚಿಕೆಯಾಯಿತು? ಇದು ತಯಾರಾಗಬೇಕಾದರೆ ಒಂದೊಂದು ಡಿಸ್ಟಿಲರೀಸ್‌ಗಳಲ್ಲಿ ಇಷ್ಟು ಆಗಬೇಕೆಂದು ಇದೆ. ಅಲ್ಲಿ ಒಳ್ಳೆಯ ಮದ್ಯ ತಯಾರಾಯಿತೇ ಎಂಬುದನ್ನು ನೋಡಬೇಕಾಗುತ್ತದೆ. ಅದನ್ನು ಕಡೆ ಕುಡಿದು ಸತ್ತಿರತಕ್ಕಂತಹ ನಿದರ್ಶನ ಎಲ್ಲರಿಗೂ ತಿಳಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಯಮ 69ರ ಕೆಳಗೆ ಏನು ಚರ್ಚೆಗೆ ಬಂದಿದೆ ಅದರ ಬಗ್ಗೆ ಮಾತನಾಡಿ. ನಂತರ ನಕಲಿಗಳು ಅಸಲಿಗಳು ಕುಡಿದು ಸತ್ತರೋ ಬದುಕಿದರೋ ನೋಡೋಣ. ಅವರೇನು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಸರಕಾರದ ನಿಲುವು ಏನು ಎಂಬುದನ್ನು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಗೇ ಬರೋಣ. ಅವರೇನು ಹೇಳಿದ್ದಾರೆ. ಆ ನಿಲುವನ್ನೇ ನಾನೂ ಸ್ಪಷ್ಟಪಡಿಸುತ್ತೇನೆ. ಅದಕ್ಕೆ ನಾನು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತೇನೆ. ಅತ್ತಿತ್ತ ಒಂದಿಂಚೂ ಹೋಗುವುದಿಲ್ಲ. 400 ಕೋಟಿ ಎಂದು ಏನು ಹೇಳಿದ್ದಾರೆ ಅದನ್ನು ತಾವೇನು ಸಾರಾಸಗಟಾಗಿ ತಳ್ಳಿ ಹಾಕಿಲ್ಲ. ಒಂದು ಹಂತದಲ್ಲಿ ಕೆಲವು ವಿಚಾರಗಳನ್ನು ಒಪ್ಪಿದ್ದು ಅಧಿಕಾರಿಗಳು ತಪ್ಪು ಮಾಡಿದ್ದಾರೆನ್ನುವುದಕ್ಕೂ ಒಪ್ಪಿದ್ದೀರಿ. ಸ್ವಲ್ಪ ಅಂಕಿ ಸಂಖ್ಯೆ ಹೆಚ್ಚು ಕಡಿಮೆಯಾಗಿರಬಹುದು. ಆದ್ದರಿಂದ ತನಿಖೆಗೆ ಏಕೆ ಹಿಂದೇಟು ಹಾಕುತ್ತಿದ್ದೀರಿ. ನೇರವಾಗಿ ತನಿಖೆಗೆ ಜವಾಬ್ದಾರಿಯಿಂದ ಒಪ್ಪಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಅಧ್ಯಕ್ಷರು : ಯಾರು ಕುಡಿಯುತ್ತಾರೋ ಅವರು ಮಾತನಾಡಲಿ. ಕುಡಿಯದೇ ಇರುವವರೆಲ್ಲಾ ಏಕೆ ಮಾತನಾಡುತ್ತಾರೆಂಬುದು ಅವರ ಅಬ್ಜೆಕ್ಷನ್ಸ್. ನಿಮ್ಮದು ಸೀಕ್ರೇಟಾಗಿ ಇದೆ ಬಿಡಿ ಯಾರಿಗೂ ಗೊತ್ತಿಲ್ಲ.

(ಮುಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಕುಡಿಯುವವರು ಮಾತ್ರ ಮಾತನಾಡಬೇಕು ಬೇರೆಯವರು ಮಾತನಾಡಬಾರದೆಂದು ಹೇಳಿದರೆ ಅದಕ್ಕೆ ನನ್ನದು ವಿರೋಧ ಇದೆ.

ಶ್ರೀ ವಾಟಾಳ್ ನಾಗರಾಜ್ :- ಕುಡಿಯದೇ ಇರುವವರು ಮಾತನಾಡಲಿ. ಕುಡಿಯುವವರು ಮಾತನಾಡಲಿ ಎಂದು ಹೇಳಿದರೆ, ಮಾನ್ಯ ರಾಮಸ್ವಾಮಿಯವರೂ ಕುಡಿಯುವುದಿಲ್ಲ. ಸುರೇಶ್ ಕುಮಾರ್ ಅವರು ಕುಡಿಯುವುದಿಲ್ಲ ನಾನಂತೂ ಕುಡಿಯುವುದೇ ಇಲ್ಲ ಎಂಬುದು ತಮಗೆ ತಿಳಿದಿದೆ.

ಅಧ್ಯಕ್ಷರು : ಕೆಲವರು ಸಮಯ ಸಿಕ್ಕಿದಾಗೆಲ್ಲಾ ಸದನದಲ್ಲಿ ಎದ್ದು ನಿಂತು ನಾನು ಕುಡಿಯುವುದಿಲ್ಲವೆಂದು ಎದ್ದು ಹೇಳಬೇಕು ಎಂತಹ ಸ್ಥಿತಿ ನೋಡಿ ಅವರದ್ದು.....

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :- ಮಾನ್ಯ ರಾಮಸ್ವಾಮಿಯವರಿಗೆ ಒಂದು ರೀತಿಯಿಂದ ಅಭಿನಂದನೆ ಸಲ್ಲಿಸುತ್ತೇನೆ. ಅವರು ಬಹಳ ಭಾವುಕರಾದರೂ ಸಹ ಅಂಕಿ ಅಂಶದಲ್ಲಿ ಎಡವದೇ ಬಹಳ ನೀಟಾಗಿ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ನಾಣಯ್ಯನವರು ಸ್ವಲ್ಪ ಫಿಗರ್ಸ್‌ನಲ್ಲಿ ವ್ಯತ್ಯಾಸವಾಗಿದ್ದು ಅದನ್ನು ಒಪ್ಪಿದ್ದಾರೆ. ಯಾರೋ ವಿರೋಧ ಪಕ್ಷದವರು ರೈಸ್ ಮಾಡಿದರು ಎಂದು don't stand on prestige. ಆ ರೀತಿ ಮಾಡಬೇಡಿ. ಮಾತಿಗೆ ಮುಂಚೆ ಮಾನ್ಯ ಖರ್ಗೆಯವರು ಹತ್ತಿರ ಅಥವಾ ನಮ್ಮ ಕಡೆಗೆ ತೋರಿಸಿ ನೀವು ಇದ್ದಿದ್ದರೆ ಏನು ಮಾಡುತ್ತಿದ್ದೀರಿ ಎನ್ನುವುದು ಬೇಡ. Let us fight this menace as a team.... 400 ಕೋಟಿ ರೂಪಾಯಿ ಬಗ್ಗೆ ಅವರು ಹೇಳಿದ್ದಾರೆ ಅದು ಇದ್ದರೆ ಮಾನ್ಯ ಸಿದ್ಧರಾಮಯ್ಯನವರಿಗೆ ಬಲ ಬರುವುದು ಅದನ್ನು ಅಭಿವೃದ್ಧಿಗೆ ಉಪಯೋಗಿಸಬಹುದು. ಭಾರಿ ಕುಳಗಳನ್ನು ನಾವು ಅಡಗಿಸಬಹುದು ಇಲ್ಲವಾದಲ್ಲಿ ಅವರು ನಗುತ್ತಾರೆ. ಮಾನ್ಯ ರಾಮಸ್ವಾಮಿಯವರ ಅಹವಾಲು ಬೇಡಿಕೆ ಏನು ಇದೆ ಇಡೀ ಸದನ ಯಾವುದೇ ಡಿಫರೆನ್ಸ್ ಇಲ್ಲದೆ ನಾವು ಇದನ್ನು ರಾಜ್ಯದ ಹಿತದೃಷ್ಟಿಯಿಂದ ಇನ್ ದಿ ಇಂಟರೆಸ್ಟ್ ಆಫ್ ದಿ ಎತಿಕ್ಸ್ ಸ್ವಾಗತ ಮಾಡಬೇಕಾಗುತ್ತದೆ. ಮಾನ್ಯ ರಾಮಸ್ವಾಮಿಯವರ ಬೇಡಿಕೆಯನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ ಸರಕಾರ ಇದಕ್ಕೆ ಒಪ್ಪಿಕೊಳ್ಳಬೇಕೆಂದು ವಿನಂತಿಸುತ್ತೇನೆ.

★ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾವ್) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಎಲ್ಲಾ ಸದಸ್ಯರು ತಮ್ಮ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅದರ ಜೊತೆಗೆ ಇವತ್ತು ಬಡವರ ಶೋಷಣೆ ಯಾವ ರೀತಿಯಾಗುತ್ತಿದೆ ಎಂದು ತಿಳಿಸಿ ಆಗುವಂತಹದ್ದು ಅವಶ್ಯಕತೆ ಇದೆ. ಏಕೆಂದರೆ, ನನಗೆ ಬಂದಂತಹ ಮಾಹಿತಿ ಪ್ರಕಾರ.....

ಅಧ್ಯಕ್ಷರು : ಸವಣೂರು, ಬಂಕಾಪುರದಲ್ಲೆಲ್ಲಾ ಬಂದಿದೆಯೇ?

ಶ್ರೀ ಮಂಜುನಾಥ ಸಿ. ಕುನ್ನೂರ್ : ಹೌದು ಸಾರ್. ಸವಣೂರಿನಲ್ಲಿ ಈ ವರ್ಷ ಸಾರಾಯಿ ಗುತ್ತಿಗೆ ಸುಮಾರು 15 ಲಕ್ಷ ರೂಪಾಯಿಗೆ ಹರಾಜಾಗಿದೆ. ಆದರೆ ಮೊದಲು ಕೇವಲ 10 ಲಕ್ಷ ರೂಪಾಯಿಗೆ ಹರಾಜಾಗುತ್ತಿತ್ತು. ಆದರೆ ಎಸ್.ಪಿ. ಪ್ರಸಾದ್ ಎಂಬುವರು ಒಮ್ಮಿಂದ ಒಮ್ಮೆಲೆ, ಕೇವಲ ಸವಣೂರಿನಲ್ಲಿ ಮಾತ್ರ ಅಲ್ಲ ಬ್ಯಾಡಗಿ, ಹಡಗಲಿ, ಹೊನ್ನಾಳಿ, ಈ ಎಲ್ಲಾ ಕಡೆ ಅವರು ಗುತ್ತಿಗೆಯನ್ನು ಹಿಡಿದುಕೊಂಡಿದ್ದಾರೆ. ಅವರು ಏತಕ್ಕೆ ಹೆಚ್ಚು ಗುತ್ತಿಗೆಯನ್ನು ಹಿಡಿಯುತ್ತಿದ್ದಾರೆ ಎಂದರೆ, ಬಡವರ ಶೋಷಣೆ ಮಾಡುವುದಕ್ಕೆ ಯಾವ ರೀತಿ ಬಡವರ ಶೋಷಣೆ ಮಾಡುತ್ತಿದ್ದಾರೆ ಎಂದರೆ, ಇವತ್ತು ಸರ್ಕಾರಿ ಡಿಸ್ಟಿಲರಿಯಿಂದ ತಂದಂತಹ ಪಾಕೆಟ್ಟುಗಳನ್ನು, ತಮ್ಮಲ್ಲಿಯೇ ಒಂದು ಮಿಷನನ್ನು ಮಾಡಿಕೊಂಡು ಸರ್ಕಾರಿ ಡಿಸ್ಟಿಲರಿಯಿಂದ

ಕಳುಹಿಸಿಕೊಟ್ಟಿರುವಂತಹ ಸಾರಾಯಿಯನ್ನು ಹೆಚ್ಚಿಸಿ, ಪುನ: ಡ್ರಂನಲ್ಲಿ ಹಾಕಿ, ಇದರಲ್ಲಿ ಸ್ಪಿರಿಟ್ ಮತ್ತು ಕೆಮಿಕಲ್ಸ್ ಸೇರಿಸಿ ಡ್ಯೂಪ್ಲಿಕೇಟ್ ಪಾಕೆಟ್ಟುಗಳನ್ನು ಮಾಡಿ, ಇವತ್ತು ಸರ್ಕಾರ ಒಂದು ಸಾವಿರ ಪಾಕೆಟ್ಟುಗಳನ್ನು ಸರ್ಕಾರ ಸರಬರಾಜು ಮಾಡಿದ್ದರೆ, ಅವರು ಎರಡು ಸಾವಿರ ಪಾಕೆಟ್ಟುಗಳನ್ನು ಮಾಡಿ ಇವತ್ತು ಸಾರಾಯಿ ಗುತ್ತಿಗೆದಾರರು ಮಾರಾಟ ಮಾಡುವಂತಹದ್ದನ್ನು ನೋಡಿದರೆ, ಇವತ್ತು ಎಕ್ಸೈಜ್ ಇಲಾಖೆಯವರು ಕಣ್ಣು ಮುಚ್ಚಿಕೊಂಡು ಕುಳಿತ್ತಿದ್ದಾರೆಂದು ಕಾಣಿಸುತ್ತದೆ. ಅಲ್ಲದೆ ಪೋಲೀಸ್ ಇಲಾಖೆಯವರಾಗಲಿ, ಇದರ ಮೇಲೆ ಎಷ್ಟೇ ಸ್ಕ್ವಾಡ್‌ಗಳಾಗಲಿ, ಅಲ್ಲಿ ಇರುವಂತಹ ಇನ್ಸಪೆಕ್ಟರುಗಳಾಗಲಿ, ಎಕ್ಸೈಸ್ ಸೂಪರಿಟೆಂಡೆಂಟ್‌ಗಳಾಗಲಿ, ಎಲ್ಲರೂ ಸಹ ಕಣ್ಣು ಮುಚ್ಚಿ ಕೊಂಡು ಕುಳಿತಿದ್ದಾರೆ ಎನ್ನುವ ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಆದುದರಿಂದ ಈ ರೀತಿಯಾಗಿ ಜನರ ಶೋಷಣೆ ನಡೆಯುತ್ತಿರುವುದರಿಂದ ಇದರ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿ, ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಮನವಿಯನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಯಾವುದನ್ನೂ ಸಹ ಮುಚ್ಚಿ ಇಡಲಿಲ್ಲ, ಯಾವುದು ನಡೆಯುತ್ತಿದೆ, ಅದನ್ನು ನೇರವಾಗಿ ಉತ್ತರ ಕೊಡುವುದರ ಮುಖಾಂತರ ತಿಳಿಸಿದ್ದೇವೆ. ಸನ್ಮಾನ್ಯ ರಾಮಸ್ವಾಮಿಯವರು ಹೇಳುತ್ತಿದ್ದಾರೆ ಸುಮಾರು ನಾನೂರು ಕೋಟಿ ರೂಪಾಯಿಗಳು ಪ್ರತಿ ವರ್ಷ ಸೋರಿ ಹೋಗುತ್ತಿದೆ, ಅದರ ಎಲ್ಲಾ ಮಾಹಿತಿ ನನ್ನ ಹತ್ತಿರವಿದೆ, ಬೇಕಾದರೆ ತನಿಖೆ ನಡೆಸಿ ಅದು ಸರಿ ಇಲ್ಲ ಅಂದರೆ ನಾನು ರಾಜಿನಾಮೆ ಕೊಟ್ಟು ಹೋಗುತ್ತೇನೆ ಎಂದು ಹೇಳಿದರು. ಬಹುಶ: ಅವರು ರಾಜೀನಾಮೆ ಕೊಟ್ಟು ಹೋಗಲೂ ಬಾರದು. ನಾನು ಅವರು ರಾಜೀನಾಮೆ ಕೊಟ್ಟು ಹೋಗಲಿ ಎಂದು ಬಯಸುವುದಿಲ್ಲ. ಅವರು ನಾನೂರು ಕೋಟಿ ರೂಪಾಯಿ ಎಂದು ಹೇಳುತ್ತಿರುವಂತಹ ಈ ಅಂಕಿ ಅಂಶಗಳಾಗಲಿ, ಐ ಎಂ ಎಫ್ ನಿಂದ ನಮ್ಮ ಇಡೀ ವರ್ಷದ ಆದಾಯ ಬರುತ್ತಿರುವಂತಹದ್ದು 220 ಕೋಟಿ ರೂಪಾಯಿ. That is the income ಅವರು ಹೇಳುತ್ತಿರುವಂತಹದ್ದು ನಾನೂರು ಕೋಟಿ ರೂಪಾಯಿಗಳು. ಬೋಗಸ್ ಇನ್‌ವಾಯ್ಸ ಪ್ರಕಾರ, ಸೆಕೆಂಡ್ಸ್ ಪ್ರಕಾರ ಹೋಗುತ್ತಿದೆ ಎಂದು. ಬಹುಶ: ನನಗೆ ಗೊತ್ತಿಲ್ಲ, ಈ ಅಂಕಿ ಅಂಶಗಳು ಎಲ್ಲಿಂದ ಬಂದು ಎಂದು . ಆದರೆ ನಾವು ಹೇಳಿದೆವು ನಿಜ. ಕೆಲವು ಭಾಗಗಳಲ್ಲಿ ಕೆಲವು ಸ್ಥಳಗಳಲ್ಲಿ ಡಿಸ್ಟಿಲರಿ ಮುಖಾಂತರ, ಹೋಲ್‌ಸೇಲ್ ಮುಖಾಂತರ, ಅವ್ಯವಹಾರಗಳು ಆಗುತ್ತಿರುವಂತಹದು ನಿಜ. ಯಾವ ಯಾವ ರೀತಿಯಲ್ಲಿ ಮಾಡುತ್ತಿದ್ದಾರೆ ಅವರ ಮೋಡಸ್ ಅಪರೆಂಡಿ ಯಾವ ಯಾವ ರೀತಿ ಇದೆ ಎಂದು ನಾನೇ ಹೇಳಿತ್ತಿದ್ದೇನೆ. ಇದರಲ್ಲಿ ಸುಮಾರು 16 ಕೋಟಿ ರೂಪಾಯಿ ನಷ್ಟವಾಗುತ್ತಿರುವುದು ನಮ್ಮ ಗಮನಕ್ಕೆ ಬಂದಿರುವುದನ್ನು ತಿಳಿಸಿದ್ದೇನೆ, ಅವರ ಮೇಲೆ ಕ್ರಮ ತೆಗೆದುಕೊಂಡಿರುವುದನ್ನು ತಿಳಿಸಿದ್ದೇನೆ. 47 ಮೊಕದ್ದಮೆಗಳನ್ನು ದಾಖಲು ಮಾಡಿರುವುದನ್ನು ತಿಳಿಸಿದ್ದೇನೆ, ಸುಮಾರು 8-9 ಜಿಲ್ಲೆಯ ಅಧಿಕಾರಿಗಳು ಅಮಾನತ್‌ನಲ್ಲಿ ಇಟ್ಟಿದ್ದೇವೆ. ಇನ್ನೂ 7-8 ಅಧಿಕಾರಿಗಳ ಮೇಲೆ ಈಗಾಗಲೇ ನೋಟೀಸ್ ಜಾರಿ ಮಾಡಿದ್ದೇವೆ. ಇದನ್ನು ಜಿಲ್ಲಾ ಮಟ್ಟದಲ್ಲೂ ಸಹ ಸಂಪೂರ್ಣವಾಗಿ ಎಲ್ಲೆಲ್ಲಿ ಸಗಟು ಮಾರಾಟ ಮಾಡುವಂತವರು ಇದ್ದಾರೆ, ಅಲ್ಲಿ ಇದನ್ನು ತಡೆಗಟ್ಟುವುದಕ್ಕೆ ಆಯಕ್ತರ ಮುಖಾಂತರ ಒಂದು ತಂಡವನ್ನು ರಚನೆ ಮಾಡಿ, ಅಲ್ಲಿಯೂ ಸಹ ಈ ಒಂದು ವಿಚಾರವನ್ನು ಎಲ್ಲಾ ಹಂತದಲ್ಲೂ ನಡೆಸುವಂತಹ ಕಾರ್ಯಕ್ರಮವನ್ನು ಕೈಗೊಂಡು ಇದನ್ನು ನಿಲ್ಲಿಸುವಂತಹ ಪ್ರಯತ್ನವೇನಿದೆ ಅದನ್ನು ನಾವು ಹೇಳಿದ್ದೇವೆ. ಇದು ಹೇಳಿದ ಮೇಲೂ ಸಹ ಇಲ್ಲ, ಒಂದು ಉನ್ನತ ಮಟ್ಟದ ತನಿಖೆ ಮಾಡಿ ಎಂದರೆ, ನಾವು ಈ ತನಿಖೆಯನ್ನು ಪ್ರತಿಯೊಂದು ಜಿಲ್ಲಾ ಮಟ್ಟದಲ್ಲೂ ಸಹ ಆರಂಭ ಮಾಡಿದ್ದೇವೆ. ಪ್ರತಿ ಜಿಲ್ಲಾ ಮಟ್ಟದಲ್ಲಿ

ಡಿವಿಷನಲ್ ಮಟ್ಟದಲ್ಲಿ ತನಿಖೆಯನ್ನು ಆರಂಭ ಮಾಡಿ ಇದನ್ನು ಸಂಪೂರ್ಣವಾಗಿ ತಡೆಗಟ್ಟುವಂತಹ ಕ್ರಮವನ್ನು ಕೈಗೊಂಡರೂ ಸಹ ಬಹುಶ: ಇದು ನಿಮಗೆ ಸಮಾಧಾನ ತರುವುದಿಲ್ಲ ಎಂದು ನನಗೆ ಗೊತ್ತಿದೆ. ಏಕೆಂದರೆ ವಿರೋಧ ಪಕ್ಷದಲ್ಲಿ ಕುಳಿತವರು ಆಡಳಿತ ಪಕ್ಷದವರು ಏನು ಹೇಳಿದರೂ ಸಹ ಸಮಾಧಾನ ತರುವುದಿಲ್ಲ. ಶ್ರೀಮಾನ್ ಖರ್ಗೆ ಅವರು ಒಂದು ಲೆಕ್ಕಾಚಾರ ಹೇಳಿದರು, ಬಹುಶ: ನನಗೆ ಗೊತ್ತಿಲ್ಲ ಆ ಲೆಕ್ಕಾಚಾರ ಎಲ್ಲಿಂದ ಸಿಕ್ಕಿತು ಎಂದು. ಅವರು 30 ಕೇಸ್ ಇರುವಂತಹದ್ದಕ್ಕೆ ಹೇಳಿದರು. ಅದು ಹೇಗೆ ಆಗುತ್ತದೆ ಎಂದು ಲೆಕ್ಕಾಚಾರ ಹೇಳಿದರು. ನಿಜ ಹೇಳಬೇಕು ಎಂದರೆ ಒಂದು ಕೇಸ್‌ನಲ್ಲಿ ಇರುವಂತಹದ್ದು 9 ಲೀಟರ್, 9 ಲೀಟರ್ ಎಂದರೆ ಒಂದು ಬಾಟಲ್ 750 ಎಂ. ಎಲ್. 12 ಬಾಟಲ್ ಆದರೆ ಅದು 900 ಆಗುತ್ತದೆ. ಈ ಲೆಕ್ಕದಲ್ಲಿ ಅವರು ಲೆಕ್ಕ ಹಾಕಿದ್ದಾರೆ. ಬಹುಶ: ಅದು ವೈಜ್ಞಾನಿಕವಾಗಿ ಮಾಡಿದ್ದಾರಾ ಎಂದು ತಿಳಿಯಲಿಲ್ಲ.

Sri. M. Mallikarjuna Kharge : What is the total consumption in Kerala, Tamilnadu and Andhra Pradesh. ಅದು ಕ್ವಾಂಟಿಟಿ ಮೇಲೆ, ಬೇರೆ ರಾಜ್ಯಗಳಲ್ಲಿಯೂ ಕೂಡ ಅಬ್ಕಾರಿ ಕನ್ಸಂಪ್‌ಷನ್ ಆಗುತ್ತದೆ, ಅಥವಾ ಐ ಎಂ ಎಫ್‌ನಲ್ಲಿ ಅದರ ಬೇಸಸ್ ಮೆಲೆ ದೊಡ್ಡ ದೊಡ್ಡ ಆರ್ಟಿಕಲ್ ಸಹ ಬಂದಿದೆ, ನಿಮ್ಮಲ್ಲೂ ಸಹ ಅದರ ಲೆಕ್ಕ ಇರಬಹುದು. ಏಕೆಂದರೆ ರೆಕ್ಟಿಫೈಡ್ ಸ್ಪಿರಿಟ್ ಬೇರೆಯವರಿಗೆ ಕೊಡುವಾಗ ನಿಮಗೆ ಗೊತ್ತಿರುತ್ತದೆ. ಆ ಬೇಸಸ್ ಮೇಲೆ 50 ಕೇಸ್‌ಗೆ ಎಷ್ಟು ಸೇಲ್ ಟ್ಯಾಕ್ಸ್ ಹೋಗುತ್ತದೆ, ಟರ್ನ್ ಓವರ್ ಎಲ್ಲವನ್ನೂ ಸೇರಿಸಿದರೆ 6 ಲಕ್ಷ ಕೇಸಸ್‌ಗೆ ಎಷ್ಟು ಹಣ ಬರುತ್ತದೆ ಎಂಬ ವಿಷಯವನ್ನು ನಾನು ಹೇಳಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ : ಈಗ ತಾವು 'ಏನು' ಓದಿದರಲ್ಲಾ, ಅದು ಸೈನ್‌ಟಿಫಿಕ್ ಆಗಿ ಇವ್ಯಾಲ್ಯುಯೇಟ್ ಮಾಡಿ ಹೇಳಿದಿರಲ್ಲಾ ಅದು ಯಾವುದರಲ್ಲಿ ಇದೆ ಎಂದು ಆ ಪುಸ್ತಕವನ್ನು ಕಳುಹಿಸಿಕೊಡಿ, ನಾನು ಸ್ವಲ್ಪ ನೋಡುತ್ತೇನೆ. ಬಹುಶ: ನನಗೆ ಅನ್ನಿಸುತ್ತದೆ, ಅದು ಓದಿದಾಗ ನಾವು ನಮ್ಮ ಮೂರು ವರ್ಷದ ಸಾಧನೆಗಳು ಎಂದು ಹೇಳಿ ಚುನಾವಣೆ ಸಂದರ್ಭದಲ್ಲಿ ನಮ್ಮ ಸಾಧನೆಯನ್ನು ಹೇಳಿದ್ದೆವು. ಆದರೆ ಸನ್ಮಾನ್ಯ ಖರ್ಗೆಯವರು ಎಲ್ಲೋ ಒಂದು ಕಡೆ ಹುಸಿಯಾದ ಭರವಸೆಗಳು ಎಂಬ ಒಂದು ಪುಸ್ತಕವನ್ನು ಬರೆದಿರುವುದು ನನಗೆ ಜ್ಞಾಪಕವಿದೆ. ಅವರು ಹುಸಿಯಾದ ಭರವಸೆಗಳು ಎಂದು ಬರೆದು, ನಮ್ಮ ಇಡೀ ರಾಜ್ಯದ ಜನರಿಗೆ ತಲುವುವಂತೆ ಪ್ರಚಾರ ಮಾಡಿದರು. ಬಹುಶ: ಅದರಲ್ಲಿ ಏನಾದರೂ ಈ ಹೇಳಿಕೆಯನ್ನು ಕೊಟ್ಟಿದ್ದಾರೆಯೇ ಎಂದು ನನಗೆ ಒಂದು ಅನುಮಾನ. ಆ ವಿಷಯ ಪುಸ್ತಕದಲ್ಲಿ 'ಏನಾದರೂ' ಇದ್ದರೆ ನಾನು ಅದಕ್ಕೆ ಉತ್ತರವನ್ನು ಕೊಡುತ್ತೇನೆ. ಹುಸಿಯಾದ ಭರವಸೆಗಳು, ಅದರಲ್ಲಿ ಸೋರಿಕೆ ಯಾವ ರೀತಿಯಾಗುತ್ತಿದೆ ಎಂದು ಅದರಲ್ಲಿ ಹೇಳಿದ್ದಾರೆ. ಮಾನ್ಯ ಖರ್ಗೆಯವರಿಗೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಆ ಅಂಕಿ-ಸಂಖ್ಯೆಗಳು ಯಾವುದು ಇದೆ, ಈ ಅಂಕಿ ಸಂಖ್ಯೆಗಳು, ಅವರು ಹೇಳುತ್ತಿರುವಂತಹದ್ದು ಯಾರು ಈ ದಂಧೆಯಲ್ಲಿ ತೊಡಗುತ್ತಿದ್ದಾರೋ ಅವರೇ ಈ ಅಂಕಿ ಸಂಖ್ಯೆಗಳನ್ನು ಕೆಲವು ಸಂದರ್ಭದಲ್ಲಿ ರಾಜಕಾರಣಿಗಳಿಗೆ ಹಂಚುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನು ಕೊಟ್ಟಿರುವಂತಹ ಅಂಕೆ ಸಂಖ್ಯೆ ಮೇಲೆ ನಂಬಿಕೆ ಇಲ್ಲ ಅಲ್ಲವೇ? ಹಿಂದೆ ಇರುವಂತಹ ಅಂಕಿ ಸಂಖ್ಯೆಯನ್ನು ತೆಗೆದುಕೊಳ್ಳಿ ಈಗ ಸನ್ಮಾನ್ಯ ರಾಮಸ್ವಾಮಿಯವರು ಕೊಟ್ಟಂತಹ ಅಂಕಿ ಸಂಖ್ಯೆಯನ್ನು ತೆಗೆದುಕೊಳ್ಳಿ ಇದು ಸುಳ್ಳಾದರೆ, ನಿವೇನು ಶಿಕ್ಷೆ ಕೊಡುತ್ತೀರಿ, ಅದನ್ನು ಅನುಭವಿಸುವುದಕ್ಕೆ ತಯಾರಿದ್ದೇನೆ.

ಶ್ರೀ ಎಂ.ಸಿ. ನಾಣಯ್ಯ: ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಹೇಳಿರುವುದು ಇಷ್ಟೇ, ಅವರು ಇಟ್ಟಿರುವಂತಹ ವಿಚಾರದಲ್ಲಿ ಏನಾಗುತ್ತದೆ ಎಂದು. ನಾವು ಇಲ್ಲಿ ಕಾಲ್‌ಕ್ಯುಲೇಷನ್ ಮಾಡುವಂತಹದ್ದನ್ನು ಮಾಡಿಕೊಂಡು ಹೋದರೆ, 2 X 2=4 ಆಗುತ್ತದೆ 2+2=4 ಆಗುತ್ತದೆ ಅರಿತ್‌ಮೆಟಿಕಲಿ ನಾವು ಅರೀತಿ ತೆಗೆದುಕೊಂಡು ಹೋಗಬಹುದು. what is the real aspect of it. ಅನ್ನುವುದನ್ನು ನಾವು ಗಮನ ಹರಿಸಬೇಕಲ್ಲಾ. ಯಾವುದೋ ಒಂದು ಟ್ರೇಡ್‌ನಲ್ಲಿ ಏನಾಗುತ್ತದೆ ಎಂದರೆ, ಹಿತಾಸಕ್ತಿಗಳ ವ್ಯತ್ಯಾಸವಿರುತ್ತದೆ. ಆ ಹಿತಾಸಕ್ತಿಗಳ ವ್ಯತ್ಯಾಸವಿರುವಂತಹ ಸಂದರ್ಭದಲ್ಲಿ ಈ ಫಿಗರ್ಸ್‌ನ ಇನ್‌ಫ್ಲೇಟ್ ಮಾಡಿಕೊಂಡು ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಆದುದರಿಂದ ರಾಜ್ಯ ಸರ್ಕಾರದ ವತಿಯಿಂದ ಪ್ರಾಮಾಣಿಕವಾಗಿ ಇರುವಂತಹ ಪ್ರಯತ್ನವನ್ನು ಮಾಡಿ, ಯಾವುದನ್ನು ಮುಚ್ಚಿಡದೆ, ಸನ್ಮಾನ್ಯ ರಾಮಸ್ವಾಮಿಯವರು ಹೇಳಿರುವಂತಹ ಎಲ್ಲಾ ವಿಚಾರದಲ್ಲಿ, ಇನ್ನೂ ಹೆಚ್ಚಿನ ವಿಚಾರವನ್ನು ಹೇಳಿ ಯಾವ ಯಾವ ರೀತಿಯಲ್ಲಿ ಈ ದಂಧೆಗಳನ್ನು ಮಾಡುತ್ತಿದ್ದಾರೆ ಎಂದು ಮೋಡಸ್ ಆಪರೆಂಡಿಯನ್ನು ಸಹ ನಾನು ಹೇಳಿದೆ. ಅದನ್ನು ಮುಚ್ಚಿಡುವಂತಹ, ಬಚ್ಚಿಡುವಂತಹ ಪ್ರಯತ್ನವೇನೂ ನಾವು ಮಾಡಿಲ್ಲ. ಆದುದರಿಂದ ನಾವು ಈಗ ಒಂದು ಹಂತದಲ್ಲಿ, ಜಿಲ್ಲಾ ಮಟ್ಟದಿಂದಲೇ ಈ ಒಂದು ಹಂತದಲ್ಲಿ, ಜಿಲ್ಲಾ ಮಟ್ಟದಿಂದಲೇ ಈ ಒಂದು ಕಾರ್ಯಕ್ರಮವನ್ನು ಸುಮಾರು 362 ಸಗಟು ಮಾರಾಟಗಾರರು ಯಾರು ಇದ್ದಾರೆ, ನಮ್ಮಲ್ಲಿರುವಂತಹ ಸುಮಾರು 62 ಡಿಸ್ಪಿಲರಿಗಳಲ್ಲಿ ಸುಮಾರು 54 ಡಿಸ್ಪಿಲರಿಗಳು ಕೆಲಸ ಮಾಡುತ್ತಿವೆ. ಇವರಿಗೆ ಸೀಮಿತವಾಗಿ ನಾವು ಕೆಲಸವನ್ನು ಮಾಡುತ್ತಿದ್ದೇವೆ. ನಮಗೂ ಸ್ವಲ್ಪ ಸಮಯ ಕೊಡಿ. ಆದುದರಿಂದ ಇದಕ್ಕೆ ಹೆಚ್ಚಿನ ಮಟ್ಟದ ತನಿಖೆಯ ಅವಶ್ಯಕತೆ ಇಲ್ಲ. ನಾವು ಇದರ ಕೆಲಸವನ್ನು ಮಾಡುತ್ತಿದ್ದೇವೆ, ಮತ್ತು ಇದನ್ನು ನಿಲ್ಲಿಸುವಂತಹದ್ದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಅದರ ಜೊತೆಯಲ್ಲಿ ಜಿಲ್ಲಾಧಿಕಾರಿಗಳಿಗೆ, ಪ್ರತಿ ಜಿಲ್ಲೆಯಲ್ಲಿ ಅಧಿಕಾರವನ್ನು ಸಹ ಕೊಟ್ಟಿದ್ದೇವೆ. ಆದರೆ ಒಂದು ಕಾಲದಲ್ಲಿ ಇವರಿಗೆ ಇದ್ದಂತಹ ಅಧಿಕಾರವನ್ನು ಕಿತ್ತು ಹಾಕಿದ್ದರು. ಡೆಪ್ಯುಟಿ ಕಮೀಷನರ್, ಎಕ್ಸೈಜ್ ಎಂದು ಮಾಡಿದೆವು. ಜಿಲ್ಲಾಧಿಕಾರಿಗಳು, ರೆವಿನ್ಯು ಜಿಲ್ಲಾಧಿಕಾರಿಗಳಿಗೆ ಸ್ವಲ್ಪ ಮಟ್ಟಿಗೆ ಇದರ ಅಧಿಕಾರವನ್ನು ಕೊಡಬೇಕು. ನಿಯಂತ್ರಣ ಮಾಡಬೇಕು ಎಂಬುದೇ ನಮ್ಮ ಪ್ರಾಮಾಣಿಕವಾದಂತಹ ಕಳಕಳಿಯಾಗಿದೆ. ಈ ರೀತಿಯಾದಂತಹ ದಂಧೆಗಳಿಗೆ ಹತ್ತಿಕ್ಕುವಂತಹ ಕಾರ್ಯಕ್ರಮಗಳು ಇವುಗಳು ಎಂದು ಈ ಸಂದರ್ಭದಲ್ಲಿ ಹೇಳಿ, ಸನ್ಮಾನ್ಯ ಸುರೇಶ್ ಕುಮಾರ್ ಅವರು ಹೇಳಿದರು, ನೀವು ಈ ಸಲ ಒಪ್ಪಿಕೊಳ್ಳಿ ಎಂದು. ಈ ಪ್ರಶ್ನೆ ಬಂದಿರುವಂತಹ ಹಿನ್ನಲೆಯಲ್ಲಿ, ಇದರಲ್ಲಿರುವಂತಹ ಬೇಕಾದಷ್ಟು ಆಯಾಮಗಳು ಯಾವುವು ಇವೆ, ಅದನ್ನು ತಡೆಗಟ್ಟುವುದಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಸನ್ಮಾನ್ಯ ರಾಮಸ್ವಾಮಿಯವರಿಗೆ ಇದರಿಂದ ಸ್ವಲ್ಪ ಮಟ್ಟಿಗೆ ಸಮಾಧಾನ ಆಗಬಹುದು ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎ.ಟಿ. ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದಲ್ಲಿ ಕುಳಿತುಕೊಂಡ ವಿರೋಧ ಮಾಡಬೇಕು ಎಂದು ನಾನು ಈ ರೀತಿ ಹೇಳುತ್ತಿಲ್ಲ. ನಾನು ಅನೇಕ ಸಲ ಹಿಂದಿನ ಕಡತ ತೆಗೆದುನೋಡಿದ್ದೇನೆ. ಸನ್ಮಾನ್ಯ ನಾಣಯ್ಯನವರೇ, ನಾನು ಅನೇಕ ಸಲ ಬಹಳ ಬಿಚ್ಚು ಮನಸ್ಸಿನಿಂದ ಹೇಳಿದ್ದೇನೆ. ನಮ್ಮಲ್ಲಿರುವಂತಹವರೂ ಸಹ ಸತ್ಯ ಹರಿಶ್ಚಂದ್ರರಲ್ಲ ಎಂಬ ಮಾತನ್ನು ಸಹ ಹೇಳಿದ್ದೇನೆ. ನಿಮಗೆ ಆಂಕೆ ಅಂಶದಿಂದ ಸಮಾಧಾನ ಮಾಡುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ತಾವು ಹೇಳುವುದು ಸರಿ ಅಲ್ಲ. ನಾನು ಪ್ರಮುಖವಾಗಿ ಕೆಲವು ಪ್ರಸ್ತಾಪಗಳನ್ನು ಮಾಡಿದೆ. ಹೋಲ್‌ಸೇಲ್ಸ್ ಪಾಯಿಂಟ್‌ರವರು ಬೋಗಸ್ ಇನ್‌ವಾಯ್ಸ್ ಮಾಡಿ ಅಂತಹ ಲೈಸೆನ್ಸ್‌ಗಳನ್ನು ಅಮಾನತ್ ಮಾಡಿದ್ದರು,

ಯಾರ ಲೈಸೆನ್ಸ್‌ನ ಅಮಾನತ್ ಮಾಡಿದರು, ಆತ ಆ ದಿವಸವೇ ಅರ್ಜಿಯನ್ನು ಹಾಕಿದ ಅರ್ಜಿಯನ್ನು ಹಾಕಿದ ದಿವಸವೇ ಅಮಾನತ್ ಮಾಡಿದ ಆದೇಶವನ್ನು ರದ್ದು ಮಾಡಿದರು. ಅಂತಹ ಹೋಲ್ ಸೇಲ್ ಅಂಗಡಿಗಳವರು ಪುನ: ಅದೇ ದಂದೆಯನ್ನು ಮುಂದುವರೆಸಿದರು. ಇದರ ಬಗ್ಗೆ ಇಲಾಖೆಯವರು ಯಾವುದೇ ರೀತಯಾದಂತಹ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಎಷ್ಟು ಅಂಗಡಿಗಳು ಬೋಗಸ್ ಇನ್‌ವಾಯ್ಸ್ ಮಾಡಿ ಅವ್ಯವಹಾರ ಮಾಡಿದ್ದರಲ್ಲಾ ಅದು ತಮಗೆ ಗೊತ್ತಾಗಿದೆ ಅಲ್ಲವೇ ಎಷ್ಟರ ಮೇಲೆ ಕ್ರಮ ಕೈಗೊಂಡಿರುವಿರಿ? ನೀವೇನೂ ಹೇಳಲಿಲ್ಲ, ಕ್ರಮ ತೆಗೆದುಕೊಂಡಿದ್ದೇವೆ ಎಂದು. ಇನ್ನೂ ಕೂಡ ಪರಿಶೀಲನೆ ಮಾಡುತ್ತಿದ್ದೀರಿ, ಮೂರು ವರ್ಷದಿಂದ ಪರಿಶೀಲನೆ ಮಾಡಬೇಕಾ? ಯಾವ ಕಾರಣಕ್ಕೋಸ್ಕರ ಕ್ರಮ ಕೈಗೊಂಡಿಲ್ಲ ಎಂಬ ವಿಚಾರವನ್ನು ತಿಳಿಸಿ. ನಾನು ಹೇಳಿದೆ, ಮಿಂಚಿನ ವೇಗದಲ್ಲಿ ನೀವು ಕ್ರಮ ಕೈಗೊಳ್ಳಬೇಕಾಗಿತು; ಆದರೆ ತಾವು ಅದರಲ್ಲಿ ವಿಫಲರಾಗಿದ್ದೀರಿ ಎಂದು. ಮುಖ್ಯಮಂತ್ರಿಯವರ ಕಛೇರಿಗೆ ಈ ಕಡತ ಬಂದು ಎಷ್ಟು ದಿವಸವಾಯಿತು? ಎಷ್ಟು ದಿವಸದಿಂದ ಅದು ಪೆಂಡಿಂಗ್ ಇದೆ. ಏತಕ್ಕೋಸ್ಕರ ಪೆಂಡಿಂಗ್ ಇದೆ ಎಂಬುದಕ್ಕೂ ಸಹ ತಾವು ಉತ್ತರವನ್ನು ಕೊಡಲಿಲ್ಲ. ನಾನು ನಾನೂರು ಕೋಟಿ ರೂಪಾಯಿ ಎಂದು ಹೇಳಿದ್ದಕ್ಕೆ ತಾವು ಒಪ್ಪಿಕೊಳ್ಳಲಿಲ್ಲ. ಈಗ ನಮ್ಮ ರಾಜ್ಯದ ಅಬಕಾರಿ ಆದಾಯ ಒಂದು ವರ್ಷದಲ್ಲಿ ಸುಮಾರು ಎಂಟು ನೂರು ಕೋಟಿ ರೂಪಾಯಿಗಳು; ಎಂದು ಇಟ್ಟುಕೊಳ್ಳಿ, ನಾನು ಮೊದಲೇ ಹೇಳಿದೆ ಆತ್ಮ ಶೋಧನೆ ಮಾಡಿಕೊಳ್ಳಿ ಎಂದು. ಏಕೆಂದರೆ, ಒರಿಜಿನಲ್ ಏನಿದೆ, ಅದು ಮೂರು ಕೇಸು, ನಾಲ್ಕು ಕೇಸು ಡೀಲ್ ಮಾಡಿದರೆ, ಸೆಕೆಂಡ್ಸ್, ಥರ್ಡ್ಸ್ ಅದಕ್ಕಿಂತ ಹೆಚ್ಚಿಗೆ ಡೀಲ್ ಮಾಡುತ್ತಾರೆ. ಆಗ ಎಷ್ಟು ಕೋಟಿ ಅವ್ಯವಹಾರ ಆಗಿರಬಹುದು? ನಾನು ತಪ್ಪು ಅಂಕಿ ಅಂಶಗಳನ್ನು ಹೇಳಿಲ್ಲ. ಸರಿಯಾಗಿರುವುದನ್ನೇ ಹೇಳಿದ್ದೇನೆ. ನಿಮ್ಮ ಅಧಿಕಾರಿಗಳು ನಾನು ಮೊದಲೇ ಹೇಳಿದ ಹಾಗೆ ಅವರೂ ಕೂಡ ಶಾಮೀಲಾಗಿದ್ದಾರೆ. ಶಾಮೀಲು ಎಂದರೆ ನಿಮ್ಮ ಸ್ಟೇಟ್ ಇಂಟಲಿಜೆನ್ಸ್ ಬ್ಯೂರೋ ಇತ್ತು. ಅವರು ಇದರ ಬಗ್ಗೆ ಗಮನ ಹರಿಸಲಿಲ್ಲ. ಅವರೂ ಕೂಡ ಶಾಮೀಲಾದರು. ಡಿವಿಜನಲ್ ಲೆವಲ್‌ನಲ್ಲಿ ಎನ್‌ಫೋರ್ಸ್‌ಮೆಂಟ್ ವಿಂಗ್ ಇತ್ತು. ಅವರೂ ಕೂಡ ಶಾಮೀಲಾದರು. ಜಿಲ್ಲೆ ಮತ್ತು ಸಬ್ ಡಿವಿಜನ್ ಲೆವಲ್‌ನಲ್ಲಿ ಎಕ್ಸೈಜ್ ಇಂಟಲಿಜೆನ್ಸ್ ಬ್ಯೂರೋ ಇತ್ತು. ಅವರೂ ಕೂಡ ಶಾಮೀಲಾಗಿದ್ದಾರೆ. ನೀವು ಮತ್ತೆ ಅವರಿಗೇ ತನಿಖೆ ಮಾಡಲಿಕ್ಕೆ ಹಾಕಿದರೆ ನ್ಯಾಯ ಹೊರಗೆ ಬರುತ್ತದೆಯೇ? ಆ ದಿಕ್ಕಿನಲ್ಲಿ ಉನ್ನತ ಮಟ್ಟದ ತನಿಖೆಯನ್ನು ಈ ಸರ್ಕಾರ ಬರುವ ತೆರಿಗೆ ಬರಲಿ. ಏಕೆಂದರೆ ಬಜೆಟ್‌ನಲ್ಲಿ ಎಷ್ಟೋ ಖೋತಾ ತೋರಿಸುತ್ತೇವೆ. ಅದನ್ನು ತುಂಬಿಸುವ ಸಲುವಾಗಿ ನೀವು ಕಳ್ಳರ ಕೈಗೆ ಕಾವಲು ಮಾಡಲು ಕೊಟ್ಟರೆ ಅದು ಉಳಿಯುತ್ತದೆಯೇ? ಅವರ ಕಾಲದಲ್ಲಿ ಅವರೇ ಶಾಮೀಲಾಗಿ ನಡೆದಿದ್ದಾವೆ. ಸ್ವತಂತ್ರವಾಗಿ ದಯಮಾಡಿ ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಿ. ಈ ರಾಜ್ಯಕ್ಕೇನು ತೆರಿಗೆ ಬರಬೇಕು, ಅದು ಬರಲಿಕ್ಕೆ ಮುಂದಾದರೂ ಅದಕ್ಕೆ ಕಡಿವಾಣ ಹಾಕಲಿಕ್ಕೆ ಒಂದು ಬಿಗಿಯಾದ ಸಂದೇಶ ಹೋಗಲಿ, ಅದರ ಬಗ್ಗೆ ದಯಮಾಡಿ ಕ್ರಮವನ್ನು ನೀವು ತೆಗೆದುಕೊಳ್ಳಬೇಕು. ಒಂದು ಉನ್ನತ ಮಟ್ಟದ ತನಿಖೆಯನ್ನು ಮಾಡಬೇಕು. ಅವರೇ ಶಾಮೀಲಾಗಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಇಷ್ಟು ದಿವಸ ಏನು ಮಾಡಿದಿರಿ ಹೇಳಿ. ಈಗ ಇಲ್ಲೀಗಲ್ ಅಂಗಡಿಗಳು ನಡೆಯುತ್ತಿವೆ. ಎಷ್ಟು ಅಂಗಡಿಗಳನ್ನು ಅವರು ಗುರುತು ಮಾಡಿ ಮುಚ್ಚಿಸಿದ್ದಾರೆ. ನಾವೇನಾದರೂ ಹೇಳಿದರೆ ಸಾರ್ವಜನಿಕರಿಗೆ ಅರ್ಜಿ ಕೊಟ್ಟರೆ ಅಂಥ ಕಡೆ ಗಮನವನ್ನು ಹರಿಸುತ್ತಾರೆ. ಆ ಕಡೆ ಅವರುಗಮನವನ್ನೇ ಹರಿಸುವುದಿಲ್ಲ. ನೀವು ಅವರನ್ನೇ ತನಿಖೆ ಮಾಡಲಿಕ್ಕೆ ಹಾಕಿದರೆ ಆ ತನಿಖೆಯಿಂದ ಸತ್ಯಾಂಶ ಹೊರಗೆ ಬರುತ್ತದೆಯೇ? ಆ ದಿಕ್ಕಿನಲ್ಲಿ ನೀವು ಉನ್ನತ ಮಟ್ಟದ ತನಿಖೆಯಿಂದ ಈ ಒಂದು ಹಗರಣದ ಬಗ್ಗೆ ಪರಿಶೀಲನೆ ಮಾಡಿಸಬೇಕು. ಸತ್ಯಾಂಶ ಹೊರಗೆ ಬರಬೇಕು. ದಯವಿಟ್ಟು

ಸರ್ಕಾರ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಬಹಳ ಕಳಕಳಿಯಿಂದ ವಿನಮ್ರತೆಯಿಂದ ನಾನು ಪ್ರಾರ್ಥಿಸುತ್ತೇನೆ. ಇದು ರಾಜ್ಯದ ದೃಷ್ಟಿಯಿಂದ ಆಗಬೇಕಾಗಿದೆ. ಈಗ ನಿಮಗೆ ಗೊತ್ತಿದೆ, 400 ಕೋಟಿ ರೂಪಾಯಿ ಎಂದರೆ ನೀವು ಒಪ್ಪಿಕೊಳ್ಳಲಿಲ್ಲ ನಾಣಯ್ಯನವರೇ ಈಗ ಫಸ್ಟ್ ಒರಿಜಿನಲ್ ಎಷ್ಟು ಮಾರಾಟವಾಗುತ್ತದೆ, ಸೆಕೆಂಡ್, ಥರ್ಡ್ಸ್ ಎಷ್ಟು ಮಾರಾಟವಾಗುತ್ತದೆ ಎಂದು ಹೇಳಿ. ಅದಕ್ಕಿಂತ ಹೆಚ್ಚು ಮಾರಾಟವಾಗುತ್ತದೆ. ಎಂಟು ನೂರು ಕೋಟಿ ರೂಪಾಯಿ ಆ ಎಕ್ಸೈಜ್ ಡ್ಯೂಟಿಯಿಂದ ಬಂದರೆ ಇನ್ನು ಸೆಕೆಂಡ್ಸ್, ಥರ್ಡ್ಸ್ ಅದಕ್ಕಿಂತ ಹೆಚ್ಚಿಗೆ ಮಾರಾಟವಾಗುವುದರಿಂದ ಎಷ್ಟು ಕೋಟಿ ರೂಪಾಯಿ ನಷ್ಟವಾಗಿರಬಹುದು. ದಯ ಮಾಡಿ ಇದನ್ನು ತೀಕ್ಷ್ಣವಾಗಿ ತೆಗೆದುಕೊಳ್ಳಬೇಕು. ಈ ಸ್ಥಾನದಲ್ಲಿ ನಿಂತು ಎಷ್ಟು ತೀಕ್ಷ್ಣವಾಗಿ ಹೇಳಬೇಕೋ ಅದನ್ನು ಹೇಳಿದ್ದೇನೆ. ದಯವಿಟ್ಟು ಇದನ್ನು ಸಾರ್ವಜನಿಕ ಹಿತದೃಷ್ಟಿಯಿಂದ ರಾಜ್ಯದ ಹಿತದೃಷ್ಟಿಯಿಂದ ಒಪ್ಪಿಕೊಳ್ಳಿ. ಮತ್ತೊಮ್ಮೆ ಕಳಕಳಿಯಿಂದ ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಕೂಡ ನಿರ್ದೇಶನವನ್ನು ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಇದಕ್ಕೆ ಚರ್ಚೆ ಬೇಕಾಗಿಲ್ಲ. ಸನ್ಮಾನ್ಯ ಸದಸ್ಯರು ಇಷ್ಟೊಂದು ನಿಖರವಾಗಿ, ಖಚಿತವಾಗಿ ಇಷ್ಟೇ ಕೋಟಿ ರೂಪಾಯಿ ಸೋರಿ ಹೋಗುತ್ತಿದೆ ಎಂದು ಹೇಳಿದರೆ ಅದನ್ನು ತನಿಖೆ ಮಾಡಿಸುವುದಿಲ್ಲ ಎಂದು ಹೇಳಿದರೆ ಎಂದು ಯಾವುದಾದರೂ ಸರ್ಕಾರ ಹೇಳುತ್ತದೆಯೇ? ನನ್ನ ಪಾಕೆಟ್‌ನ್ನು ಇಂಥವರು ಕದಿಯುತ್ತಿದ್ದಾರೆ, ಇಷ್ಟು ದುಡ್ಡು ಪಾಕೆಟ್‌ನಿಂದ ಹೋಗಿದೆ ಎಂದರೆ ತನಿಖೆ ಮಾಡಿಸುತ್ತೇವೆ. ಉನ್ನತ ಮಟ್ಟದ ತನಿಖೆ ಎನ್ನುವುದನ್ನು ಸರ್ಕಾರದ ಲೆವೆಲ್‌ನಲ್ಲಿ ಅವರು ಹೇಳಿದಂತೆ ಅವ್ಯವಹಾರ ನಡೆಯುತ್ತಿದೆ ಎನ್ನುವುದು ಗೊತ್ತಿದೆ. ಎಣ್ಣೆ ಕಲಬೆರಕೆಯಾದದ್ದು ನೋಡಿದ್ದೇವೆ, ಅಕ್ಕಿ, ಸಕ್ಕರೆ ಕಲಬೆರಕೆಯಾದದ್ದು ನೋಡಿದ್ದೇವೆ. ಪಂಚೆಗಳು ಇದ್ದಾವಲ್ಲಾ, ಅಲ್ಲಿಯೂ ಕಾರ್ಖಾನೆಯಲ್ಲಿ ಸೆಕೆಂಡ್ಸ್ ಎಂದು ಮಾರ್ಕ್ ಮಾಡಿ ಕೊಟ್ಟು ಬಿಡುತ್ತಾರೆ. ಎಲ್ಲಾ ಮ್ಯಾನ್ಯುಫ್ಯಾಕ್ಚರಿಂಗ್ ಗೂಡ್ಸ್‌ನಲ್ಲೂ ಸೆಕೆಂಡ್ಸ್ ಎಂದು ಇರುತ್ತದೆ. Not fit for use ಎಂದು ಇಲ್ಲಿ ಹಾಗೆ ಆಗಿಲ್ಲ. ಈ ಐ ಎಂ ಎಲ್ ನಲ್ಲಿ ಸೆಕೆಂಡ್ಸ್ ಎಂದು ಬ್ರಾಂಡ್ ಮಾಡಿದರೆ ಕೆಲವು ಟ್ಯಾಕ್ಸ್ ಉಳಿಯುತ್ತದೆ. ಆ ಕಾರಣಕ್ಕೋಸ್ಕರ ಸೆಕೆಂಡ್ಸ್ ಎನ್ನುತ್ತಾರೆ. ಇಲ್ಲದಿದ್ದರೆ ಫಸ್ಟ್ ಎಂತಲೇ ಹೋಗುತ್ತಿದ್ದರು. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ, ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇಷ್ಟೊಂದು ಹಣ ಸೋರಿ ಹೋಗುತ್ತಿದ್ದರೆ ಉನ್ನತ ಮಟ್ಟದ ತನಿಖೆಯನ್ನು ಮಾಡಿಸುತ್ತೇನೆ. ಆದರೆ ಆ ಉನ್ನತ ಮಟ್ಟದ ತನಿಖೆಯೇನು? ಇವತ್ತು ಯಾರು ರೆಕಮೆಂಡ್ ಮಾಡಿದ್ದಾರೆ, ಆಫೀಸರ್‌ಗಳ ಪರವಾಗಿಯೇ ಅವರು ರೆಕಮೆಂಡ್ ಮಾಡಿ ಅಥವಾ ವಿನಾಕಾರಣ ಯಾವುದೋ ಒಬ್ಬ ಆಫೀಸರ್‌ನ್ನು ಗುರಿ ಇಟ್ಟುಕೊಂಡು ರೆಕಮೆಂಡ್ ಮಾಡಿದ್ದರೆ I will have to go into that matter. I accept his suggestion that the matter should be enquired into.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಸರ್ಕಾರದ ಉತ್ತರದಾದ ನನಗಂತೂ ಸಮಾಧಾನವಾಗಿಲ್ಲ. ಇದನ್ನು ನಾನು ಬಹಳ ತೀವ್ರವಾಗಿ ಪ್ರತಿಭಟನೆ ಮಾಡುತ್ತಿದ್ದೇನೆ. ಸರ್ಕಾರ ಇನ್ನಾದರೂ ಕೂಡ ಕಣ್ಣು ತೆರೆಯಬೇಕು. ಆಗಿರುವ.....

ಶ್ರೀ ಎಂ. ಮಲ್ಲಿಕಾರ್ಜುನ: ಅವರು ಈಗ ಕೇಳಿದ್ದುದು ಉನ್ನತ ಮಟ್ಟದ ಎನ್‌ಕ್ವೈರಿ ಮಾಡಿ ಎಂದು ಕೇಳಿದ್ದಾರೆ. ತಾವೂ ಕೂಡ ಉನ್ನತ ಮಟ್ಟದ ತನಿಖೆಯನ್ನು ಮಾಡಿಸುತ್ತೇವೆ ಎಂದು ಹೇಳಿದಿರಿ. ಅದನ್ನು ಯಾರಿಂದ ಮಾಡಿಸುತ್ತೀರಿ? ಯಾವಾಗ ಮಾಡಿಸುತ್ತೀರಿ ಎಂದು ಇಷ್ಟು ಹೇಳಿದರೆ ಒಳ್ಳೆಯದು. ಏಕೆಂದರೆ

ಎನ್‌ಕ್ವೈರಿ ಯನ್ನು ಕೇಳಿದ್ದು ಮತ್ತು ತಾವು ತನಿಖೆಗೆ ತಯಾರಾಗಿದ್ದೀರಿ. ಅದಕ್ಕೆ ದಯವಿಟ್ಟು ತಾವು ಯಾರ ಮುಖಾಂತರ ಅದನ್ನು ಮಾಡಿಸುತ್ತೀರಿ ಎಂದು ಹೇಳಿದರೆ ಬಹಳ ಒಳ್ಳೆಯದು. ಉನ್ನತ ಮಟ್ಟದ ತನಿಖೆ ಎಂದು ಅವರು ಇಂಥದ್ದೇ ಎಂದು ಕೇಳಿಲ್ಲ. ಉನ್ನತ ಮಟ್ಟದ್ದು ಎಂದರೆ ನಮ್ಮ ಪಬ್ಲಿಕ್ ಅಕೌಂಟ್ಸ್ ಕಮಿಟಿಯೋ ಅಥವಾ ಇಲ್ಲಿರುವ ಸದನದ ಸಮಿತಿಯೋ ಅಥವಾ ಯಾವ ರೀತಿಯಾಗಿ ಎಂದು ತಾವು ಹೇಳಿದರೆ ಒಳ್ಳೆಯದು. ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಮಾಡಿಸುತ್ತೇವೆಂದು ಹೇಳಿದರೆ ಅದನ್ನಾದರೂ ಮಾಡಿಸಿ.

ಶ್ರೀ ಜೆ.ಹೆಚ್. ಪಟೇಲ್ : ಉನ್ನತ ಮಟ್ಟದ ತನಿಖೆಯನ್ನು ಡಿಪಾರ್ಟ್‌ಮೆಂಟ್‌ನಿಂದ ಮಾಡಿಸುತ್ತೇವೆ. ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡುತ್ತೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳೇ ಶಾಮೀಲಾಗಿದ್ದಾರೆ ಎಂದು ಹೇಳಿದೆ.

ಶ್ರೀ ಜೆ.ಹೆಚ್. ಪಟೇಲ್ : ಎಲ್ಲರೂ ಅಲ್ರೀ

ಶ್ರೀ ಎ.ಟಿ. ರಾಮಸ್ವಾಮಿ : ಒಬ್ಬರೋ ಇಬ್ಬರೋ ಇರಬಹುದು. ಇಲ್ಲ ಎಂದು ಹೇಳುವುದಿಲ್ಲ. ಅವರ ಕೈಯಿಂದ ತನಿಖೆ ಮಾಡಿಸುತ್ತೇವೆಂದರೆ ಹೇಗೆ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೂ ಕೂಡ ಎಲ್ಲರೂ ಸಾರಾಸಗಟಾಗಿ ಹೇಳಿಲ್ಲ. ಅದಕ್ಕೆ ನಾಳೆ ಏನಾಗುತ್ತದೆ ಎಂದರೆ ಡಿಪಾರ್ಟ್‌ಮೆಂಟ್ ಎಂದರೂ ಕೂಡ ಅನೇಕ ಜನರು ಒಬ್ಬರಿಗೊಬ್ಬರು ಡಿಫೆಂಡ್ ಮಾಡಿಕೊಳ್ಳುವಂಥದ್ದು ಇರುತ್ತದೆ. ಅದಕ್ಕಾಗಿ ಅವರು ಇವತ್ತು ಉನ್ನತ ಮಟ್ಟದ್ದಾಗಬೇಕು ಎಂದರೆ ಇದು ನೇರವಾಗಿ ಪಬ್ಲಿಕ್ ಅಕೌಂಟ್ಸ್ ಕಮಿಟಿಯಿಂದ ಇದನ್ನು ಎನ್‌ಕ್ವೈರಿ ಮಾಡಿಸಿ. ಅದರಲ್ಲೇನು ತಾಪತ್ರಯವಿರುವುದಿಲ್ಲ. ಡಿಪಾರ್ಟ್‌ಮೆಂಟ್‌ನವರು ಎಂದರೆ ಎಕ್ಸೈಜ್ ಕಮೀಷನರ್‌ರವರೇ ಮಾಡುತ್ತಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೇ, ಇನ್‌ಸ್ಟಿಟ್ಯೂಷನಲ್ ಪೇಟ್ರಿಯಾಟಿಸಂ ಎಂದು ಇರುತ್ತದೆ. ಇನ್‌ಸ್ಟಿಟ್ಯೂಷನನ್ನು ಉಳಿಸುವ ಒಂದು ವ್ಯವಸ್ಥೆಯೇ ಇರುತ್ತದೆ. ಆ ಇನ್‌ಸ್ಟಿಟ್ಯೂಷನಲ್ ಪೇಟ್ರಿಯಾಟಿಸಂ ಎನ್ನುವ ಕನ್‌ಸೆಪ್ಟ್ ಇರುವಾಗ ನಾವು ಡಿಪಾರ್ಟ್‌ಮೆಂಟಲ್ ಎನ್‌ಕ್ವೈರಿ ಎಂದರೆ ಏನಾಗುತ್ತದೆ. ಅವರ ಮೇಲೆಯೇ ಇವತ್ತು ಅಲಿಗೇಷನ್ ಮಾಡಿ ಅವರಿಂದಲೇ ಸೋರಿಹೋಗುತ್ತಿರುವುದು. ನಾನು ಎಲ್ಲರ ಬಗ್ಗೆ ಹೇಳುತ್ತಿಲ್ಲ. There are persons at the help of affairs who know it. ಅವರು ಮಾಡುತ್ತಿರುವುದರಿಂದ ಹೇಳುತ್ತಿರುವುದು.

ಶ್ರೀ ಜೆ. ಹೆಚ್. ಪಟೇಲ್ : ಈಗ ಯಾವ ಇಲಾಖೆಯಲ್ಲಿ ಏನು ಕಸುಬು ಇದೆ, ಆ ಕಸುಬಿನಲ್ಲಿ ಏನೇನು ಒಳಮಾರ್ಗಗಳಿವೆ. ಅವರಿಗೆ ಗೊತ್ತಾಗುತ್ತದೆಯೇ ಹೊರತು ಅದನ್ನು ಪೋಲೀಸ್‌ನವರಿಗೆ ಹೇಳಿದರೆ ಆಗುತ್ತದೆಯೇ? ತಹಶೀಲ್ದಾರ್‌ರನ್ನು ಹಾಕಿದರೆ ಮಾಡುತ್ತಾರೆಯೇ? ಆದ್ದರಿಂದ ಅದೇ ಡಿಪಾರ್ಟ್‌ಮೆಂಟ್‌ನಲ್ಲಿ ಯಾವ ಉನ್ನತ ಮಟ್ಟದ ಅಧಿಕಾರಿಗಳು ಅಂಥ ಶಿಕ್ಷೆ ಕೊಡುವುದಕ್ಕೆ ಯೋಗ್ಯ ಎಂದು ಏನು ತಿಳಿದುಕೊಳ್ಳುವವರು ಇದ್ದಾರೆ, he must be knowing about the subject. Only department people and not all.

ಅಧ್ಯಕ್ಷರು : ನೀವೇ ಹೇಳಿ. ಅದೇಕೆ ಅವರಿಗೆ ಹೇಳಿಕೊಡುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರೂ ಹೇಳಬೇಕಾಗಿಲ್ಲ. ಅವರಿಗೂ ಗೊತ್ತಿದೆ. ಅದೇ ಡಿಪಾರ್ಟ್‌ಮೆಂಟ್ ಮೇಲೆ ಅಲಿಗೇಷನ್ ಇದ್ದಕಾರಣ ಅದಕ್ಕಾಗಿ ಅವರೇ ಮಾಡುವುದು ಚೆನ್ನಾಗಿರುವುದಿಲ್ಲ. ಮತ್ತು ಅಲ್ಲಿಯೂ ಅವರೇನೂ ಎಕ್ಸ್‌ಪರ್ಟ್ಸ್ ಏನೂ ಇರುವುದಿಲ್ಲ. ನಿಮಗೆ ಗೊತ್ತಿರುವ ಹಾಗೆ ಎರಡು ಮೂರು ತಿಂಗಳಿಗೇ ಬದಲಾಯಿಸಿ ಐ. ಎ. ಎಸ್. ಆಫೀಸರ್ಸ್‌ನ್ನು ಹಾಕುತ್ತಿದ್ದೀರಿ. ದಯವಿಟ್ಟು ತಾವು ಮುಖ್ಯಕಾರ್ಯದರ್ಶಿಗಳ ಅವರ ಅಧ್ಯಕ್ಷತೆಯಲ್ಲಿ ಮಾಡಿಸಿ. 400 ಕೋಟಿ ರೂಪಾಯಿ ಪ್ರಶ್ನೆ ಇರುವುದು. ಅವರು ಆಫೀಸಿಯಲ್ ಅಲ್ಲವೇ? ಉನ್ನತ ಮಟ್ಟ ಎಂದರೇನು? ಮುಖ್ಯ ಕಾರ್ಯದರ್ಶಿಗಳ ಮೇಲೂ ನಿಮಗೆ ನಂಬಿಕೆ ಇಲ್ಲ ಎಂದರೆ ಹೇಗೆ? ಮತ್ಯಾರು?

ಶ್ರೀ ಕಾಗೋಡು ತಿಮ್ಮಪ್ಪ : ಈಗ ಇರುವ ಮುಖ್ಯಕಾರ್ಯದರ್ಶಿಯವರು ಒಂದು ಸಾರಿ ಎಕ್ಸ್‌ಟ್ರಾ ಕಮೀಷನರ್ ಆಗಿ ಕೆಲಸ ಮಾಡಿದ್ದಾರೆ. ಅವರಿಗೆ ಇದರ ಅನುಭವ ಇದೆ. ಈಗ ಉನ್ನತ ಮಟ್ಟ ಎಂದು ಹೇಳಿದರೆ ಕೊನೆಯ ಪಕ್ಷ ಸರ್ಕಾರದ ಮಟ್ಟದ್ದಾದರೂ ಅದಾದರೂ ಆಗಿರಬೇಕಲ್ಲ. ಈಗೇನು ಜ್ಯುಡಿಷಿಯಲ್ ಎನ್‌ಕ್ವೈರಿ ಕೇಳುತ್ತಿಲ್ಲ. ಮ್ಯಾಜಿಸ್ಟೇಟ್ ಎನ್‌ಕ್ವೈರಿ ಕೇಳುತ್ತಿಲ್ಲ. ಉನ್ನತ ಮಟ್ಟದಲ್ಲಿ ಉನ್ನತ ಅಧಿಕಾರಿ ಇರಬೇಕು. ಅದಕ್ಕಿಂತ ಉನ್ನತ ಅಧಿಕಾರಿ ಯಾರು ಇಲ್ಲ ತಾನೇ? ಮುಖ್ಯಕಾರ್ಯದರ್ಶಿಗಳಿಂದಲೇ ಮಾಡಿಸಿ. ಇಲ್ಲಾ ಅಡಿಷನಲ್ ಚೀಫ್ ಸೆಕ್ರೆಟರಿಯವರಿಂದ ಮಾಡಿಸಿ.

(ಗೊಂದಲ)

Sri. J.H. Patel : If you do not believe me, I cannot help.

(Interruptions)

Sri. M. Mallikarjuna Kharge : The Allegation is against the Department itself.

ಶ್ರೀ ಜೆ. ಹೆಚ್. ಪಟೇಲ್ : ಡಿಪಾರ್ಟ್‌ಮೆಂಟ್‌ನಲ್ಲಿ ಎಲ್ಲರೂ ಹಾಗೆಯೇ ಇದ್ದಾರೆಯೇ?

This should not be allowed to go like this. This is logical absurdity.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಚೀಫ್ ಸೆಕ್ರೆಟರಿ ಎಂದರೂ ಒಪ್ಪುವುದಿಲ್ಲ. ಪಿ. ಎ. ಸಿ. ಎಂದರೂ ಒಪ್ಪವುದಿಲ್ಲ. ಅಡಿಷನಲ್ ಚೀಫ್ ಸೆಕ್ರೆಟರಿ ಎಂದರೂ ಒಪ್ಪುವುದಿಲ್ಲ. ಅಂದರೆ ಇದರ ಅರ್ಥ ಏನು ತಿಳಿದುಕೊಳ್ಳೋಣ. ನಿಮಗೇನು ಈ ಹಗರಣವನ್ನು ಮುಚ್ಚಬೇಕು ಎಂತಲೇನು? ಏನು ಇದೆ?

ಅಧ್ಯಕ್ಷರು : ಮುಖ್ಯಮಂತ್ರಿಗಳು ಏನು ಹೇಳುತ್ತಾರೆಂದರೆ ಡಿಪಾರ್ಟ್‌ಮೆಂಟಿನ ವಿಚಾರ ಡಿಪಾರ್ಟ್‌ಮೆಂಟಿನ ಮೇಲೆ ನೀವು ಏನು ಸಾರಾಸಗಟು ಅಪಾದನೆ ಏನೂ ಮಾಡಿಲ್ಲ. ಡಿಪಾರ್ಟ್‌ಮೆಂಟ್‌ನಲ್ಲಿ ಯಾರು ಅರ್ಹರಿದ್ದಾರೆ, ಯಾರು ಉನ್ನತ ಮಟ್ಟದಲ್ಲಿದ್ದಾರೆ, ಅವರ ಕಡೆಯಿಂದ ಮಾಡಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ನಾವು ಡಿಪಾರ್ಟ್‌ಮೆಂಟ್‌ನಲ್ಲಿ ನಡೆದಿರುವಂತಥದ್ದು ಅನೇಕ ಸಾರಿ ಅವರ ಗಮನಕ್ಕೆ ತಂದರೂ ಅಲ್ಲಿ ನ್ಯಾಯ ಸಿಗಲಿಲ್ಲ ಎನ್ನತಕ್ಕ ದೃಷ್ಟಿಯಿಂದಲೇ ಇವತ್ತು

ಪ್ರಸ್ತಾಪ ಮಾಡಿದ್ದಲ್ಲ. ಅದಕ್ಕೇ ಅಟ್‌ಲೀಸ್ಟ್ ಚೀಫ್ ಸೆಕ್ರೆಟರಿ ಅಂದರೆ ಹೆದರಿಕೆ ಆದರೂ ಇರುತ್ತದೆ ಎನ್ನತಕ್ಕ ದೃಷ್ಟಿಯಿಂದ ಹೊರತಾಗಿ ಇದರಿಂದ ನಿಮಗೆ ಬಹಳ ತೊಂದರೆಯೇ?

ಅಧ್ಯಕ್ಷರು : ನೀವು ಎಷ್ಟು ಸಲ ಕೇಳಿದರೂ ಅವರು ಅದೇ ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇದಕ್ಕೆ ಅವರು ಚೀಫ್ ಸೆಕ್ರೆಟರಿಗೂ ಒಪ್ಪುವುದಿಲ್ಲ, ಪಬ್ಲಿಕ್ ಅಕೌಂಟ್ಸ್ ಕಮಿಟಿಗೂ ಒಪ್ಪುವುದಿಲ್ಲ. ಆಮೇಲೆ ನಮ್ಮ ಅಡಿಷನಲ್ ಚೀಫ್ ಸೆಕ್ರಟರಿಗೂ ಒಪ್ಪುವುದಿಲ್ಲ ಎಂದರೆ ನಾನು ನೇರವಾಗಿ ಹೇಳಬೇಕಾಗುತ್ತದೆ. ಈ ಹಗರಣವನ್ನು ಮುಚ್ಚುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ. ಅದಕ್ಕಾಗಿ ಇದನ್ನು ನಾವು ಪ್ರತಿಭಟಿಸಿ ನಾವು ವಾಕೌಟ್ ಮಾಡುತ್ತಿದ್ದೇವೆ.

(ವಿರೋಧ ಪಕ್ಷ ನಾಯಕರು ಹಾಗೂ ಇತರ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

8) ಶಾಸನ ರಚನೆ

ಅ) ಕರ್ನಾಟಕ ವಿದ್ಯುತ್ ಬಳಕೆ ಮೇರೆಗೆ ತೆರಿಗೆ ವಿಧಿಸುವ ತಿದ್ದುಪಡಿ ವಿಧೇಯಕ, 1998ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಮಂತ್ರಿಗಳು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ವಿದ್ಯುತ್ ಬಳಕೆ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಅನುಮತಿ ನೀಡಲಾಗಿದೆ.

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ವಿದ್ಯುತ್ ಬಳಕೆ ಮೇಲೆ ತೆರಿಗೆ ವಿಧಿಸುವ (ತಿದ್ದುಪಡಿ) ವಿಧೇಯಕವನ್ನು ಮಂಡಿಸುತ್ತಿದ್ದೇನೆ.

ಪ್ರಸ್ತಾಪವನ್ನು ಮಂಡಿಸಲ್ಪಟ್ಟಿತು.

ಆ) ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕ, 1998 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಅನುಮತಿ ನೀಡಲಾಗಿದೆ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಅಬಕಾರಿ ತಿದ್ದುಪಡಿ ವಿಧೇಯಕವನ್ನು ಮಂಡಿಸುತ್ತಿದ್ದೇನೆ.

9) ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂ.ವ)

ಶ್ರೀ ಸಯ್ಯದ್ ಜುಲ್ಫೀಕರ್ ಹಷ್ಮಿ (ಬೀದರ) :- ಮಾನ್ಯ ಅಧ್ಯಕ್ಷರೆ, ತಾವು ಬಜೆಟ್ ಮೇಲೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

(ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿಯವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ನಮ್ಮ ದೇಶ ಸ್ವಾತಂತ್ರವಾಗಿ 50 ವರ್ಷವಾಗಿದೆ. ನಾವು ಈ ಸ್ವಾತಂತ್ರ ದೇಶದಲ್ಲಿ 50 ವರ್ಷದಿಂದ ಎಲ್ಲಾ ಪಕ್ಷವನ್ನೂ ನೋಡುತ್ತಿದ್ದೇವೆ. ಯಾರು ಸಾಮಾಜಿಕ ನ್ಯಾಯ ಎಂದು ಹೇಳುತ್ತಾರೆ, ಯಾರು ಸಮಾಜ ಇನ್‌ಸಾಫ್ ಎಂದು ಹೇಳುತ್ತಾರೆ, ಯಾರೋ ಸೋಷಿಯಲ್ ಜಸ್ಟೀಸ್ ಎಂದು ಹೇಳುತ್ತಾರೆ, ಈ ರಾಷ್ಟ್ರದಲ್ಲಿ , ಈಗ ನಮ್ಮ ರಾಜ್ಯದಲ್ಲಿ ಸಮಾಜವಾದಿ ಸರ್ಕಾರ ಇದೆ. ಮತ್ತು ಸನ್ಮಾನ್ಯ ಜೆ. ಹೆಚ್. ಪಟೇಲ್ ಅವರು ಸಮಾಜವಾದಿಗಳು. ನಮ್ಮ ಹಿರಿಯರು ಹೇಳುತ್ತಿದ್ದರು. ಯಾವಾಗ ಜೆ.ಹೆಚ್. ಪಟೇಲ್ ಅವರು ಮುಖ್ಯಮಂತ್ರಿಗಳಾದರು ಆಗ ನಮ್ಮ ಊರಿನಲ್ಲಿ ಎಲ್ಲಾ ಓಲ್ಡ್‌ಏಜ್ ಜನ ಹೇಳಿದರು- ಅಪ್ಪಾ ಈಗ ಈ ರಾಜ್ಯದಲ್ಲಿ ಸಮಾಜವಾದಿ ಸರ್ಕಾರ ಇದೆ. ಎಲ್ಲಾ ಸಮಾಜಕ್ಕೆ ಸಮಾನ್ಯವಾಗಿ ನಾಯ್ಯ ಸಿಗುತ್ತದೆ ಎಂದು ಹೇಳಿದರು. ಅದರೊಳಗಡೆ ಈಗ ಹೆಚ್ಚಾಗಿ ಜನತಾ ದಳದ ಸರ್ಕಾರ ಇದೆ. ಅಲ್ಪಸಂಖ್ಯಾತರ ಜನಗಳು ಇದು ನಮ್ಮ ಪಕ್ಷ, ನಮ್ಮ ಸರ್ಕಾರ ಎಂದು ತಿಳಿದುಕೊಂಡಿದ್ದಾರೆ. ಈ ಸಾಲಿನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಬಜೆಟ್ ಮಂಡಿಸಿದ್ದಾರೆ. ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಮೊದಲ ಬಾರಿಗೆ ನಮ್ಮ ರಾಜ್ಯದಲ್ಲಿ ಅವರು ಅಲ್ಪಸಂಖ್ಯಾತರ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನ್ನು ಪ್ರಾರಂಭ ಮಾಡುತ್ತೇನೆಂದು ಈ ಬಜೆಟ್ ಪುಸ್ತಕದಲ್ಲಿ ಹೇಳಿದ್ದಾರೆ. ಅವರಿಗೆ ಧನ್ಯವಾದಗಳು. ನಾನು ಏಕೆ ಹೇಳುತ್ತೇನೆ ಎಂದರೆ ಈಗಾಗಲೇ ಉರ್ದು ಮತ್ತು ಅದರ ಮೈನಾರಿಟಿ ಲಾಂಗ್ವೇಜ್ ಎಂಬ ಒಂದು ನಿರ್ದೇಶನಾಲಯ ಇದೆ, ಒಂದು ಇಲಾಖೆ ಇದೆ. ಅಲ್ಲಿ ಕೆಲಸ ಆಗುತ್ತಿಲ್ಲ. ಭಾರತ ಸರ್ಕಾರದ ಬೇಕಾದಷ್ಟು ಯೋಜನೆಗಳನ್ನು ಆ ಇಲಾಖೆಯಲ್ಲಿ ಇಂಪ್ಲಿಮೆಂಟ್ ಮಾಡುತ್ತಿಲ್ಲ. ಲ್ಯಾಪ್ಸ್ ಆಗುತ್ತಿದೆ. ಸಾಕಷ್ಟು ಸ್ಕೀಮ್‌ಗಳು, ಕೋಟ್ಯಾಂತರ ರೂಪಾಯಿಗಳು ಲ್ಯಾಪ್ಸ್ ಆಗುತ್ತಿದೆ. ಕೆಂದ್ರ ಸರ್ಕಾರದ ಬಹಳಷ್ಟು ಹಣವನ್ನು ಆ ಇಲಾಖೆ ಲ್ಯಾಪ್ಸ್ ಮಾಡಿದೆ. ನಿರ್ದೇಶಕರು, ಉರ್ದು ಮತ್ತು ಇತರ ಭಾಷೆಗಳು, ತಮಗೆ ಗೊತ್ತಿದೆ. ಈ ಅಲ್ಪಸಂಖ್ಯಾತರ ಅಭಿವೃದ್ಧಿ ಸಲುವಾಗಿ ತಾವೊಂದು ಕಲ್ಯಾಣ ಇಲಾಖೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಿ, ಆಶ್ವಾಸನೆ ಕೊಟ್ಟಿದ್ದೀರಿ. ಅದು ಕರೆಕ್ಟಾಗಿ ಕಾರ್ಯವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಇದೆ. ಸುಮ್ಮನೇ ನಾಮಕಾವಸ್ಥೆ ಇಲಾಖೆ ಇದ್ದರೆ ಕೆಲಸ ಆಗುವುದಿಲ್ಲ. ಈಗ ಮೈನಾರಿಟಿ ಕಮೀಷನ್ ಇದೆ. ಈಗ ನಮ್ಮ ರಾಜ್ಯದಲ್ಲಿ ಮೈನಾರಿಟಿ ಕಮೀಷನ್ ಇದೆ. ಅದು ಯಾವುದಕ್ಕೋಸ್ಕರ ಇದೆ ಎಂದು ನಮಗೆ ಗೊತ್ತಾಗುತ್ತಿಲ್ಲ. ಅದು ಮೈನಾರಿಟಿ ಕಮೀಷನ್ ತಮಗೆ ಒಂದು ಸಾರಿಯಾದರೂ ಸಜೆಷನ್ ಕೊಟ್ಟಿದ್ದಾರಾ? ತಾವೇ ಮಾಡಿದ್ದೀರಿ, ಮೈನಾರಿಟಿ ಕಮೀಷನ್‌ನ ಅಧ್ಯಕ್ಷರು ಮತ್ತು ಸದಸ್ಯರನ್ನು ಅಪಾಯಿಂಟ್ ಮಾಡಿದ್ದೀರಿ. ತಾವೇ ನಾಮಿನೆಟ್ ಮಾಡಿದ್ದೀರಿ. ನಿಮಗೆ ಒಂದು ಸಾರಿಯಾದರೂ ಅವರು ಅಲ್ಪಸಂಖ್ಯಾತರ ಸಮಸ್ಯೆ ಏನು ಇದೆ, ಅವರ ಪರಿಣಾಮ ಏನಾಗುತ್ತಿದೆ ಎಂದು ಸಜೆಷನ್ ಕೊಟ್ಟಿಲ್ಲ. ಅಂತಹ ಡಿಪಾರ್ಟ್‌ಮೆಂಟ್ ಆಗಬೇಕಾ ನಿಮ್ಮ ಮೈನಾರಿಟಿ ಡಿಪಾರ್ಟ್‌ಮೆಂಟ್ ಎಂದು ನಮ್ಮ ವಿನಂತಿ ಇದೆ. ನನಗೆ ಸಮಯಾವಕಾಶ ಕಡಿಮೆ ಸಿಕ್ಕಿದೆ. ಅದರ ಸಲುವಾಗಿ ಸ್ವಲ್ಪವೇ ಮಾತನಾಡುತ್ತಿದ್ದೇನೆ. ಮೊದಲನೆಯದಾಗಿ ನಮ್ಮ ಎಜುಕೇಷನ್

ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತೇನೆ. ಪರ್ಟಿಕ್ಯುಲರ್ ನಮ್ಮ ಬೇಡಿಕೆ ಇತ್ತು, ಲಿಂಗ್ವಿಸ್ಟಿಕ್ ಮೈನಾರಿಟೀಸ್ ಬಗ್ಗೆ. ಉರ್ದು ಆಗಲೀ, ಮರಾಠಿ ಆಗಲಿ, ನಾವು ಹೇಳುತ್ತಿದ್ದೆವು. ನಮ್ಮ ಉರ್ದು ಸ್ಕೂಲಿನಲ್ಲಿ ಒಂದು ಅಡಿಷನಲ್ ಕನ್ನಡ ಟೀಚರ್‌ಗೆ ಅವಕಾಶ ಮಾಡಿಕೊಡಿ ಎಂದು ಕೇಳಿದರೂ ನಾವು ಅವಕಾಶ ಮಾಡಿಕೊಡಲಿಲ್ಲ. ಮೂರು ವರ್ಷದಿಂದ ನಾನು ನನ್ನ ಭಾಷಣದಲ್ಲಿ ಹೇಳುತ್ತಿದ್ದೇನೆ. ತಾವು ನೋಡಿರಿ, ನಮಗೆ ಕನ್ನಡ ಕಲಿಯಬೇಕೆಂದು ಆಸೆ ಇದೆ. ನನ್ನ ಶಿಕ್ಷಣ ಹೈದರಾಬದ್‌ನಲ್ಲಿ ಆಗಿದೆ. ನಾನು ಶಾಸಕನಾದ ಮೇಲೆ ಕನ್ನಡವನ್ನು ಕಲಿತೆ. ಪುನ: ಓದಲು ಶುರು ಮಾಡಿದ್ದೇನೆ. ಈಗ ನಮ್ಮ ಹುಡುಗರು ಕನ್ನಡ ಕಲಿಯಬೇಕೆಂದು ಹೇಳುತ್ತಿದ್ದಾರೆ, ಆದರೆ ಅವರಿಗೆ ಅವಕಾಶ ಮಾಡಿಕೊಡುತ್ತಿಲ್ಲ. ಅವರಿಗೂ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ನಮ್ಮ ವಿನಂತಿ ಇದೆ. ನಾನು ಪೊಲಿಟಿಕಲ್ ಆಗಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಇದು ಸರ್ಕಾರ ಹೀಗೆ ಮಾಡಿದೆ, ಹಾಗೆ ಮಾಡಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಸಜೆಷನ್ ಸರ್ಕಾರಕ್ಕೆ ಕೊಡುತ್ತಿದ್ದೇನೆ. ತಾವು ಮಾಡುತ್ತೀರಿ ಎಂದು ನಿಮ್ಮ ಮೇಲೆ ನಮಗೆ ಬಹಳ ವಿಶ್ವಾಸ ಇದೆ. ನೀವು ಮಾಡುತ್ತೀರಿ, ತಮ್ಮಲ್ಲಿ ವಿಶ್ವಾಸ ಇದೆ. ನಿಮ್ಮ ಮೈನಾರಿಟಿ ಕಮೀಷನ್ ಏನೂ ತಮಗೆ ಸಜೆಷನ್ ಕೊಟ್ಟಿಲ್ಲ . ತಾವಾಗಿಯೇ ಈ ಅಲ್ಪಸಂಖ್ಯಾತರ ಸಲುವಾಗಿ ಸ್ಕೀಮನ್ನು ಪ್ರಾರಂಭ ಮಾಡಿದ್ದೀರಿ. ಆ ಸ್ಕೀಮನ್ನು ತಾವು ಮಾಡುತ್ತೀರಿ. ಈಗ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ತಾವು ದುಡ್ಡು ಕೊಟ್ಟಿದ್ದೀರಿ, ಇಂಪ್ಲಿಮೆಂಟ್ ಆಗುತ್ತಿಲ್ಲ. ತಾವು ಏನು ಮಾಡುತ್ತೀರಿ, ಬ್ಯಾಂಕಿನ ಮೂಲಕ ಲೋನ್ ಒದಗಿಸಿ ಕೊಡುತ್ತಿರಿ. ಆದರೆ ಬ್ಯಾಂಕಿನವರು ನಮಗೆ ಲೋನ್ ಕೊಡುವುದಿಲ್ಲ. ಸೇಮ್ ಪ್ರಾಬ್ಲಮ್ ಎಸ್‌ಸಿ / ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ದ್ದು ಇದೆ. ಅದೇ ತರಹ ಸಮಸ್ಯೆ ಬ್ಯಾಕ್ ವರ್ಡ್ ಕಾರ್ಪೊರೇಷನ್ ಇದೆ. ನಮ್ಮದು ತಮ್ಮಲ್ಲಿ ವಿನಂತಿ ಇದೆ. ಬ್ಯಾಂಕ್‌ನವರ ಮೇಲೆ ನಿಮಗೆ ಕಂಟ್ರೋಲ್ ಇರಬೇಕು. ಎರಡು ವರ್ಷದಿಂದ ನಿಮಗೆ ಉದಾಹರಣೆಗೆ ಹೇಳುತ್ತೇನೆ. ಎಸ್.ಸಿ:ಎಸ್.ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನಿಂದ ಲ್ಯಾಂಡ್ ಪರ್ಚೇಸ್ ಸ್ಕೀಮ್ ಇದೆ. ಎರಡು ವರ್ಷದಿಂದ ಅಪ್ಲಿಕೇಷನ್ ಪೆಂಡಿಂಗ್ ಇದೆ. ಅವರು ಅಡ್ವಾನ್ಸ್ ಆಗಿ ಎಸ್‌ಸಿ:ಎಸ್‌ಟಿ ಜನ ದುಡ್ಡು ಕೊಟ್ಟಿದ್ದಾರೆ. ಅಡ್ವಾನ್ಸ್ ಆಗಿ ದುಡ್ಡು ಕೊಟ್ಟಿದ್ದಾರೆ. ಆದರೆ ಲ್ಯಾಂಡ್ ಲಾರ್ಡ್ ಏನು ಹೇಳುತ್ತಾರೆ, ಎರಡು ವರ್ಷ ಆಗಿದೆ ಆಗ 25 ಸಾವಿರ ರೇಟ್ ಇತ್ತು, ಈಗ 35 ಸಾವಿರ ರೇಟ್ ಆಗಿದೆ ಎಂದು ಹೇಳುತ್ತಾರೆ. ಅವರು ಎಲ್ಲಿಂದ ತಂದು ಕೊಡಬೇಕು. ಇದು ಇಮ್ಮೀಡಿಯಟ್ ಆಗಿ ಇಂಪ್ಲಿಮೆಂಟ್ ಆಗಬೇಕೆಂದು ತಮ್ಮಲ್ಲಿ ವಿನಂತಿ ಇದೆ. ನಮ್ಮದು ಬಾರ್ಡರ್ ಏರಿಯಾ ಇದೆ. ಎಸ್ಪಷಲಿ ಬೀದರ್ ಡಿಸ್ಟ್ರಿಕ್ಟ್ ಬಾರ್ಡರ್ ಏರಿಯಾ ಇದೆ. ಅಲ್ಲಿ ಎಲ್ಲಾ ಭಾಷೆಯವರು ಇದ್ದಾರೆ. ಬಿದರ್ ಏರಿಯಾದಲ್ಲಿ ಎಲ್ಲಾ ಭಾಷೆಯ ಜನರು ಇದ್ದಾರೆ. ಅಲ್ಲಿ ಮರಾಠಿ, ಉರ್ದು ಮತ್ತು ಕನ್ನಡ ತೆಲುಗು ಭಾಷೆಗಳು ಇವೆ. ಬಾರ್ಡರ್ ಏರಿಯಾದಲ್ಲಿ ಹೈಸ್ಕೂಲ್ ಇಲ್ಲದ ಕಾರಣ ನಮ್ಮ ಹುಡುಗರು ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶಕ್ಕೆ ಹೋಗುತ್ತಿದ್ದಾರೆ. ನಮ್ಮಲ್ಲಿ ತಕ್ಕ ಸೌಲಭ್ಯಗಳು ಇಲ್ಲದ ಕಾರಣ ಅಲ್ಲಿಗೆ ಜನ ಹೋಗುತ್ತಿದ್ದಾರೆ. ಆಂಧ್ರದಲ್ಲಿ ಕೊಡುತ್ತಿರುವ ಸೌಲಭ್ಯ ನಮ್ಮ ಬಾರ್ಡರ್ ಏರಿಯಾದಲ್ಲಿ ಇರುವ ಜನರಿಗೆ ಇವತ್ತು ನಮ್ಮ ಸರ್ಕಾರ ಕೊಡುತ್ತಿಲ್ಲ. ಆದುದರಿಂದ ಬಾರ್ಡರ್ ಏರಿಯಾದಲ್ಲಿ ಹೋಬಳಿ ಲೆವಲ್‌ನಲ್ಲಾದರೂ ಒಂದು ಹೈಸ್ಕೂಲ್, ಜ್ಯೂನಿಯರ್ ಕಾಲೇಜು ಮತ್ತು ಐ.ಟಿ.ಐ.ಯನ್ನು ಪ್ರಾರಂಭಿಸಬೇಕೆಂದು ನಾನು ವಿಶೇಷವಾಗಿ ಶಿಕ್ಷಣ ಇಲಾಖೆಯಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸೌಲಭ್ಯಗಳು ಇಲ್ಲದ ಕಾರಣ ಅಲ್ಲಿನ ಜನರಲ್ಲಿ ಸರ್ಕಾರದ ಬಗ್ಗೆ ಒಳ್ಳೆಯ ಭಾವನೆ ಬರುತ್ತಿಲ್ಲ, ಬದಲಿಗೆ ಏನಪ್ಪಾ ನಮಗೆ ಒಳ್ಳೆಯ ಸೌಲಭ್ಯಗಳು ಇಲ್ಲ, ಎನ್ನುತ್ತಿದ್ದಾರೆ. ಅವರು ಬಿಸಿನಸ್, ಹೈಯರ್ ಎಜ್ಯುಕೇಷನ್ ಎಲ್ಲಾದಕ್ಕೂ ಮಹಾರಾಷ್ಟ್ರದ ಉದ್‌ಗಿರ್, ಸೋಲಾಪುರ ಪೂನಾಗಳಿಗೆ ಹೋಗುತ್ತಿದ್ದಾರೆ. ಇಲ್ಲ ಎಂದರೆ

ಆಂಧ್ರಪ್ರದೇಶಕ್ಕೆ ಹೋಗಬೇಕು. ಅದರ ಸಲುವಾಗಿ ನಮ್ಮ ಬಾರ್ಡರ್ ಏರಿಯಾದಲ್ಲೂ ಸಹಿತ ತಕ್ಕ ಸೌಲಭ್ಯಗಳನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಬಾರ್ಡರ್ ಏರಿಯಾದಲ್ಲಿ ಈಗಾಗಲೇ ಅಲ್ಲಿನ ಜನರ ಮದರ್‌ಟಂಗ್ ಆದ ಮರಾಠಿ, ಉರ್ದು ಹೈಸ್ಕೂಲ್‌ಗಳು ಇವೆ. ಆದರೆ ಅವು ಸಿಸ್ಟಮ್ಯಾಟಿಕ್ ಆಗಿ ನಡೆಯುತ್ತಾ ಇಲ್ಲ, ಸರಿಯಾದ ಕಟ್ಟಡಗಳಿಲ್ಲ, ಪೀಠೋಪಕರಣಗಳು ಇಲ್ಲ. ಕೇಂದ್ರ ಸರ್ಕಾರದಿಂದ ಅದಕೋಸ್ಕರ ಹಣ ಬರುತ್ತದೆ ಅದನ್ನು ಇಂಪ್ಲಿಮೆಂಟ್ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಲ್ಪ ಸಂಖ್ಯಾತರ ಸ್ಕೀಮ್‌ನಲ್ಲಿ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಇಲೆವೆನ್ ಟೈಮ್ಸ್ ಮೆಮೋರ್ಯಾಂಡಮ್ ಕೊಟ್ಟಿದ್ದೇನೆ. ಅಲ್ಪಸಂಖ್ಯಾತರ ಪರವಾಗಿ ಹದಿನೈದು ಅಂಶಗಳ ಕಾರ್ಯಕ್ರಮ ಏನಿದೆ ಅದರ ಬಗ್ಗೆ ಜಿಲ್ಲಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮೀಟಿಂಗ್ ನಡೆಯಬೇಕು. ಇವು 2-3 ತಿಂಗಳಿಗೊಮ್ಮೆ ನಡೆಯಬೇಕು. ಆದರೆ ಮೂರು ವರ್ಷದಲ್ಲಿ ಒಂದು ಮೀಟಿಂಗ್ ನಡೆಯಲಿಲ್ಲ. ಬೀದರ್, ಗುಲ್ಬರ್ಗಾದಲ್ಲೂ ಒಂದು ಮೀಟಿಂಗ್ ನಡೆಯಲಿಲ್ಲ. ಮೀಟಿಂಗ್ ನಡೆದರೆ ಅಲ್ಲಿನ ಜನರ ಸಮಸ್ಯೆ ಏನು ತೊಂದರೆ ಏನು ಎಂಬುದು ತಿಳಿಯುತ್ತದೆ. ಎಲಾ ಚೀಫ್ ಸೆಕ್ರೆಟರಿಗಳು, ಇಲಾಖಾ ಅಧಿಕಾರಿಗಳು ಸೇರಿದಂಥ ಒಂದು ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು 15 ಅಂಶಗಳ ಕಾರ್ಯಕ್ರಮದ ಸಲುವಾಗಿ 2-3 ತಿಂಗಳೊಗೊಮ್ಮೆ ಸಭೆ ಸೇರಬೇಕೆಂದು ಹೇಳಿದ್ದರು, ಆದರೆ ಅದು ಆಗುತ್ತಿಲ್ಲ. ನಾನು ಇದರ ಬಗ್ಗೆ ನಿಮಗೆ ಪತ್ರ ಬರೆದಿದ್ದೆ, ಮೆಮೋರ್ಯಾಂಡಮ್ ಕೊಟ್ಟಿದ್ದೆ, ನಾನೇ ನಿಮಗೆ ಇದರ ಬಗ್ಗೆ ಹೇಳಿದ್ದೆ, ಆದರೂ ಸಹ ನೀವು ಇದರ ಬಗ್ಗೆ ಗಮನ ಹರಿಸಲಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಮಂತ್ರಿಗಳನ್ನು ಕರೆದು ಅವರಿಗೆ ನಿರ್ದೇಶನಗಳನ್ನು ನೀಡಿ, ಯಾವ ಸಮಾಜ ನಿಮಗೆ ಓಟು ನೀಡಿದೆ, ಅದರ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಇಲ್ಲಿ ಭಾಷಣ ಮಾಡಿ ಏನು ಸಲಹೆ ಸೂಚನೆಗಳನ್ನು ನೀಡುತ್ತಿದ್ದೇನೆ, ಅದನ್ನು ಜನತದಳಾದ ಶಾಸಕರು ಮಾಡಬೇಕಾಗಿತ್ತು, ಮುಖ್ಯಮಂತ್ರಿಗಳಿಗೆ, ಉಪಮುಖ್ಯಮಂತ್ರಿಗಳಿಗೆ ಸಲಹೆಗಳನ್ನು ನೀಡಬೇಕಾಗಿತ್ತು, ಅವರ ಕೆಲಸ ನಾನು ಮಾಡುತ್ತಿದ್ದೇನೆ. ಏಕೆಂದರೆ ಜನತದಳವನ್ನು ಕಟ್ಟಿದವರು ನಾವು. ಇವತ್ತು ನೀವು ಬಂದಿದ್ದೀರಿ, ಅಧಿಕಾರದಲ್ಲಿ ಇದ್ದೀರಿ, ಅವರ ಪರವಾಗಿ ಮಾತನಾಡುತ್ತಾ ಇದ್ದೀರಿ, ಆದರೆ ಜನತದಳದ ಕಷ್ಟ ಕಾಲದಲ್ಲಿ ನಾನು ಅವರ ಜೊತೆಯಲ್ಲಿ ಇದ್ದೆ. ಮುಂದೆ ಬರುವ ಕಾಲದಲ್ಲಿ ಬಹು ಜನ ಸಮಾಜ ಪಾರ್ಟಿ ಖಂಡಿತ ಅಧಿಕಾರಕ್ಕೆ ಬರುತ್ತದೆ. ಆಗ ಬಿ.ಜೆ.ಪಿ ಮತ್ತು ಬಿ.ಎಸ್.ಪಿ. ಎರಡಕ್ಕೆ ಫೈಟ್ ಇರುತ್ತದೆ. ಮತ್ತು ಬೇರೆ ಯಾವ ಪಕ್ಷಗಳೂ ಇರುವುದಿಲ್ಲ. ಬಿ. ಎಸ್.ಪಿ ಯಿಂದ ಬಿ.ಜೆ.ಪಿ. ಯವರಿಗೆ ಭಯ ಇದೆ. ಆದರೆ ಅವರಿಗೆ ಕಾಂಗ್ರೆಸ್ ಮತ್ತು ಜನತದಳದ ಭಯ ಇಲ್ಲ. ಜನತದಳದವರು ನಾಲ್ಕು ವರ್ಷ ಅಧಿಕಾರ ಮಾಡಿ, ಆ ಅವಧಿಯಲ್ಲಿ ಆರು ಜನ ಪ್ರಧಾನಿಗಳು ಬದಲಾವಣೆ ಆದರು. ಕಾಂಗ್ರೆಸ್‌ನವರು 45 ವರ್ಷ ಅಧಿಕಾರ ಮಾಡಿ ಅಲ್ಪಸಂಖ್ಯಾತರಿಗಾಗಿ ಏನು ಮಾಡಿದ್ದೀರಿ? ಇವತ್ತು ಅಲ್ಪ ಸಂಖ್ಯಾತರ ಪರಿಸ್ಥಿತಿ ನೋಡಿ. ನಿಮ್ಮಲ್ಲಿ ಅಲ್ಪ ಸಂಖ್ಯಾತರ ನಾಯಕರು ಬಹಳ ಜನ ಇದ್ದಾರೆ ಆದರೆ ಎನನ್ನೂ ಮಾಡಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರೂ ಸಹಿತ ಒಂದು ಕಾಲದಲ್ಲಿ ಅದರ ಅಧ್ಯಕ್ಷರಾಗಿದ್ದರು. ಸ್ವಾತಂತ್ರ ಪೂರ್ವದಲ್ಲಿ ಎಜ್ಯುಕೇಷನ್ ಹಾಗೂ ಎಂಪ್ಲಾಯ್‌ಮೆಂಟ್‌ನಲ್ಲ 33 ಪರ್ಸೆಂಟ್ ಇದ್ದಂತಹ ನಾವು ಸ್ವಾತಂತ್ಯ ನಂತರ 1.5 ಪರ್ಸೆಂಟ್‌ಗೆ ಬಂದಿದ್ದೇವೆ. ನಾನು ಅಲ್ಪಸಂಖ್ಯಾತರ ಬಗ್ಗೆ ಇಲೆವೆನ್ ಟೈಮ್ಸ್ ಮೆಮೋರ್ಯಾಂಡಮ್ ಕೊಟ್ಟರೂ ಅವರಿಂದ ಉತ್ತರ ಬಂದಿಲ್ಲ. ಹೈದರಾಬಾದ್ ಕರ್ನಾಟಕ ಪ್ರದೇಶದ ಎಲ್ಲಾ ಮಂತ್ರಿಗಳು, ಎಂ. ಎಲ್.ಎ.ಗಳು ಎಲ್ಲಾ ಮುಸ್ಲೀಮ್ -ಲೀಗ್ ಲೀಡರ್ಸ್ ಇದ್ದಂತಹ ಒಂದು ಮೀಟಿಂಗ್, ಅದರಲ್ಲಿ ಸನ್ಮಾನ್ಯ ಎಂ. ಎನ್. ಪಾಟೀಲ್, ಮಾಲೀಕಯ್ಯ ಗುತ್ತೇದಾರ್ ಮತ್ತು ನಾಲ್ಕು ಜಿಲ್ಲಾ ಮಂತ್ರಿಗಳು ಇದ್ದರು.

ಆ ಮೀಟಿಂಗ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ಆಶ್ವಾಸನೆಯನ್ನು ಕೊಟ್ಟರು. ಅವರು, ನಾನು ಒಂದು ಮೀಟಿಂಗ್ ಕರೆಯುತ್ತಿದ್ದೇನೆ, ಅದರಲ್ಲಿ ಎಲ್ಲಾ ಇಲಾಖೆಯ ಸೆಕ್ರೆಟರಿಗಳನ್ನು ಕರೆಸುತ್ತೇನೆ, ಚೀಫ್ ಸೆಕ್ರೆಟರಿ ಇರುತ್ತಾರೆ, ನಿಮ್ಮ ಮೈನಾರಿಟಿ ಮಂತ್ರಿಗಳು ಇರಲಿ, ಅಲ್ಲಿ ಇದರ ಬಗ್ಗೆ ಚರ್ಚಿಸಿ ಪರಿಹಾರ ಮಾಡೋಣ ಎಂದು ಹೇಳಿದರು. ಅದರಂತೆ ಅವರಿಗೆ ನಿರ್ದೇಶನಗಳನ್ನು ಕೊಟ್ಟರು. ಆದರೆ ಇದುವರೆವಿಗೂ ಒಂದು ಮೀಟಿಂಗ್ ನಡೆಯಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಇನ್ನು ನಾನು ವಕ್ಫ್ ಇಲಾಖೆ ಬಗ್ಗೆ ಮಾತನಾಡಬಯಸುತ್ತೇನೆ. ಕೇಂದ್ರ ಸರ್ಕಾರದಿಂದ ಒಂದು ವಕ್ಫ ಆಕ್ಟ್ ಬಂದು ಒಂದೂವರೆ ವರ್ಷ ಆಗಿದೆ, ಆದರೆ ಅದು ಇನ್ನು ಕರ್ನಾಟಕ ರಾಜ್ಯದಲ್ಲಿ ಇಂಪ್ಲೀಮೆಂಟ್ ಆಗುತ್ತಿಲ್ಲ. ತಾವು ಏನು 1992-93, 93-94 ಮತ್ತು 95-96 ನಲ್ಲಿ ವಕ್ಫ್ ಗ್ರಾಂಟ್ಸ್ ಏನು ಕೊಟ್ಟಿದ್ದೀರಿ, ಅದು ಮಾರ್ಚ್ ಮುಗಿಯುತ್ತಾ ಬಂದರೂ ಇನ್ನು ಬಿಡುಗಡೆಯಾಗಿಲ್ಲ. ಇನ್ನು ಒಂದು ಕೋಟಿ ರೂಪಾಯಿಯ ಗ್ರಾಂಟ್ಸ್ ರಿಲೀಸ್ ಆಗಿಲ್ಲ, ಅದನ್ನು ಜಾಗ್ರತೆ ರಿಲೀಸ್ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಒಂದು ಸಲ ಮಾನ್ಯ ಮುಖ್ಯಮಂತ್ರಿಗಳು ನಿಮ್ಮ ವಕ್ಫ್ ಮಂತ್ರಿಯನ್ನು ಉಳಿಸಿಕೊಂಡರೆ ನಿಮ್ಮ ಸಮಸ್ಯೆಯನ್ನು ಬಗೆಹರಿಸಬಹುದು ಎಂದು ಹೇಳಿದ್ದರು. ಆ ಆಸ್ತಿಗೆ ರಕ್ಷಣೆ ಹೇಗೆ ಕೊಡಬೇಕು? ಸರ್ಕಾರದವರೇ ಎಷ್ಟೊಂದು ವಕ್ಫ್ ಆಸ್ತಿಯನ್ನು ಒತ್ತುವರಿ ಮಾಡಿದ್ದಾರೆ. ಖಾಸಗಿಯವರು ಮಾಡಿದ್ದಾರೆ. ನಾವು ಇದು ಮುಸ್ಲೀಮ್ ವಕ್ಫ್ ಪ್ರಾಪರ್ಟಿ ಇದಕ್ಕೆ ರಕ್ಷಣೆ ಕೊಡಿ ಎಂದುಅರ್ಜಿ ಕೊಟ್ಟರೂ ಯಾರು ಕೇಳಲಿಕ್ಕೆ ತಯಾರಿಲ್ಲ. ಅದಕ್ಕೆ ಯಾವುದು ಕಾನೂನೇ ಇಲ್ಲ, ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಏನು ತಮ್ಮ ಭಾಷಣದಲ್ಲಿ ಎಸ್.ಸಿ: ಎಸ್.ಟಿ, ಬ್ಯಾಕ್‌ವರ್ಡ್ ಕ್ಲಾಸಸ್ ಅಲ್ಪಸಂಖ್ಯಾತರ ಬಗ್ಗೆ ಏನು ಯೋಜನೆಗಳನ್ನು ಹೇಳಿದ್ದೀರಿ ಅದನ್ನು ಟೈಮ್ ಟು ಟೈಮ್ ಇಂಪ್ಲಿಮೆಂಟ್ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆ ಯೋಜನೆಗಳ ಇಂಪ್ಲಿಮೆಂಟ್‌ಗೆ ಒಂದು ಸಮಯವನ್ನು ನಿಗದಿ ಮಾಡಿ. ಬೇರೆ ಇಲಾಖೆಗಳಿಗೆಲ್ಲಾ ಸಮಯ ನಿಗದಿ ಮಾಡುತ್ತೀರಿ, ಈ ಸಮಯದಲ್ಲಿ ಟೆಂಡರ್ ಆಗಬೇಕು, ಈ ಸಮಯದಲ್ಲಿ ಅಡ್ಮಿನಿಸ್ಟ್ರೇಸನ್ ಅಪ್ರೂವಲ್ ಆಗಬೇಕು, ಈ ಸಮಯಕ್ಕೆ ಕೆಲಸವನ್ನು ಮುಗಿಸಬೇಕು ಎಂದು ಇದೆ. ಆದರೆ ಈ ಒಂದು ಯೋಜನೆಗಳಿಗೆ ಕಾಲವಧಿ ನಿಗದಿ ಮಾಡಿಲ್ಲ. 31ಮಾರ್ಚ್ ಬಂದಾಗ ಫಂಡ್ಸ್ ರಿಲೀಸ್ ಮಾಡುತ್ತೀರಿ, ಅದು ಎಲ್ಲಾ ಲ್ಯಾಪ್ಸ್ ಆಗುತ್ತದೆ. ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಇಲೆವನ್ ಟೈಮ್ಸ್ ರಿಕ್ವಿಸಿಷನ್ ಕೊಟ್ಟಿದ್ದೇನೆ, ಅವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಎಲ್ಲಾ ಇಲಾಖೆಯ ಕಾರ್ಯದರ್ಶಿಗಳನ್ನು ಕರೆಸಿ ಅವರೊಂದಿಗೆ ಮಾತನಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ. ಮಂತ್ರಿಗಳ ಸಭೆ ಆಗಬೇಕು. ಮತ್ತೊಂದು ನಿಮ್ಮಲ್ಲಿ ವಿನಂತಿ ಇದೆ. ಮಾನ್ಯಮುಖ್ಯಮಂತ್ರಿಗಳೆ ರೆಹಮಾನ್ ಖಾನ್ ರವರ ಒಂದು ಶಿಫಾರಸ್ ಸರ್ಕಾರದಲ್ಲಿದೆ. ದೇವರಾಜ ಅರಸರ 79ನೇ ಹುಟ್ಟು ಹಬ್ಬದ ದಿನ ಅಂದಿನ ಮುಖ್ಯಮಂತ್ರಿ ಶ್ರೀ ವೀರಪ್ಪಮೊಯ್ಲಿಯವರು ಒಂದು ಕಾರ್ಯಕ್ರಮವನ್ನು ಪ್ರಕಟಿಸಿದರು. ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಸಲುವಾಗಿ. ಆ ಕೆ. ರಹಮಾನ್ ಖಾನ್ ಸಮಿತಿ ವರದಿಯ ಶಿಫಾರಸ್‌ಗಳನ್ನು ತಾವು ಎಲ್ಲವನ್ನು ಅನುಷ್ಠಾನ ಮಾಡಬೇಕು ಎಂದು. ಅದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ? ತಾವು ಅವಕಾಶ ಕೊಟ್ಟಿದ್ದೀರಿ, ಧನ್ಯವಾದಗಳು.

★ಶ್ರೀ ಹೆಚ್. ಡಿ. ಬಸವರಾಜ್ (ವೀರಾಜಪೇಟೆ): ಅಧ್ಯಕ್ಷರೇ, ಕಳೆದ ಚುನಾವಣಾ ಸಂದರ್ಭದಲ್ಲಿ ಬಂದ ಫಲಿತಾಂಶಗಳನ್ನು ಗಮನಿಸಿದಾಗ ಕರ್ನಾಟಕದಲ್ಲಿನ ಸರ್ಕಾರ ಇನ್ನೂ ಆಡಳಿತ ಮುಂದುವರೆಸಬೇಕಾ ಅಥವಾ ನೈತಿಕ ಹೊಣೆ ಹೊರುತ್ತೇನೆ ಎಂದು ಹೇಳಿದ ಮುಖ್ಯಮಂತ್ರಿಗಳು ತಮ್ಮ ಮಾತಿಗೆ ಬೆಲೆಕೊಟ್ಟು

ಅಧಿಕಾರ ಬಿಟ್ಟು ಜನತೆಯ ಮುಂದೆ ಹೋಗಬೇಕಾ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಯಾವ ದೃಷ್ಟಿಯಿಂದ ಮುಖ್ಯಮಂತ್ರಿಗಳು 10 ಕ್ಕಿಂತ ಕಡಿಮೆ ಲೋಕಸಭಾ ಅಭ್ಯರ್ಥಿಗಳನ್ನು ಗೆಲ್ಲಿಸಿದರೆ ನೈತಿಕ ಹೊಣೆ ಹೊರುತ್ತೇನೆ ಅಂದರು, ಇವತ್ತು ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಆ ನೈತಿಕತೆ ಅಂದರೇನು ಸ್ವಾಮಿ? ನಾವು ತಿಳಿದುಕೊಳ್ಳಬೇಕಾಗಿದೆ. ಮುಂದಿನ ಸರ್ಕಾರಗಳು ನೈತಿಕತೆ ಎಂಬ ಪದವನ್ನು ಯಾವ ಅರ್ಥದಲ್ಲಿ ಬಳಸಬೇಕು? ಇದು ಅತ್ಯಗತ್ಯ ಎಂದು ನನಗನ್ನಿಸುತ್ತದೆ. ಲೋಕಸಭಾ ಚುನಾವಣೆಯಾಗಿ ಫಲಿತಾಂಶಗಳು ಘೋಷಣೆಯೂ ಆಯಿತು. ಯಾವ ಪಕ್ಷವನ್ನು ಹೀನಾಯವಾಗಿ ಟೀಕೆ ಮಾಡುತ್ತಿದ್ದರೋ ಆಪಕ್ಷವೇ ಇವತ್ತು ಅಧಿಕಾರ ಗ್ರಹಣ ಮಾಡಿದೆ. ಯಾವ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ ಎಂದು ಎತ್ತರದ ಧ್ವನಿಯಲ್ಲಿ ಸದನದಲ್ಲಿ ಮಾತನಾಡುತ್ತಿದ್ದರೋ ಅವರ ಮುಖ ಕಪ್ಪಾಗುವ ರೀತಿಯಲ್ಲಿ ಜನತೆ ತಮ್ಮ ತೀರ್ಪು ಕೊಟ್ಟಿದ್ದಾರೆ. ಆ ತೀರ್ಪನ್ನು ನಾವು ಸ್ವೀಕರಿಸಬೇಕಾ ಅಥವಾ ಜನತೆ ನೀಡಿರುವ ತೀರ್ಪು ನಮಗಲ್ಲ ಎಂದು ಹೇಳಿಕೊಂಡು ಅಧಿಕಾರದಲ್ಲಿ ಮುಂದುವರೆಯಬೇಕಾ ಎಂಬುದನ್ನು ಜನತಾದಳದ ಮಂತ್ರಿಗಳು ಮುಖ್ಯಮಂತ್ರಿಗಳು ವಿಮರ್ಶೆ ಮಾಡಿ ತೀರ್ಮಾನಿಸಿ ಈಗಲೇ ಚುನಾವಣೆಗೆ ಹೋಗುವುದು ಉತ್ತಮ ಎಂಬ ಸಲಹೆನ್ನು ಆಡಳಿತ ಪಕ್ಷದ ಎಲ್ಲಾ ಸದಸ್ಯರಿಗೆ ಮಂತ್ರಿಗಳಿಗೆ ಮುಖ್ಯಮಂತ್ರಿಗಳಿಗೆ ಕೊಡಲು ಇಚ್ಛಿಪಡುತ್ತಿದ್ದೇನೆ. ಏತಕ್ಕೆಂದರೆ ಇದಕ್ಕಿಂತ ಹೀನಾಯ ಸೋಲು ಮುಂದರ ಬರಲಾರದು. ಜನರ ತೀರ್ಪನ್ನು ದಯವಿಟ್ಟು ಸ್ವೀಕಾರ ಮಾಡಿ, ಅಧಿಕಾರ ಶಾಶ್ವತವಲ್ಲ, ಇಲ್ಲಿದ್ದವರು ಅಲ್ಲಿ ಹೋಗಬಹುದು, ಅಲ್ಲಿಂದ ಇಲ್ಲಿಗೆ ಬರಬಹುದು ಲೋಕಸಭಾ ಚುನಾವಣೆ ಬೇರೆ, ವಿಧಾನಸಭಾ ಚುನಾವಣೆ ಬೇರೆ ಅಂತ ನಾವು ತಿಳಿದುಕೊಳ್ಳಬಾರದು 1994ರಲ್ಲಿ ಜನರೇ ತಮಗೆ ಅಭೂತಪೂರ್ವ ಬೆಂಬಲ ಕೊಟ್ಟಾಗ ಎಷ್ಟರಮಟ್ಟಿಗೆ ಸ್ವಾಗತ ಮಾಡಿದಿರಿ? 96ರಲ್ಲಿ ಮತ್ತೆ ನಿಮ್ಮನ್ನು ಬೆಂಬಲಿಸಿದರು, ಅವತ್ತು ಅದನ್ನು ಸ್ವಾಗತಿಸಿ ನೀವು ಜನರನ್ನು ಪ್ರಶಂಸೆ ಮಾಡಲಿಲ್ಲವೇ? ಇವತ್ತು ಯಾಕೆ ಸ್ವಾಮಿ ಕಿವುಡರ ತರಹ ವರ್ತನೆ ಮಾಡುತ್ತಿದ್ದೀರಿ? ಅದು ತಪ್ಪು ಎಂದು ಮತ್ತೆ ಮಂತ್ರಿಗಳಿಗೆ ಇಚ್ಛಿಪಡುತ್ತಿದ್ದೇನೆ.

ಮಾನ್ಯ ಸದಸ್ಯರು : ಮಹಾರಾಷ್ಟ್ರ ಸರ್ಕಾರವೂ ರಾಜೀನಾಮೆ ಕೊಡಬೇಕಲ್ಲಾ.

ಶ್ರೀ ಹೆಚ್. ಡಿ. ಬಸವರಾಜು : ನನಗೆ ಕರ್ನಾಟಕದ ವಿಚಾರ ತಿಳಿಸಬೇಕು ಎಂದು ಇಚ್ಛೆ ಇದೆಯೇ ವಿನಾ: ಮಹಾರಾಷ್ಟ್ರ ರಾಜಸ್ಥಾನಗಳ ಬಗ್ಗೆ ತಿಳಿಸಲು ನಾನು ಬಂದಿಲ್ಲ. ಇಲ್ಲಿಯ ಜನತೆ ನೋಡುವುದು ಕರ್ನಾಟಕವನ್ನು ನೀವು ಯಾವ ರೀತಿ ಆಳುತ್ತಿದ್ದೀರಿ ಎನ್ನುವುದನ್ನು. ಮಹಾರಾಷ್ಟ್ರದಲ್ಲಿ ಸ್ವರ್ಣವೃಷ್ಟಿ ಆದರೆ ಕರ್ನಾಟಕಕ್ಕೆ ಯಾವುದೇ ಪ್ರಯೋಜನವಾಗುವುದಿಲ್ಲ ಸ್ವಾಮಿ. 1994ರಲ್ಲಿ ಕರ್ನಾಟಕದ ಜನತೆಗೆ ಉತ್ತಮ ಕೆಲಸ ಮಾಡುತ್ತೇವೆ ಎಂದು ಹೇಳಿ ಬಂದಿರಲ್ಲಾ, ನೀವೇನು ಮಾಡಿದ್ದೀರಿ ಸ್ವಾಮಿ? ವಿದ್ಯುತ್ ತೆರಿಗೆಯನ್ನು ಎಷ್ಟು ಸಲ ವಿಮರ್ಶೆ ಮಾಡಿದ್ದೀರಿ ಸ್ವಾಮಿ? ಇದೇನಾ ಸಾಮಾನ್ಯ ಜನರ ಹಿತವನ್ನು ತಾವು ಕಾಪಾಡಿದ್ದು? ಸಾಮಾನ್ಯ ಮನುಷ್ಯ ಬಳಸುವ ಬಸ್ ದರ ಎಷ್ಟು ಸಲ ಏರಿಸಿದಿರಿ? ಇದೇನಾ ಸ್ವಾಮಿ ಸಾಮಾನ್ಯ ಜನರ ಬದುಕಿಗೆ ಅಶಾದೀಪವಾಗಿ ಮೂರು ವರ್ಷಗಳಲ್ಲಿ ನಡೆದುಕೊಂಡು ಬಂದಿದ್ದು?

ಶ್ರೀ ಎಸ್. ಆರ್. ಲಕ್ಷ್ಮಯ್ಯ: ಇವರ ಸರ್ಕಾರ ಬಂದು ಬಿಟ್ಟರೆ ಎಲ್ಲರಿಗೂ ಫ್ರೀ ಬಸ್?

ಶ್ರೀ ಹೆಚ್. ಡಿ. ಬಸವರಾಜು : ಲಕ್ಷ್ಮಯ್ಯನವರ ಕ್ಷೇತ್ರದಲ್ಲಿ ಜನತಾದಳದ ಅಭ್ಯರ್ಥಿ ಎಷ್ಟು ಮತಗಳಿಸಿದರು ಎಂದು ತಿಳಿದುಕೊಂಡರೆ ಸಾಕು. ಮುಂದಕ್ಕೆ ನಾನು ಮಾತನಾಡುವುದಿಲ್ಲ. ಅವರ ಪ್ರಭಾವ ಎಷ್ಟಿದೆ? ಆ ಪ್ರಭಾವದಲ್ಲಿ ಲೋಕಸಭಾ ಅಭ್ಯರ್ಥಿಯಾಗಿದ್ದಂಥ ಜನತಾ ದಳದ ಅಧ್ಯಕ್ಷರು ಎಷ್ಟು ಮತಗಳನ್ನು ಪಡೆದರೆಂಬುದು ತಿಳಿದುಕೊಂಡರೆ ಸಾಕು. ನಿಮ್ಮ ಬಂಡವಾಳ ನನಗೆ ಗೊತ್ತಿದೆ, ದಯವಿಟ್ಟು ಕುಳಿತುಕೊಳ್ಳಿ, ನಿಮ್ಮ ಬಂಡವಾಳ ನಾನು ತಿಳಿದುಕೊಂಡಿದ್ದೇನೆ.

ಉಪಾಧ್ಯಕ್ಷರು : ಲಕ್ಷ್ಮಯ್ಯನವರೆ, ತಾವು ಕುಳಿತುಕೊಳ್ಳಬೇಕು, ಮತ್ತೊಬ್ಬರು ಮಾತನಾಡುವಾಗ ತಾವು ಅಡ್ಡಿಪಡಿಸಬಾರದು.

ಶ್ರೀ ಹೆಚ್.ಡಿ. ಬಸವರಾಜು : ಈಗ ಲಕ್ಷ್ಮಯ್ಯನವರು ಏನ್ ಆಗುವುದಿರಲಿ, ಅವರ ಕ್ಷೇತ್ರದಲ್ಲಿ ಜನತಾದಳದ ಅಭ್ಯರ್ಥಿಗೆ ಎಷ್ಟು ಮತಗಳನ್ನು ಗಳಿಸಿಕೊಟ್ಟರೆಂಬುದನ್ನು ತಿಳಿದುಕೊಂಡರೆ ಸಾಕು. ಅವರು ಗೆದ್ದು ಬಂದರೆ ನಾನು ಬಹಳ ಪ್ರಶಂಸಿಸುತ್ತೇನೆ. ಆದರೆ, ಜನರು ಆ ಮಟ್ಟದಲ್ಲಿಲ್ಲ, ಲಕ್ಷ್ಮಯ್ಯನವರಿಗೆ ಯಾವ ಮಾರ್ಗ ತೋರಿಸಬೇಕೆಂಬುದು ಜನರು ಈಗಾಗಲೇ ತೀರ್ಮಾನಿಸಿದ್ದಾರೆ. ನಾನು ಆ ವಿಷಯವನ್ನು ಅಷ್ಟಕ್ಕೆ ಬಿಡುತ್ತೇನೆ. ಇನ್ನು ದಲಿತರ ಸಮಸ್ಯೆ ಬಗ್ಗೆ ಒಂದೇ ಮಾತನ್ನಾಡುವುದಕ್ಕೆ ಇಷ್ಟಪಡುತ್ತಿದ್ದೇನೆ. ಮೂರು ವರ್ಷವಾಯಿತು. ಈ ಸದನದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಿದರು. ಏನೆಂದರೆ 26,000ಕ್ಕೂ ಅಧಿಕವಾಗಿ ಪರಿಶಿಷ್ಟ ಜಾತಿ, ಪಂಗಡದವರ ಹುದ್ದೆ ಖಾಲಿಯಿರುವುದರಿಂದ ನಿಮ್ಮ ಕಾಲದಲ್ಲಾದರೂ ಭರ್ತಿ ಮಾಡಬೇಕೆಂದು ಕೇಳಿದರು. ತಾವು ಭರ್ತಿ ಮಾಡಿದಿರಾ? ಒಬ್ಬರನ್ನೂ ನೇಮಕ ಮಾಡಿಕೊಳ್ಳಲಿಲ್ಲ. ಇವೊತ್ತು ಎಷ್ಟು ಇಲಾಖೆಗಳಲ್ಲಿ ಭರ್ತಿ ಮಾಡಿಕೊಂಡಿರಿ? ನಮ್ಮ ಮೂಗಿನ ಕೆಳಗಿರುವಂಥ ಈ ವಿಧಾನಸೌಧದಲ್ಲಿ ಎಷ್ಟು ನೇಮಕಾತಿಯಾಯಿತು? ಆ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ನೀವು ಎಷ್ಟರಮಟ್ಟಿಗೆ ಆದ್ಯತೆ ನೀಡಿದಿರಿ ಎಂಬುದನ್ನು ನಾವು ಪ್ರಶ್ನಿಸುತ್ತಿದ್ದೇವೆ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ದಯವಿಟ್ಟು ನೀವು ಅರ್ಥ ಮಾಡಿ ಕೊಳ್ಳಿ. ಇನ್ನು ಸುಮಾರು ಇಪ್ಪತ್ತು ತಿಂಗಳುಗಳಿವೆ, ಪುನ: ಜನರ ಕೈಗೆ ಅಧಿಕಾರ ಹೋಯಿತೆಂದರೆ ಇವೊತ್ತು ನಿಮಗೇನಾದರೂ ಅಲ್ಪಸ್ವಲ್ಪ ಶೇವಣಿ ಕೊಟ್ಟಿದ್ದರೆ ಅದನ್ನು ಕಿತ್ತುಕೊಳ್ಳುವಂಥ ಕೆಲಸವನ್ನು ಅವರು ಖಂಡಿತಾ ಮಾಡುತ್ತಾರೆ. ದಲಿತರ ಬಗ್ಗೆ ಕಳಕಳಿ ಇಲ್ಲದೆ ತಾವು ಮೂರು ವರ್ಷ ಕಳೆದಿದ್ದೀರಲ್ಲಾ, ಇದರ ಬಗ್ಗೆ ನಾನೇನು ಹೇಳಬೇಕು? ನಾನು ಸರ್ಕಾರಕ್ಕೆ ಕೇಳಿಕೊಳ್ಳುವುದೇನೆಂದರೆ, ಅವರುಗಳ ಬಗ್ಗೆ ನಿಮ್ಮ ಹೃದಯದಲ್ಲಿ ಏನಾದರೂ ಕಾಳಜಿ ಇದ್ದರೆ ದಯವಿಟ್ಟು ಆ ಕೆಲಸ ಮಾಡಿ. ಉಳಿದ ಇಪ್ಪತ್ತು ತಿಂಗಳುಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಆಗಿರುವಂಥ ಅನ್ಯಾಯವನ್ನು ತೀರಿಸುವಂಥ ಪ್ರಯತ್ನವನ್ನು ತಾವು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಕೊಡಗಿನ ವಿಷಯಕ್ಕೆ ಬರುತ್ತೇನೆ. ಕೊಡಗು ಜಿಲ್ಲೆಯಲ್ಲಿ ನಾವು ತೆರಿಗೆಯನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕೊಡಬೇಕು. ಕಾಫಿಯಿಂದ ಕೊಡುತ್ತಿದ್ದೇವೆ, ಕಾವೇರಿ ನೀರಿನಿಂದ ಈ ರಾಜ್ಯವನ್ನು ಸುಭಿಕ್ಷವನ್ನಾಗಿ ಮಾಡಿದ್ದೇವೆ, ಪಕ್ಕದ ರಾಜ್ಯವಾದ ತಮಿಳುನಾಡನ್ನೂ ಸಹ ಸುಭಿಕ್ಷವನ್ನಾಗಿ ಮಾಡಿದ್ದೇವೆ. ದಟ್ಟ ಅರಣ್ಯಗಳಲ್ಲಿ ಬೆಳೆಯುತ್ತಿರುವಂಥ ಉತ್ತಮವಾದ ಮರಗಳನ್ನು ಹರಾಜು ಮೂಲಕ ಮಾರಾಟ ಮಾಡಿಸಿ ಸರ್ಕಾರದ ಬೊಕ್ಕಸಕ್ಕೆ ಹಣವನ್ನು ತುಂಬುತ್ತಿದ್ದೇವೆ. ವಾಹನಗಳ ತೆರಿಗೆ ಬಗ್ಗೆ ನನ್ನ ವಿರಾಜಪೇಟೆ ಕ್ಷೇತ್ರವನ್ನು ಇಲ್ಲಿ ಉಲ್ಲೇಖಿಸಲು ಇಚ್ಛೆಪಡುತ್ತಿದ್ದೇನೆ. ಯಾವುದೋ ಒಂದು ಗ್ರಾಮೀಣ ಪ್ರದೇಶದಲ್ಲಿರುವಂಥ , ಯಾವುದೇ ಒಂದು ನಗರ ನೀಡದಿರುವಂಥ ಅತ್ಯಧಿಕ ತೆರಿಗೆಯನ್ನು ವಿರಾಜಪೇಟೆಯಲ್ಲಿ ಸದರಿ ತೆರಿಗೆ ಮೂಲಕ ಸರ್ಕಾರ ವಸೂಲಿ ಮಾಡುತ್ತಿದೆ. ಕೊಡಗು ಜಿಲ್ಲೆಯಲ್ಲಿ ಮದ್ಯದ ವಹಿವಾಟಿನಿಂದ ಅತ್ಯಧಿಕವಾದ ಹಣವನ್ನು ಈ ಸರ್ಕಾರದ ಬೊಕ್ಕಸಕ್ಕೆ ಸುರಿಯುತ್ತಿದ್ದೇವೆ. ನಾವು ಏನು ಕೇಳಿದ್ದೆವು? ದೊಡ್ಡ ದೊಡ್ಡ ಉದ್ಯಮಗಳನ್ನು ನೀವು ಸ್ಥಾಪನೆ ಮಾಡಬೇಕೆಂದು ಕೇಳಿದ್ದೇವೆಯೇ? ನೀವು ದೊಡ್ಡ ಉದ್ಯಮಗಳನ್ನು ಸ್ಥಾಪನೆ ಮಾಡಲಿಲ್ಲ, ಮಾಡುವುದೂ ಇಲ್ಲ. ಕೊನೆಗೆ, ನೀರಾವರಿಗೆ ಆದ್ಯತೆ ಕೊಡಬೇಕೆಂದು ಕೇಳಿದ್ದೇವೆಯೇ? ಕೇಳಿದ್ದರೆ ಅದನ್ನು ನೀವು ಮಾಡಿದ್ದೀರಾ? ಇನ್ನು ಏಕೆ ಕೊಡಗು ಇಲ್ಲೇ ಇರಬೇಕೆಂದು ಆ ಜನರು ಬಯಸಬೇಕು? ಅವರು ಆ ರೀತಿ ಹೋರಾಟ ಮಾಡುವುದರಲ್ಲಿ ಏನಾದರೂ ತಪ್ಪಿದೆಯೇ? ಇದನ್ನು ಅರ್ಥ ಮಾಡಿಕೊಳ್ಳಬೇಕೆಂದು

ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳಿ ಕೊಳ್ಳುತ್ತಿದ್ದೇನೆ. ಬರೀ ತೆರಿಗೆಯನ್ನು ಸರ್ಕಾರದ ಬೊಕ್ಕಸಕ್ಕೆ ತುಂಬಿಸುವುದಕ್ಕೆ ಮಾತ್ರ ಕೊಡಗು ಇಲ್ಲಿರುವುದು ಬೇಡ, ಅಲ್ಲಿರುವ ಜನರ ಸಮಸ್ಯೆಯನ್ನು ಅರ್ಥ ಮಾಡಿಕೊಂಡು, ಆ ಜನರಿಗೆ ಅನುಕೂಲ ಕಲ್ಪಿಸುವಂಥ ಕೆಲವೇ ಕೆಲವು ಸುಧಾರಣೆಯ ಕೆಲಸಗಳನ್ನು ತಾವು ಮಾಡಿದ್ದರೆ ಆ ಜನರು ಒಳ್ಳೆಯ ರೀತಿಯಲ್ಲಿ ಈ ಸರ್ಕಾರವನ್ನು ಪ್ರಶಂಸುತ್ತಿದ್ದರು.

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಬಜೆಟ್ ಮೇಲೆ ಮಾತನಾಡುವಾಗ ಹೇಗೆ ಮಾತನಾಡಬೇಕು ಎನ್ನುವ ಬಗ್ಗೆ ಸೆಕ್ಷನ್ 310 ರಲ್ಲಿ ಸೂಚಿಸಲಾಗಿದೆ. ರೂಲ್ಸ್ ಪ್ರಕಾರ ಯಾವುದೇ ಒಂದು ವಿಷಯವನ್ನು ಪುನರಾವರ್ತಿಸುತ್ತಾ ಸದನದ ಸಮಯವನ್ನು ಹಾಳು ಮಾಡಬಾರದೆಂದಿದೆ. ಆದುದರಿಂದ, ಮಾನ್ಯ ಸದಸ್ಯರುಗಳು ನಿಜವಾಗಿಯೂ ಸರ್ಕಾರದ ಗಮನಕ್ಕೆ ತರಬೇಕಾದಂಥ ಲೋಪ-ದೋಷಗಳೇನಾದರೂ ಇದ್ದಲ್ಲಿ ಅದನ್ನು ತರುವುದಕ್ಕೆ ಸದನದ ಸಮಯವನ್ನು ಉಪಯೋಗಿಸಿಕೊಳ್ಳಬೇಕೇ ಹೊರತು ಜನರ ನೈತಿಕತೆ ಎಂದರೆ ಏನು? ಡೆಮಾಕ್ರಸಿ ಎಂದರೆ ಏನು? ಸ್ವಾತಂತ್ರ್ಯ ಯಾವಾಗ ಬಂತು? ಇವೆಲ್ಲವನ್ನೂ ಪ್ರಸ್ತಾಪಿಸುವುದಲ್ಲ. ನಾವು ನಿಮ್ಮ ವಯಸ್ಸಿನಲ್ಲಿ ಶಾಸನಸಭೆಗೆ ಬಂದಾಗ ಆಗ ದೇವರಾಜ ಅರಸುರವರು ನನ್ನ ಸ್ಥಾನದಲ್ಲಿ ಕುಳಿತು ಒಂದು ಮಾತು ಹೇಳಿದರು. ನಾನು ಆ ಕಡೆ ಕುಳಿತು ಮಾತನಾಡುತ್ತಿದ್ದೆ. ಈ ಅಂಶವನ್ನೆಲ್ಲಾ ಎಲ್ಲಿಂದ ತಂದಿರಿ ಎಂದರು. ನಾವು ಸ್ವಲ್ಪ ಗಮನವಿಟ್ಟು ನಿಮ್ಮ ಮಾತುಗಳನ್ನು ಕೇಳುವಂತೆ ಇರಬೇಕೇ ಹೊರತು ಅದು ಬಿಟ್ಟು ಕೊಡಗು ಜಿಲ್ಲೆಗೆ ಏನೂ ಮಾಡಿಲ್ಲ, ಕರ್ನಾಟಕದ ಬಗ್ಗೆ ಏನೂ ಆಗಿಲ್ಲ, ದಲಿತರ ಬಗ್ಗೆ ಏನೂ ಆಗಿಲ್ಲವೆಂದು ಏನು ಕಣ್ಣೀರು ಸುರಿಸುತ್ತಿದ್ದೀರಿ, ಹಾಗಲ್ಲ. ಈಗ ಎಕ್ಸೈಸ್ ಬಗ್ಗೆ ಮಾತನಾಡಿದರು, ಓ.ಕೆ. ಹಾಗೆಯೇ ನೀರಾವರಿ, ವಿದ್ಯಾಭ್ಯಾಸ ಮುಂತಾದ ಯಾವುದಾದರೊಂದು ಇಲಾಖೆ ಬಗ್ಗೆ ಮಾತನಾಡುವುದು ಬಿಟ್ಟು ಜನರಪ್ಟಿಕ್ ಆಗಿ ಪ್ರಪಂಚದ ಎಲ್ಲಾ ವಿಷಯಗಳ ಬಗ್ಗೆ ಪ್ರಸ್ತಾಪಿಸುತ್ತಾ ಹೋದರೆ ಅದಕ್ಕೆ ರೂಲ್ಸ್ ಅಲೋ ಮಾಡುವುದಿಲ್ಲ. It is not my desire. Rules will not allow.

ಶ್ರೀ ಹೆಚ್. ಡಿ. ಬಸವರಾಜು : ಮಾನ್ಯ ಉಪಾಧ್ಯಕ್ಷರೆ, ಬಹುಶ: ನಾವು ಹೊಸ ಸದಸ್ಯರಿದ್ದೇವೆ. ರೂಲ್ಸ್ ಪ್ರಕಾರ ನಾವು ಇಲ್ಲಿ ಗಹನವಾದ ವಿಚಾರವನ್ನು ಚರ್ಚೆ ಮಾಡಬೇಕೆನ್ನುವುದಾದರೆ ಕಳೆದ ಮೂರು ವರ್ಷಗಳಲ್ಲಿ ಗಮನಿಸಿದರೆ ನನ್ನ ಮನಸ್ಸಿಗೆ ನೋವಾಗಿದೆ. ಆದರೆ, ನನ್ನ ಮಟ್ಟಿಗೆ ಮಾತ್ರ ರೂಲ್ಸ್ ಅನ್ನು ಏಕೆ ತರಬೇಕು? ರೂಲ್ಸ್ ಬಿಟ್ಟು ಮಾತನಾಡುವುದಕ್ಕೆ ನಾನು ಇಚ್ಛಿಸುವುದಿಲ್ಲ. ನನ್ನ ಮನಸ್ಸಿನ ನೋವನ್ನು ಈ ರೀತಿ ಹಂಚಿಕೊಳ್ಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಬಹುಶ: ನಮ್ಮ ಮುಖ್ಯಮಂತ್ರಿಯಾಗಿರುವವರು ಈ ಸದನದಲ್ಲಿ ಉತ್ತಮ ವಾಗ್ಮಿಕಾರರಾಗಿ, ಉತ್ತಮ ಸಂಸದೀಯಪಟುವಾಗಿ ಅವರು ಕೆಲಸ ನಿರ್ವಹಿಸಿರಬಹುದು, ಮತ್ತು ಅವರು ಎಲ್ಲರಿಗೂ ಮಾರ್ಗದರ್ಶಕರಾಗಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ನಾನು ಅವರಿಂದ ಕಲಿಯುವಂಥ ಪ್ರಯತ್ನ ಮಾಡುತ್ತಿದ್ದೇನೆ. ಆದರೆ, ಈ ಸಂದರ್ಭದಲ್ಲಿ ಕೊಡಗಿಗೆ ಸಂಬಂಧಪಟ್ಟ.....

ಉಪಾಧ್ಯಕ್ಷರು : ತಾವು ಏನೇನೋ ಮಾತನಾಡುತ್ತಿದ್ದೀರಿ, ಬಜೆಟ್ ಮೇಲೆ ಮಾತನಾಡಬೇಕು. ಸರ್ಕಾರದ ಲೋಪ-ದೋಷಗಳೇನಿವೆ, ಅದನ್ನು ಮಾತ್ರ ಸರ್ಕಾರದ ಗಮನಕ್ಕೆ ತರಬೇಕು.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರಿಂದ, ನಾನು ಇಲ್ಲಿ ಪ್ರಸ್ತಾಪಿಸಲೇಬೇಕಾಯಿತು, ಇಲ್ಲದಿದ್ದರೆ ಆ ವಿಷಯಕ್ಕೆ ಹೋಗುತ್ತಿರಲಿಲ್ಲ. ನಾನು ಈಗ ನೇರವಾಗಿ ವಿಷಯಕ್ಕೆ ಬರುತ್ತಿದ್ದೇನೆ. ಇವೊತ್ತು ಕೊಡಗಿನಿಂದ ಯಾವ ರೀತಿ ಹಣವನ್ನು ಬೊಕ್ಕಸಕ್ಕೆ

ತುಂಬಿಸಿಕೊಳ್ಳುವಂಥ ಪ್ರಯತ್ನಮಾಡುತ್ತಿದ್ದೀರಿ, ಆ ದಿಕ್ಕಿನಲ್ಲಿ ಕೊಡಗನ್ನೂ ಕೂಡ ಉತ್ತಮ ಪಡಿಸುವ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ನೀರಾವರಿಗೆ ಆದ್ಯತೆ ಕೊಡಲಿಲ್ಲವೆಂದು ಹೇಳಿದೆ. ಏಕೆ ಹೇಳಿದೆನೆಂದರೆ, ಆ ಕುರಿತ ಅಂಕಿ-ಅಂಶವನ್ನು ಕೊಡುತ್ತೇನೆ. ಬಜೆಟ್‌ನಲ್ಲಿ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ವಿರಾಜಪೇಟೆಯಲ್ಲಿನ ಕಿರು ನೀರಾವರಿ ಸರಬರಾಜು ಸಲುವಾಗಿ ಇಟ್ಟಿದ್ದಾರೆ. ಅಲ್ಲಿನ ನನ್ನ ಜಿಲ್ಲೆಯೊಂದರಲ್ಲೇ ಸುಮಾರು ಐದು ನೂರಕ್ಕೂ ಅಧಿಕವಾದ ಕಿರು ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂಥ ಅವಕಾಶಗಳಿದ್ದರೂ ಕೇವಲ ಎರಡು ಲಕ್ಷ ರೂಪಾಯಿಗಳನ್ನು ನೀವು ಇಟ್ಟಿದ್ದೀರಲ್ಲಾ, ಇದು ಅನ್ಯಾಯವಲ್ಲವೇ? ಆ ವಿಷಯವನ್ನು ಇಲ್ಲಿ ತಿಳಿಸುವುದು ಬೇಡವೇ? ಇನ್ನು ವಿದ್ಯುಚ್ಛಕ್ತಿ ಬಗ್ಗೆ ಹೇಳುವುದಾದರೆ ವಿದ್ಯುಚ್ಛಕ್ತಿ ಸರಬರಾಜನ್ನು ಯಾವ ರೀತಿ ಮಾಡುತ್ತಿದ್ದೀರಿ? ನನ್ನ ಜಿಲ್ಲೆಯಲ್ಲಿ ಕೇವಲ ಮೂರು ತಾಲ್ಲೂಕುಗಳಿದ್ದು, ಅಲ್ಲಿಯಾದರು ವಿದ್ಯುಚ್ಛಕ್ತಿಯನ್ನು ನೀವು ಸಮರ್ಪಕವಾಗಿ ಸರಬರಾಜು ಮಾಡುತ್ತಿದ್ದೀರಾ? ಇವೊತ್ತು ಸರ್ಕಾರ ಅಂಕಿ-ಅಂಶ ಕೊಡಲಿ, ನಾನು ಸಂತೋಷ ಪಡುತ್ತೇನೆ. ಏನೆಂದರೆ, ನಾವು ವಿದ್ಯುಚ್ಛಕ್ತಿ ಸೌಲಭ್ಯವನ್ನು ಸಮರ್ಪಕವಾಗಿ ಕೊಡಗಿನ ಮೂರು ತಾಲ್ಲೂಕುಗಳಿಗೂ ಕೊಡುತ್ತಿದ್ದೇವೆ, ಅಲ್ಲಿ ಯಾವುದೇ ವಿದ್ಯುಚ್ಛಕ್ತಿ ಅಭಾವವಿಲ್ಲ, ಅಲ್ಲಿನ ಜನರು ಸರ್ಕಾರದ ಮೇಲೆ ತುಂಬು ವಿಶ್ವಾಸ ಇಟ್ಟಿದ್ದಾರೆಂದರೆ ನಿಜವಾಗಿಯೂ ನಾನು ಸಂತೋಷ ಪಡುತ್ತೇನೆ. ಆದರೆ, ನಿಜ ಸ್ಥಿತಿ ಹಾಗಿಲ್ಲ. ಕಳೆದ ಮೂರು ವರ್ಷಗಳಿಂದ ನಾನು ಅನುಭವಿಸುತ್ತಿರುವಂಥ ನೋವನ್ನು ಇಲ್ಲಿ ಹೇಳಿತ್ತಿದ್ದೇನೆ, ಇದನ್ನು ದಯವಿಟ್ಟು ಸರಿಪಡಿಸಿ. ಇವೊತ್ತು ಮಾನ್ಯ ಮುಖ್ಯಮಂತ್ರಿಗಳು ನಾನು ಮಾತನಾಡುವಂಥ ಸಂದರ್ಭದಲ್ಲಿ ಉಲ್ಲೇಖಿಸಿದರು. ಆ ರೀತಿ ಉಲ್ಲೇಖಿಸಿದರೆ ನಾವು ತಿದ್ದಿಕೊಳ್ಳುವಂಥ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಈ ವರ್ಷ ಅಲ್ಲಿನ ಸಮಸ್ಯೆಯನ್ನು ನಿವೇನಾದರೂ ಸರಿಪಡಿಸಿದ್ದಾಯಿತೆಂದರೆ ನಾನು ಸರ್ಕಾರಕ್ಕೆ ಬಹಳಷ್ಟು ಅಭಿನಂದನೆಯನ್ನು ಸಲ್ಲಿಸುತ್ತೇನೆ. ವಿದ್ಯುತ್ ಬರವನ್ನು ನೀಗಿಸುವಂಥ ಕೆಲಸ ನನ್ನ ಜಿಲ್ಲೆಯಲ್ಲಿ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ರಸ್ತೆಗಳ ವ್ಯವಸ್ಥೆ ಕುರಿತು ಹೇಳುವುದಾದರೆ, ಕೊಡಗಿನಲ್ಲಿ ನಾವು ಇನ್ನೇನೂ ಕೇಳುವುದಿಲ್ಲ, ರಸ್ತೆಗಳ ಸುಧಾರಣೆ ಮಾಡಿಸಿದರೆ ಸಾಕು. ಇವೊತ್ತು ನನ್ನ ತಾಲ್ಲೂಕಿನಲ್ಲಿರುವ ರಸ್ತೆಗಳ ಗುಂಡಿಗಳನ್ನು ಮುಚ್ಚಬೇಕೆಂದರೆ ಕನಿಷ್ಟ ನೂರು ಮೆಟ್ರಿಕ್ ಟನ್‌ಗಳಷ್ಟು ಟಾರ್ ಬೇಕಾಗಿದೆ. ಲೋಕೋಪಯೋಗಿ ಇಲಾಖಾ ವತಿಯಿಂದ ನಾನು ಅಂಕಿ-ಅಂಶ ಕೊಡುವುದಾದರೆ 20-30 ಮೆಟ್ರಿಕ್ ಟನ್‌ಗಳಷ್ಟೂ ಟಾರ್ ಬಂದಿಲ್ಲ, ಈಗಾಗಲೇ ಮಾರ್ಚ್ ತಿಂಗಳು ಮುಗಿಯುತ್ತಾ ಬಂತು, ಇನ್ನು ಎರಡು ತಿಂಗಳುಗಳಲ್ಲಿ 70 ಮೆಟ್ರಿಕ್ ಟನ್‌ಗಳಷ್ಟು ಟಾರನ್ನು ಅಲ್ಲಿಗೆ ಕಳುಹಿಸಿಕೊಟ್ಟು ಕೆಲಸ ಮಾಡಿಸಿಕೊಡುತ್ತೀರಾ? ಯಾವ ರೀತಿ ಪ್ರಶಂಸಿಸಲಿ? ಯಾವ ರೀತಿಯ ಅನ್ಯಾಯವನ್ನು ತಮ್ಮಲ್ಲಿ ತೋಡಿಕೊಳ್ಳಬೇಕೆಂಬುದನ್ನು ದಯವಿಟ್ಟು ನನಗೆ ತಿಳಿಸುವಂಥ ಒಂದು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸೇತುವೆಗಳ ಬಗ್ಗೆ ಹೇಳಬೇಕಾದರೆ, ಸುಮಾರು 35 ಸೇತುವೆಗಳು ಬಹಳಷ್ಟು ಕ್ಷೀಣ ಸ್ಥಿತಿಯಲ್ಲಿ ಇವೆ, ಅವುಗಳನ್ನು ಸರಿಪಡಿಸಬೇಕೆಂದು ನಾನು ಕೇಳಿದೆ, ತಾವೇ ಸರ್ಟಿಫಿಕೆಟ್‌ನ್ನು ಕೊಟ್ಟಿದ್ದೀರಿ, 35 ಸೇತುವೆಗಳು ಸರಿಯಾದ ಮಟ್ಟದಲ್ಲಿ ಇಲ್ಲ, ವಾಹನಗಳ ಸಂಚಾರಕ್ಕೆ ಯೋಗ್ಯವಾಗಿಲ್ಲ ಎಂದು. ಆದರೆ ನೀವು ಪ್ರಾರಂಭ ಮಾಡಿದ್ದು ಕೇವಲ ಒಂದು ಸೇತುವೆಯನ್ನು ಆ ಒಂದು ಸೇತುವೆಗಾಗಿ ನಾವು ಎಷ್ಟು ಕಷ್ಟ ಪಟ್ಟಿದ್ದೇವೆ ಎಂದು ಈ ಸದನದಲ್ಲಿ ನಾನು ಹೇಗೆ ಹೇಳಬೇಕು ಎಂದು ತಿಳಿಯುತ್ತಾ ಇಲ್ಲ. ಇನ್ನು ಬಸ್ ಸೌಕರ್ಯದ ಬಗ್ಗೆ ಹೇಳಬೇಕಾದರೆ, ಸುಮಾರು 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಹೊಸ ಬಸ್‌ಗಳನ್ನು ಖರೀದಿ ಮಾಡಿದ್ದೀರಿ. ಆದರೆ ಒಂದು ಹೈಟಿಕ್ ಬಸ್‌ನ್ನು ನನ್ನ ಕ್ಷೇತ್ರಕ್ಕೆ ಹಾಕುವಂತಹ ಔದಾರ್ಯವನ್ನು ಈ ಸರ್ಕಾರ ತೋರಿಸಿಲ್ಲ ಎಂದರೆ ನನ್ನ ನೋವನ್ನು ಯಾವ ರೀತಿ ವ್ಯಕ್ತಪಡಿಸಬೇಕೆಂದು ಅರ್ಥವಾಗುತ್ತಿಲ್ಲ. 300

ಕೋಟಿ ರೂ. ಗಳನ್ನು ಖರ್ಚು ಮಾಡಿ ಹೊಸ ಬಸ್ ಗಳನ್ನು ಖರೀದಿ ಮಾಡುತ್ತಾರೆ. ಆದರೆ ವಿರಾಜಪೇಟೆ ಕ್ಷೇತ್ರದ ಜನರ ಭಾವನೆಗೆ ಅನುಗುಣವಾಗಿ ಒಂದು ಉತ್ತಮವಾದ ಬಸ್‌ನು ಹಾಕುವಂತಹ ಔದಾರ್ಯವನ್ನು ನಮ್ಮ ಸರ್ಕಾರ ತೋರಿಸುತ್ತಿಲ್ಲ ಎಂದರೆ ನಾವು ಯಾವ ರೀತಿ ಸರ್ಕಾರಕ್ಕೆ ಸ್ಪಂದಿಸಬೇಕು, ಇಲ್ಲಿ ಸರ್ಕಾರ ಎನ್ನುವುದು ಇದೆಯಾ? ಸರ್ಕಾರ ಇರುವುದು ಬರಿ ತೆರಿಗೆಯನ್ನು ಮಾತ್ರ ವಸೂಲಿ ಮಾಡುವುದಕ್ಕಾ? ಜನಸಾಮಾನ್ಯರ ಬವಣೆಯನ್ನು ತೀರಿಸುವುದು ಬೇಡವೇ? ಇದನ್ನು ಈ ಸರ್ಕಾರದವರು ಮಾಡಿಕೊಡಬೇಕೆಂದು ಕೇಳುತ್ತೇನೆ. ಇನ್ನು ನಾಗರಹೊಳೆ ಗಿರಿಜನರ ಸಮಸ್ಯೆಗಳ ಬಗ್ಗೆ ಹೇಳುತ್ತೇನೆ. ಇಲ್ಲಿ 1450 ಕುಟುಂಬಗಳು ಇವೆ. 1976ರಿಂದ ಅವರ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ. ಈ ಸರ್ಕಾರದಲ್ಲಿ ಇವರು ಬೇಕಾದಷ್ಟು ಯೋಜನೆಗಳು ಇದ್ದರೂ, ಆ ಯೋಜನೆಗಳಲ್ಲಿ ಯಾವುದೇ ಒಂದು ಯೋಜನೆಯು ಇವರಿಗೆ ಅನ್ವಯವಾಗದ ರೀತಿಯಲ್ಲಿ ಇವತ್ತು ಆ ಕಾಡುಗಳಲ್ಲಿ ನಿಯಮಗಳನ್ನು ಬದಲಾವಣೆ ಮಾಡಿದ್ದಾರೆ. ಈ 1450 ಕುಟುಂಬಗಳು ಯಾವ ರೀತಿ 1976 ರಿಂದ ಕಷ್ಟಪಡುತ್ತಿದ್ದಾರೆ ಎಂದರೆ ಇವತ್ತು ಅವರು ಜೀವಂತ ಶವವಾಗಿದ್ದಾರೆ. ಇವತ್ತು ನೀವು ಅವರನ್ನು ಏನು ಮಾಡಬೇಕೆಂದು ಯೋಚನೆ ಮಾಡಿದ್ದೀರಿ? ನಿಮ್ಮ ಯೋಚನೆಗಳು ಕಾರ್ಯಗತವಾಗುವವರೆಗಾದರೂ ಅವರು ಜೀವಂತವಾಗಿ ಇರುವಂತೆ ನೋಡಿಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಈ ಗಿರಿಜನರಿಗೆ ಏನಾದರೂ ಒಂದು ಬದುಕುವಂತಹ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ನಾನು ಕೇಳುತ್ತೇನೆ. ಅವರಿಗೆ 1976 ರಿಂದ ಒಂದು ಸೂರು ಇಲ್ಲ, ಅವರು ಅಲ್ಲಿ ಮನೆಗಳನ್ನು ಕಟ್ಟಿಕೊಳ್ಳಬೇಕು ಎಂದರೆ ಅರಣ್ಯ ಅಧಿಕಾರಿಗಳು ಅವರ ಮೇಲೆ ನಿಕೃಷ್ಟವಾಗಿ ಹಲ್ಲೆಯನ್ನು ಮಾಡುತ್ತಿದ್ದಾರೆ. ಅವರು ಸಂಪಾದನೆ ಮಾಡಬೇಕಾದರೆ 12 ಕಿ.ಮೀ ಅರಣ್ಯದಿಂದ ಹೊರಗಡೆ ಬಂದು, ದುಡಿದು ಮತ್ತೆ 12 ಕಿ.ಮೀ. ಒಳಗಡೆ ಹೋಗಿ ಜೀವನವನ್ನು ಮಾಡಬೇಕಾಗಿದೆ. ಆ ನಿಟ್ಟಿನಲ್ಲಿರುವ ಆ ಜನರಿಗೆ ನೀವ್ಯ ಯಾವ ರೀತಿಯ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಮಾಡಿದ್ದೀರಿ ಅದನ್ನು ಮಾಡಿ. ನೀವು ಈಗಾಗಲೇ ಮೂರು ವರ್ಷಗಳನ್ನು ಕಳೆದಿದ್ದೀರಿ. ಈ ಜನತಾ ದಳವನ್ನು ನಾವು ಬರೀ ಟೀಕೆ ಮಾಡುತ್ತಿದ್ದೇನೆ ಎಂದು ತಿಳಿಯದೆ ನೀವು ಮಾಡುತ್ತಿರುವಂತಹ ಕೆಲಸಗಳಲ್ಲಿ ಯಾವ ರೀತಿಯಲ್ಲಿ ವಿಫಲರಾಗಿದ್ದೀರಿ ಎನ್ನುವುದನ್ನು ತಿಳಿಸಿ, ಅದನ್ನು ನೀವು ಸರಿಪಡಿಸಿಕೊಳ್ಳುವಂತೆ ಸಲಹೆಯನ್ನು ಕೊಡಲು ತಮ್ಮ ಮೂಲಕ ಈ ಸದನದಲ್ಲಿ ಮಾತನಾಡುತ್ತಿದ್ದೇನೆ ಏನ: ಯಾವುದೇ ರೀತಿಯ ಟೀಕೆಯಲ್ಲ. ಟೀಕೆಯನ್ನು ರಚನಾತ್ಮಕವಾಗಿ ತೆಗೆದುಕೊಳ್ಳಬೇಕಾಗುತ್ತದೆ. ನಾನು ಇಲ್ಲಿ ಉಲ್ಲೇಖಿಸಿರುವ ವಿಷಯಗಳನ್ನು ಪರಿಗಣಿಸಿ, ಕೊಡಗಿನಲ್ಲಿರುವ ರಸ್ತೆಗಳನ್ನು ಸುಧಾರಣೆ ಮಾಡಿ, ವಿದ್ಯುಚ್ಛಕ್ತಿ ಸರಬರಾಜು ಸರಿಯಾಗಿ ಆಗುವಂತೆ ಮಾಡಿ, ಕೊಡಗಿನಲ್ಲಿರುವ ಗಿರಿಜನರ ಬಗ್ಗೆ ನಿಮ್ಮ ಯೋಜನೆಗಳು ಏನು ಇವೆ ಅವುಗಳನ್ನು ಅನುಷ್ಠಾನಕ್ಕೆ ತರುವಂತಹ ಕೆಲಸ ಮಾಡಬೇಕೆಂದು ಈ ಸರ್ಕಾರಕ್ಕೆ ತಮ್ಮ ಮೂಲಕ ನಾನು ಕೇಳುಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

★ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೆ, 1997-98ನೇ ಸಾಲಿನ ಮುಂಗಡ ಪತ್ರ ಮಂಡಿಸಿರುವಂತಹ ಸಂದರ್ಭದಲ್ಲಿ ಸರ್ಕಾರದ ಅನೇಕ ನ್ಯೂನ್ಯತೆಗಳನ್ನು ಹೇಳುತ್ತೇನೆ. ಆದರೆ ನಾನು ಚುನಾವಣೆ ಬಗ್ಗೆ ಮಾತನಾಡಲು ಹೋಗುವುದಿಲ್ಲ. ರಾಜ್ಯದ ಜನತೆಗೆ ಕೊಟ್ಟಿರುವಂತಹ ಆಶ್ವಾಸನೆಗಳನ್ನು ಈಡೇರಿಸುವಲ್ಲಿ ಈ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಇವತ್ತು ಇಲ್ಲಿ ಹೇಳುವಂತಹ ವಿಚಾರಗಳನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಬೇಕಾಗುತ್ತದೆ ಎನ್ನುವ ಸಂಗತಿಯನ್ನು ನಾನು ಅರ್ಥಮಾಡಿಕೊಂಡಿದ್ದೇವೆ. ಇವತ್ತು ಮುಂಗಡ ಪತ್ರದಲ್ಲಿ ಅನೇಕ ವಿಚಾರಗಳನ್ನು

ಮಾನ್ಯ ಅರ್ಥ ಮಂತ್ರಿಗಳು ಮತ್ತು ಈ ರಾಜ್ಯದ ಉಪಮುಖ್ಯಮಂತ್ರಿಗಳಾದವರು ಪ್ರಸ್ತಾಪ ಮಾಡಿರುವಂತಹ ವಿಚಾರದಲ್ಲಿ, ಹಿಂದೆ ಮಂಡನೆ ಮಾಡಿದಂತಹ ಮುಂಗಡ ಪತ್ರಕ್ಕೂ ಈ ಸಾಲಿನ ಮುಂಗಡ ಪತ್ರಕ್ಕೂ ಹೊಂದಾಣಿಕೆ ಮಾಡಿ ನೋಡಿದಾಗ, ಸ್ವತ: ಅವರೇ ಒಪ್ಪಿಕೊಳ್ಳುತ್ತಾರೆ ರಾಜ್ಯದಲ್ಲಿ ಆಗಬೇಕಾದ ಅಭಿವೃದ್ಧಿ ಕೆಲಸಗಳಲ್ಲಿ ಹಣವು ವೆಚ್ಚವಾಗಿ ಕಡಿತವಾಗಿ ಹಿಂದಿನ ಮುಂಗಡ ಪತ್ರದಲ್ಲಿ 164 ಕೋಟಿಯನ್ನು ಖೋತಾ ಮುಂಗಡ ಪತ್ರವಾಗಿತ್ತು. ಈ ವರ್ಷವೂ ಸಹ 196 ಲಕ್ಷ ಖೋತಾಮುಂಗಡ ಪತ್ರವಾಗಿದೆ ಎಂದು ಅವರೇ ಸ್ವತ: ಹೇಳುತ್ತಾರೆ. ಆದರೆ ಒಂದೆರಡು ವಿಚಾರಗಳನ್ನು ಪ್ರಮುಖವಾಗಿ ನಾನು ಸರ್ಕಾರದ ಗಮನಕ್ಕೆ ತಮ್ಮ ಮುಖಾಂತರ ತರಲು ಇಚ್ಛಿಪಡುತ್ತೇನೆ. ರಾಜ್ಯದಲ್ಲಿ ಬಡತನದ ರೇಖೆಯ ಅಡಿಯಲ್ಲಿ ಬರುವಂತಹ ನಮ್ಮ ಕನ್ನಡಿಗರ ಬಗ್ಗೆ ಚಿಂತನೆ ಮಾಡುವುದರ ಬಗ್ಗೆ ಈ ಸರ್ಕಾರ ಯಾವ ತರಹದ ಆಲೋಚನೆ ಮಾಡಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ಏಕೆ ಹೇಳಬೇಕಾಗುತ್ತದೆ ಎಂದರೆ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಇದೆ ಸದನದಲ್ಲಿ 1994ರಲ್ಲಿ ಹಸಿರು ಪಡಿತರ ಚೀಟಿಯನ್ನು ನೀಡುವಂತಹ ಸಂದರ್ಭದಲ್ಲಿ ಅವರು ಹೇಳಿದ್ದರು, ದಿ: ಇಂದಿರಾಗಾಂಧಿಯವರ ಭಾವಚಿತ್ರ ಇರುವಂತಹ ಪಡಿತರ ಚೀಟಿಯನ್ನು ತೆಗೆದು ಈ ದೇಶದ ಪಿತಾಮಹರಾದ ಮಹಾತ್ಮ ಗಾಂಧೀಜಿಯವರ ಭಾವ ಚಿತ್ರವನ್ನು ಅಳವಡಿಸಿ ಬಡವರಿಗೆ ನಾವು ಹಸಿರು ಕಾರ್ಡ್‌ನು ನೀಡುತ್ತೇವೆ ಎಂದು ಹೇಳಿದರು. ಇದನ್ನು ಸರ್ವಾನುಮತದಿಂದ ನಾವು ಒಪ್ಪಿದ್ದೇವು. ಹಿಂದಿನ ವರ್ಷ ಹೇಳಿದ್ದೀರಿ ಹಸಿರು ಕಾರ್ಡ್ ಕೊಡುವುದರಲ್ಲಿ ಕಳ್ಳ ಕಾರ್ಡ್ ಇವೆ ಎಂದು. ನಾವು ವಿರೋಧ ಪಕ್ಷದವರು ಇಂಥವರಿಗೆ ಹಸಿರು ಕಾರ್ಡು ಕೊಡಿ ಎಂದು ಬರವಣಿಗೆಯಲಲ್ಲಿ ಕೊಟ್ಟಿದ್ದೇವಾ ಸ್ವಾಮಿ? ನಿಮ್ಮ ಸರ್ಕಾರ ಬಂದಾಗ ತಾವು ಬಡವರನ್ನು ಗುರುತಿಸಿ ಹಸಿರು ಕಾರ್ಡ್‌ನ್ನು ಕೊಡುವುದು ಎಂದು ತೀರ್ಮಾನ ಮಾಡಿ, ನಿಮ್ಮ ಸರ್ಕಾರ ಸಮೀಕ್ಷೆ ನಡೆಸಿ, ಈ ರಾಜ್ಯದ ಬಡ ಜನರಿಗೆ ಹಸಿರು ಕಾರ್ಡ್‌ನ್ನು ನೀಡಿ, ಈ ಕಳ್ಳ ಕಾರ್ಡ್‌ಗಳು ಇವೆ ಎಂದು ಹೇಳಬೇಕಾದರೆ, ಇಲ್ಲಿ ಯಾರು ಕಳ್ಳತನ ಮಾಡಿದ್ದಾರೆ, ಸುಳ್ಳು ಕಾರ್ಡ್‌ಗಳನ್ನು ಕೊಡಲು ಯಾರು ಆಲೋಚನೆ ಮಾಡಿದರು, ಈ ಹಸಿರು ಕಾರ್ಡ್ ಬಡವರಿಗೆ ವಿತರಣೆ ಮಾಡುವಂತೆ ಯಾರು ಸಲಹೆ-ಸಹಕಾರಗಳನ್ನು ಕೊಟ್ಟರು ಎನ್ನುವುದನ್ನು ಸರ್ಕಾರ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇವತ್ತು ಮತ್ತೆ ಹೇಳುತ್ತಿದ್ದೀರಿ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡುತ್ತೇವೆ ಎಂದು. ನಾನು ಒಂದು ಮಾತನ್ನು ಕೇಳುತ್ತೇನೆ, ಆದಕ್ಕೆ ನಾವು ಉತ್ತರ ನೀಡಬೇಕು, ಈ ಹಸಿರು ಕಾರ್ಡ್ ಮುಖಾಂತರ ಈ ರಾಜ್ಯದ ಬಡ ಜನರಿಗೆ 3 ರೂ. 20ಪೈಸೆ ಗೆ ಅಕ್ಕಿಯನ್ನು ವಿತರಣೆ ಮಾಡುತ್ತೇವೆ ಎಂದು ಹೇಳಿದ್ದಿರಿ, ನೀವು ಈ ಕಾರ್ಯಕ್ರಮವನ್ನು ಹಾಕಿಕೊಂಡಾಗ, ನೀವು ಅಕ್ಕಿ ಬೆಲೆಯನ್ನು ಘೋಷಣೆ ಮಾಡಿದಾಗ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು. ನಂತರ ನಿಮ್ಮ ಸರ್ಕಾರ ಕೇಂದ್ರದಲ್ಲಿ ಬಂದಾಗ ಕೊಡತಕ್ಕಂತಹ ಅಕ್ಕಿ, ಗೋಧಿ ಸಕ್ಕರೆಯನ್ನು ಕಡತಗೊಳಿಸಿದ್ದೀರಿ, ಮತ್ತೆ ನೀವು ಹೇಳಿದ್ದೀರಿ, ಕೇಂದ್ರ ಸರ್ಕಾರಕ್ಕೆ ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ, ಅವರು ಅನುಮತಿ ಕೊಟ್ಟ ತಕ್ಷಣ ಅಥವಾ ರಾಜ್ಯ ಸರ್ಕಾರಕ್ಕೆ ನಿಗದಿ ಮಾಡಿದ ಖೋತಾ ನಿಗದಿಯಾದ ತಕ್ಷಣವೇ ನಾವು ಹಸಿರುಕಾರ್ಡ್ ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡಬೇಕಾದಂತಹ ಆಹಾರ ಪದಾರ್ಥಗಳನ್ನು ವಿತರಣೆ ಮಾಡುತ್ತೇವೆ ಎಂದು ಹೇಳಿದ್ದಿರಿ. ಎಲ್ಲಿ ಮಾಡುತ್ತೀದ್ದೀರಿ ಸ್ವಾಮಿ? ಮತ್ತೆ ಈಗ ಕೇಳಿದರೆ ನೀವು ಹೇಳುತ್ತಿರಿ, ಈ ಅಧಿವೇಶನ ಮುಗಿದ ಮೇಲೆ ಹಸಿರು ಕಾರ್ಡ್ ವಿತರಣೆ ಮಾಡುತ್ತೇವೆ ಎಂದು. ನಾನು ಚುನಾವಣೆಗಳ ಬಗ್ಗೆ ಮಾತನಾಡಬಾರದು, ಇದರಿಂದ ನಮಗೆ ಧಕ್ಕೆ ಆಗಿರಬಹುದು, ನಿಮಗೆ ಆಗಿರಬಹುದು, ಬೇರೆಯವರಿಗೆ ಆಗಿರಬಹುದು, ಅನೇಕ ಜನ ಈ ವೇದಿಕೆಯಲ್ಲಿ ನಿಂತುಕೊಂಡು ಚುನಾವಣೆ ಬಗ್ಗೆ ಮಾತನಾಡುತ್ತಾರೆ. ಈ ಹಿಂದೆ ಇದ್ದಂತಹ ಕೇಂದ್ರ ಸರ್ಕಾರ 13 ಪಕ್ಷಗಳನ್ನು ಹೊಂದಿಸಿಕೊಂಡು ಸರ್ಕಾರ ರಚನೆ ಮಾಡಿತ್ತು, ಅದು 13 ತಿಂಗಳು ಇತ್ತು, ಈಗ ಈ ಸರ್ಕಾರ 18

ರಾಜಕೀಯ ಪಕ್ಷಗಳನ್ನು ಹೊಂದಿಸಿಕೊಂಡು ಕೇಂದ್ರದಲ್ಲಿ ಸರ್ಕಾರ ರಚನೆ ಮಾಡಿದೆ ಈ ಸರ್ಕಾರ 18 ತಿಂಗಳು ಇರಬಹುದು. ಅದಕ್ಕಿಂತ ಹೆಚ್ಚಿಗೆ ಇರುತ್ತದೆ ಎನ್ನುವ ಬಗ್ಗೆ ಇವತ್ತು ಯಾವ ರಾಜಕೀಯ ಮುಖಂಡರಿಗೆ ಭರವಸೆ ಇಲ್ಲ ಎನ್ನುವ ವಿಚಾರ ಅವರ ಮುಖಂಡರೇ ಹೇಳುತ್ತಿದ್ದಾರೆಯೇ ವಿನ: ಬೇರೆ ಯಾರೂ ಹೇಳುತ್ತಾ ಇಲ್ಲ. ಚುನಾವಣೆ ವಿಷಯಕ್ಕೆ ಹೋಗುವುದು ಬೇಡ. ನಮ್ಮ ರಾಜ್ಯದ ಜನ ತಮ್ಮ ಆಡಳಿತದಿಂದ ಬೇಸತ್ತು, ತಮ್ಮ ವಿರುದ್ಧ ಮತಚಲಾಯಿಸಿದ್ದಾರೆ. ಎನ್ನುವ ಬಗ್ಗೆ ತಮಗೆ ಅರಿವಾಗಬೇಕು. ಕೇವಲ ಕಾಂಗ್ರೆಸ್‌ನವರ ಬಗ್ಗೆ ಮಾತ್ರ ತಾವು ಮಾತನಾಡುವುದಕ್ಕೆ ಹೋಗಬೇಡಿ. ಈ ಹಿಂದೆ ನಮ್ಮ ವಿರುದ್ಧ ಮತ ಚಲಾಯಿಸಿದ್ದಕ್ಕಾಗಿ ನಾವು ಈಗ ವಿರೋಧಪಕ್ಷದಲ್ಲಿ ಕುಳಿತುಕೊಂಡಿದ್ದೇವೆ. ತಾವು ಬಡವರಿಗೆ ಕೊಟ್ಟಿದ್ದಂತಹ ಆಶ್ವಾಸನೆ, ತಾವು ಬಡವರಿಗೆ ಕೊಟ್ಟಂತಹ ಆಶ್ವಾಸನೆ ಯಶಸ್ವಿಯಾಗಿ ಮಾಡದೇ ಇರುವಂತಹ ಕಾರಣ, ತಮಗೆ ಜನ ಪಾಠ ಹೇಳಿಕೊಟ್ಟಿದ್ದಾರೆ. ಇನ್ನು ತಾವು ಅರಿವಾಗಿ ಅದರ ಬಗ್ಗೆ, ಸರಿಪಡಿಸಿಕೊಂಡು ಹೋಗುವಂತಹ ಪ್ರಯತ್ನ ತಾವು ಮಾಡುತ್ತೀರೋ ಇಲ್ಲವೋ ಗೊತ್ತಿಲ್ಲ. ಯಾವ ಯಾವ ವಿಚಾರ ಎಂದು ಹೇಳುವುದಕ್ಕೆ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಇವತ್ತು ಸಭೆಯಲ್ಲಿದ್ದಾರೆ. ನಾವು ಆಲೋಚನೆ ಮಾಡಬೇಕಾದಂತಹ ಸಂದರ್ಭ. ಪಟ್ಟಣ ಪ್ರದೇಶಗಳಲ್ಲಿ ವಾಸವಾಗಿರುವಂತಹ ನಾಗರೀಕರಿಗೆ ನೀವು ಅನಿಲಗ್ಯಾಸನ್ನು ಒದಗಿಸಿಕೊಡುತ್ತೀರಿ, ಎರಡು ಲೀಟರ್ ಸೀಮೆ ಎಣ್ಣೆಯನ್ನು ಒದಗಿಸಿಕೊಡುತ್ತೀರಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ಅಭಾವ ಇರುವಂತಹದ್ದು ಗೊತ್ತಿದೆ. ಅಂತಹ ಹಳ್ಳಿಗಳಿಗೆ ತಾವು ಎಷ್ಟು ಲೀಟರ್ ಸೀಮೆ ಎಣ್ಣೆಯನ್ನು ಕೊಡುತ್ತಿದ್ದೀರಿ? ಆ ಬಡವರು, ರೈತರು, ಕಾರ್ಮಿಕರು, ತಾವು ಪದೇ ಪದೇ ರಾಜಕೀಯವಾಗಿ ಆಯ್ಕೆಯಾಗಿ ಬಂದ ತಕ್ಷಣ ಒಂದೊಂದು ಕಿರೀಟ ನಮಗೆ ಸಿಗುತ್ತದೆ. ನಮ್ಮ ಈಗಿನ ಮುಖ್ಯಮಂತ್ರಿಗಳಿಗೆ ಯಾವುದೇ ಪಟ್ಟಕಟ್ಟಿಲ್ಲ ಏಕೆ ಎಂದು ಗೊತ್ತಾಗಲಿಲ್ಲ. ಹಿಂದೆ ಇದ್ದಂತಹ ಮುಖ್ಯಮಂತ್ರಿಗಳಿಗೆ ಮಣ್ಣಿನ ಮಗ ಎಂದು ಕರೆದರು. ಸೊರಬಕ್ಕೆ ಆಗಿದೆ, ಮಂಡ್ಯದಲ್ಲಿ ಆಗಿದೆ, ಹಾಸನದಲ್ಲಿ ಆಗಿದೆ, ನೀವೇ ಹೇಳಿದ್ದು, ಮಣ್ಣಿನ ಮಗ ಸರ್ಕಾರದಲ್ಲಿ ಅದು ಮಾಡುತ್ತೇವೆ. ಇದು ಮಾಡುತ್ತೇವೆ ಎಂದು ನೀವೇ ಹೇಳಿದಂತಹ ಜನ. ನಮ್ಮ ಈಗಿನ ಮುಖ್ಯಮಂತ್ರಿಗಳಿಗೆ ಆ ರೀತಿಯ ಪಟ್ಟ ಏಕೆ ಇನ್ನೂ ಕಟ್ಟಿಲ್ಲ. ಅದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ: ಮಾನ್ಯ ಅಧ್ಯಕ್ಷರೇ, 200 ಕೋಟಿ ರೂಪಾಯಿಗಳ ರೈಲು ಬಿಟ್ಟರಲ್ಲಾ, 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನೀರು ಹರಿಸಿದ್ದು ಯಾರು ಟಿಲಿ ಕಮ್ಯುನಿಕೇಶನ್ ಯಾರು ಮಾಡಿದರು? 300 ಕೋಟಿ ರೂಪಾಯಿಗಳು ಖರ್ಚು ಮಾಡಿ ತುಮಕೂರು ಟು ಹೊನ್ನಾವರ ರೈಲ್ವೆ ಯಾರು ಮಾಡಿದವರು?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಷ್ಮಯ್ಯನವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅವರ ಆರೋಗ್ಯವನ್ನು ಸ್ವಲ್ಪ ತೋರಿಸಬೇಕು. ತಾವು ಏನುಹೇಳುತ್ತಿರೋ ಗೊತ್ತಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಅವರು ಬಹಳ ಹಿರಿಯರು ನನಗೆ. ಅವರ ಬಗ್ಗೆ ನಮಗೆ ಅಪಾರವಾದಂತಹ ಗೌರವ ಇದೆ. ಮಾನ್ಯ ವಾಟಾಳ್ ನಾಗರಾಜ್ ಅವರು ಕಲಿಸಿ ಕೊಟ್ಟಿದ್ದಾರೆ. ಅವರ ಮಾರ್ಗದರ್ಶನವೂ ಸಹ ನಮಗೆ ಇನ್ನು ಮುಂದೆ ಬೇಕು. ಆದರೆ ನನಗೆ ಬಂದಿರುವ ಮಾಹಿತಿಯ ಪ್ರಕಾರ ಈ ರಕ್ತದ ಒತ್ತಡ ಬಹಳ ಜಾಸ್ತಿ ಇದೆ ಎನ್ನುವ ಮಾತು ವೈದ್ಯರು ಹೇಳಿದ್ದಾರೆ. ನಾಳೆ ವ್ಯತ್ಯಾಸಗಳು ಆಗುವಂತಹ ಸಾಧ್ಯತೆಗಳು ಇದೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಇದು ನನ್ನ ಹುಟ್ಟಿನಿಂದಲೇ ಬಂದಿದೆ. ನನಗೆ ರಕ್ತದ ಒತ್ತಡ ಇಲ್ಲ. ಹುಣಿಸೇ ಕಾಯಿಯೋ ಇಲ್ಲ. ನಾನು ಯಾವ ಖಾಯಿಲೆಯಾ ಬಿದ್ದಲ್ಲ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ನಾನು ಹೇಳಿದ ಮಾತಿಗೆ ಅವರಿಗೆ ಬೇಜಾರು ಆಯಿತು. ಪಾರ್ಲಿಮೆಂಟ್ ಚುನಾವಣೆ ನಡೆಯುತ್ತಿದೆ ಅವರು ಹೋಗಿ ಆಸ್ಪತ್ರೆಗೆ ಸೇರಿಕೊಂಡರು ಏಕೆ ಎಂದು ನಾನು ಕೇಳಿದೆ, ಎದೆ ನೋವು ರಕ್ತದ ಒತ್ತಡ ಜಾಸ್ತಿ ಆಗಿರುವುದರಿಂದ ಸೇರಿಕೊಂಡಿದ್ದಾರೆಂದು ಹೇಳಿದರು. ಆಗ ನಾನು ಹೇಳಿದೆ ಅವರು ಹೊರಗಡೆ ಬಾರದೇ ಇದ್ದರೆ ಸಂತೋಷ ಅಂದೆ.

ಉಪಾಧ್ಯಕ್ಷರು : ಅವರು ಒಳ್ಳೆಯ ಸ್ನೇಹಿತರು ಎಂದು ಹೇಳುತ್ತೀರಿ ಹೊರಗಡೆ ಬರಬಾರದು ಎಂದು ಹೇಳುತ್ತೀರಿ ಇದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚುನಾವಣೆ ಸಮಯದಲ್ಲಿ ಕೆಲಸ ಮಾಡಲು ಹೊರಗೆ ಬಾರದೇ ಇರಲಿ ಎಂದು ಹೇಳಿದ್ದು ಅವರು. ಬೇರೆನೂ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ : ಇವರು ಸರ್ಕಾರವನ್ನು ಟೀಕೆ ಮಾಡಿದಂತೆಲ್ಲಾ ಅವರು ಸರ್ಕಾರವನ್ನು ರಕ್ಷಣೆ ಮಾಡುತ್ತಿದ್ದಾರೆ. ಹಾಗಾಗಿ ಈ ಸಾರಿ ಸುಮಾರು ಮಂತ್ರಿ ಪದವಿಗಳು ಖಾಲಿ ಇವೆ, ಮಾನ್ಯ ಲಕ್ಷ್ಮಯ್ಯನವರು ಒಮ್ಮೆ ಮಂತ್ರಿ ಮಾಡಿ ಬಿಡಿ ಒಳ್ಳೆಯದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇವರ ಮಾತು ಕೇಳಿ ಅವರನ್ನು ಮಂತ್ರಿ ಮಾಡಿದರೆ ಮಂತ್ರಿಮಂಡಲದ ಗತಿ ಏನಾಗಬೇಕು? ಮುಖ್ಯಮಂತ್ರಿಗಳ ಗತಿ ಏನಾಗಬೇಕು?

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಸಗೀರ್ ಅಹ್ಮದ್‌ರವರು ಎತ್ತಿರುವ ಈ ಟಾಪಿಕ್ ಶ್ರೀಮಾನ್ ಲಕ್ಷ್ಮಯ್ಯನವರ ರಕ್ತದ ಒತ್ತಡ ಇವು ಬಜೆಟ್‌ನ ಯಾವ ಕಲಂನಲ್ಲಿದೆ? ನನಗೆ ಗೊತ್ತಾಗುತ್ತಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ನನ್ನ ಪ್ರಾರ್ಥನೆ ಏನೆಂದರೆ ಅವರ ಆರೋಗ್ಯ ಚೆನ್ನಾಗಿರಲಿ ಎನ್ನುವ ಒಂದೇ ಒಂದು ದೃಷ್ಟಿಯಿಂದ ಅದು ಬಿಟ್ಟರೆ ಬೇರೇನೂ ಇಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಲಕ್ಷ್ಮಯ್ಯನವರ ಆರೋಗ್ಯದ ಪ್ರಶ್ನೆ ಆರೋಗ್ಯ ಇಲಾಖೆಯ ಬಜೆಟ್‌ನಲ್ಲಿ ಬರುತ್ತದೆ.

ಶ್ರೀ ಸಿ. ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಇದರ ಮಧ್ಯೆ ಇನ್ನೊಂದು ಇದೆ. ಮಾನ್ಯಮುಖ್ಯಮಂತ್ರಿಗಳಲ್ಲಿ ನನ್ನದೂ ಒಂದು ವಿನಂತಿ ನಾನು ಚಿಕ್ಕಮಗಳೂರು ಜಿಲ್ಲೆಯವನಾಗಿ, ಅವರು ಬಹಳ ಹಿರಿಯರು. ಅವರಿಗೆ ಒಂದು ಆಸೆ ಇದೆ. ಮುಂದೆ ಸಚಿವಸಂಪುಟ ಪುನರ್ ರಚನೆಯಾಗುವಂತಹ ಸಂದರ್ಭದಲ್ಲಿ ಒಂದು ಮಂತ್ರಿ ಪದವಿ ಅವರಿಗೆ ನೀಡಬೇಕು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಕಾರಣ ನಾನು ಎಂದು ಹೇಳಿದರೆ ಅವರಿಗೆ ಅದೊಂದು ಆಸೆ ಇದೆ. ಮಾನ್ಯ ಅಜೀಜ್‌ಸೇಟ್ ಸಾಹೇಬರು ಈ ಸದನದ ಸದಸ್ಯರಾಗಿ ಈ ಸದನದಲ್ಲಿ ಮಂತ್ರಿಗಳಾಗಿ ಈ ರಾಜ್ಯದ ಸೇವೆ ಮಾಡಿರುವವರು ಏನು ಹೇಳುತ್ತಿದ್ದಾರೆ ಅಂದರೆ ಮೊದಲನೇ ಬಾರಿ ನಾನು ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಯಾಗಿ ಬಂದಿದ್ದೆ ನಾನು ಸಾಯುವಾಗಲೂ ಸಹ ನನಗೆ ವಿಧಾನ ಪರಿಷತ್ತಿನ ಸದಸ್ಯಗಿರಿ ಬೇಕು ಎಂದು ಹೇಳುತ್ತಿದ್ದಾರೆ. ಆದ್ದರಿಂದ ಮಾನ್ಯ ಲಕ್ಷ್ಮಯ್ಯನವರಿಗೆ ಕೊನೆಯದಾಗಿ ಸಚಿವ ಸಂಪುಟ ಸದಸ್ಯನಾಗಿ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆದ್ದರಿಂದ ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಬಾರದು.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಮಾನ್ಯ ಅಧ್ಯಕ್ಷರೇ, ಇವತ್ತು ಸರ್ಕಾರ ಕೆಲವು ವಿಚಾರಗಳನ್ನು ಅರಿತುಕೊಳ್ಳಬೇಕಾಗುತ್ತದೆ. ಇವತ್ತು ನಾವು ಬಡವರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಪಟ್ಟಣ ಪ್ರದೇಶಗಳ ವ್ಯಾಪ್ತಿಯಲ್ಲಿ ವಾಸಿಸುತ್ತಿರುವಂತಹ ಜನ ಎಷ್ಟು ಸಂಖ್ಯೆಯಲ್ಲಿ ನಾವು ವಾಸ ಮಾಡುತ್ತಿದ್ದೇವೆ. ಶೇಕಡ 30-35 ರಷ್ಟು ಜನ ನಾವು ಪಟ್ಟಣ ಪ್ರದೇಶದಲ್ಲಿ ಜೀವನ ಮಾಡುತ್ತಿದ್ದರೆ ಶೇಕಡ 60 ರಿಂದ 65 ರಷ್ಟು ಜನ ಬಡವರು ಇರಬಹುದು, ರೈತರು ಇರಬಹುದು ಕಾರ್ಮಿಕರು ಇರಬಹುದು, ಅಥವಾ ಬೇರೆ ಬೇರೆ ಹಿಂದುಳಿದವರ್ಗದವರು ಇರಬಹುದು ಅಲ್ಪಸಂಖ್ಯಾತರು ಇರಬಹುದು, ಅವರು ಹಳ್ಳಿಗಾಡಿನಲ್ಲಿ ಜೀವನ ಕಳೆಯುತ್ತಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಕೆ ಇ ಬಿ ಅಂದರೆ ಸಾಮಾನ್ಯ ಜನ ಇವತ್ತು ಏನು ಮಾತನಾಡಿಕೊಳ್ಳುತ್ತಿದ್ದಾರೆ ಅಂದರೆ ಕರೆಂಟ್ ಇಲ್ಲ ಬಿಡು ಆ ಇಲಾಖೆ ಹೆಸರು ಎಂದು ಹೇಳುತ್ತಾರೆ ಕರೆಂಟ್ ಇಲ್ಲ ಬಿಡು. ಇದು ಎಲ್ಲಿ ಮಾತನಾಡುತ್ತಾರೆ ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಮಾತನಾಡುತ್ತಾರೆ. ಕೆ ಇ ಬಿ ಕರೆಂಟ್ ಇಲ್ಲ ಬಿಡು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ ನಾವು ಸರ್ಕಾರ ನಡೆಸುವವರು. ನಾವು ವಿರೋಧ ಪಕ್ಷದಲ್ಲಿದ್ದರೂ ಸಹ ನಮ್ಮ ಪಾತ್ರವೂ ಸಹ ಸರ್ಕಾರ ನಡೆಸುವುದರಲ್ಲಿದೆ. ಸರ್ಕಾರ ನಡೆಸುವವರಿಗೆ ಬುದ್ದಿವಂತಿಕೆಯಿಂದ ನಡೆಸುವುದರ ಬಗ್ಗೆ ತಿಳುವಳಿಕೆ ಇದೆಯೋ, ಇಲ್ಲವೋ ಎನೋ ನನಗೆ ಅರ್ಥವಾಗುವುದಿಲ್ಲ. ಇವತ್ತು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ 23-25 ಅಂತಸ್ಥಿನ ಕಟ್ಟಡಗಳು ಬರುತ್ತಿರುವಂತಹ ಸಂದರ್ಭದಲ್ಲಿ ತಾವು ಅವರಿಗೆ ವಿದ್ಯುತ್ ಒದಗಿಸಿಕೊಡುವ ಬಗ್ಗೆ ನಿರ್ಣಯ ಮಾಡುತ್ತಿದ್ದಿರಲ್ಲಾ, ಅವರೇ ಜನರೋ, ನಾವೇನೂ ಜನರಲ್ಲವೇ? ಹಳ್ಳಿಗಾಡು ಪ್ರದೇಶಗಳ ಜನರ ಮತಗಳನ್ನು ಪಡೆದು ನಾವು ಇಲ್ಲಿಗೆ ಆಯ್ಕೆಯಾಗಿ ಬಂದು ನಾವು ಅವರ ಕಷ್ಟದಲ್ಲಿ ಆಗಲಿ ಸುಖದು:ಖದಲ್ಲಿ ಆಗಲಿ ಭಾಗಿಗಳು ಆಗುತ್ತೇವೆಂದು ಹೇಳಿ ಬಂದಂತಹ ಶಾಸಕರು ಅವರಿಗೆ ವಿದ್ಯುತ್ ಒದಗಿಸಿಕೊಡುವುದಕ್ಕೆ ನಾವು ಹೇಳುತ್ತಿದ್ದೇವೆ, ಬೀದಿ ದೀಪಗಳನ್ನು ಆಳವಡಿಸಿಕೊಡುವುದಕ್ಕೆ ಅವಕಾಶ ಇಲ್ಲ. ನಮ್ಮ ವಿದ್ಯುತ್ ಇಲಾಖೆಯಿಂದ ನೇರವಾಗಿ ಬರೆದಿದ್ದಾರೆ. ಸೋಡಿಯಂ ದೀಪಗಳನ್ನು ಆಳವಡಿಸಬಾರದು. ಮಾನ್ಯ ಇಂದಿನ ಮಂತ್ರಿಗಳು ನನಗೆ ಒಂದು ಕಾಗದ ಬರೆದಿದ್ದಾರೆ. ಭಾಗ್ಯಜ್ಯೋತಿ ಹಾಗೂ ಹರಿಜನ ಬಸ್ತಿಗಳನ್ನು ವಿದ್ಯುದ್ದೀಕರಣಕ್ಕಾಗಿ ನಿಮ್ಮ ನಿಮ್ಮ ಕ್ಷೇತ್ರಗಳಿಂದ ಎಲ್ಲಾ ಶಾಸಕ ಮಿತ್ರರಿಗೆ ಬರೆದಿದ್ದಾರೆ. ಇಷ್ಟಿಷ್ಟು ಹಳ್ಳಿಗಳನ್ನು ತಾವು ಬರೆದು ಕೊಡಬೇಕು ಎಂದು ಹೇಳಿ. ಆದರೆ ನಾವು ಕಾಗದಗಳನ್ನು ಬರೆದಿದ್ದೇವೆ. ಆದರೆ ನೀವು ದೀಪ ಹಾಕುವಂತಹ ವ್ಯವಸ್ಥೆಯೇ ಇಲ್ಲದಿದ್ದಾಗ ತಾವು ಎಷ್ಟು ಉತ್ತಮ ಮಟ್ಟದಲ್ಲಿ ಆಡಳಿತವನ್ನು ನಡೆಸುತ್ತಿದ್ದೀರಿ ಹೇಳಿಸ್ವಾಮಿ. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಬೇಜಾರು ಮಾಡಬಾರದು. ತಮ್ಮ ಮಾರ್ಗದರ್ಶನದಲ್ಲಿ ಅನೇಕ ವಿಚಾರಗಳನ್ನು ನಾವು ಕೇಳಬೇಕಾಗುತ್ತದೆ. ರೈತರಿಗೆ ಅನ್ಯಾಯವಾಗುತ್ತದೆ ನಿಮ್ಮ ಸರ್ಕಾರ ರೈತರಿಗೆ ಏನೂ ಮಾಡಲಿಲ್ಲ ಎಂದು ಹೇಳಿದರೆ ಆ ನೀವೇ ರೈತರ ಮಕ್ಕಳು ನಾವೆಲ್ಲಾ ಮಾರವಾಡಿ ಮಕ್ಕಳೇ ಎಂದು ಕೇಳಿದಿರಿ. ಕಡತದಲ್ಲಿದೆ ಇವತ್ತೂ ನಾವು ನೋಡಬಹುದು. ಇಲ್ಲಿ ಶಾಸಕರಾಗಿ ಆಯ್ಕೆಯಾಗಿ ಬಂದಿರುವವರು ಪಟ್ಟಣ ಪ್ರದೇಶದವರು ಆಗಲಿ ಗ್ರಾಮಾಂತರ ಪ್ರದೇಶದಿಂದ ಆಗಲಿ ಎಲ್ಲರೂ ರೈತರ ಮಕ್ಕಳೇ ಅವರು ಆ ಜನಾಂಗ, ಈ ಜನಾಂಗ ಎನ್ನುವ ಪ್ರಶ್ನೆಯೇ ಬರುವುದಿಲ್ಲ. ಯಾವುದೇ ಜನಾಂಗದಲ್ಲಿ ಹುಟ್ಟಿದರೂ ಸಹ ಅವನು ಒಂದೆರಡು ಎಕರೆ ಜಮೀನು ಹೊಂದಿರುವಂಥವನಾಗಿ ಈ ರಾಜ್ಯದಲ್ಲಿ ಒಬ್ಬ ಶಾಸಕನಾಗಿ ಬಂದು ಅವರ ಕಷ್ಟಸುಖಗಳನ್ನು ಅರಿತು, ನಮ್ಮ ಕೈಯ್ಯಲ್ಲಿ ಆ ಜನರ ಸೇವೆ ಮಾಡಲು ಸಾಧ್ಯ ಇದೆಯೇ ಎನ್ನುವ ದೃಷ್ಟಿಯಿಂದ ಬಂದಿದ್ದೇವೆ. ಆದರೆ ಬಡ ಕುಟುಂಬಗಳು ವಾಸಿಸುತ್ತಿರುವಂತಹ ಜಾಗಗಳಲ್ಲಿ ಬೀದಿ ದೀಪಗಳು ಹಾಕುವುದಿಲ್ಲ ಅಂದರೆ ಹೇಗೆ?

ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ 23 ಮತ್ತು 25 ಕಟ್ಟಡಗಳಿಗೆ ವಿದ್ಯುತ್ ಒದಗಿಸಿಕೊಡುತ್ತಿರುವಂತಹ ಸಂದರ್ಭದಲ್ಲಿ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೆ ಹಳ್ಳಿಗಾಡು ಪ್ರದೇಶದಲ್ಲಿ ವಾಸ ಮಾಡುವಂತಹ ಆ ಬಡವರಿಗೆ ತಾವು ಅವಕಾಶವನ್ನು ಏತಕ್ಕೆ ಕಲ್ಪಿಸುತ್ತಿಲ್ಲ? ಇದರಲ್ಲಿ ಏನು ಎಂಬುದು ನನಗಂತೂ ಅರ್ಥವಾಗುವುದಿಲ್ಲ. ಏಕೆಂದರೆ ನಮ್ಮದೇ ಕಾರ್ಯಕ್ರಮ. ಭಾಗ್ಯಜ್ಯೋತಿ ಅಡಿಯಲ್ಲಿ ಒಂದು ಬಡವನ ಮನೆಗೆ ಒಂದು ದೀಪ ಹಾಕಿಸಿ ಕೊಡುವಂತಾದ್ದು ನಾವು ಮತ್ತು ನೀವು ತಂದಿರುವಂತಹ ಮಸೂದೆ. ಆ ಬಡವರು ಇವತ್ತು ಒಂದು ದೀಪ ಹಾಕಿಸಿಕೊಡಿ ಎಂದು ಕೇಳುವಂತಹ ಪರಿಸ್ಥಿತಿ ಇದ್ದರೂ ಸಹ ನಾವು ಆ ಒಂದು ವ್ಯವಸ್ಥೆಯನ್ನು ಮಾಡುವಂತಹ ಸ್ಥಿತಿಯಲ್ಲಿ ಇಲ್ಲದೇ ಬಂಡವಾಳ ಶಾಹಿಗಳು, ಹೊರರಾಜ್ಯಗಳಿಂದ ಬಂದಂತಹವರು, ತಾವು ಎರ್‌ಪೋರ್ಟ್ ರಸ್ತೆಯಲ್ಲಿ ನೋಡಬೇಕು, ನಾನು ಮೊನ್ನೆ ನೋಡಿದೆ. ದಿನನಿತ್ಯ ನೋಡುತ್ತಿದ್ದೀರಿ ಅದಕ್ಕೆ ಎಲ್ಲಿಂದ ವಿದ್ಯುತ್ ಒದಗಿಸಿಕೊಡುತ್ತೀರಿ. ತಾವು ಉತ್ಪಾದನೆ ಮಾಡುವಂತಹ ಕಾರ್ಯಕ್ರಮದಲ್ಲಿ ಎಲ್ಲಿ ಮುಂದಾಗಿದ್ದೀರಿ? ಈ ರಾಜ್ಯದ ಜನರಿಗೆ ಆಶ್ವಾಸನೆ ಕೊಟ್ಟಿದ್ದೀರಿ. ಈ ಬಡವರು ಬದುಕುವುದಕ್ಕಾಗಿ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ನಾವುಯಶ್ವಸಿಯಾಗಿಲ್ಲ ಅಂದರೆ ನಾವು ಯಾವ ರೀತಿ ಸರ್ಕಾರಗಳನ್ನು ನಡೆಸಬೇಕು? ತಾವು ಯಾವ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದೀರಿ ಎನ್ನುವುದರ ಬಗ್ಗೆ ನನಗಂತೂ ಅರ್ಥವಾಗಿಲ್ಲ. ಇದೇ ಕಾರಣಕ್ಕಾಗಿ ಈ ಬಡವರ ಮನಸ್ಸು ಪರಿವರ್ತನೆಯಾದ ಕಾರಣ ಇವತ್ತು ನಾವು ಕಷ್ಟದಲ್ಲಿ ಸಿಕ್ಕಿಕೊಂಡಿದ್ದೇವೆ. ತಾವು ರಾಜೀನಾಮೆ ಕೊಡಿ ಅಥವಾ ಬಿಡಿ, ಅದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾವು ಮಾಡಿದಂಥ ತಪ್ಪುಗಳನ್ನು ನಮ್ಮ ಕನ್ನಡಿಗರು ಅರಿತು ನಮಗೆ ನೋವುಂಟಾಗುವಂತೆ ಅವರು ನಿರ್ಣಯ ಕೊಟ್ಟಿದ್ದಾರೆ. ಇದನ್ನು ಸರಿಪಡಿಸುವುದಕ್ಕೆ ವ್ಯವಸ್ಥೆಯನ್ನು ತಾವು ಯಾವ ಕಾಲಕ್ಕೆ ಮಾಡುತ್ತೀರಿ? ನಾವು ಹೇಳುತ್ತೇವೆ, ಈಗಲೂ ನಾವು ಆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ, ಈಗಲೂ ನಾವು ಆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದೇವೆ ಎಂದು. ಇದನ್ನು ತಾವೂ ಹೇಳುತ್ತಿದ್ದಿರಿ. 3 ವರ್ಷಗಳ ಕಾಲವಾಯಿತು, ತಾವು ಸರ್ಕಾರ ರಚನೆ ಮಾಡಿದಾಗ ನಾವು ಈ ಸದನದಲ್ಲಿ ಯಾವ ಬೇಡಿಕೆಗಳನ್ನು ಪ್ರಸ್ತಾಪ ಮಾಡಿದ್ದೆವೋ? ಆ ಬೇಡಿಕೆಗಳನ್ನು ಪೂರೈಸಲು ಇವತ್ತಿನವರೆಗೆ ಸಾಧ್ಯವಾಗಿಲ್ಲ. ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಮುಂಗಡ ಪತ್ರವನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂಬುದನ್ನು ಹೇಳುತ್ತೇನೆ. ತಮ್ಮ ಮುಂಗಡ ಪತ್ರದಲ್ಲಿ ತಾವು ಏನು ಹೇಳಿದ್ದೀರಿ ಎಂದರೆ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ...

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ : ಹರಿಜನ ಗಿರಿಜನ ಎಂದು ಹೇಳಬೇಡಿ. ದಲಿತರು ಎಂದು ಹೇಳಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಎಂದು ಹೇಳಿ. ಹರಿಜನ ಗಿರಿಜನ ಎನ್ನುವ ಪದ ಬೇಡ. ಈ ಸದನದಲ್ಲಿ ಹರಿಜನ ಗಿರಿಜನ ಎನ್ನುವ ಪದವನ್ನು ಹೇಳಬಾರದು. ನಿಮ್ಮ ನಾಯಕರನ್ನೇ ಕೇಳಿ, ಹರಿಜನ ಗಿರಿಜನ ಎನ್ನುವ ಪದ ಚೆನ್ನಾಗಿರುವುದಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಆಯಿತು, ಪರಿಶಿಷ್ಟ ವರ್ಗ ಮತ್ತು ಪಂಗಡದ ಫಲಾನುಭವಿಗಳಿಗೆ (ಫಲಾನುಭವಿಗಳನ್ನು ಫಲಾನುಭವಿಗಳೆಂದು ಉಚ್ಚಾರ ಮಾಡಿದರು).

ಶ್ರೀ ಹೆಚ್. ಶಿವಪ್ಪ : ಅದು ಫಲಾನುಭವಿಗಳು. ಫಲಾನುಭಾವಿಗಳಲ್ಲ. ಏನಿದು ಬಾವಿಗಳು, ಪ್ರಸ್ತಾವ ಇವುಗಳೆಲ್ಲಾ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾನು ಪದೇ ಪದೇ ಮುಖ್ಯ ಮಂತ್ರಿಗಳನ್ನು ಭೇಟಿಯಾಗುವುದಿಲ್ಲ. ಏಕೆಂದರೆ ನೀವು ಅವರನ್ನು ಭೇಟಿಯಾಗುವುದರಿಂದ ನೀವು ಮಂತ್ರಿಯಾಗುತ್ತೀರಿ ಎನ್ನುವ ನಂಬಿಕೆ ನನಗಿದೆ. ಏಕೆಂದರೆ ನೀವು ಅವರಿಗೆ ಬಹಳ ಹತ್ತಿರದಲ್ಲಿದ್ದೀರಿ ಮತ್ತು ಬಹಳವಾಗಿ ಅವರ ಸಹಕಾರಕ್ಕೆ ಬರುತ್ತೀರಿ. ನಾನು ಮಾತನಾಡುವಂಥ ಕನ್ನಡದ ಬಗ್ಗೆ ನನ್ನ ಹಿಂದೆ ಹೇಳಿದ್ದಾರೆ, ಆ ಸಾಬಣ್ಣ ಬಹಳ ಚೆನ್ನಾಗಿ ಮಾತನಾಡುತ್ತಾನೆ, ಎಂದು. ಒಂದು ಪಕ್ಷ ತಪ್ಪಾದರೆ ಏನು ಮಾಡುವುದಕ್ಕೆ ಆಗುತ್ತದೆ? ನಾನು ಮಾಡಿದ್ದು ಒಂದು ಸಣ್ಣ ತಪ್ಪು. ನೀವು ಎಷ್ಟೆಷ್ಟು ದೊಡ್ಡ ತಪ್ಪು ಮಾಡಿದ್ದೀರಿ ಎಂದು ನಿಮಗೆ ಗೊತ್ತೇ? ಅದನ್ನು ಈಗ ಹೇಳಲೆ? ಈಗ ಬೇಡ ಬಿಡಿ. ಮುಂದೆ ಹೇಳುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೇ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಯೋಜನೆಯಡಿ ಈ ರಾಜ್ಯದಲ್ಲಿ 60 ಸಾವಿರ ಮನೆಗಳನ್ನು ನಿರ್ಮಿಸುವುದರಲ್ಲಿ ನಾವು ವಿಫಲರಾಗಿದ್ದೇವೆ ಎನ್ನುವ ಒಂದು ಪದವನ್ನು ಈ ಪುಸ್ತಕದಲ್ಲಿ ಅವರು ಬಳಸಿದ್ದಾರೆ. ಈ ಜನಾಂಗದ ಮೇಲೆ ಇಷ್ಟು ಪ್ರೀತಿ, ವಿಶ್ವಾಸವನ್ನು ಇಟ್ಟಿರುವಂಥ ಸರ್ಕಾರ ಮತ್ತು ಇಷ್ಟು ಪ್ರೀತಿ, ವಿಶ್ವಾಸವನ್ನು ಇಟ್ಟಿರುವಂಥ ಮಂತ್ರಿಗಳು ಮತ್ತು ಶಾಸಕರಾದ ನಾವುಗಳಿದ್ದರೂ ಈ ಕಾರ್ಯಕ್ರಮ ಯಶಸ್ವಿಯಾಗದೇ ಇರುವುದಕ್ಕೆ ಏನು ಕಾರಣ ಸ್ವಾಮಿ? ಶಾಸಕರಿಂದೇನಾದರೂ ಅಡೆತಡೆ ಬಂದಿರುವಂಥ ವಿಚಾರವೇನಾದರೂ ಇದೆಯೇ? ಏಕೆಂದರೆ ಬಹಿರಂಗವಾಗಿ ಅವರು ಇದನ್ನು ಹೇಳಿದ್ದಾರೆ, ಈ ಪುಸ್ತಕದಲ್ಲಿ ನಮೂದಿಸಿದ್ದಾರೆ. 60 ಸಾವಿರ ಮನೆಗಳನ್ನು ನಿರ್ಮಿಸುವುದರಲ್ಲಿ ವಿಳಂಬವಾಗಿದೆ ಎಂದು ಹೇಳಿದ್ದಾರೆ. ಇದಕ್ಕೆ ಏನು ಕಾರಣ ಎಂದು ತಾವು ಹೇಳಬೇಕಲ್ಲವೇ? ಈ ಕಾರ್ಯಕ್ರಮವನ್ನು 1997-98, 1998-99ನೇ ಸಾಲಿನ ಯಶಸ್ವಿಯಾಗಿ ನಾವು ಮಾಡುತ್ತೇವೆ ಎಂದು ಹೇಳಿದರು. ಇವತ್ತು ಮಾರ್ಚ್ ಕೊನೆಯಲ್ಲಿ ನಾವು ಬಜೆಟ್‌ನ ಮೇಲೆ ಚರ್ಚೆ ಮಾಡುತ್ತಿದ್ದೇವೆ. ಇವತ್ತು ಈ ಸದನದಲ್ಲಿ ಅನೇಕ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ನೀವು ನಾಳೆಯೇ ನಮ್ಮ ಕ್ಷೇತ್ರಗಳಿಗೆ ಕನಿಷ್ಟ ಪಕ್ಷ ಒಂದೊಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ, ಅದರಿಂದ 30ನೇ ತಾರೀಖಿನೊಳಗೆ ಸಂಪೂರ್ಣವಾಗಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಿ ಎಂದರೆ ಅದು ಸಾಧ್ಯವಿದೆಯೇ? ತಾವೇ ಹೇಳಿ ಉಪಾಧ್ಯಕ್ಷರೇ. ಇವತ್ತು ಮುಖ್ಯ ಮಂತ್ರಿಗಳು ಈ ಸದನದಲ್ಲಿ ಹಾಜರಿದ್ದಾರೆ, ಉಪ ಮುಖ್ಯ ಮಂತ್ರಿಗಳೂ ಈ ಸದನದಲ್ಲಿ ಹಾಜರಿದ್ದಾರೆ. ಈ ಪ್ರಗತಿ ಕೆಲಸಗಳು ಯಾವ ರೀತಿ ಆಗಬೇಕು ಎನ್ನುವಂಥಾದ್ದರ ಬಗ್ಗೆ ಸರ್ಕಾರ ನಿರ್ದಿಷ್ಟವಾಗಿ ಒಂದು ತೀರ್ಮಾನ ಮಾಡಬೇಕಾಗುತ್ತದೆ. ಈಗ ನಾನು ಯಾವ ಯಾವ ವಿಚಾರಗಳನ್ನು ಹೇಳುವುದಕ್ಕಾಗುತ್ತದೆ. ಈ ಪುಸ್ತಕದಲ್ಲಿರುವುದನ್ನು ಪೂರ್ತಿ ಹೇಳಬೇಕಾದರೆ ಕನಿಷ್ಟ ಪಕ್ಷ ನನಗೆ ಒಂದೂವರೆ ಗಂಟೆ ಬೇಕು.

ಉಪಾಧ್ಯಕ್ಷರು : ಏಪ್ರಿಲ್ 15ನೇ ತಾರೀಖು ಆದ ಮೇಲೆ ಬಜೆಟ್ ಭಾಷಣ ಮಾಡುವಾಗ ಮಾತನಾಡಿ. ಈಗ ತಾವು ಬೇಗ ಮುಗಿಸಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಆಯಿತು ಸ್ವಾಮಿ. ಮಲೆನಾಡು ಅಭಿವೃದ್ಧಿಗೆ ನಾಳೆ ನಾಡಿದ್ದರಲ್ಲಿ 15 ಕೋಟಿ ರೂಪಾಯಿ ಬಿಡುಗಡೆ ಮಾಡುವಂಥಾದ್ದರ ಬಗ್ಗೆ ನನಗೆ ಮಾಹಿತಿ ಇದೆ. ಉಪ ಮುಖ್ಯ ಮಂತ್ರಿಗಳು ಬಿಡುಗಡೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಈ 15 ಕೋಟಿ ರೂಪಾಯಿಗಳನ್ನು ಮಾರ್ಚ್ 30ರೊಳಗೆ ಖರ್ಚು ಮಾಡಲು ಸಾಧ್ಯವಿದೆಯೇ ಎನ್ನುವುದನ್ನು ಅರ್ಥ ಮಂತ್ರಿಗಳು ಹೇಳಲಿ. ಆದ್ದರಿಂದ ನಾನು ಏನು ಹೇಳುತ್ತೇನೆ ಎಂದರೆ, ತಾವು ಹಣ ಕೊಟ್ಟಿಲ್ಲ, ಅಥವಾ ಕೊಡುವುದಿಲ್ಲ ಎಂದು ಹೇಳುವುದಿಲ್ಲ. ಆದರೆ ಕೊಡುವುದರಲ್ಲಿ ವಿಳಂಬವಾಗುವುದಕ್ಕೆ ಕಾರಣವೇನು? ತಾವು ಪದೇ ಪದೇ ಹೇಳುತ್ತೀರಿ, ನಮ್ಮ ಖಜಾನೆ ಭರ್ತಿ ಇದೆ, ಯಾವ ಕಾರಣಕ್ಕೂ ನಮ್ಮ ಖಜಾನೆಯಲ್ಲಿ ಹಣ ಕಡಿಮೆ ಇಲ್ಲ ಎಂದು. ಉಪ ಮುಖ್ಯಮಂತ್ರಿಗಳು ತಾಲ್ಲೂಕು ಮಟ್ಟದ ಕೆಡಿಪಿ ಸಭೆ ನಡೆಸುವುದಕ್ಕೆ ಬಂದಂಥ ಸಂದರ್ಭದಲ್ಲಿ ಹೀಗೆ

ಹೇಳಿದರು. ಹೀಗಿರುವಾಗ ಹಣ ಬಿಡುಗಡೆ ಮಾಡುವುದಕ್ಕೆ ವಿಳಂಬ ಏಕೆ? ಆ ಸಭೆಗೆ ನಾನು ಬಂದಿರಲಿಲ್ಲವಾದರೂ ನೀವು ಕೊಟ್ಟಿರುವಂಥ ಪುಸ್ತಕವನ್ನು ಪರಿಶೀಲನೆಗಾಗಿ ತಂದಿದ್ದೇನೆ. ಇದು ತಾವೇ ಹೇಳಿರುವಂಥ ಮಾತು. ನಾವೇನು ನಿಮಗೆ ಒತ್ತಾಯ ಮಾಡಲಿಲ್ಲ. ತಾವು ಮಾಡುವಂಥ ಕಾರ್ಯಕ್ರಮಗಳ ಬಗ್ಗೆ ಅಥವಾ ತಾವು ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದಂಥ ಕಾರ್ಯಕ್ರಮಗಳ ಬಗ್ಗೆ ನಮ್ಮನ್ನು ಕರೆದು ತಾವು ಚರ್ಚೆ ಮಾಡಿಲ್ಲ. ತಾವು ಏನು ಹೇಳಿದ್ದಿರಿ, ಈ ರಾಜ್ಯದಲ್ಲಿರುವಂಥ ಸಣ್ಣ ಕೆರೆಗಳ ಹೂಳು ತೆಗೆಯುವಂಥ ಕಾರ್ಯಕ್ರಮವನ್ನು ನನ್ನ ಸರ್ಕಾರ ಹಮ್ಮಿಕೊಂಡಿದೆ ಎಂದು ಹಿಂದಿನ ವರ್ಷದ ಮುಂಗಡ ಪತ್ರದಲ್ಲಿ ತಾವು ಹೇಳಿದ್ದೀರಿ. ಸಣ್ಣ ನೀರಾವರಿ ಇಲಾಖಾ ಮಂತ್ರಿಗಳು ಇವತ್ತು ಇಲ್ಲಿ ಇದ್ದಾರೆ. ನಾನು ಅವರನ್ನು ಕೇಳುತ್ತೇನೆ, ತಾವು ಎಷ್ಟು ಕೆರೆಗಳ ಹೂಳು ತೆಗೆಸಿದ್ದೀರಿ? ಇವರ ಸರ್ಕಾರ ಬಂದ ಮೇಲೆ ಅನಾವೃಷ್ಟಿ ಯಾದುದರಿಂದ ಹೂಳು ತೆಗೆಯಲು ಸಾಧ್ಯವಾಗಿಲ್ಲ. ಅತಿವೃಷ್ಟಿಯಾಗಿದ್ದರೆ ಹೂಳು ತೆಗೆಯುತ್ತಿದ್ದರು ಎಂಬುದು ನನ್ನ ಭಾವನೆ.

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಈ ವರ್ಷ ನಾವು ಹೂಳು ತೆಗೆಯುವುದಕ್ಕೆ 10 ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದ್ದೇವೆ. ಈ ಹತ್ತು ಕೋಟಿ ರೂಪಾಯಿಗಳಲ್ಲಿ ಸನ್ಮಾನ್ಯ ಸದಸ್ಯರು ಯಾವ ಕೆರೆಗೆ ಹೇಳುತ್ತಾರೋ, ರೈತರು ಎಲ್ಲೆಲ್ಲಿ ಪಾಲ್ಗೊಳ್ಳುತ್ತಾರೋ ಆ ಎಲ್ಲಾ ಕೆರೆಗಳಿಗೂ ಹೂಳು ತೆಗೆಯುವ ಯಂತ್ರವನ್ನು ಕೊಡಿಸುವುದಕ್ಕೆ ಇವತ್ತು ಸರ್ಕಾರ ವ್ಯವಸ್ಥೆ ಮಾಡಿದೆ. ಇದನ್ನು ನಾವು ಕಾರ್ಯರೂಪಕ್ಕೆ ತಂದೇ ತರುತ್ತೇವೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಂತ್ರಿಗಳು ಹೇಳುವುದನ್ನು ಕೇಳಲು ನನಗೆ ಸಂತೋಷವಾಗುತ್ತದೆ. ಆದರೆ ಇವರಿಗೆ ಮತ ಚಲಾವಣೆ ಮಾಡುವಂಥ ರೈತರಿಗೆ ಇದನ್ನು ಹೇಳಬೇಕು. ಇದರಿಂದ ನನಗೇನೋ ಸಮಾಧಾನವಾಗುತ್ತದೆ. ಅವರು ಹೇಳಿರುವುದನ್ನು ಕೇಳಿದಂತೆ, ಈ ಸದನದ ಎಲ್ಲಾ ರಾಜಕೀಯ ಪಕ್ಷಗಳ ಶಾಸಕರುಗಳು ನಮ್ಮ ನಮ್ಮ ಕ್ಷೇತ್ರಕ್ಕೆ ಒಳಪಟ್ಟಂತೆ ಯಾವ ಯಾವ ಕೆರೆಗಳಲ್ಲಿ ಹೂಳು ತೆಗೆಯಬೇಕು. ಎನ್ನುವ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆಯೋ, ಇಲ್ಲವೋ ಎನ್ನುವುದನ್ನು ದಯಮಾಡಿ ತಾವು ನೋಡಿ. ಹೇಳುವಂಥಾದ್ದು ಬಹಳ ಸುಲಭ. ನಾನು ಒಂದು ಉದಾಹರಣೆ ಹೇಳುತ್ತೇನೆ, ನಾನು ಈ ರಾಜ್ಯದ ಮಂತ್ರಿಯಾಗಿ ಒಂದೆರಡು ವರ್ಷಗಳ ಕಾಲ ಸಾರ್ವಜನಿಕ ಸೇವೆ ಮಾಡುವಂಥ ಅವಕಾಶವನ್ನು ನನಗೆ ಕಲ್ಪಿಸಿ ಕೊಟ್ಟಿದ್ದರು. ನಾನು ಮಾನ್ಯ ಸಣ್ಣ ನೀರಾವರಿ ಮಂತ್ರಿಗಳನ್ನು ಕೇಳುವುದೇನೆಂದರೆ, ಮಳಲೂರು ಏತನೀರಾವರಿ ಯೋಜನೆಯ ಪ್ರಸ್ತಾವನೆಯನ್ನು ನಾನು ಸಿದ್ಧಪಡಿಸಿದಂಥಾದ್ದು. ಅದಕ್ಕೆ ಅನುಮತಿ ಸಿಕ್ಕುವುದಕ್ಕೆ 3 ವರ್ಷವಾಯಿತು. ಈಗ ಆ ಕೆಲಸವನ್ನು ಕೈಗೆತ್ತಿ ಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ನಮಗೆ ಉತ್ತರದಲ್ಲಿ ಹೇಳಿದ್ದಾರೆ ಮತ್ತು ಪತ್ರದಲ್ಲಿ ಕೊಟ್ಟಿದ್ದಾರೆ. ನಾನು ಹೇಳುವುದೇನೆಂದರೆ ಇದಕ್ಕೆ 1996-97 ರಲ್ಲಿ ಶೆಡ್ಯೂಲ್ ರೇಟಿನ ಪ್ರಕಾರ ಒಂದು ಕೋಟಿ 63 ಲಕ್ಷ ರೂಪಾಯಿ ಅಂದಾಜು ವೆಚ್ಚವನ್ನು ತಯಾರು ಪಡಿಸಿದ್ದೀರಿ. ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು. ಈ ಒಂದು ಕೋಟಿ 63 ಲಕ್ಷ ರೂಪಾಯಿ 1996-97 ರ ಶೆಡ್ಯೂಲ್ ರೇಟ್. ಆದರೆ 1997-98ರ ಶೆಡ್ಯೂಲ್ ರೇಟ್ ಜಾಸ್ತಿಯಾದರೆ, ಇದಕ್ಕೆ ಕನಿಷ್ಟ ಪಕ್ಷ 2 ಕೋಟಿ ರೂಪಾಯಿ ಬೇಕು. ನಾನು ತಮ್ಮ ಮುಖಾಂತರ ಸಣ್ಣ ನೀರಾವರಿ ಮಂತ್ರಿಗಳನ್ನು ಕೇಳುತ್ತೇನೆ, ಇದು ಇಷ್ಟು ವಿಳಂಬವಾಗಿದ್ದು ಏಕೆ? ನಾನು ಆ ಕ್ಷೇತ್ರದ ಒಬ್ಬ ಶಾಸಕ. ನಿಮ್ಮ ಕಡೆಯ ಮತದಾರರೂ ಅಲ್ಲಿ ಇದ್ದಾರೆ, ನನ್ನ ಕಡೆಯ ಮತದಾರರೂ ಸಹ ಅಲ್ಲಿ ಇದ್ದಾರೆ. ಅವರ ಅಭಿಪ್ರಾಯವೇನು ಎನ್ನುವುದನ್ನೇನಾದರೂ ಕ್ರೋಢೀಕರಿಸುವಂಥ ಪ್ರಯತ್ನವನ್ನು ಮಾಡಿದ್ದೀರಾ?

ಶ್ರೀ ತಿಪ್ಪೇಸ್ವಾಮಿ : ನಮ್ಮ ಸರ್ಕಾರ ಬಂದ ಮೂರು ವರ್ಷಗಳಲ್ಲಿ ಇದಕ್ಕೆ ಅನುಮತಿಯನ್ನು ಪಡೆದು ಈ ವರ್ಷ ಹಣ ಇಟ್ಟಿದ್ದೇವೆ, ಆ ಕೆಲಸ ಮಾಡುತ್ತೇವೆ. ತಾವೂ ಮಂತ್ರಿಗಳಾಗಿದ್ದೀರಿ. ತಮ್ಮ ಕಾಲದಲ್ಲೇ ಏಕೆ ಇದನ್ನು ಮಾಡಿಕೊಳ್ಳಲಿಲ್ಲ?

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಒಂದು ನಿಮಿಷ ಬಡಾ ಸಾಹೇಬರೇ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನನ್ನನ್ನು ಬಡೇ ಸಾಬ್ ಎಂದು ಹೇಳುತ್ತಿದ್ದಾರೆ. ನಾನು ಬಡೇ ಸಾಬ್ ಅಲ್ಲ. ನಾನು ಸಗೀರ್ ಸಾಬ್.

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಸಗೀರ್ ಸಾಬ್‌ರವರೆ, ದಯವಿಟ್ಟು ಒಂದು ನಿಮಿಷ. ಇವರು ಕೈಗಾರಿಕಾ ಮಂತ್ರಿಯಾಗಿದ್ದರು. ಮಲ್ಲಿಕಾರ್ಜುನ ಪ್ರಸನ್ನ ಎನ್ನುವವರು ಸಣ್ಣ ನೀರಾವರಿ ಮಂತ್ರಿಯಾಗಿದ್ದರು. ಆ ಕಾಲದಲ್ಲಿ ಇವರು ಏತ ನೀರಾವರಿ ಯೋಜನೆಗಳನ್ನು ಮಾಡುತ್ತೇವೆ ಎಂದು ಹೊರಟರು. ನನ್ನ ಕ್ಷೇತ್ರದಲ್ಲಿ ಕಬಲಿ, ಗುಂಡಸಾಗರ, ಮಾಚೇನಹಳ್ಳಿ ಟಿಬಿ ಕಾವಲು ಮತ್ತು ಅರಸೀಕೆರೆ ಈ ಐದು ಕೆರೆಗಳಿಗೆ ಸುಳ್ಳು ಸುಳ್ಳು ಹೇಳಿ ಗುದ್ದಲಿ ಪೂಜೆ ಮಾಡಿಸಿದರು. ಸುಳ್ಳು ಹೇಳಿ ಹಾರ ಹಾಕಿಸಿಕೊಂಡು ಬಂದರು. ಅಲ್ಲಿ ಇವತ್ತಿನವರೆಗೆ ಒಂದು ಕಾಸಿನ ಕೆಲಸ ಮಾಡಿಲ್ಲ. ಸುಳ್ಳು ಹೇಳುವುದೇ ಇವರ ಪ್ರಭುತ್ವ ಆದರೆ ಮಳಲೂರು ಏತ ನೀರಾವರಿಗೆ ನಮ್ಮ ಕಾಲದಲ್ಲಿ ದುಡ್ಡು ಕೊಟ್ಟಿದ್ದೇವೆ. ಏನ್ರೀ ಸಗೀರ್ ಸಾಹೇಬರೇ, ಕ್ಯಾ ಸಾಬ್, ಕ್ಯಾ ಬೋಲ್ತಾ ಹೈ ಕ್ಯಾ ಬಾತ್ ಕರ್‌ತಾ ಹೈ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೇ, ಇದು ನನ್ನ ಸರ್ಕಾರ, ನಿನ್ನ ಸರ್ಕಾರ ಎನ್ನುವ ಪ್ರಶ್ನೆ ಅಲ್ಲ. ನಿನ್ನೆ ಇದ್ದಂಥ ಸರ್ಕಾರ ಇವತ್ತು ಇಲ್ಲ. ಇವತ್ತು ಇದ್ದಂಥ ಸರ್ಕಾರ ನಾಳೆ ಇರುವುದಿಲ್ಲ. ಆ ರೀತಿಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಇವತ್ತು ರಾಜಕಾರಣ ನಡೆಯುತ್ತಿದೆ. ಮಾನ್ಯ ಲಕ್ಷ್ಮಯ್ಯನವರು ನನ್ನ ಬಗ್ಗೆ ಹೇಳಲಿ. ಅವರ ಬಗ್ಗೆ ನನಗೇನೂ ಕೋಪವಿಲ್ಲ. ಅವರು ನನ್ನ ಹಿರಿಯರು ಮತ್ತು ಅವರು ಮೇಷ್ಟ್ರು ಸಹಾ ಹೌದು. ಅವರಿಗೆ ವಿರೋಧವಾಗಿ ಹೇಳುವ ಹಾಗಿಲ್ಲ. ಶಿಷ್ಯರು ವಿರೋಧವಾಗಿ ಹೇಳಿದರೆ, ಶಾಪ ಹಾಕಿ ಬಿಟ್ಟಾರು ಎನ್ನುವ ಹೆದರಿಕೆ ಇದೆ. ಅದರ ಜೊತೆಗೆ ಅವರ ಆರೋಗ್ಯ ಬೇರೆ ಸರಿ ಇಲ್ಲ. ಆದುದರಿಂದ ಬಹಳ ಹುಷಾರಾಗಿ ನಾನು ಮಾತನಾಡಬೇಕಾಗುತ್ತದೆ. ಅವರು ಆ ಚುನಾವಣೆಯನ್ನು ಫೇಸ್ ಮಾಡುವುದಕ್ಕೆ ಇಲ್ಲದೆ ಹೋದರೇನೂ ಅವರ ಮಗ ಫೇಸ್ ಮಾಡುತ್ತಾರೆಂದು ಅವರೇ ಹೇಳುವಾಗ ಅವರ ಆರೋಗ್ಯ ಸರಿಯಿಲ್ಲವೆಂದು ಸಾಬೀತು ಆಗಿಲ್ವೇ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು, ನನ್ನ ಅನೇಕ ಜನ ಮಿತ್ರರು ಹೇಳುತ್ತಾರೆ. ನೀವು ಮಂತ್ರಿಯಾದಾಗ ಏಕೆ ಮಾಡಬಾರದಾಗಿತ್ತೆಂದು ಮಾನ್ಯ ಸದಸ್ಯರುಗಳು ಕೇಳಿದರು.

ಉಪಾಧ್ಯಕ್ಷರು : ಸಮಯ ಮುಗಿಯುತ್ತಿದೆ, ನಿಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಬೆಳಿಗ್ಗೆಯಿಂದ ಕುಳಿತುಕೊಂಡು ಎಷ್ಟು ಬೋರಾಗಿತ್ತು, ಎಲ್ಲರನ್ನೂ ತಾವು ಕೇಳಿ ಎಲ್ಲರಿಗೂ ಈಗ ಖುಷಿಯಾಗುತ್ತಿದೆ. ಬೇಗ ಮುಗಿಸಿ ಎಂದು ನೀವು ಅದರ ಮಧ್ಯೆ ಬೆಲ್‌ನ್ನ ಹೊಡೆಯುತ್ತಿದ್ದಿರಿ?

ಉಪಾಧ್ಯಕ್ಷರು : ನೀವು ತೆಗೆದುಕೊಂಡಿರುವ ವೇಳೆ ಬಹಳ ಜಾಸ್ತಿಯಾಗಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ತಮ್ಮ ಮುಖಾಂತರವಾಗಿ ಮುಖ್ಯಮಂತ್ರಿಗಳಲ್ಲಿ, ಉಪಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಸದನದಲ್ಲಿ ಕುಳಿತುಕೊಂಡರೆ ಸದಸ್ಯರುಗಳೆಲ್ಲಾ ಕುಳಿತುಕೊಂಡಿರುತ್ತಾರೆ. ನನಗೆ, ತಾವೇ ಆತುರದಲ್ಲಿ ಇದ್ದ ಹಾಗೆ ಕಾಣಿಸುತ್ತಿದೆ. ಇವತ್ತು ಮಧ್ಯಾಹ್ನದ ಊಟಕ್ಕೆ ಸದನವನ್ನು ವಿರಾಮಗೊಳಿಸಲಾಗಿತ್ತು.

ಉಪಾಧ್ಯಕ್ಷರು : ಈ ದಿವಸವೇ ನೀವು ಮಾತನಾಡಿದ ಮೇಲೆ ಮತ್ತೊಬ್ಬರು ಮಾತನಾಡಬೇಕಾಗಿದೆ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನಾನು ಹೇಳುವುದೇನೆಂದರೆ ಪ್ರಮುಖವಾದಂತಹ ಎರಡು ವಿಚಾರಗಳು ಇದೆ. ಏಕೆಂದರೆ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ನಾನು ಪ್ರಸ್ತಾಪ ಮಾಡುತ್ತೇನೆ ಸಣ್ಣ ನೀರಾವರಿ ಮಂತ್ರಿಗಳು ಹೇಳಿರುವಂತಹ ವಿಚಾರಕ್ಕೆ ಅವರು ಹೇಳಿದರು. ನಾವು ಅಧಿಕಾರದಲ್ಲಿದ್ದಾಗ ಏಕೆ ಮಾಡಲಿಲ್ಲವೆಂದು ಕೇಳುತ್ತಾರೆ. ನಾನು ಒಂದು ವಿಚಾರವನ್ನು ಹೇಳುವುದೇನೆಂದರೆ ಅನೇಕ ಯೋಜನೆಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏಕೆ ಇವತ್ತಿನವರೆಗೆ ಆ ಯೋಜನೆಗಳು ಯಶಸ್ವಿಯಾಗಿ ಸಂಪೂರ್ಣವಾಗಿ ಪೂರೈಸುವುದಕ್ಕೆ ಸಾಧ್ಯವಾಗಲಿಲ್ಲ? ಕೆಲವು ಕಾನೂನು ಕಟ್ಟಳೆಗಳು ಇರುತ್ತವೆ. ನೀಲಿ ನಕಾಶೆಗಳು ತಯಾರು ಮಾಡಬೇಕಾಗಿರುತ್ತದೆ. ಆದರೆ ಆ ಯೋಜನೆಯನ್ನು ಸಿದ್ದಪಡಿಸುವುದರ ಬಗ್ಗೆ ಸಂಪೂರ್ಣವಾದ ಮಾಹಿತಿಯೊಂದಿಗೆ ನಾನು ಸರ್ಕಾರ ಕಾರ್ಯದರ್ಶಿಯ ಮಟ್ಟಕ್ಕೆ ತರಿಸುವಂತಹ ವ್ಯವಸ್ಥೆಯನ್ನು ನಾನು ಮಂತ್ರಿಯಾಗಿದ್ದಾಗಲೇ ಮಾಡಿದ್ದೇನೆ. ನನ್ನ ಕಾಲದಲ್ಲಿ ಅದಕ್ಕೆ ವೆಚ್ಚವಾಗುವಂತಹ ಹಣ ಎಷ್ಟು ಎಂದು ಹೇಳಿದರೆ ಕೇವಲ 63 ಲಕ್ಷ ರೂಪಾಯಿಗಳು ಮಾತ್ರ ಬೇಕಾಗುತ್ತಿತ್ತು. ಇವತ್ತು ಸಣ್ಣ ನೀರಾವರಿ ಮಂತ್ರಿಗಳು ಹತ್ತಿರ ಅದರ ಬಗ್ಗೆ ಕಡತವಿದೆ. ನಾನು ಕಡತವನ್ನು ತಂದಿದ್ದೇನೆ, ತೋರಿಸಿ ಅಂದರೆ ತೋರಿಸುತ್ತೇನೆ. ನನ್ನ ಕ್ಷೇತ್ರಕ್ಕೆ ಪ್ರಮುಖವಾದಂಥ ವಿಚಾರ ಸಂಬಂಧಪಟ್ಟಿರುವಂಥದ್ದು ಏಕೆ ನಮ್ಮ ಉಪಮುಖ್ಯಮಂತ್ರಿಗಳು ಈ ಮುಂಗಡ ಪತ್ರದಲ್ಲಿ ಇದರ ಬಗ್ಗೆ ವಿಶ್ಲೇಷಣೆ ಮಾಡಿಲ್ಲ ಎಂಬುದರ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ? ಅದೇನೆಂದರೆ ಭದ್ರಾ ಅಭಯಾರಣ್ಯ ಒಂದು ಯೋಜನೆ ಇದೆ, ಇದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಒಪ್ಪಿಗೆಯಾಗಿ ಸರ್ಕಾರದ ಅನುಮತಿಯ ಮೇರೆಗೆ ನೋಟಿಫಿಕೇಷನ್ ಆಗಿದೆ. ನಾನು ಬಹಳ ವಿಚಾರವನ್ನು ಮಾತನಾಡಬೇಕೆಂದಿದ್ದೇನೆ. ನನಗೆ ಸಮಯವನ್ನು ತಾವು ಕೊಡ ಇರುವುದರಿಂದ ನಾನು ಸ್ವಲ್ಪ ವಿಚಾರವನ್ನು ತಮ್ಮ ಮೂಲಕ ಸರ್ಕಾರಕ್ಕೆ ತರುತ್ತೇನೆ. ಇದು ಪರಿಹಾರವಾಗಬೇಕು. ಭದ್ರಾ ಅಭಯಾರಣ್ಯ ಎಂದು ಹೇಳಿ ಒಂದು ಅರಣ್ಯ ಪ್ರದೇಶವನ್ನು ಸರ್ಕಾರದವರು ಇದನ್ನು ನಡೆಸಿಕೊಂಡು ಹೋಗಬೇಕು. ಇದರಲ್ಲಿ ವನ್ಯ ಜೀವಿಗಳನ್ನು ಸಾಕಬೇಕೆನ್ನುವ ದೃಷ್ಟಿಯಿಂದ ಇವತ್ತು ಒಂದು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ. ಈ ಕಾರ್ಯಕ್ರಮದ ಅಡಿಯಲ್ಲಿ ನನ್ನ ಗಮಕ್ಕೆ ಬಂದಿರುವಂತೆ, ಸರ್ಕಾರದ ಗಮನದಲ್ಲಿರುವಂತೆ 736 ಕುಟುಂಬಗಳು ಈವತ್ತು ಈ ಭದ್ರಾ ಅಭಯಾರಣ್ಯದ ವ್ಯಾಪ್ತಿಯಲ್ಲಿ ಜೀವನವನ್ನು ನಡೆಸುತ್ತಿದ್ದಾರೆ. ಒಂದು ರೂಪಾಯಿಯ ಸರ್ಕಾರದ ಸವಲತ್ತುಗಳು ಅವರಿಗೆ ಸಿಕ್ಕಿಲ್ಲ. ಇವತ್ತಿನವರೆಗೂ ಸಹ ಅವರಿಗೆ ನಾಗರೀಕ ಸವಲತ್ತುಗಳೂ ಸಹ ಇಲ್ಲ. ಏಕೆಂದರೆ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬಗ್ಗೆನೂ ಹೇಳಬೇಕಾಗುತ್ತದೆ. ಆಸಕ್ತಿಯಿಂದ ಎರಡು ಮೂರು ಸಭೆಯನ್ನು ನಡೆಸಿದರೂ ಸಹ ಸರ್ಕಾರಕ್ಕೆ ನೇರವಾಗಿ ಸಚಿವಸಂಪುಟದ ಒಬ್ಬ ಸಚಿವರಾಗಿ ಆ ಜನರ ಮೇಲೆ ಅಭಿಮಾನ, ವಿಶ್ವಾಸವನ್ನು ಇಟ್ಟು ಸಭೆಯನ್ನು ನಡೆಸಿ ಇವತ್ತು ಅದರ ಬಗ್ಗೆ ಯಾವುದೇ ಒಂದು ತೀರ್ಮಾನವಾಗಿಲ್ಲವೆಂದರೆ ನಾನು ಇದರ ಬಗ್ಗೆ ಹೇಳಬೇಕಾಗುತ್ತದೆ. ಇವತ್ತು 736 ಕುಟುಂಬಗಳು ಆ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. 13 ಹಳ್ಳಿಗಳನ್ನು ಆ ಭಾಗದಿಂದ ಸ್ಥಳಾಂತರಿಸಬೇಕಾಗಿದೆ. ಈ ಮಾತನ್ನು

ಏತಕ್ಕೆ ಹೇಳುತ್ತಿದ್ದೇನೆಂದರೆ, ವನ್ಯ ಜೀವಿಗಳು ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿ ವಾಸಿಸುತ್ತಿದ್ದು ಅನೇಕ ಘಟನೆಗಳು ಇವತ್ತಿನವರೆಗೆ ಆಗಿದೆ. ತಮ್ಮ ನೆನಪಿಗಾಗಿ ನಾನು ಹೇಳುವುದೇನೆಂದರೆ ಆನೆಯ ತುಳಿತಕ್ಕೆ ಒಳಗಾಗಿ ಅರಣ್ಯ ಇಲಾಖೆಯ ಅಧಿಕಾರಿಯೇ ಸತ್ತಿರುವಂಥ ಘಟನೆಯ ವರದಿಯಾಗಿದ್ದು ಇದು ಸರ್ಕಾರದ ಮುಂದಿದೆ. ಅಲ್ಲಿ ವಾಸಿಸುತ್ತಿರುವಂತಹ ಚಿತರೆ, ಹುಲಿಗಳು ಅವುಗಳಿಗೆ ಸಿಗಬೇಕಾದಂತಹ ಆಹಾರವು ಸಿಗದೆ ಕಡೂರು ಲಕ್ಷ್ಮಯ್ಯನವರ ಕ್ಷೇತ್ರಕ್ಕೆ ಬಂದು ಜನರನ್ನು ಹಿಡಿಯುವಂಥದ್ದು ಆಗಿ 13 ಜನ ಸಾವಿಗೀಡಾಗಿದ್ದಾರೆ. ಇದೂ ಸಹ ಸರ್ಕಾರದ ಗಮನಕ್ಕೆ ಬಂದಿದ್ದು, ಇದು ಸರ್ಕಾರದ ಕಡತದಲ್ಲಿರುವಂತಹ ವಿಚಾರ. ತರಿಕೆರೆಯು ಸಹ ಅಭಯಾರಣ್ಯ ಪ್ರದೇಶಕ್ಕೆ ಸೇರಿರುತ್ತದೆ. ಆದುದರಿಂದ ನನ್ನ ಕ್ಷೇತ್ರದ ಜನ ನನಗೆ ದೂರವಾಣಿಯ ಮುಖಾಂತರ ಮಾತನಾಡಿ ತಾವು ಸಧ್ಯದಲ್ಲೇ ಇದರ ಬಗ್ಗೆ ತೀರ್ಮಾನವನ್ನು ಮಾಡದೇ ಹೋದಲ್ಲಿ ನಾವು ಆ ಕಾಡಿಗೆ ಬೆಂಕಿಯನ್ನು ಇಡುತ್ತೇವೆಂದು ಹೇಳಿದ್ದಾರೆ. ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ಹೇಳುತ್ತಿದ್ದೇನೆ. ಇವತ್ತು ಈ ಬಜೆಟ್ ಪುಸ್ತಕದಲ್ಲಿ 297 ಕೋಟಿ ರೂಪಾಯಿಗಳನ್ನು ರಸ್ತೆ ಮತ್ತು ಸೇತುವೆಗಳಿಗೆ ಇಡುತ್ತೇನೆಂದು ಮಾನ್ಯ ಉಪಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಇದು ಸಂತೋಷ, ಆ ಭಾಗದ ಜನರಿಗೆ ಹೋಗುವುದಕ್ಕೆ ರಸ್ತೆಗಳಿಲ್ಲ, ಸೇತುವೆಗಳಿಲ್ಲ, ವಿದ್ಯುತ್ ಸೌಕರ್ಯವಿಲ್ಲ, ಆರೋಗ್ಯ ಇಲಾಖೆಯಿಂದ ತಪಾಸಣೆ ಮಾಡುವ ವಿಚಾರದ ಬಗ್ಗೆ ಸರ್ಕಾರದಿಂದ ಯಾವುದೇ ಕಾರ್ಯಕ್ರಮಗಳು ಇಲ್ಲ. ಪಡಿತರ ವ್ಯವಸ್ಥೆಯಲ್ಲಿ ಅವರಿಗೆ ಸಿಗಬೇಕಾದ ಆಹಾರ ಪದಾರ್ಥಗಳೂ ಸಹ ಅವರಿಗೆ ಸಿಗುತ್ತಿಲ್ಲ. ಇದು ಗಂಭೀರವಾದಂತಹ ವಿಚಾರ, ದಯವಿಟ್ಟು ಬೆಲೆ ಮಾಡುವುದಕ್ಕೆ ಹೋಗಬೇಡಿ. ಆನೆ ಬೆಂಗಳೂರಿಗೆ ಬರುತ್ತದೆಂದು ನಾನು ಹೇಳಿದ್ದೆ. ಅದಕ್ಕೆ ಇಡೀ ಸದನ ನಗಾಡಿತ್ತು. ಬೆಂಗಳೂರಿಗೆ ಆನೆ ಬರಲಿಲ್ಲವೇ? ಎಲ್ಲಿಂದ ಬಂದಿತ್ತು? ಬಂದಿತ್ತು.

ಶ್ರೀ ವಾಟಾಳ್ ನಾಗರಾಜ್ : ಕಿರುಬಾನೂ ಸಹ ಬಂದಿತ್ತು.

ಶ್ರೀ ಸಿ. ಆರ್. ಸಗೀರ್ ಅಹಮದ್ : ನೋಡಿ ಮಾನ್ಯ ವಾಟಾಳ್ ನಾಗರಾಜ್ ಹೇಳಿದಂತೆ ಕಿರುಬಾ ಬಂದಿತ್ತಂತೆ ತಾವು ಅದನ್ನು ನೋಡಿದ್ದಿರಾ?

ಉಪಾಧ್ಯಕ್ಷರು : 35 ನಿಮಿಷವಾಯಿತು ತಾವು.....

ಶ್ರೀ ಸಿ. ಆರ್. ಸಗೀರ್ ಅಹಮದ್ : ಏಕೆಂದರೆ ಇದು ಬಹಳ ಗಂಭೀರವಾದಂತಹ ಸಮಸ್ಯೆ.

ಉಪಾಧ್ಯಕ್ಷರು : ಇನ್ನು ಮಾತನಾಡುವಂತಹ ಸದಸ್ಯರುಗಳಿದ್ದಾರೆ ಇವತ್ತು ಎಲ್ಲಾ ಸದಸ್ಯರು ಮಾತನಾಡಿ ಮುಗಿಸಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಇನ್ನು ಒಂದು ಪ್ರಮುಖವಾದಂತಹ ವಿಚಾರ ಎಂದರೆ ಇದರ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಈ ಹಳ್ಳಿಗಳನ್ನು ಸ್ಥಳಾಂತರಿಸುವ ಬಗ್ಗೆ ಅಲ್ಲಿ ವಾಸಿಸುತ್ತಿರುವಂತಹ ರೈತರಿಗೆ ಪರಿಹಾರವನ್ನು ಕೊಡುವುದಕ್ಕಾಗಿ ಹನ್ನೆರಡೂವರೆ ಕೋಟಿ ರೂ.ಗಳ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿಕೊಟ್ಟಿದೆ. ದಯವಿಟ್ಟು ಇದನ್ನು ಉಪಮುಖ್ಯಮಂತ್ರಿಗಳು ಕೇಳಬೇಕು. ತಮ್ಮ ರಾಜ್ಯದ ಏನು ಪಾಲು ಹಣ ಈ ಯೋಜನೆ ಸ್ಥಳಾಂತರಿಸುವ ಬಗ್ಗೆ ನಾವು ಹಮ್ಮಿಕೊಂಡಿದ್ದೆವು, ಇದಕ್ಕೆ ನೀಡಬೇಕಾದಂತಹ ಹಣ ತಾವು ಈ ಮುಂಗಡ ಪತ್ರದಲ್ಲಿ ಎಲ್ಲೂ ನಮೂದಿಸಿಲ್ಲ. ಇದಕ್ಕೆ ಕಾರಣವೇನೆಂಬುದು ನನಗೆ ಗೊತ್ತಾಗಲಿಲ್ಲ. ಆದುದರಿಂದ ತಾವು

ದಯಮಾಡಿ ಉತ್ತರ ನೀಡುವಂತಹ ಸಂದರ್ಭದಲ್ಲಿ ದಯಮಾಡಿ ಉತ್ತರ ನೀಡಬೇಕು. ಏಕೆಂದರೆ ಆ ಗ್ರಾಮಸ್ಥರು ಬಹಳ ರೋಷದಿಂದ ಇವತ್ತು ಆ ಕಾಡಿಗೆ ಬೆಂಕಿ ಹಾಕುತ್ತಾರೆ ಎನ್ನುವುದರ ಬಗ್ಗೆ ನನಗೆ ಮಾಹಿತಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಬೆಂಕಿಯನ್ನು ಹಾಕಬಾರದೆಂದು ಹೇಳಬೇಕಾಗಿತ್ತು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಆ ರೀತಿಯಾಗಿ ಬೆಂಕಿಯನ್ನು ಹಾಕಬಾರದೆಂದು ಬೇಡಿಕೊಂಡಿದ್ದೇನೆ. ಆದುದರಿಂದ ತಮ್ಮ ಇಲಾಖಾ ವತಿಯಿಂದ ಉನ್ನತ ಮಟ್ಟದ ಅಧಿಕಾರಿಗಳನ್ನು ಅಲ್ಲಿಗೆ ದಯಮಾಡಿ ಕಳುಹಿಸಿ ಸಂಧಾನದ ಮೂಲಕ ಈ ಕಾರ್ಯಕ್ರಮದ ಯಶಸ್ವಿಗೆ ತಾವು ಪ್ರಯತ್ನ ಮಾಡಬೇಕೆಂದು ಹೇಳಿ ಉಪಾಧ್ಯಕ್ಷರ ಮುಖಾಂತರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಇನ್ನು ಕೊನೆಯ ವಿಚಾರವಾಗಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದೇನೆಂದರೆ ಇದು ನಮ್ಮ ಮತ್ತು ನಿಮ್ಮ ಯಾರ ದುರಾದೃಷ್ಟದಿಂದ ಎಂದು ನನಗಂತೂ ಗೊತ್ತಿಲ್ಲ.

ಮಾನ್ಯ ಸದಸ್ಯರು : ಉಪಾಧ್ಯಕ್ಷರ ದುರಾದೃಷ್ಟದಿಂದಲಾ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಇಲ್ಲಾ, ಉಪಾಧ್ಯಕ್ಷರ ಬಗ್ಗೆ ಅಲ್ಲ, ತಾವು ಅದೃಷ್ಟವಂತರು, ಏಕೆಂದರೆ ತಾವು ಎಲ್ಲರಿಗಿಂತ ಮೇಲೆ ಕುಳಿತಿದ್ದಿರಿ. ಆದುದರಿಂದ ಅದೃಷ್ಟವಂತರು. ನಮ್ಮ ದುರಾದೃಷ್ಟ ಏನೆಂದು ಹೇಳಿದರೆ ಈ ರಾಜ್ಯದಲ್ಲಿ ಅನೇಕ ಬಡಜನಗಳ ಬಗ್ಗೆ ಈ ಹಿಂದ ಕಾಗೋಡು ತಿಮ್ಮಪ್ಪಾಜಿಯವರೂ ಕೂಡ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದರು. ಬಡಜನಗಳ ಬಗ್ಗೆ ತಾವು ಒಂದು ವರ್ಷದಲ್ಲಿ ಏನು ಮಾಡಿದ್ದೀರಿ? ತಾವು ಏನೂ ಮಾಡಿಲ್ಲ. ಬಹಿರಂಗವಾಗಿ ನಾವು ಇದರ ಬಗ್ಗೆ ಹೇಳಬೇಕಾಗುತ್ತದೆ. ಅಕ್ರಮವಾಗಿ ಮಾಡಿರುವಂತಹ ಜಮೀನುಗಳನ್ನು ಸಕ್ರಮಗೊಳಿಸುವ ಬಗ್ಗೆ ಒಂದು ದಿನಾಂಕವನ್ನು ನಿಗಧಿಗೊಳಿಸಿ ಆ ದಿನಾಂಕದಂದು ಅರ್ಜಿ ಕೊಡುವ ಅವಕಾಶವಿತ್ತು. ನಾವು ಅರ್ಧ ಅರ್ಧ ಗಂಟೆಯ ತನಕ ಕುಳಿತು ಈ ಸರ್ಕಾರದಲ್ಲಿ ಬೇಡಿಕೊಂಡೆವು. ವಿಸ್ತಾರವಾದಂತಹ ಸಮಯವನ್ನು ನಿಗಧಿಪಡಿಸಿ ಅಕ್ರಮವಾಗಿ ಮಾಡಿರುವಂತಹ ಜಮೀನನ್ನು ಸಕ್ರಮಗೊಳಿಸುವ ಆದೇಶವನ್ನು ಹೊರಡಿಸಿ ಎಂದು ಹೇಳಿದರೆ ಒಂದು ವರ್ಷವಾದರೂ ಸಹ ಇಲ್ಲಿಯವರೆಗೆ ಆದೇಶವನ್ನು ಹೊರಡಿಸಲಿಲ್ಲ. ಇದು ಪ್ರಮುಖವಾದಂತಹ ವಿಚಾರ.

ಉಪಾಧ್ಯಕ್ಷರು : ಬೇಗ ಮುಗಿಸಿ, ನೀವು ಒಂದೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾ ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುತ್ತಿದ್ದೀರಿ. ತಾವು ಸಮಯದ ಪ್ರಜ್ಞೆ ಇಲ್ಲದೆ ಮಾತನಾಡಿದರೆ ಹೇಗೆ? ಮುಗಿಸಿಬಿಡಬೇಕು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಸನ್ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಕೇಳಿ ನಾನು 7 ಗಂಟೆಯ ವೇಳೆಗೆ ಮುಗಿಸುತ್ತೇನೆ. ತಾವು ಯಾವುದೂ ಅಕ್ರಮವಾಗಿ ಮಾಡಲಿಲ್ಲ, ತಮಗೆ ಅದರ ಬಗ್ಗೆ ನೋವಿಲ್ಲ, ಮಾಡಿರುವವರ ಕಥೆ ಏನಾಗಿದೆ ಎಂದು ನಾನು ಹೇಳಬೇಕಾಗಿದೆ.

ಉಪಾಧ್ಯಕ್ಷರು : ನಾನು ಹೇಳುತ್ತೇನೆ, ತಾವು ಕೇಳಿ, ಏಪ್ರಿಲ್ 15ನೇ ತಾರೀಖಿನಿಂದ ಬಜೆಟ್ ಅಧಿವೇಶನ ಪ್ರಾರಂಭ ಆಗುತ್ತದೆ. ಆಗ ಸಾಕಷ್ಟು ಸಮಯವಿರುತ್ತದೆ. ಆಗ ಮಾತನಾಡಿ. ಈಗ ಭಾಷಣವನ್ನು ಮುಗಿಸಬೇಕು. ನಾನು ನಿಮಗೆ ಮೊದಲೇ ಹೇಳಿದ್ದೆ 15 ನಿಮಿಷ ಎಂದು, ನೀವು ಮಾತನಾಡಲು ಪ್ರಾರಂಭ ಮಾಡಿ 40 ನಿಮಿಷವಾಯಿತು.

ಶ್ರಿ ಸಿ. ಆರ್. ಸಗೀರ್ ಅಹಮದ್ : ಉಪಾಧ್ಯಕ್ಷರೆ, ಇನ್ನು 10 ನಿಮಿಷ 7 ಗಂಟೆಗೆ ಮುಗಿಸುತ್ತೇನೆ. ನಾನು ಏನು ಹೇಳುತ್ತಿದ್ದೇನೆಂದರೆ ತಮ್ಮ ಸರ್ಕಾರ ತಾವು ನೀಡುವಂತಹ ಭರವಸೆಗಳ ಬಗ್ಗೆ ನಾವು ಇವತ್ತು ಉಪಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ. ಇವತ್ತು ಕಾಫಿ ಬೆಳೆಗಾರರ ಸಮಸ್ಯೆಯನ್ನು ಬಗೆಹರಿಸಬೇಕು.

ಉಪಾಧ್ಯಕ್ಷರು : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಗೀರ್ ಅಹಮದ್ ರವರಿಗೆ ಹೇಳಬೇಕು. ಮತ್ತೊಬ್ಬ ಸದಸ್ಯರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೆ, ನಾನು ಹೇಳುತ್ತಿದ್ದೆ. ತಾವು ಪ್ರಮೀಳಾ ನೇಸರ್ಗಿಯವರಿಗೆ ಒಂದೂವರೆ ಗಂಟೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರಲ್ಲಾ, ಅದಕ್ಕೆ ನಾನೂ ಅಷ್ಟು ಮಾತನಾಡುತ್ತೆನೆಂದರು.

ಶ್ರೀ ಸಿ. ಆರ್. ಸಗೀರ್ ಅಹಮದ್ : ಕಾಫಿ ತೋಟಗಳನ್ನು ಅಕ್ರಮ ಮಾಡಿರುವಂಥದ್ದನ್ನು ಸಕ್ರಮಗೊಳಿಸುತ್ತೇವೆಂದು ಮುಂಗಡ ಪತ್ರದಲ್ಲಿ ಹೇಳಿದ್ದಾರೆ. ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳು ಮತ್ತು ಈ ರಾಷ್ಟ್ರದ ಮಾಜಿ ಪ್ರಧಾನಿಗಳಾದ ಶ್ರಿ ಹೆಚ್. ಡಿ. ದೇವೇಗೌಡರು ಈ ಮುಂಗಡ ಪತ್ರದಲ್ಲಿ ಕಾಫಿ ತೋಟಗಳನ್ನು ಸಕ್ರಮಗೊಳಿಸುವ ಬಗ್ಗೆ ಹೇಳಿಕೆ ಮಾಡಿದ್ದರು. ನಿಮ್ಮ ಯೋಜನೆ ಏನಾಯಿತು? ಎಷ್ಟು ಎಕರೆ ಜಮೀನು ಇದೆ ಎಂದು ನಿಮಗೆ ಹೇಳುವುದಕ್ಕಾಗುವುದಿಲ್ಲ. ತಾವು ಆಡಳಿತ ಸುಧಾರಣೆ ಬಗ್ಗೆ ಮಾತನಾಡುತ್ತೀರಿ, ಒಬ್ಬ ಇಲಾಖೆಯ ಅರಣ್ಯಾಧಿಕಾರಿ ಇವತ್ತು ಹೇಳುತ್ತಾರೆ, ಒಬ್ಬ ರಾಜಕಾರಣಿ ಮೇಲೆ ನಾನು ಹೆಸರು ತೆಗೆದುಕೊಂಡು ಹೇಳುವುದಕ್ಕೆ ಹೋಗುವುದಿಲ್ಲ. ಒಂದೂವರೆ ಸಾವಿರ ಎಕರೆ ಕಾಫಿ ತೋಟ ಅಕ್ರಮವಾಗಿ ಮಾಡಿದ್ದಾರೆಂದು ಹೇಳುತ್ತಾರೆ. ನಿಮ್ಮ ಆಡಳಿತ ಏನು? ಈ ರಾಜ್ಯದಲ್ಲಿ ಕಾಫಿ ಬೆಳೆಗಾರರು ಎಷ್ಟು ಎಕರೆ ಕಾಫಿ ತೋಟ ಅಕ್ರಮವಾಗಿ ಮಾಡಿದ್ದಾರೆನ್ನುವುದರ ಬಗ್ಗೆ ರೆವಿನ್ಯೂ ಇಲಾಕೆಯಲ್ಲಾಗಲಿ, ಅರಣ್ಯ ಇಲಾಖೆಯಲ್ಲಾಗಲಿ ನಿಮ್ಮ ಹತ್ತಿರ ಮಾಹಿತಿ ಇಲ್ಲ. ಒಬ್ಬ ರಾಜಕಾರಿಣಿಗೆ ಹೇಳುವ ಶಕ್ತಿ ಆ ಅಧಿಕಾರಿಗೆ ನೀವು ಕೊಟ್ಟಿದ್ದೀರಿ. ಇದು ಯಾವ ರೀತಿ ತಾವು ಆಡಳಿತ ನಡೆಸುತ್ತೀರಿ ಎಂಬ ಬಗ್ಗೆ ತಾವು ಹೇಳಬೇಕಾಗುತ್ತದೆ. ಆದುದರಿಂದ ನಾನು ತಮ್ಮ ಮುಖಾಂತರ ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳ ಗಮನ ಏಕೆ ಸೆಳೆಯುತ್ತಿದ್ದೇನೆಂದರೆ. ಬಡವರ ಬಗ್ಗೆ ಕನಿಕರ ಇದ್ದಲ್ಲಿ ತಮಗೆ, ಉಪಾಧ್ಯಕ್ಷರೇ, ತಮಗೂ ಸೇರಿಸಿಕೊಂಡು ಹೇಳುತ್ತಿದ್ದೇನೆ, ತಾವೂ ಚುನಾವಣೆಗೆ ಹೋಗಬೇಕಾಗಿದೆ. ಕನಿಕರ ಇದ್ದಲ್ಲಿ ಹಸಿರು ಕಾರ್ಡ್ ವಿತರಣೆ ಮಾಡಿ, ಬರೀ ಕಾಫಿ ಬೆಳೆ ವಿಚಾರ ನಾನು ಮಾತನಾಡುತ್ತಿಲ್ಲ, ನೀವು ಕೇಳುವುದಿಲ್ಲ, ನೀವು ಸಂದರ್ಭ ಬಂದಾಗ ಈ ಕಡೆ ಓಟು ಮಾಡುತ್ತೀರಿ, ತಮಗೆ ಕಷ್ಟ ಬಂದಾಗ ಆ ಕಡೆ ಓಟು ಹಾಕುತ್ತೀರಿ. ಈಗ ಮುಂದೆ ನಡೆಯುವಂತಹ ಏರಿಯಾನ ಪರಿಷತ್ ಚುನಾವಣೆಯಲ್ಲಿ ತಾವು ಯಾರಿಗೆ ಓಟು ಹಾಕುತ್ತೀರಿ ಎಂಬುದನ್ನು ನೋಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಾಜ್ ಮಾಡಿಕೊಂಡು ಎಲ್ಲಾ ಯುನಾನಿ ಮಸ್ ಮಾಡಿಕೊಳ್ಳುತ್ತೀರಿ. ಮತ್ತೆ ವಿರೋಧವಾಗುತ್ತೀರಿ ಎಂದು ಹೇಳುತ್ತೀರಲ್ಲಾ, ನೀವೆಲ್ಲಾ ಸೇರಿ ರಾಜಿ ಮಾಡಿಕೊಂಡು ಒಪ್ಪಂದ ಮಾಡಿಕೊಂಡಿಲ್ಲವಾ?

ಶ್ರೀ ಎಸ್. ಆರ್. ಲಕ್ಷ್ಮಯ್ಯ : ಒಂದು ಕಡೆ ಬಿಜೆಪಿಗೆ ವಿರೋಧ ಮಾಡುತ್ತಾರೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಇವರು ಮಂತ್ರಿಯಾಗಿದ್ದಾಗ ಬಹಳ ಒಳ್ಳೆಯ ಮನುಷ್ಯರಾಗಿದ್ದರು, ಈಗ ಏಕೆ ಹೀಗಾಗಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಆದುದರಿಂದ ಈ ವಿಚಾರಗಳನ್ನು ಸರ್ಕಾರ ದಯವಿಟ್ಟು ಮನಗಂಡು ಬಡವರಿಗೆ ಮಾಡಿರುವ ಅನ್ಯಾಯದ ಬಗ್ಗೆ ಈಗಲೂ ತಾವು ಚಿಂತನೆ ಮಾಡದೇ ಹೋದಲ್ಲಿ...

ಉಪಾಧ್ಯಕ್ಷರು : ಸಗೀರ್ ಅಹಮದ್, ತಾವು ಹೆಚ್ಚಿಗೆ ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ವಂದನೆ ಸಲ್ಲಿಸಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ ಎಂದರೆ ಹೇಗೆ?

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಇಷ್ಟು ಕೆಡುವುದಕ್ಕೆ ಇವತ್ತಿನ ಪರಿಸ್ಥಿತಿ ಕಾರಣ ಅಲ್ಲ, ಮೊದಲಿನಿಂದ ಪಂಡಿತ್ ಜವಾಹರಲಾಲ್ ನೆಹರೂರವರು ಈ ದೇಶಕ್ಕೆ ಅಥವಾ ಲೆಫ್ಟ್ ಐಡಿಯಾಲಜಿನಲ್ಲಿ ಒಂದು ಎಕಾನಮಿ ತಯಾರು ಮಾಡಿಲ್ಲ. ಅಥವಾ ರೈಟಿಸ್ಟ್ ಮಾಡಿಲ್ಲ. ಒಂದು ತರಹ ಮಿಕ್ಸೆಡ್ ಎಕಾನಮಿ ಎಂದು ಮಾಡಿದರು. ಕೋ- ಆಪರೇಟಿವ್ ಮೂವ್‌ಮೆಂಟ್ ನಿಂದ ಈ ದೇಶದ ಪ್ರಗತಿ ಮಾಡಬೇಕೆಂದು ಮಾಡಿದರು, ಎಲ್ಲಾ ವಿಫಲವಾಗಿ ಕೊನೆ ಕೊನೆಗೆ ಪರಿಸ್ಥಿತಿ ಎಲ್ಲಿಗೆ ಬಂದಿತು ಎಂದರೆ, ಇನ್ನೂರು ವರ್ಷಗಳ ಹಿಂದೆ ಈಸ್ಟ್ ಇಂಡಿಯಾ ಕಂಪನಿಯವರು ಬ್ರಿಟೀಷರು ವ್ಯಾಪಾರ ಮಾಡುವುದಕ್ಕೆ ಬಂದು ಕಾನೂನು ಮಾಡಿದರು. ಆ ತರಹ ಇತ್ತೀಚಿನ ವರ್ಷಗಳಲ್ಲಿ ಈ ಮಲ್ಟಿ ನ್ಯಾಷನಲ್ ಕಂಪನಿಗಳು ತಮ್ಮ ಲೋನ್ ಕೊಟ್ಟು ಕಾರ್ಖಾನೆಗಳು ಹಾಕಿ ಮತ್ತೆ ಬೇರೆ ರೀತಿಯಿಂದ ನಮ್ಮ ದೇಶವನ್ನು ಗುಲಾಮ ಮಾಡುವುದಕ್ಕೆ ಹೊರಟ್ಟಿದ್ದಾರೆ. ವಿಶೇಷವಾಗಿ ಇತ್ತೀಚಿನ ವರ್ಷಗಳಲ್ಲಿ ಕೆಲವು ಸಲ ನಮ್ಮ ದೇಶಕ್ಕೆ ಅವಶ್ಯಕವಿರುತ್ತದೆ, ಅನವಶ್ಯಕ ಇರುತ್ತದೆ, ಸಿಗುತ್ತದೆ ಎಂದರೆ, ಏನಾದರೂ ತೆಗೆದುಕೊಳ್ಳುತ್ತೇವೆ. ಯಾವುದು ಬೇಸಿಕ್ ನೆಸಿಸಿಟೀಸ್ ಇವೆ ಅಂಥದ್ದರ ಸಲುವಾಗಿ ನಾವು ಬೇರೆಯವರಿಂದ ಲೋನ್ ತೆಗೆದುಕೊಳ್ಳುವುದು ತಪ್ಪಲ್ಲ. ಅದನ್ನು ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿ ಇದ್ದಾಗ ಏಷಿಯನ್ ಗೇಮ್ಸ್ ಸಲುವಾಗಿ 500 ಕೋಟಿ ರೂಪಾಯಿ ಇಂಟರ್ ನ್ಯಾಷನಲ್ ಮಾನಿಟರ್ ಫಂಡ್ ನಿಂದ ಹಣ ತೆಗೆದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಇಂದಿರಾಗಾಂಧಿಯವರ ಸರ್ಕಾರ ಇದೆಯಾ? ಏಷಿಯನ್ ಗೇಮ್ಸ್ ಅವರು ಮಾಡಿದರು, ನ್ಯಾಷನಲ್ ಗೇಮ್ಸ್ ನೀವು ಮಾಡಿದಿರಿ. ಇರುವ ಪರಿಸ್ಥಿತಿ ಬಗ್ಗೆ ಹೇಳಿ ಅಂದರೆ ಇಂದಿರಾಗಾಂಧಿಯವರು ಹಾಗೆ ಮಾಡಿದರು, ನೆಹರೂರವರು ಹಾಗೆ ಮಾಡಿದರು ಎಂದರೆ ನಿಮಗೆ ಇಷ್ಟು ಹೊತ್ತಿನ ತನಕ ಬೋಧನೆ ಮಾಡಿದ್ದು ಏನು, ಮುಖ್ಯ ಮಂತ್ರಿಗಳು ರೂಲ್ಸ್ 324 ರ ಪ್ರಕಾರ ಅದರಲ್ಲಿ ಇರತಕ್ಕಂಥ ಈ ರೀತಿಯಾಗಿದೆ, ಇದನ್ನು ಬಿಟ್ಟು ಮಾತನಾಡಬಾರದು, ಅದಕ್ಕೆ ಸ್ಕೋಪ್ ಇಲ್ಲ ಎಂದು ಹೇಳಿದರು.

ಉಪ ಸಭಾಧ್ಯಕ್ಷರು : ಅದನ್ನು ಸಗೀರ್ ಅಹಮದ್ ರವರಿಗೆ ಏಕೆ ಹೇಳಲಿಲ್ಲ.,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಬಡ್ಜೆಟ್‌ನಲ್ಲಿ ಇದ್ದುದು ಹೇಳಿದರು, ಅವರು ಹೇಳಿದ್ದು ಅಂಬೇಡ್ಕರ್ ಮನೆ, ಆಶ್ರಯ ಮನೆ, ಕಾಫಿ ತೋಟ, ರೆಗ್ಯುಲರೈಸೇಷನ್, ಹೆಲ್ತ್ ಹಸಿರು ಕಾರ್ಡ್, ಹೂಳು ತೆಗೆಯುವುದು..... ಇವರು ಇಂದಿಗಾಂಧಿ, ಹಿಡಿದುಕೊಂಡು, ನೆಹರೂರವರಿಂದ ಹಿಡಿದುಕೊಂಡು ಲಾಲ್ ಬಹದ್ದೂರ್ ಶಾಸ್ತ್ರಿ, ಮೊರಾರ್ಜಿ ದೇಸಾಯಿ, ದೇವೇಗೌಡರು, ಚಂದ್ರಶೇಖರ್ ಇವರನ್ನೆಲ್ಲಾ ಹೇಳುತ್ತಿದ್ದಾರೆ. ಇಷ್ಟು ಜನರಿಗೆ ಹೇಳಬೇಕಾದರೆ ಕಷ್ಟ, ಮತ್ತೆ ಆ ಮೇಲೆ ಸಿಗ್ನೇಚರ್ ಕಲೆಕ್ಟ್ ಮಾಡಿಕೊಂಡು ಓಡಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರು ಏನೋ ಮಂತ್ರಿಯಾಗುವ ಪರಿಸ್ಥಿತಿಯಲ್ಲಿದ್ದಾರೆ, ಅವರು ಅದನ್ನು ತಪ್ಪಿಸುವುದಕ್ಕೆ ಹೋಗಿ ಸಿಗ್ನೇಚರ್ ಕ್ಯಾಂಪೈನ್ ಎಂದರೆ ಪರಿಸ್ಥಿತಿ ಏನು ಆಗಬಾರದು?

ಶ್ರೀ ವೈಜನಾಥ್ ಪಾಟೀಲ್ : ಬರುತ್ತಾ ಬರುತ್ತಾ ನಾವು ವರ್ಲ್ಡ್ ಬ್ಯಾಂಕ್ ಮತ್ತು ಇಂಟರ್‌ನ್ಯಾಷನಲ್ ಮಾನಿಟರ್ ಫಂಡ್‌ನ ಗುಲಾಮರಾಗಿ ಮುಂದೆ ಹೊಸ ಎಕಾನಾಮಿಕ್ ಪಾಲಿಸಿ ಲಿಬರಲೈಸೇಷನ್ ವಿಶೇಷವಾಗಿ ಮನಮೋಹನ್ ಸಿಂಗ್ ರವರ ಹೊಸ ಆರ್ಥಿಕ ನೀತಿ ಉದಾರೀಕರಣವಾದ್ದರಿಂದ ಇವತ್ತು ಪರಿಸ್ಥಿತಿ ಬಹಳ ಕೆಟ್ಟದಾಗಿದೆ. ಇದರ ಸಲುವಾಗಿ ಯಾವುದೇ ಪಕ್ಷಕ್ಕೆ ಯಾವುದೇ ಸರ್ಕಾರಕ್ಕೆ ದೋಷ ಮಾಡುತ್ತಿಲ್ಲ. ಏಕೆಂದರೆ, ಆ ಹೊಸ ನೀತಿ ವಿರೋಧ ಮಾಡಿದರೂ ಈ ದೇಶದಲ್ಲಿ ಮಾನ್ಯ ಚಂದ್ರಶೇಖರ್ ರವರು ಮಾಜಿ ಪ್ರಧಾನಿಗಳು ಅವರೊಬ್ಬರು ಮತ್ತು ಜಾರ್ಜ್ ಫರ್ನಾಂಡಿಸ್ ರವರು ಮಾಡಿದರು. ಮತ್ತು ಯಾವುದೇ ಪೊಲಿಟಿಕಲ್ ಪಾರ್ಟಿಯಾಗಲಿ, ಜನತಾದಳ ಸೇರಿ, ಇದರಿಂದ ಈ ದೇಶ ಅಧೋಗತಿಗೆ ಹೋಗಿದೆ. ಅದರಿಂದ ವಾಪಸ್ ಬರುವುದು ಮತ್ತು ಯಾರೋ ಎಕ್ಸ್‌ಟ್ರಮಿಸ್ಟ್ ಮತ್ತು ಲೆಫ್ಟಿಸ್ಟ್ ಬಂದರೂ ಸಹಿತ ವಾಪಸ್ ಬರುವುದಕ್ಕೆ ಸಾಧ್ಯವಿಲ್ಲ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಈ ಹೊಸ ಎಕನಾಮಿಕ್ ಪಾಲಿಸಿ ನರಸಿಂಹರಾವ್ ರವರ ಕಾಲದಲ್ಲಿ ಏನು ಪ್ರಾರಂಭವಾಯಿತು ಅವರು ಪ್ರಧಾನ ಮಂತ್ರಿಯಾದ ಕೂಡಲೇ ಹೇಳುವುದಕ್ಕೆ ಪ್ರಾರಂಭ ಮಾಡಿದರು. ಚಂದ್ರಶೇಖರ್ ರವರ ಕಾಲಕ್ಕೆ ಬಂಗಾರ ಗಿರವಿ ಇಟ್ಟರು, ಮಾಡಿಕೊಂಡರು, ನಾವು ಬಂದ ಮೇಲೆ ಹಣ ಇಷ್ಟು ಆಗಿದೆ ಎಂದು ಹೇಳಿದರು. ಸಿಕ್ಕಾಪಟ್ಟೆ ಗ್ಯಾಟ್ ಅಗ್ರಿಮೆಂಟ್ ಮಾಡಿದರು, ಮಲ್ಟಿನ್ಯಾಷನಲ್ ಷರತ್ತುಗಳಿಗೆ ಒಪ್ಪಿಕೊಂಡರು, ಅವರು ಕೊಟ್ಟ ಹಣ ತಂದು ತಿಜೋರಿಯಲ್ಲಿಟ್ಟು ನಮ್ಮದು ಇಷ್ಟು ಹಣ ಇದೆ ಎಂದು ತೋರಿಸುವುದಕ್ಕೆ ಪ್ರಾರಂಭ ಮಾಡಿದರು. ಪ್ರತಿಯೊಂದು ಅವರ ಶರತ್ತುಗಳಿಗೆ ಒಪ್ಪಿಕೊಂಡಿದ್ದೀರಿ, ಅವರ ಹಿಂದೆ ಹೋಗುವುದಕ್ಕೆ ಸಾಧ್ಯವಿಲ್ಲ. ತೊಗರಿ ರೇಟ್ ಏಕೆ ಇಷ್ಟು ಇದೆ, ಅಥವಾ ಮತ್ತೊಂದು ದವಸಧಾನ್ಯಗಳ ಬೆಲೆ ಏಕೆ ಇಷ್ಟು ಏರುತ್ತಿದೆ, ಸಕ್ಕರೆ ಪಾಲಿಸಿ ಏನು, ಇದಕ್ಕೆ ಏನೂ ಮಾಡುವುದಿಲ್ಲ, ಗ್ಯಾಟ್ ಅಗ್ರಿಮೆಂಟ್‌ನಲ್ಲಿ ಪ್ರತಿಯೊಂದೂ ಇದೆ, ನಮ್ಮಲ್ಲಿ ಸಕ್ಕರೆ ಉತ್ಪಾದನೆ ಸಿಕ್ಕಾಪಟ್ಟೆ ಸ್ಟಾಕ್ ಇದೆ, ಅದು ಹೋಗುವುದಿಲ್ಲ, ಆದರೆ ವಿದೇಶದಿಂದ ಸಕ್ಕರೆ ಬರುತ್ತದೆ, ಏಕೆ ಬರುತ್ತದೆ, ನಾವು ತರಿಸಿಕೊಳ್ಳುವುದಿಲ್ಲ ಅದು ಅಗ್ರಿಮೆಂಟ್‌ನಲ್ಲಿದೆ. ಅವರು ತಂದುನಮ್ಮ ಬಂದರುಗಳ ಮೇಲೆ, ರಸ್ತೆ ಮೇಲೆ ಬಿಟ್ಟು ಹೋಗುತ್ತಾರೆ, ನಾವು ಪೇಮೆಂಟ್ ಮಾಡುತ್ತಾ ಹೋಗಬೇಕು. ಇಂತಹ ದೊಡ್ಡ ತಪ್ಪುಗಳಾಗಿವೆ. ಆದ್ದರಿಂದ ಇವತ್ತು ಆ ಸರ್ಕಾರ, ಈ ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಸರ್ಕಾರ ಬರುತ್ತದೋ ಗೊತ್ತಿಲ್ಲ, ಏಕೆಂದರೆ ಅವತ್ತು ನರಸಿಂಹರಾವ್ ರವರು ಪ್ರಧಾನ ಮಂತ್ರಿ ಇದ್ದಾಗ ಮನಮೋಹನ್ ಸಿಂಗ್ ಹೊಸ ಎಕನಾಮಿಕ್ ಪಾಲಿಸಿ ಇಂಟ್ರಡ್ಯೂಸ್ ಮಾಡುವಾಗ ಇವೆಲ್ಲವನ್ನೂ ದೊಡ್ಡದಾಗಿ ಸ್ವಾಗತ ಮಾಡಿದವರು ಶ್ರೀ ಎಲ್. ಕೆ. ಅಡ್ವಾನಿ ಯವರು. ಯಾವುದು ನಾವು ತರಬೇಕೆಂದಿದ್ದೇವೆ, ಅದನ್ನು ಮನಮೋಹನ್ ಸಿಂಗ್ ರವರು ತಂದರು ಎಂದು ಇಲ್ಲಿಯೇ ಅಲ್ಲ ಜರ್ಮನಿಯಲ್ಲಿ ಸ್ವಾಗತ ಮಾಡಿದರು. ಎಲ್ಲರೂ ಹೀಗೆ ಸ್ವಾಗತ ಮಾಡಿ ನಮಗೆ ಗುಲಾಮರಾಗಿ ಮಾಡಿದ್ದಾರೆ. ಸಿಕ್ಕಾಪಟ್ಟೆ ಅಗ್ರಿಮೆಂಟ್ ಆಗಿವೆ. ಔಷಧಿಗಳ ಬೆಲೆ ಎಷ್ಟು ಜಾಸ್ತಿಯಾಗಿದೆ ಎಂದರೆ, ಸಾಧಾರಣ ಜನ ಇವತ್ತು ಔಷಧಿಗಳನ್ನು ಖರೀದಿ ಮಾಡುವುದಕ್ಕೆ ಸಾಧ್ಯವಿಲ್ಲ. ಡಾಕ್ಟರ್ ಹತ್ತಿರ ಹೋದರೆ ಅವರು ಬರೆದರೆ, 100 ರಿಂದ 200 ರೂಪಾಯಿ ಟ್ಯಾಬ್ಲೆಟ್ಸ್ ಮತ್ತು ಇಂಜೆಕ್ಷನ್ ಬರೆಯುತ್ತಾರೆ, ಹೊಸ ಎಕಾನಮಿಕ್ ಪಾಲಿಸಿ ಲಿಬರಲೈಸೇಷನ್ ಪರಿಣಾಮ ಔಷಧಿಗಳು ದುಬಾರಿಯಾಗಿವೆ. ಎರಡನೆಯದು ಅಗ್ರಿಕಲ್ಚರ್ ಮೇಲೆ, ಇದರ ಪರಿಣಾಮ ಆಗಿದೆ. ಏಕೆಂದರೆ ಇದು ಪೆಸ್ಟಿಸೈಡ್ಸ್ ಅದೂ ಕೂಡ ಸಿಕ್ಕಾಪಟ್ಟೆ ದುಬಾರಿಯಾಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಸಿದ್ಧರಾಮಯ್ಯನವರು ಮತ್ತು ಮುಖ್ಯ ಮಂತ್ರಿಗಳು ಯೋಚನೆ ಮಾಡಿ ಇವರನ್ನು ರಾಜ್ಯ ಸಭೆಗಾದರೂ ಕಳುಹಿಸಿದ್ದರೆ ನಮ್ಮ ರಾಜ್ಯಕ್ಕೂ, ದೇಶಕ್ಕೂ ಪ್ರಯೋಜನವಾಗುತ್ತಿತ್ತು, ಅದನ್ನು ಬಿಟ್ಟು ಅವರನ್ನು ಇಲ್ಲಿ ಉಳಿಸಿಕೊಂಡು ಸಿದ್ಧರಾಮಯ್ಯನವರ ಬಡ್ಜೆಟ್ ಒಂದು ಕಡೆ, ಲಿಬರಲೈಸೇಷನ್ ಒಂದು ಕಡೆ, ನಮಗೆ ಏನಾಗುತ್ತದೆ ಎಂದರೆ, ಇಂತಹ ಅನೇಕ ಮುಖಂಡರು ನಮ್ಮಲ್ಲಿದ್ದರೂ ಕೂಡ ಅವರ ಸದುಪಯೋಗ ಇವರು ಮಾಡಿಕೊಳ್ಳದೆ.....

ಉಪಾಧ್ಯಕ್ಷರು : ಅವರು ಕೆಲವೊಂದು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಅವರು ಒಳ್ಳೆಯ ವಿಚಾರಗಳನ್ನು ಹೇಳುತ್ತಿದ್ದಾರೆ ಕೇಳಿ ಸ್ವಲ್ಪ. ಅಲ್ಲಿ ಪಾರ್ಲಿಮೆಂಟ್‌ನಲ್ಲಿ ಉಪಯೋಗ ಆಗುತ್ತಿತ್ತು. ಆದರೆ ಅಲ್ಲಿಗಿಂತ ಇಲ್ಲಿ ಹೆಚ್ಚಿಗೆ ಅವರ ಉಪಯೋಗ ಆಗುತ್ತಿದೆ.

ಉಪಾಧ್ಯಕ್ಷರು : ಅವರ ಉಪಯೋಗ ಅಲ್ಲೂ ಆಗಲಿ, ಇಲ್ಲೂ ಆಗಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮಗೆ ಇಚ್ಛೆ ಬಂದಂತೆ ಯಾರಿಗಾದರೂ ಕಳುಹಿಸುತ್ತೀರಿ. ಅವರ ಹತ್ತಿ 60-70 ಜನರು ಸಹಿ ಮಾಡಿದ್ದನ್ನು ಇಟ್ಟು ಕೊಂಡಿದ್ದರು. ಅಂತಹವರನ್ನು ಬಿಟ್ಟು ನೀವು ಯಾರೋ ಒಬ್ಬರಿಗೆ ನಾಲ್ಕು ಜನರೂ ಕೂಡ ಸಪೋರ್ಟ್ ಮಾಡುವುದಿಲ್ಲ ಅಂತಹವರನ್ನು ಕಳುಹಿಸುತ್ತೀರಿ. ಏನಿದು? ಕಳುಹಿಸಿದವರು ನಿಮ್ಮ ಪಕ್ಷದಲ್ಲಿ ಕೆಲಸ ಮಾಡಿದವರಾ: ಈ ವಿಚಾರಧಾರೆಗೆ ಸಂಬಂಧಪಟ್ಟಂಥವರಾ?

ಶ್ರೀ ವೈಜನಾಥ್ ಪಟೀಲ್ : ಅದಕ್ಕೆ ನಾನು ಒಪ್ಪುತ್ತೇನೆ. ಅದಕ್ಕಾಗಿ ನನ್ನನ್ನು ಕಳುಹಿಸಿಲ್ಲ.

ಶ್ರೀ ಸಿದ್ಧರಾಮಯ್ಯ : ಯಾರನ್ನು ಇಲ್ಲಿ ಇಟ್ಟುಕೊಳ್ಳಬೇಕು, ಯಾರನ್ನು ರಾಜ್ಯ ಸಭೆಗೆ ಕಳುಹಿಸಿಕೊಡಬೇಕು ಎನ್ನತಕ್ಕಂಥದ್ದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟಂಥದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ : ಅದು ನಿಮ್ಮ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕಂಥದ್ದು ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ಅರ್ಹ ಇದ್ದವರನ್ನು ನೀವು ಕಳುಹಿಸಿಕೊಡದಿದ್ದರೆ ಇಡೀ ರಾಜ್ಯಕ್ಕೆ ಲುಕ್ಸಾನ್ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ: ಅವರ ಉಪಯೋಗ ಈ ಸಭೆಗೆ ಹಾಗೂ ಈ ರಾಜ್ಯಕ್ಕೆ ಅತ್ಯಂತ ಅವಶ್ಯಕವಾಗಿದೆ. ಅದಕ್ಕಾಗಿ ಅಲ್ಲಿ ಕಳುಹಿಸುವುದಕ್ಕೆ ನಾವೇ ಬೇಡ ಎಂದು ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರೋ ಎಲೆಕ್ಷನ್ ಏಜಂಟ್ ಇದ್ದಾರೆಂದು ಹೇಳಿ ಅವರಿಗೆ ಕಳುಹಿಸಿದರೆ ಹೇಗೆ? ಇಂತಹವರನ್ನು ನೀವು ಕಳುಹಿಸಿದರೆ ನಮ್ಮ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಉಪಯೋಗ ಆಗುತ್ತದೆ. ಇಲ್ಲದಿದ್ದರೆ ಇಲ್ಲ. ಅವರನ್ನು ಕಳುಹಿಸಿದ್ದರೆ ನಾವು ಯಾವತ್ತೂ ಸ್ವಾಗತ ಮಾಡುತ್ತೇವೆ. ಅವರು ಯಾರಿಗೂ ತೊಂದರೆ ಕೊಡುವುದಿಲ್ಲ.

ಉಪಾಧ್ಯಕ್ಷರು : ಸಮಯವಾಗುತ್ತಿದೆ. ತಾವು ಸ್ವಲ್ಪ ಬೇಗ ಮುಗಿಸಿ.

ಶ್ರೀ ವೈಜನಾಥ ಪಾಟೀಲ್ : ಈ ದೃಷ್ಟಿಯಿಂದ ಇವೊತ್ತು ನಮ್ಮ ಆರ್ಥಿಕ ಪರಿಸ್ಥಿತಿ ಹದಗೆಟ್ಟಿರುವ ಸಲುವಾಗಿ ಇವೊತ್ತು ರೈತ ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಾರಂಭ ಮಾಡಿದ್ದಾರೆ. ಇದು ಈ

ದೇಶದಲ್ಲಿ ನಿಲ್ಲುವುದಿಲ್ಲ. ನಮ್ಮ ಸರ್ಕಾರದವರು ಅವರು ಆತ್ಮಹತ್ಯೆ ಏಕೆ ಮಾಡಿಕೊಂಡಿದ್ದಾರೆ, ಅದರ ಎನ್‌ಕ್ವಾಯರಿ ಮಾಡಬೇಕು. ಅದನ್ನು ಸಿ.ಓ.ಡಿ. ಗೆ ಕಳುಹಿಸಬೇಕು ಎಂದರೆ ಸಾಧ್ಯವಾಗುವುದಿಲ್ಲ. ಯಾವ ಸರ್ಕಾರಕ್ಕೂ ಕೂಡ ಅದು ಸಾಧ್ಯವಾಗುವುದಿಲ್ಲ. ಅದು ಕಾಂಗ್ರೆಸ್ ಇರಲಿ, ನಮ್ಮ ಸರ್ಕಾರ ಇರಲಿ ಅಥವಾ ಮತ್ತೊಂದು ಸರ್ಕಾರ ಇರಲಿ ಸಾಧ್ಯವಿಲ್ಲ. ಇವೊತ್ತು ಈ ದೇಶದ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಕೆಟ್ಟಿದೆ. ಇದು ಕೆಟ್ಟಿದ್ದರೂ ಸರ್ಕಾರದವರು ಜಿಮ್ಮೆದಾರಿ ವಹಿಸಿ ಕೊಳ್ಳುವುದಿಲ್ಲ. ನಮ್ಮ ತಪ್ಪು ಇಲ್ಲ ನಾವು ಏನು ಮಾಡಬೇಕು? ಆತ್ಮಹತ್ಯೆ ಮಾಡಿ ಕೊಂಡರೆ ನಾವೇನು ಮಾಡಬೇಕು ಎಂದು ಹೇಳುತ್ತಾರೆ. ಅದರಲ್ಲಿ ಅರ್ಥವಿಲ್ಲ. ಇವೊತ್ತು ಹಿಂದಿನ ತರಹ ಇಲ್ಲ, ಇವೊತ್ತಿನ ರಾಜ್ಯಗಳು ಲೋಕಕಲ್ಯಾಣಕಾರಿ ರಾಜ್ಯಗಳು. ಒಂದಾನೊಂದು ಕಾಲಕ್ಕೆ ಬರೀ ರಾಜರು ಲಾ ಆ್ಯಂಡ್ ಆರ್ಡರ್ ಸಿಚ್ಯುಯೇಷನ್ ಮೈಂಟೇನ್ ಮಾಡುತ್ತಿದ್ದರು. ಆದರೆ ಈಗ ಲೋಕಕಲ್ಯಾಣಕಾರಿ ರಾಜ್ಯಗಳಾಗಿರುವುದರಿಂದ ಜನರ ಸಾಧಾರಣ ಜೀವನವನ್ನು ಸುಧಾರಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಅದನ್ನು ಮಾಡುತ್ತಿಲ್ಲ. ಪ್ರತಿಯೊಂದಕ್ಕೂ ಅಂದರೆ ಆತ್ಮಹತ್ಯೆ ಮಾಡಿಕೊಂಡರೆ ಏನು ಮಾಡಬೇಕು, ಯಾರದಾದರೂ ತೊಗರಿ ಬೇಳೆ ನಾಶವಾದರೆ ಏನು ಮಾಡಬೇಕು, ಕಾಫಿ ನಾಶವಾದರೆ ಏನು ಮಾಡಬೇಕೆಂದು ಹೇಳುವುದು ಸರ್ಕಾರದ ಉತ್ತರ ಸರಿಯಲ್ಲ. ಪ್ರತಿಯೊಂದಕ್ಕೂ ನಾವು ಯೋಚಿಸಬೇಕಾಗುತ್ತದೆ. ಇವೊತ್ತು ಜಗತ್ತಿನಲ್ಲಿ ಎರಡು ನಮೂನೆಯ ಪ್ರೊಡಕ್ಷನ್ ಇವೆ. ಒಂದು ಇಂಡಸ್ಟ್ರೀಯಲ್ ಪ್ರೊಡಕ್ಷನ್, ಮತ್ತೊಂದು ಅಗ್ರಿಕಲ್ಚರಲ್ ಪ್ರೊಡಕ್ಷನ್. ಇಂಡಸ್ಟ್ರೀಯಲ್ ಪ್ರೊಡಕ್ಷನ್‌ದ ಕೆಲವೊಂದು ನೀತಿಯಿಂದಾಗಿ ಇವೊತ್ತು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಫೇಲ್ ಆಗುತ್ತಿವೆ. ಏಕೆಂದರೆ ಯುರೋಪ್, ಅಮೇರಿಕಾದಲ್ಲಿ ಹೊಸ ಟೆಕ್ನಿಕ್ ಬರುತ್ತಿವೆ. ಅವು ಬಂದ ನಂತರ ಅವರು ತಮ್ಮ ಹಳೆಯ ಟೆಕ್ನಿಕ್ ಹಾಗೂ ಮೆಷಿನರಿಗಳನ್ನು ಹಿಂದುಸ್ಥಾನ್, ಪಾಕಿಸ್ಥಾನ್ ಹಾಗೂ ಬಾಂಗ್ಲಾದೇಶಕ್ಕೆ ಎಕ್ಸ್‌ಪೋರ್ಟ್ ಮಾಡುತ್ತಾರೆ. ನಾವು ಏತಕ್ಕೆ ತರುತ್ತೇವೆಂದರೆ ನಮಗೆ ಲೋನ್ ಬೇಕಾಗಿರುತ್ತದೆ. ಆ ಲೋನ್‌ನಲ್ಲಿ ನಾವು ಆ ಹಳೆಯ ಮೆಷಿನರಿಗಳನ್ನು ತಂದುಬಿಡುತ್ತೇವೆ. ಅವರು ಹೊಸ ಟೆಕ್ನಿಕ್‌ನ್ನು ಉಪಯೋಗ ಮಾಡಿ ನಾವು ಒಂದು ನೂರು ರೂಪಾಯಿನಲ್ಲಿ ತಯಾರುಮಾಡುವ ವಸ್ತುವನ್ನು ಒಂದು ರೂಪಾಯಿಯಲ್ಲಿ ಅಮೇರಿಕಾದಲ್ಲಿ ತಯಾರು ಮಾಡುತ್ತಾರೆ. ನಮ್ಮ ಗುಲಬರ್ಗಾದಲ್ಲಿ ಬಹಳಷ್ಟು ಮಿನಿ ಸಿಮೆಂಟ್ ಪ್ಲಾಂಟ್‌ನ್ನು ಹಾಕಿದೆವು. ಆದರೆ ಒಳ್ಳೆಯ ಟೆಕ್ನಿಕ್ ಸಿಗದ ಕಾರಣ ಫೈಲ್ಯೂರ್ ಆದವು. ಅವುಗಳ ಕಾಸ್ಟ್ ಆಫ್ ಪ್ರೊಡಕ್ಷನ್ ಹೆಚ್ಚಾಗಿ ಅವು ಫೈಲ್ಯೂರ್ ಆದವು ಕೊನೆಗೆ ಅವು ಸಿಕ್ ಆಗುತ್ತಿವೆ. ಅದಕ್ಕೆ ಕಾರಣ ಇಂಟರ್‌ನ್ಯಾಶನಲ್ ಮಾನಿಟರಿಂಗ್ ಫಂಡ್. ವರ್ಲ್ಡ್ ಬ್ಯಾಂಕ್‌ಗೆ ಅಮೇರಿಕಾ ರಾಷ್ಟ್ರದ್ದು ಅಷ್ಟೊಂದು ಪ್ರಭಾವ ಇದೆ. ನಾವೆಲ್ಲಾ ಅವರ ಗುಲಾಮರಾಗಿದ್ದೇವೆ. ಅವರ ಕ್ಲಚ್‌ಸ್‌ದಿಂದ ಹೊರಗೆ ಬಂದರೆ ಮಾತ್ರ ಇದು ಸಾಧ್ಯವಾಗುತ್ತದೆ. ಆದ್ದರಿಂದ ನಾವು ಲೋನ್ ತರುವುದಿಲ್ಲ, ಲೋನ್ ತಂದರೂ ಕೂಡ ಅವರು ಹಾಕುವ ಷರತ್ತುಗಳಿಗೆ ನಾವು ಒಪ್ಪುವುದಿಲ್ಲ ಎಂದು ದೃಡನಿಶ್ಚಯ ಮಾಡುವಂಥ ಧೈರ್ಯ ನಮಗೆ ಬೇಕು ಹಾಗೂ ಅಂತಹ ನಾಯಕತ್ವ ನಮಗೆ ಬೇಕು. ಆದರೆ ಅದು ಇಲ್ಲ. ಆ ದೃಷ್ಟಿಯಿಂದ ಇವೊತ್ತು ನಮ್ಮಲ್ಲಿ ಅಗ್ರಿಕಲ್ಚರ್ ಪ್ರೊಡಕ್ಷನ್ ಹಿಟ್ ಆಗುತ್ತಿದೆ. ಅಗ್ರಿಕಲ್ಚರ್ ಅಷ್ಟೇ ಅಲ್ಲ, ಇಂಡಸ್ಟ್ರೀಯಲ್ ಪ್ರೊಡಕ್ಷನ್ ಕೂಡ ಹಿಟ್ ಆಗುತ್ತಿದೆ. ಯುರೋಪ ಹಾಗೂ ಜಪಾನ್‌ನಿಂದ ಯಾವುದಾದರೊಂದು ವಸ್ತುವನ್ನು ತಂದರೆ ಅದು ಕಡಿಮೆ ಬೆಲೆಗೆ ಬೀಳುತ್ತದೆ. ಅವರು ಅದನ್ನು ತಂದು ಇಲ್ಲಿ ಮಾರುತ್ತಾರೆ. ನಮ್ಮ ಇಂಡಸ್ಟ್ರೀಸ್ ಸಿಕ್ ಆಗುತ್ತಿವೆ. ಇವೊತ್ತು ಶುಗರ್ ಪಾಲಿಸಿ ಕೂಡ ಹಾಗೆ ಆಗಿದೆ. ಹೊರಗಿನಿಂದ ನಾವು ಶುಗರ್ ತಂದರೆ ಕಡಿಮೆ ಬೀಳುತ್ತದೆ. ನಮ್ಮ ಮೆಷಿನರಿಯಿಂದ ಸಕ್ಕರೆಯನ್ನು ತಯಾರು ಮಾಡಿದರೆ ಕಾಸ್ಟ್‌ಲಿ ಬೀಳುತ್ತದೆ. ಕೊನೆಗೆ ಅವು ಕೊಲ್ಯಾಪ್ಸ್ ಆಗುತ್ತದೆ. ಕೆಲವರು ಅಂದರೆ

ಟಾಟಾ, ಬಿರ್ಲಾ ದಾಲ್ಮಿಯಾ ಅಂತಹ ಇಂಡಸ್ಟ್ರೀಸ್ ಮಾತ್ರ ಕಾಂಪಿಟ್ ಮಾಡಬಹುದು. ಬೇರೆ ಎಲ್ಲಾ ಇಂಡಸ್ಟ್ರೀಸ್ ಕೊಲ್ಯಾಪ್ಸ್ ಆಗಿ ಮಲ್ಟಿನ್ಯಾಶನಲ್ ಕಂಪನಿಗಳು ದೇಶದಲ್ಲಿ ಬರುತ್ತವೆ. ಇವ್ಹೊತ್ತು ಮಲ್ಟಿನ್ಯಾಶನಲ್ಸ್ ಇಂಡಸ್ಟ್ರೀಸ್ ಮಾತ್ರ ಹಾಕುತ್ತಿಲ್ಲ ಅವರು ಇವ್ಹೊತ್ತು ಅಗ್ರಿಕಲ್ಚರ್‌ನಲ್ಲೂ ಕೂಡ ಕಬ್ಜ ಮಾಡುತ್ತಿದ್ದಾರೆ. ಒಂದಾನೊಂದು ಕಾಲದಲ್ಲಿ ಜಮೀನಿನ ಲ್ಯಾಂಡ್ ರೆವಿನ್ಯೂ ಕೊಡುವುದೂ ಕೂಡ ಸಾಧ್ಯವಿರಲಿಲ್ಲ. ಅವಾಗ ಆ ಕಾಲ ಇತ್ತು. ಆದರೆ ಇವ್ಹೊತ್ತಿನ ಪರಿಸ್ಥಿತಿಯಲ್ಲಿ ಸ್ವಲ್ಪ ಲಾಭ ಆಗುತ್ತಿದೆ. ಈಗ ಹೊಸ ಪಾಲಿಸಿಯಿಂದ ಟೆಕ್ನಿಕ್‌ನಿಂದ ಹೊಲ ಬೆಳೆಯಬೇಕಾದರೆ ಫರ್ಟಿಲೈಸರ್ ಹಾಕಬೇಕು. ಆದರೆ ಅವು ಬಹಳ ಕಾಸ್ಟ್‌ಲಿ ಆಗಿವೆ. ಆದುದರಿಂದ ಲಾಭ ಆಗುತ್ತಿಲ್ಲ. ಅದು ಮೊದಲೇ ಒಕ್ಕಲುತನ, ಬೇಸಾಯ ಎಂದರೆ ಲಾಸ್ ಬಿಸನೆಸ್. ಮಳೆ ಕಡಿಮೆ ಆದರೆ ಬೆಳೆ ಬರುವುದಿಲ್ಲ, ಮಳೆ ಹೆಚ್ಚಾದರೆ ಬೆಳೆ ಹೋಗುತ್ತದೆ. ಆದರೆ ಯಾರು ಖರ್ಚು ಮಾಡುತ್ತಾರೆ ಅವರಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ವಾಪಸ್ಸು ಬರುವುದಿಲ್ಲ. ಅವನು ಲೋನ್‌ನಲ್ಲೇ ಇರುತ್ತಾನೆ, ಲೋನ್‌ನಲ್ಲೇ ಬೆಳೆಯುತ್ತಾನೆ. ಅದೇ ರೀತಿ ಹೋದ ಸಾರಿ ಕೂಡ ಗುಲಬರ್ಗಾ ಬೀದರ್‌ನಲ್ಲಿ ತೊಗರಿ ಬೆಳೆ ಸರಿಯಾಗಿ ಬರಲಿಲ್ಲ. ಅಲ್ಲಿ ಹೋದ ಎರಡು ಮೂರು ವರ್ಷದಿಂದ ಆರ್ಥಿಕ ಪರಿಸ್ಥಿತಿ ಕೆಡುತ್ತಿದೆ. ಆದರೆ ಹೋದ ವರ್ಷ ತೊಗರಿ ಬೆಳೆಯ ಖರೀಫ್ ಅಥವಾ ರಬಿ ಎರಡೂ ಬೆಳೆ ಇಲ್ಲ. ಸಾಧಾರಣವಾಗಿ ಅಲ್ಲಿಯ ರೈತ 30-40 ರಿಂದ ಒಂದೊಂದು ಲಕ್ಷ ರೂಪಾಯಿ ಉದ್ದರಿ ತೆಗೆದುಕೊಂಡಿದ್ದರೆ. ಏಕೆಂದರೆ ಸಾಧಾರಣ ರೈತ ಕ್ಯಾಪ್ ಕ್ಯಾಪ್ ಬಂದ ನಂತರ ವಾಪಸ್ಸು ಮಾಡೋಣ ಎಂದು. ಆದರೆ ತೊಗರಿ ಬೇಳೆ ನಾಶವಾದ ಕಾರಣ ವಾಪಸ್ಸು ಮಾಡಲಿಲ್ಲ. ಆದ್ದರಿಂದ ಅವರ ಇವ್ಹೊತ್ತು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದಾರೆ. ಆದರೆ ಇದು ಮೊದಲನೇ ಸಾರಿ ಅಲ್ಲ. ಮೊದಲೂ ಕೂಡ ಇತ್ತು. ಆದರೆ ಈಗ ಪ್ರಚಾರ ಆಗುತ್ತಿದೆ, ಮೊದಲು ಪ್ರಚಾರ ಆಗುತ್ತಿರಲಿಲ್ಲ. ಇವ್ಹೊತ್ತು ಪತ್ರಿಕೆಗಳು ಹಳ್ಳಿಹಳ್ಳಿಗೂ ಹೋಗುತ್ತಿವೆ. ಆದಕಾರಣ ಪ್ರಚಾರವಾಗುತ್ತಿದೆ. ಈ ರೈತರು ಸಾಯುತ್ತಿರುವ ಪರಿಸ್ಥಿತಿ ಸುಧಾರಣೆ ಆಗಬೇಕು. ನಮ್ಮ ದೇಶದಲ್ಲಿ ಕೂಲಿ ಕಾರ್ಮಿಕರು, ಲ್ಯಾಂಡ್ ಹೋಲ್ಡರ್ಸ್ ಹೀಗೆ ಸುಮಾರು ಶೇಕಡಾ ಎಪ್ಪತ್ತರಷ್ಟು ಜನಸಂಖ್ಯೆ ರೈತರಿದ್ದಾರೆ. ಅವರು ಸ್ವಲ್ಪ ರಿಲೀಫ್ ಕೇಳಿದರೆ ಅವರಿಗೆ ಇಪ್ಪತ್ತೈದು ಕೋಟಿ ರೂಪಾಯಿ ಸಹಾಯ ಮಾಡಿದರೆ ಅವರಿಗೆ ಎಷ್ಟೋ ರಿಲೀಫ್ ಕೊಟ್ಟಹಾಗೆ ಆಗುತ್ತದೆ. ಅವರಿಗೆ ಸಾವಿರಾರು ಕೋಟಿ ರೂಪಾಯಿ ನಾಶವಾಗಿದೆ. ಆದರೆ ಅವರ ಕಡೆ ಸರ್ಕಾರ ಗಮನಹರಿಸಿಲ್ಲ. ಇದು ಬಹಳ ದುಃಖದ ಸಂಗತಿಯಾಗಿದೆ. ಆದರೆ ಸರ್ಕಾರಿ ನೌಕರರಿಗೆ ಕೊಡುತ್ತೀರಿ. ಏಕೆಂದರೆ ಅವರದು ಆರ್ಗನೈಸ್ಡ್ ಗ್ರೂಪ್ ಇದೆ. ನೌಕರರು ಸ್ಟ್ರೈಕ್ ಮಾಡುತ್ತಾರೆ ಎಂದು ಹೇಳಿ ಒಂದು ಪರ್ಸೆಂಟ್ ಇದ್ದಂಥ ಸರ್ಕಾರಿ ನೌಕರರಿಗೆ 350 ಕೋಟಿ ರೂಪಾಯಿ ಸರ್ಕಾರ ಪರಿಹಾರವನ್ನು ಒಂದೇ ಸ್ಟ್ರೋಕ್ ನಲ್ಲಿ ಕೊಡುವುದಕ್ಕೆ ತಯಾರಾಗುತ್ತದೆ. ಆದರೆ ಬರೀ 25 ಕೋಟಿ ರೂಪಾಯಿ ಪರಿಹಾರವನ್ನು ರೈತರಿಗೆ ಕೊಡಲು ನಾವು ಸಿ.ಓ.ಡಿ. ಎನ್‌ಕ್ವೊರಿ ಮಾಡಿಸುತ್ತೇವೆ, ಅವನು ತೊಗರಿ ಬೇಳೆ ನಾಶವಾದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾನೋ ಹೇಗೋ ಎಂದು ನೋಡಿಕೊಂಡು ನಾವು ಕೊಡುತ್ತೇವೆ ಎಂದು ಹೇಳುತ್ತಾರೆ. ಹಾಗೆ ಮಾಡದೆ, ಅವನು ಆರ್ಥಿಕ ಪರಿಸ್ಥಿತಿ ಕೆಟ್ಟಿದ್ದ ಸಲುವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾನೋ ಅಥವಾ ನ್ಯಾಚುರಲ್ ಡೆತ್‌ನಿಂದ ಸತ್ತಿದ್ದಾನೋ ಅಷ್ಟನ್ನು ನೋಡಿಕೊಂಡು ಕೊಟ್ಟರೆ ಸಾಕು. ಒಂದು ವೇಳೆ ಅವನು ಆತ್ಮಹತ್ಯೆ ಮಾಡಿಕೊಂಡಿದ್ದರೆ ಅವನಿಗೆ ಪರಿಹಾರವನ್ನು ಕೊಟ್ಟುಬಿಡಿ. ಅದನ್ನು ಬಿಟ್ಟು ರೈತ ತೊಗರಿ ಬೆಳೆ ಬಿತ್ತಿದ್ದನೋ ಇಲ್ಲವೋ ಬಿತ್ತಿದ್ದರೆ ಎಷ್ಟು ಎಕರೆ ಬಿತ್ತಿದ್ದ ಎಂದು ನೋಡುವುದಕ್ಕೆ ಸಿ.ಓ.ಡಿ. ಎನ್‌ಕ್ವೊರಿ ಮಾಡಿಸಲು ಕಳುಹಿಸುತ್ತಿದ್ದೀರಿ. ಅವರು ಅದನ್ನು ನೋಡಿಕೊಂಡು ಬರಲು ಲಕ್ಷಾಂತರ ರೂಪಾಯಿ ಟಿ ಎ ಡಿ ಎ ಖರ್ಚಾಗುತ್ತದೆ. ಅಷ್ಟೇ ಟಿ ಎ ಡಿ ಎ ದಷ್ಟು ಹಣವನ್ನು ರೈತರಿಗೆ ಕೊಟ್ಟರೆ

ಸಾಕಾಗಿತ್ತು. ಯಾರಾದರೂ ಲವ್ ಅಫೇರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರೆ ಅವರಿಗೆ ಪರಿಹಾರ ಕೊಡಿ ಎಂದು ನಾನು ಹೇಳುತ್ತಿಲ್ಲ ನಿಜವಾಗಲೂ ತೊಂದರೆಯಾದವರಿಗೆ ಪರಿಹಾರವನ್ನು ಕೊಡಿ. ರೈತರು ಕೇಳಿದರೆ ನಾಲ್ಕೈದು ಕೋಟಿ ಕೊಡುತ್ತೀರಿ ಆದರೆ ಸರ್ಕಾರಿ ನೌಕರರು ಸ್ಟ್ರೈಕ್ ಮಾಡಿದರೆ 300-400 ಕೋಟಿ ರೂಪಾಯಿ ಕೊಡುತ್ತೀರಿ. ಆದಕಾರಣ ರೈತರಿಗೆ ಸರ್ಕಾರದವರು 25 ಕೋಟಿ ರೂಪಾಯಿ ಪರಿಹಾರವನ್ನು ಕೊಡುವ ಕಡೆ ಲಕ್ಷ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಶಿಕ್ಷಣ ನೀತಿಯ ಬಗ್ಗೆ ಹೇಳುತ್ತೇನೆ. ನಾನು ಸಚಿವನಾಗಿದ್ದಾಗ 2ನೇ ಆಗಸ್ಟ್ 1995 ರಂದು ಶಿಕ್ಷಣ ಪದ್ಧತಿಯಲ್ಲಿ ವಿಶೇಷವಾಗಿ ಟೆಕ್ನಿಕಲ್ ಎಜ್ಯುಕೇಷನ್ ಹಾಗೂ ಮೆಡಿಕಲ್ ಎಜ್ಯುಕೇಷನ್ನಿನ ಪದ್ಧತಿಯಲ್ಲಿ ಏನು ವ್ಯತ್ಯಾಸ ಇದೆ ಎಂದು ಅಧ್ಯಯನ ಮಾಡಲು ನಾನು ಮುಂಬೈಗೆ ಹೋಗಿದ್ದೆ. ಅಲ್ಲಿ ಕಳೆದ ಎಂಟು ಹತ್ತು ವರ್ಷದಿಂದ ಏನು ಪ್ರಾಕ್ಟೀಸ್ ಇದೆ ಎಂದು ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಲೋಕಲ್ ಸ್ಟೂಡೆಂಟ್ಸ್‌ಗೆ ಪ್ರಿಫರೆನ್ಸ್ ಸಿಗಬೇಕೆಂದು ಮಾಡಿದ್ದಾರೆ. ಆ ಎಲ್ಲಾ ಡಾಕ್ಯುಮೆಂಟ್ಸ್ ಹಾಗೂ ರಿಪೋರ್ಟ್‌ಗಳನ್ನು ನಾನು ಮುಖ್ಯಮಂತ್ರಿಯವರಿಗೆ ಕೊಟ್ಟೆ. ಇದು ಬಹಳ ಒಳ್ಳೆಯದು ಇದೆ, ಇದನ್ನು ಜಾರಿಯಲ್ಲಿ ತರೋಣ ಎಂದು ಹೇಳಿದರು. ಮುಂದಿನ ವರ್ಷ ಅದನ್ನು ಜಾರಿಗೆ ತರಬೇಕಾಗಿತ್ತು. ಆದರೆ ಅವರು ಪ್ರಧಾನ ಮಂತ್ರಿಗಳಾಗಿ ಹೋದರು. ಬಹಳ ಸಂತೋಷವಾಯಿತು. ಆ ನಂತರ ಮುಖ್ಯಮಂತ್ರಿಯಾಗಿ ಪಟೇಲರು ಬಂದರು, ಆಗ ಮತ್ತೆ ನಾನು ಅವರಿಗೆ ಎ.ಬಿ.ಸಿ.ಡಿ. ತಿಳಿಸಬೇಕಾಯಿತು. ಮತ್ತೆ ಆ ವಿಚಾರವನ್ನು ಮಾನ್ಯ ಪಟೇಲರ ಗಮನಕ್ಕೆ ತಂದೆ. ಅವರು ಅದನ್ನು ತಿಳಿದುಕೊಂಡ ಕೂಡಲೇ ಅಪರೇಶನ್‌ಗಾಗಿ ವಿದೇಶಕ್ಕೆ ಹೋದರು. ಆವರು ಅಲ್ಲಿಂದ ಬರುವುದರೊಳಗೆ ಪಿ.ಯು.ಸಿ. ಪರೀಕ್ಷೆ ಮುಗಿಸಿ ಎಂಟ್ರನ್ಸ್ ಪರೀಕ್ಷೆ ಪ್ರಾರಂಭವಾಗಿತ್ತು. ಆದ್ದರಿಂದ ಆ ವರ್ಷ ಹಾಗೇ ಹೋಯಿತು. ಈ ವರ್ಷ ಹುಬ್ಬಳ್ಳಿಯಲ್ಲಿ ಕ್ಯಾವಿನೆಟ್ ಮೀಟಿಂಗ್ ಇದ್ದಾಗ ಒಪ್ಪಿಕೊಂಡರು. ಮಹಾರಾಷ್ಟ್ರದಲ್ಲಿ ಯಾವ ತರಹ ಇದೆ ಅದೇ ತರಹ ಇಲ್ಲಿ ಜಾರಿಯಲ್ಲಿ ತರುತ್ತೇವೆ ಎಂದು ಕ್ಯಾಬಿನೆಟ್ ಡಿವಿಷನ್ ತೆಗೆದುಕೊಂಡರು. ಮಹಾರಾಷ್ಟ್ರದಲ್ಲಿ ಶೇಕಡಾ 70 ರಷ್ಟು ಲೋಕಲ್ ಸ್ಟೂಡೆಂಟ್ಸ್‌ಗೆ ಹಾಗೂ ಶೇಕಡಾ 30ರಷ್ಟು ಬೇರೆ ರಾಜ್ಯಗಳಿಂದ ಬಂದಂತ ವಿದ್ಯಾರ್ಥಿಗಳಿಗೆ ರಿಸರ್ವೇಷನ್ ಇದೆ. ಅದೇ ತರಹ ಆಂಧ್ರದಲ್ಲಿ ಕೂಡ ರಾಯಲ್ ಸೀಮಾಗೂ ಕೂಡ ಒಂದು ಬೇರೆ ರಿಸರ್ವೇಷನ್ ಇದೆ. ಕೋಸ್ಟರ್ ಆಂಧ್ರಕ್ಕೆ ಬೇರೆ ಇದೆ. ತೆಲಂಗಾಣಕ್ಕೆ ಬೇರೆ ಇದೆ. ಲೋಕಲ್ಸ್ ಮತ್ತು ಹೊರಗಿನವರು ಎಂದು ಇದೆ. ಅವರು ಕೂಡ ಎಲ್ಲಾ ಕಡೆಯಿಂದ ರಿಪೋರ್ಟ್ ತರಿಸಿದ್ದಾರೆ. ಆದರೆ ಇವೊತ್ತಿನವರೆಗೆ ಯಾವುದೇ ಕಾರ್ಯಕ್ರಮ ಜಾರಿಯಲ್ಲಿ ತರಲಿಲ್ಲ. 1974 ರಲ್ಲಿ ಆಂಧ್ರಪ್ರದೇಶ ಅಸೆಂಬ್ಲಿಯವರು ಆರ್ಟಿಕಲ್ 371ಕ್ಕೆ ಅಮೆಂಡ್‌ಮೆಂಟ್ ಮಾಡಿ ಲೋಕಲ್‌ನವರಿಗೆ ರಿಸರ್ವೇಶನ್ ಕೊಡಲಿಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಸಿಗಬೇಕು ಎಂದು ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು. ಅವರಿಗೆ ಯಾವುದೇ ಒಂದು ಏರಿಯಾಕ್ಕೆ ರಿಸರ್ವೇಶನ್ ಕೊಡಲಿಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಸಿಗಬೇಕು ಎಂದು ಒಂದು ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರು. ಅವರಿಗೆ ಯಾವುದೇ ಒಂದು ಏರಿಯಾಕ್ಕೆ ರಿಸರ್ವೇಷನ್ ಕೊಡಲಿಕ್ಕೆ ಅಧಿಕಾರ ಇದೆ, ಮಹಾರಾಷ್ಟ್ರದಲ್ಲಿ ಕೂಡ ಆರ್ಟಿಕಲ್ 371 ಅಮೆಂಡ್‌ಮೆಂಟ್ ಮಾಡಿದೆ ಇದು ಅಸ್ಸಾಂನಲ್ಲಿ ಇದೆ, ಸಿಕ್ಕಿಂನಲ್ಲಿ ಇದೆ. ಎಲ್ಲಾ ಕಡೆ ಇದೆ. ಆದರೆ ದುರ್ದೈವ ನಾವು ಆದೇ ಹೈದರಾಬಾದ್ ದಿಂದ ಬಂದರೂ ಕೂಡ ಇದು ಸೇರಿಲ್ಲ. ನಾಳೆ ಏನಾದರೂ ಇವರು ಕಾನೂನು ಮಾಡಬಹುದು. ಏಕೆಂದರೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ ಅಂತಹ ಒಂದು ಪಾಲಿಸಿ ಕರ್ನಾಟಕದಲ್ಲಿ ತರುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಆದರೆ ಸರ್ಕಾರದವರು ತರುತ್ತಾರೋ ಇಲ್ಲವೋ ಗೊತ್ತಿಲ್ಲ.

ಅಥವಾ ಯಾರಾದರೂ ಹೈಕೋರ್ಟ್ ಅಥವಾ ಸುಪ್ರೀಮ್ ಕೋರ್ಟಿಗೆ ಹೋಗಿ ರಿಟ್ ಹಾಕಿದರು ಎಂದರೆ ಮತ್ತೆ ಅದು ರದ್ದಾಗುತ್ತದೆ. ಅದು ರದ್ದಾಗಬಾರದು ಎಂದು ಕಾನ್ಸ್‌ಟಿಟ್ಯೂಷನಲ್ ಅಮೆಂಡ್‌ಮೆಂಟ್ ಬೇರೆ ಪ್ರದೇಶದಲ್ಲಿ ಆಗಿದೆ. ಅಂತಹ ಒಂದು ಅಮೆಂಟ್‌ಮೆಂಟ್ ಕರ್ನಾಟಕದಲ್ಲೂ ಕೂಡ ಆಗಬೇಕು ಎಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಸರ್ಕಾರ ಅಮೆಂಡ್‌ಮೆಂಟ್ ತರಲಿಕ್ಕೆ ರೆಡಿ ಇಲ್ಲವೆಂದು ನಾನು ಪ್ರೈವೇಟ್ ಮೆಂಬರ್ಸ್ ಬಿಲ್‌ನಲ್ಲಿ ತಂದಿದ್ದೇನೆ. ಬಹುಶ: ಈ ಸಾರಿ ವಾಟಾಳ್ ನಾಗರಾಜ್‌ರವರು ತಮ್ಮ ಪ್ರೈವೇಟ್ ಮೆಂಬರ್ಸ್ ಬಿಲ್‌ನ್ನು ಮುಗಿಸಿದ್ದರೆ ಮುಂದಿನ ಸಾರಿಯಾದರೂ ಬರುತ್ತಿತ್ತು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆ. ಎಂದರೆ ಮಾನ್ಯ ಬಂಗಾರಪ್ಪನವರು ಇದ್ದಾಗ ಯು.ಕೆ.ಪಿ.ನಲ್ಲಿ ಒಂದು ನೋಟಿಫಿಕೇಷನ್ ಆಯಿತು. ಅದು ಏನೆಂದರೆ ಯು.ಕೆ.ಪಿ. ಏರಿಯಾನಲ್ಲಿ ಇರುವ ಇಂಜಿನಿಯರ್ಸ್‌ಗಳಾಗಿ ಹೆಚ್ಚಿನದಾಗಿ ಸುಮಾರು ಶೇಕಡಾ 70-80 ರಷ್ಟು ಲೋಕಲ್‌ನವರಿಗೆ ಆದ್ಯತೆ ಕೊಟ್ಟು ಉಳಿದದ್ದು ರಾಜ್ಯದ ಉಳಿದವರಿಗೆ ಸಿಗಬೇಕು ಎಂದು ಮಾಡಿದರು. ಆಗ ಇರಿಗೇಷನ್ ಮಿನಿಸ್ಟರ್ ಶ್ರೀ ಎಸ್. ಎಂ. ಕೃಷ್ಣರವರು ಇದ್ದರು. ಈ ಕಡೆ ಆರ್ಡರ್ ಹೊರಡಿಸಿದ ಮರುದಿವಸವೇ ಯಾರೋ ರಿಟ್ ಹಾಕಿದರು. ರಿಟ್ ಹಾಕಿದವರು ಯಾರು ಎಂದರೆ ಮದ್ದೂರು ತಾಲ್ಲೂಕಿನವರು. ಅದು ಕ್ಯಾನ್ಸಲ್ ಆಗಿ ಸುಪ್ರೀಮ್ ಕೋರ್ಟಿನಲ್ಲಿ ಪೆಂಡಿಂಗ್ ಇದೆ. ಅದೇ ರೀತಿ ನೀವೂ ಕೂಡ ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಒಂದು ನೋಟಿಫಿಕೇಷನ್ ಹೊರಡಿಸಿದ ನಂತರ ಯಾರಾದರೂ ರಿಟ್ ಹಾಕಿದರೆ ಅದರ ಉಪಯೋಗ ಆಗುವುದಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಬೇಡಿಕೊಳ್ಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರದವರು ಒಂದು ರೆಸಲ್ಯೂಷನ್ ಮಾಡಬೇಕು. ಕರ್ನಾಟಕ ವಿಧಾನ ಸಭೆಯಿಂದ ಈ ಆರ್ಟಿಕಲ್ 371ಕ್ಕೆ ಒಂದು ಅಮೆಂಡ್‌ಮೆಂಟ್ ಮಾಡಿ, ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಅಂತಹ ಒಂದು ಅಮೆಂಡ್‌ಮೆಂಟ್ ಸರ್ಕಾರದ ಮತಿಯಿಂದ ಇದೇ ಸೆಷನ್‌ನಲ್ಲಿ ಒಂದು ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರದ ಮತಿಯಿಂದ ಇದೇ ಸೆಷನ್‌ನಲ್ಲಿ ಒಂದು ರೆಸಲ್ಯೂಷನ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿದರೆ ಅದನ್ನು ಪಾರ್ಲಿಮೆಂಟ್‌ನಲ್ಲಿ ಪಾಸ್ ಮಾಡಬಹುದು ಎಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

10) ಸರ್ಕಾರಿ ನಿರ್ಣಯ

ರಾಜ್ಯಾದ್ಯಂತ ಸಕಾಲಕ್ಕೆ ಮಳೆ ಬಾರದೆ ಬೆಳೆ ಹಾಳಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದರ ಬಗ್ಗೆ ಪರಿಶೀಲಿಸಲು ಜಂಟಿ ಸದನದ ಸಮಿತಿಯ ರಚನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ರಾಜ್ಯದಾದ್ಯಂತ ಸಕಾಲಕ್ಕೆ ಮಳೆ ಬಾರದ ಕಾರಣದಿಂದ, ಕಳಪೆ ಗುಣಮಟ್ಟದ ಬೀಜಗಳು ಹಾಗೂ ಕ್ರಿಮಿಕೀಟ ನಾಶಕ ಔಷಧಿಗಳು ಉಪಯೋಗಿಸಿದ್ದರಿಂದ ತೀವ್ರ ಆರ್ಥಿಕ ಹಾಗೂ ಮಾನಸಿಕ ಸಂಕಷ್ಟಕ್ಕೆ ಗುರಿಯಾಗಿರುವುದರಿಂದ, ರೈತ ಸಮುದಾಯವು ಅಸಹಾಯಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವರೆಂಬ ವರದಿಯನ್ನು ದಿನಪತ್ರಿಕೆಗಳಲ್ಲಿ ಪ್ರಚುರಗೊಂಡು ಸದನದಲ್ಲಿ ಪ್ರಸ್ತಾಪಿತವಾದ ಈ ವಿಷಯಕ್ಕೆ ಸಂಬಂಧಿಸಿದಂತೆ , ಸವಿವರವಾದಂತಹ ವರದಿಯನ್ನು ಸಲ್ಲಿಸಲು ಈ ಕೆಳಕಂಡ 15 ವಿಧಾನ ಸಭೆಯ ಸದಸ್ಯರು , ಹಾಗೂ 5 ವಿಧಾನ ಪರಿಷತ್ತಿನ ಸದಸ್ಯರು ಇರುವ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಹಾಗೂ ಅದಕ್ಕಾಗಿ ವಿಧಾನ ಪರಿಷತ್ತಿನ ಒಪ್ಪಿಗೆಯನ್ನು ಪಡೆಯಬೇಕೆಂದು ಸೂಚಿಸುತ್ತೇನೆ.

ಶ್ರೀಯುತರುಗಳಾದ :

1. ಎ.ಬಿ. ಪಾಟೀಲ
2. ಚಂದ್ರಪ್ಪ
3. ಜಿ.ಬಿ. ಶಿವಕುಮಾರ್
4. ಜೋಷಿ ಸುಭಾಷ್ ಶ್ರೀಧರ್
5. ಮಹಾದೇವ್ ಪ್ರಸಾದ್
6. ಚಂದ್ರಶೇಖರ್ ನಾಯಕ್
7. ಸಿ. ಎಸ್. ಪುಟ್ಟೇಗೌಡ
8. ಶಿವಾನಂದ ಪಾಟೀಲ್
9. ಕೆ. ಎಸ್. ಪುಟ್ಟಣ್ಣಯ್ಯ
10. ಜೆ.ಸಿ. ಮಾಧುಸ್ವಾಮಿ
11. ಡಿ.ಆರ್. ಪಾಟೀಲ್
12. ಸಗೀರ ಅಹಮದ್
13. ಕಾಗೋಡು ತಿಮ್ಮಪ್ಪ
14. ಜಗದೀಶ್ ಶೆಟ್ಟರ್
15. ರೇವು ನಾಯಕ್

ಉಲ್ಲೇಖ ನಿಬಂಧನೆಗಳು

1. ಬೆಳೆಗಳ ವಿಫಲತೆ ಅಥವಾ ಕಳಪೆ ದರ್ಜೆ ಕೀಟನಾಶಕ ಮತ್ತು ಬೀಜಗಳನ್ನು ತಿಳಿಯದೆ ಉಪಯೋಗಿಸಿದ್ದರಿಂದ ಉಂಟಾದ ತೊಂದರೆಯಿಂದಾಗಿ ಸಾವನ್ನಪ್ಪಿದ್ದಾರೆಂಬ ಅಂಶವನ್ನು ಮನಗಂಡ ನಂತರ, ಮೃತರಾದ ರೈತರ ಕುಟುಂಬ ವರ್ಗದವರಿಗೆ ಆರ್ಥಿಕ ಸಹಾಯವನ್ನು ತಕ್ಷಣ ಒದಗಿಸುವುದರ ಬಗ್ಗೆ.

2. ಪ್ರತಿಯೊಂದು ಪ್ರಕಟಣದಲ್ಲೂ, ಬೆಳೆಯ ಸ್ವರೂಪ, ಹಾನಿಯಾದ ಪ್ರಮಾಣ ಇವುಗಳನ್ನು ಗಣನೆಗೆ ತೆದುಕೊಂಡು ಬೆಳೆ ಪರಿಹಾರ ನೀಡುವುದರ ಬಗ್ಗೆ.

3. ದೋಷಪೂರಿತ ಕಳಪೆ ದರ್ಜೆಯ ಕೀಟನಾಶಕ ಹಾಗೂ ಬೀಜಗಳನ್ನು ಸರಬರಾಜು ಮಾಡಲು ಕಾರಣರಾದ ಕಂಪನಿಗಳನ್ನು ಗುರುತಿಸಿ ಅವುಗಳ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಸೂಚಿಸುವುದರ ಬಗ್ಗೆ.

4. ರಾಜ್ಯದ ಎಲ್ಲಾ ವರ್ಗದ ರೈತರಿಗೆ ಪರಿಹಾರೋಪಾಯ ಕಲ್ಪಿಸುವ ಸಂಬಂಧದಲ್ಲಿ ಬೆಳೆ ವಿಮೆಯನ್ನು ಜಾರಿಗೆ ತರುವ ಬಗ್ಗೆ ಒಟ್ಟಾಭಿಪ್ರಾಯವನ್ನು ರೂಪಿಸುವುದರ ಬಗ್ಗೆ.

5. ಸರ್ಕಾರದ ವತಿಯಿಂದ ತೆಗೆದುಕೊಳ್ಳಬೇಕಾದಂತಹ ದೀರ್ಘಾವಧಿಯ ಶಾಶ್ವತ ಪರಿಹಾರೋಪಾಯಗಳನ್ನು ಸೂಸುವುದರ ಬಗ್ಗೆ.

6. ಸಮಿತಿ ರಚನೆಗೊಂಡ ದಿನಾಂಕದಿಂದ ಹದಿನೈದು ದಿನಗಳೊಳಗೆ ವರದಿಯನ್ನು ಸಲ್ಲಿಸುವುದು.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಪ್ರಸ್ತಾವವನ್ನು ಈ ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ವಿಜಯಕುಮಾರ್ ಖಂಡ್ರೆಯವರ ಹೆಸರನ್ನು ಸೂಚಿಸಿದಾಗ ನನಗೆ ಅಧ್ಯಕ್ಷರೆ ಹೇಳಿದ್ದು ಏನೆಂದರೆ ಅವರು ಬೀದರ್ ಜಿಲ್ಲೆಯ ಭಾಲ್ಕಿಯಿಂದ ಪ್ರತಿನಿಧಿಸುತ್ತಾರೆ ಆಯಾ ಭಾಗದಿಂದ ಬಂದವರನ್ನು ಸಮಿತಿಯಲ್ಲಿ ಹಾಕುವುದು ಬೇಡ ಏಕೆಂದರೆ ಅವರು ಇಂಟ್ರೆಸ್ಟೆಡ್ ಇರುತ್ತಾರೆ. ಆದಕಾರಣ ಬೇರೆ ಜಾಗದಿಂದ ಬಂದವರನ್ನು.....

ಉಪಾಧ್ಯಕ್ಷರು : ಇದರ ಬಗ್ಗೆ ಮಾನ್ಯ ಅಧ್ಯಕ್ಷರು ನಿಮ್ಮ ಜೊತೆ ಮಾತನಾಡಿ ನಿರ್ಣಯ ತೆಗೆದುಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಸ್ವಲ್ಪ ಕೇಳಿ. ಇಂಟ್ರೆಸ್ಟೆಡ್ ಇದ್ದವರಿಗೆ ನಾವು ಹಾಕುವುದಿಲ್ಲ. ಸ್ವಲ್ಪ ಹೊರಗಿನವರಿಗೆ ಹಾಕಿದರೆ ಅವರು ಒಳ್ಳೆಯ ರಿಪೋರ್ಟ್ ತರುವುದಕ್ಕೆ ಸಾಧ್ಯವಾಗುತ್ತದೆ. ಅವರು ಲೋಕಲ್‌ನವರು ಇರುವುದರಿಂದ ಪ್ರೆಷರ್‌ದಿಂದ ಈಲ್ಡ್ ಆಗಬಹುದು ಎಂದು ಹೇಳಿದರು. ಈಗ ಶ್ರೀ ರೇವುನಾಯಕ್‌ರವರನ್ನು ಹಾಕಿದ್ದೀರಿ. ನಾನು ಅವರನ್ನು ವಿರುದ್ಧ ಮಾಡುತ್ತಿಲ್ಲ. ಆದರಿಂದ ಏನಾಗುತ್ತದೆ ಎಂದರೆ ಒಬ್ಬರಿಗೆ ಹಾಕುವುದು, ಇನ್ನೊಬ್ಬರಿಗೆ ಬಿಡುವುದಂತಾಗಿ ತಾಪತ್ರಯವಾಗುತ್ತದೆ. ಆದರಿಂದ ಪಾರ್ಟಿ ಪಾಲಿಟಿಕ್ಸ್ ಬರುವುದಕ್ಕೆ ಶುರುವಾಗುತ್ತದೆ. ಈಗ ಹಶ್ಮಿಯವರು ಆ ಭಾಗದಿಂದ ಬಂದಿದ್ದಾರೆ. ಅವರನ್ನು ಹಾಕಿಲ್ಲ ಅವರು ತಮ್ಮ ಹೆಸರನ್ನು ಹಾಕಲು ಕೇಳುತ್ತಿದ್ದಾರೆ. ಇನ್ನೊಬ್ಬರೂ ಕೂಡ ಹಾಗೆ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಆ ಪ್ರದೇಶದ ವ್ಯಕ್ತಿಯನ್ನು ಬಿಟ್ಟು.....

ಶ್ರೀ ಸೈಯದ್ ಜುಲ್ಫಿಕರ್ ಹಶ್ಮಿ : ಮಾನ್ಯ ಅಧ್ಯಕ್ಷರೆ, ನಾನೂ ಕೂಡ ಆ ಭಾಗದಿಂದ ಬಂದಿದ್ದೇನೆ. ನನ್ನ ಹೆಸರು ಹಾಕಿಲ್ಲ. ನನ್ನ ಹೆಸರನ್ನು ಹಾಕಿ.

ಉಪಾಧ್ಯಕ್ಷರು : ಅಧ್ಯಕ್ಷರ ಕೊಠಡಿಯೊಳಗೆ ಅಧ್ಯಕ್ಷರು ವಿರೋಧ ಪಕ್ಷದ ನಾಯಕರ ಹಾಗೂ ಎಲ್ಲರ ಒಪ್ಪಿಗೆ ಪಡೆದುಕೊಂಡನಂತರ ಆ ಕೆಲಸವನ್ನು ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಆ ಪ್ರದೇಶದಲ್ಲಿರವವರನ್ನು ಕೈ ಬಿಡುವುದು ಸರಿಯಲ್ಲ. ಆದಕಾರಣ ಶ್ರೀ ಹಶ್ಮಿಯವರ ಹೆಸರನ್ನು ಸೇರಿಸಬೇಕು.

ಉಪಾಧ್ಯಕ್ಷರು : ಸರ್ಕಾರದ ಪರವಾಗಿ ಏನು ಹೇಳುತ್ತಾರೆ ನೋಡೋಣ.

ಶ್ರೀ ಸಿದ್ಧರಾಮಯ್ಯ : ಜಂಟಿ ಸದನ ಸಮಿತಿ ಮಾಡುವಾಗ ಸಭಾಧ್ಯಕ್ಷರು, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸನ್ಮಾನ್ಯ ಯಡಿಯೂರಪ್ಪನವರಿಗೆ ಕರೆದು ಅವರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ನಿಲುವು ಏನು ತೆಗೆದುಕೊಂಡಿದ್ದಾರೆ ಎಂದರೆ.....

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುತ್ತೇನೆ, ಯಾರ ಜೊತೆ ಬೇಕಾದರೂ ಮಾಡಿಕೊಳ್ಳಲಿ, ಆ ಪ್ರದೇಶದಿಂದ ಬಂದಿರತಕ್ಕಂಥ ವ್ಯಕ್ತಿಯನ್ನು ನೀವು ಕೈಬಿಟ್ಟು ಇದೇನು? ಈ ಸಮಿತಿಗೆ ಖಂಡ್ರೆಯನ್ನು ಮತ್ತು ಜುಲ್ಫಿಕರ್ ಹಶ್ಮಿರವರನ್ನು ಸೇರಿಸಬೇಕು.

ಶ್ರೀ ಸಿದ್ಧರಾಮಯ್ಯ : ಆ ಪ್ರದೇಶದ ವ್ಯಕ್ತಿಯನ್ನು ಹಾಕಬಾರದು ಎಂದು ಒಂದು ಸಲಹೆ. ಹಾಗಾಗಿ ಇಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಬಿ.ಜೆ.ಪಿ. ಯಿಂದ ಇವರ ಹೆಸರುಗಳನ್ನು ಕೊಟ್ಟಿದ್ದಾರೆ. ಅವರು ಜಗದೀಶ್ ಶೆಟ್ಟರ್ ಮತ್ತು ರೇವು ನಾಯಕ್. ಈ ಎರಡು ಹೆಸರುಗಳನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ಸ್‌ನವರು ಮೂರು ಹೆಸರುಗಳನ್ನು ಕೊಟ್ಟಿದ್ದಾರೆ. ಅವು ಡಿ. ಆರ್. ಪಾಟೀಲ್, ಸಗೀರ್ ಅಹಮದ್ ಹಾಗೂ ಕಾಗೋಡು ತಿಮ್ಮಪ್ಪ. ಇಂಡಿಪೆಂಡನ್ಸ್ ಇದ್ದಾರೆ. ಇವರೆಲ್ಲಾ ಸೇರಿ ಒಟ್ಟು 15 ಜನರ ಸಮಿತಿಯಾಗಿದೆ. ರೇವು ನಾಯಕ್‌ರವರನ್ನು ಏಕೆ ಹಾಕಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಸನ್ಮಾನ್ಯ ಯಡಿಯೂರಪ್ಪನವರ ಜೊತೆ ಮಾತನಾಡುತ್ತೇವೆ.

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು) : ಮಾನ್ಯ ಉಪಾಧ್ಯಕ್ಷರೇ, ''ರಾಜ್ಯಾದ್ಯಂತ ಸಕಾಲಕ್ಕೆ ಮಳೆ ಬಾರದ ಕಾರಣದಿಂದ ಕಳಪೆ ಗುಣಮಟ್ಟದ ಬೀಜಗಳು ಹಾಗೂ ಕ್ರಿಮಿಕೀಟನಾಶಕ ಔಷಧಿಗಳನ್ನು ಉಪಯೋಗಿಸಿದ್ದರಿಂದ ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಕ್ಕೆ ಗುರಿಯಾಗಿರುವುದರಿಂದ ರೈತ ಸಮುದಾಯವು ಅಸಹಾಯಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿ ಕೊಂಡಿರುವ ವರದಿಯು ದಿನಪತ್ರಿಕೆಗಳಲ್ಲಿ ಪ್ರಚುರಗೊಂಡು ಸದನದಲ್ಲಿ ಪ್ರಸ್ತಾಪವಾಗಿ ಈ ವಿಷಯಕ್ಕೆ ಸವಿವರವಾದ ವರದಿಯನ್ನು ಸಲ್ಲಿಸಲು ವಿಧಾನಸಭೆಯು 15 ಸದಸ್ಯರುಗಳು ಹಾಗೂ ವಿಧಾನಪರಿಷತ್ತಿನ 5 ಸದಸ್ಯರುಗಳು ಇರುವ ಜಂಟಿ ಸದನ ಸಮಿತಿಗೆ ವಿಧಾನಪರಿಷತ್ತಿನ ಒಪ್ಪಿಗೆ ಪಡೆಯುವ ಪ್ರಸ್ತಾಪವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, ''ರಾಜ್ಯಾದ್ಯಂತ ಸಕಾಲಕ್ಕೆ ಮಳೆ ಬಾರದ ಕಾರಣದಿಂದ ಕಳಪೆ ಗುಣಪಟ್ಟದ ಬೀಜಗಳು ಹಾಗೂ ಕ್ರಿಮಿಕೀಟನಾಶಕ ಔಷಧಿಗಳನ್ನು ಉಪಯೋಗಿಸಿದ್ದರಿಂದ ತೀವ್ರ ಆರ್ಥಿಕ ಮತ್ತು ಮಾನಸಿಕ ಸಂಕಷ್ಟಕ್ಕೆ ಗುರಿಯಾಗಿರುವುದರಿಂದ ರೈತ ಸಮುದಾಯವು ಅಸಹಾಯಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ವರದಿಯು ದಿನಪತ್ರಿಕೆಗಳಲ್ಲಿ ಪ್ರಚಾರಗೊಂಡು ಸದನದಲ್ಲಿ ಪ್ರಸ್ತಾಪವಾಗಿ ಈ ವಿಷಯಕ್ಕೆ ಸವಿವರವಾದ ವರದಿಯನ್ನು ಸಲ್ಲಿಸಲು ವಿಧಾನಸಭೆಯ 15 ಸದಸ್ಯರುಗಳು ಹಾಗೂ ವಿಧಾನಪರಿಷತ್ತಿನ 5 ಸದಸ್ಯರುಗಳು ಇರುವ ಜಂಟಿ ಸದನ ಸಮಿತಿಗೆ ವಿಧಾನಪರಿಷತ್ತಿನ ಒಪ್ಪಿಗೆ ಪಡೆಯುವ ಪ್ರಸ್ತಾವವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಉಪಾಧ್ಯಕ್ಷರು : ಈಗ ಸದನವನ್ನು ನಾಳೆ ಬೆಳಗ್ಗೆ 10 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 7 ಗಂಟೆ 21 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ 26.3.98 ರಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

★ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅನುಬಂಧ - 1

ಕರ್ನಾಟಕ ವಿಧಾನಸಭೆ

ಹತ್ತನೆಯ ವಿಧಾನಸಭೆ

(ಏಳನೇ ಅಧಿವೇಶನ)

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ವಿಧೇಯಕ, 1998

(1998ರ ವಿಧಾನಸಭಾ ವಿಧೇಯಕ ಸಂಖ್ಯೆ 4)

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ ಅಧಿನಿಯಮ) ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ನ್ನು (1959ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1 ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :

(1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ), ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು 1997ರ ಅಕ್ಟೋಬರ್ ಇಪ್ಪತ್ತನಾಲ್ಕನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 4ನೇ ಪ್ರಕರಣದ ತಿದ್ದುಪಡಿ: ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959 (1959ರ ಕರ್ನಾಟಕ ಅಧಿನಿಯಮ 14) 4ನೇ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ (11)ನೇ ಖಂಡದಲ್ಲಿ "ಐದು ಕಿಲೋವಾಟ್‌ಗಳು" ಎಂಬ ಪದಗಳಿಗೆ " ಹತ್ತು ಕಿಲೋವಾಟ್‌ಗಳು " ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ನಿರಸನ ಮತ್ತು ಉಳಿಸುವಿಕೆ : (1) ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ಅಧ್ಯಾದೇಶ, 1997ನ್ನು (1997ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 4) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ರ 4ನೇ ಪ್ರಕರಣವು ಪ್ರತಿಯೊಬ್ಬ ಲೈಸೆನ್ಸುದಾರನು, ಈ ಅಧಿನಿಯಮದ ಅಡಿಯಲ್ಲಿ ಸಂದಾಯವಾಗತಕ್ಕ ವಿದ್ಯುತ್ ತೆರಿಗೆಯನ್ನು ಸಂಗ್ರಹಿಸಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಬೇಕೆಂದು ಅಗತ್ಯಪಡಿಸುತ್ತದೆ. ಆದರೆ ಇದು 5 ಕಿಲೋವಾಟ್ ಸಾಮರ್ಥ್ಯವನ್ನು ಮೀರದ ಜನರೇಟರುಗಳ ಮೂಲಕ ಉತ್ಪಾದಿಸುವ ವಿದ್ಯುತ್ತಿನ ಬಳಕೆಗೆ ಅನ್ವಯಿಸುವುದಿಲ್ಲ.

ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ಕ್ಕೆ 47 ಎ ನಿಯಮವನ್ನು 1995ರಲ್ಲಿ ಸೇರಿಸಲಾಯಿತು. ಈ ನಿಯಮವು, 10ಕಿಲೋವಾಟ್‌ಗಳಿಗಿಂತಲೂ ಹೆಚ್ಚು ಸಾಮರ್ಥ್ಯವುಳ್ಳ ಜನರೇಟಿಂಗ್ ಸ್ಥಾವರವನ್ನು ಪ್ರಾರಂಭಿಸುವುದಕ್ಕೆ ಮೊದಲು ಪ್ರತಿಯೊಬ್ಬ ಬಳಕೆದಾರ ಅಥವಾ ಅನುಭವದಾರನು ಇನ್ಸ್‌ಪೆಕ್ಟರ್‌ನ ಲಿಖಿತ ಅನುಮೋದನೆಯನ್ನು ಪಡೆಯತಕ್ಕದ್ದೆಂದು ಅಗತ್ಯಪಡಿಸುತ್ತದೆ.

ಭಾರತ ವಿದ್ಯುಚ್ಛಕ್ತಿ ನಿಯಮಗಳಿಗೆ ಮೇಲೆ ಹೇಳಿದ ತಿದ್ದುಪಡಿಯಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಪ್ರಸಕ್ತ ಮಿತಿಯನ್ನು 5ಕಿಲೋವಾಟ್‌ಗಳಿಂದ 10 ಕಿಲೋವಾಟ್‌ಗಳಿಗೆ ಹೆಚ್ಚಿಸುವುದು ಅಗತ್ಯವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ ಮೇಲಿನ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ಅಧ್ಯಾದೇಶ 1997ನ್ನು ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಿಗೆ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ವ್ಯವಹಾರ ನಿರ್ವಹಣಾ ನಿಯಮಗಳ 80 ನೇ ನಿಯಮದ (1)ನೇ ಉಪ-ನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ರ 4ನೇ ಪ್ರಕರಣವು, ಪ್ರತಿಯೊಬ್ಬ ಲೈಸೆನ್ಸುದಾರನು, ಈ ಅಧಿನಿಯಮದ ಅಡಿಯಲ್ಲಿ ಸಂದಾಯವಾಗತಕ್ಕ ವಿದ್ಯುತ್ ತೆರಿಗೆಯನ್ನು ಸಂಗ್ರಹಿಸಿ ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡಬೇಕೆಂದು ಅಗತ್ಯಪಡಿಸುತ್ತದೆ. ಆದರೆ ಇದು 5 ಕಿಲೋವಾಟ್ ಸಾಮರ್ಥ್ಯವನ್ನು ಮೀರದ ಜನರೇಟರುಗಳ ಮೂಲಕ ಉತ್ಪಾದಿಸುವ ವಿದ್ಯುತ್ತಿನ ಬಳಕೆಗೆ ಅನ್ವಯಿಸುವುದಿಲ್ಲ.

ಭಾರತ ವಿದ್ಯುಚ್ಛಕ್ತಿ ನಿಯಮಗಳು, 1956ಕ್ಕೆ 1995ರಲ್ಲಿ 47 ಎ ನಿಯಮವನ್ನು ಸೇರಿಸಲಾಯಿತು. ಈ ನಿಯಮವು, 10 ಕಿಲೋವಾಟ್‌ಗಳಿಗಿಂತಲೂ ಹೆಚ್ಚು ಸಾಮರ್ಥ್ಯವುಳ್ಳ ಜನರೇಟಿಂಗ್ ಸ್ಥಾವರವನ್ನು

ಪ್ರಾರಂಭಿಸುವುದಕ್ಕೆ ಮೊದಲು ಪ್ರತಿಯೊಬ್ಬ ಬಳಕೆದಾರ ಅಥವಾ ಅನುಭವದಾರನು ಇನ್ಸ್‌ಪೆಕ್ಟರನ ಲಿಖಿತ ಅನುಮೋದನೆಯನ್ನು ಪಡೆಯತಕ್ಕದ್ದೆಂದು ಅಗತ್ಯಪಡಿಸುತ್ತದೆ.

ಭಾರತ ವಿದ್ಯುಚ್ಛಕ್ತಿ ನಿಯಮಗಳಿಗೆ ಮೇಲೆ ಹೇಳಿದ ತಿದ್ದುಪಡಿಯಾಗಿರುವುದನ್ನು ಗಮನದಲ್ಲಿಟ್ಟುಕೊಂಡು, ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ರ 4ನೇ ಪ್ರಕರಣವನ್ನು ತಿದ್ದುಪಡಿ ಮಾಡುವ ಮೂಲಕ ಪ್ರಸಕ್ತ ಮಿತಿಯನ್ನು 5 ಕಿಲೋವಾಟ್‌ಗಳಿಂದ 10 ಕಿಲೋವಾಟ್‌ಗಳಿಗೆ ಹೆಚ್ಚಿಸುವ ಅಗತ್ಯವೆಂದು ಪರಿಗಣಿಸಲಾಯಿತು.

ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿಲ್ಲದಿದ್ದುದರಿಂದ ಮೇಲಿನ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) (ತಿದ್ದುಪಡಿ) ಅಧ್ಯಾದೇಶ, 1997ನ್ನು ಪ್ರಖ್ಯಾಪಿಸಲಾಯಿತು.

ಜೆ. ಎಚ್. ಪಟೇಲ್
ಮುಖ್ಯಮಂತ್ರಿ

ಯಾಕೂಬ್ ಷರೀಪ್
ಕಾರ್ಯದರ್ಶಿ

ಅನುಬಂಧ

ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆಯ ಮೇಲೆ ತೆರಿಗೆ ವಿಧಿಸುವ) ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

4. ವಿದ್ಯುತ್ ತೆರಿಗೆಯ ಸಂದಾಯ :- (1)

(2) ★★★ ★★ ★★★

(3) ★★★ ★★ ★★★

(4) ★★★ ★★ ★★★

(5) ಈ ಪ್ರಕರಣದಲ್ಲಿರುವುದಾವುದೂ, -

(ಅ) ವಾಹನಗಳ ಅಥವಾ ನೌಕೆಗಳ ಬಳಕೆಗಾಗಿ ಸರಬರಾಜು ಮಾಡುವ ಉದ್ದೇಶಕ್ಕಾಗಿ ವಿದ್ಯುತ್ತನ್ನು ಉತ್ಪಾದಿಸುವ ಯಾವನೇ ವ್ಯಕ್ತಿಗೆ;

(ಆ) ಐದು ಕಿಲೋವಾಟ್ ಸಾಮರ್ಥ್ಯವನ್ನು ಮೀರದ ಜನರೇಟರುಗಳ ಮೂಲಕ ಉತ್ಪಾದಿಸಲಾದ ವಿದ್ಯುತ್ತಿನ ಬಳಕೆಗೆ,

- ಅನ್ವಯವಾಗತಕ್ಕದ್ದಲ್ಲ,

ಅನುಬಂಧ - 2

ಕರ್ನಾಟಕ ವಿಧಾನ ಸಭೆ

ಹತ್ತನೆಯ ವಿಧಾನ ಸಭೆ (ಏಳನೇ ಅಧಿವೇಶನ)

ಕರ್ನಾಟಕ ಅಬ್ಕಾರಿ (ತಿದ್ದುಪಡಿ) ವಿಧೇಯಕ 1998

(1998ರ ವಿಧಾನ ಸಭಾ ವಿಧೇಯಕ ಸಂಖ್ಯೆ 5)

ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಕ್ಕಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು (1966ರ ಕರ್ನಾಟಕ ಅಧಿನಿಯಮ 21) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : (1) ಈ ಅಧಿನಿಯಮವನ್ನು ಕರ್ನಾಟಕ ಅಬ್ಕಾರಿ (ತಿದ್ದುಪಡಿ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು ಕೂಡಲೇ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ : (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21), 2ನೇ ಪ್ರಕರಣದಲ್ಲಿ,-

(1) (10)ನೇ ಖಂಡದಲ್ಲಿ, ''ಅಬ್ಕಾರಿ ಆಯುಕ್ತರು'' ಎಂಬ ಪದಗಳ ತರುವಾಯ '' ಒಬ್ಬ ಅಬ್ಕಾರಿ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು.

(2) (17)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ :-

''(17ಎ) '' ಅಬ್ಕಾರಿ ಜಂಟಿ ಆಯುಕ್ತರು'' ಎಂದರೆ 4 ಎ ಪ್ರಕರಣದ ಅಡಿಯಲ್ಲಿ ನೇಮಕಮಾಡಲಾದ ಅಬ್ಕಾರಿ ಜಂಟಿ ಆಯುಕ್ತರು''.

3. 4 ಎ ಪ್ರಕರಣದ ತಿದ್ದುಪಡಿ - ಮೂಲ ಅಧಿನಿಯಮದ 4 ಎ ಪ್ರಕರಣದಲ್ಲಿ, - (ಅ) ಶೀರ್ಷಿಕೆಯಲ್ಲಿ, ''ಅಬ್ಕಾರಿ ಉಪ ಆಯುಕ್ತರು'' ಎಂಬ ಪದಗಳಿಗೆ ''ಅಬ್ಕಾರಿ ಜಂಟಿ ಆಯುಕ್ತರು ಮತ್ತು ಅಬ್ಕಾರಿ ಉಪ ಆಯುಕ್ತರು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಆ) (1)ನೇ ಉಪ-ಪ್ರಕರಣದಲ್ಲಿ ''ಅಬ್ಕಾರಿ ಉಪ ಆಯುಕ್ತರುಗಳನ್ನು '' ಎಂಬ ಪದಗಳಿಗೆ ''ಅಬ್ಕಾರಿ ಜಂಟಿ ಆಯುಕ್ತರುಗಳು ಅಥವಾ ಅಬ್ಕಾರಿ ಉಪ- ಆಯುಕ್ತರುಗಳನ್ನು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಇ) (2) ಮತ್ತು (3) ನೇ ಉಪ-ಪ್ರಕರಣಗಳಲ್ಲಿ '' ಒಬ್ಬ ಅಬ್ಕಾರಿ ಉಪ ಆಯುಕ್ತರು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ '' ಒಬ್ಬ ಅಬ್ಕಾರಿ ಜಂಟಿ ಆಯುಕ್ತರು ಅಥವಾ ಒಬ್ಬ ಅಬ್ಬಾರಿ ಉಪ ಆಯುಕ್ತರು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 5 ಎ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 5 ಎ ಪ್ರಕರಣದಲ್ಲಿ '' ಒಬ್ಬ ಅಬ್ಕಾರಿ ಉಪ ಆಯುಕ್ತರು'' ಎಂಬ ಪದಗಳಿಗೆ ''ಅಬ್ಕಾರಿ ಜಂಟಿ ಆಯುಕ್ತರು ಅಥವಾ ಒಬ್ಬ ಅಬ್ಕಾರಿ ಉಪ ಆಯುಕ್ತರು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

5. 6ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 6ನೇ ಪ್ರಕರಣದ (4)ನೇ ಉಪ ಪ್ರಕರಣದಲ್ಲಿ ''ಅಬ್ಕಾರಿ ಆಯುಕ್ತರಿಗೆ'' ಎಂಬ ಪದಗಳ ತರುವಾಯ ''ಅಥವಾ ಅಬ್ಕಾರಿ ಜಂಟಿ ಆಯುಕ್ತರಿಗೆ ಎಂಬ ಪದಗಳನ್ನು ಸೇರಿಸತಕ್ಕದ್ದು.

6. 7ನೇ ಪ್ರಕರಣದ ತಿದ್ದುಪಡಿ : ಮೂಲ ಅಧಿನಿಯಮದ 7ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ, ''ಅಬ್ಕಾರಿ ಆಯುಕ್ತರಿಗೆ'' ಎಂಬ ಪದಗಳ ತರುವಾಯ ''ಅಥವಾ ಅಬ್ಕಾರಿ ಜಂಟಿ ಆಯುಕ್ತರಿಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು.

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

ಅಬ್ಕಾರಿ ಉಪ-ಆಯುಕ್ತರ ಕೆಲವು ಹುದ್ದೆಗಳನ್ನು ಇತ್ತೀಚೆಗೆ ಅಬ್ಕಾರಿ ಜಂಟಿ ಆಯುಕ್ತರ ಹುದ್ದೆಗೆ ಪದೋನ್ನತಿಗೊಳಿಸಲಾಗಿದೆ. ಅಬ್ಕಾರಿ ಜಂಟಿ ಆಯುಕ್ತರು ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸಬೇಕಾಗಿದೆ. ಆದರೆ ''ಅಬ್ಕಾರಿ ಅಧಿಕಾರಿ'' ಎಂಬುದರ ಪರಿಭಾಷೆಯ ಅಬ್ಕಾರಿ ಜಂಟಿ ಆಯುಕ್ತರನ್ನು ಒಳಗೊಂಡಿಲ್ಲ, ''ಅಬ್ಕಾರಿ ಜಂಟಿ ಆಯುಕ್ತರು'' ಎಂಬ ಪದ ಸಮೂಹವನ್ನು ಸಹ ಅಧಿನಿಯಮದಲ್ಲಿ ಪರಿಭಾಷಿಸಿಲ್ಲ. ಆದ್ದರಿಂದ ಈ ಮುಂದಿನವುಗಳಿಗಾಗಿ ಕರ್ನಾಟಕ ಅಬ್ಕಾರಿ ಅಧಿನಿಯಮ, 1965ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ:-

(ಅ) ''ಅಬ್ಕಾರಿ ಜಂಟಿ ಆಯುಕ್ತರು'' ಎಂಬ ಪದಸಮೂಹವನ್ನು ಪರಿಭಾಷಿಸುವುದು;

(ಆ) ಅಬ್ಕಾರಿ ಜಂಟಿ ಆಯುಕ್ತರನ್ನು ಅಬ್ಕಾರಿ ಅಧಿಕಾರಿಯ ಪರಿಭಾಷೆಯೊಳಗೆ ತರುವುದು ; ಮತ್ತು

(ಇ) ಅಬ್ಕಾರಿ ಜಂಟಿ ಆಯುಕ್ತರನ್ನು ಕೆಲವು ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸಲು ಸಮರ್ಥಗೊಳಿಸುವುದು.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಜೆ. ಹೆಚ್. ಪಟೇಲ್,
ಮುಖ್ಯಮಂತ್ರಿ

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಅಬ್ಕಾರಿ ಅಧಿನಿಯಮ, 1965ರ (1966ರ ಕರ್ನಾಟಕ ಅಧಿನಿಯಮ 21) ಉದ್ಧೃತ ಭಾಗ

2. ಪರಿಭಾಷೆಗಳು- ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಅನ್ಯಥಾ ಅಗತ್ಯವಿದ್ದ ಹೊರತು,-

(1)(10) ''ಅಬ್ಕಾರಿ ಅಧಿಕಾರಿ'' ಎಂದರೆ ಅಬ್ಕಾರಿ ಆಯುಕ್ತ, ಒಬ್ಬ ಜಿಲ್ಲಾಧಿಕಾರಿ, ಒಬ್ಬ ಅಬ್ಕಾರಿ ಉಪ-ಆಯುಕ್ತ ಅಥವಾ 5ನೇ ಪ್ರಕರಣ, 5 ಎ ಪ್ರಕರಣ ಅಥವಾ 6ನೇ ಪ್ರಕರಣದ ಅಡಿಯಲ್ಲಿ ಕಾನೂನುಬದ್ಧವಾಗಿ ನೇಮಕ ಮಾಡಲಾದ ಅಥವಾ ಅಧಿಕಾರಿಗಳನ್ನು ವಹಿಸಿಕೊಡಲಾದ ಯಾವೊಬ್ಬ ಅಧಿಕಾರಿ ಅಥವಾ ಇತರ ವ್ಯಕ್ತಿ;

4 ಎ. ಅಬ್ಕಾರಿ ಉಪ ಆಯುಕ್ತ - (1) ರಾಜ್ಯ ಸರ್ಕಾರವು, ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶ ಅಥವಾ ಪ್ರದೇಶಗಳಿಗೆ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆ ಅಬ್ಕಾರಿಯ ಉಪ ಆಯುಕ್ತರನ್ನು ನೇಮಕ ಮಾಡಬಹುದು.

(2) (1) ನೇ ಉಪ-ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಬ್ಬ ಅಬ್ಕಾರಿ ಉಪ- ಆಯುಕ್ತನು, ಈ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಈ ಅಧಿನಿಯಮದ ಅಡಿಯಲ್ಲಿ ಒಬ್ಬ ಜಿಲ್ಲಾಧಿಕಾರಿಗೆ ಗೊತ್ತುಪಡಿಸಲಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಆ ತರುವಾಯ ಜಿಲ್ಲಾಧಿಕಾರಿಯು ಹಾಗೆ ನಿರ್ದಿಷ್ಟಪಡಿಸಲಾದ ಅಧಿಕಾರಗಳನ್ನು ಚಲಾಯಿಸಲು ಅಥವಾ ಕರ್ತವ್ಯಗಳು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕದ್ದಲ್ಲ.

(3) ಅಬ್ಕಾರಿ ಉಪ ಆಯುಕ್ತನು ಅಬ್ಕಾರಿ ಆಯುಕ್ತನಿಗೆ ಅಧೀನನಾಗಿರತಕ್ಕದ್ದು ಮತ್ತು ಅಬ್ಕಾರಿ ಆಯುಕ್ತನ ಮತ್ತು ರಾಜ್ಯ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

5 ಎ. ಜಾಗೃತ ದಳದ ರಚನೆ ಮತ್ತು ಅಬ್ಕಾರಿ ಸೂಪರಿಟೆಂಡೆಂಟರ ಮತ್ತು ಅಬ್ಕಾರಿ ಡೆಪ್ಯುಟಿ ಸೂಪರಿಟೆಂಡೆಂಟರ ನೇಮಕಾತಿ (ಜಾಗೃತ ದಳ) : (1) ಅಬ್ಕಾರಿ ಆಯುಕ್ತನು ಅಧ್ಯಕ್ಷನಾಗಿರುವ ಮತ್ತು ಒಬ್ಬ ಅಬ್ಕಾರಿ ಉಪ ಆಯುಕ್ತ ಹಾಗೂ ರಾಜ್ಯ ಸರ್ಕಾರವು (2)ನೇ ಉಪ ಆಯುಕ್ತ ಹಾಗೂ ರಾಜ್ಯ ಸರ್ಕಾರವು (2) ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕ ಮಾಡಬಹುದಾದಷ್ಟು ಸಂಖ್ಯೆಯ ಅಬ್ಕಾರಿ ಸೂಪರಿಟೆಂಡೆಂಟರು (ಜಾಗೃತ ದಳ) ಮತ್ತು ಅಬ್ಕಾರಿ ಡೆಪ್ಯುಟಿ ಸೂಪರಿಟೆಂಡೆಂಟರು (ಜಾಗೃತದಳ) ಮತ್ತು ಅಬ್ಕಾರಿ ಆಯುಕ್ತನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ನೇಮಕ ಮಾಡಬಹುದಾದಂಥ ಇತರ ಅಧಿಕಾರಿಗಳನ್ನು ಒಳಗೊಂಡ ಒಂದು ಜಾಗೃತ ದಳ ಇರತಕ್ಕದ್ದು.

6. ಅಬ್ಕಾರಿ ಇನ್ಸ್‌ಪೆಕ್ಟರುಗಳು, ಅಬ್ಕಾರಿ ಸಬ್- ಇನ್‌ಸ್ಪೆಕ್ಟರುಗಳು ಮತ್ತು ಇತರ ಅಧೀನ ಅಧಿಕಾರಿಗಳ ನೇಮಕಾತಿ : (1)

(4) ರಾಜ್ಯ ಸರ್ಕಾರವು, ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ ಸಂದರ್ಭಾನುಸಾರ ಅಬ್ಕಾರಿ ಆಯುಕ್ತನಿಗೆ, ಜಿಲ್ಲಾಧಿಕಾರಿಗೆ, ಅಬ್ಕಾರಿ ಸೂಪರಿಟೆಂಡೆಟನಿಗೆ ಅಥವಾ ಅಬ್ಕಾರಿ ಡೆಪ್ಯುಟಿ ಸೂಪರಿಟೆಂಡೆಂಟನಿಗೆ (1), (2) ಮತ್ತು (3)ನೇ ಉಪ-ಪ್ರಕರಣಗಳ ಅಡಿಯಲ್ಲಿ ತನ್ನ ಅಧಿಕಾರಿಗಳನ್ನು ಪ್ರತ್ಯಾಯೋಜಿಸಬಹುದು.

7. ಅಧಿಕಾರಿಗಳ ಪ್ರತ್ಯಾಯೋಜನೆ :- (1)

(2) ರಾಜ್ಯ ಸರ್ಕಾರವು, ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಬ್ಕಾರಿ ಆಯುಕ್ತನಿಗೆ ಅಥವಾ ಜಿಲ್ಲಾಧಿಕಾರಿಗೆ ಪ್ರದತ್ತವಾಗಿರುವ ಯಾವುವೇ ಅಧಿಕಾರಗಳನ್ನು ಯಾರೇ ಅಬ್ಕಾರಿ ಅಧಿಕಾರಿಗೆ ಪ್ರತ್ಯಾಯೋಜಿಸಬಹುದು.

ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಮಾರ್ಚ್1998ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ: 10- 10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು

1) ಸಂತಾಪ ಸೂಚನೆ

ಅಧ್ಯಕ್ಷರು :- ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ನಿಧನರಾದುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

ಮಾಜಿ ಶಾಸಕರಾದ ಶ್ರೀ ವಿ. ಎನ್. ಪಾಟೀಲ್ ಅವರು ದಿನಾಂಕ 13ನೇ ಮಾರ್ಚ್ 1927 ರಂದು ಬೀದರ್ ಜಿಲ್ಲೆ, ಹುಮ್ನಾಬಾದ್ ತಾಲ್ಲೂಕ್, ಮೀನ್‌ಕೇರಿ ಎಂಬಲ್ಲಿ ಜನಿಸಿದರು. ಶ್ರೀಯುತರು ಹುಮ್ನಾಬಾದ್ ವಿಧಾನಸಭಾ ಕ್ಷೇತ್ರವನ್ನು 4ನೇ ಮತ್ತು 5ನೇ ವಿಧಾನ ಸಭೆಯನ್ನು ಪ್ರತಿನಿಧಿಸಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಇವರು ಬೀದರ್ ಜಿಲ್ಲೆಯ ಏಕೈಕ ಕಮ್ಯುನಿಸ್ಟ್ ಪಕ್ಷದ ಸದಸ್ಯರಾಗಿದ್ದವರು. 1946-48 ರಲ್ಲಿ ರಜಾಕರ್ ಮೂವ್‌ಮೆಂಟನ್ನು ವಿರೋದಿಸಿದ್ದ ಇವರು ಹೈದರಾಬಾದ್ ರಾಜ್ಯವನ್ನು ವಿಭಜಿಸಿ ಹೈದರಾಬಾದ್ -ಕರ್ನಾಟಕ ಪ್ರಾಂತ್ಯವನ್ನು ರಚಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಶ್ರೀಯುತರು ತಮ್ಮ 70ನೇ ವಯಸ್ಸಿನಲ್ಲಿ ತಮ್ಮ ಸ್ವಗ್ರಾಮವಾದ ಮೀನ್‌ಕೇರಿಯಲ್ಲಿ ದಿನಾಂಕ 24.3.98 ರಂದು ನಿಧನರಾದರು. ಆದ್ದರಿಂದ ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೌನವನ್ನು ಆಚರಿಸಿದ ನಂತರ)

ಅಧ್ಯಕ್ಷರು :- ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

2. ವಿತ್ತೀಯ ಕಾರ್ಯಕಲಾಪ

1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ (ಮುಂದುವರೆದುದು)

★ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :- ಮಾನ್ಯ ಅಧ್ಯಕ್ಷರೆ, 4ನೇ ವರ್ಷದಲ್ಲಿ ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯದ ಬಡ್ಜೆಟ್ ಅನ್ನು ಇಟ್ಟಿದ್ದಾರೆ. ಆಯವ್ಯಯವನ್ನು ಮಂಡಿಸುವಾಗ ಸಾಮಾನ್ಯವಾಗಿ ಸರಕಾರ ಒಂದು ನಿರ್ದಿಷ್ಟವಾದಂತಹ ಗುರಿ ಇಟ್ಟು ಆಯವ್ಯಯವನ್ನು ಮಂಡಿಸುತ್ತದೆ. ಆದರೆ, ಮಾನ್ಯ ಸಿದ್ಧರಾಮಯ್ಯನವರು ಮಂಡಿಸಿರತಕ್ಕಂತಹ 1998-99ನೇ ಆಯವ್ಯಯದಲ್ಲಿ ಯಾವುದೇ ಒಂದು ಗೊತ್ತು ಗುರಿ ಇದೆ ಎಂದು ನನಗೆ ಅನ್ನಿಸುತ್ತಿಲ್ಲ. ಗೊತ್ತು ಗುರಿ ಇಲ್ಲದೇ ಇರತಕ್ಕಂತಹ ಬಡ್ಜೆಟ್ಟನ್ನು ಮಂಡಿಸಿ ಈ ರಾಜ್ಯವನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕೆಂದು ಹೊರಟಿದ್ದಾರೆಂದು - ಹೇಳತಕ್ಕಂಥಾದ್ದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರಂತಹ ಹಣಕಾಸು ಮಂತ್ರಿಗಳು ಈ ರಾಜ್ಯದಲ್ಲಿನ ಸಮಸ್ಯೆಗಳ ಬಗ್ಗೆ ರಾಜ್ಯದ ಆರ್ಥಿಕ ಬೆಳವಣಿಗೆ ಮತ್ತು ಈ ರಾಜ್ಯದ ಅಭಿವೃದ್ಧಿ ಬಗ್ಗೆ

ಪ್ರಾಮಾಣಿಕವಾದಂತಹ ಕಾಳಜಿ ಹೊಂದಿರುತ್ತಾರೆಂದು ನಾನು ಭಾವಿಸಿದ್ದೆ. ಇಂತಹ ಕಾಳಜಿ ಇರತಕ್ಕಂತಹ ಮಾನ್ಯ ಸಿದ್ಧರಾಮಯ್ಯನವರು ಏಕೆ ಈ ರೀತಿಯಾಗಿ ಬಡ್ಜೆಟ್ ಇಟ್ಟಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಯಾವುದೇ ಒಂದು ರಾಜಕೀಯ ಪಕ್ಷವು ಸರಕಾರ ನಡೆಸುತ್ತದೆ ಆ ರೀತಿ ನಡೆಸತಕ್ಕಂತಹ ರಾಜಕೀಯ ಪಕ್ಷಕ್ಕೆ ತನ್ನದೇ ಆದಂತಹ ಗೊತ್ತು ಗುರಿಯನ್ನು ಇಟ್ಟು ಬಡ್ಜೆಟ್ಟನ್ನು ಮಂಡಿಸುವಾಗ ರಾಜಕೀಯ ಉದ್ದೇಶ ಇರುತ್ತದೆ. ಇದನ್ನು ಯಾರೂ ಅಲ್ಲಗೆಳೆಯಲಿಕ್ಕೆ ಸಾಧ್ಯವಿಲ್ಲ. It is the right of every political party to have its own interest on the budget but no political party has a right to dismantle growth and the state's economy. ಬಡ್ಜೆಟ್ಟಿನಲ್ಲಿ ಅವರ ರಾಜಕೀಯ ಉದ್ದೇಶ ಇರಬೇಕಾಗುತ್ತದೆ. ಆದರೆ ಈ ರಾಜ್ಯದ ಆರ್ಥಿಕ ಅಭಿವೃದ್ಧಿ ಬೆಳವಣಿಗೆಯನ್ನು ಕುಂಠಿತಗೊಳಿಸತಕ್ಕಂತಹ ಅಥವಾ ಅದನ್ನು ಸಂಪೂರ್ಣವಾಗಿ ಹಾಳು ಗೆಡುವತಕ್ಕಂತಹ ಯಾವುದೇ ಉದ್ದೇಶ ಬಡ್ಜೆಟ್ಟಿನಲ್ಲಿ ಇಡಲಿಕ್ಕೆ ಯಾವುದೇ ಸರಕಾರಕ್ಕೆ ಹಕ್ಕು ಇಲ್ಲ. Every political party will have their own political interest on the budget. That is their right. We agree. But no political party and Government should have a right to dismantle the growth of the State's economy. ಇದನ್ನು ಏಕೆ ಹೇಳುತ್ತಿದ್ದೇನೆಂದರೆ,

Mr. Speaker :- Can there be a political party whose ultimate intention would be to harm the economic growth of the State?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- Yes. Definitely. In this budget I am seeing it. ಏಕೆ ಎಂದು ನಾನು ಹೇಳುತ್ತೇನೆ. 9ನೇ ಪೇಜಿನಲ್ಲಿ ಇದೆ. ನಾನು ಒಂದು ಉದಾಹರಣೆ ಕೊಡುತ್ತೇನೆ. ಡಿಸ್‌ಮ್ಯಾಂಟಿಲ್ ಮಾಡಲಿಕ್ಕೆ ಹೇಗೆ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ ಎಂದು ಉದಾಹರಣೆ ಕೊಡುತ್ತೇನೆ. 9ನೇ ಪೇಜಿನ 18ನೇ ಪ್ಯಾರದಲ್ಲಿ ಕರ್ನಾಟಕ ರಾಜ್ಯ ಹೊಂದಿರತಕ್ಕಂತಹ ಎಲ್ಲಾ ಕಾರ್ಖಾನೆಗಳಲ್ಲಿ ಹಾಕಿರತಕ್ಕಂತಹ ಬಂಡವಾಳವನ್ನು ಸಂಪೂರ್ಣವಾಗಿ ಅಥವಾ ವಾಪಸ್ ಪಡೆಯಬೇಕೆಂಬ ತೀರ್ಮಾನಕ್ಕೆ ನೀವು ಬಂದಿದ್ದೀರಿ. ಅದಕ್ಕೆ ನೀವು ಏನು ಕಾರಣ ಹೇಳುತ್ತೀರಿ ಎಂದರೆ 7ನೇ ಪುಟದಲ್ಲಿ ಹೀಗೆ ಹೇಳಿದ್ದೀರಿ. ಕಳೆದ ಆಯವ್ಯಯದಲ್ಲಿ ನಾನು ಬಳಕೆದಾರರ ವಸ್ತುವನ್ನು ಉತ್ಪಾದಿಸುವ ಸಾರ್ವಜನಿಕ ಉದ್ಯಮಗಳಲ್ಲಿನ ಸರಕಾರಿ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪ್ರಸ್ತಾಪಿಸಿದ್ದೆ. ಈ ನಿಟ್ಟಿನಲ್ಲಿ ನಾವು ಈಗಾಗಲೇ ಕಾರ್ಯಪ್ರವೃತ್ತರಾಗಿದ್ದು 1998-99ನೇ ಸಾಲಿನ ಕೆಲವು ಉದ್ದಿಮೆಗಳಲ್ಲಿನ ಬಂಡವಾಳವನ್ನು ಹಿಂತೆಗೆದುಕೊಳ್ಳುವ ಕಾರ್ಯ ಸಂಪೂರ್ಣ ಇಲ್ಲವೇ ಭಾಗಶ: ಈಡೇರಬಹುದೆಂದು ಭಾವಿಸುತ್ತೇನೆಂದು ಇಲ್ಲಿ ಇದೆ. ಒಂದು ರಾಜ್ಯದ ಆರ್ಥಿಕ ಬೆಳವಣಿಗೆಯಾಗಬೇಕು ಎಂದರೆ ಆರ್ಥಿಕ ಅಭಿವೃದ್ಧಿಯಾಗಬೇಕು. ಕೈಗಾರಿಕಾ ರಂಗದಲ್ಲಿ, ಕೃಷಿರಂಗದಲ್ಲಿ, ಅಭಿವೃದ್ಧಿಯಾಗಬೇಕಾಗುತ್ತದೆ. ಶಿಕ್ಷಣ ರಂಗದಲ್ಲಿ ಕೂಡ ಅಭಿವೃದ್ಧಿಯಾಗಬೇಕಾಗುತ್ತದೆ. ಎರಡು ಪ್ರಮುಖ ಅಂಶಗಳು ಈ ಅಭಿವೃದ್ಧಿಯಲ್ಲಿ ಇರುತ್ತದೆ. ಆರ್ಥಿಕಾಭಿವೃದ್ಧಿ ಇನ್ನೊಂದು ಮಾನವ ಸಂಪನ್ಮೂಲದ ಅಭಿವೃದ್ಧಿ ಆಗಬೇಕು. ಮಾನವ ಸಂಪನ್ಮೂಲದ ಅಭಿವೃದ್ಧಿ ಇಲ್ಲದೇ ಯಾವುದೇ ಒಂದು ರಾಜ್ಯ ಅಥವಾ ದೇಶ ಪ್ರಗತಿ ಹೊಂದಲಿಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಆರ್ಥಿಕ ಅಭಿವೃದ್ಧಿ ಹೊಂದಬೇಕಾದರೆ ಕೈಗಾರಿಕೆಗಳು ಬೆಳವಣಿಗೆಗಳು, ಉದ್ಯೋಗಾವಕಾಶಗಳು ಹೆಚ್ಚಾಗಬೇಕಾಗಿದೆ. ನಮ್ಮ ರಾಜ್ಯದ ಸಂಪತ್ತನ್ನು ಹೆಚ್ಚು ಕ್ರೋಢಿಕರಿಸಬೇಕಾಗುತ್ತದೆ. ಸಂಪನ್ಮೂಲಗಳನ್ನು ಹೆಚ್ಚಿಸುವುದರ ಮುಖಾಂತರ ರಾಜ್ಯದ ಅಭಿವೃದ್ಧಿಯನ್ನು

ಹೆಚ್ಚಿಸಬೇಕು, ಹಣಕಾಸು ಸ್ಥಿತಿಯನ್ನು ಉತ್ತಮಗೊಳಿಸಬೇಕಾಗುತ್ತದೆ. ಆಗ ನಿಜವಾಗಲೂ ಒಂದು ರಾಜ್ಯದ ಅಭಿವೃದ್ಧಿಯನ್ನು ಮಾಡಲಿಕ್ಕೆ ಸಾಧ್ಯ. ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಇರತಕ್ಕಂತಹ ದಾರಿ ನಿಮ್ಮ ಬಡ್ಜೆಟ್‌ನಲ್ಲಿ ಯಾವುದು ಇದೆ ಎಂದು ನೋಡಬೇಕಾಗುತ್ತದೆ. ನಿಮ್ಮ ಬಡ್ಜೆಟ್ ಉದ್ದಗಲಕ್ಕೂ ನೋಡುವಾಗ ನಾನು ಒಂದು ಕಡೆ ಎಂದು ಹೇಳುವುದಿಲ್ಲ. ವಿದೇಶೀ ಸಾಲಗಳು ವಿದೇಶಿ ನೆರವಿನ ಮೇಲೆ ಆಧಾರವಿಟ್ಟಿರತಕ್ಕಂಥಾದ್ದನ್ನು ಬಡ್ಜೆಟ್ಟಿನ ಉದ್ದಗಲಕ್ಕೂ ಕೂಡ ನೋಡುತ್ತಿದ್ದೇವೆ. ಸಣ್ಣ ವಿಷಯಕ್ಕೂ ಕೂಡ ವಿದೇಶಿ ಸಾಲ ವಿದೇಶೀ ನೆರವು ಎಂದು ಹೇಳತಕ್ಕಂತಹ ಪರಿಸ್ಥಿತಿ ಉಂಟಾದರೆ ಅದು ಈ ರಾಜ್ಯದ ಮೇಲೆ ಎಷ್ಟು ಕೆಟ್ಟ ಪರಿಣಾಮವಾಗುತ್ತದೆನ್ನುವುದನ್ನು ತಾವು ದಯವಿಟ್ಟು ಗಮನಿಸಬೇಕು. ತಾವು ಹೇಳತಕ್ಕಂತಹ ಕಾರಣವೇನು ಎಂದರೆ, ಅನುತ್ಪಾದಕವಾದಂತಹ ಘಟಕಗಳಲ್ಲಿ ಅನುತ್ಪಾದಕವಾದಂತಹ ವಲಯಗಳಲ್ಲಿ ನಾವು ಸರಕಾರ ಹಣ ಖರ್ಚು ಮಾಡುವುದರಲ್ಲಿ ಅರ್ಥ ಇಲ್ಲ ಪ್ರಯೋಜನ ಇಲ್ಲ ಎಂದು ಹೇಳುತ್ತಾರೆ. ಅನುತ್ಪಾದಕ ಎಂದು ಹೇಳತಕ್ಕಂತಹ ಪ್ರಶ್ನೆ ಬಂದಾಗ ಶಿಕ್ಷಣವೂ ಕೂಡ ನಿಮ್ಮ ಲೆಕ್ಕದಲ್ಲಿ ಅನುತ್ಪಾದಕ, ಇವೊತ್ತು ಕೃಷಿ ಮತ್ತು ಕೈಗಾರಿಕಾ ರಂಗದಲ್ಲಿ ರಾಜ್ಯ ತನ್ನದೇ ಆದ ಸ್ಥಾನವನ್ನು ಇಡೀ ದೇಶದಲ್ಲಿ ಮೊದಲ ರಾಜ್ಯವಾಗಿ ಪಡೆದಿತ್ತು. ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪನೆ ಮಾಡತಕ್ಕಂಥಾದ್ದು ಇಡೀ ದೇಶದಲ್ಲಿ ನಮ್ಮ ರಾಜ್ಯ ಮೊಟ್ಟ ಮೊದಲನೆಯದಾಗಿತ್ತು. ವಿಶ್ವೇಶ್ವರಯ್ಯನವರ ಕಾಲದಿಂದ ಸಾರ್ವಜನಿಕ ಉದ್ದಿಮೆಗಳನ್ನು ರಾಜ್ಯ ವಲಯವೇ ಸ್ಥಾಪಿಸಿದೆ. ಮೈಸೂರು ಲ್ಯಾಂಪ್ಸ್, ಸೋಪ್ ಫ್ಯಾಕ್ಟರಿ, ಸ್ಟೀಲ್ ಫ್ಯಾಕ್ಟರಿ ಇವೆಲ್ಲವೂ ಶ್ರೀಮಾನ್ ವಿಶ್ವೇಶ್ವರಯ್ಯನವರು ಸ್ಥಾಪಿಸಿದ್ದರು. ಆದರೆ ಇಂದು ಇವೆಲ್ಲವೂ ಮುಚ್ಚಿ ಹೋಗತಕ್ಕಂತಹ ಸ್ಥಿತಿಗೆ ತಂದು ಇಟ್ಟಿದ್ದೀರಿ. ಅದಕ್ಕೆ ಕಾರಣಗಳನ್ನು ನೀವು ಏನೇನು ಕೊಡುತ್ತಿದ್ದೀರಿ ಅವು ಯಾವುವೂ ಸಕಾರಣಗಳು ಅಲ್ಲ. ನಾನು ಆ ವಿಚಾರಕ್ಕೆ ಮತ್ತೆ ಬರುತ್ತೇನೆ. ಮೂಲಭೂತವಾಗಿ ಒಂದು ರಾಜ್ಯದ ಅಭಿವೃದ್ಧಿಯನ್ನು ನೀವು ಮಾಡಬೇಕು ಎಂದಾದರೆ ಮೊಟ್ಟ ಮೊದಲನೆಯದಾಗಿ ಆ ರಾಜ್ಯದ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚು ಮಾಡಬೇಕಾಗುತ್ತದೆ. ಅದನ್ನು ಹೆಚ್ಚು ಮಾಡತಕ್ಕಂಥ ಸಂದರ್ಭದಲ್ಲೇ ಯಾವ್ಯಾವ ವಲಯದಲ್ಲಿ ಹೆಚ್ಚು ಮಾಡಬೇಕೆಂಬುದನ್ನು ನೀವು ಹೇಳಬೇಕು. 196 ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ ಅನ್ನು ಕರ್ನಾಟಕದಲ್ಲಿ ಮಂಡಿಸಿದ್ದೀರಿ. ಈ ಡೆಫಿಸಿಟ್ ಬಡ್ಜೆಟ್ ನಿರಂತರವಾಗಿ ಹೋಗುತ್ತಿದೆ. ಸಾಮಾನ್ಯ ಜನರ ಬದುಕಿನ ಮೇಲೆ ನೇರವಾದಂತಹ ಪರಿಣಾಮ ಬೀರುತ್ತದೆ. ಅದರಲ್ಲೂ ಬೆಲೆ ಏರಿಕೆ ಪ್ರಶ್ನೆ ವಿಪರೀತವಾಗಿ ಬೆಳೆಯುತ್ತದೆ. ಅದಕ್ಕಿಂತ ಬಹಳ ಆತಂಕಕಾರಿಯಾದ ವಿಷಯ ಎಂದರೆ ರೆವಿನ್ಯೂ ಡೆಫಿಸಿಟ್ ರಾಜಸ್ವ ವರಮಾನ ಕಡಿಮೆಯಾಗುತ್ತಾ ಹೋಗುತ್ತದೆ. ನೀವು ಕಳೆದ 4 ವರ್ಷಗಳಿಂದ ಈಚೆಗೆ ಏನು ಬಡ್ಜೆಟ್ ಅನ್ನು ಮಂಡಿಸಿದ್ದೀರಿ ಅದರಲ್ಲಿ ಮೊದಲನೇ ವರ್ಷದಲ್ಲಿ 213.66 ಕೋಟಿ ರೆವಿನ್ಯೂ ಡೆಫಿಸಿಟ್ ಇದು 1995-96 ರಲ್ಲಿ ಇತ್ತು. 1996-97ರಲ್ಲಿ 135.91 ಆಯಿತು 1997-98ಕ್ಕೆ 199 ಕೋಟಿ ರೂಪಾಯಿ ಆಯಿತು 1998-99ಕ್ಕೆ 381 ಕೋಟಿ ರೆವಿನ್ಯೂ ಡೆಫಿಸಿಟ್ ಆಗಿದೆ ಇದು ಒಂದು ರೆಕಾರ್ಡ್ ಆಗಿದೆ. ಯಾವುದೇ ಒಂದು ರಾಜ್ಯದಲ್ಲಿ ರಾಜಸ್ವ ವರಮಾನ ಕಡಿಮೆಯಾಗುವುದು ಬಹಳ ಆತಂಕಕಾರಿ ಮತ್ತು ಅಪಾಯಕಾರಿಯಾದ ಸೂಚನೆ. ರೆವಿನ್ಯೂ ಡೆಫಿಸಿಟ್ ಅನ್ನು ಕಡಿಮೆ ಮಾಡುವುದಕ್ಕೇನು ಕ್ರಮ ತೆಗೆದುಕೊಂಡಿದ್ದೀರಿ. ಸಂಪನ್ಮೂಲವಿಲ್ಲವೆಂದು ಹೇಳುತ್ತೀರಿ. ಸಂಪನ್ಮೂಲಗಳು ಇಲ್ಲದೇ ಇರುವಂತಹ ಸಂದರ್ಭದಲ್ಲಿ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಎರಡು ವಿಧಾನಗಳು ಇವೆ. ಸೋರಿ ಹೋಗತಕ್ಕಂತಹ ಸಂಪನ್ಮೂಲಗಳನ್ನು ತಡೆಗಟ್ಟುವುದು ಹೇಗೆ, ಮತ್ತೊಂದು ಸಂಪನ್ಮೂಲಗಳನ್ನು ಹಲವಾರು ವಿಭಾಗಗಳಲ್ಲಿ ಹೆಚ್ಚಿಸಿಕೊಳ್ಳತಕ್ಕಂಥಹ ವಿಧಾನ ಹೇಗೆ ಎಂದು ವಿಚಾರ

ಮಾಡಬೇಕಾಗಿದೆ. ನಾನು 4 ಬಡ್ಜೆಟ್ ನೋಡಿದೆ. ಯಾವ ವಸ್ತುಗಳ ಮೇಲೆ ತೆರಿಗೆ ಹಾಕುತ್ತಿದ್ದೀರಿ ಮತ್ತೆ ಅದರ ಮೇಲೆ ತೆರಿಗೆ ಹಾಕುತ್ತಿದ್ದೀರಿ you have not applied your mind to expand tax base. ಅದನ್ನು ಸ್ವಲ್ಪ ವೈಡನ್ ಮಾಡಿ. ವೈಡನ್ ಮಾಡದೇ ಹೋದರೆ ಸಾಮಾನ್ಯ ಜನರ ಮೇಲೆ ಹಾಕತಕ್ಕ ಹೊರೆ ಒಬ್ಬರ ಮೇಲೆಯೇ ಆಗುತ್ತಿರುತ್ತದೆ. ಯಾವ ಸ್ಥಿತಿಗೆ ನೀವು ಬಂದು ತಲುಪಿದ್ದೀರಿ ಎಂದರೆ ಮೈದಾ ಏಟ್, ಇದರ ಮೇಲೆ ಕೂಡ 2 ಪರ್ಸೆಂಟ್ ತೆರಿಗೆ ಹಾಕಿದ್ದೀರಿ.

ಅಧ್ಯಕ್ಷರು:- ಡೈರೆಕ್ಟ್ ಅಂಡ್ ಇಂಡೈರೆಕ್ಟ್ ಟ್ಯಾಕ್ಸ್ ಕ್ಲಾಸಿಫಿಕೇಷನ್ ಮಾಡುತ್ತಿದ್ದೀರಿ?

ಶ್ರೀ ಜೆ.ಎ. ಶ್ರೀರಾಮರೆಡ್ಡಿ:- ....widening scope of tax.

ಶ್ರೀ ಸಿದ್ಧರಾಮಯ್ಯ:- ಒಂದು ಕಡೆ ಟ್ಯಾಕ್ಸ್ ಬೇಸ್ ಅನ್ನು ವಿಸ್ತಾರ ಮಾಡಬೇಕು ಎಂದರೆ ಯಾವುದು ಈಗ ತೆರಿಗೆಗೆ ಒಳಪಟ್ಟಿಲ್ಲವೋ ಅದನ್ನು ಒಳಪಡಿಸತಕ್ಕಂಥಾದ್ದು ವಿಸ್ತಾರ ಮಾಡತಕ್ಕಂಥಾದ್ದು. ಅದನ್ನು ಸೇರಿಸಿದರೆ ಇದನ್ನು ಹಾಕಿದಿರಿ ಎಂದು ಹೇಳುತ್ತಾರೆ. ಎಷ್ಟು ವಿರೋಧಾಭಾಸವಾದ ಆರ್ಗ್ಯುಮೆಂಟ್ ಮಾಡುತ್ತಾರೆ.

ಅಧ್ಯಕ್ಷರು:- ಅವರ ಅಭಿಪ್ರಾಯ ಭರಿಸಲಿಕ್ಕೆ ಶಕ್ತಿ ಇರತಕ್ಕಂತಹವರಿಗೆ ತೆರಿಗೆ ಹಾಕಿ ಎಂದು. ಯಾರಿಗೆ ಭರಿಸಲಿಕ್ಕೆ ಶಕ್ತಿ ಇಲ್ಲ ಅವರಿಗೆ ಅರಿವೇ ಇಲ್ಲದಂತೆ ಪರೋಕ್ಷವಾಗಿ ತೆರಿಗೆ ಬೀಳುತ್ತಿದೆ ಎಂದು ಅವರು ಹೇಳುತ್ತಿರುವುದು. ಅಲ್ಲವೇ?

ಶ್ರೀ ಸಿದ್ಧರಾಮಯ್ಯ:- ಹೌದು ಭರಿಸಲಿಕ್ಕೆ ಶಕ್ತಿ ಇರುವವರಿಗೆನೇ, ಅವರು ಟ್ಯಾಕ್ಸ್ ಬೇಸ್ ಎಕ್ಸ್‌ಟೆಂಡ್ ಆಗಬೇಕೆಂದು ಹೇಳುತ್ತಿದ್ದಾರೆ. ನಾವು ಎಕ್ಸೆಂಪ್ಷನ್ ಕೊಡುತ್ತಾ ಹೋದರೆ ಟ್ಯಾಕ್ಸ್ ಬೇಸ್ ಕಡಿಮೆಯಾಗುತ್ತದೆ. ತೆರಿಗೆಗಳನ್ನು ಇರತಕ್ಕಂತಹ ಪದಾರ್ಥಗಳ ಮೇಲೆಯೇ ಹೆಚ್ಚು ಮಾಡುವುದಕ್ಕಾಗುವುದಿಲ್ಲ. ಟ್ಯಾಕ್ಸ್ ಬೇಸನ್ನು ಹೆಚ್ಚು ಮಾಡಬೇಕು ಎಂದರೆ ಎಲ್ಲೆಲ್ಲಿ ಎಕ್ಸೆಂಪ್ಷನ್ ಕೊಟ್ಟಿದ್ದೇವೆ ಅದನ್ನು ಮತ್ತೆ ಟ್ಯಾಕ್ಸ್ ಡಿವಿಜನ್ ಒಳಗೆ ತರಬೇಕಾಗುತ್ತದೆ. ಆ ರೀತಿ ತರುವಾಗ ಬಡವರ ಮೇಲೆ ಇದರಿಂದ ಹೊರೆಯಾಗುತ್ತದೆಯೇ ಎಂದು ನೋಡಿಕೊಂಡು ಮಾಡಬೇಕಾಗುತ್ತದೆ. ಆ ಕೆಲಸ ನಾವು ಮಾಡಿದ್ದೇವೆ.

ಶ್ರೀ ಜೆ.ಎ. ಶ್ರೀರಾಮರೆಡ್ಡಿ:- ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡುವುದು ಹೇಗೆ ಎಂಬುದಕ್ಕೆ ನಾನೊಂದು ಉದಾಹರಣೆ ಕೊಡುತ್ತೇನೆ. ನರ್ಸಿಂಗ್ ಹೋಮ್‌ಗಳ ದಾಂಧಲೆ ಕರ್ನಾಟಕದಲ್ಲಿ ವಿಪರೀತವಾಗಿ ಆಗಿದೆ. ಅವರ ಮೇಲೆ ನೀವು ಏಕೆ ತೆರಿಗೆ ಹಾಕಬಾರದು? ಸಾಮಾನ್ಯ ಜನರು ಇಂದು ಇಂತಹ ನರ್ಸಿಂಗ್ ಹೋಮುಗಳಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಆ ನರ್ಸಿಂಗ್ ಹೋಮ್‌ಗಳು ಹೇಗೆ ಲೂಟಿ ಮಾಡುತ್ತಿದೆ ಎಂಬುದು ನಿಮಗೂ ತಿಳಿದಿದೆ ನಾನು ಏನೂ ಇದಕ್ಕೆ ವಿವರಣೆ ಕೊಡಬೇಕಾಗಿಲ್ಲ. Why you are not including them in the tax net? ಇದನ್ನು ಏಕೆ ಮಾಡಬಾರದು? ಅವರು ಕೋಟಿ ಗಟ್ಟಲೆ ಹಣ ಹೊಡೆಯುತ್ತಾರೆ. ಅದು ಮಲ್ಯ ಇರಬಹುದು ಅವೋಲೋ ಇರಬಹುದು ಖಾಸಗಿ ನರ್ಸಿಂಗ್ ಹೋಮ್ ಇರಬಹುದು. Private hospitals are looting money like anything. ಸಾಮಾನ್ಯ ಜನರು ಅಲ್ಲಿಗೆ ಹೋಗಲಿಕ್ಕೆ ಸಾಧ್ಯವಿಲ್ಲ. ಅವರನ್ನು ನೀವು ಏಕೆ ತೆರಿಗೆಗೆ ಒಳಪಡಿಸಬಾರದು. ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡತಕ್ಕಂಥಾ ಕೆಲಸ ಮಾಡಬೇಕು. ಹಲವಾರು

ಅಂಶಗಳು ಕರ್ನಾಟಕದಲ್ಲಿ ಇದೆ. ಖಾಸಗಿ ಮೆಡಿಕಲ್ ಕಾಲೇಜುಗಳು, ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು You have opened your doors to them ಅದು ನಿಮಗೆ, ನಮಗೆ ಗೊತ್ತಿದೆ. ಎಷ್ಟು ಕೋಟಿ ರೂಪಾಯಿಗಳನ್ನು ಅವರು ಮಾಡುತ್ತಿದ್ದಾರೆಂದು ತಿಳಿದಿದೆ. Why you have not included them? ಏಕೆ ಇದನ್ನು ಮಾಡಬಾರದು? ಅವರಿಗೆ ತೆರಿಗೆ ಹಾಕಿ. ಹೇಗೋ, ಅವರಿಗೆ ಕೊಟ್ಟಿದ್ದೀರಿ ಅದನ್ನು ನಿಲ್ಲಿಸಲಿಕ್ಕೆ ಆಗುವುದಿಲ್ಲ. Try to get income from out of them to lessen the burden on the common man. ಅಗ್ರಿಕಲ್ಚರ್ ತೆರಿಗೆ ಬಗ್ಗೆ ಬಹಳಷ್ಟು ಮಾತನಾಡುತ್ತೇವೆ. why some percentage should not be included? ಈಗಾಗಲೇ ಕೃಷಿ ತೆರಿಗೆಯನ್ನು ಹಾಕಿದ್ದೀರಿ ಅದನ್ನೇ ವೈಡನ್ ಮಾಡಿ ಗೋಧಿ, ಸೋಪು, ವೀಟ್ ಆಟ ಮೇಲೆ 2 ಪರ್ಸೆಂಟ್ ತೆರಿಗೆ ಹಾಕುವುದರ ಬದಲು ಸಾಮಾನ್ಯ ಜನರಿಗೆ ಹೊರೆ ಮಾಡುವುದರ ಬದಲು ನೀವು ಆ ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡಿದರೆ ದೊಡ್ಡ ದೊಡ್ಡ ತಿಮಿಂಗಿಲಗಳು ಸಿಗುತ್ತವೆ. ಏಕೆ ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡಬಾರದು. By that you will get revenue to the State. ಎಲ್ಲೆಲ್ಲಿ ಟ್ಯಾಕ್ಸ್ ಕಲೆಕ್ಷನ್ಸ್‌ನಲ್ಲಿ ಲೂಪ್ ಹೋಲ್ಸ್‌ಗಳು ಇದೆ ಅದನ್ನು ಕಂಡುಹಿಡಿಯಬೇಕು. ಮಾನ್ಯ ಸಿದ್ಧರಾಮಯ್ಯನವರೇ ನನಗೆ ತಮ್ಮ ಮೇಲೆ ಬಹಳ ನಂಬಿಕೆ ಇದೆ. ನಿಮಗೆ ಎಲ್ಲೆಲ್ಲಿ ತೆರಿಗೆ ಸೋರಿ ಹೋಗುತ್ತಿದೆ ಅದು ಸ್ಪಷ್ಟವಾಗಿ ಗೊತ್ತು. ರಾಜ್ಯಕ್ಕೆ ಬರಬೇಕಾಗಿರುವ ಹಣವನ್ನು ಖಿದೀಮರು ಕದಿಯುತ್ತಿದ್ದಾರೆ ಅದು ತಮಗೆ ಗೊತ್ತು. ನಿನ್ನೆ ಅರ್ಯಾಕ್ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ನಡೆದಿದೆ. ಅಂತಹವು ನೂರಾರು ಇದೆ. ಸೇಲ್ಸ್ ಟ್ಯಾಕ್ಸ್ ತೆಗೆದುಕೊಳ್ಳಿ. ವ್ಯಾಪಾರಸ್ಥರಿಂದ ವಸೂಲಿ ಮಾಡತಕ್ಕಂತಹದ್ದಾಗಿದೆ. ವ್ಯಾಪಾರಸ್ಥರಿಂದ ನಿಮ್ಮ ಅಧಿಕಾರಿಗಳು ಕನಿಷ್ಠ 20 ಪರ್ಸೆಂಟ್ ಸೇಲ್ಸ್ ಟ್ಯಾಕ್ಸ್ ಅನ್ನು ವಸೂಲಿ ಮಾಡಿ ಕೊಟ್ಟರೆ ಖಂಡಿತವಾಗಿ ನನಗೆ ಗೊತ್ತಿರುವ ಅಂದಾಜಿನ ಪ್ರಕಾರ ಕನಿಷ್ಠ 270 ಕೋಟಿ ರೂಪಾಯಿಗಳು ಬರುತ್ತದೆ.

Even that they are not doing. ಬರುತ್ತಿರುವುದು ಎಕ್ಸೆಟ್ರಾ. ನಾನೊಂದು ಉದಾಹರಣೆಯನ್ನು ಮೊನ್ನೆ ಹೇಳಿದೆ. ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ತಿಂಗಳಿಗೊಮ್ಮೆ ಕಲೆಕ್ಷನ್‌ಗೆ ಹೋಗುತ್ತಾರೆ. ಅಥವಾ ಆರು ತಿಂಗಳಿಗೊಮ್ಮೆ ವರ್ಷಕೊಮ್ಮೆ ಹೋಗುತ್ತಾರೆ. ಸೇಲ್ಸ್ ಟ್ಯಾಕ್ಸ್ ಆಫೀಸರ್ಸ್ ಏನು ಮಾಡುವುದು ಗೊತ್ತೇನು? ಯಾವ ವ್ಯಾಪಾರಸ್ಥರ ಹತ್ತಿರ ಹೋಗಿ ಪುಸ್ತಕಗಳನ್ನು ಚೆಕ್ ಮಾಡುವುದಿಲ್ಲ. ರಸೀದಿಯನ್ನು ಚೆಕ್ ಮಾಡುವುದಿಲ್ಲ. ಎಷ್ಟು ಮಾರಾಟವಾಗಿದೆ ಎಂದು ನೋಡುವುದಿಲ್ಲ. ಅವರ ಲೆಡ್ಜರ್ ಪುಸ್ತಕವನ್ನು ನೋಡುವುದಿಲ್ಲ. ಟಿ.ಬಿ.ಯಲ್ಲಿ ಹೋಗಿ ಕುಳಿತುಕೊಳ್ಳುವುದು. ಒಂದೊಂದು ಅಂಗಡಿಗೆ ಇಷ್ಟು ಎಂದು ಹೇಳಿ ಮಾಮೂಲಿ ಫಿಕ್ಸ್ ಮಾಡಿಬಿಟ್ಟಿರುತ್ತಾರೆ. ಅದನ್ನು ತೆಗೆದುಕೊಂಡು ಬರುವುದು. ಯಾವ ಲೆಡ್ಜರ್ ಪುಸ್ತಕ, ರಸೀದಿ, ಏನನ್ನು ಕೂಡ ಚೆಕ್ ಮಾಡುವ ಸ್ಥಿತಿಯಲ್ಲಿಲ್ಲ. ಇಂಥದ್ದು ನೂರಾರು ಸಂದರ್ಭಗಳು ಈ ರಾಜ್ಯದಲ್ಲಿದೆ. ಅದನ್ನು ತಡೆಯಲಿಕ್ಕೆ ನೀವು ಏಕೆ ಪ್ರಯತ್ನಮಾಡಬಾರದು? ಏಕೆ ಆ ಸೋರುವಿಕೆಯನ್ನು ತಡೆಯಲಿಕ್ಕೆ ಸಾಧ್ಯವಿಲ್ಲ. ಎಕ್ಸೈಜ್‌ನಲ್ಲಿ ಈಗ ಸಿಕ್ಕಾಪಟ್ಟೆ ಚರ್ಚೆಯಾಗುತ್ತಿದೆ. ನಿನ್ನೆಯೂ ಆಗಿದೆ. ಬಹುಶ: ಇನ್ನು ಮುಂದೆಯೂ ಆಗುತ್ತದೆ. ನೀವೇ ಹೇಳಿರುವ ಪ್ರಕಾರ 300 ಕೋಟಿ ರೂಪಾಯಿ ಅವರಿಂದ ಬಾಕಿ ಇದೆ. ಅದನ್ನು ವಸೂಲಿ ಮಾಡಲಿಕ್ಕಾಗುವುದಿಲ್ಲ ಏಕೆ ಆಗುತ್ತಿಲ್ಲ? ನಿಮ್ಮ ಉದ್ದೇಶವೇನು? ಏಕೆ ನೀವು ವಸೂಲಿ ಮಾಡಲಿಕ್ಕೆ ಸಾಧ್ಯವಾಗದೇ ಇರುವ ಪರಿಸ್ಥಿತಿ ನಿರ್ಮಾಣವಾಗಿದೆ? ಯಾವ ಶಕ್ತಿ ನಿಮ್ಮನ್ನು ತಡೆಗಟ್ಟಿದೆ?

ಕನಿಷ್ಟ ನೀವು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಏನು ಇದೆ, ಅದನ್ನು ವಸೂಲಿ ಮಾಡಲಿಕ್ಕೆ ನಿಮ್ಮನ್ನು ಯಾವ ಶಕ್ತಿ ಹಿಡಿದು ಇಟ್ಟಿದೆ ಎಂದು ಕರ್ನಾಟಕ ರಾಜ್ಯದ ಜನರಿಗೆ ನೀವು ಹೇಳಬೇಕಾಗುತ್ತದೆ. ನೀವೇ ಕೊಟ್ಟಿರುವ ಲೆಕ್ಕದ ಪ್ರಕಾರ 290 ಕೋಟಿ ರೂಪಾಯಿಗಳು ಅವರಿಂದ ಬಾಕಿ ಇದೆ. ಏಕೆ ನೀವು ಅದನ್ನು ವಸೂಲು ಮಾಡಲಿಲ್ಲ? ಅದನ್ನು ಯಾರು ಕದ್ದಿದ್ದಾರೆ? ಅದನ್ನು ಸರ್ಕಾರ ಇವತ್ತು ಹೇಳಬೇಕಾಗಿದೆ ಇದ್ಯಾವುದನ್ನು ಮಾಡದೆ 170 ಸರಕುಗಳ ಮೇಲೆ ನೀವು ತೆರಿಗೆಯನ್ನು ಹಾಕಿದ್ದೀರಿ. ಇದು ಎಂಥ ಟ್ಯಾಕ್ಸ್. ನಾವೆಲ್ಲಾ ತಲೆತಗ್ಗಿಸಬೇಕು. ಟಾಯ್ಲೆಟ್ ಸೋಪ್ ಮೇಲೆ ತೆರಿಗೆ ಇಲ್ಲ. ಬಟ್ಟೆ ಒಗೆಯುವ ಸೋಪ್ ಮೇಲೆ ಟ್ಯಾಕ್ಸ್ ಏನು ಸ್ವಾಮಿ ಇದರ ಅರ್ಥ. ಟಾಯ್ಲೆಟ್ ಸೋಪನ್ನು ಉಪಯೋಗಿಸುವವರು ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನರು ಇದ್ದಾರೆ? ಬಟ್ಟೆ ಒಗೆಯುವ ಸೋಪನ್ನು ಉಪಯೋಗಿಸುವ ಸಂಖ್ಯೆ ಎಷ್ಟು ಜನರು ಇದ್ದಾರೆ? ಬಟ್ಟೆ ಒಗೆಯುವ ಸೋಪನ್ನು ಉಪಯೋಗಿಸುವವರು ನಿಮ್ಮ ಲೆಕ್ಕದಲ್ಲಿ ಶ್ರೀಮಂತರು. ಟಾಯ್ಲೆಟ್ ಸೋಪನ್ನು ಉಪಯೋಗಿಸುವವರು ಕಡುಬಡವರು. ಎಂಥ ಶ್ರೀಮಂತರು ನಿಮ್ಮ ಕೈಗೆ ಸಿಕ್ಕಿಬಿಟ್ಟಿದ್ದಾರೆ ತೆರಿಗೆ ಹಾಕುವುದಕ್ಕೆ. ನಮಗೇನೂ ಅದರ ಬಗ್ಗೆ ಕನಿಷ್ಠ are we not ashamed of it? ಟಾಯ್ಲೆಟ್ ಸೋಪಿಗೆ ಟ್ಯಾಕ್ಸ್ ಕಡಿಮೆ ಮಾಡುವುದು, ಬಟ್ಟೆ ಒಗೆಯುವ ಸೋಪಿಗೆ ತೆರಿಗೆಯನ್ನು ಹಾಕುವುದು ಯಾವ ನ್ಯಾಯ.

ಶ್ರೀ ಸಿದ್ಧರಾಮಯ್ಯ (ಅರ್ಥ ಸಚಿವರು) :- ಬಟ್ಟೆ ಒಗೆಯುವ ಸೋಪಿಗೆ 4 ಪರ್‌ಸೆಂಟ್. ನೋಟಿಫಿಕೇಷನ್ ಮೂಲಕ ಹ್ಯಾಂಡ್ ಮೇಡ್ ಸೋಪು ಮತ್ತು ಬಟ್ಟೆ ಒಗೆಯುವ ಸೋಪುಗಳಿಗೆ 4 ಪರ್‌ಸೆಂಟ್. ಹತ್ತು ಪರ್‌ಸೆಂಟಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾಲ್ಕು ಪರ್‌ಸೆಂಟ್ ಎಂದರೆ ಎಷ್ಟಾಯಿತು. ನೀವು ವೀಟ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕಿರುವುದು 2 ಪರ್‌ಸೆಂಟ್. ನೀವು 2 ಪರ್‌ಸೆಂಟ್ ಸೇಲ್ಸ್ ಟ್ಯಾಕ್ಸ್ ಹಾಕಿದರೂ ಜಾಸ್ತಿ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ :- ವೆಸ್ಟ್‌ಬೆಂಗಾಲ್‌ನಲ್ಲೂ ಹಾಕಿದ್ದಾರೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನಾನು ವೆಸ್ಟ್‌ಬೆಂಗಾಲ್ ಬಗ್ಗೆ ಹೇಳುತ್ತಿಲ್ಲ. ನಾನು ಕರ್ನಾಟಕದ ಬಜೆಟ್ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಮಾಟಾಳ್ ನಾಗರಾಜ್ :- ವೆಸ್ಟ್ ಬೆಂಗಾಲ್‌ಗೆ ಆಮೇಲೆ ಮಾತನಾಡೋಣ. ರಾಜಸ್ಥಾನ್, ಮಹಾರಾಷ್ಟ್ರ ಅದೆಲ್ಲಾ ಆಮೇಲೆ ಮಾತನಾಡೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ವೀಟ್ ಮೇಲೆ 2 ಪರ್‌ಸೆಂಟ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಅದು 2 ಪರ್‌ಸೆಂಟ್ ಟ್ಯಾಕ್ಸ್ ಫೈನಲಿ ಒಂದು ಕ್ವಿಂಟಾಲ್‌ಗೆ ನನ್ನ ಹತ್ತಿರ ಇರುವ ಲೆಕ್ಕದ ಪ್ರಕಾರ 1 ಕ್ವಿಂಟಾಲ್‌ಗೆ ಅಲ್ಟಿಮೇಟ್‌ಲಿ 2 ಪರ್‌ಸೆಂಟ್ ಟ್ಯಾಕ್ಸ್ ಎಂದರೂ 56 ರೂಪಾಯಿಗಳು ಆಗುತ್ತದೆ ಒಂದು ಕ್ವಿಂಟಾಲ್‌ಗೆ ಜಾಸ್ತಿ. ಅದರಲ್ಲಿ ಸೇಲ್ಸ್ ಟ್ಯಾಕ್ಸ್ 2 ಪರ್‌ಸೆಂಟ್. ಟರ್ನ್ ಓವರ್ ಟ್ಯಾಕ್ಸ್ 3 ಪರ್‌ಸೆಂಟ್. ಟಿ.ಓ.ಟಿ ಅಂಡ್ ಆದರೆ ಎಕ್ಸ್‌ಪೆಂಡಿಚರ್ ಹೋಲ್‌ಸೇಲ್ ಪಾಯಿಂಟ್‌ಗೆ 10 ಪರ್‌ಸೆಂಟ್. ಸೆಸ್ 5 ಪರ್‌ಸೆಂಟ್ ಆನ್ ಸೇಲ್ಸ್ ಟ್ಯಾಕ್ಸ್. ಇದೆಲ್ಲಾ ಸೇರಿಸಿದರೆ ಒಂದು ಕ್ವಿಂಟಾಲ್‌ಗೆ 56 ರೂಪಾಯಿಗಳು ಹೆಚ್ಚಾಗುತ್ತದೆ. ನೀವು 2 ಪರ್‌ಸೆಂಟ್ ಎಂದು ಹೇಳಿದಿರಿ. ಹಾಗೆ ಸೋಪಿಗೂ ಕೂಡ 4 ಪರ್‌ಸೆಂಟ್ ಎಂದರೂ ಕೂಡ

ಎಷ್ಟಾಗುತ್ತದೆ ಎಂದು ನೀವು ದಯವಿಟ್ಟು ಲೆಕ್ಕ ಹೇಳಿಬಿಡಿ. ಹೇಳುವುದಕ್ಕೆ 4 ಪರ್‌ಸೆಂಟ್. 4 ಪರ್‌ಸೆಂಟ್ ಹಾಕಿದ್ದೇವೆ ಎಂದು ನೀವು ಹೇಳಿರುವುದು. ನಾವು ಹೇಳಲಿಲ್ಲ. 8 ರಿಂದ 4 ಮಾಡಿದರೂ ತೆರಿಗೆಯನ್ನು ತೆಗೆಯಲಿಲ್ಲ ನೀವು. 4 ಪರ್‌ಸೆಂಟ್ ಅಷ್ಟೇ ತೆಗೆದಿರುವುದು. ನಾನು ಹೇಳುತ್ತಿರುವುದು ಟಾಯ್ಲೆಟ್ ಸೋಪಿನ ಮೇಲೆ ಎಷ್ಟು ತೆರಿಗೆಯನ್ನು ಹಾಕಿದ್ದೀರಿ? ಟ್ಯಾಕ್ಸ್ ಹೆಚ್ಚು ಮಾಡಿದಿರಾ?

ಶ್ರೀ ಸಿದ್ಧರಾಮಯ್ಯ :- ಅದರಲ್ಲಿ ಡಿಟರ್ಜೆಂಟ್ ಇರುತ್ತವೆ. ಅದಕ್ಕೆ 8 ಪರ್‌ಸೆಂಟ್ ಇತ್ತು. 10 ಪರ್‌ಸೆಂಟ್ ಆಗಿದೆ. ಇದನ್ನು ಮಾಡುವಾಗ 8 ಪರ್‌ಸೆಂಟ್ ಇದ್ದದ್ದನ್ನು ಬಟ್ಟೆ ಒಗೆಯುವ ಸೋಪಿಗೆ ಮತ್ತು ಹ್ಯಾಂಡ್‌ಮೇಡ್ ಸೋಪಿಗೆ 4 ಪರ್‌ಸೆಂಟ್ ಮಾಡಿದ್ದೇವೆ. 8 ಪರ್‌ಸೆಂಟ್‌ನಿಂದ 4 ಪರ್‌ಸೆಂಟ್‌ಗೆ ಕಡಿಮೆ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅವರ ಮೇಲೆ ಟ್ಯಾಕ್ಸ್ ಹಾಕುವುದರ ಬದಲು ಇವರ ಮೇಲೆಲ್ಲಾ ಟ್ಯಾಕ್ಸ್‌ನ್ನು ಹಾಕಬಹುದಾಗಿತ್ತು. ಬಿಸ್ಕತ್ ಮೇಲೆ ಟ್ಯಾಕ್ಸನ್ನು ಹಾಕಿದ್ದೀರಿ. ಅಡಿಗೆ ಅನಿಲ, ಸಾಮಾನ್ಯ ಜನರಿಗೆ ಅಡಿಗೆ ಅನಿಲ ಶ್ರೀಮಂತರ ಸ್ವತ್ತಾಗಿ ಏನೂ ಉಳಿದಿಲ್ಲ. ಮಧ್ಯಮ ವರ್ಗದ ಜನರು, ಬಡಜನರು ಕೂಡ ಪಟ್ಟಣ ಪ್ರದೇಶದಲ್ಲಿ ಉಪಯೋಗಿಸುತ್ತಿದ್ದಾರೆ. ಅದಕ್ಕೂ ಕೂಡ ತೆರಿಗೆಯನ್ನು ಹಾಕಿದ್ದೀರಿ. ನೀವು ಟ್ಯಾಕ್ಸ್ ಹಾಕಲಿಕ್ಕೆ ಹೋಗುವ ಸಂದರ್ಭದಲ್ಲಿ ಯಾರಿಗೆ ಟ್ಯಾಕ್ಸ್‌ನ್ನು ಹಾಕಬೇಕು, ಯಾರಿಗೆ ಟ್ಯಾಕ್ಸ್‌ನ್ನು ಹಾಕಬಾರದು ಎನ್ನುವುದಾದರೂ ಕನಿಷ್ಠ ಆಲೋಚನೆ ಮಾಡಬೇಕಾಗಿತ್ತು.

ಶ್ರೀ ಡಿ. ಆರ್. ಪಾಟೀಲ್ :- ನೀವು ಕೊಟ್ಟಿರುವುದರಲ್ಲಿ ಬಟ್ಟೆ ಸೋಪು, ಸೋಪು ಪೌಡರ್ 8 ರಿಂದ 10 ಪರ್‌ಸೆಂಟಾಗಿದೆ. ಟಾಯ್ಲೆಟ್ ಸೋಪು 12 ರಿಂದ 10 ಪರ್‌ಸೆಂಟ್ ಆಗಿದೆ. ಟಾಯ್ಲೆಟ್ ಸೋಪಿಗೆ ಇಳಿಸಿದ್ದೀರಿ. ಬಟ್ಟೆ ಸೋಪಿಗೆ ಹೆಚ್ಚು ಮಾಡಿದ್ದೀರಿ. ನಿಮಗೆ ಏಕೊ 8 ರಿಂದ 4 ಮಾಡಿದ್ದೀನಿ ಎಂದು ನಿಮಗೆ ಕಲ್ಪನೆ ಇದೆ. 4 ಮಾಡಿದ್ದರೆ ನಾವು ಸ್ವಾಗತಿಸುತ್ತೇವೆ.

ಶ್ರೀ ಸಿದ್ಧರಾಮಯ್ಯ :- ಅದು ಎಕ್ಸ್‌ಕ್ಲೂಡಿಂಗ್ ವಾಷಿಂಗ್ ಸೋಪು. ಡಿಟರ್ಜೆಂಟ್ ಸೋಪಿಗೆ ಮಾತ್ರ 8 ರಿಂದ 10 ಆಗಿದೆ. ಬಟ್ಟೆ ಒಗೆಯುವ ಸೋಪಿಗೆ 8 ರಿಂದ 4 ಪರ್‌ಸೆಂಟ್ ಆಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಪ್ರಿಂಟ್ ಮಾಡಿ ಕೊಟ್ಟಿರುವುದನ್ನೇ ನಾವು ಹೇಳುತ್ತಿರುವುದು. ಬಟ್ಟೆ ಸೋಪು ಎಂದು ಇದೆ. ನೀವು ಕಡಿಮೆ ಮಾಡುವ ಹಾಗೆ ಇದ್ದರೆ ಮಾಡಿ. ವೀಟ್‌ಗೆ ಮಾಡಿರುವುದು ನಿಜ. ಆಟಗೆ ಮಾಡಿರುವುದು ನಿಜ.

ಶ್ರೀ ಸಿದ್ಧರಾಮಯ್ಯ :- ವೀಟ್‌ಗೆ ಮಾಡಿಲ್ಲ. ವೀಟ್ ಪ್ರಾಡಕ್ಟ್ಸ್ ಮೇಲೆ ಮಾಡಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೌದು. ವೀಟ್ ಪ್ರಾಡಕ್ಟ್ಸ್, ಅದನ್ನು ಮಾಡಿರುವುದು ನಿಜ. ಬಿಸ್ಕತ್‌ಗೆ ಹಾಕಿರುವುದು ನಿಜ. ವೀಟ್ ಪ್ರಾಡಕ್ಟ್ಸ್‌ಗೆ ಹಾಕಿದರೆ ವೀಟ್ ರೇಟ್ ಜಾಸ್ತಿಯಾಗುತ್ತದೆ. ಅದರಲ್ಲೇನು ವ್ಯತ್ಯಾಸ ಇದೆ. ಹಾಗೆಯೇ ರಾಜ್ಯದ ಆರ್ಥಿಕ ಅಭಿವೃದ್ಧಿಯಾಗಬೇಕಾದರೆ ಮೂಲಭೂತವಾಗಿ ಕೈಗಾರಿಕೆಗಳು. ಕೈಗಾರಿಕೆಗಳ ಅಭಿವೃದ್ಧಿಗೆ ನೀವು ಇವತ್ತು 5,600 ಕೋಟಿ ರೂಪಾಯಿಗಳು ವಿದೇಶಿ ಬಂಡವಾಳ ಬರುತ್ತದೆ. ಅದನ್ನು ನಾವು ನಿರೀಕ್ಷೆ ಮಾಡಿದ್ದೆವು. ಅದು ಈಗಾಗಲೇ ಬಂದಿದೆ ಎಂದು ಒಂದು ಕಡೆ ಹೇಳುತ್ತಿದ್ದೀರಿ. ಆ ವಿದೇಶಿ ಬಂಡವಾಳವನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುವುದಿಲ್ಲ. ವಿದೇಶಿ ಬಂಡವಾಳವಿಲ್ಲದೆ ಯಾವುದೇ ಒಂದು ದೇಶ,

ರಾಜ್ಯ ಇವತ್ತಿನ ಪರಿಸ್ಥಿತಿಯಲ್ಲಿ ಅದು ಬದುಕಲಿಕ್ಕೆ ಸಾಧ್ಯವಿಲ್ಲ. ಆದರೆ, ವಿದೇಶಿ ಬಂಡವಾಳವನ್ನು ನಾವು ಪಡೆಯುವ ಸಂದರ್ಭದಲ್ಲಿ ಯಾವ ಷರತ್ತುಗಳಿಗೆ ಒಳಪಟ್ಟು ಹಣವನ್ನು ತರುತ್ತೇವೆ ಎನ್ನುವುದು ಬಹಳ ಮುಖ್ಯ. ಯಾವ ರಂಗಕ್ಕೆ ಅದನ್ನು ತರುತ್ತೇವೆ ಎನ್ನುವುದು ಬಹಳ ಮುಖ್ಯ. ಈ ಎರಡೂ ಬಹಳ ಪ್ರಮುಖವಾಗಿ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಂಶ. ಆದರೆ, ನಾವು ಇವತ್ತು ವಿದೇಶಿ ಬಂಡವಾಳವನ್ನು ಯಾವುದೇ ಅವರು ಹಾಕಿದಂಥ ಷರತ್ತುಗಳಿಗೆ ನಾವು ಒಪ್ಪಿದ್ದೇವಾ? ಅಥವಾ ನಾವು ಹಾಕಿದಂಥ ಷರತ್ತುಗಳಿಗೆ ಅವರು ಒಪ್ಪಿದ್ದಾರೆಯೇ ಎನ್ನುವುದು ಪ್ರಶ್ನೆ ಇರುವುದು.

ಅಧ್ಯಕ್ಷರು :- ಸಾಲ ಕೇಳುವಾಗ ನೀವು ಹಾಕಿದ ಕಂಡೀಷನ್ ಕೇಳಿ ಸಾಲವನ್ನು ಕೊಡುತ್ತಾರೆಯೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೌದು. ಜಗತ್ತಿನಲ್ಲಿ ಬೇರೆ ಬೇರೆ ರಾಜ್ಯಗಳು ಕೂಡ ಸಾಲವನ್ನು ತೆಗೆದುಕೊಂಡಿವೆ. ಆದರೆ ಅವರು ಹಾಕಿರುವ ಪರತ್ತುಗಳು, ಇವರು ಹಾಕಿರುವ ಷರತ್ತುಗಳನ್ನು ನಾವು ನೋಡಬಹುದಾಗಿದೆ. ನಮ್ಮ ಸುರೇಶ್‌ಕುಮಾರ್‌ರವರು ಮಾತನಾಡುವಾಗ ನಿಮ್ಮ ಷರತ್ತುಗಳಲ್ಲಿ ಒಂದು ಭಾಗವನ್ನು ಓದಿ ಹೇಳಿದ್ದಾರೆ. ಯಾವ ಯಾವ ಷರುತ್ತಗಳಿಗೆ ನಾವು ಒಪ್ಪಿದ್ದೇವೆ ಎನ್ನುವುದನ್ನು. ಅದನ್ನು ನಾವು ಪರಿಶೀಲನೆ ಮಾಡಿದಾಗ ಈಗ ಕೊಜೆಂಟ್ರಿಕ್ಸ್‌ಗೆ ನಾವು ತೆಗೆದುಕೊಂಡು ವಿದೇಶಿ ಕಂಪನಿಗೆ ಕೊಟ್ಟಿದ್ದೇವೆ. ಕೊಟ್ಟಿರುವ ಆ ಕಂಪನಿ ಜೊತೆ ನಾವು ಮಾಡಿಕೊಂಡಿರುವ ಒಪ್ಪಂದಗಳು, ಆ ಒಪ್ಪಂದದಲ್ಲಿ ಕೆಲವು ಅಂಶ, ಬಹುಶ: ನೀವು ಹೇಳಬಹುದು, ನಾವು ಒಪ್ಪಂದ ಮಾಡಿಕೊಂಡಿಲ್ಲ, ನಮ್ಮ ಹಿಂದಿನ ಸರ್ಕಾರ ಅದನ್ನು ಒಪ್ಪಂದ ಮಾಡಿಕೊಂಡಿದೆ ಎಂದು ಹೇಳಬಹುದು. ಹಿಂದಿನ ಸರ್ಕಾರ ಒಪ್ಪಂದ ಮಾಡಿಕೊಂಡಿದೆ, ನಿಜ. ಆದರೆ ಆ ಒಪ್ಪಂದದಲ್ಲಿರುವ ಪ್ರಶ್ನೆಗಳೇನು? ಆ ಟರ್ಮ್ಸ್ ಅಂಡ್ ಕಂಡಿಷನ್ಸ್ ಏನು? ಬಿಲ್ಡ್ ಆಪರೇಟ್ ಅಂಡ್ ಓನ್ ಅಂಡ್ ಬಿಲ್ಡ್ ಆಪರೇಟ್ ಅಂಡ್ ಟ್ರಾನ್ಸ್‌ಫೋರ್ಟ್ ಇದು ಮುಖ್ಯವಾದ ಪ್ರಶ್ನೆ. ನಾವು ಯಾವ ಷರತ್ತಿಗೆ ಒಪ್ಪಿದ್ದೇವೆ? ಬಿ.ಓ.ಟಿ.ಗೆ ಒಪ್ಪಿದ್ದೇವಾ? ಬಿ.ಓ.ಡಬ್ಲ್ಯು.ಗೆ ಒಪ್ಪಿದ್ದೇವಾ? ಅಂದರೆ Build, Operate and Transfer, and Build, Operate and own. ಇದು ಮುಖ್ಯವಾಗಿರುವುದು.

ಶ್ರೀ ಜೆ. ಹೆಚ್. ಪಟೀಲ್ :- ಕೊಜೆಂಟ್ರಿಕ್ಸ್ ಪ್ರಾಜೆಕ್ಟ್, ಕೇಂದ್ರ ಸರ್ಕಾರದ ಅನುಮತಿ ಮತ್ತು ರಾಜ್ಯ ಸರ್ಕಾರದ ಅನುಮತಿಯೇ ಹೊರತು ಅದರ ಓನರ್‌ಷಿಪ್ ಪ್ರಶ್ನೆಯೇ ಬರುವುದಿಲ್ಲ. ಅವರು ನಮಗೆ ಇಷ್ಟು ಪೈಸೆಗೆ ಪರ್ ಯೂನಿಟ್ ರೀತಿ ಕೊಡುತ್ತಾರೆ. ನಾವು ಖರೀದಿ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದರಲ್ಲಿ ಒಂದು ಷರತ್ತು ಉಂಟಲ್ಲ. ಅಂದರೆ ನೀವು ಉತ್ಪಾದನೆ ಮಾಡಿ ಇಷ್ಟು ರೇಟು ಕೆ.ಇ.ಬಿ.ಗೆ ಮಾರಬೇಕು. ಅದರ ಪ್ರಕಾರವೇ ನಾವು ಅವರು ಹೇಳಿರುವ ದರವನ್ನೇ ಒಪ್ಪಿರುವುದು. ನಾವು ಇಷ್ಟು ರೇಟಿಗೆ ಮಾರಾಟ ಮಾಡುತ್ತೇವೆ, ಅದಕ್ಕಿಂತ ಕಡಿಮೆ ಮಾಡುವುದಿಲ್ಲ ಎಂದರೆ ನಾವು ಅದಕ್ಕೆ ಒಪ್ಪಿದ್ದೇವೆ. ಅದರ ಪ್ರಕಾರ ನೀವು ಯಾವುದೇ ರೀತಿ ಲೆಕ್ಕಾಚಾರ ಹಾಕಿದರೂ ಪರ್ ಯೂನಿಟ್ ಮಹಾರಾಷ್ಟ್ರದ ಎನ್‌ರಾನ್ ಒಪ್ಪಂದಕ್ಕೂ ನಮ್ಮ ಕೊಜೆಂಟ್ರಿಕ್ಸ್‌ನ ಒಪ್ಪಂದಕ್ಕೂ ಒಂದೂವರೆ ಪೈಸೆ ಜಾಸ್ತಿ ಇದೆ. ನಾವು 4.5 ಕ್ಕೆ ಒಂದು ಯೂನಿಟ್ ಎಂದು ಹೇಳಿ ಒಪ್ಪಂದ ಮಾಡಿಕೊಂಡಿದ್ದೇವೆ. ಇದು ಎನ್‌ರಾನ್‌ಗೆ ಹೋಲಿಕೆ ಮಾಡಿದರೆ ರೇಟು ಜಾಸ್ತಿ ಇದೆ.

ಶ್ರೀ ಜಿ. ಹೆಚ್. ಪಟೀಲ್ :- ನಮ್ಮದು ಫೈನಲ್ clearance from the Finance Ministry, Counter-guaranteeಗೆ ವೇಟ್ ಮಾಡುತ್ತಿದ್ದೇವೆ. ಅದು ಆದತಕ್ಷಣ ಕೆಲಸ ಶುರುವಾಗುತ್ತದೆ. ಪಿಪಿಎ ಎಂದು ಏನು ಇತ್ತು, ನಮ್ಮದೇ ಎನ್.ಟಿ.ಪಿ.ಸಿ. ಇತ್ತು. ನಾವು ಎನ್.ಟಿ.ಪಿ.ಸಿ. ಯಿಂದಲೂ ಪವರನ್ನು ಕೊಂಡುಕೊಳ್ಳುತ್ತೇವೆ. ಇಲ್ಲಿ ಟಾಟಾದವರಿಂದಲೂ ಪವರ್‌ನ್ನು ಕೊಂಡುಕೊಳ್ಳುತ್ತೇವೆ. ತಮಿಳುನಾಡಿನಿಂದಲೂ ಪವರ್‌ನ್ನು ಕೊಂಡುಕೊಳ್ಳುತ್ತೇವೆ. ಅದು ಕೆಲವು ಸಾರಿ ಒಂದು ಅಥವಾ ಅರ್ಧ ಪೈಸೆ, ಒಂದು ಪೈಸೆ ಎರಡು ಪೈಸೆ ವ್ಯತ್ಯಾಸ ಇರುತ್ತದಷ್ಟೇ ಹೊರತು ಕೊಜೆಂಟ್ರಿಕ್ಸ್‌ಗೆ ಬೇರೆ ಒಂದು ರೇಟು ಕೊಟ್ಟು, ಇವರಿಗೆ ಬೇರೆ ಒಂದು ರೇಟು ಅಲ್ಲ ಕೆಲವು ಸಾರಿ ಎನ್.ಟಿ.ಪಿ.ಸಿ. ಜಾಸ್ತಿಯಾಗಿ ದುಡ್ಡು ಕೊಟ್ಟು ಕೊಂಡುಕೊಂಡು ಸೋಡಿಯಾಗಿ ಮಾರುತ್ತಿದ್ದೇವೆ. ಅದಕ್ಕೆ ಲುಕ್ಸಾನು ಆಗಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅದು ಒಂದು. ಅದರ ಜೊತೆಯಲ್ಲಿ ಇನ್ನೊಂದು ಇದೆ. ಇನ್‌ಫಾರ್ಮಲ್ dispute ರೆಸಲ್ಯೂಷನ್ ನಾವು ಒಪ್ಪಿರತಕ್ಕದ್ದು, arbitration ಆರ್ಬಿಟ್ರೇಟರ್ ಏನು ಹೇಳಿದ್ದಾರೆ, ಆ ಒಂದು ಕ್ಲಾಸ್ ಈ ಒಪ್ಪಂದದಲ್ಲಿದೆ.

"Each arbitration shall be conducted in accordance with the arbitration rules. ... except such rules conflicting with the provisions of this section 17.3 in which provisions of this section 17.3 shall prevail. Indian Arbitration Act 1940 shall not be applicable to this agreement, to any arbitration proceedings or awards hereunder or to any dispute arising out of or in connection with this agreement. Any award rendered subsequent to the arbitration hereunder shall be a foreign award." No Indian Arbitration Act is applicable.

ವಿದೇಶಿ ಕಂಪನಿಗಳು ವಿದೇಶಿ ಕಾನೂನಿನ ಅವಾರ್ಡ್ ಏನು ಕೊಡುತ್ತದೆಯೋ ಅದನ್ನು ನಾವು ಒಪ್ಪಬೇಕೇ ಹೊರತು no Indian Arbitration Act. 1948ನೇ ಆಬ್ರಿಟ್ರೇಷನ್ ಆಕ್ಟ್ ಅಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಎಂದರೆ ನಾವು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಮಾಡಲಿಕ್ಕೆ ಕೊಜೆಂಟ್ರಿಕ್ಸ್‌ಗೆ ಹೋಗತಕ್ಕಂಥ ಅವಶ್ಯಕತೆ ಇದ್ದಿರಲಿಲ್ಲ. ನಮ್ಮ ಕೆಪಿಸಿ ನವರು ಹೇಳಿದರು. ನೀವು ನಮಗೆ ಏನೂ ಸಹಾಯ ಮಾಡಬೇಡಿ. ನಮಗೆ ನೀವು ಏನು ಬಾಕಿ ಇದ್ದೀರಿ, ಆ ಹಣವನ್ನು ನಮಗೆ ಕೊಟ್ಟು ಬಿಡಿ. ಕಡಿಮೆ ದರದಲ್ಲಿ ಅತಿ ಕಡಿಮೆ ಕಾಲದಲ್ಲಿ ನಾವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಡುತ್ತೇವೆಂದು ಹೇಳಿದರು. ಅವರಿಗೆ, ನೀವು ಬಾಕಿ ಇರತಕ್ಕದ್ದು ಕೊಡಲಿಲ್ಲ. ಕೆಇಬಿ ಮತ್ತು ಸರ್ಕಾರದಿಂದ ಒಟ್ಟು ಬಾಕಿ ಇರತಕ್ಕದ್ದು ನಿಮ್ಮ ಪ್ರಕಾರ 911.67 ಕೋಟಿ ರೂಪಾಯಿಗಳು. ಇದನ್ನು ನೀವು ಕೆಪಿಸಿಗೆ ಕೊಟ್ಟಿದ್ದೀರಿ ಕೊಜೆಂಟ್ರಿಕ್ಸ್‌ಗೆ ಹೋಗತಕ್ಕ ಅವಶ್ಯಕತೆ ಇರಲಿಲ್ಲ. ಅದಕ್ಕಿಂತ ತುಂಬಾ ಅಪಾಯಕಾರಿ ಏನು ಗೊತ್ತಾ? ಪವರ್ ಡಿಸ್ಟ್ರಿಬ್ಯೂಷನ್ ಸಿಸ್ಟಂನಲ್ಲಿ ಫಾರೀನ್ ಕಂಪನಿಯವರನ್ನು ನೀವು ಕೇಳುತ್ತಿದ್ದೀರಿ it is even more dangerous than giving Cogentrix to produce power. ಏಕೆಂದು ಹೇಳಿದರೆ ನಾವು ವಿತರಣಾ ವ್ಯವಸ್ಥೆಯಲ್ಲಿ ವಿದೇಶಿ ಕಂಪನಿಗಳನ್ನು ಆಹ್ವಾನ ಮಾಡಿದರೆ ನಮ್ಮ ದೇಶದ ಆಂತರಿಕ ಪರಿಸ್ಥಿತಿಯನ್ನು ನಮ್ಮ ಜುಟ್ಟನ್ನು ಅವರಿಗೆ ಕೊಟ್ಟ ಹಾಗೆ ಆಗುತ್ತದೆ. ಯಾವುದೇ ಸಂದರ್ಭದಲ್ಲಿ

ಅವರು ನಮ್ಮ ಮೂಗು ಹಿಡಿಯುತ್ತಾರೆ. ಡಿಸ್ಟ್ರಿಬ್ಯೂಷನ್ ಸಿಸ್ಟಂ ಅವರಿಗೆ ಕೊಟ್ಟರೆ. ಡಿಸ್ಟ್ರಿಬ್ಯೂಷನ್ ಸಿಸ್ಟಂ ಅವರಿಗೆ ಕೊಡತಕ್ಕದ್ದು ಇವತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ನಮ್ಮ ಮೂಗು ಮತ್ತು ನಮ್ಮ ಜುಟ್ಟನ್ನು ವಿದೇಶಿ ಕಂಪನಿಗಳಿಗೆ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ತರಹದ ಪರಿಸ್ಥಿತಿ ನಿರ್ಮಾಣ ಆಗಲಿಕ್ಕೆ ನಾವು ಸತತವಾಗಿ ನಿರಂತರವಾಗಿ, ನಮ್ಮ ರಾಜ್ಯದ ಅಭಿವೃದ್ಧಿ ಬಗ್ಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಕೊಳ್ಳಬೇಕಾಗಿದ್ದರೆ ನಾವು ಅನುಸರಿಸಬೇಕಾಗಿರತಕ್ಕ ಮಾರ್ಗಗಳು ಏನು ಎನ್ನತಕ್ಕಂಥದನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿರತಕ್ಕದ್ದು ಮತ್ತು ಅದರ ಬಗ್ಗೆ ಯಾವುದೇ ಗಮನವನ್ನು ಕೊಡದೇ ಇರುವ ಕಾರಣಕ್ಕೋಸ್ಕರ ಇವತ್ತು ಈ ಸ್ಥಿತಿ ಬಂದಿದೆ. ಬಹುಶ: ಕೆಲವು ದಿವಸಗಳು ಆದಮೇಲೆ ಈ ರಾಜ್ಯದಲ್ಲಿ ಸರ್ಕಾರದ ಏನೂ ಕೆಲಸ ಉಳಿಯುವುದಿಲ್ಲ ಎಂದು ಕಾಣುತ್ತದೆ. ಮುಂದೆ ಬರತಕ್ಕ ಸರ್ಕಾರಗಳಿಗೆ ಏನೂ ಕೆಲಸ ಇರುವುದಿಲ್ಲ. ನಮ್ಮ ಕೆಲಸ ಏನು ಅಂದರೆ ಅವರು ಕೊಡತಕ್ಕಂಥ ಸ್ವಲ್ಪ ಟ್ಯಾಕ್ಸ್‌ಗಳನ್ನು ವಸೂಲಿ ಮಾಡಿಕೊಂಡು ಸರ್ಕಾರಗಳನ್ನು ನಡೆಸುವುದು. ನಮಗೆ ಯಾವುದೇ ಅಭಿವೃದ್ಧಿ ಮಾಡತಕ್ಕಂಥ, ಮೂಲಭೂತವಾದಂತಹ ಸೌಲಭ್ಯಗಳನ್ನು ಬೆಳೆಸತಕ್ಕಂಥ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡತಕ್ಕಂಥ ಒಂದು ಆರ್ಥಿಕ ಧೋರಣೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಏಕೆಂದರೆ ಇವತ್ತು ರೋಡ್‌ಗಳಿಗೂ ವಿದೇಶಿ ಸಾಲವನ್ನು ತರುತ್ತಿದ್ದೇವೆ. ರೋಡುಗಳಿಂದ ಪ್ರಾರಂಭವಾಗಿ ಪ್ರತಿ ಒಂದಕ್ಕೂ ವಿದೇಶಿ ಸಾಲ. ಪ್ರತಿ ಒಂದಕ್ಕೂ ನಾವು ವಿದೇಶಿ ಸಾಲವನ್ನು ಅವಲಂಬಿಸತಕ್ಕ ಪರಿಸ್ಥಿತಿ ಇದೆ. ಎಲ್ಲವನ್ನೂ ಖಾಸಗೀಕರಣ ಮಾಡತಕ್ಕದ್ದು ಆರೋಗ್ಯ ಖಾಸಗೀಕರಣ, ನೀರು ಖಾಸಗೀಕರಣ, ರೋಡ್ ಖಾಸಗೀಕರಣ, ವಿದ್ಯುಚ್ಛಕ್ತಿ ಖಾಸಗೀಕರಣ. ಎಲ್ಲವನ್ನೂ ಖಾಸಗೀಕರಣ ಮಾಡಿ ಸರ್ಕಾರದ ಕೆಲಸ ಏನು ಎಂದು ಇವತ್ತು ನಾವು ಆಲೋಚನೆ ಮಾಡಬೇಕಾಗಿದೆ. ಹಾಗೆಯೇ ಇವತ್ತು ಆರೋಗ್ಯದ ಪ್ರಶ್ನೆ. ಮೂಲಭೂತವಾದಂತಹ ಸೌಕರ್ಯಗಳನ್ನು ಒದಗಿಸತಕ್ಕ ರೀತಿಯಲ್ಲಿ ಆರೋಗ್ಯದ ಒಂದು ಪ್ರಶ್ನೆ. ಇವೊತ್ತು ಹೇಗೆ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಕುಂಠಿತಗೊಳಿಸತಕ್ಕಂಥ ಮತ್ತು ಡಿಸ್‌ಮ್ಯಾಂಟಲ್ ಮಾಡತಕ್ಕಂಥ ವ್ಯವಸ್ಥಿತವಾದಂತಹ ರೀತಿಯ ಯೋಜನೆ ಆಗುತ್ತಿದೆ ಎಂದರೆ ಸಾರ್ವಜನಿಕ ಉದ್ಯಮಗಳನ್ನು ಕಡೆಗಣಿಸತಕ್ಕದ್ದು. ವಿದೇಶಿ ಬಂಡವಾಳದ ಮೇಲೆ ಆಧಾರ ಬೀಳತಕ್ಕದ್ದು. ಸಾರ್ವಜನಿಕ ಉದ್ದಿಮೆಗಳಲ್ಲಿ ನಾವು ಹಾಕಿರತಕ್ಕಂಥ ಬಂಡವಾಳವನ್ನು ವಾಪಸ್ ಪಡೆಯತಕ್ಕದ್ದು ಮತ್ತು ವಿದೇಶಿ ಸಾಲಗಳಿಗೆ ಹೋಗತಕ್ಕದ್ದು. This is how the State Government is going to dismantle the growth of the state economy which they have no right at all. ಹಾಗೆಯೇ ಇವತ್ತು ಇನ್ನೊಂದು ಬಹಳ ಮುಖ್ಯವಾದಂತಹ ಸಮಸ್ಯೆ ಇದೆ. ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ನಿರುದ್ಯೋಗಗಳಿಗೆ ಪರಿಹಾರವನ್ನು ಕೊಡುವುದು. ಏನಾದರೂ ಒಂದು ನಿರ್ದಿಷ್ಟ ಕಾರ್ಯಕ್ರಮ ನಿಮ್ಮಲ್ಲಿ ಇದೆಯೇ ಎಂದರೆ, ಬಜೆಟ್‌ನಲ್ಲಿ ಹೇಳಿದ್ದಾರೆ. ಎಜುಕೇಶನ್ ಮತ್ತು ಹೆಲ್ತ್ ಇಲಾಖೆಗಳನ್ನು ಬಿಟ್ಟರೆ ಬೇರೆ ಯಾವುದೇ ಇಲಾಖೆಗಳಲ್ಲಿ ನಾವು ಕೆಲಸಗಳನ್ನು ನಿರ್ಮಾಣ ಮಾಡುವುದಿಲ್ಲ, ಖಾಲಿ ಇರತಕ್ಕದ್ದನ್ನು ತೆಗೆದು ಕೊಳ್ಳುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಅಂದರೆ ಇದರ ಅರ್ಥ ಏನು? ನಿರುದ್ಯೋಗಿ ಸಮಸ್ಯೆಯನ್ನು ಪರಿಹಾರ ಮಾಡುವುದರ ಬದಲು ನಿರುದ್ಯೋಗಿ ಸಮಸ್ಯೆಯನ್ನು ಹೆಚ್ಚು ಮಾಡತಕ್ಕಂಥ ಕಾರ್ಯಕ್ರಮವನ್ನು ರಾಜ್ಯ ಸರ್ಕಾರ ಹಾಕಿಕೊಂಡಿದೆ. 5,600 ಕೋಟಿ ರೂಪಾಯಿ ವಿದೇಶಿ ಬಂಡವಾಳವನ್ನು ತೆಗೆದುಕೊಂಡು ನೀವು ಎಷ್ಟು ಜನಕ್ಕೆ ಕೆಲಸ ಕೊಡುತ್ತೀರಿ ಎಂದರೆ 5 ಸಾವಿರ ಜನಕ್ಕೆ ಉದ್ಯೋಗ ಸಿಗಬಹುದು ಎಂದು ನಿರೀಕ್ಷೆ ಮಾಡುತ್ತಿದ್ದೀರಿ. 5,600 ಕೋಟಿ ರೂಪಾಯಿ ನಾವು ವಿದೇಶಿ ಬಂಡವಾಳವನ್ನು ಈ ರಾಜ್ಯಕ್ಕೆ ತಂದು ಕಾರ್ಖಾನೆಗಳನ್ನು ಸ್ಥಾಪಿಸಿದರೆ ಕರ್ನಾಟಕ ರಾಜ್ಯದಲ್ಲಿ

5 ಸಾವಿರ ಜನಕ್ಕೆ ಉದ್ಯೋಗವನ್ನು ಕಲ್ಪಿಸತಕ್ಕ ಅವಕಾಶ ಇದೆ ಎಂದು ಹೇಳುತ್ತೀರಿ. ಎಷ್ಟು ಲಕ್ಷ ಜನ ಇವತ್ತು ಕರ್ನಾಟಕ ರಾಜ್ಯದಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ? ಅಷ್ಟು ಜನ ವಿದ್ಯಾವಂತ ನಿರುದ್ಯೋಗಿಗಳಿಗೆ ನೀವು ಕೆಲಸ ಕೊಡಲಿಕ್ಕೆ ಸಾಧ್ಯ ಇಲ್ಲ ಎಂದ ಮೇಲೆ ಆ ವಿದ್ಯಾವಂತ ನಿರುದ್ಯೋಗಿಗಳು ಏನು ಆಗುತ್ತಾರೆ? ನಾವು ಈ ರಾಷ್ಟ್ರದಲ್ಲಿ ನೋಡಿದ್ದೇವೆ. ಸಮಾಜಘಾತುಕ ಶಕ್ತಿಗಳು ಆಗಿ, ಬೇಜವಾಬ್ದಾರಿ ನಾಗರೀಕರಾಗಿ ಪ್ರತ್ಯೇಕತಾವಾದಿ ಶಕ್ತಿಗಳಾಗಿ, ಕೋಮು ಗಲಭೆಗಳಲ್ಲಿ ಭಾಗವಹಿಸತಕ್ಕವರು ನಾನು ಹಿಂದೆಯೇ ಪ್ರಸ್ತಾಪ ಮಾಡಿದೆ. ದಾರಿಗಳನ್ನು ಅಡ್ಡಗಟ್ಟಿ ಲೂಟಿ ಮಾಡುತ್ತಿದ್ದಾರೆ. ಏಕೆ ಈ ಸಮಸ್ಯೆ ಉದ್ಭವ ಆಗಿದೆ ಎಂದರೆ ಸೀರಿಯಸ್ಸಾದಂತಹ ಸೋಷಿಯೋ ಎಕನಾಮಿಕ್ ಅಫೆನ್ಸ್‌ಗೆ ದಾರಿ ಮಾಡಿಕೊಡುತ್ತದೆ ಇವತ್ತು ಅನ್‌ಎಂಪ್ಲಾಯ್‌ಮೆಂಟ್ ಜಾಸ್ತಿ ಆದರೆ. ಆ ಅನ್‌ಎಂಪ್ಲಾಯ್‌ಮೆಂಟನ್ನು ಕಡಿಮೆ ಮಾಡಲಿಕ್ಕೆ ಯಾವುದೇ ರೀತಿಯಾದಂತಹ ಯೋಜನೆಗಳನ್ನು ಹಾಕಿಕೊಂಡಿಲ್ಲ. ಇನ್ನೊಂದು ನಿರುದ್ಯೋಗವನ್ನು ಕಡಿಮೆ ಮಾಡಲಿಕ್ಕೆ ಇಲ್ಲ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಕಾರ್ಯಕ್ರಮ ಇಲ್ಲ. ಇನ್ನೊಂದು ಕಡೆ ಬಹಳ ಪ್ರಮುಖವಾದುದು. ಕೃಷಿ ಕ್ಷೇತ್ರ. ಕೃಷಿ ಕ್ಷೇತ್ರದಲ್ಲಿ ನಮಗೆ ಇವತ್ತು ಸ್ಪಷ್ಟವಾದಂತಹ ಗುರಿ ಇರಬೇಕಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಮೊದಲನೆಯದು ಉತ್ಪಾದನೆ. ಆ ಉತ್ಪಾದನೆಯಲ್ಲಿ ಕೂಡ ಆಹಾರ ಸಾಮಾಗ್ರಿಗಳ ಉತ್ಪಾದನೆ ಬಹಳ ಮುಖ್ಯ. ಆಹಾರ ಸಾಮಾಗ್ರಿಗಳ ಉತ್ಪಾದನೆಯನ್ನು ನಾವು ಹೆಚ್ಚು ಮಾಡದೇ ಹೋದರೆ ಇಡೀ ಕರ್ನಾಟಕ ರಾಜ್ಯ ಭಿಕ್ಷಾ ಪಾತ್ರೆಗಳನ್ನು ಹಿಡಿದು ಬೇರೆ ರಾಜ್ಯಗಳನ್ನು ಅವಲಂಬಿಸತಕ್ಕ ಪರಿಸ್ಥಿತಿ ಉಂಟಾಗುತ್ತದೆ. ನಿಮ್ಮ ಬಜೆಟ್‌ನಲ್ಲಿ ನೀವು ಹಾಕಿರತಕ್ಕ ಗುರಿಯನ್ನು, ಆಹಾರ ಸಾಮಾಗ್ರಿಗಳ ಉತ್ಪನಕ್ಕೆ ನೀವು ಹಾಕಿದಂತಹ ಗುರಿ ಮೂರು ವರ್ಷಗಳಲ್ಲಿ ನಿಮ್ಮ ಗುರಿಯನ್ನು ಮುಟ್ಟಲೇ ಇಲ್ಲ. ಇವತ್ತಿಗೂ ನಿಮ್ಮ ಗುರಿ ಇರತಕ್ಕದ್ದು 85 ಲಕ್ಷ ಟನ್ ಆಹಾರ ಸಾಮಾಗ್ರಿಗಳ ಗುರಿ ಇದೆ. ಆದರೆ ಈ ಗುರಿಯನ್ನು ಮುಟ್ಟಲಿಕ್ಕೆ ಆಗಲಿಲ್ಲ. ಇವತ್ತು ಸರ್ಕಾರವೇ ಹೇಳಿರತಕ್ಕ ಅಂಕಿ ಅಂಶಗಳ ಪ್ರಕಾರ ಎರಡು ಸಾವಿರ ಇಸವಿಗೆ ಕರ್ನಾಟಕ ರಾಜ್ಯದಲ್ಲಿರತಕ್ಕ ಒಟ್ಟು ಜನಸಂಖ್ಯೆಗೆ ಎರಡು ಹೊತ್ತು ಅನ್ನವನ್ನು ಕೊಡಬೇಕಾದರೆ 142 ಲಕ್ಷ ಟನ್ ಆಹಾರ ಬೇಕಾಗಿದೆ. ಇನ್ನು ಕೇವಲ ವರ್ಷ ಇದೆ. ಇವತ್ತು ನಮ್ಮ ಆಹಾರ ಸಾಮಾಗ್ರಿಗಳ ಉತ್ಪಾದನೆ 85 ಲಕ್ಷ ಟನ್ ಮಾತ್ರ ಇನ್ನೂ ಎರಡು ವರ್ಷದಲ್ಲಿ 142 ಲಕ್ಷ ಟನ್ ಆಹಾರ ಸಾಮಾಗ್ರಿಗಳನ್ನು ಉತ್ಪಾದನೆ ಮಾಡದೇ ಹೋದರೆ ಕರ್ನಾಟಕ ರಾಜ್ಯದಲ್ಲಿರತಕ್ಕ ಜನತೆಗೆ ನಾವು ಆಹಾರವನ್ನು ಒದಗಿಸಲಿಕ್ಕೆ ಸಾಧ್ಯ ಇಲ್ಲ. ಆ ನಿಟ್ಟಿನಲ್ಲಿ ನೀವು ಹಾಕಿರತಕ್ಕಂಥ ಕಾರ್ಯಕ್ರಮ ಏನು? ಇವತ್ತು ಹೊಸ ಕೃಷಿಯ ಧೋರಣೆಗಳಿಂದ ಮತ್ತು ವಿದೇಶಿ ಕಂಪನಿಗಳನ್ನು ಕೃಷಿಯೊಳಗೆ ನೀವು ಭಾಗವಹಿಸಲಿಕ್ಕೆ ಅವಕಾಶ ಮಾಡಿ ಇಡೀ ಕೃಷಿ ರಂಗ ದಿವಾಳಿ ಆಗುತ್ತಿದೆ. ರೈತರ ಆತ್ಮಹತ್ಯೆಗೆ ಕಾರಣವೇನು? ಕಳಪೆ ಮಟ್ಟದ ಬೀಜಗಳನ್ನು ಕಳಪೆ ಮಟ್ಟದ ಪೆಸ್ಟಿಸೈಡ್ಸ್, ಇದನ್ನು ಯಾರು ಉತ್ಪಾದನೆ ಮಾಡುತ್ತಿರುವುದು? ಬಹು ರಾಷ್ಟ್ರೀಯ ಕಂಪನಿಗಳು ಇವತ್ತು ಪೆಸ್ಟಿಸೈಡ್ಸ್‌ನ್ನು ಉತ್ಪಾದನೆ ಮಾಡುತ್ತವೆ. ಬೀಜಗಳನ್ನು ಉತ್ಪಾದನೆ ಮಾಡಿ ರೈತರಿಗೆ ಕೊಡುತ್ತವೆ. ಅವೆಲ್ಲವೂ ಕೂಡ ಡಿಫೆಕ್ಟೀವ್. ಇವತ್ತು ರೈತನಿಗೆ ಹೊಡೆತ ಬೀಳುತ್ತಿದೆ. ಇನ್ನೊಂದು ಕಡೆ all along ನೀವು ಎನ್‌ಕರೇಜ್ ಮಾಡುತ್ತಿರುವುದು ಯಾವುದಕ್ಕೆ, ಕಮರ್ಷಿಯಲ್ ಕ್ರಾಪ್‌ಗೆ. ಕಮರ್ಷಿಯಲ್ ಕ್ರಾಪ್ಸ್‌ಗೆ ಎನ್‌ಕರೇಜ್ ಮಾಡುತ್ತೇವೆಂದು ಹೇಳಿ ಒಂದು ಕಡೆ ಆಹಾರ ಸಾಮಾಗ್ರಿಗಳ ಉತ್ಪಾದನೆಯನ್ನು ಕಡಿಮೆ ಮಾಡಿ ಇನ್ನೊಂದು ಕಡೆ ಕಮರ್ಷಿಯಲ್ ಕ್ರಾಪ್‌ಗೆ ಇವತ್ತು ಬೆಲೆ ಇಲ್ಲದೆ, ಟೊಮ್ಯೊಟೊ, ಆಲೂಗೆಡ್ಡೆ ಬೆಳೆದಂತಹ ರೈತರು ಬೀದಿಗೆ ಇಳಿದಿದ್ದಾರೆ. ಆ ಕಡೆ ಕಮರ್ಷಿಯಲ್ ಕ್ರಾಪ್ಸ್‌ಗೂ ರಕ್ಷಣೆ ಇಲ್ಲ ಈ ಕಡೆ ಆಹಾರ ಸಾಮಾಗ್ರಿಗಳಿಗೂ ರಕ್ಷಣೆ ಇಲ್ಲ. ಆಹಾರ ಸಾಮಾಗ್ರಿಗಳ ಉತ್ಪಾದನೆ, ಆಹಾರ ಪದಾರ್ಥಗಳ ಉತ್ಪಾದನೆ ಇಲ್ಲದೇ ನೀವು ಹೇಗೆ ಈ ರಾಜ್ಯವನ್ನು ಅಭಿವೃದ್ಧಿ

ಪಡಿಸುತ್ತೀರಿ? ಅದಕ್ಕೆ ಏನು ನಿಮ್ಮ ಹತ್ತಿರ ಕಾರ್ಯಕ್ರಮ ಇದೆ? ಅದೇ ರೀತಿಯಲ್ಲಿ ನೀವು ಇವತ್ತಿನ ದಿವಸ ಕೃಷಿ ರಂಗದಲ್ಲಿ ಬಹಳ ಪ್ರಮುಖವಾಗಿರುವಂತಹ ಕೃಷಿ ಕಾರ್ಮಿಕರ, ಭೂಹೀನರ, ಇವರನ್ನು ರಕ್ಷಣೆ ಮಾಡುವುದಕ್ಕೆ ಬಜೆಟ್‌ನಲ್ಲಿ ಯಾವುದೇ ರೀತಿಯಾದಂತಹ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಕೃಷಿ ಬೆಳವಣಿಗೆ ವಾಸ್ತವವಾಗಿ ಕುಂಠಿತವಾಗುತ್ತಿದೆ. ಕೃಷಿ ಬೆಳವಣಿಗೆ ಹೆಚ್ಚಾಗುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮ ಬಜೆಟ್‌ನಲ್ಲಿ ಯಾವ ರೀತಿಯಾದಂತಹ ಅನುಕೂಲವನ್ನು ಮಾಡಿಕೊಟ್ಟಿರುವಿರಿ? ಇನ್ನೊಂದು ಮುಖ್ಯವಾದ ವಿಷಯವೇನೆಂದರೆ, ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು, ಹೆಚ್ಚು ಮಾಡುವಂತಹದ್ದು, ಇದರಲ್ಲಿ ಶಿಕ್ಷಣ ರಂಗ, ಶಿಕ್ಷಣ ರಂಗದಲ್ಲಿ ಇವತ್ತು ಬಹಳ ಪ್ರಮುಖವಾದಂತಹ ಎರಡು ಅಂಶಗಳು ಇವೆ. ಅದರಲ್ಲಿ ಪ್ರಾಥಮಿಕ ಶಿಕ್ಷಣ ಇನ್ನೊಂದು ಉನ್ನತ ಶಿಕ್ಷಣ. ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ವಹಿಸಿ ಕೊಂಡಿರುವಂತಹವರು ಸನ್ಮಾನ್ಯ ಶ್ರೀ ಹೆಚ್. ಜಿ. ಗೋವಿಂದೇಗೌಡರ ಬಗ್ಗೆ ನಮಗೆಲ್ಲರಿಗೂ ಬಹಳ ಗೌರವ ಇದೆ. ಅವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅದರಲ್ಲಿ ಯಾವುದೇ ಎರಡು ಮಾತಿಲ್ಲ, ಇರತಕ್ಕಂತಹ ಲಿಮಿಟೀಶನ್ಸ್‌ನಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ. ಅದನ್ನೆಲ್ಲಾ ಮಾಡಿದ್ದಾರೆ, ಆದರೆ ಇವತ್ತು ಡಿಪಿಇಪಿ ಪ್ರೋಗ್ರಾಂಗೆ ಹಣ ಎಲ್ಲಿಂದ ಬಂತು? Is it not your own money? It is the World Bank's aid. ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ನೀವು ಎಷ್ಟು ಹಣ ಖರ್ಚು ಮಾಡುತ್ತಿರುವಿರಿ ಎಂದು ಬಜೆಟ್‌ನಲ್ಲಿ ಏನು ಹೇಳಿರುವಿರಿ, ಅದರಲ್ಲಿ ಡಿಪಿಇಪಿ ಕಾರ್ಯಕ್ರಮಕ್ಕೆ ಬಂದಿರತಕ್ಕಂತಹದ್ದು ವರ್ಲ್ಡ್ ಬ್ಯಾಂಕ್ ನಿಂದ. ಅದು ನಿಮ್ಮ ರಾಜ್ಯದ ಹಣ ಅಲ್ಲ. ನಾವು ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ಹಕ್ಕು ನಿಮಗೆ ಇಲ್ಲ. ನೀವು ಒಂದೊಂದು ಜಿಲ್ಲೆಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಆಯ್ಕೆ ಮಾಡಿಕೊಂಡಿರುವಿರಿ. ಒಂದೊಂದು ಜಿಲ್ಲೆಗೆ, ವಿಶ್ವಬ್ಯಾಂಕಿನಿಂದ ಡಿಪಿಇಪಿ ಪ್ರೋಗ್ರಾಂಗೆ ಎಷ್ಟು ಕೋಟಿ ರೂಪಾಯಿ ಬಂದಿದೆ, ನೀವು ಎಷ್ಟು ಖರ್ಚು ಮಾಡಿರುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :- ಶೇ. 85 ರಷ್ಟು ವಿಶ್ವಬ್ಯಾಂಕಿನಿಂದ ಬರುತ್ತದೆ, ಉಳಿದ ಭಾಗ ಅಂದರೆ, ಶೇ 15 ರಷ್ಟು ನಮ್ಮ ಸ್ಟೇಟ್‌ಫಂಡ್‌ನಿಂದ ಪ್ರೊವೈಡ್ ಮಾಡುತ್ತೇವೆ. ಇದೂವರೆವಿಗೂ 11 ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಇದರಿಂದ ಪ್ರೈಮರಿ ಶಾಲೆಗಳಿಗೆ ಅನುಕೂಲವಾಗುತ್ತದೆ. ಅದನ್ನು ನಾವು ಸಾಲ ತೆಗೆದುಕೊಂಡೆ ಮಾಡಿಸುತ್ತಿರುವುದು. ಇದರಲ್ಲಿ ನಮ್ಮ ಜವಾಬ್ದಾರಿಯೂ ಸಹ ಇದೆ. ಅಂದರೆ ಕಟ್ಟಡ ಕಟ್ಟಿಸುವುದರಲ್ಲಿ ನಮ್ಮ ಮೇಲ್ಚಿಚಾರಣೆಯೂ ಸಹ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಅಂದರೆ ಸಾಲನೇ ತಾನೆ? ವಾಪಸ್ಸು ಕೊಡಬೇಕು ತಾನೆ? ಲೋನ್ ಕಾಂಪೋನೆಂಟ್ಸ್ ಇದೆ, ಏಡ್ ಕಾಂಪೋನೆಟ್ ಇದೆ. ಅದರಲ್ಲಿ ಲೋನ್ ಕಾಂಪೋಸೆಂಟ್ ಎಷ್ಟಿದೆ, ಏಡ್ ಕಾಂಪೋನೆಂಟ್ ಎಷ್ಟಿದೆ ಎಂದು ಹೇಳಬೇಕಾಗುತ್ತದೆ. ಅಂದರೆ 85 ಪರ್ಸೆಂಟ್ ಅವರು ಕೊಡುತ್ತಾರೆ, 15 ಪರ್ಸೆಂಟ್ ನೀವು ಕೊಡುತ್ತೀರಿ. ಅಂದರೆ ಮೇಜರ್ ಅಮೌಂಟ್ ಯಾರದು? ಮೇಜರ್ ಅಮೌಂಟ್ ಅವರದೆ. Whether it is a loan or whether it is an aid? ಇವತ್ತಿನ ದಿವಸ ಪ್ರಾಥಮಿಕ ಶಿಕ್ಷಣ ಯಾವ ಸ್ಥಿತಿಗೆ ಬರಬೇಕಾಗಿದೆ ಎಂದರೆ, ಪ್ರಾಥಮಿಕ ಶಿಕ್ಷಣ ಎನ್ನುವಂತಹ ಕಾನ್‌ಸೆಪ್ಟ್ ಬದಲಾವಣೆಯಾಗಬೇಕಾಗಿದೆ. ಇವತ್ತು ನಾವು ಹೇಗೆ ವಿದ್ಯಾರ್ಥಿಗಳನ್ನು ಶಿಕ್ಷಣದ ವ್ಯಾಪ್ತಿಯೊಳಗೆ ತಂದು, ಅವರನ್ನು ಎಂತಹ ಪ್ರಜೆಗಳನ್ನಾಗಿ ತಯಾರು ಮಾಡಬೇಕೆನ್ನುವುದು ಬಹಳ ಮುಖ್ಯ. ನೀವು

ಎಷ್ಟು ಶಾಲಾ ಕಟ್ಟಡಗಳನ್ನು ಕಟ್ಟಿಸಿರುವಿರಿ, ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡಿರುವಿರಿ, ಎಷ್ಟು ಜನ ಉಪಾಧ್ಯಾಯರನ್ನು ನೇಮಕ ಮಾಡುತ್ತೀರಾ ಎಂಬುದರ ಜೊತೆಗೆ ನಾವು ಅವರಿಗೆ ಏನು ಹೇಳಿಕೊಡುತ್ತೇವೆ ಎಂಬುದು ಬಹಳ ಮುಖ್ಯ. ಆದರೆ ಇದು ಈ ವಿಷಯದ ವ್ಯಾಪ್ತಿಗೆ ಬರುವುದಿಲ್ಲ, ಆದಕಾರಣ ಈ ವಿಷಯದ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಜೊತೆಗೆ ನೀವು ಉನ್ನತ ಶಿಕ್ಷಣಕ್ಕೆ ಕೊಡುತ್ತಿರುವಂತಹ ಹಣ ಎಷ್ಟು? ಉನ್ನತ ಶಿಕ್ಷಣ ಸುಮಾರು 4-5 ವರ್ಷದಿಂದ ಬಜೆಟ್‌ನಲ್ಲಿ ಖೋತಾ ಮಾಡಿರುವಿರಿ. ವಿಶ್ವವಿದ್ಯಾಲಯದವರಿಗೆ ನೀವು ಏನು ಹೇಳುತ್ತಿರುವಿರಿ, ನೀವೇ ಹಣವನ್ನು ಉತ್ಪಾದನೆ ಮಾಡಿಕೊಳ್ಳಿ ಎಂದು ಹೇಳುತ್ತಿರುವಿರಿ. ಅದಕ್ಕಾಗಿ ಇವತ್ತಿನ ದಿವಸ ಅವರು ಏನು ಮಾಡುತ್ತಿದ್ದಾರೆ ಎಂದರೆ, ಬಂಡವಾಳಶಾಯಿಗಳು, ಕ್ಯಾಪಿಟಲಿಸ್ಟ್ ಮಲ್ಟಿನ್ಯಾಷನಲ್ ಕಾರ್ಪೊರೇಶನ್ ಅವರ ಹತ್ತಿರ ಹೋಗಿ ಸಲಾಂ ಹೊಡೆದು, ನಿಮಗೆ ಯಾವ ರೀತಿಯಾದಂತಹ ಸಿಲಬಸ್ ಅವಶ್ಯಕತೆ ಇದೆಯೋ ಅದನ್ನೇ ನಮ್ಮ ವಿಶ್ವವಿದ್ಯಾಲಯದವರು ತಯಾರು ಮಾಡುತ್ತೇವೆ, ನಮಗೆ ಹಣಕಾಸಿನ ವ್ಯವಸ್ಥೆ ಮಾಡಿಕೊಡಿ ಎನ್ನುವಂತಹ ಪರಿಸ್ಥಿತಿಗೆ ಅವರನ್ನು ತಂದಿದ್ದಾರೆ.

ಅಧ್ಯಕ್ಷರು :- ತಾವು ಯಾವುದಕ್ಕೆ ಆಧ್ಯತೆ ನೀಡುವಿರಿ? ಅಂದರೆ ಪ್ರಾಥಮಿಕ ಶಿಕ್ಷಣಕ್ಕೆ ಆಧ್ಯತೆ ನೀಡುವಿರಾ, ಅಥವಾ ಪ್ರೌಢ ಶಿಕ್ಷಣಕ್ಕೆ ಆಧ್ಯತೆ ನೀಡುವಿರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನನ್ನ ಆಧ್ಯತೆ ಪ್ರಾಥಮಿಕ ಶಿಕ್ಷಣಕ್ಕೆ Primary Education is most important ಪ್ರೌಢ ಶಿಕ್ಷಣದಲ್ಲಿ ಇವತ್ತು wrong trend ಬಂದಿದೆ. Giving importance to technical education. ನಾನ್ ಟೆಕ್ನಿಕಲ್ ಎಜುಕೇಶನ್‌ಗೆ ನೋ ಪ್ರಿಯಾರಿಟಿ ಆಟ್ ಆಲ್. ನಾನ್ ಟೆಕ್ನಿಕಲ್ ಎಜುಕೇಶನ್‌ಗೆ ಪ್ರಿಯಾರಿಟಿ ಇಲ್ಲ ಎನ್ನುವುದರ ಅರ್ಥ, ಈ ದೇಶದಲ್ಲಿ ಸಂಶೋಧನೆ ಬೇಡ ಹೊಸ ವಿಷಯಗಳನ್ನು ಸಂಶೋಧನೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ, ಈ ದೇಶದ ಇತಿಹಾಸವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ, ಅರ್ಥ ಶಾಸ್ತ್ರವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ, ರಾಜಕೀಯ ಶಾಸ್ತ್ರವನ್ನು ತಿಳಿಯತಕ್ಕಂತಹ ಅವಶ್ಯಕತೆ ಇಲ್ಲ ಮತ್ತು ಯಾವುದೇ ರೀತಿಯಾದಂತಹ ಸಮಾಜ ವಿಜ್ಞಾನದಲ್ಲಿ ಸಂಶೋಧನೆ ಮಾಡತಕ್ಕಂತಹ ಅವಶ್ಯಕತೆ ಇಲ್ಲ Because it all comes under non-technical higher education. ಅಂದರೆ ಒಂದು ದೇಶವನ್ನು ನೀವು ಇಮ್ಯಾಜಿನ್ ಮಾಡುವುದಕ್ಕೆ ಆಗುತ್ತದೆಯೇ, ಇತಿಹಾಸ ತಿಳಿಯುವುದು ಬೇಡ, ಅರ್ಥಶಾಸ್ತ್ರ ತಿಳಿಯುವುದು ಬೇಡ, ರಾಜಕೀಯ ಶಾಸ್ತ್ರ ತಿಳಿಯುವುದು ಬೇಡ, ಭೌಗೋಳ ಶಾಸ್ತ್ರ, ತಿಳಿಯುವುದು ಬೇಡ ಇವೆಲ್ಲವನ್ನೂ ಬಿಟ್ಟು ಈ ದೇಶವನ್ನು You are thinking you are under the impression that only technocrats can build this country. It is most dangerous. This world and country are not built by only Technocrats. ನಿಮ್ಮ ಗೆಲಿಲಿಯೋ ಇಲ್ಲದೆ ಇದಿದ್ದರೆ ನಿಮ್ಮ ಟೆಕ್ನೋಕ್ರಾಟ್ಸ್ ಎಲ್ಲಾ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸಾಕ್ರಟೀಸ್ ಇಲ್ಲದೆ ಇದ್ದಿದ್ದರೆ ನಿಮ್ಮ ಟೆಕ್ನಾಲಜಿ ಎಲ್ಲಾ ಬೆಳೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. because fundamental research is most important both in social sciences and natural sciences. ಅವು ಯಾವುದೂ ಇಲ್ಲದೆ ಈ ದೇಶವನ್ನು ಜಗತ್ತನ್ನು ಬರೀ ಟೆಕ್ನೋಕ್ರಾಟ್ಸ್‌ನಿಂದ ಬೆಳೆಸುತ್ತೇವೆ ಎಂದು ಹೇಳುವುದು ತಪ್ಪು. ಆ ರೀತಿಯಲ್ಲಿ ಇವತ್ತು ಶಿಕ್ಷಣ ತಪ್ಪು ದಾರಿಯಲ್ಲಿ ಹೋಗುತ್ತಿದೆ.

ಅಧ್ಯಕ್ಷರು :- ನಿಮ್ಮ ಕಲ್ಪನೆಯಲ್ಲಿ ಶಿಕ್ಷಣದ ವ್ಯವಸ್ಥೆ ಯಾವ ರೀತಿ ಇರಬೇಕು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಶಿಕ್ಷಣದ ವ್ಯವಸ್ಥೆ ಯಾವ ರೀತಿ ಇರಬೇಕು ಎಂದು ಹೇಳುವುದಕ್ಕೆ ಬಹುಶಃ ಇದು ಸಬ್ಜೆಕ್ಟ್ ಅಲ್ಲ, ಜನರ ಅವಶ್ಯಕತೆಗೆ ಅನುಗುಣವಾಗಿ ದೇಶದ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಇರಬೇಕಾಗುತ್ತದೆಯೇ ವಿನಃ ಯಾರೋ ಕೆಲವು ಜನರಿಗೋಸ್ಕರ ಶಿಕ್ಷಣ ಇರಬೇಕಾದಂತಹ ಅವಶ್ಯಕತೆ ಇಲ್ಲ; ಈ ದೇಶದಲ್ಲಿ ಇಡಿ ದೇಶ, ಇಡೀ ಜನತೆಯ ಅವಶ್ಯಕತೆಗೆ ಅನುಗುಣವಾಗಿ ಶಿಕ್ಷಣ ಇರಬೇಕಾಗುತ್ತದೆ. ಯಾರೋ ಕೆಲವರಿಗೋಸ್ಕರ ಶಿಕ್ಷಣ ಇರತಕ್ಕಂತಹ ಅವಶ್ಯಕತೆ ಇಲ್ಲ. ಆದಕಾರಣ ಇವತ್ತು ಶಿಕ್ಷಣದ ವ್ಯವಸ್ಥೆ ಯಾವ ರೀತಿಯಾಗಿದೆ ಎಂದರೆ, ಅವತ್ತು ಮನು ಹೇಳಿದ್ದ, ''ನಾಸೂತ್ರಾಯ ಮತಿತತಾತಿ ಎಂದು ಹೇಳಿದ್ದ'' ಆ ಕಾರಣದಿಂದ ವಿದ್ಯೆಯನ್ನು ನಿರಾಕರಿಸಿದಿರಿ, ಆದರೆ ಇವತ್ತು ಹಣ ಇದ್ದವರಿಗೆ ಮಾತ್ರ ಶಿಕ್ಷಣ ಎಂದು ಹೇಳಿ, ಬಡವರಿಗೆ ಶಿಕ್ಷಣವನ್ನು ನಿರಾಕರಿಸುತ್ತಿದ್ದೀರಿ. ಅದಕ್ಕೂ ಇದಕ್ಕೂ ವ್ಯತ್ಯಾಸವೇನಿಲ್ಲ. ಮನು ಹೇಳಿದ್ದು ''ನಾಸೂತ್ರಾಯ ಮತಿತತಾತಿ'' ಅವನು ಯಾವುದೋ ಒಂದು ಜಾತಿ ಆಧಾರದ ಮೇಲೆ ಹೇಳಿದ್ದ, ಆತ ಐದಾರು ಸಾವಿರ ವರ್ಷಗಳಿಂದ ವಿದ್ಯೆಯನ್ನು ನಿರಾಕರಿಸಿದ. ಈಗ ತಾವು ಏನು ಮಾಡುತ್ತಿರುವಿರಿ ಅಂದರೆ, ಹಣ ಇದ್ದವರಿಗೆ ಮಾತ್ರ ಶಿಕ್ಷಣ ಎಂದು ಹೇಳಿ, ಬಡವರಿಗೆ ಶಿಕ್ಷಣವನ್ನು ನಿರಾಕರಿಸುತ್ತಿರುವಿರಿ. ಇದೇ ವ್ಯತ್ಯಾಸ, ಬೇರೆ ವ್ಯತ್ಯಾಸವಿಲ್ಲ. That's how education has to grow, that's how it has grown, that's how we are allowing it to grow, not according to the needs of this country.

ಒಬ್ಬ ಸದಸ್ಯರು :- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕಮ್ಯುನಿಸ್ಟ್ ಮಿತ್ರರು ಉದ್ದಕ್ಕೂ ಮನಸೃತಿಯನ್ನು ಆಕ್ಷೇಪ ಮಾಡುತ್ತಿದಂತವರು, ಇವತ್ತು ಮನಸೃತಿಯ ಒಂದು ಶ್ಲೋಕವನ್ನು ಹೇಳಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಸಂಸ್ಕೃತವನ್ನು ತಾವು ಮಾತ್ರ ಓದಿರುವಿರಿ, ಎಂದು ತಿಳಿದುಕೊಂಡರೆ ತಪ್ಪು ನಿಮ್ಮದು, ಅದು ನನ್ನ ತಪ್ಪಲ್ಲ, ಅದನ್ನು ಯಾರು ಬೇಕಾದರೂ ಓದಬಹುದು. ಇವತ್ತು ನಾನೇನು ಹೊಗಳಲಿಲ್ಲ. ಇವತ್ತು ಸಹ ನಾನು ಅದನ್ನು ಆಕ್ಷೇಪ ಮಾಡಿದೆ.

ಶ್ರೀ ಸಿ. ಬೈರೇಗೌಡ :- ಮನು ಮತ್ತು ಮತ್ತೊಬ್ಬರನ್ನು ಶೂದ್ರರು ಮುಟ್ಟಬಾರದು ಎಂದು ಏನು ಹೇಳುತ್ತಿದ್ದರೋ, ಅದೇ ಮಾತು ಇವತ್ತಿನ ದಿವಸ ಅವರ ಬಾಯಿಯಲ್ಲೂ ಬರುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ತಾವು ಶಿಕ್ಷಣದ ಬಗ್ಗೆ ಪ್ರಸ್ತಾಪ ಮಾಡುತ್ತಿರುವಿರಿ. ಯಾರೋ ಒಬ್ಬರು ಬ್ರಿಟೀಷರು ಹಾಕಿಕೊಟ್ಟಂತಹ ಮಾರ್ಗದಲ್ಲಿಯೇ ನಾವು ಹೋಗುತ್ತಿದ್ದೇವೆ. ಹಳ್ಳಿ ಬಿಟ್ಟು ಇಲ್ಲಿ ಯಾವುದೋ ಒಂದು ಹೋಟೆಲ್‌ನಲ್ಲಿ ಸಪ್ಲೈಗಿರಿ ಸಿಕ್ಕಿದರೂ ಪರವಾಗಿಲ್ಲ, ಆದರೆ ಉಳುಮೆ ಮಾಡುವುದಕ್ಕೆ ಆಗದೆ, ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಯೋಗ್ಯತೆಯನ್ನು ಸಂಪಾದನೆ ಮಾಡಿಕೊಳ್ಳುವುದಕ್ಕೆ ಆಗದೆ, ಈ ಗ್ರಾಜ್ಯುಯೇಶನ್ ಕೊಡಿಸಿ, ಅವನ ಈಗ ನಗರ ಪ್ರದೇಶಕ್ಕೆ ಬಂದು, ಸರ್ಕಾರಿ ನೌಕರಿ ಅಥವಾ ಇನ್ನೊಂದು ನೌಕರಿಯನ್ನು ಅವಲಂಬಿಸಿಕೊಂಡು ಹಳ್ಳಿಯನ್ನು ಬಿಡುವಂತಹ ಒಂದು ಪ್ರವೃತ್ತಿಯಾಗಿದೆ. ಶಿಕ್ಷಣ ಹೇಗೆ ಇರಬೇಕು ಎಂದರೆ, ಅವನ ಕಾಲಮೇಲೆ ಅವನು ಗೌರವದಿಂದ, ಸರ್ಕಾರಿ ಉದ್ಯೋಗದ ಮೇಲೆ ಅವಲಂಬಿತನಾಗದೆ

ಹಳ್ಳಿ, ಅವನ ಊರನ್ನು ಉದ್ಧಾರ ಮಾಡುವಂತಹ ಅವನಲ್ಲಿ ಜ್ಞಾನೋದಯವಾಗುವ ರೀತಿ ಮಾರ್ಪಾಡು ತರುವ ಒಂದು ಹೊಸ ಪ್ರಯತ್ನ ಆದರೆ, ಆ ಶಿಕ್ಷಣಕ್ಕೆ ಒಂದು ಅರ್ಥ ಬರುತ್ತದೆ. ತಾವೇ ಹೇಳಿದ್ದೀರಿ ಶೇ 70 ಭಾಗ ಈ ಸರ್ಕಾರಿ ನೌಕರರಿಗೆ ಸಂಬಳ ಕೊಡುತ್ತಿದ್ದೇವೆ ಎಂದು. ನೂರಕ್ಕೆ 90 ಜನ ತಮ್ಮ ಫೈಲನ್ನು ನೋಡಿ ಬಡ ಬೋರೆಗೌಡನ ಕೆಲಸ ಮಾಡಿಕೊಡಬೇಕೆಂಬ ಪ್ರಜ್ಞೆ ಅವನಲ್ಲಿ ಇದೆಯೇ? ನೌಕರಿ ಸಿಕ್ಕದವರ ಸ್ಥಿತಿ ಈ ರೀತಿಯಾದರೆ, ನೌಕರಿ ಸಿಗದೆ ಇರುವಂತಹವರು ಸರ್ಕಾರಿ ನೌಕರಿ ಬೇಕು ಎಂದು ಹೇಳಿ ಎಲ್ಲಾ ಮರೆತು ನಗರಕ್ಕೆ ಬಂದು ಅವರಿವರ ಕಾಲನ್ನು ಹಿಡಿದುಕೊಳ್ಳುವ ದುಸ್ಥಿತಿ ಬಂದಿದೆ. ಇದು ತಪ್ಪಬೇಕು ಎಂದರೆ, ಅವನಿಗೆ ಇವತ್ತಿನ ದಿವಸ ಹೊಸ ರೀತಿಯ ಶಿಕ್ಷಣದ ಅವಶ್ಯಕತೆ ಇದೆ ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈ ವಿಷಯದ ಬಗ್ಗೆ ಸುಮ್ಮನೆ ಏತಕ್ಕೆ ಟೈಂ ವೇಸ್ಟ್ ಮಾಡಬೇಕು? ಅವರ ದೃಷ್ಟಿಯಲ್ಲಿ ಶಿಕ್ಷಣ ಹೇಗೆ ಇರಬೇಕು ಎಂಬುದು, ಸ್ವಾಭಾವಿಕವಾಗಿ, ಅವರ ಒಂದು ಪಕ್ಷದ ಐಡಾಲಾಜಿ ಪ್ರಕಾರ ವೆಸ್ಟ್ ಬೆಂಗಾಲ್ ಆಗಲಿ, ಕೇರಳವಾಗಲಿ, ಆ ಕಡೆ ಮಾಡಿರುತ್ತಾರೆ. ಆ ಕಡೆ ನಾವು ಹೋಗಿ ಸಿಲಬಸ್ ಯಾವ ರೀತಿ ಇದೆ ಎಂದು ನೋಡಿಕೊಂಡು ಬರೋಣ. ಈಗ ರಾಜಸ್ಥಾನ್, ಮಹಾರಾಷ್ಟ್ರ ಈ ಭಾಗದಲ್ಲಿಯೂ ಮತ್ತು ಉತ್ತರ ಪ್ರದೇಶದಲ್ಲಿಯೂ ಸಹ ಇವರ ಸರ್ಕಾರವೆ ಇದೆ. ಅಲ್ಲಿಯ ಸಿಲಬಸ್ ಪ್ರಾಥಮಿಕ ಶಿಕ್ಷಣದಲ್ಲಿ ಯಾವ ರೀತಿ ಇದೆ, ಅಂದರೆ ತಮ್ಮ ಕಾಲ ಮೇಲೆ ತಾವು ನಿಲ್ಲುವಂತಹ, ಪ್ರವೃತ್ತಿಯನ್ನು ಬೆಳೆಸುವಂತಹ ಸಿಲಬಸ್‌ಗಳು ಏನಿವೆ ಅವೆಲ್ಲವನ್ನೂ ನೋಡಿಕೊಂಡು ಬಂದು, ಕ್ರೋಢೀಕರಿಸಿ ನಾವು ಹೊಸ ಸಿಲಬಸ್ ತಯಾರು ಮಾಡಬಹುದು. ಏಕೆಂದರೆ, ಎಲ್ಲೆಲ್ಲಿ ಅವರು ಅಧಿಕಾರದಲ್ಲಿ ಇದ್ದಾರೆ, ಅಲ್ಲಿ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಥವಾ ನಿರುದ್ಯೋಗಿಗಳಿಗೆ ಕೆಲಸವನ್ನು ಕೊಡಿಸುವಂತಹ ಒಂದು ಏರ್ಪಾಡು ಏನು ಮಾಡಿದ್ದಾರೆ ಅದನ್ನು ನಾವು ನೋಡಿಕೊಂಡು ಬಂದು ಇಲ್ಲಿ ಇಂಪ್ಲಿಮೆಂಟ್ ಮಾಡುವುದಕ್ಕೆ ಏನೂ ತೊಂದರೆ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಸನ್ಮಾನ್ಯ ಅಧ್ಯಕ್ಷರೆ, ನಾವು ಆ ದಿಕ್ಕಿನಲ್ಲೇ ಕೆಲಸ ಮಾಡುತ್ತಿದ್ದೇವೆ. ಇವತ್ತು ಸನ್ಮಾನ್ಯ ಖರ್ಗೆ ಅವರು ಹೇಳಿದಂತೆ, ಅವರು ಕೊಟ್ಟಂತಹ ಶಿಕ್ಷಣದ ರೀತಿಯಿಂದ ಇವತ್ತಿನ ದಿವಸ ನಿರುದ್ಯೋಗ ಜಾಸ್ತಿಯಾಗಿ, ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಆದಕಾರಣ ಶೇ 60 ಭಾಗ ಹಣವನ್ನು ಗ್ರಾಮಾಂತರ ಪ್ರದೇಶದ ಅಭಿವೃದ್ಧಿಗೆ ಖರ್ಚು ಮಾಡಿ, ಯಾರೇ ಆಗಲಿ, ಆತ ವಿದ್ಯಾವಂತನಿರಬಹುದು, ವಿದ್ಯಾವಂತನಲ್ಲದೆ ಇರಬಹುದು, ಉದ್ಯೋಗಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಹೋಗುವ ಬದಲು ತನ್ನ ಕಾಲ ಮೇಲೆ ತಾನು ನಿಲ್ಲುವ ಒಂದು ಹೊಸ ಚಿಂತನೆ ಪ್ರಾರಂಭವಾಗಿದೆ. ಸನ್ಮಾನ್ಯ ಖರ್ಗೆಯವರು ಹೇಳಿದಂತೆ ಅದರ ಅನುಭವದ ಆಧಾರದ ಮೇಲೆ ಮುಂದೆ ಬದಲಾವಣೆಯಾಗುತ್ತದೆ. ಅವಶ್ಯವಿದ್ದರೆ ಇದನ್ನು ನಾವು, ನೀವು ಎಲ್ಲರೂ ಸೇರಿ ಮಾಡೋಣ.

ಅಧ್ಯಕ್ಷರು :- ಸನ್ಮಾನ್ಯ ಶ್ರೀರಾಮರೆಡ್ಡಿಯವರೆ, ತಮ್ಮ ಸಹಕಾರ ಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಇನ್ನು ಈ ರಾಜ್ಯದ ಆದಾಯದ ಪ್ರಶ್ನೆ. ಈ ರಾಜ್ಯದ ಒಟ್ಟು ಆದಾಯವೆಷ್ಟು? ಈ ಆದಾಯದಲ್ಲಿ ಎಷ್ಟೆಷ್ಟು ಭಾಗ ಯಾವುದ್ಯಾವುದಕ್ಕೆ ಖರ್ಚಾಗುತ್ತದೆ? ಎಷ್ಟು ಕೊರತೆ ಬೀಳುತ್ತದೆ? ಆದರೆ ನಾನು ನೋಡಿದಂತೆ, ನನ್ನ ತಿಳುವಳಿಕೆಗೆ ಒಳಪಟ್ಟಂತೆ ಈ ಆದಾಯದಲ್ಲಿ ಅತೀ ಹೆಚ್ಚಿನ ಭಾಗ ಯಾರಿಗೆ ಹೋಗುತ್ತಿದೆ, ನೌಕರರ ಸಂಬಳಕ್ಕೆ ಸರ್ವೀಸ್ ಲೆಕ್ಕದಲ್ಲಿ ಇವತ್ತು

ಹೋಗುತ್ತಿದೆ. ನೌಕರರ ಸಾರಿಗೆ ಸಂಬಳ, ಸಾರಿಗೆ ಪೆನ್ಷನ್ ಇದಕ್ಕೆಲ್ಲಾ ಹೋಗುತ್ತಿದೆ. ನೌಕರರ ಸಾರಿಗೆ ಸಂಬಳ, ಸಾರಿಗೆ ಪೆನ್ಷನ್ ಇದಕ್ಕೆಲ್ಲಾ ಹೋಗುತ್ತಿದೆ ಇದರಲ್ಲಿ ಹೆಚ್ಚಿನ ಹಣ. ಇವತ್ತು ನಮ್ಮ ರಾಜ್ಯದಲ್ಲಿ ಆಡಳಿತ ಯಂತ್ರ ನಡೆಯಬೇಕಾದರೆ ಎಲ್ಲಾ ರೀತಿಯಾದ ವ್ಯವಸ್ಥೆ ಇರಬೇಕು. ಅಧಿಕಾರಿಗಳು ಇರಬೇಕು. ನಿಜ. ಆದರೆ ನಮ್ಮ ಒಟ್ಟು ಆದಾಯದಲ್ಲಿ ಶೇಕಡ ಎಷ್ಟು ಭಾಗ ಅವರಿಗೆ ಹೋಗುತ್ತಿದೆ ಎಂದು ಹೇಳುವುದನ್ನು ನಾವು ಲೆಕ್ಕಹಾಕಿದರೆ ಮತ್ತೆ ಶೇಕಡ ಎಷ್ಟು ಭಾಗ ಇವತ್ತು ರಾಜ್ಯದ ಅಭಿವೃದ್ಧಿ ಮತ್ತು ಜನಸಾಮಾನ್ಯರ ಅಭಿವೃದ್ಧಿಗೆ ಹೋಗುತ್ತಿದೆ ಎನ್ನುವುದನ್ನು ಲೆಕ್ಕ ಹಾಕಿದರೆ ಬಹಳ ಆತಂಕಕಾರಿ ಪರಿಸ್ಥಿತಿಯಲ್ಲಿದ್ದೇವೆ. ಈ ಆತಂಕಕಾರಿ ಪರಿಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಈ ಹೆಚ್ಚಿನ ಹೊರೆಯನ್ನು ಕಡಿಮೆ ಮಾಡಲಿಕ್ಕೆ ಆ ಹೊರೆಯನ್ನು ಕಡಿಮೆ ಮಾಡಿ ಎಂದರೆ ಯಾರೋ ಗುಮಾಸ್ತನ ಕೆಲಸ ಕಡಿಮೆ ಮಾಡಿ ಎಂದಲ್ಲ ನಾನು ಹೇಳುತ್ತಿರುವುದು. ಯಾರೋ ಪ್ಯೂನ್‌ನ ಕೆಲಸವನ್ನು ಕಡಿಮೆ ಮಾಡಿ ಎಂದಲ್ಲ ಹೇಳುತ್ತಿರುವುದು. ಇವತ್ತು ಹಲವಾರು ಹುದ್ದೆಗಳು ಐ ಎ ಎಸ್ ಮತ್ತು ಐ ಪಿ ಎಸ್ ಈ ರೀತಿ ಇವೆ. ಅದಕ್ಕೆ ಎಷ್ಟು ಖರ್ಚು ಮಾಡುತ್ತಿದ್ದೀರಿ ಎಂದು ನೀವು ಕೊಟ್ಟಿದ್ದೀರಿ. ಇವತ್ತು ಕೆಲವು ಹುದ್ದೆಗಳ ಅವಶ್ಯಕತೆಯೇ ಇಲ್ಲ. ಡಿವಿಜನಲ್ ಕಮೀಷನರ್ ಪೋಸ್ಟ್ ಏತಕ್ಕೆ ನಮ್ಮ ರಾಜ್ಯದಲ್ಲಿ ಬೇಕು ಏನು ಅವಶ್ಯಕತೆ ಇದೆ. ಬರೀ ಪೋಸ್ಟ್‌ಮ್ಯಾನ್ ಕೆಲಸ ಮಾಡುವುದು. ಡಿ.ಸಿ.ಯಿಂದ ತಂದದ್ದನ್ನು ಸರ್ಕಾರಕ್ಕೆ ಕಳುಹಿಸುವುದು. ಎ.ಸಿ. ಪೋಸ್ಟ್‌ನಿಂದ ಏನು ಪ್ರಯೋಜನ ಇದೆ. ಇದೇ ಸೆಕ್ರೆಟೀರಿಯೇಟ್ ತೆಗೆದುಕೊಳ್ಳಿ, ಹೆಚ್ಚು ಪೋಸ್ಟ್‌ಗಳು ಅಧಿಕಾರಿಗಳು ಇದ್ದಷ್ಟು ಹೆಚ್ಚು ಕೊಕ್ಕೆಗಳನ್ನು ಹಾಕುವಂಥದ್ದು. ಒಂದೊಂದು ಬೆಂಚ್‌ಗೆ ಹೋದರೆ ಇವರು ಒಂದೊಂದು ಕೊಕ್ಕೆ ಹಾಕಿ ಕಳುಹಿಸುವಂಥದ್ದು. ಅಂದರೆ ಅಧಿಕಾರವನ್ನು ಸುಗಮವಾಗಿ ಜನತೆಯ ಪರವಾಗಿ ನಡೆಸುವುದರ ಬದಲು ಇವರನ್ನೆಲ್ಲಾ ಹೆಚ್ಚು ಮಾಡಿ ಅಭಿವೃದ್ಧಿ ಕಾರ್ಯಗಳು ಮತ್ತು ಜನಪರವಾಗಿ ಕಾರ್ಯಗಳಿಗೆ ಒಂದೊಂದು ಕೊಕ್ಕೆಯನ್ನು ಹಾಕಲಿಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಒಬ್ಬೊಬ್ಬರನ್ನು ಇಟ್ಟಿದ್ದೇವೆ. ಐ. ಎ. ಎಸ್., ಕೆ. ಎ. ಎಸ್. ಅಧಿಕಾರಿಗಳನ್ನೆಲ್ಲಾ ಇಟ್ಟಿದ್ದೇವೆ. ನಾನು ಯಾರ ಮೇಲೂ ವೈಯಕ್ತಿಕವಾದ, ದ್ವೇಷದಿಂದ ಹೇಳುತ್ತಿಲ್ಲ. ಇವತ್ತು ನಮ್ಮ ರಾಜ್ಯ ದಲ್ಲಿ ಉತ್ಪಾದನೆಯಾಗುತ್ತಿರುವ ಆದಾಯ, ಇರುವ ಆದಾಯದಲ್ಲಿ ಶೇಕಡ 90 ಭಾಗ ಯಾರಿಗೆ ಹೋಗುತ್ತಿದೆ, ಸ್ವಾಮಿ. ಅವರು ಇರುವುದು 3 ಪರ್‌ಸೆಂಟ್ ಜನಾಂಗ ಈ ರಾಜ್ಯದಲ್ಲಿ. 3 ಪರ್‌ಸೆಂಟ್‌ಗೆ 90 ಭಾಗ. ಇನ್ನು ಉಳಿದದ್ದು 97 ಪರ್‌ಸೆಂಟ್ ಜನರಿಗೆ. ಹೇಗೆ ಅಭಿವೃದ್ಧಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ನಮಗೆ ಯಾವುದೇ ರೀತಿಯಾದ ನಿರ್ದಿಷ್ಟವಾದ ಒಂದು ಯೋಜನೆ ಇಲ್ಲ. ಮಾರ್ಗದರ್ಶನಗಳು ಇಲ್ಲ. ಹೇಗೆ ಆಗಬೇಕು ಎಂದು ಹೇಳಿ.

ಅಧ್ಯಕ್ಷರು :- ಈಗ ಸುರೇಶ್‌ಕುಮಾರ್‌ರವರು ಒಂದು ಚೀಟಿಯನ್ನು ಕಳುಹಿಸಿದ್ದಾರೆ. ಬರೀ ಜಸ್ಟ್ ಫ್ರೆಂಡ್ಸ್ ಆಗಿರುವವರು they adhere to your advice and the trusted friends defy your advice.... ಎಂದು ಬರೆದುಕಳುಹಿಸಿದ್ದಾರೆ.

Sri. G.V. Sriramareddy:- I felt Mr. Suresh Kumar's skill. No problem in it. ಹಾಗಾಗಿ ಇವತ್ತು ಈ ರಾಜ್ಯದ ಅಭಿವೃದ್ಧಿಯಾಗಬೇಕಾದರೆ ಒಂದು ನಿರ್ದಿಷ್ಟವಾದ ಪ್ರಗತಿಪರವಾದಂಥ ಯೋಜನೆಯನ್ನು ಮತ್ತು ಆಯವ್ಯಯವನ್ನು ನಾವು ಸಿದ್ಧರಾಮಯ್ಯನವರಿಂದ ನಿರೀಕ್ಷೆ ಮಾಡಿದ್ದೆವು. ಏಕೆಂದರೆ ಸಿದ್ಧರಾಮಯ್ಯನವರ ಬಗ್ಗೆ ಪ್ರತ್ಯೇಕವಾದ ಅಭಿಪ್ರಾಯ ಇದೆ. ಪ್ರಾಮಾಣಿಕವಾದ ಕಾಳಜಿ ಇರುವ ಒಬ್ಬರು, ಜನರ ಬಗ್ಗೆ ಕಾಳಜಿ ಇರುವವರು, ಅವರು ಏಕೆ ಇಂಥ

ಗೊತ್ತು ಗುರಿ ಇಲ್ಲದೇ ಇರುವ ಬಜೆಟ್‌ನ್ನು ಮಂಡಿಸಿದರು? ಇದು ಒಂದು. ಇದು ಗೊತ್ತು ಗುರಿಯಿಲ್ಲದೇ ಇರುವ ಬಜೆಟ್ ಈ ರಾಜ್ಯವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತೆ. ಎರಡನೇ, ಅಂಶ ನಾನು ಆಗಲೇ ಹೇಳಿದ್ದೇನೆ, ಮತ್ತೊಮ್ಮೆ ರಿಪೀಟ್ ಮಾಡುತ್ತೇನೆ, 'every Political Party have its right to have a Political Budget.' ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಆದರೆ No Political Party and Government have a right to dismantle the growth of the State's economy. ಅದು ಇವತ್ತು ಇಲ್ಲ ಆಗಿದೆ. ಅದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಹಾಗಾಗಿ ಈ ಬಜೆಟ್‌ನಲ್ಲಿ ಅಭಿವೃದ್ಧಿಗೆ ಬೇಕಾಗಿರುವ ಅಂಶವಾಗಲಿ, ನಿರುದ್ಯೋಗಿ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಬೇಕಾಗಿರುವ ಅಂಶವಾಗಲಿ, ಆರೋಗ್ಯದ ಸೌಲಭ್ಯಗಳನ್ನು ಸಾಮಾನ್ಯ ಜನರಿಗೆ ವಿಸ್ತರಿಸುವ ಪ್ರಶ್ನೆಯಾಗಲಿ, ಯಾವುದೂ ಇದರಲ್ಲಿ ಇಲ್ಲ. ಕೃಷಿ ಉತ್ಪಾದನೆಗಳನ್ನು ಹೆಚ್ಚು ಮಾಡಲಿಕ್ಕೆ ಪ್ರತ್ಯೇಕವಾಗಿ ಆಹಾರ ಸಾಮಾಗ್ರಿಗಳನ್ನು ಉತ್ಪಾದನೆ ಮಾಡಲಿಕ್ಕೆ ಯಾವುದೇ ರೀತಿಯಾದಂಥ ಬಜೆಟ್‌ನಲ್ಲಿ ಕಾರ್ಯಕ್ರಮವಿಲ್ಲ. ಹಾಗಾಗಿ ಈ ಬಜೆಟ್‌ನ್ನು ನಾನು ವಿರೋಧಿಸಿ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ಶ್ರೀ ಜಿ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) :- ಮಾನ್ಯ ಅಧ್ಯಕ್ಷರೇ, ನನ್ನ ಹೆಸರನ್ನು ಕರೆದದ್ದಕ್ಕಾಗಿ ತಮಗೆ ವಂದಿಸಿ ನಾನು ಶ್ರೀರಾಮರೆಡ್ಡಿಯವರಲ್ಲಿ ಅರ್ಧ ಭಾಗ ಮಾತ್ರ ಮಾತನಾಡಲಿಕ್ಕೆ ಬಯಸುತ್ತೇನೆ. ಸನ್ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಎಲ್ಲರಿಗಿಂತ ಹೆಚ್ಚು ಅಭಿಮಾನ ಇಟ್ಟುಕೊಂಡಿದ್ದವರಲ್ಲಿ ನಾನೂ ಒಬ್ಬ, ಏಕೆಂದರೆ ಗ್ರಾಮೀಣ ಪ್ರದೇಶದಿಂದ ಬಂದು ಅಲ್ಲಿಯ ಜನಗಳ ಕಷ್ಟಸುಖ ಅರಿತುಕೊಂಡು ಆ ಜನಕ್ಕೇನಾದರೂ ಅಧಿಕಾರ ಬಂದಾಗ ಮಾಡುತ್ತಾರೆ ಎಂದು ಹೇಳಿ. ಅವರೇ ತಯಾರು ಮಾಡಿರುವ ವರದಿಗಳನ್ನು ಓದುತ್ತಾ ಹೋದರೆ ಅವರು ಕೂಡ ಈ ವಿಷಮವರ್ತುಲದಲ್ಲಿ ಸಿಕ್ಕಿಹಾಕಿಕೊಂಡು ಬಿಟ್ಟರೇನೊ ಅಧಿಕಾರಿಗಳ ಮಧ್ಯೆ ಮತ್ತೆ ಪುಢಾರಿಗಳ ಮಧ್ಯೆ ಸಿಕ್ಕಿಹಾಕಿಕೊಂಡರೇನೊ ಎನ್ನುವ ಭಾವನೆ ಬರುತ್ತದೆ. ಏಕೆಂದರೆ ಈ ರಾಜ್ಯದ ಅಂಕಿಅಂಶಗಳನ್ನು ಓದಿ ಬಜೆಟ್ ಮಾಡಿದ್ದರೆ ಕಳೆದ ವರ್ಷ ಏನೂ ಉತ್ಪಾದನೆಯಾಗಬೇಕಾಗಿತ್ತು ಹತ್ತು ಲಕ್ಷ ಟನ್ ದವಸಧಾನ್ಯಗಳು ಕೊರತೆಯಾಗಿದೆ. ಕಡಿಮೆ ಪ್ರೊಡ್ಯೂಸ್ ಆಗಿದೆ. ಆ ಹತ್ತು ಲಕ್ಷ ಟನ್ ದವಸ ಕಡಿಮೆಯಾಗುವುದರ ಜೊತೆಗೆ ಅಗ್ರಿಕಲ್ಚರ್ ಪ್ರೊಡ್ಯೂಸಸ್ ಬೆಲೆ ಕೂಡ ಕಡಿಮೆಯಾಗಿದೆ ಈ ರಾಜ್ಯದಲ್ಲಿ. ಒಂದು ಕಡೆ ಉತ್ಪಾದನೆಯೇ ಕಡಿಮೆಯಾಗಿದೆ. ಇನ್ನೊಂದು ಕಡೆ ಅದರ ಧಾರಣೆ ಕೊರತೆಯಾಗಿದೆ. ಆ ಉತ್ಪಾದನೆಯನ್ನು ನಂಬಿಕೊಂಡಿದ್ದವನ ಬಗ್ಗೆ ತಾವೇನಾದರೂ ಕಾರ್ಯಕ್ರಮ ಹಾಕಿದ್ದೀರಾ? ಆ ಭಾಗದ ಜನರು ಏನು ಅದನ್ನು ನಂಬಿಕೊಂಡು ಒಂದು ವರ್ಷ ಜೀವನ ಮಾಡುತ್ತೇನೆಂದು ಭಾವಿಸಿದ್ದರು, ಏನಾದರೂ ಅವರ ಬಗ್ಗೆ ಪರಿಹಾರ ಯೋಚನೆ ಮಾಡಿದ್ದೀರಾ ಎಂದರೆ ತಮ್ಮ ಇಡೀ ಭಾಷಣದಲ್ಲಿ ಮತ್ತೆ ತಮ್ಮ ಇಡೀ ಪುಸ್ತಕದಲ್ಲಿ ಆ ಬಗ್ಗೆ ಯಾವುದೇ ಪ್ರಸ್ತಾಪವೂ ಇಲ್ಲ. ಮಾನ್ಯ ಸಿದ್ಧರಾಮಯ್ಯನವರು 3-4ನೇ ಸಲ ಆಯವ್ಯಯವನ್ನು ಮಂಡಿಸುತ್ತಿದ್ದಾರೆ. ನಾನು ಎರಡು-ಮೂರು ವಿಷಯದ ಬಗ್ಗೆ ಪ್ರಸ್ತಾಪಮಾಡಲಿಕ್ಕೆ ಬಯಸುತ್ತೇನೆ. ಒಂದು, ತಾವೇನು ಮೌಲ್ಯವರ್ಧಿತ ಟ್ಯಾಕ್ಸ್ ಮಾಡಬೇಕು ಎಂದು ಹೇಳಿ ಸ್ಲ್ಯಾಬ್‌ನ್ನು ಕಡಿಮೆ ಮಾಡುತ್ತೇವೆ ಎಂದು ಹೊರಟಿದ್ದೀರಿ. ಆ ಕ್ಷಣ ಸ್ವಲ್ಪ ನೋಡಬೇಕಾಗಿತ್ತು. 8 ಪರ್‌ಸೆಂಟ್ ಟ್ಯಾಕ್ಸ್‌ನ್ನು ಯಾವ ಐಟಂ ಮೇಲೆ ಹಾಕಿದಿರಿ, 12 ಪರ್ಸೆಂಟ್ ಟ್ಯಾಕ್ಸ್‌ನು ಯಾವ ಐಟಂ ಮೇಲೆ ಹಾಕಿದ್ದಿರಿ ಎಂದು. 8 ಇರುವುದನ್ನು 2 ಸೇರಿಸಿ 10 ಮಾಡುತ್ತೇನೆ, 12 ಇರುವುದನ್ನು 2 ಕಳೆದು 10 ಮಾಡುತ್ತೇನೆ ಎಂದು ಬಿಟ್ಟರೆ ಅದು ಆಯವ್ಯಯವಾಗುವುದಿಲ್ಲ. ಈ ರಾಜ್ಯದಲ್ಲಿ

ಜನರು ನಿಮ್ಮನ್ನು ನಂಬಿಕೊಂಡು ಬದುಕುವುದು ಕಷ್ಟವಾಗಿಬಿಡುತ್ತದೆ. ಯಾವ ಯಾವ ಐಟಂನಲ್ಲಿ 8 ಪರ್‌ಸೆಂಟ್ ಎಂದು ಇಟ್ಟಿದ್ದಿರಿ, ನಿಮಗೆ ಅದು ಪಾಪ್ಯುಲರ್ ಪ್ರೋಗ್ರಾಮ್ ಆಗಿತ್ತು. ಅದು ಒಬ್ಬ ಸಾಧಾರಣ ಮನುಷ್ಯನಿಗೆ ಅನುಕೂಲವಾಗುವ ಐಟಂ ಆಗಿತ್ತು. ಅದು ಈ ದೇಶದಲ್ಲಿ ಕೊಳ್ಳುವುದಕ್ಕೆ ಶಕ್ತಿ ಇಲ್ಲದವನಿಗೆ ಸಹಾಯಕಾರಿಯಾಗಬೇಕಾದ ವಸ್ತುವಾಗಿತ್ತು. ಎಲ್ಲದನ್ನೂ ಸಾರಾಸಗಟು 10 ಪರ್‌ಸೆಂಟ್ ಎಂದು ಮಾಡಿಬಿಟ್ಟರಿ . ಯಾವ ಯಾವ ಐಟಂಗೆ 12 ಪರ್‌ಸೆಂಟ್ ಎಂದು ಇಟ್ಟಿದ್ದಿರಿ, ಅದನ್ನು ಕೊಡಬಹುದಾಗಿತ್ತು. ಯಾರೊ ಹೆಲಿಕಾಪ್ಟರ್‌ಗೆ ಕೊಡಬಹುದಾಗಿತ್ತು. ಯಾರೋ ಲಿಫ್ಟ್‌ಗೆ ಕೊಡಬಹುದಾಗಿತ್ತು. ಯಾರೋ ಸಿಗರೇಟ್ ಮೇಲೆ ಫಿಲ್ಟರ್‌ಗೆ ಕೊಡಬಹುದಾಗಿತ್ತು. ಯಾರೊ ಗ್ಯಾಂಬ್ಲಿಂಗ್ ಆಕ್ಟಿವಿಟೀಸ್ ಮಾಡುವ ಕಡೆ ಕೊಡಬಹುದಾಗಿತ್ತು. ಯಾರೋ ಇನ್ನೊಂದನ್ನು ಮಾಡುವ ಕಡೆ ಕೊಡಬಹುದಾಗಿತ್ತು. ಜೂಜಾಡುವ ಕಡೆ ಕೊಡಬಹುದಾಗಿತ್ತು. ತಾವು ಏನು ಮಾಡಿದ್ದೀರಿ, 12 ರಿಂದ 10 ಮಾಡುವ ಕಡೆ ಜೂಜಾಡುವವರಿಗೆ ಕಡಿಮೆ ಮಾಡಿದ್ದೀರಿ. ಫಿಲ್ಟರ್ ಸಿಗರೇಟ್ ಸೇದುವವರಿಗೆ ಕಡಿಮೆ ಮಾಡಿದ್ದೀರಿ 8 ರಿಂದ 10 ಮಾಡಬೇಕಾದರೆ ಏನು ಮಾಡಿದ್ದೀರಿ,ಮಾನ್ಯ ರೆಡ್ಡಿಯವರು ಹೇಳಿದ ಹಾಗೆ ಬಟ್ಟೆ, ಸೋಪು ಉಪಯೋಗಿಸುವವರಿಗೆ ಜಾಸ್ತಿ ಮಾಡಿದಿರಿ. ತಾವು ಇಲ್ಲ, 4 ಮಾಡಿದ್ದೇನೆ ಎಂದಿರಿ. ಡಿಟರ್ಜೆಂಟ್, ಶ್ಯಾಂಪುಗೆ ಕಡಿಮೆಯಾಗುತ್ತದೆ ಈ ರಾಜ್ಯದಲ್ಲಿ ಬಟ್ಟೆ ಸೋಪಿನ ರೇಟು ಜಾಸ್ತಿಯಾಗುತ್ತದೆ. ಚಪ್ಪಲಿ ಟ್ಯಾಕ್ಸ್ ಜಾಸ್ತಿಯಾಗುತ್ತದೆ. ಇನ್ನೊಂದು ಕಡೆ ಏರ್ ಕಂಡೀಷನಿಂಗ್ ರೇಟನ್ನು ತಾವು ಕಡಿಮೆ ಮಾಡುತ್ತೀರಿ. 12 - 10ಕ್ಕೆ ತರಬೇಕು ಎಂದು ಹೇಳಿ ನೀವು ಸ್ಲ್ಯಾಬ್‌ನ್ನು ಕಡಿಮೆ ಮಾಡಬೇಕು ಎಂದು ಯೋಚನೆ ಮಾಡುವುದರಲ್ಲಿ ನಮ್ಮದೇನೂ ಅಭ್ಯಂತರವಿರಲಿಲ್ಲ. 15 ಮಾಡಿ. ಕೊಡಲಿ 3 ಪರ್‌ಸೆಂಟನ್ನು ಜಾಸ್ತಿ ಈ ದೇಶದ ಬಂಡವಾಳಕ್ಕೆ ಅವರು ಕೊಡಲಿ. ಇವತ್ತು ಏರ್‌ಕಂಡೀಷನ್ ಹಾಕಿಕೊಂಡು ಓಡಾಡುವವರು. ಲಿಫ್ಟ್‌ನಲ್ಲಿ ಓಡಾಡುವವರು ಅವರೇನು ಮನೆಯಿಂದ ತಂದುಕೊಡುತ್ತಿರಲಿಲ್ಲ. ಅವರೇನು ಮನೆಯಿಂದ ತಂದು ಕೊಡುತ್ತಿರಲಿಲ್ಲ. ಇವತ್ತು ಮೊಸ್ಕಾಕ್‌ನ್ನು ಹಾಕಿಕೊಂಡು ಮನೆಯಲ್ಲಿ ಬದುಕಿರುವವರು, ಅವರೇನು ಕಷ್ಟಪಟ್ಟು ಕೊಡುತ್ತಿರಲಿಲ್ಲ. ಪಿಂಗಾಣಿ ಪಾತ್ರೆಯನ್ನು ಬಳಸುವವರು. ಯಾರ ಮೇಲೆ ಟ್ಯಾಕ್ಸ್ ತೆಗೆದಿದ್ದೀರಿ. ಪಿಂಗಾಣಿ ಪೋರ್ಸಲೀನ್‌ನ್ನು ಇಳಿಸಿದ್ದೀರಿ, ಮೊಸ್ಕಾಕ್ ಬಗ್ಗೆ ಇಳಿಸಿದ್ದೀರಿ. ಅಮೃತಶಿಲೆಯನ್ನು ಇಳಿಸಿದ್ದೀರಿ, ಫಿಲ್ಟರ್ ಸಿಗರೇಟ್ ಇಳಿಸಿದ್ದೀರಿ, ತಾವು ಏರ್‌ಕಂಡೀಷನಿಂಗ್ ರೇಟನ್ನು ಇಳಿಸಿದ್ದೀರಿ. ಲಿಫ್ಟ್ ಬಗ್ಗೆ ಇಳಿಸಿದ್ದೀರಿ. ಇದು ಪ್ರಾಮಾಣಿಕವಾದ ಬಜೆಟ್ ಎಂದು ಹೇಳಿ ನಾವು ಕೇಳಬೇಕಾಗುತ್ತದೆ. ಯಾರ ಮೇಲೆ ಜಾಸ್ತಿ ಮಾಡುತ್ತೀರಿ, ಸ್ವಲ್ಪ ತೆಗೆದುನೋಡಿ. 8 ರಿಂದ 10 ನ್ನು ತಾವು ಮಾಡುವ ಕಡೆ ಎಲ್ಲಾ ಸಾಮಾನ್ಯ ನಾಗರೀಕನಿಗೆ ಹೊರೆಯಾಗುವ ರೀತಿಯಲ್ಲಿ ಇವತ್ತು ಬಜೆಟ್‌ನ್ನು ಈ ರಾಜ್ಯಕ್ಕೆ ತಾವು ಇಟ್ಟಿದ್ದೀರಿ. ಇದನ್ನು ತಾವು ಕಡ್ಡಾಯವಾಗಿ ಪುನರ್‌ಪರಿಶೀಲನೆ ಮಾಡಲೇಬೇಕು. ಏಕೆಂದರೆ ಬಹುಶ: ಇದು ಯಾರಿಗೂ ಶೋಭೆ ತರುವ ಬಜೆಟ್ ಆಗುವುದಿಲ್ಲ. ನಾನು ಸರಳೀಕರಣಗೊಸುತ್ತೇನೆ. ಎನ್ನುವ ಒಂದೇ ಕಾರಣಕ್ಕೆ ಮ್ಯಾಥಮೆಟಿಕ್ಸ್‌ಗೆ ಅಥವಾ ಅರ್ಥಿಮೆಟಿಕ್ಸ್‌ಗೆ ಸ್ಟಿಕ್ ಆನ್ ಆಗಬಾರದು. ಯಾರೋ ಆಕ್ಸ್‌ಫರ್ಡ್‌ನಲ್ಲಿ ಓದಿದವರು, ಕೇಂಬ್ರಿಡ್ಜ್‌ನಲ್ಲಿ ಓದಿದವರು, ಹಾರ್ವರ್ಡ್ ಯೂನಿವರ್ಸಿಟಿಯಲ್ಲಿ ಓದಿದವರ ಬಜೆಟ್‌ನ್ನೆಲ್ಲಾ ನಾವು ಕೇಳಿದ್ದೇವೆ. ಈ ದೇಶ ಆ ಸ್ಥಿತಿಗೆ ಬರುವುದಕ್ಕೆ ಅವರೇ ಸ್ವಾಮಿ ಕಾರಣ. ರಿಸರ್ವ್ ಬ್ಯಾಂಕ್ ಹೇಳಿದಂತೆ ಯಾರೊ ನಾನು ಎಕಾನಾಮಿಸ್ಟ್ ಎಂದು ಅಡ್ವೈಸ್ ಮಾಡಿದಂತೆ ಬಜೆಟ್ ಇಟ್ಟು ಕೊಂಡು ಬಂದ ಪುಣ್ಯಾತ್ಮರು ನಮ್ಮನ್ನು ಇವತ್ತು ಹಳ್ಳಿಗಾಡಿನ ಜನರನ್ನು ಭಿಕ್ಷುಕರನ್ನು ಮಾಡಿದರು. ನಮಗೇನೂ ಗತಿ

ಇಲ್ಲದಂಗೆ ಮಾಡಿದರು. ಏನು ಹತ್ತು ಜನ, ಹನ್ನೆರಡು ಜನಕ್ಕೋಸ್ಕರ ತೃಪ್ತಿ ಮಾಡಬೇಕಾಗಿತ್ತು, ಈ ಲೆಕ್ಕಾಚಾರಗಳನ್ನು ನಮಗೆಲ್ಲಾ ರೈತಪ್ರತಿನಿಧಿಗಳಿಗೆ, ದನಕಾಯುವ ಪ್ರತಿನಿಧಿಗಳಿಗೆ ಹೇಳಿಕೊಟ್ಟರು. ನಾವು ಇದೇ ಸತ್ಯ ಎಂದು ತಿಳಿದುಕೊಂಡು ಅವರಿಗೆ ಪರ ಮಾಡುತ್ತಾ, ಹೋಗುತ್ತಿದ್ದೇವೆ. ತಾವು ತೆಗೆದುನೋಡಿ. ರಾಗಿ ಬೆಳೆ ಕುಸಿದಿದೆ. ತಾವು ಒಪ್ಪುತ್ತೀರಾ? ಈ ರಾಜ್ಯದಲ್ಲಿ ಜೋಳದ ಬೆಲೆ ಕುಸಿದಿದೆ, ತಾವು ಒಪ್ಪುತ್ತೀರಾ? ಪ್ರೊಡಕ್ಷನ್ 10 ಲಕ್ಷ ಟನ್ಸ್ ರೆಡ್ಯೂಸ್ ಆಗಿದೆ. ಏನು ನಿಮ್ಮ ಸರ್ಕಾರದ ಕಾರ್ಯಕ್ರಮ? ನಿಮ್ಮ ಸರ್ಕಾರದ್ದು ಪ್ರೋಗ್ರಾಮ್ ಏನು? ಕಳೆದ ವರ್ಷ ಕರ್ನಾಟಕದಲ್ಲಿ ನಿರೀಕ್ಷೆ ಮಾಡಿದ್ದ 10 ಲಕ್ಷ ಟನ್ ಗಿಂತ ಕಡಿಮೆ ಬೆಳೆ ಬೆಳೆದಿದ್ದಾರೆಂದರೆ how are you going to meet the target? ಇದಕ್ಕೆ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದರಿಂದ ಎಷ್ಟು ಉದ್ಯೋಗ ನಷ್ಟವಾಯಿತು, ಜಾನುವಾರುಗಳ ಗತಿಯೇನು? ಜನರ ಗತಿಯೇನು? ಎಂಬ ಬಗ್ಗೆ ತಾವು ಈ ಸಭೆಯಲ್ಲಿ ಹೇಳಬೇಕು. ಎರಡನೆಯದಾಗಿ, ಪರ್ಚೇಸ್ ಫವರ್, ತಮ್ಮ ಬಜೆಟ್ ಭಾಷಣವನ್ನು ನೋಡಿದರೆ ಇವತ್ತು ನಮ್ಮ ದೇಶದ ಜನರಿಗೆ ಪರ್ಚೇಸ್ ಫವರ್ ಇಲ್ಲದಂಥ ಸ್ಥಿತಿ ಇದೆ. ತಾವು ಬಜೆಟ್‌ನ್ನು ಎರಡು ಭಾಗವಾಗಿ ಮಾಡಿಕೊಳ್ಳಬೇಕು. ಒಂದು ರಾಜ್ಯಸ್ವದಿಂದ ನಿಮಗೆ ಬರಬೇಕಾದ ವರಮಾನ ಮತ್ತೊಂದು ಈ ದೇಶದ ಪ್ರಜೆಯೂ ಸಹ ಸುಭೀಕ್ಷವಾಗಿ ಬದುಕಬೇಕಾದಂಥ ಸ್ಥಿತಿಯದ್ದು. ಅವನ ವರಮಾನವನ್ನು ಜಾಸ್ತಿ ಮಾಡುವುದಕ್ಕೆ, ಸುಖವಾಗಿ ಬಾಳುವುದಕ್ಕೆ, ಸದೃಢ ಆರ್ಥಿಕವಾಗಿ ಆಗುವುದಕ್ಕೆ ತಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? what is the assistance you are going to give to the poor farmers. ಆತನಿಗೆ ಯಾವುದರಲ್ಲಿ ರಿಯಾಯಿತಿಯನ್ನು ತೋರಿಸಿದ್ದೀರಿ? ಅವನ ಆರ್ಥಿಕ ಸ್ಥಿತಿ ಉತ್ತಮವಾಗಲು ಯಾವುದರಲ್ಲಿ ಉತ್ತೇಜನ ನೀಡುತ್ತಿದ್ದೀರಿ? ನಿಮಗೆ ಆ ಜವಾಬ್ದಾರಿ ಇಲ್ಲವೆ? ಈ ರಾಜ್ಯದಲ್ಲಿರುವ ಬಡವರಿಗೆ, ಮಧ್ಯಮ ವರ್ಗದವರಿಗೆ ಸಹಾಯ ಮಾಡತಕ್ಕ ಜವಾಬ್ದಾರಿ ತಮಗೆ ಇಲ್ಲವೆಂದು ತಾವು ಒಪ್ಪುವುದಾಗಿದ್ದರೆ ಇದು ಸಿದ್ಧರಾಮಯ್ಯನವರು ಇಟ್ಟ ಬಜೆಟ್ ಅಲ್ಲವೆಂದು ನಾನೂ ಒಪ್ಪುತ್ತೇನೆ. ನಾನು ಅನೇಕ ವರ್ಷಗಳಿಂದ ತಮ್ಮ ಒಡನಾಟದಲ್ಲಿದ್ದವನು. ತಾವು ಖಂಡಿತವಾಗಿ ಗ್ರಾಮೀಣ ಜನರ ಪರವಾಗಿದ್ದಿರಿ. ಆದರೆ ತಾವು ಈ ಬಜೆಟ್‌ನಲ್ಲಿ ಆ ವರ್ಗದವರ ಬಗ್ಗೆ ಯಾವುದೇ ಕಳಕಳಿಯನ್ನು ತೋರಿಸಿಲ್ಲ. ಹಳ್ಳಿಯ ಬದುಕನ್ನು ಹಸನುಮಾಡಲು ಯಾವುದೇ ಕಾರ್ಯಕ್ರಮಗಳಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಯಾರು ನೌಕರಿಯಲ್ಲಿರುತ್ತಾರೆ ಅವರ ಜೊತೆ ಇತರರು ಸ್ಪರ್ಧೆ ಮಾಡಿ ಬದುಕಬೇಕಾಗಿದೆ ಓದಿದವನು, ನೌಕರ ಸೇರಿಕೊಂಡಿರುವ ತಮ್ಮನ ಬಗ್ಗೆ ಅಣ್ಣನಾದವನು ನಾಚಿಕೆಯಿಂದ ಬದುಕಬೇಕಾದ ಸ್ಥಿತಿ ಬಂದಿದೆ. ಒಂದು ಕಡೆ ಹೇರಳವಾಗಿ ಸಂಬಳಗಳ ಹೆಚ್ಚಳ, ಅನುಕೂಲಗಳ ಹೆಚ್ಚಳ, ಇನ್ನೊಂದು ಕಡೆ ನಿರ್ಗತಿಕರನ್ನಾಗಿ ಮಾಡುತ್ತಿರುವ ವ್ಯವಸ್ಥೆಯನ್ನು ತಾವು ಸರಿದೂಗಿಸುತ್ತೀರೆಂದು ಭಾವಿಸಿದ್ದೆ, ಖಂಡಿತವಾಗಿ ಆ ಯಾವುದೇ ಪ್ರಯೋಗ ತಮ್ಮ ಭಾಷಣದಲ್ಲಿ ಆಗಿಲ್ಲ. ಶೆಡ್ಯುಲ್ ಐದರಲ್ಲಿ ತೆರಿಗೆ ಹಾಕುವ ಮೂಲಕ ಮಾನ್ಯ ಸಿದ್ಧರಾಮಯ್ಯನವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿಬಿಟ್ಟಿದ್ದಾರೆ. ದಿನನಿತ್ಯ ಉಪಯೋಗಿಸತಕ್ಕ ವಸ್ತುಗಳನ್ನು ಶೆಡ್ಯೂಲ್ ಐದರಲ್ಲಿ ಹಾಕಿ ಅದಕ್ಕೆ ಒಂದು ಮಹತ್ವವಿದೆ. ಇವುಗಳನ್ನಾದರೂ ತೆರಿಗೆಯಿಂದ ಹೊರಗಿಡುವ ಸಾಮಾನ್ಯ ನೀತಿ ಇದೆ. ಯಾವುದೇ ಸರ್ಕಾರ ಬಂದರೂ ಸಹ ಶೆಡ್ಯೂಲ್ ಐದರ ಮೇಲೆ ದಿಢೀರ್ ಎಂದು ತೆರಿಗೆಯನ್ನು ಹಾಕುತ್ತಿರಲಿಲ್ಲ. ಕಾಂಗ್ರೆಸ್‌ನವರು ವೀಟ್ ಪ್ರಾಡಕ್ಟ್ ್ಸ ಮೇಲೆ ತೆರಿಗೆಯನ್ನು ಹಾಕಿದ್ದಾಗ ನಾವೇ ವಿರೋಧ ಮಾಡಿದ್ದೆವು. ತಮ್ಮ ಪಕ್ಷದವರೇ ಅದನ್ನು ಸಿದ್ಧಾಂತವನ್ನಾಗಿ ಮಾಡಿಕೊಂಡು ವಿರೋಧ

ಮಾಡಿದ್ದರು. ಕೇವಲ ಫ್ಲೋರ್ ಮಿಲ್‌ನವರ ಮೇಲೆ ತೆರಿಗೆಯನ್ನು ಹಾಕುತ್ತಿಲ್ಲ ಇದನ್ನು ಬಳಕೆ ಮಾಡುವ ಜನಸಾಮಾನ್ಯರ್ಯಾರಿದ್ದಾರೆ ಅವರ ಮೇಲೆ ತೆರಿಗೆ ಹಾಕಿದಂತಾಗುತ್ತದೆಂದು ವಿರೋಧ ಮಾಡಿದ್ದರು. ಆದರೆ ತಾವು ಇಂದು ಇಲ್ಲಿ ದಿಢೀರನೆ ಎರಡು ಪರ್‌ಸೆಂಟ್ ತೆರಿಗೆಯನ್ನು ಹಾಕಿದ್ದೀರಿ. ಟರ್ನೋವರ್ ಟ್ಯಾಕ್ಸ್‌ನ್ನು ರ್ಯಾಷನಲೈಜೇಷನ್ ಮಾಡಿದ್ದೇವೆಂದು ಹೇಳಿದ್ದೀರಿ. ಅಷ್ಟು ಕೋಟಿ ಬಂಡವಾಳವನ್ನಾಗಿ ವ್ಯಾಪಾರ ಮಾಡದಿದ್ದರೆ ಆ ಫ್ಯಾಕ್ಟರಿಯನ್ನು ಇವತ್ತು ನಡೆಸಲು ಆಗುವುದಿಲ್ಲ. ಇದರ ಬಗ್ಗೆ ನಾನು ವಿವರವಾಗಿ ಮಾತನಾಡಬಯಸುತ್ತೇನೆ. ಗೋಧಿಯನ್ನು ನಾವು ಹೊರರಾಜ್ಯಗಳಿಂದ ಕೊಂಡು ಕೊಂಡು ಬರಬೇಕು. ಆ ರೀತಿ ತರಬೇಕಾದರೆ ಬೇರೆಯವರಿಗಿಂತ 150-200 ರೂಪಾಯಿ ಜಾಸ್ತಿ ವೆಚ್ಚವಾಗುತ್ತದೆ. ಇಲ್ಲಿ ತಂದು ರವೆಯೋ, ಮೈದವನ್ನೋ ಮಾಡಿ ಮಾರಾಟ ಮಾಡಬೇಕು. ಆದ್ದರಿಂದ, ಇಲ್ಲಿ ಪ್ರೋಸೆಸಿಂಗ್ ಕಾಸ್ಟ್ ಹೆಚ್ಚಾಯಿತು. ಹೋಗಲಿ ವಿದ್ಯುತ್‌ನ್ನು ಸರಿಯಾಗಿ ಕೊಡುತ್ತೀರಾ? ಅದೂ ಇಲ್ಲ. ಇನ್‌ಸ್ಟಾಲ್ಡ್ ಕೆಪಾಸಿಟಿಯನ್ನು ಸಂಪೂರ್ಣವಾಗಿ ಉಪಯೋಗಿಸಿ ಕೊಳ್ಳತಕ್ಕ ಶಕ್ತಿ ನಮಗಿದೆಯೇ, ಅದೂ ಇಲ್ಲ, 30-40 ಪರ್‌ಸೆಂಟ್‌ಗಿಂತ ಹೆಚ್ಚು ಪ್ಲಾಂಟ್ಸ್ ಯುಟಿಲೈಜೇಷನ್ ಆಗುತ್ತಿಲ್ಲ, ಒಂದು ಕಡೆ ಹಾಕಿರುವ ಮೂಲ ಬಂಡವಾಳದ ಮೇಲೆ ಬಡ್ಡಿಯನ್ನು ಕೊಡಬೇಕು, ಮತ್ತೊಂದು ಕಡೆ ತೆರಿಗೆಯನ್ನು ಕೊಡಬೇಕು, ಇದನ್ನು ಬಳಕೆದಾರರ ಮೇಲೆ ಹೇರಲು ಹೋದರೆ ಏನಾಗುತ್ತದೆಂದರೆ, ಮಹಾರಾಷ್ಟ್ರದವರು, ಆಂಧ್ರದವರು, ತಮಿಳುನಾಡಿನವರು ಇಲ್ಲಿನ ಮೇಜರ್ ಕನ್‌ಸ್ಯೂಮರ್‌ಗಳಿಗೆ ಮೈದವನ್ನು ಕೊಡುತ್ತಾರೆಂದರೆ ನಮ್ಮ ರಾಜ್ಯದಲ್ಲಿ ಮೈದಾವನ್ನು ಮಾಡಿದವರ ಗತಿಯೇನು? ಈ ರಾಜ್ಯದಲ್ಲಿ ಗೋಧಿಯನ್ನು ಅರೆದು ನುಚ್ಚು ಮಾಡಿ ಮಾರುವವರ ಸ್ಥಿತಿಯೇನಾಗುತ್ತದೆ ಎಂಬ ಬಗ್ಗೆ ತಾವು ಯೋಚನೆ ಮಾಡಿದ್ದೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರೂ ಬುದ್ಧಿವಂತರು. ಗೋಧಿಯ ಉತ್ಪಾನ್ನಗಳ ಮೇಲೆ ಎರಡು ಪರ್‌ಸೆಂಟ್ ತೆರಿಗೆ ಹಾಕಿದ್ದೀರಿ, ಇದರಿಂದಾಗಿ ಕ್ವಿಂಟಾಲ್‌ಗೆ ಸುಮಾರು 60 ರೂಪಾಯಿ ಜಾಸ್ತಿಯಾಗುತ್ತದೆ. ಇದರಿಂದಾಗಿ ಬಿಸ್ಕತ್ತು, ಬ್ರೆಡ್ ಮುಂತಾದವುಗಳನ್ನು ಉಪಯೋಗ ಮಾಡತಕ್ಕ ಜನಸಾಮಾನ್ಯರು, ರೋಗಿಗಳಿಗೆ ತೊಂದರೆಯಾಗುತ್ತದೆಂದು ನಾವುಗಳೆಲ್ಲರೂ ಭಾಷಣ ಮಾಡಿದ್ದೇವೆ. ಅದನ್ನು ಕಡಿಮೆ ಮಾಡಿದ್ದೇವೆಂದು ಅವರು ಹೇಳಿ ಹೆಸರನ್ನು ತೆಗೆದುಕೊಳ್ಳಬೇಕು. ನಾವುಗಳೆಲ್ಲರೂ ಚರ್ಚೆಯಲ್ಲಿ ಇದರ ಬಗ್ಗೆ ಮಾತನಾಡಿದ್ದೇವೆ. ಆದ್ದರಿಂದ ಮಾನ್ಯ ಸಿದ್ದರಾಮಯ್ಯನವರೇ ಸ್ವತ: ಎದ್ದುನಿಂತು ತಾವುಗಳು ಹೇಳಿದ್ದು ಮನವರಿಕೆಯಾಗಿದೆ, ತಾವುಗಳು ಅದರ ಕಡೆ ಗಮನಕೊಡುತ್ತಿರೋ ಇಲ್ಲವೋ ಎಂಬುದನ್ನು ಪರಿಶೀಲನೆ ಮಾಡಲು ಅಲ್ಲಿ ಎರಡು ಪರ್‌ಸೆಂಟ್ ತೆರಿಗೆ ಹಾಕಿದ್ದೆ, ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಹೇಳಿದರೆ ಈ ವಿಚಾರದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ಬಿಟ್ಟು ಬೇರೆ ವಿಚಾರದ ಬಗ್ಗೆ ಸಮಯವನ್ನು ಉಪಯೋಗ ಮಾಡಬಹುದು. ತಾವು ಇದರಲ್ಲಿ ಹಾಕಿರುವ ತೆರಿಗೆಯನ್ನು ಹಿಂದಕ್ಕೆ ಪಡೆಯದಿದ್ದರೆ ಜನರು ತಮ್ಮನ್ನು ಬಿಡುವುದಿಲ್ಲ. ತಾವು ಆ ಕೆಲಸವನ್ನು ಮಾಡುತ್ತಿರೆಂದು ವಿಶ್ವಾಸವಿದೆ. ನಾಲ್ಕು ಬಾರಿ ಬಜೆಟ್‌ನ್ನು ಮಂಡಿಸಿ ಅನುಭವವಿರುವ ಮಾನ್ಯ ಸಿದ್ದರಾಮಯ್ಯನವರು ಇದನ್ನು ವಾಪಸ್ ತೆಗೆದುಕೊಂಡಿದ್ದೇನೆಂದು ಹೇಳಿದರೆ ಬೇರೆ ವಿಚಾರದ ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಹಣಕಾಸು ಸಚಿವರು ಅದನ್ನು ಹೇಳಿದರೆ ಇದರ ಬಗ್ಗೆ ನಾನು ಚರ್ಚೆಯನ್ನು ಮುಂದುವರೆಸುವುದಿಲ್ಲ, ಇಲ್ಲದಿದ್ದರೆ ಇದನ್ನು ಪೂರ್ತಿಯಾಗಿ ಹೇಳಬೇಕಾಗುತ್ತದೆ. ಇದರ

ಬಗ್ಗೆ ನಾನು ಅವರಿಗೆ ಹೆಚ್ಚು ಮನವರಿಕೆಮಾಡಿಕೊಡುವ ಉದ್ದೇಶವೇನೆಂದರೆ, ಇದರಿಂದಾಗಿ ಒಂದು ಕಡೆ ಬಳಕೆದಾರರಿಗೆ ತೊಂದರೆಯಾಗುತ್ತದೆ, ಮತ್ತೊಂದು ಕಡೆ ಈ ಉದ್ಯಮ ಸಂಪೂರ್ಣವಾಗಿ ನಿಷ್ಕ್ರಿಯೆಯಾಗಿಬಿಡುತ್ತದೆ. ಆಂಧ್ರಪ್ರದೇಶದಲ್ಲಾಗಲಿರುವ ಪರಿಸ್ಥಿತಿಯ ಬಗ್ಗೆ ತಮಗೆ ಮಾಹಿತಿಯನ್ನು ಕಳಿಸಿ ಕೊಡುತ್ತೇನೆ. ಅಲ್ಲಿ ಇದೇ ರೀತಿ ಕೇವಲ ಒಂದು ಪರ್‌ಸೆಂಟ್ ತೆರಿಗೆಯನ್ನು ಇದರ ಮೇಲೆ ಹಾಕಿದ್ದಕ್ಕೆ 20 ಮಿಲ್‌ಗಳು ಮುಚ್ಚಿದ್ದಾರೆ. ಅವರುಗಳು ಅಲ್ಲಿನ ಮುಖ್ಯಮಂತ್ರಿಯವರಿಗೆ ಇದಕ್ಕೆ ನೀವೇ ಜವಾಬ್ದಾರರು ಎಂದು ಮನವಿ ಪತ್ರವನ್ನು ಸಹ ಕೊಟ್ಟಿದ್ದಾರೆ. ಕಳ್ಳಲೆಕ್ಕದಲ್ಲಿ ವ್ಯಾಪಾರ ಮಾಡುವುದನ್ನು ತಪ್ಪಿಸಬೇಕಾಗಿದ್ದರೆ, ದಯಮಾಡಿ ಕನಿಷ್ಪಪಕ್ಷ ಈ ಗೋಧಿ ನುಚ್ಚು ಮಾಡಿ ಮಾರುವವರಾದರು ಸಾಚಾ ವ್ಯವಹಾರ ಮಾಡಬೇಕು ಎನ್ನತಕ್ಕ ಭಾವನೆ ತಮಗೆ ಇದ್ದರೆ ಈ ತೆರಿಗೆಯನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆಡಳಿತ ವೆಚ್ಚದಲ್ಲಿ ಕಡಿಮೆ ಮಾಡುತ್ತೇವೆಂದು ಹೋದಸಲದ ಭಾಷಣದಲ್ಲೂ ಮಾತನಾಡಿದ್ದಿರಿ ಈ ಸಲದ ಭಾಷಣದಲ್ಲೂ ಮಾತನಾಡಿದ್ದೀರಿ. ಈ ಅವಧಿಯಲ್ಲಿ ಅಂಥ ಯಾವುದೇ ಕಾರ್ಯಕ್ರಮ ಆಚರಣೆಗೆ ಬಂದಿದ್ದನ್ನು ನಾವು ನೋಡಲಿಲ್ಲ. ಒಂದು ಪರ್‌ಸೆಂಟ್ ಸಹ ವೆಚ್ಚವನ್ನು ಕಡಿಮೆ ಮಾಡಿದ್ದರ ಬಗ್ಗೆ ಸರ್ಕಾರದಲ್ಲಿ ಯಾವುದೇ ದಾಖಲೆಗಳಿಲ್ಲ. ಅದಕ್ಕೆ ಬದಲಾಗಿ ಏಳು ಹೊಸ ಜಿಲ್ಲೆ ಮಾಡಿದ್ದೀರಿ, ಆ ರೀತಿ ಮಾಡುವ ಮೂಲಕ ಜನರ ಮನೆಬಾಗಿಲಿಗೆ ಆಡಳಿತವನ್ನು ತೆಗೆದುಕೊಂಡು ಹೋಗುತ್ತೇವೆಂದಿದ್ದೀರಿ. ಯಾರಿಗೆ ಬೇಕಾಗಿತ್ತು 7 ಜಿಲ್ಲೆ, ಮಾನ್ಯ ಸಿದ್ಧರಾಮಯ್ಯನವರ ಆತ್ಮಸಾಕ್ಷಿಗೆ ಇದು ಒಪ್ಪುತ್ತದೆಯೇ ಎಂದು ಕೇಳಬಯಸುತ್ತೇನೆ. ಇದರಿಂದ ಏನು ಪ್ರಯೋಜನವಾಯಿತು?

ಶ್ರೀ ಯು. ಆರ್. ಸಭಾಪತಿ:- ಹೊಸದಾಗಿ ಜಿಲ್ಲೆಯನ್ನು ಪಡೆದುಕೊಂಡವರಿಗೆ ಆ ಪರಿಸ್ಥಿತಿ ಬಂದಿದೆ. ಹೊಸ ಜಿಲ್ಲೆ ಮಾಡಿ ಹಣವನ್ನು ಕೊಡದೆ, ಜಿಲ್ಲಾಧಿಕಾರಿಯವರನ್ನು ನೇಮಕ ಮಾಡದೆ ಇದ್ದರೆ ಆ ಜಿಲ್ಲೆಗಳು ಏಕೆ ಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ :- ಒಂದು ಕಡೆ ಹೆಚ್ಚುವರಿ ಜಿಲ್ಲೆಗಳನ್ನು ಮಾಡಿ, ಒಂದು ಕಡೆ ಜಿಲ್ಲಾಪಂಚಾಯಿತಿಗಳನ್ನು ಮಾಡಿದ್ದೇವೆಂದು ಹೇಳಿ, ಮತ್ತೊಂದು ಕಡೆ 40-45 ಜನ ಮಂತ್ರಿಗಳನ್ನು ಇಟ್ಟುಕೊಂಡು ವಾರಕ್ಕೆ ಒಂದೆರಡು ಕಡತಗಳು ಬರುವ ವ್ಯವಸ್ಥೆ ಮಾಡಿಕೊಂಡು, ಇಷ್ಟೆಲ್ಲಾ ಆಡಳಿತ ನಾವು ಮಾಡಿಸಿದ್ದೇವೆಂದು ಹೇಳಿ ನಮಗಿವತ್ತು ವರಮಾನ ಕಡಿಮೆಯಾಗಿದೆ, ರಾಜಸ್ವದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಮಟ್ಟದಲ್ಲಿ ಆದಾಯ ಬಂದಿಲ್ಲವೆಂದು ಭಾಷಣ ಮಾಡುವ ಮಟ್ಟದಲ್ಲಿ ನಾವಿದ್ದೆವೆಯೇ? ಒಂದೊಂದು ತಾಲ್ಲೂಕಿಗೆ ಒಂದೊಂದು ಜಿಲ್ಲೆ ಕೊಡಿ, ನಾವೂ ಸಂತೋಷ ಪಡುತ್ತೇವೆ. ಅಲ್ಲೊಬ್ಬರು ಡಿ.ಸಿ, ಎಸ್.ಪಿ. ಇದ್ದಾರೆಂದು ನಮಗೂ ಸಂತೋಷಕೊಡುತ್ತದೆ. ಈ ರಾಜ್ಯವಿರುವ ಸ್ಥಿತಿಯಲ್ಲಿ ಆ ಜಿಲ್ಲೆಗಳನ್ನು ಮಾಡುವ ಅಗತ್ಯವಿತ್ತೇ ಎಂದು ಚಿಂತನೆ ಮಾಡಬೇಕಿತ್ತು. ಇದನ್ನು ಎಮೋಷನಲ್ ಇಶ್ಯೂವಾಗಿ ತೆಗೆದುಕೊಳ್ಳಲು ನಾವು ತಯಾರಾಗಿಲ್ಲ. ರೆವಿನ್ಯೂ ಡಿ.ಸಿ.ಗಳಿಗೆ ಎಕ್ಸೈಜ್ ಮೇಲೆ ಅಧಿಕಾರ ಕೊಡುವುದಾಗಿ ನಿನ್ನೆ ತಾವು ಹೇಳಿದ್ದೀರಿ. ಈ ರೀತಿ ಆಲೋಚನೆ ಇದ್ದವರು ಎಕ್ಸೈಜ್ ಡಿ.ಸಿ. ಪೋಸ್ಟ್‌ನ್ನೇಕೆ ಮೊದಲೆ ರದ್ದು ಮಾಡಲಿಲ್ಲ? ಡಿ.ಸಿ.ರವರಿಗೆ ಎಕ್ಸೈಜ್ ಮೇಲೆ ಅಧಿಕಾರವನ್ನು ವಾಪಸ್ ಕೊಡುವುದಾಗಿ ಭಾಷಣ ಮಾಡುವ ತಾವು ಎಕ್ಸೈಜ್ ಡಿ.ಸಿ.ರವರ ಅಧಿಕಾರವನ್ನು ರದ್ದು ಮಾಡಿದ್ದೇವೆಂದು ಭಾಷಣದಲ್ಲಿ ಹೇಳಿದ್ದೀರಾ? ಆ ಡಿ.ಸಿ.ಯವರಿಗೇನು ಕೆಲಸ ಕೊಡುತ್ತೀರಿ? ಒಂದೊಂದು ತಾಲ್ಲೂಕಿಗೆ ಇಬ್ಬಿಬ್ಬರು ಆರಣ್ಯಾಧಿಕಾರಿಯವರ ಹುದ್ದೆಯನ್ನು ನಿರ್ಮಾಣ ಮಾಡಿದಿರಿ.

ಸೋಶಿಯಲ್ ಫಾರೆಸ್ಟ್‌ಗೊಬ್ಬರು, ಟೆರಿಟೋರಿಯಲ್ ಫಾರೆಸ್ಟ್‌ಗೆ ಒಬ್ಬರನ್ನು ನಿರ್ಮಾಣ ಮಾಡಿದಿರಿ. ಅವರ ಸ್ವಂತ ವರಮಾನ ಕಡಿಮೆಯಾಗಿದೆಯೆಂದು ಅವರು ಇರುವ ಮರಗಳನ್ನೆಲ್ಲ ಕಡಿಸಿಕೊಂಡು ಕುಳಿತಿದ್ದಾರೆ. ಅವರಿಗೇನು ಕೆಲಸವಿದೆ? ತಾವು ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿಕೊಂಡು ಹೋಗಿ, ಅವರ ವರಮಾನವನ್ನು ಜಾಸ್ತಿ ಮಾಡುವುದಕ್ಕಾಗಿ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು? ಸಿಂಪ್ಲಿಫಿಕೇಷನ್ ಆಫ್ ಟ್ಯಾಕ್ಸ್ ರಿಡಕ್ಷನ್ ಆಫ್ ಸ್ಲ್ಯಾಬ್ಸ್ ಎಂದು ಏನು ಇಟ್ಟುಕೊಂಡಿದ್ದೀರಿ ಇದರ ಬಗ್ಗೆ ದಯಮಾಡಿ ಮತ್ತೆ ಯೋಚನೆ ಮಾಡಿ. ಎಂಟನ್ನು ಹತ್ತು ಮಾಡುವ ಗಣಿತಕ್ಕೆ ಸ್ಟಿಕ್ ಆನ್ ಆಗುವುದು ಬೇಡ. ದೊಡ್ಡ ಮನಸ್ಸು ಮಾಡಿ ಎಂಟನ್ನು ನಾಲ್ಕನ್ನಾಗಿ ಮಾಡಿ. 12 ಇರುವುದನ್ನು 15 ಮಾಡಿ, ಒಂದು ಸ್ಲ್ಯಾಬ್ ಕಡಿಮೆಯಾಗಿ ಬಿಡುತ್ತದೆ. 12 ಕೊಡುತ್ತಿರುವವರು 15 ಕೊಟ್ಟರೇನು ಅಪರಾಧವಾಗುವುದಿಲ್ಲ. ತಾವು ಕೆಲವು ಜನರಿಗೆ ಭಾರಿ ರಿಯಾಯಿತಿಯನ್ನು ತೋರಿಸಿದ್ದೀರಿ. ಪ್ರಮೋಟರ್‌ಗಳು, ಬಿಲ್ಡರ್‌ಗಳಿಗೆ ಎರಡು ಲಕ್ಷದವರೆಗಿದ್ದಿದ್ದನ್ನು ಕೈಗಾರಿಕೆ ಮಾಡುವುದಕ್ಕೆ ಕೇಳುವವರಿಗೆ ಹತ್ತು ಸಾವಿರಕ್ಕೆ ಇಳಿಸಿಕೊಡುತ್ತೇವೆಂದು ಭಾಷಣ ಮಾಡುತ್ತೀರಿ. ಪ್ಲ್ಯಾಂಟ್ ಅಂಡ್ ಮೆಶಿನರಿಯನ್ನು ಲೀಸ್ ಮಾಡಿದರೆ ಎರಡು ಲಕ್ಷದವರೆಗೆ ಸ್ಟ್ಯಾಂಪ್‌ನ್ನು ತೆಗೆದುಕೊಳ್ಳಬೇಕಾಗಿದ್ದದ್ದನ್ನು ಹತ್ತು ಸಾವಿರಕ್ಕೆ ಇಳಿಸುತ್ತಿದ್ದೀರಿ. ಇದರಿಂದ ಯಾರಿಗೆ ಲಾಭ? ಇಲ್ಲಿ ಕೈಗಾರಿಕೆಗೆ ಹಣವನ್ನು ತೊಡಗಿಸುವವರು ಅದನ್ನು ಕಟ್ಟಬಹುದಾಗಿತ್ತು. ಯಾರಾದರೂ ಧಾರ್ಮಿಕದತ್ತಿ ಸಂಸ್ಥೆಗೆ ಸ್ವಲ್ಪ ಜಮೀನು ಕೊಡುತ್ತೇನೆ, ಅದಕ್ಕೆ ಸ್ಟ್ಯಾಂಪ್ ಅಂಡ್ ಡ್ಯೂಟೀಸ್‌ನಲ್ಲಿ ಸ್ವಲ್ಪ ವಿನಾಯಿತಿ ಕೊಡಿ ಎಂದರೆ ಇಲ್ಲವೆಂದು ಹೇಳುತ್ತೀರಿ. ನನ್ನದೇ ಜಮೀನನ್ನು ಆ ರೀತಿ ಚಾರಿಟಬಲ್ ಸಂಸ್ಥೆಗೆ ಕೊಡುತ್ತೇನೆಂದಾಗ ಅದಕ್ಕೆ ರಿಜಿಸ್ಟ್ರೇಷನ್ ಫೀನಲ್ಲಿ ಸ್ವಲ್ಪ ವಿನಾಯಿತಿ ಕೊಡಲು ತೊಂದರೆಯೇನಾಗುತ್ತದೆ? ರೈತರು ಅವರ ಸ್ವಂತ ಮನೆಯನ್ನು ಯಾರಿಗಾದರೂ ದಾನ ಮಾಡಬೇಕಾದರೆ ರೆಗ್ಯುಲರ್ ಸೇಲ್ ಡೀಡ್ ಪ್ರಕಾರ ರಿಜಿಸ್ಟ್ರೇಷನ್ ಮಾಡಿಸಬೇಕಾದ ತೊಂದರೆ ಇದೆ. ಯಾರಾದರೂ, ಜಮೀನನ್ನು ಬದಲಾವಣೆ ಮಾಡಿಕೊಳ್ಳಬೇಕೆಂದರೆ ರೆಗ್ಯುಲರ್ ಸ್ಟ್ಯಾಂಪ್ ಡ್ಯೂಟಿಯನ್ನು ಕೊಡಬೇಕಾಗಿದೆ: ರೈತರ ಮಗನಾದ ತಾವು ಈ ಕಡೆ ಏಕೆ ಗಮನಹರಿಸುತ್ತಿಲ್ಲ ಎಂಬುದು ನನಗೆ ಅರ್ಥವಾಗಬೇಕು. ಅವರು ಜಮೀನನ್ನು ಬದಲಾವಣೆ ಮಾಡಿಕೊಳ್ಳುತ್ತೇವೆಂದರೆ ರಿಯಾಯಿತಿ ದರದಲ್ಲಿ ನೋಂದಣಿ ಮಾಡಿಸಿಕೊಡಲು ಆಗುವುದಿಲ್ಲವೆ? ನಾನು ನನ್ನ ತಮ್ಮನ ಹೆಸರಿಗೆ ದಾನ ಬರೆಯುತ್ತೇನೆಂದರೆ ಆ ಸ್ಟ್ಯಾಂಪ್ ಡ್ಯೂಟೀಸ್‌ನಿಂದ ವಿನಾಯಿತಿ ಕೊಡಲು ಆಗುತ್ತಿರಲಿಲ್ಲವೆ? ತಮಗೆ ಬೆಂಗಳೂರು ನಗರ ಮಾತ್ರ ಕಾಣುತ್ತದೆ, ಗ್ರಾಮೀಣ ಜನರಾದ ನಾವ್ಯಾರು ಕಾಣುವುದಿಲ್ಲ. ಅಧ್ಯಕ್ಷರೆ, ಇದರ ಜೊತೆಗೆ, ಬೆಂಗಳೂರು ನಗರಕ್ಕೆ ಸೆಸ್ ಹಾಕಿಬಿಟ್ಟು, ಮೆಟ್ರೋಪಾಲಿಟನ್ ಏರಿಯಾಕ್ಕೆ ಅದರ ಡೆವಲಪ್‌ಮೆಂಟ್‌ಗೆ ಹೆಲ್ಪ್ ಮಾಡುತ್ತೇವೆ, ಇದನ್ನು ರಿಲ್ಯಾಕ್ಸ್ ಮಾಡುತ್ತೇವೆ ಎಂದು ಒಂದು ಕಡೆ ಹೇಳಿ, ಇಡೀ ರಾಜ್ಯಕ್ಕೆ ವಿಸ್ತಾರ ಮಾಡುತ್ತೇವೆಂದು ಒಂದು ಕಡೆ ಹೇಳಿದ್ದೀರಿ. ಅದರಲ್ಲಿ ಕನ್‌ಸೇಸನ್ ಯಾರಿಗೆ ಕೊಟ್ಟಿದ್ದೀರಿ? ಇಸ್ಪೀಟ್, ರೇಸ್ ಆಡುವವರು ಸೆಸ್ ಕೊಡಲಿ, ಕನ್ಸ್ಯೂಮರ್ಸ್ ಮೇಲೆ ಸೆಸ್ ಅನ್ನು ಉಳಿಸುತ್ತಿದ್ದೀರಿ, ಜೂಜು ಆಡುವವರಿಗೆ ರಿಲ್ಯಾಕ್ಸ್ ಮಾಡುತ್ತಿದ್ದೀರಾ? ಏನು ಜೂಜುಕೋರರು ಈ ಸರ್ಕಾರವನ್ನು ನಡೆಸುತ್ತಿದ್ದಾರಾ? ಕರ್ನಾಟಕದಲ್ಲಿ ಅವರು ಇಷ್ಟೊಂದು ಪ್ರಭಾವಿಗಳಾಗಿ ಬಿಟ್ಟರಾ? ಟ್ಯಾಕ್ಸ್ ತೆಗೆಸಿಕೊಂಡು ರಿಬೇಟ್ ಮಾಡಿಕೊಂಡು ಅವರು ಇದ್ದಾರೆ. ಎರಡನೆಯದು ನೋಡಿ, ನೀವು ಕೇಕ್ಸ್ ಮೇಲೆ ಟ್ಯಾಕ್ಸ್ ಕಡಿಮೆ ಮಾಡುತ್ತೀರಿ, ಬಿಸ್ಕೆಟ್ ಮೇಲೆ ಜಾಸ್ತಿ ಮಾಡುತ್ತೀರಿ, ಇದಕ್ಕೆ Rationalisation ಎಂದು ಕರೆಯುತ್ತೇವೆ. ಸಿಗರೇಟ್ ಮೇಲೆ ಕಡಿಮೆ

ಮಾಡಿ, ಡೀಸಲ್ ಎಂಜಿನ್ ಮೇಲೆ ಜಾಸ್ತಿ ಮಾಡುತ್ತೀರಿ. ಸನ್ಮಾನ್ಯ ಅಧ್ಯಕ್ಷರೆ ನಿನ್ನೆಯೂ ಕೂಡ ಇದರ ಬಗ್ಗೆ ಮಾನ್ಯ ಸಚಿವರಿಗೆ ವಿವರಿಸಿ ಹೇಳಿದ್ದೇನೆ, ಡೀಸಲ್ ಎಂಜಿನ್ 10 ಹೆಚ್.ಪಿ. ಗಿಂತಲೂ ಕಡಿಮೆ ಬಳಸಿದರೆ ಅದಕ್ಕೆ ರಿಬೇಟ್ ಪುಟ್ ಇರುವುದಿಲ್ಲ. ಇನ್ನು ಸಬ್- ಮರ್ಸಿಬಲ್ ಪಂಪ್ ಏನಾದರೂ ಒಳಕ್ಕೆ ಬಿಟ್ಟು, ನಾನೇನಾದರೂ 5, 6, 7 ಹೆಚ್.ಪಿ ಬಳಸಿದರೆ, ಸ್ವಲ್ಪ ನೀರು ಆಚೆ ಹಾಕುತ್ತದೆ. ಇವತ್ತು ಒಂದು ಡೀಸಲ್ ಎಂಜಿನ್ ಅನ್ನು 10 ಹೆಚ್.ಪಿ. ಗಿಂತ ಕಡಿಮೆ ಹೇಗೆ ಬಳಸುತ್ತೀರಿ? ಅದಕ್ಕೆ ಏಕೆ 2 ಪರ್ಸೆಂಟ್ ಅಡೀಷನಲ್ ಟ್ಯಾಕ್ಸ್ ಹಾಕಿದ್ದೀರಿ ಎಂದು ನಮಗೆ ಅರ್ಥವಾಗುತ್ತಿಲ್ಲ. ದಯಮಾಡಿ ತಾವು ಇದನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳಬೇಕು. ಇನ್ನು ನಾನು ಅಬಕಾರಿ ಬಗ್ಗೆ ಹೇಳುವುದಾದರೆ, ಒಂದು ರೂಪಾಯಿ ಬಿಯರ್ ಮೇಲೆ ಜಾಸ್ತಿ ಮಾಡಿದ್ದರೆ, ಬೆಂಗಳೂರಿನಲ್ಲಿ ನಿನ್ನೆಯಿಂದಲೇ 5 ರೂಪಾಯಿ ಜಾಸ್ತಿ ಆಗಿದೆ. ಕಡಿಮೆ ಮಾಡಿದ್ದು ಮಾತ್ರ ಕಡಿಮೆ ಆಗುವುದಿಲ್ಲ, ಈ ರಾಜ್ಯದಲ್ಲಿ, ಜಾಸ್ತಿ ಮಾಡಿದ್ದು ಮಾತ್ರ ತಕ್ಷಣ ಜಾಸ್ತಿಯಾಗುತ್ತದೆ. ಎಕ್ಸ್‌ಪೋರ್ಟ್ ಮಾಡುವ ಬಿಯರ್ ಮೇಲೆ 40 ಪೈಸೆ ಜಾಸ್ತಿ ಮಾಡಿದರೆ, 2-3 ರೂಪಾಯಿ ಜಾಸ್ತಿಯಾಗುತ್ತದೆ. ಇದರ ಬಗ್ಗೆ ತಾವು ಸ್ವಲ್ಪ ವಿಮರ್ಶೆಯನ್ನು ಮಾಡಬೇಕು, ಕನಿಷ್ಟ ಏಪ್ರಿಲ್ ಒಂದರವರೆಗೆ ಆದರೂ ನೀವು ರಿಯಾಯಿತಿಯನ್ನು ಕೊಡಬೇಕಾಗಿತ್ತು.

ಶ್ರೀ ಹೆಚ್. ಎನ್. ನಂಜೇಗೌಡ:- ಬೆಂಗಳೂರಿನಲ್ಲಿ ನೀರಿನ ಬೆಲೆ ಬಿಯರ್ ಬೆಲೆ ಎಲ್ಲಾ ಒಂದೇ ಆಗಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಇನ್ನು ಈ ಮಾಂಗಲ್ಯಭಾಗ್ಯದ ಯೋಜನೆ ಬಗ್ಗೆ ಹೇಳುವುದಾದರೆ, ಈ ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರ ಮಗಳ ಮದುವೆಗೆ 5 ಸಾವಿರ ಕೊಡುತ್ತೇವೆ ಎಂದು ಹೇಳಿದ್ದೀರಿ, ನಾನು ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರಲ್ಲಿ ಎಷ್ಟು ಆ ರೀತಿಯ ಕುಟುಂಬಗಳು ಇವೆ, ಎಷ್ಟು ಕೊಡಬೇಕು, ಎಷ್ಟು ಹಣವನ್ನು ಇದಕ್ಕಾಗಿ ಇಡಬೇಕು, ಎಷ್ಟು ಖರ್ಚು ಬರುತ್ತದೆ, ಎಂಬುದರ ಬಗ್ಗೆ ನಿಖರವಾದ ಮಾಹಿತಿ ಇದ್ದರೆ ನಮಗೆ ಹೇಳಿ. ಏಕೆಂದರೆ ಎಲ್ಲಿಯೂ ಕೂಡ ನೀವು ಈ ಮಾಂಗಲ್ಯ ಭಾಗ್ಯಕ್ಕೆ ಎಷ್ಟು ಹಣವನ್ನು ಒದಗಿಸುತ್ತೀರಿ ಎಂದು ಹೇಳಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಾನು ಈಗ ಶ್ರೀರಾಮರೆಡ್ಡಿಯವರು ಹೇಳಿದಂಥ ಮಾತಿಗೆ ಬರುತ್ತಿದ್ದೇನೆ, ತಾವೇ ಒಪ್ಪಿಕೊಂಡಿದ್ದೀರಿ, ಕರ್ನಾಟಕದಲ್ಲಿ ಬಂಡವಾಳ ಹೂಡಿಕೆ ಕಡಿಮೆ ಎಂದು, ಎಂಟರ್ ಪ್ರಿನರ್ಸ್ ಬರುತ್ತಿಲ್ಲ. 1995ನೇ ಇಸವಿಯಿಂದ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿದ್ದೀರಿ, ಸಿನಿಯಾರಿಟಿ ಪಟ್ಟಿ ಮಾಡಿ ಎಂಟರ್‌ಪ್ರಿನರ್ಸ್‌ಗೆ ಸಬ್ಸಿಡಿ ಕೊಡುತ್ತಾ ಬಂದಿದ್ದರೆ, ಒಳ್ಳೆಯದಿತ್ತು. ಆ ಎಂಟರ್‌ಪ್ರಿನರ್ಸ್ ಸಬ್ಸಿಡಿಗಾಗಿ ಕಾದು 5-6 ಲಕ್ಷಗಳವರೆಗೆ ಬಡ್ಡಿ ಕಟ್ಟುತ್ತಿದ್ದಾರೆ. ಇನ್ನು ಜಯದೇವ ಹೃದ್ರೋಗ ಆಸ್ಪತ್ರೆಯ ಬಗ್ಗೆ ಮಾತನಾಡಿದ್ದೀರಿ, ಅದರಿಂದ ಬಡವರಿಗೆ ಏನು ಉಪಯೋಗ ಆಗುತ್ತಿಲ್ಲ. ನನಗೆ ತಿಳಿದ ಮಟ್ಟಿಗೆ ಪೋಸ್ಟ್ - ಆಪರೇಟೀವ್ ಕೇರ್ ಅನ್ನು ಅಷ್ಟೊಂದು ಚೆನ್ನಾಗಿ ಮಾಡುತ್ತಿಲ್ಲ. ಆ ಬಗ್ಗೆ ತಾವು ಹೆಚ್ಚು ಗಮನ ಕೊಡಬೇಕು. ಡಾಕ್ಟರ್‌ಗಳನ್ನು ರಿಕ್ರೂಟ್ ಮಾಡಿದ್ದನ್ನು ಮಾತ್ರ ದೊಡ್ಡದಾಗಿ ಹೇಳಿಕೊಂಡಿದ್ದೀರಿ. ಎ. ಎನ್. ಎಮ್. ಮತ್ತು ಹೆಲ್ತ್ ವರ್ಕರ್ಸ್‌ನ್ನು ರಿಕ್ರೂಟ್ ಮಾಡಿ ಎಷ್ಟು ವರ್ಷ ಆಗಿದೆ ಎನ್ನುವುದನ್ನು ಸ್ವಲ್ಪ ದಯಮಾಡಿ ತಿರುಗಿಸಿ ನೋಡಿ. ಯಾವ ತಾಲ್ಲೂಕಿನಲ್ಲಿ ಎ ಎನ್ ಎಂಗಳು ಇದ್ದಾರೆ ಎನ್ನುವುದನ್ನು ಸ್ವಲ್ಪ ಹೇಳುತ್ತೀರಾ? ಇರುವ ನಾಲ್ಕು ಜನ ಎ ಎನ್ ಎಂಗಳನ್ನು ಕೂಡ ಡೆಪ್ಯೂಟೇಷನ್ ತಾಲ್ಲೂಕು ಆಸ್ಪತ್ರೆಗಳಿಗೆ ತೆಗೆದುಕೊಂಡಿದ್ದಾರೆ. ಇದರಿಂದ ಯಾವುದೇ ಹೆಣ್ಣುಮಕ್ಕಳು ಇವತ್ತು ಹೆರಿಗೆಗಾಗಿ 10-15 ಕಿ.ಮೀ ಹೋಗಬೇಕಾಗುತ್ತದೆ. ನಿಮ್ಮ ಎ ಎನ್ ಎಂಗಳು ಅಲ್ಲಿ ಅಸಿಸ್ಟೆಂಟ್ ಮಾಡುತ್ತಿಲ್ಲ. ಆದುದರಿಂದ ನೀವು

ಈ ಎ.ಎನ್.ಎಂ. ಮತ್ತು ಪ್ಯಾರಾ ಮೆಡಿಕಲ್ ಸ್ಟಾಫ್ ಅನ್ನು ತಾವು ಹೆಚ್ಚು ಮಾಡಬೇಕು, ಮತ್ತು ತಾವು ಅಪಾಯಿಂಟ್‌ಮೆಂಟ್‌ಗಳಿಗೆ ಬ್ಯಾನ್ ತರುತ್ತೇವೆ ಎಂದು ಹೇಳಿದ್ದೀರಿ, ಯಾವ ಅಪಾಯಿಂಟ್‌ಮೆಂಟ್‌ಗೆ ತರುತ್ತೀರಿ? ಇನ್ನು ನಿಮಗೆ ಕೈಮುಗಿದು ಕೇಳುತ್ತೇವೆ, ಆ ಕೆ.ಇ.ಬಿ. ಲೈನ್ ಮ್ಯಾನ್‌ಗಳನ್ನಾದರೂ ಹಾಕಲಿಕ್ಕೆ ನಮಗೆ ಬಿಡಿ. ಒಬ್ಬೊಬ್ಬ ಲೈನ್ ಮ್ಯಾನ್‌ಗಳಿಗೆ ಎಷ್ಟು ಕೆಲಸವನ್ನು ಕೊಟ್ಟಿದ್ದಾರೆ ಎಂದು ಕೆ.ಇ.ಬಿ. ಅಧಿಕಾರಿಗಳನ್ನು ಕರೆಸಿ ಮಾತನಾಡಿ. ಕೆ.ಇ.ಬಿ. ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಕೆ.ಇ.ಬಿ. ಲೈನ್ ಮೆನ್‌ಗಳನ್ನು 10-15 ಸಾವಿರ ಪರ್ಮಿಟ್ ಮಾಡದೆ ಹೋದರೆ ಇವತ್ತಿನ ಕೆ.ಇ.ಬಿ.ಯನ್ನು ನೀವು ಸುಧಾರಿಸುವುದಕ್ಕೆ ಆಗುವುದಿಲ್ಲ. ಇನ್ನು ಆರ್.ಐ.ಡಿ.ಎಫ್‌ಗಳ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸಣ್ಣ ನೀರಾವರಿ ಇಲಾಖೆಯವರು 1995-96ರಲ್ಲಿ ಆರ್.ಐ.ಡಿ.ಎಫ್ ಯೋಜನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಸಣ್ಣ ನೀರಾವರಿ ಇಲಾಖೆಗೆ ಕೊಡಬೇಕಾಗಿದ್ದ ಆರ್. ಐ.ಡಿ. ಎಫ್‌ಗಳನ್ನು ಕೊಡದೆ, ನಿಮಗೆ ಬರಬೇಕಾಗಿದ್ದ ಎಕ್ಸ್‌ಟರ್ನಲ್ ಅಸಿಸ್ಟೆನ್ಸ್ ಮತ್ತೆ ಎರಡು ವರ್ಷ ಬರಲಿಲ್ಲ, ಇದರಿಂದ ಎರಡು ವರ್ಷ ಲ್ಯಾಪ್ಸ್ ಆಯಿತು. ಆ ಅಸಿಸ್ಟೆನ್ಸ್‌ಗೆ ಇವತ್ತು ನೀವು ಏನು ಮಾಡುತ್ತೀರಿ? ಈ ರಾಜ್ಯದಲ್ಲಿ ಬೇಕಾದಷ್ಟು ಸಣ್ಣ ನೀರಾವರಿ ಕೆರೆಗಳನ್ನು ಮಾಡಬಹುದಿತ್ತು, ನಿಮ್ಮ ಇಲಾಖೆಯವರು ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಅವರು ಎಸ್ಟಿಮೇಟ್ ಮಾಡೇ ಇಲ್ಲ ಅವರಿನ್ನೂ ಮೊದಲೇ ಹಂತದ ಯೋಜನೆಯ ಹಣವನ್ನು ಇನ್ನು ಖರ್ಚು ಮಾಡಲಿಲ್ಲ ಎಂದರೆ, ಈಗ ಆರ್. ಐ. ಡಿ. ಎಫ್ 4ಕ್ಕೆ ಬಂದಿದ್ದೇವೆ, ಈ ವರ್ಷವಾದರೂ 140 ಕೋಟಿ ತರಸಲಿಕ್ಕೆ ಅವಕಾಶ ಉಂಟು, ಆದುದರಿಂದ ನೀವು ಅವರನ್ನು ಸ್ವಲ್ಪ ಕರೆಸಿ, ಆರ್. ಐ. ಡಿ. ಎಫ್ ಏನಾಗಿದೆ, ಹಣ ಏಕೆ ಖರ್ಚು ಮಾಡಲಿಲ್ಲ ಎಂದು ಕೇಳಿ. ಇನ್ನು ಈ ಬ್ಯಾರೇಜ್ ಬಗ್ಗೆ ತಾವು ಹೇಳಿದ್ದೀರಿ, ಎಂಟು ಬ್ಯಾರೇಜ್‌ಗಳನ್ನು ಕರ್ನಾಟಕ ಮತ್ತು ಮಹಾರಾಷ್ಟ್ರದವರೂ ಕಟ್ಟಬೇಕಾಗಿತ್ತು, ನಾಲ್ಕು ಬ್ಯಾರೇಜ್ ಮಾಡಿ ಮಹಾರಾಷ್ಟ್ರದಲ್ಲಿ 5-6 ವರ್ಷ ಆಗಿದೆ, ಆದರೆ ನೀವು ಪ್ರತಿವರ್ಷ ನಾವು ಬ್ಯಾರೇಜ್ ಮಾಡುತ್ತೇವೆ ಎಂದು ಹೇಳಿಕೊಂಡು ಬರುತ್ತಿದ್ದೀರಿ, ಆದರೆ ಇನ್ನು ಮಾಡಿಲ್ಲ. ನಾವಂತೂ ಹಾರ್ಟಿಕಲ್ಚರ್ ಬೆಳೆಗಾರರಾಗಿ ಸರ್ವನಾಶವಾಗಿದ್ದೇವೆ. ಬೆಳೆಗೆ ಬೋರ್‌ನಲ್ಲಿ ನೀರು ಇಲ್ಲ, ಮಂತ್ರಿಗಳು ನಮಗೆ ಯಾವ ವರ್ಷವೂ ಸಹ ಸರಿಯಾಗಿ ಸಬ್ಸಿಡಿ ತರಸಿ ಕೊಡಲಿಲ್ಲ, ಆದರೆ ಭಾಷಣ ಮಾಡುವುದನ್ನು ಬಿಟ್ಟಿಲ್ಲ, ಈ ವರ್ಷ ಕೂಡ ಕೊಟ್ಟಿಲ್ಲ. ಮಂತ್ರಿಗಳು ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕು. ಇನ್ನು ಏರಿಯಾ ಎಕ್ಸ್‌ಪ್ಯಾನ್‌ಷನ್‌ನಲ್ಲಿ ಕೋಕೋನಟ್ ಬೋರ್ಡ್‌ನವರು ಕೇರಳ ರಾಜ್ಯಕ್ಕೆ ಎಷ್ಟು ಕೊಡುತ್ತಿದ್ದಾರೆ, ಕರ್ನಾಟಕಕ್ಕೆ ಎಷ್ಟು ಕೊಡುತ್ತಿದ್ದಾರೆ? ತಮ್ಮ ಕಾಲದಲ್ಲಿ ತುಮಕೂರು ಜಿಲ್ಲೆಗೆ ಬರೀ 50 ಎಕರೆ ತೆಗೆದುಕೊಂಡಿರುವುದು ನಾಚಿಕೆಗೇಡು. ಇವತ್ತಿನವರೆಗೆ ನಿಮಗೆ ಡ್ರಿಪ್ ಇರಿಗೇಶನ್ ಸಬ್ಸಿಡಿ, ಕಳೆದ ಸಾರಿ ಸಹ ತುಮಕೂರು ಜಿಲ್ಲೆಗೆ ಒಂದಕ್ಕೆ ಎರಡೂವರೆ ಮೂರು ಕೋಟಿ ಸಬ್ಸಿಡಿ ಉಳಿದು ಹೋಗಿ, ಅದನ್ನು ಈ ವರ್ಷ ಏಪ್ರಿಲ್ ಆದನಂತರ ತರಿಸಿಕೊಂಡಿದ್ದೇವೆ. ಈ ವರ್ಷ ಕೂಡ ಅದೇ ಪರಿಸ್ಥಿತಿ ನಿರ್ಮಾಣ ಆಗಿದೆ. ಟೋಕನ್ ಗ್ರಾಂಟ್ಸ್ 7-8 ಲಕ್ಷ ಒಂದೊಂದು ತಾಲ್ಲೂಕಿಗೆ ಕೊಟ್ಟಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) :- ತುಮಕೂರು ಶಾಸಕರು ದೂರು ಕೊಟ್ಟಿದ್ದರಿಂದ ಅಲ್ಲಿ ತನಿಖೆ ನಡೆಯುತ್ತಿದೆ. ತೆಂಗಿನ ಮರ ನಾಶವಾಗಿಲ್ಲದಿದ್ದರೂ ಕೂಡ 200 ಕ್ಲೈಮ್ ಮಾಡಿ ಸಾವಿರಾರು ಅರ್ಜಿಗಳು ಬಂದವು. ಇದರ ಬಗ್ಗೆ ನಮಗೆ ಮಾನ್ಯ ಗುಬ್ಬಿ ಶಾಸಕರು ಈ ರೀತಿ ಅನ್ಯಾಯವಾಗುತ್ತಿದೆ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದರು ಲೆಟರ್ ಬರೆದರು. ಆದುದರಿಂದ ಅಲ್ಲಿ

ತನಿಖೆ ನಡೆಯುತ್ತಿದೆ. ಡ್ರಿಪ್ ಇರಿಗೇಶನ್‌ನಲ್ಲಿ ಚಿತ್ರದುರ್ಗ ಬಿಟ್ಟರೆ ಹೆಚ್ಚು ಹಣ ಕೊಟ್ಟಿರುವುದು ತುಮಕೂರು ಜಿಲ್ಲೆಗೆ, ಅದು ಅಲ್ಲದೆ, ಕೋಕೋನಟ್ ಬೋರ್ಡ್‌ನಿಂದ ನಮಗೆ ಬರುತ್ತಿದ್ದದ್ದು ಬರಿ 40-50 ಲಕ್ಷ, ನಾವು ಬಂದ ಮೇಲೆ, ಎರಡೂವರೆ ಕೋಟಿ ರೂಪಾಯಿ ಅನುದಾನವನ್ನು ಪಡೆದುಕೊಂಡು ನಾಲ್ಕು ಸ್ಕ್ವಾಡ್‌ನ್ನು ಹಾಕಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ, ನಾವು ತೆಂಗು, ಅಡಿಕೆಯನ್ನು ನಂಬಿಕೊಂಡು ಬದುಕುತ್ತಿರುವ ಜನ. ನೀವು ಇದೆಲ್ಲಾ ಆಕಾಳಿ, ಬೊಕಾಳಿ ನಮಗೆ ಹೇಳಬಾರದು. ನಿಮ್ಮ ಒಂದು ಫಾರ್ಮ್‌ನಲ್ಲಿ ಇವತ್ತು ರೆಗ್ಯೂಲರ್ ಸ್ಟಾಫ್ ಇಲ್ಲ, ಒಂದು ಫಾರ್ಮ್ ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ. ಚಿಕ್ಕನಾಯಕನ ಹಳ್ಳಿಯಲ್ಲಿ ಬಂದಿರುವ ಕಪ್ಪು ತಲೆ ಹುಳು ರೋಗಕ್ಕೆ ಏತಕ್ಕೆ ಔಷಧಿ ಸಿಂಪಡಿಸಿಲ್ಲ ಎಂದು ನಾನು ಅಸೆಂಬ್ಲಿ ಮುಗಿದ ಮೇಲೆ ಶುಕ್ರವಾರ, ಶನಿವಾರ ನಿಮ್ಮ ಅಧಿಕಾರಿಗಳ ಜೊತೆ ಮೀಟಿಂಗ್ ಮಾಡಿದ್ದೇನೆ, ನಾನು ಅಣಬೆ ರೋಗದ ಬಗ್ಗೆ ಹೇಳಿತ್ತಿಲ್ಲ. ಅಣಬೆ ರೋಗ ಎಂದು ಹೇಳಿ ಜನರು ಮೂರು ವರ್ಷಗಳ ಹಿಂದೆ ಸುಳ್ಳು ದುಡ್ಡು ತೆಗೆದುಕೊಂಡಿದ್ದಾರೆ ಎಂದು ಏನು ತುಮಕೂರು ಜಿಲ್ಲೆ ಶಾಸಕರು ಹೇಳಿದ್ದಾರೆ, ಆದರೆ ಏರಿಯಾ ಎಕ್ಸ್‌ಪ್ಲಾನ್‌ಷನ್ ಸ್ಕೀಮ್‌ನಲ್ಲಿ ಒಂದು ಎಕರೆ ತೆಂಗಿನಗಿಡ ಯಾರಾದರೂ ಹೊಸದಾಗಿ ಹಾಕಿದರೆ, 5,000 ರೂಪಾಯಿ ಸಬ್ಸಿಡಿ ತಾವು ಕೊಡಿಸಬೇಕಾಗಿತ್ತು. ನೀವು ಇಡೀ ಜಿಲ್ಲೆಗೆ 50 ಎಕರೆ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ, ಈ ಕರ್ನಾಟಕ ರಾಜ್ಯ ತೆಂಗಿನ ಉತ್ಪಾದನೆಯಲ್ಲಿ ಎರಡನೇ ಸ್ಥಾನವನ್ನು ಪಡೆದಿತ್ತು. ನಾವೆಲ್ಲಾ ಇದು ಕೇರಳದ ಹತ್ತಿರ ಬರುತ್ತದೆ ತೆಂಗಿನ ಉತ್ಪಾದನೆಯಲ್ಲಿ ಎಂದು ಬಹಳ ಆಶೆ ಇಟ್ಟು ಕೊಂಡಿದ್ದೆವು, ಆದರೆ ನೀವು 3ನೇ ಸ್ಥಾನಕ್ಕೆ ಕಳುಹಿಸಿದ್ದೀರಿ, ಸ್ವಲ್ಪ ದಿವಸ ಕಳೆದರೆ ನಮ್ಮನ್ನು ನಾಲ್ಕನೇ ಸ್ಥಾನಕ್ಕೆ ಕಳುಹಿಸುತ್ತೀರಿ. ಇವತ್ತು ಬರುತ್ತಿರೋ ತೋರಿಸುತ್ತೇನೆ 70 ಪರ್ಸೆಂಟ್‌ಗ್ರ್ಯಾಂಟ್ ಇವತ್ತು ಕೊಚ್ಚಿನ್‌ನಲ್ಲಿ ಮತ್ತು ತಿರುಚ್ಚೂರ್‌ನಲ್ಲೇ ಖರ್ಚಾಗುತ್ತದೆ. ಆ ಬೋರ್ಡ್‌ನವರು ನಮಗೆ 12,500 ಸಬ್ಸಿಡಿಯನ್ನು ಕೊಡಬೇಕು. ಆದರೆ ಈ ಸರ್ಕಾರ ನಮಗೆ ತರಿಸಿ ಕೊಡಲಿಲ್ಲ. ತಾವು ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ತರಿಸಿಕೊಂಡು ನಮಗೆ ಉತ್ತರ ಕೊಡಿ, ತಿಪಟೂರು ಮತ್ತು ಗುಬ್ಬಿ ತಾಲ್ಲೂಕಿನಲ್ಲಿ ರೋಗ ಬಂದಿದೆ ಎಂದು ನಿಮ್ಮ ತೋಟಗಾರಿಕೆ ಅಧಿಕಾರಿಗಳು ಹಣ ಹೊಡೆದಿದ್ದಾರೆ ಎನ್ನುವ ಬಗ್ಗೆ ಕಾಗದ ಕೊಟ್ಟಿದ್ದು ಬಿಟ್ಟರೆ, ನಿಮಗೆ ಏರಿಯಾ ಎಕ್ಸ್‌ಪ್ಯಾನ್‌ಷನ್ ಸ್ಕೀಮ್ ಬಗ್ಗೆ ತಮಗೆ ಏನೂ ಗೊತ್ತಿಲ್ಲ. ಅಣಬೆ ರೋಗದೊಂದನ್ನು ಇಟ್ಟುಕೊಂಡು ನೀವು ತುಮಕೂರು ಶಾಸಕರು ಕಾಗದ ಬರೆದರು ಎಂದು ಹೇಳುತ್ತೀರಿ. ಒಂದು ವರ್ಷಕ್ಕೆ ಒಂದು ಪಿ.ಎಲ್.ಡಿ. ಬ್ಯಾಂಕ್ ಫೈನಾನ್ಸ್ ಮಾಡಿರುವುದನ್ನು ತೆಗೆಸಿ ನೋಡಿ, ಒಂದು ವರ್ಷಕ್ಕೆ ಕಮರ್ಷಿಯಲ್ ಬ್ಯಾಂಕುಗಳು ಎಷ್ಟು ಎಕರೆಗೆ ಲೋನ್ ಕೊಡುತ್ತಿವೆ ಎನ್ನುವುದನ್ನು ತೆಗೆಸಿ ನೋಡಿ. ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುರುವೇಕೆರೆ ಭಾಗದಲ್ಲಿ ಒಂದು ವರ್ಷಕ್ಕೆ ಎಷ್ಟು ತೆಂಗನ್ನು ಹಾಕುತ್ತಾರೆ ಎನ್ನುವುದನ್ನು ತೆಗೆಸಿ ನೋಡಿ. ಇಡೀ ಜಿಲ್ಲೆಗೆ 50 ಎಕರೆಗೆ ಕೊಟ್ಟು ಇಲ್ಲಿ ನಿಂತುಕೊಂಡು ಮಾತನಾಡಿದರೆ ಏನು ಆಗುತ್ತದೆ? ಕಡತಗಳನ್ನು ತೆಗೆದು ನೋಡಿ ಮಾತನಾಡಿ. ಅಂಕಿ ಅಂಶಗಳನ್ನು ನೀವು ತಿದ್ದಲು ಆಗುತ್ತದೆಯೇ?

ಶ್ರೀ ಜಿ.ಟಿ. ಜಯಕುಮಾರ್ : ನಾವು ಏರಿಯಾ ಎಕ್ಸ್‌ಪ್ಯಾನ್‌ಷನ್‌ನಲ್ಲಿ 13 ಲಕ್ಷ ಹೆಕ್ಟೇರ್ ಇರುವುದನ್ನು 26 ಲಕ್ಷ ಹೆಕ್ಟೇರ್ ಮಾಡಬೇಕೆಂದು, ಪ್ರತಿ ವರ್ಷ 2-3 ಲಕ್ಷ ಉತ್ಪಾದನೆ ಮಾಡುತ್ತಿದ್ದ ತೆಂಗಿನ ಸಸಿಗಳನ್ನು ಈ ವರ್ಷ 1996-97ರಲ್ಲಿ ನಾವು 8 ಲಕ್ಷ ತೆಂಗಿನ ಸಸಿಗಳನ್ನು ಉತ್ಪಾದನೆ ಮಾಡಿದ್ದೇವೆ.

ಇವುಗಳನ್ನು ವಿವಿಧ ಯೋಜನೆಗಳಲ್ಲಿ ಜನಗಳಿಗೆ ಕೊಡುತ್ತಿದ್ದೇವೆ. ತಾವೇ ಕಣ್ಣಾರೆ ನೋಡಿದ್ದೀರಿ. ತೋಟಗಾರಿಕೆ ಹೆಚ್ಚಾಗಿದೆಯೇ ಹೊರತು ಕಡಿಮೆಯಂತೂ ಆಗಿಲ್ಲ. ನಮ್ಮ ಇಲಾಖೆಯವರು ಕೊಡಲಿ, ಕೊಡದಿರಲಿ ಅದು ಹೆಚ್ಚಾಗುತ್ತಿದೆ.

ಅಧ್ಯಕ್ಷರು :- ಅವರು ಹೇಳುತ್ತಿರುವುದೇನೆಂದರೆ, ಏರಿಯಾ ಡೆವೆಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಯಾರಾದರೂ ಒಂದು ಎಕರೆ ತೆಂಗನ್ನು ಹೊಸದಾಗಿ ಹಾಕಿದರೆ ಅವರಿಗೆ 5 ಸಾವಿರ ರೂಪಾಯಿ ಸಬ್ಸಿಡಿ ಸಿಗಬೇಕು. ಈ ವರ್ಷ ನೀವು ಇಡೀ ತುಮಕೂರು ಜಿಲ್ಲೆಯಲ್ಲಿ ಕೇವಲ 50 ಎಕರೆಗೆ ಮಾಡಿದ್ದೀರಿ. ಅದು ಸಾಕಾಗುವುದಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಅಂಕಿ ಅಂಶಗಳನ್ನು ತರಿಸಿಕೊಂಡು ಉತ್ತರ ಕೊಡುವ ಸಮಯದಲ್ಲಿ ಹೇಳಿ. ಹಾರ್ಟಿಕಲ್ಚರ್‌ನಲ್ಲಿ ಇಷ್ಟೆಲ್ಲಾ ಇರುತ್ತದೆ ಎನ್ನುವ ಐಡಿಯಾನೇ ನನಗೆ ಇರಲಿಲ್ಲ. ಇದರಲ್ಲಿ ಬಹಳ ವಿಚಾರಗಳಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಡೆವೆಲಪ್‌ಮೆಂಟ್ ಬೋರ್ಡ್‌ನಲ್ಲಿ ಬಹಳ ಹಣವಿತ್ತು ಸಾರ್. ಈ ಕಡೆ ಎಷ್ಟು ಆಸಕ್ತಿ ವಹಿಸಬೇಕು ಎಂದರೆ, ನಮಗೆಲ್ಲಾ ಬಹಳ ನೋವಿದೆ, ಇವತ್ತು ತೆಂಗಿನ ಉತ್ಪಾದನೆ ಮೂರನೇ ಒಂದು ಭಾಗಕ್ಕೆ ಅಥವಾ ಅರ್ಧದಷ್ಟಕ್ಕೆ ಬಂತು ನಿಂತಿದೆ. ಡ್ರಿಪ್ ಇರಿಗೇಷನ್‌ಗೆ ತಾವು ಸಕಾಲದಲ್ಲಿ ಸಬ್ಸಿಡಿ ಕೊಡದೇ ಹೋದರೆ ಈ ವರ್ಷ ನಾವು ಉಳಿಯುವ ಸ್ಥಿತಿಯಲ್ಲಿ ಇಲ್ಲ. ಪೂರ್ತಿ ಬಂಡವಾಳ ಹಾಕಿ ಡ್ರಿಪ್ ಮಾಡಿಸಲು ಜನಗಳಲ್ಲಿ ಶಕ್ತಿ ಇಲ್ಲ. ಇದರ ಜೊತೆಗೆ ಇವತ್ತು ನಮಗೆ ಕುಡಿಯುವ ನೀರಿಗೆ ತುಂಬಾ ಹಾಹಾಕಾರವಾಗಿದೆ. ನಾನು ಈ ಸಮಯದಲ್ಲಿ ಏನನ್ನು ಕೇಳಲು ಇಷ್ಟಪಡುತ್ತೇನೆ ಎಂದರೆ ನಾವು 300-400 ಅಡಿಗಳಷ್ಟು ಆಳದಲ್ಲಿ ಕೊಳವೆ ಬಾವಿಗಳನ್ನು ತೆಗೆಸಬೇಕಾಗಿದೆ. ತಾವು ಕೊಟ್ಟಿರುವ ಹಣ ನಿಜವಾಗಿಯೂ ತೀರ ಕಡಿಮೆ. ನಾವು ಹ್ಯಾಂಡ್‌ಪಂಪ್ ಹಾಕಿ ನೀರೆತ್ತಬೇಕು ಎಂದರೆ ಅಷ್ಟೊಂದು ಶಕ್ತಿ ಇರುವವರು, ರೆಟ್ಟಿದಪ್ಪವಾಗಿರುವವರು ಯಾರೂ ಇಲ್ಲ. ಹಾಗಾಗಿ ಮೋಟಾರ್ ಪಂಪ್‌ಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ. ನಿಮ್ಮದೇ ತೀರ್ಮಾನದ ಪ್ರಕಾರ ಹ್ಯಾಂಡ್ ಪಂಪ್‌ನಿಂದ ಗರಿಷ್ಟವೆಂದರೆ 100 ಅಡಿಯಿಂದ ನೀರೆತ್ತಬಹುದು. ಅದಕ್ಕಿಂತ ಜಾಸ್ತಿ ಎತ್ತಲು ಆಗುವುದಿಲ್ಲ. ತಾವು ಅರ್ಥ ಸಚಿವರಾಗಿರುವ ಈ ಕಾಲದಲ್ಲಿ ನಮ್ಮ ಜನರು ಅದರಲ್ಲೂ ಗ್ರಾಮೀಣ ಜನರು ಜಾಸ್ತಿ ನಿರೀಕ್ಷೆ ಮಾಡಿದ್ದಾರೆ. ದಯಮಾಡಿ, ಆ ಕಡೆ ಸ್ವಲ್ಪ ನೋಡಬೇಕು. ಈಗ ಇಟ್ಟಿರುವಂಥ ಬಜೆಟ್ ಖಂಡಿತವಾಗಿಯೂ ಗ್ರಾಮೀಣ ಜನರ ಪರವಾಗಿಲ್ಲ. ಇದನ್ನು ನಾನು ತಮಗೆ ಸತ್ಯವಾಗಿ ಹೇಳುತ್ತಿದ್ದೇನೆ. ಮತ್ತು ತೆರಿಗೆಯನ್ನು ಏರಿಸುವ, ಇಳಿಸುವ ಕಡೆಗಳಲ್ಲಿ ಸ್ಲ್ಯಾಬ್ ಕಡಿಮೆ ಮಾಡಲು ನಮ್ಮದೇನೂ ತಕರಾರಿಲ್ಲ. ತಾವು ತೆರಿಗೆಯನ್ನು ಏನು ಇಳಿಸಿದ್ದೀರಿ ಅಲ್ಲಿ ಹೆಚ್ಚು ಮಾಡಬಹುದಾಗಿತ್ತು, ತಾವು ಏನು ಹೆಚ್ಚು ಮಾಡಿದ್ದೀರಿ ಅಲ್ಲಿ ಕಡಿಮೆ ಮಾಡಿದ್ದರೆ ನಿಜವಾಗಿಯೂ ಒಳ್ಳೆಯ ಹೆಸರು ಬರುತ್ತಿತ್ತು. ಇದರ ಜೊತೆಗೆ ಶೆಡ್ಯೂಲ್ 5ರಲ್ಲಿ ಇರುವಂಥಾದ್ದರ ಮೇಲೆ ಮತ್ತೆ ತೆರಿಗೆಯನ್ನು ಹಾಕಲು ದೊಡ್ಡ ಮನಸ್ಸನ್ನು ಮಾಡಬೇಡಿ. ಯಾರೂ ಮಾಡದಿದ್ದ ಕೆಲಸವನ್ನು ನೀವು ಏಕೆ ಮಾಡಲು ಹೋಗುತ್ತೀರಿ? ಇವತ್ತು ಕೊರತೆಯಿಂದ 400 ಕೋಟಿಗೆ ಆ ಎರಡು ಕೋಟಿ ಸೇರಿಕೊಳ್ಳುತ್ತದೆ. ರಾಜಸ್ವವೇ ಕೊರತೆಯಾಗಿದೆ, ನೀವು ನಿರೀಕ್ಷಣೆ ಮಾಡಿದಷ್ಟು ತೆರಿಗೆಯೇ ಬಂದಿಲ್ಲ ಎಂದ ಮೇಲೆ ಮೈದಾ ತಿನ್ನುವವರನ್ನು, ರೆವೆ ತಿನ್ನುವವರನ್ನು ಏಕೆ ಬಲಿ ಹಾಕಲು ಹೋಗುತ್ತೀರಿ. ಇದಕ್ಕೆ ತಾವು ಸ್ವಪ್ಪವಾಗಿ ಉತ್ತರ ಕೊಡಬೇಕು ಮತ್ತು ಗ್ರಾಮೀಣಾಭಿವೃದ್ಧಿಗೆ ಮತ್ತು ಕೃಷಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಏಕೆಂದರೆ ಇವುಗಳಿಗೆ ತಾವು ಕೊಟ್ಟಿರುವ ಹಣ ತೀರಾ ಕಡಿಮೆಯಾಗಿದೆ. ತಾವೇ ಕಡತ ತೆಗೆದು ನೋಡಿ. ಗ್ರಾಮೀಣಾಭಿವೃದ್ಧಿ ಮತ್ತು

ಕೃಷಿ ಇವೆರಡೂ ಸೇರಿದರೂ ಶೇ. 9 ರಷ್ಟು ಏನಿಯೋಗವಾಗುತ್ತಿಲ್ಲ. ಈ ಸ್ಥಿತಿ ನಿಮ್ಮ ಕಾಲದಲ್ಲಿ ನಮಗೆ ಬರುತ್ತದೆ ಎಂದು ನಾವು ತಿಳಿದುಕೊಂಡಿರಲಿಲ್ಲ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು):- ಸನ್ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ರಾಜ್ಯಕ್ಕೆ ಇ.ಡಿ. ಎಸ್. ಮೇಲೆ ಶೇ. 77.5 ರಷ್ಟು ಹಾಗೂ ಎಲ್ಲಾ ರಾಜ್ಯಗಳಿಗೆ ಹೆಚ್ಚುವರಿ ಅನುದಾನ ಒಂದು ಸಾವಿರ ಕೋಟಿ, ಹಾಗೆಯೇ ಸ್ಪಷ್ಟವಾದ ರಾಷ್ಟ್ರೀಯ ಜಲನೀತಿ, ಹಾಗೆಯೇ ಮುಂದಿನ ದಿವಸಗಳಲ್ಲಿ ಕನ್ನಡವೂ ಕೂಡ ಅಧಿಕೃತ ರಾಷ್ಟ್ರ ಭಾಷೆಗಳಲ್ಲಿ ಒಂದಾದರೆ ಆಶ್ಚರ್ಯವಿಲ್ಲ, ಇದರ ಜೊತೆಯಲ್ಲಿ ರಾಜ್ಯ - ಕೇಂದ್ರ ಸಂಬಂಧಗಳನ್ನು ಸಂಪರ್ಕವನ್ನು ಉತ್ತಮಗೊಳಿಸುವಂಥ ಅನೇಕ ಉಪಯುಕ್ತ ನೀತಿಗಳನ್ನು ಹಾಕಿ ಬಹುಶ: ನಮ್ಮ ರಾಜ್ಯಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡುವಂಥ ಪ್ರಯತ್ನ ಮಾಡಿರುವಂಥ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ ಕೇಂದ್ರ ಸರ್ಕಾರಕ್ಕೆ ಮೊಟ್ಟಮೊದಲು ತುಂಬು ಹೃದಯದ ಅಭಿನಂದನೆಗಳನ್ನು ಕರ್ನಾಟಕ ರಾಜ್ಯದ ಪರವಾಗಿ ಸಲ್ಲಿಸಲು ಇಚ್ಛಿಸುತ್ತೇನೆ. ಮುಂದೆ ರಾಜ್ಯ ಬಜೆಟ್‌ಗೆ ಸಂಬಂಧಪಟ್ಟಂತೆ ಕೃಷಿ, ಗ್ರಾಮೀಣಾಭಿವೃದ್ಧಿ, ವಿಶೇಷ ಪ್ರದೇಶ ಯೋಜನೆ, ಕೈಗಾರಿಕೆ ಮತ್ತು ಖನಿಜಗಳು, ಸಮಾಜ ಸೇವೆಗಳಾದ ಶಿಕ್ಷಣ, ಕ್ರೀಡಾಸಂಸ್ಥೆಗಳು, ಆರೋಗ್ಯ, ವಸತಿ ಮತ್ತು ನಗರಾಭಿವೃದ್ಧಿ, ಸಮಾಜ ಕಲ್ಯಾಣ ಮತ್ತು ಪೌಷ್ಟಿಕ ಆಹಾರ ಎಲ್ಲದರಲ್ಲೂ ಕೂಡ ಕಳೆದ ವರ್ಷ ಎಷ್ಟು ಅಲೋಕೇಷನ್ ಆಗಿತ್ತು, ಅದಕ್ಕೆ ಹೋಲಿಸಿದರೆ ಶೇಕಡಾವಾರು ಕಡಿಮೆ ಈ ವರ್ಷ ಕೊಟ್ಟಿರುವುದು ಸರಿಯಲ್ಲ. ಇವುಗಳ ಬಗ್ಗೆ ಇನ್ನೂ ಹೆಚ್ಚಿನ ಅನುದಾನ ಕೊಡಬೇಕಿತ್ತು ಎನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲಿಚ್ಛಿಸುತ್ತೇನೆ. ತಾವು ತೆರಿಗೆಯ ಸರಳೀಕರಣವನ್ನು ಮಾಡಿರುವುದನ್ನು ಸ್ವಾಗತಿಸುತ್ತಾ, ಮಧ್ಯಮ ವರ್ಗ ಹಾಗೂ ಬಡವರ್ಗದವರು ಉಪಯೋಗಿಸುವಂಥ ಚಹಾ, ಮೈದಾ, ಔಷಧ, ಕನ್ನಡಕ, ಪಾದರಕ್ಷೆ, ಸೈಕಲ್ ಇತ್ಯಾದಿಗಳ ಮೇಲೆ ತೆರಿಗೆಯನ್ನು ಏರಿಸಿದ್ದು ಸರಿಯಲ್ಲ. ಆ ತೆರಿಗೆಯನ್ನು ಕಡಿಮೆಗೊಳಿಸಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಕಳೆದ ಸಲ ಕೆ. ಇ.ಬಿ.ಯಲ್ಲಿ 1,200 ಕೋಟಿ, ಕೆ. ಎಸ್. ಆರ್. ಟಿ.ಸಿ. ಯಲ್ಲಿ 300 ಕೋಟಿ ಏರಿಸಿದ್ದರೂ ಈ ಸಂದರ್ಭದಲ್ಲಿ 230 ಕೋಟಿಯನ್ನು ಏರಿಸುವುದು ಸರಿಯಲ್ಲ. ಇದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು ಎನ್ನುವ ವಿನಂತಿಯನ್ನೂ ಸಹ ಮಾಡಲು ಇಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಹೆಚ್ಚು ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುತ್ತಿರುವಂತಹ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಡುವಂಥ ಯಾವ ನೀತಿಯೂ ಸಹ ನಮ್ಮ ಈ ಬಜೆಟ್‌ನಲ್ಲಿ ಕಾಣುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ಯಮದಿಂದ ಕನಿಷ್ಟ 5 ಲಕ್ಷ ಜನರಿಗೆ ಉದ್ಯೋಗ ಸಿಗುತ್ತಿದೆ. ಒರಿಸ್ಸಾದಂತಹ ರಾಜ್ಯ ಇದಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಲು ತೆರಿಗೆ ವಿನಾಯಿತಿಯನ್ನು ಕೊಡುವ ಮೂಲಕ ಬೀಡಿ ಉದ್ಯಮವನ್ನು ಆಕರ್ಷಣೆ ಮಾಡುವಂಥ ಪ್ರಯತ್ನವನ್ನು ಮಾಡುತ್ತಿದೆ. ನಮ್ಮ ರಾಜ್ಯದಲ್ಲಿ ಹಲವು ಲಕ್ಷ ಜನ ಬೀಡಿ ಕಾರ್ಮಿಕರು ದಿವಸಕ್ಕೆ 40 ರೂಪಾಯಿ ಸಂಪಾದನೆ ಮಾಡುವಂಥ ಹಿನ್ನೆಲೆಯಲ್ಲಿ ಈ ಬೀಡಿ ಉದ್ಯಮ ಕರ್ನಾಟಕದಿಂದ ಯಾವುದೇ ಕಾರಣಕ್ಕೆ ಒರಿಸ್ಸಾ ಅಥವಾ ಇನ್ನಿತರ ರಾಜ್ಯಗಳಿಗೆ ಹೋದಲ್ಲಿ ಅನಂತರ ಅಪಾಯ ಬರಬಹುದು ಎನ್ನುವುದನ್ನೂ ಕೂಡ ತಾವು ಗಂಭೀರವಾಗಿ ಚಿಂತನೆ ಮಾಡಬೇಕು. ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ ಸಿಗರೇಟ್ ಫಿಲ್ಟರ್‌ಗಳು ಮತ್ತು ಸಿಗರೇಟಿನ ಮೇಲಿನ ತೆರಿಗೆಯನ್ನು ಶೇ. 12 ರಿಂದ 10ಕ್ಕೆ ಇಳಿಸಿದ್ದೀರಿ. ಆದರೆ ಬೀಡಿ ಉದ್ಯಮಕ್ಕೆ ಯಾವುದೇ ರೀತಿಯಾದಂಥ

ಪ್ರೋತ್ಸಾಹವನ್ನು ತಾವು ಕೊಟ್ಟಿಲ್ಲ. ಇದನ್ನು ತಾವು ಕೊಡಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಚಹಾಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಶೇ. 8 ರಷ್ಟು ಮಾರಾಟ ತೆರಿಗೆ, ಟರ್ನೋವರ್ ಟ್ಯಾಕ್ಸ್ ಮತ್ತು ಕೇರಳ ಅಥವಾ ಇನ್ನೊಂದು ರಾಜ್ಯದಿಂದ ತರಿಸುವಂಥ ಸಂದರ್ಭದಲ್ಲಿ ಆ ಟ್ಯಾಕ್ಸ್‌ಗಳನ್ನೂ ಕಟ್ಟಿದಾಗ ಒಂದು ಕೆ.ಜಿ. ಚಹಾಕ್ಕೆ ನೂರು ರೂಪಾಯಿಯಾದರೆ 15 ರೂಪಾಯಿಗಳಷ್ಟು ತೆರಿಗೆಯನ್ನು ಕಟ್ಟಬೇಕಾಗುತ್ತದೆ. ಬಡವರ ಪಾನೀಯವಾದ ಚಹಾಕ್ಕೆ ಶೇ. 8 ರಿಂದ 4ಕ್ಕೆ ತೆರಿಗೆ ವಿನಾಯಿತಿ ಕೊಡಬೇಕು. ಹಾಗೂ ಟರ್ನೋವರ್ ಟ್ಯಾಕ್ಸ್ ಅನ್ನು ರದ್ದುಗೊಳಿಸಬೇಕು ಎನ್ನುವ ವಿನಂತಿಯನ್ನೂ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಪ್ರಿಂಟಿಂಗ್ ಎನ್ನುವುದು ಒಂದು ಕಲೆ. ಹಾಗೂ ಒಂದು ಉದ್ಯೋಗ. ಇದರಲ್ಲಿ ನೈಪುಣ್ಯತೆಯನ್ನು ಮಾಡಿ ಜಾಬ್ ವರ್ಕ್‌ಗಳನ್ನೂ ಮಾಡಬಹುದು. ಇಂಥ ಸಂದರ್ಭದಲ್ಲಿ ಪ್ರಿಂಟಿಂಗ್ ಮೇಲೆ ಹಾಕಿದ ತೆರಿಗೆ ಸರಿಯಲ್ಲ. ಇದನ್ನು ರದ್ದುಗೊಳಿಸಬೇಕಾಗಿ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ. ಮತ್ತು ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಖಂಡಿತವಾಗಿ ಸಂವಿಧಾನಿಕ ಚೌಕಟ್ಟಿನಲ್ಲಿ ಬರುವುದಿಲ್ಲ. ಹಿಂದೆ ಸರ್‌ಚಾರ್ಜ್‌ನ್ನು ರದ್ದುಗೊಳಿಸಿ ಶಹಭಾಸ್‌ಗಿರಿಯನ್ನು ಪಡೆದಂಥ ನಮ್ಮ ರಾಜ್ಯ ಸರ್ಕಾರ, ಈ ಸಂದರ್ಭದಲ್ಲಿ ಹಿಂಬದಿಯಿಂದ ಶೇಕಡಾ 0.5 ರಷ್ಟು ಸರ್‌ಚಾರ್ಜ್‌ನ್ನು ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಮೂಲಕ ತರುವಂಥ ಒಂದು ವಿಶೇಷ ಪ್ರಯತ್ನ ಮಾಡುತ್ತಿದೆ. ಅದನ್ನು ತಾವು ಹಿಂತೆಗೆದುಕೊಳ್ಳಬೇಕು. ಈ ಸಂದರ್ಭದಲ್ಲಿ ಎಂ.ಆರ್.ಪಿ.ಎಲ್ ನಂಥ ದೊಡ್ಡ ದೊಡ್ಡ ಮೆಗಾ ಇಂಡಸ್ಟ್ರೀಸ್‌ಗಳು ಯಾವುವಿವೆ ಅವು 400-500 ಕೋಟಿ ರೂಪಾಯಿಗಳಷ್ಟು ಸೇಲ್ಸ್ ಟ್ಯಾಕ್ಸ್ ಎಕ್ಸಂಪ್‌ಷನ್ ಪಡೆಯುತ್ತಿವೆ. ಅಂಥ ಕೈಗಾರಿಕೆಗಳ ಮೇಲೆ ಖಂಡಿತವಾಗಿ ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಅನ್ನು ಹಾಕಿ, ಅದು ಸ್ಥಳೀಯ ಆಡಳಿತಕ್ಕೆ ಬರುವ ರೀತಿಯಲ್ಲಿ ತಾವು ಸಹಕಾರವನ್ನು ಕೊಡಬೇಕು ಎನ್ನುವ ವಿನಂತಿಯನ್ನೂ ಸಹ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ರಾಜ್ಯದ ಅನೇಕ ಗ್ರಾಮಗಳಿಗೆ ಇವತ್ತಿಗೂ ಕೂಡ ಬಸ್ ಸಂಚಾರ ಸರಿಯಾಗಿ ಆಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಖಾಸಗಿಯವರು ಗ್ರಾಮೀಣ ಪ್ರದೇಶಗಳಿಗೆ ಬಸ್ಸುಗಳನ್ನು ಹಾಕಿದಲ್ಲಿ ಅವರಿಗೆ ಶೇ. 50 ರಷ್ಟು ತೆರಿಗೆ ವಿನಾಯಿತಿ ನೀಡುವಂಥ ಪ್ರೋತ್ಸಾಹವನ್ನು ತಾವು ನೀಡಬೇಕು. ಈ ಮೂಲಕ ಕನಿಷ್ಠ ಸೌಲಭ್ಯವಾದ ಬಸ್ ಸಂಚಾರವನ್ನು ಒದಗಿಸುವಂಥ ಸಹಕಾರವನ್ನು ಸರ್ಕಾರ ಕೊಡಬೇಕು ಎಂದು ವಿನಂತಿ ಮಾಡುತ್ತೇನೆ. ಅದೇ ರೀತಿ, ನಾನ್-ಟ್ಯಾಕ್ಸ್ ರೆವಿನ್ಯೂವನ್ನು ಹೆಚ್ಚಿಸುವಲ್ಲಿ ಸರ್ಕಾರದ ಪ್ರಯತ್ನ ಖಂಡಿತಾ ಸಾಲದು. ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಲ್ಲಿ ಗಣಿಗಾರಿಕೆ ನಮಗೆ ಹೆಚ್ಚು ಶಕ್ತಿ ಕೊಡಬಲ್ಲದು ಎನ್ನುವುದನ್ನು ತಿಳಿದುಕೊಂಡಿದ್ದೇನೆ. ಅದೇ ರೀತಿ ಅಡಿಕೆಯಂಥ ಸಾಮಾಗ್ರಿಗಳು ಮಂಗಳೂರಿನಿಂದ ಗುಜರಾತಿನ ಜಾಮೆ ನಗರದವರೆಗೆ ಚೆಕ್‌ಪೋಸ್ಟ್‌ಗಳಲ್ಲಿ ಮಾಮೂಲು ಕೊಟ್ಟು ರಾಜಾರೋಷವಾಗಿ ಟ್ಯಾಕ್ಸ್‌ನ್ನು ಅವಾಯ್ಡ್ ಮಾಡಿಕೊಂಡು ಹೋಗುತ್ತಿವೆ. ಅದೇ ರೀತಿ, ಗುಟ್ಕಾ ರೆಕ್ಟಿಫೈಡ್ ಸ್ಪಿರಿಟ್‌ಗಳು ಕೋಟ್ಯಾಂತರ ರೂಪಾಯಿಗಳನ್ನು ವಂಚನೆ ಮಾಡುತ್ತವೆ. ಈ ಕಾರಣಕ್ಕೋಸ್ಕರ ನಮ್ಮ ಚೆಕ್ ಪೋಸ್ಟ್‌ಗಳನ್ನು ಸುಧಾರಣೆ ಮಾಡುವಂಥಾದ್ದರಲ್ಲಿ ಅದನ್ನು ಕಂಪ್ಯೂಟರೀಕರಣಗೊಳಿಸಬೇಕು ಮತ್ತು ಯೋಗ್ಯ ಅಧಿಕಾರಿಗಳನ್ನು ನೇಮಕ ಮಾಡಿ ತೆರಿಗೆಯನ್ನು ಸಂಪಾದಿಸುವ ಬಗ್ಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ವಿನಂತಿಯನ್ನೂ ಕೂಡ ಈ ಸಂದರ್ಭದಲ್ಲಿ ಮಾಡಲು ಇಚ್ಛಿಸುತ್ತೇನೆ. ಸರ್ಕಾರ ಒಂದು ಯೋಚನೆ ಮಾಡಿದೆ, 1998ರ ಮೇನಲ್ಲಿ ಬಂಡವಾಳ ಹೂಡಿಕೆದಾರರ ವಿಶ್ವ ಸಮ್ಮೇಳನ ನಡೆಸುವ ಬಗ್ಗೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲು ನಾನು ಇಚ್ಛಿಸುತ್ತೇನೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ 1,500

ಕೋಟಿ ರೂಪಾಯಿಗಳಷ್ಟು ವಿದೇಶೀ ನೆರವನ್ನು ವಿದ್ಯುತ್ ಯೋಜನೆಗೆ ನೇರವಾಗಿ ಪಡೆಯುವುದರ ಬಗ್ಗೆ ಸ್ವಾತಂತ್ರ್ಯವನ್ನು ಕೊಟ್ಟಿರುವುದನ್ನು ಈ ಸಂದರ್ಭದಲ್ಲಿ ನಾನು ಸ್ವಾಗತಿಸುತ್ತೇನೆ. ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಈ ಒಂದು ಕೊಡುಗೆಯನ್ನು ಕೊಟ್ಟಿದೆ. ಇದರ ಉಪಯೋಗವನ್ನು ರಾಜ್ಯ ಸರ್ಕಾರ ಮಾಡಿಕೊಳ್ಳಬೇಕಾಗಿದೆ. ಇಂಥ ಸಂದರ್ಭದಲ್ಲಿ ಕೊಜೆಂಟ್ರಿಕ್ಸ್‌ನಂಥ ಅಸಮರ್ಥ, ಭ್ರಷ್ಟ ಸಂಸ್ಥೆಯನ್ನು ಆಯ್ಕೆ ಮಾಡದೇ, ನಿಜವಾಗಿ ಆರ್ಥಿಕ ಶಕ್ತಿಯನ್ನು ಹೊಂದಿರುವಂಥ ವಿದ್ಯುಚ್ಛಕ್ತಿ ತಯಾರಿಕೆಯಲ್ಲಿ ಅನುಭವ ಸಾಮರ್ಥ್ಯ ಹೊಂದಿದ ಕಂಪೆನಿಗಳೊಡನೆ ವ್ಯವಹಾರ ಮಾಡುವುದು ಸೂಕ್ತ ಎಂದು ವಿನಂತಿಯನ್ನು ಮಾಡುತ್ತೇನೆ. ರಾಜ್ಯ ಸರ್ಕಾರದ ಜೊತೆಗೆ ಒಪ್ಪಂದ ಮಾಡುವಾಗ ಜನರಲ್ ಎಲೆಕ್ಟ್ರಿಕಲ್ಸ್ ಎಂದು ಅಮೇರಿಕಾದ ದೊಡ್ಡ ಕಂಪನಿಯನ್ನು ತೋರಿಸಿ ಒಪ್ಪಂದವಾದ ನಂತರ ಜೈನ ಮ್ಯಾಲ್ ಕಂಪನಿ ಜೊತೆಗೆ ಒಪ್ಪಂದ ಮಾಡಿದಂತಹ ಕಂಪನಿ, ಅವರ ಪಾಲುದಾರಿಕೆ ತೋರಿಸಿದಂತಹ ಕಂಪನಿ ಯಾವ ರೀತಿಯಲ್ಲಿ 100 ಕೋಟಿ ರೂಪಾಯಿಗಳನ್ನು ತಮ್ಮ ಬಜೆಟ್‌ನಲ್ಲಿ ತೋರಿಸಿ ಅದರ ನಂತ ಅನುಷ್ಠಾನಕ್ಕೆ ತರದೆ ಅದನ್ನು ವಿವರಣೆ ಕೇಳಿದಾಗ ಅದು ಇರಲ್ಲ ಕಾರ್ಯರೂಪಕ್ಕೆ ಬಂದಿದೆ ಎಂದು ಹೇಳಿದಾಗ ವಿವರಣೆ ಕೊಡುವುದಕ್ಕೆ ಅಸಮರ್ಥರಾಗಿ ಹೈಕೋರ್ಟಿನಿಂದ ತನಿಖೆ ನಡೆಸಿ, ಸಿ ಬಿ ಐ ಯಿಂದ ತನಿಖೆ ನಡೆಸುವಂಥ ಆಜ್ಞೆಯಾದಂತಹ ಸಂದರ್ಭದಲ್ಲಿ ಬಹುಶ: ಇದು ಒಂದು ರೀತಿಯಲ್ಲಿ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆಯನ್ನು ತಂದು ಕೊಟ್ಟಿದೆ. ರಾಜ್ಯ ಸರ್ಕಾರದ ಆಡಳಿತದ ಮೇಲೆ ಪ್ರತಿಬಿಂಬಿಸುತ್ತಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಹೇಳುತ್ತಿದ್ದೇನೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಫಾರ್‌ಮೋಸ್ಟ್ ವಿದ್ಯುತ್ ಘಟಕಗಳ ಆಯ್ಕೆ ಕೂಡ ಇದೇ ರೀತಿ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾನು ಸಂಗ್ರಹಿಸಿದ ಮಾಹಿತಿಯ ಪ್ರಕಾರ ಪಿ ಪಿ ಎ ಸೈನ್ ಮಾಡಿದ ನಾಲ್ಕು ಕಂಪನಿಗಳಲ್ಲಿ ಮೆಸರ್ಸ್ ಸಿತ್ ಕೋ ಜನರೇಷನ್ ಮಾತ್ರ ಡಾಮಿನೇಟ್ ಗಣರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸಿದ ಹಿನ್ನೆಲೆ ಇದೆ. ಯೂನಿವರ್ಸಲ್ ವಾಟರ್ ಅಂಡ್ ಕಂಪನಿ, ಶಿಕಾಗೋ ಪವರ್ ಅಂಡ್ ಕಂಪನಿ, ಮೆಸರ್ಸ್ ನ್ಯಾರೋ ಅಂಡ್ ಕ್ಯಾಪಿಟಲ್ ಕಂಪನಿಗಳು ಕೇವಲ ಬ್ರೋಕರ್ಸ್ ಮಾತ್ರ. ನಾನು ರಾಜ್ಯ ಸರ್ಕಾರಕ್ಕೆ ಸ್ಪಷ್ಟವಾಗಿ ವಿನಂತಿ ಮಾಡುತ್ತೇನೆ, ಯಾವುದೇ ಬ್ರೋಕರ್ ಇಟ್ಟುಕೊಂಡು ವ್ಯವಹಾರ ಮಾಡಬೇಡಿ. ಬ್ರೋಕರ್ ಇಟ್ಟು ವ್ಯವಹಾರ ಮಾಡಿ ರಾಜ್ಯಕ್ಕೆ ಕೆಟ್ಟ ಹೆಸರನ್ನು ತರುವಂಥದ್ದಕ್ಕೆ ಪ್ರಯತ್ನ ಮಾಡಬೇಡಿ ಎಂದು ವಿನಂತಿ ಕೂಡ ಮಾಡುತ್ತೇನೆ. ವಿಶೇಷವಾಗಿ ಪುಟ 9 ರಲ್ಲಿ 17 ನೇ ಐಟಂ ವಿದೇಶಿ ನೆರವಿನ ಯೋಜನೆ ಬಗ್ಗೆ, ಡೆನಿಡಾ ಯೋಜನೆ ಬಗ್ಗೆ ಈಗಾಗಲೇ ಕಾರ್ಯರೂಪಕ್ಕೆ ಬಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 100 ಕೋಟಿಯ ಸಮಗ್ರ ನೀರು ಸರಬರಾಜು ಯೋಜನೆ ಹಾಗೂ ಇನ್ನಿತರ ಅಭಿವೃದ್ಧಿ ಚಟುವಟಿಕೆಗಳಿಗೋಸ್ಕರ ಅನುದಾನ ರೂಪದ ಹಾಗೂ ಸಾಲದ ರೂಪದಲ್ಲಿ ಸಹಾಯ ಕೊಡುವ ಆಶ್ವಾಸನೆ ಉಂಟಾಗಿತ್ತು. ಇಷ್ಟು ಇದ್ದರೂ ಕೂಡ ಯಾವುದೇ ಒಂದು ಕಾರಣಕ್ಕೆ ಈ ಒಪ್ಪಂದ ಬಿದ್ದು ಹೋಯಿತು. ಎಡಿಬಿ ಮತ್ತು ವಿಶ್ವಬ್ಯಾಂಕ್ ಜೊತೆಯಲ್ಲಿ ಸಹಕಾರಕ್ಕಾಗಿ ಸರ್ಕಾರದ ಮಟ್ಟದಲ್ಲಿ ಅನೇಕ ಮಾತುಕತೆಗಳು ನಡೆಯುವಂತಹ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ. ಡೆನಿಡಾ ಸ್ಕೀಮ್ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಷ್ಠಾನ ಆಗುವುದರಲ್ಲಿ ವಿಫಲವಾಗುವುದಕ್ಕೆ ಮುಖ್ಯ ಕಾರಣವೇನೆಂದರೆ, ಇವೆಲ್ಲಾ ಯೋಜನೆಗಳು ಸರ್ಕಾರದ ಯೋಜಿತ ಸಂಸ್ಥೆ ಯಾವುದು ಇದೆ ಅದರ ಮೂಲಕ ಆಗಬೇಕೆಂದು ಒತ್ತಾಯ ಆ ಸಂದರ್ಭದಲ್ಲಿ ಆಗಿತ್ತು. ಆದರೆ ಡೆನಿಡಾ ಸಂಸ್ಥೆ ಎನ್‌ಜಿ ಒ ಮೂಲಕ ಮಾಡಿದಂತಹ ಒಂದು ಮಾತನ್ನು ಒತ್ತಾಯ ಮಾಡಿದಾಗ

ಸರ್ಕಾರ ಅದಕ್ಕೆ ಒಪ್ಪಿಗೆ ಕೊಟ್ಟಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಈ ಸಂದರ್ಭದಲ್ಲಿ ಇಂತಹ ಅವ್ಯವಹಾರ ಇದರಲ್ಲಿ ಇದೆ ಇದರ ಬಗ್ಗೆ ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತಿದ್ದೇನೆ. ಪುಟ 30, ಕಂಡಿಕೆ 80-81 ರಲ್ಲಿ ಹಾಸ್ಟೆಲ್‌ಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಮಂಗಳೂರು ಕ್ಷೇತ್ರದಲ್ಲಿ ಒಂದು ಉದಾಹರಣೆ ಕೊಡುತ್ತಿದ್ದೇನೆ, 35 ಲಕ್ಷ ರೂಪಾಯಿ ಖರ್ಚು ಮಾಡಿದಂತಹ ಒಂದು ಹಾಸ್ಟೆಲ್ ಯಾವುದು ಇದೆ, ಕಳೆದ ಮೂರು ವರ್ಷಗಳಿಂದ ನಾನು ಈ ಸದನದಲ್ಲಿ ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದೇನೆ, ನಾಲ್ಕು ಜನ ಮಂತ್ರಿಗಳು ಅದಕ್ಕೆ ಭೇಟಿ ಮಾಡಿದ್ದಾರೆ. ನವೀಕರಣ ಮಾಡುವ ಆಶ್ವಾಸನೆ ಕೊಟ್ಟಿದ್ದಾರೆ. ಆದರೆ ಇವತ್ತಿಗೂ ಕೂಡ ಭೂತ ಬಂಗಲೆಯಾಗಿದೆ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯಲ್ಲಿ ಉಪಯೋಗವಾಗುವ ಸ್ಥಿತಿಯಲ್ಲಿಲ್ಲ. ಇದು ಸರ್ಕಾರದ ಆಡಳಿತದ ದುರ್ವರ್ತನೆ ಇದೆ ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇದನ್ನು ತಕ್ಷಣ ಸರಿಪಡಿಸಬೇಕು. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಈ 32 ಲಕ್ಷ ರೂಪಾಯಿ ಖರ್ಚು ಮಾಡಿದಂತಹ ಈ ಕಟ್ಟಡದ ನವೀಕರಣಗೊಳಿಸಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಪುಟ 42 ಕಂಡಿಕೆ 121 ರಲ್ಲಿ ಯುವ ಜನ ಸೇವೆ ಮತ್ತು ಕ್ರೀಡೆಗೆ ಸಂಬಂಧಪಟ್ಟ ಹಾಗೆ ಸಿಂಗಲ್ ಟ್ರ್ಯಾಕಿನ ಬಗ್ಗೆ ಒಪ್ಪಿಗೆ ಕೊಟ್ಟಿದ್ದರೂ ಕೂಡ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ವಿದೇಶಿಗಳಿಗೆ ಹೋಗುವಂತಹ, ಸಿಲ್ವರ್ ಮೆಡಲ್ ಮತ್ತು ಗೋಲ್ಡ್ ಮೆಡಲ್ ಪಡೆಯುವಂತಹ ಕ್ರೀಡಾ ಪಟುಗಳಿಗೆ ಸರ್ಕಾರದ ಕಡೆಯಿಂದ ಪ್ರೋತ್ಸಾಹ ಕೊಡುವುದಕ್ಕಾಗುತ್ತಿಲ್ಲ. ಕಂಡಂತಹ ಕ್ರೀಡಾ ಪಟುಗಳನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡಬೇಕೆಂದು ವಿನಂತಿ ಮಾಡುತ್ತೇನೆ.

ಡಾ॥ ಶಿವರಾಮ ಕಾರಂತರ ಬಗ್ಗೆ ಇವರು ಉಲ್ಲೇಖ ಮಾಡಿದ್ದಾರೆ, ಈ ಸಂದರ್ಭದಲ್ಲಿ ನಾನು ಕೇಳುವುದು, ವಿಶ್ವವಿದ್ಯಾನಿಲಯ ಇರುವಂಥ ಅಧ್ಯಯನ ಪೀಠ ಡಾ: ಶಿವರಾಮ ಕಾರಂತರ ಅಧ್ಯಯನ ಪೀಠದಲ್ಲಿ 1994-95, 1995-96, ಮತ್ತು 1996-97 ಕ್ಕೆ ವಾರ್ಷಿಕವಾಗಿ 10 ಲಕ್ಷ ರೂಪಾಯಿ ಅನುದಾನ ಕೊಡುವ ಆಶ್ವಾಸನೆ ಬಂದಿತ್ತು. ಆದರೆ ಈ ನಾಲ್ಕು ವರ್ಷಗಳಲ್ಲಿ ಕೊಟ್ಟಿರುವ ಅನುದಾನ ಐದು ಲಕ್ಷ ರೂಪಾಯಿಗಳು ಮಾತ್ರ. ಇಂಥ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಹಾಕುವಾಗ ಕನಿಷ್ಟ ಕೊಡಬೇಕಾದ ಅನುದಾನವಾದರೂ ಸೂಕ್ತ ಸಮಯದಲ್ಲಿ ಕೊಡುವಂತಹ ವಿಶ್ವಾಸವನ್ನು ಸರ್ಕಾರ ತೋರಿಸಬೇಕೆಂದು ವಿನಂತಿ ಮಾಡುತ್ತೇನೆ. ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ, ನಾನು ತಮ್ಮಲ್ಲಿ ಸೂಚನೆ ಮಾಡುವುದು ನಮ್ಮ ಡಾ: ಹೆಚ್.ಸಿ. ಮಹದೇವಪ್ಪ, ಮತ್ತು ಡಾ: ಶಂಕರನಾಯಕ್ ಅವರಲ್ಲಿ ಒಂದು ಕೋ ಆರ್ಡಿನೇಷನ್ ತರುವ ಪ್ರಯತ್ನ ಮಾಡಿ. ಏಕೆಂದರೆ ಒಂದೂವರೆ ಕೋಟಿ ರೂಪಾಯಿ ನಮ್ಮ ಕ್ಲೀನಿಕಲ್ ಫೀಸ್‌ನಿಂದ ಸಂಗ್ರಹವಾಗಿದೆ. ಅದನ್ನು ಯುಟಲೈಸ್ ಮಾಡುವುದಕ್ಕೆ ಪರವಾನಗಿ ಕೊಡುವುದಕ್ಕೆ ಮೂರು ವರ್ಷವಾಗಿದೆ, ಈ ಎರಡೂ ಇಲಾಖೆಗಳು ಯಾವುದಿದೆ, ಅದರಲ್ಲಿ ಕೋ-ಆರ್ಡಿನೇಷನ್ ತಂದಲ್ಲಿ ಏನಾದರೂ ಒಳ್ಳೆಯದಾಗಬಹುದು ಎಂದು ನನ್ನ ಅನಿಸಿಕೆ. ಇವತ್ತೂ ಕೂಡ ಆಸ್ಪತ್ರೆಯಲ್ಲಿ ಸಂದರ್ಶನ ಮಂಡಳಿಗಳನ್ನು ಮಾಡುವುದಕ್ಕೆ ವಿಫಲರಾಗಿದ್ದಾರೆ. ಜನರನ್ನು ಸ್ಪಂದಿಸತಕ್ಕಂತಹ ಯಾವ ಕ್ಷೇತ್ರಗಳು ಇವೆ, ಆಡಳಿತ ಕ್ಷೇತ್ರದಲ್ಲಿ ಅಲ್ಲಿ ಈ ರೀತಿ ಸಂದರ್ಶನ ಮಂಡಳಿ ಅಥವಾ ನಾಗರೀಕ ಸಲಹಾ ಸಮಿತಿಯನ್ನು ಖಂಡಿತ ಮಾಡಬೇಕೆಂದು ಒತ್ತಾಯ ಮಾಡುತ್ತಾ, ಮಲೇರಿಯಾಗೆ ಸಂಬಂಧಪಟ್ಟ ಹಾಗೆ, ಬಹುಶ: 12 ಕೋಟಿ ರೂಪಾಯಿ ಕೇಂದ್ರ ಅನುದಾನ ಸಿಗುತ್ತಿದೆ, ಏಳು ಕೋಟಿ ರೂಪಾಯಿ ಬೆಂಗಳೂರು ಮೈಸೂರು

ರಸ್ತೆಯಲ್ಲಿ ಬರುವ ವೃಶಭಾವತಿ ನದಿಗೆ ಡಿಡಿಟಿ ಹಾಕುವುದಕ್ಕೆ ಇವರ ಹತ್ತಿರ ಇದೆ. ಹೆಬ್ಬಾಳ ಕೆರೆ ಶುಚಿತ್ವಗೊಳಿಸುವುದಕ್ಕೆ ಐದು ಕೋಟಿ ರೂಪಾಯಿ ಇದೆ, ಈ 12 ಕೋಟಿ ಅನುದಾನವನ್ನು ಮಂಗಳೂರಿನಲ್ಲಿರುವವರಿಗೂ ಖರ್ಚು ಮಾಡಲಿಲ್ಲ, 22 ಜನ ಸತ್ತಿದ್ದಾರೆ, ಅಷ್ಟು ಮಾತ್ರವಲ್ಲ, 2,200 ಜನರು ಇರತಕ್ಕಂಥ ಸ್ಥಳದಲ್ಲಿ ಒಂದು ಕೇಂದ್ರ ನಗರ ಮಲೇರಿಯಾ ನಿಯಂತ್ರಣ ಘಟಕವನ್ನು ಕೊಡುವುದಕ್ಕೆ ನಿಮ್ಮ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ತಕ್ಷಣ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ನನಗೆ ಸಿಕ್ಕಿರುವ ಕಂಪ್ಲೆಂಟ್ ಪ್ರಕಾರ ಇವತ್ತು ಅಲ್ಲಿ ಯಾವ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ, ತುಂಬ ಕಳಪೆ ಮಟ್ಟದ ಅಕ್ಕಿ ಇದೆ, ಆದ್ದರಿಂದ ಅದನ್ನು ಸುಧಾರಿಸುವ ವ್ಯವಸ್ಥೆಯನ್ನು ತಾವು ಮಾಡಿಕೊಳ್ಳಬೇಕು. ಅಷ್ಟು ಮಾತ್ರವಲ್ಲ ಬಡವರಿಗೆ ಸಹಾಯವಾಗುವ ರೀತಿಯಲ್ಲಿ ಕ್ವಾಲಿಟಿ ಫುಡ್ ಐಟ್ಸಂ ಕೊಡುವಂಥದ್ದನ್ನು ಪ್ರಾರಂಭ ಮಾಡುವುದಕ್ಕೆ , ಮತ್ತು ವಿಶೇಷವಾಗಿ ನಮ್ಮ ಅನಾಥಾಶ್ರಮಗಳಿಗೆ ಸಿಗುವಂತಹ ಫೋಟಾ ಉತ್ತಮವಾದ ಫೋಟಾ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತಾ, ಪುಟ 44 ರಲ್ಲಿ ಒಳ್ಳೆಯ ಅಂಶ ಉಲ್ಲೇಖ ಮಾಡಿದ್ದಾರೆ. ಆಡಳಿತ ಜನರ ಸಮೀಪಕ್ಕೆ ಒಯ್ಯಲು ಜನತೆಗೆ ಸ್ಪಂದಿಸುವಂತಹ ಆಡಳಿತ ನೀಡುವುದು ಸರ್ಕಾರದ ಇಚ್ಛೆ, ಅದು ಪ್ರಕಟ ಕೂಡ ಆಗಿದೆ. ಅದನ್ನು ನಾನು ಈ ಸಂದರ್ಭದಲ್ಲಿ ಹೇಳುವುದು ನೇರವಾಗಿ ಒಂದು ಪತ್ರ ಯಾರೋ ಒಬ್ಬ ಅಧಿಕಾರಿಗೆ ಅಥವಾ ಮಂತ್ರಿಗಳಿಗೆ ಬರೆದರೆ ಸೆಂಟ್ರಲ್ ಡಿಸ್‌ಪ್ಯಾಚ್ ಸೆಕ್ಷನ್‌ಗೆ ಬರುತ್ತದೆ, ಇಲ್ಲಿಂದ ಟಪಾಲ್ ಸೆಕ್ಷನ್‌ಗೆ ಹೋಗಿ ಕನ್‌ಸರ್ನ್ಡ್ ಕೇಸ್ ವರ್ಕರ್‌ಗೆ ಹೋಗಿ, ಸೆಕ್ರೆಟರಿಗೆ ಹೋಗಿ, ಮಂತ್ರಿಗಳಿಗೆ ಹೋಗಬೇಕಾದರೆ ಕನಿಷ್ಟ 35 ರಿಂದ 40 ದಿನಗಳಾಗುತ್ತವೆ. ಕನಿಷ್ಟ ಫೈಲ್ ಯಾವುದಿದೆ, ಅಥವಾ ಕರೆಸ್‌ಪಾಂಡೆನ್ಸ್ ಯಾವುದು ಇದೆ ಅದನ್ನು ಆದರೂ ಸ್ವಲ್ಪ ಸಿಂಪ್ಲಿಫೈ ಮಾಡಿ, ತೆರಿಗೆ ಸರಳೀಕರಣ ಮಾತ್ರವಲ್ಲ, ಆಡಳಿತಾತ್ಮಕ ಸರಳೀಕರಣ ಮಾಡಿ ಡಿಸ್‌ಪ್ಯಾಚ್ ಆಗಿ ತಕ್ಷಣ ಸ್ಪಂದಿಸುವ ಕಾರ್ಯಕ್ರಮ ಹಾಕಿ, ಅದರಿಂದ ಹೆಚ್ಚು ಉಪಯುಕ್ತವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಹಾನಗರ ಪಾಲಿಕೆಯಿಂದ ಕರೆಸ್ ಪಾಂಡೆನ್ಸ್ ಮಾಡಿದರೂ ಉತ್ತರ ಕೊಡುವ ಸ್ಥಿತಿಯಲ್ಲಿ ನಮ್ಮ ಸರ್ಕಾರ ಇಲ್ಲ. ಮೂಡಾ ಸಂಸ್ಥೆ ಸುಮಾರು 50 ಕ್ಕಿಂತ ಕಡಿಮೆ ಇರುವ ಜೋನಲ್ ವಲಯ ಯಾವುದಿದೆ, ಅದನ್ನು ಕನ್‌ವರ್ಷನ್ ಮಾಡುವುದಕ್ಕೆ ಅಲ್ಲಿಯ ಅಧ್ಯಕ್ಷರಿಗೆ ಮತ್ತು ಸಮಿತಿಗೆ ಅವಕಾಶವಿದೆ. ಇಂತಹ ಸಮಯದಲ್ಲಿ ಕೂಡ ಅವರು ಅದನ್ನು ಯಾವುದನ್ನು ಶಿಫಾರಸ್ಸು ಮಾಡಿದರೆ ಇಲ್ಲಿ ಮೂಡಾದವರಿಗೆ ಬಂದರೆ ಸುಮಾರು 6-7 ತಿಂಗಳು ಮಾಡಿ ಅದನ್ನು ಕೊನೆಗೆ ತಿರಸ್ಕಾರ ಮಾಡುತ್ತಾರೆ. ರಿಜೆಕ್ಟ್ ಆದ ನಂತರ ಕೊನೆಯದಾಗಿ ಅವರು ಯಾವ ರೀತಿ ಯೋಚನೆ ಮಾಡುತ್ತಾರೆ, ಅಪೀಲ್ ನಮ್ಮ ಮಂತ್ರಿಗಳಿಗೆ ಹೋಗಬೇಕು. ಅಂತಹ ಒಂದು ಪರಿಸ್ಥಿತಿಯನ್ನು ಖಂಡಿತ ತರಬೇಡಿ. ಅದಕ್ಕಿಂತ ನೇರವಾಗಿ ಎಲ್ಲಾ ಆಡಳಿತ ಜವಾಬ್ದಾರಿ ಅಧಿಕಾರಿಗೆ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ಒತ್ತಾಯ ಮಾಡುತ್ತಾ, ಕೊನೆಯದಾಗಿ ನಾವು ಇತ್ತೀಚೆಗೆ ಕಾಶ್ಮೀರ ಮತ್ತು ಶ್ರೀ ನಗರದ ಪ್ರವಾಸ ಮಾಡುವ ಸಂದರ್ಭದಲ್ಲಿ ಶ್ರೀ ನಗರ, ಪಾಕಿಸ್ತಾನದ ಬಾರ್ಡರ್ ಮತ್ತು ಚೈನಾ ಬಾರ್ಡರ್‌ನಲ್ಲಿ ಕೆಲಸ ಮಾಡುವಂತಹ ನಮ್ಮ ಕನ್ನಡ ನಾಡಿನ ಯುವಕ ಯುವತಿಯರನ್ನು ಗುರುತಿಸುವಂತಹ, ಪರಿಚಯಿಸುವಂತಹ ಅವಕಾಶ ನಮಗೆ ದೊರಕಿತು. ಈ ಸಂದರ್ಭದಲ್ಲಿ ನಮಗೆ ಸಿಕ್ಕಿದ ಮಾಹಿತಿ ಪ್ರಕಾರ ಬಿ ಎಸ್ ಎಫ್, ಐಟಿ ಬಿ ಪಿ ಮತ್ತು ಸಿ ಆರ್ ಪಿ ಎಫ್ ಇದರಲ್ಲಿ ಸುಮಾರು 10,000 ಕನ್ನಡಿಗರು ಸೇವೆ ಸಲ್ಲಿಸುತ್ತಿದ್ದರು. ಮೈನಸ್ ಆರು ಡಿಗ್ರಿ ಸೆಂಟಿಗ್ರೇಡ್‌ನ ಚಳಿಯಲ್ಲಿ ಕೂಡ ಎಲ್ಲಾ ಅಪಾಯಗಳನ್ನು ಎದುರಿಸಿ ಕೆಲಸ ಮಾಡುತ್ತಿದ್ದಾರೆ. ಇಂತಹ

ವ್ಯಕ್ತಿಗಳು, ನಮ್ಮ ತರುಣರು ವರ್ಷದಲ್ಲಿ ಕನಿಷ್ಟ 60 ರಿಂದ 81 ಜನ ಬೇರೆ ಬೇರೆ ಕಾರಣಗಳಿಂದ ಹುತಾತ್ಮರಾಗುತ್ತಾರೆ. ಈ ದೇಶವನ್ನು ರಕ್ಷಣೆ ಮಾಡುವಂತಹ ಇಂತಹ ಯುವಕ ಯುವತಿಯರ ಕುಟುಂಬಕ್ಕೆ ನಮ್ಮ ಸರ್ಕಾರದ ಕಡೆಯಿಂದ ಯಾವುದೇ ರೀತಿಯಿಂದ ಆರ್ಥಿಕ ನೆರವು ಉದ್ಯೋಗ ಹಾಗೂ ಶಿಕ್ಷಣದ ಅವಕಾಶ ಕೊಡುವ ಆಶ್ವಾಸನೆ ಸನ್ಮಾನ್ಯ ಸಚಿವರು ಕೊಡಬೇಕೆಂದು ಹೇಳಿ, ಈ ಸಂದರ್ಭದಲ್ಲಿ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದನೆ ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಈಗ 1998-99ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಸನ್ಮಾನ್ಯ ಸದಸ್ಯರಾದ ರಾಜಣ್ಣನವರು ಮಾತನಾಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಸಿ. ಪುಟ್ಟಣ್ಣಯ್ಯ :- ಮಾನ್ಯ ಅಧ್ಯಕ್ಷರೆ ತಾವು ಈ ರೀತಿ ಹೇಳಿದ ತಕ್ಷಣ ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ಮುಗಿಯುತ್ತೇನೋ ಎನ್ನಿಸಿತು.

ಅಧ್ಯಕ್ಷರು :- ಬಜೆಟ್ ಮೇಲಿನ ಭಾಷಣ ಮುಗಿಯಲಿಲ್ಲ, ಈಗ ಪ್ರಾರಂಭವಾಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ, ಶ್ರೀ ರಾಮರೆಡ್ಡಿಯವರು ತಮ್ಮ ಟ್ರಸ್ಟೆಡ್ ಫ್ರೆಂಡ್ ರಾಜಣ್ಣನವರು ಏನು?

Mr. Speaker :- I will tell you later.

ಶ್ರೀ ಎನ್. ರಾಜಣ್ಣ (ಭಾರತೀನಗರ):- ಮಾನ್ಯ ಅಧ್ಯಕ್ಷರೆ, ತಾವು ಮೊದಲನೆಯ ಬಾರಿಗೆ 4ನೇ ಬಜೆಟ್ ಮೇಲೆ ಮಾತನಾಡಲು ನನಗೆ /Indian Standard Time 12 ಗಂಟೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ಹೈತ್ ಪೂರ್ವಕವಾದ ಅಭಿನಂದನೆಗಳನ್ನು ತಮಗೆ ಸಲ್ಲಿಸುತ್ತೇನೆ. Sun is very near to the equator. I am very grate-ful to the Speaker.

Mr. Speaker :- And also to the equator

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ಮೊದಲನೆಯ ಬಾರಿಗೆ ಬಜೆಟ್ ಮೇಲೆ ಮಾತನಾಡಲು 12 ಗಂಟೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ನನ್ನ ಧನ್ಯವಾದಗಳು ಸರ್ I am very grateful to you. ಇದು ಗೋಲ್ಡನ್ ಜುಬ್ಲಿ ವರ್ಷ ಎಂದು ನಾವು ಬೇರೆಯಾಗಿ ಮಾಡಿಕೊಂಡಿದ್ದೇನೆ. ಆ ಗೋಲ್ಡನ್ ಕಲರ್ ಬಜೆಟ್ ಬುಕ್ ನಮಗೆ ಬಂದಿದೆ. ಬಜೆಟ್ ಬಗ್ಗೆ ಎಲ್ಲ ಹಿರಿಯ ಮುಖಂಡರು ಚರ್ಚೆ ಮಾಡಿದ್ದಾರೆ. ಆದರೆ ಯಾರು ಇದರಲ್ಲಿ ಒಳ್ಳೆಯದು ಮಾಡಿದ್ದಾರೆ ಎಂದು ಹೇಳಲಿಲ್ಲ. Even if you try to search. ಅಂದರೆ, ಊಟ ಮಾಡುವಾಗ ಅನ್ನದಲ್ಲಿ ಕಲ್ಲು ಸಿಗಬಹುದು, ಪಲ್ಯದಲ್ಲಿ ಕಲ್ಲು ಸಿಗಬಹುದು, ಆದರೆ ನೀವು ಮೊಸರಿನಲ್ಲಿ ಕಲ್ಲು ಹುಡುಕುವವರು. Our hon. Chief Minister, Shri J.H. Patel, Hon'ble Finance Minister, Sri Siddaramaiah, with his officers, have taken seriousness to prepare the budget. It is not so easy to prepare a budget. Pandit Jawaharlal Nehru once said: "Planning is application of your intellect to your logical reason and better way of doing things. Whether it is in economics or politics or anything else,

planning is essential." They have done their duty. When the architect, who wants to build a building, sits for months together and applies his mind and then it comes to his mind to write plan. Likewise, I think Mr. Siddaramaiah, our Finance Minister, and the Finance Department have done their wonderful job even though at that particular period we were in the elections. They have done their duty. But there are certain loopholes. We can set right these. You speak about stability. Our Government has got the stability, for five years. Nobody need to bother about that. There is stability in our Finance also. We are trying our level best to tone up the stability in the Administration. 1994-95 ರಲ್ಲಿ ನಾವು ಇಲ್ಲಿಗೆ ಬಂದಾಗ ಇದು ಸಾಲದ ಮನೆಯಾಗಿತ್ತು ಹಿಂದಿನ ಸರ್ಕಾರದವರು 6 ಕೋಟಿ ರೂಪಾಯಿಗಳ ಸಾಲವನ್ನು ಬಿಟ್ಟು ಹೋಗಿದ್ದರು. ಅಂದರೆ ಇದು ಖಾಲಿ ಮನೆಯಾಗಿತ್ತು. ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನಂತಹ ಒಬ್ಬ ಅತ್ತೆ ಮನೆಗೆ ಹೋದಾಗ, ಅತ್ತೆಯ ಹತ್ತಿರ ಹಣ ಇರಲಿಲ್ಲ ಆಗ ಅತ್ತೆ ಮನೆಯನ್ನು ಗಿರವಿ ಇಟ್ಟು ಓಲೆಯನ್ನು ಮಾಡಿಸುತ್ತಾಳೆ, ಮಾಡಿದ ಸಾಲದ ಬಡ್ಡಿಯನ್ನು ತೀರಿಸಿಸಲು ಓಲೆಯನ್ನು ಮಾರಬೇಕಾಗುತ್ತದೆ. ಸಾಲ ಮಾಡಿ ಓಲೆ ಮಾಡಿಸಿ, ಓಲೆ ಮಾರಿ ಬಡ್ಡಿ ಕಟ್ಟುವಂತಹ ಪರಿಸ್ಥಿತಿ 1994-95 ರಲ್ಲಿ ಇತ್ತು. ಇಂತಹ ಪರಿಸ್ಥಿತಿಯಲ್ಲಿ ನಾವು ಬಂದಿದ್ದು. We don't take loan. There is no single O.D. Ours is clear cut bank transactions. No rebouncing of cheque in the last four years, except there is some difference in contract etc. ಏನಾದರೂ ವ್ಯತ್ಯಾಸವಾಗಿದ್ದರೆ, ಅಥವಾ ಅಧಿಕಾರಿಗಳ ಸಹಿಯಲ್ಲಿ ವ್ಯತ್ಯಾಸ ಇದ್ದರೆ ಚೆಕ್ ಬೌನ್ಸ್ ಆಗಿರಬಹುದು. ಇಲ್ಲ ಅಂದರೆ we have tried our level best to give this good budget this year. God made man. Man made money. Money made manythings. But what our Government is doing is, money is made for poor people. This budget will go to the grassroot, poor people. There is economy in this finance, there is education, there is employment. All these three are there.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ರಾಜಣ್ಣನವರು ಕನ್ನಡ ಸಂಸ್ಕೃತಿ ಇಲಾಖೆಯ ಅಧ್ಯಕ್ಷರು ಆಗಿದ್ದವರು, ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾ ಇದ್ದಾರೆ. ಇದು ಸರಿಯಾ ಎಂದು ತಮ್ಮನ್ನು ನಾನು ಕೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ :- ಮಾನ್ಯ ಅಧ್ಯಕ್ಷರೆ ಶ್ರೀ ಯು. ಆರ್. ಅನಂತ ಮೂರ್ತಿಯವರು ಇಂಗ್ಲಿಷ್ ಪ್ರೊಫೆಸರ್, ಆದರೂ ಅವರು ಕನ್ನಡದಲ್ಲಿ ಬರೆಯುತ್ತಾರೆ. ಅವರ ಇನ್ನೊಂದು ಮುಖವೇ ರಾಜಣ್ಣನವರು.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೆ, ಈ ರಾಜಣ್ಣನವರು ಸಂಸ್ಕೃತದಲ್ಲಿ ಮಾತನಾಡುತ್ತಾರೆ.

ಅಧ್ಯಕ್ಷರು :- ಅವರ ಭಾಷೆ ನಿಮಗೆ ಅರ್ಥವಾಗದಿದ್ದರೆ ನಾನು ಏನು ಮಾಡಲಿ?

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ತಾವು ಹೇಳುವುದರಲ್ಲಿ ಸತ್ಯಾಂಶ ಇದೆ. ನನಗೂ ಕನ್ನಡದ ಬಗ್ಗೆ ಪ್ರೀತಿ ಇದೆ. ಆದರೆ ನಾನು ಹುಟ್ಟಿದ ಜಾಗ ಎಂಥದ್ದು ಎಂದರೆ, ತಮಿಳರು, ತೆಲುಗಿನವರು, ಆಂಗ್ಲೊ ಇಂಡಿಯನ್ಸ್, ಕ್ರಿಶ್ಚಿಯನ್ಸ್ ಮಲೆಯಾಳಿಯನ್ಸ್ ಮುಸ್ಲಿಂ ಇರುವಂತಹ ಜಾಗ. ನಾನು ಏನು ಮಾಡಲಿ ಬೆಳಿಗ್ಗೆ ಎದ್ದರೆ ತಮಿಳಿನಲ್ಲಿ ಮಾತನಾಡಬೇಕು, ತೆಲುಗಿನಲ್ಲಿ ಮಾತನಾಡಬೇಕು, ಇಲ್ಲದಿದ್ದರೆ ಇಂಗ್ಲೀಷ್‌ನಲ್ಲಿ ಮಾತನಾಡಬೇಕು.

ಶ್ರೀ ಮಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಅವರು ಅವರ ಬೀದಿಯಲ್ಲಿ ಏನಾದರೂ ಮಾತನಾಡಿಕೊಳ್ಳಲಿ, ಇಲ್ಲಿ ಸರ್ಕಾರದ ನೀಡಿ ಆಡಳಿತ ಭಾಷೆ ಕನ್ನಡ ಎಂದು ಇದೆ. ಅವರ ಪಕ್ಕದ ಮನೆಯವರೊಂದಿಗೆ ಏನಾದರೂ ಮಾತನಾಡಿಕೊಳ್ಳಲಿ ಅದಕ್ಕೆ ನನ್ನ ಅಭ್ಯಂತರ ಇಲ್ಲ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಈಗ ರಾಜಣ್ಣನವರು ಕನ್ನಡದಲ್ಲಿಯೇ ಮಾತನಾಡುತ್ತಾರೆ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, ಆದಷ್ಟು ಕನ್ನಡದಲ್ಲಿ ಮಾತನಾಡಲು ಪ್ರಯತ್ನಮಾಡುತ್ತೇನೆ. I will try my level best to speak in Kannada.

(laughter)

Mr. Speaker :- Right person in this House, ಇವರದು ಆದ ಮೇಲೆ ಬಿ.ಐ. ಪಾಟೀಲರು ಇವರ ಮೇಲೆ ಚಾಲೆಂಜಿಂಗ್ ರೀತಿಯಲ್ಲಿ ಮಾತನಾಡುವವರಿದ್ದಾರೆ.

ಶ್ರೀ ಎನ್. ರಾಜಣ್ಣ :- ಮಾನ್ಯ ಅಧ್ಯಕ್ಷರೆ, In this budget, I accept what Mr. Srirama Reddy said : Fall in revenue. From Rs. 450 crores to Rs. 381 crores. Where we have to plug, that is very important. I hope the officers will note down this. Regarding budget deficit, after all ಡಿಫಿಸಿಟ್ ಮಾಡಬೇಕು ಈಗ. ಇಷ್ಟೆಲ್ಲಾ ಜನರಿಗೆ ನಾವು ಉದ್ಯೋಗವನ್ನು ಕೊಡಬೇಕು, ಶಿಕ್ಷಣವನ್ನು ಕೊಡಬೇಕು, ಇದರಲ್ಲಿ ಡಿಪಾಜಿಟ್ ಎಷ್ಟು ಡಿಫಿಸಿಟ್ ಆಗುತ್ತದೆ ಎಂದರೆ 104 ಕೋಟಿ ರೂಪಾಯಿ ಈ ವರ್ಷ 196.62 ಕೋಟಿ Though the resource mobilisation is up by Rs. 186 crores to Rs. 330 crores in Page 19 Para 46. Minor Irrigation. How much we have provided to the farmers is very important. ಇನ್ನು ನೀರಾವರಿಗೆ ಹಿಂದಿನ ವರ್ಷ ಇಟ್ಟಿದ್ದು 1095 ಕೋಟಿ ರೂಪಾಯಿಗಳು ಈ ವರ್ಷ 1,481 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ವಿದ್ಯುಚ್ಛಕ್ತಿಗೆ ಹೋದ ವರ್ಷ 672 ಕೋಟಿ ಇಟ್ಟಿದ್ದು, ಈ ವರ್ಷ 869 ಕೋಟಿ ಇಟ್ಟಿದ್ದಾರೆ. ಎಲ್ಲ ಕೆಲಸಗಳಿಗೂ ಹೆಚ್ಚಿಗೆ ಇಟ್ಟಿದ್ದಾರೆ. On Oage 23 Para 59 Education is important.

ಇವತ್ತು ದೇಶದಲ್ಲಿ ಎಲ್ಲರೂ ಶೇ. 100 ರಷ್ಟು ವಿದ್ಯಾವಂತರಾಗಬೇಕು. ಕೇರಳವನ್ನು ಬಿಟ್ಟು ಶೇ, 60 ರಷ್ಟು ನಾವು ಈಗ ರೀಚ್ ಆಗಿದ್ದೇವೆ. Or Government is taking all efforts. ಮತ್ತೆ ನಮ್ಮ ಸರ್ಕಾರ ವಿದ್ಯಾಭ್ಯಾಸವನ್ನು ಕಡ್ಡಾಯಗೊಳಿಸಬೇಕೆಂದು ಪ್ರಯತ್ನ ಮಾಡಿದೆ. 1994-95ರಲ್ಲಿ 1600 ಕೋಟಿ ಇತ್ತು ಎಂದು ಕೇಳಿದ್ದೇನೆ. ಈಗ 2,200 ಕೋಟಿ ಕೊಟ್ಟಿದ್ದಾರೆ. ಯೋಜನೆಗೆ ಹೋದ ವರ್ಷ 4,326 ಕೋಟಿ ರೂಪಾಯಿ ಕೊಟ್ಟಿದ್ದಾರೆ, ಈಗ 5,353 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಇದರಲ್ಲಿ ಯೋಜನೆಗೆ ಮಾತ್ರ 1,027 ಕೋಟಿ ರೂಪಾಯಿ ಜಾಸ್ತಿ ಇಟ್ಟಿದ್ದಾರೆ. 196 ಕೋಟಿ ರೂಪಾಯಿಗಳ ಕೊರತೆ ಬಜೆಟ್ ಇದಾಗಿದೆಯಷ್ಟೆ. ಕೇವಲ ಇಷ್ಟೆ ಕೊರತೆಯನ್ನು ತೋರಿಸಿ ಸರ್ಕಾರ ಎಷ್ಟು ಒಳ್ಳೆಯ ಕೆಲಸ ಮಾಡಿದೆ ಎಂಬುದನ್ನು ಅರಿತು ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ವರ್ಷದಲ್ಲಿ ಎಲ್ಲಾ ಸದಸ್ಯರು ಶಹಭಾಸ್‌ಗಿರಿಯನ್ನು ಸರ್ಕಾರಕ್ಕೆ ಕೊಡಬೇಕು. ಚುನಾವಣಾ ಕಾರ್ಯದಲ್ಲಿ ಎಷ್ಟೆಲ್ಲಾ ತೊಡಗಿಸಿಕೊಂಡಿದ್ದರೂ ಕೂಡ ಮಾನ್ಯ ಸಿದ್ಧರಾಮಯ್ಯನವರು ಕೇವಲ 15 ದಿವಸಗಳಲ್ಲಿ ಸರಿಯಾದ ರೀತಿಯ ಒಳ್ಳೆಯ ಬಜೆಟ್‌ನ್ನು ಕೊಟ್ಟಿದ್ದಾರೆ ಎಂದು ತಾರಿಫ್‌ಗಿರಿ ಕೊಟ್ಟು ಸರ್ಟಿಫೈಯನ್ನು ವಿರೋಧ ಪಕ್ಷದವರು ಮಾಡಲಿಲ್ಲವೆನ್ನುವುದೇ ನನಗೆ ಆಶ್ಚರ್ಯವಾಗಿದೆ. ನಾನು ನಮ್ಮ ಪಕ್ಷ ಒಳ್ಳೆಯ ಕೆಲಸಗಳನ್ನು ಮಾಡಿರುವುದರಿಂದ ಅವುಗಳ ಬಗ್ಗೆ ಹೇಳುತ್ತೇನೆ. ಅದೇ ರೀತಿ ಲೂಪ್‌ಹೋಲ್ ಏನಾದರೂ ಒಂದೆರಡು ಇದ್ದರೆ ಅದನ್ನೂ ಹೇಳುತ್ತೇನೆ. ಒಳ್ಳೆಯ ಕೆಲಸ ಮಾಡಿರುವ ಬಗ್ಗೆ ಎಲ್ಲಾ ಸದಸ್ಯರು ಅಪ್ರಿಶಿಯೇಟ್ ಮಾಡಿದರೆ ನಮಗೆ ಮತ್ತು ನಮ್ಮ ಪಕ್ಷದವರಿಗೆ ಸಂತೋಷವಾಗುತ್ತದೆ ಮತ್ತು ತೆರಿಗೆ ವಸೂಲಿಯಲ್ಲಿಯೂ ಕೂಡ ಈ ವರ್ಷ ಹೆಚ್ಚಾಗುತ್ತದೆ. ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಈ ವರ್ಷದಲ್ಲಿ ಗುರಿ ಇಟ್ಟುಕೊಂಡಿರುವಂತೆ ಪ್ಯಾರಾ ನಂಬರ್ 161 ರಲ್ಲಿ 1998-99ನೇ ಸಾಲಿನ ಆಯವ್ಯಯ ಅಂದಾಜು 15, 157 ಕೋಟಿ ರೂಪಾಯಿಗಳಿಗೆ ರೀಚ್ ಆಗಿದೆ. ಈ ರೀತಿಯಲ್ಲಿ ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರಿಂದ 196 ಕೋಟಿ ರೂಪಾಯಿಗಳ ಕೊರತೆ ಕಂಡು ಬಂದೇ ಬರುತ್ತದೆ. ಯಾವುದೋ ಕೆಲವೊಂದು ಐಟಂಗಳಡಿಯಲ್ಲಿ ಸ್ವಲ್ಪ ತೆರಿಗೆ ಜಾಸ್ತಿಯಾಗಿದೆ. ಮೋಜು ಕಾರ್ಯಗಳಿಗೋಗುವವರಿಗೆ ತೆರಿಗೆ ಜಾಸ್ತಿಯಾಗಿದೆ. ಲೈವ್ ಬ್ಯಾಂಡ್‌ಗೆ ಇಂದು ಹಣವಿರುವವರೇ ಹೋಗುವುದು, ಆವರು ಸ್ವಲ್ಪ ತೆರಿಗೆ ಹೆಚ್ಚು ಕೊಡಲಿ ಬಿಡಿ, ಅದೇ ರೀತಿ ಬೀರ್‌ನ್ನು ಕುಡಿಯುವರು ಯಾರು? ಹಣ ಹೆಚ್ಚು ಇರುವವರೇ ಹೋಗಿ ಬೀರ್ ಕುಡಿಯುತ್ತಾರೆ. ಆವರು ತೆರಿಗೆ ಜಾಸ್ತಿ ಕೊಡಲಿ ಬಿಡಿ. ಇನ್ನು ಶಿಕ್ಷಣಕ್ಕಾಗಿ ಈ ಸಾಲಿನಲ್ಲಿ ಅತಿ ಹೆಚ್ಚಿನ ಮೊತ್ತವನ್ನು ನಾವು ಇಟ್ಟಿದ್ದೇವೆ. ಇನ್ನು ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯ ನಿರುದ್ಯೋಗಿಗಳಿದ್ದಾರೆ. ಈ ನಿರುದ್ಯೋಗಿಗಳ ಬಗ್ಗೆ ಶ್ರೀರಾಮರೆಡ್ಡಿಯವರು ಮಾತನಾಡಬೇಕಾದರೆ ಬಹಳ ಚೆನ್ನಾಗಿ ಮಾತನಾಡುತ್ತ ಹೇಳಿದರು. There were about 28,000 employees in the goldmine about ten years back ಆದರೆ ಇಂದು 8 ಸಾವಿರಕ್ಕೆ ಇವರ ಸಂಖ್ಯೆ ಇಳಿದಿದೆ. ಈ 8 ಸಾವಿರ ಉದ್ಯೋಗಿಗಳನ್ನು ಮನೆಗೆ ಕಳುಹಿಸಬೇಕಾಗಿತ್ತು, ಅಂಥ ಸಮಯದಲ್ಲಿ ಸಂಯುಕ್ತರಂಗ ಸರ್ಕಾರದ 16 ಜನ ಲೋಕಸಭಾ ಸದಸ್ಯರು ಮತ್ತು ಅಂದಿನ ಪ್ರಧಾನಿಗಳಾದ ದೇವೇಗೌಡರು ಅಲ್ಲಿಗೆ ಹೋಗಿ ಇದನ್ನು ತಡೆದರು. ಇಲ್ಲದಿದ್ದರೆ ಇವರೆಲ್ಲರನ್ನೂ ಮನೆಗೆ ಕಳುಹಿಸಿಬಿಡುತ್ತಿದ್ದರು. ಇವರ ಮಧ್ಯೆ ಪ್ರವೇಶದಿಂದ ಇವ್ಹೊತ್ತು ಆ 8 ಸಾವಿರ ಉದ್ಯೋಗಿಗಳು ಕೆಲಸವನ್ನು ಉಳಿಸಿಕೊಂಡು 9 ಸಾವಿರ ಅಡಿಯಿಂದ ಚಿನ್ನದ ಅದಿರನ್ನು ತೆಗೆದುಕೊಂಡು ಬಂದು ತಾಜಾ ಚಿನ್ನವನ್ನು ತೆಗೆದು ಕೆಲಸವನ್ನು ಮಾಡಿ ತಮ್ಮ ಸಂಸಾರದ ಜೀವನವನ್ನು ನಡೆಸುವುದಕ್ಕೆ

ಸಂಯುಕ್ತರಂಗ ಸರ್ಕಾರ ದಾರಿ ಮಾಡಿಕೊಟ್ಟಿದೆ. ಇದೇ ರೀತಿಯಲ್ಲಿ ಭದ್ರಾವತಿಯ ಕಾರ್ಖಾನೆಯೂ ಮುಚ್ಚುವ ಪರಿಸ್ಥಿತಿ ಬಂದಿತ್ತು. ಆ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮತ್ತು ಮುಖ್ಯ ಮಂತ್ರಿಗಳಾದ ಜೆ. ಹೆಚ್. ಪಟೇಲ್‌ರವರು ಈ ಕಾರ್ಖಾನೆಗೆ ಸಂಬಂಧಪಟ್ಟ ಫೈಲ್‌ಗಳನ್ನು ದೆಹಲಿಗೆ ತೆಗೆದುಕೊಂಡು ಹೋಗಿ ಸೇಲ್ ಅಥಾರಿಟಿಗೆ ಭದ್ರಾವತಿ ಕಾರ್ಖಾನೆಯನ್ನು ಕೊಟ್ಟು ಅಲ್ಲಿಗೆ 600 ಕೋಟಿ ರೂಪಾಯಿಗಳನ್ನು ಕೊಟ್ಟು ಇಂದು ಆ ಕಾರ್ಖಾನೆ ನಡೆಯುವ ಮಟ್ಟಕ್ಕೆ ಬರುವುದಕ್ಕೆ ನಮ್ಮ ಸರ್ಕಾರ ಕಾರಣವಾಗಿದೆ. ಈ ರೀತಿ ಮಾಡದಿದ್ದರೆ ಇಂದು 10 ಸಾವಿರ ಕುಟುಂಬಗಳು ಬೀದಿಪಾಲಾಗುತ್ತಿದ್ದವು. ಈ ರೀತಿ ಮಾಡದಿದ್ದರೆ ಭದ್ರಾವತಿ ಮತ್ತು ಶಿವಮೊಗ್ಗದ ಮುಖ್ಯರಸ್ತೆಗಳ ಬದಿಯಲ್ಲಿರುವ ಎಲ್ಲಾ ಅಂಗಡಿಗಳನ್ನು ಮುಚ್ಚಬೇಕಾದ ಪ್ರಸಂಗ ಬಂದಿರುತ್ತಿತ್ತು. ಆದರೆ ಆ ರೀತಿಯಾಗದೆ ಇಂದು ಕಾರ್ಮಿಕರು ಸಂತೋಷವಾಗಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡಿದ್ದಾರೆ. ವ್ಯಾಪಾರಸ್ಥರು ಚೆನ್ನಾಗಿ ವ್ಯಾಪಾರವಾಗುತ್ತಿರುವುದರಿಂದ ಒಳ್ಳೆಯ ಮಟ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ರೈತರುಗಳು ತಮ್ಮ ಪದಾರ್ಥಗಳನ್ನು ಮಾರುಕಟ್ಟೆಗೆ ತಂದರೆ ಅದು ಉತ್ತಮ ಬೆಲೆಗೆ ಮಾರಾಟವಾಗುವ ಪರಿಸ್ಥಿತಿ ಇವೊತ್ತು ಭದ್ರಾವತಿ ಮತ್ತು ಶಿವಮೊಗ್ಗದಲ್ಲಿ ಬಂದಿದೆ. ಅದೇ ರೀತಿ ಬೆಂಗಳೂರು ಮತ್ತು ಇಡೀ ಕರ್ನಾಟಕದಲ್ಲಿ ಇಂಥ ಒಳ್ಳೆಯ ಪರಿಸ್ಥಿತಿ ಇದೆ. ಇದು ಕೇಂದ್ರ ಸರ್ಕಾರದಲ್ಲಿ ಸಂಯುಕ್ತ ರಂಗ ಸರ್ಕಾರ ಮತ್ತು ಕರ್ನಾಟಕದಲ್ಲಿ ಜನತಾದಳ ಸರ್ಕಾರ ಮಾಡಿದ ಸಾಧನೆಯಿಂದ ಮಾತ್ರ ಇದೆ. ಇನ್ನು ಕರ್ನಾಟಕ ಎಲೆಕ್ಟ್ರಾನಿಕ್ ಕಂಪನಿ ಬಗ್ಗೆ ಹೇಳಬೇಕೆಂದರೆ ಇದು 600 ಜನ ಕೆಲಸಗಾರರನ್ನು ಹೊಂದಿದ್ದು ಕೆಲಸ ನಡೆಸಲಾಗದೇ ಮುಚ್ಚಿದ್ದರು. ಇದಕ್ಕೆ 24 ಕೋಟಿ ರೂಪಾಯಿಗಳನ್ನು ಕೊಟ್ಟ ಪ್ರಯುಕ್ತ ಇವೊತ್ತು ಮತ್ತೆ ಕೆಲಸ ಪ್ರಾರಂಭವಾಗಿದೆ. ಇಂದು ಒಳ್ಳೆಯ ಆರ್ಡರ್‌ಗಳನ್ನು ಕಂಪನಿಗೆ ಕೊಡಲಾಗುತ್ತಿದೆ. ಇಂಥ ಕೆಲಸಗಳನ್ನು ಮಾಡಿರುವುದು ಒಳ್ಳೆಯದಲ್ಲವೇ? ಕಾರ್ಮಿಕರಿಗೆ ಕೆಲಸ ಕೊಟ್ಟಿರುವುದು ಒಳ್ಳೆಯ ಕೆಲಸವಲ್ಲವೇ? ಇದನ್ನೇ ನಮ್ಮ ಜನತಾ ದಳ ಸರ್ಕಾರ ಮಾಡಿರುವ ಸಾಧನೆ ಎಂದು ಹೇಳುವುದು. ಇನ್ನು ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ ಒಟ್ಟು 73 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗುತ್ತಿದೆ. ಕಳೆದ ವರ್ಷ 50 ಸಾವಿರ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಈ ವರ್ಷ 28 ಸಾವಿರ ಶಿಕ್ಷಕರನ್ನು ತೆಗೆದುಕೊಳ್ಳಲಾಗುತ್ತದೆ. ಹೆಚ್ಚು ಕಡಿಮೆ ಸುಮಾರು 70 ಸಾವಿರ ಶಿಕ್ಷಕರನ್ನು ಶಿಕ್ಷಣ ಇಲಾಖೆಯಲ್ಲಿ ನೇಮಕಾತಿ ಆದಹಾಗೆ ಆಗುತ್ತದೆ. ಇದರಲ್ಲಿ ಅರ್ಧ ಭಾಗದಷ್ಟು ಮಹಿಳೆಯರನ್ನೇ ತೆಗೆದುಕೊಳ್ಳಲಾಗುತ್ತಿದೆ. ಇದರ ಬಗ್ಗೆ ಗಂಭೀರವಾಗಿ ಎಲ್ಲರೂ ಆಲೋಚಿತರಾಗಬೇಕಾಗುತ್ತದೆ. ಈ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರ ನೇಮಕಾತಿಯಲ್ಲಿ ಶೇಕಡ 50 ರಷ್ಟನ್ನು ಮಹಿಳೆಯರಿಗೆ ಮೀಸಲಾಗಿಡಲಾಗಿದೆ. ಏತಕ್ಕೋಸ್ಕರ ಹೀಗೆ ಮಾಡಲಾಗಿದೆ ಎಂದು ಚಿಂತನೆ ಮಾಡಬೇಕು. ತಾಯಿಯಾದವಳು ತನ್ನ ಮಗು ಜನಿಸಿದೊಡನೆ ಅದರ ಬಗ್ಗೆ ಯೋಚನೆ ಮಾಡುತ್ತ ಅದನ್ನು ಹೇಗೆ ಸಾಕುವುದು, ಮಗುವನ್ನು ಶಾಲೆಗೆ ಕಳುಹಿಸುವುದಕ್ಕೆ ಆಗುತ್ತದೆಯೇ, ತನ್ನ ಮಗು ಶಾಲೆಗೆ ಹೋದರೆ ಪದವೀಧರಳಾಗುತ್ತಾಳೆಯೇ, ಪದವೀಧರಳಾದರೆ ಅವಳಿಗೆ ಕೆಲಸ ಸಿಗುತ್ತದೆಯೇ, ಕೆಲಸ ಸಿಗದಿದ್ದರೂ ಪರವಾಗಿಲ್ಲ ಒಳ್ಳೆಯ ಗಂಡನಾದರು ಸಿಗುತ್ತಾನೆಯೇ ಎಂದು ತಾಯಿಗೆ ಮಗು ಜನಿಸಿದಾಗಲೇ ಚಿಂತನೆ ಪ್ರಾರಂಭವಾಗುತ್ತದೆ. ಇದನ್ನೆಲ್ಲಾ ಚಿಂತನೆ ಮಾಡಿಯೇ ನಮ್ಮ ಜನತಾದಳ ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಉಪಮುಖ್ಯಮಂತ್ರಿಗಳು ಶಿಕ್ಷಣ ಕ್ಷೇತ್ರದಲ್ಲಿ 35 ಸಾವಿರ ಶಿಕ್ಷಕರ ಹುದ್ದೆಯನ್ನು ಮಹಿಳೆಯರಿಗೇ ಮೀಸಲಿಟ್ಟು ನೇಮಕ ಮಾಡುತ್ತಿರುವುದು. ಮಾನ್ಯ ಗೋವಿಂದೇಗೌಡರು ಶಿಕ್ಷಣ ಇಲಾಖೆಯ

ಮಂತ್ರಿಗಳಾಗಿ ಈ ಕೆಲಸ ಮಾಡುತ್ತಿದ್ದಾರೆ. ಇನ್ನು ಬಡವರ ಕೆಲಸವೆಂದು ಭಾವಿಸಿ " ಮಾಂಗಲ್ಯ ಭಾಗ್ಯ" ಯೋಜನೆಯಡಿಯಲ್ಲಿ ಮದುವೆಯಾಗುವ ಹೆಣ್ಣು ಮಗಳಿಗೆ 5 ಸಾವಿರ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಡುತ್ತದೆ. ಇದು ಒಂದು ಒಳ್ಳೆಯ ಕೆಲಸವೇ ಆಗಿದೆ. ಕಳೆದ ವರ್ಷ ನಮ್ಮ ಮಗಳು, ನಮ್ಮ ಶಕ್ತಿ ಯೋಜನೆಯಡಿಯಲ್ಲಿ 3 ಸಾವಿರ ರೂಪಾಯಿಗಳನ್ನು ಕೊಡುವ ಯೋಜನೆ ಇತ್ತು. ಹೆಣ್ಣು ಮಕ್ಕಳಿಗಾಗಿ ನಮ್ಮ ಸರ್ಕಾರ ಇಷ್ಟೆಲ್ಲಾ ಕೆಲಸಗಳನ್ನು ಮಾಡಿದ್ದರೂ ಕೂಡ ವಿರೋಧ ಪಕ್ಷದವರು ನೀವು ಏನು ಮಾಡಿದ್ದೀರಿ? ನೀವು ಏನು ಮಾಡಿದ್ದೀರಿ? ಎಂದು ಕೇಳುತ್ತಲೇ ಇರುತ್ತಾರೆ. ನಾವು ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ನಾವು ಇಂದು ಖೋತಾ ಬಜೆಟ್ ತೋರಿಸಿರುವುದಕ್ಕೆ ಒಂದು ಬಹಳ ಮುಖ್ಯವಾದ ಮೇಜರ್ ಕಾರಣ ಇದೆ. According to the report of the 5th Pay Commission, the State Government employees salary is an additional burden on the State Government. ಆ ಹಿನ್ನೆಲೆಯಲ್ಲಿ ಇವೊತ್ತು ನಾವು ಮೊದಲ ಹಂತದಲ್ಲಿ 450 ಕೋಟಿ ರೂಪಾಯಿಗಳನ್ನು ಸಂಬಳದಲ್ಲಿ ಹೆಚ್ಚಾಗಿ ಕೊಡಬೇಕಾಗಿ ಬಂದದ್ದರಿಂದ ಖೋತಾ ಬಜೆಟ್ ಆಯಿತು. ಈ 450 ಕೋಟಿ ರೂಪಾಯಿಗಳನ್ನು ಕೊಡುವ ಕಾರ್ಯ ಇಲ್ಲದಿದ್ದರೆ ಖೋತಾ ಬಜೆಟ್ ತೋರಿಸದೇ ಇನ್ನೂ 250 ಕೋಟಿ ರೂಪಾಯಿಗಳು ಸರ್‌ಪ್ಲಸ್ ಉಳಿಯುತ್ತಿತ್ತು. ಸಂಬಳವನ್ನು ಜಾಸ್ತಿ ಮಾಡಿದ ಕಾರಣದಿಂದಲೇ ನಾವು ಇವೊತ್ತು 190 ಕೋಟಿ ರೂಪಾಯಿಗಳ ಖೋತಾ ಬಜೆಟ್‌ನ್ನು ಕೊಡಬೇಕಾಗಿ ಬಂತು. ಇದನ್ನು ಮೊದಲು ಕೇಂದ್ರ ಸರ್ಕಾರದವರು ಮಾಡಿದರು. ಅವರು ಯಾವ ಪ್ರಮಾಣದಲ್ಲಿ ಸಂಬಳವನ್ನು ಹೆಚ್ಚು ಮಾಡಿದ್ದಾರೋ ಅದೇ ಪ್ರಮಾಣದಲ್ಲಿ ನಮ್ಮ ರಾಜ್ಯ ಸರ್ಕಾರ ಮಾಡಿದರೆ ಒಟ್ಟು 1,400 ಕೋಟಿ ರೂಪಾಯಿಗಳು ಬೇಕಾಗಿತ್ತೆಂದು ನಮ್ಮ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಾನು ಸನ್ಮಾನ್ಯ ಅಧ್ಯಕ್ಷರಾದ ನಿಮ್ಮನ್ನೇ ಇದರ ಬಗ್ಗೆ ಕೇಳಬಯಸುತ್ತೇನೆ. ನಮ್ಮ ರಾಜ್ಯದ ಒಟ್ಟು ಆದಾಯದಲ್ಲಿ ಶೇಕಡ 30 ರಷ್ಟು ಮಾತ್ರ ನೌಕರರ ಸಂಬಳಕ್ಕೆ ಹೋಗಬೇಕಲ್ಲವೇ? ಇದು ಕಡೇ ಪಕ್ಷ ಶೇಕಡ 40ಕ್ಕೆ ಹೋದರೂ ಪರವಾಗಿಲ್ಲ. ಆದರೆ ಶೇಕಡ 50ಕ್ಕೆ ಹೋಗಿರುವುದರಿಂದ ಇದನ್ನು ಕಡಿವಾಣ ಹಾಕಬೇಕೆಂದು, ಅದಕ್ಕಾಗಿ ಏನು ಚಿಂತನೆ ಮಾಡಬಹುದು ಎಂಬ ಬಗ್ಗೆ ಉಪ ಮುಖ್ಯಮಂತ್ರಿಗಳು ಚಿಂತನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಸರ್ಕಾರ ಮಾಡಿರುವ ಒಳ್ಳೆಯ ಕೆಲಸಗಳ ಬಗ್ಗೆ ಹೇಳಬೇಕೆಂದರೆ ಸುಮಾರು 37,507 ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಲ್ಲದೇ 141 ಕೋಟಿ ರೂಪಾಯಿಗಳ ಅಂದಾಜು ವೆಚ್ಚ ಮಾಡಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಮತ್ತು ಮರು ಯೋಜನೆ ಹಾಗೂ ಒಳ ಚರಂಡಿ ಸೌಲಭ್ಯ ಒದಗಿಸುವುದಾಗಿ ಹೇಳಲಾಗಿದೆ. ನಾನು ಮಂತ್ರಿಗಳನ್ನು ಒಂದು ಮಾತು ಕೇಳುತ್ತೇನೆ. ನೀವು ಗ್ರಾಮೀಣ ನೈರ್ಮಲ್ಯ ಯೋಜನೆಯಡಿ 1998-99ನೇ ಸಾಲಿಗೆ ಒಟ್ಟು 2 ಲಕ್ಷದ 98 ಸಾವಿರ ಶೌಚಾಲಯಗಳನ್ನು ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ ಎಂದು ಹೇಳಿದ್ದೀರಿ. ಈ ಶೌಚಾಲಯದ ವೇಸ್ಟ್ ಎಲ್ಲಿಗೆ ಹೋಗುತ್ತದೆ ಎಂಬ ಬಗ್ಗೆ ತಾವು ಹೇಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಇದಕ್ಕೆ ಏನು ವ್ಯವಸ್ಥೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಏಕೆಂದರೆ ಸೆಪ್ಟಿಕ್ ಟ್ಯಾಂಕ್ ಎಂದು ಇರುತ್ತದೆ, ಆ ಸೆಪ್ಟಿಕ್ ಟ್ಯಾಂಕ್‌ಗೆ ಈ ವೇಸ್ಟ್ ಹೋದರೆ ಗ್ರಾಜ್ಯುಯಲಿ ಅಲ್ಲಿರುವ ಬೋರ್‌ವೆಲ್‌ಗೆ ಕೆಟ್ಟ ಪರಿಣಾಮ ಬೀರುತ್ತದೆ. ಆದ ಕಾರಣ ಈ ವೇಸ್ಟ್‌ನ್ನು ಸೆಗಣಿಗೆ ಮಿಕ್ಸ್ ಮಾಡಿ ಗಾಂಧಿಯನ್ ಮೆತೆಡ್‌ನಲ್ಲಿ ಹಳ್ಳಿಯಲ್ಲಿ ನಾಲ್ಕು ಕಡೆ ಡೈವರ್ಟ್ ಮಾಡಿ ಇದನ್ನು ಗೋಬರ್ ಗ್ಯಾಸ್‌ನಲ್ಲಿ ಉಪಯೋಗಿಸಿದರೆ ಹಳ್ಳಿಯ ರೈತರಿಗೆಲ್ಲಾ

ಅನುಕೂಲವಾಗುತ್ತದೆ ಮತ್ತು ಒಳ್ಳೆಯ ಗೊಬ್ಬರವೂ ದೊರೆಯುತ್ತದೆ. ಈ ಗೊಬ್ಬರ ನ್ಯಾಚುರಲ್ ಆಗಿರುತ್ತದೆ. ಇದು ಬಹಳ ಮುಖ್ಯವಾದ ವಿಷಯವಾಗಿರುವುದರಿಂದ ನಾನು ಇದರ ಬಗ್ಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು :- ರಾಜಣ್ಣನವರೇ ಬೇಗ ಮುಗಿಸಿ. ಮುಂದೆ ಬೇಡಿಕೆಗಳ ಮೇಲೆ ಮಾತನಾಡುವಾಗ ನಿಮ್ಮ ಭಾಷಣವನ್ನು ಮಾಡಬಹುದು.

ಶ್ರೀ ಎನ್. ರಾಜಣ್ಣ :- ನಾನು ಇನ್ನೂ ಬೆಂಗಳೂರು ನಗರದ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೇ, ಏನು ನೀವು ಅವರಿಗೆ ಹೀಗೆ ಹೇಳಿಬಿಟ್ರಿ. ಮುಂದೆ ಹೊಸ ಸರ್ಕಾರ ಬರುತ್ತದೆ, ಆಗ ಅವರು ಅರ್ಬನ್ ಡೆವಲಪ್‌ಮೆಂಟ್ ಮಿನಿಸ್ಟರ್ ಆಗುತ್ತಾರೆ. ಆಗ ಅವರು ಉತ್ತರ ಕೊಡುವ ಸ್ಥಾನದಲ್ಲಿರುತ್ತಾರೆ. ಆಗ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ಎಂದರೆ ಹೇಗೆ?

Mr. Speaker :- It should be the privilege of this House to have him as Urban Development Minister.

ಶ್ರೀ ಎನ್. ರಾಜಣ್ಣ :- ಮಂತ್ರಿ ಪದವಿ ಕೊಟ್ಟರೆ ಸಂತೋಷ. ಒಂದು ವೇಳೆ ಕೊಡದಿದ್ದರೆ ನಾನು ವ್ಯಥೆಪಡುವುದಿಲ್ಲ. ನಾನು ಏನು ದೇಶಕ್ಕೆ ಒಳ್ಳೆಕೆಲಸವನ್ನು ಮಾಡಿದೆ ಎಂದು ಹೇಳಿ before reaching the final resting place ಇನ್ನು ಮಾತನಾಡುವುದು ಬಹಳಷ್ಟಿದೆ. ಆದರೆ ನೀವು ಮುಂದೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ ಎಂದು ಹೇಳಿರುವುದರಿಂದ ಬೆಂಗಳೂರು ನಗರದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸಿಬಿಡುತ್ತೇನೆ. ಬೆಂಗಳೂರು ಸಿಟಿ ಬಗ್ಗೆ ಪುಟ ಸಂಖ್ಯೆ 37ರ ಪ್ಯಾರಾ ನಂಬರ್ 107 ರಲ್ಲಿ ಹೇಳಲಾದಂತೆ ಒಳ್ಳೆಯ ಕೆಲಸವೇನು ಮಾಡುತ್ತಿದ್ದೇವೆಂದರೆ ನ್ಯಾಶನಲ್ ಹೈವೇ ನಂಬರ್ 4 ದಾಬಸ್ ಪೇಟೆಯಿಂದ ನ್ಯಾಶನಲ್ ಹೈವೇ ನಂಬರ್ 7ಕ್ಕೆ ರಿಂಗ್ ರೋಡ್ ಮಾಡಿ ಅದನ್ನು ಜೋಡಿ ಮಾಡುತ್ತಿದ್ದೇವೆ. ಇದು ಎಷ್ಟೋ ವರ್ಷಗಳಿಂದ ಆಗದೇ ನಿಂತುಹೋಗಿತ್ತು. ಇದಕ್ಕೆ ಕೇಂದ್ರ ಸರ್ಕಾರದಿಂದ 29 ಕೋಟಿ ರೂಪಾಯಿಗಳು ಬಂದಿದೆಯೆಂದು ಗೊತ್ತಾಗಿದೆ. I am grateful to our hon'ble Ex-Prime Minister Devegowda and the effort of Siddaramaiah and J.H. Patel for their efforts ಇದು ಬಂದರೆ ಒಳ್ಳೆಯದು. ಈಗ ಏನು ಬೆಂಗಳೂರು ನಗರದಲ್ಲಿ ಅಪಘಾತಗಳಿಂದ ವರ್ಷಕ್ಕೆ 800 ರಿಂದ 900 ಮರಣಗಳು ಹಾಗೂ ಸುಮಾರು 30 ರಿಂದ 40 ಸಾವಿರ ಜನರು ಏನು ತಮ್ಮ ಕೈಕಾಲುಗಳನ್ನು ಮುರಿದುಕೊಂಡು ಅಂಗವಿಕಲರಾಗುತ್ತಿದ್ದಾರೆ. ಅದು ತಪ್ಪುತ್ತದೆ. ಈ ರಿಂಗ್ ರೋಡ್ ಮಾಡುವುದು ಬಹಳ ಒಳ್ಳೆಯದು ಕೆಲಸವಾಗಿದೆ. ಇದನ್ನು ನಾವು ಮಾಡುತ್ತಿದ್ದೇವೆ. ಇದಕ್ಕಾಗಿ ಬಿ.ಡಿ.ಎ. ದವರು 14 ಕೋಟಿ 14 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇನ್ನೊಂದು ಬಹಳ ಮುಖ್ಯವಾದ ಕೆಲಸವೇನು ಮಾಡುತ್ತಿದ್ದೇವೆಂದರೆ we must be grateful to our Ex-Prime Minister Mr. Devegowda and our BDA Minister and our Deputy Chief Minister ಏಕೆಂದರೆ ಹಿಂದಿನ ಇತಿಹಾಸದಲ್ಲೇ ನೋಡಿದರೆ ನಾವು ಒಂದಿಂಚೂ ಜಾಗವನ್ನು ಡಿಫೆನ್ಸ್‌ನವರಿಂದ ತೆಗೆದುಕೊಂಡಿಲ್ಲ, ತೆಗೆದುಕೊಳ್ಳುವುದಕ್ಕೆ ಆಗುತ್ತಿರಲಿಲ್ಲ. ಇಂಥ ಸಂದರ್ಭದಲ್ಲಿ

ನಮ್ಮ ದೇವೇಗೌಡರು ಪ್ರಧಾನ ಮಂತ್ರಿಗಳಾದ ಮೇಲೆ 85 ಎಕರೆ ಭೂಮಿಗಳನ್ನು ಅಕ್ವೈರು ಮಾಡಿಕೊಳ್ಳಲಾಗಿದೆ. ಡಿಫೆನ್ಸ್‌ನವರು ನಮಗೆ 85 ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಪ್ರತಿಯಾಗಿ ನಾವು ಅವರಿಗೆ 214 ಕೋಟಿ ರೂಪಾಯಿಗಳು ಹಣ ಕೊಟ್ಟಿದ್ದಾರೆ. ಆ ಹಣಕ್ಕೆ ನಾವು ಅವರಿಗೆ ಕೋರಮಂಗಲದಲ್ಲಿ ಮನೆಗಳನ್ನು ಬಿಟ್ಟುಕೊಡಬೇಕು, ಆ ಮನೆಗಳನ್ನು ಸಂಪೂರ್ಣವಾಗಿ ಇನ್ನೂ ಬಿಟ್ಟು ಕೊಡಲಾಗಿಲ್ಲ, ಸಧ್ಯದಲ್ಲಿ ಶೇಕಡ 50ರಷ್ಟನ್ನು ಬಿಟ್ಟುಕೊಟ್ಟು ಇನ್ನು 50 ಪರ್ಸೆಂಟ್ ರಿಪೇರಿಯಾಗುತ್ತಿರುವುದರಿಂದ ಅದು ರಿಪೇರಿಯಾದ ಮೇಲೆ ಸಂಪೂರ್ಣವಾಗಿ ಮನೆಗಳನ್ನು ಬಿಟ್ಟುಕೊಡಲಾಗುವುದೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಫೈಲ್ ಪೆಂಡಿಂಗ್‌ನಲ್ಲಿದೆ. ದಯವಿಟ್ಟು ಅವರಿಗೆ ಆ ಮನೆಗಳನ್ನು ಬಿಟ್ಟುಕೊಟ್ಟರೆ ನಮಗೆ ಇನ್ನರ್ ರಿಂಗ್ ರೋಡ್‌ಗಾಗಿ ಏನು ಜಾಗ ಬೇಕಾಗಿದೆ ಆ ಜಾಗವನ್ನು ಅವರು ಬಿಟ್ಟುಕೊಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ನಮ್ಮ ವಿಧಾನಸಭಾ ಕ್ಷೇತ್ರವಾದ ಭಾರತಿ ನಗರದಲ್ಲಿದ್ದಂತೆ ಕೋಲಾರದ ಕಡೆ ಹೋಗುವಾಗ ನೀವೂ ನೋಡಿರಬಹುದು, ಅಲಸೂರು ಲೇಕ್‌ನಿಂದ ಮರ್ಫಿ ರೋಡ್‌ನಲ್ಲಿ ಆ ಪರ್ಟಿಕ್ಯುಲರ್ ಭಾಗದಲ್ಲಿ ಸುಮಾರು 11 ಎಕರೆ ಭೂಮಿಯನ್ನು ನಾವು ಅಕ್ವೈರು ಮಾಡಿಕೊಂಡಿದ್ದೇವೆ. ಆ ರೋಡ್ ಮೈನ್‌ಟೇನ್ ಆಗಬೇಕು. ಅದರ ಬಗ್ಗೆ ಇನ್ನೂ ದುಡ್ಡು ಕೊಟ್ಟಿಲ್ಲ. ದಯವಿಟ್ಟು ಆದಷ್ಟು ಬೇಗ ಸರ್ಕಾರ ಚಿಂತನೆ ಮಾಡಿ ಆ 11 ಎಕರೆ ಜಾಗವನ್ನು ಬಿಡಿಸಿಕೊಟ್ಟರೆ ಆ ಮೂಲಕ ರಸ್ತೆಯನ್ನು ಅಗಲ ಮಾಡಿದರೆ ಒಳ್ಳೆಯದು. ಏಕೆಂದರೆ ವರ್ಷಕ್ಕೆ ಸುಮಾರು 40 ರಿಂದ 50 ಅಪಘಾತಗಳು ಆಗುತ್ತದೆ. ಇದು ಅಲಸೂರು ಲೇಕ್‌ನಿಂದ ಹಳೇ ಮದ್ರಾಸ್ ರೋಡ್‌ಗೆ ಸೇರುವ ಒಂದು ಕಿ.ಮೀ ವ್ಯಾಪ್ತಿಯಲ್ಲಿ 40 ಅಡಿಗೆ 3,000 ಅಡಿ ಉದ್ದ ಮಾಡಬೇಕು. ಇದನ್ನು ಮಾಡಬೇಕಾದರೆ ಜಾಗ ಬೇಕು, ಆ ಜಾಗ ಬೇಕಾದರೆ ಅಲ್ಲಿಯವರೆಗೆ ಬೇರೆ ಕಡೆ ಮನೆಗಳನ್ನು ಸರ್ಕಾರ ಕೊಡಬೇಕು. ಇದನ್ನು ಬೇಗ ಮಾಡಬೇಕು. ಇನ್ನು ಈ ಹಿಂದೆ ಕೆಂಗಲ್ ಹನುಮಂತಯ್ಯನವರ ಕಾಲದಲ್ಲಿ ವಿಲಿಯಮ್ ಟೌನ್‌ನಲ್ಲಿ ಒಂದು ಜಾಗವನ್ನು ಅಕ್ವೈರು ಮಾಡಿಕೊಳ್ಳಲಾಗಿತ್ತು. first commander in chief of the Indian Army Mr. General Kariyappa ಅವರ ಕಾಲದಲ್ಲಿ ವಿಲಿಯಮ್ ಟೌನ್‌ನಲ್ಲಿ ಮಿಲಿಟರಿಯವರಿಂದ ಒಂದು ಜಾಗ ಅಕ್ವೈರು ಮಾಡಿಕೊಳ್ಳಲಾಗಿತ್ತು. ಒಟ್ಟು ಇವೆರಡು ಜಾಗವನ್ನು ಬಿಟ್ಟರೆ ಮತ್ತಾವ ಜಾಗವನ್ನು ಮಿಲಿಟರಿಯವರಿಂದ ಅಕ್ವೈರು ಮಾಡಿಕೊಂಡಿಲ್ಲ. ಈ ಕೆಲಸ ಬಹಳ ಕಷ್ಟಕರವಾದ ಕೆಲಸವಾಗಿದೆ. ಇಷ್ಟೆಲ್ಲಾ ಒಳ್ಳೆಯ ಕೆಲಸಗಳನ್ನು ನಮ್ಮ ಸರ್ಕಾರದವರು ಮಾಡಿದ್ದೇವೆ. ಕಡೆಯಲ್ಲಿ ದೇವೇಗೌಡರು ಬಿಟ್ಟು ಬರುವಾಗ ಕೂಡ ಒಂದು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. 1,600 ಕೋಟಿ ರೂಪಾಯಿಗಳು ನಮ್ಮ ಕರ್ನಾಟಕಕ್ಕೆ ಕೊಟ್ಟಿದ್ದಾರೆ ಡ್ಯಾಮ್‌ಗಳಿಗೆ ಕೊಟ್ಟಿದ್ದಾರೆ, ಸಕ್ಕರೆ ಕಾರ್ಖಾನೆಗಳನ್ನು ಕೊಟ್ಟಿದ್ದಾರೆ, ಕಾರ್ಖಾನೆಗಳಿಗೆ ಉದ್ಯೋಗಿಗಳನ್ನು ಕೊಟ್ಟಿದ್ದಾರೆ. ಒಟ್ಟಾರೆ ಇಂಥ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಅವರು ಏನು ಮಾಡಿದ್ದಾರೆ ಅದರಲ್ಲಿ ಅರ್ಧ ಭಾಗ ಮುಂದಿನ ಸರ್ಕಾರ ಮಾಡಿದರೂ ಸಾಕು, ನಮಗೆ ಸಂತೋಷವಾಗುತ್ತದೆ. ದೇವೇಗೌಡರು ಕೊನೆಯಲ್ಲಿ ಯಾರಿಗೂ ನೋವನ್ನು ಕೊಡಲಿಲ್ಲ, ಯಾರಿಗೂ ನೋವನ್ನು ಕೊಡಲಿಲ್ಲ ಅದರ ಬದಲು ಒಂದು ಒಳ್ಳೆಯ ಕೆಲಸವನ್ನು ಮಾಡಿದರು ಅದೇನೆಂದರೆ flesh without blood ಅಂದರೆ voluntary disclosure of income tax. ಆ ಕಾರ್ಯದಿಂದ ಇವೊತ್ತು 10,050 ಕೋಟಿ ರೂಪಾಯಿಗಳನ್ನು ರಿಸರ್ವ್ ಬ್ಯಾಂಕ್‌ನಲ್ಲಿ ಇಡಲಾಗಿದೆ. ಅದರಲ್ಲಿ ಬಿ.ಜೆ.ಪಿ. ಸರ್ಕಾರ ಹಣವನ್ನು ಧಾರಾಳವಾಗಿ ಖರ್ಚು ಮಾಡಬಹುದು. ಇದರಿಂದ ಕರ್ನಾಟಕಕ್ಕೆ ಬರತಕ್ಕಂಥ ಶೇರ್‌ನಲ್ಲಿ ಶೇಕಡ

ಅರ್ಧ ಭಾಗವನ್ನು ಬೆಂಗಳೂರು ನಗರಕ್ಕೆ ಖರ್ಚು ಮಾಡಿ ಗಾರ್ಡ್‌ನ್ ಸಿಟಿಯನ್ನಾಗಿಯೇ ಮುಂದುವರೆಸಿಕೊಂಡು ಹೋಗಬೇಕು. ಏಕೆಂದರೆ ಈಗಾಗಲೇ ಬೆಂಗಳೂರು ನಗರದಲ್ಲಿ ಜನಸಂಖ್ಯೆ ಜಾಸ್ತಿಯಾಗಿದ್ದಾರೆ, ಇದರಿಂದ ರಸ್ತೆಗಳ ಒತ್ತಡ ಕೂಡ ಜಾಸ್ತಿಯಾಗಿದೆ, ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ, ಪಾರ್ಕ್‌ಗಳೂ ಕೂಡ ಜಾಸ್ತಿಯಾಗಿ ಬಹಳ ತೊಂದರೆಯಾಗಿದೆ. ಆದಕಾರಣ ಕರ್ನಾಟಕಕ್ಕೆ ಏನು ಹಣ ಬರುತ್ತದೆ ಅದರಲ್ಲಿ ಅರ್ಧ ಭಾಗ ಹಣವನ್ನು ಬೆಂಗಳೂರು ನಗರಕ್ಕೆ ಖರ್ಚು ಮಾಡಿ ಬೆಂಗಳೂರನ್ನು ಗಾರ್ಡ್‌ನ್ ಸಿಟಿಯಾಗಿಯೇ ಇದನ್ನು ಉಳಿಸಬೇಕೆಂದು ಹಣಕಾಸು ಮಂತ್ರಿಗಳನ್ನು ಕೇಳಿಕೊಂಡು ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

★ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :-ಮಾನ್ಯ ಅಧ್ಯಕ್ಷರೆ, ಮಾನ್ಯ ಸಿದ್ಧರಾಮಯ್ಯನವರು ಆಯವ್ಯಯವನ್ನು 4ನೇ ಬಾರಿಗೆ ಮಂಡಿಸುತ್ತಿರತಕ್ಕಂಥದ್ದು, ಅವರು 5ನೇ ಬಾರಿಯೂ ಮಂಡಿಸುತ್ತಾರೆ, ಅದರಲ್ಲಿ ಏನೂ ಅನುಮಾನವಿಲ್ಲ; ಅದು ಸ್ಪಷ್ಟ. ಇತಿಹಾಸದಲ್ಲಿ ಇದೊಂದು ದಾಖಲೆ. ನಿಮ್ಮ ಬಗ್ಗೆ ನನಗೆ ಅಪಾರವಾದ ಗೌರವ ಮತ್ತು ವಿಶ್ವಾಸವಿದೆ. ಆದರೆ ನೀವು ಚಿಂತನೆಯನ್ನು ತೀವ್ರವಾಗಿ ಮಾಡುವುದಿಲ್ಲ. ನೀವು ನಡೆದು ಬಂದಂತಹ ದಿಕ್ಕಿನಲ್ಲಿ ಪ್ರಾಮಾಣಿಕವಾಗಿ ಚಿಂತನೆಯನ್ನು ಮಾಡಿದ್ದಾರೆ ಇನ್ನು ಉತ್ತಮವಾದಂತಹ ಆಯವ್ಯಯವನ್ನು ಮಂಡಿಸಬಹುದಾಗಿತ್ತೆಂದು ನನ್ನ ಅನಿಸಿಕೆ. ಇದು ಯಾವ ರೀತಿ ಇದೆ ಎಂದು ಹೇಳಿದರೆ ''ಹಬ್ಬಕ್ಕಿತಂದ ಹರಕೆಯ ಕುರಿ ತನ್ನ ಕೊಲ್ಲುವರೆಂಬ ಅರಿವಿಲ್ಲದೆ ತಳಿರುತೋರಣವನ್ನು ತಿನ್ನುತ್ತಿತ್ತು'' ಅಂದರೆ ಜನ ಕುರಿಯಾಗಿದ್ದಾರೆ ಪ್ರತಿ ವರ್ಷ ಅವರನ್ನು ಯಾವುದೇ ಚಿಂತನೆಯಿಲ್ಲದೆ ವಧೆ ಮಾಡತಕ್ಕಂತಹ ವ್ಯವಸ್ಥೆ ನಿಮ್ಮ ಆಯವ್ಯಯದಲ್ಲಿ ಇದೆ. ನಾನು ಸಾರಾಸಗಟಾಗಿ ಇವೆಲ್ಲವನ್ನು ತಳ್ಳಿಹಾಕುತ್ತೇನೆಂಬ ಭಾವನೆಯನ್ನು ತಾವು ಇಟ್ಟುಕೊಳ್ಳಬೇಕಾಗಿಲ್ಲ. ನೀವು ಯಾವುದರ ಮೇಲೆ ತೆರಿಗೆಯನ್ನು ಹಾಕಿದ್ದೀರಿ ಎನ್ನುವ ಬಗ್ಗೆ ನಂತರ ಹೇಳುತ್ತೇನೆ. ಅವೆಲ್ಲದರ ಮೇಲೆ ತೆರಿಗೆಯನ್ನು ಹಾಕುವುದರ ಬದಲು ಎರಡು ಇಲಾಖೆಗಳ ಬಗ್ಗೆ ತಾವು ತೀವ್ರವಾಗಿ ಗಮನವನ್ನು ಹರಿಸಿದ್ದರೆ, ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿದ್ದರೆ ಅನೇಕ ಬಾಬುಗಳಲ್ಲಿ ಮೇಲೆ ತೆರಿಗೆಯನ್ನು ತೆಗೆಯಬಹುದಾಗಿತ್ತು. ಅಬ್ಕಾರಿ ಬಾಬು ಬಗ್ಗೆ ನಾವೆಲ್ಲರೂ ಹೇಳುತ್ತೇವೆ, ಒಬ್ಬೊಬ್ಬರು ಒಂದೊಂದು ರೀತಿಯ ಅಂಕಿ ಅಂಶಗಳನ್ನು ಕೊಡಬಹುದು. ಆದರೆ ವಸ್ತು ಸ್ಥಿತಿ ಏನೆಂದರೆ ಅಲ್ಲಿ ನಷ್ಟ ಆಗತಕ್ಕಂಥದ್ದು ಮೋಸ ಆಗತಕ್ಕಂಥದ್ದು, ಸರ್ಕಾರದ ಖಜಾನೆಗೆ ನ್ಯಾಯವಾಗಿ ಬರಬೇಕಾದಂತಹ ಹಣ ಅನ್ಯಾಯವಾಗಿ ಬೇರೆ ಕಡೆಗೆ ಹೋಗತಕ್ಕಂಥದ್ದನ್ನು ತಪ್ಪಿಸುವುದರಲ್ಲಿ ಸರ್ಕಾರ ವಿಫಲವಾಗಿದೆ. ಮತ್ತೊಂದು ಗ್ರಾನೈಟ್ ಲೂಟಿ, ಇವೆರಡನ್ನು ನಿಮ್ಮ ನಿಯಂತ್ರಣಕ್ಕೆ ಪರಿಣಾಮಕಾರಿಯಾಗಿ ತಂದಿದ್ದರೆ ನೀವು ಜನಪರವಾಗಿ, ಸಾಮಾನ್ಯ ಜನರು ಒಪ್ಪುವ ರೀತಿಯಲ್ಲಿ ಆಯವ್ಯಯವನ್ನು ಮಂಡಿಸಬಹುದಾಗಿತ್ತು. ಒಂದು ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಗ್ರಾನೈಟ್ ವಿದೇಶಕ್ಕೆ ಹೋಗುತ್ತಿದೆ. ಬಹುಶ: ತಮಗೆ ಇದರಿಂದ ಬರತಕ್ಕಂತಹ ರಾಜಧನ ಅದರಲ್ಲಿ ಒಂದು ಭಾಗವೂ ಇಲ್ಲ. ಗ್ರಾನೈಟ್ ಲೂಟಿ ಒಂದು ಕಡೆ ಆದರೆ, ನಿಸರ್ಗ ನಾಶ ಮತ್ತೊಂದು ಕಡೆಯಾಗುತ್ತಿದೆ. ಆ ರೀತಿ ನಿಸರ್ಗ ನಾಶವಾದರೂ ಚಿಂತೆಯಿಲ್ಲ ಎನ್ನುವ ಸ್ಥಿತಿಯಲ್ಲಿ ನೀವು ಹೋಗುವುದಾದರೆ ಖಜಾನೆಗೆ ಹಣವಾದರೂ ಬರಬೇಕಲ್ಲ? ತಮಗೆ ಹೇಳುತ್ತಿದ್ದೇನೆ ಧಾರ್ಮಿಕ ಸ್ಥಳಗಳು ಇವತ್ತು ನಾಶವಾಗುತ್ತಿದೆ. ಅರಣ್ಯಪ್ರದೇಶ ನಾಶವಾಗಿದೆ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಸುಮಾರು 25 ಸಾವಿರ ಎಕರೆ ಪ್ರದೇಶಗಳಲ್ಲಿ ಗ್ರಾನೈಟನ್ನು ತೆಗೆಯುತ್ತಿದ್ದಾರೆ. ತಾವು ಇದನ್ನು

ನಿಯಂತ್ರಣ ಮಾಡಿದ್ದರೆ ಸರ್ಕಾರದ ಖಜಾನೆಗೆ ಸಾವಿರಾರು ಕೋಟಿ ರೂಪಾಯಿ ಹಣ ಬರುತ್ತಿತ್ತು. ಇದರ ಹಿಂದೆ ಯಾರ್ಯಾರು ಇದ್ದಾರೆ ಎಂಬುದು ಬೇರೆ ವಿಚಾರ. ಇದರಲ್ಲಿ ನಿಮ್ಮ ಬಗ್ಗೆ ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡುವುದಿಲ್ಲ. ನಿಮ್ಮ ವ್ಯಕ್ತಿಗತದ ಬಗ್ಗೆ ಮಾತನಾಡುವುದಿಲ್ಲ. ನಿಮ್ಮ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಅಬ್ಕಾರಿ ಮತ್ತು ಗ್ರಾನೈಟ್ ಈ ಎರಡು ಬಾಬುಗಳ ಬಗ್ಗೆ ತಾವು ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿದ್ದರೆ ರಾಜ್ಯದ ಜನತೆಗೆ ಹೊಸದಾಗಿ ತೆರಿಗೆಯಿಲ್ಲದೆ ಮತ್ತು ತೆರಿಗೆ ಕಡಿಮೆ ಮಾಡಿದಂತಹ ಆಯವ್ಯಯವನ್ನು ತಾವು ಕೊಡಬಹುದಾಗಿತ್ತು. ನಾನು ಅಬ್ಕಾರಿ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೆಂಗಳೂರು ನಗರ ಒಂದರಲ್ಲಿ ಬ್ರಾಂದಿ, ವಿಸ್ಕಿ, ರಮ್‌ನ 25 ಸಾವಿರ ಪೆಟ್ಟಿಗೆಗಳು ಹೋಗುತ್ತವೆ. ಒಂದು ಪೆಟ್ಟಿಗೆಗೆ ಅಬ್ಕಾರಿ ಶುಲ್ಕ 380. 25 ಸಾವಿರ ಪೆಟ್ಟಿಗೆಗಳಿಗೆ ಕನಿಷ್ಟ 97 ಲಕ್ಷದ 25 ಸಾವಿರ ಆದಾಯ ಬರುತ್ತಿದೆ. ವಾಣಿಜ್ಯ ತೆರಿಗೆ, ಸಗಟು ಮಾರಾಟ ಮಳಿಗೆಯವರು ಕೊಡತಕ್ಕಂತಹ ತೆರಿಗೆ ಎರಡನೇ ದರ್ಜೆ ತೆರಿಗೆ ಎಲ್ಲವನ್ನು ಲೆಕ್ಕ ಹಾಕಿದರೆ ಒಂದು ದಿನಕ್ಕೆ ಅಬ್ಕಾರಿ ಮತ್ತು ವಾಣಿಜ್ಯ ತೆರಿಗೆಯಿಂದ ಬೆಂಗಳೂರು ಒಂದರಲ್ಲಿ 2 ಕೋಟಿ 48 ಲಕ್ಷದ 25 ಸಾವಿರ ರೂಪಾಯಿ ಬರುತ್ತದೆ. ಅಂದರೆ ವರ್ಷಕ್ಕೆ ಕನಿಷ್ಟ 750 ಕೋಟಿ ರೂಪಾಯಿ ಬೆಂಗಳೂರು ಒಂದರಲ್ಲೇ ಬರುತ್ತದೆ. ಇಡೀ ಕರ್ನಾಟಕದಲ್ಲಿ ಕನಿಷ್ಟ 3 ಸಾವಿರ ಕೋಟಿ ಇದರಿಂದ ಅಂದಾಜು ಮಾಡಬಹುದು. ತಾವು ಈ ಬಗ್ಗೆ ಕೇಂದ್ರೀಕೃತ ಮಾಡಿ ಸ್ಪಷ್ಟವಾಗಿ ನಿರ್ಧಾರಕ್ಕೆ ಬಂದಿದ್ದರೆ ಈ ಆಯವ್ಯಯ ನಿಜವಾಗಿಯೂ ಒಂದು ಹೊಸ ಚಿಂತನೆಗೆ ಬರುತ್ತಾ ಇತ್ತು ಎಂದು ನನಗನಿಸುತ್ತದೆ. ಇಲ್ಲಿ ಎಷ್ಟು ಲೂಟಿಯಾಗುತ್ತದೆಂದು ಎಲ್ಲರಿಗೂ ಗೊತ್ತೇ ಇದೆ. ಆ ರೀತಿ ಗೊತ್ತಿದ್ದರೂ ಸಹ ಇದರ ಬಗ್ಗೆ ಕಣ್ಣುಮುಚ್ಚಿ ಕುಳಿತಿದ್ದೇವೆ. ಆದ್ದರಿಂದ ಈ ಬಗ್ಗೆ ತಾವು ಗಮನಹರಿಸಿ ಪ್ರಾಮಾಣಿಕವಾದ ಚಿಂತನೆಯನ್ನು ಮಾಡಿ. ತಾವು ಪಾನ ನಿರೋಧವನ್ನು ಜಾರಿಗೆ ತರುವುದಿಲ್ಲ, ಅಥವಾ ಖಜಾನೆಗೆ ಹಣನೂ ಬರುವಂತೆ ಮಾಡುವುದಿಲ್ಲ. ಇಲ್ಲ ಪಾನ ನಿರೋಧವನ್ನು ಜಾರಿಗೆ ತನ್ನಿ, ಇಲ್ಲ ಖಜಾನೆಗೆ ಹಣ ಬರಲಿ, ಎರಡರಲ್ಲಿ ಒಂದನ್ನಾದರೂ ಮಾಡಿ. ಸಾರಾಯಿ ಮಾರಾಟವನ್ನು ನಿಲ್ಲಿಸುತ್ತೇವೆಂದು ಹೇಳಿ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಆದಾದನಂತರ ನಿರಂತರವಾಗಿ ಉಪಸಮಿತಿಗಳು ತಮ್ಮ ಅಧ್ಯಕ್ಷತೆಯಲ್ಲಿ ಆಯಿತು. ಈ ಸಾರಾಯಿ ಧಂದೆ ಯಾವ ರೀತಿ ನಡೆಯುತ್ತಿದೆ ಎಂದರೆ ಈ ಸಾರಾಯಿಯನ್ನು ತುಂಬತಕ್ಕದ್ದು ಪ್ಲಾಸ್ಟಿಕ್ ಚೀಲಗಳಲ್ಲಿ. ಇದರಲ್ಲಿ ಸರ್ಕಾರಿ ಮುದ್ರೆ ಇರತಕ್ಕಂತಹ ಒಂದು ಚೀಲವಿದ್ದರೆ ಇನ್ನೊಂದು ಸರ್ಕಾರಿ ಮುದ್ರೆಯಿಲ್ಲದೆ ತಾವೇ ಮುದ್ರೆ ಮಾಡಿಕೊಂಡಿರುವಂಥದ್ದು, ತಾವೇ ಪ್ರಿಂಟಿಂಗ್ ಪ್ರೆಸ್‌ಗಳನ್ನು ಇಟ್ಟುಕೊಂಡು ಖೋಟಾ ಮುದ್ರಣ ಮಾಡಿರುವಂಥದ್ದು ಎಲ್ಲಾ ಕಡೆ ಸರ್ಕಾರದ ಕಣ್ಣು ತಪ್ಪಿಸಿ ಈ ರೀತಿಯ ಸಾರಾಯಿ ವ್ಯವಹಾರ ಧಾರಳವಾಗಿ ನಡೆಯುತ್ತಿದೆ. ಆ ರೀತಿ ಯಾರಿಗೆ ಬೇಕಾದರೂ ಅನುಮತಿಯನ್ನು ಕೊಟ್ಟಿದ್ದೀರಾ? ಆಡಳಿತ ವೆಚ್ಚದ ನಿಯಂತ್ರಣದ ಬಗ್ಗೆ ತಾವು ಹೇಳಿದ್ದೀರಿ. ಅದನ್ನು ನಾನು ಒಪ್ಪುತ್ತೇನೆ. ಸುಮಾರು 1.4.98 ರಿಂದ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿಮಾಡದೆ ಸ್ಥಗಿತಗೊಳಿಸಲು ಉದ್ದೇಶಿಸಿದ್ದೀರಿ, ಸ್ವಾಗತ. ಟೆಲಿಫೋನ್, ಪೆಟ್ರೋಲ್, ಡೀಸಲ್ ಪ್ರವಾಸಭತ್ಯೆ, ಮುಂತಾದವುಗಳ ಮೇಲೆ ವೆಚ್ಚಗಳನ್ನು ಕಡಿಮೆ ಮಾಡಲು ಕ್ರಮಗಳನ್ನು ಕೈಗೊಳ್ಳುತ್ತೇವೆಂದಿದ್ದೀರಿ ಅದನ್ನು ಸ್ವಾಗತಿಸುತ್ತೇನೆ. ಆದರೆ ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ರಾಜ್ಯದಲ್ಲಿ ಪ್ರಥಮ ದರ್ಜೆ ಅಧಿಕಾರಿಗಳು ಎಷ್ಟು ಜನ ಇರಬಹುದು? ಕರ್ನಾಟಕ ರಾಜ್ಯದಲ್ಲಿ ಐ ಎ ಎಸ್ ಅಧಿಕಾರಿಗಳು, 257, ಐಪಿಎಸ್ ಅಧಿಕಾರಿಗಳು 127, ಅನಂತರ ಪ್ರಧಾನ ಇಂಜಿನಿಯರ್‌ಗಳು,

ಮುಖ್ಯ ಇಂಜಿನಿಯರ್‌ಗಳು, ಅಧೀಕ್ಷಕ ಇಂಜಿನಿಯರ್‌ಗಳು 129 ಜನ ಇದ್ದಾರೆ. ಇವರ ಬಗ್ಗೆ ಲೆಕ್ಕ ಹಾಕಿದಾಗ, ಇಲ್ಲಿ ನಾನು ಯಾರ ಬಗ್ಗೆ ಕೂಡ ವೈಯಕ್ತಿಕವಾಗಿ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡುತ್ತಿಲ್ಲ. ಈ ರಾಜ್ಯದ ವ್ಯವಸ್ಥೆಗೆ ಇಷ್ಟೊಂದು ಜನ ಬಿಳಿ ಆನೆ ತರಹ, ಒಬ್ಬೊಬ್ಬ ಐ. ಎ. ಎಸ್. ಅಧಿಕಾರಿ ಯಾರನ್ನೂ ಕೂಡ ನಾನು ಆರೋಪಣೆ ಮಾಡುತ್ತಿಲ್ಲ. ಈ ಬಗ್ಗೆ ನಾವು ನೋಡಿದಾಗ ರಾಜಕಾರಣಿಗಳ ಪರಿಸ್ಥಿತಿ ಏನು? ಈ ರಾಜ್ಯದಲ್ಲಿ ಇರತಕ್ಕಂಥ ಅಧಿಕಾರ ವರ್ಗ. ಇದು 1ನೇ ದರ್ಜೆ ಅಧಿಕಾರ ವರ್ಗ ನಾನು ಹೇಳತಕ್ಕಂಥಾದ್ದು. 2ನೇ ದರ್ಜೆ ಮತ್ತು 3ನೇ ದರ್ಜೆ ಬಿಟ್ಟು ಬಿಡಿ. ಇವತ್ತು ಎಲ್ಲರೂ ಮಾತನಾಡತಕ್ಕಂಥಾದ್ದು ರಾಜಕಾರಣಿಗಳ ಮೇಲೆ ನ್ಯಾಯಾಂಗ ತನಿಖೆಯಾಗಬೇಕು. ಅವರ ಆಸ್ತಿ ಸಮಗ್ರ ತನಿಖೆಯಾಗಬೇಕೆಂದು. ಎಲ್ಲಾ ಕಡೆ ಹೇಳುತ್ತೇವೆ, ಪ್ರಾಮಾಣಿಕವಾದಂತಹ ಅಧಿಕಾರಿಗಳು ಇದ್ದಾರೆ. ನಮ್ಮಲ್ಲಿ ಒಳ್ಳೆಯ ದಕ್ಷ ಅಧಿಕಾರಿಗಳು ಇದ್ದಾರೆ. ನಾನು ಹೇಳುವುದೇನೆಂದರೆ ಅಧಿಕಾರಿಗಳ ಬಗ್ಗೆ ಒಂದು ತನಿಖೆ ಆಗಿಹೋಗಲಿ. ಸಾರ್ವಜನಿಕ ತನಿಖೆ, ಸಮಗ್ರವಾಗಿ ಯಾರ್ಯಾರು ಎಷ್ಟೆಷ್ಟು ಆಸ್ತಿ ಮಾಡಿದ್ದಾರೆ. ಎಲ್ಲೆಲ್ಲಿ ಮನೆ ಕಟ್ಟಿದ್ದಾರೆ? ಸ್ವಂತ ಮನೆಯನ್ನು ಕಟ್ಟಿಕೊಂಡು ಬಾಡಿಗೆ ಮನೆಯಲ್ಲಿ ಇರುವವರು ಎಷ್ಟು ಜನ? ಇದೆಲ್ಲಾ ಸಮಗ್ರವಾಗಿ ಚಿಂತನೆಗೆ ಬರಲಿ. ನಮ್ಮ ಬಗ್ಗೆ ಕೂಡ ತನಿಖೆ ಆಗಲಿ. ಮತ್ತು ಪ್ರಜಾಸತ್ತೆ ವ್ಯವಸ್ಥೆಯಲ್ಲಿ ಒಂದು ಕಡೆ ಗೋಪ್ಯವಾಗಿ ಯಾವುದೇ ಚಿಂತನೆ ಇಲ್ಲದೆ ಯಾರ ಗಮನಕ್ಕೂ ಇರುವಂತಹ ಒಂದು ವರ್ಗ. ಆದರೆ ರಾಜಕಾರಣಿಗಳು ಬೀದಿಗೆ ಬಂದಿದ್ದಾರೆ. ಅವರನ್ನು ಯಾರು ಬೇಕಾದರೂ ಎಲ್ಲಿ ಬೇಕಾದರೂ ಎಳೆಯಬಹುದು. ಅದಕ್ಕೆ ನಾನು ಹೇಳುತ್ತಿದ್ದೇನೆ, ಸಮಗ್ರವಾಗಿ ಐ. ಎ. ಎಸ್. ಮತ್ತು ಐ.ಪಿ. ಎಸ್ ಮೊದಲನೆ ದರ್ಜೆ ಅಧಿಕಾರ ವರ್ಗ ಅರಣ್ಯ ಮುಖ್ಯ ಅಧಿಕಾರ ವರ್ಗವನ್ನು ಸೇರಿಸಿ ಒಂದು ಹಂತದಲ್ಲಿ ತನಿಖೆಯಾಗಲಿ. ನಾನು ಎಲ್ಲರೂ ಭ್ರಷ್ಟರಿದ್ದಾರೆ ಎಂದು ಹೇಳುವುದಿಲ್ಲ. ನಮ್ಮಲ್ಲಿ ಅನೇಕರು ಬಹಳ ಉನ್ನತವಾದಂತಹ ಸ್ಥಾನದಲ್ಲಿ ಇದ್ದು ಉತ್ತಮ ಅಧಿಕಾರಿಗಳು ಇದ್ದಾರೆ. ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೋಟಿ ಕೋಟಿ ರೂಪಾಯಿ ಲೂಟಿ ಮಾಡಿ ಲೋಕಾಯುಕ್ತದಲ್ಲಿ ಇರುವವರು, ಬೇರೆ ಬೇರೆ ತನಿಖೆಯಲ್ಲಿ ಇರುವವರು ಇದ್ದಾರೆ. ಅವರೆಲ್ಲರನ್ನೂ ಇವತ್ತು ನೀವು ಒಂದು ಕಡೆಯಿಂದ ಸಮಗ್ರ ಚಿಂತನೆ ಮಾಡಿ ನಿಮಗೆ ಪ್ರಮಾಣಿಕವಾಗಿ ಶಕ್ತಿ ಇದ್ದರೆ ಮಾಡಿ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಅಧಿಕಾರಿಗಳ ಸಭೆ ಕರೆದಿರುವುದಕ್ಕೆ ನಾನು ಇದನ್ನು ಸ್ವಾಗತಿಸುತ್ತೇನೆ. ಒಬ್ಬ ಅಧಿಕಾರಿ ಹೇಳುತ್ತಾರಂತೆ ನಿಮ್ಮ ಮುಖ್ಯಮಂತ್ರಿಗಳ ಕಾರ್ಯಾಲಯಕ್ಕೆ ನೀವು ಎಷ್ಟು ದಿವಸ ಇರುತ್ತೀರಿ? ಎಂದು ಹೇಳುತ್ತಾರಂತೆ ಈ ಮಾತನ್ನು ನಾನು ಹೇಳುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಹಾಗೆ ಹೇಳಿದವರು ಯಾರು ಎಂದು ಹೇಳಬೇಕು. ಈ ಸದನದ ಮುಂದೆ ತಾವು ತಮ್ಮ ಉತ್ತರವನ್ನು ಕೊಡುವಾಗ ಹೇಳಬೇಕು. ಈ ಪ್ರಜಾಸತ್ತೆ ವ್ಯವಸ್ಥೆಯಲ್ಲಿ ನಾವು ಮೂರು ದಿವಸ ಇರಬಹುದು. ಒಂದು ನಿಮಿಷ ಇರಬಹುದು. ಈ ರೀತಿಯಾದ ಅತ್ಯಂತ ಸೊಕ್ಕಿನ ಅಧಿಕಾರಿಗಳ ಒಂದು ಗುಂಪು ಇದೆ. ಮೂರು ವರ್ಗ ಇದೆ. ಸರ್ಕಾರವನ್ನು ತೆಗೆಯಬೇಕೆಂದು ಇರುವ ವರ್ಗ. ಸರ್ಕಾರದ ಪರವಾಗಿ ಇರಬೇಕೆನ್ನುವ ಒಂದು ವರ್ಗ. ತಟಸ್ಥವಾಗಿರತಕ್ಕಂಥ ವರ್ಗ. ಈ ವರ್ಗದ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ. ತಾವು ಏನು ವೆಚ್ಚವನ್ನು ಕಡಿಮೆ ಮಾಡಬೇಕೆಂದು ಮಾಡಿದ್ದೀರಿ, ಆ ವೆಚ್ಚ ಕಡಿಮೆ ಮಾಡುವುದರ ಬಗ್ಗೆ ಎಷ್ಟು ಅಧಿಕಾರಿಗಳನ್ನು ಕಡಿಮೆ ಮಾಡಬೇಕು, ಯಾವ್ಯಾವ ಇಲಾಖೆಯನ್ನು ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ತಾವು ಪ್ರಾಮಾಣಿಕವಾಗಿ ಚಿಂತನೆ ಮಾಡಿ ಯಾರ ಮುಲಾಜಿಗೂ ಒಳಗಾಗದೆ ನೀವು ಇಂತಿಂತಹ ಇಲಾಖೆಯನ್ನು ಸಂಪೂರ್ಣವಾಗಿ

ಕಡಿಮೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಬೇಕು. ಮತ್ತು ಐ. ಎ. ಎಸ್. ಮತ್ತು ಐ.ಪಿ. ಎಸ್. ಉನ್ನತ ಮಟ್ಟದ ಅಧಿಕಾರಿಗಳ ಬಗ್ಗೆ ತನಿಖೆ ಮಾಡುವ ಬಗ್ಗೆ ತಾವು ಸ್ಪಷ್ಟ ಉತ್ತರವನ್ನು ಈ ಸದನದ ಮುಂದೆ ಇಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

ಅಧ್ಯಕ್ಷರು :- ಐ. ಎ. ಎಸ್. ಮತ್ತು ಐ.ಪಿ. ಎಸ್. ಖೋಟಾ ಫಿಕ್ಸ್ ಮಾಡುತ್ತಾರಲ್ಲ, ಹೇಗೆ ಮಾಡುವುದು? ಇಷ್ಟು ಜನ ಒಂದೊಂದು ರಾಜ್ಯಕ್ಕೆ ಇರಬೇಕೆಂದು ಇದೆಯಲ್ಲ. ಆಲ್ ಇಂಡಿಯಾ ಸರ್ವೀಸಸ್, ಅದು ಹೇಗೆ ಮಾಡುತ್ತಾರೆ? Who decides that?

ಶ್ರೀ ಎಂ. ಪಿ. ಪ್ರಕಾಶ್ :- ಇದನ್ನು ಗೌವರ್ನಮೆಂಟ್ ಆಫ್ ಇಂಡಿಯಾದವರು ನಿರ್ಣಯ ಮಾಡುತ್ತಾರೆ. ಅವರು ಖೋಟಾ ಫಿಕ್ಸ್ ಮಾಡಿ ಕೇಡರ್ ಯು. ಪಿ. ಎಸ್. ಯವರಿಗೆ ತಿಳಿಸುತ್ತಾರೆ.

ಅಧ್ಯಕ್ಷರು :- ಇದನ್ನು ಜನಸಂಖ್ಯೆ ಆಧಾರದ ಮೇಲೆ ಮಾಡುತ್ತಾರೆಯೇ? What is the basis for it?

ಶ್ರೀ ಎಂ.ಪಿ. ಪ್ರಕಾಶ್ :- ನನಗೆ ಇದರ ಬಗ್ಗೆ ಅಷ್ಟು ವಿವರಗಳು ತಿಳಿದಿಲ್ಲ.

ಅಧ್ಯಕ್ಷರು :- ಇದು ಆಲ್ ಇಂಡಿಯಾ ಸರ್ವೀಸಸ್ ಅಲೋಕೇಷನ್ ಹೇಗೆ ಆಗುತ್ತದೆ? is the State Government consulted before it is done.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಅವರನ್ನು ರಾಜ್ಯಗಳಿಗೆ ಹಾಕಬೇಕೆಂದರೆ ಮ್ಯಾಂಡೇಟರಿ ಇದೆಯೇ?

ಅಧ್ಯಕ್ಷರು :- ಹೌದು, ನನಗೂ ನಿಮ್ಮ ಹಾಗೆ ಆಸಕ್ತಿ ಇದೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :- ಏಕೆಂದರೆ ಆ ಪುಣ್ಯಾತ್ಮರು ಇಲ್ಲದಿದ್ದರೆ ಈ ರಾಜ್ಯದಲ್ಲಿ ಏನೂ ನಡೆಯುವುದಿಲ್ಲವೆ ಎಂದು.

ಶ್ರೀ ಸಿದ್ಧರಾಮಯ್ಯ :- ಸ್ಟೇಟ್‌ಗೆ ಕೇಂದ್ರ ಸರ್ಕಾರದವರು ಖೋಟಾ ಫಿಕ್ಸ್ ಮಾಡುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಅಲ್ಲಿಯ ಐ. ಎ. ಎಸ್. ಅಧಿಕಾರಿಗಳು ಮತ್ತು ಕೇಡರ್ ಸ್ಟೆಂಗ್ತ್ ಇದೆಲ್ಲವನ್ನು ತರಿಸಿಕೊಂಡು ಇರುತ್ತಾರೆ. ಅದರ ಮೇಲೆ ಅವರು ನಿರ್ಣಯ ಮಾಡುತ್ತಾರೆ.

Mr. Speaker :- Whether the Central Government is taken into confidence? Are they consulted before the quota is fixed.

Sri. M.P. Prakash:- Yes.

ಶ್ರೀ ಹೆಚ್. ಎನ್. ನಂಜೇಗೌಡ :- 1967ರಲ್ಲಿ ಎಷ್ಟು ಜನ ಇದ್ದರು, ಈಗ ಅದರ ನಾಲ್ಕು ಪಟ್ಟು ಆಗಿದೆ. ಅಲ್ಲಿ ಕೇಂದ್ರ ಸರ್ಕಾರ ಎಂದರೆ ಖೋಟಾ ಫಿಕ್ಸ್ ಮಾಡುವವರು ಐ. ಎ. ಎಸ್. ಅಧಿಕಾರಿಗಳು, ಅದನ್ನು ತಿಳಿದುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ :- ಸಂಖ್ಯೆ ಕಡಿಮೆಯಾಗಲಿಲ್ಲವೆಂದರೆ ಆಡಳಿತದ ಮೇಲೆ ಹೊರೆ ಬೀಳುತ್ತದೆ, ಭಾರವಾಗುತ್ತದೆ. ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಸೌಜನ್ಯವಾಗಿ,

ಪ್ರೀತಿಯಿಂದ ಆಡಳಿತ ನಡೆಸಿ ಬಂದವರಿಗೆ ಉತ್ತರ ಕೊಟ್ಟು ಆಡಳಿತ ಕೊಡತಕ್ಕಂಥವರು ಇದ್ದಾರೆ. ಮಂತ್ರಿಗಳ ಮುಖಕ್ಕೆ ಸಿಗರೇಟು ಸೇದಿ ಹೊಗೆ ಬಿಡತಕ್ಕಂಥ ಅಧಿಕಾರಿಗಳೂ ಇದ್ದಾರೆ. ಅದರ ಬಗ್ಗೆ ತಕರಾರು ಇಲ್ಲ. ಮಂತ್ರಿಗಳು ಎದ್ದು ನಿಂತಾಗ ಅಧಿಕಾರಿಗಳು ಕೆಳಗೆ ಕುಳಿತುಕೊಳ್ಳುವವರು ಇದ್ದಾರೆ. ಅದರಲ್ಲಿ ಎರಡನೇ ಅಭಿಪ್ರಾಯವಿಲ್ಲ. ಅದು ಅವರವರ ದರ್ಜೆ, ಅವರವರ ವರ್ಗಕ್ಕೆ ಹೋಗುತ್ತದೆ. ಬಹಳ ಸೌಜನ್ಯ ಪ್ರೀತಿಯಿಂದ ಕಂಡಿರತಕ್ಕಂಥ ಅಧಿಕಾರಿಗಳು ಉಂಟು. ಎಷ್ಟೋ ಜನ ಅಧಿಕಾರಿಗಳು ಶಾಸಕರು ಹೋದಾಗ ಅವರಿಗೆ ಕೈ ಮುಗಿದರೆ ಇವರಿಗೆ ಕೈ ಮುಗಿಯದೆ ಇರತಕ್ಕಂಥ ಅಧಿಕಾರಿಗಳು ಉಂಟು. ಆದುದರಿಂದ ಇಂತಹ ಅನೇಕ ವರ್ಗದ ಅಧಿಕಾರಿಗಳು ಇದ್ದಾರೆ. ಈ ಪರಿಸ್ಥಿತಿಯಲ್ಲಿ ಪ್ರಜಾಸತ್ತೆ ವ್ಯವಸ್ಥೆಯಲ್ಲಿ ಅಧಿಕಾರಿಗಳ ವರ್ತನೆ ಮತ್ತು ಪ್ರಜಾಪ್ರಭುತ್ವದ ಚಿಂತನೆ ಇವೆರಡು ಬೇರೆ ದಿಕ್ಕಾದ್ದರಿಂದ ಈ ಬಗ್ಗೆ ಪ್ರಾಮಾಣಿಕವಾದ ಚಿಂತನೆ ಮಾಡಬೇಕಾದ್ದು ಕರ್ತವ್ಯ. ಅದು ಸರ್ಕಾರಕ್ಕೆ ಸೇರತಕ್ಕಂಥಾದ್ದು. ನಾವು ಅನೇಕ ಸಲ ಹೇಳಿದ್ದೇವೆ. ಶಾಸಕರುಗಳಿಗೆ ಸವಲತ್ತು ಎಂದರೆ ಏನು? ಹಣಕಾಸು ಸವಲತ್ತು ಅಲ್ಲ. ಅಧಿಕಾರಿಗಳನ್ನು ಕಾಣುವುದಕ್ಕೆ ಹೋದಾಗ ಅಧಿಕಾರಿಗಳು ಯಾವ್ಯಾವ ರೀತಿ ವರ್ತನೆ ತೋರುತ್ತಾರೆ ಅದರ ಬಗ್ಗೆ ಮತ್ತೊಮ್ಮೆ ನೀವು ಒಂದು ಸುತ್ತೋಲೆಯನ್ನು ಕಳುಹಿಸಬೇಕಾದಂತಹ ಅವಶ್ಯಕತೆ ಇದೆ. ಅನೇಕ ಹಿರಿಯ ಅಧಿಕಾರಿಗಳು ಪ್ರಾಮಾಣಿಕವಾಗಿ ನಡೆದುಕೊಂಡಿರತಕ್ಕಂಥಾದ್ದು ಉಂಟು. ಆ ದೃಷ್ಟಿಯಿಂದ ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ, ಯಾವ್ಯಾವುದನ್ನು ತಾವು ಕಡಿಮೆ ಮಾಡಬೇಕು ಎನ್ನುವುದರ ಬಗ್ಗೆ ಹೇಳುವುದಾದರೆ ವಿಭಾಗಾಧಿಕಾರಿಗಳು ಬೇಕಾಗಿಲ್ಲ. ಜಿಲ್ಲಾಧಿಕಾರಿಗಳು ಇದ್ದಾಗ ಅದಕ್ಕೆ ಒಂದು ವ್ಯವಸ್ಥೆ ಬೇಕಾಗಿಲ್ಲ. ಈಗ ನಮ್ಮಲ್ಲಿ ತಾಲ್ಲೂಕು ಪಂಚಾಯಿತಿ ವ್ಯವಸ್ಥೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಇರುತ್ತಾರೆ. ಮತ್ತು ಕ್ಷೇತ್ರಾಧಿಕಾರಿ ಇರುತ್ತಾರೆ. ಎರಡೂ ಬೇಕಾಗಿಲ್ಲ, ಒಂದೇ ಹುದ್ದೆ ಸಾಕು. ಮತ್ತು ವಿದ್ಯಾ ಇಲಾಖೆಯಲ್ಲಿ, ಈ ರೀತಿಯಾಗಿ ಕೆಲವನ್ನು ತಾವು ಪಟ್ಟಿ ಮಾಡಿ ಪ್ರಾಮಾಣಿಕವಾಗಿ ಇದನ್ನು ಕಡಿಮೆ ಮಾಡಿದರೆ ಈ ಸರ್ಕಾರದ ಬೊಕ್ಕಸಕ್ಕೆ ಅನುಕೂಲವಾಗುತ್ತದೆ. ಮತ್ತು ಆಯವ್ಯಯಕ್ಕೂ ಬೆಲೆ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಅತ್ಯಂತ ಪ್ರಾಮಾಣಿಕವಾಗಿ ಹೇಳುತ್ತೇನೆ. ಮತ್ತು ವರ್ಗಾವರ್ಗಿ ಬಗ್ಗೆ ಕೂಡ ನೀವು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು. ಏನಾಗುತ್ತದೆಂದರೆ ವಿಧಾನಸೌಧದ ಮೂರನೇ ಮಹಡಿ, 2ನೇ ಮತ್ತು 1ನೇ ಮಹಡಿಗೆ, ಶಾಸಕರ ಭವನಕ್ಕೆ ಶಾಸಕರ ಹತ್ತಿರ ಹೋಗತಕ್ಕಂಥಾದ್ದು, ಅವರನ್ನು ಕೇಳತಕ್ಕಂಥಾದ್ದು, ನಾವು ವಿಧಿ ಇಲ್ಲದೆ ಮಾಡುತ್ತೇವೆ. ಇದೆಲ್ಲಾ ಒಂದು ರೀತಿಯಲ್ಲಿ ಅತ್ಯಂತ ಅಪಾಯಕಾರಿ ಬೆಳವಣಿಗೆ. ಈ ಬಗ್ಗೆ ಸ್ಪಷ್ಟ ಚಿಂತನೆಯನ್ನು ಮಾಡಬೇಕು. ಮತ್ತು ತಮ್ಮ ಮುಂದೆ ಇವತ್ತು ಹೇಳುವುದೇನೆಂದರೆ 4,493 ಪ್ರಾಥಮಿಕ ಶಾಲೆಗಳನ್ನು ಏನು ಪ್ರಾರಂಭ ಮಾಡಿದ್ದೀರಿ ಎಂದು ಹೇಳುತ್ತಿದ್ದೀರಿ, ಅದನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಉಪಾಧ್ಯಾಯರು ಇಲ್ಲ. ಶಾಸಕರಿಗೆ ಕೆಲವು ಶಾಲೆಗಳನ್ನು ಕೊಟ್ಟಿದ್ದೀರಿ. ಇವರು ಆರ್ಡರ್ ಕಳುಹಿಸುವಾಗ ಹೊಸ ಶಾಲೆಗಳಿಗೆ ಇರತಕ್ಕಂಥ ಉಪಾಧ್ಯಾಯರನ್ನು ಬಳಸಿಕೊಂಡು ಪ್ರಾರಂಭ ಮಾಡಿ ಎಂದು ಹೇಳಿದರೆ ಏನಹ ಹೊಸ ಶಾಲೆಗೆ ಉಪಾಧ್ಯಾಯರನ್ನು ಎಲ್ಲಿಂದ ತರಬೇಕು?

ಶ್ರೀ ಸಿದ್ಧರಾಮಯ್ಯ :- 30 ಸಾವಿರ ಉಪಾಧ್ಯಾಯರುಗಳ ರಿಕ್ರೂಟ್‌ಮೆಂಟ್ ನಡೆಯುತ್ತಿದೆ. ಮಾರ್ಚ್ ಏಪ್ರಿಲ್ ಒಳಗೆ ಮುಗಿಯುತ್ತದೆ. ಎಲ್ಲೆಲ್ಲಿ ಹೊಸ ಶಾಲೆಗಳು ಆಗಿದೆ ಅಲ್ಲಿ ಅಪಾಯಿಂಟ್ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ:- ನಾನು ಹೇಳಿದ್ದು, 50ನೇ ವರ್ಷದ ಸ್ವಾತಂತ್ರ್ಯ ಸಂದರ್ಭದಲ್ಲಿ ಶಾಸಕರು ಹೇಳಿದಂತೆ ಶಾಲೆ ಪ್ರಾರಂಭ ಮಾಡಿ ಎಂದು ಹೇಳಿದರಲ್ಲ, ಹೇಳಿದ ಮೇಲೆ ಅದಕ್ಕೆ ಬೇಕಾದಂತಹ ಉಪಾಧ್ಯಾಯರುಗಳನ್ನು ಕಳುಹಿಸದೆ ಹೋದರೆ ಶಾಲೆ ಪ್ರಾರಂಭವಾಗುವುದು ಹೇಗೆ?

Sri Siddaramaiah:- Recruitment process is going on.

ಅಧ್ಯಕ್ಷರು:- ಕಳುಹಿಸುತ್ತಿದ್ದಾರೆ ಈಗ. ಅದೆಲ್ಲಾ ತಯಾರು ಮಾಡುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ:- ಅದಕ್ಕೆ ಹೇಳಿದ್ದುದು, ರಿಕ್ರೂಟ್‌ಮೆಂಟ್ ನಡೆಯುತ್ತಿದೆ, ಬರುತ್ತಿದೆ, ಐರಾವತ ಇಳಿಯುತ್ತಿದೆ.

ಶ್ರೀ ಅಶೋಕ ಕಾಟ್ವೆ:- ಹುಬ್ಬಳ್ಳಿ- ಧಾರವಾಡದಲ್ಲಿ ಮೂರು ಜನ ಶಾಸಕರು ಇದ್ದಾರೆ. ಅಲ್ಲಿಗೆ ಎಷ್ಟು ಶಾಲೆಗಳನ್ನು ಕೊಟ್ಟಿದ್ದಾರೆ ಎಂಬುದನ್ನು ಶಿಕ್ಷಣ ಸಚಿವರು ಹೇಳಬೇಕು.

ಅಧ್ಯಕ್ಷರು:- ಅಲ್ಲಿ ಅಭಿವೃದ್ಧಿಯಾಗಿರುವ ಜಾಗ ಅದು. ಅಲ್ಲಿ ಏನು ಶಾಲೆಯಾಗುತ್ತದೆ? ಹಳ್ಳಿಗಾಡಿನಲ್ಲಿ ಕೊಡುತ್ತಾರೆ. ಸಿಟಿಯಲ್ಲಿ ಕೊಡುತ್ತಾರೆಯೇ?

ಶ್ರೀ ಅಶೋಕ ಕಾಟ್ವೆ:- ಹುಬ್ಬಳ್ಳಿಯ ಶಹರದಲ್ಲಿ 10-10 ಕಿಲೋಮೀಟರ್ ದೂರದ ಶಾಲೆಗಳಿಗೆ ಹೋಗವಂತಹ ಬಡಾವಣೆಗಳೂ ಇವೆ.

ಅಧ್ಯಕ್ಷರು:- ಬೆಂಗಳೂರು, ಹುಬ್ಬಳ್ಳಿ ಬೆಳಗಾಂನಲ್ಲಿ ಏನಾಗುತ್ತದೆ? ಹಳ್ಳಿಗಳಲ್ಲಿ ಕೊಡುವುದು.

ಶ್ರೀ ವಾಟಾಳ್ ನಾಗರಾಜ್ :- 4,493 ಪ್ರಾಥಮಿಕ ಶಾಲೆಗಳನ್ನು ಆರಂಭಿಸಿದ್ದಾರೆ ಸ್ವಾಗತ. ಅದರ ಈ ಶಾಲೆಗಳ ವ್ಯವಸ್ಥೆ ಮತ್ತು ಪರಿಸ್ಥಿತಿ ಬಹಳ ಉತ್ತಮ ಮಟ್ಟದಲ್ಲಿದ್ದರೆ ಖಾಸಗಿ ಶಾಲೆಗಳಿಗೆ ಯಾರೂ ಹೋಗುವುದಕ್ಕೆ ಸಾಧ್ಯವಿಲ್ಲ. ಅನೇಕ ಶಾಲೆಗಳು ದನದ ದೊಡ್ಡಿಗಿಂತ ಕಡಿಮೆ ಇವೆ. ಹೀಗಿರುವುದರಿಂದ ಖಾಸಗಿ ಶಾಲೆಗಳಿಗೆ ಹೋಗತಕ್ಕಂಥದ್ದು. ಖಾಸಗಿ ಶಾಲೆಗೆ ಹೋದರೆ ಏನು ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾನಿಲಯದವರೆಗೆ ಕ್ಯಾಪಿಟೇಷನ್ ಶುಲ್ಕ ಒಂದು ರೀತಿ ಪಿಡುಗು. ಈ ರೋಗ ನಿರಂತರವಾಗಿ ನಡೆಯುತ್ತಿದೆ. ಈ ರೋಗವನ್ನು ನಿಲ್ಲಿಸತಕ್ಕಂತಹ ಒಂದು ಚಿಂತನೆ ತಮ್ಮಲ್ಲಿ ಆಗಿದೆಯೇ?

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷರ ಪೀಠದಲ್ಲಿ ಆಸೀನರಾದರು)

ಖಾಸಗಿ ಪ್ರಾಥಮಿಕ ಶಾಲೆಗಳಿಗೆ ತಮ್ಮ ಮಕ್ಕಳನ್ನು ಸೇರಿಸಬೇಕಾದರೆ ಮೊದಲು ಹಣ ಇಟ್ಟುಕೊಂಡು ಒಳಗಡೆ ಹೋಗತಕ್ಕಂತಹ ವ್ಯವಸ್ಥೆ ಇದೆ. ಆ ಬಗ್ಗೆ ನೀವು ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗಿಂತ ಉತ್ತಮಪಡಿಸತಕ್ಕಂತಹ ವ್ಯವಸ್ಥೆಯನ್ನು ತಾವು ಮಾಡಿದ್ದರೆ ಅದಕ್ಕೆ ಬೇಕಾದ ಹಣಕಾಸನ್ನು ಒದಗಿಸಿದ್ದರೆ ಅದು ನಿಜವಾಗಿ ಅನುಕೂಲವಾಗುತ್ತದೆ ಎಂದು ನನ್ನ ಪ್ರಾಮಾಣಿಕವಾದ ಚಿಂತನೆ. ಒಂದು ಕಡೆ ಕ್ಯಾಪಿಟೇಷನ್ ಶುಲ್ಕ ಇದು ಒಂದು ರೀತಿ ಇವತ್ತು ಲಾಬಿಯಾಗಿದೆ. ಕ್ಯಾಪಿಟೇಷನ್ ಶುಲ್ಕ, ವೈದ್ಯಕೀಯ ಕಾಲೇಜು ಮತ್ತು ತಾಂತ್ರಿಕ ಕಾಲೇಜು ನಡೆಸತಕ್ಕಂಥವರು ಒಂದು ರೀತಿ ಸ್ವಾತಂತ್ರ್ಯಕ್ಕೆ ಹಿಂದೆ ನಮ್ಮಲ್ಲಿ ಸಂಸ್ಥಾನಗಳಿದ್ದವು, ಅವರದೇ ಆದ ರಾಜ್ಯ ಮತ್ತು ರಾಜರು ಅದೇ ತರಹ ಈ ವ್ಯವಸ್ಥೆ ಇದೆ. ಈ ವೈದ್ಯಕೀಯ ಕಾಲೇಜು ನಡೆಸತಕ್ಕಂಥ ಈ ಜನ ಒಂದು ರೀತಿ ಪಾಳೆಗಾರರಾಗಿದ್ದಾರೆ. ಕನಿಷ್ಟ 20 ಲಕ್ಷದಿಂದ 75

ಲಕ್ಷದವರೆಗೆ ಇದಕ್ಕೆ ಏನು ಯಾವ ತೆರಿಗೆ ಇಲ್ಲ, ಯಾವ ವ್ಯವಸ್ಥೆನೂ ಇಲ್ಲ, ಇದು ಒಂದು ರೀತಿ ಕಪ್ಪು ಹಣ. ಇದನ್ನು ಬಹಳ ಧಾರಾಳವಾಗಿ ಅವರು ಎಲ್ಲಾ ಸರ್ಕಾರಗಳೂ ಬಂದರೂ ಸರ್ಕಾರವನ್ನು ಲಗಾಮಿನಲ್ಲಿ ಹಿಡಿತದಲ್ಲಿಟ್ಟು ಕೊಳ್ಳತಕ್ಕಂತಹ ಈ ಸಂಸ್ಥೆಗಳು.

ಶ್ರೀ ಹೆಚ್. ಎನ್. ನಂಜೇಗೌಡ:- ಈಗಿರುವ ಪರಿಸ್ಥಿತಿಯಲ್ಲಿ ಪ್ರೈವೇಟ್ ಮೆಡಿಕಲ್ ಕಾಲೇಜಿನಲ್ಲಿ 100ಕ್ಕೆ ಐದು ಸೀಟ್ ಸಿಗುತ್ತವೆ. ಕೆಲವು ಕಾಲೇಜುಗಳು ಇದೇ ರೀತಿ ಆದರೆ ಐದಾರು ವರ್ಷದಲ್ಲಿ ಕೆಲವು ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ. ಅವರಿಗೆ ಸಂಬಳ ಕೊಡುವುದಕ್ಕೆ ದುಡ್ಡು ಇರುವುದಿಲ್ಲ. ಆಸ್ಪತ್ರೆ ಮೈಂಟೆನೆನ್ಸ್ ಎಷ್ಟು, ಒಕ್ಕಲಿಗರ ಸಂಘದ್ದೇ ನಾನು ನೋಡುತ್ತಿದ್ದೇನೆ, ದೂರದಿಂದ ನೋಡಿದರೂ ನನಗೆ ಅರ್ಥವಾಗುತ್ತಿದೆ. ಇವತ್ತು ಹಾಲಿ ಅಕೌಂಟ್ ನೋಡಿದರೆ ಈ ಮೂರು ತಿಂಗಳು ಸಂಬಳ ಕೊಡುವುದಕ್ಕೆ ಅವರ ಹತ್ತಿರ ದುಡ್ಡು ಇಲ್ಲ. ಈ ಪರಿಸ್ಥಿತಿಯಲ್ಲಿ ಯಾವುದೋ ಕೋರ್ಟ್ ಆರ್ಡರ್ ಆಗಿ, ಯಾವುದೋ ಕಾನೂನು ಮಾಡಿ ಐದು ಪರ್ಸೆಂಟ್‌ಗೆ ಇಳಿಸಿದ್ದಾರೆ. ಐದು ಸೀಟ್‌ನಲ್ಲಿ ಅವರು 50 ಸೀಟ್‌ಗಳಲ್ಲಿ ಮಾಡುವಷ್ಟು ಹಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಇದು ದರೋಡೆ ಅದರಲ್ಲಿ ಏನೂ ಅನುಮಾನ ಇಲ್ಲ, ಇದು ಗೌರವಸ್ತರು ಮಾಡತಕ್ಕಂತಹ ದರೋಡೆ. ದರೋಡೆಕೋರರು ಮಾಡುವುದು ಅಲ್ಲ. ಇದು ಒಂದು, ಹಗಲು ದರೋಡೆ, ಅದರಲ್ಲಿ ಏನೂ ಅನುಮಾನ ಇಲ್ಲ. ಇದರ ಬಗ್ಗೆ ನಾವು ಏನು ಅವರ ಬಗ್ಗೆ ಕರುಣೆ ತೋರಿಸಬೇಕಾಗಿಲ್ಲ, ಮತ್ತು ಚಿಂತನೆ ಮಾಡಬೇಕಾಗಿಲ್ಲ. ಅಷ್ಟು ಕಷ್ಟ ಇರುವವರು ಎಲ್ಲಾ ಮುಚ್ಚಿ ಗೋಡೋನ್ ಮಾಡಿ ಹೋಗಲಿ. ಯಾರು ಬೇಡವೆಂದು ಹೇಳುತ್ತಾರೆ ವೈದ್ಯಕೀಯ ಕಾಲೇಜ್ ನಮಗೋಸ್ಕರ ಇದೆಯಾ? ಹೊರಗಡೆಯಿಂದ ಬರುವವರೆಗೆ ತಯಾರಿ ಮಾಡುವುದಕ್ಕೆ ಇರುವುದೇ? ಕರ್ನಾಟಕದವರು ಐದು ಜನ ಇರುವುದಿಲ್ಲ, 99 ಜನ ಹೊರಗಡೆಯಿಂದ ಬರತಕ್ಕಂತಹವರು ಇರುತ್ತಾರೆ. ನಮ್ಮ ವೈದ್ಯಕೀಯ ಕಾಲೇಜು ನಡೆಸುವ ಮಹಾ ಮಹನೀಯರುಗಳು ಅವರು ಸ್ವಲ್ಪ ಹೋಗಿ ನೋಡಬೇಕು. ಯಾರ್ಯಾರಿಗೆ ಕೊಟ್ಟಿದ್ದಾರೆ, ಯಾವ ಯಾವ ದೇಶದವರಿಗೆ ಕೊಟ್ಟಿದ್ದಾರೆ, ಎಂದು ಗೊತ್ತಾಗುತ್ತದೆ. ಅವರೇ ಸರ್ಕಾರವನ್ನು ಹಿಡಿತದಲ್ಲಿ ಇಟ್ಟುಕೊಳ್ಳತಕ್ಕಂಥವರು, ಅವರಿಗೆ ಅವರ ಕೈಯಲ್ಲಿ ಒಂದು ದೊಡ್ಡ ಲಾಬಿ, ಅಬಕಾರಿ ಲಾಬಿ ಹೇಗಿತ್ತು, ಗ್ರಾನೈಟ್ ಲಾಬಿ ಹೇಗೆ ಸೇರಿದೆ. ಈಗ ಕ್ಯಾಪಿಟೇಷನ್ ಲಾಬಿ ಸೇರಿದೆ. ನಮ್ಮ ಬಡ ಮಕ್ಕಳಿಗೆ ಯಾರಿಗೂ ಇಲ್ಲ. ನಮ್ಮ ಊರಿನವರಿಗೆ, ನಮ್ಮ ಕನ್ನಡಿಗರಿಗೆ ಯಾರಿಗೂ ಇಲ್ಲ. ಯಾರೋ ಬೇರೆ ರಾಜ್ಯದವರಿಗೆ ಅವರ ಪಾದ ಪೂಜೆ ಮಾಡಿ ಕರೆಯುತ್ತಾರೆ. ಕ್ಯಾಪಿಟೇಷನ್ ತೆಗೆದುಕೊಳ್ಳಬೇಕೆಂದರೆ ಅಷ್ಟು ಸುಲಭವೇನಲ್ಲ. ಇದರ ಬಗ್ಗೆ ಯಾರೂ ಇವರನ್ನು ಕ್ಷಮಿಸುವುದಕ್ಕೆ ಸಾಧ್ಯವಿಲ್ಲ. ಬಹುಶ: ಇವೆಲ್ಲಾ ರಾಷ್ಟ್ರೀಕರಣ ಮಾಡಬೇಕೆಂದು ನನಗನ್ನಿಸುತ್ತದೆ. ವೈದ್ಯಕೀಯ ಕಾಲೇಜುಗಳು ಎಂತಹವರದ್ದೇ ಇರಲಿ, ಎಷ್ಟೇ ದೊಡ್ಡವರೆ ಇರಲಿ, ಅವರು ಎಷ್ಟೇ ದೊಡ್ಡ, ಮಹತ್ತರ ವ್ಯಕ್ತಿಗಳಾಗಿದ್ದರೂ, ಇಡೀ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳನ್ನು ನೇರವಾಗಿ ರಾಷ್ಟ್ರೀಕರಣ ಮಾಡತಕ್ಕಂಥದ್ದು ನನ್ನ ಒತ್ತಾಯ. ಏಕೆ ಒತ್ತಾಯ ಮಾಡುತ್ತೇನೆಂದರೆ, ಪ್ರತಿ ಎಲೆಕ್ಷನ್‌ನಲ್ಲಿ ಇವರದು ಒಂದು ಹಿಡಿತ ಇರುತ್ತದೆ. ಅಬಕಾರಿ ಹೇಗಿದೆಯೋ, ಗ್ರಾನೈಟ್ ಹೇಗಿದೆಯೋ, ಅದೇ ಹಿಡಿತ ಅವರ ಕೈಯಲ್ಲಿದೆ. ಅವರ ಬಳಿ ನೀವೆಲ್ಲಾ ಹೋಗಿ ಶರಣು ಹೊಡೆಯಬೇಕು. ಬಹುಶ: ಈ ಸರ್ಕಾರ ನಡೆಸತಕ್ಕಂತಹ ಮುಖ್ಯ ಮಂತ್ರಿಗಳಿಗಿಂತ ಹೆಚ್ಚಾಗಿ ಅವರಲ್ಲಿ ಅಧಿಕಾರ ಜಾಸ್ತಿಯಾಗಿದೆ. ಆದ್ದರಿಂದ ಇದರ ಬಗ್ಗೆ ನಾವು ತೀರ್ಮಾನ ಮಾಡಿ ಒಟ್ಟಿಗೆ ಪಕ್ಷಾತೀತವಾಗಿ ಇವರನ್ನು ಹೊರಗಡೆ

ಹಾಕಲಿಲ್ಲವೆಂದರೆ, ಈ ದೇಶದಲ್ಲಿ ಒಂದು ಅಪಮಾನಕಾರಿಯಾದ ಬೆಳವಣಿಗೆಯಾಗುತ್ತದೆ ಎಂದು ಹೇಳುತ್ತಿದ್ದೇನೆ. ಇವತ್ತು ನಮ್ಮ ಮಾನ್ಯ ಸಚಿವರು ಕರ್ಪೂರದ ಮೇಲೆ ತೆರಿಗೆ ಇಳಿಸಿದ್ದಾರೆ. ನಿಮ್ಮ ಮುಖಕ್ಕೆ ಮಂಗಳಾರತಿ ಮಾಡುವುದಕ್ಕೆ ಕರ್ಪೂರ ಬೇಕೆಂದು ಇದಕ್ಕೆ ಇಳಿಸಿದ್ದೀರಾ? ಎಲ್ಲರೂ ಬಂದು ನಿಮಗೆ ಧಾರಾಳವಾಗಿ ಮುಖಕ್ಕೆ ಮಂಗಳಾರತಿ ಎತ್ತಬೇಕೆಂದು ಮಾಡಿದ್ದೀರಾ? ಎಲ್ಲರೂ ಹೇಳಿದ್ದಾರೆ, ನಿಮಗೆ ಏಕೆ ಹಿತ್ತಾಳೆ ಪಾತ್ರೆಗಳ ಬಗ್ಗೆ ಕೋಪ ಬಂದಿತು ನನಗೆ ಗೊತ್ತಿಲ್ಲ. ಇದು ಒಂದು ತರಹ ಏನಾಗಿದೆ ಎಂದರೆ, ನೀವು ಮನಸ್ಸು ಮಾಡಿದ್ದರೆ ಒಳ್ಳೆಯ ಆಯವ್ಯಯವನ್ನು ಮಂಡಿಸಬಹುದಾಗಿತ್ತು. ಏನಾಗಿದೆ, 10 ಇದೆ ಎರಡು ಇಳಿಸು, ಎಂಟು ಇದೆ ಎರಡು ತೆಗಿ, ಮೂರು ಇದೆ ಎರಡು ಸೇರಿಸು ಒಟ್ಟಾದರೆ ಎಷ್ಟು, ಈ ತರಹ ಲೆಕ್ಕ, ಆದ್ದರಿಂದ ನಿಮಗೆ ಯಾರೋ ಹಿತ್ತಾಳೆ ಕಿವಿಯಿಂದ ಇದನ್ನು ಹೇಳಿದ್ದಾರೆಂದು ಕಾಣುತ್ತದೆ. ಅವರಿವರ ಮಾತು ಕೇಳುವುದಕ್ಕೆ ಹಿತ್ತಾಳೆ ಕಿವಿ ಎಂದು ಹೇಳುತ್ತಾರೆ. ಆದ್ದರಿಂದ ಈ ತರಹ ಏನಾದರೂ ಆಗಿದೆಯಾ? ಅದರ ಬಗ್ಗೆ ತಾವು ಹೇಳಬೇಕು. ಸಿಗರೇಟ್ ಸೇವನೆ ಮೇಲೆ, ಸಿಗರೇಟ್ ಸೇದುವುದೇ ಹಾನಿಕರವೆಂದು ಹಾಕಿದ್ದಾರೆ. ಇನ್ನೂ ಅದರಲ್ಲಿ ಬೇರೆ ನೀವು ತೆರಿಗೆ ಕಡಿಮೆ ಮಾಡಿ ತಾವು ಆರೋಗ್ಯ ಸಚಿವರು ಇದರ ಬಗ್ಗೆ ರಾಜೀನಾಮೆ ಕೊಡಬೇಕಾಗಿತ್ತು. ಆರೋಗ್ಯದ ಬಗ್ಗೆ ಕಾಳಜಿ ಇದ್ದರೆ ಆರೋಗ್ಯ ಸಚಿವರು ಈ ತರಹ ಜಾಸ್ತಿ ಮಾಡಿದ್ದೀರಿ ನನ್ನ ರಾಜೀನಾಮೆಯನ್ನು ಕೂಡಲೇ ಕೊಡುತ್ತೇನೆಂದು ಹೇಳಬಹುದಾಗಿತ್ತು. ನಾನು ನಿಮಗೆ ರಾಜೀನಾಮೆ ಕೊಡಿ ಎಂದು ನಾನು ಹೇಳುವುದಿಲ್ಲ ಅದು ನಿಮಗೆ ಸೇರಿದ್ದು, ಅವರು ರಾಜೀನಾಮೆ ಕೊಡಿ ಎಂದು ನಾನು ಹೇಳುವುದಿಲ್ಲ. ಕೊಡಬೇಕಾಗಿತ್ತು ಎಂದು ಹೇಳಿದೆ. ಸಿಗರೇಟ್ ಫಿಲ್ಟರ್, ಸಿಗಾರ್ ಇವೆಲ್ಲದರ ಮೇಲೆ ಕಡಿಮೆ, ಇವೆಲ್ಲಾ ಯಾರು ಸೇದುವುದು, ಗುಡಿಸಲು ಇಟ್ಟುಕೊಂಡಿರುವವರು ಪೈಪ್ ಇಟ್ಟು ಸೇದುವುದು. ಏಕೆ ಯಾವುದು ನಿಮಗೆ ಕಣ್ಣಿಗೆ ಬೀಳಲಿಲ್ಲ. ಮನೋರಂಜನೆ ತೆರಿಗೆ ಜಾಸ್ತಿ ಮಾಡಿದರು. ಮಹಾರಾಷ್ಟ್ರದಲ್ಲಿ ಒಂದು ಆಟಕ್ಕೆ 20 ರೂಪಾಯಿ ಇದೆ, ಆಂಧ್ರ ಪ್ರದೇಶದಲ್ಲಿ ಒಂದು ಆಟಕ್ಕೆ 12.50 ರೂಪಾಯಿ ಇದೆ. ತಮಿಳುನಾಡಿನಲ್ಲಿ ಇಲ್ಲ, ಕೇರಳದಲ್ಲಿ ಒಂದು ಆಟಕ್ಕೆ 2.50 ರೂಪಾಯಿ ಕರ್ನಾಟಕದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ 10 ರೂಪಾಯಿ ಇತ್ತು. ಈಗ ತಾವು 100 ರೂಪಾಯಿಗೆ ಏರಿಸಿದ್ದೀರಿ. ಜಿಲ್ಲಾ ಮಟ್ಟದಲ್ಲಿ 30 ಇತ್ತು, ಅದನ್ನು 300 ರೂಪಾಯಿ ಮಾಡಿದ್ದೀರಿ. ಹೀಗಾದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಸಂಚಾರಿ ಚಿತ್ರ ಮಂದಿರಗಳೆಲ್ಲಾ ತಮ್ಮ ಟೆಂಟ್‌ಗಳನ್ನು ಮುಚ್ಚಿ ಅವರು ಬೀದಿಗೆ ಬರತಕ್ಕಂತಹ ವ್ಯವಸ್ಥೆ ತಾವು ಮಾಡಿದ್ದೀರಿ. ಇದು ಕನ್ನಡ ಚಿತ್ರದ ಮೇಲೆ ಬರತಕ್ಕಂತಹ ಒಂದು ದೊಡ್ಡ ಹೊರೆ. ಕನ್ನಡ ಚಿತ್ರಗಳು ಏನು ಪ್ರದರ್ಶನ ಆಗುತ್ತವೆ ಅದರ ಮೇಲೆ ಬರತಕ್ಕಂತಹ ಒಂದು ಭಾರಿ ಹೊರೆ. ಈ ಹೊರೆಯ ಬಗ್ಗೆ ತಾವು ಕೂಡಲೇ ಚಿಂತನೆ ಮಾಡಬೇಕು. ಕನ್ನಡ ಚಿತ್ರಗಳಿಗೆ ಒಂದು ರೀತಿಯಿಂದ ಕೊಡಲಿ ಪೆಟ್ಟು ಹಾಕುತ್ತಿದ್ದೀರಿ. ಒಂದು ಕಡೆ ಸಹಾಯಧನ ನಿಲ್ಲಿಸುತ್ತೀರಿ, ಉತ್ತಮ ಚಿತ್ರಗಳಿಗೆ ಮಾತ್ರ ಕೊಡುತ್ತೇವೆಂದು ಹೇಳಿದ್ದೀರಿ.

ಶ್ರೀ ಸಿದ್ಧರಾಮಯ್ಯ:- ಅಶ್ಲೀಲ ಇರತಕ್ಕಂಥದ್ದು, ಹಿಂಸೆ ಇರತಕ್ಕಂಥದ್ದು, ಕ್ರೌರ್ಯ ಇರತಕ್ಕಂಥದ್ದು ಮತ್ತು ಪ್ರಚೋದನೆ ತರತಕ್ಕಂತಹ ಚಿತ್ರಗಳಿದ್ದರೆ ಅವುಗಳಿಗೆ ಸಹಾಯಧನ ನಿಲ್ಲಿಸತಕ್ಕಂತಹ ಚಿಂತನೆ ಸರ್ಕಾರಕ್ಕೆ ಇದೆ ಎಂದು ಹೇಳಿದ್ದೇನೆ, ಹೊರತು ಸಬ್ಸಿಡಿ ನಿಲ್ಲಿಸಿದ್ದೇವೆಂದು ಎಲ್ಲೂ ಹೇಳಲಿಲ್ಲ. ಸಬ್ಸಿಡಿ ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಸಬ್ಸಿಡಿ ಕೊಡುತ್ತೇವೆಂದು ತಾವು ಈ ಸದನದಲ್ಲಿ ಹೇಳಿದ್ದರಿಂದ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಆದರೆ ಸಬ್ಸಿಡಿ ಸಾಲ ಕೊಟ್ಟು ಬಿಡಿ. ಅವರದು ಏಳು ಕೋಟಿ ರೂಪಾಯಿ ಉಳಿಸಿದ್ದೀರಿ, ಒಂದಲ್ಲ ಎರಡಲ್ಲ 500 ಚಿತ್ರಗಳಿಗೆ ಇನ್ನು ಹಣ ಬಿಡುಗಡೆ ಮಾಡಿಲ್ಲ. ವಾರ್ತಾ ಇಲಾಖೆಯಲ್ಲಿ ಅವರು ದಿನಾ ಕಾಡಿ ಬೇಡಿ ಸಾಲಸೋಲ ಮಾಡಿ ಚಿತ್ರ ತೆಗೆದಿದ್ದಾರೆ. ಅವರ ಚಿತ್ರಗಳಿಗೆ ಹಣವನ್ನು ಬೇಗ ತಾವು ಬಿಡುಗಡೆ ಮಾಡಿ ಪ್ರದರ್ಶನ ತೆರಿಗೆಯನ್ನು ಕಡಿಮೆ ಮಾಡತಕ್ಕಂತಹ ವ್ಯವಸ್ಥೆಗೆ ತಾವು ಹೋಗಬೇಕು. ಆಮೇಲೆ, ಬೀರ್‌ನ ಮೇಲಿನ ಸುಂಕವನ್ನು 4 ರಿಂದ 5 ಕ್ಕೆ ಏರಿಸಿದ್ದೀರಿ. ಒಂದು ಮಾತು, ನಮ್ಮ ಸರ್ಕಾರ ನಡೆಯುವುದೇ ಇದರಿಂದ, ಬೀರ್ ಕುಡಿಯುವರಿಂದ ನಮ್ಮ ಸರ್ಕಾರ ಸ್ವಲ್ಪ ಹೆಚ್ಚು ಕಡಿಮೆ ನಡೆಯುತ್ತಿರುವುದು. ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ 700 ಕೋಟಿ ರೂಪಾಯಿಗಳನ್ನು ಅವರೆ ತಾನೆ ಕೊಡುವುದು, ಅದು ಬೀರ್ ಒಂದರಿಂದಲೇ ಬರುತ್ತದೆಂದು ಹೇಳುವುದಿಲ್ಲ ಅವರು ಕೂಡ ನಿಮಗೆ ಸಹಕಾರಿ ತಾನೆ ಸ್ವಾಮಿ? ನಿಮ್ಮಲ್ಲಿಯು ಕೂಡ ಬಹುತೇಕ ಜನರಿದ್ದೀರಲ್ಲ, ನಾನು ಅವರ ಪರವಾಗಿಯೂ ಮಾತನಾಡಬೇಕಲ್ಲ? ಆದುದರಿಂದ ನನಗನಿಸುತ್ತದೆ, ನಾನು ಅವರ ಪರವಾಗಿ ಮಾತನಾಡಬೇಕು, ಇಲ್ಲಿ ಅನೇಕ ಜನರಿದ್ದಾರೆ, ಬೀರ್, ರಮ್ ಈ ಬಗ್ಗೆ ಎಲ್ಲಾ ಮಾತನಾಡಬೇಕಾದರೆ, ನಮ್ಮ ಸ್ನೇಹಿತರು ಕೂಡ ಇದ್ದಾರೆ, ಅವರ ಪರವಾಗಿಯೂ ಕೂಡ ಮಾತನಾಡಬೇಕಲ್ಲ? ಬಹುತೇಕವಲ್ಲ, ಅನೇಕ ಜನ ಪತ್ರಕರ್ತರಿದ್ದಾರೆ ನಾನು ಅವರ ಪರವಾಗಿಯೂ ಮಾತನಾಡಬೇಕಲ್ಲ? ಅವರು, ನೀವು ಯಾವಾಗಲೂ ಮಾತನಾಡಿಲ್ಲವೆಂದು ಹೇಳುತ್ತಾರೆ. ಇದರ ಮೇಲೆ ಸುಂಕವನ್ನು ಏರಿಸಿರತಕ್ಕಂಥದ್ದರ ಬಗ್ಗೆ ಮಾತನಾಡುವಾಗ ನಾನು ಬರಿ ಒಂದೇ ವರ್ಗದ ಬಗ್ಗೆ ಮಾತನಾಡಬಾರದು, ನಾನು ಆ ವರ್ಗದ ಪರವಾಗಿಯೂ ಮಾತನಾಡಬೇಕು.

ಶ್ರೀ ಹೆಚ್. ಎನ್. ನಂಜೇಗೌಡ :-ಕಳೆದ ವರ್ಷ ಎಂಟನೂರ ನಲವತ್ತಾರು ಕೋಟಿ ಏನೂ ಬಂದಿದೆ, ಅದರಲ್ಲಿ ಈ ವಾಟಾಳ್‌ನಾಗರಾಜ್‌ರಿಂದ ಒಂದು ಪೈಸೆಯೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಅದು ಸತ್ಯ, ಅದು ನಮ್ಮ ಸ್ನೇಹಿತರಿಂದ ಬಂದಿದೆಯಲ್ಲ, ತಮ್ಮಿಂದ ಬಂದಿದೆಯಲ್ಲ, ಅದೆಲ್ಲಾ ನಮಗೆ ಸಂತೋಷವಲ್ಲವೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ನಿಮ್ಮಿಂದ ಏನೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸ್ನೇಹಿತರು ಕೊಟ್ಟಿದ್ದಾರೆ, ಅನೇಕ ಜನ ನಮ್ಮ ಪತ್ರಕರ್ತ ಸ್ನೇಹಿತರಿದ್ದಾರೆ ಅವರು ಕೊಟ್ಟಿದ್ದಾರೆ. ಅದರ ಬಗ್ಗೆ ನಾವು ಚಿಂತೆ ಪಡಬೇಕಾಗಿಲ್ಲ, ಆದರೆ ನಮ್ಮ ಸ್ನೇಹಿತರಿಂದ ಬಂದರೆ ನಮ್ಮ ಕಡೆಯಿಂದ ಬಂತೆಂದು ನಾನು ಹೇಳುವುದಿಲ್ಲ. ಉಪಾಧ್ಯಕ್ಷರೆ, ತಮ್ಮಿಂದಲೂ ಸ್ವಲ್ಪ ಬಂದಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ; ಅದು ಎಷ್ಟರ ಮಟ್ಟಿಗೆ ನಿಜವೋ ಏನೊ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ :- ಪಿ.ಜಿ. ಆರ್. ಸಿಂಧ್ಯಾರವರು ವಾಟಾಳ್ ಕಡೆಯಿಂದ ಬಂದಿಲ್ಲವೆಂದು ನಿಮಗೆಲ್ಲಾ ಗೊತ್ತಾ ಎಂದು ಅನುಮಾನಾಸ್ಪದವಾಗಿ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಮತ್ತು ಸಿಂಧ್ಯಾರವರು ಸುಮಾರು 25 ವರ್ಷಗಳ ಸ್ನೇಹಿತರು, ಅದು ಅವರಿಗೆ ಗೊತ್ತಿದೆ, ಅದು ಹೇಗೆ ಎನ್ನುವುದನ್ನು ಅವರೇ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ:- ಸ್ವಾಮಿ, ತೆರಿಗೆಯನ್ನು ಕಟ್ಟುವುದಕ್ಕೆ ತೆಗೆದುಕೊಂಡು ಕುಡಿಯಬೇಕೆಂದೇನು ಇಲ್ಲ, ನಮ್ಮಲ್ಲಿ ಕುಡಿಯದಿರತಕ್ಕಂಥ ಜನರು ಆ ವ್ಯವಹಾರದಲ್ಲಿ ತೆಗೆದುಕೊಂಡು ಬೇರೆಯವರಿಗೆ ಕುಡಿಸುತ್ತೇವೆ ಅಥವಾ ಬೇರೆಯವರಿಗೆ ಹಂಚುತ್ತೇವೆ. ಹಂಚುತ್ತೇವೆಂದು ಹೇಳುವುದಕ್ಕೆ ಹೋದೆ, ಅದು ದೊಡ್ಡ ಸಮಸ್ಯೆಯಾಯಿತು ಅದು ಬೇರೆ ವಿಚಾರ; ಅದನ್ನು ನಾನು ಸಮಯ ಬಂದಾಗ ಹೇಳುತ್ತೇನೆ. ಆದರೆ ಹಂಚಿರಬಹುದೆನ್ನುವ ಸಂಶಯ ನನಗಂತೂ ಇದೆ, ಇಲ್ಲವೆಂದರೆ ಇಲ್ಲವೆಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ :- ಸ್ವಾಮಿ ನಿಜ, ನನ್ನ ಜೀವನದಲ್ಲಿ ಚುನಾವಣೆಯ ಸಂದರ್ಭದಲ್ಲಿ ಒಂದು ಬಾಟ್ಲ್ ಅನ್ನು ನಾನು ಹಂಚಿಲ್ಲ, ನಾನು ಒಂದು ಪ್ಯಾಕೇಟ್ ಅನ್ನು ಹಂಚಿಲ್ಲ, ಇದಂತು ಸ್ವಷ್ಟ.

ಶ್ರೀ ಪಿ.ಜಿ. ಆರ್. ಸಿಂಧ್ಯಾ:- ನಿಮ್ಮ ಜೊತೆಯಲ್ಲಿರುತ್ತಾರಲ್ಲ, ಅವರು ಹಂಚದೆ ಇರುತ್ತಾರೆಯೇ?

ಉಪಾಧ್ಯಕ್ಷರು:- ಅವರು ಹಂಚಿಲ್ಲ, ಅವರ ಪರವಾಗಿ ಹಂಚಿರುತ್ತಾರೆ.

ಶ್ರೀ ಹೆಚ್. ಎನ್ ನಂಜೇಗೌಡ:- ಪತ್ರಿಕಾ ಸ್ನೇಹಿತರು, ನಮ್ಮಂಥ ಸ್ನೇಹಿತರು ಇವರಿಗೆಲ್ಲಾ ಎಷ್ಟೋ ಸಾರಿ ಪಾರ್ಟಿಯನ್ನು ಕೊಡಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಇವರೆಲ್ಲರ ಸಭೆ ಸೇರಿಸಿ ಅವರ ಸೇವೆ ಮಾಡಿರುವುದು ಉಂಟು; ಆದರೆ ನಾನು ಯಾವತ್ತು ಅದನ್ನು ಸೇವನೆ ಮಾಡಿಲ್ಲ. ಉಪಾಧ್ಯಕ್ಷರೆ, ನನ್ನ ಬಗ್ಗೆ ತಮಗೆ ಎಷ್ಟು ಕಾಳಜಿ ಇದೆ ಎಂದು ಗೊತ್ತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನೀವು ಅದನ್ನು ಉಪಯೋಗಿಸಿಕೊಳ್ಳದೆ ಇರಬಹುದು ನೀವು ಬೇರೆಯವರಿಗೆ ಕೊಡುವಾಗ ನೀವು ತೆರಿಗೆ ಕೊಟ್ಟಿದ್ದೀರೆಂದು ಹೇಳಿದ್ದುದು.

ಶ್ರೀ ಬಿ. ಎಸ್. ಯಡಿಯೂರಪ್ಪ:- ತಾವು ಕುಡಿಯದೆ, ಬೇರೆಯವರಿಗೆ ಕುಡಿಸುವುದು ಮಹಾಪಾಪ.

ಶ್ರೀ ವಾಟಾಳ್ ನಾಗರಾಜ್:-ನಾನೂ ಎಂದೂ ಯಡಿಯೂರಪ್ಪನವರನ್ನು ಕೆಡಿಸುವುದಕ್ಕೆ ಹೋಗಲಿಲ್ಲ, ಏಕೆಂದರೆ ಅವರು ಕೂಡ ನನ್ನ ರೀತಿ ಸನ್ಯಾಸಿ ಇದ್ದಂತೆ; ಅದಕೋಸ್ಕರ ನಾನು ಎಂದೂ ಅವರನ್ನು ಕೆಡಿಸುವುದಕ್ಕೆ ಹೋಗಿಲ್ಲ, ಯಾವತ್ತಾದರೂ ಅವರನ್ನು ನಾನು ಕರೆದಿದ್ದೇನೆಯೇ ಎಂದು ಕೇಳಿ, ಸ್ವಲ್ಪ ತೆಗೆದುಕೊಳ್ಳಿ ಎಂದು ಹೇಳಿದ್ದೇನೆಯೇ ಎಂದು ಕೇಳಿ? ಇದ್ದರೆ ಅವರು ಈ ಸದನದಲ್ಲಿ ಹೇಳಲಿ.

ಉಪಾಧ್ಯಕ್ಷರು:- ಅಲ್ಲ, ಕೆಡಿಸುವ ಕೆಲಸ ಏತಕ್ಕೆ ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್ :- ಎಷ್ಟೋ ಸಾರಿ ನಾನು ತಮ್ಮ ಜೊತೆಯಲ್ಲಿ ಭೇಟಿ ಮಾಡಿದ್ದೇನೆ, ನನಗೆ ಅದೇನಾದರೂ ಉಂಟೆ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :-ತಾವು ಯಡಿಯೂರಪ್ಪನವರಿಗೆ ಒಂದು ರೀತಿಯ ಸನ್ಯಾಸಿ ಎಂದು ಹೇಳಿದಿರಿ, ಅದು ಯಾವ ತರಹದ ಸನ್ಯಾಸಿ, ಈ ತರಹದ ಸನ್ಯಾಸಿನೊ, ಆ ತರಹದ ಸನ್ಯಾಸಿನೊ?

ಶ್ರೀವಾಟಾಳ್ ನಾಗರಾಜ್ :- ಅವರು ಆ ತರಹದ ಸನ್ಯಾಸಿಗಳಲ್ಲ, ಅವರ ಬಗ್ಗೆ ನಾವು ಈಗ ಚರ್ಚೆ ಮಾಡುವುದು ಬೇಡ. ಮನೆ ಬಳಕೆಯ ಸೌದೆಯನ್ನು ಹೊರತುಪಡಿಸಿ ಉಳಿದ ಸೌದೆಗಳಿಗೆ ಎಂದರೆ ಯಾವುದದು? ನನ್ನ ದೃಷ್ಟಿನಲ್ಲಿ ಆ ಹೆಣ ಸುಡುವ ಸೌದೆಯೂ ಇದೆ. ಮನೆ ಬಳಕೆಯ ಸೌದೆ ಹೊರತುಪಡಿಸಿ ಉಳಿದ ಸೌದೆ ಎಂದು ಹೇಳಿದ್ದಿರಿ, ನೀರು ಕಾಯಿಸುವುದನ್ನು ಬಿಟ್ಟುಬಿಡೋಣ, ಅಡಿಗೆ ಮಾಡುವುದನ್ನು ಬಿಟ್ಟುಬಿಡೋಣ, ಉಳಿದಿದ್ದರಲ್ಲಿ ಹೆಣ ಸುಡುವುದು ಒಂದು ಬರುತ್ತದೆ. ಅದರ ಮೇಲೆ ಏತಕ್ಕೆ ತೆರಿಗೆ ಹಾಕಿದಿರಿ ಸ್ವಾಮಿ? ಇದರ ಬಗ್ಗೆ ನಿಮ್ಮ ಕಾಳಜಿ ಏನು ಎಂದು ಸ್ವಲ್ಪ ಹೇಳಿ. ನಿಮಗೆ ಹೆಣ ಸುಡುವವರು ಕೂಡ ನಿಮಗೆ ತೆರಿಗೆಯನ್ನು ಕೊಡಬೇಕೇ?

ಶ್ರೀ ಸಿದ್ದರಾಮಯ್ಯ:- ಡೊಮೆಸ್ಟಿಕ್ ಯುಸ್ ಎಂದರ್ಥ, ಅದರಲ್ಲಿ ಹೆಣ ಸುಡುವ ಸೌದೆಯೂ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಇಲ್ಲ ಅದು ಹೇಗೆ ಬರುತ್ತದೆ? ಯಾರಾದರೂ ಮನೆಯಲ್ಲಿ ಹೆಣ ಸುಡುತ್ತಾರೆಯೇ?

ಶ್ರೀ ಸಿದ್ದರಾಮಯ್ಯ:- ಅದನ್ನು ಲಿಟರರಿಯಾಗಿ ತೆಗೆದುಕೊಳ್ಳುವುದಕ್ಕೆ ಹೋಗಬಾರದು, ಆ ರೀತಿ ಪದ ಬಳಕೆಯಾಗಿದೆ ಅಷ್ಟೆ.

ಶ್ರೀ ಎಸ್. ಸುರೇಶ್ ಕುಮಾರ್ :- ಎಲೆಕ್ಟ್ರಿಕ್ ಕ್ರಿಮಿಟೊರಿಯಂ ನಾನ್ ಡೊಮೆಸ್ಟಿಕ್ ಎಂದು ಚಾರ್ಜ್ ಮಾಡುತ್ತಿರುವುದು. ಕಮರ್ಷಿಯಲ್ ರೇಟ್ ಅದು ಬೇರೆ.

ಶ್ರೀ ಸಿದ್ಧರಾಮಯ್ಯ :- ಹಳ್ಳಿಗಾಡಿನಲ್ಲಿ ಈ ಪ್ರಶ್ನೆಯೇ ಬರುವುದಿಲ್ಲ, ಸೌದೆ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಮನೆ ಬಳಕೆಯ ಸೌದೆಗೆ ಟ್ಯಾಕ್ಸ್ ಇಲ್ಲ, ತೆರಿಗೆಯಿಂದ ವಿನಾಯಿತಿ ಇದೆ.

ಶ್ರೀ ವಾಟಾಳ್ ನಾಗರಾಜ್ :- ಹೆಣ ಸುಡುವ ಸೌದೆಗೆ ತೆರಿಗೆ ವಿನಾಯಿತಿ ಇದೆಯಾ? ನಾನು ಹೇಳುವುದೇನೆಂದರೆ ಹಳ್ಳಿಗಳಲ್ಲಿ ಹೆಣ ಹೂಳುವುದಕ್ಕೆ ಸ್ಮಶಾನ, ಇಲ್ಲ, ಗೊತ್ತು ಗುರಿ ಇಲ್ಲದ ಕಡೆ ಹೆಣ ಹೂಳುವುದು, ಅಲ್ಲಿ ಇವರು ಸೌದೆಗೂ ಇವರು ತೆರಿಗೆ ಹಾಕಿದರೆ ನಿಜವಾಗಿಯೂ ನಿಮ್ಮನ್ನು ಯಾವ ದೇವರು ಕೂಡ ಮೆಚ್ಚುವುದಿಲ್ಲ; ನಿಮಗೆನೋ ಶಾಪವಾಗುತ್ತದೆ ನನಗೆ ಗೊತ್ತು. ಆಮೇಲೆ ಪಾದರಕ್ಷೆಗೆ ಬಳಸುವ ಅದರಲ್ಲೂ ಕಡಿಮೆ ದರದಲ್ಲಿ ಫುಟ್‌ಪಾತ್‌ನಲ್ಲಿ ದೊರೆಯುವ ಬ್ರಾಂಡ್ ಇಲ್ಲದ ಪಾದರಕ್ಷೆ ಯಾವುದು ಸ್ವಾಮಿ? ಅದರ ಮೇಲಿನ ತೆರಿಗೆಯನ್ನು 4 ರಿಂದ 10 ಕ್ಕೆ ಏರಿಸಿದ್ದೀರಿ. ಅವು ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಳ್ಳುವವರದು, ನೀವು ಅದರ ಮೇಲೂ ತೆರಿಗೆ ಹಾಕಿಬಿಟ್ಟರಾ?

ಶ್ರೀ ಸಿದ್ಧರಾಮಯ್ಯ :- ಬ್ರಾಂಡೆಡ್ ಮತ್ತು ಅನ್ ಬ್ರಾಂಡೆಡ್ ಪಾದ ರಕ್ಷೆಗಳಿದ್ದಾವೆ, ಬ್ರಾಂಡೆಡ್ ಪಾದರಕ್ಷೆಗಳೆಂದರೆ, ಬಾಟಾ, ಕರೊನ, ಈ ರೀತಿಯದ್ದೆಲ್ಲಾ ಇದ್ದಾವೆ. ಟ್ರೇಡ್ ಮಾರ್ಕ್ ಸೀಲ್ ಇರುವ ಪಾದರಕ್ಷೆಗಳಿಗೆ ಶೇಕಡ 10 ರಷ್ಟು ತೆರಿಗೆ ಇದೆ ಬ್ರಾಂಡ್ ಇಲ್ಲದಿರುವ ನೂರು ರೂಪಾಯಿ ಮತ್ತು ಅದಕ್ಕಿಂತ ಕಡಿಮೆ ಬೆಲೆ ಇರುವಂತದ್ದಕ್ಕೆ ಶೇಕಡ 4 ರಷ್ಟು ತೆರಿಗೆ ವಿಧಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್:- ಆಯಿತು, ಶೋಕಿಗಾಗಿ ಬಳಸುವ ಸುಗಂಧದ್ರವ್ಯದ ಮೇಲೆ ತೆರಿಗೆಯನ್ನು ನೀವು ಹೆಚ್ಚಿಸಲಿಲ್ಲ; ಶೇಕಡ ಹನ್ನೆರಡರಿಂದ ಹತ್ತಕ್ಕೆ ತೆರಿಗೆ ಇಳಿಸಿದಿರಿ, ನಿಮಗೇಕೆ ಇದರ ಮೇಲೆ ಪ್ರೀತಿ. ಈ ರೀತಿ ಶೋಕಿ ಮಾಡುವಂಥವರಿಗೆ ಶೇಕಡ 15 ರಷ್ಟು ತೆರಿಗೆ ಹಾಕಿದ್ದರೆ ಯಾರೂ

ಬೇಡವೆಂದು ಹೇಳುತ್ತಿದ್ದರು? ಸೌದೆ ಮೇಲೆ ತೆರಿಗೆ ಹಾಕುತ್ತೀರಿ, ಇದರ ಮೇಲೆ ತೆರಿಗೆಯನ್ನು ಇಳಿಸುತ್ತೀರಿ. ಇದೇನು, ನಿಮ್ಮ ಸಿದ್ಧಾಂತ ಮತ್ತು ತತ್ವವೇನು ಸ್ವಾಮಿ? ಮತ್ತು ತೋಟ ಮತ್ತು ಕಡಲತೀರದಲ್ಲಿ ಛತ್ರಿ ಹಿಡಿದುಕೊಳ್ಳುವವರು ಯಾರು ಸ್ವಾಮಿ? ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆ ಬಂತೆಂದರೆ.

ಶ್ರೀ ಸಿದ್ಧರಾಮಯ್ಯ :- ಮಳೆ ಬಂದರೆ ಉಪಯೋಗಿಸುವ ಛತ್ರಿಯಲ್ಲ, ಕಡಲ ತೀರಗಳಲ್ಲಿ ಉಪಹಾರಕೋಸ್ಕರ ಛತ್ರಿ ರೀತಿ ಹಾಕಿಕೊಂಡು ಕುಳಿತುಕೊಂಡಿರುತ್ತಾರಲ್ಲ, ಆ ಛತ್ರಿಗಳಿಗೆ ಸಂಬಂಧಪಟ್ಟಿದ್ದುದು. ಆ ಛತ್ರಿಯ ಕೆಳಗೆ ಮೈಮೇಲೆ ಬಟ್ಟೆ ಹಾಕಿಕೊಳ್ಳದೆ ಕುಳಿತುಕೊಂಡಿರುತ್ತಾರಲ್ಲ ಆ ಛತ್ರಿ.

ಶ್ರೀ ವಾಟಾಳ್ ನಾಗರಾಜ್ :- ಈಗ ಅವರು ಸಂಸದೀಯ ಭಾಷೆಗೆ ಬಂದರು.

ಶ್ರೀ ಸಿದ್ಧರಾಮಯ್ಯ:- ನಾವು ಸ್ವಲ್ಪ ಹಳ್ಳಿಯವರು, ಈಗ ನಾವು ಅರ್ಧಂಬರ್ಧ ಬಟ್ಟೆ ಬಿಚ್ಚಿಕೊಂಡರು ಕೂಡ ನಾವು ಬಟ್ಟೆ ಬಿಚ್ಚಿಬಿಟ್ಟಿದ್ದೇವೆಂದು ಹೇಳುತ್ತಾರೆ.

ಶ್ರೀ ಹೆಚ್. ಎನ್. ನಂಜೇಗೌಡ:- ಅದು ಸೂರ್ಯಸ್ನಾನ.

ಶ್ರೀ ಸಿದ್ಧರಾಮಯ್ಯ:- ಸರಿ, ಅದು ಸೂರ್ಯಸ್ನಾನ, ಆ ಛತ್ರಿಗಳಿಗೆ ತೆರಿಗೆ ವಿಧಿಸುವುದು.

ಶ್ರೀ ವಾಟಾಳ್ ನಾಗರಾಜ್ :- ಸೂರ್ಯಸ್ನಾನವೆಂದರೆ ಅದರ ಬಗ್ಗೆ ವಿವರಣೆ ಕೊಡುವುದು ಬಹಳ ಕಷ್ಟವಾಗುತ್ತದೆ ಬಿಡಿ. ಇವರೆಲ್ಲಾ ಆ ಸೂರ್ಯಸ್ನಾನಕ್ಕೆ ಹೋದರೆ ದೇವರೆ ಕಾಪಾಡಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ವಾಟಾಳ್ ನಾಗರಾಜ್‌ರವರೆ, ದಯವಿಟ್ಟು ಆ ವಿವರಣೆಯನ್ನೆಲ್ಲಾ ಕೊಡಬಾರದು.

ಶ್ರೀ ವಾಟಾಳ್ ನಾಗರಾಜ್ :- ನಾನು ನಿಮ್ಮನ್ನೆಲ್ಲಾ ನೋಡಿಕೊಂಡು ವಿವರಣೆ ಕೊಡುವುದಕ್ಕೆ ಹೋಗಲಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ನಾವೆಲ್ಲಾ ಇನ್ನು ಇಲ್ಲಿ ಇದ್ದೇವೆ, ದಯವಿಟ್ಟು ಅದನ್ನು ಕೊಡುವುದಕ್ಕೆ ಹೋಗಬೇಡಿ.

ಶ್ರೀ ವಾಟಾಳ್ ನಾಗರಾಜ್ :- ಆ ರೀತಿ ಮಾಡಿದರೆ, ಪ್ರಮೀಳಾ ನೇಸರ್ಗಿಯವರಿದ್ದಾರೆ, ತಾವು ಇದ್ದೀರಿ, ನನ್ನ ಮೇಲೆ ಯುದ್ಧ ಮಾಡುತ್ತೀರಿ. ನಾನು ನಿಮ್ಮ ಅಭಿಮಾನವನ್ನು ಪಡೆದಿರುವಾಗ ಈ ವಿಚಾರ ಹೇಳಿ ನಾನು ನಿಷ್ಪ್ರಯೋಜಕವಾಗುವುದಕ್ಕೆ ಹೋಗುವುದಿಲ್ಲ. ಆಮೇಲೆ ಹೊರಗೆ ಮಾತನಾಡಿಕೊಳ್ಳೋಣ. ಆಮೇಲೆ ಭೋಗ ವಸ್ತುಗಳಿಗೆ, ಅಂದರೆ ದಂತ ಹಾಗೂ ಗಂಧದ ಮರಗಳ ವಸ್ತುಗಳ ಮೇಲಿನ ತೆರಿಗೆ 8 ರಿಂದ 4ಕ್ಕೆ ಇಳಿಸಿದ್ದೀರಿ ಏತಕ್ಕೆ ಸ್ವಾಮಿ?

ಶ್ರೀ ಸಿದ್ಧರಾಮಯ್ಯ:- ಕರಕುಶಲ ವಸ್ತುಗಳನ್ನು ಸಾಮಾನ್ಯ ಜನ ಮಾಡುತ್ತಿದ್ದಾರೆ ತೆರಿಗೆ ಜಾಸ್ತಿಯಾಗಿ ಮಾರಾಟ ಕುಂಠಿತವಾದರೆ ಆ ಕೈಗಾರಿಕೆನೇ ಹೋಗುತ್ತದೆನ್ನುವ ದೃಷ್ಟಿಯಿಂದ ಅದರ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿರುವುದು.

ಶ್ರೀ ವಾಟಾಳ್ ನಾಗರಾಜ್ :- ಆಯಿತು, ಗಂಧದ ಎಣ್ಣೆಯ ಮೇಲಿನ ಶೇಕಡ 12 ರಿಂದ 10ಕ್ಕೆ ಏತಕ್ಕೆ ಇಳಿಸಿದಿರಿ ತಮಗೆ ಗಂಧದ ಎಣ್ಣೆಯ ಮೇಲೆ ಏತಕ್ಕೆ ಅಷ್ಟೊಂದು ವ್ಯಾಮೋಹ? ಅದರ ಮೇಲೆ ಶೇಕಡ 15 ರಷ್ಟು ಏತಕ್ಕೆ ಹಾಕಬಾರದು?

ಶ್ರೀ ಸಿದ್ಧರಾಮಯ್ಯ :- ತೆರಿಗೆಗಳನ್ನು ನ್ಯಾಷನಲೈಸ್ ಮಾಡಿ ಒಂದು ರೀತಿಯ ರೇಟ್ ತರಬೇಕೆಂದಾಗ ಕೆಲವೊಂದು ಈ ರೀತಿಯದವು ಆಗುತ್ತವೆ. ಕೆಲವು ಪದಾರ್ಥಗಳಿಗೆ ಸಂಬಂಧಿಸಿದಂತೆ ನಾವು ಒಟ್ಟಾರೆ ಏನು ನೋಡಬೇಕು ಎಂದರೆ, ಸಾಮಾನ್ಯ ಜನರು ಬಳಸತಕ್ಕಂಥ ಪದಾರ್ಥಗಳ ಮೇಲೆ ತೆರಿಗೆ ಹೊರೆಯಾಗಿದೆಯೇ? ಹೆಚ್ಚು ಜನರು ಬಳಸತಕ್ಕಂಥ ವಸ್ತುಗಳ ಮೇಲೆ ತೆರಿಗೆ ಹೊರೆ ಯಾಗಿದೆಯೇ?, ಬಡವರು ಉಪಯೋಗಿಸತಕ್ಕಂಥ ಪದಾರ್ಥಗಳ ಮೇಲೆ ತೆರಿಗೆ ಹೆಚ್ಚಾಗಿದೆಯೇ? ಇಡೀ ದೇಶ ಮತ್ತು ರಾಜ್ಯಗಳಲ್ಲಿ ವಾದ ಏನಿದೆ ಎಂದರೆ ತೆರಿಗೆ ಬೆಲೆ ಹೆಚ್ಚಾದಷ್ಟು ಸೋರಿವಿಕೆ ಜಾಸ್ತಿಯಾಗುತ್ತದೆ ಎನ್ನುತಕ್ಕಂಥದ್ದು ದೇಶದಲ್ಲಿ ಹೊಸ ಸಿದ್ಧಾಂತವಿದೆ. ಟ್ಯಾಕ್ಸ್ ರೇಟ್ ಹೆಚ್ಚು ಆದಷ್ಟು ಸೋರಿಕೆ ಕೂಡ ಜಾಸ್ತಿಯಾಗುತ್ತದೆ ಎನ್ನುವುದು ದೇಶದಲ್ಲಿನ ಒಂದು ಹೊಸ ಸಿದ್ಧಾಂತವಾಗಿದೆ. ಬೇರೆ ರಾಜ್ಯಗಳಿಗಿಂತ ನಮ್ಮ ರಾಜ್ಯದಲ್ಲಿ ಹೆಚ್ಚು ತೆರಿಗೆ ಇದ್ದರೆ ಟ್ರೇಡ್ ಬೇರೆ ರಾಜ್ಯಗಳಿಗೆ ಹೊರಟು ಹೋಗುತ್ತದೆ. ಆ ಕಾರಣಕ್ಕೋಸ್ಕರ ಬೇರೆ ರಾಜ್ಯಗಳಲ್ಲಿರುವ ತೆರಿಗೆ ದರಗಳು, ನಮ್ಮ ರಾಜ್ಯದಲ್ಲಿರತಕ್ಕ ತೆರಿಗೆ ದರಗಳು ಮತ್ತು ತೆರಿಗೆ ಸೋರಬಾರದು ಎನ್ನುವ ಕಾರಣಕ್ಕೋಸ್ಕರ ಈ ರ್ಯಾಷನೆಲೈಸೇಷನ್ ಮೆಥಡ್ ಅನ್ನು ಮಾಡಿದ್ದೇವೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇದನ್ನು ಮಾಡಿದ್ದೇವೆಯೇ ಹೊರತು, ಯಾವನೋ ಒಬ್ಬ ವ್ಯಕ್ತಿ ಉಪಯೋಗಿಸುತ್ತಾನೆ, ಒಬ್ಬ ವ್ಯಕ್ತಿ ಉಪಯೋಗಿಸುವುದಿಲ್ಲ ಎನ್ನುವುದಕ್ಕಲ್ಲ. ಇದೇ ಮುಖ್ಯವಾದರೂ ಕೂಡ ತೆರಿಗೆ ಹೆಚ್ಚು ಮಾಡಲಿಕ್ಕೆ ಅದೇ ಆಧಾರವಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೇ, ಇನ್ನು ಪಡಿತರ ವ್ಯವಸ್ಥೆ ಇಲ್ಲದ ಸೀಮೆ ಎಣ್ಣೆ ಬಗ್ಗೆ ಹೇಳುವುದಾದರೆ, ಎಷ್ಟೋ ಕಡೆ ಪಡಿತರ ಚೀಟಿಯಲ್ಲಿ ಸೀಮೆಎಣ್ಣೆ ಕೊಡುವುದಿಲ್ಲ. ಅದಕ್ಕೆ ಬದಲಾಗಿ ಕಾಳಸಂತೆಯಲ್ಲಿ ಅದನ್ನು ಮಾರಿಕೊಳ್ಳುತ್ತಾರೆ. ಅಂದರೆ ಜನರು ಅದನ್ನು ಬೇರೆ ಕಡೆ ಕೊಂಡುಕೊಳ್ಳುತ್ತಾರೆ. ಇದರರ್ಥ ನೀವು ನೇರವಾಗಿ ಸೀಮೆಎಣ್ಣೆ ಮೇಲೆ ತೆರಿಗೆಯನ್ನು ಹಾಕಿದಂತಾಯಿತು. ಹೊಲಿಗೆ ಯಂತ್ರಗಳು ಮತ್ತು ಅದರ ಭಾಗಗಳ ಮೇಲಿನ ತೆರಿಗೆಯನ್ನು 8 ರಿಂದ 10 ಕ್ಕೆ ಏರಿಸಿದ್ದೀರಿ. ಅಂದರೆ ಸೂಜಿ, ಕತ್ತರಿಗಳ ಮೇಲೆ ತೆರಿಗೆ ಏರಿಸಿದಂತಾಯಿತು.

ಶ್ರೀ ಸಿದ್ಧರಾಮಯ್ಯ :- ಹೊಲಿಗೆ ಯಂತ್ರಗಳ ಸಾಮಾನುಗಳಾದ ಸೂಜಿ ಮತ್ತು ದಾರದ ಮೇಲೆ ತೆರಿಗೆಯನ್ನು 8 ರಿಂದ 4 ಕ್ಕೆ ಇಳಿಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ :- ಇನ್ನು ರೇಜರ್ ಬ್ಲೇಡ್ ಮೇಲಿನ ತೆರಿಗೆಯನ್ನು 8 ರಿಂದ 10ಕ್ಕೆ ಏರಿಸಿದ್ದೀರಿ. ಇದರಲ್ಲಿ ಏನೋ ನಿಮ್ಮ ಸ್ವಾರ್ಥ ಇದೆ ಎಂದು ನಾನು ನೇರವಾಗಿ ಹೇಳುತ್ತೇನೆ. ಬ್ಲೇಡ್ ಅನ್ನು ಯಾರೂ ಉಪಯೋಗಿಸಬಾರದು, ಎಲ್ಲರೂ ನಿಮ್ಮ ತರಹ ಗಡ್ಡ ಬಿಟ್ಟುಕೊಂಡು ಇರಬೇಕೆಂದು ಆ ರೀತಿ ಮಾಡಿದ್ದೀರೋ?

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೇ, ತೆರಿಗೆ ಎರಡು ಪೈಸೆ ಹೆಚ್ಚು ಆಯಿತು, ಎರಡು ಪೈಸೆ ಕಡಿಮೆ ಆಯಿತು ಎನ್ನತಕ್ಕಂಥದ್ದು ಒಂದು ಭಾಗ. ಆದರೆ ಈ ದೇಶದಲ್ಲಿ ಕಾಸ್ಟ್ ಆಫ್ ಪ್ರೊಡಕ್ಷನ್ ಏನಾಗಿದೆ? ಅದರ ಮೇಲೆ ಲಾಭ ಎಷ್ಟು ಇರುತ್ತದೆ? ಕನ್ಸ್ಯೂಮರ್ಸ್‌ಗೆ ಎಷ್ಟು ಸಿಗುತ್ತದೆ? ಎನ್ನುವುದರ

ಬಗ್ಗೆ ಯಾರೂ ಚಿಂತೆ ಮಾಡುವುದಿಲ್ಲ. ಸರ್ಕಾರ ತೆರಿಗೆ ಎರಡು ಪೈಸೆ ಹೆಚ್ಚು ಮಾಡಿದರೆ ಅದರ ಬಗ್ಗೆ ದೇಶದ ಉದ್ದಗಲಕ್ಕೂ ಚರ್ಚೆಯಾಗುತ್ತದೆ. ಮ್ಯಾನುಫ್ಯಾಕ್ಚರ್ ಮಾಡತಕ್ಕ ಒಬ್ಬ ಮನುಷ್ಯನಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಎಷ್ಟಾಗುತ್ತದೆ? ಅದಕ್ಕೆ ಅವನು ಎಷ್ಟು ಲಾಭ ಇಟ್ಟುಕೊಂಡಿರುತ್ತಾನೆ? ಅದರಿಂದ ಎಷ್ಟು ಜನರನ್ನು ಅವನು ಸೂರೆ ಮಾಡುತ್ತಾನೆ ಎನ್ನತಕ್ಕಂಥದ್ದರ ಬಗ್ಗೆ ಗಂಭೀರವಾದಂತಹ ಚರ್ಚೆ ಈ ದೇಶದ ವಿಧಾನಸಭೆಗಳಲ್ಲಿ ಆಗಲಿ, ಸಂಸತ್‌ನಲ್ಲಾಗಲೀ ಆಗುವುದಿಲ್ಲ. ಆದರೆ ತೆರಿಗೆ ಎರಡು ಪೈಸೆ ಹೆಚ್ಚು ಕಡಿಮೆ ಮಾಡಿದರೆ, ಅದರ ಬಗ್ಗೆ ದೇಶದ ಉದ್ದಗಲಕ್ಕೂ ಚರ್ಚೆಗಳು ನಡೆಯುತ್ತವೆ. ಇದನ್ನು ವೈಜ್ಞಾನಿಕವಾಗಿ ನೋಡತಕ್ಕಂತಹ, ಪ್ರಾಗ್‌ಮ್ಯಾಟಿಕ್ಕಾಗಿ ನೋಡತಕ್ಕಂತಹ ಚರ್ಚೆಗಳು ಇವತ್ತು ದೇಶದಲ್ಲಿ ಆಗಬೇಕಾಗಿವೆ.

ಶ್ರೀ ವಾಟಾಳ್ ನಾಗರಾಜ್ :- ಇನ್ನು ಕನ್ನಡಕ, ಸನ್ ಗ್ಲಾಸ್ ಇವುಗಳ ಮೇಲಿನ ತೆರಿಗೆಯನ್ನು 8 ರಿಂದ 10ಕ್ಕೆ ಏರಿಸಿದ್ದೀರಿ. ಹಿಂದೆ 40 ವರ್ಷಕ್ಕೆ ಕಣ್ಣು ಕಾಣದೇ ಇರುತ್ತಿತ್ತು. ಈಗ 30-35 ವರ್ಷಕ್ಕೆ ಕಣ್ಣು ಕಾಣದಂತಾಗುತ್ತಿದೆ.

ಶ್ರೀ ಸಿದ್ಧರಾಮಯ್ಯ:- ರೀಡಿಂಗ್ ಗ್ಲಾಸಸ್‌ಗೆ ವಿನಾಯಿತಿ ಕೊಟ್ಟಿದ್ದೇವೆ. ನೀವೇನು ಈಗ ಕನ್ನಡಕ ಹಾಕಿಕೊಂಡಿದ್ದೀರಿ, ಅದಕ್ಕೆ ಜಾಸ್ತಿಯಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ - ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡ್ಸ್ ಮೇಲಿನ ತೆರಿಗೆಯನ್ನು 12 ರಿಂದ 10ಕ್ಕೆ ಇಳಿಸಿದ್ದೀರಿ. ಈ ಇಸ್ಪೀಟ್ ಎಂಬ ಜೂಜನ್ನು ರದ್ದು ಮಾಡತಕ್ಕ ವ್ಯವಸ್ಥೆಯನ್ನು ಮಾಡುವುದಕ್ಕೆ ಬದಲಾಗಿ ನೀವು ಅದಕ್ಕೆ ಬೆಂಬಲ ಕೊಡುತ್ತಿದ್ದೀರಿ. ಇದು ಒಳ್ಳೆಯ ನೀತಿಯಲ್ಲ. ಶಸ್ತ್ರಚಿಕಿತ್ಸೆ, ದಂತ ಚಿಕಿತ್ಸೆಗೆ ಸಂಬಂಧಪಟ್ಟ ಉಪಕರಣಗಳ ಮೇಲೆ ತೆರಿಗೆ ಜಾಸ್ತಿ ಮಾಡಿದ್ದೀರಿ. ಇವು ಎಲ್ಲರಿಗೂ ಬೇಕಾದಂತಹ ವಸ್ತುಗಳು. ಈ ವಸ್ತುಗಳ ಮೇಲೆಯೇ ನೀವು ಏಕೆ ಗಮನ ಹರಿಸಿದಿರೋ ನನಗೆ ಗೊತ್ತಾಗುತ್ತಿಲ್ಲ. ಎಕ್ಸರೇ ಮೇಲೆ ತೆರಿಗೆ ಹಾಕಿದ್ದೀರಿ. ಗ್ರಾನೈಟ್ ಕಲ್ಲಿನ ಚೂರಿನ ಮೇಲಿನ ತೆರಿಗೆ ಕಡಿಮೆ ಮಾಡಿದ್ದೀರಿ. ಇದನ್ನು ಏಕೆ ಕಡಿಮೆ ಮಾಡಿದಿರಿ? ನನಗನಿಸುತ್ತದೆ, ಇದೆಲ್ಲಾ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ನನಗೆ ಗೊತ್ತಿರುವಂತೆ ಕೆಲವಕ್ಕಂತೂ ನೀವು ತೆರಿಗೆ ಹಾಕಿಯೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಶಿವದಾರಕ್ಕೆ ನೀವು ತೆರಿಗೆ ಹಾಕಿಲ್ಲ. ಪ್ರತಿ ಶಿವರಾತ್ರಿಯಲ್ಲಿ ಹೆಚ್ಚು ಕಡಿಮೆ ಒಂದು ಲಕ್ಷ ಶಿವದಾರ ಬದಲಾಯಿಸುತ್ತಾರೆ. ಅದರ ಮೇಲೆ ನಿಮಗೆ ಏಕೆ ನಿಮಗೆ ಕಣ್ಣು ಬೀಳಲಿಲ್ಲ? ನಿಮಗೆ ಯಾರು ಅಧಿಕಾರಿಗಳು ಹೇಳಲಿಲ್ಲವೇ? ಹಾಗೆಯೇ ಜನಿವಾರಕ್ಕೆ ಏಕೆ ನೀವು ತೆರಿಗೆ ಹಾಕಿಲ್ಲ. ನನ್ನ ಅಂದಾಜು ಪ್ರಕಾರ ಅದನ್ನು ಬಳಸುವವರು ಹೆಚ್ಚು ಕಡಿಮೆ 40 ಲಕ್ಷ ಬರಬಹುದು. ಇದು ನಗತಕ್ಕ ವಿಷಯವಲ್ಲ. ಇದರ ಮೇಲೂ ಸಹಾ ನಿಮ್ಮ ಕಣ್ಣು ಬಿದ್ದಿಲ್ಲ. ಹಾಗೆಯೇ ಉಡಿದಾರಕ್ಕೂ ನೀವು ತೆರಿಗೆ ಹಾಕಿಲ್ಲ.

ಶ್ರೀ ಸಿದ್ಧರಾಮಯ್ಯ :- ಈಗ ಯಾರೂ ಕೂಡ ಉಡಿದಾರ ಹಾಕುವುದೇ ಇಲ್ಲ.

ಶ್ರೀ ವಾಟಾಳ್ ನಾಗರಜ್ :- ಅದು ಹ್ಯಾಗೆ ಗೊತ್ತು ನಿಮಗೆ?

ಶ್ರೀ ಸಿದ್ಧರಾಮಯ್ಯ:- ಬಹಳ ಜನ ಇವತ್ತು ಹಾಕುತ್ತಿಲ್ಲ. ಇದೆಲ್ಲಾ ನಿಮಗೆ ಗೊತ್ತಿರುತ್ತದೆ. ನೀವು ನೋಡಿರುತ್ತೀರಿ.

ಶ್ರೀ ವಾಟಾಳ್ ನಾಗರಾಜ್ :- ಬಹಳ ಜನ ಉಡಿದಾರ ಕಟ್ಟುವುದಿಲ್ಲ ಎಂದು ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸದನದಲ್ಲಿ ಸ್ಪಷ್ಟವಾಗಿ ಹೇಳಿದ್ದೀರಿ. ಅದು ನಿಮಗೆ ಹೇಗೆ ಗೊತ್ತು ಎಂಬುದನ್ನು ತಾವು ಹೇಳಬೇಕು.

ಶ್ರೀ ಸಿದ್ಧರಾಮಯ್ಯ:- ಬಹಳ ಜನ ಜನಿವಾರ, ಶಿವದಾರಗಳನ್ನೇ ಈಗ ತೆಗೆದು ಹಾಕುತ್ತಿದ್ದಾರೆ. ಅದೇ ಪ್ರಕಾರವಾಗಿ ಉಡಿದಾರಗಳನ್ನೂ ತೆಗೆದು ಹಾಕುತ್ತಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ :- ಮಾನ್ಯ ಉಪಾಧ್ಯಕ್ಷರೇ, ನಮ್ಮ ಕಡೆಗೆ ಉಡಿದಾರ ಇಲ್ಲದಿದ್ದರೆ, ಉಡಿದಾರ ಇಲ್ಲದ ಮುಡಿದಾರ ಎಂದು ಕರೆಯುತ್ತಾರೆ. ಆದುದರಿಂದ ಎಲ್ಲರೂ ಉಡಿದಾರ ಕಟ್ಟಿರುತ್ತಾರೆ. ಇಲ್ಲದಿದ್ದರೆ ನಮ್ಮನ್ನು ಮುಡಿದಾರ ಎನ್ನುತ್ತಾರೆ ಎಂಬ ಅಂಜಿಕೆಯಿಂದ.

ಶ್ರೀ ಎಲ್. ಆರ್. ಶಿವರಾಮೇಗೌಡ :- ಇವತ್ತು ನಮ್ಮ ಕಡೆ ಬಹಳ ಜನ ಉಡಿದಾರ ಹಾಕುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:- ಹಿಂದೆ ಹುಡುಗರಿಗೆ ಬೆಳ್ಳಿಯ ಉಡಿದಾರ ಹಾಕುತ್ತಿದ್ದರು. ಯಾವಾಗ ಕೆಲವರು ಅವುಗಳನ್ನು ಕದಿಯುವುದಕ್ಕೆ ಶುರು ಮಾಡಿದರೋ, ಆಗಿನಿಂದ ಉಡಿದಾರ ಯಾರೂ ಹಾಕುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಆ ವಿಚಾರ ನನಗೆ ಗೊತ್ತಿಲ್ಲ.

ಶ್ರೀ ಸಿದ್ಧರಾಮಯ್ಯ:- ನೀವು ಉಡಿದಾರ ಕಟ್ಟಿದ್ದೀರೋ ಹೇಗೆ? ಅದನ್ನು ಪರಿಶೀಲಿಸುವುದಕ್ಕೆ ಬೇಕಾದರೆ ಮಾನ್ಯ ನಂಜೇಗೌಡ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ :- ನಾನು ಈ ಸದನದ ಗಾಂಭೀರ್ಯವನ್ನು, ಗೌರವವನ್ನು ಕಾಪಾಡಬೇಕು. ಅಲ್ಲದೆ ನನ್ನ ಇಬ್ಬರು ಅಕ್ಕ ತಂಗಿಯರು ಇಲ್ಲಿದ್ದಾರೆ. ಇಲ್ಲದಿದ್ದರೆ ನಾನು ಈ ಸದನದಲ್ಲಿ ಉಡಿದಾರ ಪ್ರದರ್ಶನ ಮಾಡುತ್ತಿದ್ದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ :- ದಯವಿಟ್ಟು ಉಡಿದಾರ, ಶಿವದಾರ, ಜನಿವಾರಗಳನ್ನು ಯಾರೂ ಇಲ್ಲಿ ಪ್ರದರ್ಶನ ಮಾಡುವುದು ಬೇಕಾಗಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಅದಕ್ಕಾಗಿಯೇ ಮಾನ್ಯ ಉಪ ಮುಖ್ಯಮಂತ್ರಿಗಳು ಅದನ್ನು ಇಲ್ಲಿ ಪ್ರದರ್ಶನ ಮಾಡುವುದು ಬೇಡ ಎಂದು ಸದನದ ಸಮಿತಿಯನ್ನು ರಚಿಸುತ್ತೇನೆ ಎಂದು ಹೇಳಿದರು.

ಶ್ರೀ ವಾಟಾಳ್ ನಾಗರಾಜ್ :- ನಾನು ಮಾನ್ಯ ಉಪ ಮುಖ್ಯಮಂತ್ರಿಗಳ ಸವಾಲನ್ನು ಸ್ವೀಕರಿಸುತ್ತೇನೆ. ಶ್ರೀ ಶ್ರೀ ರಾಮರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸದನ ಸಮಿತಿ ಮಾಡಲಿ, ನಾನು ಅಲ್ಲಿ ಅದನ್ನು ಪ್ರದರ್ಶನ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ:- ನಾನು ಮಾನ್ಯ ವಾಟಾಳ್‌ರವರು ಸಿಗರೇಟ್ ಸೇದುವುದಿಲ್ಲ, ಕುಡಿಯುವುದಿಲ್ಲ ಇನ್ನಾವುದೇ ಕೆಟ್ಟ ಕೆಲಸಗಳನ್ನು ಮಾಡುವುದಿಲ್ಲವೆಂದು ಅಂದುಕೊಂಡಿದ್ದೆ. ಈಗ ಅವರು ನೋಡಿದರೆ ನಾನು ಬಟ್ಟೆ ಬಿಸಾಕುತ್ತೇನೆ ಎಂಬ ಮಾತಾಡುತ್ತಿದ್ದಾರೆ. ಇದರಿಂದಾಗಿ ಬಹಳ ಅನುಮಾನ ಉಂಟಾಗುತ್ತಿದೆ.

ಶ್ರೀ ಹೆಚ್. ಎನ್ . ನಂಜೇಗೌಡ :- ಇಂತಹ ಪುಣ್ಯ ಕೆಲಸ ಮಾಡಲು ನೇಮಿಸಲಾಗುವ ಸದನ ಸಮಿತಿಗೆ ನಾನು ಅಧ್ಯಕ್ಷನಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾನು ಯಾವಾಗಲೂ ಸತ್ಯವನ್ನೇ ಹೇಳತಕ್ಕ ಮನುಷ್ಯ. ಆದುದರಿಂದ, ನಾನು ಅವರಿಗೆ ಸುಳ್ಳು ಹೇಳಬಾರದು ಅಂತಾ ಹೇಳಿ ಆ ಮಾತನ್ನು ಹೇಳಿದ್ದೇನೆಯೇ ಹೊರತು, ತಾವು ಅದನ್ನು ಅನ್ಯಥಾ ಭಾವಿಸಬಾರದು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಆ ಸತ್ಯ ನಗ್ನ ಸತ್ಯ ಆಗಬಾರದು.

ಶ್ರೀ ವಾಟಾಳ್ ನಾಗರಾಜ್ :- ನಾನು ಆಗಿನಿಂದ ಬಹಳ ಎಚ್ಚರಿಕೆಯಿಂದ ಶ್ರೀಮತಿ ಪ್ರಮೀಳಾರವರು ಎಲ್ಲಿ ನನ್ನ ಮೇಲೆ ಬೀಳುತ್ತಾರೋ ಎಂದು ಗಮನಿಸುತ್ತಿದ್ದೇನೆ. ತಾವು ದಯವಿಟ್ಟು ಕ್ಷಮಿಸಬೇಕು. ನಿಮ್ಮ ಮೇಲೆ ನನಗೆ ಅಪಾರ ಗೌರವ ಇದೆ. ಮಾನ್ಯ ಉಪಮುಖ್ಯಮಂತ್ರಿಗಳ ಮೇಲೆ ಕೂಡ ಗೌರವ ಇದೆ.

ಉಪಾಧ್ಯಕ್ಷರು:- ಇನ್ನು 15-20 ನಿಮಿಷಗಳಲ್ಲಿ ಅಂದರೆ 1.30ಕ್ಕೆ ನಿಮ್ಮ ಭಾಷಣ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ :- ಹಾಗೆಯೇ ನೀವು ಬಳೆಗಳು, ಬಿಚ್ಚೋಲೆ, ಅರಿಶಿನ, ಕುಂಕುಮ, ಈರುಳ್ಳಿ, ಬೆಳ್ಳುಳ್ಳಿ ಇವುಗಳ ಮೇಲೆ ತೆರಿಗೆ ಹಾಕಿಲ್ಲ. ಅವು ನಿಮ್ಮ ಕಣ್ಣಿಗೆ ಬೀಳಲಿಲ್ಲವೋ? ಹಾಗೆಯೇ ಕುಟುಂಬ ಯೋಜನೆ ಯಶಸ್ವಿಯಾಗಬೇಕೆಂದು ಹೇಳಿ ನಿರೋಧ್ ಮೇಲೆ ತೆರಿಗೆ ಹಾಕಿಲ್ಲವೇ? ನಾನೇನು ಇವುಗಳ ಮೇಲೆ ತೆರಿಗೆ ಹಾಕಿ ಎಂದು ಹೇಳುವುದಕ್ಕೆ ಹೋಗವುದಿಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ಸರ್ಕಾರಕ್ಕೆ ಹೇಳುತ್ತಿದ್ದೇನೆ, ಈ ಸರ್ಕಾರ ಉತ್ತಮ ಆಡಳಿತ ಕೊಡಬೇಕು ಎನ್ನತಕ್ಕಂಥ ವಿಚಾರವಿದ್ದರೂ ಮುಖ್ಯ ಮಂತ್ರಿಗಳ ಹತ್ತಿರ ಅನೇಕ ಖಾತೆಗಳು ಇರುವುದರಿಂದ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತಿದೆ. 5-6 ಮಂತ್ರಿಗಳು ರಾಜೀನಾಮೆ ಕೊಟ್ಟರು. ಆ ಖಾತೆಗಳು ಯಾವ ಹತ್ತಿರ ಇವೆ? ಪ್ರಶ್ನೆಗೆ ಉತ್ತರ ಕೊಡುವುದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ:- ಆ ಖಾತೆಗಳನ್ನು ಬೇರೆ ಮಂತ್ರಿಗಳಿಗೆ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಹೌದೇ ಕೊಟ್ಟುಬಿಟ್ಟಿದ್ದಾರೆಯೇ?

ಶ್ರೀ ಎಲ್. ಆರ್. ಶಿವರಾಮೇಗೌಡ:- ಹೌದು, ಬಚ್ಚೇಗೌಡರನ್ನೇ ಕೇಳಿ. ಕಂದಾಯ ಇಲಾಖೆಯನ್ನು ಅವರೇ ಡೀಲ್ ಮಾಡುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಖಾತೆಗಳನ್ನು ಯಾರಿಗೆ ಕೊಟ್ಟಿದ್ದಾರೆ ಎನ್ನುವುದು ರೂಲಿಂಗ್ ಪಾರ್ಟಿಯಲ್ಲಿರುವವರಿಗೂ ಗೊತ್ತಿಲ್ಲ. ವಾಟಾಳ್ ನಾಗರಾಜ್ ರವರಿಗೆ ಏನು ಗೊತ್ತಿದೆ. ಅದೇ ಖಂಡಿತ, ಅದೇ ಸತ್ಯ. ಆ ಬಗ್ಗೆ ನೋಟಿಫಿಕೇಷನ್ ಆಗಿಲ್ಲ. ನೀವು ಹೇಳುವುದೇ ಸರಿ. ರಾಜ್ಯಪಾಲರಿಂದ ನೋಟಿಫಿಕೇಷನ್ ಆಗಿ ಇಂಥ ಇಲಾಖೆಯನ್ನು ಇವರಿಗೆ ಕೊಟ್ಟಿದ್ದೇವೆ ಎನ್ನುವುದು ಬಂದಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಉತ್ತರ ಕೊಡುವುದಕ್ಕಾಗಿ ಒಬ್ಬರು ರೆವಿನ್ಯೂ ನೋಡಬೇಕು, ಇನ್ನೊಬ್ಬರು ಎಕ್ಸೈಸ್ ನೋಡಬೇಕು, ಮತ್ತೊಬ್ಬರು ಕೆ. ಇ. ಬಿ. ನೋಡಬೇಕು ಹೀಗೆ ಬಿಸಿನೆಸ್ ಅಲೋಕೇಷನ್ ಆಗಿದೆಯೇ ಹೊರತಾಗಿ ಪೋರ್ಟ್‌ಪೋಲಿಯೋ ಆಲೋಕೇಷನ್ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಸಂಪೂರ್ಣವಾಗಿ ಆ ಇಲಾಖೆಯನ್ನು ವಹಿಸಿಲ್ಲ. ಆ ಇಲಾಖೆಯ ಪರವಾಗಿ ಉತ್ತರವನ್ನು ಕೊಡುವುದಕ್ಕೆ ಮಾತ್ರ ವಹಿಸಿದ್ದಾರೆ. ಏಕೆಂದರೆ ಮುಖ್ಯಮಂತ್ರಿಗಳು ಇಷ್ಟೊಂದು ಇಲಾಖೆಗಳನ್ನು ಇಟ್ಟುಕೊಂಡರೆ ಆಡಳಿತ ನಡೆಸಲು ಕಷ್ಟವಾಗುತ್ತದೆ. ಆದ್ದರಿಂದ ಎಲ್ಲಾ ಇಲಾಖೆಗಳನ್ನು ಹಂಚಬೇಕು. ಇವರು ಮಂತ್ರಿಮಂಡಲವನ್ನು ವಿಸ್ತರಣೆ ಮಾಡುತ್ತಾರೆ. ಎನ್ನುವ ಗಾಳಿ ಸುದ್ದಿ ಎಲ್ಲ ಪತ್ರಿಕೆಗಳಲ್ಲಿ ಬಂದಿದೆ. ಆದರೆ ನೀವು ಯಾವಾಗ ಮಾಡುತ್ತೀರೋ ಗೊತ್ತಿಲ್ಲ. ಹೀಗೆ ಮಾಡುವುದರಿಂದ ಎಲ್ಲೋ ಒಂದು ಕಡೆ ಹೆಪ್ಪುಗಟ್ಟಿ ನಿಂತಿರತಕ್ಕಂಥ ಅಧಿಕಾರ ಚಾಲನೆಯಾಗುತ್ತದೆ. ಆಡಳಿತಕ್ಕೆ ಅನುಕೂಲ ಆಗಬೇಕಾದರೆ ಮಂತ್ರಿಮಂಡಲವನ್ನು ವಿಸ್ತರಣೆ ಮಾಡಬೇಕು ಮತ್ತು ಹೆಚ್ಚಿನ ಇಲಾಖೆಗಳನ್ನು ಕೊಡಬೇಕು. ತಮ್ಮ ಮೂಲಕ ಕೇಳುತ್ತಿದ್ದೇನೆ, ಹಿಂದೆ ಇವರು ತಿಪ್ಪಗೊಂಡನಹಳ್ಳಿಯಲ್ಲಿ ಮಂತ್ರಿಗಳನ್ನೆಲ್ಲಾ ಕರೆಸಿ ಒಂದು ಸಭೆ ಮಾಡಿದರು. ನಾವು ಹೇಗೆ ಇರಬೇಕು, ಯಾವ ರೀತಿ ಆಡಳಿತ ಮಾಡಬೇಕು ಎಂದು. ಅದು ಅವತ್ತೇ ತಿಪ್ಪಗೊಂಡನಹಳ್ಳಿ ಕೆರೆಗೆ ಬಿದ್ದುಹೋಯಿತೇ ಅಥವಾ ಅದರ ಬಗ್ಗೆ ಏನಾದರೂ ವ್ಯವಸ್ಥೆ ಮಾಡಲಾಗಿದೆಯೇ? ಇದು ಬಹಳ ಪತ್ರಿಕೆಗಳಲ್ಲಿ ಬಂತು. ಯಾವ್ಯಾವ ರೀತಿ ಇರಬೇಕು, ಮೂರನೇ ಮಹಡಿಯಲ್ಲಿ ಮಂತ್ರಿಗಳು ಹೇಗೆ ಇರಬೇಕು, ಮಂತ್ರಿಗಳು ಯಾವ ರೀತಿ ಆಡಳಿತ ನಡೆಸಬೇಕು, ಹೀಗೆ ಪ್ರತಿಯೊಂದು ವಿಷಯವೂ ಸೇರಿದಂತೆ ತಿಪ್ಪಗೊಂಡನಹಳ್ಳಿ ಸಭೆಯಲ್ಲಿ 20 ಅಂಶಗಳ ಒಂದು ಕಾರ್ಯಕ್ರಮದ ಪಟ್ಟಿಯನ್ನು ಮಾಡಿ ಹಾಕಿದರು. ಆದರೆ ಈ ಕ್ಷಣದವರೆಗೆ ಒಂದು ಅಂಶದ ಕಾರ್ಯಕ್ರಮವೂ ಜಾರಿಯಾಗಿಲ್ಲ. ತಿಪ್ಪಗೊಂಡನಹಳ್ಳಿ ಕಾರ್ಯಕ್ರಮದ ನಿಮ್ಮ ಸೂತ್ರಗಳು ಏನಾದವು? ಇನ್ನೊಂದು 'ಕಡತ ಯಜ್ಞ' ಇದು ಏನಾಯಿತು? ಅದರ ಬಗ್ಗೆ ಏನೂ ಕಾಣಲಿಲ್ಲ. ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆ ಎಂದರೆ, ನೀವು ಮಾಡತಕ್ಕಂಥ ವ್ಯವಸ್ಥೆಯಲ್ಲಿ ಅತ್ಯಂತ ಪ್ರಾಮಾಣಿಕ ಆಡಳಿತವೇ ನೇರವಾಗಿ ಬರತಕ್ಕಂಥಾದ್ದು. ಈ ಆಡಳಿತವನ್ನು ತಾವು ಸರಿಪಡಿಸಲಿಲ್ಲ ಎಂದರೆ ಇದು ಒಳ್ಳೆಯ ರೀತಿಯಲ್ಲಿ ಹೋಗುವುದಿಲ್ಲ. ನನಗನ್ನಿಸುತ್ತದೆ, ನನಗೆ ಗೊತ್ತಿರುವ ಹಾಗೆ ನಿಮಗೆ ಈಗಂತೂ ಯಾವುದೇ ಭಯ ಇಲ್ಲ. ನಾನು ತಿಳಿದುಕೊಂಡಿರುವ ಹಾಗೆ ಈ ಸರ್ಕಾರಕ್ಕೆ ಭಯವಂತೂ ಇಲ್ಲ. ನಿಮ್ಮ ಸರ್ಕಾರ ಈಗ ಸುಭದ್ರವಾಗಿದೆ ಎಂದು ತಿಳಿದುಕೊಂಡಿದ್ದೇನೆ. ಮೊದಲು ನಿಮಗೆ ಸ್ವಲ್ಪ ಅನುಮಾನಗಳಿದ್ದವು. ಆ ಅನುಮಾನಗಳೇನೆಂದರೆ, ನಾವು ವಿಶ್ವಾಸಮತ ತೆಗೆದುಕೊಳ್ಳಬೇಕು ಎಂದು ಇದ್ದು, ಅದನ್ನು ತೆಗೆದುಕೊಂಡಿರಿ. ಮೊದಲನೆಯ ನಿಮ್ಮ ಗೆಲುವಾಗಿ 135 ಮತಗಳನ್ನು ತೆಗೆದು ಕೊಂಡಿರಿ. ಎರಡನೇ ಸಾರಿ ನಿಮಗೆ ಚುನಾವಣೆಗಳು ಆದನಂತರ ಏನಾಗುತ್ತದೋ ಏನೋ ಎನ್ನುವ ಅನುಮಾನ ನಿಮಗೆ ಬಂತು. ಚುನಾವಣೆ ಆದನಂತರ ಈ ರಾಜ್ಯದಲ್ಲಿ ಬಿ.ಜೆ.ಪಿ., ಲೋಕಶಕ್ತಿ, ಕಾಂಗ್ರೆಸ್ ಇವರೆಲ್ಲಾ ಸೇರಿದಾಗ ನಿಮಗೆ ಅಂತರ ಬಹಳ ಕಡಿಮೆಯಾಯಿತು. ಆಗಲೂ ಸಹ ನಾವು ಏನು ಹೇಳಿದೆವು ಎಂದರೆ ಈ ಚುನಾವಣೆಯ ಫಲಿತಾಂಶದ ಆಧಾರದ ಮೇಲೆ ನಮ್ಮ ಸರ್ಕಾರ ರಾಜೀನಾಮೆ ಕೊಡಬಾರದು ಎನ್ನತಕ್ಕಂಥ ಮಾತನ್ನು ನಾವು ನೇರವಾಗಿ ಹೇಳಿದೆವು. ಅಂದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ಶಾಸನಸಭೆ ವಿಸರ್ಜನೆ ಆಗಬಾರದು ಎನ್ನುವಂಥ ಮಾತನ್ನು ನಾವು ಸ್ಪಷ್ಟವಾಗಿ ಹೇಳಿದೆವು. ಆದರೆ ಇತ್ತೀಚಿಗೆ ಅಂದರೆ ಮೂರು ದಿವಸದ ಹಿಂದೆ ಕೇಂದ್ರ ಸಚಿವರಾದ ರಾಮಕೃಷ್ಣ ಹೆಗಡೆಯವರು ಏನು ಹೇಳಿದರು ಎಂದರೆ, ನನ್ನನ್ನು ಲೋಕಶಕ್ತಿ, ಬಿ.ಜೆ.ಪಿ. ಯವರು ಕರೆಯುವುದಾದರೆ ನಾನು ನೇರವಾಗಿ ಅಧಿಕಾರಕ್ಕೆ ಬರುತ್ತೇನೆ, ಮುಖ್ಯಮಂತ್ರಿಯಾಗುತ್ತೇನೆ ಎನ್ನುವ ಮಾತನ್ನು ಹೇಳಿದರು. ಇವತ್ತು ಹಾಗೂ ನಿನ್ನೆಯ ಪತ್ರಿಕೆಗಳಲ್ಲಿ ನಾನು ನೋಡಿದ ಪ್ರಕಾರ ಬಿ.ಜೆ.ಪಿ. ಯವರು ನಾವು ಸರ್ಕಾರ ಮಾಡಲು ತಯಾರಿಲ್ಲ ಎನ್ನುವುದನ್ನು

ಸ್ಪಷ್ಟವಾಗಿ ಹೇಳಿದ್ದಾರೆ. ಅಂದಾಗ ಸರ್ಕಾರ ಮಾಡತಕ್ಕಂಥ ಪ್ರಶ್ನೆ, ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿ ಆಗತಕ್ಕಂತಹ ಪ್ರಶ್ನೆ ಎಲ್ಲವೂ ಹೊರಟು ಹೋಯಿತು. ಈಗ ನಿಮ್ಮ ಸರ್ಕಾರ ಸುಭದ್ರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸುಭದ್ರವಾಗಿರತಕ್ಕಂಥ ಈ ಸರ್ಕಾರ, ಇನ್ನೂ ಒಂದು ವರ್ಷ, ಎಂಟು ತಿಂಗಳ ಅಧಿಕಾರಾವಧಿಯು ಇರತಕ್ಕಂಥ ಸರ್ಕಾರ, ಈ ರಾಜ್ಯಕ್ಕೆ ಹೊಸ ಕಾಯಕಲ್ಪವನ್ನು ಕೊಟ್ಟು ಶಕ್ತಿಯುತವಾಗಿ ರಾಜ್ಯದ ಆಡಳಿತವನ್ನು ನಡೆಸತಕ್ಕಂಥ ವಿಚಾರಕ್ಕೆ ತಾವೂ ಹೋಗಬೇಕು. ಮೊದಲನೆಯದಾಗಿ, ನಾನು ಪಕ್ಷಾತೀತವಾಗಿ ಈ ರಾಜ್ಯದ ಎಲ್ಲಾ ಶಾಸಕರ ಪರವಾಗಿ ಮಾತನಾಡುತ್ತೇನೆ, ಲೋಕಸಭೆಯ ಸದಸ್ಯರಿಗೆ ಅವರ ಕ್ಷೇತ್ರದಲ್ಲಿ ಅವರ ಸ್ವಂತ ವಿವೇಚನೆಗೆ ಬಿಟ್ಟಂತೆ ಕೆಲಸಗಳನ್ನು ಮಾಡಲು ಅವರಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಕೊಟ್ಟಿದ್ದಾರೆ. ಅದೂ ಸಹ ಒಂದು ವರ್ಷಕ್ಕೆ. ನಾನು ಸಿದ್ದರಾಮಯ್ಯನವರನ್ನು ಎರಡೂ ಕೈ ಜೋಡಿಸಿ ಎಲ್ಲಾ ಶಾಸಕರ ಪರವಾಗಿ ಕೇಳಿಕೊಳ್ಳುತ್ತೇನೆ. ಇನ್ನು ಒಂದೂವರೆ ವರ್ಷದಲ್ಲಿ ಚುನಾವಣೆ ಬರುತ್ತಿದೆ. ಆ ಚುನಾವಣೆ ತಾಲ್ಲೂಕು ಪಂಚಾಯಿತಿ ಒಂದು ಕಡೆ, ಜಿಲ್ಲಾ ಪಂಚಾಯಿತಿ ಒಂದು ಕಡೆ, ಆಡಳಿತ ವಿಕೇಂದ್ರೀಕರಣದಲ್ಲಿ ಶಾಸಕರ ಕೈ ಮತ್ತು ಬಾಯಿ ಎರಡೂ ಕಟ್ಟಿದೆ. ಅವರು ಜನಗಳಿಗೆ ಉತ್ತರ ಕೊಡಬೇಕಾದರೆ, ಒಂದು ಕೊಳವೆ ಬಾವಿ ಹಾಕಿಸಲು, ಒಂದು ರಸ್ತೆ ಮಾಡಿಸಲು, ಯಾವುದೇ ಒಂದು ಕಟ್ಟಡ ಕಟ್ಟಿಸಲು ಅಥವಾ ಜನಗಳ ಪರವಾಗಿ ಕೆಲಸ ಮಾಡುವುದಕ್ಕಾಗಿ ಕನಿಷ್ಠ ಒಂದು ಕೋಟಿ ರೂಪಾಯಿಯನ್ನಾದರೂ ಕೊಡಬೇಕು. ವಿಧಾನ ಸಭೆ, ವಿಧಾನ ಪರಿಷತ್ತು ಎಲ್ಲವನ್ನೂ ಸೇರಿಸಿದರೆ 300 ಕೋಟಿ ಆಗುವುದಿಲ್ಲ. ಮುಖ್ಯ ಮಂತ್ರಿಗಳಾದ ಜೆ. ಹೆಚ್. ಪಟೇಲರನ್ನು ಮತ್ತು ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರನ್ನು ನಾನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ಈ ಕೆಲಸವನ್ನು ಮಾಡಿದರೆ ನೀವು ಇತಿಹಾಸದಲ್ಲಿರುತ್ತೀರಿ. ಮುಂದೆ ಬರತಕ್ಕಂಥ ಶಾಸನಸಭೆಗಳಲ್ಲಿ ಹಾಗೂ ಇತಿಹಾಸ ಇರುವವರೆಗೂ ನೆನಪಿನಲ್ಲಿರುತ್ತೀರಿ. ಶಾಸಕರುಗಳ ವಿವೇಚನೆಗೆ ಬಿಟ್ಟಂತೆ ಒಂದು ಕೋಟಿ ರೂಪಾಯಿಗಳನ್ನು ಅವರ ಕ್ಷೇತ್ರದಲ್ಲಿ ಅವರು ಕೇಳಿದ ಕೆಲಸವನ್ನು ಮಾಡುವುದಕ್ಕೆ ಬಜೆಟ್‌ನಲ್ಲಿ ಒದಗಿಸಿದ್ದಾರೆ ಎನ್ನತಕ್ಕಂಥ ಕೀರ್ತಿ ಶತಶತಮಾನಗಳ ಕಾಲ ಉಳಿಯುತ್ತದೆ. ದಯಮಾಡಿ ನೀವು ಆ ಕೆಲಸವನ್ನು ಮಾಡಿ. ಚುನಾವಣೆಗೆ ಹೋಗತಕ್ಕಂಥ ಶಾಸಕರಿಗೆ ಅದೊಂದು ಊರುಗೋಲಾಗಿರುತ್ತದೆ ಎಂದು ನನಗನ್ನಿಸುತ್ತದೆ. ಆ ಕೆಲಸವನ್ನು ತಾವು ಮಾಡಬೇಕು ಎಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಎರಡನೆಯದಾಗಿ, ಜಿಲ್ಲೆಗಳ ವಿಂಗಡನೆ ಬಗ್ಗೆ ಹೇಳುವುದಾದರೆ, ಹೊಸ ಜಿಲ್ಲೆಗಳನ್ನು ಮಾಡಿದ್ದನ್ನು ನಾನು ಒಂದಲ್ಲ ನೂರು ಬಾರಿ ಮುಕ್ತಕಂಠದಿಂದ ಹೊಗಳುತ್ತೇನೆ. ಜೆ. ಹೆಚ್. ಪಟೇಲರು ಇಲ್ಲದಿದ್ದರೆ ಶತಮಾನಗಳಾದರೂ ಆ ಜಿಲ್ಲೆಗಳು ಆಗುತ್ತಿರಲಿಲ್ಲ. ಇನ್ನು ಉಳಿದಿರತಕ್ಕಂಥ ಜಿಲ್ಲೆಗಳನ್ನು ಮಾಡುವ ವಿಚಾರ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಮಾತೆತ್ತಿದರೆ ಸಾಕು, ನಮ್ಮ ವಿರೋಧ ಪಕ್ಷದ ನಾಯಕರು ನಿಮ್ಮ ಕ್ಷೇತ್ರವನ್ನು ಜಿಲ್ಲೆಯನ್ನಾಗಿ ಮಾಡಿಸಿಕೊಂಡಿರಿ ಎಂದು ನನ್ನನ್ನು ಹಗಲೂ ರಾತ್ರಿ ಕಾಡುತ್ತಾರೆ, ಬೇಡುತ್ತಾರೆ. ಅವರಿಗೆ ಗೊತ್ತಿದೆ, ಯಾದಗಿರಿ ಏಕೆ ಜಿಲ್ಲೆಯಾಗಬೇಕು ಎಂದರೆ, ಎಲ್ಲ ಸಮಿತಿಗಳು ಹಾಗೆ ವರದಿಕೊಟ್ಟಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದರಲ್ಲಿ ಕಾಡುವ ಬೇಡುವ ಪ್ರಶ್ನೆ ಇಲ್ಲ. ಸಮಿತಿಗಳ ವರದಿ ಪ್ರಕಾರ ನಮಗೆ ಹಕ್ಕು ಇದೆ. ಅವರಿಗೆ ಧೈರ್ಯ ಇದೆ ಎಂದು ನೀವು ಹೇಳಿದಿರಿ. ಧೈರ್ಯ ಇದ್ದುದರಿಂದಲೇ 7-8 ಜಿಲ್ಲೆಗಳನ್ನು ಮಾಡಿದರು. ಆದರೆ ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಏಕೆ ಧೈರ್ಯವಿಲ್ಲ? ಯಾವುದಾದರೂ ಒಂದು ವರದಿ ಸರ್ಕಾರ ವಿರುದ್ಧವಾಗಿದ್ದರೆ ಅಥವಾ ಯಾವುದಾದರೂ

ಒಂದು ಕಮೀಷನ್ ಸರ್ಕಾರದ ವಿರುದ್ಧವಾಗಿದ್ದರೆ ಬೇಡ. ಮೊನ್ನೆ ಅಫಿಷಿಯಲ್ ರಿಪೋರ್ಟನ್ನೂ ಕೂಡ ತರಿಸಿಕೊಂಡಿದ್ದಾರೆ. ಅಫಿಷಿಯಲ್ ರಿಪೋರ್ಟ್ ಅನ್ನು ಇಟ್ಟುಕೊಂಡು, ಅದು ಗದ್ದೀಗೌಡರದು ಇರಬಹುದು, ವಾಸುದೇವ್ ಸಮಿತಿ ಇರಬಹುದು ಅಥವಾ ಉಂಡೇಕಾರ್ ಸಮಿತಿ ಇರಬಹುದು, ಯಾವ ಸಮಿತಿಯ ವರದಿ ತೆಗೆದುಕೊಂಡರೂ ಅದು ಯಾದಗಿರಿ ಪರವಾಗಿಯೇ ಇದೆ. ಆದರೆ ಮುಖ್ಯ ಮಂತ್ರಿಗಳಿಗೆ ಚಾಮರಾಜನಗರವನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಧೈರ್ಯ ಬಂತು. ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದಕ್ಕೆ ಏಕೆ ಧೈರ್ಯ ಬರಲಿಲ್ಲ ಎಂದು ನಾನು ಕೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಅದನ್ನು ಜಿಲ್ಲೆಯನ್ನಾಗಿ ಮಾಡಬೇಕು ಎಂದು ನಾನು ಹೇಳುತ್ತಿದ್ದೇನೆ. ಅದರ ಬಗ್ಗೆ ರಾಜಕಾರಣ ಬೇಡ. ಸಮಿತಿಯ ವರದಿಗಳು ಏನಿವೆ, ಮೂರು ಸಮಿತಿಯ ವರದಿಗಳು ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು ಎನ್ನತಕ್ಕಂಥಾದ್ದನ್ನು ಸ್ಪಷ್ಟ ಪಡಿಸಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನನಗೊಂದು ಸಂಶಯ ಬರುತ್ತಿದೆ, ನೀವು ಸರ್ಕಾರವನ್ನು ಭದ್ರವಾಗಿ ಹಿಡಿದುಕೊಂಡಿದ್ದರಿಂದ ಚಾಮರಾಜನಗರವನ್ನು ಜಿಲ್ಲೆಯಾನ್ನಾಗಿ ಬೇಗನೆ ಮಾಡಿದರು. ನಾವು ವಿರೋಧ ಪಕ್ಷದಲ್ಲಿರುವುದರಿಂದ ಬಹುಶ: ನಮ್ಮನ್ನು ಕಡೆಗಾಣಿಸಿರಬೇಕು ಎಂದು ನನಗೆ ಸಂಶಯ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ಕೇಳಿ, ಹಗಲೂ ರಾತ್ರಿ ಸರ್ಕಾರವನ್ನು ಹಿಡಿದುಕೊಂಡು ಅವರ ಸರ್ಕಾರವನ್ನು ಉಳಿಸಿದವರು ಇವರೇ. ನನ್ನೊಬ್ಬನಿಂದ ಈ ಸರ್ಕಾರ ಉಳಿದಿಲ್ಲ. ಕಾಂಗ್ರೆಸ್‌ನಿಂದ ನಿರಂತರವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಳಿದಿದ್ದವು. ಆದರೆ ಸುಮ್ಮನೆ ನನ್ನನ್ನು ಹಿಡಿದುಕೊಂಡು, ಹೋಗಿ ಬಂದು ಯಾರೋ ಏನೋ ಮಾಡಿದರಂತೆ ಎನ್ನುವ ಹಾಗೆ ಹೇಳುತ್ತಿದ್ದಾರೆ. ಇದು ಅರ್ಥವಿಲ್ಲದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಪದೇ ಪದೇ ಹೇಳುತ್ತಿದ್ದೀರಿ, ನಾನು ಸರ್ಕಾರವನ್ನು ಬೀಳಿಸಲು ಬಿಡುವುದಿಲ್ಲ, ಭದ್ರವಾಗಿ ಹಿಡಿದುಕೊಂಡಿದ್ದೇನೆ ಎಂದು. ನೀವೇ ಹೇಳುತ್ತಿದ್ದೀರಿ ಅದನ್ನು, ನಾವು ಹೇಳಿದೆವೇ?

ಶ್ರೀ ವಾಟಾಳ್ ನಾಗರಾಜ್ :- ಮಾರಿ ಕಣ್ಣು ಹೊತನ ಮೇಲೆ ಎನ್ನುವ ಹಾಗೆ ಯಾವಾಗಲೂ ಇವರ ಕಣ್ಣು ನನ್ನ ಮೇಲೇ. ನಾನು ಇವರಿಗೆ ಎಷ್ಟು ಬೆಂಬಲ ಕೊಟ್ಟರೂ ವಿರೋಧ ಪಕ್ಷದ ನಾಯಕರಿಗೆ ನನ್ನ ಮೇಲೆ ಇನ್ನೂ ಅನುಮಾನಗಳಿವೆ. ಇದು ಒಳ್ಳೆಯ ನೀತಿಯಲ್ಲ ಎನ್ನತಕ್ಕಂಥ ಮಾತನ್ನು ತಮಗೆ ಹೇಳುತ್ತೇನೆ. ಜಿಲ್ಲೆಗಳ ಪುನರ್ ವಿಂಗಡನೆ ಏನು ಮಾಡಿದರು, ಅದೇ ದೃಷ್ಟಿಯಲ್ಲಿ ಇವತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಮತ್ತು ಕೊಡಗಿನ ಪ್ರದೇಶದಲ್ಲಿ ಒಂದು ರೀತಿಯ ಅಸಮಾಧಾನ ತಾಂಡವವಾಡುತ್ತಿದೆ. ಉತ್ತರ ಕರ್ನಾಟಕ ಪ್ರದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಆಗಿಲ್ಲ, ಕೇಂದ್ರ ಸರ್ಕಾರದಿಂದ ಆಗಬೇಕಾದಂತಹ ರೈಲ್ವೆ ಬೇಡಿಕೆಯೂ ಈಡೇರಿಲ್ಲ, ಅನೇಕ ಪ್ರಮುಖವಾದಂತಹ ಕೆಲಸ ಕಾರ್ಯಗಳು ಆಗಿಲ್ಲದೇ ಇರತಕ್ಕಂತಹ ಮಾತಿನ ಕೂಗು ಎಲ್ಲಿಗೆ ಹೋಗುತ್ತಿದೆ ಎಂದರೆ ಕರ್ನಾಟಕ ಏಕೀಕರಣಕ್ಕೆ ವಿರದ್ದುವಾದಂತಹ ಕೂಗು ಏಳುತ್ತದೆಂದು ನಾನು ತಮಗೆ ಹೇಳುತ್ತಿದ್ದೇನೆ. ಅದಕ್ಕಾಗಿ ಉತ್ತರ ಕರ್ನಾಟಕದ ಸಮರ್ಪಕ ಅಭಿವೃದ್ಧಿಯ ಪರಿಶೀಲನೆಗಾಗಿ ಒಂದು

ಏಕ ಸದಸ್ಯ ಆಯೋಗವನ್ನು ರಚನೆ ಮಾಡಿ ಏನೇನು ಕುಂಠಿತವಾಗಿದೆ ಏನೇನು ಮಾಡಬೇಕಾಗಿದೆ ಎನ್ನುವುದನ್ನು ವರದಿ ತರಿಸಿಕೊಂಡು, ಆ ವರದಿಯ ಆಧಾರದ ಮೇಲೆ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇನ್ನು ಕೊಡಗು ಜಿಲ್ಲೆಯ ಬಗ್ಗೆಯೂ ತಮಗೆ ಏನು ಹೇಳುತ್ತಿದ್ದೇನೆಂದರೆ ಕೊಡಗು ಪ್ರತ್ಯೇಕ ರಾಜ್ಯವಾಗಬೇಕೆಂದು ಹೇಳತಕ್ಕಂಥದ್ದು ಏನಿದೆ ಅದಕ್ಕೆ ನಮ್ಮ ಬೆಂಬಲ ಇಲ್ಲ. ಆದರೆ ಅವರ ಕೂಗು ಏನಿದೆ, ಆ ಕೂಗಿನ ನೋವಿನ ಹಿಂದೆ ಏನಿದೆ ಎಂದು ಹೇಳಿದರೆ ಪ್ರಮಾಣಿಕವಾಗಿ ಆ ನೋವಿನ ಹಿಂದೆ ಬಹಳ ನೋವು ಇದೆ. ಆದ್ದರಿಂದ, ಕೊಡಗು ಜಿಲ್ಲೆಯ ಸಮರ್ಪಕ ಅಭಿವೃದ್ಧಿಗೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಪಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

3. ಪ್ರಕಟಣೆ

ಉಪಾಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ 25ನೇ ಮಾರ್ಚ್ 1998 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಯಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 1997.

2. ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕ, 1997.

ಈ ಸಭೆಯನ್ನು ಮುಂದೂಡಿ ಮತ್ತೆ 2.30ಕ್ಕೆ ಸಮಾವೇಶಗೊಳ್ಳುವುದು.

(ಸಭೆಯು ಮಧ್ಯಾಹ್ನ 1.32 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ಮಧ್ಯಾಹ್ನ 2.30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮತ್ತೆ 2 ಗಂಟೆ 40 ನಿಮಿಷಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ರವರು ಪೀಠದಲ್ಲಿ ಉಪಸ್ಥಿತರಿದ್ದರು)

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಡಿ,

ಅಧ್ಯಕ್ಷರು :- ದಯಮಾಡಿ ಸಹಕರಿಸಬೇಕು. ಉತ್ತರವನ್ನು ಪ್ರಾರಂಭ ಮಾಡಿಸುತ್ತೇನೆ. ಇದಕ್ಕಾಗಿಯೇ ಪ್ರಶ್ನೋತ್ತರವನ್ನೂ ಮುಂದಕ್ಕೆ ಹಾಕಿದ್ದೇನೆ. ನಿನ್ನೆ, ಮೊನ್ನೆ ಯಾರೂ ಮಾತನಾಡಲಿಲ್ಲ. ಕ್ಲಾರಿಫಿಕೇಷನ್ ಕೇಳುವಾಗ ಮಾತನಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ನನಗೆ 10 ನಿಮಿಷಗಳ ಕಾಲ ಅವಕಾಶ ಕೊಡಿ....

ಅಧ್ಯಕ್ಷರು :- ಆಯಿತು. 10 ನಿಮಿಷದಲ್ಲಿ ಮಾತನಾಡಿ ಮುಗಿಸಿ. 3 ಗಂಟೆಗೆ ಉತ್ತರವನ್ನು ಪ್ರಾರಂಭ ಮಾಡಿಸೋಣ.

4. 1998-99ನೇ ಸಾಲಿನ ಆಯವ್ಯಯ ಮೇಲೆ ಚರ್ಚೆ (ಮುಂದುವರೆದದ್ದು)

★ ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ) :- ಸನ್ಮಾನ್ಯ ಅಧ್ಯಕ್ಷರೆ, ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾಲ್ಕನೆಯ ಆಯವ್ಯಯವನ್ನು ಮಂಡಿಸಿದ್ದಾರೆ. ಬಹಳ ಜನ, ಬೆಳಕು ಚೆಲ್ಲುವಂತ ವಿಚಾರವನ್ನು ಹೇಳಿದ್ದಾರೆ. ಅದರಲ್ಲಿ ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಮತ್ತು ನೀರು ಸರಬರಾಜು ಬಗ್ಗೆ ಸುಮಾರು 200 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರ ಪ್ರತಿ ವರ್ಷ ಕುಡಿಯುವ ನೀರಿನ ಯೋಜನೆಗೆ ಕೊಡುತ್ತಿದ್ದಾರೆ. ಮಾನ್ಯ ಹಣಕಾಸಿನ ಸಚಿವರೆ, ಇವತ್ತು ಕರ್ನಾಟಕದಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಪೂರ್ಣ ಮಾಡಬೇಕಾದರೆ ಸುಮಾರು ಎರಡು ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ. ಇವತ್ತಿನ ದಿವಸದಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತಿರುವುದಿಂದ ಆಗ್‌ಮೆಂಟೇಶನ್‌ಗೆ 1,000 ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ ಇದಕ್ಕೆ ತಾವು ಇನ್ನೂರು ಕೋಟಿ ರೂಪಾಯಿ ಕೊಟ್ಟರೆ, ಇನ್ನು ಕೊನೆಯ ಭಾಗ ತಲುಪಬೇಕಾದರೆ ಮತ್ತು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಇನ್ನು 15 ವರ್ಷಗಳ ಕಾಲ ಬೇಕಾಗುತ್ತದೆ. ಇವತ್ತು ಕುಡಿಯುವ ನೀರಿನ ಯೋಜನೆಗೆ ಕನಿಷ್ಟ 500 ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ, ಡೆನಿಡಾ ಸ್ಕೀಂ, ವಿಶ್ವಬ್ಯಾಂಕ್, ಈ ಎಲ್ಲವೂ ಹಣಕಾಸಿನ ನೆರವನ್ನು ಕೊಡುತ್ತಿದ್ದರೂ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿಲ್ಲ. ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ತಾವು ಯೋಚನೆ ಮಾಡಬೇಕು. ಇವತ್ತು ಸ್ವಸ್ತಿ ಗ್ರಾಮ ಎಂದು ಹೊಸ ಯೋಜನೆಯನ್ನು ಮಾಡಿದ್ದೀರಿ, ಸ್ವಸ್ತಿ ಗ್ರಾಮ ಯೋಜನೆಯನ್ನು ನೀವು ಸ್ವಸ್ತಿ ಪಂಚಾಯತ್ ಎಂದು ಮಾಡಬೇಕಾಗಿತ್ತು. ಸ್ವಸ್ತಿ ಗ್ರಾಮ ಯೋಜನೆಯನ್ನು ಈಗಿನಿಂದ ಅನುಷ್ಠಾನಕ್ಕೆ ತರಲು ಪ್ರಯತ್ನ ಪಟ್ಟರೆ ಇಡೀ ಕರ್ನಾಟಕದಲ್ಲಿನ ಹಳ್ಳಿಗಳು ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಆಗಬೇಕಾದರೆ 370 ವರ್ಷಗಳು ಬೇಕು. ಅಂದರೆ ಕೊನೆ ಗ್ರಾಮವನ್ನು ತಲುಪಬೇಕಾದರೆ 370 ವರ್ಷ ಬೇಕಾಗುತ್ತದೆ. ಆದ್ದರಿಂದ ಕನಿಷ್ಠ ಸ್ವಸ್ತಿ ಪಂಚಾಯಿತಿ ಎಂದು ಮಾಡಿದರೆ, ಪ್ರತಿ ವರ್ಷ ಒಂದು ಕ್ಷೇತ್ರದಲ್ಲಿ ಒಂದು ಪಂಚಾಯಿತಿಯನ್ನು ಪೂರ್ಣ ಪ್ರಮಾಣದ ಅಭಿವೃದ್ಧಿ ಮಾಡುವುದಾದರೆ ಕರ್ನಾಟಕದ ಹಳ್ಳಿಗಳ ಸಮಸ್ಯೆಯನ್ನು ಇನ್ನು 30 ವರ್ಷಗಳಲ್ಲಿ ಬಗೆಹರಿಸಬಹುದು. ರೈತರಿಗೆ ಈ ಬಜೆಟ್‌ನಲ್ಲಿ ಸುಮಾರು 240 ರಿಂದ 250 ಕೋಟಿ ರೂಪಾಯಿಗಳಷ್ಟು ಪ್ರಾವಿಜನ್ ಮಾಡಿದ್ದೀರಿ. ಕೃಷಿಗೆ ಸಂಬಂಧಪಟ್ಟ ಹಾಗೆ ಇವತ್ತು ಮೀನುಗಾರಿಕೆ ಮತ್ತು ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳು ಬರುತ್ತವೆ. ಆದರೆ ಕೃಷಿ ಇಲಾಖೆಗೆ ತಾವು ಯಾವುದೇ ಹೊಸ ಚಿಂತನೆಯನ್ನು ಮಾಡಿಲ್ಲ. ಕೃಷಿ ಕ್ಷೇತ್ರದಲ್ಲಿ ಆಹಾರ ಪದಾರ್ಥಗಳ ಬೆಲೆ ಕುಸಿದಾಗ, ಕನಿಷ್ಟ ಅದಕ್ಕೆ ಬೆಂಬಲ ಬೆಲೆ ಕೊಡತಕ್ಕಂಥದ್ದಕ್ಕೆ ಕನಿಷ್ಠ ಪಕ್ಷ 100 ಕೋಟಿ ರೂಪಾಯಿ ಹಣವನ್ನು ಬಜೆಟ್‌ನಲ್ಲಿ ಇಡಬೇಕು. ಏಕೆಂದರೆ, ಕೈಗಾರಿಕಾ ಬಂಡವಾಳ ಮಾತ್ರ ಈ ಬಜೆಟ್ ಪುಸ್ತಕದಲ್ಲಿ ತೋರಿಸಿದ್ದೀರಿ ಆದರೆ ಕೃಷಿ ಬಂಡವಾಳದ ಬಗ್ಗೆ ಏನು ಹೇಳಿಲ್ಲ. ಇವತ್ತು ಕೃಷಿಕರು ಏನು ಬಂಡವಾಳವನ್ನು ಹಾಕಿಲ್ಲವೆ? ತಾವು ಕೃಷಿ ಬಂಡವಾಳದ ಬಗ್ಗೆ ಯೋಚನೆ ಮಾಡಬೇಕು. ಇವತ್ತು ಬರೀ ಪಂಪ್‌ಸೆಟ್‌ಗಳಿಗೆ ಹಾಕಿರುವ ಬಂಡವಾಳ 50 ಸಾವಿರ ಕೋಟಿ ರೂಪಾಯಿ, ಸ್ವಾತಂತ್ರ್ಯ ಬಂದ ಮೇಲೆ ದನಗಳ ಮೇಲೆ ಹಾಕಿರುವ ಬಂಡವಾಳ ಸುಮಾರು 50 ಸಾವಿರ ಕೋಟಿ ರೂಪಾಯಿ ಮತ್ತು ಒಂದು ವರ್ಷಕ್ಕೆ ದನಗಳಿಗೆ 36 ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತವೆ. ಮತ್ತು ಇದುವರೆಗೂ ಲಾಳ ಕಟ್ಟಿಸುವುದಕ್ಕೆ 20 ಸಾವಿರ ಕೋಟಿ ರೂಪಾಯಿ, ನೇಗಿಲುಗಳಿಗೆ ಹಾಕಿರುವ ಬಂಡವಾಳ 1,000 ಕೋಟಿ,

ನೇಗಿಲನ್ನು ನೋಡಿ ಕೊಳ್ಳುವುದಕ್ಕೆ ಖರ್ಚು ಆಗುವುದು ಒಂದು ವರ್ಷಕ್ಕೆ 200 ಕೋಟಿ ಮತ್ತು ದನಗಳಿಗೆ ಹಾಕಿರುವ ಮೂಗ್ದಾರಕ್ಕೆ ಪ್ರತಿ ವರ್ಷ 25 ಕೋಟಿ ರುಪಾಯಿಗಳಾಗುತ್ತದೆ. ಮತ್ತು ಟೈರ್ ಗಾಡಿಗೆ 15 ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಕೃಷಿಗೆ ಬಂಡವಾಳವನ್ನು ತಾವು ಬಜೆಟ್‌ನಲ್ಲಿ ತೋರಿಸಿಲ್ಲ. ಇವತ್ತು ಹೊರಗಡೆಯಿಂದ ಕೈಗಾರಿಕೆಗಳಿಗೆ ಇಷ್ಟು ಬಂಡವಾಳ ಹಾಕಿದ್ದೇವೆಂದು ಹೇಳುತ್ತೀರಿ. ಬೇಸಾಯ ಕ್ಷೇತ್ರಕ್ಕೆ ಒಟ್ಟು ಲೆಕ್ಕದ ಪ್ರಕಾರ 10 ಲಕ್ಷ ಕೋಟಿ ರೂಪಾಯಿ ಖರ್ಚಾಗುತ್ತದೆ. ಇವತ್ತು ಇಡೀ ಸರ್ಕಾರ ಕೃಷಿ ಕ್ಷೇತ್ರದ ಮೇಲೆ ಮತ್ತು ವ್ಯಾಪಾರ, ಉದ್ಯೋಗ ಕ್ಷೇತ್ರ, ಸಾರಿಗೆ ಕ್ಷೇತ್ರಗಳ ಮೇಲೆ ನಿಂತಿದೆ. ಆದ್ದರಿಂದ, ತಾವು ದಯವಿಟ್ಟು ವಿಶೇಷವಾಗಿ ರೈತರು ಬೆಳೆದಂಥ ಬೆಳೆಗಳಿಗೆ ಬೆಲೆಗಳು ಕುಸಿದಾಗ ತಕ್ಷಣ ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕೆ 100 ಕೋಟಿ ರೂಪಾಯಿಗಳ ಬಂಡವಾಳವನ್ನಾದರು ಇಡಬೇಕು. ನಿನ್ನೆ ದಿವಸ ಬಯಲು ಸೀಮೆ ಅಭಿವೃದ್ಧಿಗೆ ಇನ್ನು 7 ಕೋಟಿ ರೂಪಾಯಿಗಳಷ್ಟು ಹಣವನ್ನು ಬಾಕಿ ಕೊಟ್ಟಿಲ್ಲ ಮತ್ತು ಈ ವರ್ಷ ಕೇವಲ 17 ಕೋಟಿ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆಂದು ಪ್ರಸ್ತಾಪ ಮಾಡಲಾಗಿದೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಮೂರನೆ ಎರಡು ಭಾಗ ಬಯಲು ಸೀಮೆ ಪ್ರದೇಶ ಇದೆ, ಆದ್ದರಿಂದ ಈ ಪ್ರದೇಶಕ್ಕೆ ಬಹಳ ದೊಡ್ಡ ಮೊತ್ತವನ್ನು ಕೊಡಬೇಕು. ತೋಟಗಾರಿಕೆ ಮತ್ತು ಸಣ್ಣ ನೀರಾವರಿ ಇಲಾಖೆಗಳೆರಡು ಜಂಟಿಯಾಗಿ ಕೆಲಸ ಮಾಡಬೇಕು. ಸಣ್ಣ ನೀರಾವರಿ ಇಲಾಖೆಯವರು 36, 170 ಕೆರೆಗಳಿವೆ, ಈ ಕೆರೆಗಳ ಅಭಿವೃದ್ಧಿಗೋಸ್ಕರ 125 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಇವತ್ತು ಬಯಲು ಸೀಮೆಯಲ್ಲಿ ಯಾವ ಕೆಲಸವನ್ನು ಮಾಡಿದ್ದೀರಿ ತೋರಿಸಿ? ಅದಕ್ಕೆ ಇದನ್ನು ಮೈನರ್ ಇರಿಗೇಶನ್ ಬದಲು ಮೈನಸ್ ಇರಿಗೇಶನ್ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಮೈನರ್ ಇರಿಗೇಶನ್ ತಾವು ಹೆಚ್ಚು ಹಣವನ್ನು ಕೊಡಬೇಕು ಮತ್ತು ತೋಟಗಾರಿಕೆ ಇಲಾಖೆಯವರು ಇವರ ಜೊತೆ ಸೇರಿಕೊಂಡು ಎಲ್ಲಾ ಗಿಡಗಳನ್ನು ನೆಡತಕ್ಕಂಥ ಕೆಲಸವನ್ನು ಮಾಡಿಸಬೇಕು. ಮತ್ತು ವಿಶೇಷವಾಗಿ ಪ್ರತಿ ವರ್ಷ ಒಂದು ಕೋಟಿ ಸಸಿಗಳನ್ನು ಉಚಿತವಾಗಿ ಕೊಡುವಂತೆ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಳ್ಳಬೇಕು. ಬಯಲು ಸೀಮೆ ಅಭಿವೃದ್ಧಿಗೆ ಸರ್ಕಾರ ಕೊಟ್ಟಿರುವ ದುಡ್ಡನ್ನು ಕೊಡಿ ಎಂದು ಅಲ್ಲ, ವಿಶೇಷ ಅನುದಾನವನ್ನು ಮಾಡಿ ಕರ್ನಾಟಕದಲ್ಲಿ ಮೂರನೆಯ ಎರಡು ಭಾಗ ಮಳೆ ಆಧಾರಿತ ಪ್ರದೇಶವಾಗಿರುವುದರಿಂದ ತಾವು ಹೆಚ್ಚು ಒತ್ತು ಕೊಡತಕ್ಕಂಥ ಕೆಲಸವನ್ನು ಮಾಡಬೇಕು.

ಇನ್ನು ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುವುದಾದರೆ, ಸರ್ಕಾರ ಇವತ್ತು 11 ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಲು ಹೊರಟಿದ್ದೀರಿ. ಈಗ ಇರತಕ್ಕಂಥ ಖೋಡೆಸ್ ಕಾರ್ಖಾನೆ ಇನ್ನೂ ಪ್ರಾರಂಭ ಆಗಿಲ್ಲ ಮತ್ತು ಗಂಗಾವತಿ ಕಾರ್ಖಾನೆಯನ್ನು ಮುಚ್ಚಿಸಿ ಲಿಕ್ವಿಡೇಶನ್‌ಗೆ ಬರೆದಿದ್ದೀರಿ ಮತ್ತು ದೇವಿ ಸಕ್ಕರೆ ಕಾರ್ಖಾನೆಯಲ್ಲಿ ದಿನನಿತ್ಯ ಚಳುವಳಿ ನಡೆಯುತ್ತಿದ್ದರು ಸರ್ಕಾರ ಯಾವುದೇ ಗಮನ ಹರಿಸಿಲ್ಲ. ಈಗ ಇರತಕ್ಕಂಥ ಹಾಲಿ ಕಬ್ಬು ಹಳೇ ಕಾರ್ಖಾನೆಗಳಿಗೆ ಸಾಲುತ್ತಿಲ್ಲ, ಆದ್ದರಿಂದ ಹೊಸ ಕಾರ್ಖಾನೆಗಳನ್ನು ತೆಗೆದು ಹಳೇ ಕಾರ್ಖಾನೆಗಳು ಮುಚ್ಚುವಂತೆ ಆಗಬಾರದು. ಇವತ್ತು ನಾವು ಸುಮಾರು 3 ಲಕ್ಷದ 20 ಸಾವಿರ ಟನ್ ಮಲ್ಯಾಸಸ್‌ನ್ನು ಉತ್ಪಾದನೆ ಮಾಡುತ್ತಿದ್ದೇವೆ. ಮತ್ತು ಸುಮಾರು 7 ಕೋಟಿ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಬೇಕಾಗುತ್ತದೆ. ಇವತ್ತು ಹೊರಗಡೆಯಿಂದ ಎರಡು ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ತರಿಸಿಕೊಳ್ಳುತ್ತಿದ್ದೀರಿ, ಆದರೆ, ನಮ್ಮಲ್ಲಿಯೇ ತಯಾರಾದ ರೆಕ್ಟಿಫೈಡ್ ಸ್ಪಿರಿಟ್‌ಗೆ ತಾವು 4.40 ಪೈಸೆ ತೆರಿಗೆಯನ್ನು ಮತ್ತು ಹೊರಗಡೆಯಿಂದ ಬರುವ ರೆಕ್ಟಿಫೈಡ್ ಸ್ಪಿರಿಟ್‌ಗೆ ಒಂದು ರೂಪಾಯಿ ತೆರಿಗೆಯನ್ನು

ಹಾಕುತ್ತಿದ್ದೀರಿ. ಆದ್ದರಿಂದ ನಮ್ಮಲ್ಲಿಯೇ ರೆಕ್ಟಿಫೈಡ್ ಸ್ಪಿರಿಟ್‌ನ್ನು ತಯಾರು ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಹೊರಗಡೆಯಿಂದ ಬರುವುದರಿಂದ ತೆರಿಗೆ ಕಡಿಮೆ ಆಗುತ್ತದೆ ಮತ್ತು ನಮ್ಮಲ್ಲಿಯೇ ಉತ್ಪಾದನೆ ಜಾಸ್ತಿ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚು ಹಣ ಬರತಕ್ಕಂಥ ವ್ಯವಸ್ಥೆ ಆಗುತ್ತದೆ. ಆದ್ದರಿಂದ ಸಕ್ಕರೆ ಕಾರ್ಖಾನೆಗಳು ಪೂರ್ಣ ಸ್ಥಿತಿವಂತವಾಗಿ ಕೆಲಸ ಮಾಡುವಂತಾಗಬೇಕು. ಹೊಸ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವ ಕೆಲಸವನ್ನು ಬಿಟ್ಟು, ಈಗ ಇರತಕ್ಕಂಥ ಕಾರ್ಖಾನೆಗಳನ್ನು ಅಭಿವೃದ್ಧಿ ಮಾಡಿ ಅದರಲ್ಲಿಯೇ ಹೆಚ್ಚು ಕಬ್ಬನ್ನು ಅರೆಯುವಂತಹ ಸಾಮರ್ಥ್ಯವನ್ನು ಮಾಡಬೇಕು. ನೀರಾವರಿ ಬಗ್ಗೆ ಹೇಳುವುದಾದರೆ, ಕೃಷ್ಣ ಮೇಲ್ದಂಡೆ ಕೆಲಸವನ್ನು ಮಾಡುವುದಕ್ಕೋಸ್ಕರ ಕೇಂದ್ರ ಸರ್ಕಾರದಿಂದ ಒಂದು ಯೋಜನೆ ಇದೆ. ಅದು ಏನೆಂದರೆ ಕೇಂದ್ರ ಸರ್ಕಾರದಲ್ಲಿ ತ್ವರಿತಗತವಾಗಿ ಕಾರ್ಯಕ್ರಮ ಇಲ್ಲದೆ ಇರತಕ್ಕಂಥ ನೀರಾವರಿ ಯೋಜನೆಗೆ ರಾಜ್ಯ ಸರ್ಕಾರ 50 ಪರ್ಸೆಂಟ್ ಕೊಟ್ಟರೆ, ಕೇಂದ್ರ ಸರ್ಕಾರ 50 ಪರ್ಸೆಂಟ್ ಕೊಡುತ್ತದೆ. ಕೃಷ್ಣ ಯೋಜನೆಯನ್ನು 2,000 ವರ್ಷದೊಳಗೆ ಮುಗಿಸಬೇಕು, ಆದ್ದರಿಂದ ನಾವು 50 ಪರ್ಸೆಂಟ್ ಹಣವನ್ನು ಕೊಟ್ಟರೆ ಕೇಂದ್ರ ಸರ್ಕಾರದವರು ಹೆಚ್ಚು 50 ಪರ್ಸೆಂಟ್ ಹಣವನ್ನು ಕೊಡುತ್ತಾರೆ, ಸರ್ಕಾರ ಇದರ ಬಗ್ಗೆ ದಯವಿಟ್ಟು ವಿಚಾರಿಸಬೇಕು. ಸನ್ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದಿಂದ ಇಷ್ಟು ಪರ್ಸೆಂಟ್ ಹಣವನ್ನು ಕೊಡುತ್ತೇವೆಂದು ಹೇಳಿದ್ದರು. ಮಾನ್ಯ ಸಿದ್ದರಾಮಯ್ಯನವರೆ ಬೇರೆ ಯಾವ ರೀತಿ ಯೋಜನೆ ಇದೆ ನೀವೆ ಹೇಳಿ.

ಶ್ರೀ ಸಿದ್ಧರಾಮಯ್ಯ (ಹಣಕಾಸು ಸಚಿವರು):- 1996-97 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದವರು ಆಕ್ಸಿಲ ರೇಟೆಡ್ ಇರಿಗೇಶನ್ ಪ್ರಾಜೆಕ್ಟ್ ಎಂದು ಮಾಡಿ 144 ಕೋಟಿ ರೂಪಾಯಿಗಳನ್ನು ಮತ್ತು ಈ ವರ್ಷ 170 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ ಅವರು ಕೊಟ್ಟಿರುವ ಹಣದಷ್ಟು ನಾವು ಹಾಕಬೇಕಾಗುತ್ತದೆ. ಮತ್ತು ಎಷ್ಟು ಕೊಡಬೇಕೆಂದು ಕೇಂದ್ರ ಸರ್ಕಾರದವರೇ ನಿಗದಿ ಮಾಡುತ್ತಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ:- ಕಾವೇರಿ ಬೇಸಿನ್‌ನನ್ನು ಮಾಡರ್ನೈಜೇಷನ್ ಮಾಡಿದ್ದಾರೆ, ಆದರೆ ಇಲ್ಲಿ ಕಂಟ್ರಾಕ್ಟರಗಳು 3 ತಿಂಗಳು ಕೆಲಸ ಮಾಡಿದ್ದಾರೆ, ಆಧುನೀಕರಣ ಕೆಲಸ ಪೂರ್ಣ ನಿಂತುಹೋಗಿದೆ. ಈಗ ಇದಕ್ಕೋಸ್ಕರ ಸುಮಾರು 400 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೀರಿ, ಇದರಲ್ಲಿ ಪೆಂಡಿಂಗ್ ಬಿಲ್ 180 ಕೋಟಿ ಮತ್ತು ಸಂಬಳ 80 ಕೋಟಿ ರೂಪಾಯಿ ಆಗುತ್ತದೆ. ಇನ್ನು ಉಳಿದ 9 ಕಡೆ ಬೇಸಿನ್‌ಗೆ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಕಾವೇರಿ ಬೇಸಿನ್‌ನ ನೀರಾವರಿ ಆದ್ಯತೆಯ ಮೇಲೆ 100 ಕೋಟಿ ರೂಪಾಯಿ ಹೆಚ್ಚಿಗೆ ಕೊಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಆಮೇಲೆ ರಸ್ತೆಗಳು ಮತ್ತು ಸೇತುವೆಗಳು. ಸುಮಾರು 30 ಲಕ್ಷ ರೂಪಾಯಿ, 20 ಲಕ್ಷ ರೂಪಾಯಿ ಎಂ. ಎಲ್. ಎ. ಗಳ ಹೆಸರಿನಲ್ಲಿ ರಸ್ತೆಗಳು ಆಗಿವೆಯೋ ಇಲ್ಲವೋ ಗೊತ್ತಿಲ್ಲ. ರಸ್ತೆಗಳು ಸೇತುವೆಗಳು ಪೂರ್ಣ ಮಾಡಲಿಕ್ಕೆ ಏನಾದರೂ ಒಂದು ತೀರ್ಮಾನ ಮಾಡಿ. ತಾವು 7-8 ತರಹದ ರಸ್ತೆಗಳನ್ನು ಇಟ್ಟುಕೊಂಡು, ಹಣ ಕೊಡದೇ ಇರಿಗೇಶನ್ ಟ್ರ್ಯಾಕ್ ರೋಡ್ಸ್ ಎಂದು ಮಾಡಿದ್ದೀರಿ. 1986ನೇ ಇಸವಿಯಿಂದ ಇಲ್ಲಿಯವರೆಗೂ 10 ರೂಪಾಯಿ ಹಣ ಕೊಟ್ಟಿಲ್ಲ. ಒಂದು ರೈತರು ಸಾಗಾಣಿಕೆ ಮಾಡತಕ್ಕಂಥ ರಸ್ತೆಗಳು, ಕಬ್ಬು ಹೊಡೆಯುವುದು ಗೊಬ್ಬರ ಹೇರುವುದು, ಭತ್ತ ಹೇರುವುದು, ಈ ತರಹ ಸಾಗಾಣಿಕೆ ಮಾಡತಕ್ಕಂಥ ರಸ್ತೆಗಳನ್ನು ತಾವು ಮಾಡಿದ್ದೀರಿ. ಆ ರಸ್ತೆಗಳು ಸುಮಾರು 20 ಸಾವಿರ ಕಿಲೋ ಮೀಟರ್ ಇವೆ. ಈ ರಸ್ತೆಗಳಿಗೆ ಸುಮಾರು 11 ವರ್ಷಗಳಿಂದ ಯಾವುದೇ ಕೆಲಸವನ್ನು ಮಾಡದೇ, ರೈತರು ಯಾವ-ರೀತಿ

ಬೇಸಾಯ ಮಾಡಬೇಕು ಯಾವ - ರೀತಿ ಬದುಕಬೇಕು? ಲೋಕೋಪಯೋಗಿ ರಸ್ತೆಗಳು, ಇರಿಗೇಶನ್ ಟ್ರಾಕ್ ರಸ್ತೆಗಳು, ಎ.ಪಿ. ಎಂ.ಸಿ. ರಸ್ತೆಗಳು , ಆಮೇಲೆ ಶುಗರ್ ಸೆಸ್ ರಸ್ತೆಗಳು, ಜಿಲ್ಲಾ ಪಂಚಾಯಿತಿ ರಸ್ತೆಗಳು, ಒಂದು ತರಹದ ರಸ್ತೆಗಳು ಅಲ್ಲ. ಎಲ್ಲಾ ತರಹದ ರಸ್ತೆಗಳು ಇವೆ. ಯಾವ ರಸ್ತೆಗಳ ಕೆಲಸಗಳೂ ಆಗುತ್ತಿಲ್ಲ. ಆದ್ದರಿಂದ ರಸ್ತೆಗಳಿಗೆ ವಿಶೇಷ ಹಣ ಬಿಡುಗಡೆ ಮಾಡಿ, ಅದಕ್ಕೆ ಏನಾದರೂ ಒಂದು ಅಧ್ಯಯನ ಮಾಡಿ ಒಂದು ಉತ್ತಮವಾದ ತೀರ್ಮಾನಕ್ಕೆ ಬರಬೇಕು. ಇನ್ನು ಯುವಜನ ಸೇವೆ ಮತ್ತು ಕ್ರೀಡೆ. ಅದೇನೋ ನಿಮ್ಮ ಸರ್ಕಾರ ಬಂದ ಮೇಲೆ ಪೂರ್ಣ ನಿಂತು ಹೋಯಿತು. ಅದೇನು ಯುವಕರೆಲ್ಲಾ ಮುದುಕರಾಗಿ ಹೋದರೋ ಎನೋ. ನಾನು ಉತ್ತರ ಕರ್ನಾಟಕಕ್ಕೆ ಹೋಗಿದ್ದೆ. ಎಲ್ಲಾ ಗರಡಿ ಮನೆಗಳು ಪಾಳು ಬಿದ್ದಿವೆ. ಯುವ ಜನರ ಯಾವುದೇ ಸಾಂಸ್ಕೃತಿಕ ಚಟುವಟಿಕೆ ಇಲ್ಲ. ಕ್ರೀಡಾ ರಂಗಕ್ಕೆ ಹೆಚ್ಚು ಒತ್ತು ಕೊಡುತ್ತಿಲ್ಲ. ಯುವ ಜನ ಮತ್ತು ಕ್ರೀಡಾ ಇಲಾಖೆ ಬಗ್ಗೆ ಮಂತ್ರಿಗಳೂ ಇಲ್ಲ. ಅವರು ಪಾರ್ಲಿಮೆಂಟ್‌ಗೆ ಹೊರಟು ಹೋದರು ಎಂದು ಕಾಣಿಸುತ್ತದೆ.

ಶ್ರೀ ಕೆ. ಎನ್. ನಾಗೇಗೌಡ:- ಆ ಖಾತೆಯನ್ನು ಮಾನ್ಯ ಮುಖ್ಯಮಂತ್ರಿಗಳೇ ಇಟ್ಟು ಕೊಂಡಿದ್ದಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಆಯಿತು ಬಿಡಿ. ನಾನು ಅವತ್ತೇ ಕೇಳಿದೆ ಅವರು ಒಳ್ಳೆಯ ಸ್ಪೋರ್ಟ್ಸ್ ಮ್ಯಾನ್ ಎಂದು ಹೇಳಿದರು. ಅವರು ಅವತ್ತೆ ಹೇಳಿದರು ಗಂಗಾ ನದಿಯಲ್ಲಿ ನಾನು ಚಿಕ್ಕ ವಯಸ್ಸಿನಲ್ಲಿ ಈಜಾಡುತ್ತಿದ್ದೆ ಎಂದು. ಮಾನ್ಯ ನಂಜೇಗೌಡರಿಗೂ ಚೆನ್ನಾಗಿ ಗೊತ್ತಿದೆ. ಅಂದರೆ ಒಳ್ಳೆಯ ಸ್ವಿಮ್ಮರ್ ಎಂದು. ಸಮಾಜವಾದಿಗಳೆಲ್ಲಾ ಒಟ್ಟಿಗೆ ಈಜು ಹೊಡೆಯುತ್ತಿದ್ದರು ಎಂದು ವಾಟಾಳ್ ರವರು ಹೇಳುತ್ತಿದ್ದರು ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ ಸತ್ಯ ಹೌದು. ಶ್ರೀ ಬಾಸು ಕೃಷ್ಣ ಮೂರ್ತಿ, ಹೆಚ್. ರಾಮಸ್ವಾಮಿ ಅವರದೆಲ್ಲಾ ಒಂದು ಟೀಮ್ ಇತ್ತು.

ಅಧ್ಯಕ್ಷರು:- ಆ ಡೀಟೈಲ್ಸ್ ಏನೂ ಬೇಡ.

ಶ್ರೀ ವಾಟಾಳ್ ನಾಗರಾಜ್ :- ನಾನೇನು ಡೀಟೈಲ್ಸ್ ಹೇಳುವುದಕ್ಕೆ ತಯಾರಾಗಿಲ್ಲ. ಇವರು ಈಜು ಹೊಡೆಯುತ್ತಿದ್ದರಂತೆ, ಅಂತೆ ಕಂತೆ ಎಂದು ಹೇಳುತ್ತಿದ್ದರಲ್ಲ ಅದಕ್ಕೆ ಹೇಳಿದೆ ಅಷ್ಟೇ.

ಅಧ್ಯಕ್ಷರು :- ಇನ್ನು ನಂಜೇಗೌಡರು ಎದ್ದು ನಿಂತು ಕೊಳ್ಳುವುದು ಅವರೊಂದು ಹೇಳುವುದು ಅವೆಲ್ಲಾ ಏಕೆ ಬೇಕು?

ಶ್ರೀ ವಾಟಾಳ್ ನಾಗರಾಜ್ :- ಈಜು ಹೊಡೆಯುವ ವಿಷಯದಲ್ಲಿ ಅವರನ್ನು ಏಕೆ ಕೆಣಕುತ್ತಿದ್ದೀರಿ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಮಾನ್ಯ ಅಧ್ಯಕ್ಷರೇ, ನನಗೆ ಕಾಲಾವಕಾಶ ಕಡಿಮೆ ಕೊಟ್ಟಿರುವುದರಿಂದ ನಾನು ಜಾಸ್ತಿ ಮಾತನಾಡುವುದಿಲ್ಲ. ಕೆಲವು ಮೂಲಭೂತ ಬದಲಾವಣೆ ನೀವು ತೆರಿಗೆಯಲ್ಲಿ ಹಾಕಿರತಕ್ಕಂಥಾದ್ದು, ಈಗ ಮಾನ್ಯ ವಾಟಾಳ್ ನಾಗರಾಜ್ ಅವರು ಒಂದು ವಿಷಯವನ್ನು ನನ್ನ ಗಮನಕ್ಕೆ ತಂದರು. ಸಿಗಾರ್‌ಗೆ 12 ಇದ್ದದ್ದನ್ನು 10ಕ್ಕೆ ಇಳಿಸಿದ್ದೀರಿ. ಸಿಗಾರ್ ಮತ್ತು ಸಿಗರೇಟ್ ಕೇಸ್‌ಗಳ ಹೋಲ್ಡರ್ ಮತ್ತು ಲೈಟರ್‌ಗಳಿಗೆ 12 ಇದ್ದಿದ್ದನ್ನು 10ಕ್ಕೆ ಇಳಿಸಿದ್ದೀರಿ. ಅವುಗಳಿಗೆಲ್ಲಾ ಏಕೆ ಕಡಿಮೆ ಮಾಡಿದ್ದೀರಿ? ಅದೇ ಬಿಸ್ಕತ್ 8 ಇದ್ದದ್ದನ್ನು 10 ಮಾಡಿದ್ದೀರಿ. ಕನಿಷ್ಠ ಅದನ್ನು 4 ಪರ್ಸೆಂಟ್

ಆದರೂ ಮಾಡಬೇಕು. ಬಿಸ್ಕತ್ ಉಪಯೋಗ ಹಳ್ಳಿಗಳ ಜನರು ಕನಿಷ್ಠ ತಮ್ಮ ಮಕ್ಕಳಿಗೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು. ತಾವು ಕಾಫಿಯಲ್ಲಿ ಅದ್ದಿಕೊಂಡು ತಿನ್ನುತ್ತಿದ್ದರು. ಆದ್ದರಿಂದ, ಅದನ್ನು 4 ಪರ್ಸೆಂಟ್ ಇಳಿಸಬೇಕು. ಇನ್ನು ಕೊಡೆಗಳ ಬಗ್ಗೆ ಹೇಳಿದ್ದೀರಿ. ಅದು ಯಾವುದೋ ತರಹದ ಕೊಡೆಗಳ ಮೇಲೆ ಮಾತ್ರ ಹಾಕಿದ್ದೇವೆ ಎಂದು. ಆಮೇಲೆ ಇಂಕ್ ಮೇಲೆ ಏಕೆ ತಮ್ಮ ಕಣ್ಣು ಬಿತ್ತು. ಇಲ್ಲಿ ಎಲ್ಲಾ ಬಗೆಯ ಇಂಕ್‌ಗಳ ಮೇಲೆ ಎಂದು ಇದೆ. ಆಮೇಲೆ ಹೊಲಿಗೆ ಯಂತ್ರಗಳು ಮತ್ತು ಅವುಗಳ ಬಿಡಿ ಭಾಗಗಳು ಮತ್ತು ಉಪಸಾಧನಗಳು. 8 ರಿಂದ 10 ಪರ್ಸೆಂಟ್‌ಗೆ ಹೆಚ್ಚು ಮಾಡಿದ್ದೀರಿ. ಇದನ್ನು ಇನ್ನೂ ಕಡಿಮೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಟೈಲರಿಂಗ್ ಮಾಡಿಕೊಂಡಿರತಕ್ಕಂಥ ಜನಗಳು ಅವರು ಆದರಿಂದಲೇ ಬದುಕಬೇಕು. ಅದರ ಮೇಲೆ ಹೆಚ್ಚು ತೆರಿಗೆ ಹಾಕತಕ್ಕಂಥ ಅವಶ್ಯಕತೆ ಇಲ್ಲ. ಆಮೇಲೆ 10 ಅಶ್ವಶಕ್ತಿ ವಿದ್ಯುಚ್ಛಕ್ತಿ ಮೋಟಾರ್ ಪಂಪ್‌ಸೆಟ್‌ನ್ನು 12 ರಿಂದ 10ಕ್ಕೆ ಇಳಿಸಿದ್ದೀರಿ. ಅದೇ ಡೀಜಲ್ ಮೋಟಾರ್‌ಗೆ 8 ರಿಂದ 10 ಹೆಚ್ಚು ಮಾಡಿದ್ದೀರಿ. ಯಾವುದೋ ಒಂದು ಹಳ್ಳದ ಮೊಗ್ಗಲಲ್ಲಿ ಅಥವಾ ಕೆರೆ ಮೊಗ್ಗಲಲ್ಲಿ ಎರಡು ಹೆಚ್. ಪಿ., 5 ಹೆಚ್. ಪಿ., 10 ಹೆಚ್. ಪಿ., ಮೋಟಾರ್ ಪಂಪ್ ಸೆಟ್ಸ್ ಇಟ್ಟುಕೊಂಡು ನೀರು ಹೊಡೆದುಕೊಳ್ಳುತ್ತಿದ್ದರು, ಡೀಸಲ್ ಮೋಟಾರ್ಸ್‌ಗೆ ತಾವು ಏನು ಹೇಳಿದ್ದೀರಿ ಬಯಲು ಸೀಮೆಯವರಿಗೆ ಎಂದು, ಆಮೇಲೆ ಬಹಳ ಅನುಕೂಲ ಮಾಡಿಕೊಟ್ಟಿದ್ದೀರಿ. ಬಡವರಿಗೆ ಎಂದು ಹೇಳಿದ್ದೀರಿ. ಬಟ್ಟೆ ಸೋಪು ಇದರ ಮೇಲೆ ಏಕೆ ಜಾಸ್ತಿ ಮಾಡಿದ್ದೀರಿ. 8 ರಿಂದ 10 ಪರ್ಸೆಂಟ್ ಆಗಿದೆ. ಬಟ್ಟೆ ಸೋಪು ಮತ್ತು ಸೋಪು ಪುಡಿಗಳು, ಟಾಯಿಲೆಟ್ ಸೋಪ್ಸ್ ಇವುಗಳ ಮೇಲೆ ಹೆಚ್ಚು ಮಾಡಿದ್ದೀರಿ. ಇದನ್ನು ಕಡಿಮೆ ಮಾಡಿ. ಗ್ರಾನೈಟ್ ಕಲ್ಲು ಆ ಬಗ್ಗೆ ಹೇಳಿದ್ದಾರೆ. ಸುಗಂಧದ ದ್ರವ್ಯದ ಬಗ್ಗೆ ವಾಟಾಳ್ ನಾಗರಾಜ್ ಅವರು ಹೇಳಿದ್ದಾರೆ. ಹೊಸ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ಸರ್ಕಾರ ಯಾವುದೇ ಚಿಂತನೆ ಮಾಡಿಲ್ಲ. ತಾವು ತೆರಿಗೆಯನ್ನು ಕ್ರೋಢೀಕರಿಸುವುದಕ್ಕೆ ಪ್ರಾಮಾಣಿಕವಾಗಿ ಹೆಚ್ಚು ಪ್ರಯತ್ನ ಪಡಬೇಕು. ವಿಶೇಷವಾಗಿ ಅಬಕಾರಿ. ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಏನು ವಿಕೇಂದ್ರೀಕರಣ ಮಾಡದಿದ್ದರೂ ಸಹ ಸಾರಾಯಿ ವಿಕೇಂದ್ರೀಕರಣ ಮಾತ್ರ ಚೆನ್ನಾಗಿ ಮಾಡಿದ್ದೀರಿ. ನಾನು ಸುಮಾರು 15-20 ವರ್ಷಗಳಿಂದ ನೋಡಿದ್ದೇನೆ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಾರಾಯಿ ವಿಕೇಂದ್ರೀಕರಣ ಆಗಿದೆ. ಮಾನ್ಯ ಅಧ್ಯಕ್ಷರೇ, ಎಲ್ಲಾ ಪೆಟ್ಟಿಗೆ ಅಂಗಡಿಗಳಲ್ಲೂ ಬಹಳ ಸುಲಭವಾಗಿ ಸಿಗುವಂಥಾದ್ದು ಎಲ್ಲಾ ಹಳ್ಳಿಗಳಲ್ಲೂ, ಇಷ್ಟು ಚೆನ್ನಾಗಿ ವಿಕೇಂದ್ರೀಕರಣ ಯಾವ ಕಾಲದಲ್ಲಿಯೂ ಸಹ ಮಾಡಿಲ್ಲ. ತಾವು ಏಕೆ ಈ ಮಟ್ಟಕ್ಕೆ ಬಂದ್ರಿ ಅಂತ ಗೊತ್ತಾಗಲಿಲ್ಲ. ಇಷ್ಟೊಂದು ಜಯಪ್ರಕಾಶ್ ನಾರಾಯಣ್ ಅವರ ಚಳುವಳಿಯಲ್ಲಿ, ಆ ಹಿನ್ನೆಲೆಯಲ್ಲಿ ಬಂದು ಬಹಳ ಹೋರಾಟ ಮಾಡುತ್ತೇವೆ, ರೈತರು ಗ್ರಾಮೀಣ ಪ್ರದೇಶ ಎಂದು ಹೇಳಿ ನೀವು ಬಂದ ಮೇಲೆ ಎಕ್ಸೈಜ್ ಮೇಲೆ ನಿಯಂತ್ರಣವೇ ಇಲ್ಲ. ಅದು ಏಕೆ ಎಂದು ಗೊತ್ತಾಗುತ್ತಿಲ್ಲ.

ಅಧ್ಯಕ್ಷರು :- ಎಕ್ಸೈಜ್ ಅಂದರೆ ಬ್ಯಾಲೆನ್ಸ್ ತಪ್ಪಿ ಹೋಗುವುದು.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಕುಡಿದವರು ಸಾರ್, ನೋಡಿಕೊಳ್ಳುವವರು ಬ್ಯಾಲೆನ್ಸ್ ತಪ್ಪಿದ್ದಾರೆ ಅಂದರೆ ನಾನೇನು ಮಾಡುವುದಕ್ಕೆ ಆಗುತ್ತದೆ? ಆದ್ದರಿಂದ ತಾವು ಬಹಳ ಜವಾಬ್ದಾರಿಯುತವಾಗಿ ಕೆಲಸಮಾಡಬೇಕು. ಎಲ್ಲಾ ಪೆಟ್ಟಿಗೆ ಅಂಗಡಿಗಳಲ್ಲಿ ಬಹಳ ಸುಲಭವಾಗಿ ಸಿಗುತ್ತದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಫಸ್ಟ್, ಸೆಕೆಂಡ್ಸ್, ಥರ್ಡ್‌ಸ್ ಮೂರು ತರಹ ಆಗಿದೆ. ಡೂಪ್ಲಿಕೇಟ್ ಆಗಿ ಟೈಗರ್ ಅದ ಯಾವ್ಯಾವುದೋ 5-6 ಐಟಮ್ ಇದೆ ಅದು ಮೂರನೇ ದರ್ಜೆ ಅದಕ್ಕೆ ಯಾವುದೇ ಕಂಪನಿ

ಹೆಸರು ಇಲ್ಲ, ತೆರಿಗೆ ಇಲ್ಲ, ಚುನಾವಣೆ ಸಂದರ್ಭದಲ್ಲಿ ಜನರುಗಳಿಗೆ ಕುಡಿಸಿ ಅವರುಗಳು ಮೂರು ದಿವಸ ಮೇಲಕ್ಕೆ ಏಳದೆ ಗದ್ದೆಯಲ್ಲೇ ಬಿದ್ದಿದ್ದರು.

ಅಧ್ಯಕ್ಷರು :- ಕುಡಿದವರನ್ನು ಗದ್ದೆಗೆ ಹಾಕಿಬಿಟ್ಟರಾ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಅವರನ್ನು ಗದ್ದೆಗೆ ಹಾಕಿಬಿಟ್ಟರು. ಒಂದು ಬೊಗಸೆ ಯೂರಿಯಾವನ್ನು ಒಂದು ಬಕೆಟಿನಲ್ಲಿ ದನಗಳಿಗೆ ಕುಡಿಸಿ ಬಿಟ್ಟರೆ ಒಂದು ಗಂಟೆಯಲ್ಲಿ ಸತ್ತು ಹೋಗುತ್ತವೆ.

ಅಧ್ಯಕ್ಷರು :- ಯಾವ ಯಾವ ಪಾರ್ಟಿಯವರು ಎಷ್ಟೆಷ್ಟು ಕೊಟ್ಟರೆಂದು ಲೆಕ್ಕ ಸಿಕ್ಕಿದೆಯೇ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಅದರ ಬಗ್ಗೆ ವಿಶೇಷವಾಗಿ ಒಂದು ದಿವಸ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಸಂಪನ್ಮೂಲ ಕ್ರೋಢೀಕರಿಸುವಲ್ಲಿ ಸರ್ಕಾರ ಸೋತಿದೆ. ತೆರಿಗೆ ಸೋರಿ ಹೋಗುವುದನ್ನು ತಡೆಗಟ್ಟುವ ಬಗ್ಗೆ ಅಧಿಕಾರಿಗಳ ಮೇಲೆ ಸರ್ಕಾರಕ್ಕೆ ನಿಯಂತ್ರಣ ಇಲ್ಲ. ಬಜೆಟ್ ಮಂಡಿಸುವ ಸಮಯದಲ್ಲಿ 10 ಪರ್‌ಸೆಂಟ್ ಇದ್ದದ್ದನ್ನು 12 ಪರ್‌ಸೆಂಟ್ ಮಾಡಿ ತೆರಿಗೆ ಹೆಚ್ಚು ಮಾಡಿ ಜನರಿಗೆ ತೊಂದರೆ ಮಾಡುವ ಬದಲು ತೆರಿಗೆ ಸೋರಿ ಹೋಗದ ಹಾಗೆ ಕ್ರಮ ತೆಗದುಕೊಳ್ಳಬೇಕು. ಜನರಲ್ಲಿ ಇರತಕ್ಕಂಥ ಕಪ್ಪು ಹಣ ಹೊರಗೆ ಬರುವ ಹಾಗೆ ಕೇಂದ್ರ ಸರ್ಕಾರದವರು ಮಾಡಿರುವ ಯೋಜನೆಯಂತೆ ರಾಜ್ಯ ಸರ್ಕಾರವೂ ಏನಾದರೂ ಒಂದು ಯೋಜನೆ ಮಾಡಬೇಕು. ಈ ಬಜೆಟ್ ಒಂದು ರೀತಿ. 'ಹಾವೂ ಸಾಯಬಾರದು -ಕೋಲೂ ಮುರಿಯಬಾರದು' ಎನ್ನುವ ರೀತಿಯಲ್ಲಿ ಇದೆ. ಯಾವುದರ ಮೇಲೆ ತೆರಿಗೆಗಳನ್ನು ಹಾಕಿ ಯಾವುದರ ಮೇಲೆ ತೆರಿಗೆ ಕಡಿಮೆ ಮಾಡಬೇಕೆಂದು ನಾನು ಹೇಳಿದ್ದೇನೋ, ಆ ಪ್ರಕಾರ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5. ವರದಿಗಳನ್ನು ಮಂಡಿಸುವುದು

ಶ್ರೀ ಚಂದ್ರಶೇಖರ ಎಂ. ಮಾಮನಿ :- ಮಾನ್ಯ ಅಧ್ಯಕ್ಷರೆ, ವಿಧಾನ ಸಭೆಯ ಅರ್ಜಿಗಳ ಸಮಿತಿಯ 1ನೇ, 2ನೇ, 3ನೇ, 4ನೇ ಮತ್ತು 5ನೇ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಶ್ರೀ ಬಿ. ಬಿ. ಹಿರೇರೆಡ್ಡಿ :- ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖಾ ವಿಷಯ ಸಮಿತಿಯ 1997-98ನೇ ಸಾಲಿನ ಎರಡನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

6. ವಿತ್ತೀಯ ಕಾರ್ಯಕಲಾಪ

(ಅ) 1998-99 ನೇ ಸಾಲಿನ ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಉತ್ತರ.

★ **ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು)** :- ಮಾನ್ಯ ಸಭಾಧ್ಯಕ್ಷರೆ, 1998-99ರ ಆಯವ್ಯಯದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮಾನ್ಯ ಸುರೇಶ್‌ಕುಮಾರ್‌ರವರು, ಮಾನ್ಯ ವಾಟಾಳ್ ನಾಗರಾಜ್‌ರವರು, ಮಾನ್ಯ ಶ್ರೀರಾಮರೆಡ್ಡಿಯವರು, ಮಾನ್ಯ ಪುಟ್ಟಣ್ಣಯವರು, ಮಾನ್ಯ ಜೆ.ಸಿ. ಮಾಧುಸ್ವಾಮಿಯವರು ಹಾಗೂ ಇನ್ನೂ ಅನೇಕ ಮಾನ್ಯ

ಸದಸ್ಯರುಗಳು ಮಾತನಾಡಿ ಅವರವರ ಸಲಹೆ, ಅಭಿಪ್ರಾಯ ಮತ್ತು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಅವರ ಎಲ್ಲಾ ಸಲಹೆಗಳನ್ನು ರಾಜ್ಯದ ದೃಷ್ಟಿಯಿಂದ ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅವರುಗಳಿಗೆ ಅಭಿನಂದನೆಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ನಮ್ಮ ಸರ್ಕಾರ ಬಂದ ಮೇಲೆ ಇದೂ ಸೇರಿ ನಾನು 4ನೇ ಆಯವ್ಯಯಗಳನ್ನು ಮಾಂಡಿಸಿದ್ದೇನೆ. ನಾನು ಮಂಡಿಸಿರತಕ್ಕಂಥ 4 ಆಯವ್ಯಯಗಳ ಬಗ್ಗೆ ಸಮಗ್ರವಾಗಿ ನೋಡಿದಾಗ, ನಮ್ಮ ಸರ್ಕಾರದ ಆದ್ಯತೆಗಳು ಏನು? ಈ ರಾಜ್ಯದ ವಿಕಾಸದ ದೃಷ್ಟಿಯಿಂದ ನಮ್ಮ ಚಿಂತನೆಗಳು ಮತ್ತು ಕಾರ್ಯಕ್ರಮಗಳು ಏನು ಎನ್ನತಕ್ಕಂಥಾದ್ದನ್ನು ಮಾನ್ಯ ಸದಸ್ಯರುಗಳು ಗಮನಿಸುವುದಕ್ಕೆ ಸಾಧ್ಯವಾಗುತ್ತದೆಂದು ನನ್ನ ಭಾವನೆ. ಈ ಆಯವ್ಯಯದಲ್ಲಿ ಯಾವುದೇ ಗೊತ್ತು ಗುರಿ ಇಲ್ಲ, ಯಾವುದೇ ರೀತಿಯ ಸಿದ್ಧಾಂಥದ ಲೇಪವೂ ಇಲ್ಲ, ಸರ್ಕಾರದ ಚಿಂತನೆ ಏನೆಂದು ಯಾರಿಗೂ ಗೊತ್ತಾಗುವುದಿಲ್ಲವೆಂದು ಮಾನ್ಯ ಖರ್ಗೆಯವರು ಹಾಗೂ ಇನ್ನಿತರ ಕೆಲವು ಮಿತ್ರರುಗಳು ಹೇಳಿದ್ದಾರೆ. 1995-96ನೇ ಸಾಲಿನ ಆಯವ್ಯಯವನ್ನು ಮಂಡಿಸುವಾಗಲೇ ನಮ್ಮ ಸರ್ಕಾರದ ಗುರಿ ಮತ್ತು ಆದ್ಯತೆಗಳು ಏನು ಎನ್ನುವುದರ ಬಗ್ಗೆ ನಾನು ಸ್ಪಷ್ಟಪಡಿಸಿದ್ದೇನೆ. ತದನಂತರ ಮಂಡಿಸಿರತಕ್ಕಂಥ ಆಯವ್ಯಯದಲ್ಲೂ ನಮ್ಮ ಸರ್ಕಾರದ ಆದ್ಯತೆಗಳ ಕಡೆಗೆ ಹೆಚ್ಚು ಒತ್ತು ಕೊಡತಕ್ಕಂಥ ಮತ್ತು ಅವುಗಳಿಗೆ ಹಣಕಾಸು ನೆರವು ನೀಡತಕ್ಕಂಥ ಪ್ರಯತ್ನಗಳನ್ನು ನಾವು ಮಾಡಿದ್ದೇವೆ. 1995-96ನೇ ಆಯವ್ಯಯದಲ್ಲಿ ನಾವು ಹೇಳಿದ್ದೇನೆಂದರೆ, ನೀರಾವರಿ, ವಿದ್ಯುತ್, ಪ್ರಾಥಮಿಕ ಶಿಕ್ಷಣ, ಪ್ರಾಥಮಿಕ ಆರೋಗ್ಯ, ಸಮಾಜದಲ್ಲಿ ಸೌಲಭ್ಯಗಳಿಂದ ವಂಚಿತರಾಗಿರತಕ್ಕಂಥ ಜನರನ್ನು ಆರ್ಥಿಕವಾಗಿ ಮೇಲಕ್ಕೆ ತರುವುದು, ಕುಡಿಯುವ ನೀರು, ಗ್ರಾಮೀಣಾಭಿವೃದ್ಧಿ ಬಗ್ಗೆ ಮೊದಲನೆ ಆದ್ಯತೆ ಕೊಡುತ್ತೇವೆ ಎನ್ನುವ ಮಾತುಗಳನ್ನು ನಾನು ಪ್ರಸ್ತಾಪ ಮಾಡಿದ್ದೆ. ಅದೇ ಆದ್ಯತೆಯನ್ನು ಈ ವರ್ಷದ ಬಜೆಟ್‌ನಲ್ಲೂ ಕೂಡ ಮುಂದುವರಿಸತಕ್ಕಂಥ ಪ್ರಯತ್ನವನ್ನು ನಾವು ಮಾಡಿದ್ದೇವೆಂದು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ, ನೀರಾವರಿಗೆ, ಟ್ರಾನ್ಸ್‌ಪೋರ್ಟ್‌ಗೆ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಒಟ್ಟು 5,353 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರಲ್ಲಿ ನೀರಾವರಿಗಾಗಿ ಶೇಕಡ 30.42 ರಷ್ಟು, ನೀರಾವರಿಗೆ ಶೇಕಡಾ 17 ರಷ್ಟು, ಕುಡಿಯುವ ನೀರಿನ ಸೌಲಭ್ಯ, ಟ್ರಾನ್ಸ್‌ಪೋರ್ಟ್ ಇವೆಲ್ಲಾ ಸೇರಿ ಶೇಕಡಾ 60 ರಷ್ಟು ಹಣವನ್ನು ಖರ್ಚು ಮಾಡಲಾಗುತ್ತದೆಂದು ಆಯವ್ಯಯದಲ್ಲಿ ಹೇಳಿದ್ದೇನೆ. ಮಾನ್ಯ ಸದಸ್ಯರಿಗೆ ಬಹಳ ಸ್ಪಷ್ಟವಾಗಿ ನಮ್ಮ ಗುರಿ ಮತ್ತು ಆದ್ಯತೆಗಳು ಏನು ಎನ್ನುವುದರ ಬಗ್ಗೆ ಸ್ಪಷ್ಟವಾಗುತ್ತದೆ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ ಇದರಲ್ಲಿ ಯಾವುದೇ ಸಂಶಯಗಳು ಉಳಿದುಕೊಳ್ಳುವುದಿಲ್ಲವೆಂದು ನನ್ನ ಭಾವನೆ, ರಾಜ್ಯ ಸರ್ಕಾರಗಳಿಗೆ ಸಂಪನ್ಮೂಲ ಕ್ರೋಢೀಕರಣವನ್ನು ಮಾಡಲಿಕ್ಕೆ ಇರತಕ್ಕಂಥ ವ್ಯಾಪ್ತಿ, ಕೇಂದ್ರ ಸರ್ಕಾರದ ವ್ಯಾಪ್ತಿಯನ್ನು ನಾವು ನೋಡಿದಾಗ ಬಹಳ ಸೀಮಿತವಾಗಿರುವಂಥ ವ್ಯಾಪ್ತಿ ಇರುತ್ತದೆ. ರಾಜ್ಯಸರ್ಕಾರಕ್ಕೆ ಕಮರ್ಷಿಯಲ್ ಟ್ಯಾಕ್ಸ್ ಮೋಟಾರ್ ವೈಕಲ್ ಟ್ಯಾಕ್ಸ್ ಸ್ಟಾಂಪ್ ಆ್ಯಂಡ್ ರಿಜಿಸ್ಟ್ರೇಷನ್ ಟ್ಯಾಕ್ಸ್ ಇವು ಬಹಳ ಮುಖ್ಯವಾಗಿ ರಾಜ್ಯಕ್ಕೆ ಬರತಕ್ಕಂಥ ತೆರಿಗೆಗಳು. ಅದರಲ್ಲಿ ಮಾರಾಟಕರ ಸುಮಾರು ನಮ್ಮ ತೆರಿಗೆಯ ಶೇಕಡ 60 ಭಾಗ ಬರುತ್ತದೆ ಮತ್ತು ಕಳೆದ 5 ದಶಕಗಳಿಂದ ಕೂಡ ಕೇಂದ್ರದಿಂದ ರಾಜ್ಯದ ಪಟ್ಟಿಯಲ್ಲಿರತಕ್ಕಂಥ ದರಗಳಲ್ಲಿ ಡಿವೊಲ್ಯೂಷನ್ ಟ್ಯಾಕ್ಸ್ ವಿಂಗಡಣೆ ಏನು ಮಾಡಿಕೊಳ್ಳುತ್ತೇವೆ ಅದರಲ್ಲಿ ನಾವು ನಿರೀಕ್ಷಿತವಾದ ಬೆಳವಣಿಗೆಯನ್ನು ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. 10 ಹಣಕಾಸಿನ ಆಯೋಗಗಳು ರಚನೆಯಾಗಿದ್ದರೂ ಕೂಡ ಅವರು ಶಿಫಾರಸ್ಸು ಮಾಡಿದ್ದರೂ ಕೂಡ ರಾಜ್ಯದಲ್ಲಿ ಅದರಲ್ಲೂ ಸರಿಯಾದ ರೀತಿಯಲ್ಲಿ ಆರ್ಥಿಕ ನಿರ್ವಹಣೆ ಮಾಡತಕ್ಕಂಥ ರಾಜ್ಯಗಳಿಗೆ

ಉತ್ತೇಜನಕಾರಿಯಾದ ಪ್ರೋತ್ಸಾಹ ಕೇಂದ್ರ ಸರ್ಕಾರದಿಂದ ಬರುತ್ತಾ ಇಲ್ಲ ಎನ್ನತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ ಬಹಳ ಸ್ಪಷ್ಟವಾಗಿ ಗೋಚರವಾಗುತ್ತದೆ. ಅದನ್ನು ನಾನು ಎಲ್ಲಾ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಕೇಂದ್ರ ಸರ್ಕಾರದ ಯೋಜನಾ ಆಯೋಗ ಯಾವ ರಾಜ್ಯ ಸರ್ಕಾರಗಳು ಆರ್ಥಿಕ ನಿರ್ವಹಣೆ ಚೆನ್ನಾಗಿ ಮಾಡುತ್ತವೆ ಮತ್ತು ಡೆಟ್ ಸರ್ವೀಸ್ ಕಡಿಮೆ ಇರುತ್ತದೆ ಮತ್ತು ಸಾಲವನ್ನು ಅಬ್ಸಿರ್ಬ್ ಮಾಡುವಂಥ ಶಕ್ತಿ ಯಾವ ರಾಜ್ಯಗಳಿಗೆ ಇರುತ್ತದೆ ಅಂತಹ ರಾಜ್ಯಗಳಿಗೆ ಮಾರ್ಕೆಟ್ ಬಾರೋಯಿಂಗ್‌ನಲ್ಲಿ ಮತ್ತು ಇತರೆ ಕೇಂದ್ರದ ಅಸಿಸ್ಟೆನ್ಸ್‌ನಲ್ಲಿ ಹೆಚ್ಚು ಅವಕಾಶಗಳನ್ನು ಮಾಡಿಕೊಡಬೇಕೆನ್ನುವ ಮಾತನ್ನು 4 ಸಲ ಈ ಆಯವ್ಯಯಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈ ಬಾರಿ ಕೂಡ ನಾನು ಪುರನರುಚ್ಚಾರಣೆ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇನ್ನು 11ನೇ ಆಯೋಗ 1997ರಲ್ಲಿ ಆಗಬೇಕಾಗಿದೆ. ಹಣಕಾಸಿನ ಆಯೋಗ ಇನ್ನೂ ರಚನೆ ಆಗಿಲ್ಲ. ಈ ಸಲ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹಣಕಾಸಿನ ಆಯೋಗ ರಚನೆ ಆಗುವುದಕ್ಕೆ ಮುಂಚೆ ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳನ್ನು ಕರೆದು ಟರ್ಮ್ಸ್ ಆಫ್ ರೆಫರೆನ್ಸ್ ನಿರ್ಧಾರದ ಮುಂಚೆ ರಾಜ್ಯಗಳ ಮುಖ್ಯಮಂತ್ರಿಗಳ ಅಭಿಪ್ರಾಯಗಳನ್ನು ಪಡೆದು ಅನಂತರ ಆ ಟರ್ಮ್ಸ್ ಆಫ್ ರೆಫರನ್ಸ್‌ನ್ನು ಅಖೈರು ಮಾಡತಕ್ಕಂಥದ್ದು ಬಹಳ ಒಳ್ಳೆಯದು. ಅದನ್ನು ಕೇಂದ್ರ ಸರ್ಕಾರ ಮಾಡಬೇಕು; ಎನ್ನತಕ್ಕಂಥ ಒತ್ತಾಯವನ್ನು ಕೂಡ ನಾನು ಈ ಆಯವ್ಯಯದಲ್ಲಿ ಮಾಡಿದ್ದೇನೆ. ಅದರ ಜೊತೆಗೆ ಒಂದು ಕನ್‌ಸೈನ್‌ಮೆಂಟ್ ಟ್ಯಾಕ್ಸ್ ಬಗ್ಗೆ ನಾವು ಬಹಳ ವರ್ಷಗಳಿಂದ ಚರ್ಚೆ ಮಾಡುತ್ತಿದ್ದೇವೆ. ಅದರ ಬಗ್ಗೆ ಕಾನ್ಸೆನ್ಸಸ್ ಬಂದಿದ್ದರೂ ಕೂಡ ಅನೇಕ ಮುಖ್ಯ ಮಂತ್ರಿಗಳ ಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಬಂದರೂ ಕೂಡ ಆ ಅಧಿಕಾರ ಕೂಡ ಬಹಳ ರಾಜ್ಯಗಳಿಂದ ಕೇಂದ್ರ ಸರ್ಕಾರದಿಂದ ಇದ್ದರೂ ಕೂಡ ಇನ್ನು ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಟ್ಯಾಕ್ಸ್ ಆ್ಯಂಡ್ ಸರ್ವೀಸಸ್ ಇದಕ್ಕೂ ಕೂಡ ಅವಕಾಶ ಕೊಡಬೇಕು. ಇವತ್ತು ರಾಜ್ಯದ ಮೇಲೆ ಒಂದು ರಾಜ್ಯದ ವ್ಯಕ್ತಿಗಳ ಮತ್ತು ಅದರ ಬೆಳವಣಿಗೆ ಮಾಡತಕ್ಕಂಥ ಸಂದರ್ಭಗಳಲ್ಲಿ ಹೆಚ್ಚು ಜವಾಬ್ದಾರಿಗಳು ಇರುತ್ತವೆ. ರಾಜ್ಯಕ್ಕೆ ಅದರ ಸ್ವಂತ ಸಂಪನ್ಮೂಲಗಳು ಈಗ ಇರತಕ್ಕಂಥ ವ್ಯವಸ್ಥೆಯಲ್ಲಿ ಈಗ ಇರತಕ್ಕಂಥ ರೀತಿಯಲ್ಲಿ ವೇಗವಾಗಿ ಆರ್ಥಿಕ ಬೆಳವಣಿಗೆಗಳನ್ನು ಕಂಡುಕೊಳ್ಳುವಂಥದ್ದು ಕಷ್ಟವಾಗುತ್ತದೆ. ಆ ಕಾರಣದಿಂದ ಕನ್‌ಸೈನ್‌ಮೆಂಟ್ ಟ್ಯಾಕ್ಸ್ ಅದನ್ನು ವಸೂಲಿ ಮಾಡುವ ಅಧಿಕಾರ ರಾಜ್ಯಗಳಿಗೆ ಇದ್ದರೆ ಟ್ಯಾಕ್ಸ್ ಅಂಡ್ ಸರ್ವೀಸಸ್ ಮಾಡತಕ್ಕಂಥ ಅಧಿಕಾರ ಇದ್ದರೆ ಅದು ಹೆಚ್ಚು ಅನುಕೂಲವಾಗುತ್ತದೆ ಎನ್ನುವ ಮಾತನ್ನು ನಾನು ವೇದಿಕೆಗಳಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹಣಕಾಸಿನ ಮಂತ್ರಿಗಳ ಸಭೆಯನ್ನು ಕರೆದಂಥ ಸಂದರ್ಭಗಳಲ್ಲೂ ಕೂಡ ಕೇಂದ್ರದ ಹಣಕಾಸಿನ ಮಂತ್ರಿಗಳಿಗೂ ಮತ್ತು ಪ್ರಧಾನ ಮಂತ್ರಿಗಳಿಗೂ ಮನವರಿಕೆ ಮಾಡತಕ್ಕಂಥ ಪ್ರಯತ್ನ ಕೂಡ ಮಾಡಿದ್ದೇನೆ. ಇವತ್ತು ದೇಶದಲ್ಲಿ ನರಸಿಂಹರಾಯರು ಪ್ರಧಾನ ಮಂತ್ರಿಗಳು ಆದ ಮೇಲೆ ಮತ್ತು ಮನಮೋಹನ ಸಿಂಗ್‌ರವರು ಹಣಕಾಸಿನ ಮಂತ್ರಿಗಳಾದಾಗ ಉದಾರೀಕರಣ ದೇಶದ ಉದ್ದಗಲಕ್ಕೂ ಆ ನೀತಿ ಬಂದ ಮೇಲೆ ಇವತ್ತು ಪ್ರತಿ ರಾಜ್ಯಗಳು ಕೂಡ ಅದಕ್ಕೆ ಅನುಗುಣವಾಗಿ ಹೊಸ ಕೈಗಾರಿಕಾ ನೀತಿಯನ್ನು ರೂಪಿಸಿಕೊಳ್ಳತಕ್ಕಂಥದ್ದು ಮತ್ತು ರಾಜ್ಯಕ್ಕೆ ಕೈಗಾರಿಕಾ ವಲಯದಲ್ಲಿ ಬಂಡವಾಳಗಳನ್ನು ಈ ದೇಶದವರು ಮತ್ತು ಹೊರದೇಶದವರು ಹೂಡತಕ್ಕಂಥ ಒಂದು ಸ್ನೇಹಪರವಾದಂಥ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥದ್ದು ಮತ್ತು ಇದಕ್ಕೆ ಬೇಕಾದಂಥ ಪೂರಕ ವ್ಯವಸ್ಥೆಯನ್ನು ಮಾಡತಕ್ಕಂಥದ್ದು ಅತ್ಯಂತ ಅವಶ್ಯ. ಅದಕ್ಕಾಗಿ ತೆರಿಗೆ ಪದ್ಧತಿಯಲ್ಲಿ ಕೂಡ ಬದಲಾವಣೆಗಳನ್ನು ಮಾಡಬೇಕು ಎನ್ನತಕ್ಕಂಥದ್ದು ದೇಶದಲ್ಲಿ

ಇವತ್ತು ಚರ್ಚೆಯಾಗುತ್ತಿದೆ. ಇದರ ಬಗ್ಗೆ ಎರಡು ಸಭೆಗಳು ಕೂಡ ನಡೆದಿದೆ ಆ ಸಭೆಗಳಿಗೆ ನಾನು ಕೂಡ ಹೋಗಿದ್ದೇನೆ. ಇವತ್ತು ಇರತಕ್ಕಂಥ ಮಾರಾಟ ತೆರಿಗೆಯ ಪದ್ಧತಿ ಏನು ಇದೆ. ಈ ಮಾರಾಟ ತೆರಿಗೆ ಪದ್ಧತಿಯಿಂದ ಮೌಲ್ಯ ವರ್ಧಿತ ತೆರಿಗೆ ಪದ್ಧತಿ ರೆಸ್ಯೂಮ್‌ಗೆ ಹೋಗಬೇಕು ಎನ್ನತಕ್ಕಂಥದ್ದು ಇವತ್ತು ಜಗತ್ತಿನ ಅನೇಕ ರಾಷ್ಟ್ರಗಳ ವಿಶೇಷವಾಗಿ ಯೂರೋಪ ದೇಶಗಳು ಈಗಾಗಲೇ ಅನೇಕ ವರ್ಷಗಳಿಂದ ವ್ಯಾಲ್ಯು ಆ್ಯಡೆಡ್ ಟ್ಯಾಕ್ಸ್‌ನ್ನು ಒಪ್ಪಿಕೊಂಡು ಅದನ್ನು ಜಾರಿಗೆ ಕಟ್ಟಿಕೊಂಡಿದ್ದಾರೆ. ಆದಾಗ್ಯೂ ಭಾರತದೇಶದಲ್ಲೂ ಕೂಡ ವ್ಯಾಲ್ಯು ಆ್ಯಡೆಡ್ ಟ್ಯಾಕ್ಸ್ ಸಿಸ್ಟಮ್‌ಗೆ ಹೋಗಬೇಕು ಎನ್ನತಕ್ಕಂಥದ್ದು ಒಟ್ಟಾರೆ ಎಲ್ಲಾ ರಾಜ್ಯಗಳ ಅಭಿಪ್ರಾಯ . ಆದರೆ ಯಾವ ವರ್ಷದಿಂದ ಜಾರಿಗೆ ಕೊಡಬೇಕು ಎನ್ನತಕ್ಕಂಥ ಅಂತಿಮವಾದ ತೀರ್ಮಾನವಾಗಿಲ್ಲ. ಕೆಲವು ರಾಜ್ಯಗಳು ಕೆಲವು ಪದಾರ್ಥಗಳ ಮೇಲೆ ವ್ಯಾಲ್ಯು ಆ್ಯಡೆಡ್ ಟ್ಯಾಕ್ಸ್ ಸಿಸ್ಟಂನ್ನು ಈಗಾಗಲೇ ಜಾರಿಗೊಳಿಸಿದ್ದಾರೆ. ಆಂಧ್ರ , ತಮಿಳುನಾಡು, ಮಹಾರಾಷ್ಟ್ರ ರಾಜ್ಯಗಳು ವ್ಯಾಲ್ಯು ಆ್ಯಡೆಡ್ ಟ್ಯಾಕ್ಸ್ ಸಿಸ್ಟಂ ಅವರು ಅಳವಡಿಸಿಕೊಂಡು, ಸಂಪೂರ್ಣವಾಗಿ ಎಲ್ಲಾ ಪದಾರ್ಥಗಳ ಮೇಲೆ ಅಲ್ಲ ಕೆಲವು ಪದಾರ್ಥಗಳ ಮೇಲೆ ಜಾರಿಗೆ ಕೊಡತಕ್ಕಂಥ ಪ್ರಯತ್ನವಾಗಿದೆ. ನಾವು ಕರ್ನಾಟಕದಲ್ಲಿ ಕೂಡ ಆ ದಿಕ್ಕಿನಲ್ಲಿ ನಾವು ಪ್ರಯತ್ನವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದ್ದೇವೆ. ಈ ಹಿನ್ನಲೆಯಲ್ಲಿ 1995-96ನೇ ಆಯವ್ಯಯವನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಸುಮಾರು 21 ತೆರಿಗೆ ದರಗಳು ಇದ್ದವು. ಇದರ ಜೊತೆಗೆ ಕೆಲವು ವಿಶೇಷ ದರಗಳು ಇದ್ದವು. ಈ 21ದರಗಳ ಜೊತೆಗೆ ಬೇರೆ ಬೇರೆ ಟ್ಯಾಕ್ಸ್‌ಗಳು ಕೂಡ ಇದ್ದುವು. ಎಂಟ್ರಿಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್, ಸರಚಾರ್ಜ್, ಮುಂತಾದ ತೆರಿಗೆಗಳು ಇದ್ದುವು. ನಾವು Value added tax regimeಗೆ ಹೋಗಬೇಕಾದರೆ ಫೈನಾನ್ಸ್ ಮಿನಿಸ್ಟರ್‌ಗಳ ಒಂದು ಕಾನ್‌ಫರೆನ್ಸ್‌ನಲ್ಲಿ ಡಾ: ಚೆಲ್ಲಯ್ಯ ಅವರ ಅಧ್ಯಕ್ಷತೆಯಲ್ಲಿ ಹತ್ತು ರಾಜ್ಯಗಳ ಹಣಕಾಸಿನ ಮಂತ್ರಿಗಳ ಒಂದು ಸಮಿತಿಯನ್ನು ಮಾಡಿದರು. ಅವರು ತಮ್ಮ ಶಿಫಾರಸ್ಸನ್ನು ಕೊಟ್ಟಿದ್ದಾರೆ. ಆ ಶಿಫಾರಸ್ಸುಗಳ ಪ್ರಕಾರ ನಾಲ್ಕು ದರಗಳನ್ನು ಇಟ್ಟುಕೊಳ್ಳಬೇಕೆಂದು ಇತ್ತು. ಇದಕ್ಕೆ ಸರ್ವ ಸಾಮಾನ್ಯವಾಗಿ ಎಲ್ಲಾ ರಾಜ್ಯಗಳು ಕೂಡ ಸಹಮತವನ್ನು ವ್ಯಕ್ತಪಡಿಸಿದರು. ನಾವು ಮೊದಲನೇ ಹಂತದಲ್ಲಿ ನಾಲ್ಕು ದರಗಳನ್ನು ಮಾಡಲು ಹೋಗಲಿಲ್ಲ. ನಾವು 21 ದರಗಳಿಂದ 13ದರಗಳಿಗೆ ಇಳಿಸತಕ್ಕಂಥ ಪ್ರಯತ್ನವನ್ನು 1995-96ನೇ ಆಯವ್ಯಯದಲ್ಲಿ ಮಾಡಿದ್ದೇವೆ. 1996-97ನೇ ಆಯವ್ಯಯದಲ್ಲಿ 13 ದರಗಳಿಂದ 4 ದರಗಳಿಗೆ ಇಳಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. 2, 4, 8, 12, ಈ ದರಗಳು ಇದ್ದುವು. ಬೆಲ್ಲಕ್ಕೆ 1 ಪರ್ಸೆಂಟ್, ಸಿಮೆಂಟ್‌ಗೆ 15 ಪರ್ಸೆಂಟ್, ಬೀರ್‌ಗೆ 55 ಪರ್ಸೆಂಟ್, ಏಸಿಕ್ಕೆ 60 ಪರ್ಸೆಂಟ್, ಮುಂತಾಗಿ ಈ ವಿಶೇಷ ದರಗಳನ್ನು ಬಿಟ್ಟರೆ, ಸುಮಾರು 98 ರಷ್ಟು ಸರಕುಗಳು 2, 4, 8, 12, ಈ ನಾಲ್ಕು ದರಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರಯತ್ನವನ್ನು ಮಾಡಿದೆವು. ಇದನ್ನು ಮಾಡಿದ ಮೇಲೆ ಇದನ್ನು ಕೇವಲ rationalise ಮಾಡಬೇಕು, ಕಡಿಮೆ ದರಗಳನ್ನು ಮಾಡಬೇಕೆಂಬುದು ನಮ್ಮ ಉದ್ದೇಶವಲ್ಲ. ಒಂದು ರಾಜ್ಯದಲ್ಲಿ ಕೈಗಾರಿಕೆಯ ಬೆಳವಣಿಗೆ ಆಗಬೇಕಾದರೆ , ತೆರಿಗೆ ಪದ್ಧತಿ ಹೆಚ್ಚು ಸರಳವಾಗಿ, ಪಾರದರ್ಶಕವಾಗಿ , ಲೆಕ್ಕ ಇಡತಕ್ಕಂಥದ್ದು ಅತ್ಯಂತ ಸರಳವಾಗಿ ಮತ್ತೆ ಕೋರ್ಟ್‌ಗಳಲ್ಲಿ ಮೇಲ್ಮನವಿಗಳು ಕಡಿಮೆಯಾಗತಕ್ಕಂಥಾದ್ದು. ಇದನ್ನು ಕಡಿಮೆ ಮಾಡಬೇಕೆನ್ನುವ ಕಾರಣದಿಂದ ಇದನ್ನು ಕೂಡ ಗಮನದಲ್ಲಿಟ್ಟುಕೊಂಡು ನಾವು ಈ ಒಂದು ಸರಳೀಕರಣವನ್ನು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. ಈ 4 ತೆರಿಗೆ ದರಗಳನ್ನು ಮಾಡಿದ ಮೇಲೆ ಕೈಗಾರಿಕೆ ನಡೆಸತಕ್ಕಂಥವರು, ವ್ಯಾಪಾರ ಮಾಡತಕ್ಕಂಥವರು ಅಷ್ಟೇ ಅಲ್ಲದೆ ಪತ್ರಿಕೆಗಳವರೂ ಕೂಡ ಕರ್ನಾಟಕ ತೆರಿಗೆಗಳನ್ನು ರ್ಯಾಶನಲೈಸ್ ಮಾಡುವುದರಲ್ಲಿ ಮೂಂಚೂಣಿಯಲ್ಲಿದೆ ಎಂದು ಪ್ರಸ್ತಾಪ

ಮಾಡಿದ್ದೇವೆ. ಟ್ರೇಡ್ ಮತ್ತು ಇಂಡಸ್ಟ್ರೀಗಳು ಇದನ್ನು ಸ್ವಾಗತ ಮಾಡಿದಾವೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇವೊತ್ತು ನಾವು ತೆರಿಗೆಯನ್ನು ಹಾಕುವಾಗ, ಇದು ಯಾರ ಮೇಲೆ ಹೊರೆ ಬೀಳುತ್ತದೆ, ಯಾರು ತೆರಿಗೆಯನ್ನು ಹೊರಬಲ್ಲರು, ಯಾವ ವರ್ಗದ ಜನರಿಗೆ ಭಾರವಾಗುತ್ತದೆ, ಎಂಬುದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಸರಳೀಕರಣ ಮಾಡುವಾಗ ಇದನ್ನು ಬಹಳ ಎಚ್ಚರಿಕೆಯಿಂದ ನೋಡಿದ್ದೇವೆ ಎಂಬ ವಿಚಾರವನ್ನು ಹೇಳಬಯಸುತ್ತೇನೆ. ಇದರ ಜೊತೆಗೆ ನಾಲ್ಕು ರೇಟ್‌ಗಳನ್ನು ಮಾಡುವಾಗ ಗ್ರೂಪಿಂಗ್ ಕೂಡ ಮಾಡಬೇಕಾಗುತ್ತದೆ. ಉದಾಹರಣೆಗೆ ಕಿರಾಣಿ ಅಂಗಡಿಗೆ ಹೋದರೆ ಅಲ್ಲಿ 4 ಪರ್‌ಸೆಂಟ್‌ಗೆ ಅಲ್ಲಿನ ಪದಾರ್ಥಗಳು ಸಿಗಬೇಕೆಂಬ ಕಾರಣಕ್ಕೋಸ್ಕರ, ಹಾರ್ಡ್‌ವೇರ್ ಅಂಗಡಿಗೆ ಹೋದರೆ ಅಲ್ಲಿ ಸಂಬಂಧಪಟ್ಟ ಎಲ್ಲಾ ಪದಾರ್ಥಗಳೂ 8 ಪರ್‌ಸೆಂಟ್‌ಗೆ ಸಿಗಬೇಕೆಂಬ ಕಾರಣಕ್ಕೋಸ್ಕರ , ಈ ರೀತಿಯಾಗಿ ಗ್ರೂಪಿಂಗ್, ರ್ಯಾಶನಲೈಸೇಶನ್, ಸಿಂಪ್ಲಿಫಿಕೇಶನ್ ಮತ್ತು ಟ್ರಾನ್ಸ್‌ಫರೆಂಟ್, ಇಷ್ಟನ್ನೂ ಕೂಡ ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಪೂರಕವಾದ ತೆರಿಗೆ ಪದ್ಧತಿಯು ಇರಬೇಕೆಂಬುದನ್ನು ಗಮನದಲ್ಲಿಟ್ಟುಕೊಂಡು ಈ ಪ್ರಯತ್ನವನ್ನು ಮಾಡಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಇವುಗಳನ್ನು ಮತ್ತೆ ಈ ವರ್ಷದ ಆಯವ್ಯಯದಲ್ಲಿ ಇನ್ನೂ ಒಂದು ದರವನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇವೆ. 2-4-8-12 ದರಗಳು ಇದ್ದುದ್ದನ್ನು 8 ಮತ್ತು 12ನ್ನು ಸಂಯೋಜನೆ ಮಾಡಿ ಶೇಕಡಾ 10ರ ದರವನ್ನು ನಾವು ಇವೊತ್ತು ತಂದಿದ್ದೇವೆ. 8 ಮತ್ತು 12ರ ದರಗಳಲ್ಲಿ ಅಷ್ಟೊಂದು ವ್ಯತ್ಯಾಸ ಮತ್ತು ಯಾವ ವರ್ಗದ ಜನ ಎರಡೂ ಕಡೆ ಒಂದೇ ವರ್ಗದ ಜನರು ಹೆಚ್ಚು ಕಡಿಮೆ ಬರುತ್ತಾರೆ. ಇನ್ನೊಂದು ಮಾತನ್ನು ಮಾನ್ಯ ಸದಸ್ಯರುಗಳಿಗೆ ತಿಳಿಸಬಯಸುತ್ತೇನೆ. ಕಳೆದ ವರ್ಷ ಆಯವ್ಯಯದಲ್ಲಿನ ಸರ್‌ಚಾರ್ಜ್‌ನ್ನು ತೆಗೆದುಹಾಕಿದ್ದೇವೆ. ಮೊದಲು 15 ಪರ್‌ಸೆಂಟ್ ಸರ್‌ಚಾರ್ಜ್ ಇತ್ತು. ಕಳೆದ ವರ್ಷ 8 ಪರ್‌ಸೆಂಟ್ ಇದ್ದವು ಸರ್‌ಚಾರ್ಜ್ ಸೇರಿಸಿ 9.2 ಪರ್‌ಸೆಂಟ್ ತೆರಿಗೆಯನ್ನು ಕೊಡುತ್ತಾ ಇದ್ದರು. 1996-97ರಲ್ಲಿ ಆ ವರ್ಗದವರು 9.2 ಪರ್‌ಸೆಂಟ್ ತೆರಿಗೆಯನ್ನು ಕೊಡುತ್ತಾ ಇದ್ದರು, ಇದನ್ನು 8 ರಿಂದ 10ಮಾಡಿದ್ದಕ್ಕೆ ಬಹಳ ಹೊರೆಯಾಗಿ ಬಿಟ್ಟಿದೆ, ಅದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿ ಬಿಟ್ಟಿದೆ, ಇದು ಶ್ರೀಮಂತರ ಪರವಾಗಿ ಇರತಕ್ಕಂಥ ಆಯವ್ಯಯ, ಬಡವರಿಗೆ ವಿರೋಧಿಯಾದಂಥ ಆಯವ್ಯಯ, ಎಂದೆಲ್ಲಾ ಹೇಳುವುದರಲ್ಲಿ ಯಾವುದೇ ಹುರುಳಿಲ್ಲ ಎಂದು ಹೇಳಬಯಸುತ್ತೇನೆ ಮತ್ತು ಈ ವಿಚಾರಗಳನ್ನು ಸ್ಪಷ್ಟಪಡಿಸಲು ಇಚ್ಚಿಸುತ್ತೇನೆ. ಹೀಗೆ 8 ರಿಂದ 10 ಮಾಡುವಾಗ ಕೆಲವು ಪದಾರ್ಥಗಳನ್ನು ನಾನು 8 ರಿಂದ 4ಕ್ಕೆ ಕೂಡ ಇಳಿಸಿದ್ದೇನೆ. ಸೋಪಿನ ವಿಚಾರದಲ್ಲಿ ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ. ಸೋಪಿನಲ್ಲಿ ಬಟ್ಟೆ ಒಗೆಯುವ ಸೋಪಿಗೆ 4 ಪರ್‌ಸೆಂಟ್ ಇರುವುದು. ಡಿಟರ್ಜೆಂಟ್ ಬಿಲ್ಲೆಗಳಿಗೆ 8 ರಿಂದ 10 ಪರ್‌ಸೆಂಟ್ ಆಗಿರತಕ್ಕಂಥಾದ್ದು. ಆದ್ದರಿಂದ, ಅದರಿಂದ ಬಡವರಿಗೆ ತೊಂದರೆಯಾಗಿದೆ ಎಂಬ ಪ್ರಶ್ನೆ ಉದ್ಭವವಾಗುವುದಿಲ್ಲ. ಹಾಗೆಯೇ ಹೊಲಿಗೆ ಯಂತ್ರಗಳ ಮೆಟೀರಿಯಲ್ಸ್‌ಗೆ 4 ಪರ್‌ಸೆಂಟ್ ಇದೆ. ಸಿಗರೇಟ್ ಮೇಲೆ ನಿಮಗೆ ಅಷ್ಟೊಂದು ವ್ಯಾಮೋಹ ಏಕೆ? ಅದನ್ನು ಬಡವರು ಉಪಯೋಗಿಸುತ್ತಾರೆಯೇ? ಎಂಬುದನ್ನು ಬಹಳ ವ್ಯಾಪಕವಾಗಿ ಹೇಳಿದ್ದಾರೆ. ಸಿಗರೇಟಿಗೆ ತೆರಿಗೆ ಇಲ್ಲ. ಅದಕ್ಕೆ ಕಾನೂನಿನ ಪ್ರಕಾರ ತೆರಿಗೆ ಹಾಕುವುದಿಲ್ಲ. ಕೇಂದ್ರ ಸರಕಾರದವರು ಎಕ್ಸೈಸ್ ಡ್ಯೂಟಿ ಹಾಕುತ್ತಾರೆ. ನಾವು ಸಿಗರೇಟಿನ ಪೈಪು ಮತ್ತು ಫಿಲ್ಟರ್‌ಗಳ ಮೇಲೆ 12 ಪರ್‌ಸೆಂಟ್ ತೆರಿಗೆ ಇದ್ದುದ್ದನ್ನು 10 ಪರ್‌ಸೆಂಟ್ ಮಾಡಿದ್ದೇವೆ. ಇದರ ಮೂಲಕ ತೆರಿಗೆ ಬಂದಿರುವುದು ಬಹಳ ಕಡಿಮೆ. ಇದು ಒಂದು ವಾದ. ಇನ್ನೊಂದು ಏನು ಅಂದರೆ, ದೇಶದ ಉದ್ದಗಲಕ್ಕೆ ವಾದ ಇರತಕ್ಕಂಥಾದ್ದು, ನಮ್ಮ

ತೆರಿಗೆ ದರಗಳು ಪಕ್ಕದ ರಾಜ್ಯಗಳಲ್ಲಿನ ದರಗಳಿಗೆ ಸಮಾನವಾಗಿರಬೇಕೆಂಬುದು. ತೆರಿಗೆ ಹೆಚ್ಚಾದಷ್ಟು ಕೂಡ ಅಲ್ಲಿ ಎವೇಶನ್ ಆಗುತ್ತದೆ, ಆದಕಾರಣ ಸಾಧ್ಯವಾದಷ್ಟು ಮಟ್ಟಿಗೆ ಸ್ಟೇಜ್ ಡೈವರ್‌ಸಿಫಿಕೇಶನ್ ಆಗದ ಹಾಗೆ ನೋಡಿಕೊಳ್ಳಬೇಕು, ಆ ಕಾರಣಕ್ಕಾಗಿ ಪಕ್ಕದ ರಾಜ್ಯಗಳ ಜೊತೆಗೆ ಅವರ ದರಗಳಿಗೆ ಸಮಾನವಾಗಿ ದರಗಳನ್ನು ಇಡತಕ್ಕಂಥ ಪ್ರಯತ್ನಗಳನ್ನು ಮಾಡಿದ್ದೇವೆ. ಇಲ್ಲಿ 12 ರಿಂದ 10ಕ್ಕೆ ಆಯಿತು, ಆದ್ದರಿಂದ ಇವರು, ಜನತಾದಳ ಸರಕಾರವು ಶ್ರೀಮಂತರ ಪರವಾಗಿ ಇದೆ ಎಂಬ ಮಾತನ್ನು ಹೇಳಿದ್ದರು. ಇಂಥವುಗಳನ್ನು ಈ ದೃಷ್ಟಿಕೋನದಿಂದ ನೋಡಿಕೊಳ್ಳತಕ್ಕಂಥಾದ್ದು ಅಲ್ಲ. ನಾನು ಆಗಲೇ ಹೇಳಿದ್ದೇನೆ. ಇವೊತ್ತು ದೇಶದಲ್ಲಿ 1 ಪರ್‌ಸೆಂಟ್, 2 ಪರ್‌ಸೆಂಟ್ ಟ್ಯಾಕ್ಸ್ ಜಾಸ್ತಿಯಾಗುತ್ತಿರುವುದನ್ನು ನಾವು ನೋಡುತ್ತೇವೆ. ಸಾಮಾನ್ಯ ಜನರು ಬಳಸತಕ್ಕಂಥ, ಮಧ್ಯಮವರ್ಗದ ಜನರು ಬಳಸತಕ್ಕಂಥ ಪದಾರ್ಥಗಳು ಮತ್ತು ಅದಕ್ಕೆ ತಗಲತಕ್ಕಂಥ ಉತ್ಪಾದನಾ ವೆಚ್ಚ ಎಷ್ಟು? ಅದನ್ನು ತಯಾರು ಮಾಡತಕ್ಕಂಥವರು ಎಷ್ಟು ಲಾಭವನ್ನು ಇಟ್ಟುಕೊಂಡಿದ್ದಾರೆ? ಇದರಿಂದ ಎಷ್ಟು ಹೊರೆಯಾಗುತ್ತದೆ? ಸಮಾಜದ ಮೇಲಿನ ಹೊರೆ ಏನು? ಇದರಿಂದ ಎಷ್ಟು ಕಪ್ಪು ಹಣ ಹೋಗುತ್ತದೆ? ಎಂಬ ವಿಚಾರಗಳ ಬಗ್ಗೆ ಚರ್ಚೆಯಾಗುವುದೇ ಇಲ್ಲ. ಉದಾಹರಣೆಗೆ ನೀವು ಸೀಮೆ ಎಣ್ಣೆ ಬೆಲೆಯನ್ನು 8 ರಿಂದ 10ಕ್ಕೆ ಎಂದರು ಏರಿಸಿದ್ದೀರಿ ಆದರೆ ಪಿ ಡಿ ಎಸ್ ಸೀಮೆ ಎಣ್ಣೆಯು ಈಗಲೂ 4 ಪರ್‌ಸೆಂಟ್ ಇರುವುದು.

ಶ್ರೀ ಹೆಚ್. ಎನ್. ನಂಜೇಗೌಡ :- ಈ ಬಗ್ಗೆ ಚರ್ಚೆಯಾಗಲಿ, ಅದನ್ನು ನೀವೇ ಪ್ರಾರಂಭ ಮಾಡಿ.

ಶ್ರೀ ಸಿದ್ಧರಾಮಯ್ಯ :- ಸೀಮೆ ಎಣ್ಣೆಯ ವಿಚಾರದಲ್ಲಿ ಕೇಂದ್ರ ಸರಕಾರದವರು ಕ್ರಮ ತೆಗೆದುಕೊಳ್ಳಬೇಕು, ನಾವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಅಂಥ ಚರ್ಚೆಯನ್ನು ಸರಕಾರದವರು ಮಾಡಬೇಕು. ಯಾರು ಅಧಿಕಾರದಲ್ಲಿ ಕುಳಿತಿದ್ದಾರೋ ಅವರು ಪ್ರಾರಂಭ ಮಾಡಬೇಕು

ಶ್ರೀ ಸಿದ್ಧರಾಮಯ್ಯ :- ಇಂಥ ವಿಚಾರಗಳ ಬಗ್ಗೆ ಸರಕಾರ, ನಾವು, ನೀವು ಎಲ್ಲರೂ ಒಟ್ಟಿಗೆ ಮಾಡಬೇಕಾಗುತ್ತದೆ. ಮಾಡಬಾರದು ಎಂದು ಅಲ್ಲ. ಮಾಡಬೇಕೆಂದರೆ ನೀವೂ ಸಹಕಾರ ಮಾಡಬೇಕು, ನಾವು ಮತ್ತು ನೀವು ಸೇರಿ ಪ್ರಯತ್ನಗಳನ್ನು ಮಾಡೋಣ. ಬ್ಲೇಡ್‌ನ ವಿಚಾರ ಬಂದಾಗ ನೀವು ಗಡ್ಡ ಬಿಟ್ಟಿದ್ದೀರಿ, ನಿಮಗೆ ಅವಶ್ಯಕತೆ ಇಲ್ಲ ಎಂದು ಹೇಳಿದರು. ಬೇರೆ ರಾಜ್ಯಗಳಲ್ಲಿ ಬ್ಲೇಡ್‌ಗೆ 10- 12 ಪೈಸೆ ತೆರಿಗೆ ಇದ್ದರೆ ನಮ್ಮಲ್ಲಿ ಅದು 10 ಪರ್‌ಸೆಂಟ್ ಮಾತ್ರ ಇರುವುದು. 8 ಇದ್ದುದನ್ನು 10 ಮಾಡಿದ್ದೇವೆ. ಆದ್ದರಿಂದ ನಾನು ಗಡ್ಡ ಬಿಟ್ಟ ಕಾರಣ ಅದನ್ನು ಹೆಚ್ಚು ಮಾಡಿದ್ದೇನೆಂದು ಅಲ್ಲ. ನಾನು ಕೂಡ ವಾರಕ್ಕೊಮ್ಮೆ ಶೇವಿಂಗ್ ಮಾಡುತ್ತೇನೆ. ಇಲ್ಲಿ ಒಬ್ಬ ವ್ಯಕ್ತಿ ವೈಯಕ್ತಿಕವಾಗಿ ಉಪಯೋಗಿಸತಕ್ಕಂಥಾದ್ದು ಅಲ್ಲ. ಆದ್ದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಸಾಮಾನ್ಯ ಜನರ ರೀತಿಯಲ್ಲಿ ತೆರಿಗೆ ಕೊಡಲು ಕಷ್ಟವಾಗುವ ಪರಿಸ್ಥಿತಿಯಲ್ಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಒಂದು ದಿನದಲ್ಲಿ ಎರಡು ಬಾರಿ ಶೇವಿಂಗ್ ಮಾಡಿಕೊಳ್ಳುವವರೂ ಇದ್ದಾರೆ, ಅವರ ಗತಿ ಏನು?

ಅಧ್ಯಕ್ಷರು :- ಸ್ವಂತಕ್ಕೆ ಬ್ಲೇಡ್ ಉಪಯೋಗಿಸುವವರು ಬೇರೆ. ಇನ್ನು ಕೆಲವರು ಯಾರಾದರೂ ಗೊತ್ತಿಲ್ಲದವರು ಸಿಕ್ಕರೆ ಶೇವಿಂಗ್ ಮಾಡುವವರು ಇದ್ದಾರೆ. ಅವರಿಗೆ ದುಬಾರಿಯಾಗುತ್ತದೆ...

ಶ್ರೀ ವಾಟಾಳ್ ನಾಗರಾಜ್ :- ಬೇರೆಯವರಿಗೆ ಬ್ಲೇಡ್ ಹಾಕುವ ವರ್ಗವೂ ಇದೆ. ಇಲ್ಲವೆಂದಲ್ಲ. ಅವರು ಯಾರು ಎಂದು ಕೂಡ ನಿಮಗೆ ಗೊತ್ತಿದೆ.

ಶ್ರೀ ಸಿದ್ಧರಾಮಯ್ಯ :- ವಾಟಾಳ್‌ರವರಿಗೆ 8 ಪೈಸೆ ಕೊಡುವ ಶಕ್ತಿ ಇದ್ದಲ್ಲಿ ಹತ್ತು ಪೈಸೆ ಕೊಡಲು ಕೂಡ ಸಾಧ್ಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಬಹಳಷ್ಟು ಜನರು ದಿನವೂ ಶೇವಿಂಗ್ ಮಾಡಿಕೊಳ್ಳತಕ್ಕಂಥವರಿದ್ದಾರೆ. ನಿಮ್ಮ ತರಹ ವಾರಕ್ಕೆ ಒಮ್ಮೆ ಮಾಡಬೇಕೆನ್ನುವುದಾದರೆ ಅದಾದರೂ ಏಕೆ ಬೇಕು? 15 ದಿನಗಳಿಗೊಮ್ಮೆ ಬೇಕಾದರೂ ಮಾಡಿಕೊಳ್ಳಿ.

ಶ್ರೀ ಸಿದ್ದರಾಮಯ್ಯ :- ಗಡ್ಡಬಿಟ್ಟುಕೊಳ್ಳುವುದು ನಮ್ಮ ಅನುಕೂಲಕ್ಕಾಗಿ, ಆದ್ದರಿಂದ ವೈಯಕ್ತಿಕವಾಗಿ ಅದರ ಬಗ್ಗೆ ಚರ್ಚೆ ಬೇಡ.

ಶ್ರೀ ವಾಟಾಳ್ ನಾಗರಾಜ್ :- ಗಡ್ಡ ಬಿಟ್ಟಿರುವುದರಿಂದ ಅನುಕೂಲವಾಗುತ್ತದೆ ಅಂದರೆ ಏನು?

. ಶ್ರೀ ಸಿದ್ಧರಾಮಯ್ಯ :- ಬಹಳ ಜನಕ್ಕೆ ಗಡ್ಡಬಿಟ್ಟುಕೊಳ್ಳುವುದು ಇಷ್ಟವಾಗುತ್ತದೆ....

ಅಧ್ಯಕ್ಷರು :- ಮನುಷ್ಯ ಸಂಘ ಜೀವಿ. ಜನರ ಮಧ್ಯೆ ಬದುಕುವವನು. ಹಾಗಾಗಿ ನಾಲ್ಕರು ಜನರ ಅಭಿಪ್ರಾಯಕ್ಕೆ ತಕ್ಕಂತೆ ನಡೆದುಕೊಳ್ಳಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ ತೆರಿಗೆಯು 8, 10, 12 ಪರ್‌ಸೆಂಟ್ ಆಯ್ತು ಎನ್ನತಕ್ಕದ್ದಕ್ಕಿಂತ ಏರ್‌ಕೂಲರ್, ರೆಫ್ರಿಜರೇಟರ್, ಏರ್‌ಕಂಡೀಶನರ್ ಮುಂತಾದವುಗಳಿಗೆ ವಿಶೇಷ ತೆರಿಗೆಯನ್ನು 12 ರಿಂದ 15 ಪರ್‌ಸೆಂಟ್‌ವರೆಗೆ ಹಾಕಿದ್ದೇವೆ. ಬಹಳ ಕಡಿಮೆ ಜನರು, ಸಮಾಜದಲ್ಲಿನ ಅತ್ಯಂತ ಮೇಲ್ವರ್ಗದ ಜನರು ಬಳಸತಕ್ಕಂಥಾದ್ದಕ್ಕೆ 12 ರಿಂದ 15ರ ವರೆಗೆ ತೆರಿಗೆ ಹಾಕಿದ್ದೇವೆ. ಸಾಮಾನ್ಯ ಜನರು ಬಳಸತಕ್ಕಂಥ ಕೆಲವು ಪದಾರ್ಥಗಳಿಗೆ 8 ರಿಂದ 4ಕ್ಕೆ ಇಳಿಸತಕ್ಕಂಥ ಪ್ರಯತ್ನವನ್ನು ಕೂಡ ಮಾಡಿದ್ದೇವೆ. ಇದನ್ನು ಮಾಡುವಾಗ ನಾವು ಸಾಮಾನ್ಯ ಜನರನ್ನು ಗಮನದಲ್ಲಿಟ್ಟುಕೊಂಡು, ಬಡವರನ್ನು ಗಮನದಲ್ಲಿಟ್ಟುಕೊಂಡು, ತೆರಿಗೆ ಕೊಡಲು ಯಾರಿಗೆ ಶಕ್ತಿ ಇದೆ ಅಂಥವರನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಮಾಡಿದ್ದೇವೆ. ನಾವು 21 ತೆರಿಗೆಗಳಿಂದ 4 ತೆರಿಗೆಗಳ ರೇಟ್‌ಗಳನ್ನು ಮಾಡುವಾಗ ಕೆಲವು ವಿಷಯಗಳನ್ನು ಗಮನಿಸಿದ್ದೇವೆ. ಮೊದಲು 12- 13- 14 ರೇಟ್‌ಗಳೆಲ್ಲಾ ಇದ್ದುವು. ಯಾವುವು ಎಷ್ಟೆಷ್ಟು ಎಂದು ಓದಿ ಹೇಳಲು ಹೋಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಯಾವುದಕ್ಕೆ ತೆರಿಗೆ ಕಡಿಮೆ ಮಾಡುತ್ತೀರಿ?

ಶ್ರೀ ಸಿದ್ಧರಾಮಯ್ಯ :- ಯಾವುದಕ್ಕೂ ಕಡಿಮೆ ಮಾಡುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಯಾವುದಕ್ಕೂ ಕಡಿಮೆ ಮಾಡುವುದಿಲ್ಲ ಅಂದರೆ ಇಲ್ಲಿ ಚರ್ಚೆ ಮಾಡುವ ವಿಚಾರವೇ ಬರುವುದಿಲ್ಲ. ವಿರೋಧಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಾವು ಜನಸಾಮಾನ್ಯರ ಹಿತದೃಷ್ಟಿಯಿಂದ ಸಲಹೆಗಳನ್ನು ಏನು ಕೊಟ್ಟಿದ್ದೇವೆ, ಅದನ್ನು ಪರಿಗಣಿಸಲು ತಮ್ಮಲ್ಲಿ ಧಾರಾಳತನ ಇಲ್ಲವೆಂದಲ್ಲಿ ಇಲ್ಲಿ ಚರ್ಚೆ ಮಾಡುವ ಅಗತ್ಯವಿಲ್ಲ. ಏಕಪಕ್ಷೀಯವಾಗಿ ತಾವು ಹೇಳಿದಂತೆ

ಮಾಡಿ. ನಾವು ಎದ್ದು ಹೊರಗೆ ಹೋಗುತ್ತೇವೆ. ಚರ್ಚೆ ಏಕೆ ಮಾಡಬೇಕು? ಕೆಲವು ವಿಷಯಗಳ ಮೇಲೆ ತಾವು ಬೆಳಕು ಚೆಲ್ಲ ಬೇಕಾಗುತ್ತದೆ. ಸಂಖ್ಯೆಯ ದೃಷ್ಟಿಯಲ್ಲಿ ಹೆಚ್ಚು ಕಡಿಮೆ ಇರಬಹುದು. ಆದರೆ, ಜನರ ಅಭಿಪ್ರಾಯಗಳನ್ನು ಇಲ್ಲಿ ನಾವು ವ್ಯಕ್ತಪಡಿಸಿದಾಗ ಅದಕ್ಕೆ ಪ್ರತಿಕ್ರಿಯಿಸದೇ ನಾನು ಹೇಗೆ ಹೇಳಿದ್ದೇನೋ ಹಾಗೆಯೇ ಮೊಂಡುದಾರಿಯನ್ನು ಹಿಡಿದುಕೊಂಡು ಹೋಗುವವನು, ನೀವು ಏನು ಬೇಕಾದರೂ ಹೇಳಿಕೊಂಡು ಹೋಗಿ ಎಂದು ಹೇಳುವುದಾದರೆ ಇದು ಡೆಮಾಕ್ರಸಿ ಸಿಸ್ಟಂಗೆ ಒಪ್ಪುವುದಿಲ್ಲ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಹೇಳಬಯಸುವುದೇನೆಂದರೆ, ನಾನು ತೆರಿಗೆಗಳನ್ನು ಕಡಿಮೆ ಮಾಡಲು ಆಗುವುದಿಲ್ಲ ಎಂದು ಏಕೆ ಹೇಳಿದ್ದುದು ಎಂದರೆ, ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಗೋಧಿ ಮೇಲೆ, ಗೋಧಿ ಹೊಟ್ಟಿನ ಮೇಲೆ, ಗೋಧಿ ಪ್ರಾಡಕ್ಟ್‌ನ ಮೇಲೆ ತೆರಿಗೆ ಹಾಕಿದ್ದೀರಿ ಎಂದು ಹೇಳಿದ್ದಾರೆ. ಅಂತೆಯೇ ಈ ತೆರಿಗೆ ಬೇರೆ ಯಾವ ರಾಜ್ಯದಲ್ಲಿಯೂ ಇಲ್ಲ, ಕೇವಲ ಕರ್ನಾಟಕದಲ್ಲಿ ಮಾತ್ರ ಈ ತೆರಿಗೆ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಎಲ್ಲಾ ರಾಜ್ಯಗಳ ವಿವರಗಳನ್ನು ತರಿಸಿದ್ದೇನೆ. ಗೋಧಿಯ ಮೇಲೆ ಎಲ್ಲಿಯೂ ತೆರಿಗೆ ಇಲ್ಲ. ಆಂಧ್ರ ಪ್ರದೇಶದಲ್ಲಿ ಗೋಧಿ ಮೇಲೆ 3 ಪರ್‌ಸೆಂಟ್, ಗೋಧಿ ಪ್ರಾಡಕ್ಟ್ ಮೇಲೆ 4 ಪರ್‌ಸೆಂಟ್, ಕೇರಳದಲ್ಲಿ ಗೋಧಿ ಮೇಲೆ 1 ಮತ್ತು ಪ್ರಾಡಕ್ಟ್ ಮೇಲೆ 4 ಪರ್‌ಸೆಂಟ್. ವೆಸ್ಟ್‌ಬೆಂಗಾಲ್‌ನಲ್ಲಿ ಗೋಧಿ ಮೇಲೆ 2 ಪರ್‌ಸೆಂಟ್, ಗೋಧಿ ಪ್ರಾಡಕ್ಟ್ ಮೇಲೆ 4 ಪರ್‌ಸೆಂಟ್. ಮಹಾರಾಷ್ಟ್ರದಲ್ಲಿ ಗೋಧಿ ಮೇಲೆ ಇಲ್ಲ, ಗೋಧಿ ಪ್ರಾಡಕ್ಟ್‌ನ ಮೇಲೆ 4 ಪರ್‌ಸೆಂಟ್. ತಮಿಳು ನಾಡಿನಲ್ಲಿ ಗೋಧಿ ಮೇಲೆ ಇಲ್ಲ, ಗೋಧಿ ಪ್ರಾಡಕ್ಟ್‌ನ ಮೇಲೆ 4 ಪರ್‌ಸೆಂಟ್. ಕರ್ನಾಟಕದಲ್ಲಿ 1-4-98 ರಿಂದ ಜಾರಿಗೆ ಬರುವ ರೀತಿಯಲ್ಲಿ ಇಲ್ಲಿಯವರೆಗೆ ಇಲ್ಲದ ಗೋಧಿ ಪ್ರಾಡಕ್ಟ್ಸ್ ಮೇಲೆ 2 ಪರ್‌ಸೆಂಟ್ ಮಾಡಿದ್ದೇವೆ. ಗೋಧಿ ಮೇಲೆ ತೆರಿಗೆ ಹಾಕಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಯಾವ ಯಾವ ರಾಜ್ಯದಲ್ಲಿ ಗೋಧಿ ಮತ್ತು ಗೋಧಿ ಪ್ರಾಡಕ್ಟ್‌ಗಳ ಕಂಸಮ್‌ಶನ್ ಎಷ್ಟು ಇದೆ?

ಶ್ರೀ ಸಿದ್ಧರಾಮಯ್ಯ :- ಆ ಮಾಹಿತಿಗಳು ನಮ್ಮಲ್ಲಿ ಸಧ್ಯಕ್ಕೆ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಹಾರಾಷ್ಟ್ರದಲ್ಲಿ ಪ್ಯಾಕ್ಡ್‌ಫುಡ್ ಏನು ಬರುತ್ತದೆ, ಮೇಲ್ವರ್ಗದ ಜನರು ಉಪಯೋಗ ಮಾಡುವುದು, ಅದರ ಮೇಲೆ ಮಾತ್ರ ಟ್ಯಾಕ್ಸ್ ಹಾಕಿರುವುದು.

ಶ್ರೀ ಸಿದ್ಧರಾಮಯ್ಯ :- ಮಹಾರಾಷ್ಟ್ರದಲ್ಲಿ ಮೊನ್ನೆ ಬಜೆಟ್ ಮಂಡಿಸಿದ್ದಾರೆ. ಅದರಲ್ಲಿ ಹೊಸತಾಗಿ ಈ ತೆರಿಗೆಗಳನ್ನು ಹಾಕಿದ್ದಾರೆ. ಅದು 4 ಪರ್‌ಸೆಂಟ್ ಆಗಿದೆ. ಆದ್ದರಿಂದ ಗೋಧಿ ಮೇಲೆ ಪಕ್ಕದ ರಾಜ್ಯಗಳಲ್ಲಿ ಟ್ಯಾಕ್ಸ್ ಇಲ್ಲ, ಕರ್ನಾಟಕ ರಾಜ್ಯದಲ್ಲಿ ಮಾತ್ರ ಇದೆ ಎನ್ನುವ ಮಾತು ಮತ್ತು ಇದರಿಂದ ರಾಜ್ಯದ ಜನತೆಗೆ ಭಾರೀ ದುಬಾರಿ ಆಗುತ್ತದೆ ಎಂಬ ವಾದದಲ್ಲಿ ತಿರುಳಿಲ್ಲ ಎಂಬ ಮಾತನ್ನು ನಾನು ಹೇಳಬಯಸುತ್ತೇನೆ. ಹಿಂದೆ 1992ನೇ ಇಸವಿಯಲ್ಲಿ ಒಮ್ಮೆ ತೆರಿಗೆಯನ್ನು ಹಾಕಿದ್ದರು. ಸನ್ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯವರಾಗಿದ್ದಾಗ ಹಾಕಿದರು, ಆಮೇಲೆ ತೆಗೆದುಹಾಕಿದರು. ಅನಂತರ ನಾನು 1995ರಲ್ಲಿ 4 ಪರ್‌ಸೆಂಟ್ ತೆರಿಗೆ ಹಾಕಿದ್ದೆ. ಮತ್ತೆ ಅದನ್ನು ಒತ್ತಡ ಬಂದ ಕಾರಣ ತೆಗೆದು ಹಾಕಬೇಕಾಗಿ ಬಂತು. ಕೆಲವು ಅಸೋಸಿಯೇಶನ್‌ನವರು ಬಂದು ತೆರಿಗೆ ಇಷ್ಟು ಹಾಕಿದ್ದು ಸರಿಯಲ್ಲ ಎಂದು ಚರ್ಚೆ ಮಾಡಿ ತೊಂದರೆಯಾಗುತ್ತದೆ ಎಂದು ಹೇಳಿದಾಗ, ಇಲ್ಲ, ಬೇರೆ ರಾಜ್ಯಗಳಲ್ಲಿ ಕೂಡ ಇದೆ ಎಂದು ಸಮಾಧಾನ ಮಾಡಬೇಕಾಯಿತು. ಶ್ರೀರಾಮರೆಡ್ಡಿಯವರು ನೀವು ತೆರಿಗೆ ಬೇಸ್ ದೊಡ್ಡದು ಮಾಡಿಕೊಳ್ಳಬೇಕು,

ಈಗ ಚಿಕ್ಕದು ಮಾಡುತಿದ್ದೀರಿ, ಯಾವ ಯಾವದಕ್ಕೆ ಎಕ್ಸಂಮಷನ್ ಕೊಟ್ಟಿದ್ದೀರಿ ಅದನ್ನೆಲ್ಲಾ ತೆರಿಗೆ ವ್ಯಾಪ್ತಿಗೆ ತನ್ನಿ ಎಂದು ಹೇಳಿದ್ದಾರೆ. ಮುಂದೆ ಹೇಳುತ್ತಾ ನರ್ಸಿಂಗ್ ಹೋಂ, ಪ್ರೈವೇಟ್ ಮೆಡಿಕಲ್ ಕಾಲೇಜುಗಳನ್ನು ಬಿಟ್ಟುಬಿಟ್ಟಿದ್ದೀರಿ ಎಂದಿದ್ದಾರೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :- ನರ್ಸಿಂಗ್ ಹೋಂಗಳಿಗೆ, ಛತ್ರಗಳಿಗೆ ಮತ್ತು ಮೆಡಿಕಲ್ ಕಾಲೇಜಿಗೆ ಎಷ್ಟು ತೆರಿಗೆಯನ್ನು ವಿಧಿಸುವಿರಿ?

ಶ್ರೀ ಸಿದ್ಧರಾಮಯ್ಯ :- ಮೆಡಿಕಲ್ ಕಾಲೇಜಿಗೆ ಮಾಡಿಲ್ಲ. ನರ್ಸಿಂಗ್ ಹೋಂಗಳಿಗೆ ಮತ್ತು ಛತ್ರಗಳಿಗೆ ಲಮ್ ಸಮ್ ಆಗಿ ಮಾಡಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನು ಹೇಳಿದುದ್ದು ಏನೆಂದರೆ, widening of this scope,

ಶ್ರೀ ಸಿದ್ಧರಾಮಯ್ಯ:- ನೀವು ಹೇಳುವಂತಹ ಅಭಿಪ್ರಾಯವನ್ನು ಗಮನದಲ್ಲಿಟ್ಟು ಕೊಂಡು ಸಾಮಾನ್ಯ ಜನರಿಗೆ ಭಾರವಾಗದ ರೀತಿಯಲ್ಲಿ ವೈಡನಿಂಗ್ ಮಾಡುವುದಕ್ಕೆ ಪ್ರಯತ್ನಪಡೋಣ. ಇದರ ಬಗ್ಗೆ ನೀವು ಕೊಟ್ಟರುವಂತಹ ಸಲಹೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ವೈಡನ್ ಮಾಡಿ ಎಂದು ಹೇಳಿದ್ದಕ್ಕೆ ಸಲಹೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದೇನೆ ಎಂದು ಹೇಳಿದಿರಿ, ಆದರೆ ಯಾವುದಕ್ಕೆ ಕಡಿಮೆಮಾಡಿ ಎಂದು ಹೇಳಿದರು ಅದಕ್ಕೆ ಮಾತ್ರ ಗಂಭೀರವಾಗಿ ತೆಗೆದುಕೊಳ್ಳಬೇಡಿ.

ಶ್ರೀ ಸಿದ್ಧರಾಮಯ್ಯ:- ಯಾವುದನ್ನು ಕಡಿಮೆಮಾಡಿ ಎಂದು ಹೇಳಿದರು, ಅದನ್ನು ಸಹ ಗಂಭೀರವಾಗಿ ಪರಿಗಣಿಸಿದ್ದೇನೆ. ಅದನ್ನು ಗಂಭೀರವಾಗಿ ಪರಿಗಣಿಸಿಯೇ ಗಂಭೀರವಾದಂತಹ ಉತ್ತರವನ್ನು ಕೊಡುತ್ತಿದ್ದೇನೆ. ನಾವು ಈ ತೆರಿಗೆಯಲ್ಲಿ ಏನು ಬದಲಾವಣೆ ತಂದಿದ್ದೇವೆ ಇದು value added tax system, ಕಡೆಗೆ ಹೋಗತಕ್ಕಂತಹ, ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆಗೆ ಪೂರಕವಾದಂತಹ, ಆರ್ಥಿಕ ಬೆಳವಣಿಗೆಗೆ ಪೂರಕವಾದಂತಹ ಒಂದು ವ್ಯವಸ್ಥೆ ಕಡೆಗೆ ನಾವು ಹೋಗುತ್ತಿದ್ದೇವೆ. ಎಂಬ ಮಾತನ್ನು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ . ಈ ಕಾರಣದಿಂದ ನಾವು ಕೆಲವು ಬದಲಾವಣೆಗಳನ್ನು ತೆರಿಗೆ ಪದ್ಧತಿಯಲ್ಲಿ ನಾವು ತಂದಿದ್ದೇವೆ ಹೊರತು, ಬೇರೆ ಯಾವುದೇ ಕಾರಣದಿಂದ ಇಲ್ಲ ಎಂಬ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿ, ಮಾನ್ಯ ಸದಸ್ಯರು ಇಟ್ಟರುವಂತಹ ಪ್ರಶ್ನೆಗಳಿಗೆ ನಾನು ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿದ್ದೇನೆ ಎಂಬ ಭಾವನೆಯನ್ನು ಹೊಂದಿದ್ದೇನೆ. ಸನ್ಮಾನ್ಯ ಖರ್ಗೆಯನ್ನು, ತೆರಿಗೆ ಮೂಲೋತ್ಪಾದನೆ ಕಡಿಮೆಯಾಗುತ್ತಿದೆ ಎಂಬ ಮಾತನ್ನು ಹೇಳಿದ್ದಾರೆ ಮತ್ತು ತೆರಿಗೆ ಸೋರಿ ಹೋಗುತ್ತಿದೆ ಎಂದು ಬೇರೆ ಸದಸ್ಯರು ಸಹ ಈ ಮಾತನ್ನು ಹೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ತೆರಿಗೆ ಬೆಳವಣಿಗೆ ಗ್ರೋಥ್ ರೇಟ್, ಆವರೇಜ್ ಶೇಕಡ 16 ರಷ್ಟು ಕಾಯ್ದಿರಿಸಿಕೊಂಡಿದ್ದೇವೆ . ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ 1994-95ರಲ್ಲಿ 2,809 ಕೋಟಿ ರೂಪಾಯಿ ಸಂಗ್ರಹವಾಗಿದೆ. ಗ್ರೋಥ್ ಶೇಕಡ 9, 1995-96ರಲ್ಲಿ 3,351 ಕೋಟಿ ರೂಪಾಯಿ ಸಂಗ್ರಹವಾಗಿದೆ. ಗ್ರೋಥ್ 19.5 ಪರ್ಸೆಂಟ್. 1996-97ರಲ್ಲಿ 3,940.80 ಕೋಟಿ ರೂಪಾಯಿ ಸಂಗ್ರಹವಾಗಿದೆ. ಗ್ರೋಥ್ 17.52 ಪರ್ಸೆಂಟ್. ಈ ವರ್ಷ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸುಮಾರು 10 ಪರ್ಸೆಂಟ್ ಗ್ರೋಥ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- 1994-95ರಲ್ಲಿ ಕನ್‌ಸ್ಯೂಮರ್ ಇಂಡೆಕ್ಸ್ ಏನಿತ್ತು?

ಶ್ರೀ ಸಿದ್ಧರಾಮಯ್ಯ:- ಪರ್ಸೆಂಟೇಜ್‌ಗೂ ಅದಕ್ಕೂ ಸಂಬಂಧವಿಲ್ಲ. ಸನ್ಮಾನ್ಯ ಖರ್ಗೆ ಅವರೆ, ಹಿಂದಿನ ವರ್ಷದ ಬೆಳವಣಿಗೆಗೆ ಎಷ್ಟು ತೆರಿಗೆಯನ್ನು ವಸೂಲಿ ಮಾಡಿದ್ದೀರಿ, ಮುಂದಿನ ವರ್ಷಕ್ಕೆ ಎಷ್ಟು ತೆರಿಗೆಯನ್ನು ವಸೂಲಿ ಮಾಡುತ್ತೀರಿ, ಅದರಲ್ಲಿ ವ್ಯತ್ಯಾಸ ಇರುವುದು ಗ್ರೋಥ್ ಆಗುತ್ತದೆ. ಪರ್ಸೆಂಟೇಜ್ ಆಫ್ ಗ್ರೋಥ್‌ಗೂ, ಕನ್‌ಸ್ಯೂಮರ್ ರೇಟಿಗೂ ಸಂಬಂಧ ಇರುವುದಿಲ್ಲ. ಈಗ 1994-95ರಲ್ಲಿ 2,809 ಕೋಟಿ ರೂಪಾಯಿ ಆಗಿತ್ತು ಹಿಂದಿನ ವರ್ಷ, ಅಂದರೆ 1993-94ರಲ್ಲಿ 2,80 ಕೋಟಿ ರೂಪಾಯಿ ಆಗಿದ್ದರೆ ಅದಕ್ಕೆ ಗ್ರೋಥ್ ರೇಟ್ ಆಯಿತು ಎಂದು ಲೆಕ್ಕ ಹಾಕುವುದು ಇಂಡೆಕ್ಸ್ ಎಷ್ಟು ಎಂದು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಒಬ್ಬ ವ್ಯಾಪಾರಸ್ಥರು ಕಳೆದ ವರ್ಷ ಐದು ಲಕ್ಷ ರೂಪಾಯಿಗಳ ಟರ್ನ್‌ಓವರ್ ಮಾಡಿದ್ದರೆ, ಆಷ್ಟೇ ಕ್ವಾಂಟಿಟಿ ಮಾಲುಗಳಿಗೆ ಈ ವರ್ಷದ ಟರ್ನ್‌ಓವರ್‌ನಲ್ಲಿ ಏಳು ಲಕ್ಷ ರೂಪಾಯಿಗಳು ಆಗುತ್ತದೆ. ಸ್ವಾಭಾವಿಕವಾಗಿ ಏಳು ಲಕ್ಷ ರೂಪಾಯಿಗಳ ಮೇಲೆ ನಿಮ್ಮ ಟ್ಯಾಕ್ಸ್ ಹೆಚ್ಚಿಗೆ ಆಗದೆ, ಕಡಿಮೆ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ:- ನೀವು ಹೇಳುವಂತಹ ಮಾತನ್ನು ನಾನು ಅಲ್ಲಗೆಳೆಯುವುದಿಲ್ಲ. ಆದರೆ ಈ ವರ್ಷ ಇಡೀ ದೇಶದಲ್ಲಿ ನನ್ನ ಆಯವ್ಯಯದಲ್ಲಿ ಪ್ರಸ್ತಾಪ ಮಾಡಿದಂತೆ, ಕೈಗಾರಿಕಾ ಉತ್ಪನ್ನ ಕಡಿಮೆಯಾಗಿದೆ, ಮತ್ತು ಇನ್‌ವೆಸ್ಟ್‌ಮೆಂಟ್ ಕೂಡ ಕಡಿಮೆಯಾಗಿದೆ. ಏಕೆಂದರೆ ರಾಜಕೀಯ ಕಾರಣಗಳಿಂದ ಈ ರೀತಿಯಾಗಿರಬಹುದು. ಸ್ವಾಭಾವಿಕವಾಗಿ ಸಂಗ್ರಹ ಕೂಡ ಕಡಿಮೆಯಾಗಿದೆ. ಅದನ್ನು ನಾನು ಇಲ್ಲ ಎಂದು ಹೇಳಲಿಲ್ಲವಲ್ಲ. ಅದರ ಜೊತೆಗೆ ನಾನು ಕಳೆದ ವರ್ಷ ಸರ್‌ಚಾರ್ಜ್ 200 ಕೋಟಿ ರೂಪಾಯಿಗಳನ್ನು ತೆಗೆದುಹಾಕಿದೆ. ಆ 200 ಕೋಟಿ ರೂಪಾಯಿ ತೆಗೆಯದೆ ಹೋಗಿದ್ದರೆ ಈ ವರ್ಷ ಶೇ 15 ರಷ್ಟು ಗ್ರೋಥ್ ಇದ್ದೇ ಇರುತಿತ್ತು. inspite of recession in the country, ಅದನ್ನು ನಾವು ಲೆಕ್ಕ ಹಾಕಿದರೆ, ಶೇಕಡ 15ರಷ್ಟು ಹೆಚ್ಚಾಗುತ್ತದೆ. ಆದರೆ ನಮಗೆ ಕಡಿಮೆ ಆಗುವುದು ಯಾವುದರಲ್ಲಿ ಎಂದರೆ, ಅಬಕಾರಿ ಇಲಾಖೆಯಲ್ಲಿ ಮಾತ್ರ. because of our new policy ನಾವು ಹೊಸದಾಗಿ ಒಂದು ಪಾಲಿಸಿ ಮಾಡಿದ್ದೇವೆ, ಏಕೆಂದರೆ ಜನರು ಇದನ್ನು ಕಡಿಮೆ ಉಪಯೋಗ ಮಾಡಬೇಕು ಎನ್ನುವ ದೃಷ್ಟಿಯಿಂದ, ಒಂದು ಸದುದ್ದೇಶದಿಂದ ಮಾಡಿದಂತಹ ನೀತಿಯಾಗಿದೆ. ನಾವು ನಮ್ಮ ಪ್ರಣಾಳಿಕೆಯಲ್ಲಿ ಸಾರಾಯಿಯನ್ನು ನಿಲ್ಲಿಸುತ್ತೇವೆ ಎಂದು ಎಲ್ಲಿಯೂ ಸಹ ಹೇಳಿರಲಿಲ್ಲ. ನಾವು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೆವು. ಆದರೆ, ನಮಗೆ ಜನಗಳ ಮುಂದೆ ಹೇಳಿರುವುದು ಮುಖ್ಯ, ಮತ್ತು ಇಲ್ಲಿ ಹೇಳಿರುವುದು ಮುಖ್ಯ. ಇಲ್ಲಿ ಯಾವುದು ಮುಖ್ಯ ಯಾವುದು ಮುಖ್ಯವಲ್ಲ ಎಂಬುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಮಗೆ ಜನಗಳ ಮುಂದೆ ಹೇಳುವುದು ಮುಖ್ಯವಾಗುತ್ತದೆ. ಆದರೆ ರಾಜ್ಯಪಾಲರ ಭಾಷಣದಲ್ಲಿ ಹಂತ ಹಂತವಾಗಿ ನಾವು ಸಾರಾಯಿಯನ್ನು ನಿಲ್ಲಿಸಬೇಕು ಎಂಬ ಉದ್ದೇಶ ನಮಗಿತ್ತು. ಆದಕಾರಣ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ, ಎಲ್ಲೆಲ್ಲಿ ಪ್ರಾಹಿಬಿಶನ್ ಇತ್ತು ಪಾರ್ಶಿಯಲ್ ಪ್ರಾಹಿಬಿಶನ್ ಇತ್ತು, ಆ ರಾಜ್ಯಗಳನ್ನು ಬೇಟ ಮಾಡಿ ಬಂದ ಮೇಲೆ, ಸಾರಾಯಿಯನ್ನು ನಿಲ್ಲಿಸುವುದು ಸಾಧು ಅಲ್ಲ ಎನಿಸಿತು. ಏಕೆಂದರೆ, ಇದಕ್ಕೆ ಎರಡು ಕಾರಣಗಳು ಇವೆ. ಮೊದಲನೆಯದಾಗಿ ಭಟ್ಟಿ ಸಾರಾಯಿ ಜಾಸ್ತಿಯಾಗುತ್ತದೆ, ಇಲ್ಲೀಗಲ್ ಡಿಸ್ಟಿಲೇಶನ್ ಜಾಸ್ತಿ ಆಗುತ್ತದೆ, ಅಪರಾಧಗಳು ಜಾಸ್ತಿಯಾಗುತ್ತವೆ, ಮತ್ತೊಂದು ಕಾರಣವೇನೆಂದರೆ, ರಾಜ್ಯಕ್ಕೆ ಬರುತ್ತಿರುವಂತಹ ಆದಾಯ ಸಹ

ಹೋಗುತ್ತದೆ. ಆದಾಯ ಹೋದರೆ ಹೋಗಲಿ, ಜನರಿಗಾದರೂ ಅನುಕೂಲವಾಗುತ್ತದೆ ಎಂದರೆ, ಅವರಿಗೂ ಅನುಕೂಲವಾಗುವುದಿಲ್ಲ ಇದು ಪ್ರಾಕ್ಟಿಕಲ್ ಆಗಿ ಬಹಳ ಕಷ್ಟ ಎಂದು ನಮ್ಮ ಅನುಭವಕ್ಕೆ ಬಂದ ಮೇಲೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಮನಗಂಡೆವು. ಆ ಕಾರಣಕ್ಕೋಸ್ಕರ ನಾವು ಬೇರೆ ಬೇರೆ ರಾಜ್ಯಗಳಲ್ಲಿ ಪಾನ ನಿರೋಧ ಯಾವ ರೀತಿ ಇದೆಯೆಂದು ತಿಳಿಯಲು ಅಂದರೆ, ಗುಜರಾತ್, ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರಗಳಲ್ಲಿ ನೋಡಿದ್ದೇವೆ.

ಶ್ರೀ ಮಾಟಾಳ್ ನಾಗರಾಜ್:- ರಾಜ್ಯಪಾಲರ ಮುಂದೆ ಹೇಳಿದರೆ ಏನು ಬಂತು, ಜನರ ಮುಂದೆ ಹೇಳಿದರೆ ಏನು ಬಂತು, ಗಾಳಿಗೆ ತೂರಿಬಿಟ್ಟರಲ್ಲ, ಒಟ್ಟಿನಲ್ಲಿ ನೀವು ಪಾನ ನಿರೋಧನವನ್ನು ಜಾರಿಗೆ ತರುವುದಿಲ್ಲ ಎಂದು ತೀರ್ಮಾನ ತೆಗೆದುಕೊಂಡಂತೆ ಕಾಣಿಸುತ್ತದೆ.

ಶ್ರೀ ಸಿದ್ಧರಾಮಯ್ಯ:- ಆದುದರಿಂದ ಎಲ್ಲಾ ರಾಜ್ಯಗಳನ್ನು ನೋಡಿಬಂದ ಮೇಲೆ, ಹಂತ ಹಂತವಾಗಿ ಕಡಿಮೆ ಮಾಡೋಣ ಎನ್ನುವ ಒಂದು ಪ್ರಯತ್ನ ಮಾಡಿದೆವು. ಆ ಕಾರಣಕ್ಕೋಸ್ಕರ 1997-98ರಲ್ಲಿ ಒಂದು ಹೊಸ ಪಾಲಿಸಿಯನ್ನು ಮಾಡಿದೆವು. ಅದರಿಂದ ನಮಗೆ ತೆರಿಗೆ ನಷ್ಟವಾಗುತ್ತದೆ ಎಂಬುದು ಸಹ ನಮಗೆ ತಿಳಿದಿತ್ತು. ಈ ಪದ್ಧತಿಯಿಂದ ನಮಗೆ ಸುಮಾರು 150 ಕೋಟಿ ರೂಪಾಯಿ ನಷ್ಟ ಆಗಬಹುದು ಎಂದು ಕಳೆದ ವರ್ಷದ ಅಂದರೆ 1997-98ನೇ ವರ್ಷದ ಆಯವ್ಯಯದಲ್ಲಿ ಪ್ರಸ್ತಾವ ಮಾಡಿದ್ದೆವು. ಅದನ್ನು ನಾವು ಜಾರಿಗೆ ಕೊಟ್ಟಮೇಲೆ ಉಚ್ಚನ್ಯಾಯಾಲಯದಲ್ಲಿ ಕೆಲವರು ಕೇಸ್ ಹಾಕಿದ್ದರಿಂದ ಅದನ್ನು ಅವರು ಸ್ವೇ ತೆಗೆದುಕೊಂಡಿದ್ದರಿಂದ ಆ ಜಾರಿ ಸ್ಥಗಿತವಾಯಿತು. ಪುನ: ಹೈ ಕೋರ್ಟಿನವರು ಇದು ಇತ್ಯರ್ಥ ಆಗುವವರೆಗೂ ಸರ್ಕಾರ ಆ್ಯಕ್ಷನ್ ಪದ್ಧತಿ ಮಾಡಬೇಕು, ಇಲ್ಲದೆ ಹೋದರೆ ಇಲಾಖೆಯ ಮೂಲಕ ಸಾರಾಯಿ ಮಾರಾಟ ಮಾಡಬೇಕು. ಇವೆರಡರಲ್ಲಿ ಯಾವುದಾದರೂ ಒಂದು ಪದ್ಧತಿಯನ್ನು ಮಾಡಬೇಕು ಎಂದು ಸರ್ಕಾರಕ್ಕೆ ಸೂಚನೆ ಕೊಟ್ಟಮೇಲೆ, ಪುನ: ಸರ್ಕಾರ ಆ್ಯಕ್ಷನ್ ಮೂಲಕ ನಡೆಸುತ್ತಿದ್ದೇವೆ, ಹೈಕೋರ್ಟಿನಲ್ಲಿ ಅಂತಿಮವಾದಂತಹ ನಿರ್ಣಯವಾದ ಮೇಲೆ ಪುನ: ಇದನ್ನು ಸಮಗ್ರವಾಗಿ ನೋಡಿ, ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯ ತೀರ್ಮಾನ ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಯೋಚನೆ ಮಾಡುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯವೇನೆಂದರೆ, ಅಬಕಾರಿ ಇಲಾಖೆಯಲ್ಲಿ ತೆರಿಗೆ ಸೋರಿ ಹೋಗುತ್ತಿದೆ, ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ತೆರಿಗೆ ಸೋರಿ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ, ಆದರೆ, ಅದೆಲ್ಲಾ ಬಂದ್ ಆಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಳೆದ ಮೂರು ವರ್ಷಗಳ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ತೆರಿಗೆಯನ್ನು ಹೆಚ್ಚು ವಸೂಲಿ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅಲ್ಲದೆ ಇನ್ನು ಹೆಚ್ಚು ಗಟ್ಟಿಯಾದಂತಹ ಕ್ರಮಗಳಿಂದ ಸೋರಿಹೋಗುವುದನ್ನು ತಪ್ಪಿಸಿ, ಹೆಚ್ಚು ಆದಾಯ ಬರತಕ್ಕಂತಹ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಎಕ್ಸೈಜ್‌ನಲ್ಲೂಕೂಡ ಸೆಕೆಂಡ್ಸ್ ನಿಂತು ಹೋಗಿದೆ, ಅದರಲ್ಲೇನೂ ಸೋರಿ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಿನ್ನೆ ಮಾನ್ಯ ರಾಮಸ್ವಾಮಿಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಈ ರೀತಿ ಅಧಿಕಾರಿಗಳೇ ಸೇರಿಕೊಂಡು, ಅಲ್ಲಿ ಹೋಲ್‌ಸೇಲ್‌ನವರು ಸೇರಿಕೊಂಡು ರಾಜ್ಯಕ್ಕೆ ಬರುವ ಕಮರ್ಷಿಯಲ್ ಟ್ಯಾಕ್ಸ್, ಎಕ್ಸೈಜ್ ಡ್ಯೂಟಿ ಎಲ್ಲಾ

ಹೊಡೆಯುತ್ತಿದ್ದಾರೆಂದು ಹೇಳಿದರು. ಕೆಲವು ಇವೆಲ್ಲಾ ಆಗಿದ್ದಾವೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಎಲ್ಲಾ ಪ್ರಯತ್ನ ಮಾಡಿದ್ದೇವೆ ಮತ್ತೆ ಈಗ ಅದಕ್ಕೋಸ್ಕರವಾಗಿ ಎಕ್ಸೈಜ್‌ನಲ್ಲಿ ಸಾಧ್ಯವಾದ ಮಟ್ಟಿಗೆ ದಕ್ಷತೆಯನ್ನು ತರಬೇಕು ಎಂದು ಹೇಳಿ ಆಯವ್ಯಯದಲ್ಲಿ ಹಿಂದೆ ಬಂಗಾರಪ್ಪನವರ ಕಾಲದಲ್ಲಿ ತೆಗೆದುಹಾಕಿದರು ಎಂದು ಅನಿಸುತ್ತದೆ. ರೆವಿನ್ಯೂಡಿ.ಸಿ.ಗಳಿಗೆ ಅಧಿಕಾರ ಇತ್ತು.

ಶ್ರೀ ಹೆಚ್. ಎನ್. ನಂಜೇಗೌಡ:- ಈ ಹ್ಯೂಜ್ ಟ್ರಾಜೆಡಿಯಾಯಿತು. ತಮಗೆ ನೆನಪಿರಬಹುದು. ಆ ಟ್ರಾಜೆಡಿಯಲ್ಲಿ ನೂರಾರು ಜನರು ಸತ್ತರು. ಆಮೇಲೆ ಆರ್. ಜೆ. ದೇಸಾಯಿ ಕಮೀಷನ್ ನೇಮಕ ಮಾಡಿದರು. ಆ ರೀತಿ ನೇಮಕ ಮಾಡಿದ ಮೇಲೆ ಪ್ರಾಪರ್ ಕಂಟ್ರೋಲ್ ಇಟ್ಟುಕೊಳ್ಳಬೇಕಾದರೆ ಈ ಪೋಸ್ಟ್‌ಗಳನ್ನು ಕ್ರಿಯೇಟ್ ಮಾಡಬೇಕು ಎಂದು ಕಮೀಷನ್ ಶಿಫಾರಸ್ಸು ಮಾಡಿತು. ಇದರ ಬಗ್ಗೆ ಸಡೆನ್ ಆಗಿ ಉತ್ತರ ಹೇಳಿವುದಕ್ಕೆ ಹೋಗಬೇಡಿ. ದಯವಿಟ್ಟು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿಕೊಳ್ಳಿ, ಈಗ ಡೂಪ್ಲಿಸಿಟಿ ಆಫ್ ವರ್ಕ್ ಆಗುತ್ತದೆ. ರೆವಿನ್ಯೂ ಡೆಪ್ಯುಟಿ ಕಮೀಷನರ್‌ಗೆ ಇದನ್ನೂ ವಹಿಸಿದರೆ ಅವರಿಗೆ ಇರುವ ಕೆಲಸದ ಜೊತೆಗೆ ಎಫಿಷಿಯೆನ್ಸಿ ಇನ್‌ಕ್ರೀಸ್ ಆಗುವುದಿಲ್ಲ. ಪ್ರಾಪರ್ ಕಂಟ್ರೋಲ್ ಇರಬೇಕಾದರೆ ಇವರಲ್ಲೇ ಇರಬೇಕು. ಡೂಪ್ಲಿಸಿಟಿ ಆಫ್ ವರ್ಕ್ ಆಗಬಾರದು. ಇದಕ್ಕೆ ನೀವು ಉತ್ತರ ಕೊಡಬೇಕಾದರೆ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿಕೊಂಡು ಕೊಡಿ. ದಯಮಾಡಿ ಆತುರ ಮಾಡಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ :-ಮಾನ್ಯ ಅಧ್ಯಕ್ಷರೇ, ಅಧಿಕಾರಿಗಳನ್ನು ಯಾರನ್ನು ನೇಮಕ ಮಾಡಬೇಕು, ಬಿಡಬೇಕು, ನಿಮ್ಮ ಸಲಹೆ ಕೊಡಿ. ಯೋಚನೆ ಮಾಡೋಣ. ಆದರೆ ಈಗ ಇರುವ ವ್ಯವಸ್ಥೆಯಲ್ಲಿ ಸೆಕೆಂಡ್ಸ್ ಹೋಗಿ ಥರ್ಡ್ಸ್ ಎಂದು ಹೇಳಿ ಡೂಪ್ಲಿಕೇಟ್ ಟ್ಯಾಕ್ಸ್ ಲೇಬಲ್‌ನ್ನು ಅಂಟಿಸಿ ರಾಜಾರೋಷವಾಗಿ ಸರ್ಕಾರವೇ ಶಾಮೀಲಾಗಿ ದಿನಕ್ಕೆ ಒಂದೂವರೆ- ಎರಡು ಕೋಟಿ ರೂಪಾಯಿ ಸೋರಿಹೋಗುತ್ತಿದೆ. ತಮಗೇನೆ ನಾನು ಟ್ಯಾಕ್ಸ್ ರೆಸಿಟ್ಸ್‌ನ್ನು ಕಳುಹಿಸಿಕೊಟ್ಟೆ, ಇದರಲ್ಲಿ ಡೂಪ್ಲಿಕೇಟ್ ಯಾವುದು? ಒರಿಜಿನಲ್ ಯಾವುದು ಎಂದು ನಾನು ಕೇಳಿದೆ. ಅರ್ಧ ಗಂಟೆ ಸದನವನ್ನು ಮುಂದೂಡಿ . ಬೆಂಗಳೂರಿನಲ್ಲಿ ನಾನು ಎಲ್ಲಿ ಬೇಕಾದರೂ ತೋರಿಸುತ್ತೇನೆ. ಇದು ಪ್ರತಿನಿತ್ಯ ಕನಿಷ್ಟ ಎರಡು ಕೋಟಿ ರೂಪಾಯಿ ಸರ್ಕಾರದ ಖಜಾನೆಗೆ ಬರುವಂಥದ್ದು ಥರ್ಡ್ಸ್ ಮೂಲಕ ಸರ್ಕಾರವೇ ಎಕ್ಸೈಜ್ ಡಿಸ್ಟಿಲರಿಗಳ ಹತ್ತಿರ ನಮ್ಮ ಅಧಿಕಾರಿಗಳು ಇದ್ದಾರೆ. ಅವರೇ ಕುಳಿತುಕೊಂಡು 50 ಪರ್‌ಸೆಂಟ್ ಡೂಪ್ಲಿಕೇಟ್ ಟ್ಯಾಕ್ಸ್ ಲೇಬಲ್‌ನ್ನು ಅಂಟಿಸುವುದು. ಇನ್ನು 50 ಪರ್‌ಸೆಂಟ್ ಒರಿಜಿನಲ್ ಸರ್ಕಾರದ ತೆರಿಗೆ ಎಂದು ಸ್ಲಿಪ್ಸ್ ಅಂಟಿಸಿ ರಾಜಾರೋಷವಾಗಿ ಈಗ ಅವ್ಯವಹಾರ ನಡೆಯುತ್ತಿದೆ ಎಂದರೆ ಯಾವ ಅಧಿಕಾರಿಯನ್ನು ತೆಗೆದುಕೊಂಡು ಏನು ಮಾಡುತ್ತೀರಿ? ನಿಮಗೆ ಆ ಪೊಲಿಟಿಕಲ್ ವಿಲ್ ಇರಬೇಕಲ್ಲ. ನಿಮಗಾದರೂ ನಿಲ್ಲಿಸಬೇಕು ಎನ್ನುವ ಕಳಕಳಿ ಇರಬೇಕಲ್ಲವೇ? ನೀವು ಒಪ್ಪಿಕೊಂಡರಲ್ಲ ಸರ್ಕಾರ, ಎಕ್ಸೈಜ್ ಮಿನಿಸ್ಟರ್ ಒಪ್ಪಿಕೊಂಡರು, ಹೌದು ಇದು ನಡೆಯುತ್ತಿದೆ ಎಂದು ಥರ್ಡ್ಸ್ ಎಂದು ಹೇಳಿ ಡೂಪ್ಲಿಕೇಟ್ ಟ್ಯಾಕ್ಸ್ ಸ್ಲಿಪ್ಸ್ ಅಂಟಿಸುವುದನ್ನು ನಿಮಗೆ ಕೊಡ್ ನಂಬರ್ ಇರುವ ಸ್ಲಿಪ್ಸ್‌ನ್ನು ಇನ್ನೂ ಜೇಬಲ್ಲಿ ಇಟ್ಟುಕೊಂಡಿದ್ದೇನೆ. ಈಗಲೂ ಕೊಡುತ್ತೇನೆ. ಅದಕ್ಕೆ ತಡೆಯುವುದಕ್ಕೆ ಏನೂ ಮಾಡಲಿಲ್ಲ. ನೀವೇ ಈಗ ಒಪ್ಪಿಕೊಂಡಿರಿ. ನಡೆಯುತ್ತಿದೆ ಯಡಿಯೂರಪ್ಪನವರೇ, ನಾವೇನು ಇಲ್ಲ ಎಂದು ಹೇಳುವುದಿಲ್ಲ ಎಂದಿರಿ. ಅದನ್ನು ನಡೆಯುವುದಕ್ಕೆ, ನೋಡಿಕೊಳ್ಳುವುದಕ್ಕೆ ನಿಮ್ಮನ್ನು ಅಲ್ಲಿ ಇಟ್ಟಿದ್ದೆವೇನು? ಸರ್ಕಾರವನ್ನು.

ಶ್ರೀ ಸಿದ್ಧರಾಮಯ್ಯ :- ನೋಡಿಕೊಂಡು ಕುಳಿತುಕೊಳ್ಳುತ್ತೇವೆ ಎಂದು ಹೇಳುವುದಿಲ್ಲ ಯಡಿಯೂರಪ್ಪನವರೇ, ನಂಜೇಗೌಡರು ಹೇಳಿದರಲ್ಲ ಈಗ ರೆವಿನ್ಯೂ ಡಿ.ಸಿ. ಗಳಿಗೆ ಈಗ ಜಿಲ್ಲಾ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳೆಲ್ಲಾ ಬಂದಮೇಲೆ ಮೊದಲಿನಷ್ಟು ಅವರಿಗೆ ಅಧಿಕಾರವಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ :- ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗೂ ರೆವಿನ್ಯೂ ಡಿ.ಸಿಗಳನ್ನು ಹಾಕಿಬಿಡಿ.

ಶ್ರೀ ಸಿದ್ಧರಾಮಯ್ಯ :- ಹಿಂದೆ ಈ ಪದ್ಧತಿ ಇತ್ತು. ಸಬ್‌ಸಿಕ್ವೆಂಟ್ ಆಗಿ ತೆಗೆದು ಬಿಟ್ಟರು. ಜಿಲ್ಲೆಗಳಲ್ಲಿ ಎಕ್ಸ್‌ಟ್ರಾ ಜನವರು ಸೂಪರಿಟೆಂಡೆಂಟ್‌ಗಳು ಇದ್ದರು. ಅವರನ್ನು ಡಿ.ಸಿ. ಮಾಡಿದರು. ಸೂಪರಿಟೆಂಡೆಂಟ್‌ಗಳನ್ನು ಮಾಡಿದರು.

ಶ್ರೀ ಹೆಚ್. ಎನ್. ನಂಜೇಗೌಡ :- ಹಿಂದಿನದಕ್ಕೂ ಈಚೆಗೆ ರಿಕವರಿ ಬಗ್ಗೆ ಲೆಕ್ಕವನ್ನು ಹಾಕಿದ್ದೀರಾ? ರೆವಿನ್ಯೂ ಡಿ.ಸಿ.ಗಳು ಇದ್ದಾಗ ಯಾವ ರೀತಿ ರಿಕವರಿ ಇತ್ತು, ಈಗ ಎಷ್ಟಿದೆ ಎಂದು ಲೆಕ್ಕ ಹಾಕಿದ್ದೀರಾ? ಆಗ 429 ಕೋಟಿ ರೂಪಾಯಿ ಇದ್ದದ್ದು ವರ್ಷಂಪ್ರತಿ 92 ಆದ ಮೇಲೆ ವರ್ಷಂ ಪ್ರತಿ ಹೆಚ್ಚುತ್ತಾ ಹೋಗಿ 846 ಕೋಟಿ ರಿಕವರಿ ಬಂತು.

ಶ್ರೀ ಸಿದ್ಧರಾಮಯ್ಯ :- ಇನ್ನೂ ಮುಂದೆ ಹೋಗಿಲ್ಲ. 1994-95ರಲ್ಲಿ 710 ಕೋಟಿ ಇದ್ದರೂ 1996-97 ರಲ್ಲಿ 820ಕೋಟಿ ರೂಪಾಯಿಯಾಗಿದೆ.

ಶ್ರೀ ಹೆಚ್. ಎನ್. ನಂಜೇಗೌಡ :- ಕಂಟ್ರಾಕ್ಟರ್ ಕೆಲಸ ಮಾಡುವುದು ಈ ಎಕ್ಸ್‌ಟ್ರಾ ಡಿ.ಸಿ.ಕೆಳಗೆ ಅವರು ಇವರ ಕಂಟ್ರೋಲ್‌ನಲ್ಲಿರುತ್ತಾರೆ. ಇವರು ಕರೆಸಿ ಹೇಳಿದರೆ ಟ್ಯಾಕ್ಸ್‌ನ್ನು ರೆಗ್ಯುಲರ್ ಆಗಿ ಕೊಡುತ್ತಾರೆ. ಈಗ ಹಳೆಯ ಬಾಕಿ ಉಳಿದುಕೊಂಡಿದೆ. ಅದು ಯಾವ ಕಾಲದ್ದು ಆ ಹಳೆಯ ಬಾಕಿ ಈಗ ಇರುವುದೆಲ್ಲಾ? ಯಾವ ಕಾಲದ್ದು? ಈ ಡಿ.ಸಿ.ಗಳ ಕಾಲದ್ದೋ ರೆವಿನ್ಯೂ ಡಿ.ಸಿ.ಗಳು ಕಾಲದ್ದೋ?

ಶ್ರೀ ಸಿದ್ಧರಾಮಯ್ಯ :- ಸ್ವಾತಂತ್ರ್ಯ ಪೂರ್ವದಿಂದಲೂ ಇದ್ದಾವೆ. ಹಳೆಯ ಬಾಕಿ ಉಳಿದಿದೆಯಲ್ಲ ಅದು ಸ್ವಾತಂತ್ರ ಪೂರ್ವದಿಂದಲೂ ಇದೆ.

ಶ್ರೀ ಹೆಚ್. ಎನ್. ನಂಜೇಗೌಡ :- ಇದರ ಬಗ್ಗೆ ಮುಖ್ಯಮಂತ್ರಿಗಳ ಜೊತೆಯಲ್ಲೂ ಮಾತನಾಡಿ.

ಶ್ರೀ ಸಿದ್ಧರಾಮಯ್ಯ :- ಮಾತನಾಡೋಣ. ಇನ್ನು ಬೇಕಾದರೆ ಇದರ ಬಗ್ಗೆ ಚರ್ಚೆ ಮಾಡೋಣ. ಹೆಚ್ಚು ಬಿಗಿಗೊಳಿಸಬೇಕು ಮತ್ತು ಸೋರುವುದನ್ನು ತಪ್ಪಿಸಬೇಕು ಎನ್ನುವ ಕಾರಣಕ್ಕೋಸ್ಕರ ಇದೊಂದು ಹೆಜ್ಜೆ ಅಷ್ಟೆ ನಾನು ಹೇಳಿದ್ದುದು. ಇದರಿಂದಲೇ ಎಲ್ಲಾ ನಿಂತುಹೋಗುತ್ತದೆ ಎನ್ನುವ ಅಭಿಪ್ರಾಯವಲ್ಲ. ಮತ್ತೆ ಬಾಂಡೆಡ್ ವೇರ್‌ಹೌಸ್ ಎಂದು ಡಿಸ್ಟಿಲರಿಗಳಲ್ಲಿ ಇರುತ್ತವೆ. ಅಲ್ಲೂ ಕೂಡ ಸ್ವಲ್ಪ ಬಿಗಿ ಮಾಡಬೇಕು ಎಂದು ವಿಚಾರ ಮಾಡಿದ್ದೇವೆ. ಮತ್ತೆ ಒಟ್ಟಿಗೆ ಇಂಟೆಲಿಜೆನ್ಸ್‌ನ್ನು ಹೆಚ್ಚು ಶಕ್ತಿಯುತವಾಗಿ ಮಾಡಿ ಅದಕ್ಕೆ ಹೊಸ ಓರಿಯೆಂಟೇಷನ್ ಕೊಟ್ಟು ಹೊಸ ಅಪ್ರೋಚ್ ಮಾಡುವುದನ್ನು ಮಾಡಿ ಇದಕ್ಕೆ ಸಾಧ್ಯವಾದ ಮಟ್ಟಿಗೆ ಕಡಿಮೆ ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡುತ್ತೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಮತ್ತೆ ಒಂದು ಮಾತನ್ನು ಹೇಳಿದರು, ಕಳೆದ

ಮೂರು ವರ್ಷಗಳಲ್ಲಿ ಈ ನಾಲ್ಕು ಆಯವ್ಯಯದಲ್ಲಿ ಹಾಕಿದಷ್ಟು ತೆರಿಗೆ ಯಾವ ಕಾಲದಲ್ಲೂ ಕೂಡ ಹಾಕಿಲ್ಲ ಎಂದು ಶ್ರೀಮಾನ್ ಖರ್ಗೆಯವರು ಹೇಳಿದ್ದಾರೆ. ಭಾರೀ ತೆರಿಗೆಯನ್ನು ಹಾಕಿದರು ಎಂದು. ಆದರೆ ಅವರು ನಾನು ಎಷ್ಟು ತೆರಿಗೆ ಹಾಕಿದೆ ಎಂದು ಹೇಳಿದರು. ಎಷ್ಟು ರಿಲೀಫ್ ಕೊಟ್ಟೆ ಎಂದು ಅವರು ಹೇಳಲಿಲ್ಲ. ಒಟ್ಟು ಕಳೆದ ಮೂರು ವರ್ಷಗಳಲ್ಲಿ ಈ ವರ್ಷವನ್ನೂ ಸೇರಿಸಿ ನಾನು ತೆರಿಗೆ ಹಾಕಿರುವುದು 500-600 ಕೋಟಿ ರೂಪಾಯಿಗಳು. ರಿಲೀಫ್ ಕೊಟ್ಟಿರುವುದು 473 ಕೋಟಿ ರೂಪಾಯಿಗಳು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- 193 ಕೋಟಿ, 230 ಕೋಟಿ, 220 ಕೋಟಿ ರೂಪಾಯಿ. ನೀವು ಕೊಟ್ಟಿರುವುದು.

ಶ್ರೀ ಸಿದ್ಧರಾಮಯ್ಯ :- 1995-96 ಎ. ಆರ್. ಎಂ. 123 ಕೋಟಿ ರೂಪಾಯಿ 48 ಕೋಟಿ ರೂಪಾಯಿ ರಿಲೀಫ್ 1996-97 ಎ. ಆರ್. ಎಂ. 55 ಕೋಟಿ, ರಿಲೀಫ್ 101 ಕೋಟಿ, 1997-98 ಎ. ಆರ್. ಎಂ. 168 ಕೋಟಿ, ರಿಲೀಫ್ 224 ಕೋಟಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ರಿಲೀಫ್ ಬಿಡಿ ಸಾರ್. ಅಡಿಷನಲ್ ಹೇಳಿ.

ಶ್ರೀ ಸಿದ್ಧರಾಮಯ್ಯ :- ಸರ್‌ಛಾರ್ಜ್ ತೆಗೆದರೆ ಏನರ್ಥ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಗ್ರಾನೈಟ್‌ನವರಿಗೆ ಇದರಲ್ಲಿ ರಿಲೀಫ್ ಸಿಕ್ಕಿದೆ. ಎಕ್ಸ್‌ಪೋರ್ಟ್‌ನವರಿಗೆ ರಿಲೀಫ್ ಸಿಕ್ಕಿದೆ. ಆಮೇಲೆ ಬೀರೆಯವರಿಗೆಲ್ಲಾ ಸಿಕ್ಕಿದೆ. ಅದನ್ನು ಬಿಡಿ. ಅಂಥ ರಿಲೀಫ್ ಹೇಳುವುದಿಲ್ಲ. ನೀವು ಯಾರ ಮೇಲೆ ಟ್ಯಾಕ್ಸ್‌ನ್ನು ಹಾಕಿದ್ದೀರಿ. ನೂರು ಐಟಂ ಬಡಪರ ಮೇಲೆ ಹಾಕಿದರೆ 50 ಐಟಂನಲ್ಲಿ ಮಾತ್ರ ಎನ್‌ಹ್ಯಾನ್ಸ್ ಆಗುತ್ತದೆ. ಅದರ ಬಗ್ಗೆ ರಿಲೀಫ್ ಹೇಳುವುದು ಕಷ್ಟ. ಅಡಿಷನಲ್ ರಿಸೋರ್ಸಸ್‌ನ್ನು ಮೊಬಿಲೈಜ್ ಮಾಡುವ ದೃಷ್ಟಿಯಿಂದ ನೀವು ಹಾಕಿರುವುದು.

ಶ್ರೀ ಸಿದ್ಧರಾಮಯ್ಯ :- 200 ಕೋಟಿ ಸರ್‌ಛಾರ್ಜನ್ನು ತೆಗೆದುಹಾಕಿದರೆ ಎಲ್ಲಾ ಐಟಂಗಳ ಮೇಲೆ ಇದ್ದ ಸರ್‌ಛಾರ್ಜ್ ತೆಗೆಯುವುದಕ್ಕೆ ಆಗದೇ ಇದ್ದುದರಿಂದ ಸಾಮಾನ್ಯ ಜನರು ಬಳಸುವ ಪದಾರ್ಥಗಳ ಬೆಲೆಯೂ ಕಡಿಮೆಯಾಯಿತು.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಮ್ಮ ಹಣಕಾಸು ಮಂತ್ರಿಗಳು ಇಷ್ಟನ್ನು ಒಪ್ಪಿಕೊಳ್ಳುತ್ತೀರಾ? ಇಡೀ ದೇಶದಲ್ಲಿ ಕರ್ನಾಟಕ ಸೆಕೆಂಡ್ ಹೈಯಸ್ಟ್ ಟ್ಯಾಕ್ಸ್‌ನ್ನು ಕಟ್ಟುತ್ತಿರುವ ರಾಜ್ಯ ಎಂದರೆ ಒಪ್ಪುತ್ತೀರಾ?

ಶ್ರೀ ಸಿದ್ಧರಾಮಯ್ಯ :- ಅದು ಉಡಾಫೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ಹೇಳುತ್ತಿರುವುದು ಇಡೀ ದೇಶದಲ್ಲಿ ಎರಡನೇ ರಾಜ್ಯ ತೆರಿಗೆಯನ್ನು ಹೆಚ್ಚು ಹಾಕುತ್ತಿರುವ ದೊಡ್ಡ ರಾಜ್ಯ ಕರ್ನಾಟಕ. ಅಂಕಿ ಅಂಶಗಳು ಹೇಳುತ್ತವೆ, ತೆಗೆದು ನೋಡಿ.

ಶ್ರೀ ಸಿದ್ಧರಾಮಯ್ಯ :- ಪಕ್ಕದ ರಾಜ್ಯಗಳಲ್ಲಿ ಎಷ್ಟೆಷ್ಟು ತೆರಿಗೆ ಇವೆ ಎಂದು ನಾನು ಹೇಳಿದೆ. ನಾನು ಈ 4 ರೇಟು ಮಾಡವಾಗ ಇಡೀ ದೇಶದ ಎಲ್ಲಾ ರಾಜ್ಯಗಳಲ್ಲಿರುವ ತೆರಿಗೆಗಳನ್ನು ತರಿಸಿದ್ದೆ. ಏಕೆಂದರೆ ನಾವು ಹತ್ತು ಜನ ಫೈನಾನ್ಸ್ ಮಿನಿಸ್ಟರ್ಸ್ ಆ ಕಮಿಟಿಯಲ್ಲಿರುವಾಗ ಎಲ್ಲಾ ರಾಜ್ಯಗಳವರು ಕೂಡ ಅವರವರು ಅವರ ರಾಜ್ಯದಲ್ಲಿ ಯಾವ ಯಾವ ರೇಟುಗಳ ಮೇಲೆ ತೆರಿಗೆಗಳ ಇದ್ದಾವೆ ಎಂದು ತರಿಸಿ ಅದಕ್ಕೆ ಸ್ವಲ್ಪ

ಹೆಚ್ಚು ಕಡಿಮೆ ಕರ್ನಾಟಕದ ಪಕ್ಕದಲ್ಲಿರುವ ರಾಜ್ಯಗಳಿಗೆ ಅರ್ಧ ಪರ್‌ಸೆಂಟ್, 1 ಪರ್‌ಸೆಂಟ್ ಈ ರೀತಿ ಹೆಚ್ಚು ಕಡಿಮೆ ಇರುವ ತೆರಿಗೆಗಳಿರಬಹುದೇ ಹೊರತು ಕರ್ನಾಟಕವೇ ಅತೀ ಹೆಚ್ಚು ತೆರಿಗೆ ಹಾಕಿರುವ ರಾಜ್ಯ ಎನ್ನುವುದು ಸರಿಯಲ್ಲ. ಅದರಿಂದ ನಾವು ಇವತ್ತು ಒಟ್ಟು ನಾವು ಕೊಟ್ಟಿರುವ ರಿಲೀಫ್ ಮತ್ತು ನಾವು ಹಾಕಿರುವ ಎ. ಆರ್. ಎಂ. ಇವೆರಡನ್ನೂ ತೆಗೆದುಕೊಂಡರೆ ಇಡೀ ಮೂರು ವರ್ಷಗಳಲ್ಲಿ ಹಾಕಿರುವ ತೆರಿಗೆ ಎಂದರೆ ಕೇವಲ 32 ಕೋಟಿ ರೂಪಾಯಿಗಳು. ಆದ್ದರಿಂದ ನಾವು ಈ ರಾಜ್ಯದ ಮೇಲೆ ಭಾರೀ ತೆರಿಗೆಯ ಹೊರೆ ಹೊರಿಸಿದ್ದೇವೆ. ಈ ರಾಜ್ಯದ ಜನ ತತ್ತರಿಸುತ್ತಾ ಇದ್ದಾರೆ ಎನ್ನತಕ್ಕ ಮಾತಿನಲ್ಲಿ ಯಾವುದೇ ಸತ್ಯ ಇಲ್ಲ. ಸತ್ಯಕ್ಕೆ ದೂರವಾಗಿದೆ ಎಂದು ಹೇಳೋಣ ಅದಕ್ಕೇ 32 ಕೋಟಿ ರೂಪಾಯಿ ಮೂರು ವರ್ಷಗಳಿಂದ ಇರುವುದು. ನಾವು ಹೆಚ್ಚು ತೆರಿಗೆ ಹಾಕಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಜನ ಇವರಿಗೆ ಓಟು ಕೊಡಲಿಲ್ಲ. ಅವರ ಮೇಲೆ ಸೇಡು ತೀರಿಸಿಕೊಳ್ಳುವುದಕ್ಕೋಸ್ಕರ ಹೆಚ್ಚು ತೆರಿಗೆ ಹಾಕಿದ್ದಾರೆ ಎಂದು ಹೇಳುವುದು ಇದು ರಾಜಕೀಯ ಪ್ರೇರಿತವಾದ ಮಾತು ಇದನ್ನು ಯಾರೂ ನಂಬುವುದಿಲ್ಲ ಎನ್ನತಕ್ಕದ್ದು ಈ ರಾಜ್ಯದ ಜನತೆಗೆ ಗೊತ್ತಿದೆ. ಅದಕ್ಕೆ ನೀವು ಎಷ್ಟೇ ರಾಜಕೀಯವಾಗಿ ಬಣ್ಣ ಕಟ್ಟಿ ಪ್ರಚಾರ ಮಾಡಿದರೂ ಕೂಡ ರಾಜ್ಯದ ಜನ ನಂಬುವುದಿಲ್ಲ. ಏಕೆಂದರೆ ಬರೇ 32 ಕೋಟಿ ರೂಪಾಯಿಗಳಷ್ಟು ತೆರಿಗೆ ಹೆಚ್ಚಾಗಿರುವುದರಿಂದ ಯಾರೂ ಕೂಡ ನಿಮ್ಮ ಮಾತುಗಳನ್ನು ನಂಬಲ್ಲ ಎನ್ನತಕ್ಕದ್ದನ್ನು ಅತ್ಯಂತ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಸರ್ಕಾರಕ್ಕೆ ಮುಂದೆ ಎನೂ ಹೇಳಲಿಕ್ಕೆ ಆಗುವುದಿಲ್ಲ ನೋಡಿ.

ಶ್ರೀ ಸಿದ್ಧರಾಮಯ್ಯ :- ರಾಜ್ಯದ ಚುನಾವಣೆ ಬರಲಿ ನೋಡೋಣ.

ಶ್ರೀ ಜೆ.ವಿ. ಶ್ರೀರಾಮ ರೆಡ್ಡಿ :- 29 ಪರ್ಸೆಂಟ್ ಸೆಂಟ್ರಲ್ ಟ್ಯಾಕ್ಸ್‌ನಲ್ಲಿ ಬರಬೇಕು ಎಂದು ಹೇಳಿದಿರಿ. ಕಳೆದ ವರ್ಷದ ಬಜೆಟ್‌ನಲ್ಲಿ ಹೇಳಿದಿರಿ, ಅದು ಬರಲಿಲ್ಲ. ಈಗಲೂ ಅದರ ಪರಿಸ್ಥಿತಿ ಏನು? ನೀವು ಅದರ ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆ?

ಶ್ರೀ ಸಿದ್ಧರಾಮಯ್ಯ :- 196 ಕೋಟಿ ರೂಪಾಯಿ ಡಿಫಿಸಿಟ್ ಆಗಿದೆ. ಇದನ್ನು ತುಂಬುವುದಕ್ಕೆ ಆಗುವುದಿಲ್ಲ. ಸುಮಾರು 196 ಕೋಟಿ ರೂಪಾಯಿ ಅಲ್ಲ, ಸಾವಿರ ಕೋಟಿ ರೂಪಾಯಿ ಆಗುತ್ತದೆ. ಆದ್ದರಿಂದ ಭಾರೀ ಪ್ರಮಾಣದ ಕೊರತೆ ಆಗಿ ಬಿಡುತ್ತದೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ಬಹುಶ: ಇಡೀ ದೇಶದಲ್ಲಿ ಎಲ್ಲ ರಾಜ್ಯಗಳೂ ಕೊರತೆಯ ಬಜೆಟನ್ನು ಮಂಡಿಸುತ್ತಿದ್ದಾವೆ. ಅವರು ಮಂಡಿಸಿದ್ದಾರೆ ಅದಕ್ಕೋಸ್ಕರ ನಾನು ಮಂಡಿಸಬೇಕು ಎಂಬ ಅಭಿಪ್ರಾಯ ಅಲ್ಲ, ನನ್ನದು. ಮಹಾರಾಷ್ಟ್ರ ಸರ್ಕಾರದ್ದು 8,000 ಕೋಟಿ ರೂಪಾಯಿ ಖೋತಾ ಬಜೆಟ್. ಆಂಧ್ರ ಪ್ರದೇಶದ 226 ಕೋಟಿ ರೂಪಾಯಿ ಖೋತಾ ಬಜೆಟ್. ಈ ತರಹ ಆಗಿದೆ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ ಇವತ್ತು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಹೆಚ್ಚಾಗುತ್ತಿದೆ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಬಗ್ಗೆ ಕಳೆದ ವರ್ಷದ ಆಯವ್ಯಯದಲ್ಲೂ ಕೂಡ ಹೇಳಿದ್ದೆ, ಈ ವರ್ಷ ಕೂಡ ಪ್ರಸ್ತಾಪ ಮಾಡಿದ್ದೇನೆ. ಶ್ರೀರಾಮರೆಡ್ಡಿಯವರು ಹೇಳಿದರು. ಒಟ್ಟು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಖರ್ಚು ಮಾಡತಕ್ಕ ಹಣ 68 ಪರ್ಸೆಂಟ್ ಕಳೆದ ವರ್ಷ ಆಗುತ್ತದೆಂದು ಹೇಳಿದ್ದೆ. ಈಗ ಕೇಂದ್ರ ಸರ್ಕಾರದವರು ಐದನೇ ವೇತನ ಆಯೋಗವನ್ನು ಜಾರಿಗೆ ಕೊಟ್ಟು ಬಿಟ್ಟಿದ್ದಾರೆ. ಅವರು ಕೊಟ್ಟಿರುವ ರೀತಿಯಲ್ಲಿ ನಮ್ಮ ರಾಜ್ಯಗಳಿಗೆ ಕೊಟ್ಟರೆ 1,400

ಕೋಟಿ ರೂಪಾಯಿ ಹೊರೆ ಬೀಳುತ್ತದೆ. ಕೇಂದ್ರದವರು 18.5 ಸಾವಿರ ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ವೇತನ ಆಯೋಗದ ಶಿಫಾರಸ್ಸಿನ ಮೇಲೆ ಕೊಟ್ಟಿದ್ದಾರೆ. ಇವತ್ತು ಅನೇಕ ರಾಜ್ಯಗಳು ಬಜೆಟ್ ಅನ್ನು ಮಂಡಿಸುತ್ತಿದ್ದಾರೆ. ಅನೇಕ ರಾಜ್ಯಗಳಲ್ಲಿ ಕೆಲವರು ನಾನ್ ಪ್ಲಾನ್ ಎಕ್ಸಪೆಂಡಿಚರ್‌ನಲ್ಲಿ ಐದನೇ ವೇತನ ಆಯೋಗಕ್ಕೋಸ್ಕರ ಇಟ್ಟುಕೊಂಡಿದ್ದಾರೆ, ಕೆಲವರು ಇಟ್ಟುಕೊಂಡೇ ಇಲ್ಲ. ಆಂಧ್ರದವರು ನಮಗಿಂತ ಒಂದೂವರೆ ಪಟ್ಟು ಜಾಸ್ತಿ ಜನಸಂಖ್ಯೆ ಇದ್ದರೂ ಕೂಡ 4,600 ಕೋಟಿ ರೂಪಾಯಿ ಮಾತ್ರ ಯೋಜನಾ ಗಾತ್ರ ಇಟ್ಟುಕೊಂಡಿದ್ದಾರೆ. ತಮಿಳುನಾಡಿನದು ನಮಗಿಂತ ಕಡಿಮೆ, ನಮಗಿಂತ ದೊಡ್ಡ ರಾಜ್ಯ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ನಾನು ಪ್ಲಾನ್ ಎಕ್ಸ್‌ಪೆಂಡಿಚರ್ ಇವತ್ತು ದೇಶದಲ್ಲಿ ಎಲ್ಲಾ ರಾಜ್ಯಗಳಲ್ಲಿ ನಡೆಯುತ್ತಿದೆ. ನಾನು ಹೋದ ವರ್ಷ ಒಂದು ಅಂಕಿ ಅಂಶಗಳನ್ನು ಕೊಟ್ಟಿದ್ದೆ. 1986-87 ರಲ್ಲಿ ಪ್ಲಾನ್‌ಗೆ ಖರ್ಚಾಗುತ್ತಿದ್ದ ಹಣ 49 ಪರ್ಸೆಂಟ್. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗೆ ಖರ್ಚಾಗುತ್ತಿದ್ದ ಹಣ 51 ಪರ್ಸೆಂಟ್. ಈಗ ಅದು ಹತ್ತು ವರ್ಷಗಳ ನಂತರ 68 ಪರ್ಸೆಂಟ್ ನಾನ್ ಪ್ಲಾನ್ ಮತ್ತು 32 ಪರ್ಸೆಂಟ್ ಪ್ಲಾನ್‌ಗೆ, 17 ಪರ್ಸೆಂಟ್ ಕಡಿಮೆ ಆಯಿತು. ಈಗ ನಮ್ಮ ರಾಜ್ಯದ ನೌಕರರು ಕೂಡ ನಮಗೆ ವೇತನ ಆಯೋಗ ಆಗಬೇಕೆಂದು ಇಲ್ಲಿ ಚಳುವಳಿ ಮಾಡಿದ್ದರು. ಅದಕ್ಕೆ ಅವರ ಬೇಸಿಕ್ ಪೇ ನಲ್ಲಿ 20 ಪರ್ಸೆಂಟ್ ಇಂಟ್ರಿಮ್ ರಿಲೀಫ್ ಕೊಡತಕ್ಕದ್ದನ್ನು ಮಾಡಿದ್ದೇವೆ. ನಮ್ಮ ಹಣಕಾಸಿನ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಕೂಡ ರಚನೆ ಮಾಡಿದ್ದೇವೆ. ಅವರು ವರದಿಯನ್ನು ಆರು ತಿಂಗಳಲ್ಲಿ ಕೊಡಬೇಕೆಂದು ಇದೆ. ಅಂದರೆ ಕೇಂದ್ರ ಸರ್ಕಾರದವರು ಐದನೇ ವೇತನ ಆಯೋಗದ ಶಿಫಾರಸ್ಸನ್ನು ಜಾರಿ ಕೊಡುವುದಕ್ಕೆ ಮುಂಚಿತವಾಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ, ಹಣಕಾಸಿನ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಇದನ್ನು ಜಾರಿಗೊಡುವುದಕ್ಕೆ ಮುಂಚೆ ರಾಜ್ಯದ ಮುಖ್ಯಮಂತ್ರಿಗಳ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಇದು ರಾಜ್ಯದ ಮೇಲೆ ಭಾರೀ ದೊಡ್ಡ ಹೊರೆ ಆಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ಶೇಕಡಾ 50 ರಷ್ಟನ್ನು ಭರಿಸಬೇಕು ಎಂಬ ಮನವಿಯನ್ನು ಮಾಡಿದ್ದೆ. ಆದರೆ ಅಷ್ಟು ಹೊತ್ತಿಗೆ ಪಾರ್ಲಿಮೆಂಟ್ ಚುನಾವಣೆ ಬಂತು, ಮತ್ತೆ ಈಗ ಅದಕ್ಕೇ ನಾನು ಹೇಳಿದ್ದೇನೆ, 11ನೇ ಏಪ್ರಿಲ್ ಆಯೋಗಕ್ಕೆ ಅದನ್ನು ರೆಫರ್ ಮಾಡುತ್ತೇವೆಂದು ಹೇಳಿದ್ದೇನೆ. 11ನೇ ಆಯೋಗಕ್ಕೆ ನೀವು ರೆಫರ್ ಮಾಡುವುದು ಬೇಡ. ಅದಕ್ಕಿಂತ ಮುಂಚಿತವಾಗಿಯೇ ಕೇಂದ್ರ ಸರ್ಕಾರದವರು ರಾಜ್ಯ ಸರ್ಕಾರಗಳ ಸಹಾಯಕ್ಕೆ ಬರಬೇಕೆನ್ನುವ ಒತ್ತಾಯವನ್ನು ನಾವು ಮಾಡಿದ್ದೇವೆ. ಕನಿಷ್ಠ 50 ಪರ್ಸೆಂಟ್ ಹೆಚ್ಚು ಭಾರ ಬೀಳುತ್ತದೆ;

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ :- ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಹೆಚ್ಚಾದಷ್ಟು ಆರೋಗ್ಯಕರ ಬೆಳವಣಿಗೆನೋ ಅನಾರೋಗ್ಯಕರನೋ. ಯೋಜನೇತರ ವೆಚ್ಚ ಹೆಚ್ಚಾಗುತ್ತಾ ಹೋಗುತ್ತಿದೆ. ಅದು ಆರೋಗ್ಯಕರವಾದಂತಹ ಬೆಳವಣಿಗೆ ಎನ್ನುತ್ತೀರೋ ಅನಾರೋಗ್ಯಕರವಾದ ಬೆಳವಣಿಗೆ ಎನ್ನುತ್ತೀರೋ?

Sri. Siddaramaiah :- Any layman will say it is an unhealthy development. ಅದನ್ನು ತೆಗೆಸುವ ಪ್ರಯತ್ನ ಮಾಡಬೇಕು. ಈಗ ನೀವೇನು ಹೇಳುತ್ತೀರಿ. ನೀವು ಕಮ್ಯೂನಿಸ್ಟ್ ಪಾರ್ಟಿಯ ಫಿಲಾಸಫಿಯಲ್ಲಿ ನಂಬಿಕೆ ಇಟ್ಟುಕೊಂಡಿರುವವರು. ಆದರೆ ನಿಮ್ಮ ಪಕ್ಷದ ಸರ್ಕಾರ ಇರುವವರು ಫಿಲಾಸಫಿನೇ ಬೇರೆ, ಅವರು ನಡೆದುಕೊಳ್ಳುವುದೇ ಬೇರೆ ಇರುತ್ತದೆ. ನೀವೇನು ಹೇಳುತ್ತಿರಿ, ಕೇರಳದಲ್ಲಿ ವೆಸ್ಟ್ ಬೆಂಗಾಲ್‌ನಲ್ಲಿ ನಿಮ್ಮ ಸರ್ಕಾರ ಇಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ನನಗೆ ನಿರ್ದಿಷ್ಟವಾದ ಪ್ರಶ್ನೆಗೆ ಉತ್ತರ ಬೇಕು. ಕೇರಳದಲ್ಲಿ ನಮ್ಮ ಸರ್ಕಾರ ಇಲ್ಲ. ವೆಸ್ಟ್ ಬೆಂಗಾಲ್ ಅದು ಕೇಂದ್ರ ಸರ್ಕಾರ ಅಲ್ಲ.

ಶ್ರೀ ಸಿದ್ಧರಾಮಯ್ಯ :- ಅದುರಾಜ್ಯ ಸರ್ಕಾರ ಇರಲಿ. ಇದನ್ನೇ ದೊಡ್ಡ ವಿಷಯ ಮಾಡುವುದು ಬೇಡ.

ಶ್ರೀ ಹೆಚ್. ಎನ್. ನಂಜೇಗೌಡ :- ಈಗ ಅವರೂ ವಾಟಾಳ್ ಅವರ ಜೊತೆ ಸೇರಿ ಡೈಲ್ಯೂಟ್ ಆಗಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಇದನ್ನು ಯಾವುದೇ ಕಾರಣದಿಂದ ಒಪ್ಪಲಿಕ್ಕೆ ಸಾಧ್ಯ ಇಲ್ಲ. ನಾನು ಡೈಲ್ಯೂಟ್ ಆಗಿಲ್ಲ, ಆಗುವುದಿಲ್ಲ. ನನ್ನನ್ನು ವಾಟಾಳ್ ಡೈಲ್ಯೂಟ್ ಮಾಡುವುದಕ್ಕೆ ಆಗುವುದಿಲ್ಲ. ನಾನು ವಾಟಾಳ್ ಅವರನ್ನು ಡೈಲ್ಯೂಟ್ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಈಗ ನಾನೇನೂ ಹೇಳಲಿಲ್ಲ. ನಮ್ಮಿಬ್ಬರ ಮಧ್ಯೆ ಜಗಳವನ್ನು ತಂದು ಇಡುತ್ತಿದ್ದಾರೆ. ನಾನೇನಾದರೂ ಹೇಳಿದೆನಾ? ನೀವು ಅವರ ಮಾತನ್ನು ನಂಬಿ ನನ್ನ ಮೇಲೆ ಯುದ್ಧಕ್ಕೆ ಬರುವುದು ಸರಿಯಲ್ಲ.

ಶ್ರೀ ಸಿದ್ಧರಾಮಯ್ಯ :- ಮಾನ್ಯ ನಂಜೇಗೌಡರು ಯಾವಾಗಲೂ ಸತ್ಯ ಹೇಳುತ್ತಾರೆ. ಆ ತರಹ ಹೇಳುವುದಕ್ಕೆ ಹೋಗುವುದಿಲ್ಲ, ಫ್ಯಾಕ್ಟ್ಸ್ ಹೇಳುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಬೇರೆಯವರು, ಸತ್ಯ ಹೇಳುತ್ತಾರೆಂತಲಾ?

ಶ್ರೀ ಹೆಚ್. ಎನ್. ನಂಜೇಗೌಡ :- ಅವರು ಹೇಳುತ್ತಾರೆ ಎಂದರೆ ನೀವು ಸುಳ್ಳು ಹೇಳುತ್ತೀರಿ ಎಂತಲಾ? ನೀವು ಏಕೆ ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುವುದು?

ಅಧ್ಯಕ್ಷರು :- ಈಗ ನಂಜೇಗೌಡರು ಸುಳ್ಳು ಹೇಳುತ್ತಾರೋ ನಿಜ ಹೇಳುತ್ತಾರೋ ಎಂದು ಗೊತ್ತಾಗಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಬಂದಿದ್ದಾರೆ, ಅವರನ್ನು ಕೇಳಬೇಕು.

ಶ್ರೀ ಸಿದ್ಧರಾಮಯ್ಯ :- ಎಲ್ಲಾ ರಾಜ್ಯಗಳಲ್ಲಿಯೂ ಈತರಹದ ಪರಿಸ್ಥಿತಿ ಇದೆ ಎನ್ನತಕ್ಕಂಥದ್ದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ನಾವು ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಿಕ್ಕೆ ಹೊರಟಿದ್ದೇವೆ. ಐದು ಪರ್ಸೆಂಟ್ ಸ್ಟಾಫ್ ರಿಡಕ್ಷನ್ ಮಾಡಬೇಕು ಎನ್ನತಕ್ಕದ್ದು. ಅದನ್ನು ಎಲ್ಲರೂ ಹೇಳಿದರು. ವಾಟಾಳ್‌ರವರು, ಪುಟ್ಟಣ್ಣಯ್ಯನವರು, ಶ್ರೀರಾಮರೆಡ್ಡಿಯವರು ಎಲ್ಲರೂ ಹೇಳಿದರು. ಡಿವಿಜನಲ್ ಕಮೀಷನರ್ ಏಕೆ ಬೇಕು? ಬಿ.ಡಿ.ಓ. ಆಫೀಸ್‌ನಲ್ಲಿ ಇ.ಓ.ಏಕೆ ಬೇಕು, ಬಿ.ಡಿ.ಓ. ಬೇಕು? ಆಮೇಲೆ ಎ.ಇ.ಓ.ಗಳು ಏಕೆ ಬೇಕು, ಇವರುಗಳು ಏಕೆ ಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಅದೆಲ್ಲಾ ಗಮನದಲ್ಲಿಟ್ಟುಕೊಂಡು ಈಗ ನಾವು ಒಂದು ವರದಿಯನ್ನು ತಯಾರು ಮಾಡುತ್ತಿದ್ದೇವೆ. ಅದಕ್ಕೋಸ್ಕರ ಮೊದಲನೇ ಹಂತದಲ್ಲಿ ಯಾವ್ಯಾವ ಹುದ್ದೆಗಳು ಖಾಲಿ ಇದ್ದವೋ, ಆರೋಗ್ಯ ಮತ್ತು ಶಿಕ್ಷಣ ಇಲಾಖೆ ಬಿಟ್ಟು, ಇವೆರಡು ಇಲಾಖೆಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಇಲಾಖೆಗಳಲ್ಲಿ ಖಾಲಿ ಇರತಕ್ಕ ಹುದ್ದೆಗಳನ್ನು ಸ್ಥಗಿತಗೊಳಿಸತಕ್ಕಂಥ ನಿರ್ಣಯವನ್ನು ಮಾಡಿದ್ದೇವೆ.

ಡಾ॥ ಎಂ.ಪಿ. ಕರ್ಕಿ :- ಶಿಕ್ಷಣ ಇಲಾಖೆಯಲ್ಲಿ ಎ. ಇ. ಓ. ಹುದ್ದೆ ತೆಗೆದು ಹಾಕಬಹುದು ಎನ್ನುವ ಸೂಚನೆ ಕೂಡ ತಮಗೆ ಬಂದಿದೆ. ಒಂದು ವರ್ಷದಿಂದ ಬಂದಿದೆ. ಅದನ್ನು ಕೂಡ ತಾವು ಕಾರ್ಯಗತ ಮಾಡಿಲ್ಲ.

ಶ್ರೀ ಸಿದ್ಧರಾಮಯ್ಯ :- ವರದಿ ಬರುತ್ತಿದೆ. ಕ್ಯಾಬಿನೆಟ್ ಸಮಿತಿ ವರದಿಯನ್ನು ತಯಾರು ಮಾಡುತ್ತಿದೆ. ಕ್ಯಾಬಿನೆಟ್‌ಗೆ ಹೋಗಿ ಬರಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :- ಇದರ ಬಗ್ಗೆ ಮೂರು ವರ್ಷದಿಂದ ಪ್ರಯತ್ನ ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ :- ಮೂರು ವರ್ಷ ಅಲ್ಲ, ಹೋದ ವರ್ಷ ಹೇಳಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಅಧಿಕಾರಕ್ಕೆ ಬಂದ ಮೇಲೆ ಈ ಬಿ.ಡಿ.ಓ. ಆಫೀಸ್‌ನಲ್ಲಿ ಬಿ. ಡಿ. ಓ. ಇದ್ದ, ಸಮರ್ಪಕವಾಗಿ ಕೆಲಸ ಮಾಡುತ್ತಿದ್ದ. ಅಲ್ಲಿಗೆ ಇ. ಓ. ತಂದವರೂ ನೀವೇ. ಅದೇ ರೀತಿ ಎಜುಕೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ಬಿ. ಇ. ಓ. ತಂದಿರಿ. ಅವರು ಅಲ್ಲಿದ್ದವ ಕೆಲಸ ಮಾಡುತ್ತಿದ್ದ. ಅಂದರೆ ಒಬ್ಬರನ್ನು ನೋಡುವುದಕ್ಕೆ ಇನ್ನೊಬ್ಬ ಸುಬೇದಾರನನ್ನು ಮಾಡಿಟ್ಟಿರಿ. ಅಂದರೆ ನಾನು ಹೇಳುವುದು ತಾವು ಈ ಹಿನ್ನೆಲೆಯನ್ನು ಯೋಚನೆ ಮಾಡುತ್ತಿರಬೇಕಾದರೆ ಹಿಂದಿನವರು ಮಾಡಿದ್ದನ್ನು ಸರಿಪಡಿಸಿ. ನೀವು ಬಂದ ಮೇಲೆ ನಾನ್ ಪ್ಲಾನ್ ಎಕ್ಸಪೆಂಡಿಚರ್ ದೊಡ್ಡದು ಇದೆ ಎಂದು ಗೊತ್ತಾದ ಮೇಲೂ ಸಹ ಈ ತರಹ ಬೇರೆ ಬೇರೆ ಅಧಿಕಾರಗಳನ್ನು, ಯಾರನ್ನೋ ತೃಪ್ತಿಪಡಿಸುವುದಕ್ಕೋಸ್ಕರ ಅವನಿಗೆ ಹೇರುವಂತಹ ಕೆಲಸ ಏಕೆ ಮಾಡಿದಿರಿ? ಈಗ ಅವನನ್ನು ವಾಪಸ್ ತೆಗೆದುಕೊಳ್ಳುವುದು, ಅವನು ತಿರುಗಿ ಬೀಳುವುದು. ಅದರದ್ದೇ ಒಂದು ದೊಡ್ಡ ಕಾರ್ಯಕ್ರಮ. ಈಗ ಅವನ್ನು ವಾಪಸ್ ತೆಗೆದುಕೊಳ್ಳುವುದು ಅವರು ತಿರುಗಿ ಬೀಳುವುದು ಇದರದ್ದೇ ಒಂದು ಕಾರ್ಯಕ್ರಮ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ :- ಇಲ್ಲಿ ಯಾರನ್ನೋ ತೃಪ್ತಿ ಪಡಿಸಬೇಕು ಎನ್ನುವುದಿಲ್ಲ. ಅವರು ಇದ್ದಂತಹ ನಿಯಮಗಳನ್ನು ಪಾಲನೆ ಮಾಡತಕ್ಕಂತಹ ಕೆಲಸ ಮಾಡಿದ್ದಾರೆ. ಪ್ರಮೋಶನ್‌ಗಳು ಮೊದಲೇ ಇದ್ದವು. ಅವುಗಳನ್ನು ನಾವು ಮಾಡಲಿಲ್ಲ. ನೀವು ಹೇಳಿರುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ಎಲ್ಲೆಲ್ಲಿ ಕಡಿತಗೊಳಿಸುವುದಕ್ಕೆ ಸಾಧ್ಯವಿದೆ. ಎಲ್ಲಿ ಅಗತ್ಯ ಇದೆ, ಎಲ್ಲಿ ಅಗತ್ಯವಿಲ್ಲ ಎಂಬುದನ್ನು ಪರಿಶೀಲಿಸಿ ಅವುಗಳನ್ನು ಕಡಿಮೆಗೊಳಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇವೆ. ಅದರ ವರದಿ ಕೂಡ ತಯಾರಾಗುತ್ತಿದೆ. ಆ ಹಿನ್ನೆಲೆಯಲ್ಲಿಯೇ ಈ ಹುದ್ದೆಗಳನ್ನು ಸ್ಥಗಿತಗೊಳಿಸಿರುವುದು. ಅಗತ್ಯ ಬಿದ್ದಾಗ ಮಾತ್ರ ಮುಂದೆ ಅದನ್ನು ಸರ್ಕಾರ ಪರಿಗಣಿಸಿ ಕೊಡುತ್ತದೆ. ಇದನ್ನು ನಾವು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎನ್ನುವ ಪ್ರಯತ್ನವನ್ನು ಮಾಡುತ್ತಿದ್ದೇವೆ. ಪೆಟ್ರೋಲ್, ಡೀಸಲ್ ಮತ್ತು ಟೆಲಿಫೋನ್ ಇಂತಹವುಗಳು ಎಲ್ಲೆಲ್ಲಿ ಉಪಯೋಗವಾಗುವುದಿಲ್ಲ ಅಂತಹ ಕಡೆಗಳಲ್ಲಿ ಹೆಚ್ಚು ಹೆಚ್ಚು ಆಗುತ್ತಿವೆ; ಅಗತ್ಯವಿಲ್ಲದಿರುವ ಕಡೆ ಹೆಚ್ಚು ಇವೆ ಎಂಬುದನ್ನೂ ಹಾಗೂ ವಾಹನಗಳ ಬಗ್ಗೆ ಕೂಡ ಮಾಹಿತಿಯನ್ನು ತರಿಸಿಕೊಂಡು ಅದನ್ನೂ ಕೂಡ ನಮ್ಮ ವರದಿಯಲ್ಲಿ ಸೇರಿಸುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಮತ್ತೊಂದು ವಿಚಾರವನ್ನು ಕುರಿತಂತೆ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಶ್ರೀರಾಮರೆಡ್ಡಿಯವರು ''ನೀವು ಮಾಡುತ್ತಿರುವುದು ಸರಿಯಲ್ಲ'' ವೆಂದು ಹೇಳಿದರು. ನಮ್ಮ ಕರ್ನಾಟಕ

ರಾಜ್ಯದಲ್ಲಿ ಸುಮಾರು 76 (ಪಬ್ಲಿಕ್ ಸ್ಟೇಟ್ ಅಂಡರ್‌ಟೇಕಿಂಗ್ಸ್‌ಗಳಿವೆ) ಸಾರ್ವಜನಿಕ ಉದ್ದಿಮೆಗಳಿವೆ. ಅವೆಲ್ಲವನ್ನೂ ನಾವು ಪ್ರೈವೇಟೈಸ್ ಮಾಡಿಬಿಡುತ್ತೇವೆ ಎಂದು ನಾನು ಎಲ್ಲಿಯೂ ಹೇಳಿಲ್ಲ. ಕೆ ಎಸ್ ಆರ್‌ಟಿಸಿ, ಕೆಇಬಿ, ಕೆಸಿಪಿ ಎಲ್ಲವನ್ನೂ ನಾವು ಪ್ರೈವೇಟ್‌ನವರಿಗೆ ಕೊಟ್ಟು ಬಿಡುತ್ತೇವೆ ಎಂದು ಹೇಳಿಲ್ಲ. ದೇಶದಲ್ಲಿ ಬದಲಾದಂತಹ ಪರಿಸ್ಥಿತಿಯಲ್ಲಿ ಒಂದು ಕಾಲದಲ್ಲಿ ಖಾಸಗಿಯವರು ಸಾರ್ವಜನಿಕ ಉದ್ಯಮಗಳಲ್ಲಿ ಬಂಡವಾಳ ಹೂಡಲು ಮುಂದೆ ಬರುತ್ತಿರಲಿಲ್ಲ. ಆಗ ಸರ್ಕಾರವೇ ಉದ್ಯೋಗಗಳನ್ನು ಸೃಷ್ಟಿ ಮಾಡಿ ನೌಕರಿಗಳನ್ನು ಕೊಡಬೇಕು ಹಾಗೂ ಇಂತಹ ಸಾರ್ವಜನಿಕ ಕ್ಷೇತ್ರಗಳಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವಾಗ ಸರ್ಕಾರದ ಬಂಡವಾಳ ಕೂಡ ಇರಬೇಕು ಎನ್ನುವ ಚಿಂತನೆ ಒಂದು ಕಾಲದಲ್ಲಿ ಇತ್ತು. ಆದರೆ ಇವತ್ತು ಎಲ್ಲ ಕ್ಷೇತ್ರಗಳಲ್ಲೂ ಖಾಸಗಿಯವರು ಹೆಚ್ಚು ಹೆಚ್ಚು ಬಂಡವಾಳವನ್ನು ಹೂಡಲು ಮುಂದೆ ಬರುತ್ತಿದ್ದಾರೆ. ಅವರ ಜೊತೆಯಲ್ಲಿ ನಾವು ನಮ್ಮ ಅನುಭವಗಳನ್ನು ಹಂಚಿಕೊಂಡು ಆತ್ಮ ನಿರೀಕ್ಷಣೆ ಮಾಡಿಕೊಂಡು ಮಾತನಾಡಬೇಕು. ಕೆಲವು ಸಾರ್ವಜನಿಕ ಉದ್ಯಮಗಳನ್ನು ಬದುಕಿಸುವುದಕ್ಕೆ ಎಷ್ಟು ಪ್ರಯತ್ನಗಳನ್ನು ಮಾಡಿದ್ದೇವೆ ಎಂಬುದನ್ನು ಅನೇಕ ವರ್ಷಗಳಿಂದ ನೋಡಿದ್ದೀರಿ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಸಹ ಅವುಗಳಿಗೆ ಕೇವಲ ಆಕ್ಸಿಜನ್ ಕೊಟ್ಟಂತಾಗುತ್ತದೆಯೇ ಹೊರತು ಅವುಗಳಲ್ಲಿರುವ ತೊಂದರೆಗಳನ್ನು ಸರಿಪಡಿಸಿ ಅಲ್ಲಿನ ನೌಕರರಿಗೆ ಕೆಲಸ ಕೊಡುವುದು ಕಷ್ಟವಾಗುತ್ತಿದೆ. ಹಾಗೆಂದು ಹೇಳಿದ ಮಾತ್ರಕ್ಕೆ ಖಾಸಗಿಯವರಿಗೆ ಡಿಸ್ - ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ ಎಂದರೆ ಅಲ್ಲಿರುವಂತಹ ಎಲ್ಲ ನೌಕರರನ್ನೂ ತೆಗೆದು ಹಾಕುತ್ತೇವೆ. ಎಂದು ಅರ್ಥವಲ್ಲ. ಅವರ ಇಂಟರೆಸ್ಟನ್ನು ಪ್ರೊಟೆಕ್ಟ್ ಮಾಡಿದ್ದೇವೆ. ಉದಾಹರಣೆಗೆ ಮೈಸೂರಿನಲ್ಲಿರುವ ವಿಕ್ರಾಂತ್ ಟೈರ್ಸ್ ಕಾರ್ಖಾನೆಗೆ ಖಾಸಗಿಯವರು ಬಂಡವಾಳ ಹೂಡುವುದಕ್ಕೆ ಅವಕಾಶ ಮಾಡಿಕೊಟ್ಟು ಅಲ್ಲಿ ಅವರು ಹೆಚ್ಚು ಶೇರ್‌ಗಳನ್ನು ಕೊಂಡುಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದೇವೆ. ಅಂದರೆ ವಿಕ್ರಾಂತ್ ಟೈರ್ಸ್ ಫ್ಯಾಕ್ಟರಿಯಲ್ಲಿದ್ದಂತಹ ಎಲ್ಲ ನೌಕರರನ್ನೂ ತೆಗೆದು ಹಾಕಿ ಅದನ್ನು ಮುಚ್ಚಿಬಿಡುತ್ತೇವೆ ಎಂದು ಅರ್ಥವಲ್ಲ. ನಾವು ಖಾಸಗೀಕರಣ ಮಾಡುವಾಗ ಅಲ್ಲಿರುವಂತಹ ನೌಕರರ ಹಿತರಕ್ಷಣೆ ಮಾಡಬೇಕು. ಯಾವ ಕಾರಣಕ್ಕೂ ಅವರನ್ನು ಟರ್ಮಿನೇಟ್ ಮಾಡಬಾರದು, ಬೇರೆ ಯಾವುದೇ ರೀತಿಯಲ್ಲಿ ಕಾನೂನು ಬಾಹಿರವಾಗಿ ಕಾನೂನಿಗೆ ವಿರುದ್ಧವಾದ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಾರದು ಎಂಬ ನಿಬಂಧನೆಗಳಿಗೊಳಪಟ್ಟಿ ನಾವು ಡಿಸ್-ಇನ್‌ವೆಸ್ಟ್‌ಮೆಂಟ್ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ನಾವು ಇದನ್ನು ಏತಕ್ಕೆ ಮಾಡುತ್ತಿದ್ದೇವೆ ಎಂದರೆ ನಾವೆಲ್ಲರೂ ಕೂಡ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದೇ ರೀತಿಯ ಸಂಕುಚಿತ ಮನೋಭಾವವನ್ನಾಗಲಿ ಅಥವಾ ರಾಜಕೀಯ ವಿಚಾರಗಳನ್ನಾಗಲಿ ಇಟ್ಟುಕೊಳ್ಳದೆ ಪಕ್ಷಾತೀತವಾಗಿ ನಾವು ನೋಡಬೇಕಾಗುತ್ತದೆ. ಇವತ್ತು ರಾಜ್ಯದಲ್ಲಿರುವ 76 ಸಾರ್ವಜನಿಕ ಉದ್ದಿಮೆಗಳಲ್ಲಿ 9,000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಬಂಡವಾಳವಿದೆ. ಸುಮಾರು 4 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲವನ್ನು ತಂದು ಇದಕ್ಕೆ ಹಾಕಿದ್ದೇವೆ. ಅದಕ್ಕೆ ಬಡ್ಡಿಯನ್ನು ಕೊಡುತ್ತಿದ್ದೇವೆ. ಇದರಿಂದ ನಮಗೆ ಎಷ್ಟು ಆದಾಯ ಬರುತ್ತಿದೆ? ಇದಕ್ಕೆ ರಿಟರ್ನ್ಸ್ ಏನಿದೆ? ಒಂದು ಕಡೆ ಸಾಲ ತೆಗೆದುಕೊಂಡು ಬಂದು ಬಂಡವಾಳ ಹಾಕುತ್ತೀರಿ, ಆ ರೀತಿ ಸಾಲ ತರಬಾರದು ಎಂಬುದು ಒಂದು ವಾದ. ಇನ್ನೊಂದು ಕಡೆ ಇಲ್ಲ, ಅದೇನಾದರೂ ಆಗಲಿ, ಸಾಲವನ್ನಾದರೂ ತೆಗೆದುಕೊಂಡು ಬಂದು ಹಾಕಿ. ಅವರಿಗೆ ನಷ್ಟವಾದರೂ ಆಗಲಿ. ಆದರೆ ಡಿಸ್-ಇನ್‌ವೆಸ್ಟ್‌ಮೆಂಟ್ ಮಾತ್ರ ಮಾಡಬಾರದು. ಅವುಗಳನ್ನು ಹಾಗೆಯೇ ಇಟ್ಟುಕೊಂಡು ಬೆಳೆಸಬೇಕು

ಎನ್ನುವ ವಾದದಲ್ಲಿ ಯಾವುದೇ ಅರ್ಥವಿಲ್ಲ ಎನ್ನತಕ್ಕಂತಹ ಮಾತನ್ನು ಹೇಳುತ್ತೇನೆ. ಆದ್ದರಿಂದ, ಎಲ್ಲಿ ಖಾಸಗಿಯವರ ಜೊತೆಯಲ್ಲಿ ಸ್ಪರ್ಧಿಸುವುದಕ್ಕಾಗುವುದಿಲ್ಲ ಅಥವಾ ಎಲ್ಲಿ ಕನ್ಸ್ಯೂಮರ್ ಗೂಡ್ಸನ್ನು ಉತ್ಪಾದನೆ ಮಾಡುವಂಥವರಿದ್ದಾರೆ, ಎಲ್ಲಿ ಅವು ನಷ್ಟದಲ್ಲಿದ್ದು ಅವುಗಳನ್ನು ಸರಿಪಡಿಸುವುದಕ್ಕೆ ಸಾಧ್ಯವೇ ಇಲ್ಲದಂತಹ ಪರಿಸ್ಥಿತಿಯಲ್ಲಿವೆ ಅಂತಹ ಉದ್ದಿಮೆಗಳಿಗೆ ನಾವು ಡಿಸ್-ಇನ್‌ವೆಸ್ಟ್‌ಮೆಂಟ್ ಮಾಡಿ ಮಾಡಬೇಕಾಗುತ್ತದೆ. ನಾವು ಇಲ್ಲಿ ವ್ಯಯ ಮಾಡುವಂತಹ ಹಣವನ್ನು ಕಡಿತಗೊಳಿಸಬೇಕಾದುದು. ಇವತ್ತು ನಾನು ಹೇಳಿದಂತಹ ನಾನ್ ಪ್ಲ್ಯಾನ್ ಎಕ್ಸ್‌ಪೆಂಡಿಚರ್ ಬೆಳವಣಿಗೆಗಳು ಏನು ಆಗುತ್ತಿವೆ ಇಂತಹ ಹಿನ್ನೆಲೆಯಲ್ಲಿ ಇದನ್ನು ಮಾಡಬೇಕಾದುದು ಅನಿವಾರ್ಯ. ಇದನ್ನು ಕೇಂದ್ರ ಸರ್ಕಾರದಲ್ಲಿಯೂ ಮಾಡಿದ್ದಾರೆ. ಎಲ್ಲಾ ರಾಜ್ಯ ಸರ್ಕಾರಗಳಲ್ಲೂ ಮಾಡುವುದಕ್ಕೆ ಹೊರಟಿದ್ದಾರೆ. ಹಾಗೆಂದ ಮಾತ್ರಕ್ಕೆ ಸಣ್ಣ ಕೈಗಾರಿಕೆಗಳನ್ನೆಲ್ಲಾ ಮುಚ್ಚಿಬಿಡಬೇಕು, ಗುಡಿ ಕೈಗಾರಿಕೆಗಳನ್ನು ಮುಚ್ಚಿಬಿಡಬೇಕು ಎನ್ನುವ ಮಾತನ್ನು ಹೇಳುತ್ತಿಲ್ಲ. ಅಲ್ಲಿ ಖಾಸಗಿ ಬಂಡವಾಳವನ್ನು ತರಬೇಕು ಎನ್ನುವಂತಹ ಮಾತನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ನಿಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ಅದೇ ರೀತಿ ಅಲ್ಲಿರುವಂತಹ ನೌಕರರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳುವ ಪ್ರಯತ್ನವನ್ನು ನಾವು ಮಾಡುತ್ತೇವೆ. ಇದರ ಬಗ್ಗೆ ನಾವು ಗಂಭೀರವಾದ ಚಿಂತನೆಯನ್ನೂ ಕೂಡ ಮಾಡುತ್ತಿದ್ದೇವೆ ಎನ್ನುವಂತಹ ಮಾತನ್ನು ಹೇಳಬಯಸುತ್ತಿದ್ದೇನೆ. ಆದುದರಿಂದ, ಇವತ್ತು ನಾನ್ ಪ್ಲ್ಯಾನ್‌ನಲ್ಲಿ ಆಗುವಂತಹ ವೆಚ್ಚವನ್ನು ಕಡಿಮೆ ಮಾಡುವುದಕ್ಕೆ ನಾವು ಅನೇಕ ಕ್ರಮಗಳನ್ನು ತೆಗೆದುಕೊಳ್ಳತ್ತಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಬಯಸುತ್ತಿದ್ದೇನೆ. ಇದರ ಜೊತೆಗೆ ನೀವು 196 ಕೋಟಿ ರೂಪಾಯಿಗಳ ಖೋತಾ ಬಜೆಟ್‌ನ್ನು ಮಂಡಿಸಿದ್ದೀರಿ. ಅದನ್ನು ನೀವು ಹೇಗೆ ಮಾಡುತ್ತೀರಿ? ಕಳೆದ ವರ್ಷ 96 ಕೋಟಿ ರೂಪಾಯಿಗಳ ಖೋತಾ ಬಜೆಟನ್ನು ಮಂಡಿಸಿದ್ದಿರಿ. ಅದನ್ನು ನೀವು ಸಾಧಿಸಲಿಲ್ಲ. ಈ ವರ್ಷ 196 ಕೋಟಿ ರೂಪಾಯಿಗಳ ಖೋತಾ ಬಜೆಟ್ ಇದೆ. ಅದನ್ನೂ ಕೂಡ ನೀವು ಮಾಡುವುದಕ್ಕಾಗುವುದಿಲ್ಲ ಎಂದು ಹೇಳಬಹುದು. ನಾನು ಈಗಾಗಲೇ ಪ್ರಸ್ತಾಪ ಮಾಡಿದಂತೆ ದೇಶದ ಯೋಜನಾ ಆಯೋಗದ ಜೊತೆಯಲ್ಲಿ ನಮ್ಮ ಮುಖ್ಯಮಂತ್ರಿಗಳು ಚರ್ಚೆ ಮಾಡಿ ಇನ್ನೂ ಅದನ್ನೂ ನಿಗದಿಗೊಳಿಸಿಲ್ಲ. ಚುನಾವಣೆ ಬಂದ ಕಾರಣ ಹೊಸ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಚಿತವಾಗುವ ಹೊಸ ಯೋಜನಾ ಆಯೋಗದ ಜೊತೆಗೆ ಮಾತನಾಡುವುದು ಎಂದ ಮೇಲೆ ನಾವು ರಿಸೋರ್ಸ್‌ಗಳನ್ನು ಗಮನದಲ್ಲಿಟ್ಟುಕೊಂಡು 5,353 ಕೋಟಿ ರೂಪಾಯಿಗಳ ಯೋಜನಾ ಗಾತ್ರವನ್ನು ನಿಗದಿಗೊಳಿಸಿದ್ದೇವೆ. ಅಂತಿಮವಾಗಿ ಕೇಂದ್ರ ಯೋಜನಾ ಆಯೋಗದೊಂದಿಗೆ ಚರ್ಚಿಸಿದ ನಂತರ ಇದು ಅಂತಿಮ ಯೋಜನಾ ಗಾತ್ರವಾಗುತ್ತದೆ. ಇದರಲ್ಲಿ 196 ಕೋಟಿ ರೂಪಾಯಿಗಳ ಖೋತಾ ತೋರಿಸಿದ್ದೇವೆ. ಕಳೆದ ಸಲ 10ನೇ ಫೈನಾನ್ಸ್ ಕಮಿಷನ್ ಪ್ರಕಾರ ಡಿವಿಜಬಲ್ ಪೂಲ್‌ನಲ್ಲಿ 29 ಪರ್ಸೆಂಟ್ ನಷ್ಟು ನಮಗೆ ಬರಬೇಕು. ಇದನ್ನು ಜಾರಿ ಮಾಡಬೇಕೆನ್ನುವಷ್ಟರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರಲಾಯಿತು. ಅದನ್ನು ಕೊಡಬೇಕೆಂದು ಚಿದಂಬ ಅವರನ್ನು ಭೇಟಿ ಮಾಡಿ ಸಂವಿಧಾನಕ್ಕೆ ತಿದ್ದುಪಡಿ ತಂದು ನಮಗೆ 40 ಪರ್ಸೆಂಟ್ ಹಣವನ್ನು ಕೊಡಬೇಕೆಂದು ಒತ್ತಾಯ ಮಾಡಿದ್ದೆವು. ಅವರು 29 ಪರ್ಸೆಂಟ್ ಕೊಡಲು ಒಪ್ಪಿದುದರಿಂದ ಅದನ್ನಾದರೂ ಕೊಡಿ ಎಂದು ಒತ್ತಾಯ ಮಾಡಿದೆವು. ಈಗ ಹೊಸದಾಗಿ ಅಧಿಕಾರಕ್ಕೆ ಬಂದಿರುವಂತಹ ಶ್ರೀ ಯಶವಂತ ಸಿನ್ಹರವರು ಮಧ್ಯಂತರ ಬಜೆಟನ್ನು ಮಂಡಿಸುವಂತಹ ಸಂದರ್ಭದಲ್ಲಿ ಚಿದಂಬರಂರವರು ಕೊಡಲು ಒಪ್ಪಿಕೊಂಡಿರುವ 29 ಪರ್ಸೆಂಟ್ ಡಿವಿಜಬಲ್ ಪೂಲ್ ಹಣವನ್ನು ಕಾನ್‌ಸ್ಟಿಟ್ಯೂಶನ್‌ಗೆ

ಅಮೆಂಟ್‌ಮೆಂಟ್ ತಂದು ಬಿಡುಗಡೆ ಮಾಡುತ್ತೇವೆ ಎಂಬುದಾಗಿ ಒಪ್ಪಿಕೊಂಡಿದ್ದಾರೆ. ಅದರಿಂದ ನಮಗೆ ಮುಂದಿನ 1998-99ನೇ ಸಾಲಿನಲ್ಲಿ ಸುಮಾರು 100 ಕೋಟಿ ರೂಪಾಯಿಗಳಷ್ಟು ಹಣ ಬರಬಹುದೆಂಬ ಆಶಾಭಾವನೆಯನ್ನು ಇಟ್ಟುಕೊಂಡಿದ್ದೇವೆ. ನಮ್ಮ ಮಾನ್ಯ ಸದಸ್ಯರಾದ ಯೋಗೀಶ್ ಭಟ್ ಅವರು ಮಾತನಾಡುತ್ತಾ ' ನಮ್ಮ ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಎಲ್ಲ ರಾಜ್ಯಗಳಿಗೂ ಬಹಳ ಅನುಕೂಲಕರವಾದ ರೀತಿಯಲ್ಲಿ ಬಜೆಟ್ ಮಾಡುತ್ತಿದ್ದಾರೆ ' ಎಂದು ಹೇಳಿದರು. ಅಲ್ಲಿ ಇಟ್ಟಿರುವಂತಹ 1,000 ಕೋಟಿ ರೂಪಾಯಿ ಎಕ್ಸ್‌ಟರ್ನಲ್ ಏಡೆಡ್ ಪ್ರಾಜೆಕ್ಟ್‌ಗೆ. ಅದನ್ನು ಯಾವ ರಾಜ್ಯಗಳು ಖರ್ಚು ಮಾಡುಕೊಳ್ಳುತ್ತವೆ, ರೀ-ಎಂಬರ್ಸ್‌ಮೆಂಟ್ ಮಾಡಿಕೊಳ್ಳುತ್ತವೆ ಎಂಬುದರ ಆಧಾರದ ಮೇಲೆ ಅದು ನಿಗದಿ ಆಗುತ್ತದೆ. ಎಲ್ಲ ಸರ್ಕಾರಗಳಿಗೂ ಇಟ್ಟಿರುವಂತೆ ಅಲ್ಲಿ ಕೂಡ ಸಾವಿರ ಕೋಟಿ ರೂಪಾಯಿಗಳನ್ನು ಇಡಲಾಗಿದೆ. ಆದ್ದರಿಂದ ಮುಂದಿನ ವರ್ಷ ಅಂದರೆ 1998-99ನೇ ಸಾಲಿಗೆ ರಾಜ್ಯಗಳ ಪಾಲು ವರ್ಷ ಇಟ್ಟಿರುವುದಕ್ಕಿಂತಲೂ ಕಡಿಮೆಯಾಗುತ್ತದೆ. ಏಕೆಂದರೆ, 1997-98ರಲ್ಲಿ ಬಜೆಟ್ ಎಸ್ಟಿಮೇಟ್ಸ್ 1, 13, 393 ಕೋಟಿ ರೂಪಾಯಿಗಳಷ್ಟಿದ್ದರೆ 1998-99ಕ್ಕೆ 1,08,680 ಕೋಟಿ ರೂಪಾಯಿಗಳು. ಅಂದರೆ, ಸುಮಾರು 8-9 ಸಾವಿರ ಕೋಟಿ ರೂಪಾಯಿಗಳು ಕಡಿಮೆಯಾಗುತ್ತದೆ, ರಾಜ್ಯಗಳಿಗೆ ಬರುವ ಷೇರು ಕಡಿಮೆಯಾಯಿತು. ಅನಂತರ ವಿ. ಡಿ. ಐ. ಎಸ್. ನಲ್ಲಿ 7, 594 ಕೋಟಿ ರೂಪಾಯಿಗಳನ್ನು ರಾಜ್ಯಗಳಿಗೆ ಕೊಡುತ್ತಾರೆ. ಶೇಕಡ 77. 5 ರಷ್ಟನ್ನು ಕೊಡಲೇಬೇಕು, ವಿಶೇಷವಾಗಿ ಕೊಡತಕ್ಕಂಥಾದ್ದು ಏನಲ್ಲ. ಕಳೆದ ಸಲ ವಿ. ಡಿ. ಐ. ಎಸ್. ಇರಲಿಲ್ಲ. 1997-98ರಲ್ಲಿ ಸೇಲ್ಸ್ ಟ್ಯಾಕ್ಸ್‌ನಲ್ಲಿ ಅಂದರೆ, ಕಾರ್ಪೊರೇಷನ್ ಟ್ಯಾಕ್ಸ್, ಇನ್‌ಕಮ್ ಟ್ಯಾಕ್ಸ್ ಎಷ್ಟು ಬಂದಿತ್ತು ಎಂದರೆ ರಾಜ್ಯಗಳ ಷೇರು 15,691 ಕೋಟಿ ರೂಪಾಯಿಗಳಿತ್ತು. ಆದರೆ, ಈ ಸಲ 14,695 ಕೋಟಿ ರೂಪಾಯಿಗಳನ್ನು ಪ್ರೊಜೆಕ್ಟ್ ಮಾಡಿದ್ದಾರೆ, ಒಂದು ಸಾವಿರ ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಇದು ನಿನ್ನೆ ಕೇಂದ್ರದಲ್ಲಿ ಮಂಡಿಸಿರುವ ಮಧ್ಯಂತರ ಬಜೆಟ್. ಆದುದರಿಂದ, ಇವೊತ್ತು ನಮಗೆ 196 ಕೋಟಿ ರೂಪಾಯಿಗಳಷ್ಟು ಏನು ಖೋತಾ ಇದೆ, ವಿ. ಡಿ. ಐ. ಎಸ್. ನಿಂದ ಸುಮಾರು ಇನ್ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಪಾಲು ನಮ್ಮ ರಾಜ್ಯಕ್ಕೆ ಬರುತ್ತದೆ, ಸುಮಾರು 250 ಕೋಟಿ ರೂಪಾಯಿಗಳು ಬರಬಹುದು. ಇದರ ಬಗ್ಗೆ ನಾನು ಬಜೆಟ್‌ನಲ್ಲಿ ಹೇಳಲಿಲ್ಲ. ಅನೇಕ ರಾಜ್ಯಗಳು ಬಜೆಟ್ ಮಂಡಿಸುವಾಗ ಖೋತಾವನ್ನು ಸೇರಿಸಿಕೊಂಡು ತೆಗೆದುಕೊಂಡಿವೆ, 196 ಕೋಟಿ ರೂಪಾಯಿಗಳನ್ನು ಸೇರಿಸಿ ಖೋತಾ ಎಂದು ನಾನು ಹೇಳಿಲ್ಲ, ಅದನ್ನು ಬಿಟ್ಟು ಖೋತಾ ಎಂದು ಹೇಳಿದ್ದೇನೆ. ಈಗ ಶೇಕಡ 77. 5ರಷ್ಟು ಬರುತ್ತದೆಂದರೆ ರಾಜ್ಯಗಳಿಗೆ ಒಟ್ಟು ಬರುವುದು 10,050 ಕೋಟಿ ರೂಪಾಯಿಗಳು, ಅದರಲ್ಲಿ ರಾಜ್ಯದ ಷೇರು 7, 594 ಕೋಟಿ ರೂಪಾಯಿಗಳು. ಇದನ್ನು ಕೇಂದ್ರದ ಹಣಕಾಸು ಸಚಿವರಾಗಿದ್ದಂಥ ಪಿ. ಚಿದಂಬರರಂರವರು ಹೇಳಿದ್ದರು. ಅವರು ಏನು ಹೇಳಿದ್ದರು ಎಂದರೆ, ಮೊದಲ ಕಂತನ್ನು ಮಾರ್ಚಿ ತಿಂಗಳೊಳಗೆ ಕೊಡುತ್ತೇನೆ, ಎರಡನೇ ಕಂತನ್ನು ಮುಂದಿನ ವರ್ಷಕ್ಕೆ ಕೊಡುತ್ತೇನೆಂದರು. ಪಿ. ಚಿದಂಬರರಂರವರಿಗೂ ಈಗಿನ ಹಣಕಾಸು ಸಚಿವರಾಗಿರುವ ಯಶವಂತ ಸಿನ್ಹಾರವರಿಗೂ ಇಷ್ಟೇ ವ್ಯತ್ಯಾಸ. 196 ಕೋಟಿ ರೂಪಾಯಿಗಳಷ್ಟು ಖೋತಾ ಏನಿದೆ, ಅದನ್ನು ವೈಪ್-ಔಟ್ ಮಾಡುವುದಕ್ಕೆ ಕಷ್ಟವಾಗುತ್ತದೆಂದು ಹೇಳಿದ್ದರೂ ಅದನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲದೆ, ಕೇಂದ್ರ ಸರ್ಕಾರದಲ್ಲಿ ಇನ್ನೂ ಕೂಡ ಪ್ಲಾನ್ ನಿಗದಿಯಾಗಿಲ್ಲ. ಎರಡನೆಯದಾಗಿ, ಮಾರ್ಕೆಟ್ ಬಾರೋಯಿಂಗ್ಸ್‌ನಲ್ಲಿ ಮತ್ತು ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಹೆಚ್ಚು ಮಾಡಬೇಕು. ಕಳೆದ ಬಾರಿಗಿಂತ ಈ

ವರ್ಷದ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ ಸಾಮಾನ್ಯವಾಗಿ ರಾಜ್ಯಗಳಿಗೆ ಪ್ಲಾನ್ ಅಸಿಸ್ಟೆನ್ಸ್ ಮತ್ತು ಬೇರೆ ಅಸಿಸ್ಟೆನ್ಸ್‌ಗಳನ್ನು ಕೊಡತ್ತೇವಲ್ಲ, 1997-98ರಲ್ಲಿ ಕೇಂದ್ರ ಸರ್ಕಾರದ ಲೋನ್ ಎಷ್ಟಿತ್ತು, ಅಷ್ಟನ್ನೂ, 1998-99ನೇ ಸಾಲಿಗೆ ಕೊಡುತ್ತೇವೆಂದು ಮಧ್ಯಂತರ ಬಜೆಟ್‌ನಲ್ಲಿ ಹೇಳಿದ್ದಾರೆ. ಸಾಮಾನ್ಯವಾಗಿ ಶೇಕಡ 15-20 ರಷ್ಟು ಖೋತಾ ಇರುತ್ತಿತ್ತು. ಆದುದರಿಂದ, ಇದರ ಬಗ್ಗೆ ಮುಖ್ಯಮಂತ್ರಿಗಳು ಮತ್ತು ನಾವುಗಳೆಲ್ಲರೂ ಹೋಗಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಬೇಕು. ನೀವು ಈ ತರಹದ ತೀರ್ಮಾನ ತೆಗೆದುಕೊಂಡಿರುವುದು ಸರಿಯಲ್ಲ, ರಾಜ್ಯಗಳಿಗೆ ಹೆಚ್ಚು ಬರಬೇಕೆ ಹೊರತು 1997-98ರಲ್ಲಿ ಎಷ್ಟಿತ್ತೋ, ಅಷ್ಟನ್ನೇ ಮುಂದಿನ ವರ್ಷಕ್ಕೆ ಕೊಡುತ್ತೇವೆಂದು ಹೇಳುವುದು ಸರಿಯಾದ ಕ್ರಮವಲ್ಲವೆಂದು ಹೇಳಬೇಕಾಗಿದೆ ಈ ದಿಸೆಯಲ್ಲಿ ನಾವು ಪ್ರಧಾನಮಂತ್ರಿಯಾದ ಸನ್ಮಾನ್ಯ ವಾಜಪೇಯಿಯವರನ್ನು ಮತ್ತು ಹಣಕಾಸು ಸಚಿವರಾದ ಯಶವಂತ ಸಿನ್ಹಾ ಅವರಿಗೆ ಒತ್ತಾಯ ಮಾಡತಕ್ಕಂಥ ಕೆಲಸ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಒಟ್ಟಾರೆ ಆಯವ್ಯಯದಲ್ಲಿರುವ ಸ್ಥೂಲವಾದ ಚಿತ್ರ. ಈ ಕುರಿತು ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ಮಾನ್ಯ ಸದಸ್ಯರುಗಳು ಮಾತನಾಡಿದ್ದು, ಅದರ ಬಗ್ಗೆ ಹೆಚ್ಚು ದೀರ್ಘವಾಗಿ ಭಾಷಣ ಮಾಡಲು ಹೋಗುವುದಿಲ್ಲ. ಏಕೆಂದರೆ, ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಏನೇನು ಮಾಡಿದೆ, ಯಾವ್ಯಾವ ಬಾಬುಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಿದೆ, ನಮ್ಮ ಭೌತಿಕ ಸಾಧನೆ ಏನು, ಮುಂತಾದ ವಿಷಯಗಳ ಬಗ್ಗೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸುವಂಥ ಸಂದರ್ಭದಲ್ಲಿ ಎಲ್ಲಾ ವಿಚಾರಗಳನ್ನೂ ಕೂಡ ಹೇಳಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಏನು ಮಾಡಿದ್ದೇವೆ, ಕುಡಿಯುವ ನೀರಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದೇವೆ, ಎಷ್ಟು ಊರುಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಟ್ಟಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಸಾಲ ತಂದಿದ್ದು ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ :- ಸಾಲ ತೆಗೆದುಕೊಂಡಿದ್ದೇವೆ, ಸಾಲ ಇದೆ, ಇಲ್ಲವೆಂದು ಹೇಳಿದ್ದೇವೆಯೇ? ಅದಕ್ಕೋಸ್ಕರ ಶೇಕಡಾ 16ರಷ್ಟು ಟ್ಯಾಕ್ಸ್ ಡಿಸ್-ಸರ್ವೀಸ್ ಎಂದು ಹೇಳಿದ್ದೇನೆ. This is much below the national average. The credit-worthiness of the State is very high. It is very good. ದಿವಾಳಿ ಯಾರು ಮಾಡಿದ್ದುದು ಎಂದು ಅದನ್ನೆಲ್ಲಾ ಈಗ ನಾನು ಹೇಳುವುದಕ್ಕೆ ಹೋಗಲೇ? ಏನೇನು ದಿವಾಳಿ ಮಾಡಿದ್ದಾರೆ ಎನ್ನುವುದನ್ನು ಮತ್ತೆ ಹೇಳಬೇಕಾಗುತ್ತದೆ, ಎಲ್ಲೆಲ್ಲಿ ದಿವಾಳಿಯಾಗಿದೆ, ಎಷ್ಟು ವರ್ಷಗಳಿಂದ ಎಷ್ಟು ದಿವಾಳಿಯಾಗಿದೆ, ಅದನ್ನೆಲ್ಲಾ ಹೇಳುವುದಕ್ಕೆ ಹೋಗಲೇ? ಈಗ ಅದೆಲ್ಲಾ ಬೇಡ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ಏನು ಹೇಳಲು ಹೊರಟಿನೆಂದರೆ 31 ನೇ ಮಾರ್ಚ್, 1994ಕ್ಕೆ ಲಯಾಬಿಲಿಟಿಸ್ 9,124 ಕೋಟಿ ರೂಪಾಯಿಗಳಿದ್ದರೆ, ಈಗ 17,214 ಕೋಟಿ ರೂಪಾಯಿಗಳಾಗುತ್ತದೆ. ಅಂದರೆ, ಸುಮಾರು ಶೇಕಡಾ 88 ರಷ್ಟು. ನೀವು ಅಧಿಕಾರಕ್ಕೆ ಬಂದು ಕಳೆದ ಮೂರು ವರ್ಷಗಳಲ್ಲಿ ಶೇಕಡಾ 88 ರಷ್ಟು ಹೆಚ್ಚು ಲಯಾಬಿಲಿಟಿಸ್ ಆಯಿತು. ಈ ಅಂಕಿ ಅಂಶಗಳ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಸಿದ್ದರಾಮಯ್ಯ :- ಕ್ರಿ.ಶ. 2000 ಇಸವಿಯೊಳಗೆ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಮುಗಿಸಬೇಕು, ಸಾಲ ಮಾಡುವಂತಿಲ್ಲ, ಅದನ್ನು ಅಷ್ಟರೊಳಗೆ ಮುಗಿಸಲೇಬೇಕೆನ್ನುವ ಒಂದು ವಾದ.

ಅದಕ್ಕೋಸ್ಕರ ಕೃಷ್ಣಾ ಭಾಗ್ಯ ಜಲ ನಿಗಮದಿಂದ ಇವೊತ್ತಿನವರೆಗೆ 1,093 ಕೋಟಿ ರೂಪಾಯಿಗಳನ್ನು ಬಾಂಡ್‌ಗಳ ಮೂಲಕ ರೈಸ್ ಮಾಡಿದ್ದೇವೆ. ಸದರಿ ನಿಗಮದಿಂದ 1997-98ರಲ್ಲಿ 68 ಕೋಟಿ ರೂಪಾಯಗಳು ಬಂತು. ಮಾನ್ಯ ಖರ್ಗೆಯವರೆ, ನೀವು ಹೇಳಿದ್ದರಲ್ಲ, ಬರೀ 404 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿದ್ದೀರಿ, ಇನ್ನು 400 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿಲ್ಲವೆಂದು. ಆ ಹಣ ಮಾರ್ಚಿಯೊಳಗೆ ಬರುತ್ತಿದೆ. ಅದನ್ನೂ ಕೂಡ ಬಾಂಡ್ ಮೂಲಕ ಸಂಗ್ರಹಿಸುವ ಗುರಿಯನ್ನಿಟ್ಟುಕೊಂಡಿದ್ದು ಗುರಿ ತಲುಪತಕ್ಕಂಥ ಕೆಲಸ ಮಾಡಿದ್ದೇವೆ. ಈ ವರ್ಷದ ಬಜೆಟ್‌ನಲ್ಲಿ ನೀರಾವರಿಗೆ ಹೆಚ್ಚು ಆದ್ಯತೆ ನೀಡಿರುವುದಾಗಿ ಪ್ರಸ್ತಾಪಿಸಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚಿಚ್ಚು ಹಣ ಒದಗಿಸುತ್ತಾ ಬಂದಿದ್ದೇವೆ. ಈ ವರ್ಷ ನೀರಾವರಿಗೆ ಶೇಕಡ 30.42 ರಷ್ಟು ಹಣ ಕೊಡುತ್ತಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಳೆದ ಮೂರು ವರ್ಷಗಳಲ್ಲಿ ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಖರ್ಚು ಮಾಡಿರುವಂಥ ಹಣ 4,079 ಕೋಟಿ ರೂಪಾಯಿಗಳು. ಅದರ ಹಿಂದಿನ ಮೂರು ವರ್ಷಗಳಲ್ಲಿ ಖರ್ಚು ಮಾಡಿರುವಂಥಾದ್ದು 2,090 ಕೋಟಿ ರೂಪಾಯಿಗಳು. ಕಳೆದ ಮೂರು ವರ್ಷಗಳಲ್ಲಿ ಹೆಚ್ಚು - ಕಡಿಮೆ ಸುಮಾರು ಎರಡು ಪಟ್ಟು ಹಣ ಖರ್ಚು ಮಾಡಿದ್ದೇವೆ. ಮತ್ತು 1.34 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಇರಿಗೇಶನ್ ಪೊಟೆನ್ಸಿಷಿಯಲ್ ಅನ್ನು ಕ್ರಿಯೇಟ್ ಮಾಡಿದ್ದೇವೆ. ಕ್ರಿ.ಶ. 2,000 ಇಸವಿಯೊಳಗೆ ನಮ್ಮ ಪಾಲಿನ ನೀರನ್ನು ಬಳಸಿಕೊಳ್ಳುವ ದಿಕ್ಕಿನಲ್ಲಿ ನಾವು ಕೆಲಸ ಮಾಡಬೇಕು. ಆ ಪ್ರಕಾರ ಈ ವರ್ಷ ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿಗೆ 1,607 ಕೋಟಿ ರೂಪಾಯಿಗಳನ್ನು ಅಂದರೆ ಕಳೆದ ವರ್ಷಕ್ಕಿಂತ 368 ಕೋಟಿ ರೂಪಾಯಿಗಳಷ್ಟು ಹೆಚ್ಚಿಗೆ ಹಣವನ್ನು ಇಟ್ಟಿದ್ದೇವೆ.

ಶ್ರೀ ಹೆಚ್. ಎನ್. ನಂಜೇಗೌಡ :- ಕ್ರಿ. ಶ. 2000 ಇಸವಿಯೊಳಗೆ ನಮ್ಮ ರಾಜ್ಯದ ಪಾಲಿನ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೀರಿ. ಈಗ ಅಲ್ಲಿ ಕೆಲವಾರು ಕಾರಣಗಳಿಂದ ಕೆಲಸ ನಿಂತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಸುಮಾರು 4-5 ತಿಂಗಳುಗಳಿಂದ ಅಲ್ಲಿ ಕೆಲಸ ನಡೆದಿಲ್ಲ. ಈಗ ಊಟ ಮಾಡಿರುವುದಕ್ಕೆ ಗುರ್ತು ಏನೆಂದರೆ ಹೊಟ್ಟೆ ತುಂಬಿರುವುದು. ಅಲ್ಲಿ ಎಲ್ಲಿ ಕೆಲಸವಾಗುತ್ತಿದೆ? ಪ್ರಾಕ್ಟಿಕಲ್ ನಾಲೆಡ್ಜ್ ಇರುವ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸಬೇಕು. ಈಗ ಅದನ್ನು ಯಾರಾದರೂ ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ಈ ವಿಚಾರ ಸದನದಲ್ಲಿ ಬಂದಾಗಲೆಲ್ಲಾ ಮಾತನಾಡಿಕೊಂಡು ಹೋಗುವುದು, ಕ್ರಿ.ಶ. 2,000 ಇಸವಿಯೊಳಗೆ ಮುಗಿಸುತ್ತೇವೆ ಎನ್ನುವುದು, ಅಲ್ಲಿ ಕೆಲಸ ನಿಂತು ಹೋದರೆ ನಿಮ್ಮ ಕಾಲದಲ್ಲಾಯಿತು ಎಂದು ಅವರ ಹತ್ತಿರ ಜಗಳ ಮಾಡುವುದು. ಇವು ಮುಖ್ಯವಲ್ಲ. ಅಲ್ಲಿ ಕೆಲಸ ಆಗಬೇಕು, ಅದು ಆಗದೆ ಹೋದರೆ ಏನು ಉಪಯೋಗ, ಅದರ ಕಡೆ ಹೆಚ್ಚಿಗೆ ಗಮನ ಕೊಡಿ.

ಶ್ರೀ ಸಿದ್ಧರಾಮಯ್ಯ :- ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಆ ಕೆಲಸಕ್ಕೆ ಹೆಚ್ಚು ಒತ್ತು ಕೊಟ್ಟು, ಸರಿಯಾದಂಥ ಅಧಿಕಾರಗಳನ್ನು ಹಾಕಿ ಹೆಚ್ಚು ಕೆಲಸವನ್ನು ಮಾಡಿಸಬೇಕಾಗುತ್ತದೆ. ಅದರಲ್ಲಿ ಬೇರೆ ಮಾತಿಲ್ಲ. ಆದರೆ ಇಲ್ಲಿ ಕೆಲಸವೇ ಆಗಿಲ್ಲ ಸರ್ಕಾರ ನಿಷ್ಕ್ರಿಯೆಯಾಗಿದೆ, ಎನ್ನತಕ್ಕ ಮಾತುಗಳೇನಿದೆ ಅದು ಸತ್ಯಕ್ಕೆ ದೂರವಾದುದು. ನಾವು ಕೆಲಸ ಮಾಡಿದ್ದೇವೆ. ಪ್ರಾಥಮಿಕ ಶಿಕ್ಷಣಕ್ಕೆ ಒತ್ತು ಕೊಡುತ್ತೇವೆಂದು ಹೇಳಿದ್ದೆವು, ಕಳೆದ ಮೂರು ವರ್ಷದಲ್ಲಿ 61 ಸಾವಿರ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದೇವೆ, 20 ಸಾವಿರ ಶಾಲಾ ಕೊಠಡಿಗಳನ್ನು ಕಟ್ಟಿದ್ದು ಇನ್ನೂ 11 ಸಾವಿರ ಕೊಠಡಿಗಳು ವಿವಿಧ ಹಂತದಲ್ಲಿದೆ. ಆದ್ದರಿಂದ

ತಾವುಗಳು ನಾವು ಮಾಡಿರುವ ಕೆಲಸದ ಬಗ್ಗೆಯೂ ಸಹ ಹೇಳಬೇಕಾಗುತ್ತದಲ್ಲವೆ? ನೀವು ಏನೂ ಮಾಡಿಲ್ಲ, ಸುಮ್ಮನೆ ಭಾಷಣ ಮಾಡಿದ್ದೀರಿ, ಬುರುಡೆ ಹೊಡೆದಿದ್ದೀರಿ ಎಂದು ತಾವು ಹೇಳಿದರೆ ಹೇಗೆ? ಆರೋಗ್ಯ ಇಲಾಖೆಯಲ್ಲಿ 2,097 ಮಂದಿ ವೈದ್ಯರುಗಳನ್ನು ಖಾಯಂ ಇಲ್ಲವೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದೇವೆ. 197 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿದ್ದೇವೆ. 1,800 ಪ್ಯಾರಾಮೆಡಿಕಲ್ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದ್ದೇವೆ. 1,700 ಸ್ಟಾಫ್ ನರ್ಸ್‌ಗಳನ್ನು ನೇಮಕ ಮಾಡಿಕೊಳ್ಳಲು ತೀರ್ಮಾನ ಮಾಡಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಸುಮಾರು ಒಂದು ಲಕ್ಷ ಮಂದಿಗೆ ಕೆಲಸವನ್ನು ಕೊಡತಕ್ಕ ಕೆಲಸ ಮಾಡಿದ್ದೇವೆ. ಇದು ಸರ್ಕಾರದ ಸಾಧನೆಯಲ್ಲವೆ? ನಾವು ಮಾಡಿರುವ ಕೆಲಸದ ಬಗ್ಗೆ ಹೇಳುವ ಮನೋಭಾವ ತಮಗೆ ಇರಬೇಕಲ್ಲವೆ? ಹೋದ ವರ್ಷ ಶಿಕ್ಷಣಕ್ಕಾಗಿ 1,800 ಕೋಟಿ ಖರ್ಚು ಮಾಡಿದ್ದೆವು. ಆದರೆ ಈ ವರ್ಷ 2,206 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ. 900 ಮುಖ್ಯೋಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೈಸ್ಕೂಲ್‌ನ ಮುಖ್ಯೋಪಾಧ್ಯಾಯರ ಪರೀಕ್ಷೆಗಳಾಗಿದೆ ನೇಮಕಾತಿ ಇನ್ನೂ ಆಗಿಲ್ಲ. ಕೆ.ಪಿ. ಎಸ್. ಸಿ. ಯಲ್ಲಿ ಸಂದರ್ಶನವನ್ನು ಮುಗಿಸಿಲ್ಲ.

ಶ್ರೀ ಸಿದ್ಧರಾಮಯ್ಯ :- ಎಲ್ಲೋ ಒಂದು ವಿಭಾಗದಲ್ಲಿ ಸಂದರ್ಶನವಾಗದಿರಬಹುದು, ಊರಿಗೆ ಬಂದವರು ನೀರಿಗೆ ಬರದಿರುತ್ತಾರೆಯೇ? ಆ ಕೆಲಸವನ್ನು ಪೂರ್ಣ ಮಾಡಿಯೇ ಮಾಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ವೈದ್ಯರುಗಳನ್ನು ಕೆ.ಪಿ. ಎಸ್. ಸಿ. ಯವರು ನೇಮಕ ಮಾಡಿಕೊಂಡು ಆರ್ಡರ್‌ನ್ನು ಕೊಟ್ಟರು. ಆದರೆ, ಅದರಲ್ಲಿ ಎಷ್ಟು ಮಂದಿ ಕೆಲಸಕ್ಕೆ ರಿಪೋರ್ಟ್ ಮಾಡಿಕೊಂಡರು ಎಂಬ ಬಗ್ಗೆ ಆರೋಗ್ಯ ಸಚಿವರಿಗೆ ಗೊತ್ತಿದೆ. ಎಷ್ಟೋ ಮಂದಿ ರಿಪೋರ್ಟ್ ಮಾಡಿಕೊಂಡಿಲ್ಲ.

ಶ್ರೀ ಸಿದ್ಧರಾಮಯ್ಯ :- ಏನು ಮಾಡುವುದಕ್ಕಾಗುತ್ತದೆ. ಆ ರೀತಿ ಬಾರದಿರುವುದಕ್ಕಾಗಿ ಈಗ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುತ್ತಿದ್ದೇವೆ. ಎಲ್ಲಾ ಅಧಿಕಾರವನ್ನು ಡಿ.ಸಿ. ಯವರಿಗೆ ಕೊಟ್ಟು ನಮ್ಮ ಹತ್ತಿರ ಕಳಿಹಿಸಬೇಡಿ, ಸಂಪೂರ್ಣವಾದ ಮೇಲೆ ಕಳಿಹಿಸಿ ಎಂದು ಹೇಳಿಬಿಟ್ಟಿದ್ದೇವೆ. ಅವರಿಗೆ ಸಂಬಳವನ್ನು ಆರು ಸಾವಿರದವರೆಗೆ ಮಾಡಿದ್ದೇವೆ. ರಾಜ್ಯದ ಆರ್ಥಿಕ ಬೆಳವಣಿಗೆಯಾಗಬೇಕಾದರೆ ಮೂಲಭೂತ ಸೌಲಭ್ಯಗಳು ಒದಗಿಸಬೇಕಾಗುತ್ತದೆ. ತಾವು ಇದನ್ನು ಒಪ್ಪಿಕೊಳ್ಳಬಹುದೆಂದು ಭಾವಿಸುವೆ. ರಸ್ತೆಗಳ, ನೀರಾವರಿಯ ಅಭಿವೃದ್ಧಿಯಾಗಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮೂಲಭೂತ ಸೌಲಭ್ಯಗಳನ್ನು ಹೆಚ್ಚಿಸಬೇಕೆಂದೇ ನಾವು ಹೇಳುವುದು.

ಶ್ರೀ ಸಿದ್ಧರಾಮಯ್ಯ :- ನಾವು ಅದನ್ನು ಹೆಚ್ಚಿಸಿರುವುದರಿಂದ ತಾವು ಸ್ವಾಗತ ಮಾಡಬೇಕಾಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಹೆಚ್ಚಾಗಿದ್ದರೆ ಸ್ವಾಗತ ಮಾಡುತ್ತೇವೆ, ಆದರೆ ಅದು ಆಗಿಲ್ಲವಲ್ಲ?

ಶ್ರೀ ಸಿದ್ಧರಾಮಯ್ಯ :- ಆಗುತ್ತಿದೆ.

ಶ್ರೀ ವಾಟಾಳ್ ನಾಗರಾಜ್ :- ಸುಮ್ಮನೆ ಆಯಿತು ಎಂದರೆ ಹೇಗೆ?

ಶ್ರೀ ಸಿದ್ಧರಾಮಯ್ಯ :- ತಮ್ಮ ಕ್ಷೇತ್ರದಲ್ಲಿ ಎಷ್ಟು ಮನೆಗಳನ್ನು ಕೊಟ್ಟಿದ್ದೇವೆ ಏನೇನು ಮಾಡಿದ್ದೇವೆ ಎಂಬ ಬಗ್ಗೆ ತಾವು ಹೇಳುವುದೇ ಇಲ್ಲವಲ್ಲ? ಮೂರು ವರ್ಷದಲ್ಲಿ ಎರಡು ಲಕ್ಷ ಎಪ್ಪತ್ತು ಸಾವಿರ ಮನೆಗಳನ್ನು ಕಟ್ಟಿಸಿದ್ದೇವೆ, ಇದು ಬುರುಡೆ ಹೊಡೆಯುವುದೇ?

ಶ್ರೀಮತಿ ಪ್ರಮೀಳಾ ನೇಸರ್ಗಿ :- ಎಲ್ಲವನ್ನೂ ಅವರಿಗೇ ಕೊಟ್ಟುಬಿಟ್ಟರೆ ನಮ್ಮ ಗತಿಯೇನು?

ಶ್ರೀ ಸಿದ್ಧರಾಮಯ್ಯ :- ತಮಗೂ ಕೊಟ್ಟಿದ್ದೇವೆ. ನಗರ ಪ್ರದೇಶಗಳಿಗೆ ಆಶ್ರಯ ಮನೆಗಳು ಬರುತ್ತವೆ. ನಾವು ಇದುವರೆಗೆ 1 ಲಕ್ಷದ 80 ಸಾವಿರ ಮನೆಗಳನ್ನು ಹಂಚಿದ್ದೇವೆ. 2 ಲಕ್ಷ 70 ಸಾವಿರ ಮನೆಗಳನ್ನು ಕಟ್ಟಿದ್ದೇವೆ. ಹಾಸ್ಟೆಲ್‌ಗಳು ಕಟ್ಟಿದ್ದೇವೆ, ಅಂಬೇಡ್ಕರ್ ಯೋಜನೆಯ 60 ಸಾವಿರ ಮನೆಗಳು ವಿವಿಧ ಹಂತಗಳಲ್ಲಿದೆ. ಮಾನ್ಯ ಖರ್ಗೆಯವರು ನಿನ್ನೆ ಮಾತನಾಡುತ್ತ ಎಸ್ ಸಿ, ಎಸ್ ಟಿ ರವರಿಗೆ ಇಟ್ಟಿರುವ ಹಣದ ಬಗ್ಗೆ ಹೇಳಿದರಿ. ಇಲ್ಲಿ 102 ಕೋಟಿ ರೂಪಾಯಿಗಳು, ಏನಿದೆ ಅದರಲ್ಲಿ 50 ಕೋಟಿ ರೂಪಾಯಿ ಪೂಲ್ಡ್ ಅಮೌಂಟಿನಿಂದ ಬರುತ್ತದೆ. ಇನ್ನೂ 50 ಕೋಟಿ ರೂಪಾಯಿ ತೊಡಗಿಸುತ್ತೇವೆ. ಅದು ಒಟ್ಟು 200 ಕೋಟಿಯಾಗುತ್ತದೆ. ಅದು 102 ಕೋಟಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ಪ್ಲಾನ್ ಔಟ್‌ಲೇಯನ್ನೇನು ತಾವು ಕೊಟ್ಟಿದ್ದೀರಿ, ಅದರಂತೆ ಹೋದ ವರ್ಷ ಇದಕ್ಕೆ 160 ಕೋಟಿ ರೂಪಾಯಿ ಇದ್ದರೆ ಈ ವರ್ಷ 102 ಕೋಟಿ ರೂಪಾಯಿ ಇದೆ.

ಶ್ರೀ ಸಿದ್ಧರಾಮಯ್ಯ :- ಅದು ಇಡೀ ವರ್ಷಕ್ಕೆ ಸೇರಿಸಿಕೊಂಡು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ತಾವು 1996-97, 1997-98, 1998-99 ಈ ಮೂರು ವರ್ಷದ ಹೋಲಿಕೆಯನ್ನು ಕೊಟ್ಟಿದ್ದೀರಿ. ನೀವು ಬೇರೆ ಕಡೆ ಪ್ರಾವಿಜನ್ ಮಾಡಿದ್ದಿರೆಂದರೆ ಅದನ್ನು ನಾವು ನೋಡಲಿಲ್ಲ. ಪ್ಲಾನ್ ಪ್ರಾವಿಜನ್‌ನಲ್ಲಿ ಯಾವ ಹೆಡ್‌ನ ಅಡಿಯಲ್ಲಿ ಅದನ್ನು ತೋರಿಸಬೇಕೋ ಅದೇ ಹೆಡ್‌ನಲ್ಲಿ ತೋರಿಸಬೇಕಾಗುತ್ತದೆ. ಬೇರೆ ಕಡೆ ತೋರಿಸಿದ್ದೇವೆಂದರೆ ಅದನ್ನು ನಾವು ನೋಡಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಹೋದ ವರ್ಷ ಪ್ಲಾನ್ ಔಟ್‌ಲೇ ಪ್ರಕಾರ ಇದಕ್ಕೆ 46.30 ಕೋಟಿ ರೂಪಾಯಿ ಇತ್ತು, ಈ ವರ್ಷ 41.20 ಕೋಟಿ ರೂಪಾಯಿ ಇದೆ. ಕಡಿಮೆ ಮಾಡಿದ್ದೀರಿ. ಎಸ್. ಸಿ., ಎಸ್. ಟಿ. ರವರಿಗೆ ಕ್ಯಾಪಿಟಲ್ ಔಟ್ ಲೇಯನ್ನು ತೆಗೆದು ನೋಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದರಲ್ಲಿ ವ್ಯತ್ಯಾಸವಾಗಿದೆಯೆಂದು ಹೇಳಿದೆ, ಆಗ ಮುಖ್ಯ ಮಂತ್ರಿಯವರು ಅದನ್ನು ನೋಡಿದರು, ತಾವು ನೋಡಿರಲಿಲ್ಲ.

ಶ್ರೀ ಸಿದ್ದರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ, ಪ್ಲಾನ್ ಸ್ಕೀಮ್‌ನಲ್ಲಿ 1997-98 ರಲ್ಲಿ 100.68 ಕೋಟಿ ರೂಪಾಯಿ ಪೂಲ್ಡ್ ಅಮೌಂಟ್ 84 ಕೋಟಿ ರೂಪಾಯಿ ಒಟ್ಟು 185 ಕೋಟಿ ರೂಪಾಯಿ ಎರಡೂ ಸೇರಿ ಆಗಿತ್ತು. ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 160 ಕೋಟಿ ರೂಪಾಯಿಯಾಗಿತ್ತು. ಈ ವರ್ಷ 102 ಕೋಟಿ ರೂಪಾಯಿ ಪ್ಲಾನ್ ಸ್ಕೀಮ್‌ನಲ್ಲಿ, ಪೂಲ್ಡ್ ಫಂಡ್‌ನಲ್ಲಿ ಮೊದಲನೆಯ ಕಂತಾಗಿ 50 ಕೋಟಿ 85 ಲಕ್ಷ ರೂಪಾಯಿ ಒಟ್ಟು 153 ಕೋಟಿ ರೂಪಾಯಿಯಾಗುತ್ತದೆ, ಮುಂದಿನ ಪೂಲ್ಡ್ ಕಂತಿನಲ್ಲಿ 40 ಕೋಟಿ ರೂಪಾಯಿ ಬರುತ್ತದೆ, ಈ ವರ್ಷ ಒಟ್ಟು 193 ಕೋಟಿ ರೂಪಾಯಿಯಾಗುತ್ತದೆ.

ಆದ್ದರಿಂದ ಇದರಲ್ಲಿ ಕಡಿಮೆಯಾಗಿದೆ ಎನ್ನತಕ್ಕದ್ದು ಸರಿಯಲ್ಲ. 50 ಕೋಟಿ ರೂಪಾಯಿ ಫುಲ್ಡ್ ಅಮೌಂಟ್, ಎರಡನೆಯ ಕಂತಿನ 40 ಕೋಟಿ ರೂಪಾಯಿ ಈ ಎರಡನ್ನು ಅದರಲ್ಲಿ ಸೇರಿಸಿದರೆ ಒಟ್ಟು 193 ಕೋಟಿ ರೂಪಾಯಿಗಳಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ತಮ್ಮ ಬುದ್ದಿವಂತಿಕೆಯಿಂದ ಏನು ಮಾಡಿದ್ದೀರೆಂದರೆ, ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ ,ಮಲೆನಾಡು ಡೆವಲಪ್‌ಮೆಂಟ್ ಪ್ರೋಗ್ರಾಂ, ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಪ್ರೋಗ್ರಾಂ, ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟ್, ಮೈನರ್ ಇರಿಗೇಷನ್, ವಾಟರ್ ಸಪ್ಲೈ, ಇವೆಲ್ಲಾ ಸೇರಿಸಿ 50 ಕೋಟಿ 85 ಲಕ್ಷ ರೂಪಾಯಿ ಏನಿದೆ ಇದು ಟೋಟೆಲ್ ಬಜೆಟ್‌ನಲ್ಲಿ ಸೇರುತ್ತದೆಂದು ತಮ್ಮ ವಾದ. ಅದು 047 ಹೆಡ್‌ನಲ್ಲಿ ಬರುತ್ತದೆ.ಪುಟ 2ರಲ್ಲಿನ ಸ್ಟೇಟ್‌ಮೆಂಟ್ 1 ರಲ್ಲಿ ಇದು ಇದೆ. ಯಥಾಪ್ರಕಾರ ಮೊದಲು ಕೂಡಿಸಿ ಇಡುತ್ತಿದ್ದೀರಿ. ಆದರೆ ತಾವು ಏನು ಮಾಡಿದ್ದೀರೆಂದರೆ ಅಲ್ಲಿನವರಿಗೆ ನಿರ್ದೇಶನ ಕೊಟ್ಟು, ಈ ಹಿಂದೆ ಇವುಗಳಿಗೆ ಹಣವನ್ನು ತೆಗೆದಿಡುತ್ತಿರಲಿಲ್ಲ, ಅಲ್ಲೂ ಖರ್ಚು ಮಾಡುತ್ತಿದ್ದರು, ಇಲ್ಲೂ ಯಥಾಪ್ರಕಾರ ಹಣವನ್ನು ಕೊಡುತ್ತಿದ್ದರು. ಉದಾಹರಣೆಗೆ, ಮಲೆನಾಡು ಅಭಿವೃದ್ಧಿ ಮಂಡಳಿಗೆ ತಾವು 30 ಕೋಟಿ ರೂಪಾಯಿ ಕೊಟ್ಟರೆ ಅದರಲ್ಲಿ 18 ಪರ್‌ಸೆಂಟ್ ಹಣವನ್ನು ತೆಗೆಯುತ್ತಿರಲಿಲ್ಲ. ಅಲ್ಲಿ 30 ಕೋಟಿ ರೂಪಾಯಿ ಏನು ಖರ್ಚು ಮಾಡಬೇಕಾಗಿತ್ತೋ ಅಷ್ಟು ಆಗುತ್ತಲೇ ಇತ್ತು. ಇಲ್ಲಿ ಸಹ ತಾವು 18 ಕೋಟಿ ರೂಪಾಯಿಯನ್ನೇನು ಕೊಡಬೇಕಾಗಿತ್ತೋ ಅದನ್ನು ಕೊಟ್ಟೇ ಕೊಡುತ್ತಿದ್ದೀರಿ. ಆದರೆ ತಾವು ಬುದ್ದಿವಂತಿಕೆಯಿಂದ ಅಲ್ಲಿನ ಹಣವನ್ನು ಸಹ ಇದರಲ್ಲಿ ಸೇರಿಸಿದ್ದೀರಿ. ಪುಟ 6 ರಲ್ಲಿ 50 ಕೋಟಿ 85 ಲಕ್ಷ ರೂಪಾಯಿಗಳನ್ನು ಸೇರಿಸಿಯೇ 160 ಕೋಟಿ ರೂಪಾಯಿಯಾಗುತ್ತದೆ, ಆದ್ದರಿಂದ ಹಣ ಕಡಿಮೆಯಾಗುವುದಿಲ್ಲವೆಂಬುದು ಅವರ ವಾದ.

ಶ್ರೀ ಜೆ. ಹೆಚ್. ಪಟೀಲ್ (ಮುಖ್ಯಮಂತ್ರಿಯವರು) :- ಮಾನ್ಯ ಉಪಾಧ್ಯಕ್ಷರೆ, ತಾವು ಮುಖ್ಯವಾದ ಒಂದು ಅಂಶವನ್ನೇ ಗಮನಿಸಲಿಲ್ಲ. ಫುಲ್ಡ್ ಅಮೌಂಟ್ ಎಂದರೆ ಏನು ಎಂದರೆ, ಕಳೆದ ವರ್ಷ ಸೋಶಿಯಲ್ ವೆಲ್‌ಫೇರ್ ಮಿನಿಸ್ಟರಿಗೆ ಅಷ್ಟು ಹಣವನ್ನು ಕೊಡುವುದು, ಬೇರೆ ಬೇರೆ ಇಲಾಖೆಗಳಿಗೆ ಅಷ್ಟು ಹಣವನ್ನು ಕೊಡುವುದು, ಆ ರೀತಿ ಬೇರೆ ಬೇರೆ ಇಲಾಖೆಗಳಿಗೆ ಕೊಟ್ಟಿದ್ದ ಹಣ ವ್ಯರ್ಥವಾಗಿಬಿಟ್ಟಿತ್ತು. ಕಳೆದ 10- 15 ವರ್ಷದ ಇತಿಹಾಸವನ್ನು ನೋಡಿದರೆ ಅದು ಆ ರೀತಿಯಾಗಿದೆ ಯಾರಿಗೋ ಕುರಿಕೊಟ್ಟ, ಮರ ಕೊಟ್ಟ, ತೆಂಗಿನ ಗಿಡ ಕೊಟ್ಟ ಅದು, ಇದು ಕೊಟ್ಟವೆಂದು ಹದಿನೆಂಟು ಇಲಾಖೆಗಳಿಂದ ಈ ಹಣ ಎಸ್. ಸಿ., ಎಸ್. ಟಿ. ಜನಾಂಗದವರಿಗೆ ತಲುಪುತ್ತಲೇ ಇರಲಿಲ್ಲ. ಅದಕ್ಕೋಸ್ಕರ ಹಾಗೆ ಖರ್ಚು ಮಾಡುವುದು ಬೇಡವೆಂದು, ಅವುಗಳಿಂದ ಹಣ ತೆಗೆದುಕೊಂಡು ಆ ಜನಾಂಗದವರಿಗೆ ಮೊದಲನೆಯದಾಗಿ ವಿದ್ಯಾಭ್ಯಾಸ, ಎರಡನೆಯದಾಗಿ ಇರಲಿಕ್ಕೆ ಮನೆ, ಮೂರನೆಯದಾಗಿ ಜಮೀನಿಗೆ ನೀರು ಕೊಡಬೇಕೆಂದು ನಾವು ಮಾಡಿದ್ದೇವೆ. ಅದನ್ನು ನಿಮ್ಮ ಸರ್ಕಾರ ಮಾಡಿರಲಿಲ್ಲ.

(ಗೊಂದಲ)

ಖರ್ಚು ಎಷ್ಟು ಮಾಡಿದ್ದೇವೆ ಎಂದು ತೋರಿಸುವುದು ಮುಖ್ಯ ಅಲ್ಲ. ಖರ್ಚು ಯಾರಿಗೋಸ್ಕರ ಮಾಡಿದ್ದೇವೆ, ಏತಕ್ಕೋಸ್ಕರ ಮಾಡಿದ್ದೇವೆ ಎನ್ನುವುದು ಮುಖ್ಯ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಹಣವನ್ನು ಪೂಲ್ಡ್ ಅಮೌಂಟ್ ಮಾಡಿ ಖರ್ಚು ಮಾಡಿ, ನಮ್ಮದೇನು ಅಭ್ಯಂತರ ಇಲ್ಲ. ಆದರೆ ಕಳೆದ ಮೂರು ವರ್ಷಗಳಿಂದ 160 ಕೋಟಿ ರೂಪಾಯಿ ಪ್ರಾವಿಷನ್ ಇಟ್ಟುಕೊಂಡು ಬಂದಿದ್ದು, ಈ ವರ್ಷ ಮಾತ್ರ ಅದನ್ನು 102 ಕೋಟಿ ರೂಪಾಯಿ ಎಂದು ಇಟ್ಟು ಜೊತೆಗೆ ಪೂಲ್ಡ್ ಅಮೌಂಟ್ 50 ಕೋಟಿ ರೂಪಾಯಿ ಇರುವುದನ್ನು ಸೇರಿಸಿಕೊಂಡು 160 ಕೋಟಿ ರೂಪಾಯಿ ಎಂದು ಹೇಳುತ್ತಿದ್ದೀರಿ, ಇದರಿಂದ ಎಸ್. ಟಿ., ಎಸ್. ಸಿ. ಇಲಾಖೆಗಳಿಗೆ ಇಟ್ಟಂತಹ ಹಣವನ್ನು ಕಡಿಮೆ ಮಾಡಿದಂತೆ ಆಗುತ್ತದೆಯೇ ಹೊರತು ಜಾಸ್ತಿ ಮಾಡಿದಂತೆ ಆಗುವುದಿಲ್ಲ. ಅದಕ್ಕೋಸ್ಕರ ಅಧ್ಯಕ್ಷರೆ ನಾನು ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಪೂಲ್ಡ್ ಅಮೌಂಟನ್ನು ಒಂದು ಕಡೆ ಖರ್ಚು ಮಾಡುವುದರಲ್ಲಿ ವ್ಯತ್ಯಾಸ ಏನು ಬರುವುದಿಲ್ಲ, ಆದರೆ ಅಡಿಷನಲ್ ಆಗಿ ಬರತಕ್ಕ 50 ಕೋಟಿ ರೂಪಾಯಿ ಇದರಲ್ಲಿ ಬಂದಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ :- ಹೋದ ಸಾರಿ ಏನಾಯಿತು ಎಂದರೆ ಸಪ್ಲಿಮೆಂಟರಿ ಎಸ್ಟಿಮೇಟ್ ಮೂಲಕ 102 ಕೋಟಿ ರೂಪಾಯಿಗಳನ್ನು ಪೂಲ್ ಮಾಡುತ್ತೇವೆ ಎಂದು ಹೇಳಿದ್ದೆವು, ಆದರೆ ಅದರಲ್ಲಿ 80 ಕೋಟಿ ರೂಪಾಯಿಗಳು ಮಾತ್ರ ಪೂಲ್ ಆಯಿತು. ಆದುದರಿಂದ ಈ ಸಲ ಹಣವನ್ನು ಮೊದಲೇ ಪೂಲ್ ಮಾಡಿ ಇಟ್ಟಿದ್ದೇವೆ. ಆ ಹಣ ಏಪ್ರಿಲ್‌ನಿಂದಲೇ ಎಸ್. ಟಿ., ಎಸ್. ಸಿ. ಜನಾಂಗದವರಿಗೆ ಖರ್ಚು ಮಾಡಲು ರೆಡಿ ಇರುತ್ತದೆ. ಇದು ಒಂದು ಹೊಸ ಪದ್ಧತಿ. ಹಿಂದೆ ಈ ರೀತಿ ಇರಲಿಲ್ಲ; ಪೂಲ್ ಮಾಡಿದ ಮೇಲೆ ಹಣವನ್ನು ಖರ್ಚು ಮಾಡಬೇಕಾಗಿತ್ತು, ಆದರೆ ಈಗ ಹಣವನ್ನು ಬಡ್ಜೆಟ್‌ನಲ್ಲಿ ಮೊದಲೆ ಪೂಲ್ ಮಾಡಿ ಇಟ್ಟಿರುವುದರಿಂದ ಇದು ಏಪ್ರಿಲ್‌ನಿಂದಲೇ ಖರ್ಚು ಮಾಡಬಹುದು. ಈ ವರ್ಷ ಆ ವರ್ಗದ ಜನರಿಗಾಗಿ 50.85 ಕೋಟಿ ರೂಪಾಯಿಗಳನ್ನು ಮೊದಲೇ ಪೂಲ್ ಮಾಡಿ ಇಟ್ಟಿದ್ದೇವೆ. ಅದನ್ನು ಏಪ್ರಿಲ್‌ನಿಂದಲೇ ಖರ್ಚು ಮಾಡಬಹುದು. ಮತ್ತು ಈ ಹೊಸ ಪದ್ಧತಿಯಿಂದ ಮೊದಲನೇ ಕಂತಿನಲ್ಲಿ 50 ಕೋಟಿ ರೂಪಾಯಿ ಬರುತ್ತದೆ, 100 ಕೋಟಿ, ರೂಪಾಯಿ ಜೊತೆಗೆ 50 ಕೋಟಿ ರೂಪಾಯಿ ಮೊದಲನೆಯ ಕಂತಿನಲ್ಲಿ, ಎರಡನೆಯ ಕಂತಿನಲ್ಲಿ 40 ಕೋಟಿ ರೂಪಾಯಿ ಬರುತ್ತದೆ, ಒಟ್ಟು 193 ಕೋಟಿ ರೂಪಾಯಿಗಳಾಗುತ್ತವೆ. ಆದುದರಿಂದ, ಇದರಲ್ಲಿ ಇಟ್ಟಿರುವ ಹಣ ಕಡಿಮೆ ಆಗಿಲ್ಲ ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ವಾದ ಮಾಡತಕ್ಕ ಅವಶ್ಯಕತೆ ಇಲ್ಲ. ಮಾನ್ಯ ಅಧ್ಯಕ್ಷರೆ ಇಷ್ಟೇ ಅಲ್ಲದೆ, ಕಳೆದ ಮೂರು ವರ್ಷಗಳಲ್ಲಿ ನಾವು ಯಾವುದನ್ನು ಆದ್ಯತೆ ವಲಯಗಳೆಂದು ಹೇಳಿದ್ದೇವೆ, ಅವುಗಳಿಗೆ ಹೆಚ್ಚು ಹಣವನ್ನು ತೊಡಗಿಸಿದ್ದೇವೆ, ಆ ಕೆಲಸಗಳನ್ನು ಮಾಡಿದ್ದೇವೆ. ಇವತ್ತು ರಾಜ್ಯದ ಆರ್ಥಿಕ ಬೆಳವಣಿಗೆಗೆ ಪೂರಕವಾದಂತಹ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ. ಇದಕ್ಕೆ ನಮ್ಮ ಉದ್ದೇಶ ಆರ್ಥಿಕ ಬೆಳವಣಿಗೆ ಆಗಿರುವುದೇ ಹೆಚ್ಚು ಕಾರಣ. ಏಕೆಂದರೆ ನಾವು 9ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ 7 ಪರ್ಸೆಂಟ್ ಜಿ. ಡಿ. ಪಿ. ಗ್ರೋತ್ ಇರಬೇಕೆಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಕಳೆದ ವರ್ಷ 1996-97 ರಲ್ಲಿ 5.8 ಇದ್ದಂತಹ ಜಿ. ಡಿ. ಪಿ. ಗ್ರೋತ್ ಇದ್ದರೆ ಈ ವರ್ಷ 6.7 ಪರ್ಸೆಂಟ್ ಆಗಿದೆ. ಇವತ್ತು ಕೃಷಿ ಉತ್ಪಾದನೆ ಕಡಿಮೆ

ಆಗಿದ್ದರೂ, ಕೈಗಾರಿಕಾ ಉತ್ಪಾದನೆ ಕಡಿಮೆ ಆಗಿದ್ದರೂ ಸಹ ಸರ್ವಿಸ್ ಸೆಕ್ಟರ್‌ನಲ್ಲಿ ಬೆಳವಣಿಗೆ ಜಾಸ್ತಿ ಆಗಿರುವುದರಿಂದ ಈ ವರ್ಷ 6.7 ಪರ್ಸೆಂಟ್ ಜಿ.ಡಿ.ಪಿ. ಗ್ರೋತ್ ಮಾಡಿದ್ದೇವೆ. ಇನ್ನು 9ನೇ ಪಂಚವಾರ್ಷಿಕ ಯೋಜನೆಯ ಉಳಿದ ನಾಲ್ಕು ವರ್ಷಗಳಲ್ಲಿ ನಾವು 7 ಪರ್ಸೆಂಟ್ ಜಿ.ಡಿ. ಪಿ. ಗ್ರೋತ್ ಮಾಡುವುದರ ಮೂಲಕ ರಾಜ್ಯದಲ್ಲಿ ಆರ್ಥಿಕ ಬೆಳವಣಿಗೆಯ ವಿಕಾಸವನ್ನು ಮಾಡಬೇಕೆನ್ನುವುದೇ ನಮ್ಮ ಸರ್ಕಾರದ ಗುರಿ. ಮತ್ತು ನಾವು ಇವತ್ತು ಶಿಕ್ಷಣ ಕ್ಷೇತ್ರದಲ್ಲಿ ಪ್ರೈಮರಿ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿರುವುದರಿಂದ 1994-95 ರಲ್ಲಿ 27 ಪರ್ಸೆಂಟ್ ಇದ್ದಂತಹ ಡ್ರಾಪ್- ಔಟ್ಸ್ ಇದ್ದರೆ 1 ರಿಂದ 4 ನೇ ತರಗತಿವರೆಗೆ ಇವತ್ತು ಅಂದರೆ ಈ ವರ್ಷ 16 ಪರ್ಸೆಂಟ್‌ಗೆ ಇಳಿದಿದೆ. ಮತ್ತು 5-7 ತರಗತಿವರೆಗೆ 1994-95ನೇ ಸಾಲಿನಲ್ಲಿ ಇದ್ದಂತಹ ಡ್ರಾಪ್ -ಔಟ್ಸ್ 49 ಪರ್ಸೆಂಟ್ ಇದ್ದರೆ ಈ ವರ್ಷ 43 ಪರ್ಸೆಂಟ್‌ಗೆ ಇಳಿದಿದೆ. 1991ರ ಅಂಕಿಅಂಶಗಳ ಪ್ರಕಾರ 56 ಪರ್ಸೆಂಟ್ ಇದ್ದಂತಹ ಲಿಟ್ರಸಿ ರೇಟ್ಸ್ ಇವತ್ತು 1997ಕ್ಕೆ 67 ಪರ್ಸೆಂಟ್ ಆಗಿದೆ. ಜೊತೆಗೆ ಎನ್‌ರೋಲ್‌ಮೆಂಟ್ 1994-95 ರಲ್ಲಿ 78 ಲಕ್ಷ ಇದ್ದದ್ದು, 1997-98 ರಲ್ಲಿ 82,27,000 ಆಗಿದೆ. ಪ್ರೈಮರಿ ಶಿಕ್ಷಣಕ್ಕೆ ನಮ್ಮ ಸರ್ಕಾರ ಹೆಚ್ಚು ಒತ್ತು ಕೊಟ್ಟಿರುವುದರಿಂದ ಇಷ್ಟೊಂದು ಬೆಳವಣಿಗೆ ಆಗಿದೆ. ಜೊತೆಗೆ ಇವತ್ತು ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್‌ಗಳಲ್ಲಿ ಹಾಜರಾತಿ ಜಾಸ್ತಿ ಆಗಿದೆ, ಡ್ರಾಪ್-ಔಟ್ಸ್ ಕಡಿಮೆ ಆಗಿದೆ, ಮುಂದಿನ 9ನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗೆ 90 ಪರ್ಸೆಂಟ್ ಲಿಟ್ರಸಿ ರೇಟ್ ಮುಟ್ಟಬೇಕೆನ್ನುವುದು ನಮ್ಮ ಸರ್ಕಾರದ ಗುರಿ, ಅದನ್ನು ನಾವು ಸಾಧನೆ ಮಾಡುತ್ತೇವೆ. ಎನ್ನುವ ಮಾತುಗಳನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಬಹುಶ: 9ನೇ ಪಂಚವಾರ್ಷಿಕ ಯೋಜನೆ ಆದ ಮೇಲೆ Karnataka will be the second State next to Kerala. This is our target and it is our aim and we are going to achieve it. ಆದುದರಿಂದ ಕರ್ನಾಟಕದಲ್ಲಿ ವಿಕಾಸ ಆಗಿಲ್ಲ, ಏನೂ ಬೆಳವಣಿಗೆ ಆಗಿಲ್ಲ, ಎಲ್ಲಾ ಆರ್ಥಿಕವಾಗಿ ದಿವಾಳಿಯಾಗಿದೆ ಎನ್ನತಕ್ಕ ಮಾತುಗಳು ಸತ್ಯಕ್ಕೆ ದೂರವಾದವು. ಮತ್ತು ವಿಶ್ವಬ್ಯಾಂಕ್‌ನವರು ಕರ್ನಾಟಕ ರಾಜ್ಯದ ಆರ್ಥಿಕ ನಿರ್ವಹಣೆ ನೋಡಿ ಚೆನ್ನಾಗಿದೆಯೆಂದು ಹೇಳಿದ್ದಾರೆ. ಅಲ್ಲದೆ, ನಾವು ವಿದ್ಯುಚ್ಛಕ್ತಿ, ಕುಡಿಯುವ ನೀರು ಮತ್ತು ನೀರಾವರಿಗಾಗಿ ಸಾಲ ಪಡೆಯಲು ವಿಶ್ವಬ್ಯಾಂಕ್‌ನೊಂದಿಗೆ ಮಾತುಕತೆ ಆಡುತ್ತಿದ್ದೇವೆ. ಬೇರೆ ಓಪನ್ ಮಾರ್ಕೆಟ್‌ನಲ್ಲಿ ಸಾಲ ಪಡೆದರೆ ಬಡ್ಡಿ ದರ ಜಾಸ್ತಿ ಆಗುತ್ತದೆ. ಆದರೆ ವಿಶ್ವಬ್ಯಾಂಕ್‌ನಲ್ಲಿ ಸಾಲ ಪಡೆದರೆ ಬಡ್ಡಿ ದರ ಕಡಿಮೆಯಾಗುತ್ತದೆ, ಜೊತೆಗೆ ಅದರಲ್ಲಿ ನಮಗೆ ಗ್ರಾಂಟ್ಸ್ ಸಹ ದೊರೆಯುತ್ತದೆ. ಸಾಲ ತೀರಿಸತಕ್ಕ ಅವಧಿ ಜಾಸ್ತಿ ಇರುತ್ತದೆ. ಇದರಿಂದ ನಾವು ಹಾಕಿದಂಥ ಬಂಡವಾಳಕ್ಕೂ ಸಹ ರಿಟರ್ನ್ಸ್ ಸಿಗುತ್ತದೆ. ಅದಕ್ಕೋಸ್ಕರ ಇವತ್ತು ನಾವು ನೀರಾವರಿಗೂ ಸಹ ಯೋಚನೆ ಮಾಡುತ್ತಿದ್ದೇವೆ. ಅದಕ್ಕೋಸ್ಕರ ಯೂಸರ್ಸ್ ಛಾರ್ಜ್ ಅನ್ನು ವಸೂಲಿ ಮಾಡುವುದರ ಬಗ್ಗೆ ರೈತರಿಗೆ ವ್ಯಾಪಕವಾಗಿ ರೈತರಿಗೆ ಜಾಗೃತಿ ಮೂಡಿಸಿ, ಅವರು ಪಾರ್ಟಿಸಿಪೇಟ್ ಮಾಡಬೇಕು. ಇವತ್ತು ವಾಟರ್ ರಿಸೋರ್ಸ್ ವ್ಯಾನೇಜ್‌ಮೆಂಟ್‌ನಲ್ಲಿ ರೈತರನ್ನು ಪಾರ್ಟಿಸಿಪೇಟ್ ಮಾಡಿಸತಕ್ಕ ಕೆಲಸ ಆಗಿಲ್ಲ. ರೈತರು ಭಾಗವಹಿಸುವಂತೆ ಮಾಡಿ ಅವರಿಗೆ ತಿಳುವಳಿಕೆ ಹೇಳಿ, ಯೂಸರ್ಸ್ ಛಾರ್ಜ್ ಮತ್ತು ವಾಟರ್ ಛಾರ್ಜ್‌ನ್ನು ಕೊಡತಕ್ಕ ಅರಿವು ರೈತರಿಗೆ ಮೂಡಿಸತಕ್ಕ ಕೆಲಸ ಮಾಡಲು ಒಂದು ಕಮಿಟಿಯನ್ನು ರಚನೆ ಮಾಡಿ, ಆ ದಿಕ್ಕಿನಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇನ್ನು 1997-98ನೇ ಸಾಲಿಗೆ ಯೋಜನೆಗಳು ಪೂರ್ಣವಾಗಿಲ್ಲ ಎನ್ನುವುದು ಏನಿದೆ, ಎಂದರೆ ಯೋಜನಾ ಆಯೋಗದಲ್ಲಿ 1997-98 ನೇ ಸಾಲಿಗೆ 4130 ಕೋಟಿ

ರೂಪಾಯಿ ನಿಗದಿ ಆಗಿದೆ. ಅದು ಕೆಲವು ಇಲಾಖೆಗಳ ಬೇಡಿಕೆ ಮೇಲೆ ಅದು 4,545 ಕೋಟಿ ರೂಪಾಯಿ ಆಯಿತು. ಈ ವರ್ಷ ನಾವು ಗುರಿ ಮುಟ್ಟಲಿಕ್ಕೆ ಏಕೆ ಆಗಲಿಲ್ಲ ಎಂದರೆ ನಮಗೆ 229 ಕೋಟಿ ರೂಪಾಯಿ ನಮಗೆ ಖೋತಾ ಆಗಿದೆ. ಜೊತೆಗೆ ಕೆ. ಇ. ಬಿ.ಯ ಪಂಪ್‌ಸೆಟ್‌ಗಳಿಗೆ ಕೊಡುತ್ತಿದ್ದ ಸಬ್ಸಿಡಿ ಜಾಸ್ತಿ ಆದುದರಿಂದ, because of the recession in the country, industrial production declined. ಆಯಿತು. ಆ ಕಾರಣಕ್ಕೋಸ್ಕರವಾಗಿ ನಾವು ಅದನ್ನು ಪ್ಲಾನ್‌ನಲ್ಲಿ ತಲುಪುವುದಕ್ಕೆ ಆಗಲಿಲ್ಲ. ಮುಂದಿನ ವರ್ಷಕ್ಕೆ ಮಾಡಿರತಕ್ಕಂಥ 5,353 ಕೋಟಿ ರೂಪಾಯಿಗಳನ್ನು ನಾವು ತಲುಪುತ್ತೇವೆ ಎನ್ನುವ ಭರವಸೆ ನನಗಿದೆ. ಏಕೆಂದರೆ ಇವತ್ತು ಖೋತಾ ಇರತಕ್ಕಂಥ 196 ಕೋಟಿ ರೂಪಾಯಿಗಳನ್ನೂ ನಾವು ಸರಿದೂಗಿಸುತ್ತೇವೆ. ಈ ವರ್ಷ ಎ. ಡಿ. ಐ. ಎಸ್. ಯೋಜನೆಯಿಂದ ನಮಗೆ ಸುಮಾರು 200 ಕೋಟಿ ರೂಪಾಯಿಗಿಂತ ಹೆಚ್ಚು ಹಣ ಬರುತ್ತದೆ ಮತ್ತು ಯೋಜನಾ ಗಾತ್ರವೂ ಇನ್ನೂ ನಿಗದಿಯಾಗಿಲ್ಲ. ಈ ಎಲ್ಲಾ ಕಾರಣಗಳಿಂದ ಮುಂದಿನ ವರ್ಷ ಯೋಜನಾ ಗಾತ್ರವಾದ 5,353 ಕೋಟಿ ರೂಪಾಯಿಯನ್ನು ತಲುಪುತ್ತೇವೆ. ಈ 5,353 ಕೋಟಿ ರೂಪಾಯಿಗೂ ಒಂದು ವ್ಯಾಖ್ಯಾನ ಮಾಡಿದ್ದಾರೆ. ನೀವು ಇದನ್ನು ಶಾಸ್ತ್ರೋಕ್ತವಾಗಿ ಮಾಡಿದ್ದೀರಿ, ಹೋದ ಸಾರಿ 4,545 ಕೋಟಿ ರೂಪಾಯಿ ಇತ್ತು, ಈ ಸಾರಿ 5,353 ಕೋಟಿ ಮಾಡಿದ್ದೀರಿ ಎಂದು ಕೇಳಿದ್ದಾರೆ. ಇದು ಕಾಕತಾಳೀಯ ಅಷ್ಟೇ. ಕಳೆದ ವರ್ಷ 45-45 ಮತ್ತು ಈ ವರ್ಷದ 53-53 ಎನ್ನುವ ಅಂಕಿ ಕೇವಲ ಕಾಕತಾಳೀಯವಷ್ಟೇ. ಮೊದಲೇ ನನಗೆ ಶಾಸ್ತ್ರದಲ್ಲಿ ನಂಬಿಕೆ ಇಲ್ಲ. ರಾಹುಕಾಲ, ಗುಳಿಕಕಾಲದಲ್ಲಿ ನಂಬಿಕೆ ಇಲ್ಲ, ಈ ನಂಬಿಕೆಗಳೇ ಇಲ್ಲದಿರುವಾಗ ಈ ರೀತಿಯ ಅಂಕಿಗಳಲ್ಲಿ ನಂಬಿಕೆ ಇಟ್ಟುಕೊಳ್ಳುವ ಪ್ರಶ್ನೆಯೇ ಇಲ್ಲ. ಕೇವಲ ಕಾಕತಾಳೀಯವಾಗಿ ಈ ಅಂಕಿ ಬಂದಿದೆ ಎನ್ನುವ ಮಾತನ್ನು ಹೇಳಲು ಬಯಸುತ್ತೇನೆ. ಕಳೆದ ವರ್ಷ ಅಂದರೆ 1996-97 ಕ್ಕೆ ಮುಗಿದ 8ನೇ ಪಂಚವಾರ್ಷಿಕ ಯೋಜನೆಯ ಯೋಜನಾ ಗಾತ್ರ 12,300 ಕೋಟಿ ರೂಪಾಯಿ. ಇದು 8ನೇ ಪಂಚವಾರ್ಷಿಕ ಯೋಜನೆಯ ಅವತ್ತಿನ ಯೋಜನಾ ಗಾತ್ರ ಅಂದರೆ ಇದು 1991-92ರ ದರಗಳಲ್ಲಿ. ನಾವು ಅದರಲ್ಲಿ 808 ಕೋಟಿ ರೂಪಾಯಿ ಮಾತ್ರ ಮಾಡಲು ಆಗಲಿಲ್ಲ. ಇದರಲ್ಲಿ ಮೂರು ವರ್ಷ ಅಂದರೆ 1991-92, 1992-93 ಮತ್ತು 1993-94 ರಲ್ಲಿ ಅವರೇ ಇದ್ದರು. 1995-96 ಮತ್ತು 1996-97 ಈ ಎರಡು ವರ್ಷಗಳಲ್ಲಿ ನಾವು ಇದ್ದೆವು. ಈ 8ನೇ ಪಂಚವಾರ್ಷಿಕ ಯೋಜನೆಯಲ್ಲಿ 3 ವರ್ಷದ ಪಾಲು ಅವರದ್ದು, 2 ವರ್ಷದ ಪಾಲು ನಮ್ಮದು. ಅದರಲ್ಲಿ 808 ಕೋಟಿ ರೂಪಾಯಿ ಖೋತಾ ಆಗಿದೆ. 1991-92ರ ರೇಟ್‌ಗೆ 12,300 ಕೋಟಿ ರೂಪಾಯಿ ಕಾನ್ಸ್‌ಟೆಂಟ್ ಪ್ರೈಸ್. ಖೋತಾ ಎಲ್ಲ ಆಗಿದ್ದು ನಿಮ್ಮ ಕಾಲದಲ್ಲೇ ತಿಮ್ಮಪ್ಪನವರೇ. ಬಿಲ್ಲುಗಳೆಲ್ಲ ಬಾಕಿಯಿದ್ದವು. ಅವುಗಳನ್ನೆಲ್ಲ ಆಗಲೇ ಹೇಳಿದ್ದೇನಲ್ಲ. ಮತ್ತೆ ಅವುಗಳನ್ನು ಹೇಳಲು ಹೋಗುವುದಿಲ್ಲ. ಆದ್ದರಿಂದ ಇವತ್ತು ನಾವು ಈ ರಾಜ್ಯದಲ್ಲಿರತಕ್ಕಂಥ ಸಂಪನ್ಮೂಲಗಳ ಇತಿಮಿತಿಗಳೊಳಗೆ, ಈ ರಾಜ್ಯದ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ಬಡವರನ್ನು ಗಮನದಲ್ಲಿಟ್ಟುಕೊಂಡು, ಹಳ್ಳಿಗಾಡಿನ ಜನರನ್ನು ಗಮನದಲ್ಲಿಟ್ಟುಕೊಂಡು ಒಂದು ಉತ್ತಮವಾದಂಥ ಆಯವ್ಯಯವನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಿದ್ದೇನೆ. ಬಹುಶ: ಅನೇಕ ಜನ ವಿರೋಧ ಪಕ್ಷದ ಸದಸ್ಯರಿಗೆ ಈ ಬಜೆಟ್ ಚೆನ್ನಾಗಿದೆ ಎನ್ನುವುದು ಮನಸ್ಸಿನಲ್ಲಿದೆ. ಆದರೆ ಅದನ್ನು ಬಹಿರಂಗವಾಗಿ ಹೇಗೆ ಹೇಳುವುದು ಎಂದು ಅವರಲ್ಲಿದೆ. ಆಂತರಿಕವಾಗಿ ಕೇಳಿದಾಗ ಇದೊಂದು ಒಳ್ಳೆಯ ಬಜೆಟ್ ಎಂದು ಅನೇಕ ಜನ ಸ್ನೇಹಿತರುಗಳೆಲ್ಲಾ ಹೇಳಿದ್ದಾರೆ. ಆಂಧ್ರದಲ್ಲಿರುವಂತೆ ನಮ್ಮ ರಾಜ್ಯದಲ್ಲೂ ಅಲ್ಪಸಂಖ್ಯಾತರಿಗೆ ಒಂದು ಪ್ರತ್ಯೇಕ ಇಲಾಖೆಯನ್ನು ಮಾಡಬೇಕು ಎಂದು ಆ ಹೊಸ ಇಲಾಖೆಯನ್ನೂ

ಕೂಡ ಮಾಡತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆ. ವಕ್ಫ್ ಬೋರ್ಡ್‌ಗೆ ಒಂದು ಕೋಟಿ ರೂಪಾಯಿ ಹೆಚ್ಚು ಹಣವನ್ನು ಕೊಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ಹಿಂದುಳಿದ ವರ್ಗಗಳ ಇಲಾಖೆಯ ಮಂತ್ರಿಗಳಾದಂಥ ಗುತ್ತೇದಾರ್‌ರವರು ಒಂದು ಹೊಸ ಕಾರ್ಯಕ್ರಮವನ್ನು ರೂಪಿಸಿದ್ದಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಹಿಂದುಳಿದವರಿಗೆ ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಸಿದ್ಧರಾಮಯ್ಯ :- ಹೆಚ್ಚುವರಿಯಾಗಿ 8 ಕೋಟಿ ರೂಪಾಯಿ ಕೊಟ್ಟಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :- ಹಾಸ್ಟೆಲ್ ಕಟ್ಟಡಗಳಿಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ?

ಶ್ರೀ ಸಿದ್ಧರಾಮಯ್ಯ :- ಅದಕ್ಕೂ ಈಗ ಕೊಟ್ಟಿದ್ದೇವೆ. ನೀವು ಅವುಗಳನ್ನು ಕಟ್ಟದೇ ಬಿಟ್ಟು ಹೋಗಿರುವುದರಿಂದ ಈಗ ನಮಗೆ ತಾಪತ್ರಯಕ್ಕೆ ಬಂದಿದೆ. ನೀವು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದಂಥವರು. ನೀವು ಎಷ್ಟು ಕಟ್ಟಡಗಳನ್ನು ಕಟ್ಟಿಸಿದ್ದಿರಿ ಎನ್ನುವುದನ್ನು ಹೇಳಿ. ನಾವು ಕಟ್ಟಿಸಿರುವುದರಲ್ಲಿ ಮೂರನೇ ಒಂದು ಭಾಗದಷ್ಟನ್ನೂ ಇವರು ಕಟ್ಟಿಸಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :- 11 ಕೋಟಿ ರೂಪಾಯಿ ಕೇಂದ್ರ ಸರ್ಕಾರದಿಂದ ಬಂದು, ನಾವು ಕಟ್ಟಿಸಿದ್ದೇವೆ.

ಶ್ರೀ ಸಿದ್ಧರಾಮಯ್ಯ :- ನಾವು ಎಷ್ಟು ಕಟ್ಟಿಸಿದ್ದೇವೆ, ನೀವು ಎಷ್ಟು ಕಟ್ಟಿಸಿದ್ದೀರಿ ಎನ್ನುವುದನ್ನು ಹೇಳಲೇ. 3 ವರ್ಷದ್ದನ್ನು ಹೇಳಲೇ.

ಶ್ರೀ ಎಂ. ವಿ. ಗುತ್ತೇದಾರ್ :- 3 ವರ್ಷದ ಅಂಕಿ ಅಂಶಗಳನ್ನು ತೆಗೆದುಕೊಂಡರೆ ನಮ್ಮದೇ ಜಾಸ್ತಿಯಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾವು ಇದ್ದಾಗ ಕೇವಲ 7 ತಿಂಗಳಲ್ಲಿ ಮಾಡಿದ್ದು ಹೆಚ್ಚೋ ನೀವು 3 ವರ್ಷಗಳಲ್ಲಿ ಮಾಡಿದ್ದು ಹೆಚ್ಚೋ ಎನ್ನುವುದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ :- ನೀವು ಕೇವಲ ಏಳು ತಿಂಗಳು ಮಾತ್ರ ಇದ್ದುದ್ದಲ್ಲ.

(ಈ ಹಂತದಲ್ಲಿ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಕಾಗೋಡು ತಿಮ್ಮಪ್ಪ :- ಕಟ್ಟಡಕ್ಕೆ 5 ಕೋಟಿ ರೂಪಾಯಿ ಮಾತ್ರ ಹಣ ಕೊಟ್ಟಿದ್ದೀರಿ. ಬಾಕಿ ಇರುವುದನ್ನು ಕೊಡಿ.

ಶ್ರೀ ಸಿದ್ಧರಾಮಯ್ಯ :- ಕೊಡುತ್ತೇವೆ. ಈಗ ಎಲ್ಲವನ್ನೂ ಕೊಟ್ಟು ಆಗಿದೆ. ಯಾವುದೂ ಬಾಕಿ ಉಳಿದಿಲ್ಲ. ಎಲ್ಲವನ್ನೂ ಕೊಟ್ಟು ಬಿಟ್ಟಿದ್ದೇವೆ. ನೀವು ಸ್ವಲ್ಪ ಕುಳಿತುಕೊಳ್ಳಿ ತಿಮ್ಮಪ್ಪನವರೇ ನಾನು ಹೇಳುತ್ತೇನೆ. ನಾನು ಉದ್ವೇಗಗೊಳ್ಳುತ್ತಿಲ್ಲ. 5 ಕೋಟಿ ರೂಪಾಯಿ ಬಾಕಿ ಇರುವುದು ನಿಜ. ಈಗ ಅದಲ್ಲವನ್ನೂ ಬಿಡುಗಡೆ ಮಾಡಿಯಾಗಿದೆ. ಸಂಬಂಧಿಸಿದ ಮಂತ್ರಿಗಳನ್ನೇ ಕೇಳಿ. ಏಕೆ, ನಮ್ಮ ಮಾತಿನ ಮೇಲೆ ನಿಮಗೆ ನಂಬಿಕೆಯಿಲ್ಲವೇ? ಬಿಡುಗಡೆ ಮಾಡಿ ಆಗಿದೆ ಎಂದು ನಾನು ಹೇಳುತ್ತಿದ್ದೇನೆ. ಈ ವರ್ಷ ಹಿಂದುಳಿದವರಿಗೆ 7 ಕೋಟಿ ರೂಪಾಯಿಯನ್ನೂ ಜಾಸ್ತಿ ಮಾಡಿದ್ದೇವೆ. ಮಾಂಗಲ್ಯ ಭಾಗ್ಯ, ಅರಿವು, ಎನ್ನುವ ಯೋಜನೆಗಳನ್ನೂ ಮಾಡಿದ್ದೇವೆ. ತಾಳಿ ಭಾಗ್ಯ ಯೋಜನೆ ಈಗ ಇಲ್ಲ. ಈಗ

ಮಾಂಗಲ್ಯ ಭಾಗ್ಯ ಯೋಜನೆಯಡಿಯಲ್ಲಿ ಹಿಂದುಳಿದ ಜಾತಿ ಮತ್ತು ಅಲ್ಪಸಂಖ್ಯಾತರ ಕುಟುಂಬದಲ್ಲಿ ಎರಡು ಮಕ್ಕಳಿದ್ದರೆ ಮೊದಲನೇ ಹೆಣ್ಣು ಮಗುವಿಗೆ 5,000 ರೂಪಾಯಿಯನ್ನು ಪುಕ್ಕಟ್ಟೆಯಾಗಿ ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :- ಎಸ್. ಸಿ., ಎಸ್. ಟಿ. ಕಾರ್ಪೊರೇಷನ್‌ಗೆ ಶೇರ್ ಕ್ಯಾಪಿಟಲ್‌ಗೆ ಎಷ್ಟು ಹಣ ಕೊಟ್ಟಿದ್ದೀರಿ?

ಶ್ರೀ ಸಿದ್ಧರಾಮಯ್ಯ :- 25 ಕೊಟಿ ರೂಪಾಯಿಗಳನ್ನು ಕೊಟ್ಟು, 15 ಸಾವಿರ ಎಕರೆಗೆ ನೀರು ಕೊಡುತ್ತಿದ್ದೇವೆ. ನೀವು ಹೀಗೆ ಯಾವಾಗಲಾದರೂ ಕೊಟ್ಟಿದ್ದೀರಾ?

ಶ್ರೀ ಕಾಗೋಡು ತಿಮ್ಮಪ್ಪ :- ಅಲ್ಲಿ ಈಗ ನೀರು ಬಂದಿದೆಯಾ?

ಶ್ರೀ ಸಿದ್ಧರಾಮಯ್ಯ :- ನೀರು ಬಂದಿದೆಯಾ ಎಂದು ಕೇಳುತ್ತಿದ್ದೀರಿ. ಅಲ್ಲಿ ಕೆಲಸವನ್ನು ಮಾಡುತ್ತಿದ್ದೇವೆ. ನೀವು ಯಾವಾಗಲಾದರೂ ಮಾಡಿದ್ದೀರಾ? ಇದನ್ನು ತೋರಿಸುವುದಕ್ಕಾದರೂ ಮಾಡಿದ್ದೀರಾ?

ಶ್ರೀ ಜೆ. ಹೆಚ್. ಪಟೀಲ್ :- ನೀರು ಬಂದಿದೆ, ನಿಮ್ಮ ಕಣ್ಣಲ್ಲಿ.

ಶ್ರೀ ಸಿದ್ಧರಾಮಯ್ಯ :- ಅರಿವು ಎನ್ನುವ ಹೊಸ ಕಾರ್ಯಕ್ರಮ ಮಾಡಿದ್ದೇವೆ. ಹಿಂದುಳಿದ ಜಾತಿಯ ಮಕ್ಕಳು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಓದಲು ತೊಂದರೆಯಾಗುತ್ತದೆ. ಅವರ ಮಕ್ಕಳಿಗೂ ಇಂಜಿನಿಯರುಗಳು ಮತ್ತು ಡಾಕ್ಟರುಗಳಾಗಬೇಕು ಎನ್ನುವ ಕಾರಣಕ್ಕಾಗಿ ಶೇ. 2ರ ಬಡ್ಡಿ ದರದಲ್ಲಿ ಸಾಫ್ಟ್ ಲೋನ್ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದೇ ' ಅರಿವು' ಎನ್ನುವ ಕಾರ್ಯಕ್ರಮ ಇವತ್ತು ನಾವು ಎಲ್ಲ ವರ್ಗದ ಜನರು ಮತ್ತು ನ್ಯಾಯದಿಂದ ವಂಚಿತರಾಗಿರುವ ಜನರ ಭದ್ರತೆಗೂ ನಾವು ಗಮನ ಕೊಟ್ಟಿದ್ದೇವೆ ಎನ್ನುವಂಥ ಮಾತನ್ನು ಹೇಳುತ್ತೇನೆ. ನಮ್ಮ ಗೊತ್ತುಗುರಿಗಳು ಬಹಳ ಸ್ಪಷ್ಟವಾಗಿವೆ. ಆ ನಿಟ್ಟಿನಲ್ಲಿ ನಾವು ನಡೆಯುತ್ತಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ ನಾವು ಆ ನಿಟ್ಟಿನಲ್ಲಿ ಇನ್ನೂ ಮುಂದೆ ಹೋಗುತ್ತೇವೆ ಎನ್ನುವಂಥ ಮಾತನ್ನು ಹೇಳಿ, ಮಾನ್ಯ ಸದಸ್ಯರು ಎತ್ತಿರತಕ್ಕಂಥ ಎಲ್ಲ ಪ್ರಶ್ನೆಗಳಿಗೆ ಸಮಂಜಸವಾದಂಥ ಉತ್ತರವನ್ನು ಕೊಟ್ಟಿದ್ದೇನೆ ಎಂದು ಭಾವಿಸುತ್ತೇನೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಕೃಷಿ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಸಿದ್ಧರಾಮಯ್ಯ :- ಕೃಷಿ ಬಗ್ಗೆ ಇವರು ಏನು ತಿಳಿದುಕೊಂಡಿದ್ದಾರೆ ಎಂದರೆ ಕ್ರಾಪ್ ಹಸ್‌ಬ್ಯಾಂಡರಿಗೆ ಖರ್ಚು ಮಾಡಿದರೆ ಮಾತ್ರ ಕೃಷಿ ಎಂದು ತಿಳಿದುಕೊಂಡಿದ್ದಾರೆ ಎಂದು ಕಾಣಿಸುತ್ತದೆ. ಬೀಜ, ಇತ್ಯಾದಿಗಳನ್ನು ಕೊಡುವುದು ಮಾತ್ರ ಕೃಷಿಗಾಗಿ ಖರ್ಚು ಮಾಡುವುದೆಂದು ಅರ್ಥವೇ? ನೀರಾವರಿಗೆ ಖರ್ಚು ಮಾಡುವುದು ಕೃಷಿ ಉತ್ಪನ್ನಗಳಿಗೆ ಅಲ್ಲವೇ? ವಿದ್ಯುತ್ತಿಗೆ ಹಣ ಖರ್ಚು ಮಾಡುವುದು ಅಗ್ರಿಕಲ್ಚರಲ್ ಪ್ರೊಡಕ್ಷನ್‌ಗೆ ಅಲ್ಲವೇ? ಸಣ್ಣ ನೀರಾವರಿಗೆ ಸಣ್ಣ ಖರ್ಚು ಮಾಡುವುದು ಕೃಷಿಗೆ ಖರ್ಚು ಮಾಡಿದ ಹಾಗೆ ಆಗುವುದಿಲ್ಲವೇ?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಉತ್ಪಾದನಾ ವೆಚ್ಚದ ಆಧಾರದ ಮೇಲೆ ಕೈಗಾರಿಕೆಗಳು ಬೆಲೆ ನಿಗದಿ ಮಾಡುವಂಥ ಸ್ವಾತಂತ್ರ್ಯವನ್ನು ಕೊಡಬಾರದೇ ಎಂದು ಈಗ ಸ್ವಲ್ಪ ಹೊತ್ತಿಗೆ ಮುಂಚೆ ತಾವು ಹೇಳಿದಿರಿ.

ಶ್ರೀ ಸಿದ್ಧರಾಮಯ್ಯ :- ಅದು ರೈತ ಸಂಘದ ಭಾಷಣ ಪುಟ್ಟಣ್ಣಯ್ಯನವರೇ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಅದು ರೈತ ಸಂಘದ ಭಾಷಣವಲ್ಲ. ಸತ್ಯದ ಮಾತು ಅದು.

ಶ್ರೀ ಸಿದ್ಧರಾಮಯ್ಯ :- ಬೆಲೆ ನಿಗದಿ ಮಾಡುವ ಬಗ್ಗೆ ನಾನೂ ಬಹಳ ಭಾಷಣ ಮಾಡಿದ್ದೇನೆ, ನೀವೂ ಭಾಷಣ ಮಾಡಿದ್ದೀರಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ಭಾಷಣವಲ್ಲ ಇದು. ವಾಸ್ತವಿಕ ವಿಚಾರ.

ಶ್ರೀ ಸಿದ್ಧರಾಮಯ್ಯ :- ರೈತರಿಗೆ ಅನುಕೂಲ ಮಾಡಬೇಕು ಎಂದು ನಾನೂ ಹೇಳುತ್ತೇನೆ. ಅವರ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ಬೆಲೆ ನಿಗದಿಯಾಗಬೇಕು ಎನ್ನುವುದರಲ್ಲಿ ಎರಡನೇ ಮಾತಿಲ್ಲ. ಅದೊಂದು ರಾಷ್ಟ್ರೀಯ ನೀತಿಯಾಗಬೇಕು. ಅದಕ್ಕೋಸ್ಕರವಾಗಿ, ನಾವೆಲ್ಲಾ ಸೇರಿಕೊಂಡು ಹೋರಾಟ ಮಾಡೋಣ. ರೈತರಿಗೆ ಅನ್ಯಾಯವಾಗುತ್ತಿದೆ. ಅದಕ್ಕೋಸ್ಕರ ಇವತ್ತು ನಾವು 10 ಕೋಟಿ ರೂಪಾಯಿಯನ್ನು ಮಾರ್ಕೆಟ್ ಇಂಟರ್‌ವೆನ್‌ಗೋಸ್ಕರ ಇಟ್ಟಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- 10 ಕೋಟಿ ರೂಪಾಯಿ ಸಾಲುವುದಿಲ್ಲ.

ಶ್ರೀ ಸಿದ್ಧರಾಮಯ್ಯ :- ಮೊದಲ ಬಾರಿಗೆ 10 ಕೋಟಿ ರೂಪಾಯಿಯನ್ನು ಇಟ್ಟಿದ್ದೇವೆ. ಅದು ಅಷ್ಟಕ್ಕೇ ಸೀಮಿತವಲ್ಲ. ಅದನ್ನು ಇನ್ನೂ ಹೆಚ್ಚು ಮಾಡುತ್ತೇವೆ. ಅದನ್ನು ನಾವು ರಿವಾಲ್ವಿಂಗ್ ಫಂಡಾಗಿ ಮಾಡುತ್ತೇವೆ. ಎಲ್ಲೆಲ್ಲಿ ರೈತರು ಬೆಳೆದಂಥ ಪದಾರ್ಥಗಳ ಡಿಸ್ಪೆಸ್ ಸೇಲ್ ಆಗುತ್ತದೆ ಅಲ್ಲಿ ಸರ್ಕಾರದವರು ಮಾರ್ಕೆಟ್ ಇಂಟರ್‌ವೆನ್‌ಷನ್ ಆಗಿ ಬೆಲೆಗಳ ಸ್ಥಿರತೆಯನ್ನು ತರುವುದಕ್ಕೆ ಸಹಾಯ ಮಾಡಬೇಕು ಎಂದು ಇವತ್ತು ನಾವು 10 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಅದನ್ನು ಮುಂದೆ ಹೆಚ್ಚು ಮಾಡತಕ್ಕಂಥಾದ್ದನ್ನೂ ಮಾಡುತ್ತೇವೆ. ಕಳೆದ ವರ್ಷ 2 ಕೋಟಿ ರೂಪಾಯಿ ಇತ್ತು. ಈ ವರ್ಷ 10 ಕೋಟಿ ರೂಪಾಯಿ ಇಟ್ಟಿದ್ದೇವೆ. ಈ ಹಣದಿಂದ ಕಳೆದ ವರ್ಷ ಬೈರೇಗೌಡರು ಆಲೂಗೆಡ್ಡೆ, ಈರುಳ್ಳಿ ಬೆಳೆದಂಥ ರೈತರಿಗೆ ಕೊಟ್ಟು, ಅವರಿಗೆ ತೊಂದರೆಯಾಗುವುದನ್ನು ತಪ್ಪಿಸುವಂಥ ಕೆಲಸ ಮಾಡಿದ್ದೇವೆ. ಆದ್ದರಿಂದ ನಮ್ಮ ನಿಲುವು ರೈತರ ಪರವಾಗಿ ಬಹಳ ಸ್ಪಷ್ಟವಾಗಿದೆ ಎನ್ನುವ ಮಾತನ್ನು ನಾವು ಪುಟ್ಟಣ್ಣಯ್ಯನವರಿಗೆ ಹೇಳಲು ಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ತಾವು ಮುಗಿಸುವುದಕ್ಕೆ ಮುಂಚೆ ಒಂದು ಮಾತು. ತೊಗರಿ ಬೆಳೆ ಮುಂತಾದ ಬೆಳೆಗಳು ನಾಶವಾಗಿರುವ ಬಗ್ಗೆ ಸಮಿತಿ ಮಾಡಿದ್ದೀರಿ. ಆದರೆ ಈಗ ತಾವು ಬಜೆಟ್‌ನಲ್ಲಿ 20-25 ಕೋಟಿ ರೂಪಾಯಿಗಳನ್ನು ತೆಗೆದು ಅವರಿಗೆ ಪರಿಹಾರ ಕೊಡಿ. ಇದಕ್ಕೆ ಹಣ ತೆಗೆದಿಡುತ್ತಿದ್ದೀರೋ, ಎನ್ನುವುದನ್ನು ಸ್ಪಷ್ಟವಾಗಿ ಹೇಳಿ. ಅದು ಬಹಳ ಮುಖ್ಯ. ಸಮಿತಿಯವರು ಅಲ್ಲಿಗೆ ಹೋಗಿ ಬಂದ ಮೇಲೆ ಪರಿಹಾರ ಕೊಡುವುದು ಆಮೇಲಿನ ಮಾತಾಯಿತು. ಈಗ ಅಲ್ಲಿ ರೈತರು ಸಾಯುತ್ತಿದ್ದಾರೆ. ಅವರನ್ನು ಉಳಿಸುವುದಕ್ಕಾಗಿ ಏನಾದರೂ ಹಣ ತೆಗೆದಿಟ್ಟಿದ್ದೀರಾ? ಎನ್ನುವುದನ್ನು ಹೇಳಿ.

ಶ್ರೀ ಸಿದ್ಧರಾಮಯ್ಯ :- ಅದಕ್ಕೆ ಬೇರೆ ಹಣ ಇದೆ. ಇನ್ನು ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಅನೇಕ ಇಲಾಖೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅವುಗಳಿಗೆ ಸಂಬಂಧಪಟ್ಟ ಸಚಿವರೂ ಉತ್ತರ

ಕೊಡುತ್ತಾರೆ. ನಾನು ಅರ್ಥ ಖಾತೆಯ ಮಂತ್ರಿಯಾಗಿರುವುದರಿಂದ ನೀವೇನು ಕೆ. ಇ. ಬಿ. ಮತ್ತು ಕೆ. ಎಸ್. ಎಫ್. ಸಿ. ಮತ್ತು ನಗರಪಾಲಿಕೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ ಅವುಗಳಿಗೆ ಸಂಬಂಧಪಟ್ಟ ಹಾಗೆ ಸಂಬಂಧಪಟ್ಟವರ ಮೇಲೆ ಕಟ್ಟನಿಟ್ಟಾದ ಕ್ರಮವನ್ನು ಜರುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಅತ್ಯಂತ ಸ್ಪಷ್ಟವಾಗಿ ಹೇಳಬಯಸುತ್ತೇನೆ. ಆ ಅಧಿಕಾರಿಗಳು ಯಾರೇ ಇರಲಿ ಅವರನ್ನು ರಕ್ಷಣೆ ಮಾಡಬೇಕಾದ ಅಗತ್ಯವೇನೂ ಈ ಸರ್ಕಾರಕ್ಕೆ ಇಲ್ಲ. ಆದಕಾರಣ ಅವರ ಮೇಲೆ ಕ್ರಮವನ್ನು ಜರುಗಿಸಿಯೇ ಜರುಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಇನ್ನು ನೀವೇನು ಎಕ್ಸೈಸ್ ಲಾಬಿಗಳಿಗೆ ಮಣಿದಿದ್ದೀರಿ ಎಂದು ನಮಗೆ ಹೇಳಿದ್ದೀರಿ, ಅದೇ ರೀತಿ ಗ್ರಾನೈಟ್ ಲಾಬಿಗಳಿಗೆ ಮಣಿದಿದ್ದೀರಿ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಇವೆಲ್ಲವೂ ಸವಕಲು ನಾಣ್ಯಗಳಿದ್ದ ಹಾಗೆ. ಈ ರೋಗ ಎಲ್ಲಿಂದ ಬಂದು ಬಿಟ್ಟಿತೋ ದರಿದ್ರ, ನನಗಂತೂ ಗೊತ್ತಿಲ್ಲ. ಈ ರೋಗ ಬಂದು, ಬಂದು, ಬಂದು ಈಗ ದೊಡ್ಡದಾಗಿ ಬೆಳೆದುಬಿಟ್ಟಿದೆ. ನಾನು ಇಷ್ಟು ಮಾತ್ರ ಹೇಳಬಯಸುತ್ತೇನೆ. ನಾವು ಯಾವ ಲಾಬಿಗೂ ಮಣಿಯುವ ಪ್ರಶ್ನೆಯೇ ಇಲ್ಲ. ಅದು ಎಕ್ಸೈಸ್ ಲಾಬಿ ಇರಬಹುದು, ಗ್ರಾನೈಟ್ ಲಾಬಿ ಇರಬಹುದು ಅಥವಾ ಯಾವುದೇ ಲಾಬಿ ಇರಬಹುದು, ಯಾವುದಕ್ಕೂ ನಾವು ಮಣಿಯುವ ಪ್ರಶ್ನೆಯೇ ಬರುವುದಿಲ್ಲ. ಏಕೆಂದರೆ, ರ್ಯಾಶನಲೈಸ್ ಸ್ಕೀಮ್‌ನಲ್ಲಿ ಮೊಲಾಸಸ್‌ಗೆ 12 ಪರ್ಸೆಂಟ್‌ನಿಂದ 10 ಪರ್ಸೆಂಟ್ ಆಗಿದೆ. ಈ ಮೊಲಾಸಸ್ ನೇರವಾಗಿ ಹೋಗತಕ್ಕಂಥ ರೆಕ್ಟಿಫೈಡ್ ಸ್ಪಿರಿಟ್ ಅಲ್ಲ. ರೆಕ್ಟಿಫೈಡ್ ಸ್ಪಿರಿಟ್‌ಗೆ ಶೇಕಡ 20 ರಷ್ಟು ತೆರಿಗೆ ಇದೆ. ಅದರ ಮೇಲೆ ಪ್ರವೇಶ ತೆರಿಗೆಯನ್ನು 4 ಪರ್ಸೆಂಟ್ ದಿನಾಂಕ 01-04-98 ರಿಂದ ಹಾಕಲಾಗಿದೆ. ಆದುದರಿಂದ, ನಾವು ಎಲ್ಲೂ ಕೂಡ ಡಿಸ್ಟಿಲರಿಯವರಿಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ಮಾಡಿಲ್ಲ. ನಾವು ಯಾವ ಲಾಬಿಗೂ ಮಣಿಯುವ ಪ್ರಶ್ನೆಯೇ ಇಲ್ಲ. ನಾನು ಲಾಬಿ ಎನ್ನುವುದನ್ನು ನೋಡಿಯೇ ಇಲ್ಲ. ಆದರೆ, ನೀವು ಮಾತನಾಡುವಾಗ ತೆರಿಗೆ ಸೋರಿ ಹೋಗುತ್ತಿರತಕ್ಕಂಥ ಕಡೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿ ಎಂದು ಹೇಳಿದ್ದೀರಿ. ಅದರ ಬಗ್ಗೆ ನಾವು ಹೆಚ್ಚು ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ. ಬಹುಶ: ಎಲ್ಲಾ ಮಾನ್ಯ ಸದಸ್ಯರುಗಳ ಸಂಶಯಗಳಿಗೆ ಮತ್ತು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಹೇಳಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿ ಈ ಆಯವ್ಯಯಕ್ಕೆ ಸದನದ ಎಲ್ಲಾ ಸದಸ್ಯರು ಒಪ್ಪಿಗೆ ಕೊಡಬೇಕೆಂದು ತಮ್ಮ ಮೂಲಕ ಮನವಿ ಮಾಡಿಕೊಳ್ಳತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚಿನ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಈಗಾಗಲೇ ತಮ್ಮದೇ ಆಗಿರತಕ್ಕಂಥ ಧಾಟಿಯಲ್ಲಿ ಉತ್ತರ ಕೊಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನಾವೇನು ಬೇಡಿಕೆಗಳನ್ನು ಇಟ್ಟಿದ್ದೇವೋ ಅವುಗಳ ಬಗ್ಗೆ ಒಪ್ಪತಕ್ಕಂಥ ಪ್ರಯತ್ನ ಅವರಿಂದ ಆಗಿಲ್ಲ. ಅವರು ಏಕೆ ಒಪ್ಪಲಿಲ್ಲವೊ ಗೊತ್ತಾಗಲಿಲ್ಲ. ಈಗಾಗಲೇ ನಾವು ವೀಟ್ ಪ್ರಾಡಕ್ಟ್ಸ್ ಮೇಲೆ ತೆರಿಗೆಯನ್ನು ಇಳಿಸಬೇಕೆಂದು ಕೇಳಿದ್ದೇವೆ. ಇನ್ನುಳಿದ ಒಟ್ಟು 151 ಐಟಂಗಳ ಪೈಕಿ 100 ಐಟಂಗಳು ನೇರವಾಗಿ ಬಡವರಿಗೆ ಸಹಾಯ ಆಗತಕ್ಕಂಥ ಪದಾರ್ಥಗಳೇನಿವೆ ಅವುಗಳ ಮೇಲೆ ನೀವು 2 ಪರ್ಸೆಂಟ್‌ನಂತೆ ತೆರಿಗೆಯನ್ನು ಏರಿಸಿದ್ದಿರಿ. ಈಗ ನಾನು ಆ ಪೂರ್ತಿ ಲಿಸ್ಟ್‌ನ್ನು ಓದುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅದರ ಬಗ್ಗೆ ನಿಮಗೂ ಗೊತ್ತಿದೆ. ನೀವು ರ್ಯಾಶನಲೈಸೇಶನ್ ಸ್ಕೀಮ್‌ನಲ್ಲಿ ಕಡಿಮೆ ಇರತಕ್ಕಂಥವುಗಳನ್ನು ಹೆಚ್ಚಿಗೆ ತೆರಿಗೆ ಹಾಕಿದರೆ ಅದು ಸರಿಯಲ್ಲ. ಏಕೆಂದರೆ ರಿಸೋರ್ಸ್ ಮೊಬಲೈಸ್ ಮಾಡುವುದಕ್ಕೆ

ಅವಕಾಶ ಬೇಕು ಎಂದು ನೀವೇ ಹೇಳುವಾಗ ಇನ್ನೊಂದು ನಾನು ಇನ್ನೂ ಹೆಚ್ಚು ವಿಸ್ತರಿಸುತ್ತೇನೆ ಬೇರೆ ಬೇರೆ ಯಾವ ಕ್ಷೇತ್ರಗಳಲ್ಲಿ ತೆರಿಗೆ ಹಾಕದೇ ಬಿಟ್ಟುಹೋಗಿದೆ ಅಲ್ಲಿಗೆಲ್ಲಾ ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನ ಮಾಡುತ್ತೇನೆ ಎಂದು ಒಂದು ಕಡೆ ಮಾತನ್ನು ನೀವೇ ಹೇಳುವಾಗ ಇವ್ಹೊತ್ತು ಬಡವರಿಗೆ ಅನುಕೂಲವಾಗತಕ್ಕಂಥ ಕಡೆ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ನಿಮಗೇಕೆ ಸಾಧ್ಯವಾಗುವುದಿಲ್ಲ. ಈ ಪ್ರಶ್ನೆ ಉದ್ಭವಿಸುತ್ತದೆ. ನೀವೇನೋ ಕೇವಲ 2 ಪರ್ಸೆಂಟ್ ತೆರಿಗೆಯನ್ನು ಹೆಚ್ಚಿಸಿದ್ದೇವೆ ಎಂದು ಹೇಳಬಹುದು. ನಿಮ್ಮ ದೃಷ್ಟಿಯಲ್ಲಿ ಇದು ಕೇವಲ 2 ಪರ್ಸೆಂಟ್ ಎಂದು ಕಾಣುತ್ತದೆ. ಆದರೆ ಬಡವ 100ಕ್ಕೆ 2 ರೂಪಾಯಿಗಳ ತೆರಿಗೆ ಕೊಡಬೇಕಾಗುತ್ತದೆ. 1,000 ರೂಪಾಯಿಗಳ ಐಟಂ ತೆಗೆದುಕೊಂಡರೆ 20 ರೂಪಾಯಿಗಳನ್ನು ಆತ ಹೆಚ್ಚಿಗೆ ಕೊಡಬೇಕಾಗುತ್ತದೆ. ಅದೇ ರೀತಿ ಒಂದು ವಸ್ತು ಕೈಯಿಂದ ಕೈಗೆ ಹೋದಾಗ ನೂರಾರು ರೂಪಾಯಿಗಳು ಬೆಲೆಯಲ್ಲಿ ಹೆಚ್ಚಿಗೆ ಆಗುವುದು ಸಹಜವಾಗಿರುತ್ತದೆ. ಇದು ನಿಮಗೆ ಗೊತ್ತಿದೆ. ನೀವೇನೋ ರ್ಯಾಶನಲೈಸೇಶನ್ ಹೆಸರಿನಲ್ಲಿ ತೆರಿಗೆ 8 ಪರ್ಸೆಂಟ್ ಇದ್ದದ್ದನ್ನು 10 ಮಾಡಿದ್ದೇನೆ, 12 ಪರ್ಸೆಂಟ್ ಇದ್ದದ್ದನ್ನು 10 ಪರ್ಸೆಂಟ್ ಮಾಡಿದ್ದೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. 12 ಪರ್ಸೆಂಟ್ ತೆರಿಗೆ ಇದ್ದದ್ದನ್ನು 10 ಪರ್ಸೆಂಟ್ ಮಾಡಿದ್ದು ಕೇವಲ ಕೆಲವೇ ವಸ್ತುಗಳ ಮೇಲೆ ಮಾತ್ರ. ಅಂದರೆ ಇವು ಶ್ರೀಮಂತರಿಗೆ ಸಂಬಂಧಪಟ್ಟ 50 ವಸ್ತುಗಳಾಗಿವೆ. ಆಮೇಲೆ 8 ಪರ್ಸೆಂಟ್ ತೆರಿಗೆ ಇದ್ದದ್ದನ್ನು 10 ಪರ್ಸೆಂಟ್ ಮಾಡಿದ್ದು, ಸುಮಾರು 100 ವಸ್ತುಗಳ ಮೇಲೆ. ಅವೆಲ್ಲವೂ ಕೂಡ ಬಡವರು ಉಪಯೋಗಿಸತಕ್ಕಂಥವುಗಳಾಗಿವೆ. ಅವುಗಳು ಹಿತ್ತಾಳೆ, ತಾಮ್ರ, ಕಂಚು, ಸೌದೆ, ಡೀಸಲ್ ಅಥವಾ ಅಲ್ಯೂಮಿನಿಯಮ್ ಮತ್ತು ಇನ್ನೂ ಮುಂತಾದವುಗಳಿರಬಹುದು, ಉದಾಹರಣೆಗೆ ಇಷ್ಟನ್ನು ಹೇಳಿದೆ. ಇಂಥವುಗಳಿಗೆ ನೀವು ಮೂರು ರೀತಿಯಾದ ತೆರಿಗೆಯನ್ನು ಹಾಕಬಹುದು, ನಿಮಗೇನೂ ತೊಂದರೆಯಾಗುವುದಿಲ್ಲ. ಏಕೆಂದರೆ ಅಲ್ಟಿಮೇಟ್‌ಲೀ ಸಾಮಾನ್ಯ ಜನರಿಗೆ ಅನುಕೂಲವಾಗಬೇಕೆನ್ನುವುದೇ ನಮ್ಮ ಗುರಿಯಾಗಿದೆ. ಆ ರೀತಿ ಸಾಮಾನ್ಯ ಜನತೆಗೆ ಅನುಕೂಲವಾಗುತ್ತದೆ ಎಂದ ಮೇಲೆ ಶೇಕಡ 8 ರಿಂದ 12 ರವರೆಗೆ ತೆರಿಗೆಯನ್ನು ಹಾಕಿದರೆ ತಾಪತ್ರಯವೇನೂ ಆಗುವುದಿಲ್ಲ. ನೀವು ರ್ಯಾಶನಲೈಸೇಶನ್ ಹೆಸರಿನಲ್ಲಿ ಇಡೀ ರಾಷ್ಟ್ರದಲ್ಲಿ ಒಂದೇ ಟ್ಯಾರಿಫ್ ಇರಬೇಕು ಮತ್ತು ಅದೇ ರೀತಿ ಹೋಗಬೇಕು ಎಂಬ ದೃಷ್ಟಿಯಿಂದ ಈ ರೀತಿ ಮಾಡಿದ್ದೇವೆ ಎಂದು ನೀವು ಹೇಳಿದ್ದೀರಿ. ಆದರೆ ತಾವು ಬಡವರಿಗೆ ಸಹಾಯ ಮಾಡಬೇಕು ಮತ್ತು ಸಾಮಾಜಿಕವಾಗಿ ಅವರಿಗೆ ನ್ಯಾಯದೊರಕಬೇಕು ಎಂದರೆ ನಿಜವಾಗಿಯೂ ಯಾವ ಯಾವ ವಸ್ತುಗಳ ಮೇಲೆ ತೆರಿಗೆ ಕಡಿಮೆ ಮಾಡಬೇಕೋ ಅದನ್ನು ಮಾಡಲೇಬೇಕು. ಹಿಂದೆ ಕಲೆಕ್ಷನ್ ಐದಾರು ಟೈಪ್ ಇತ್ತು. 2 ಪರ್ಸೆಂಟ್, 4 ಪರ್ಸೆಂಟ್, 6 ಪರ್ಸೆಂಟ್, 8 ಪರ್ಸೆಂಟ್ ಈ ರೀತಿಯಲ್ಲಿ 21 ರೇಟ್ ಇತ್ತು. ಇದು ನಿಮಗು ಗೊತ್ತಿದೆ. ಇವ್ಹೊತ್ತು 4 ರೇಟ್ ಮಾಡಿದರೆ ಏನು ತಾಪತ್ರಯ ನಿಮಗೆ ಆಗುತ್ತದೆ. ಆದುದರಿಂದದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಿದರೆ ಒಳ್ಳೆಯದು. ಆ ರೀತಿ ಮಾಡಿದರೆ ಎಲ್ಲಾ ಬಡವರಿಗೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಸುಮಾರು 100 ವಸ್ತುಗಳ ಮೇಲೆ ತೆರಿಗೆಯನ್ನು ನೀವು ಇಳಿಸುವುದಕ್ಕೆ ನಿಮಗೆ ಅವಕಾಶವಿದೆ. ನೀವು ಬೇಕಾದರೆ ಶ್ರೀಮಂತರ ವಸ್ತುಗಳಾದ 50 ಐಟಂಗಳ ಮೇಲೆ 10 ಮಾಡುವ ಕಡೆ 12 ಪರ್ಸೆಂಟ್ ತೆರಿಗೆ ಮಾಡಿ, ಆದರೆ ನೀವೇನೂ ಈಗ ಬಡವರ ಐಟಂಗಳಾದ 100 ಐಟಂಗಳ ಮೇಲೆ 10 ಪರ್ಸೆಂಟ್ ತೆರಿಗೆ ಮಾಡಿದ್ದಿರಿ ಅದನ್ನು 8 ಪರ್ಸೆಂಟ್‌ಗೆ ಮಾಡಿ. ಇದು ನಮ್ಮ ಮೊದಲನೆಯ ಮನವಿ. ಎರಡನೆಯದಾಗಿ, ನೀವು ಮಾತನಾಡುವಾಗ ಕೆಲವೊಂದು ವಿಷಯಗಳು ರೆಕಾರ್ಡ್‌ಗೆ ಹಾಗೆಯೇ

ಹೋಗಿರುತ್ತದೆ. ಆ ರೀತಿ ಇದ್ದರೆ ಸರಿಯಾಗುವುದಿಲ್ಲ. ನೀವು ಆಡಳಿತಕ್ಕೆ 1994ರ ಡಿಸೆಂಬರ್‌ನಲ್ಲಿ ಬಂದಿರಿ. ನೀವು ಇಲ್ಲಿಯವರೆಗೆ ಅಂದರೆ 1995-96ನೇ ಸಾಲಿನಲ್ಲಿ ಹಿಡಿದು ಇಲ್ಲಿಯವರೆಗೆ ಡಿಸೆಂಬರ್ ತಿಂಗಳಂತ್ಯದೊಳಗೆ ಯಾವ ಸರ್ಕಾರ ಕೂಡ 50 ರಿಂದ 60 ಪರ್ಸೆಂಟ್ ಹಣ ಖರ್ಚು ಮಾಡಿಲ್ಲ. ನಿಮ್ಮ ಹೇಳಿಕೆ ಪ್ರಕಾರ ನಾವು ತೆಗೆದುಕೊಂಡು ನಿಮ್ಮ ಅಪ್ರೂವ್ಡ್ ಪ್ಲಾನ್ ಔಟ್‌ಲೇ ಮತ್ತು ರಿವೈಸ್ಡ್ ಪ್ಲಾನ್ ಔಟ್‌ಲೇ ಇವೆಲ್ಲವನ್ನೂ ಕೂಡ ನಾವು ನೋಡಿದಾಗ ನಿಮ್ಮ ಶಾರ್ಟ್‌ಫಾಲ್ ಕನಿಷ್ಟ ಪಕ್ಷ 1600 ಕೋಟಿ ರೂಪಾಯಿಗಳಾಗುತ್ತದೆ. ನೀವು ಅದನ್ನು ಅಲ್ಲಗೆಳೆಯುತ್ತೀರಿ. ಆ ಮಾತು ಬೇರೆ. ಇದಕ್ಕೆ ಸ್ಪಷ್ಟವಾದ ಉತ್ತರ ಸಿಗಲಿಲ್ಲ. ನೀವು ಹೇಳಿಕೊಂಡಿರಿ ನಮ್ಮದು ಎರಡ್ಮೂರು ವರ್ಷದ್ದು ಸಂಬಂಧವಿದೆ ಆ ಕಾರಣದಿಂದ 1000 ಕೋಟಿ ರೂಪಾಯಿಗಳು ಇದೆ ಎಂದಿರಿ. ಇವೊತ್ತಿನವರೆಗೆ 1600 ಕೋಟಿ ರೂಪಾಯಿಗಳು ಶಾರ್ಟ್‌ಫಾಲ್ ಇದೆ, ಮಾರ್ಚ್ ಕೊನೆಗೆ ಯಾವ ಫೈನಲ್ ಫಿಗರ್ ಬರುತ್ತದೋ ನೋಡಬೇಕು. ಇನ್ನೊಂದು ಮಾತನ್ನು ತಾವು ಹೇಳಿದಿರಿ, ನಮ್ಮ ಸರ್ಕಾರ ಬಂದ ಮೇಲೆ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡಿದ್ದೇವೆ, ಆದರೆ ನೀವು ಸುಮ್ಮನೇ ನಮ್ಮ ಮೇಲೆ ಗೂಬೆ ಕೂರಿಸುತ್ತಿದ್ದೀರಿ ಎಂದು ನಮಗೆ ಹೇಳಿದಿರಿ. ನಾನು ಕೆಲವನ್ನು ಒಪ್ಪಿಕೊಳ್ಳುತ್ತೇನೆ, ಅದು ಯಾವುವೆಂದರೆ ನೀವು ನೀರಾವರಿಯಲ್ಲಿ 2.75 ಪರ್ಸೆಂಟ್ ಈ ವರ್ಷ ಹೆಚ್ಚು ಮಾಡಿದ್ದೀರಿ. ಲಾಸ್ಟ್ ಟೈಮ್ 27.35 ತಮ್ಮ ಅಲೊಕೇಶನ್ ಇದ್ದರೆ ಈ ಬಾರಿ 30.43 ಇದೆ. ಹೋದ ವರ್ಷ 27.35 ಪರ್ಸೆಂಟ್ ಇತ್ತು ಅದನ್ನು ಗಮನಿಸಿದರೆ ಹೆಚ್ಚು ಕಡಿಮೆ 2.85 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಉಳಿದ ಎಲ್ಲಾ ಬಾಬ್ತುಗಳಲ್ಲಿ, ಅಂದರೆ ಅದು ಕೃಷಿ ಇರಬಹುದು, ಶಿಕ್ಷಣ ಇರಬಹುದು, ಗ್ರಾಮೀಣಾಭಿವೃದ್ಧಿ ಇರಬಹುದು, ಪಶುಸಂಗೋಪನೆ ಇರಬಹುದು, ಎಲ್ಲದರಲ್ಲೂ ಕೂಡ ನೀವು ಕಡಿಮೆ ಮಾಡಿದ್ದೀರಿ. ಪಾಯಿಂಟ್ 2, ಪಾಯಿಂಟ್ 3, 1 ಪರ್ಸೆಂಟ್, 2 ಪರ್ಸೆಂಟ್ ಹೀಗೆ ಕಡಿಮೆ ಮಾಡಿದ್ದೀರಿ, ನೀವು ಬೇಕಾದರೆ ನೋಡಿ ಸ್ವಾಮಿ.

ಶ್ರೀ ಸಿದ್ದರಾಮಯ್ಯ :- ಆ ರೀತಿ ಏನೂ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ನೋಡಿ ಸ್ವಾಮಿ. ನೀವು ನಮಗೆ ಏನು ಹೇಳಬೇಕು ಎಂದುಕೊಂಡಿದ್ದೀರೋ ಅದನ್ನು ಮಾತ್ರ ನೋಡಿಕೊಂಡು ಬಂದಿದ್ದೀರಿ. ನಾವು ಎಲ್ಲೆಲ್ಲಿ ನೀವು ಅಲೊಕೇಶನ್ ಕಡಿಮೆ ಮಾಡಿದ್ದೀರಿ ಎಂಬ ಬಗ್ಗೆ ಹೇಳುತ್ತೇವೋ ಅದನ್ನು ಮಾತ್ರ ನೋಡಿಕೊಂಡು ಬಂದಿಲ್ಲ. ನೀವು ಅದರ ಬಗ್ಗೆ ಬಜೆಟ್‌ನಲ್ಲಿ ನೋಡಿ. ಕಳೆದ ವರ್ಷ ಕೃಷಿಯಲ್ಲಿ 5.3 ಪರ್ಸೆಂಟ್ ಇದ್ದದ್ದನ್ನು ನೀವು 5.1 ಪರ್ಸೆಂಟ್ ಮಾಡಿದ್ದೀರಿ. ಸಣ್ಣ ನೀರಾವರಿಗೆ ಮತ್ತು ಗ್ರಾಮೀಣಾಭಿವೃದ್ಧಿಗೆ ಕಡಿಮೆ ಮಾಡಿದ್ದೀರಿ. ಶಿಕ್ಷಣಕ್ಕೆ ಕಡಿಮೆ ಮಾಡಿದ್ದೀರಿ. ಇಂಧನಕ್ಕೆ ಹೋದ ಸಲ ಇದ್ದದ್ದಕ್ಕಿಂತ ಕೇವಲ 1.25 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಇದನ್ನು ಬಿಟ್ಟರೆ ಬೇರೆ ಎಲ್ಲಾ ಖಾತೆಗಳಲ್ಲೂ ಕಡಿಮೆ ಮಾಡಿಕೊಂಡೇ ಬಂದಿದ್ದೀರಿ. ನೀವು ಇದನ್ನು ಒಪ್ಪಿಕೊಳ್ಳುತ್ತೀರೆಂದು ನಾವು ತಿಳಿದುಕೊಳ್ಳುತ್ತೇವೆ. ಇದಲ್ಲದೇ ನಾವು ಏನು ಹೇಳುತ್ತೇವೆಂದರೆ ಈ ಎಸ್.ಸಿ., ಎಸ್. ಟಿ. ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ತಾವು 8 ಕೋಟಿ ರೂಪಾಯಿಗಳನ್ನು ಏರಿಸಿದ್ದೀರಿ. ಆ ಮೂಲಕ 49 ಕೋಟಿ ಮಾಡಿದ್ದೀರಿ. ಅಂದರೆ ನೀವು 7 ಕೋಟಿ ರೂಪಾಯಿಗಳನ್ನು ಏರಿಸಿದಿರಿ. ಆದರೆ, ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂಬಂಧಪಟ್ಟ ಹಾಗೆ ಬಜೆಟ್‌ನಲ್ಲಿ ನೋಡಿದರೆ ಖಂಡಿತವಾಗಿ ಅದರಲ್ಲಿ

ಕಡಿಮೆ ಆಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ಪೂಲ್ ಅಮೌಂಟ್‌ನ್ನು ಸೇರಿಸಿಕೊಂಡು 200 ಕೋಟಿ ರೂಪಾಯಿಗಳಿಗೆ ಹೋಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಅದರ ಬಗ್ಗೆ ಲೆಕ್ಕವನ್ನು ನಾವು ಆಮೇಲೆ ನೋಡಬೇಕಾಗುತ್ತದೆ. ಏಕೆಂದರೆ ನೀವು ಕೊಟ್ಟಂಥ ಪ್ಲಾನ್ ಪ್ರಾವಿಶನ್ ಬುಕ್‌ನಲ್ಲಿ ಅದು ಇಲ್ಲ. ಇದು ಒಂದು. ಇನ್ನು ಇಂದು ಯು.ಕೆ.ಪಿ. ಕೆಲಸ ಸ್ಥಗಿತವಾಗಿದೆ. ಅದಕ್ಕೆ ನೀವೇನು ಹೇಳುತ್ತಿರೆಂದರೆ ಈ ಮೂರು ವರ್ಷದಲ್ಲಿ ನಾವು 2,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ, ಅದಕ್ಕೆ ಸಂಬಂಧಪಟ್ಟ ಹಾಗೆ ತಾವು ಈ ವಿಚಾರವನ್ನೂ ಹೇಳಬೇಕಾಗುತ್ತದೆ, ಏನೆಂದರೆ ಯು.ಕೆ.ಪಿ. ಗಾಗಿ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಎಷ್ಟು ಹಣವನ್ನು ಕೊಟ್ಟಿದೆ ಮತ್ತು ನಿಗಮದಿಂದ ಎಷ್ಟು ಹಣವನ್ನು ಕೊಡಲಾಗಿದೆ ಎಂಬುದನ್ನು ಹೇಳಬೇಕು. ಏಕೆಂದರೆ ಹಿಂದಿನ ಸರ್ಕಾರಗಳು ಪ್ಲಾನ್ ಟಿಟ್‌ಲೇನಲ್ಲಿ ಬಜೆಟ್‌ನಲ್ಲಿ ನೇರವಾಗಿ ಹಣವನ್ನು ಖರ್ಚು ಮಾಡಿದ್ದಾರೆ ಇದು ವಿಶ್ವಬ್ಯಾಂಕ್ ಹಣವನ್ನು ಬಿಟ್ಟು ಮಾಡಿರತಕ್ಕಂಥದ್ದು. ಆದರೆ ನಿಮ್ಮ ಸ್ಟೇಟ್ ಬಜೆಟ್‌ನಲ್ಲಿ ಹಿಂದಿನ ಸರ್ಕಾರಗಳು ಕೊಟ್ಟಂಥ ಹಣವನ್ನು ನೋಡಿದರೆ 80 ಕೋಟಿಯಿಂದ 100 ಕೋಟಿಯವರೆಗೆ ನೀವು ಹೆಚ್ಚಿಗೆ ಕೊಟ್ಟಿದ್ದೀರಿ. ಇದನ್ನು ಸ್ಟೇಟ್ ಗೌವ್ರ್ನಮೆಂಟ್ ಅಲೋಕೇಶನ್‌ನಲ್ಲಿ ಕೊಟ್ಟಿದ್ದೀರಿ. ಉಳಿದದ್ದನ್ನು ಜಲಭಾಗ್ಯ ನಿಮಗದಿಂದ ಹಣವನ್ನು ಸಾಲವಾಗಿ ಕಲೆಕ್ಟ್ ಮಾಡಿ ಕೊಟ್ಟಿದ್ದೀರಿ. ಇವೊತ್ತು ಆ ಹಣವನ್ನೂ ಕೂಡ ನಿಮ್ಮ ಎಮ್.ಡಿ. ಯವರು ಬಿಡುಗಡೆ ಮಾಡುತ್ತಿಲ್ಲ. ಕಳೆದ ಮೂರು ತಿಂಗಳಿಂದ ಅಲ್ಲಿ ಕೆಲಸ ನಿಂತಿರುವುದರಿಂದ ಅಲ್ಲಿಯ ಜನರಿಂದ ಅಲ್ಲಿಯ ಶಾಸಕರುಗಳು ಅಪವಾದಕ್ಕೆ ಗುರಿಯಾಗಿದ್ದಾರೆ. ಇವೊತ್ತು ಅಲಿಗೇಶನ್ ಮಾಡುತ್ತಿದ್ದಾರೆ, ನೀವು ಕೆಲಸವನ್ನು ನಿಲ್ಲಿಸಿದಿರಿ ಎಂದು ಹೇಳುತ್ತಿದ್ದಾರೆ. ಅಂದರೆ ತಪ್ಪು ಮಾಡಿದ್ದನ್ನು ಎತ್ತಿಹಿಡಿದು ತೋರಿಸಿದರೆ ನೀವು ಏಕೆ ಮಾಡಿದ್ರಿ ಎನ್ನುವುದು ಒಂದು, ಇನ್ನೊಂದು ಕಡೆ ನೀವು ಎತ್ತಿ ತೋರಿಸುತ್ತಿದ್ದೀರಿ ಕೆಲಸ ಕಳಪೆ ನಡೆದಿದೆ ಎಂದಿದ್ದೀರಿಯಾದ ಕಾರಣ ಅದಕ್ಕೆ ನಾವು ಕೆಲಸ ನಿಲ್ಲಿಸಿದ್ದೇವೆ ಎಂದು ಹೇಳುತ್ತೀರಿ. ಆದುದರಿಂದ ತಾವು ದಯವಿಟ್ಟು ಈ ಸಮಸ್ಯೆಯನ್ನು ಹೇಗೆ ಬಗೆಹರಿಸುತ್ತೀರಿ ಮತ್ತು ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ತಾವು ಹೇಳಬೇಕು. ಅದನ್ನು ಬಿಟ್ಟು ನಾವು ಇಷ್ಟು ಹಣವನ್ನು ಇಟ್ಟಿದ್ದೇವೆ ಮತ್ತು 2000 ನೇ ಇಸವಿಯೊಳಗೆ ಇದನ್ನು ಮುಗಿಸಲು ಪ್ರಯತ್ನ ಮಾಡುತ್ತೇವೆ ಎಂದು ನಾವೆಲ್ಲರೂ ಕೂಡ ಹೇಳಿಕೊಂಡು ಬಂದರೂ ಕೂಡ ಸದ್ಯದಲ್ಲಿ ಆ ಪ್ರಾಜೆಕ್ಟ್ ಮುಗಿಯುವ ಹಂತದಲ್ಲಿಯಂತೂ ಇಲ್ಲ. ಅದಕ್ಕೋಸ್ಕರ ಇದಕ್ಕೆ ಯಾವ ರೀತಿಯಾಗಿ ಹಣವನ್ನು ಒದಗಿಸಿ ಕೆಲಸವನ್ನು ಪ್ರಾರಂಭ ಮಾಡುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ಹೇಳಿಕೆಯನ್ನು ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಹಣಕಾಸು ಸಚಿವರು ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಎಂದು 110 ಕೋಟಿ ರೂಪಾಯಿಗಳ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಸಾಮಾನ್ಯ ಜನರಿಗೆ ಇವುಗಳು ಏನು ಸಂಬಂಧವಿಲ್ಲದಿದ್ದರೂ ಅವರು ತೆರಿಗೆಯನ್ನು ಕಟ್ಟಬೇಕಾಗಿದೆ. ಒಂದು ರೀತಿಯಲ್ಲಿ ಸಕ್ಕರೆ ರೂಪದಲ್ಲಿ ವಿಷದ ಗುಳಿಗೆಯನ್ನು ಸಾಮಾನ್ಯ ಜನರಿಗೆ ಕೊಡುತ್ತೀರಿ. ಅವನಿಗೆ ಇದು ಏನು ಸಂಬಂಧ ಇದೆ ಸ್ವಾಮಿ: ಈ ಕಡೆಯಿಂದ ಒಕ್ಕೊರಲಿನಿಂದ 13 ಜನರು ಮಾತನಾಡಿ ಹೇಳಿದರೂ ಸಹ ವೀಟ್ ಪ್ರಾಡಕ್ಟ್ ಆದ ಹಿಟ್ಟಿಗೆ 2 ರೂಪಾಯಿ ತೆರಿಗೆ ಜಾಸ್ತಿ ಮಾಡಿದ್ದೀರಿ, ಇದರಿಂದ ಒಂದು ಚೀಲಕ್ಕೆ 50 ರಿಂದ 60 ರೂಪಾಯಿಗಳು ಬೆಲೆ ಜಾಸ್ತಿಯಾಗುತ್ತದೆ. ಸಾಮಾನ್ಯ ಜನರು ಗೋಧಿ ಪ್ರಾಡಕ್ಟ್ ಆದ ಬ್ರೆಡ್, ಬಿಸ್ಕಟ್‌ಗಳಿಗಾಗಿ ಒದ್ದಾಡುತ್ತಾರೆಯಾದ ಕಾರಣ ಇದರ ಮೇಲೆ ತೆರಿಗೆ ಜಾಸ್ತಿ ಮಾಡಬೇಡಿ ಎಂದು ಈ

ಕಡೆಯ ಶಾಸಕರೆಲ್ಲಾ ಒಕ್ಕೊರಲಿನಿಂದ ಕೇಳಿದರೂ ಕೂಡ ಅದರ ಬಗ್ಗೆ ಒಂದು ಶಬ್ದ ಕೂಡ ನೀವು ಹೇಳಲಿಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಜೆಟ್ ಎಂದು ಹೇಳಿ ಮಂಡನೆ ಮಾಡಿದ ಮೇಲೆ ಚರ್ಚೆ ಮಾಡಿದ ಮೇಲೆ ನಾವು ಕೂಡ ಜನರ ಪ್ರತಿನಿಧಿಯಾಗಿ ಇಲ್ಲಿಗೆ ಬಂದು ಜನರ ಸಂಕಷ್ಟವನ್ನು ಅರ್ಥ ಮಾಡಿಕೊಂಡು ಅನೇಕ ಜನರು ನಮಗೆ ಏನು ಹೇಳಿರುತ್ತಾರೆ ಅದರ ಬಗ್ಗೆ ನಾವೂ ಕೂಡ ಯೋಚನೆ ಮಾಡಿ ಒಂದು ಜವಾಬ್ದಾರಿಯುತವಾದ ಸ್ಥಾನದಲ್ಲಿ ನಿಂತುಕೊಂಡು ವೀಟ್ ಪ್ರಾಡಕ್ಟ್ ಬಗ್ಗೆ ತೆರಿಗೆಯಲ್ಲಿ ಕನ್ಸೇಶನ್ ಕೊಡಬೇಕೆಂದು ನಿಮಗೆ ಹೇಳಿದರೆ ತಾವು ಒಂದೇ ಹಠದಲ್ಲಿ ಇದ್ದು ಯಾವುದೇ ಕಾರಣಕ್ಕೂ ನಾವು ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಸಿದ್ಧವಿಲ್ಲವೆನ್ನುವ ಮಾತನ್ನು ಹೇಳುತ್ತೀರಿ. ಇನ್ನೊಂದು ವಿಷಯವೆಂದರೆ ನೀವು ಮಾಡಿರುವ ಸಾಲವನ್ನು ನೋಡಬೇಕಾಗುತ್ತದೆ. ನೀವು ದಿನಾಂಕ 31.03.94ಕ್ಕೆ 9,124 ಕೋಟಿ ರೂಪಾಯಿಗಳಿದ್ದ ಸಾಲವನ್ನು ದಿನಾಂಕ 31.03.97ಕ್ಕೆ 14,043 ಕೋಟಿ ರೂಪಾಯಿಗಳವರೆಗೆ ಸಾಲವನ್ನು ಮಾಡಿದ್ದೀರಿ. 1998-99ಕ್ಕೆ ನಿಮ್ಮ ಬಜೆಟ್ ಎಸ್ಟಿಮೇಟ್ ಪ್ರಕಾರ 17.214 ಕೋಟಿ ರೂಪಾಯಿಗಳಾಗುತ್ತದೆ. ಎರಡು ಪಟ್ಟು ಹೆಚ್ಚು ಸಾಲ ಮಾಡುತ್ತೀರಿ. ಇನ್ನೊಂದು ಕಡೆ ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ 93-94 ಕ್ಕೆ 28.2 ಪರ್ಸೆಂಟ್ ಇದೆ, ಅದು 1997-98ರಲ್ಲಿ 33.14 ಪರ್ಸೆಂಟ್ ಇದೆ. ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಬರುತ್ತಾ ಬರುತ್ತಾ ಡಿಕ್ಲೈನ್ ಆಗುತ್ತಿದೆ, ತಾವು ಅಧಿಕಾರಕ್ಕೆ ಬರುವ ಮುಂಚೆ ಅಂದರೆ 1993-94ರಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳಿಗಾಗಿ ಖರ್ಚು ಮಾಡಿದ ಹಣದ ಪರ್ಸೆಂಟ್ 71.98 ಇದ್ದರೆ 1997-98 ಕ್ಕೆ ಅದು 66.90ಗೆ ಬಂದು ತಲುಪಿದೆ. ನಾನು ಏನು ಹೇಳುತ್ತೇನೆಂದರೆ ಇಡೀ ದೇಶದಲ್ಲಿಯೇ ಹೆಚ್ಚು ತೆರಿಗೆ ಹಾಕುತ್ತಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ರಾಜ್ಯವಾಗದೆ. ನಾನು ಇದನ್ನು ಹೇಳಿದರೆ ನೀವು ಒಪ್ಪುವುದಿಲ್ಲ. ನೀವು ಬೇಕಾದರೆ ಅಂಕಿ ಅಂಶವನ್ನು ತರಿಸಿಕೊಂಡು ನೋಡಿ. ಒಂದು ಕಡೆ ಸಾಲವನ್ನು ಹೆಚ್ಚು ಮಾಡುತ್ತಿದ್ದೀರಿ, ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ದುಡ್ಡಿಲ್ಲ. ನಾನು ಮುಖ್ಯಮಂತ್ರಿಗಳ ಹತ್ತಿರ ಹೇಳುತ್ತಿದ್ದೆ, ಅವರು ಇಲ್ಲಿರಬೇಕಾಗಿತ್ತು ಈಗ. ಶಿವಮೊಗ್ಗ ಜಿಲ್ಲೆಗೆ ಪಿ. ಡಬ್ಲ್ಯೂ. ಡಿ. ಇಲಾಖೆಗೆ ಹಣವನ್ನು ನೀವು ಬಿಡುಗಡೆ ಮಾಡದಿರುವುದರಿಂದ ಯಾವುದೇ ಕಂಟ್ರಾಕ್ಟರ್ ಕೆಲಸ ಒಪ್ಪಿಕೊಳ್ಳುತ್ತಿಲ್ಲ. ಹೋದ ಬಾರಿ ಆಸ್ಪಾಲ್ಟ್ ಇಲ್ಲವೆಂದು ಹೇಳಿದಿರಿ. ಈ ಬಾರಿ ಮುಂದಾಲೋಚನೆಯಿಂದ ಆಸ್ಪಾಲ್ಟ್ ಸ್ಟಾಕ್ ಮಾಡಲಿಲ್ಲ. ಎಲ್ಲೂ ಅಭಿವೃದ್ಧಿ ಕೆಲಸಗಳಾಗದೇ ಟಾರ್ ಇಲ್ಲವೆಂದು ಹೇಳಿ ಕೆಲಸ ನಿಂತುಹೋಗಿದೆ. ಅಂದರೆ ನಾನು ಏನು ಹೇಳುತ್ತೇನೆಂದರೆ ಮೂರು ವರ್ಷದಿಂದ ಚುನಾವಣೆ ಗಡಿಬಿಡಿಯಲ್ಲಿದ್ದ ಮೇಲೂ ಸಹ ವಾಪಸ್ ಬಂದ ಮೇಲಾದರೂ ಕೂಡ ಈ ಕಡೆಗೆ ಹಣವನ್ನು ಬಿಡುಗಡೆ ಮಾಡಲಿಲ್ಲ. ತಮಗೆ ಆರೋಪ ಮಾಡಬೇಕೆಂದು ಹೇಳುತ್ತಿಲ್ಲ. ಮೈಸೂರು ಜಿಲ್ಲೆಯನ್ನೂ ಒಳಗೊಂಡಂತೆ ಇಡೀ ರಾಜ್ಯದ ಕಡೆ ತಾವು ನೋಡಬೇಕಲ್ಲವೇ? ನೀರಾವರಿ ಇರಬಹುದು, ಪಿಡಬ್ಲ್ಯೂಡಿ ಇರಬಹುದು ಅಥವಾ ಮತ್ತೊಂದು ಇರಬಹುದು, ಇವೆಲ್ಲಾ ಕಡೆ ಆದ್ಯತೆ ಕೊಟ್ಟು ತಾವು ನೋಡಬೇಕಲ್ಲವೇ? ನಾನು ಈಗಲೂ ಒತ್ತಾಯ ಮಾಡುವುದೇನೆಂದರೆ ಈಗೇನು ನೀವು ಸಾಮಾನ್ಯ ಜನರ ಮೇಲೆ 110 ಕೋಟಿ ರೂಪಾಯಿಗಳ ತೆರಿಗೆ ಏನು ಹಾಕುತ್ತಿದ್ದೀರಿ ಅದು ಅರ್ಥವಿಲ್ಲದಿರುವಂಥದ್ದು. ಗೋಧಿ ಪ್ರಾಡಕ್ಟ್ ಮೇಲೆ ಏನು ತೆರಿಗೆಯನ್ನು ಹೆಚ್ಚು ಹಾಕಿದ್ದೀರಿ ದಯಮಾಡಿ ಅದನ್ನು ವಾಪಸ್ ತೆಗೆದುಕೊಂಡು ಜನ ಉಳಿಯುವ ಹಾಗೆ ಏನಾದರೂ ಒಂದು ತೀರ್ಮಾನ ಮಾಡಿ. ನಾವು ಕೊಟ್ಟ ಸಲಹೆಗೆ ಸ್ವಲ್ಪ ಮನ್ನಣೆಯನ್ನು ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಈಗಾಗಲೇ ಮುಖ್ಯ ವಿಚಾರದ ಬಗ್ಗೆ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಾನು ಮೊನ್ನೆ ಕೇಳಿರುವ ಪ್ರಶ್ನೆಗೆ ಇನ್ನೂ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿಲ್ಲ. ಸಣ್ಣ ನೀರಾವರಿಗೆ ಸಂಬಂಧಪಟ್ಟ ಸುಮಾರು 31 ಕೋಟಿ ರೂಪಾಯಿಗಳ ಬಿಲ್‌ನ್ನು ಇನ್ನೂ ಪಾವತಿ ಮಾಡಿಲ್ಲ. ಇದು ಕೆಲಸ ಮುಗಿದು ಬಿಲ್ ಮಾಡಿರತಕ್ಕಂಥದ್ದಕ್ಕೆ ಸಂಬಂಧಪಟ್ಟ ಬಿಲ್, ಇನ್ನು ಕೆಲಸ ಆಗದೇ ಇರತಕ್ಕಂಥದ್ದು ಬೇರೆ. ಇನ್ನು ಕೆಲಸ ಕೂಡ ಆಗಿಹೋಗಿ ಬಿಲ್ ಮಾಡದೇ ಇರತಕ್ಕಂಥದ್ದು ಕೂಡ ಬೇರೆ ಇದೆ. ಅದರ ಬಗ್ಗೆ ಮುಂದೆ ಹೋಗೋಣ. ಅದೇ ರೀತಿ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸ ಆಗಿ ಬಿಲ್ ಸಬ್‌ಮಿಟ್ ಮಾಡಿರತಕ್ಕಂಥದ್ದು ಸುಮಾರು 83 1/2 ಕೋಟಿ ರೂಪಾಯಿಗಳದ್ದು ಇಡೀ ರಾಜ್ಯದಲ್ಲಿದೆ. ನಮ್ಮ ಜಿಲ್ಲೆಯದು 3 ಕೋಟಿ ರೂಪಾಯಿಗಳಿದೆ. ಲೋಕೋಪಯೋಗಿ ಮತ್ತು ಸಣ್ಣ ನೀರಾವರಿ ಇಲಾಖೆಗಳೆರಡರದ್ದೇ ಸುಮಾರು 110 ಕೋಟಿ ರೂಪಾಯಿಗಳಷ್ಟನ್ನು ಕೊಡಬೇಕಾದ ಬಿಲ್‌ಗಳು ಪೆಂಡಿಂಗ್ ಇದೆ. ಇನ್ನು ದೊಡ್ಡ ನೀರಾವರಿ ಇಲಾಖೆಯದ್ದನ್ನು ದೊಡ್ಡ ಸಚಿವರು ನೋಡಿಕೊಳ್ಳುತ್ತಾರೆ. ನಾನು ಏಕೆ ಇದನ್ನು ಹೇಳುತ್ತೇನೆಂದರೆ ಇವೊತ್ತು ಸಾಮಾನ್ಯವಾಗಿ ಜನವರಿ, ಮಾರ್ಚ್, ಏಪ್ರಿಲ್‌ನಲ್ಲಿ, ಮೇನಲ್ಲಿ ಕೆಲಸ ನಡೆಯತಕ್ಕಂಥದ್ದು. ಈ ಕೆಲಸವನ್ನು ಮಾಡಿರತಕ್ಕಂಥ ಜನಗಳಿಗೆ ದುಡ್ಡು ಕೊಡದೇ ಇರುವುದರಿಂದ ಯಾವ ಕೆಲಸವನ್ನು ಮುಂದೆ ಮಾಡದೇ ಇರತಕ್ಕಂಥ ಕೆಲಸಗಳು ಹಾಗೆಯೇ ನಿಂತಿವೆ. ನಮ್ಮ ನಿರೀಕ್ಷೆಗೆ ಮಿಗಿಲಾಗಿ ತಾವೇನೋ ಈ 1998-99ನೇ ವರ್ಷಕ್ಕೆ 104 ಕೋಟಿ ರೂಪಾಯಿಗಳು ಖೋತಾ ಬಜೆಟ್ ಆಗುತ್ತದೆ ಎಂದು ಹೇಳಿದಿರಿ . ನೀವು ಕೊಡಬೇಕಾದ ಹಣವನ್ನು ಕೊಡದೇ ಹಾಗೆ ಉಳಿಸಿಕೊಂಡರೆ ನಿಮ್ಮ ಖೋತಾ ಬಜೆಟ್ ಎಲ್ಲಿಗೆ ಹೋಗುತ್ತದೆ. ಈ 110 ಕೋಟಿ ರೂಪಾಯಿಗಳನ್ನು ನೀವು ಎಲ್ಲಿಂದ ಕೊಡುತ್ತೀರಿ? ನಿಮ್ಮ ಹತ್ತಿರ ಹಣವಿಲ್ಲ, ತೆರಿಗೆಯೂ ವಸೂಲಾಗಿಲ್ಲ, ಖೋತಾ ಬಜೆಟ್ ಜಾಸ್ತಿಯಾದರೂ ಆಗಬೇಕಲ್ಲ. ಆದುದರಿಂದ ಇದಕ್ಕೆಲ್ಲಾ ಏನು ಹೇಳುತ್ತಾರೆಂದರೆ ಹಣಕಾಸಿನ ಇಲಾಖೆಯಿಂದ ನಮಗೆ ದುಡ್ಡು ಬರುತ್ತಿಲ್ಲ, ಅವರು ಕೊಡದೇ ಇರುವುದರಿಂದ ನಾವು ಅವರಿಗೆ ಹಣ ಪಾವತಿ ಮಾಡುವುದಕ್ಕೆ ಆಗುವುದಿಲ್ಲ, ಇದರಿಂದ ಯಾವ ಕೆಲಸವೂ ಕೂಡ ಕಂಟಿನ್ಯೂ ಆಗಿಲ್ಲವೆಂದು ಅಧಿಕಾರಿಗಳು ಹೇಳುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ ಈಗಾಗಲೇ ಕೆಲಸ ಮಾಡಿರುವ ಕಂಟ್ರಾಕ್ಟ್‌ದಾರರಿಗೆ ಹಣ ಪಾವತಿ ಮಾಡದೇ ಬಿಲ್ ಪೆಂಡಿಂಗ್ ಇಟ್ಟುಕೊಳ್ಳುವುದು ಯಾವುದೇ ಸರ್ಕಾರಕ್ಕೆ ಅಷ್ಟು ಲಕ್ಷಣವೆನಿಸುವುದಿಲ್ಲ. ನಮಗೆ ಎಷ್ಟೇ ಕಷ್ಟವಿರಬಹುದು. ದಯವಿಟ್ಟು ಹಣ ಪಾವತಿಯನ್ನು ಮಾಡಿ ಕಾಮಗಾರಿಗಳು ನಡೆಯುವುದಕ್ಕೆ ಅವಕಾಶ ಮಾಡಿ. ಏಕೆಂದರೆ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕೆ ಇದು ಒಳ್ಳೆಯ ಕಾಲವಾಗಿದೆ. ಅದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ :- ಮಾನ್ಯ ಅಧ್ಯಕ್ಷರೇ, 1981 ರಲ್ಲಿ ಈ ಕಳ್ಳಭಟ್ಟಿ ದುರಂತವಾಗಿ 300 ಜನಕ್ಕೂ ಹೆಚ್ಚು ಜನರು ಸತ್ತರು. ಆಗ ಜಸ್ಟೀಸ್ ದೇಸಾಯಿ ಕಮೀಶನ್ನನು ನೇಮಕ ಮಾಡಿದರು. ಆ ಕಮೀಷನ್ ಶಿಫಾರಸ್ ಆಧಾರದ ಮೇಲೆ ಪ್ರತಿ ಜಿಲ್ಲೆಗೆ ಡೆಪ್ಯೂಟಿ ಕಮೀಷನರ್‌ರನ್ನು ನೇಮಕ ಮಾಡತಕ್ಕಂಥದಕ್ಕೆ ಒಪ್ಪಿಕೊಂಡು ಮಂಜೂರಾತಿ ನೀಡಿ ರೆವಿನ್ಯೂ ಜಿಲ್ಲಾಧಿಕಾರಿಗಳಿಗಿದ್ದಂಥ ಅಧಿಕಾರವನ್ನು ಹರಾಜು ಮಾಡುವುದಕ್ಕೆ ಮಾತ್ರವಿದ್ದು ಉಳಿದದ್ದನ್ನು ಇವರಿಗೊಪ್ಪಿಸಿ ಅದು ಕೆಲಸ ಮಾಡಿಕೊಂಡು ಬರುತ್ತಾ ಇದೆ. ಈಗ ಹಣಕಾಸಿನ ಮಂತ್ರಿಗಳು ಭಾಷಣದಲ್ಲಿ ಪುನ: ಅದನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಅವರಿಗೆ ಸಲಹೆ ಕೊಟ್ಟೆ, ಏನೆಂದರೆ ಇದರ ಬಗ್ಗೆ ಮುಖ್ಯ ಮಂತ್ರಿಗಳನ್ನು ಕೇಳಿ ನೀವು

ತೀರ್ಮಾನ ತೆಗೆದುಕೊಳ್ಳಿ, ಆತುರಾತುರವಾಗಿ ಇದನ್ನು ಮಾಡುವುದು ಬೇಡ. ಏಕೆಂದರೆ ಡೂಪ್ಲಿಸಿಟಿ ಆಫ್ ವರ್ಕ್ ಆಗುತ್ತದೆ. ಇದು ಪ್ರಾಕ್ಟಿಕಲ್ ಅಲ್ಲಾ ಅದು ಆ ಇಲಾಖೆಗೆ ಡಿಮಾರಲೈಸ್ ಕೂಡ ಆಗುತ್ತದೆ. ಅದಕ್ಕೋಸ್ಕರ ನೀವು ಇಲ್ಲಿ ಇದ್ದೀರಿ, ಇದರ ಬಗ್ಗೆ ಸ್ವಲ್ಪ ಬೆಳಕು ಚೆಲ್ಲಿದರೆ ಒಳ್ಳೆಯದಾಗುತ್ತದೆ. ಆದುದರಿಂದ ಮುಖ್ಯ ಮಂತ್ರಿಗಳು ತಮ್ಮ ಅನಿಸಿಕೆಯನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಸಲಹೆ ಮಾಡಿರುವ ಹಾಗೆ ಈ ಬಗ್ಗೆ ನಾವು ಪರಿಶೀಲನೆ ಮಾಡುವ ಅವಶ್ಯಕತೆ ಇದೆ. ಮಾನ್ಯ ಹಣಕಾಸಿನ ಮಂತ್ರಿಗಳು ಏಕೆ ಆ ಸಲಹೆ ಕೊಟ್ಟರು ಎಂದರೆ, ಈ ಇಲಾಖೆಯ ಮೇಲೆ ಬಹಳಷ್ಟು ದೂರುಗಳು ಬಂದಿವೆ. ಬಹಳ ದೂರುಗಳು ಬಂದು ಸೆಕೆಂಡ್ಸ್ ಬಗ್ಗೆ, ಥರ್ಡ್ಸ್ ಬಗ್ಗೆ ಎಕ್ಸೈಸ್ ಇಲಾಖೆಯವರು ಏನೂ ಕೆಲಸ ಮಾಡುತ್ತಿಲ್ಲ, ಅದನ್ನು ಸರಿಪಡಿಸಬೇಕೆಂದು, ಅದಕ್ಕೋಸ್ಕರ ಇದು ಮೊದಲು ಎಕ್ಸೈಸ್ ಇದ್ದುದು ಪಾರ್ಟ್ ಆಫ್ ರೆವಿನ್ಯೂ ಡಿಪಾರ್ಟ್‌ಮೆಂಟ್ ತಾವುಗಳು ಅಭಿಪ್ರಾಯ ಪಟ್ಟಂತೆ ಇದನ್ನು ಏನಾದರೂ ಬಿಗಿ ಹಿಡಿಯುವುದಕ್ಕೆ ಸಾಧ್ಯವೋ, ಕಾಯಕಲ್ಪ ಕೊಡುವುದಕ್ಕೆ ಸಾಧ್ಯವೋ ಎಂದು ಸಲಹೆ ಇದೆ. ಆದರೆ ತಾವು ಹೇಳುವ ಮಾತಿನಲ್ಲಿ ಒಂದು ಅಂಶ ಸತ್ಯ ಇದೆ. ಡೂಪ್ಲಿಸಿಟಿ ಆಫ್ ವರ್ಕ್ ಆಗಬಹುದು, ಇವನು ಮಾಡಿದ ವರ್ಕ್ ಸರಿಯಿಲ್ಲವೆಂದು ಅವನು, ಅವನು ಮಾಡಿದ ವರ್ಕ್ ಸರಿಯಿಲ್ಲ ಎಂದು ಇವನು ಎನ್ನುವುದು ಆಗಬಾರದು. ಅದನ್ನು ಅಡ್ಮಿನಿಸ್ಟ್ರೇಟೀವ್ಲಿ ಹೇಗೆ ನಾವು ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾನು ನಮ್ಮ ಸಹೋದ್ಯೋಗಿಗಳ ಜೊತೆ ಚರ್ಚೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ನಾನು ಭಾಷಣ ಮಾಡುವಾಗ ಮಾನ್ಯ ಮುಖ್ಯ ಮಂತ್ರಿಗಳು ಇರಲಿಲ್ಲ. ಎಲ್ಲಾ ಶಾಸಕರ ಮತ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡುವಾಗ ಶಾಸಕರ ವಿವೇಚನೆಯಂತೆ ಯಾವುದೇ ಕಾರ್ಯ ಮಾಡುವುದಕ್ಕೆ ಹಣಕಾಸಿನ ಅನುದಾನ ಯಾವುದೇ ವಿಚಾರದಲ್ಲಿ ಇಲ್ಲ. ಆದ್ದರಿಂದ, ನೀವು ನಿಮ್ಮ ಕಾಲದಲ್ಲಿ ಈ ರೀತಿ ಆಯಿತು ಎಂದು ಮುಂದೆ ಬರತಕ್ಕಂಥವರು ಯಾರೇ ಬಂದರೂ ನಿಮ್ಮ ಕಾಲದಲ್ಲಿ ಆಯಿತು ಎನ್ನುವ ಒಂದು ಒಳ್ಳೆಯ ವಾತಾವರಣ ನಿರ್ಮಾಣವಾಗಲಿ ಎಂದು ಹೇಳಿ ಪ್ರತಿ ಶಾಸಕರ ಶಾಸನಸಭಾ ಕ್ಷೇತ್ರಕ್ಕೆ, ಲೋಕಸಭಾ ಸದಸ್ಯರಿಗೆ ಕೊಡುವ ರೀತಿಯಲ್ಲಿ ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಶಾಸಕರಿಗೆ ಖರ್ಚು ಮಾಡುವುದಕ್ಕೋಸ್ಕರ ಕೊಟ್ಟರೆ ಅಲ್ಲಿ ರಸ್ತೆಗಳಾಗಲಿ ಯಾವುದೇ ಕಾಮಗಾರಿಯ ಕೆಲಸ ಮಾಡತಕ್ಕಂತಹ ವಿಚಾರಕ್ಕೆ ತಮ್ಮ ಕಾಲದಿಂದ ಇದು ಪ್ರಾರಂಭವಾಗಲಿ. ಇದು ಪಕ್ಷಾತೀತವಾದುದು. ಎಲ್ಲಾ ಶಾಸಕರು ಇದರ ಬಗ್ಗೆ ಗಮನಹರಿಸಿದ್ದಾರೆ. ಕಾಳಜಿ ವಹಿಸಿದ್ದಾರೆ. ನಿಮ್ಮ ಕಾಲದಲ್ಲಿ ಆಯಿತು ಎನ್ನುವ ನಿರ್ಧಾರಕ್ಕೆ ಬರುತ್ತಾರೆಂದು ಹೇಳುತ್ತೇನೆ. ನೀವು ಇಲ್ಲಿ ಹೊಸ ಜಿಲ್ಲೆಗಳನ್ನು ಮಾಡುವುದರಿಂದ ಒಂದು ಇತಿಹಾಸವನ್ನು ನಿರ್ಮಾಣ ಮಾಡಿದ್ದೀರಿ. ನಾನು ಮೆಚ್ಚಿದ್ದೇನೆ. ನನ್ನ ಭಾಷಣದಲ್ಲಿ ನೀವಲ್ಲದೆ ಬೇರೆ ಯಾರು ಬಂದರೂ ಶತ ಶತಮಾನಗಳು ಕಳೆದರೂ ಇದನ್ನು ಮಾಡುವುದಕ್ಕಾಗುತ್ತಿರಲಿಲ್ಲ ಎಂದು ಅದನ್ನು ಸ್ಪಷ್ಟಪಡಿಸಿದ್ದೇನೆ. ಆದರೆ ಈ ಒಂದು ವಿಚಾರದಲ್ಲೂ ನಾನಂತೂ ಈ ಶಾಸಕರಿಗೆ ತಾವು ಎಲ್ಲಾ ಕ್ಷೇತ್ರಗಳಿಗೂ ಅಭಿವೃದ್ಧಿ ಕಾರ್ಯಗಳಿಗಾಗಿ ಕನಿಷ್ಟ ಒಂದು ಕೋಟಿ ರೂಪಾಯಿ ಅನುದಾನವನ್ನು ಅವರ ವಿವೇಚನೆಗೆ ಬಿಟ್ಟಿದ್ದೇವೆ ಎನ್ನುವುದನ್ನು ತಾವು ಸ್ಪಷ್ಟವಾಗಿ ಪ್ರಕಟಣೆ ಮಾಡಬೇಕು. ನೀವು ಇದನ್ನು ಮಾಡಿದರೆ ಇತಿಹಾಸ ಸೇರಿಸುತ್ತೀರಿ ಎನ್ನುವ ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ತಾವು ತಮ್ಮ ಉತ್ತರ ಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್ :- ಮಾನ್ಯ ಅಧ್ಯಕ್ಷರೆ, ನಮಗೆ ನೀರು ಹರಿದು ಹೋಗುವುದಕ್ಕೆ ಎಷ್ಟು ಕಾಲುವೆಗಳು ಬೇಕೋ ಅದಕ್ಕಿಂತ ಹೆಚ್ಚು ಕಾಲುವೆಗಳನ್ನು ಮಾಡಿಕೊಂಡಿದ್ದೇವೆ. ಜಿಲ್ಲಾ ಪಂಚಾಯಿತಿ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್, ಮಲೆನಾಡು ಅಭಿವೃದ್ಧಿ ಮಂಡಳಿ, ಡ್ರೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್, ಬಯಲು ಸೀಮೆ ಅಭಿವೃದ್ಧಿ ಮಂಡಲಿ ಅಲ್ಲಿಯೂ ಶಾಸಕರು ಮತ್ತು ಕ್ಷೇತ್ರದ ಆಧಾರದ ಮೇಲೆ ಹಣವನ್ನು ನಾವು ಖರ್ಚು ಮಾಡುತ್ತಿರುವುದು. ಇದನ್ನೆಲ್ಲಾ ತಪ್ಪಿಸಿ ಪಾರ್ಲಿಮೆಂಟಿನಲ್ಲಿ ಸದಸ್ಯರಿಗೆ ಏನು ಕೊಡುತ್ತಾರೆ ಹಾಗೆ ಏನಾದರೂ ಕೊಡಬೇಕೆಂದಿದ್ದರೆ, ಸದನದಲ್ಲಿ ಸಮಗ್ರವಾಗಿ ಎಲ್ಲರ ಅಭಿಪ್ರಾಯ ತೆಗೆದುಕೊಂಡ ಮೇಲೆ ಅದರ ಬಗ್ಗೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ತಾವು ಅನೇಕ ಇತಿಹಾಸಗಳನ್ನು ನಿರ್ಮಾಣ ಮಾಡಿದ್ದೀರಿ. ನೀವು ಒಂದು ತೀರ್ಮಾನಕ್ಕೆ ಬನ್ನಿ. ಏನು ಒಂದು ಕೋಟಿ ರೂಪಾಯಿ ತಮ್ಮಲ್ಲಿ ಇಟ್ಟಿದ್ದೀರಿ. ಇದರ ಬಗ್ಗೆ ಸದನದ ಎಲ್ಲಾ ಸದಸ್ಯರು ಪಕ್ಷಾತೀತವಾಗಿದ್ದಾರೆ. ಏಕೆ ಇದನ್ನು ಹೇಳುತ್ತೇನೆಂದರೆ, ಚುನಾವಣೆ ಬರುತ್ತಿದೆ, ಒಂದು ವರ್ಷ ಎಂಟು ತಿಂಗಳಿಗೆ ಚುನಾವಣೆ ಇದೆ. ನಿಮ್ಮ ಕಾಲದಲ್ಲಿ ಇದು ಆಯಿತು ಎಂದು ಹೇಳುವುದಕ್ಕೆ ಎಲ್ಲಾ ಶಾಸಕರೂ ತಯಾರಾಗಿದ್ದೇವೆ. ಈ ವಿಚಾರದಲ್ಲಿ ಪ್ರತಿಯೊಬ್ಬರೂ ನಿಮ್ಮ ಪರ ಇದ್ದೇವೆ. ಅದನ್ನು ಸ್ಪಷ್ಟಪಡಿಸಿ ಇಡೀ ಸದನದಲ್ಲಿ ಇದಕ್ಕೆ ಬೆಂಬಲ ಸಿಗುತ್ತದೆ. ದಯಮಾಡಿ ತಾವು ಒಪ್ಪಲೇ ಬೇಕು. ಅಧ್ಯಕ್ಷರು ಇದಕ್ಕೆ ಬೆಂಬಲ ಕೊಡುತ್ತಾರೆ. ಏಕೆಂದರೆ ಇದು ನಿಜವಾಗಿ ನಿಮ್ಮ ಕಾಲದಲ್ಲಿ ಆಯಿತು ಎಂದು ಒಂದು ನಿರ್ಣಯವಾಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಪ್ರಾರಂಭದಲ್ಲಿ ನಿಮಗೆ ಒಂದು ಕೋಟಿ ರೂಪಾಯಿ ಪ್ರಾರಂಭ ಮಾಡುವುದಕ್ಕೆ ಆಗದೆ ಹೋದರೆ 50 ಲಕ್ಷ ರೂಪಾಯಿಗಳಿಂದ ಪ್ರಾರಂಭ ಮಾಡಿ. ಒಂದೇ ಸಾರಿ ಭಾರ ಹೊರುವುದಕ್ಕೆ ಬಿಡುವುದಿಲ್ಲ. 50 ಲಕ್ಷ ರೂಪಾಯಿಗಳನ್ನು ಈ ವರ್ಷ ಕೊಡುವುದಕ್ಕೆ ಪ್ರಾರಂಭ ಮಾಡಿ. ಅದು ಸದುಪಯೋಗವಾದರೆ ಯಾವುದು ಇಟ್ಟುಕೊಳ್ಳಬೇಕು ಯಾವುದು ಬಿಡಬೇಕು ಎನ್ನುವುದನ್ನು ಯೋಚನೆ ಮಾಡೋಣ.

ಶ್ರೀ ಜೆ. ಹೆಚ್. ಪಟೇಲ್ :- ಈಗಾಗಲೇ ಈ ವರ್ಷದ ಬಡ್ಜೆಟ್‌ನ್ನು ನಾವು ಅಪ್ರೂವ್ ಮಾಡುತ್ತಿದ್ದೇವೆ. ನಮ್ಮ , ನಿಮ್ಮ ಉದ್ದೇಶ ಎಲ್ಲರ ಉದ್ದೇಶ ನಾವು ಆರಿಸಿ ಬಂದಂತಹ ಕ್ಷೇತ್ರಗಳಿಗೆ ಕೆಲಸವಾಗಬೇಕು. ನಮ್ಮ ಜನರಿಗೆ ಕೆಲಸವಾಗಬೇಕು, ಜನರಿಗೆ ಕೆಲಸವಾಗ ಬೇಕೆನ್ನುವ ಸದುದ್ದೇಶದಿಂದ ಹಣ ಯಾವ ಮೂಲಕ ಖರ್ಚು ಮಾಡುವುದು ಒಳ್ಳೆಯದು ಎನ್ನುವುದನ್ನು ಚರ್ಚೆ ಮಾಡಿ, ಮೊದಲೇ ಹೇಳಿದ್ದೇನೆ, ಬೋರ್ಡ್‌ಗಳನ್ನು ಇಟ್ಟು ಕೊಳ್ಳಬೇಕೇ ಅಥವ ಬೇಡವೇ, ಅದನ್ನು ತಾವು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ :- ವಿಡಿಐಎಸ್ ದು 200 ಕೋಟಿ ರೂಪಾಯಿ ತಮಗೆ ಬರುತ್ತದೆ. ನೀವು 120 ಕೋಟಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್ :- ವಿಧಾನ ಸಭೆಯಲ್ಲಿ ಚರ್ಚೆ ಮಾಡದೆ ಇಂತಹ ಒಂದು ಮಹತ್ತರವಾದ ನಿರ್ಣಯವನ್ನು ಮುಂದಿನ ಆಯವ್ಯಯ ಪಟ್ಟಿ ಬರುವುದಕ್ಕಿಂತ ಮುಂಚೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಬೋರ್ಡ್‌ಗಳನ್ನು ತೆಗೆಯಬೇಕು, ಬಿಡಬೇಕೇ ಎಂದು. ಬೋರ್ಡ್‌ಗಳು ರಚನೆಯಾಗಿರುವುದು ಸರ್ವೆ ರಿಪೋರ್ಟ್

ಆಧಾರದ ಮೇಲೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ತಮಗೆ 7,594 ಕೋಟಿ ರೂಪಾಯಿ ವಿ ಡಿ ಐ ಎಸ್ ಪ್ರೋಗ್ರಾಂನಲ್ಲಿ 500 ಕೋಟಿ ರೂಪಾಯಿ ಹೆಚ್ಚು ಕಡಿಮೆ ಸಿಗಬಹುದು. 230 ಕೋಟಿ ಬೋನಸ್ ಸಿಗುವಾಗ, 50-50 ಲಕ್ಷ ರೂಪಾಯಿ ಆದರೂ ಪ್ರಾರಂಭ ಮಾಡಿ. ಪುಕ್ಸಟ್ಟಿ ಬಂದಿದ್ದು ಹಂಚುವುದಕ್ಕೆ ತಯಾರಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಗ್ರಾಮ ಪಂಚಾಯಿತಿ ಇದು ಯಾವುದೂ ಶಾಸಕರಿಗೆ ಸಂಬಂಧವಿಲ್ಲ. ಶಾಸಕರಿಗೆ ಕೇಳುವವರೂ ಇಲ್ಲ, ಇದು ಸ್ಪಷ್ಟ. ಆ ದೃಷ್ಟಿಯಿಂದ ಶಾಸಕರ ಕೈಯಲ್ಲಿ ಯಾವುದೇ ರಸ್ತೆಗೆ ಹೋದರೆ ರಸ್ತೆ ಮಾಡಿಸಬಹುದು, ಒಂದು ಸಣ್ಣ ಕಟ್ಟಡ ಕಟ್ಟಿಸಬಹುದು, ಒಂದು ಕೊಳವೆ ಬಾವಿ ಹಾಕಿಸುವುದು, ಇದಕ್ಕೆ ಎಲ್ಲರೂ ತಯಾರಾಗಿದ್ದಾರೆ, ಇದು ಪಕ್ಷಾತೀತವಾಗಿದೆ. ನಾಳೆ ಚುನಾವಣೆಗೆ ಹೋಗಬೇಕು. ಚುನಾವಣೆಗೆ ಹೋಗುವುದಕ್ಕೆ ಇದು ತಮ್ಮಿಂದ ಆರಂಭವಾಗಬೇಕು.

ಶ್ರೀ ಜೆ. ಹೆಚ್. ಪಟೇಲ್ :- ಈ ವರ್ಷಕ್ಕೆ ಆಗುವುದಕ್ಕೆ ಸಾಧ್ಯವೇ ಇಲ್ಲ.

ಶ್ರೀ ಸಿದ್ಧರಾಮಯ್ಯ :- 286 ಕೋಟಿ ಕೇಂದ್ರದಿಂದ ಬರುವ ಹಣ ಕಡಿಮೆಯಾಗುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್ :- ಚರ್ಚೆ ಮಾಡೋಣ.

(ಈ ಹಂತದಲ್ಲಿ ಶ್ರೀಯುತರುಗಳಾದ ವಾಟಾಳ್ ನಾಗರಾಜ್, ಜಿ.ವಿ. ಶ್ರೀರಾಮರೆಡ್ಡಿ ಮತ್ತು ಕೆ. ಎಸ್. ಪುಟ್ಟಣ್ಣಯ್ಯ ಇವರುಗಳು ಸದನದ ಮುಂದಿನ ಬಾವಿಯಲ್ಲಿ ಬಂದು ಧರಣಿ ಕುಳಿತರು.)

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ಒಪ್ಪಿಕೊಂಡು ಆಮೇಲೆ ಏನು ಮಾಡುವುದು? ವಾಟಾಳ್ ನಾಗರಾಜ್‌ರವರು ಎತ್ತಿರತಕ್ಕಂತಹ ಪ್ರಶ್ನೆ ಇದು, ಯಡಿಯೂರಪ್ಪನವರು ವಿ ಡಿ ಐ ಎಸ್ ನಲ್ಲಿ 250 ಕೋಟಿ ರೂಪಾಯಿಗಳು ಬರುತ್ತದೆ ಎಂದು ಹೇಳಿದರು, ಅದರ ಬಗ್ಗೆ ನಾನು ಆಗಲೇ ಪ್ರಸ್ತಾಪ ಮಾಡಿದ್ದೇನೆ. ನಮಗೆ ಬರತಕ್ಕಂತಹ ಈ ವರ್ಷ ಎಷ್ಟು ಗ್ರ್ಯಾಂಟ್ಸ್ ಬರುತ್ತಿದೆ ಅಷ್ಟೇ ಗ್ರ್ಯಾಂಟ್ಸ್ ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದ್ದಾರೆ. ಪ್ಲ್ಯಾನ್ ಒಂದು ಕಡೆ ಹೆಚ್ಚಾಗಬೇಕು, ಹಳೆಯ ಪ್ಲ್ಯಾನ್ ಸೈಸ್ ಹೆಚ್ಚು ಮಾಡಿಕೊಂಡು ಕೇಂದ್ರದಿಂದ ಬರತಕ್ಕಂತಹ ಪ್ಲ್ಯಾನ್ ಅಸಿಸ್ಟೆನ್ಸ್ ಮತ್ತು ಲೋನ್ ಕಡಿಮೆ ಮಾಡಿದರೆ ಪ್ಲ್ಯಾನ್ ಕಟ್ ಮಾಡಬೇಕಾಗುತ್ತದೆ. ಆ ಕಾರಣದಿಂದ ನಮಗೆ ಬರತಕ್ಕಂತಹ 196 ಕೋಟಿ ಖೋತಾ ಇರುವುದರಿಂದ ಆ 200 ಕೋಟಿ ರೂಪಾಯಿ ಬರುವುದು ನಮಗೆ ಖೋತ ವೈಪ್ ಆಫ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಹೊರತು ಯಾವುದೇ ಹೊಸ ಕಾರ್ಯಕ್ರಮಗಳನ್ನು ಮಾಡುವುದಕ್ಕೆ ಈ ಹಂತದಲ್ಲಿ ಸಾಧ್ಯವಾಗುವುದಿಲ್ಲ. ನೀವು ಎತ್ತಿರತಕ್ಕಂತಹ ಅಭಿಪ್ರಾಯವನ್ನು ಮುಂದೆ ಚರ್ಚೆ ಮಾಡೋಣ. ಇದರ ಬಗ್ಗೆ ಏನು ತೀರ್ಮಾನ ಮಾಡಬೇಕೆಂದು ಎಲ್ಲಾ ಶಾಸಕರ ಅಭಿಪ್ರಾಯ ತೆಗೆದುಕೊಂಡು ತೀರ್ಮಾನ ಮಾಡೋಣ. ನೀವೆಲ್ಲಾ ಅನುಭವ ಇರುವವರು, ಸರ್ಕಾರ ನಡೆಸಿದವರು ಬಡ್ಜೆಟ್ ಮಾಡಿ, ಪ್ಲ್ಯಾನ್ ಆಗಿ, ಸೆಕ್ಟೋರಲ್ ಅಲೋಕೇಷನ್ ಆದ ಮೇಲೆ 300 ಕೋಟಿ ರೂಪಾಯಿ ತೆಗೆದು ಇಟ್ಟು ಬಿಡಿ ಎಂದು ಹೇಳಿದರೆ, ಎಲ್ಲಿಂದ ಕೊಡುವುದಕ್ಕೆ ಬರುತ್ತದೆ. Where will it come from?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ವಿ ಡಿ ಐ ಎಸ್ ನಿಂದ ಬರತಕ್ಕಂತಹ ಅಮೌಂಟ್ ಬಗ್ಗೆ ನಾನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ ಅದು ಹಾಗೆ ಇಟ್ಟಿದ್ದೇನೆಂದು ಹೇಳಿದಿರಿ.

ಅಧ್ಯಕ್ಷರು :- ವಿ ಡಿ ಐ ಎಸ್ ಈ ವರ್ಷದ್ದು ಇರುತ್ತದೆ, ಪ್ರತಿ ವರ್ಷ ವಿಡಿಐ ಎಸ್ ಇರುವುದಿಲ್ಲ. ಈ ವರ್ಷ ಶಾಸಕರಿಗೆ ಇಂಟ್ರಡ್ಯೂಸ್ ಮಾಡಿದರೆ, ಅದನ್ನು ಪ್ರತಿ ವರ್ಷ ಕೊಡಬೇಕಾಗುತ್ತದೆ. You will have to debate that matter in detail.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಈ ವರ್ಷ ಆಲ್‌ರಿಡಿ ಅಲೋಕೇಷನ್ ಮಾಡಿದ್ದೇವೆ ಅದಕ್ಕಾಗಿ ಹಣ ಬೇರೆ ಕಡೆಯಿಂದ ಒದಗಿಸುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಅಡಿಷನಲ್ ಅಮೌಂಟ್ ನಿಮಗೆ ಬರುವುದರಿಂದ ನಿಮಗೆ ಕನ್‌ಸಿಡರ್ ಮಾಡುವುದಕ್ಕೆ ಸಾಧ್ಯವಿದೆ. ಆ ಹಣ ಬಾರದೆ ಇದ್ದರೆ ಹೇಳಬಹುದಾಗಿತ್ತು. ನೀವು ಈಗಾಗಲೇ ಅಲೋಕೇಟ್ ಮಾಡಿದ್ದೀರಿ. ಮತ್ತೆ ಅದನ್ನು ರೆಡ್ಯೂಸ್ ಮಾಡಿದರೆ ತಪ್ಪಾಗುತ್ತದೆ ಎಂದು ಹೇಳಬಹುದು.

ಶ್ರೀ ಸಿದ್ದರಾಮಯ್ಯ :- ಮಾನ್ಯ ಅಧ್ಯಕ್ಷರೆ, 196 ಕೋಟಿ ರೂಪಾಯಿ ಖೋತಾ ಏನು ಇದೆ ಅದನ್ನು ಸರಿದೂಗಿಸಲು ನಾನು ಹೇಳಿದೆ, ಸುಮಾರು 200 ಕೋಟಿ ರೂಪಾಯಿ ಬರಬಹುದು, 196 ಕೋಟಿ ರೂಪಾಯಿ ಖೋತಾ ಮಾಡುವಾಗ ಅದು ಬಂದರೆ ಸರಿಹೋಗುತ್ತದೆ ಎಂದು ಹೇಳಿದ್ದೇನೆ. ಅದು ವಿ ಡಿ ಐ ಎಸ್ ಪ್ರತಿ ವರ್ಷ ಬರುವುದಿಲ್ಲ. ಈಗ ಎಂ ಎಲ್ ಎ ಗಳಿಗೆ ನಬಾರ್ಡ್‌ದಿಂದ ಸುಮಾರು ಮುನ್ನೂರು ಚಿಲ್ಲರೆ ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದೇವೆ. ಅವರು ಅವರ ಕ್ಷೇತ್ರಗಳಲ್ಲಿ ತೆಗೆದುಕೊಳ್ಳಬಹುದಾದ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಹಾಯವಾಗಿದೆ. ಲೋಕೋಪಯೋಗಿಯಿಂದ ಆಗಬೇಕಾದ ಕೆಲಸಗಳು ಆಗಿವೆ. ಇದರ ಜೊತೆಗೆ ಮೂಲ ಸೌಲಭ್ಯ ಅಭಿವೃದ್ಧಿಯ ಒಂದು ಹಣಕಾಸು ನಿಗಮವನ್ನು ಮಾಡುತ್ತಿದ್ದೇವೆ. ಅದನ್ನು ಮಾಡಿ ಶೇ. 5ರಷ್ಟನ್ನು ಸೆಸ್ ಸೇಖರಣೆ ಮಾಡುವುದನ್ನು ಕೇವಲ ಎರಡು ವರ್ಷಗಳವರೆಗೆ ಮಾತ್ರ ಇದನ್ನು ಮಾಡಬೇಕೆಂದು ಮಾಡಿದ್ದೇವೆ. ಇದರಿಂದ ಸುಮಾರು 200 ಕೋಟಿ ರೂಪಾಯಿಗಳು ಶೇಖರಣೆಯಾಗುತ್ತದೆ. ಅದನ್ನು ಶೇರು ಬಂಡವಾಳವಾಗಿ ಇಟ್ಟುಕೊಂಡು, 800 ಕೋಟಿ ರೂಪಾಯಿಗಳನ್ನು ಮಾರುಕಟ್ಟೆಯಿಂದ ಎತ್ತಿ, ಸುಮಾರು ಮೂರು ವರ್ಷಗಳಲ್ಲಿ 800 ಕೋಟಿ ರೂಪಾಯಿಗಳನ್ನು ರಸ್ತೆ, ಸೇತುವೆಗಳಿಗಾಗಿ 90% of the total amount that we are going to collect ಅದಕ್ಕೆ ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇನೆ. ಎಂ ಎಲ್ ಎ ಗಳು ತಮ್ಮ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸಗಳನ್ನು ಮಾಡುವ ಉದ್ದೇಶ ಇದರಲ್ಲಿ ಇದೆ, ಮತ್ತು ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಮಾಡುವ ಸಲುವಾಗಿ ಈ 800 ಕೋಟಿ ರೂಪಾಯಿಗಳನ್ನು ಅದಕ್ಕೋಸ್ಕರ ಇಟ್ಟಿದ್ದೇವೆ. ಈ ನಿಗಮವನ್ನು ಮಾಡಿರುವುದು ಕೂಡ ಇದೇ ಉದ್ದೇಶಕ್ಕಾಗಿಯೇ. ಈ ವರ್ಷದ ಆಯವ್ಯಯದಲ್ಲಿ ನೀವು ಹೇಳಿರತಕ್ಕ ಸಲಹೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ಈಗಾಗಲೇ ಸೆಂಟ್ರೆಲ್ ಅಲೋಕೇಷನ್ ಆಗಿದೆ. ಯಾವುದೇ ಇಲಾಖೆಯಲ್ಲಿ ಕಡತ ಮಾಡಲು ಆಗುವುದಿಲ್ಲ ಬಹಳ ಕಷ್ಟವಾಗುತ್ತದೆ. ಇದನ್ನು ಈಗ ಚರ್ಚೆ ಮಾಡಲು ಆಗುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ತಿಳಿಸುತ್ತೇನೆ.

ಅಧ್ಯಕ್ಷರು :- ಏನು ಶ್ರೀರಾಮರೆಡ್ಡಿಯವರೆ, what is the object? ವಾಟಾಳ್ ನಾಗರಾಜ ಅವರು he is the leader of his party. You are a member of a national party. Any decision you take has lot of implications. ಅವರು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳಬಹುದು. ಆದರೆ ನೀವು ಆ ರೀತಿ ನಿರ್ಣಯ ತೆಗೆದುಕೊಳ್ಳಲು ಬರುವುದಿಲ್ಲ.

ಅವರ ಪಾರ್ಟಿಯಲ್ಲಿ ಅವರು ಹೇಳಿದ್ದೇ ಕೊನೆ, ಆದರೆ ನೀವು ಯೋಚನೆಮಾಡಿ ಕೆಲಸ ಮಾಡಬೇಕು, ನಿಮ್ಮ ಪಾರ್ಟಿಯಲ್ಲಿ ನೀವು ತೆಗೆದುಕೊಂಡ ನಿರ್ಣಯವೇ ಕೊನೆಯದಲ್ಲ. ನನ್ನ ಪರವಾಗಿ ನೀವು ನಿಂತಿದ್ದೀರಿ ಎಂದು ನನಗೆ ಗೊತ್ತು. ಇವರೆಲ್ಲರೂ ಜಾಣರು ನಿಮ್ಮನ್ನು ನಿಲ್ಲಿಸಿ ಅವರು ಕುಳಿತುಕೊಂಡಿದ್ದಾರೆ.

ಶ್ರೀ ಜೆ. ಹೆಚ್. ಪಟೀಲ್ :- ಮಾನ್ಯ ಅಧ್ಯಕ್ಷರೆ, ಈಗ ಒಂದು ಅಂತಿಮ ಘಟಕ್ಕೆ ಬರೋಣ. ಸಾಕಷ್ಟು ಅನುಭವ ಇರುವ ಮೂರು ಜನ ಶಾಸಕರು ಒಂದು ಐಡಿಯಾ ಕೊಟ್ಟಿದ್ದಾರೆ. ಆ ಐಡಿಯಾ ಬಗ್ಗೆ ಚರ್ಚೆ ಮಾಡೋಣ ಅದರ ಸಾಧಕ-ಬಾಧಕ ಏನು ಎಂದು ನೋಡಣ. ಅವರ ಕ್ಷೇತ್ರಗಳಲ್ಲಿ ಮಾಡದೆ ಇದ್ದರೆ ಅದರ ಅವಶ್ಯಕತೆ ಇದ್ದರೆ ನಾವು ಮಾಡೋಣ. ಅದರ ಕನೆಕ್ಟಡ್ ಪ್ರಾಬ್ಲಮ್‌ಗಳನ್ನು ನಾವು ಮುಂದಿನ ವರ್ಷದ ಬಜೆಟ್‌ಗಿಂತ ಮುಂಚೆ ಚರ್ಚೆ ಮಾಡೋಣ ಎಂದು ಹೇಳಿದರೂ ವಿಧಾನ ಸೌಧದಲ್ಲಿ ಚರ್ಚೆ ಇಲ್ಲದ ನೀವು ಹೇಳಿದ್ದನ್ನು ಒಪ್ಪಲು ಆಗುತ್ತದೆಯೇ? ನಾವು ಹೇಳುವುದನ್ನು ನೀವು ಒಪ್ಪಬೇಕು ಇಲ್ಲದಿದ್ದರೆ ಧರಣಿ ಮಾಡುತ್ತೇವೆ ಎಂದರೆ ಅದು ಪ್ರಜಾತಂತ್ರವೇ?

ಅಧ್ಯಕ್ಷರು :- ನೀವು ಪ್ರತಿಪಾದನೆ ಮಾಡಿದ ಸಲಹೆಯನ್ನು ಅವರು ಮಾನಸಿಕವಾಗಿ ಚರ್ಚೆ ಮಾಡಲು ಸಿದ್ಧರಾಗಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ :- ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭೆಯಲ್ಲಿ ಅವರ ಜನರಿಗೆ ಬೇಕಾದಂತಹ ಭೂ ಕಂದಾಯ ಕಾಯಿದೆ ಬಗ್ಗೆ ತಿದ್ದುಪಡಿ, ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ತಿದ್ದುಪಡಿ, ಸರ್ಕಾರಿ ಕಾಯಿದೆಗೆ ತಿದ್ದುಪಡಿ ಎಲ್ಲವನ್ನೂ ಮಾಡಿದ್ದೀರಿ, ಇದನ್ನೆಲ್ಲಾ ಚರ್ಚೆ ಮಾಡಬೇಕು ಅದನ್ನೆ ಚರ್ಚೆ ಮಾಡಿಲ್ಲ, ಈ ಸರ್ಕಾರ ಇನ್ನು ಇದರ ಬಗ್ಗೆ ಚರ್ಚೆ ಮಾಡುತ್ತಾರೆಯೇ?

ಅಧ್ಯಕ್ಷರು :- ಇದೆಲ್ಲಾ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬೇಡ. ವಾಟಾಳ್ ರವರ ಈ ಬಜೆಟ್ ಪಾಸ್ ಆಗುವಾಗ ನೀವು ಅಲ್ಲಿ ನಿಂತಿದ್ದರೆ ನನ್ನ ಮನಸ್ಸಿಗೆ ಬೇಸರವಾಗುತ್ತದೆ. ದಯಮಾಡಿ ತಾವು ಕುಳಿತುಕೊಳ್ಳಬೇಕು. ತಾವು ಕುಳಿತುಕೊಳ್ಳಿ ಇದು ಚೆನ್ನಾಗಿ ಇರುವುದಿಲ್ಲ. ತಾವು ದಯಮಾಡಿ ಆಸೀನರಾಗಿ ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ತಾವು ಮಾರ್ಗದರ್ಶನ ಕೊಡಬೇಕಾದವರು ನೀವೆ ಹೀಗೆ ಮಾಡಿದರೆ ಹೇಗೆ?

ಶ್ರೀ ಜೆ. ಹೆಚ್. ಪಟೀಲ್ :- ಮಾನ್ಯ ಅಧ್ಯಕ್ಷರೆ, ಇದು ಆದ ಮೇಲೆ ವಿರೋಧ ಪಕ್ಷದವರು ಎಲ್ಲರೂ ಕೂಡಿ ಸದನದಲ್ಲಿ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಗೋಧಿ ಮತ್ತು ಗೋಧಿ ಉತ್ಪನ್ನಗಳ ಮೇಲೆ ಹಾಕಿರುವ ಶೇ. 2 ತೆರಿಗೆಯನ್ನು ಮಾನ್ಯ ಹಣಕಾಸಿನ ಮಂತ್ರಿಗಳು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಮಹಾರಾಷ್ಟ್ರದವರು ಹಾಕಿದ್ದಾರೆ ಎಂದು ತಾವು ಹೇಳುತ್ತೀರಿ, ಆದರೆ ಅವರು ಸ್ಪಷ್ಟವಾಗಿ ಹೇಳಿದ್ದಾರೆ, ಇದು ಸಾಧಾರಣ ಗೋಧಿ ಬಳಕೆ ಮಾಡುವವರಿಗೆ ಬರುವುದಿಲ್ಲ ಎಂದು. ಅದರ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ನಾನು ಮಾತನಾಡುವಾಗ ಹೇಳಿದೆ, ಆಂಧ್ರಪ್ರದೇಶದಲ್ಲಿ ಈ ತೆರಿಗೆ ಹಾಕಿದಾಗ 20 ಮಿಲ್‌ಗಳು ಮುಚ್ಚಿದ್ದವು ಎಂದು. ಕರ್ನಾಟಕ ರಾಜ್ಯದಲ್ಲಿ ಮುಚ್ಚಿದ್ದರೆ ಮುಚ್ಚಲಿ ಅದಕ್ಕೆ ನಾವು ಸ್ಪಂಧಿಸುವುದಿಲ್ಲ ಎಂದರೆ ಕೊನೆಯ ನಿರ್ಧಾರವನ್ನು ನಾವು ತಮಗೆ ಬಿಡುತ್ತೇವೆ. ನಾವು ಎಲ್ಲರೂ

ಅಷ್ಟಾಗಿ ಕೇಳಿದ್ದೇವೆ, ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಇದರ ಪರಿಣಾಮ ಕನ್‌ಸ್ಯೂಮರ್ ಮೇಲೆ ಬಹಳ ಬೀಳುತ್ತದೆ. ಇದು ಒಂದು ಒಳ್ಳೆಯ ರಾಜ್ಯ ಎನ್ನಿಸಿಕೊಳ್ಳಬೇಕಾದರೆ ನೀವು ಅಪರೋಕ್ಷ ತೆರಿಗೆಯನ್ನು ಕಡಿಮೆ ಮಾಡಬೇಕು. ತಾವು 8 ರಿಂದ 4 ಮಾಡಿದ್ದೇವೆ ಎಂದು ಹೇಳಿದ್ದೀರಾ, ಆದರೆ ನೀವು ಮಾಡಿದು ಬಲ್ಬ್ ಒಂದನ್ನು ಬಿಟ್ಟು ಬೇರೆ ಯಾವ ಜನಪಯೋಗಿ ವಸ್ತುಗಳ ಮೇಲೆ ಕಡಿಮೆ ಮಾಡಿಲ್ಲ. ಅವುಗಳನ್ನು ನಾನು ಇಲ್ಲಿ ಆರಿಸಿಕೊಂಡು ಹೇಳುತ್ತೇನೆ, ಕರ್ಪೂರ, ದಂತ ಮತ್ತು ದಂತ ಮರದ ವಸ್ತುಗಳು, ಸೊಳ್ಳೆ ನಿವಾರಕಗಳು, ಲೆಕ್ಕದ ಪುಸ್ತಕಗಳು, ಪೇಪರ್ ಎನ್‌ವೆಲಪ್‌ಗಳು, ಡೈರಿಗಳು ಇವುಗಳನ್ನು ಯಾರು ಉಪಯೋಗ ಮಾಡುತ್ತಾರೆ, ಮತ್ತು ಕಛೇರಿ ಡೆಸ್ಕ್ ಸಾಮಾಗ್ರಿಗಳು ಪಂಚಿಂಗ್ ಮಿಷಿನ್‌ಗಳು, ಟೈಲರಿಂಗ್ ಸಾಮಗ್ರಿಗಳು ಇಷ್ಟು ವಸ್ತುಗಳ ಮೇಲೆ ಮಾತ್ರ ತಾವು ಕಡಿಮೆ ಮಾಡಿದ್ದು, ಇನ್ನು ಆಟಿಕೆ ಸಾಮಾನುಗಳು ಅದರಲ್ಲಿ ಎಲೆಕ್ಟ್ರಾನಿಕ್ ಮತ್ತು ವಿದ್ಯುತ್ ಚಾಲಿತ ಆಟಿಕೆಗಳು ಸೇರಿದಂತೆ ಸಾಧಾರಣ ಆಟಿಕೆಯ ಸಾಮಾನುಗಳ ಮೇಲೆ ಜಾಸ್ತಿ ಮಾಡಿದ್ದೀರಾ. ನಮ್ಮನ್ನು ಏನು ನೀವು ಆಟಿಕೆ ಸಾಮಾನುಗಳು ಎಂದು ತಿಳಿದಿದ್ದೀರಾ ಎಂದು ಅನುಮಾನ ಬರುತ್ತದೆ. ದಯವಿಟ್ಟು ಇವನ್ನು ನೀವು ಪುನರ್ ಪರಿಶೀಲನೆ ಮಾಡಬೇಕು. ನೀವು ರಿವಿಜನ್ ಮಾಡಿ ಸುಮಾರು ಶೇಕಡ 8 ರಿಂದ 10 ಮಾಡಿರುವುದು ಬಹಳ ಹೊರೆಯಾಗುತ್ತದೆ. ಇದನ್ನು ತಾವು ಖಂಡಿತವಾಗಿ ಗೋಧಿ ಮತ್ತು ಗೋಧಿ ಉತ್ಪನ್ನಗಳ ಮೇಲೆ ತೆರಿಗೆಯನ್ನು ವಾಪಸ್ಸು ತೆಗೆದುಕೊಳ್ಳಬೇಕು. ಅದು ಬರೀ ಶೇಕಡ 2 ರಷ್ಟು ಆಗುವುದಿಲ್ಲ. ಅದರ ಮೇಲೆ ಟರ್ನ್ ಓವರ್ ತೆರಿಗೆ ಬೀಳುತ್ತದೆ. ಅಲ್ಟಿಮೇಟ್ಲಿ ಕನ್‌ಸ್ಯೂಮರ್ಸ್ ಅದನ್ನು ಭರಿಸಬೇಕಾಗುತ್ತದೆ. ಯಾರೊ ಮಿಲ್ ಮಾಲೀಕರು ಹೇಳುತ್ತಾರೆ ಅದನ್ನು ಕೇಳಬೇಡಿ. ನಮಗೆ ಅಸೋಸಿಯೇಶನ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಭಾವನೆಯನ್ನು ಇಟ್ಟುಕೊಳ್ಳಬಾರದು. ಇನ್ನು ನಾವು ವಿಧಾನ ಸಭಾ ಕ್ಷೇತ್ರಕ್ಕೆ ಏಕೆ ಹಣ ಕೇಳುತ್ತಿದ್ದೇವೆ ಎಂದರೆ, ಸಂಸತ್ ಸದಸ್ಯರಿಗೆ ಕೊಟ್ಟಿರುವ ಒಂದು ಕೋಟಿ ರೂಪಾಯಿ ಅದು ಡೆವಲಪ್‌ಮೆಂಟ್ ಗ್ರಾ್ಯಂಟ್‌ನಿಂದ, ಅದನ್ನು ಯಾವ ರೀತಿಯಲ್ಲಿ ಬೇಕಾದರೂ ವಿನಿಯೋಗ ಮಾಡಬಹುದು ಕೇಳುವವರು ಇಲ್ಲದಂತಹ ಸ್ಥಿತಿ ನಿರ್ಮಾಣ ಆಯಿತು. ನಮಗೆ ತಾವು ಶಾಸಕರ ಪಟ್ಟಿಯನ್ನು ಮಾಡಲು ಕೊಟ್ಟಿದ್ದಿರಿ ನಾವು ಎಲ್ಲಾ ನಿಬಂಧನೆಗಳನ್ನು ಅನುಸರಿಸಿ ಮಾಡಬೇಕು, ಇ ಎ ಎಸ್ ಗ್ರಾ್ಯಂಟ್ ಹಿಡಿದು ಎಲ್ಲವನ್ನು ಹಿಡಿದು ಮಾಡಬೇಕು. ನಮಗೆ ಸ್ವತಂತ್ರ ಇಲ್ಲ, ಅವರು ಶಿಶುವಿಹಾರಗಳನ್ನು ಕಟ್ಟಿಸಿಕೊಳ್ಳಬಹುದು, ಕಲ್ಯಾಣ ಮಂಟಪವನ್ನು ಕಟ್ಟಿಸಿಕೊಳ್ಳಬಹುದು, ಅಥವಾ ಹಾಸ್ಟೆಲ್ ಕಟ್ಟಬಹುದು. ಇವತ್ತು ಸಂಸತ್ ಸದಸ್ಯರು ನಾವು ಇಷ್ಟು ಕೆಲಸಗಳನ್ನು ನಮ್ಮ ಜಿಲ್ಲೆಯಲ್ಲಿ ಮಾಡಿದ್ದೇವೆ ಎಂದು ಪ್ರಿಂಟ್ ಹಾಕಿಸಿಕೊಳ್ಳುತ್ತಿದ್ದಾರೆ. ನಾವು ಶಾಸಕರು ಅವರಿಗೆ ಹೇಳುವ ಸ್ಥಿತಿ ಇಲ್ಲ. ನಾವು ಕೊಡುವುದರಲ್ಲಿಯೇ ಅವರಿಗೆ ಶೇರ್ ಕೊಡಬೇಕು. ಒಂದು ಕೋಟಿ ರೂಪಾಯಿಯನ್ನು ನಿಯಮದ ಪ್ರಕಾರ ಹಂಚಿಕೆ ಮಾಡಿ ಎಂದು ಹೇಳಿದರೆ ಹಂಚಿಕೆ ಮಾಡಲು ತಯಾರು ಇಲ್ಲ. ಕ್ಷೇತ್ರಾವಾರು ಯಾರು ಹಂಚಿಕೆ ಮಾಡುತ್ತಾ ಇಲ್ಲ. ಅವರು ಏಮ್ಸ್ ಮತ್ತು ಪ್ಯಾನ್ಸಿಗೆ ಹಂಚುತ್ತಾ ಇದ್ದಾರೆ. ಜಿಲ್ಲೆಗೆ ಬರುವ ಅಭಿವೃದ್ಧಿ ಹಣವನ್ನು ಅವರೆ ಬಳಸುತ್ತಾ ಇದ್ದಾರೆ. ಎ ಪಿ ಎಂ ಸಿ ಗ್ರಾ್ಯಂಟ್‌ನಿಂದ ತಾವು ನಮಗೆ ಕೊಡುತ್ತಿರುವ 15 ಲಕ್ಷ ರೂಪಾಯಿಗಳ ಗ್ರಾ್ಯಂಟ್ ಈ ವರ್ಷ ಮುಗಿಯುತ್ತದೆ. ಎಂ ಎಲ್ ಎ ಅವರ ಕ್ಷೇತ್ರಗಳಿಗೆ ಕೊಡುವ ಎಂ ಎಲ್ ಎ ಗ್ರಾ್ಯಂಟ್ ಈ ವರ್ಷ ಮುಗಿದು ಹೋಗುತ್ತದೆ. ಮುಂದಿನ ವರ್ಷದಿಂದ 50 ಲಕ್ಷ ಅಥವಾ ಒಂದು ಕೋಟಿ ರೂಪಾಯಿಗಳ ಕೆಲಸ ಬಂದಾಗ ಅದು ಆಗದ ಸ್ಥಿತಿ ಬಂದಾಗ ನಾವು ಶಾಸಕರು ಹೇಗೆ ಚುನಾವಣೆಗೆ ಹೋಗುವುದು ಎಂದು ತಾವು ಯೋಚನೆ ಮಾಡಬೇಕು.

ನಾವು ಇದನ್ನು ಮುಂದಿನ ವರ್ಷ ಮಾಡುತ್ತೇವೆ ಎಂದು ಹೇಳಿದರೆ, ನವೆಂಬರ್‌ನಲ್ಲಿ ಸರ್ಕಾರದ ಅಧಿಕಾರ ಮುಗಿಯುತ್ತದೆ ಆ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸ್ವಲ್ಪ ಕಷ್ಟವಾಗುವುದರಿಂದ ಅದನ್ನು ಮಧ್ಯದಲ್ಲೇ ತೀರ್ಮಾನ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಅಧ್ಯಕ್ಷರೆ, ನಮ್ಮ ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುರ್ತು ಕೆಲಸ ಎಂದು ಮಾಡಿದ್ದಾರೆ, ಸುಮಾರು 6 ಕೋಟಿ ರೂಪಾಯಿಗಳನ್ನು ಈ ತನಕ ಪೇಮೆಂಟ್ ಮಾಡಬೇಕಾಗಿತ್ತು, ದಯವಿಟ್ಟು ಮಾನ್ಯ ಹಣಕಾಸಿನ ಮಂತ್ರಿಗಳಿಗೆ ಅನೇಕ ತಿಂಗಳುಗಳಿಂದ ಹೇಳುತ್ತಾ ಇದ್ದೇವೆ. ಮುಂದಿನ ವರ್ಷ ಯಾವುದೇ ತುರ್ತು ಕೆಲಸ ಮಾಡಲು ಯಾರು ತಯಾರು ಇಲ್ಲ. ಇಂತಹ ಪರಿಸ್ಥಿತಿ ಅಲ್ಲಿ ಉಂಟಾಗಿದೆ. ಅದಕ್ಕಾಗಿ ದಯವಿಟ್ಟು ಪೇಮೆಂಟ್ ಮಾಡಬೇಕೆಂದು ತಮ್ಮ ಮುಖಾಂತರ ಕೇಳಲು ಇಷ್ಟಪಡುತ್ತೇನೆ. ಹಿಂದುಳಿದ ವರ್ಗದವರಿಗೆ ಹಾಸ್ಟೆಲ್ ಬಗ್ಗೆ ಹೇಳಬೇಕಾದರೆ ಈಗಾಗಲೇ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ, ಕರ್ನಾಟಕ ರಾಜ್ಯದಲ್ಲಿ 5 ಕೋಟಿ ರೂಪಾಯಿಗಳ ಬಾಕಿ ಇದೆ. ನಮ್ಮ ಕ್ಷೇತ್ರದಲ್ಲಿ ಒಂದು ಹಾಸ್ಟೆಲ್ ಆಗಿದೆ ಅದಕ್ಕೆ 25 ಲಕ್ಷ ರೂಪಾಯಿಗಳಲ್ಲಿ ಇದುವರೆಗೆ ಒಂದು ಪೈಸೆ ಪೇಮೆಮಟ್ ಆಗಿಲ್ಲ. ದಯವಿಟ್ಟು ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಈಗಾಗಲೇ ನಾನು ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ, ಗೋಧಿ ಹಿಟ್ಟು, ಮೈದಾ ಇವುಗಳ ಮೇಲೆ ಕ್ವಿಂಟಾಲಿಗೆ 56 ರೂಪಾಯಿ ಏನು ತೆರಿಗೆ ಹಾಕಿದ್ದೀರಿ ಅದನ್ನು ಕರ್ನಾಟಕ ರಾಜ್ಯದ ಜನರ ಹಿತದೃಷ್ಟಿಯಿಂದ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇವೆ. ಮತ್ತೆ ಪ್ರಕೃತಿ ವಿಕೋಪವಾಗಿ ಅಭಿವೃದ್ಧಿಗೆ ಅನೇಕ ಕೋಟಿ ರೂಪಾಯಿಗಳನ್ನು ಪಾವತಿ ಮಾಡುವುದು ಇದೆ. ನಮ್ಮ ಎರಡು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದಲ್ಲಿ ಅದಂತಹ ನಷ್ಟಕ್ಕೆ ಪಾವತಿ ಮಾಡಲಿಕ್ಕೆ ಬಾಕಿ ಇದೆ. ಅದೇ ರೀತಿಯಲ್ಲಿ ಕಾಮಗಾರಿಕೆಗಳಿಗೆ ಸಂಬಂಧಿಸಿದಂತೆ ಹಣವನ್ನು ಪಾವತಿ ಮಾಡುವಂಥದ್ದು ಬಾಕಿ ಇದೆ, ಜಿಲ್ಲಾ ಪಂಚಾಯತ್ ಇರಬಹುದು, ಪಿಡಬ್ಲ್ಯೂಡಿ ಇರಬಹುದು ಇವುಗಳು ಒಂದು ಡ್ರಂ ಡಾಂಬರನ್ನು ಕೊಡುವಂಥಹ ಪರಿಸ್ಥಿತಿಯಲ್ಲಿ ಇಲ್ಲ. ಅದರ ಬಗ್ಗೆಯೂ ತಾವು ದಯವಿಟ್ಟು ಚಿಂತನೆಯನ್ನು ಮಾಡಬೇಕು. ಎಂ ಆರ್ ಪಿ ಎಲ್ ನವರು ಹಣವನ್ನು ಪಾವತಿ ಮಾಡದೆ, ಇವತ್ತು ಕ್ರೆಡಿಟ್‌ನಲ್ಲಿ ಡಾಂಬರನ್ನು ಕೊಡುತ್ತಾ ಇಲ್ಲ, ನಾವು ಬಹಳಷ್ಟು ಸಲ ಎಂ ಆರ್ ಪಿ ಎಲ್ ಬಗ್ಗೆ ಮಾತನಾಡಿದ್ದೇವೆ. ರಾಜ್ಯ ಸರ್ಕಾರ ಅವರಿಗೆ ಎಲ್ಲಾ ಸವಲತ್ತುಗಳನ್ನು ಕೊಟ್ಟಿದೆ. ಆದರೆ ಒಂದು ಚೂರು ಡಾಂಬರ ಕೊಡುವ ಪರಿಸ್ಥಿತಿಯಲ್ಲಿ ಎಂ ಆರ್ ಪಿ ಎಲ್ ನವರು ಇಲ್ಲ, ಕ್ರೆಡಿಟ್‌ನಲ್ಲಿ ಕೊಡುವ ಸ್ಥಿತಿಯಲ್ಲಿಯೂ ಇಲ್ಲ.

ಶ್ರೀ ಎಸ್. ಯೋಗೇಶ್ ಭಟ್ :- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ,

ಅಧ್ಯಕ್ಷರು :- ದಯವಿಟ್ಟು ಕ್ಷಮಿಸಿ ನಾನು ಎಲ್ಲರ ಟೈಂನಲ್ಲೂ ಎಲ್ಲರಿಗೂ ಈಲ್ಡ್ ಆಗುತ್ತಾ ಹೋದರೆ ಪ್ರತಿಯೊಬ್ಬರ ಟೈಂ ಕೊಡಬೇಕಾಗುತ್ತದೆ. ದಯಮಾಡಿ ಸಹಕರಿಸಿ.

ಶ್ರೀ ಸಿದ್ಧರಾಮಯ್ಯ :- ಸನ್ಮಾನ್ಯ ಖರ್ಗೆಯವರೆ, 8 ಪರ್ಸೆಂಟ್ ನಿಂದ 10 ಪರ್ಸೆಂಟ್ ಮಾಡಿದ್ದೇವೆ. ಅದು ಬಡವರಿಗೆ ಜಾಸ್ತಿಯಾಗುತ್ತದೆ. ಇದನ್ನು ಯಾವ ಹಿನ್ನೆಲೆಯಲ್ಲಿ ಮಾಡಿರತಕ್ಕಂಥದ್ದು ಮತ್ತು ಇದರಿಂದ ಬಡವರಿಗೆ ಹೊರೆಯಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಮೊದಲೇ ಹೇಳಿದ್ದೇನೆ. ಎಲ್ಲೆಲ್ಲಿ ಬಡವರು ಬಳಸುವಂತಹ ಪದಾರ್ಥಗಳು ಇವೆ, ಅದನ್ನು 8 ರಿಂದ 4 ಪರ್ಸೆಂಟ್ ಮಾಡತಕ್ಕಂಥದ್ದು

ಮಾಡಿದ್ದೇವೆ. 12 ರಿಂದ 10 ಪರ್ಸೆಂಟ್ ಮಾಡುವಾಗ ಅದು ಶ್ರೀಮಂತರು ಬಳಸುವಂತಹ ಪದಾರ್ಥಗಳು ಅವು 12 ರಿಂದ 15 ಪರ್ಸೆಂಟ್ ಸ್ಪೆಷಲ್ ರೇಟನ್ನು ಮಾಡತಕ್ಕಂಥ ಮಾತನ್ನು ಹೇಳಿದ್ದೇನೆ. ಆದ್ದರಿಂದ, ಇಲ್ಲಿ ಯಾವುದೇ ಹೊರೆಯಾಗತಕ್ಕಂಥದ್ದು ಇಲ್ಲ. ಮಾನ್ಯ ಸದಸ್ಯರುಗಳು ಇದನ್ನು ಒಪ್ಪಿಕೊಳ್ಳಬೇಕು; ಎನ್ನತಕ್ಕಂತಹ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಮತ್ತು ಗೋಧಿ ಮತ್ತು ಗೋಧಿಯಿಂದ ತಯಾರಾಗತಕ್ಕಂತಹ ಇತರ ಪದಾರ್ಥಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆಕ್ಕಪಕ್ಕದ ರಾಜ್ಯಗಳಾದ ಮಹಾರಾಷ್ಟ್ರದಲ್ಲಿಲ್ಲ, ಆಂಧ್ರದಲ್ಲಿಲ್ಲ, ಕೇರಳದಲ್ಲಿಲ್ಲ, ತಮಿಳುನಾಡುಗಳಲ್ಲಿ ಇಲ್ಲ ಎನ್ನುವ ವಾದ ಇದೆ. ಯಾವ್ಯಾವ ರಾಜ್ಯದಲ್ಲಿ ಎಷ್ಟೆಷ್ಟು ಇದೆ ಎಂದು ನಾನು ಹೇಳಿದ್ದೇನೆ. ನಮ್ಮ ರಾಜ್ಯಕ್ಕಿಂತ ಅಲ್ಲಿ ಜಾಸ್ತಿ, ನಮ್ಮದು 2 ಪರ್ಸೆಂಟ್ ಇದ್ದರೆ, ತಮಿಳುನಾಡಿನಲ್ಲಿ 4 ಪರ್ಸೆಂಟ್, ಕೇರಳದಲ್ಲಿ 4 ಪರ್ಸೆಂಟ್ ಇದೆ, ಗೋಧಿಯ ಮೇಲೂ ಇದೆ, ಮಹಾರಾಷ್ಟ್ರದಲ್ಲಿ 4 ಪರ್ಸೆಂಟ್ ಇದೆ. ಆದರೆ ಒಂದು ಕಡೆ ತೆರಿಗೆ ಬೇಸ್‌ನ್ನು ಹೆಚ್ಚು ಮಾಡಬೇಕು ಎನ್ನತಕ್ಕಂಥದ್ದು ಇನ್ನೊಂದು ಕಡೆ ಹೊಸ ತೆರಿಗೆಯನ್ನು ಹಾಕಿದರೆ ಅದನ್ನು ಕಡಿಮೆ ಮಾಡಬೇಕು ಎನ್ನತಕ್ಕಂಥದ್ದು, ಇದು ಸರಿಯಾದಂತಹ ಕ್ರಮವಲ್ಲ. ಟಿ.ಒ.ಟಿ. ಕೊಡಬೇಕಾಗುತ್ತದೆ ಎಂದರೆ ಯಾರು ಉತ್ಪಾದಕರು ಇರುತ್ತಾರೆ ಯಾರು ವ್ಯಾಪಾರ ಮಾಡುತ್ತಾರೆ ಅವರು ಟಿಒಟಿಯನ್ನು ಕೊಡತಕ್ಕಂಥದ್ದು ಇದು ಇನ್‌ಕಂಟ್ಯಾಕ್ಸ್ ರೀತಿ, ಟರ್ನ್ ಓವರ್ ಟ್ಯಾಕ್ಸ್ ಕೊಡುವಂಥದ್ದು. ಗ್ರಾಹಕರು ಮಾರಾಟ ತೆರಿಗೆಯನ್ನು ಕೊಡುತ್ತಾರೆ. ಗ್ರಾಹಕರ ಮೇಲೆ 2 ಪೈಸೆಯಾದರೆ ವ್ಯಾಪಾರ ಮಾಡುವವರಿಗೆ ಟಿಒಟಿಯು 5 ಕೋಟಿಯಿಂದ 10 ಕೋಟಿಯವರೆಗೆ ಇದ್ದರೆ 2 ಪರ್ಸೆಂಟ್, 10 ಕೋಟಿಗಿಂತ ಜಾಸ್ತಿ ಟರ್ನ್ ಓವರ್ ಇದ್ದರೆ 3 ಪರ್ಸೆಂಟ್ ಬರುತ್ತದೆ. ಈ ತರಹ ಇರುವುದರಿಂದ ಸಾಮಾನ್ಯ ಜನರ ಮೇಲೆ ಭಾರಿ ಹೊರೆಯಾಗುತ್ತದೆ ಎನ್ನತಕ್ಕದ್ದು ಸರಿಯಲ್ಲ. ಎಲ್ಲಾ ರಾಜ್ಯಗಳಲ್ಲೂ ಈ ತರಹ ತೆರಿಗೆಯನ್ನು ಹಾಕಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರು ಈ ಒತ್ತಾಯವನ್ನು ಕೈ ಬಿಡಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಮತ್ತೆ ವಿಡಿಐಎಸ್ ಬಗ್ಗೆ ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ಈ ವರ್ಷ ಕೇಂದ್ರ ಸರ್ಕಾರದಲ್ಲಿ ತೆರಿಗೆ ಕಲೆಕ್ಷನ್ ಬಹಳ ಕಡಿಮೆಯಾಯಿತು. ಸುಮಾರು 15 ಸಾವಿರ ಕೋಟಿ ತೆರಿಗೆ ಕಡಿಮೆಯಾಗಿ ರಾಜ್ಯಗಳಿಗೆ ಬರತಕ್ಕಂತಹ ಷೇರುಗಳು ಕಡಿಮೆಯಾಯಿತು. ಈ ವರ್ಷ ಅಂದರೆ 1997-98 ರಲ್ಲಿ ರಾಜ್ಯಗಳಿಗೆ ಏನು ಷೇರು ಬರಬೇಕಾಗಿತ್ತು, ಇದರಿಂದ ಆ ಷೇರನ್ನು ಕಾಂಪನ್‌ಸೇಟ್ ಮಾಡತಕ್ಕಂಥದ್ದು ಆಗುತ್ತದೆಯೇ ಹೊರತು ಅಡಿಷನಲ್ ಆಗಿ ಬರುವುದಿಲ್ಲ. ಅದು ಅಡಿಷನಲ್ ಆಗಿ ಬರುವುದನ್ನು ಖೋತಾ ವೈಪ್ ಔಟ್ ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿದೆನೆಯೇ ಹೊರತು ಇದು ಹೆಚ್ಚುವರಿ ಆಗಿಬಿಡುತ್ತದೆ ಎನ್ನುವ ಮಾತಲ್ಲ. ಇದನ್ನು ಸ್ಪಷ್ಟವಾಗಿ ಮಾನ್ಯ ಸದಸ್ಯರ ಗಮನಕ್ಕೆ ತರಲು ಬಯಸುತ್ತೇನೆ. ಇದರಲ್ಲಿ ಕಡಿಮೆಯಾಗಿ ಬಿಟ್ಟಿದೆ. ರಾಜ್ಯಗಳಿಗೆ ಬರತಕ್ಕಂಥದನ್ನು ಬಜೆಟ್ ಎಸ್ಟಿಮೇಟ್ ಪ್ರಕಾರ ಕೊಡುತ್ತಾ ಇದ್ದರು. ಆ ಗ್ರಾಂಟ್ಸ್ ಏನು ಇವತ್ತು ರಿವೈಸ್ ಎಸ್ಟಿಮೇಟನ್ನು ಕೊಡುತ್ತಾ ಇದ್ದಾರೆ. ನಮಗೆ ಸುಮಾರು 200 ಕೋಟಿ ರೂಪಾಯಿಗಳಷ್ಟು ಬರಲೇ ಇಲ್ಲ. ಹಾಗಾಗಿ ಈ ಸಾರಿ ಕೇಂದ್ರ ಸರ್ಕಾರದಲ್ಲಿ ಟ್ಯಾಕ್ಸ್ ರೆವಿನ್ಯೂ ಬಹಳ ಕಡಿಮೆಯಾಗಿದೆ. ನಮ್ಮ ರಾಜ್ಯಗಳಿಗೆ ಬರುವುದು ಸಹ ಕಡಿಮೆಯಾಗಿದೆ. ಮಾಧುಸ್ವಾಮಿಯವರು ಹೇಳಿರುವುದಕ್ಕೆ ನಾನು ಉತ್ತರವನ್ನು ಹೇಳಿದ್ದೇನೆ. ಯಡಿಯೂರಪ್ಪನವರು ಗೋಧಿಯ ವಿಚಾರದ ಬಗ್ಗೆ ಹೇಳಿದ್ದರು, ಅದರ ಬಗ್ಗೆ ಸಹ ನಾನು ಹೇಳಿದ್ದೇನೆ. ಬಿಲ್ಲುಗಳು ಬಾಕಿ ಉಳಿದುಕೊಂಡು ಬಿಟ್ಟಿದೆ ಎಂದು ತಾವು ಹೇಳಿದ್ದೀರಿ.

ಶ್ರಿ ಜೆ.ಸಿ. ಮಾಧುಸ್ವಾಮಿ :- ಶಾಸನ ಸಭೆಯಲ್ಲಿ ಒಂದಕ್ಕೂ ಈಲ್ಡ್ ಆಗುವುದಿಲ್ಲ ಎಂದು ತಾವು ತೀರ್ಮಾನ ತೆಗೆದುಕೊಂಡು ಬಂದಿರುವಂತೆ ಕಾಣುತ್ತದೆ.

ಶ್ರೀ ಸಿದ್ದರಾಮಯ್ಯ :- ಬಿಲ್ಲುಗಳು ಬಾಕಿ ಉಳಿದಿವೆ ಎಂದಿದ್ದರಲ್ಲ, ಕೆಲವು ಏನಾಗಿದೆ ಎಂದರೆ ಬಜೆಟ್‌ನಲ್ಲಿ ಎಷ್ಟು ಇದೆ ಅದಕ್ಕಿಂತ ಹೆಚ್ಚು ಕೆಲಸ ಮಾಡಿರುತ್ತಾರೆ. ಬಜೆಟ್‌ನಲ್ಲಿ ಗ್ರಾ್ಯಂಟ್ಸ್ ಇರುತ್ತದೆ. ಆ ಗ್ರಾ್ಯಂಟ್‌ನ್ನು ಮೀರಿ ಕೆಲಸ ಮಾಡಿರುತ್ತಾರೆ. ಅದು ಸಣ್ಣ ನೀರಾವರಿಯಲ್ಲಿ ಆ ರೀತಿ ಆಗಿದೆ. ಪಿಡಬ್ಲ್ಯೂ ನಲ್ಲಿ ಕೆಲವು ಕಡೆ ಹೀಗೆ ಆಗಿದೆ. ಆದ್ದರಿಂದ, ಒಟ್ಟಿಗೆ ಈ ತಿಂಗಳಿನಲ್ಲಿ ಎಷ್ಟು ಎಲ್ ಒಸಿ ಕೊಡುವುದಕ್ಕೆ ಸಾಧ್ಯವಿದೆಯೋ ಅಷ್ಟನ್ನು ಕೊಡುತ್ತಿದ್ದೇವೆ. ಬಸವರಾಜ್‌ರವರು ಎತ್ತಿರತಕ್ಕಂಥದ್ದು ಸಮುದ್ರ ಕೊರತೆಯ ಬಗ್ಗೆ ಅದನ್ನು ಕೂಡ ಕೊಡತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಈ 30ನೇ ತಾರೀಖಿನ ಒಳಗೆ ಇರಿಗೇಷನ್ ಬಿಲ್ಲುಗಳು, ಪಿಡಬ್ಲ್ಯೂಡಿ ಬಿಲ್ಲುಗಳು ಅವೆಲ್ಲವನ್ನು ಕೊಡತಕ್ಕಂಥದ್ದನ್ನು ಮಾಡುತ್ತಾ ಇದ್ದೇವೆ. ಚುನಾವಣೆ ಬಂತು, ಬಿಲ್ಲುಗಳು ಬಾಕಿ ಉಳಿಯಿತು, ಎಲ್ಲಾ ಸರ್ಕಾರಗಳಲ್ಲೂ ಮಾರ್ಚಿ ತಿಂಗಳಲ್ಲಿ ಬಾಕಿ ಬಿಲ್ಲುಗಳು ಇರುತ್ತವೆ. ತೀರಿಸುವುದಕ್ಕೆ ಸಾಧ್ಯವಾಗದಷ್ಟು ಬಿಲ್ಲುಗಳೇನಿಲ್ಲ. ಅಷ್ಟು ದುಡ್ಡನ್ನು ಈ ತಿಂಗಳಲ್ಲಿ ಕೊಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟಂತಹ ಯಾವುದೇ ಸಲಹೆ ಒಕ್ಕೊರಲಿನಿಂದ 13 ಜನ ಇಲ್ಲಿ ಮಾತನಾಡಿದವರು, ಗೋಧಿಯ ತೆರಿಗೆಯನ್ನು ಕಡಿಮೆ ಮಾಡಿ ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದ್ದೆವು. ಆ ಇನ್‌ಫ್ರಾಸ್ಟ್ರಕ್ಚರ್ ಟ್ಯಾಕ್ಸ್ ಎಂದು ಹಾಕಿ 110 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡುತ್ತಾ ಇದ್ದಾರೆ. ಏನು ಸಂಬಂಧವಿಲ್ಲದಿರುವಂತಹ ಸಾಮಾನ್ಯ ಜನಗಳು ಅದನ್ನು ಕಟ್ಟಬೇಕು. ಈಗ ಬಿಲ್ಲುಗಳು ಬಾಕಿ ಇದ್ದಾವೆ, ಯಾವುದಕ್ಕಾದರೂ ಆದ್ಯತೆ ಕೊಡಿ ಎಂದು ಹೇಳಿದರೆ ಯಾವುದೇ ಸಲಹೆಯನ್ನು ಕೇಳುವುದಕ್ಕೆ ಈ ಸರ್ಕಾರ ರೆಡಿ ಇಲ್ಲ. ಆದ್ದರಿಂದ ಅವರು ಒಂದೇ ದಿಕ್ಕಿನಲ್ಲಿ, ಅವರು ಹೇಳಿದ ಹಾಗೆ ನಡೆಯಬೇಕು ಪ್ರತಿಪಕ್ಷದ ಯಾವುದೇ ಸಲಹೆಗೆ ಅವರು ಸ್ಪಂದಿಸುವುದಕ್ಕೆ ರೆಡಿ ಇಲ್ಲ. ಈ ಒಂದು ಧೋರಣೆಯನ್ನು ಪ್ರತಿಭಟಿಸಿ ಬಹುಶ: ಈ ಸಂದರ್ಭದಲ್ಲಿ ಕುಳಿತುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ, ನಾವು ವಾಕ್ ಔಟ್ ಮಾಡಿ ಹೊರಗಡೆ ಹೋಗುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ಯಡಿಯೂರಪ್ಪನವರ ನಾಯಕತ್ವದಲ್ಲಿ ಬಿಜೆಪಿ ಸದಸ್ಯರೆಲ್ಲರೂ ಸದನದಿಂದ ಹೊರನಡೆದರು)

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಅಧ್ಯಕ್ಷರೆ, ಈ ಸರ್ವಾಧಿಕಾರಿ ಧೋರಣೆ ಸರಿಯಲ್ಲ. ಶಾಸನಸಭೆಯಲ್ಲಿ ಚರ್ಚೆಯಾಗಿದ್ದರಲ್ಲಿ ಒಂದೇ ಒಂದು ಐಟಂ ಬಗ್ಗೆ ಈಲ್ಡ್ ಆಗುವುದಿಲ್ಲ ಎಂಬ ಮಟ್ಟಕ್ಕೆ ಹೋದ್ರೆ ಬಜೆಟ್ ಚರ್ಚೆ ಏಕೆ ಮಾಡಬೇಕು. ನಾವು ಹೇಳಿದ್ದೆ ಸರ್ವಸ್ವ ಎಂಬ ಭಾವನೆ ಇಟ್ಟುಕೊಂಡು ಇಲ್ಲಿ ಚರ್ಚೆಗಳಿಗೆ ಬರಬಾರದು.

ಅಧ್ಯಕ್ಷರು :- ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ, ''ದಿನಾಂಕ 31.3.99 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 62ರವರೆಗಿನ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಮಂಜೂರು ಮಾಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೆ, ವೋಟಿಂಗ್ ಹಾಕಿಬಿಡಿ. ನಾವು ಪ್ರತಿಭಟಿಸುತ್ತೇವೆ. ಬೇಡ ಎನ್ನುವವರ ಎಷ್ಟು ಜನ ಇದ್ದಾರೆ, ಏಕೆಂದರೆ ಸುಮ್ಮನೆ ಹೊರಹೋದರೆ ಗೊತ್ತಾಗುವುದಿಲ್ಲ. ಇಲ್ಲಿ ಕುಳಿತು ನಾವು ಇವರು ಮಾಡಿದಂತಹ ಟ್ಯಾಕ್ಸ್ ಹಾಕಿ ದರವನ್ನು ಏರಿಸಿದ್ದಾರೆ ಇದನ್ನು ನಾವು ವೋಟಿಂಗ್ ಮುಖಾಂತರವಾಗಿ ಪ್ರತಿಭಟಿಸಬೇಕೆಂದು ಹೇಳಿದ್ದೇವೆ.

ಅಧ್ಯಕ್ಷರು :- ವಾಯ್ಸ್ ವೋಟನ್ನು ಹಾಕಬೇಕಾ, ಇಲ್ಲಾ ಡಿವಿಜನ್ ಕೇಳುತ್ತಿರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಏಕೆಂದರೆ ಆಡಳಿತ ಪಕ್ಷದ ಕಡೆಯೂ ಕೂಡ ಅನೇಕ ಸದಸ್ಯರು ಲೋಕಶಕ್ತಿಯವರು ಇದ್ದಾರೆ. ವೋಟಿಂಗ್ ಮಾಡುವಾಗ ನಮ್ಮ ಶಕ್ತಿಯನ್ನು ತೋರಿಸುತ್ತೇವೆಂದು ಹೇಳಿದ್ದಾರೆ. ಇವತ್ತು ಎಷ್ಟು ಸದಸ್ಯರು ಸರ್ಕಾರದ ವಿರುದ್ಧ ಬರುತ್ತಾರೆ ನೋಡೋಣ.

ಶ್ರೀ ಸಿದ್ದರಾಮಯ್ಯ :- ಡಿವಿಜನ್ ಕೇಳುವುದು ಹೊಸ ಸಂಪ್ರದಾಯವಿಲ್ಲದ್ದು, ಆಯಿತು ಮಾಡಿ, ಹೊಸ ಸಂಪ್ರದಾಯವನ್ನು ಸೃಷ್ಟಿ ಮಾಡಿ.

(ಈ ಹಂತದಲ್ಲಿ ವಿಭಜನೆ ಗಂಟೆಯನ್ನು ಹಾಕಲಾಯಿತು)

ಅಧ್ಯಕ್ಷರು :- ಮಾನ್ಯ ಖರ್ಗೆಯವರೇ, ತಾವು ಯೋಚನೆ ಮಾಡಿ. ಮನಿ ಬಿಲ್‌ಗೆ ಎಂದೂ ನಮ್ಮ ಸದನದಲ್ಲಿ ಇದುವರೆಗೆ ಡಿವಿಜನ್‌ಗೆ ಪ್ರೆಸ್ ಮಾಡಿರಲಿಲ್ಲ. Generally the practice is that the Government which is enjoying the mandate - at least presumed to enjoy the mandate...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ನಾವು ತಮ್ಮ ಮಾತಿಗೆ ಯಾವಾಗಲೂ ಗೌರವ ಕೊಟ್ಟಿದ್ದೇವೆ. ಇದು ಯಾವಾಗಲೂ ಪದ್ಧತಿ ಇದೆ. ತಾವು ಬಜೆಟ್ ಮಂಡಿಸಿದಾಗ ಏನು ಅವರು ಅದನ್ನು ಇಡುತ್ತಾರೆ. ಅದರಲ್ಲಿ ಮೇಜರ್ ಕೆಲವು ಮಟ್ಟಗಾದರೂ ಗೌವರ್ನ್‌ಮೆಂಟ್ ಆಫ್ ಇಂಡಿಯಾ ಬಜೆಟ್ ಇರಲಿ ಸ್ಟೇಟ್ ಗೌವರ್ನ್‌ಮೆಂಟ್ ಇರಲಿ ಕನ್ಸೇಷನ್ ಕೊಡತಕ್ಕಂಥ ಪದ್ಧತಿ ಇದೆ. ಸ್ವಲ್ಪವಾದರೂ ಕೂಡ ಇವತ್ತು ವೀಟ್‌ನಲ್ಲಿ ಕನ್ಸೇಷನ್ ಇಲ್ಲ. ಸಾಮಾನ್ಯ ಜನ ಉಪಯೋಗ ಮಾಡತಕ್ಕಂಥ ಬಿಸ್ಕತ್ ಆಗಲಿ, ಅಲ್ಯೂಮಿನಿಯಂ, ಸೋಪ್ ಇಂತಹ ಸಣ್ಣ ಸಣ್ಣ ಮಾರ್ಜಿನ್ ಕೂಡ ಅವರು ಒಪ್ಪಲಿಲ್ಲವೆಂದರೆ ಹೇಗೆ? ಅನೇಕ ಸಾರಿ ಪ್ರತಿ ವರ್ಷ ಕನ್ಸೇಷನ್ ರೆಮಿಷನ್ ಕೊಟ್ಟಿದ್ದಾರೆ. ನೀವು ನೋಡಿ. ಒಂದಲ್ಲ, ಎರಡು ಐಟಂನಲ್ಲಿ ಹಿಂದೆ ನೀವೇ ಕೊಟ್ಟಿದ್ದೀರಿ. ತಾವು ಕೇಳುತ್ತೀರೆಂದರೆ ಅದಕ್ಕೆ ನಾನು ಪ್ರೆಸ್ ಮಾಡುವುದಿಲ್ಲ. ಕೊನೇಪಕ್ಷ ಈಗಲಾದರೂ ಕೂಡ ಸಾಧ್ಯವಾದರೆ ಕೆಲವು ಕನ್ಸೇಷನ್ ತಾವು ಅನೌನ್ಸ್ ಮಾಡಿ.

(Interruptions)

Mr. Speaker :- Please do not reopen the subject.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಮತದಾನದ ಬಗ್ಗೆ ತಾವು ಮತ್ತೊಮ್ಮೆ ಪರಿಶೀಲನೆ ಮಾಡಿ. ಮತದಾನ ಬೇಕೆ ಬೇಡವೇ ಎನ್ನತಕ್ಕಂಥಾದ್ದು ತಮಗೆ ಸೇರಿದ್ದು. ನನ್ನ ಅಭಿಪ್ರಾಯದಲ್ಲಿ ಮತದಾನ ಏನೂ ಬೇಕಾಗಿಲ್ಲ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಇಷ್ಟು ಜನ ಸದಸ್ಯರು ಹೇಳಿದ್ದಾರೆ,

ಶ್ರೀ ವಾಟಾಳ್ ನಾಗರಾಜ್ :- ನಾನು ತಮಗೆ ಹೇಳುತ್ತಿದ್ದೇನೆ, ಕೆಲವು ಬೆಲೆಯನ್ನು ಜನರ ಮೇಲೆ ಹೇರಿದ್ದೀರಿ. ಅದನ್ನು ಕಡಿಮೆ ಮಾಡಿ ಎಂದು ನಮ್ಮೆಲ್ಲರ ಒಕ್ಕೂರಲಿನ ಒತ್ತಾಯ. ಅದನ್ನು ಅವರು ಮಾಡಬೇಕಾದ್ದು, ಬಿಡಬೇಕಾದ್ದು ಅವರ ಕರ್ತವ್ಯ. ಆದರೆ ಅದಕ್ಕಾಗಿ ಮತದಾನ ಕೇಳತಕ್ಕಂಥಾದ್ದು ಅವಶ್ಯಕತೆ ಇಲ್ಲ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದುದರಿಂದ ಬಡವರ ಉಪಯೋಗ ಮಾಡತಕ್ಕಂಥ ಸೋಪು, ಗೋಧಿ, ಇವುಗಳು ಸಾಮಾನ್ಯ ಜನರ ಮೇಲೆ ಹಾಕಿರತಕ್ಕಂಥ ತೆರಿಗೆಯನ್ನು ಇಳಿಸಬೇಕು.

ಅಧ್ಯಕ್ಷರು :- ತಮ್ಮ ಚಿಂತೆ ಏನಿದೆ ಅದನ್ನು ನಾನು ಒಪ್ಪುತ್ತೇನೆ. ಪ್ರತಿಪಕ್ಷದ ನಾಯಕರಾಗಿ ಸದನದಲ್ಲಿ ಜನರ ಪರವಾಗಿ ನಿಮ್ಮ ಭಾವನೆಗಳನ್ನು ವ್ಯಕ್ತಮಾಡುತ್ತಾ ಹೇಳತಕ್ಕಂಥಾದ್ದು, ಇದು ಒಂದು ಪದ್ಧತಿ ಇದೆ. ಯಾವುದೇ ಸರ್ಕಾರ ಈಲ್ಡ್ ಆಗತಕ್ಕಂಥಾದ್ದು, ಕೆಲವಾದರೂ ಐಟಂಗಳಿಗೆ ಕನ್ಸೇಷನ್ ಕೊಡಲಿ ಎಂದು ನಾವು ಕೇಳುತ್ತಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. It is for the Government to say yes or no to that demand. ನನ್ನ ಅಪೀಲ್ ತಮ್ಮಲ್ಲಿ ಏನೆಂದರೆ ಸಾಮಾನ್ಯವಾಗಿ ಮನಿ ಬಿಲ್ಸ್‌ಗೆ ಡಿವಿಜನ್ ಇರುವುದಿಲ್ಲ. ಆದರೆ I do not think it is sacrosanct. ಆದರೆ ಈಗಲೂ ಒಂದು ಕನ್‌ವೆನಷನ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ನಾನು ಅದಕ್ಕೆ ಹಿಂದೆ ಹೋಗುವುದಿಲ್ಲ. ಅದನ್ನು ತಾವು ಬೇಕಾದರೆ ವಾಯೆಸ್ ಓಟು ಮಾಡಿಕೊಳ್ಳಿ, ನಾನು ಪ್ರೆಸ್ ಮಾಡುವುದಿಲ್ಲ. ಆದರೆ ಕೊನೇ ಪಕ್ಷ ಇಷ್ಟಾದರೂ ಸೌಜನ್ಯ ಇಲ್ಲದೆ ಇಡೀ ಹೌಸ್ ಒಂದು ಕಡೆ ಇದ್ದರೆ, ಅವರು ತಮ್ಮದೆ ಹಠ ಎಂದರೆ ಹೇಗೆ?

Mr. Speaker :- They are agreeable. ಡಿವಿಜನ್ ಬಿಲ್ ಆಫ್ ಮಾಡಿ. ಅಗತ್ಯವಿಲ್ಲ. ಸನ್ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಅನುಭವದ ಹಿನ್ನೆಲೆಯಿಂದ ಅತ್ಯಂತ ದೀರ್ಘಕಾಲ ಶಾಸನ ಸಭೆಯಲ್ಲಿ ಸದಸ್ಯರಾಗಿದ್ದ ಕಾರಣ ನಾನು ಮಾಡಿಕೊಂಡಿದ್ದ ಮನವಿಗೆ ಏನು ಬೆಲೆ ಕೊಟ್ಟಿದ್ದಾರೆ ಅದಕ್ಕೆ ನಾನು ಅಧ್ಯಕ್ಷಸ್ಥಾನದಿಂದ ಅವರಿಗೆ ನನ್ನ ಅಭಿನಂದನೆಗಳನ್ನು ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈಗ ಈ ಬೇಡಿಕೆಯನ್ನು ಧ್ವನಿಮತಕ್ಕ ಹಾಕಿಕೊಳ್ಳೋಣ. ಡಿವಿಜನ್‌ಗೆ ಪ್ರೆಸ್ ಮಾಡತಕ್ಕಂಥಾದ್ದು, ಮತದಾನ ಮಾಡತಕ್ಕಂಥಾದ್ದು ಬೇಡ. ಕೊನೆಯ ಹಂತಕ್ಕೆ ಬಂದಿದ್ದೇವೆ. ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ, ದಿ: 31.3.1999 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1 ರಿಂದ 62 ರವರೆಗೆ ಬೇಡಿಕೆಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು.

(ಪ್ರಸ್ತಾಪವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.)

(ಅ) 1997-98ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತು)ನ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಅಧ್ಯಕ್ಷರು :- ಇದರ ಬಗ್ಗೆ ಏನಾದರೂ ಮಾತನಾಡುವುದು ಇದೆಯೇ?

★ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೇ, ಇದರಲ್ಲಿ ಡಿಮ್ಯಾಂಡ್ ಸಂಖ್ಯೆ 5, ಐಟಂ ನಂಬರ್ ಒಂದು - ಸಬ್ಸಿಡಿ ಟು ಎಂ ಪಿ ಎಂ, ಇದರ ಬಗ್ಗೆ ನಿನ್ನೆ ಚರ್ಚೆಯಾಯಿತು. ನಾನು ಚರ್ಚೆ ಮಾಡಬೇಕೆಂದು ಇಲ್ಲಿ ನಿಂತಿಲ್ಲ. ಅದರ ಕಾಗದ ಪತ್ರಗಳನ್ನು ಮಾನ್ಯ ಮೊಹಿದ್ದೀನ್‌ರವರು ತೋರಿಸುತ್ತೇನೆಂದು ಈಗಾಗಲೇ ಈ ಸದನಕ್ಕೆ ವಚನ ಕೊಟ್ಟಿದ್ದಾರೆ.

ಅಧ್ಯಕ್ಷರು :- ಬೆಳಿಗ್ಗೆಯಿಂದ ಆಫೀಸರ್ಸ್ ಎಲ್ಲಾ ಇಲ್ಲಿ ಕಾದಿದ್ದಾರೆ. All papers are ready. We have been continuously in business. ನಾನು ಒಂದು 5 ನಿಮಿಷ recess ಹೊರಗೆ ಹೋದಾಗ they were waiting. They have been here the whole day. Press is here, a message should not go that it was promised and not come.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- 9 ಕೋಟಿ 50 ಲಕ್ಷ ರೂಪಾಯಿ ಸಬ್ಸಿಡಿ ಕೊಡಬೇಕೆಂದು ಇದರಲ್ಲಿ ಹೇಳಿದ್ದೀರಿ. ತಾವು ಓದಿಕೊಳ್ಳಿ, ಈ ವರ್ಷ 11 ಲಕ್ಷ ರೂಪಾಯಿ ಪ್ರಾಫಿಟ್ ಮಾಡಿದೆ ಎಂದು ಹೇಳಿರುವುದು. ಮತ್ತು 32 ಕೋಟಿ ರೂಪಾಯಿ ಹಿಂದೆ ಪ್ರಾಫಿಟ್ ಮಾಡಿದೆ ಎಂದು ಹೇಳುವುದು. ಮತ್ತು ಈಗ ಇದಕ್ಕೆ ಸಬ್ಸಿಡಿ ಕೊಡತಕ್ಕಂಥ ಅವಶ್ಯಕತೆ ಏನಿದೆ? ನಿನ್ನೆ ತಾನೆ ತಾವು ಪ್ರತಿಪಾದನೆ ಮಾಡಿದ್ದೀರಿ.

ಶ್ರೀ ಸಿದ್ಧರಾಮಯ್ಯ :- ರಿಹ್ಯಾಬಿಲಿಟೇಷನ್ ಪ್ಯಾಕೇಜ್, ಅದಕ್ಕೆ ಅನುಗುಣವಾಗಿ ಮಾಡಿರತಕ್ಕಂಥಾದ್ದು. ರಿಹ್ಯಾಬಿಲಿಟೇಷನ್ ಪ್ಯಾಕೇಟ್ ಇದೆಯಲ್ಲ ಅದಕ್ಕೋಸ್ಕರ ಸಬ್ಸಿಡಿ ಕೊಟ್ಟಿರತಕ್ಕಂಥಾದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ರಿಹ್ಯಾಬಿಲಿಟೇಷನ್ ಎಂದು ರೀಸನ್ ನೀವು ಕೊಟ್ಟಿಲ್ಲ, ನೀವು ಕೊಟ್ಟಿದ್ದನ್ನು ನಾವು ಓದಿ ಹೇಳಬೇಕಲ್ಲ. ಅದಕ್ಕೆ ಒಂಭತ್ತೊವರೆ ಕೋಟಿ ರೂಪಾಯಿ ಯಾವಾಗ ಲಾಭದಲ್ಲಿದೆ ಅಂತಹ ಕಾರ್ಖಾನೆಗೆ 9 ಕೋಟಿ ಅವರು ಕೊಡತಕ್ಕಂಥ ಪ್ರಮೇಯ ಎಲ್ಲಿ ಬಂತು? ಏಕೆಂದರೆ ನಿನ್ನೆ ನಡೆದ ಪ್ರತಿಪಾದನೆಯಲ್ಲಿ ಪ್ರಾಫಿಟ್‌ನಲ್ಲಿ ಇದೆಯೆಂದು ಹೇಳುತ್ತೀರಿ. ಹಿಂದೆ 32ಕೋಟಿ ರೂಪಾಯಿ ಪ್ರಾಫಿಟ್‌ನಲ್ಲಿ ಇರುವುದು 11 ಲಕ್ಷ ರೂಪಾಯಿಗೆ ಬಂದಿದ್ದಾರೆ. ಮುಂದೆ ಎಷ್ಟಕ್ಕೆ ಹೋಗುತ್ತದೋ ಗೊತ್ತಿಲ್ಲ. ಅದಕ್ಕೆ ನಾನು ನಿನ್ನೆ ಇಲ್ಲಿ ಚರ್ಚೆ ನಡೆದ ಮೇಲೆ ಇದನ್ನು ತೆಗೆದಿದ್ದು. ಎರಡನೆಯದು ಡಿಮ್ಯಾಂಡ್ ನಂಬರ್ 9, ಐಟಂ ನಂಬರ್ 3 ಇದರಲ್ಲಿ ಪೇಜ್ ನಂಬರ್ 8ರಲ್ಲಿ The move of conversion of purchase tax on Sugar Cane into Interest Free loan, but here the farmers in respective jurisdiction should be encouraged first. The loan recovery procedure should be liberalised. ಇದು ಏನಾಗಿದೆ ಎಂದರೆ ಸುಮಾರು 14 ಕೋಟಿ 29 ಲಕ್ಷ ರೂಪಾಯಿ ತಾವೇನು ಇವತ್ತಿನ ದಿವಸ ಪರ್‌ಚೇಸ್ ಟ್ಯಾಕ್ಸ್‌ನ್ನು ಸಿರ್ ಇಂಡಸ್ಟ್ರಿ ಎಂದು ಬಿಟ್ಟು ಬಿಡುತ್ತಿದ್ದೀರಿ, ಆದರೆ ಕೆಲವು ಸಹಕಾರ ಸಕ್ಕರೆ ಕಾರ್ಖಾನೆಗಳು ಉದಾಹರಣೆಗೆ ಒಂದು

ಕಡೆ ನೀವು ಕೊಡುವುದನ್ನು ಯಥಾ ಪ್ರಕಾರ ಕೊಡುತ್ತಿದ್ದೀರಿ. ನಾನು ಹೇಳುವುದು ಅಳಂದ ಸಕ್ಕರೆ ಫ್ಯಾಕ್ಟರಿ ಇದೆ. ಅದಕ್ಕೆ ಕೊಡುತ್ತಿದ್ದೀರಿ. ಆದರೆ ಇದೇ ಸಂದರ್ಭದಲ್ಲಿ ಕೆಲವು ಸಿಕ್ ಯೂನಿಟ್ ಏನಿದೆ, ಈಗ ಸರ್ಕಾರದ ಡಿ.ಸಿ. ಅಡ್ಮಿನಿಸ್ಟ್ರೇಟರ್ ಇದ್ದಾರೆ. ಅಂತಹ ಕಾರ್ಖಾನೆಗಳಿಗೂ ಕೂಡ ಪುನರುಜ್ಜೀವನ ಮಾಡತಕ್ಕಂಥಾದ್ದು, ರಿಜನುಯೇಟ್ ಮಾಡತಕ್ಕಂಥಾದ್ದು ನೀವು ಪ್ರಯತ್ನ ಮಾಡದೇ ಹೋದರೆ ಎಲ್ಲಾ ರೈತರು ನಮ್ಮ ಕಡೆ ಇರತಕ್ಕಂಥವರು ಮಹಾರಾಷ್ಟ್ರಕ್ಕೆ ಹೋಗುತ್ತಾರೆ. ಅಲ್ಲಿ ಕಬ್ಬು ತೆಗೆದುಕೊಂಡು ಹೋಗಿ ಅವರು ಕೇಳಿದಷ್ಟು ಧಾರಣೆ ಕೊಡತಕ್ಕಂಥ ಪರಿಸ್ಥಿತಿ ಬರುತ್ತದೆ. ಅದಕ್ಕೆ ದಯವಿಟ್ಟು ಅಳಂದ ಸಕ್ಕರೆ ಕಾರ್ಖಾನೆ ಮತ್ತು ಬೀದರ್‌ನಲ್ಲಿ ಇರತಕ್ಕಂಥ ಕಾರ್ಖಾನೆ ಇವುಗಳ ಬಗ್ಗೆಯೂ ಕೂಡ ತಾವು ಸಾಲವನ್ನು ಕೊಡತಕ್ಕಂಥದ್ದು ಮತ್ತು ಸಿ.ಓ.ಡಿ. ವಿಚಾರಣೆ ಕೂಡ ಪೆಂಡಿಂಗ್ ಇದೆ ಎಂಬ ಮಾತೇನಿದೆ ಇವುಗಳ ಬಗ್ಗೆ ತೀರ್ಮಾನ ತೆಗೆದುಕೊಂಡು ಇವೆರಡನ್ನೂ ಪುನರುಜ್ಜೀವನ ಮಾಡಬೇಕೆಂಬ ಮಾತನ್ನು ನಾನು ಹೇಳುತ್ತಿದ್ದೇನೆ. ಇನ್ನೊಂದು ಡಿಮ್ಯಾಂಡ್ ನಂ. 31 ಇದರಲ್ಲಿ 7 ಕೋಟಿ 92 ಲಕ್ಷ ರೂಪಾಯಿಗಳನ್ನು ತಾವು ಕೊಡುತ್ತಿದ್ದೀರಿ. ಇದಕ್ಕೆ ಕೇಂದ್ರ ಸರ್ಕಾರದಿಂದ ಸುಮಾರು ಹಣ ಬಂದಿತ್ತು. ಆದರೆ ಅದಕ್ಕೆ ತಕ್ಕಂತೆ ಹಣವನ್ನು ನೀವು ಖರ್ಚು ಮಾಡಿಲ್ಲ. ಮೊನ್ನೆ ಅಕ್ಟೋಬರ್‌ನಲ್ಲಿ ಈ ಹಣ ಬಂದರೂ ಕೂಡ ಫೆಬ್ರವರಿ ಅಂತ್ಯದವರೆಗೆ ನೀವು ಖರ್ಚು ಮಾಡಿರುವುದು ಶೇಕಡ 50 ಮಾತ್ರ. ಈ ಶೇಕಡ 50 ರಷ್ಟು ಹಣವನ್ನು ಫೆಬ್ರವರಿ ಅಂತ್ಯದವರೆಗೆ ಖರ್ಚು ಮಾಡಿ ಪುನ: ಇದಕ್ಕೆ ಶೇಕಡ 50 ರಷ್ಟು ಹಣವನ್ನು ತೆಗೆದುಕೊಳ್ಳುತ್ತಿದ್ದೀರಲ್ಲ ಇದೇ ವರ್ಷದಲ್ಲಿ ಇದನ್ನು ಕಂಪ್ಲೀಟ್ ಮಾಡುವ ಸಾಧ್ಯತೆ ಇದೆಯಾ? ಇಲ್ಲದಿದ್ದರೆ ತಾವು ಕನಿಷ್ಟ ಪಕ್ಷ ಯಾವ ಯೋಜನೆಗಳ ಬಗ್ಗೆ ಪೂರ್ತಿಯಾಗಿ ಬಿಲ್ ಪೆಂಡಿಂಗ್ ಇದೆ ಅದಕ್ಕಾದರೂ ಯುಟಿಲೈಸ್ ಮಾಡಿ. ಇಲ್ಲದಿದ್ದರೆ ಏನಾಗುತ್ತದೆ ಬರೀ ನೀವು ಮಲಪ್ರಭ, ಹಿರೇಹಳ್ಳ, ಘಟಪ್ರಭಾ, ಕಾರಾಂಜ ಇಂತಿಂಥ ಯೋಜನೆಗಳಿಗೆ ಇಟ್ಟಿದ್ದೀರಿ. ಆದರೆ ಅದಕ್ಕೆ ತಕ್ಕಂತೆ ಹಣ ತಮ್ಮ ವತಿಯಿಂದ ಬಿಡುಗಡೆಯಾಗತಕ್ಕಂಥದ್ದು ಆಗಿಲ್ಲ. ಅದಕ್ಕಾಗಿ ಇದು ಈ ಮೂರು ದಿವಸದಲ್ಲಿ ಆಗತಕ್ಕಂಥ ಸಾಧ್ಯತೆ ಇದೆಯೇ? ಏಕೆಂದರೆ ನೀವು ಕೊನೆಗಳಿಗೆಯಲ್ಲಿ ಹೇಳತಕ್ಕಂಥದ್ದು ಬೇರೆಯಾದರೆ ಇದನ್ನು ಯಾವ ರೀತಿ ಮಾಡುತ್ತೀರಿ ಎಂಬುದು ಒಂದು. ಎರಡನೆಯದಾಗಿ, ಡಿಮಾಂಡ್ ನಂ. 47ರಲ್ಲಿ ತಾವು ಸಾಕಷ್ಟು ಕೆಲಸವಾಗಿದೆ ಎಂದು ಹೇಳಿದ್ದೀರಿ. ನಾನು ಏನೂ ಕೆಲಸ ಆಗಿಲ್ಲ ಎಂದು ಪದೇ ಪದೇ ಏಕೆ ಹೇಳುತ್ತಿದ್ದೇನೆ ಎಂದರೆ ಮುಖ್ಯಮಂತ್ರಿಗಳೂ ಕೂಡ ಇಲ್ಲಿ ಇದ್ದಾರೆ. ತಾವು ಮೊನ್ನೆಯೂ ಕೂಡ ರಿವ್ಯೂ ಮಾಡಿದಿರಿ, ಕೆಲವು ಜನರಿಗೆ ಎಚ್ಚರ ಕೊಟ್ಟಿರಬಹುದು. ಇನ್ನು ಮುಂದೆ ಏನಾಗುತ್ತದೆ ನೋಡೋಣ. ಆದರೆ ತಾವು 1995-96 ರಲ್ಲಿ ಈ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಭಾಗ್ಯಜ್ಯೋತಿ ಯೋಜನೆಯಲ್ಲಿ ನಿಗದಿಪಡಿಸಿರತಕ್ಕಂಥ ಹಣ ನಾಲ್ಕು ಕೋಟಿ ಇಪ್ಪತ್ತೈದು ಲಕ್ಷ. ಸ್ವಾಮಿ ತಾವು ಇಲ್ಲಿಯವರೆಗೆ ಖರ್ಚು ಮಾಡಿರುವುದು ಕೇವಲ ಎರಡು ಕೋಟಿ. ಆಮೇಲೆ 1996-97 ರಲ್ಲಿ ತಾವು ನಿಗದಿಮಾಡಿದ್ದು ನಾಲ್ಕು ಕೋಟಿ ಹತ್ತು ಲಕ್ಷ. ಅದರಲ್ಲಿ ಖರ್ಚು ಮಾಡಿರುವುದು ಒಂದು ಕೋಟಿ ಎಂಭತ್ತೆರಡು ಲಕ್ಷ. ಅದೇ ರೀತಿಯಾಗಿ 1997-98 ರಲ್ಲಿ ತಾವು ನಿಗದಿಪಡಿಸಿದ್ದು ಒಂದೂವರೆ ಕೋಟಿ, ಖರ್ಚು ಮಾಡಿರುವುದು ಕೇವಲ ಆರು ಲಕ್ಷ. ಅಂದರೆ ಈ ರೀತಿಯಾಗಿ ನಿಮ್ಮ ಯೋಜನೆ ಇಟ್ಟುಕೊಂಡು ಪುನ: ನಮಗೆ ಹಣ ಬೇಕು ಎಂದು ಹೇಳಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ತಾವು ಕೇಳುತ್ತೀರಲ್ಲ ಇದನ್ನು ಏಕೆ ರಿವ್ಯೂ ಮಾಡಲಿಲ್ಲ, ಕೆಲಸ ಏಕೆ ಆಗಿಲ್ಲ ಎಂದು ಹೇಳಲಿಲ್ಲ. ಹಣವನ್ನು ಇಟ್ಟಿದ್ದೇವೆ ಎಂದು ಹೇಳುತ್ತೀರಿ. ಹೊರತಾಗಿ ನಿಮ್ಮ ಸಾಧನೆಯನ್ನು ನೋಡಿದಾಗ ನಮಗೆ ನಾಚಿಕೆಯಾಗುತ್ತದೆ. ಇದೇ ರೀತಿ ಪರಿಶಿಷ್ಟ

ಪಂಗಡದವರದ್ದೂ ಕೂಡ ಇದೆ. ಹೀಗೆ ನೀವು ಹೇಳುವುದು ಒಂದು, ಮಾಡುವುದು ಒಂದು ದಯವಿಟ್ಟು ಮಾಡಬಾರದು. ಏನು ಹಣವನ್ನು ಇಡುತ್ತೀರಿ ಆ ಹಣ ಖರ್ಚಾಗುತ್ತದೆಯೊ ಇಲ್ಲವೊ ಎಂಬುದನ್ನು ನೋಡಬೇಕು. ಏಕೆಂದರೆ ಕೆ. ಇ. ಬಿ. ಯವರಿಗೆ ಹೆಚ್ಚಿನ ಹಣವನ್ನು ಕೊಡತಕ್ಕಂಥದ್ದು, ಅವರು ಸಾಲವನ್ನು ತೆಗೆದುಕೊಳ್ಳಲಿಕ್ಕೆ ಗ್ಯಾರಂಟಿ ಕೊಡತಕ್ಕಂಥದ್ದನ್ನು ನೀವು ಮಾಡುತ್ತಿದ್ದೀರಿ ಆದರೆ ಭಾಗ್ಯಜ್ಯೋತಿ ಯೋಜನೆಯಲ್ಲಿ ಇಟ್ಟಂಥ ಹಣವನ್ನು ಅವರು ಇವೊತ್ತಿನ ದಿವಸ ಖರ್ಚು ಮಾಡಲಿಲ್ಲ. ಅಂದರೆ ಮೂರು ವರ್ಷದಲ್ಲಿ 50 ಪರ್ಸೆಂಟ್ ಹಣ ಅವರು ಖರ್ಚು ಮಾಡಲಿಲ್ಲ. ನೀವು ಹಣವನ್ನು ಇಟ್ಟಿರಬಹುದು ಆದರೆ ಇಟ್ಟಂಥ ಹಣವನ್ನು ಏಕೆ ಖರ್ಚು ಮಾಡಲಿಲ್ಲ ಎಂದು ಕೇಳತಕ್ಕಂಥ ಶಕ್ತಿ ಇಲ್ಲ. ಏಕೆ ಇದು ಬಡವರ ಕಾರ್ಯಕ್ರಮ ಎಂಬ ಕಾರಣಕ್ಕಾಗಿ ಈ ರೀತಿ ಮಾಡುತ್ತಿದ್ದೀರಾ? ಇದು ಮೂರು ವರ್ಷದ್ದಿದೆ ದಯಮಾಡಿ ನೋಡಿ. ಅದಕ್ಕಾಗಿ ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಇವರು ಯಾವುದಕ್ಕೆ ಹಣವನ್ನು ನಿಗದಿಪಡಿಸಿಕೊಳ್ಳುತ್ತಾರೆ, ಕನಿಷ್ಟಪಕ್ಷ ಯಾವ ಜನಾಂಗಕ್ಕೆ ನೀವು ನಮ್ಮಿಂದ ಅಥವಾ ಸದನದಿಂದ ಅಪ್ರೂವಲ್ ತೆಗೆದುಕೊಳ್ಳುತ್ತಿರೊ ಆ ಹಣ ಅವರಿಗೆ ಮುಟ್ಟುತ್ತದೆ ಎಂದು ಖಾತ್ರಿ ಪಡಿಸಿಕೊಳ್ಳದೆ ಪುನ: ಹಣ ಕೇಳಿದರೆ ಹೇಗೆ? ಅದಕ್ಕೆ ದಯವಿಟ್ಟು ಇನ್ನು ಮುಂದೆಯಾದರೂ ಈ ಎಲ್ಲಾ ಕಾರ್ಯ ಕ್ರಮಗಳನ್ನು ರಿವ್ಯೂ ಮಾಡುತ್ತೀರಿ ಎಂಬ ನಂಬಿಕೆಯಿಂದ ನಾನು ತಮ್ಮ ಮುಖೇನ ಹೇಳಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ:- ನೀವು ಹೇಳಿರತಕ್ಕಂಥ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಿವ್ಯೂ ಮಾಡುತ್ತೇವೆ. ನಾವು ಕೊಟ್ಟಿರತಕ್ಕಂಥ ಹಣ ಸಾಲಲ್ಲ ಎಂದು ಹೆಚ್ಚುವರಿ ಹಣ ಕೊಡಬೇಕೆಂದು ಇಟ್ಟುಕೊಂಡಿದ್ದೇವೆ. ಅವರು ಹೇಳತಕ್ಕಂಥ ವಿಚಾರದ ಬಗ್ಗೆ ರಿವ್ಯೂ ಮಾಡಿ ಎಲ್ಲೆಲ್ಲಿ ಕೆಲಸಗಳು ಆಗಿಲ್ಲ ಅದನ್ನು ಮಾಡಿಸುತ್ತೇನೆ.

1997-98ನೇ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಅಧ್ಯಕ್ಷರು:- 1997-98ನೇ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು) ಬೇಡಿಕೆಗಳ ಮೇಲಿನ ಪ್ರಸ್ತಾವವನ್ನು ಸಭೇಯ ಮತಕ್ಕೆ ಹಾಕುತ್ತೇನೆ. 'ಪ್ರಸ್ತಾವ ಏನೆಂದರೆ;

" ದಿನಾಂಕ 31.03. 1998 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ 1, 5, 7, 8, 9, 11, 13 14 15, 16, 17, 18, 20, 21, 23, 25, 26, 29, 31, 33, 34, 35, 36, 37, 38, 39, 40, 41, 42, 44, 45, 47, 48, 49, 51, 52, 53, 54, 55, 56, 57, 58, 59, 61. ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮೊಬಲಗನ್ನು ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿದ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಬೇಡಿಕೆಯ ಪಟ್ಟಿಯ ಪ್ರತಿಯನ್ನು ಲಗತ್ತಿಸಲಾಗಿದೆ)

1997-98ನೇ ಸಾಲಿನ ಪೂರಕ ಅಂದಾಜುಗಳು (ಅಂತಿಮ ಕಂತು)

ಪೂರಕ ಅಂದಾಜುಗಳು (ಅಂತಿಮ ಕಂತು)

ಅ. ಕ್ರ.	ಸೇವೆಗಳು ಮತ್ತು ಉದ್ದೇಶಗಳು		ಮೊಬಲಗು (ಲಕ್ಷ ರೂಗಳಲ್ಲಿ)			
			ಪ್ರಭೃತ	ಪುರಸ್ಕೃತ	ಒಟ್ಟು	ಪುಟ ಸಂಖ್ಯೆ
1	2		3	4	5	6
1.	ವ್ಯವಸಾಯ	- ರಾಜಸ್ವ	-	168.72	168.72	1-3
		- ಬಂಡವಾಳ	-	55.72	55.72	
5.	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯ ಹೊರತು)	- ರಾಜಸ್ವ	-	949.55	949.55	4-5
		- ಬಂಡವಾಳ	-	439.22	439.22	
7.	ಚಿಕ್ಕಪುಟ್ಟ ಉದ್ಯಮಗಳು	- ರಾಜಸ್ವ	-	19.50	19.50	6
8.	ರೇಷ್ಮೆ ವ್ಯವಸಾಯ	- ರಾಜಸ್ವ	0.95	17.36	18.31	7-8
		- ಬಂಡವಾಳ	-	20.00	20.00	
9.	ಸಕ್ಕರೆ	- ಬಂಡವಾಳ	-	2203.42	2203.42	9-10
11.	ಉನ್ನತ ಶಿಕ್ಷಣ	- ರಾಜಸ್ವ	0.15	2778.62	2778.77	11-12
13.	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	- ರಾಜಸ್ವ	-	53.27	53.27	13-14
14.	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ	- ರಾಜಸ್ವ	-	484.13	484.13	15
15.	ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳ ಮೇಲಿನ ತೆರಿಗೆಗಳು	- ರಾಜಸ್ವ	-	302.90	302.90	16-17
16.	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	- ರಾಜಸ್ವ	7.00	1201.00	1208.00	18
17.	ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು	- ಬಂಡವಾಳ	-	150.00	150.00	19
18.	ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ, ಖಜಾನೆ ಮತ್ತು ಲೆಕ್ಕಾಡಳಿತ	- ರಾಜಸ್ವ	-	1500.00	1500.00	20-21
		- ಬಂಡವಾಳ	-	12.00	12.00	
20.	ಆಹಾರ ಮತ್ತು ನಾಗರೀಕ ಸರಬರಾಜು	- ರಾಜಸ್ವ	1.21	3600.00	3601.21	22

1	2		3	4	5	6
21.	ಅರಣ್ಯ	- ರಾಜಸ್ವ	-	3657.77	3657.77	23-24
23.	ಸಾರಿಗೆ ಸೇವೆಗಳು	- ರಾಜಸ್ವ	-	20.00	20.00	25
25.	ಬಂದೀ ಖಾನೆ, ಅಗ್ನಿ ಶಾಮಕ ಮತ್ತು ಸೈನಿಕರ ಕಲ್ಯಾಣ ಮುಂತಾದವುಗಳು	- ರಾಜಸ್ವ	-	115.50	115.50	26-27
26.	ವಾರ್ತಾ ಮತ್ತು ಪ್ರಚಾರ	- ರಾಜಸ್ವ	-	205.00	205.00	28
29.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	- ರಾಜಸ್ವ	-	700.00	700.00	29-30
		- ಬಂಡವಾಳ	-	800.00	800.00	
31.	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	- ರಾಜಸ್ವ	-	792.17	792.17	31
33.	ಸಣ್ಣ ನೀರಾವರಿ	- ಬಂಡವಾಳ	-	500.00	500.00	32
34.	ಭಾರಿ ಮತ್ತು ಮಧ್ಯಮ ನೀರಾವರಿ	- ಬಂಡವಾಳ	-	13100.18	13100.18	33-35
35.	ರಾಜ್ಯ ವಿಧಾನ ಮಂಡಲ	- ರಾಜಸ್ವ	10.10	278.73	288.83	36-38
36.	ನ್ಯಾಯ ಪರಿಪಾಲನೆ	- ರಾಜಸ್ವ	-	47.00	47.00	39
37.	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕ ಸೇವಾ ಆಯೋಗ	- ರಾಜಸ್ವ	6.50	75.00	81.50	40
38.	ಸಚಿವಾಲಯ	- ರಾಜಸ್ವ	-	74.50	74.50	41
39.	ಜಿಲ್ಲಾ ಆಡಳಿತ	- ರಾಜಸ್ವ	1.26	285.47	286.73	42-44
40.	ಸಾಮಾನ್ಯ ಆಡಳಿತ ಇತ್ಯಾದಿ	- ರಾಜಸ್ವ	64.95	4991.45	5056.40	45-47
41.	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು (ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಗಳ ಹೊರತು)	- ರಾಜಸ್ವ	-	42.60	42.60	48-49
		- ಬಂಡವಾಳ	-	237.64	237.64	
42.	ಹಿಂದುಳಿದ ಪ್ರದೇಶಗಳ ಅಭಿವೃದ್ಧಿ	- ರಾಜಸ್ವ	-	150.00	150.00	50
44.	ಕಟ್ಟಡಗಳು	- ರಾಜಸ್ವ	-	200.00	200.00	51
		- ಬಂಡವಾಳ	-	7.00	7.00	
45.	ರಸ್ತೆ ಮತ್ತು ಸೇತುವೆಗಳು	- ಬಂಡವಾಳ	-	125.00	125.00	52
47.	ವಿದ್ಯುಚ್ಛಕ್ತಿ ಯೋಜನೆಗಳು	- ರಾಜಸ್ವ	-	6678.00	6678.00	53

1	2		3	4	5	6
48.	ಭೂ ಕಂದಾಯ ಇತ್ಯಾದಿಗಳು	- ರಾಜಸ್ವ	6.13	347.41	353.54	54-56
49.	ಮುದ್ರಾಂಕ ಮತ್ತು ನೋದಂಣಿ	- ರಾಜಸ್ವ	-	50.00	50.00	57
51.	ವಕ್ಫ್	- ರಾಜಸ್ವ	-	10.00	10.00	58
52.	ಸಹಕಾರ	- ರಾಜಸ್ವ	-	310.00	310.00	59-60
		- ಬಂಡವಾಳ	-	6.00	6.00	
53.	ನಿಯಂತ್ರಿತ ಮಾರುಕಟ್ಟೆಗಳು	- ರಾಜಸ್ವ	-	4.00	4.00	61
54.	ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ	- ರಾಜಸ್ವ	-	0.01	0.01	62
55.	ಗ್ರಾಮೀಣ ಅಭಿವೃದ್ಧಿ	- ರಾಜಸ್ವ	-	0.01	0.01	63
56.	ಕಾರ್ಮಿಕ ಮತ್ತು ಉದ್ಯೋಗ	- ರಾಜಸ್ವ	-	200.01	200.01	64-65
57.	ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ ಕಲ್ಯಾಣ	- ರಾಜಸ್ವ	0.24.	142.99	143.23	66-67
58.	ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ	- ರಾಜಸ್ವ	-	82.41	82.41	68-69
59.	ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ	- ರಾಜಸ್ವ	-	10.00	10.00	70
61.	ವಸ್ತ್ರೋದ್ಯಮಗಳು	- ಬಂಡವಾಳ	-	0.01	0.01	71
	ಜುಮ್ಲಾ	- ರಾಜಸ್ವ	98.49	30545.08	30643.57	
		- ಬಂಡವಾಳ	-	17656.19	17656.19	
	ಒಟ್ಟು ಜುಮ್ಲಾ	-	98.49	48201.27	48299.76	

7. ಶಾಸನ ರಚನಾ ಕಾರ್ಯಕಲಾಪ

(ಎ) ವಿಧೇಯಕಗಳನ್ನು ಮಂಡಿಸುವುದು

(ಅ) ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ 1998. ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ "1998ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :-ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ - I

(ಆ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1998 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ದರಾಮಯ್ಯ (ಉಪಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಅನುಬಂಧ - II ವಿಧೇಯಕವನ್ನು ಮಂಡಿಸಲಾಗಿದೆ.

(ಇ) ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕ, 1998 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) (ಮುಖ್ಯಮಂತ್ರಿಯವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಸ್ಟಾಂಪು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಅನುಬಂಧ - III & IV ವಿಧೇಯಕವನ್ನು ಮಂಡಿಸಲಾಗಿದೆ

- - -

(ಈ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1998

ಶ್ರೀ ಸಿದ್ದರಾಮಯ್ಯ (ಉಪಮುಖ್ಯ ಮಂತ್ರಿಗಳು) (ಸಾರಿಗೆ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :-ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :- ಅನುಬಂಧ- III & IV ವಿಧೇಯಕವನ್ನು ಮಂಡಿಸಲಾಗಿದೆ

(ಬಿ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(ಅ) ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು :- ''ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿದೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :-ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಧನವಿನಿಯೋಗ ವಿಧೇಯಕ 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ,'' 1998ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ಮತ್ತು 3

ಅಧ್ಯಕ್ಷರು :-'' ಖಂಡ 2 ಮತ್ತು 3 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

\- - -

(ಇ) ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 9 ರವರೆಗೆ

ಅಧ್ಯಕ್ಷರು :- ''ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 9 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಈ) ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಸ್ಟ್ಯಾಂಪು (ತಿದ್ದುಪಿಡ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು :- '' ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಉ) ಕರ್ನಾಟಕ ಮೋಟಾರು ತೆರಿಗೆ (ತಿದ್ದುಪಡಿ) ವಿಧೇಯಕ, 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು) (ಸಾರಿಗೆ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ, '' 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 5 ರವರೆಗೆ

ಅಧ್ಯಕ್ಷರು :- '' ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :- ಪ್ರಸ್ತಾವ ಏನೆಂದರೆ; '' 1998ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :- ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1998 ಹಾಗೂ ಇತರೆ ವಿಧೇಯಕಗಳನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಬಾಡಿಗೆ ನಿಯಂತ್ರ (ವಿಧೇಯಕ) 1998 ಸಣ್ಣ ರಿಪ್ಲೇಸ್‌ಮೆಂಟ್ ಆಫ್ ಅರ್ಡಿನೆನ್ಸ್ ಅಷ್ಟೆ ಅದನ್ನು ಈಗಲೇ ತೆಗೆದುಕೊಳ್ಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಅವು ಟ್ಯಾಕ್ಸೇಷನ್ ಅಲ್ಲ, ಆಯವ್ಯಯಕ್ಕೆ ಸಂಬಂಧಪಟ್ಟದ್ದಲ್ಲ, ನಾವು ಓದಿ ಒಂದು ವಾಖ್ಯವಾದರೂ ನಾಳೆ ಹೇಳುವುದಕ್ಕೆ ಅವಕಾಶ ಕೊಡಿ. ಅದರಲ್ಲಿ ಏನಿದೆ ಏನು ಇಲ್ಲವೆನ್ನುವುದನ್ನು ನಾಳೆ ನೋಡೋಣ. ನಾವು ಬೆಳಿಗ್ಗೆ 9ಗಂಟೆಗೆ ಬಂದರೆ ಈಗ ಹೋಗಬೇಕಾಗಿದೆ.

ಅಧ್ಯಕ್ಷರು :- ಅವನ್ನು ನಾಳೆ ತೆಗೆದುಕೊಳ್ಳೋಣ ಬಿಡಿ, ಈಶ್ವರಪ್ಪನವರೆ, ಈಗ ಮೈಸೂರು ಪೇಪರ್ ಮಿಲ್ಸ್ ಅಧಿಕಾರಿಗಳೆಲ್ಲಾ ಪೇಪರ್ಸ್ ಎಲ್ಲಾ ತೆಗೆದುಕೊಂಡು ಬಂದು ಬೆಳಿಗ್ಗೆಯಿಂದ ಕಾಯುತ್ತಿದ್ದರು, ನಮಗೂ ಇವತ್ತು ಕಾಲಾವಕಾಶವಾಗಲಿಲ್ಲ, ಅದಕ್ಕೆ ಅವರಿಗೆ ನಾಳೆ ಬರಲು ಹೇಳಿದ್ದೇನೆ. ಏಕೆಂದರೆ, ಅವರು ಬಂದಿರಲಿಲ್ಲವೆನ್ನುವ ಅಭಿಪ್ರಾಯ ತಮಗೆ ಬರಬಾರದು, ಅವರು ಬೆಳಿಗ್ಗೆಯಿಂದ ಇಲ್ಲೇ ಇದ್ದರು, ಆ ಡಾಕ್ಯುಮೆಂಟ್ಸ್ ಎಲ್ಲಾ ತೆಗೆದು ಕೊಂಡು ಬಂದಿದ್ದಾರೆ, ಕಾನೂನು ಮಂತ್ರಿಗಳು ಕೂಡ

ತಯಾರಾಗಿದ್ದಾರೆ, ನಾಳೆ ಒಂದು ಹತ್ತು ನಿಮಿಷ ಅವನ್ನು ನೋಡೋಣ. ಈಗ ಐದು ಗಮನ ಸೆಳೆಯುವ ಸೂಚನೆಗಳಿದ್ದಾವೆ. ಆದಾದ ಮೇಲೆ ಪ್ರಶ್ನೋತ್ತರ ವೇಳೆ ತೆಗೆದುಕೊಳ್ಳಬೇಕು, ಇದೆಲ್ಲಾ ಮಾಡುವುದಕ್ಕೆ ಬಹಳ ತಡವಾಗುತ್ತದೆ, ನನಗೂ ಸಾಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ಅವರದನ್ನು ನಾಳೆ ರಿಪೀಟ್ ಮಾಡುತ್ತೇವೆಂದರೆ ಪರವಾಗಿಲ್ಲ, ಏಕೆಂದರೆ ನಾಳೆ ಅಧಿವೇಶನದ ಕೊನೆಯ ದಿನವಾಗಿರುತ್ತದೆ.

ಅಧ್ಯಕ್ಷರು :- ಒಂದು ಕೆಲಸ ಮಾಡೋಣ, ಇವತ್ತು ಲ್ಯಾಪ್ಸ್ ಆಗಿರುವ ಬಿಸಿನೆಸ್ ಎಲ್ಲಾ ನಾಳೆಗೆ ಹಾಕಿಬಿಡೋಣ, we should be prepared to sit for a little longer time.

Mr. M. Mallikarjuna Kharge :- Little early and little late,

ಅಧ್ಯಕ್ಷರು :- ನನ್ನದೇನು ತೊಂದರೆ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ :- ಅಧ್ಯಕ್ಷರೆ, ಕರ್ನಾಟಕ ಬಾಡಿಗೆ ನಿಯಂತ್ರಣ (ತಿದ್ದುಪಡಿ) ವಿಧೇಯಕ 1998, ಅದು ರಾಷ್ಟ್ರಪತಿಗಳ ಅನುಮೋದನೆಗೆ ಹೋಗಬೇಕಾಗುತ್ತದೆ ತಾವು ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ, ನಾಳೆ ಬೆಳಿಗ್ಗೆಯೆ ಅದನ್ನು ತೆಗೆದುಕೊಂಡರೆ ಒಳ್ಳೆಯದು, ಏಕೆಂದರೆ, ಅದು ಮತ್ತೆ ವಿಧಾನ ಪರಿಷತ್ತಿಗೆ ಹೋಗಬೇಕು.

ಅಧ್ಯಕ್ಷರು :- ಅದನ್ನು ನಾಳೆ ಮಾಡಿಸಿಕೊಡುತ್ತೇನೆ, ಇವತ್ತು ರಾತ್ರಿ ಅವರು ಓದಿಕೊಳ್ಳುತ್ತಾರೆ, ನಾಳೆ ಪಾಸ್ ಮಾಡಿಸಿಕೊಡೋಣ, ಈಗ ಗಮನ ಸೆಳೆಯುವ ಸೂಚನೆ ಇಲ್ಲ, ಪ್ರಶ್ನೋತ್ತರನೂ ಇಲ್ಲ, my attention is being called elsewhere.

ಶ್ರೀ ವಾಟಾಳ್ ನಾಗರಾಜ್ :- ಇವತ್ತಿನ ಪ್ರಶ್ನೆಗಳನ್ನು ನಾಳೆ ತೆಗೆದುಕೊಳ್ಳುತ್ತೀರಾ, ನಾಳೆಯದು, ಇವತ್ತಿನದು ಒಟ್ಟಿಗೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು :- ವಾಟಾಳ್ ನಾಗರಾಜ್‌ರವರೆ, ನಾಳೆ ಪ್ರಶ್ನೋತ್ತರವಿರುವುದರಿಂದ, ಇವತ್ತಿನದು ನಾಳೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ಇವತ್ತಿನದು ಲ್ಯಾಪ್ಸ್ ಆಗುತ್ತದೆ, ಇವತ್ತು ಯಾವ ಗಮನ ಸೆಳೆಯುವ ಸೂಚನೆಗಳನ್ನು ಇವತ್ತಿನ ಬಿಸಿನೆಸ್‌ಗೆ ಲಿಸ್ಟ್ ಮಾಡಿದ್ದೇವೆ, ಅವನ್ನು ನಾಳೆ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನಿಸುತ್ತೇನೆ, ಪ್ರಶ್ನೋತ್ತರ ಲ್ಯಾಪ್ಸ್ ಆಗುತ್ತದೆ I become helpless. If all the Members agree, we can meet at 9.00 a.m. tomorrow. Will it be agreeable? ನಾಳೆ ಬೆಳಿಗ್ಗೆ 9.00 ಗಂಟೆಗೆ ಸೇರುವುದಕ್ಕೆ ಮಲ್ಲಿಕಾರ್ಜುನ ಖರ್ಗೆಯವರೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಬೆಳಿಗ್ಗೆ 9. 30 ಕ್ಕೆ ಸೇರೋಣ.

ಅಧ್ಯಕ್ಷರು :- 9. 30 ಅಂದರೆ ಮತ್ತೆ ಸೇರುವುದಕ್ಕೆ 10.00 ಗಂಟೆಯಾಗುತ್ತದೆ, ಬೆಳಿಗ್ಗೆ 9.00 ಗಂಟೆಗೆ ನಾವು ಬರುತ್ತೇವೆ. ದಯಮಾಡಿ, ನಾಳೆ ಯಾರ್ಯಾರ ಮಂತ್ರಿಗಳ ಪ್ರಶ್ನೆಗಳಿರುತ್ತವೆ ಅವರಿಗೆ ತಿಳಿಸಿಬಿಡಿ, ಬೆಳಿಗೆ 9.00 ಗಂಟೆಗೆ ಪ್ರಶ್ನೋತ್ತರ ವೇಳೆ ಎಂ.ಪಿ. ಪ್ರಕಾಶ್‌ರವರೆ ನಾಣಯ್ಯನವರು ಇಲ್ಲ ತಾವು ದಯಮಾಡಿ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ನಾನು ಹೇಳುವುದೇನೆಂದರೆ, ಪ್ರಶ್ನೋತ್ತರ

ವೇಳೆ ನಾಳೆ ಬೆಳಿಗ್ಗೆ 9.00 ಗಂಟೆಗೆ ಪ್ರಾರಂಭವಾಗುತ್ತದೆ, ಸಂಬಂಧಿಸಿದ ಮಂತ್ರಿಗಳಿಗೆ ದಯಮಾಡಿ ಮೊದಲೇ ತಿಳಿಸಿಬಿಡಿ, ಅವರು ತಡವಾಗಿ ಬಂದು ಇಲ್ಲಿ ಅಭಾಸವಾಗುವುದು ಬೇಡ. ಪ್ರತಿ ಪಕ್ಷದ ಎಲ್ಲ ನಾಯಕರು ಹಾಗೂ ಪ್ರತಿಪಕ್ಷದ ಸದಸ್ಯರಿಗೆ ಮನವಿ ಮಾಡಿಕೊಂಡಿದ್ದೇನೆ ಅವರು ಕೂಡ ಬೆಳಿಗ್ಗೆ 9.00 ಗಂಟೆಗೆ ಬರುತ್ತಾರೆ. ಏಕೆಂದರೆ ಇವತ್ತು ಸ್ವಲ್ಪ ಬಿಸಿನೆಸ್ ಉಳಿದಿರುವುದರಿಂದ, tomorrow is the last day. So, let us not have any bitterness. So, please tell them. ಈಗ ಸಭೆಯನ್ನು, ಮುಂದೂಡಿ ಪುನ: ನಾಳೆ ಬೆಳಿಗ್ಗೆ 9.00 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6 ಗಂಟೆ 40 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 27ನೇ ಮಾರ್ಚ್ ಮಾಹೆ 1998ರ ಶುಕ್ರವಾರದಂದು ಬೆಳಿಗ್ಗೆ 9.00 ಗಂಟೆಗೆ ಸೇರಲು ನಿಶ್ಚಯಿಸಿತು)

(★ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅನುಬಂಧ -I

ಕರ್ನಾಟಕ ವಿಧಾನಸಭೆ

ಹತ್ತನೆಯ ವಿಧಾನಸಭೆ

(ಏಳನೆಯ ಅಧಿವೇಶನ)

ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 1998

(1998ರ ವಿಧಾನಸಭಾ ವಿಧೇಯಕ ಸಂಖ್ಯೆ 7)

1998-99ನೇ ಭಾಗದ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿನಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1998-99ನೇ ಭಾಗದ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು - ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ಲೇಖಾನುದಾನ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1998-99ನೇ ಹಣಕಾಸು ವರ್ಷಕ್ಕಾಗಿ 4,406,02,25,000 ರೂಪಾಯಿಗಳ ನೀಡಿಕೆ - ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1998-99ನೆ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನಾಲ್ಕು ಸಾವಿರದ ನಾನೂರ ಆರುಕೋಟಿ ಎರಡು ಲಕ್ಷ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿನಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದು.

3. ಧನವಿನಿಯೋಗ - ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿನಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅ ನು ಸೂ ಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

ಬೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		
			ವಿಧಾನಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದದನ್ನು	ಒಟ್ಟು
1	2		3	4	5
1	ವ್ಯವಸಾಯ	ರಾಜಸ್ವ	68,62,95,000	5,80,000	68,68,75,000
		ಬಂಡವಾಳ	2,01,02,000	-	2,01,02,000
2	ತೋಟಗಾರಿಕೆ	ರಾಜಸ್ವ	21,61,42,000	2,90,000	21,64,32,000
		ಬಂಡವಾಳ	27,50,000	-	27,50,000
3	ಪಶು ಸಂಗೋಪನೆ	ರಾಜಸ್ವ	29,36,59,000	1,61,000	29,38,20,000
		ಬಂಡವಾಳ	-	-	-
4	ಮೀನುಗಾರಿಕೆ	ರಾಜಸ್ವ	5,84,92,000	-	5,84,92,000
		ಬಂಡವಾಳ	1,14,25,000	-	1,14,25,000
5	ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಜವಳಿ, ಸಕ್ಕರೆ ಮತ್ತು ರೇಷ್ಮೆ ವ್ಯವಸಾಯದ ಹೊರತು)	ರಾಜಸ್ವ	8,46,45,000	-	8,46,45,000
		ಬಂಡವಾಳ	5,97,50,000	-	5,97,50,000
6	ಗಣಿಗಳು ಮತ್ತು ಭೂ ವಿಜ್ಞಾನ	ರಾಜಸ್ವ	4,24,91,000	-	4,24,91,000
7	ಚಿಕ್ಕಪುಟ್ಟ ಉದ್ಯಮಗಳು	ರಾಜಸ್ವ	21,60,43,000	-	21,60,43,000
		ಬಂಡವಾಳ	2,55,00,000	-	2,55,00,000

1	2		3	4	5
8	ರೇಷ್ಮೆ ವ್ಯವಸಾಯ	ರಾಜಸ್ವ	32,19,10,000	5,000	32,19,15,000
		ಬಂಡವಾಳ	10,00,000	-	10,00,000
9	ಸಕ್ಕರೆ	ರಾಜಸ್ವ	1,94,44,000	-	1,94,44,000
		ಬಂಡವಾಳ	1,10,00,000	-	1,10,00,000
10	ಲೇಖನ ಸಾಮಾಗ್ರಿ ಮತ್ತು ಮುದ್ರಣ	ರಾಜಸ್ವ	7,38,15,000	-	7,38,15,000
11	ಉನ್ನತ ಶಿಕ್ಷಣ	ರಾಜಸ್ವ	93,31,35,000	-	93,31,35,000
		ಬಂಡವಾಳ	-	-	-
12	ಯುವಜನಸೇವೆ	ರಾಜಸ್ವ	9,72,29,000	-	9,72,29,000
13	ಕಲೆ, ಸಂಸ್ಕೃತಿ ಮತ್ತು ಕನ್ನಡ ಅಭಿವೃದ್ಧಿ	ರಾಜಸ್ವ	4,18,04,000	10,000	4,18,14,000
14	ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ	ರಾಜಸ್ವ	5,49,77,70,000	-	5,49,77,70,000
15	ವರಮಾನ ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು	ರಾಜಸ್ವ	19,18,38,000	3,000	19,18,41,000
16	ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು	ರಾಜಸ್ವ	2,59,11,25,000	57,50,000	2,59,68,75,000
17	ಸರ್ಕಾರಿ ನೌಕರನಿಗೆ ಸಹಾಯ ಮತ್ತು ವಿವಿಧ ಸಾಲಗಳು	ರಾಜಸ್ವ	3,00,00,000	-	3,00,00,000
		ಬಂಡವಾಳ	2,99,88,000	-	2,99,88,000

1	2		3	4	5
18	ಸಣ್ಣ ಉಳಿತಾಯಗಳು ಮತ್ತು ರಾಜ್ಯಲಾಟರಿಗಳು ವಿಮೆ ಮತ್ತು ಖಜಾನೆ ಮತ್ತು ಲೆಕ್ಕಾಡಳಿತ	ರಾಜಸ್ವ	80,57,92,000	1,000	80,57,93,000
		ಬಂಡವಾಳ	7,50,000	-	7,50,000
19	ಇತರೆ ವಿವಿಧ ಸೇವೆಗಳು	ರಾಜಸ್ವ	10,75,000	-	10,75,000
		ಬಂಡವಾಳ	25,00,000	-	25,00,000
20	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	48,84,92,000	75,000	48,85,67,000
		ಬಂಡವಾಳ	3,75,000	-	3,75,000
21	ಅರಣ್ಯ	ರಾಜಸ್ವ	65,84,64,000	3,37,80,000	69,22,44,000
		ಬಂಡವಾಳ	1,25,000	-	1,25,000
22	ರಾಜ್ಯದ ಅಬಕಾರಿ	ರಾಜಸ್ವ	9,36,22,000	-	9,36,22,000
		ಬಂಡವಾಳ	27,75,00,000	-	27,75,00,000
23	ಸಾರಿಗೆ ಸೇವೆಗಳು	ರಾಜಸ್ವ	20,04,35,000	-	20,04,35,000
		ಬಂಡವಾಳ	10,00,000	-	10,00,000
24	ಆರಕ್ಷಕ ಸೇವೆಗಳು	ರಾಜಸ್ವ	1,48,32,43,000	-	1,48,32,43,000
		ಬಂಡವಾಳ	2,02,50,000	-	2,02,50,000
25	ಬಂದೀಖಾನೆಗಳು ಅಗ್ನಿಶಾಮಕ ಮತ್ತು ಸೈನಿಕರ ಕಲ್ಯಾಣ ಇತ್ಯಾದಿ	ರಾಜಸ್ವ	15,02,77,000	-	15,02,77,000
		ಬಂಡವಾಳ	10,00,000	-	10,00,000
26	ವಾರ್ತಾ ಮತ್ತು ಪ್ರಚಾರ	ರಾಜಸ್ವ	3,94,12,000	-	3,94,12,000

1	2		3	4	5
27	ಪ್ರವಾಸೋದ್ಯಮ	ರಾಜಸ್ವ	5,28,60,000	-	5,28,60,000
28	ವೈದ್ಯಕೀಯ ಶಿಕ್ಷಣ	ರಾಜಸ್ವ	46,15,37,000	1,000	46,15,38,000
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	1,55,80,75,000	-	1,55,80,75,000
		ಬಂಡವಾಳ	15,30,00,000	-	15,30,00,000
30.	ಗೃಹನಿರ್ಮಾಣ (ಸರ್ಕಾರಿ ನಿವಾಸದ ಕಟ್ಟಡಗಳ ಹೊರತು)	ರಾಜಸ್ವ	43,89,09,000	-	43,89,09,000
		ಬಂಡವಾಳ	1.20,25.000	-	1,20,25,000
31	ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳು ಮತ್ತು ನಗರ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ಹೊರತುಪಡಿಸಿ)	ರಾಜಸ್ವ	1.39,06,59,000	-	1,39,06,59,000
		ಬಂಡವಾಳ	4,01,25,000	-	4,01,25,000
32	ಬೆಂಗಳೂರು ಅಭಿವೃದ್ಧಿ	ರಾಜಸ್ವ	26,87,50,000	-	26,87,50,000
		ಬಂಡವಾಳ	55,17,50,000	-	55,17,50,000
33	ಸಣ್ಣ ನೀರಾವರಿ	ರಾಜಸ್ವ	16,75,40,000	-	16,75,40,000
		ಬಂಡವಾಳ	28,90,00,000	2,50,000	28,92,50,000
34	ಭಾರಿ ಮತ್ತು ಮಧ್ಯಮ ನೀರಾವರಿ	ರಾಜಸ್ವ	1,32,13,30,000	-	1,32,13,30,000
		ಬಂಡವಾಳ	2,97,26,90,000	3,22,50,000	3,00,49,40,000
35	ರಾಜ್ಯ ವಿಧಾನ ಮಂಡಲ	ರಾಜಸ್ವ	6,05,87,000	12,61,000	6,18,48,000
36	ನ್ಯಾಯ ಪರಿಪಾಲನೆ	ರಾಜಸ್ವ	24,00,40,000	-	24,00,40,000
37	ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ	ರಾಜಸ್ವ	2,20,39,000	1,90,95,000	4,11,34,000

1	2		3	4	5
38	ಸಚಿವಾಲಯ	ರಾಜಸ್ವ	12,46,00,000	4,000	12,46,04,000
39	ಜಿಲ್ಲಾಡಳಿತ	ರಾಜಸ್ವ	32,33,29,000	4,000	32,33,33,000
		ಬಂಡವಾಳ	50,00,000	-	50,00,000
40	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	10,38,70,000	5,22,24,000	15,60,94,000
41	ಯೋಜನೆ ಮತ್ತು ಸಾಂಖ್ಯಿಕ ಹಣಕಾಸು-ಹೈದರಾಬಾದು ಕರ್ನಾಟಕ ಅಭಿವೃದ್ಧಿ ಮಂಡಳಿ ಮತ್ತು ಮಲೆನಾಡು ಪ್ರದೇಶ ಅಭಿವೃದ್ಧಿಮಂಡಳಿ ಹೊರತು	ರಾಜಸ್ವ	7,78,29,000	-	7,78,29,000
		ಬಂಡವಾಳ	1,25,000	-	1,25,000
42	ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ	ರಾಜಸ್ವ	23,19,75,000	-	23,19,75,000
43	ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ಹೊರತು)	ರಾಜಸ್ವ	65,48,55,000	4,13,000	65,52,68,000
		ಬಂಡವಾಳ	25,00,000	-	25,00,000
44	ಕಟ್ಟಡಗಳು	ರಾಜಸ್ವ	5,37,26,000	1,00,000	5,38,26,000
		ಬಂಡವಾಳ	21,58,82,000	56,000	21,59,38,000
45	ರಸ್ತೆಗಳು ಮತ್ತು ಸೇತುವೆಗಳು	ರಾಜಸ್ವ	59,72,99,000	-	59,72,99,000
		ಬಂಡವಾಳ	39,70,00,000	-	39,70,00,000
46	ನೀರು ಮತ್ತು ಜಲಸಾರಿಗೆ ಸೇವೆಗಳು	ರಾಜಸ್ವ	1,13,45,000	-	1,13,45,000
		ಬಂಡವಾಳ	93,75,000	-	93,75,000
47	ವಿದ್ಯುಚ್ಛಕ್ತಿ ಯೋಜನೆಗಳು	ರಾಜಸ್ವ	71,78,98,000	-	71,78,98,000
48	ಭೂ ಕಂದಾಯ ಇತ್ಯಾದಿ	ರಾಜಸ್ವ	61,06,17,000	19,50,000	61,25,67,000

1	2		3	4	5
		ಬಂಡವಾಳ	1,50,44,000	-	1,50,44,000
49	ಮುದ್ರಾಂಕಗಳು ಮತ್ತು ನೋಂದಣಿ	ರಾಜಸ್ವ	6,47,27,000	-	6,47,27,000
50	ಮತೀಯ ಮತ್ತು ಧರ್ಮಾದಯಸಂಸ್ಥೆಗಳು ಇತ್ಯಾದಿ	ರಾಜಸ್ವ	3,80,97,000	-	3,80,97,000
51	ವಕ್ಫ್	ರಾಜಸ್ವ	1,50,00,000	-	1,50,00,000
52	ಸಹಕಾರ	ರಾಜಸ್ವ	12,15,86,000	6,000	12,15,92,000
		ಬಂಡವಾಳ	3,80,25,000	-	3,80,25,000
53	ಕ್ರಮಪಡಿಸಿದ ಮಾರುಕಟ್ಟೆಗಳು	ರಾಜಸ್ವ	6,59,26,000	-	6,59,26,000
54	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ	ರಾಜಸ್ವ	59,90,72,000	-	59,90,72,000
		ಬಂಡವಾಳ	33,00,00,000	-	33,00,00,000
55	ಗ್ರಾಮೀಣ ಅಭಿವೃದ್ಧಿ	ರಾಜಸ್ವ	1,58,51,43,000	-	1,58,51,43,000
56	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	31,62,05,000	3,000	31,62,08,000
57	ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಕಲ್ಯಾಣ	ರಾಜಸ್ವ	77,33,28,000	-	77,33,28,000
		ಬಂಡವಾಳ	10,31,25,000	-	10,31,25,000
58	ಮಹಿಳಾ ಮತ್ತು ಮಕ್ಕಳ ಕಲ್ಯಾಣ	ರಾಜಸ್ವ	50,09,13,000	-	50,09,13,000
		ಬಂಡವಾಳ	10,50,000	-	10,50,000
59	ವಿಜ್ಞಾನ ಮತ್ತು ತಂತ್ರಜ್ಞಾನ, ಜೀವಿ ಪರಿಸ್ಥಿತಿ ಮತ್ತು ಪರಿಸರ	ರಾಜಸ್ವ	2,67,40,000	-	2,67,40,000
60	ಮಲೆನಾಡು ಪ್ರದೇಶ ಅಭಿವೃದ್ಧಿ	ರಾಜಸ್ವ	8,50,00,000	-	8,50,00,000
61	ಜವಳಿ	ರಾಜಸ್ವ	4,32,92,000	-	4,32,92,000
		ಬಂಡವಾಳ	59,43,000	-	59,43,000
62	ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು	ರಾಜಸ್ವ	22,71,67,000	-	22,71,67,000

1	2		3	4	5
63	ಹಣವನ್ನು ಇಳಿಸುವ ಅಥವಾ ಋಣ ಪರಿಹರಿಸುವ ಬಗ್ಗೆ ಧನವಿನಿಯೋಗ	ರಾಜಸ್ವ	-	42,98,45,000	42,98,45,00
64	ಬಡ್ಡಿ ಸಂದಾಯ	ರಾಜಸ್ವ	-	4,19,80,66,000	4,19,80,66,00065
65	ಆಂತರಿಕ ಋಣ, ಸಾಲ ಮತ್ತು ಕೇಂದ್ರ ಸರ್ಕಾರ ದಿಂದ ಮುಂಗಡ ಮತ್ತು ಅಂತರ ರಾಜ್ಯ ತೀರಿಕೆ	ಬಂಡವಾಳ	-	4,40,88,54,000	4,40,88,54,000
		ಒಟ್ಟು ಜುಮ್ಲಾ	3,487,5188,000	918,50,37,000	4,406,02,25,000

ಉದ್ದೇಶಗಳು ಮತ್ತು ಹೇಳಿಕೆ

1998-99 ನೇ ಭಾಗದ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204 ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ,

ಉಪ ಮುಖ್ಯಮಂತ್ರಿಗಳು ಹಾಗೂ
ಹಣಕಾಸು, ಯೋಜನಾ ಮತ್ತು ಕಾರ್ಮಿಕ ಸಚಿವರು.

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ - II

ಕರ್ನಾಟಕ ವಿಧಾನ ಸಭೆ

(ಹತ್ತನೇ ವಿಧಾನ ಸಭೆ)

(ಏಳನೆಯ ಅಧಿವೇಶನ)

ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 1998

(1998 ವಿಧಾನ ಸಭಾ ವಿಧೇಯಕ ಸಂಖ್ಯೆ 6)

ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಕೆಲವು ತೆರಿಗೆ ಕಾನೂನುಗಳನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕೆಲವು ತೆರಿಗೆ ಕಾನೂನುಗಳನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಸಲವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :-

(1) ಈ ಅಧಿನಿಯಮವನ್ನು ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು 1998ರ ಏಪ್ರಿಲ್ ಒಂದನೇ ದಿನದಿಂದ ಜಾರಿಗೆ ಬರತಕ್ಕದ್ದು.

2. 1998ರ ಕರ್ನಾಟಕ ಅಧಿನಿಯಮ 7ರ ತಿದ್ದುಪಡಿ :- ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1997ರ (1997ರ ಕರ್ನಾಟಕ ಅಧಿನಿಯಮ 7) 8ನೇ ಪ್ರಕರಣದ (1)ನೇ ಖಂಡದಲ್ಲಿ "(V)ನೇ ಖಂಡದ ಪರಂತುಕ ಬಿಟ್ಟುಬಿಡತಕ್ಕದ್ದು" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ "(V)ನೇ ಖಂಡದ ಪರಂತುಕವನ್ನು 1994ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಟ್ಟಿರುವುದಾಗಿ ಭಾವಿಸತಕ್ಕದ್ದು" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಯಾವಾಗಲೂ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು.

3. 1979ರ ಕರ್ನಾಟಕ ಅಧಿನಿಯಮ 27ರ ತಿದ್ದುಪಡಿ.- ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 27):

(1) 4-ಡಿ ಪ್ರಕರಣದಲ್ಲಿ "ಆಯುಕ್ತರು" ಎಂಬ ಪದಕ್ಕೆ "ಜಂಟಿ ಆಯುಕ್ತರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) 21ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ (ಎ) ಯಿಂದ (ಹೆಚ್) ವರಗಿನ ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಎ) ಈ ಅಧಿನಿಯಮದ ಮೇರೆಗೆ ತನ್ನನ್ನು ನೋಂದಾಯಿಸಿಕೊಳ್ಳಬೇಕಾದ ವ್ಯಕ್ತಿಯು ಹಾಗೆ ತನ್ನನ್ನು ನೋಂದಾಯಿಸಿಕೊಳ್ಳದಿದ್ದರೆ, ಅಥವಾ

(ಬಿ) ಸರಕುಗಳ ವ್ಯಾಪಾರಿಯಾಗಿದ್ದು ಈ ಅಧಿನಿಯಮದ ಉಪಬಂಧುಗಳ ಮೂಲಕ ಅಥವಾ ಅದರ ಅಡಿಯಲ್ಲಿ ರಚಿತವಾದ ನಿಯಮಗಳ ಮೂಲಕ ಅಗತ್ಯಪಡಿಸಿದಂತೆ ವಿವರ ಪಟ್ಟಿಯನ್ನು ಸಲ್ಲಿಸಲು ತಪ್ಪಿದರೆ; ಅಥವಾ

(ಸಿ) 6ನೇ ಪ್ರಕರಣದ ಮೇರೆಗೆ ಹೊರಡಿಸಿರುವ ನೋಟೀಸನ್ನು ಪಾಲಿಸಲು ತಪ್ಪಿದರೆ; ಅಥವಾ

(ಡಿ) 7ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ವಿವರಣ ಪತ್ರವನ್ನು ಸಲ್ಲಿಸಲು ತಪ್ಪಿದರೆ; ಅಥವಾ

(ಇ) ಅವಕಾಶ ಮಾಡಿಕೊಟ್ಟ ಕಾಲದೊಳಗೆ ಈ ಅಧಿನಿಯಮದ ಅಡಿಯಲ್ಲಿ ಅವನ ಬಗ್ಗೆ ನಿರ್ಧರಿಸಲಾದ ಯಾವುದೇ ತೆರಿಗೆಯನ್ನು ಅಥವಾ ಅವನ ಮೇಲೆ ವಿಧಿಸಿದ ಯಾವುದೇ ದಂಡವನ್ನು ಸಂದಾಯ ಮಾಡಲು ತಪ್ಪಿದರೆ; ಅಥವಾ

(ಎಫ್) ಖಂಡಸಾರಿ ಸಕ್ಕರೆ ಕಾರ್ಖಾನೆಯೂ ಸೇರಿದಂತೆ ಒಂದು ಸಕ್ಕರೆ ಕಾರ್ಖಾನೆಯಾಗಿದ್ದು (1)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ತೆರಿಗೆ ವಸೂಲು ಮಾಡಲು ತಪ್ಪಿದರೆ ಅಥವಾ ತೆರಿಗೆ ವಸೂಲು ಮಾಡಿದ್ದು 9-ಎ ಪ್ರಕರಣದ (2)ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ ಹಾಗೆ ವಸೂಲು ಮಾಡಿದ ತೆರಿಗೆ ಸಂದಾಯ ಮಾಡಲು ಒಪ್ಪಿದರೆ; ಅಥವಾ

(ಜಿ) 17-ಎ ಪ್ರಕರಣದ (2) ಮತ್ತು (3)ನೇ ಉಪ-ಪ್ರಕರಣಗಳ ಉಪಬಂಧಗಳಿಗೆ ಅನುಸಾರವಾಗಿ ಮಾರಾಟ ಬಿಲ್ಲನ್ನು ಅಥವಾ ನಗದು ಕೋರಿಕೆ ಪತ್ರವನ್ನು ನೀಡಲು ತಪ್ಪಿದರೆ ; ಅಥವಾ

(ಹೆಚ್) ನಿಜವಾದ ಮತ್ತು ಪೂರ್ಣ ಲೆಕ್ಕಪತ್ರಗಳನ್ನು ಇಡಲು ತಪ್ಪಿದರೆ.

4. 1979ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ :-

ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿಗೃಹಗಳು) ಅಧಿನಿಯಮ, 1979ರಲ್ಲಿ (1979ರ ಕರ್ನಾಟಕ ಅಧಿನಿಯಮ 22) 3ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

5. 1976ರ ಕರ್ನಾಟಕ ಅಧಿನಿಯಮ 35ರ ತಿದ್ದುಪಡಿ :-

ಕರ್ನಾಟಕ ವೃತ್ತಿಗಳ, ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ರಲ್ಲಿ (1976ರ ಕರ್ನಾಟಕ ಅಧಿನಿಯಮ 35),-

(1) 3ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

(2) ಅನುಸೂಚಿಯಲ್ಲಿ,-

(i) 20-ಆರ್ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

20. ಆರ್.(ಎ) ರೈಲ್ವೆ, ರಾಜ್ಯ ಅಥವಾ ಕೇಂದ್ರ ಸರ್ಕಾರ, ನಿಗಮಗಳು, ಸ್ಥಳೀಯ ಪ್ರಾಧಿಕಾರಗಳಿಂದ ಅಥವಾ ಯಾರೇ ವ್ಯಕ್ತಿ ಅಥವಾ ಏಜೆನ್ಸಿಯಿಂದ ಲೈಸೆನ್ಸು ಪಡೆದ ಅಥವಾ ಅಂಗೀಕರಿಸಲ್ಪಟ್ಟ ವ್ಯಕ್ತಿಗಳು, ಎಂದರೆ:-

(i) ಸಿವಿಲ್ ಅಥವಾ ಗಾರೆ ಕೆಲಸವೂ ಸೇರಿದಂತೆ ರಸ್ತೆಗಳು, ಅಣೆಕಟ್ಟೆಗಳು, ಕಾಲುವೆಗಳು, ಸೇತುವೆಗಳು, ಅಡಿಗಾಲುವೆಗಳನ್ನು ಕಟ್ಟುವ ಕಂಟ್ರಾಕ್ಟರುಗಳು, ರೈಲ್ವೆ ಸ್ಲೀಪರ್ ಕಂಟ್ರಾಕ್ಟರುಗಳು, ಅರಣ್ಯ ಕಂಟ್ರಾಕ್ಟರುಗಳು ಮತ್ತು ವಿದ್ಯುತ್ ಕಂಟ್ರಾಕ್ಟರುಗಳ ವರ್ಷದಲ್ಲಿನ ಎಲ್ಲ ಕಂಟ್ರಾಕ್ಟರುಗಳ ಒಟ್ಟು ಪ್ರತಿಫಲವು, -

(ಎ)	ಲಕ್ಷ ರೂ. ವರೆಗೆ	ಇಲ್ಲ
(ಬಿ)	2 ಲಕ್ಷ ರೂಪಾಯಿಗಿಂತ ಹೆಚ್ಚು ಆದರೆ 5 ಲಕ್ಷಕ್ಕಿಂತ ಕಡಿಮೆ ಇದ್ದರೆ	ವರ್ಷಕ್ಕೆ 300 ರೂ.
(ಸಿ)	5 ಲಕ್ಷ ರೂಪಾಯಿಗಿಂತ ಹೆಚ್ಚು ಆದರೆ 10 ಲಕ್ಷ ರೂಪಾಯಿಗಿಂತ ಕಡಿಮೆ	ವರ್ಷಕ್ಕೆ 600 ರೂ.
(ಡಿ)	10 ಲಕ್ಷ ರೂಪಾಯಿಗಿಂತ ಹೆಚ್ಚು ಆದರೆ 25 ಲಕ್ಷ ರೂಪಾಯಿಗಿಂತ ಕಡಿಮೆ	ವರ್ಷಕ್ಕೆ 1,200 ರೂ.
(ಇ)	25 ಲಕ್ಷ ರೂಪಾಯಿಗಿಂತ ಹೆಚ್ಚು ಆದರೆ 50 ಲಕ್ಷ ರೂಪಾಯಿಗಿಂತ ಕಡಿಮೆ	ವರ್ಷಕ್ಕೆ 1,800ರೂ.
(ಎಫ್)	50 ಲಕ್ಷ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚಾಗಿದ್ದರೆ	ವರ್ಷಕ್ಕೆ 2,500 ರೂ.
(ii)	ಮುಂದಕ್ಕೆ ಕಳುಹಿಸುವ ಮತ್ತು ಏಲಿ ಮಾಡುವ ಏಜೆಂಟರುಗಳನ್ನು ಒಳಗೊಂಡಂತೆ ಸಾರಿಗೆ ಕಂಟ್ರಾಕ್ಟರುಗಳು	ವರ್ಷಕ್ಕೆ 2,500 ರೂ.
(ಬಿ)	ಹುಂಡಿಗಳು ಅಥವಾ ಭದ್ರತೆಗಳ ಮೇಲೆ ಕಡಿಮೆ ಅವಧಿಗೆ ಬಡ್ಡಿಗಾಗಿ ಹಣ ಕೊಡುವ ಮೂಲಕ ವ್ಯಾಪಾರಕ್ಕೆ ಹಣ ನೀಡುವ ಬ್ಯಾಂಕರುಗಳು	ವರ್ಷಕ್ಕೆ 1,200ರೂ."

(ii) ವಿವರಣೆ (IV) ಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

ವಿವರಣೆ (IV):- ಯಾವುದೇ ಫರ್ಮು, ಕ್ರಮ ಸಂಖ್ಯೆಗಳು 2(ಸಿ) (ಎ) (iv), 2 ಬಿ (iv), 2ಸಿ (ಎ) (iv), 2ಡಿ (ಎ) (iv), 4, 5, (ಎ) (i)(ಎ), 5(ಬಿ) (iv), 7(ಎ) (i), 7(ಬಿ), 2ಸಿ(ಎ) (iv), 2-ಡಿ(ಎ) (iv), 4, 5(ಎ) (i) (ಎ), 5(ಬಿ) (vi), 7(ಎ) (i) 7(ಬಿ), 9(ಎಫ್), 12, 13(ಎ) (i), 13(ಎ) (ii), 13 ಬಿ(ii) 13(ಸಿ), 14(ಬಿ), 15(ಎ), 20-ಎ(ಬಿ), 20-ಸಿ(ಎ), 20- ಇ(ಸಿ), 20 (ಜಿ), 20-ಎಂ, 20-ಓ, 20-ಕ್ಯೂ, 20- ಆರ್ (ಎ) (i) (ಎಫ್), 20 - ಆರ್ (ಎ) (ii) , 20-

ಎಸ್ (ಡಿ), 20-ಟಿ ಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವೃತ್ತಿ, ಕಸಬು ಅಥವಾ ಅಜೀವಿಕೆಯಲ್ಲಿ ತೊಡಗಿದ್ದ ಹೊರತು, ಅದರ ಮೇಲೆ ಯಾವ ತೆರಿಗೆಯನ್ನೂ ಈ ಅಧಿನಿಯಮದ ಅಡಿಯಲ್ಲಿ ವಿಧಿಸತಕ್ಕದ್ದಲ್ಲ.''

6. 1958ರ ಕರ್ನಾಟಕ ಅಧಿನಿಯಮ 30ರ ತಿದ್ದುಪಡಿ :- 1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ 1958ರಲ್ಲಿ (1958ರ ಕರ್ನಾಟಕ ಅಧಿನಿಯಮ 30) :

(1) 2 ನೇ ಪ್ರಕರಣದಲ್ಲಿ, -

(ಎ) (ಇ) ಖಂಡದ '(iii) ನೇ ಉಪ - ಖಂಡದಲ್ಲಿ ''ಮನ್ನಣೆ ಪಡೆದ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(ಬಿ) ''(ಐ-ಎ) ''ಮನೋರಂಜನಾ ಸ್ಥಳ'' ಎಂಬ ಅಕ್ಷರಗಳು, ಆವರಣಗಳು ಮತ್ತು ಪದಗಳಿಗೆ ''(ಐ -ಬಿ) '' ಮನೋರಂಜನಾ ಸ್ಥಳ'' ಅಕ್ಷರಗಳು, ಆವರಣಗಳು ಮತ್ತು ಪದಗಳು ಪ್ರತಿಯೋಜಿಸತಕ್ಕದ್ದು;

(2) 3ನೇ ಪ್ರಕರಣದ (1-ಎ) ಉಪ- ಪ್ರಕರಣದಲ್ಲಿ, ಕೋಷ್ಟಕದ (ಬಿ) ಕ್ರಮಸಂಖ್ಯೆಗೆ ಸಂಬಂಧಿಸಿದ ನಮೂದುಗಳಲ್ಲಿ, '' ಮನ್ನಣೆ ಪಡೆದ'' ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(3) 4ನೇ ಪ್ರಕರಣದಲ್ಲಿ (1)ನೇ ಉಪ- ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''**(1) ಚಲನಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆ :-** ಚಲನಚಿತ್ರ ಪ್ರದರ್ಶನಗಳ ಸಂಬಂಧದಲ್ಲಿ 3ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಅಥವಾ 4-ಎ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆಯ ಜೊತೆಗೆ, ಈ ಮುಂದಿನ ದರಗಳಲ್ಲಿ ಲೆಕ್ಕಹಾಕಲಾದ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ:-

ಕೋಷ್ಟಕ

ಕ್ರಮ ಸಂಖ್ಯೆ	ಅತಿಹೆಚ್ಚಿನ ವರ್ಗದ ಆಸನ ಅಥವಾ ಸ್ಥಳಕ್ಕೆ ವ್ಯಕ್ತಿಯ ಪ್ರವೇಶಿಸುವುದಕ್ಕಾಗಿ ಇರುವ ಪ್ರವೇಶ ದರ (ಮನೋರಂಜನಾ ತೆರಿಗೆಯನ್ನು ಬಿಟ್ಟು)	ಪ್ರತಿ ಪ್ರದರ್ಶನಕ್ಕೆ ತೆರಿಗೆಯ ದರ
ಎ	ಐದು ರೂಪಾಯಿಗೆ ಮೀರದಿದ್ದರೆ	ನೂರು ರೂ.
ಬಿ	ಐದು ರೂಪಾಯಿಯನ್ನು ಮೀರದ್ದು ಹದಿನೈದು ರೂಪಾಯಿಗೆ ಮೀರದಿದ್ದರೆ	ಇನ್ನೂರು ರೂ.
ಸಿ	ಹದಿನೈದು ರೂಪಾಯಿಗೆ ಮೀರದಿದ್ದರೆ	ಮೂನ್ನೂರು ರೂ.

ಮತ್ತೂವರಂತು, 4-ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ತೆರಿಗೆ ಸಂದಾಯ ಮಾಡುವ ಚಲನಚಿತ್ರಮಂದಿರಗಳ ಸಂದರ್ಭದಲ್ಲಿ, ಈ ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಈ ಮುಂದಿನ ದರಗಳಲ್ಲಿ ಸಂದಾಯ ಮಾಡತಕ್ಕದ್ದು ಎಂದರೆ:-

ಕ್ರಮ ಸಂಖ್ಯೆ	ಅತಿಹೆಚ್ಚಿನ ವರ್ಗದ ಆಸನ ಅಥವಾ ಸ್ಥಳಕ್ಕೆ ವ್ಯಕ್ತಿಯ ಪ್ರವೇಶಿಸುವುದಕ್ಕಾಗಿ ಇರುವ ದರ	ಪ್ರತಿ ವರ್ಷಕ್ಕೆ ತೆರಿಗೆಯ ದರ
ಎ.	ಎಂಟು ರೂಪಾಯಿಗೆ ಮೀರದಿದ್ದರೆ	ನೂರು ರೂ.
ಬಿ.	ಎಂಟು ರೂಪಾಯಿಯನ್ನು ಮೀರದ್ದು	ನೂರ ಐವತ್ತು ರೂ.
ಸಿ.	ಹದಿನೈದು ರೂಪಾಯಿಗೆ ಮೀರದಿದ್ದರೆ	ಇನ್ನೂರು ರೂ. ''

7. 1957ರ ಕರ್ನಾಟಕ ಅಧಿನಿಯಮ 22ರ ತಿದ್ದುಪಡಿ :- 1957ರ ಕರ್ನಾಟಕ ಕೃಷಿ ವರಮಾನ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 22) 66ನೇ ಪ್ರಕರಣದ (1)ನೆ ಉಪ-ಪ್ರಕರಣದಲ್ಲಿ ಕೋಷ್ಟಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

'' ಪರಂತು ಅಂಥ ಭೂಮಿಯ ಸಂಬಂಧದಲ್ಲಿ ಕಾಫಿ ಬೆಳೆಯು ಸರಾಸರಿ ಇಳುವರಿಯು ಪ್ರತಿ ಎಕರೆಗೆ 600 ಕಿಲೋಗ್ರಾಂಗಳನ್ನು ಮೀರಿದರೆ, ಅಂಥ ಭೂಮಿಯಧಾರಕನು, (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದೇ ಬಾರಿಗೆ ಸಂದಾಯ ಮಾಡತಕ್ಕ ಹಣದ ಜೊತೆಯಲ್ಲಿ ಅಂಥ ಅಧಿಕ ಇಳುವರಿಯ ಪ್ರತಿ ಟನ್ನಿಗೆ 400 ರೂ. ಗಳ ದರದಲ್ಲಿ ಹೆಚ್ಚುವರಿ ಹಣವನ್ನು ಒಂದೇ ಬಾರಿಗೆ ಕೊಡತಕ್ಕದ್ದು.''

8. 1932ರ ಮೈಸೂರು ಅಧಿನಿಯಮ IX ರ ತಿದ್ದುಪಡಿ :- 1932ರ ಮೈಸೂರು ಜೂಜು ತೆರಿಗೆ ಅಧಿನಿಯಮದಲ್ಲಿ (1932ರ ಮೈಸೂರು ಅಧಿನಿಯಮ IX) 6-ಎ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು;

9. 1957ರ ಕರ್ನಾಟಕ ಅಧಿನಿಯಮ 25ರ ತಿದ್ದುಪಡಿ :- 1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 25),-

(1) 2ನೇ ಪ್ರಕರಣದ (1)ನೇ ಉಪ-ಪ್ರಕರಣದ (ಓ- 1) ಖಂಡದಲ್ಲಿ, -

(i) '' ಜಿನ್ನಿಂಗ್ ಕಾರ್ಖಾನೆಯಲ್ಲಿ'' ಎಂಬ ಪದಗಳಿಗೆ ಮೊದಲು ''ಅಥವಾ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಕಾಫಿ ಬೀಜಗಳ ಸಂಸ್ಕರಣೆಯಲ್ಲಿ ಅಥವಾ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಅಂಥ ಕಾರ್ಖಾನೆಯ'' ಎಂಬ ಪದಗಳ ತರುವಾಯ '' ಅಂಥ ವರ್ಕ್ಸ್‌ನ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ವಿವರಣೆಯಲ್ಲಿ, (V)ನೇ ಬಾಬಿನ ತರುವಾಯ ಈ ಮುಂದಿನದನ್ನು ಸೇರಿಸತ್ಕದ್ದು, ಎಂದರೆ;

(iii-ಎ) ''ಕಾಫಿ ಕ್ಯೂರಿಂಗ್ ವರ್ಕ್ಸ್'' ಎಂದರೆ ಕಾಫಿ ಬೀಜಗಳ ಸಂಸ್ಕರಣ ಕಾರ್ಯವನ್ನು ಯಾವ ಯಂತ್ರ ಮತ್ತು ಯಂತ್ರೋಪಕರಣಗಳಿಂದ ಮಾಡಲಾಗುವುದೋ ಅವು ಮತ್ತು ಆ ಕಾರ್ಯವನ್ನು ಎಲ್ಲಿ ನಡೆಸಲಾಗುವುದೋ ಆ ಆವರಣ ಅಥವಾ ಅದರ ಯಾವುದೇ ಭಾಗ;

(2) (5)ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿ ''ಶೇಕಡ ಹನ್ನೆರಡರ ದರದಲ್ಲಿ'' ಎಂಬ ಪದಗಳಿಗೆ ''ಶೇಕಡ ಹತ್ತರ ದರದಲ್ಲಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (1-ಬಿ) ಉಪ-ಪ್ರಕರಣದಲ್ಲಿ, ''ಶೇಕಡ ಎಂಟರ ದರದಲ್ಲಿ'' ಎಂಬ ಪದಗಳಿಗೆ ''ಶೇಕಡ ನಾಲ್ಕರ ದರದಲ್ಲಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) (1-ಸಿ) ಉಪ-ಪ್ರಕರಣಕ್ಕೆ ವಿವರಣೆಯನ್ನು ಹೊರತುಪಡಿಸಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''(1-ಸಿ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ರೇಷ್ಮೆ ನೂಲಿನ ಸಂಬಂಧದಲ್ಲಿ ವ್ಯಾಪಾರಿಯು, ಅಂಥ ಸರಕುಗಳಿಗೆ ಸಂಬಂಧಪಟ್ಟಂತೆ ಪ್ರತಿವರ್ಷ ತೆರಿಗೆಗೆ ಗುರಿಯಾಗುವ ಒಟ್ಟು ಮಾರಾಟ ಹಣದ ಮೇಲೆ ಶೇಕಡ ನಾಲ್ಕರ ದರದಲ್ಲಿ ಮಾರಾಟದ ಪ್ರತಿಯೊಂದು ಹಂತದಲ್ಲಿ ತೆರಿಗೆ ಸಂದಾಯ ಮಾಡತಕ್ಕದ್ದು.

ಪರಂತು ಸ್ವಂತವಾಗಿ ತಯಾರಿಸಲಾದ ರೇಷ್ಮೆ ನೂಲನ್ನು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾಗುವ ವ್ಯಾಪಾರಿಗೆ ಮಾರಾಟ ಮಾಡಿದರೆ, ಅಂಥ ರೇಷ್ಮೆ ನೂಲಿನ ಮಾರಾಟವನ್ನು ಇ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾದ ವ್ಯಾಪಾರಿಯು ಮಾಡಿದ ಮಾರಾಟ ಎಂಬುದಾಗಿ ಭಾವಿಸತಕ್ಕದ್ದಲ್ಲ.

(3) 5-ಎ ಪ್ರಕರಣದ, (1)ನೇ ಉಪ-ಪ್ರಕರಣದಲ್ಲಿ ''ಶೇಕಡ ನಾಲ್ಕರಷ್ಟು ದರದಲ್ಲಿ'' ಎಂಬ ಪದಗಳು ಬರುವ ಕಡೆಯಲ್ಲೆಲ್ಲಾ ''ಶೇಕಡ ಮೂರರಷ್ಟು ದರದಲ್ಲಿ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(4) 6-ಬಿ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ, ''15 ಲಕ್ಷ ರೂಪಾಯಿಗಳಿಗಿಂತ ''ಎಂಬ ಪದಗಳು ಬರುವ ಕಡೆಯಲ್ಲಿಲ್ಲ ''ಐದು ಲಕ್ಷ ರೂಪಾಯಿಗಳಿಗಿಂತ '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(5) 6-ಡಿ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿ,-

(ಎ) ''ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ'' ಎಂಬ ಪದಗಳಿಗೆ ''ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಬಂಡವಾಳವನ್ನು ಉಪಯೋಗಿಸುವ ಉದ್ದೇಶಕ್ಕಾಗಿ 1998ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ''ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಗಳೊಳಗೆ'' ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

(6) 10-ಎ ಪ್ರಕರಣದಲ್ಲಿ (4)ನೇ ಉಪ-ಪ್ರಕರಣದ (ಎ) ಖಂಡದಲ್ಲಿ, ''5-ಕ ಪ್ರಕರಣದಲ್ಲಿ ಅಥವಾ 28- ಕ ಪ್ರಕರಣದ (2)ನೇ ಉಪ-ಪ್ರಕರಣದ ಅಥವಾ ಅವೆರಡರಲ್ಲಿ'' ಎಂಬ ಪದಗಳು, ಅಕ್ಷರಗಳು, ಅಂಕಿಗಳು ಮತ್ತು ಆವರಣಗಳಿಗೆ ''5 -ಎ ಪ್ರಕರಣ ಮತ್ತು 6-ಎ ಪ್ರಕರಣದ (2)ನೇ ಉಪ-ಪ್ರಕರಣದ ಪರಂತುಕ ಮತ್ತು 28-ಎ ಪ್ರಕರಣದ (2)ನೇ ಉಪ-ಪ್ರಕರಣ ಅಥವಾ ಈ ಪ್ರಕರಣಗಳ ಪೈಕಿ ಯಾವುದರಲ್ಲೇ ಆಗಲಿ ಎಂಬ ಪದಗಳು, ಅಕ್ಷರಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು;

(7) 12-ಬಿ ಪ್ರಕರಣದಲ್ಲಿ (2)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''(2) (1) ನೇ ಉಪ-ಪ್ರಕರಣಕ್ಕನುಸಾರವಾಗಿ, ಈ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಹತ್ತು ದಿನಗಳ ನಂತರವೂ ತೆರಿಗೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ವ್ಯಾಪಾರಿಯು, ಹಾಗೆ ತಪ್ಪುವುದು ಮುಂದುವರೆದಂಥ ಅವಧಿಗೆ 13ನೇ ಪ್ರಕರಣದ (2)ನೇ ಉಪ-ಪ್ರಕರಣದ (ii) ನೇ ಖಂಡದ ಅಡಿಯಲ್ಲಿ ನಿರ್ದಿಷ್ಟಪಡಿಸಲಾದ ದಂಡಕ್ಕೆ ಸಮನಾದ ಮೊತ್ತವನ್ನು ದಂಡ ರೂಪದಲ್ಲಿ ಸಂದಾಯ ಮಾಡತಕ್ಕದ್ದು.''

(8) 12-ಡಿ ಪ್ರಕರಣದ (1)ನೆ ಉಪ-ಪ್ರಕರಣದಲ್ಲಿ, ''ಅಥವಾ ಅವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವಿರಲಿಲ್ಲ'' ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(9) 17ನೇ ಪ್ರಕರಣದಲ್ಲಿ,-

(i) (i)ನೇ ಪ್ರಕರಣದಲ್ಲಿ, -

(ಎ) ''ಐದು ಲಕ್ಷ ರೂಪಾಯಿಗಳನ್ನು'' ಎಂಬ ಪದಗಳಿಗೆ ''ಹತ್ತು ಲಕ್ಷ ರೂಪಾಯಿಗಳನ್ನು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಕೋಷ್ಟಕದಲ್ಲಿ (ii) ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

''(iii) ಒಟ್ಟು ಮಾರಾಟದ ಹಣವು ಐದು ಲಕ್ಷ ರೂಪಾಯಿಗಳನ್ನು ಮೀರಿದ್ದು ಹತ್ತು ಲಕ್ಷ ರೂಪಾಯಿಗಳನ್ನು ಮೀರಿದ್ದರೆ	ಐದು ಸಾವಿರದ ಐನೂರು ರೂಪಾಯಿಗಳು ಹಾಗೂ ಐದು ಲಕ್ಷ ರೂಪಾಯಿಗಳನ್ನು ಮೀರಿದ ಒಟ್ಟು ಮಾರಾಟ ಹಣಕ್ಕೆ ಶೇಕಡ ಮೂರರಷ್ಟು,''

(ಸಿ) ಪರಂತುಕದ (iv) ನೇ ಖಂಡದಲ್ಲಿ ''ಐದು ಲಕ್ಷ ರೂಪಾಯಿಗಳಿಗಿಂತ'' ಎಂಬ ಪದಗಳಿಗೆ ''ಹತ್ತು ಲಕ್ಷ ರೂಪಾಯಿಗಳಿಗಿಂತ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪ-ಪ್ರಕರಣದಲ್ಲಿ ''ಐದು ಲಕ್ಷ ರೂ.ಗಳಿಗಿಂತ'' ಎಂಬ ಪದಗಳಿಗೆ ''ಹತ್ತು ಲಕ್ಷ ರೂ.ಗಳಿಗಿಂತ'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) (4)ನೇ ಉಪ ಪ್ರಕರಣದ (i)ನೇ ಖಂಡದಲ್ಲಿ, ''ಐವತ್ತು ಲಕ್ಷ ರೂಪಾಯಿಗಳನ್ನು'' ಎಂಬ ಪದಗಳಿಗೆ ''ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು,'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(iv) 7ನೇ ಉಪ ಪ್ರಕರಣವನ್ನು ಬಿಟ್ಟು ಬಿಡತಕ್ಕದ್ದು;

(v) (8)ನೇ ಉಪ-ಪ್ರಕರಣದಲ್ಲಿ, ಕೋಷ್ಟಕದಲ್ಲಿ, -

(i) (i)ನೇ ಕ್ರಮಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು 1995ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟು ಬಿಡಲಾಗಿದೆಯೆಂದು ಭಾವಿಸತಕ್ಕದ್ದು;

(ii) (ii) ನೇ ಕ್ರಮಸಂಖ್ಯೆಯಲ್ಲಿ '' ಎರಡು ಲಕ್ಷ ರೂಪಾಯಿಗಳನ್ನು ಮೀರದಿದ್ದಲ್ಲಿ ಆದರೆ '' ಎಂಬ ಪದಗಳನ್ನು 1995ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟುಬಿಡಲಾಗಿದೆಯೆಂದು ಭಾವಿಸತಕ್ಕದ್ದು.

(vi) 8ನೇ ಉಪ-ಪ್ರಕರಣ ಮತ್ತು ಅದರ ಕೋಷ್ಟಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''(8) ನಿಯಮಿಸಬಹುದಾದಂಥ ಷರತ್ತುಗಳು ಮತ್ತು ಅಂಥ ಸಂದರ್ಭಗಳಲ್ಲಿ ಪ್ರದೇಶದ ತೆರಿಗೆ ನಿರ್ಧರಣಾಧಿಕಾರಿಯು, ರೇಷ್ಮೆ ಬಟ್ಟೆಗಳ ವ್ಯಾಪಾರ ನಡೆಸುವ ಒಬ್ಬ ವ್ಯಾಪಾರಿಯು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ವರ್ಷದಲ್ಲಿ ತಾನು ಸಂದಾಯ ಮಾಡತಕ್ಕ ತೆರಿಗೆ ಮೊಬಲಗಿಗೆ ಬದಲಾಗಿ ರಾಜಿಯ ರೂಪದಲ್ಲಿ, ರೇಷ್ಮೆ ಬಟ್ಟೆಯ ಸಂಬಂಧದಲ್ಲಿ ತನ್ನ ಒಟ್ಟು ಮಾರಾಟದ ಹಣದ ಶೇಕಡ ಅರ್ಧದಷ್ಟು ದರದ ಮೊಬಲಗನ್ನು ಸಂದಾಯ ಮಾಡಲು ಆಯ್ಕೆ ಮಾಡಿಕೊಂಡಿರುವಲ್ಲಿ ಅದಕ್ಕೆ ಒಪ್ಪಿಕೊಳ್ಳತಕ್ಕದ್ದು.''

(vii) (ಎ) (8)ನೇ ಉಪ-ಪ್ರಕರಣದ ಕೆಳಗೆ ಕೊಟ್ಟಿರುವ ವಿವರಣೆ 1 ಎಂದು ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ವಿವರಣೆ 1 ಎಂದು ಮರುಸಂಖ್ಯೆ ನೀಡಿದ ತರುವಾಯ ಈ ಮುಂದಿನ ವಿವರಣೆಯನ್ನು 1995ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

''ವಿವರಣೆ II: (8)ನೇ ಉಪ-ಪ್ರಕರಣದ ಉದ್ದೇಶಕ್ಕಾಗಿ ''ಒಟ್ಟು ಮಾರಾಟ ಹಣ'' ಎಂಬುದರಲ್ಲಿ ರೇಷ್ಮೆ ಬಟ್ಟೆಗಳನ್ನು ಅಂತರರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ಕ್ರಮದಲ್ಲಿ ಅಥವಾ ''ಭಾರತ ಗಡಿಯ ಹೊರಗಿನಿಂದ ರಫ್ತು ಮಾಡಿಕೊಳ್ಳುವ ಕ್ರಮದಲ್ಲಿ ಮಾರಾಟ ಮಾಡಿದಾಗ ಅಂಥ ರೇಷ್ಮೆ ಬಟ್ಟೆಗಳ ಖರೀದಿಗೆ ಸಂಬಂಧಿಸಿದ ಮಾರಾಟ ಹಣವು ಒಳಗೊಳ್ಳುವುದಿಲ್ಲ.

(ಬಿ) I ಮತ್ತು II ನೇ ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

(10) 19-ಎ ಪ್ರಕರಣದಲ್ಲಿ

(i) ಶೀರ್ಷಿಕೆಯಲ್ಲಿ "ಮೂಲದಲ್ಲಿ" ಎಂಬ ಪದಗಳಿಗೆ ಮೊದಲು "ಕಾಮಗಾರಿ ಕರಾರಿನ ಸಂಬಂಧದಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (1)ನೇ ಉಪ ಪ್ರಕರಣದಲ್ಲಿ "ಜಂಟಿ ವಲಯದ ಯಾವುದೇ ಅಂಥ ಉದ್ಯಮ" ಎಂಬ ಪದಗಳ ತರುವಾಯ "ಅಥವಾ ಕಾಲಕಾಲಕ್ಕೆ ಕಮೀಷನರು ಅಧಿಸೂಚಿಸಬಹುದಾದಂಥ ಇತರ ಯಾವುದೇ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಉದ್ಯಮ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. 19-ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ, -

19-ಎ ಇತರ ಸಂದರ್ಭಗಳಲ್ಲಿ ಮೂಲದಲ್ಲಿ ತೆರಿಗೆಯನ್ನು ಮುರಿದುಕೊಳ್ಳುವುದು:-

(1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕರ್ನಾಟಕ ಸರ್ಕಾರವು ಅಥವಾ ಕರ್ನಾಟಕ ಸರ್ಕಾರದ ಯಾವುದೇ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಉದ್ಯಮ, ಶಾಸನಬದ್ಧ ನಿಕಾಯ ಅಥವಾ ಸ್ಥಳೀಯ ಪ್ರಾಧಿಕಾರವು, ತಾವು ಖರೀದಿಸಿದ ಪೆಟ್ರೋಲ್ ಮತ್ತು ಹೈಸ್ಪೀಡ್ ಡೀಸಲ್ ಹೊರತುಪಡಿಸಿ ತಮ್ಮ ಪ್ರಾಮಾಣಿಕ ಬಳಕೆಗಾಗಿ ಖರೀದಿ ಮಾಡಿದ ಇತರ ಸರಕುಗಳ ಖರೀದಿಯ ಸಂಬಂಧದಲ್ಲಿ, ತಾವು ವ್ಯಾಪಾರಿಗೆ ಸಂದಾಯ ಮಾಡತಕ್ಕ ಮೊಬಲಗಿನಲ್ಲಿ ಶೇಕಡ ನಾಲ್ಕರ ದರದ ಮೊಬಲಗನ್ನು ಅಥವಾ ಹಾಗೆ ಖರೀದಿಸಿದ ಸರಕುಗಳಿಗೆ ಅನ್ವಯವಾಗತಕ್ಕ ದರ ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಕಳೆಯತಕ್ಕದ್ದು.

ಪರಂತು, -

(ಎ) ಈ ಉಪ-ಪ್ರಕರಣದಲ್ಲಿ ಸೂಚಿಸಲಾದ ಪ್ರಾಧಿಕಾರಗಳು ವ್ಯಾಪಾರಿಗೆ ಸಂದಾಯ ಮಾಡತಕ್ಕ ಮೊಬಲಗು ಒಂದು ಸಾವಿರ ರೂಪಾಯಿಗಿಂತ ಕಡಿಮೆ ಇದ್ದರೆ ಹಾಗೆ ಯಾವುದೇ ಮೊಬಲಗನ್ನು ಕಳೆಯತಕ್ಕದ್ದಲ್ಲ; ಅಥವಾ

(ಬಿ) ಈ ಉಪ-ಪ್ರಕರಣದಲ್ಲಿ ಸೂಚಿಸಲಾದ ಪ್ರಾಧಿಕಾರಗಳು ಮಾಡಿದ ಯಾವುದೇ ಖರೀದಿಗಳು, ಸದರಿ ಸರಕುಗಳು ತೆರಿಗೆಯಿಂದ ವಿನಾಯಿತಿಗೊಳಪಟ್ಟಿರುವ ಕಾರಣದಿಂದ ತೆರಿಗೆಗೆ ಗುರಿಯಾಗದಿರುವಲ್ಲಿ ಅಥವಾ ಸದರಿ ಸರಕುಗಳು ಮೊದಲ ಮಾರಾಟಗಾರನ ಬಳಿ ಈಗಾಗಲೇ ತೆರಿಗೆಗೆ ಗುರಿಯಾಗಿದ್ದುವೆಂಬ ಕಾರಣದಿಂದಾಗಿ ತೆರಿಗೆಗೆ ಗುರಿಯಾಗದಿರುವಲ್ಲಿ ಮತ್ತು ವ್ಯಾಪಾರಿಯು ಅರ್ಜಿ ಸಲ್ಲಿಸಿದುದರ ಮೇರೆಗೆ ಆ ಪ್ರದೇಶದ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ಹಾಗೆಂದು ಪ್ರಮಾಣೀಕರಿಸಿದಲ್ಲಿ, ಈ ಉಪ-ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ ಮತ್ತು ಅಂಥ ಪ್ರತಿಯೊಂದು ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ, ಮೇಲೆ ಹೇಳಲಾದಂತೆ ಪ್ರಮಾಣಪತ್ರ ನೀಡುವ ಮೂಲಕವಾಗಲಿ ಅಥವಾ ಸಂದರ್ಭಾನುಸಾರ ವ್ಯಾಪಾರಿಗೆ ಹಾಗೆ ಪ್ರಮಾಣಪತ್ರದ ನೀಡಿಕೆಗೆ ಅವನ ಅನರ್ಹತೆಯನ್ನು ತಿಳಿಸುವ ಮೂಲಕವಾಗಲಿ ತೆರಿಗೆ ನಿರ್ಧರಣಾ ಪ್ರಾಧಿಕಾರಿಯು ಅಂಥ ಅರ್ಜಿಯನ್ನು ಇಲೆ ಮಾಡತಕ್ಕದ್ದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಕಳೆಯುವ ಪ್ರಾಧಿಕಾರಿಯು, ಹಿಂದಿನ ತಿಂಗಳಲ್ಲಿ, ಕಳೆದ ತೆರಿಗೆಯ ವಿವರಗಳನ್ನುಳ್ಳ ವಿವರ ಪತ್ರವನ್ನು ನಿಯಮಿತ ನಮೂನೆಯಲ್ಲಿ ನಿಯಮಿಸಲಾದ ಪ್ರಾಧಿಕಾರಿಗೆ ಪ್ರತಿ ತಿಂಗಳೂ ಕಳುಹಿಸತಕ್ಕದ್ದು ಮತ್ತು ಹಾಗೆ ತಾನು ಕಳೆದ ತೆರಿಗೆಯ ಪೂರ್ಣ ಮೊಬಲಗನ್ನು, ಹಿಂದಿನ ತಿಂಗಳು ಮುಕ್ತಾಯವಾದ ನಂತರ ಇಪ್ಪತ್ತು ದಿನಗಳೊಳಗೆ ಸರ್ಕಾರಿ ಖಜಾನೆಗೆ ಸಲ್ಲಿಸಿ ಹಾಗೆ ತೆರಿಗೆ ಸಂದಾಯ ಮಾಡಿದ ಬಗ್ಗೆ ಖಜಾನೆಯಿಂದ ರಸೀದಿ ಪಡೆಯತಕ್ಕದ್ದು ಮತ್ತು ಹಾಗೆ ಸಂದಾಯ ಮಾಡತಕ್ಕ ಮೊಬಲಗನ್ನು 13ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಲ್ಲಿ, ನಿಯಮಿಸಲಾದ ಪ್ರಾಧಿಕಾರಿಯು, ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆ ನಡೆಸಿದ ತರುವಾಯ ಮತ್ತು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟ ತರುವಾಯ, ಅಂಥ ಪ್ರಾಧಿಕಾರವು ಈ ಉಪ-ಪ್ರಕರಣದ ಅಡಿ ಸಂದಾಯ ಮಾಡತಕ್ಕ ಮೊಬಲಗನ್ನು ತನ್ನ ಅತ್ಯುತ್ತಮ ವಿವೇಚನೆಗೆನುಸಾರವಾಗಿ ನಿರ್ಧರಿಸತಕ್ಕದ್ದು ಮತ್ತು ಹಾಗೆ ನಿರ್ಧರಿಸಲಾದ ಮೊಬಲಗನ್ನು 13ನೇ ಪ್ರಕರಣದ ಉದ್ದೇಶಗಳಿಗಾಗಿ ಅಧಿನಿಯಮದ ಅಡಿಯಲ್ಲಿ ಬಾಕಿ ಇರುವ ಮೊಬಲಗು ಎಂದು ಭಾವಿಸತಕ್ಕದ್ದು.

(3) (1)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ಕಳೆಯುವ ಪ್ರಾಧಿಕಾರವು, ನಿಯಮಿಸಬಹುದಾದಂಥ ವಿವರಗಳನ್ನುಳ್ಳ ಒಂದು ಪ್ರಮಾಣ ಪತ್ರವನ್ನು ನಿಯಮಿಸಲಾದ ಪ್ರಾಧಿಕಾರದಿಂದ ಪಡೆದು ಹಾಗೆ ತೆರಿಗೆಯನ್ನು ಕಳೆಯಲಾದ ವ್ಯಾಪಾರಿಗೆ ಕಳುಹಿಸತಕ್ಕದ್ದು.

(4) (1)ನೇ ಉಪ-ಪ್ರಕರಣದ ಅನುಸಾರವಾಗಿ ತೆರಿಗೆಯನ್ನು ಕಳೆಯುವ ಮೂಲಕ ಮಾಡುವ ಹಣ ಸಂದಾಯವು ಈ ಅಧಿನಿಯಮದ ಅಡಿಯಲ್ಲಿ ಮಾರಾಟ ಮಾಡುವ ವ್ಯಾಪಾರಿಯಿಂದ (1)ನೇ ಉಪ-ಪ್ರಕರಣದಲ್ಲಿ ಸೂಚಿಸಲಾದ ಪ್ರಾಧಿಕಾರಿಗಳಿಗೆ ಬಾಕಿರುವ ತೆರಿಗೆಯನ್ನು ಇತರ ರೀತಿಯಲ್ಲಿ ವಸೂಲು ಮಾಡುವುದಕ್ಕೆ ಬಾಧಕವಾಗತಕ್ಕದ್ದಲ್ಲ.

(5) ಖರೀದಿಗಳ ಸಂಬಂಧದಲ್ಲಿ ತೆರಿಗೆಯನ್ನು (2) ಉಪ-ಪ್ರಕರಣದ ಅಡಿಯಲ್ಲಿ ಸಲ್ಲಿಸಲಾಗಿದ್ದಲ್ಲಿ, ವ್ಯಾಪಾರಿಯು ಅಂಥ ಮಾರಾಟಗಳ ಸಂಬಂಧದಲ್ಲಿ ಯಾವುದೇ ತಿಂಗಳಿಗೆ, ತ್ರೈಮಾಸಿಕ ಅವಧಿಗೆ ಅಥವಾ ಸಂದರ್ಭಾನುಸಾರ ಪೂರ್ಣ ವರ್ಷಕ್ಕೆ ಸಂದಾಯ ಮಾಡತಕ್ಕ ತೆರಿಗೆಯಲ್ಲಿ, ಸದರಿ ಉಪ-ಪ್ರಕರಣದ ಅಡಿ ಈಗಾಗಲೇ ಸಲ್ಲಿಸಲಾದ ತೆರಿಗೆ ಮೊಬಲಗಿನ ಪ್ರಮಾಣದಷ್ಟನ್ನು ಕಡಿಮೆ ಮಾಡತಕ್ಕದ್ದು. ಪರಂತು, ಅಂಥ ಮಾರಾಟಗಳ ಬಗೆಗಿನ ತೆರಿಗೆಯನ್ನು ಈಗಾಗಲೇ ಸಂದಾಯ ಮಾಡಲಾಗಿದೆಯೆಂಬುದನ್ನು ರುಜುವಾತುಪಡಿಸುವ ಮತ್ತು ಹಾಗೆ ಸಲ್ಲಿಸಲಾದ ತೆರಿಗೆಯ ನಿಖರ ಪ್ರಮಾಣವನ್ನು ತಿಳಿಸುವ ಹೊಣೆ, ಇಳಿತಾಯ ಕ್ಲೇಮು ಮಾಡುವ ವ್ಯಾಪಾರಿಯದಾಗಿರತಕ್ಕದ್ದು.

(12) 19-ಸಿ ಪ್ರಕರಣದ ವಿವರಣೆಯಲ್ಲಿ, "ಹೊಸ ಕೈಗಾರಿಕಾ ಘಟಕ ಎಂಬುದು" ಎಂಬ ಪದಗಳ ತರುವಾಯ "ಅಸ್ತಿತ್ವದಲ್ಲಿರುವ ಕೈಗಾರಿಕಾ ಘಟಕದ ಯಾವುದೇ ಉತ್ಪನ್ನದ ಟ್ರೇಡ್ ಮಾರ್ಕ್ ಅಥವಾ ಗುರುತು ಹೆಸರನ್ನು ಬಳಸುವ ಹೊಸ ಕೈಗಾರಿಕಾ ಘಟಕವನ್ನು ಒಳಗೊಳ್ಳುವುದಿಲ್ಲ, ಆದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(13) 28ನೇ ಪ್ರಕರಣದಲ್ಲಿ,-

(i) (2)ನೇ ಉಪ-ಪ್ರಕರಣದ ಖಂಡ (i)ರಲ್ಲಿ " ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗಳಿಂದ " ಎಂಬ ಪದಗಳಿಗೆ (1)ನೇ ಉಪಪ್ರಕರಣ ಅಡಿಯಲ್ಲಿ ಅಧಿಕಾರ ನೀಡಲಾದ ಅಧಿಕಾರಿಯಿಂದ " ಎಂಬ ಪದಗಳನ್ನು, ಪ್ರತಿಯೋಜಿಸತಕ್ಕದ್ದು.

(ii) 3ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3-ಎ) (i) ಯಾವುದೇ ಕಛೇರಿ, ಅಂಗಡಿ, ಉಗ್ರಾಣ ಅಥವಾ ವ್ಯವಹಾರದ ಯಾವುದೇ ಇತರ ಸ್ಥಳ ವ್ಯಾಪಾರಿ ಅಥವಾ ಗಿರಣಿ ಮಾಲೀಕನು ತನ್ನ ಸರಕುಗಳ ದಾಸ್ತಾನನ್ನು ಇಟ್ಟಿರುವ ಯಾವುದೇ ಕಟ್ಟಡ ಅಥವಾ ಸ್ಥಳವನ್ನು ಪ್ರವೇಶಿಸಲು ಅಧಿಕಾರ ಹೊಂದಿರುವ ಯಾವೊಬ್ಬ ಅಧಿಕಾರಿಗೆ, ಅಂಥ ವ್ಯಾಪಾರಿ ಅಥವಾ ಗಿರಣಿ ಮಾಲೀಕನು ಸ್ವ ಇಚ್ಛೆಯಿಂದ ಅಥವಾ ಸರಕುಗಳ ಮಾಲೀಕನೊಂದಿಗೆ ಸೇರಿ ಯಾವುದೇ ತೆರಿಗೆ ಸಂದಾಯವನ್ನು ತಪ್ಪಿಸಿಕೊಳ್ಳಲು ಪ್ರಯತ್ನಿಸಿರುವನೆಂದು ನಂಬಲು ಕಾರಣವಿದ್ದರೆ, ಆ ಅಧಿಕಾರಿಯು ವ್ಯಾಪಾರಿ ಅಥವಾ ಗಿರಣಿ ಮಾಲೀಕನಿಗೆ ಅಥವಾ ವ್ಯಾಪಾರಿ ಅಥವಾ ಗಿರಣಿ ಮಾಲೀಕನು ತನ್ನ ಸರಕುಗಳ ದಾಸ್ತಾನು ಇಟ್ಟಿರುವ ಅಂಥ ಕಚೇರಿ, ಅಂಗಡಿ, ಉಗ್ರಾಣ ಅಥವಾ ವ್ಯವಹಾರದ ಯಾವುದೇ ಇತರ ಸ್ಥಳ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಗೆ ಹಾಗೆ ದಾಸ್ತಾನು ಇಟ್ಟಿರುವ ಸರಕುಗಳ ಮಾಲೀಕತ್ವದ ಬಗ್ಗೆ ವಿವರಗಳನ್ನು ಹಾಜರುಪಡಿಸುವಂತೆ ನಿರ್ದೇಶಿಸಬಹುದು ಮತ್ತು ಸದರಿ ಮಾಹಿತಿಯನ್ನು ಪರಿಶೀಲಿಸಿದ ತರುವಾಯ, ಹಾಜರುಪಡಿಸಲಾದ ದಸ್ತಾವೇಜುಗಳ ವಿವರಗಳ ಖಚಿತತೆಯ ಬಗ್ಗೆ ಮತ್ತಷ್ಟು ಪರಿಶೀಲನೆಯ ಅಗತ್ಯತೆಯಿದೆಯೆಂದು ಅಧಿಕಾರಿಯು ಅಭಿಪ್ರಾಯ ಪಟ್ಟರೆ, ವಿವರಗಳನ್ನು ಸ್ವತಃ ತಾನೇ ಪರಿಶೀಲಿಸಬಹುದು ಅಥವಾ ಈ ವಿಷಯವನ್ನು ಇತರ ಯಾವೊಬ್ಬ ಅಧಿಕಾರಿಗೆ ತಿಳಿಸಿ ಅದನ್ನು ಅಗತ್ಯವೆನಿಸಿದರೆ ಪರಿಶೀಲಿಸುವಂತೆ ಮಾಡಬಹುದು ಮತ್ತು ಹಾಗೆ ಪರಿಶೀಲನೆಯ ಸೂಕ್ತ ಸಮಯದೊಳಗೆ ಮುಗಿಯುವ ಸಾಧ್ಯತೆಯಿಲ್ಲದಿದ್ದರೆ ತಾನು ಅಥವಾ ವಿಷಯವನ್ನು ಪರಿಶೀಲಿಸಬೇಕೆಂದು ತಿಳಿಸಲಾಗಿರುವ ಇತರ ಯಾವೊಬ್ಬ ಅಧಿಕಾರಿಯು ಅನುಮತಿ ನೀಡುವವರಿಗೆ ಅಂಥ ಸರಕುಗಳನ್ನು ರವಾನೆ ಮಾಡಬಾರದೆಂದು ವ್ಯಾಪಾರಿ ಅಥವಾ ಗಿರಣಿ ಮಾಲೀಕನಿಗೆ ಅಥವಾ ವ್ಯಾಪಾರಿ ಅಥವಾ ಗಿರಣಿ ಮಾಲೀಕನು ದಾಸ್ತಾನಿಟ್ಟಿರುವ ಯಾವುದೇ ಕಛೇರಿ, ಅಂಗಡಿ, ಉಗ್ರಾಣ ಅಥವಾ ವ್ಯವಹಾರದ ಯಾವುದೇ ಸ್ಥಳ ಅಥವಾ ಕಟ್ಟಡ ಅಥವಾ ಪ್ರಭಾರದಲ್ಲಿರುವ ಯಾವುದೇ ವ್ಯಕ್ತಿಗಳಲ್ಲಿ ಆದೇಶ ನೀಡಬಹುದು.

(ii) (i)ನೇ ಖಂಡದ ಅಡಿಯಲ್ಲಿ ನೀಡಲಾದ ನಿರ್ದೇಶನದ ದಿನಾಂಕದಿಂದ ಒಂದು ತಿಂಗಳೊಳಗಾಗಿ (i)ನೇ ಖಂಡದ ಅಡಿಯಲ್ಲಿ ಪರಿಶೀಲನೆಯನ್ನು ಮುಕ್ತಾಯಗೊಳಿಸತಕ್ಕದ್ದು. ಹಾಗೆ ಪರಿಶೀಲನೆಯು ಮೇಲೆ ಹೇಳಲಾದ ಅವಧಿಯೊಳಗೆ ಮುಕ್ತಾಯವಾಗದಿದ್ದರೆ, ಹಾಗೆ ನಿರ್ದೇಶನ ನೀಡಿದ ಅಧಿಕಾರಿ ಅಥವಾ ಸಂದರ್ಭಾನುಸಾರ ಪರಿಶೀಲನೆಗಾಗಿ ವಿಷಯವನ್ನು ಯಾರಿಗೆ ಒಪ್ಪಿಸಲಾಯಿತೋ ಆ ಅಧಿಕಾರಿಯು, ಹಾಗೆ ಪರಿಶೀಲನೆಯನ್ನು ಪೂರ್ಣಗೊಳಿಸುವ ಅವಧಿಯನ್ನು ವಿಸ್ತರಿಸುವುದಕ್ಕೆ ತನ್ನ ಉನ್ನತ ಅಧಿಕಾರಿಯು ಲಿಖಿತ ಅನುಮತಿ ಪಡೆಯತಕ್ಕದ್ದು, ಆದರೆ ಒಂದೇ ಬಾರಿಗೆ ಹದಿನೈದು ದಿನಗಳಿಗಿಂತ ಹೆಚ್ಚಿನ ಅವಧಿಯನ್ನು ವಿಸ್ತರಿಸುವುದಕ್ಕೆ ಹಾಗೆ ಅನುಮತಿ ನೀಡತಕ್ಕದ್ದಲ್ಲ.

(iii) ಅಂಥ ಅಧಿಕಾರಿಯು ಅಥವಾ ಯಾರಿಗೆ (i) ನೇ ಖಂಡದ ಅಡಿಯಲ್ಲಿ ವಿಷಯವನ್ನು ಒಪ್ಪಿಸಲಾಗಿದೆಯೋ ಆ ಇತರ ಅಧಿಕಾರಿಯು, ಹಾಗೆ ಪರಿಶೀಲನೆ ನಡೆಸಿದ ತರುವಾಯ, ನೀಡಲಾಗಿರುವ ವಿವರಗಳು ಸರಿಯಿಲ್ಲವೆಂದು ಅಭಿಪ್ರಾಯಪಟ್ಟರೆ, ವ್ಯಾಪಾರಿ ಅಥವಾ ಗಿರಣಿ ಮಾಲೀಕನ ಅಭರಕ್ಷೆಯಲ್ಲಿರುವ ಸರಕುಗಳ ಬಗ್ಗೆ (iv) ನೇ ಖಂಡಕ್ಕೆ ಅನುಸಾರವಾಗಿ ಕ್ರಮ ಕೈಗೊಳ್ಳಬಹುದು.

(iv) ಅಧಿಕಾರ ಹೊಂದಿರುವ ಅಧಿಕಾರಿ ಅಥವಾ (i)ನೇ ಖಂಡದ ಅಡಿಯಲ್ಲಿ ಯಾರಿಗೆ ವಿಷಯವನ್ನು ಅಧಿನಿಯಮದ ಅಡಿಯಲ್ಲಿ ಕಳುಹಿಸಲಾಗಿದೆಯೋ ಆ ಅಧಿಕಾರಿಯು, ನೋಂದಾಯಿಸಲಾದ ವ್ಯಾಪಾರಿಯು ತಾನೇ ಸರಕುಗಳ ಮಾಲೀಕನೆಂಬುದಾಗಿ ಒಪ್ಪಿಕೊಂಡರೆ, ಹಾಗೆ ಪರಿಶೀಲನೆ ಮಾಡಿದ ತರುವಾಯ, ಪರಿಶೀಲನೆಯ ಸಮಯದಲ್ಲಿ ನೀಡಲಾದ ವಿವರಗಳು ಸರಿಯಲ್ಲವೆಂದು ಮತ್ತು ಅಪೂರ್ಣವೆಂದು ಹಾಗೂ ಆ ಬಗ್ಗೆ ನಿರ್ದಿಷ್ಟ ಕಾರಣವನ್ನು ಒದಗಿಸಿಲ್ಲವೆಂದು ಅಭಿಪ್ರಾಯಪಟ್ಟರೆ, ಅವನು, -

(ಎ) ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲಾದ ವ್ಯಾಪಾರಿಯು ತಾನೇ ಸರಕುಗಳ ಮಾಲೀಕನೆಂಬುದಾಗಿ ಒಪ್ಪಿಕೊಂಡರೆ, ದಾಸ್ತಾನು ಮಾಡಲಾದ ಸರಕುಗಳ ಸಂಬಂಧದಲ್ಲಿ ವಿಧಿಸತಕ್ಕ ತೆರಿಗೆ ಮೊಬಲಗಿನ ಅರ್ಧದಷ್ಟು ಪ್ರಮಾಣಕ್ಕಿಂತ ಕಡಿಮೆಯಿಲ್ಲದಂತೆ ಮತ್ತು ವಿಧಿಸತಕ್ಕ ತೆರಿಗೆ ಮೊಬಲಗಿಗೆ ಸಮನಾದ ಮೊಬಲಗನ್ನು ಮೀರದಂತೆ;

(ಬಿ) (ಎ) ಉಪ-ಖಂಡದ ಅಡಿಯಲ್ಲಿ ಬಾರದಿರುವ ಇತರ ಸಂದರ್ಭದಲ್ಲಿ ದಾಸ್ತಾನು ಮಾಡಲಾದ ಸರಕುಗಳ ಸಂಬಂಧದಲ್ಲಿ ವಿಧಿಸತಕ್ಕ ತೆರಿಗೆಯ ಎರಡರಷ್ಟು ಪ್ರಮಾಣಕ್ಕೆ ಕಡಿಮೆಯಿಲ್ಲದಂತೆ ಮತ್ತು ವಿಧಿಸತಕ್ಕ ತೆರಿಗೆಯ ಮೂರರಷ್ಟು ಪ್ರಮಾಣವನ್ನು ಮೀರದಂತೆ, -ದಂಡವನ್ನು ವಿಧಿಸಬಹುದು:

ಪರಂತು ಈ ಖಂಡದ ಅಡಿಯಲ್ಲಿ ದಂಡವನ್ನು ವಿಧಿಸುವುದಕ್ಕೆ ಮುಂಚೆ ವ್ಯಾಪಾರಿಗೆ ಅಥವಾ ಗಿರಣಿ ಮಾಲೀಕನಿಗೆ ಅಥವಾ ವ್ಯಾಪಾರಿ ಅಥವಾ ಗಿರಣಿ ಮಾಲೀಕನು ತನ್ನ ಸರಕುಗಳನ್ನು ದಾಸ್ತಾನು ಇಡುವ ಕಛೇರಿ, ಅಂಗಡಿ, ಉಗ್ರಾಣ ಅಥವಾ ಯಾವುದೇ ಇತರ ವ್ಯವಹಾರ ಸ್ಥಳ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಗೆ, ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡತಕ್ಕದ್ದು.

(v) (iv)ನೇ ಖಂಡದ ಅಡಿಯಲ್ಲಿ ವಿಧಿಸಲಾದ ದಂಡವನ್ನು ಸಂದಾಯ ಮಾಡದಿರುವಲ್ಲಿ, ವ್ಯಾಪಾರಿ ಅಥವಾ ಗಿರಣಿ ಮಾಲೀಕನು ಸರಕುಗಳನ್ನು ದಾಸ್ತಾನು ಇಡುವ ಕಛೇರಿ, ಅಂಗಡಿ, ಉಗ್ರಾಣ ಅಥವಾ ಯಾವುದೇ ಇತರ ವ್ಯವಹಾರ ಸ್ಥಳ ಅಥವಾ ಯಾವುದೇ ಕಟ್ಟಡ ಅಥವಾ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಯ ಅಂಥ ದಂಡವನ್ನು ಜಂಟಿಯಾಗಿ ಮತ್ತು ಬೇರೆ ಬೇರೆಯಾಗಿ ಸಂದಾಯ ಮಾಡಲು ಬದ್ಧರಾಗಿತರತಕ್ಕದ್ದು ಮತ್ತು ಅಂಥ ದಂಡದ ಮೊಬಲಗನ್ನು 13ನೇ ಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮದ ಅಡಿಯಲ್ಲಿ ಬಾಕಿಯಿರುವ ಮೊಬಲಗು ಎಂದು ಭಾವಿಸತಕ್ಕದ್ದು.

(iv) (iv)ನೇ ಖಂಡದ ಅಡಿಯಲ್ಲಿ ದಂಡ ವಿಧಿಸಲಾದುದರಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ತನಗೆ ದಂಡ ವಿಧಿಸುವ ನೋಟೀಸನ್ನು ಜಾರಿ ಮಾಡುವ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ, -

(ಎ) ವಾಣಿಜ್ಯ ತೆರಿಗೆಗಳ ಡೆಪ್ಯುಟಿ ಕಮೀಷನರು ಅಥವಾ ಅಸಿಸ್ಟೆಂಟ್ ಕಮೀಷನರನು ವಿಧಿಸಿದ್ದರೆ ಆ ಪ್ರದೇಶದ ಅಪೀಲು ವಿಚಾರಣಾ ಜಾಯಿಂಟ್ ಕಮೀಷನರಿಗೆ; ಮತ್ತು

(ಬಿ) ಇತರ ಸಂದರ್ಭಗಳಲ್ಲಿ , ಸಂಬಂದಪಟ್ಟ ಪ್ರದೇಶದ ಅಪೀಲು ವಿಚಾರಣಾ ಡೆಪ್ಯುಟಿ ಕಮೀಷನರಿಗೆ

- ಅಪೀಲು ಮಾಡಿಕೊಳ್ಳಬಹುದು.

ಪರಂತು ತೊಂದರೆಗೊಳಗಾದ ವ್ಯಕ್ತಿಯು ತಾನು ನೋಂದಾಯಿತನಾಗಿರುವ ಪ್ರದೇಶದ ಸೂಕ್ತ ಅಪೀಲು ವಿಚಾರಣಾ ಪ್ರಾಧಿಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು.

(vii) ಅಂಥ ಅಪೀಲನ್ನು, ಅದು 20ನೇ ಪ್ರಕರಣದ ಮೇರೆಗೆ ದಾಖಲು ಮಾಡಿದ ಅಪೀಲು ಆಗಿದ್ದರೆ ಹೇಗೋ ಹಾಗೆ ವ್ಯವಹರಿಸತಕ್ಕದ್ದು ಮತ್ತು ಆ ಪ್ರಕರಣದ ಎಲ್ಲ ಉಪಬಂಧಗಳು ಅಂಥ ಅಪೀಲಿಗೆ ಯಥೋಚಿತವಾಗಿ ಅನ್ವಯಿಸತಕ್ಕದ್ದು.

(14) 29ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"29. ಅಪರಾಧಗಳು ಮತ್ತು ದಂಡಗಳು :- (1) ಯಾವೊಬ್ಬ ವ್ಯಕ್ತಿಯು, -

(ಎ) ಈ ಅಧಿನಿಯಮದ ಉಪಬಂಧಗಳು ಮೂಲಕ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ಅಗತ್ಯಪಡಿಸಿದಂಥ ವಿವರ ಪಟ್ಟಿಕೆಯನ್ನು ಒಪ್ಪಿಸಲು ತಪ್ಪಿದಲ್ಲಿ, ಅಥವಾ

(ಬಿ) 12-ಬಿ ಪ್ರಕರಣದ (1)ನೇ ಉಪ - ಪ್ರಕರಣದ ಮೂಲಕ ಅಗತ್ಯಪಡಿಸಿದಂಥ ವಿವರ ಪಟ್ಟಿಯನ್ನು ಸಲ್ಲಿಸಲು ತಪ್ಪಿದರೆ, ಅಥವಾ

(ಸಿ) ಈ ಅಧಿನಿಯಮದ ಅಡಿಯಲ್ಲಿ ಅವನ ಬಗ್ಗೆ ನಿರ್ಧರಿಸಿದ ಯಾವುದೇ ತೆರಿಗೆಯನ್ನು ಅಥವಾ ಅವನಿಗೆ ವಿಧಿಸಿದ ದಂಡವನ್ನು ಅನುಮತಿಸಲಾದ ಸಮಯದೊಳಗೆ ಸಂದಾಯ ಮಾಡಲು ತಪ್ಪಿದರೆ; ಅಥವಾ

(ಡಿ) 14 ನೇ ಪ್ರಕರಣದ (1) ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ನೋಟೀಸಿನ ಷರತ್ತುಗಳನ್ನು ಅಪ್ರಾಮಾಣಿಕವಾಗಿ ಆಕ್ಷೇಪಿಸಿದರೆ ಅಥವಾ ಅವುಗಳನ್ನು ಅನುಸರಿಸಲು ತಪ್ಪಿದರೆ; ಅಥವಾ

(ಇ) ನಿಜವಾದ ಮತ್ತು ಪೂರ್ಣ ಲೆಕ್ಕಗಳನ್ನು ಇಡಲು ತಪ್ಪಿದರೆ; ಅಥವಾ (ಎಫ್) ಒಬ್ಬ ವ್ಯಾಪಾರಿಯಾಗಿದ್ದು ಅಥವಾ ಒಬ್ಬ ವ್ಯಾಪಾರಿಯಾಗಿರಲಿ ಅಥವಾ ಆಗದಿರಲಿ ಒಬ್ಬ ಗಿರಣಿ ಮಾಲೀಕನಾಗಿದ್ದು 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ನೀಡಲಾದ ನೋಟೀಸನ್ನು ಪಾಲೀಸಲು ತಪ್ಪಿದರೆ, -

ಅವನು ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿರದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(2) (ಎ) 10ನೇ ಪ್ರಕರಣದ ಮೇರೆಗೆ ತನ್ನನ್ನು ನೋಂದಾಯಿಸಿಕೊಳ್ಳಲು ಹೊಣೆಗಾರನಾದ ವ್ಯಕ್ತಿಯಾಗಿದ್ದು ತನ್ನನ್ನು ನೋಂದಾಯಿಸಿಕೊಳ್ಳದೇ ಇರುವ; ಅಥವಾ

(ಬಿ) 10-ಎ ಪ್ರಕರಣದ (4)ನೇ ಉಪ-ಪ್ರಕರಣದ ಅಡಿಯಲ್ಲಿ ತಗಾದೆ ಮಾಡಿದ ಭದ್ರತೆಯನ್ನು ಒದಗಿಸದೆ ಒಬ್ಬ ವ್ಯಾಪಾರಿಯಾಗಿ ವ್ಯಾಪಾರ ನಡೆಸುವ; ಅಥವಾ

(ಸಿ) ನಿಜವಲ್ಲದ ವಿವರಪಟ್ಟಿಕೆಯನ್ನು ಉದ್ದೇಶಪೂರ್ವಕವಾಗಿ ಸಲ್ಲಿಸುವ ಅಥವಾ ಈ ಅಧಿನಿಯಮದ ಅಡಿಯಲ್ಲಿ ಈಗಾಗಲೇ ತೆರಿಗೆದಾರನಾಗಿಲ್ಲದೆ ಈ ಅಧಿನಿಯಮದ ಉಪಬಂಧಗಳ ಅಥವಾ ಅದರ ಮೇರೆಗೆ ರಚಿಸಿದ ನಿಯಮುಗಳ ಮೂಲಕ ಅಗತ್ಯಪಡಿಸಲಾದಂತೆ ವಿವರಪಟ್ಟಿಕೆಯನ್ನು ಒಪ್ಪಿಸಲು ತಪ್ಪುವ; ಅಥವಾ

(ಡಿ) 12-ಬಿ ಪ್ರಕರಣದ(1)ನೇ ಉಪ-ಪ್ರಕರಣದ ಅಡಿಯಲ್ಲಿ ನಿಜವಲ್ಲದ ವಿವರಪಟ್ಟಿಕೆಯನ್ನು ಉದ್ದೇಶಪೂರ್ವಕವಾಗಿ ಸಲ್ಲಿಸುವ; ಅಥವಾ

(ಇ) ಈ ಅಧಿನಿಯಮದ ಮೇರೆಗೆ ಅವನು ಸಂದಾಯಮಾಡಬೇಕಾದಯಾವುದೇ ತೆರಿಗೆ ಅಥವಾ ಇತರ ಮೊಬಲಗಿನ ಸಂದಾಯವನ್ನು ಮೋಸದಿಂದ ತಪ್ಪಿಸುವ; ಅಥವಾ (ಎಫ್) 18ನೇ ಪ್ರಕರಣದ (1)ನೇ ಉಪ-ಪ್ರಕರಣ ಅಥವಾ (2)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಅಥವಾ ತೆರಿಗೆ ರೂಪದ್ದೆಂದು ತಾತ್ವರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸುವ; ಅಥವಾ

(ಬಿ) 18ನೇ ಪ್ರಕರಣದ (3)ನೇ ಉಪ-ಪ್ರಕರಣವನ್ನು ಉಲ್ಲಂಘಿಸಿ ಮಾರಾಟ ಹಣದ ತೆರಿಗೆ ರೂಪದಲ್ಲಿ ಅಥವಾ ಮಾರಾಟ ಹಣದ ತೆರಿಗೆ ರೂಪದ್ದೆಂದು ತಾತ್ವರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸುವ; ಅಥವಾ

(ಜೆ) 19- ಎ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಕಳೆಯಲು ತಪ್ಪುವ ಅಥವಾ ಹಾಗೆ ಕಳೆದ ತರುವಾಯ ಆ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಕಟ್ಟಲು ತಪ್ಪುವ ಹಾಗೆ ತೆರಿಗೆಯನ್ನು ಕಳೆದ ಮೇಲೆ 19-ಎ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರವನ್ನು ನೀಡುವ ತಪ್ಪುವ; ಅಥವಾ

(ಐ) 19-ಎ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಕಳೆಯಲು ತಪ್ಪುವ ಅಥವಾ ಹಾಗೆ ಕಳೆದ ತರುವಾಯ ಆ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಠೇವಣಿ ಮಾಡಲು ತಪ್ಪುವ ಅಥವಾ ಹಾಗೆ ತೆರಿಗೆಯನ್ನು ಕಳೆದ ಮೇಲೆ 19-ಎ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರವನ್ನು ನೀಡುವ ತಪ್ಪುವ; ಅಥವಾ

(ಜಿ) ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ನೀಡಲಾದ ಅಧಿಕಾರಿಯು ಪರಿಶೀಲನೆ, ಪ್ರವೇಶ ಶೋಧನೆ ಅಥವಾ ಜಪ್ತಿ ಮಾಡುವುದನ್ನು ತಡೆಗಟ್ಟುವ ಅಥವಾ ಅಡ್ಡಿಪಡಿಸುವ; ಅಥವಾ

(ಕೆ) 28ನೇ ಪ್ರಕರಣದ (2)ನೇ ಉಪ-ಪ್ರಕರಣದ (III)ನೇ ಖಂಡದ ಅಡಿಯಲ್ಲಿ ಹಾಕಲಾದ ಯಾವುದೇ ಮೊಹರನ್ನು ದುರುಪಯೋಗಪಡಿಸುವ ; ಅಥವಾ (ಎಲ್) ಚೆಕ್-ಪೋಸ್ಟ್ ಅಥವಾ ಸುಂಕದಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿಯು ಅಥವಾ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರ ನೀಡಲಾದ ಯಾವೊಬ್ಬ ಅಧಿಕಾರಿಯು ಯಾವುದೇ ವಾಹನ ಅಥವಾ ನೌಕೆ ಅಥವಾ ಅನ್ಯಥಾ ಸಾಗಿಸಲಾದ ಸರಕುಗಳ ಪರಿಶೀಲನೆಯನ್ನು ಅಥವಾ ಸರಕುಗಳ ಜಪ್ತಿಯನ್ನು ತಡೆಗಟ್ಟುವ ಅಥವಾ ಅಡ್ಡಿಪಡಿಸುವ; ಅಥವಾ

(ಎಂ) ಈ ಅಧಿನಿಯಮದ ಯಾವುವೇ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಮಯಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿ ಕೃತ್ಯ ನಡೆಸುವ, - ಯಾವೊಬ್ಬ ವ್ಯಕ್ತಿಯ , ಅಪಾರಧ ನಿರ್ಣಯವಾದ ಮೇಲೆ, ಅವನಿಂದ ಬಾಕಿಯಾಗಿರಬಹುದಾದ ಯಾವುದೇ ತೆರಿಗೆ ಅಥವಾ ಇತರ ಮೊಬಲಗಿನ ವಸೂಲಿಯ ಜೊತೆಗೆ, ಹನ್ನೆರಡು ತಿಂಗಳಿಗೆ ವಿಸ್ತರಿಸಬಹುದಾದ ಲಘು ಕಾರಾವಾಸ ಅಥವಾ ಐದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು ಮತ್ತು ಅಪರಾದವು ಮುಂದುವರಿಯುತ್ತಿರುವ ಅಪರಾಧವಾಗಿದ್ದಾಗ, ಆ ಅಪರಾಧವು ಮುಂದುವರಿಯುತ್ತಿರುವ ಅವಧಿಯಲ್ಲಿ ದಿನಂಪ್ರತಿ ಇನ್ನೂರು ರೂಪಾಯಿಗಳನ್ನು ಮೀರದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(15) ಎರಡನೆ ಅನುಸೂಚಿಯಲ್ಲಿ,-

(i) 'ಎ' ಭಾಗದ 1ನೆ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ, ''ಶೇಕಡ ಎಂಟು '' , ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) 'ಎ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'', ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) 'ಎ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು '', ಎಂಬ ಪದಗಳಿಗೆ, ''ಶೇಕಡ ಹದಿನೈದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) 'ಎ' ಭಾಗದ 2ನೇ ಕ್ರಮ ಸಂಖ್ಯೆಗೆ (i) ರಿಂದ (vi) ರವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಎಂಟು '', ಎಂಬ ಪದಗಳಿಗೆ, ಬರೆವೆಡೆಗಳಲ್ಲೆಲ್ಲಾ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) 'ಎ' ಭಾಗದ 7ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3 ನೇ ಅಂಕಣದಲ್ಲಿ ''ಶೇಕಡ ಎಂಟು '', ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vi) 'ಎ' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'', ಎಂಬ ಪದಗಳಿಗೆ, ''ಶೇಕಡ ಹದಿನೈದು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vii) 'ಬಿ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದಗಳಲ್ಲಿ, ''ಶೇಕಡ ಹನ್ನೆರಡು'', ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(viii) 'ಬಿ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ ''ಶೇಕಡ ಎಂಟು'', ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ix) 'ಬಿ' ಭಾಗದ 8ನೇ ಕ್ರಮ ಸಂಖ್ಯೆಯ (i) ರಿಂದ (iii) ರ ವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು '', ಎಂಬ ಪದಗಳಿಗೆ, ಬರುವಡೆಗಳಲ್ಲೆಲ್ಲಾ ''ಶೇಕಡಾ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xi) 'ಬಿ' ಭಾಗದ 10ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, -

(ಎ) (i) ನೇ ಬಾಬಿನ 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (ii) ಬಾಬಿನ 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xi) 'ಬಿ' ಭಾಗದ 12ನೇ ಕ್ರಮ ಸಂಖ್ಯೆಗೆ 'ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xii) 'ಸಿ' ಭಾಗದ 1ನೇ ಕ್ರಮ ಸಂಖ್ಯೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ನಾಲ್ಕು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xiii) 'ಸಿ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

''2. ಕ್ಯಾಂಡಲುಗಳು - ಶೇಕಡ ಎರಡು''

(xiv) 'ಸಿ' ಭಾಗದ 3ನೆ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಪದಿನೈದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xv) 'ಸಿ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ (i) ರಿಂದ (iii) ರ ವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳು ಬರುವೆಡೆಗಳಲ್ಲೆಲ್ಲಾ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xvi) 'ಸಿ' ಭಾಗದ 8ನೇ ಕ್ರಮ ಸಂಖ್ಯೆಯ (iii) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, ''ಪೋಹಾ'' ಎಂಬ ಪದದ ತರುವಾಯ, ''ಆಟ್ಟಾ, ಮೈದಾ ಮತ್ತು ಗೋಧಿಯ ರವೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(xvii) 'ಸಿ' ಭಾಗದ 8 ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xviii) 'ಸಿ' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xix) 'ಸಿ' ಭಾಗದ 13ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xx) 'ಸಿ' ಭಾಗದ 14ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxi) 'ಸಿ' ಭಾಗದ 15ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxii) 'ಸಿ' ಭಾಗದ 16ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ, 'ಶೇಕಡ ಹತ್ತು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxiii) 'ಸಿ' ಭಾಗದ 17ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxiv) 'ಸಿ' ಭಾಗದ 18ನೇ ಕ್ರಮ ಸಂಖ್ಯೆಯ (ii) ರಿಂದ (iv) ರವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವೆಡೆಗಳೆಲ್ಲೆಲ್ಲ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxv) 'ಸಿ' ಭಾಗದ 19ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ (ii) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxvi) 'ಸಿ' ಭಾಗದ 20ನೇ ಕ್ರಮ ಸಂಖ್ಯೆಯ (ii) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

''20 (i) ಎಲ್ಲ ಬಗೆಯ ಕಂಪ್ಯೂಟರುಗಳು, ಎಂದರೆ, ಮೈನ್ ಫ್ರೇಂ, ಮಿನಿ, ಪರ್ಸನಲ್, ಮೈಕ್ರೊ ಕಂಪ್ಯೂಟರುಗಳು ಮತ್ತು ಮಾನಿಟರ್, ಕೀ ಬೋರ್ಡ್, ಮೌಸ್, ಫ್ಲಾಪಿ ಡ್ರೈವ್‌ಗಳು, ಕಾರ್ಟ್ರಿಜ್ ಟೇಪ್ ಡ್ರೈವ್‌ಗಳು, ಸಿಡಿ ರೋಂ ಡ್ರೈವ್‌ಗಳು, ಡ್ಯಾಟ್ ಡ್ರೈವ್‌ಗಳು, ಹಾರ್ಡ್ ಡಿಸ್ಕ್‌ಗಳು, ಮತ್ತು ಅವುಗಳ ಭಾಗಗಳನ್ನೊಳಗೊಂಡ ಅಂಥಹುದೇ ಬಗೆಯವು. ಶೇಕಡ ನಾಲ್ಕು

(ii) ಪೆರಿಫರಲ್ಸ್, ಎಂದರೆ, -

(ಎ) ಎಲ್ಲ ಬಗೆಯ ಪ್ರಿಂಟರುಗಳು ಮತ್ತು ಅವುಗಳ ಭಾಗಗಳು, ಎಂದರೆ ಡಾಟ್ ಮಾಟ್ರಿಕ್ಸ್, ಇಂಕ್ ಜೆಟ್, ಲೇಸರ್, ಲೈನ್, ಲೈನ್ ಮಾಟ್ರಿಕ್ಸ್ ಮತ್ತು ಅಂತಹುದೇ ಬಗೆಯವು. ಶೇಕಡ ನಾಲ್ಕು

(ಬಿ) ಟರ್ಮಿನಲ್‌ಗಳು, ಸ್ಕ್ಯಾನರುಗಳು, ಮಲ್ಟಿ ಮೀಡಿಯಾ ಕಿಟ್‌ಗಳು, ಪ್ಲಾಟರುಗಳು, ಮಾಡೆಂ ಮತ್ತು ಅವುಗಳ ಭಾಗಗಳು, ಶೇಕಡ ನಾಲ್ಕು

(iii) ಕಂಪ್ಯೂಟರ್ ಕಂನ್ಯೂಮಬಲ್‌ಗಳು ಎಂದರೆ, ಸ್ಟೇಷನರಿ ಫ್ಲಾಪಿ ಡಿಸ್ಕ್‌ಗಳು, ಸಿಡಿ ರಾಮ್‌ಗಳು, ಡಾಟ್ ಟೇಪುಗಳು, ಪ್ರಿಂಟರ್ ರಿಬ್ಬನ್‌ಗಳು, ಪ್ರಿಂಟರ್ ಕಾರ್ಟ್ರಿಜ್‌ಗಳು ಮತ್ತು ಕಾರ್ಟ್ರಿಜ್ ಟೇಪುಗಳು, ಶೇಕಡ ನಾಲ್ಕು''

(xxvii) 'ಸಿ' ಭಾಗದ 21ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

''21, ಸಿಹಿ ತಿಂಡಿ, ಕೇಕುಗಳು ಮತ್ತು ಬಿಸ್ಕತ್ತುಗಳು ಶೇಕಡ ಹತ್ತು''

(xxviii) 'ಸಿ' ಭಾಗದ 22ನೇ ಕ್ರಮ ಸಂಖ್ಯೆಯ (vi) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, ''ಶೇಕಡ ನಾಲ್ಕು'' ಎಂಬ ಪದಗಳಿಗೆ ''ಶೇಕಡ ಎರಡು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxix) 'ಸಿ' ಭಾಗದ 22-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxx) 'ಸಿ' ಭಾಗದ 23ನೇ ಕ್ರಮ ಸಂಖ್ಯೆಯ (i) ರಿಂದ (iv) ರವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳು ಬರುವೆಡೆಗಳೆಲ್ಲೆಲ್ಲ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxi) 'ಸಿ' ಭಾಗದ 26ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು '' ಎಂಬ ಪದಗಳಿಗೆ ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxii) 'ಡಿ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxiii) 'ಡಿ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxiv) 'ಡಿ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxv) 'ಡಿ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxvi) 'ಡಿ' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxvii) 'ಇ' ಭಾಗದ ಎರಡನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ,

(i) (i) ರಿಂದ (iii) ರವರೆಗಿನ ಬಾಬುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವೆಡೆಗಳಲ್ಲೆಲ್ಲ ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(i)(iv) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxviii) 'ಇ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxix) 'ಇ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ, ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xi) 'ಎಫ್' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xii) 'ಎಫ್' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xiii) 'ಎಫ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(xiiii) 'ಎಫ್' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xiv) 'ಎಫ್' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xv) 'ಎಫ್' ಭಾಗದ 7ನೇ ಕ್ರಮ ಸಂಖ್ಯೆಯ (1) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xvi) 'ಎಫ್' ಭಾಗದ 8ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, -

(i) (1) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (iii) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು''ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii)(iv) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv)(v) ನೇ ಬಾಬಿಗೆ (ಎ) ಉಪ-ಬಾಬಿನಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) (vi) ನೇ ಬಾಬಿನಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xlvii) ' ಎಫ್ ' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ, ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xlviii) 'ಎಫ್ ' ಭಾಗದ 10ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ

''10. ಪಾದರಕ್ಷೆ	ಶೇಕಡ ಹತ್ತು''

(xlix) 'ಎಫ್' ಭಾಗದ 11ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ , ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(l) 'ಎಫ್' ಭಾಗದ 11-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(li) 'ಎಫ್' ಭಾಗದ 12ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lii) 'ಎಫ್' ಭಾಗದ 13ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(liii) 'ಎಫ್' ಭಾಗದ 14ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ , ''ಶೇಕಡ ಎಂಟು '' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(liv) 'ಜಿ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lv) 'ಜಿ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lvi) 'ಜಿ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lvii) 'ಜಿ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳ ತರುವಾಯ ಈ ಮುಂದಿನ ನಮೂದುಗಳನ್ನು ಸೇರಿಸತಕ್ಕದ್ದು, ಎಂದರೆ:-

"4-ಎ. ಗೊಟ್ಟ ಮತ್ತು ನಕ್ಕಿ	ಶೇಕಡ ಎರಡು":

(lviii) 'ಜಿ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಎಂಟು" ಎಂಬ ಪದಗಳಿಗೆ, "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lix) 'ಜಿ' ಭಾಗದ 6ನೆ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಎಂಟು" ಎಂಬ ಪದಗಳಿಗೆ, "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lx) 'ಹೆಚ್' ಭಾಗದ 1ನೇ ಕ್ರಮ ಸಂಖ್ಯೆಯ (i) ರಿಂದ (iv) ರವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಎಂಟು" ಎಂಬ ಪದಗಳು ಬರುವೆಡೆಗಳೆಲ್ಲೆಲ್ಲ "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxi) 'ಐ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಎಂಟು" ಎಂಬ ಪದಗಳಿಗೆ, "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxii) 'ಐ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಹನ್ನೆರಡು" ಎಂಬ ಪದಗಳಿಗೆ, "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxiii) 'ಐ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, "ಶೇಕಡ ಎಂಟು" ಎಂಬ ಪದಗಳಿಗೆ, "ಶೇಕಡ ಹತ್ತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxiv) 'ಐ' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"6. ದಂತ, ರೋಸ್ ವುಡ್ ಮತ್ತು ಶ್ರೀಗಂಧದ ವಸ್ತುಗಳು, ಬಾಗಿಲು, ಫ್ರೇಂಗಳು, ಕಿಟಕಿ ಫ್ರೇಂಗಳು, ಷಟರ್‌ಗಳು ಮತ್ತು ಪೀಠೋಪಕರಣಗಳನ್ನು ಬಿಟ್ಟು	ಶೇಕಡ ನಾಲ್ಕು"

(lxv) 'ಜೆ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"2. ಚಿನ್ನ ಮತ್ತು ಬೆಳ್ಳಿಯ ವಸ್ತುಗಳು ಸೇರಿದಂತೆ ಅಮೂಲ್ಯ ಹರಳುಗಳಿರುವ ಅಥವಾ ಇಲ್ಲದಿರುವ ಒಡವೆಗಳು	ಶೇಕಡ ನಾಲ್ಕು"

(lxvi) 'ಜೆ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxvii) 'ಕೆ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxviii) 'ಕೆ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxix) 'ಕೆ' ಭಾಗದ 3ನೆ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, '' ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxx) 'ಎಲ್' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxi) ' ಎಲ್' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನ ದನ್ನು ಪ್ರತಿಯೋಜಿಸತಕ್ಕದ್ದು;

''3. 5ನೇ ಅನುಸೂಚಿಯ 17ನೇ ಕ್ರಮ ಸಂಖ್ಯೆಯ ಅಡಿಯಲ್ಲಿ ಬರುವ ಸರಕುಗಳಲ್ಲದ ಇತರ ಮತ್ತು ಬೇರೆಡೆಯಲ್ಲಿ ನಿರ್ದಿಷ್ಟಪಡಿಸಿರುವ ಚರ್ಮದ ವಸ್ತುಗಳು	ಶೇಕಡ ಹತ್ತು''

(lxxii) 'ಎಲ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ, ''ಶೇಕಡ ಹದಿನೈದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxiii) 'ಎಲ್' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂದಪಟ್ಟ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ, -

''ಲಾಟರಿ ಟಿಕೇಟುಗಳು	ಶೇಕಡ ಎರಡು''

(lxxiv) 'ಎಮ್' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲಿ. -

(i) (i)ನೇ ಬಾಬಿನಲ್ಲಿ (ಬಿ) ಉಪ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii)(iii) ನೇ ಬಾಬಿನಲ್ಲಿ,-

(ಎ) (ಎ) ಉಪ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) (ಸಿ) ಉಪ ಬಾಬಿನಲ್ಲಿ 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) (ಡಿ) ಉಪ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxv) 'ಎಮ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹದಿನೈದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxvi) 'ಎಮ್' ಭಾಗದ 5ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತ್ಕದ್ದು;

(lxxvii) 'ಎಮ್' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxviii) 'ಎಮ್' ಭಾಗ 7ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxix) 'ಎಮ್' ಭಾಗದ' 7 ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxx) 'ಎಮ್' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು '' ಎಂಬ ಪದಗಳಿಗೆ ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxi) 'ಎಮ್' ಭಾಗದ 10ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ '' ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxii) 'ಎಮ್' ಭಾಗದ 11ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ನಾಲ್ಕು '' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxiii) 'ಎಮ್' ಭಾಗದ 13ನೇ ಕ್ರಮ ಸಂಖ್ಯೆ (i ರಿಂದ v) ರವರೆಗಿನ ಬಾಬುಗಳಿಗೆ ಸಂಬಂದಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxiv) 'ಎಮ್' ಭಾಗದ 14ನೇ ಕ್ರಮ ಸಂಖ್ಯೆ (i ರಿಂದ iii) ರವರೆಗಿನ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳು ಬರುವ ಕಡೆಗಳಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxv) 'ಒ' ಭಾಗದ 3ನೇ ಕ್ರಮ ಸಂಖ್ಯೆ (i ರಿಂದ ii) ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳು ಬರುವ ಕಡೆಗಳಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxvi) 'ಪಿ' ಭಾಗದ 1ನೇ ಕ್ರಮ ಸಂಖ್ಯೆ (i ರಿಂದ ii) ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(lxxxvii) 'ಪಿ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನದನ್ನು ಪದಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''3. ಆಮೋನಿಯ ಕಾಗದ, ಬ್ಲಾಟಿಂಗ್ ಕಾಗದ, ಕಾರ್ಬನ್ ಕಾಗದ, ಸೆಲೋಫೆನ್, ಪಿವಿಸಿ ಕೋಟೆಡ್ ಕಾಗದ, ಸ್ಟೆನ್ಸಿಲ್ ಕಾಗದ, ವಾಟರ್ ಪ್ರೂಫ್ ಕಾಗದ, ಆರ್ಟ್ ಬೋರ್ಡ್ಸ್, ಕಾರ್ಡ್ ಬೋರ್ಡ್ಸ್, ಕೊರುಗೇಟೆಡ್ ಬೋರ್ಡ್ಸ್, ಡೂಪ್ಲೆಕ್ಸ್ ಬೋರ್ಡ್ಸ್, ಪಲ್ಪ್ ಬೋರ್ಡ್ಸ್, ಸ್ಟ್ರಾ ಬೋರ್ಡ್ಸ್, ಟ್ರಿಪ್ಲೆಕ್ಸ್ ಬೋರ್ಡ್ಸ್ ಸ್ಟೂಡೆಂಟ್ ನೋಟ್ ಬುಕ್ಸ್ ಮುಂತಾದವುಗಳನ್ನು ಒಳಗೊಂಡಿರುವ ಎಲ್ಲಾ ರೀತಿಯ ಕಾಗದ ಆದರೆ ಫೋಟೋ-ಗ್ರಾಫಿಕ್ ಕಾಗದವನ್ನು ಹೊರತುಪಡಿಸಿ ಶೇಕಡ ನಾಲ್ಕು;

(lxxxviii) 'ಪಿ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, -

(i) (ii)ನೇ ಬಾಬಿನಲ್ಲಿ 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii)(iii)ನೇ ಬಾಬಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು; ಎಂದರೆ, -

''(iii) ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಶೇಕಡ ಹತ್ತು''

(lxxxix) 'ಪಿ' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xc) 'ಪಿ' ಭಾಗದ 7ನೇ ಕ್ರಮ ಸಂಖ್ಯೆ (iii) ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xci) 'ಪಿ' ಭಾಗದ 8ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcii) 'ಪಿ' ಭಾಗದ 10ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcii) 'ಪಿ' ಭಾಗದ 11ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xciv) 'ಪಿ' ಭಾಗದ 12ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲಿ. -

(i)(ii)ನೇ ಬಾಬಿನಲ್ಲಿ 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii)(iii) ಬಾಬಿನಲ್ಲಿ 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcv) 'ಆರ್' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcvi) 'ಆರ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcvii) 'ಆರ್' ಭಾಗದ 5ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcviii) 'ಆರ್' ಭಾಗದ 8ನೇ ಕ್ರಮ ಸಂಖ್ಯೆಯ (i) ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹದಿನೈದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xcix) 'ಆರ್' ಭಾಗದ 8ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೊಜಿಸತಕ್ಕದ್ದು;

(c) 'ಆರ್' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ci) 'ಆರ್' ಭಾಗದ 10ನೇ ಕ್ರಮ ಸಂಖ್ಯೆಯ (ii) ರಿಂದ (v) ರವರೆಗಿನ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cii) 'ಆರ್' ಭಾಗದ 11ನೇ ಕ್ರಮಸಂಖ್ಯೆಗೆ ಸಂಬಂಧ ಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cii) 'ಆರ್' ಭಾಗದ 12ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(civ) 'ಆರ್' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cv) 'ಎಸ್' ಭಾಗದ 3ನೆ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cvi) 'ಎಸ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cvii) 'ಎಸ್' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದುದ;

(cviii) 'ಎಸ್' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cix) 'ಎಸ್' ಭಾಗದ 7ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮುದುಗಳಲ್ಲಿ-

(i)(i) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii)(ii) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii)(iii)ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv)(iv) ನೇ ಬಾಬಿನಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cx) 'ಎಸ್' ಭಾಗದ 10ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxi) 'ಎಸ್' ಭಾಗದ 12ನೇ ಕ್ರಮ ಸಂಖ್ಯೆಯ (i) ಮತ್ತು (iii)ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ,''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxii) 'ಎಸ್' ಭಾಗದ 15ನೇ ಕ್ರಮ ಸಂಖ್ಯೆಯ (i) ಮತ್ತು (iii) ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(cxiii) 'ಎಸ್' ಭಾಗದ 17ನೇ ಕ್ರಮ ಸಂಖ್ಯೆಯ (i) ಬಾಬಿನ (ಎ), (ಬಿ) ಮತ್ತು (ಸಿ) ಉಪ-ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxiv) 'ಎಸ್' ಭಾಗದ 18ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxv) 'ಎಸ್' ಭಾಗದ 19ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxvi) 'ಎಸ್' ಭಾಗದ 21ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxvii) 'ಎಸ್' ಭಾಗದ 23ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತ್ಕದ್ದು;

(cxvii) 'ಟಿ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxvii) 'ಟಿ' ಭಾಗದ 1-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxx) 'ಟಿ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxi) 'ಟಿ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ, -

''5. ಟೀ. ಶೇಕಡ ಹತ್ತು'';

(cxxii) 'ಟಿ' ಭಾಗದ 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxiii) 'ಟಿ' ಭಾಗದ 7ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxiv) 'ಟಿ' ಭಾಗದ 8ನೇ ಕ್ರಮ ಸಂಖ್ಯೆಯ (i), (ii), (iv) ಮತ್ತು (v) ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxv) 'ಟಿ' ಭಾಗದ 9ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು;

(cxxvi) 'ಟಿ' ಭಾಗದ 10ನೇ ಕ್ರಮ ಸಂಖ್ಯೆಯ (i) ಮತ್ತು (ii) ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxvii) 'ಟಿ' ಭಾಗದ 10-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxviii) 'ಟಿ' ಭಾಗದ 10-ಬಿ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxix) 'ಟಿ' ಭಾಗದ 11ನೇ ಕ್ರಮ ಸಂಖ್ಯೆಯ (i)ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxx) 'ವಿ' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxi) 'ವಿ' ಭಾಗದ 2ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxii) 'ಡಬ್ಲ್ಯೂ' ಭಾಗದ 3ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxiii) 'ಡಬ್ಲ್ಯೂ' ಭಾಗದ 4ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxiv) 'ಡಬ್ಲ್ಯೂ' ಭಾಗದ 4-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxv) 'ಡಬ್ಲ್ಯೂ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxiv) 'ಡಬ್ಲ್ಯೂ' ಭಾಗದ 4-ಎ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxv) 'ಡಬ್ಲ್ಯೂ' ಭಾಗದ 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxv) 'ಡಬ್ಲ್ಯೂ' ಭಾಗದ 6ನೇ ಕ್ರಮ ಸಂಖ್ಯೆಗೆ (i) ಮತ್ತು (ii)ನೇ ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxvii) 'ಡಬ್ಲ್ಯೂ' ಭಾಗದ 7ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈವು ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ, -

''7. ಅಡಿಗೆ ಸೌದೆ, ನೀಲಗಿರಿ, ಸರ್ವೆ ಮರ ಸೇರಿದಂತೆ
ಎಲ್ಲಾ ಬಗೆಯ ಸೌದೆ, ಬಾಗಿಲು ಫ್ರೇಂಗಳು, ಕಿಟಕಿ ,
ಫ್ರೇಂಗಳು ಮತ್ತು ಶಟರ್‌ಗಳು ಸೇರಿದಂತೆ ಯಾವುದೇ
ಆಕಾರದ, ಬಗೆಯ ಅಥವಾ ಗಾತ್ರದ ಮರಮುಟ್ಟು ಶೇಕಡ ಹತ್ತು'';

(cxxxviii) 'ಡಬ್ಲೂ' ಭಾಗದ 8ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(cxxxix) 'ಎಕ್ಸ್' ಭಾಗದ 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ , ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(15) ಮೂರನೇ ಅನುಸೂಚಿಯಲ್ಲಿ, -

(i) 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 4ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, -

(i) (i)ನೇ ಬಾಬಿನ (ಬಿ) ಉಪ- ಬಾಬಿನಲ್ಲಿ 4ನೇ ಅಂಕಣದಲ್ಲಿ ''ಶೇಕಡ ಆರು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (ii) ನೇ ಬಾಬಿನಲ್ಲಿ 4ನೇ ಅಂಕಣದಲ್ಲಿ ''ಶೇಕಡ ಆರು'' ಎಂಬ ಪದಗಳಿಗೆ ''ಶೇಕಡ ನಾಲ್ಕು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(16) ನಾಲ್ಕನೇ ಅನುಸೂಚಿಯಲ್ಲಿ, -

(i) 1ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 4ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(i) 5ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, -

"(ಎ)	ಕಡಲೆ ಬೀಜ ಅಥವಾ ಸೇಂಗಾ ಬೀಜಗಳು ಸೇರಿದಂತೆ ಸೇಂಗಾ	ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಹೊಣೆಗಾರನಾದ ರಾಜ್ಯದಲ್ಲಿನ ಮೊದಲನೆ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿ ಮುಂಚಿನ ವ್ಯಾಪಾರಿಯಿಂದ ಮಾರಾಟ	ಶೇಕಡ ಎರಡು"

(ಎ) (ಎ) ಬಾಬಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

(ಬಿ) (ಬಿ) ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ,-

"ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಹೊಣೆಗಾರನಾದ ರಾಜ್ಯದಲ್ಲಿನ ಮೊದಲನೆ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿ ಮುಂಚಿನ ವ್ಯಾಪಾರಿಯಿಂದ ಮಾರಾಟ."

(ii) 6ನೇ ಕ್ರಮ ಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ, - " ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಹೊಣೆಗಾರನಾದ ರಾಜ್ಯದಲ್ಲಿನ ಮೊದಲನೆ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿ ಮುಂಚಿನ ವ್ಯಾಪಾರಿಯಿಂದ ಮಾರಾಟ.";

(17) ಐದನೇ ಅನುಸೂಚಿಗೆ ಈ ಮುಂದಿನ ಅನುಸೂಚಿಯನ್ನು ಪ್ರತಿಯೋಜಿಸತಕ್ಕದ್ದು, ಎಂದರೆ :-

ಐದನೇ ಅನುಸೂಚಿ

೩ನೇ ಪ್ರಕರಣದ ಅಡಿಯಲ್ಲಿ ತೆರಿಗೆಯಿಂದ ವಿನಾಯಿತಿ ನೀಡಲಾದ ಸರಕುಗಳ

ಕ್ರಮ ಸಂಖ್ಯೆ	ಸರಕಿನ ಹೆಸರು
1.	ಗುಡಿ ಕೈಗಾರಿಕೆಗಳ ಉತ್ಪನ್ನವಾಗಿರುವ ಕೃಷಿ ಉಪಕರಣಗಳು, ಎಂದರೆ ಕಾರ್ಖಾನೆಯಲ್ಲಿನ ಮನೆಯಲ್ಲೇ ಯಾವೊಬ್ಬ ವ್ಯಕ್ತಿಯು ನಡೆಸುವ ಯಾವುದೇ ಕೈಗಾರಿಕೆ.
2.	ಧಾನ್ಯಗಳು, ಕಾಳುಗಳು, ಎಣ್ಣೆ ಬೀಜಗಳು, ಹುಲ್ಲು, ಹೂಗಳು, ಹಣ್ಣುಗಳು ಮತ್ತು ತರಕಾರಿಗಳ ಎಲ್ಲ ಬಗೆಯ ಪ್ರಮಾಣೀಕೃತ ಬಿತ್ತನೆ ಬೀಜಗಳು.
3.	ಮಿಲ್ಲುಗಳಲ್ಲಿ, ವಿದ್ಯುಚ್ಚಾಲಿತ ಮಗ್ಗಗಳಲ್ಲಿ ಅಥವಾ ಕೈಮಗ್ಗಗಳಲ್ಲಿ ತಯಾರಿಸಿದ ಎಲ್ಲ ಬಗೆಯ ಜವಳಿಗಳು, ಎಂದರೆ ರೇಯಾನ್ ಅಥವಾ ನೈಲಾನ್ ಸೇರಿದಂತೆ ಹತ್ತಿ, ಉಣ್ಣೆ ಅಥವಾ ಕೃತಕ ರೇಷ್ಮೆ ಮತ್ತು ಹೆಚ್ಚುವರಿ ಅಬ್ಕಾರಿ ಶುಲ್ಕಗಳ, (ವಿಶೇಷ ಮಹತ್ವದ ಸರಕುಗಳು) ಅಧಿನಿಯಮ, 1957ರ ಮೊದಲನೇ ಅನುಸೂಚಿಯ 2ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದ ಮತ್ತು ಹೆಚ್ಚುವರಿ ಅಬ್ಕಾರಿ ಶುಲ್ಕಗಳಿಗೆ ಗುರಿಯಾದ ಮತ್ತು ಒಳಗಾದ ಉದ್ದದ ಥಾನುಗಳಲ್ಲಿನ ಹೊಸೈರಿ ಬಟ್ಟೆ
4.	ನೇಗಿಲುಗಳನ್ನೂ ಒಳಗೊಂಡಂತೆ ಕೈಯಿಂದ ನಡೆಸುವ ಅಥವಾ ಪ್ರಾಣಿಯು ಎಳೆಯುವ ಕೃಷಿ ಉಪಕರಣಗಳು, ಬೀಜ ಹಾಗೂ ರಸಗೊಬ್ಬರ ಕೂರಿಕೆಗಳು, ಕೀಟನಾಶಕಗಳು ಮತ್ತು ಕ್ರಿಮಿನಾಶಕಗಳನ್ನು ಉದುರಿಸುವುದಕ್ಕಾಗಿ ಅಥವಾ ಸರಿಪಡಿಸುವುದಕ್ಕಾಗಿ ಉಪಯೋಗಿಸುವ ಡಸ್ಟರುಗಳು ಮತ್ತು ಸ್ಪ್ರೇಯರುಗಳು (ಮೋಟಾರುಗಳಿಂದ ಚಾಲಿತವಾದವುಗಳನ್ನು ಹೊರತುಪಡಿಸಿ) ಅವುಗಳ ಭಾಗಗಳು (ಆಯಿಲ್ ಎಂಜಿನ್‌ಗಳು ಮತ್ತು ಎಲೆಕ್ಟ್ರಿಕಲ್ ಮೋಟಾರುಗಳಲ್ಲಿನ ಇತರ) ಮತ್ತು ಬಿಡಿಭಾಗಗಳು, ಪಿಕಾಸಿಗಳು, ಮಮ್ಟಿಗಳು ಮತ್ತು ಅಂಥವುಗಳೂ ಸೇರಿದಂತೆ
5.	ಸಾರಾಯಿ ಮತ್ತು ಹೆಂಡ
6.	ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು, - (ಎ) ಕಾರ್ಖಾನೆಗಳು ಮತ್ತು ಇತರ ಕೈಗಾರಿಕಾ ಸಂಸ್ಥೆಗಳು ಅಂಥ ಕಾರ್ಖಾನೆಗಳು ಮತ್ತು ಸಂಸ್ಥೆಗಳ ನೌಕರರಿಗೆ ಒದಗಿಸಿದ ಸೌಕರ್ಯವೆಂಬಂತೆ ಲಾಭರಹಿತ ಆಧಾರದ ಮೇಲೆ ನಡೆಸುತ್ತಿರುವ ಕ್ಯಾಂಟೀನುಗಳು ಮಾರಾಟ, ಸರಬರಾಜು ಅಥವಾ ವಿತರಣೆ ಮಾಡಿದಾಗ; (ಬಿ) ಇಲಾಖೆ ಅಥವಾ ನೌಕರನ ಸಹಕಾರ ಸಂಘಗಳು ಅಥವಾ ಕೇಂದ್ರ ಸರ್ಕಾರ ರಾಜ್ಯ ಸರ್ಕಾರವು ಸ್ಥಾಪಿಸಿರದ ಸ್ವಾಯತ್ತ ಅಥವಾ ಶಾಸನಬದ್ಧ ನಿಕಾಯಗಳು ಅವುಗಳ ಸಿಬ್ಬಂದಿ ಸದಸ್ಯರಿಗಾಗಿ ಲಾಭರಹಿತ ಆಧಾರತ ಮೇಲೆ ಸೌಕರ್ಯವೆಂಬಂತೆ ನಡೆಸುತ್ತಿರುವ ಕ್ಯಾಂಟೀನುಗಳು ಮಾರಾಟ ಸರಬರಾಜು ಅಥವಾ ವಿತರಣೆ ಮಾಡಿದಾಗ;

(ಸಿ) ಆಸ್ಪತ್ರೆಗಳ ಆವರಣದಲ್ಲಿ 'ಲಾಭರಹಿತ' ಆಧಾರದ ಮೇಲೆ ನಡೆಸುತ್ತಿರುವ ಕ್ಯಾಂಟೀನುಗಳು, ಮಾರಾಟ, ಸರಬರಾಜು ಅಥವಾ ವಿತರಣೆ ಮಾಡಿದಾಗ;

(ಡಿ) ಶೈಕ್ಷಣಿಕ ಸಂಸ್ಥೆಗಳು ಮತ್ತು ಧರ್ಮಾದಾಯ ಸಂಸ್ಥೆಗಳು ನಡೆಸುವ ಕ್ಯಾಂಟೀನುಗಳು ಅಥವಾ ಹಾಸ್ಟೆಲುಗಳು ಅಂಥ ವಸ್ತುಗಳನ್ನು ಸಂಬಂಧಪಟ್ಟ ಸಂಸ್ಥೆಯ ಸದಸ್ಯರಿಗೆ ಮಾತ್ರ ಮಾರಾಟ, ಸರಬರಾಜು ಅಥವಾ ವಿತರಣೆ ಮಾಡಿದಾಗ,

7. (ಎ) ಕೃತಕ ಕಾಲುಗಳು

(ಬಿ) ಬ್ರೈಲ್ ವಾಚುಗಳು

(ಸಿ) ಅಂಗವಿಕಲರಿಗಾಗಿ ನಿಯಂತ್ರಣ ಕಾರುಗಳು ಮತ್ತು ಅಂಗವಿಕಲರ ಬಳಕೆಗಾಗಿಯೇ ತಯಾರಿಸಲಾದ ಮೋಟಾರು ಇರುವ ಟ್ರೈಸಿಕಲ್‌ಗಳು,

(ಡಿ) ಅಂಗವಿಕಲರಿಗಾಗಿ ನಿಯಂತ್ರಣ ಕಾರುಗಳು ಮತ್ತು ಅಂಗವಿಕಲರ ಬಳಕೆಗಾಗಿಯೇ ತಯಾರಿಸಲಾದ ಮೋಟಾರು ಇರುವ ಟ್ರೈಸಿಕಲ್‌ಗಳು

(ಇ) ಶ್ರವಣ ಸಾಧನಗಳು, ಸ್ವೀಚ್ ಟ್ರೈನರುಗಳು ಮತ್ತು ಅವುಗಳ ಭಾಗಗಳು,

(ಎಫ್) ಕರ್ನಾಟಕದ ಸ್ಪಾಸ್ಟಿಕ್ ಸೊಸೈಟಿಯು ಮಾಡಿದ ಮಾರಾಟಗಳು,

(ಜಿ) ಅಂಗವಿಕಲರು ಮತ್ತು ಕಾಯಿಲೆ ವ್ಯಕ್ತಿಗಳು ಬಳಸುವ ವೀಲ್ ಕುರ್ಚಿಗಳು ಮತ್ತು ಕ್ರಚ್‌ಗಳು,

(ಎಚ್) ಅಂಗವಿಕಲ ಮತ್ತು ಮನೋವಿಕಲ ಮಕ್ಕಳಿಗೆ ಮೂಲ ಶಿಕ್ಷಣ ನೀಡಲು ಬಳಸುವ ಮರದ ಶಿಕ್ಷಣ ಸಾಧನಗಳು;

8. ಸಂಸತ್ ಸದನಗಳು, ರಾಜ್ಯ ವಿಧಾನಮಂಡಲ ಮತ್ತು ರಾಜ್ಯದ ಸ್ಥಳೀಯ ಪ್ರಾಧಿಕಾರಗಳು ನಡೆಸುವ ಚುನಾವಣಾ ಉದ್ದೇಶಕ್ಕಾಗಿ ಮಾರಾಟ ಮಾಡಲಾದ ಮತಪಟ್ಟಿಗೆಗಳು.

9. ಜೇನು ಸಾಕಣೆ ಪೆಟ್ಟಿಗೆಗಳು

10. ಜೈವಿಕ - ರಾಸಾಯನಿಕಗಳು

11. ಪಾರಾಸಿಟಾಯ್ಡ್‌ಗಳು, ಪ್ರೀಡೇಟರುಗಳು, ಪ್ಯಾಥೋಗನ್‌ಗಳು ಮತ್ತು ಫರ್ಮೋನುಗಳು ಮುಂತಾದ ಜೈವಿಕ ನಿಯಂತ್ರಣ ಏಜೆಂಟರುಗಳು

12. ಮೂಳೆಗಳು ಮತ್ತು ಕೊಂಬುಗಳು

13. ಓದುವುದಕ್ಕಾಗಿನ ಪುಸ್ತಕಗಳು

14. (i) ಭಾರತ ಸರ್ಕಾರ ಕ್ಯಾಂಟೀನ್ ಸ್ಟೋರ್‌ಗಳ ಇಲಾಖೆಗೆ ಮಾರಾಟ ಮಾಡಿದ ಕ್ಯಾಂಟೀನ್ ಸ್ಟೋರ್‌ಗಳು ಮತ್ತು ಸದರಿ ಇಲಾಖೆಯು ರಾಜ್ಯದಲ್ಲಿನ ರೆಜಿಮೆಂಟಲ್ ಅಥವಾ ಯೂನಿಟಿರನ್ ಕ್ಯಾಂಟೀನುಗಳಿಗೆ ಮಾರಾಟ ಮಾಡಿದ ಅಂಥ ಸ್ಟೋರುಗಳು;

(ii) ರಾಜ್ಯದಲ್ಲಿನ ಸಶಸ್ತ್ರ ಬಲಗಳಿಗೆ ರೆಡಿಮೆಂಟ್ ಅಥವಾ ಯುನಿಟೆರನ್ ಕ್ಯಾಂಟೀನುಗಳು ಮಾರಾಟ ಮಾಡಿದ ಕ್ಯಾಂಟೀನು ಸ್ಟೋರುಗಳು, ಪರಂತು, ಭಾರತ ಸರ್ಕಾರದ ಕ್ಯಾಂಟೀನ್ ಷೇರುಗಳು ಇಲಾಖೆಯಿಂದ ಪಡೆದಂಥವುಗಳಾಗಿರಬೇಕು ಮತ್ತು ಮಾರಾಟದ ಬೆಲೆಯು ಭಾರತ ಸರ್ಕಾರವು ನಿಗದಿಪಡಿಸಿದ ಮಾರಾಟದ ಬೆಲೆಯನ್ನು ಮೀರಕೂಡದು.

15. ಬಾರ್ಲಿಯನ್ನು ಹೊರತುಪಡಿಸಿ ದ್ವಿದಳ ಧಾನ್ಯಗಳು (ಹೊಟ್ಟುಸಹಿತ ಅಥವಾ ಹೊಟ್ಟು ರಹಿತ)

16. ಎ) ಅಂಬರ ಚರಖಾಗಳನ್ನು ಒಳಗೊಂಡು ಚರಖಾಗಳು ಮತ್ತು ಅವುಗಳ ಹಂಚಿಗಳು ಮತ್ತು ತಂತುಗಳು

ಬಿ) ಹತ್ತಿ ಅಥವಾ ಉಣ್ಣೆಯ ನೂಲಿನಿಂದ ನೂತನೂಲು ಮತ್ತು ಕೈಯಿಂದ ನೂತ ನೂಲು ಮತ್ತು ಕೈಯಿಂದ ನೂತ ನೂಲಿನಿಂದ ಅನನ್ಯವಾಗಿ ಕೈಮಗ್ಗಗಳ ಮೇಲೆ ನೇಯ್ದ ಎಲ್ಲ ಬಟ್ಟೆ ಮತ್ತು ಅಂಥ ಬಟ್ಟೆಯಿಂದ ಮಾಡಲಾದ ವಸ್ತುಗಳು.

ಸಿ) ಚರ್ಮದ ಪಾದರಕ್ಷೆಗಳೂ ಸೇರಿದಂತೆ ಚರ್ಮದ ಉಡುಪುಗಳು

ಇ) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಅಥವಾ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಕರ್ನಾಟಕ ರಾಜ್ಯದಲ್ಲಿರುವ ತನ್ನ ಭಂಡಾರಗಳು, ಭವನಗಳು, ಎಂಪೋರಿಯಾ, ಮಾರಾಟ ಮಳಿಗೆಗಳು ಮತ್ತು ತನ್ನ ಅಧಿಕೃತ ಏಜೆನ್ಸಿಗಳ ಮೂಲಕ ಮಾರಾಟ ಮಾಡುವ ನೂಲುವ ಮತ್ತು ಇತರ ಕುಶಲ ಸಾಧನ ಸಾಮಾಗ್ರಿಗಳು

ಎಫ್) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಅಥವಾ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಅಥವಾ ಅವುಗಳ ಮನ್ನಣೆ ನೀಡಿದ ಖಾದಿ ತಯಾರಿಕಾ ಕೇಂದ್ರಗಳ ಅಥವಾ ಉಣ್ಣೆ ಉದ್ಯಮ ಸಹಕಾರ ಸಂಘಗಳು ಖರೀದಿಸಿದ ಹತ್ತಿ ಮತ್ತು ಕಚ್ಚಾ ಉಣ್ಣೆ.

17. ಕಂಪೋಸ್ಟು ಗೊಬ್ಬರ, ಸಾವಯವ ಗೊಬ್ಬರ, ಮೀನು ಗೊಬ್ಬರ ಮತ್ತು ಕೋಳಿ ಗೊಬ್ಬರ

18. ಗರ್ಭನಿರೋಧಗಳು ಮತ್ತು ಅವುಗಳ ಸಂಬಂಧಿಸಿದ ಮುದ್ರಿತ ಜಾಹೀರಾತು ಸಾಮಗ್ರಿಗಳು

19. ನಾಡ ಇಟ್ಟಿಗೆಗಳು ಮತ್ತು ನಾಡ ಹೆಂಚುಗಳು.

20. ದೇಶೀಯ ಎತ್ತಿಯ ಗಾಡಿಗಳು ಮತ್ತು ಅವುಗಳ ಭಾಗಗಳು ಮತ್ತು ಸಂಪೂರ್ಣವಾಗಿ ಅಲ್ಯುಮಿನಿಯಂನಿಂದ ಅಥವಾ ಅಲ್ಯುಮಿನಿಯಂ ಮತ್ತು ಕಬ್ಬಿಣ ಮತ್ತು ಉಕ್ಕಿನ ಸಂಯೋಜನೆಯಿಂದ ಮಾಡಿದ ಪ್ರಾಣಿಗಳಿಂದ ಎಳೆಯಲ್ಪಡುವ ಗಾಡಿಗಳು ಮತ್ತು ಅವುಗಳ ಭಾಗಗಳು

21. ಕೈಮಗ್ಗಗಳಲ್ಲಿ ನೇಯಲಾದ ಕಂಬಳಿಗಳು ಮತ್ತು ಒರಟು ಜಮಖಾನೆಗಳು

22. ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ ಹೊರತು ಕೋಳಿ ಮಾಂಸವೂ ಸೇರದಂತೆ ಮೊಟ್ಟೆ ಹಾಗೂ ಮಾಂಸ.

23. ವಿದ್ಯುಚ್ಛಕ್ತಿ

24. ಸಾಗರಗಳಲ್ಲಿ ಸಾಗರ ತೆರೆಗಳನ್ನು ಮತ್ತು ಶಾಖೋತ್ಪನ್ನ ಶಕ್ತಿಯನ್ನು ಬಳಸಿಕೊಳ್ಳವ ಉಪಕರಣಗಳು.

25. (ಹಾಸ್ಟೆಲುಗಳು, ಹಾಸ್ಪಿಟಲುಗಳು ಸೇರಿದಂತೆ ಆದರೆ ಹೋಟೆಲುಗಳನ್ನು ಹೊರತುಪಡಿಸಿ) ಗೃಹೋಪಯೋಗಕ್ಕಾಗಿ ಮಾರಾಟ ಮಾಡಿದಾಗ ಸೌದೆ ಅಥವಾ ಇದ್ದಿಲು

26. ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ ಹೊರತು ಮೀನುಗಳು, ಪ್ರಾನ್‌ಗಳು, ಸೀಗಡಿಗಳು ಮತ್ತು ಏಡಿಗಳು

27. ಫ್ಲ್ಯಾಟ್ ಪ್ಲೇಟ್ ಸೋಲಾರ್ ಕಲೆಕ್ಟರುಗಳು, ಕಾಂಸೆನ್ ಟ್ರೇಟಿಂಗ್ ಮತ್ತು ಪೈಪ್ ಟೈಪ್ ಸೋಲಾರ್ ಕಲೆಕ್ಟರುಗಳು, ಸೋಲಾರ್ ಕುಕ್ಕರ್‌ಗಳು, ಸೋಲಾರ್ ವಾಟರ್ ಹೀಟರುಗಳು ಮತ್ತು ಸಿಸ್ಟಂಗಳು, ಸೋಲಾರ್ ಶಕ್ತಿಯ ಬಳಕೆಯ ಮೇಲೆ ಆಧರಿತವಾದ ಗಾಳಿ/ಅನಿಲ/ದ್ರವ ಹೀಟಿಂಗ್ ವ್ಯವಸ್ಥೆಗಳು, ಸೋಲಾರ್ ಕ್ರಾಪ್ ಡ್ರೈಯರ್‌ಗಳು ಮತ್ತು ಸಿಸ್ಟಂಗಳು, ಸೋಲಾರ್ ಸ್ಟೀಲ್‌ಗಳು ಮತ್ತು ಕ್ಷಾರ ನಿವಾರಣ ಸಿಸ್ಟಂಗಳು, ಸೋಲಾರ್ ಥರ್ಮಲ್ ಮತ್ತು ಸೋಲಾರ್ ಫೋಟೋ ವೊಲ್ಟೈಕ್ ಕನ್‌ವರ್ಷನ್ ಮೇಲೆ ಆಧರಿತವಾದ ಸೋಲಾರ್ ಪಂಪುಗಳು, ವಾಟರ್ ಪಂಪಿಂಗ್‌ಗಾಗಿ ತಸೋಲಾರ್ ಫೋಟೋ ವೊಲ್ಟೈಕ್ ಮಾಡ್ಯೂಲ್‌ಗಳು ಮತ್ತು ಪೇನಲ್‌ಗಳು ಮತ್ತು ಇತರ ಬಳಕೆಗಳು.

28. ಹೂವುಗಳು, ವಿಳ್ಯೆದೆಲೆ ಹಾಗೂ ತಾಜಾ ಹಣ್ಣುಗಳು

29. ತಾಜಾ ಹಾಲು, ಮೊಸರು ಮತ್ತು ಮಜ್ಜಿಗೆ

30. ಬೆಳ್ಳುಳ್ಳಿ, ಶುಂಠಿ ಹಸಿರು ಮೆಣಸಿನಕಾಯಿ, ಈರುಳ್ಳಿ, ಆಲೂಗಡ್ಡೆ, ಗೆಣಸು, ಮರಗೆಣಸು ಮತ್ತು ಅವುಗಳ ಬೀಜಗಳು.

31. ಗಾಜು ಮತ್ತು ಪ್ಲಾಸ್ಟಿಕ್ ಬಳೆಗಳು

32. ಅವುಗಳ ಅಧಿಕೃತ ಉಪಯೋಗಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸಂಯುಕ್ತ ರಾಷ್ಟ್ರಗಳ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿಗೆ ಮಾರಾಟ ಮಾಡಿದ ಸರಕುಗಳು.

33. ಎ) ಮನುಷ್ಯ ರಕ್ತ

ಬಿ) ಮನುಷ್ಯ ನಿರರ್ಥಕ ಕೂದಲು

34. ಕುಂಕುಮ

35. ಕುದುರೆಗಳನ್ನು ಹೊರತುಪಡಿಸಿ ಆದರೆ ಕೋಳಿಗಳನ್ನು ಒಳಗೊಂಡು ಪಶುಸಂಪತ್ತು.

36. ಒಂದಕ್ಕೆ ಐದು ಸಾವಿರ ರೂಪಾಯಿಗಳನ್ನು ಮೀರದ ಬೆಲೆಗೆ ಮಾರಿದಾಗ, ಮದುವೆಯ ಸಂದರ್ಭದಲ್ಲಿ ವಧು ಧರಿಸಿದ ಮಂಗಳಸೂತ್ರ ಅಥವಾ ಯಾವುದೇ ಇತರ ಸಾಂಕೇತಿಕ ಅಥವಾ ಪವಿತ್ರ ಆಭರಣ.

37. ವೈದ್ಯಕೀಯ, ದಂತ, ಔಷಧ ಶಾಸ್ತ್ರ, ಪಶುವೈದ್ಯ, ಇಂಜಿನೀಯರಿಂಗ್ ಮತ್ತು ಕೃಷಿ ಶಿಕ್ಷಣ ಸಂಸ್ಥೆಗಳು ಮತ್ತು ಮೋಟಾರು ಚಾಲನ ಶಾಲೆಗಳು ಇವುಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು ಮನ್ನಣೆ ಮಾಡಿದ ಅಥವಾ ರಾಜ್ಯದಲ್ಲಿ ಕಾನೂನಿನ ಮೂಲಕ ಸ್ಥಾಪಿಸಿದ ವಿಶ್ವವಿದ್ಯಾನಿಲಯಕ್ಕೆ ಸಂಲಗ್ನಗೊಂಡ ಶೈಕ್ಷಣಿಕ ಸಂಸ್ಥೆಗಳಿಗೆ ಮಾರಾಟ ಮಾಡಿದ ಯಾಂತ್ರಿಕ ಬೋಧನಾ ಸಹಾಯಕಗಳು.

38. ಔಷಧಾಲಯಗಳ ಒಡೆಯರಾದ ವೈದ್ಯಕೀಯ ವೃತ್ತಿಗರು ಅವರ ರೋಗಿಗಳಿಗಾಗಿ ವಿತರಣೆ ಮಾಡಿದ ಔಷಧಗಳು.

39. ಇಲೆಕ್ಟ್ರಾನಿಕ್ ಸಂಗೀತ ವಾದ್ಯಗಳನ್ನು ಹೊರತುಪಡಿಸಿ ಇತರ ಸಂಗೀತ ವಾದ್ಯಗಳು

40. ರಾಷ್ಟ್ರ ಧ್ವಜ.

41. ಬಾಳೆ ಎಲೆ, ಪತ್ರಾವಳಿ (ಊಟದ ಎಲೆಗಳು) ಮತ್ತು ಅವುಗಳ ಉತ್ಪನ್ನಗಳು.

42. ಸಸ್ಯಗಳು

43. ಕಚ್ಚಾ ರೇಷ್ಮೆ ನೂಲೂ ಸೇರಿದಂತೆ ಕಚ್ಚಾ ರೇಷ್ಮೆ ಮತ್ತು ಹುರಿಮಾಡಿದ ರೇಷ್ಮೆ ನೂಲು ಅಥವಾ ಕಳಪೆ ರೇಷ್ಮೆ ನೂಲು, ಸ್ವನ್ ರೇಷ್ಮೆ ನೂಲು ಮತ್ತು ದೇಶದ ಹೊರಗಿನಿಂದ ಆಮದು ಮಾಡಿಕೊಂಡವುಗಳನ್ನು ಹೊರತುಪಡಿಸಿ ಇತರ ನೋಯಿಲ್ ರೇಷ್ಮೆ ನೂಲು.

44. ಕರ್ನಾಟಕ ರಾಜ್ಯದೊಳಗೆ ಇರುವ ಚರ್ಚುಗಳಿಗೆ ಮಾರಾಟ ಮಾಡಲಾಗುವ ರಿಲಿಜಿಯಸ್ ಸೇಕ್ರಮೆಂಟಲ್ ಮಾಸ್ ವೈನ್.

45. (ಎ) ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯ ಕರ್ನಾಟಕ ರಾಜ್ಯ ಶಾಖೆಯು ಮಾಡಿದ ಮಾರಾಟಗಳು;

(ಬಿ) ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಮಾರಾಟ ಮಾಡುವ ಸ್ಕೌಟ್ ಸಮವಸ್ತ್ರಗಳು, ಸ್ಕೌಟ್ ಸಾಹಿತ್ಯ ಮತ್ತು ಸ್ಕೌಟ್ ಉಪಕರಣಗಳು

46. ಉಪ್ಪು.

47. ವೀರ್ಯ

48. ರೇಷ್ಮೆಗೂಡುಗಳು, ರೇಷ್ಮೆಹುಳು ತಟ್ಟಿಗಳು ಮತ್ತು ರೇಷ್ಮೆ ಪ್ಯೂಪಾಗಳು.

49. ಸ್ಲೇಟುಗಳು, ಬಳಪ ಮತ್ತು ಬರೆಯುವ ಸೀಮೆಸುಣ್ಣ.

50. ಸ್ಟಾಂಪುಗಳಿಗೆ ಸಂಬಂಧಪಟ್ಟಂಥ ಯಾವುದೇ ಕಾನೂನಿನ ಉಪಬಂಧಗಳ ಅಡಿಯಲ್ಲಿ ವಿದ್ಯುಕ್ತವಾಗಿ ಪ್ರಾಧೀಕರಿಸಲಾದ ಮಾರಾಟಗಾರರ ಮಾರಾಟ ಮಾಡಿದ ಸ್ಟಾಂಪ್ ಪೇಪರ್.

51. 1957ರ ಹೆಚ್ಚುವರಿ ಅಬ್ಕಾರಿ ಶುಲ್ಕಗಳ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮದ ಮೊದಲನೆ ಅನುಸೂಚಿಯ 3ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂಥ ಮತ್ತು ಹೆಚ್ಚುವರಿ ಅಬ್ಕಾರಿ ಶುಲ್ಕಕ್ಕೆ ಗುರಿಯಾದ ಮತ್ತು ಒಳಗಾದ ಸಕ್ಕರೆ, ಆದರೆ ಸಿಹಿತಿಂಡಿ ಮತ್ತು ಅಂಥಹವುಗಳನ್ನು ಹೊರತುಪಡಿಸಿ.

52. ಎಳನೀರು

53. 1957ರ ಹೆಚ್ಚುವರಿ ಅಬ್ಕಾರಿ ಶುಲ್ಕ (ವಿಶೇಷ ಮಹತ್ವದ ಸರಕುಗಳು) ಅಧಿನಿಯಮದ ಮೊದಲನೇ ಅನುಸೂಚಿಯ 3ನೇ ಅಂಕಣದಲ್ಲಿ ಕಾಲಕಾಲಕ್ಕೆ ವಿವರಿಸಲಾದಂಥ ಹೊಗೆಸೊಪ್ಪು ಮತ್ತು ಅದರ ಎಲ್ಲಾ ಉತ್ಪಾದನೆಗಳು.

54. (ಎ) ಯುನಿಸೆಫ್ ಗ್ರೀಟಿಂಗ್ ಕಾರ್ಡ್‌ಗಳು ಮತ್ತು ಕ್ಯಾಲೆಂಡರುಗಳು.

(ಬಿ) ಸಿ ಆರ್ ವೈ ಮಾರಾಟ ಮಾಡುವ ಗ್ರೀಟಿಂಗ್ ಕಾರ್ಡ್‌ಗಳು, ದೂರವಾಣಿ ಮತ್ತು ವಿಳಾಸ ಪುಸ್ತಕಗಳು, ಆರ್ಟ್ ಪ್ರಿಂಟ್‌ಗಳು, ನೋಟ್‌ಪ್ಯಾಡ್‌ಗಳು ಮತ್ತು ಅಂಚೆ ಕಾರ್ಡುಗಳು.

(ಸಿ) ಭಾರತದ ವಿಶ್ವ ವನ್ಯಜೀವಿ ನಿಧಿಯ ಕರಪತ್ರಗಳು ಮತ್ತು ಜಾಹಿರಾತು ವಿಷಯಗಳು.

55. ಶುಷ್ಕ ತರಕಾರಿ ಮತ್ತು ನಿರ್ಜಲೀಕೃತ ತರಕಾರಿಗಳನ್ನು ಹೊರತುಪಡಿಸಿ ತರಕಾರಿಗಳು.

56. ಇಂಗಾಲಾಮ್ಲ ಮಿಶ್ರಿತ ನೀರು, ಖನಿಜ ನೀರು, ಡಿಸ್ಟಿಲ್ಡ್ ನೀರನ್ನು ಹೊರತುಪಡಿಸಿ ನೀರು ಮತ್ತು ಮೊಹರು ಮಾಡಿದ ಧಾರಕಗಳಲ್ಲಿ ಅಥವಾ ಚೀಲಗಳಲ್ಲಿ ಮಾರಾಟ ಮಾಡುವ ಸಂಸ್ಕರಿಸಿದ ಇತರ ನೀರು.

57. ವಿಂಡ್ ಮಿಲ್ಲುಗಳು ಮತ್ತು ವಾಯುಶಕ್ತಿಯಿಂದ ನಡೆಸಲಾಗುವ ವಿದ್ಯುತ್ ಜನರೇಟರುಗಳು ಮತ್ತು ಪಂಪುಗಳೂ ಸೇರಿದಂತೆ ವಿಂಡ್ ಮಿಲ್ಲುಗಳಿಂದ ನಡೆಯುವ ವಿಶೇಷವಾಗಿ ರೂಪಿಸಲಾದ ಸಾಧನಗಳು.

58. ಸೌದೆ ಒಲೆಗಳು ಮತ್ತು ಅದರ ಭಾಗಗಳು ಮತ್ತು ಬಿಡಿ ಭಾಗಗಳು.

ವಿವರಣೆ. - III - 30ನೇ ಬಾಬಿನಲ್ಲಿ 'ತಾಜಾ ಹಾಲು' ಎಂಬುದರಲ್ಲಿ ಹಾಲಿನ ಪುಡಿ, ಘನೀಕರಿಸಿದ ಹಾಲು ಮತ್ತು ರುಚಿಕಾರಕಗಳು, ಬಣ್ಣಗಳು, ಸಂರಕ್ಷಕಗಳು, ದ್ವಿದಳಧಾನ್ಯಗಳು, ಸಾಂಬಾರ ಪದಾರ್ಥಗಳು ಮತ್ತು ಒಣ ಹಣ್ಣುಗಳು ಸೇರಿದ ಹಾಲು ಒಳಗೊಳ್ಳತಕ್ಕದ್ದಲ್ಲ.

ವಿವರಣೆ, - IV - 15ನೇ ನಮೂದಿತ ಉದ್ದೇಶಕ್ಕಾಗಿ 'ಕ್ಯಾಂಟೀನ್ ಸ್ಟೋರುಗಳು', ಎಂಬುದರಲ್ಲಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ರಾಜ್ಯ ಸರ್ಕಾರ ನಿರ್ದಿಷ್ಟಪಡಿಸಬಹುದಾದಂಥ ಸರಕುಗಳು ಒಳಗೊಳ್ಳತಕ್ಕದ್ದಲ್ಲ.

(19) ಆರನೇ ಅನುಸೂಚಿಯಲ್ಲಿ,-

(i) 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ, ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) 3ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) 4ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) 5ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(v) 6ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vi) 7ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(vii) 8ನೇ ಕ್ರಮಸಂಖ್ಯೆಯ, (i)ಮತ್ತು (ii) ಬಾಬುಗಳಿಗೆ ಸಂಬಂಧಪಟ್ಟ ನಮೂದುಗಳಲ್ಲಿ 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(viii) 9ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ix) 10ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(x) 11ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xi) 12ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xii) 13ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xiii) 14ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xiv) 15ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಿಗೆ ಈ ಮುಂದಿನ ನಮೂದುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''15. ಪ್ಲಂಬಿಂಗ್‌ಗಾಗಿ, ಒಳಚರಂಡಿಗಾಗಿ ಮತ್ತು ಅಂತಹುದೇ ಇತರೆಗಳಿಗೆ ಸ್ಯಾನಿಟರಿ ಫಿಟ್ಟಿಂಗ್‌ಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು.	ಶೇಕಡ ಹತ್ತು''

(xv) 16ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹತ್ತು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xvi) 17ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xvii) 18ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xviii) 19ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xix) 20ನೇ ಕ್ರಮಸಂಖ್ಯೆಯ (1)ನೇ ಬಾಬಿಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xx) 21ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxi) 24ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxii) 25ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxiii) 26ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxiv) 27ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxv) 30ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxvi) 31ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxvii) 32ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxviii) 33ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxix) 34ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxx) 35ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxi) 36ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxxii) 39ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxxiii) 40ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಹನ್ನೆರಡು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxiv) 41ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡಾ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(xxxv) 42ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxvi) 43ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ, 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(xxxvii) 44ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(19) ಎಂಟನೇ ಅನುಸೂಚಿಯಲ್ಲಿ, 1ನೇ ಕ್ರಮಸಂಖ್ಯೆಗೆ ಸಂಬಂಧಪಟ್ಟ ನಮೂದುಗಳಲ್ಲಿ , 3ನೇ ಅಂಕಣದಲ್ಲಿ ''ಶೇಕಡ ಎಂಟು'' ಎಂಬ ಪದಗಳಿಗೆ ''ಶೇಕಡ ಹತ್ತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು, ವಸತಿ ಗೃಹಗಳು ಮತ್ತು ಮದುವೆ ಸಭಾಂಗಣಗಳು) ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮ, 1979ನ್ನು (1979ರ ಕರ್ನಾಟಕ ಅಧಿನಿಯಮ 27), ಕರ್ನಾಟಕ ವೃತ್ತಿಗಳ , ಕಸಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 35), ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮ, 1958 (1959ರ ಕರ್ನಾಟಕ ಅಧಿನಿಯಮ 30) ಮೈಸೂರು ಜೂಜು ತೆರಿಗೆ ಅಧಿನಿಯಮ, 1932ನ್ನು (1932ರ ಮೈಸೂರು ಅಧಿನಿಯಮ IX), ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 25) ತಿದ್ದುಪಡಿ ಮಾಡುವುದು ಮತ್ತು ಬಜೆಟ್ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳು ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕಾರ್ಯರೂಪಕ್ಕೆ ತರುವುದು ಅಗತ್ಯವೆಂದು ಭಾವಿಸಲಾಗಿದೆ. ತತ್ಪರಿಣಾಮವಾಗಿ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

1998-99ರಲ್ಲಿ, ಪ್ರಸ್ತಾವಿತ ಶಾಸನ ಕ್ರಮದಿಂದಾಗಿ 60 ಕೋಟಿ ರೂಪಾಯಿಗಳ ಹೆಚ್ಚುವರಿ ಆದಾಯ ಉಂಟಾಗುವ ನಿರೀಕ್ಷೆಯಿದೆ. ಇದರಿಂದ ಯಾವುದೇ ಹೆಚ್ಚಿನ ವೆಚ್ಚ ಉಂಟಾಗುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ

1. ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (1957ರ ಕರ್ನಾಟಕ ಅಧಿನಿಯಮ 25).

ಖಂಡ (9) ಮೇಲಿನ ಖಂಡವನ್ನು ಸೇರಿಸುವ ಮೂಲಕ ಯಾವುದೇ ಇತರ ಕೈಗಾರಿಕಾ, ವಾಣಿಜ್ಯ ಅಥವಾ ವ್ಯಾಪಾರ ಸಂಸ್ಥೆಗೆ 19-ಎ ಪ್ರಕರಣದ ಅಡಿಯಲ್ಲಿ ತೆರಿಗೆ ಕಳೆಯಲು ಅಧಿಕಾರ ನೀಡಿ ಅವುಗಳನ್ನು ಅಧಿಸೂಚಿಸುವ ಅಧಿಕಾರ ನೀಡಲಾಗಿದೆ.

ಪ್ರಸ್ತಾವಿತ ಶಾಸನರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ.

ಸಿದ್ದರಾಮಯ್ಯ
ಉಪಮುಖ್ಯಮಂತ್ರಿಗಳು

ಯಾಕೂಬ್ ಷರೀಫ್
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ಅಧಿನಿಯಮ, 1997

೫. 1957ರ ಕರ್ನಾಟಕ ಅಧಿನಿಯಮ 25 :-

1957ರ ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದಲ್ಲಿ (1957ರ ಕರ್ನಾಟಕ ಅಧಿನಿಯಮ 25), (1) 2ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ (v) ಖಂಡದ ಪರಂತುಕವನ್ನು ಬಿಟ್ಟುಬಿಡತಕ್ಕದ್ದು;

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಣ ತೆರಿಗೆ ಅಧಿನಿಯಮದ (1979ರ ಕರ್ನಾಟಕ ಅಧಿನಿಯಮ 27) ಉದ್ಧೃತ ಭಾಗ

4-ಡಿ. ಕೆಲವು ಸನ್ನಿವೇಶಗಳಲ್ಲಿ ತೆರಿಗೆ ವಿಧಾಯಿತ :-

ಯಾವೊಬ್ಬ ವ್ಯಕ್ತಿಯು, ಮೋಟಾರು ವಾಹನವನ್ನು, ಅಂಥ ವಾಹನವು ಮೋಟಾರು ವಾಹನಗಳ ಅಧಿನಿಯಮ, 1988ರ ಅಡಿಯಲ್ಲಿ ಯಾವುದೇ ಕೇಂದ್ರಾಡಳಿತ ಪ್ರದೇಶ ಅಥವಾ ಯಾವುದೇ ಇತರ ರಾಜ್ಯದಲ್ಲಿ ನೋಂದಾಯಿತವಾದ ದಿನಾಂಕದಿಂದ ಹದಿನೈದು ತಿಂಗಳ ಅವಧಿಯೊಳಗಾಗಿ ಒಂದು ಸ್ಥಳೀಯ ಪ್ರದೇಶದೊಳಗೆ ತಂದರೆ ಮತ್ತು ಅಂಥ ಕೇಂದ್ರಾಡಳಿತ ಪ್ರದೇಶ ಅಥವಾ ರಾಜ್ಯದಿಂದ ಈ ರಾಜ್ಯಕ್ಕೆ ಅವನು ತನ್ನ ವಾಸವನ್ನು ಸ್ಥಳಾಂತರಿಸಿದ ಪರಿಣಾಮವಾಗಿ ಅಂಥ ಪ್ರವೇಶವು ಘಟಿಸಿದ್ದರೆ

ಕಮೀಷನರು, ರುಜುವಾತನ್ನು ಸಲ್ಲಿಸುವುದಕ್ಕೆ ಒಳಪಟ್ಟು ಅಂಥ ವಾಹನದ ಪ್ರವೇಶದ ಮೇಲೆ ಪ್ರವೇಶ ತೆರಿಗೆಯನ್ನು ಸಂದಾಯ ಮಾಡುವುದಕ್ಕೆ ಆ ವ್ಯಕ್ತಿಗೆ ವಿನಾಯಿತಿ ನೀಡಬಹುದು''.

21. (1) ಯಾರೇ ವ್ಯಕ್ತಿಯು,-

(ಎ) ಸರಕುಗಳ ವ್ಯಾಪಾರಿಯಾಗಿದ್ದು, ಈ ಅಧಿನಿಯಮದ ಉಪಬಂಧಗಳು ಮೂಲಕ ಅಥವಾ ಅದರ ಮೇರೆಗೆ ರಚಿತವಾದ ನಿಯಮಗಳ ಮೂಲಕ ಅಗತ್ಯಪಡಿಸಿದಂತೆ ವಿವರ ಪಟ್ಟಿಕೆಯನ್ನು ಸಲ್ಲಿಸಲು ತಪ್ಪಿದರೆ; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ತನ್ನನ್ನು ನೋಂದಾಯಿಸಿಕೊಳ್ಳಬೇಕಾದ ವ್ಯಕ್ತಿಯು ಹಾಗೆ ತನ್ನನ್ನು ನೋಂದಾಯಿಸಕೊಳ್ಳದಿದ್ದರೆ; ಅಥವಾ

(ಸಿ) ಈ ಅಧಿನಿಯಮದಡಿ ಅವನ ಬಗ್ಗೆ ನಿರ್ಧರಿಸಲಾದ ತೆರಿಗೆಯನ್ನು ಅನುಮತಿಸಲಾದ ಸಮಯದೊಳಗೆ ಅಥವಾ ಅವನ ಮೇಲೆ ವಿಧಿಸಿದ ಯಾವುದೇ ದಂಡವನ್ನು ಸಂದಾಯ ಮಾಡಲು ತಪ್ಪಿದರೆ;

ಅಥವಾ

(ಡಿ) ನಿಜವಾದ ಮತ್ತು ಸಂಪೂರ್ಣ ಲೆಕ್ಕಪತ್ರಗಳನ್ನು ಇಡಲು ತಪ್ಪಿದರೆ; ಅಥವಾ

(ಇ) 6ನೇ ಪ್ರಕರಣದ ಮೇರೆಗೆ ಹೊರಡಿಸಿದ ನೋಟಿಸನ್ನು ಪಾಲಿಸಲು ತಪ್ಪಿದರೆ;

ಅಥವಾ

(ಎಫ್) 7ನೇ ಪ್ರಕರಣದಿಂದ ಅಗತ್ಯಪಡಿಸಲಾದಂತೆ ಹೇಳಿಕೆಯನ್ನು ನಿಲ್ಲಿಸಲು ತಪ್ಪಿದರೆ

ಅಥವಾ

(ಜಿ) 17ಎ ಪ್ರಕರಣದ (2) ಮತ್ತು (3)ನೇ ಪ್ರಕರಣಗಳ ಉಪಬಂಧಗಳಿಗನುಗುಣವಾಗಿ ಮಾರಾಟ ಬಿಲ್ಲನ್ನು ಅಥವಾ ನಗದು ಜ್ಞಾಪನವನ್ನು ನೀಡಲು ತಪ್ಪಿದಲ್ಲಿ, ಮ್ಯಾಜಿಸ್ಟ್ರೇಟರಿಂದ ಅಪರಾಧವು ನಿರ್ಣಯವಾದ ಮೇಲೆ, ಇನ್ನೂರೈವತ್ತು ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಆದರೆ ಎರಡು ಸಾವಿರ ರೂಪಾಯಿಗಳವರೆಗಿರಬಹುದಾದ ಜುಲ್ಮಾನೆಗೆ ಗುರಿಯಾಗತಕ್ಕದ್ದು;

''(ಎಚ್) ಖಿಂಡ ಸಾರಿ ಸಕ್ಕರೆ ಕಾರ್ಖಾನೆಯೂ ಸೇರಿದಂತೆ ಸಕ್ಕರೆ ಕಾರ್ಖಾನೆಯಾಗಿದ್ದು, 9 ಎ ಪ್ರಕರಣದ (1)ನೇ ಉಪ-ಪ್ರಕರಣದಿಂದ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಸಂಗ್ರಹಿಸಲು ತಪ್ಪಿದಲ್ಲಿ;''

ಕರ್ನಾಟಕ ಭೋಗ ವಸ್ತುಗಳ ಮೇಲೆ (ಹೋಟೆಲುಗಳು, ವಸತಿಗೃಹಗಳು ಮತ್ತು ಮದುವೆ ಸಭಾಂಗಣಗಳು) ಅಧಿನಿಯಮ, 1979ರ ಉದ್ಧೃತ ಭಾಗ.

3ಎ. ಉಪಕರವನ್ನು ವಿಧಿಸುವುದು :- (1) 3ನೇ ಪ್ರಕರಣದಡಿ ಸಂದಾಯ ಮಾಡತಕ್ಕ ತೆರಿಗೆಗೆ ಜೊತೆಯಾಗಿ ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ, ಚಾರ್ಜುಗಳು ಪ್ರತಿ ದಿನಕ್ಕೆ ಪ್ರತಿ ಕೊಠಡಿಗೆ ವಸತಿಗಾಗಿ ಏಳುನೂರ ಐವತ್ತು ರೂಪಾಯಿಗಿಂತ ಕಡಿಮೆಯಿಲ್ಲದಿರುವ ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಯೊಳಗಿನ ಹೋಟೆಲಿನಲ್ಲಿ ಒದಗಿಸಲಾದ ಭೋಗ ವಸ್ತುಗಳ ಬಗ್ಗೆ ಸದರಿ

ಪ್ರಕರಣದ ಅಡಿ ಸಂದಾಯವಾಗತಕ್ಕ ತೆರಿಗೆಯ ಶೇಕಡ ಐದರ ದರದಂತೆ ಉಪಕರ ರೂಪದಲ್ಲಿ ತೆರಿಗೆಯನ್ನು ವಿಧಿಸತಕ್ಕ ಮತ್ತು ವಸೂಲಿ ಮಾಡತಕ್ಕದ್ದು.

(2) ತೆರಿಗೆಯ ಮರುಪಾವತಿ ಅಥವಾ ತೆರಿಗೆಯ ವಿನಾಯಿತಿಗೆ ಸಂಬಂಧಪಟ್ಟವೂ ಸೇರಿದಂತೆ ಈ ಅಧಿನಿಯಮದ ಉಪಬಂಧಗಳು ಮತ್ತು ಅದರಡಿ ಮಾಡಲಾದ ನಿಯಮಗಳು, ಈ ಅಧಿನಿಯಮದ ಅಡಿ ತೆರಿಗೆ ವಿಧಿಸುವುದುಕ, ನಿರ್ಧರಣೆ ಮಾಡುವುದು ಮತ್ತು ವಸೂಲಿಯ ಸಂಬಂಧದಲ್ಲಿ ಅವು ಅನ್ವಯವಾಗುವಷ್ಟರ ಮಟ್ಟಿಗೆ (1)ನೇ ಉಪ-ಪ್ರಕರಣದ ಅಡಿ ಸಂದಾಯವಾಗತಕ್ಕ ಉಪಕರ ವಿಧಿಸುವುದು, ನಿರ್ಧರಣೆ ಮಾಡುವುದು ಮತ್ತು ವಸೂಲಿಯ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ, ಬೆಂಗಳೂರು ನಗರ ಯೋಜನಾ ಪ್ರದೇಶ ಎಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963)ರ ಕರ್ನಾಟಕ ಅಧಿನಿಯಮ 115 4ನೆ ಎ ಪ್ರಕರಣದಲಿ ಘೋಷಿಸಲಾದಂತೆ ಬೆಂಗಳೂರು ನಗರ ಯೋಜನಾ ಪ್ರದೇಶ.

ಕರ್ನಾಟಕ ವೃತ್ತಿಗಳ, ಕಸಬುಗಳ ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಿನ ತೆರಿಗೆ ಅಧಿನಿಯಮದ 1976ರ ಕರ್ನಾಟಕ ಅಧಿನಿಯಮ 35 ಉದ್ಧೃತ ಭಾಗ

" 3 ಎ. ಉಪಕರ ವಿಧಿಸುವುದು :- (1) ಅಧನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ವೃತ್ತಿ ತೆರಿಗೆಯ ಜೊತೆಗೆ, ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಯೊಳಗೆ ವೃತ್ತಿಗಳು, ಕಸಬುಗಳು, ಆಜೀವಿಕೆಗಳು ಅಥವಾ ಉದ್ಯೋಗಗಳಲ್ಲಿ ತೊಡಗಿರುವ ಪ್ರತಿಯೊಬ್ಬ ವ್ಯಕ್ತಿಗೆ ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ ಉಪಕದ ರೂಪದಲ್ಲಿ ವೃತ್ತಿ ತೆರಿಗೆಯ ಶೇಕಡಾ 5ರ ದರದಲ್ಲಿ ತೆರಿಗೆಯನ್ನು ವಿಧಿಸಿ ವಸೂಲು ಮಾಡತಕ್ಕದ್ದು:

ಪರಂತು, ವೃತ್ತಿ ಅಥವಾ ತೆರಿಗೆಯು ಈ ಉಪ-ಪ್ರಕರಣದ ಅಡಿಯಲ್ಲಿ ಸಂದಾಯ ಮಾತಾಡಬೇಕಾದ ಉಪಕರ ಸಹಿತ ಎರಡು ಸಾವಿರದ ಐನೂರು ರೂಪಾಯಿಯನ್ನು ಮೀರತಕ್ಕದ್ದಲ್ಲ.

(2) ತೆರಿಗೆ ಮರುಪಾವತಿ ಅಥವಾ ತೆರಿಗೆ ವಿನಾಯಿತಿಗೆ ಸಂಬಂಧಪಡುವುಗಳನ್ನು ಒಳಗೊಂಡು ಈ ಅಧಿನಿಯಮದ ಉಪಬಂಧ ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಈ ಅಧಿನಿಯಮದ ಅಡಿಯಲ್ಲಿ ತೆರಿಗೆಯನ್ನು ವಿಧಿಸಲು, ನಿರ್ಧರಣೆಮಾಡಲು ಮತ್ತು ವಸೂಲು ಮಾಡಲು ಅನ್ವಯವಾಗುವಷ್ಟರ ಮಟ್ಟಿಗೆ, (1)ನೇ ಉಪ-ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಉಪಕರಣಗಳನ್ನು ವಿಧಿಸಲು, ನಿರ್ಧರಣೆ ಮಾಡಲು ಮತ್ತು ವಸೂಲು ಮಾಡಲು ಸಹ ಅನ್ವಯವಾಗತಕ್ಕದ್ದು.

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ, ಬೆಂಗಳೂರು ನಗರ ಯೋಜನಾ ಪ್ರದೇಶ ಎಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ; 1961ರ (63ರ ಕರ್ನಾಟಕ ಅಧಿನಿಯಮ 11) 4ನೇ ಪ್ರಕರಣದಲ್ಲಿ ಘೋಷಿಸಲಾದಂತೆ ಬೆಂಗಳೂರು ನಗರ ಯೋಜನಾ ಪ್ರದೇಶ".)

"20- ಆರ್ (ಗ) ರಾಜ್ಯ ಕೇಂದ್ರ ಸರ್ಕಾರ ಕಾರ್ಪೋರೇಷನ್, ಸ್ಥಳೀಯ ಸಂಸ್ಥೆಗಳು ಅಥವಾ ಯಾವನೇ ವ್ಯಕ್ತಿ ಅಥವಾ ಏಜೆನ್ಸಿ-ಗಳಿಂದ ಲೈಸೆನ್ಸ್ ಅಥವಾ ಅನುಮತಿ ಹೊಂದಿದ ವ್ಯಕ್ತಿಗಳು, ಅವು ಯಾವುವೆಂದರೆ, -

(i) ರಸ್ತೆಗಳು, ಅಣೆಕಟ್ಟುಗಳು, ಕಾಲುವೆಗಳು, ಸೇತುವೆಗಳು ಕಲ್ವರ್ಟುಗಳನ್ನು ಕಟ್ಟುವ ಹಾಗೂ ಕಾಮಗಾರಿಗಳು ಅಥವಾ ಗಾರೆ ಕೆಲಸ ಮಾಡುವ ಕಂಟ್ರಾಕ್ಟ್‌ದಾರರು, ಎಲೆಕ್ಟ್ರಿಕಲ್ ಕಂಟ್ರಾಕ್ಟ್‌ದಾರರು ಇವರುಗಳ ವರ್ಷದಲ್ಲಿನ ಕಾಂಟ್ರಾಕ್ಟ್‌ಗಳು ಒಟ್ಟು ಪ್ರತಿಫಲವು :-

ರೂ. 2.00 ಲಕ್ಷದವರೆಗೆ	ಇಲ್ಲ
ರೂ. 2.00 ಲಕ್ಷಕ್ಕಿಂತಲೂ ಹೆಚ್ಚು ಆದರೆ 5.00 ಲಕ್ಷಕ್ಕೆ ಮೀರಿರದೇ ಇದ್ದರೆ	ವರ್ಷಕ್ಕೆ ರೂ. 300
ರೂ. 5.00 ಲಕ್ಷಕ್ಕಿಂತಲೂ ಹೆಚ್ಚು ಆದರೆ 10.00 ಲಕ್ಷಕ್ಕೆ ಮೀರಿರದೇ ಇದ್ದರೆ	ವರ್ಷಕ್ಕೆ ರೂ. 600
ರೂ. 10.00 ಲಕ್ಷಕ್ಕಿಂತಲೂ ಹೆಚ್ಚು ಆದರೆ 25.00 ಲಕ್ಷಕ್ಕೆ ಮೀರಿರದೇ ಇದ್ದರೆ	ವರ್ಷಕ್ಕೆ ರೂ. 1,200
ರೂ. 25.00 ಲಕ್ಷಕ್ಕಿಂತಲೂ ಹೆಚ್ಚು ಆದರೆ 50.00 ಲಕ್ಷಕ್ಕೆ ಮೀರಿರದೇ ಇದ್ದರೆ	ವರ್ಷಕ್ಕೆ ರೂ. 1,800
ರೂ. 50.00 ಲಕ್ಷಕ್ಕಿಂತಲೂ ಹೆಚ್ಚು ಆದರೆ	ವರ್ಷಕ್ಕೆ ರೂ. 2,500

(ii) ಮುಂದಕ್ಕೆ ಕಳುಹಿಸುವ ಮತ್ತು ಏಲೆ ಮಾಡುವ ಏಜೆಂಟರುಗಳನ್ನು ಒಳಗೊಂಡಂತೆ ಸಾರಿಗೆ ಕಂಟ್ರಾಕ್ಟುದಾರರು — ವರ್ಷಕ್ಕೆ ರೂ. 2,500

(iii) ಹುಂಡಿ ಅಥವಾ ಸೆಕ್ಯುರಿಟಿಗಳ ಮೇಲೆ ಕಡಿಮೆ ಅವಧಿಗೆ ಬಡ್ಡಿಗಾಗಿ ಹಣ ಕೊಡುವ ಬ್ಯಾಂಕರುಗಳು — ವರ್ಷಕ್ಕೆ ರೂ. 1,200

ವಿವರಣೆ IV:- ಯಾವುದೇ ಫರ್ಮ ಅನುಸೂಚಿಯನ್ನು (i) (ಬಿ), 7 (i) 9 (ಡಿ), 12, 13 (ಎ), 13 (ಬಿ) (ii), 15 (ಎ), 16, 20-ಎ (ಬಿ), 20-ಸಿ(ಎ), 20 - ಇ (ಬಿ) 20-ಜಿ, 20-ಎಂ,

20-ಓ, 20-ಪಿ (ಬಿ), 20-ಕ್ಯೂ (ಎ), 20-ಕ್ಯೂ (ಬಿ) ಮತ್ತು 20-ಆರ್ (ಡಿ) ಕ್ರಮ ಸಂಖ್ಯೆಗಳಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ವೃತ್ತಿ ವ್ಯಾಪಾರ ಅಥವಾ ಆಜೀವಿಕೆಗಳಲ್ಲಿ ತೊಡಗಿದ್ದ ಹೊರತು ಈ ಅಧಿನಿಯಮದ ಅಡಿಯಲ್ಲಿ ಯಾವುದೇ ತೆರಿಗೆಯನ್ನು ವಿಧಿಸತಕ್ಕುದಲ್ಲ.

1958ರ ಕರ್ನಾಟಕ ಮನೋರಂಜನಾ ತೆರಿಗೆ ಅಧಿನಿಯಮದ

(1958ರ ಕರ್ನಾಟಕ ಅಧಿನಿಯಮ 30) ಉದ್ಧೃತ ಭಾಗ

2 (ಇ) (iii) ಹಣ ಸಂದಾಯ ಮಾಡಿದ ಮೇಲೆ ಪ್ರವೇಶ ನೀಡುವ ಯಾವುದೇ ವಿನೋದಾವಳಿ ಅಥವಾ ಪ್ರದರ್ಶನ ಅಥವಾ ಸಾರ್ವಜನಿಕ ಪ್ರದರ್ಶನ ಅಥವಾ ಸ್ಪರ್ಧೆ ಅಥವಾ ಒಳಾಂಗಣದಲ್ಲಾಗಲಿ ಅಥವಾ ಹೊರಾಂಗಣದಲ್ಲಾಗಲಿ ನಡೆಸುವ ಮನ್ನಣೆ ಪಡೆದ ಆಟ ಅಥವಾ ಕ್ರೀಡೆಗಳು

(iಎ) " ಮನೋರಂಜನಾ ಸ್ಥಳ " ಎಂದರೆ ಮನೋರಂಜನೆಯು ನಡೆಯುವ ಸ್ಥಳ ಮತ್ತು ಇದರಲ್ಲಿ ಕೇಬಲ್ ಜಾಲದೊಂದಿಗೆ ಯಾವುದೇ ರೀತಿಯ ಆಂಟನಾ ಕೇಬಲ್ ಸಂಪರ್ಕ ಕಲ್ಪಿಸುವ ಮೂಲಕ ಅಥವಾ ಕೇಬಲ್ ದೂರದರ್ಶನದ ಮೂಲಕ ಮನೋರಂಜನೆಯನ್ನು ನೀಡುವ ಯಾವುದೇ ಬುಕಿಂಗ್ ಕಚೇರಿ ಮತ್ತು ಯಾವುದೇ ಸ್ಥಳ ಮತ್ತು ಯಾವುದೇ ಸ್ಥಳ ಮತ್ತು ಮನೋರಂಜನೆಗೆ ಸಂಬಂಧಪಟ್ಟಂತೆ ಲೆಕ್ಕಪುಸ್ತಕಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಇಡುವ ಯಾವುದೇ ಸ್ಥಳ;

3 (1ಎ) (ಬಿ) ಮನ್ನಣೆ ನೀಡಿದ ಆಟ ಅಥವಾ ಕ್ರೀಡೆಯಾಗಿರುವ ಮನೋರಂಜನೆಯ ಸಂಬಂಧದಲ್ಲಿ ಇನ್ನೂರೈವತ್ತು ರೂಪಾಯಿ ಮತ್ತು ಅದಕ್ಕೂ ಹೆಚ್ಚಿನದು — ಅಂಥ ಸಂದಾಯ ಶೇಕಡ 10.

4. ಚಲನಚಿತ್ರ ಪ್ರದರ್ಶನಗಳ ಮೇಲೆ ಹೆಚ್ಚಿನ ತೆರಿಗೆ :- (1) ಚಲನಚಿತ್ರ ಪ್ರದರ್ಶನಗಳ ಸಂದರ್ಭದಲ್ಲಿ, 3 ಮತ್ತು 3 ಎ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಮತ್ತು ಅಧಿಭಾರದ ಅಥವಾ 4ನೇ ಪ್ರಕರಣದ ಅಡಿಯಲ್ಲಿ ವಿಧಿಸಬಹುದಾದ ತೆರಿಗೆ ಜೊತೆಗೆ ಈ ಮುಂದಿನ ದರಗಳಲ್ಲಿ ತೆಕ್ಕ ಹಾಕಲಾದ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಅದನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಎಂದರೆ :-

ಕೋಷ್ಟಕ

ಕ್ರಮ ಸಂಖ್ಯೆ	ವರ್ಗದ ಆಸನ ಅಥವಾ ಸ್ಥಳಾವಕಾಶಕ್ಕೆ ವ್ಯಕ್ತಿಯ ಪ್ರವೇಶಿಸುವುದಕ್ಕಾಗಿ ಹಣ ಸಂದಾಯದ ದರ (ಮನರಂಜನಾ ತೆರಿಗೆ ಹೊರತುಪಡಿಸಿ)	ಪ್ರತಿ ಪ್ರದರ್ಶನಕ್ಕೆ ತೆರಿಗೆಯ ದರ
ಎ.	ಒಂದು ರೂಪಾಯಿ ಐವತ್ತು ಪೈಸೆ ಮೀರದಿದ್ದರೆ	ಮೂವತ್ತು ರೂ.
ಬಿ.	ಒಂದು ರೂಪಾಯಿ ಐವತ್ತು ಪೈಸೆ ಮೀರಿದ್ದು ಆದರೆ ಎರಡು ರೂಪಾಯಿ ಐವತ್ತು ಪೈಸೆ ಮೀರದಿದ್ದರೆ	ಐವತ್ತು ರೂ.
ಸಿ.	ಎರಡು ರೂಪಾಯಿ ಐವತ್ತು ಪೈಸೆ ಮೀರದಿದ್ದರೆ	ಎಂಬತ್ತು ರೂ.

BLANK PAGE

BLANK PAGE

ಕರ್ನಾಟಕ ಮಾರಾಟಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 25) ಉದ್ಧೃತ ಭಾಗ

ತೆರಿಗೆಯ ಭಾರ ಮತ್ತು ವಿಧಿಸುವಿಕೆ

5. ಸರಕುಗಳ ಮಾರಾಟ ಮತ್ತು ತೆರಿಗೆಯ ಮೇಲೆ ತೆರಿಗೆ ವಿಧಿಸುವಿಕೆ -

(1) ಪ್ರತಿಯೊಬ್ಬ ವ್ಯಾಪಾರಿಯು ಅವನ ತೆರಿಗೆ ವಿಧಿಸುಬಹುದಾದ ಮಾರಾಟದ ಹಣದ ಮೇಲೆ ಪ್ರತಿಯೊಂದು ವರ್ಷಕ್ಕಾಗಿ ಅಂತಹ ಮಾರಾಟದ ಹಣದ ಶೇಕಡ 12ರ ದರದಲ್ಲಿ ತೆರಿಗೆಯನ್ನು ಸಂದಾಯ ಮಾಡತಕ್ಕದ್ದು:

(1-ಬಿ) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಗಾಜಿನ ಶೀಶೆಗಳ ಸಂದರ್ಭದಲ್ಲಿ ಅಂಥ ಸರಕುಗಳಿಗೆ ಸಂಬಂಧಪಟ್ಟಂತೆ ಪ್ರತಿ ವರ್ಷ ತೆರಿಗೆ ಯೋಗ್ಯವಾದ ಮಾರಾಟ ಹಣದ ಶೇಕಡ ಪಾಂಟರಂತೆ ಪ್ರತಿ ಮಾರಾಟದ ಹಂತದಲ್ಲೂ ವ್ಯವಹಾರಿಯು ತೆರಿಗೆ ಸಂದಾಯ ಮಾಡತಕ್ಕದ್ದು.

5-ಕ ಕೈಗಾರಿಕಾ ಒಳವರಿಗಳ (Inputs) ಮೇಲೆ ತೆರಿಗೆ ವಿಧಿಸುವುದು.-

(1) 5ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಒಬ್ಬ ನೊಂದಾಯಿತ ವ್ಯವಹಾರಿಯು, ಈ ಅಧಿನಿಯಮದ ಮೇರೆಗೆ ತೆರಿಗೆಗೆ ಹೊಣೆಯಾಗಬಹುದಾದ ಯಾವುದೇ ಕೈಗಾರಿಕಾ ಒಳವರಿಯನ್ನು ಇನ್ನೊಬ್ಬ ನೋಂದಾಯಿತ ವ್ಯವಹಾರಿಗೆ, ಅವನು ಮಾರಾಟಕ್ಕಾಗಿ ರಾಜ್ಯದೊಳಗೆ ತಯಾರಿಸಲು ಉದ್ದೇಶಿಸಿರುವಂಥ, ಈ ಅಧಿನಿಯಮದ ಮೇರೆಗೆ ತೆರಿಗೆ ವಿಧಿಸಬಹುದಾದ ಯಾವುದೇ ಇತರ ಸರಕುಗಳ ಘಟಕ ಭಾಗ ಅಥವಾ ಕಚ್ಚಾ ಸಾಮಾಗ್ರಿ ಅಥವಾ ಪ್ಯಾಕಿಂಗ್ ಸಾಮಗ್ರಿಯಾಗಿ ಅವನ ಉಪಯೋಗಕ್ಕಾಗಿ, ಮಾಡಿದ ಮಾರಾಟಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ತೆರಿಗೆಯು, ಅಂತಹ ಮಾರಾಟಕ್ಕೆ ಸಂಬಂಧಪಟ್ಟ ಮಾರಾಟದ ಹಣದ ಮೇಲೆ ಶೇಕಡಾ ನಾಲ್ಕರಷ್ಟು ದರದಲ್ಲಿ ಅಥವಾ 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರ, ಇವುಗಳಲ್ಲಿ ಯಾವುದು ಕಡಿಮೆಯೋ ಆ ದರದ ಇರತಕ್ಕುದ್ದು:

ಪರಂತು, 5ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕೈಗಾರಿಕಾ ಒಳವರಿಗಳಿಗೆ ಸಂಬಂಧಿಸಿದಂತೆ ತೆರಿಗೆ ದರವು ಶೇಕಡಾ ನಾಲ್ಕಕ್ಕಿಂತ ಹೆಚ್ಚಿಗೆ ಇರುವಲ್ಲಿ ಕೈಗಾರಿಕಾ, ಒಳವರಿಗಳನ್ನು ಮಾರಾಟ ಮಾಡುವ ವ್ಯವಹಾರಿಯು ಅದನ್ನು ತೆರಿಗೆ ನಿರ್ಧಾರಣಾ ಪ್ರಾಧಿಕಾರಿಗೆ ನಿಯಮಿಸಿದ ಪ್ರಾಧಿಕಾರಿಯಿಂದ ಪಡೆದುಕೊಂಡ ನಿಯಮಿಸಿದ ನಮೂನೆಯಲ್ಲಿ, ನಿಯಮಿಸಿದ ರೀತಿಯಲ್ಲಿ ಖರೀದಿಸುವ ವ್ಯವಹಾರಿಯ ಘೋಷಣೆಯನ್ನು ಸಲ್ಲಿಸಿದ ಹೊರತು, ಈ ಉಪ-ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕುದಲ್ಲ.

ಮತ್ತೂ ಪರಂತು, ಯಾವನೇ ವ್ಯವಹಾರಿಯು ಈ ಉಪಪ್ರಕರಣದ ಮೊದಲನೇ ಪರಂತುಕದ ಮೇರೆಗೆ ಘೋಷಣೆಯನ್ನು ಅದನ್ನು ನಿಲ್ಲಿಸಿರುವಂಥ ಯಾವುದೇ ಒಳವರಿಗಳನ್ನು ಖರೀದಿಸಿದ ತರುವಾಯ ಅವನು ತಯಾರಿಕಾ ಚಟುವಟಿಕೆಯು ನಿಂತು ಹೋಗಿರುವುದಕ್ಕೆ ಆಗಲಿ ಅಥವಾ ಯಾವುದೇ ಇತರ ಕಾರಣಕ್ಕೆ ಆಗಲಿ ಅಂಥ ಒಳವರಿಗಳನ್ನು ಖರೀದಿಸಿದಂಥ ಲೆಕ್ಕ ವರ್ಷದ ನಿಕಟೋತ್ತರದ ಆ ವರ್ಷವು ಮುಕ್ತಾಯವಾಗುವುದಕ್ಕೆ ಮುಂಚೆ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಇತರ ತೆರಿಗೆ ವಿಧಿಸಬಹುದಾದ ಸರಕುಗಳ ತಯಾರಿಕೆಯಲ್ಲಿ ಅಂಥ ಒಳವರಿಗಳನ್ನು ಸಂಪೂರ್ಣವಾಗಿ ಅಥವಾ ಅದರ ಭಾಗವನ್ನು ಉಪಯೋಗಿಸಿಕೊಳ್ಳಲು ತಪ್ಪಿದಲ್ಲಿ. ಆದರೆ ಅಂಥ ಒಳವರಿಗಳನ್ನು

ಮಾರಾಟ ಮಾಡದೇ ಇರುವಲ್ಲಿ ಅವನು 5ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದರದಲ್ಲಿ ಸಂದಾಯ ಮಾಡಬೇಕಾದ ತೆರಿಗೆ ಮತ್ತು ಮೇಲೆ ನಿರ್ದಿಷ್ಟಪಡಿಸಿದ ಅವಧಿಯ ಕೊನೆಯಲ್ಲಿ ಘೋಷಿತ ಉದ್ದೇಶಕ್ಕಾಗಿ ಅವನಲ್ಲಿ ಉಪಯೋಗಿಸದೇ ಉಳಿದಿರುವಂಥ ಆ ಒಳವರಿಗಳ ಅಂಥ ಪರಿಮಾಣವನ್ನು ಅವನಿಗೆ ಮಾರಾಟ ಮಾಡಿದ್ದಕ್ಕೆ ಸಂಬಂಧಪಟ್ಟ ಮಾರಾಟದ ಹಣದ ಮೇಲೆ ಶೇಕಡಾ ನಾಲ್ಕರ ದರದಲ್ಲಿ ಲೆಕ್ಕ ಹಾಕಿದ ತೆರಿಗೆ ಇವುಗಳ ನಡುವಣ ವ್ಯತ್ಯಾಸವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

6-ಬಿ. ಮಾರಾಟದ ಹಣದ ಮೇಲಿನ ತೆರಿಗೆಯನ್ನು ವಿಧಿಸುವುದು (1) 10ನೇ ಪ್ರಕರಣದ (1) ಮತ್ತು (2) ನೇ ಉಪ-ಪ್ರಕರಣಗಳ ಅಡಿಯಲ್ಲಿ ನೋಂದಾಯಿಸಲಾದ ಅಥವಾ ನೋಂದಾಯಿಸಲು ಬಾಧ್ಯನಾದ ಪ್ರತಿಯೊಬ್ಬ ವ್ಯಾಪಾರಿಯು, ಅವನ ಒಟ್ಟು ಮಾರಾಟದ ಹಣವು ವರ್ಷದಲ್ಲಿ ಹದಿನೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರದಿದ್ದಲ್ಲಿ, ಅಂಥ ಮಾರಾಟದ ಹಣವು ಪೂರ್ತಿಯಾಗಿ ಅಥವಾ ಅದರ ಯಾವುದೇ ಭಾಗವು ಈ ಅಧಿನಿಯಮದ ಬೇರೆ ಯಾವುದೇ ಉಪಬಂಧಗಳ ಮೇರೆಗೆ ತೆರಿಗೆಗೆ ಒಳಪಡಲಿ ಅಥವಾ ಒಳಪಡದಿರಲಿ ಅವನು, ತೆರಿಗೆಯ ಸಂದಾಯಕ್ಕೆ ಬಾಧ್ಯನಾಗತಕ್ಕದ್ದು,-

(i) ವರ್ಷದಲ್ಲಿ ಅವನ ಒಟ್ಟು ಮಾರಾಟದ ಹಣವು ಹದಿನೈದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇಲ್ಲದೆ ಇದ್ದು, ಆದರೆ ಐದು ನೂರು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇದ್ದರೆ ಒಟ್ಟು ಮಾರಾಟದ ಹಣದ ಶೇಕಡ ಒಂದರ ದರದಲ್ಲಿ;

6-ಡಿ. (1) ಉಪಕರಣವನ್ನು ವಿಧಿಸುವುದು :- ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ 5, 5 ಬಿ, 5 ಸಿ, ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ ಸಂದಾಯ ಮಾಡಲಾಗುವ ತೆರಿಗೆಯ ಜೊತೆಗೆ, ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಗಳೊಳಗೆ, ವ್ಯಾಪಾರ ಮಾಡುವ ಯಾವನೇ ವ್ಯಾಪಾರಿಗೆ ಆತನು ಮಾಡುವ ಮಾರಾಟ ಅಥವಾ ಖರೀದಿಗಾಗಿ, ಸದರಿ ಪ್ರಕರಣಗಳ ಅಡಿಯಲ್ಲಿ ಸಂದಾಯ ಮಾಡಬೇಕಾದ ತೆರಿಗೆಯ ಶೇಕಡ ಐದರ ದರದಲ್ಲಿ ಉಪಕರಣವನ್ನು ವಿಧಿಸುವುದು ಮತ್ತು ವಸೂಲು ಮಾಡತಕ್ಕದ್ದು.

(3) 6ನೇ ಪ್ರಕರಣದಲ್ಲಿ, ಮೊದಲನೇ ಪರಂತುಕದಲ್ಲಿ (ii) ನೇ ಉಪ-ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು ಮತ್ತು 1989ನೇ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ ಎಂದು ಭಾವಿಸತಕ್ಕದ್ದು ಮತ್ತು 1994ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರುವಂತೆ ಬಿಟ್ಟುಬಿಡಲಾಗಿದೆ ಎಂದು ಭಾವಿಸತಕ್ಕದ್ದು ಎಂದರೆ :-

"ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ ಬೆಂಗಳೂರು ನಗರ ಯೋಜನಾ ಪ್ರದೇಶ ಎಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961ರ (1963)ರ ಕರ್ನಾಟಕ ಅಧಿನಿಯಮ 11) 4 ಎ ಪ್ರಕರಣದಲ್ಲಿ ಘೋಷಿಸಿದಂತೆ ಬೆಂಗಳೂರು ನಗರ ಯೋಜನಾ ಪ್ರದೇಶ."

10-ಎ. (4) (ಎ) ನಿಯಮಿಸಿದ ಪ್ರಾಧಿಕಾರಿಯು ಉಚಿತ ಮತ್ತು ಸಾಕಷ್ಟು ಕಾರಣಗಳಿಗಾಗಿ ನೋಂದಾಯಿತನಾದ ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಿರುವ ಅಥವಾ ಈ ಅಧಿನಿಯಮದ ಮೇರೆಗೆ ನೋಂದಣಿಯ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿರುವ

BLANK PAGE

BLANK PAGE

1	2	3
4.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಎರಡು ಲಕ್ಷಕ್ಕಿಂತ ಕಡಿಮೆಯಿಲ್ಲದಿದ್ದು ಐದು ಲಕ್ಷ ರೂ.ಗಳಿಗಿಂತ ಕಡಿಮೆಯಿದ್ದರೆ	ಆರು ಸಾವಿರದ ಮುನ್ನೂರು ರೂ.ಗಳು
5.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಹದಿನೈದುಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಇಪ್ಪತ್ತು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದರೆ	ಎಂಟು ಸಾವಿರದ ಏಳುನೂರು ಅರವತ್ತು ರೂ.ಗಳು
6.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಇಪ್ಪತ್ತು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಮೂವತ್ತು ಲಕ್ಷರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಹನ್ನೆರಡು ಸಾವಿರದ ಆರುನೂರು ರೂ.ಗಳು
7.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಮೂವತ್ತುಲಕ್ಷ ರೂ.ಗಳಿಗಿಂತ ಕಡಿಮೆಯಿಲ್ಲದಿದ್ದು ನಲವತ್ತು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಹದಿನೇಳು ಸಾವಿರದ ಐದು ನೂರ ಇಪ್ಪತ್ತು ರೂ.ಗಳು
8.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ನಲವತ್ತು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಐವತ್ತು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದಲ್ಲಿ	ಇಪ್ಪತ್ತೆರಡು ಸಾವಿರದ ಐದುನೂರು ರೂ.ಗಳು
9.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಐವತ್ತು ಲಕ್ಷ ರೂ.ಗಳಿಗಿಂತ ಕಡಿಮೆಯಿಲ್ಲದಿದ್ದು ಎಪ್ಪತ್ತೈದು ಲಕ್ಷರೂ.ಗಳಿಗಿಂತ ಕಡಿಮೆ ಇದ್ದಲ್ಲಿ	ಮೂವತ್ತೊಂದು ಸಾವಿರದ ಎರಡು ರೂ.ಗಳು
10.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಎಪ್ಪತ್ತೈದುಲಕ್ಷ ರೂ.ಗಳಿಗಿಂತ ಕಡಿಮೆಯಿಲ್ಲದಿದ್ದು ಒಂದು ನೂರು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದಲ್ಲಿ.	ನಲವತ್ತ ಮೂರು ಸಾವಿರದ ಎಂಟು ನೂರು ರೂ.ಗಳು
11.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಒಂದು ನೂರು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಒಂದು ನೂರು ಇಪ್ಪತ್ತೈದು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದಲ್ಲಿ	ಐವತ್ತಾರು ಸಾವಿರದ ಎರಡು ನೂರ ಎಂಭತ್ತು ರೂ.ಗಳು
12.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಒಂದು ನೂರ ಇಪ್ಪತ್ತೈದು ಲಕ್ಷ ರೂ.ಗಳಿಗಿಂತ ಕಡಿಮೆಯಿಲ್ಲದಿದ್ದುಒಂದು ನೂರ ಐವತ್ತು ಲಕ್ಷ ರೂ.ಗಳಿಗಿಂತ ಕಡಿಮೆ ಇದ್ದಲ್ಲಿ	ಅರವತ್ತೆಂಟು ಸಾವಿರದ ಏಳು ನೂರಾ ಅರವತ್ತು ರೂ.ಗಳು

1	2	3
13.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಒಂದು ನೂರ ಐವತ್ತು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಎರಡು ನೂರು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಎಂಭತ್ತೇಳು ಸಾವಿರದ ಐದು ನೂರಾ ನಲವತ್ತು ರೂ. ಗಳು
14.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಎರಡು ನೂರು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಮೂರುನೂರು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಒಂದುಲಕ್ಷ ಇಪ್ಪತ್ತೈದು ಸಾವಿರದ ನಲವತ್ತು ರೂ. ಗಳು
15.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಮೂರು ನೂರು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ನಾಲ್ಕುನೂರು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಒಂದು ಲಕ್ಷ ಎಪ್ಪತ್ತೈದು ಸಾವಿರದ ಎರಡು ನೂರು ರೂ. ಗಳು
16.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ನಾಲ್ಕುನೂರು ಲಕ್ಷ ರೂ. ಗಳಿಗಿಂತ ಕಡಿಮೆಯಿಲ್ಲದಿದ್ದು ಐದು ನೂರು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ	ಎರಡು ಲಕ್ಷ ಇಪ್ಪತ್ತೈದು ಸಾವಿರ ರೂ. ಗಳು
17.	ರೇಷ್ಮೆ ಬಟ್ಟೆಗಳ ಸಂಬಂಧದಲ್ಲಿ ಒಟ್ಟು ವಹಿವಾಟು ಐದುನೂರು ಲಕ್ಷ ರೂ. ಅಥವಾ ಹೆಚ್ಚು ಇದ್ದಲ್ಲಿ	ನಾಲ್ಕು ಲಕ್ಷ ಇಪ್ಪತ್ತೈದು ಸಾವಿರದ ಐದು ನೂರು ಲಕ್ಷ ರೂ. ಗಳಿಗಿಂತ ಕಡಿಮೆ ಇದ್ದಲ್ಲಿ ನಲ್ವತ್ತು ರೂ. ಗಳು ಮತ್ತು ಆರು ನೂರು ಲಕ್ಷ ರೂ. ಗಳನ್ನು ಮೀರಿದ ಒಟ್ಟು ವಹಿವಾಟಿನ ಶೇಕಡ 1 ರಷ್ಟು

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ '' ಒಟ್ಟು ಮಾರಾಟದ ಹಣ'' ಎಂದರೆ, ಅಂಥ ಇಡೀ ಮಾರಾಟದ ಹಣ ಅಥವಾ ಅದರ ಯಾವುದೇ ಭಾಗದ ತೆರಿಗೆಗೆ ಹೊಣೆಯಾಗಿರಲಿ ಅಥವಾ ಇಲ್ಲದೆ ಇರಲಿ ರಾಜ್ಯದಲ್ಲಿನ ವ್ಯವಹಾರದ ಎಲ್ಲ ಸ್ಥಳಗಳಲ್ಲಿ ವ್ಯವಹಾರಿಯ ಎಲ್ಲ ಸರಕುಗಳಿಗೆ ಸಂಬಂಧಿಸಿದಂತೆ ಒಟ್ಟು ಮಾರಾಟದ ಹಣ.

19 ಸಿ. ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ ''ಹೊಸ ಕೈಗಾರಿಕಾ ಘಟಕ'' ಎಂಬುದು,-

(1) ಕೈಗಾರಿಕಾ ವಿಸ್ತರಣೆಯಲ್ಲಿ ಬೇರೆ ಉದ್ದೇಶಗಳಿಗಾಗಿ ಬಳಸುವಲ್ಲಿ, ಆಧುನೀಕರಾರಿಗೊಳಿಸುವಲ್ಲಿ ಬಂಡವಾಳವನ್ನು ಹೂಡುವ ಒಂದು ಕೈಗಾರಿಕಾ ಘಟಕವನ್ನು;

(2) ಹೊಸ ಕೈಗಾರಿಕಾ ಘಟಕವಾಗಿರುವ ಮತ್ತೊಂದು ತೈಲ ಕಂಪನಿಯ ತಯಾರಿಸಿದ ಉತ್ಪನ್ನಗಳನ್ನು ಕ್ರಯ-ವಿಕ್ರಯ ಮಾಡುವ ರಾಜ್ಯದಲ್ಲಿನ ಒಂದು ತೈಲ ಕಂಪನಿಯನ್ನು; ಸಹ ಒಳಗೊಳ್ಳತಕ್ಕದ್ದು.

28. (2) (i) ಅವರ ವ್ಯವಹಾರದ ಸಾಮಾನ್ಯ ಕ್ರಮದಲ್ಲಿ ವ್ಯವಹಾರಿಗಳು ಇಟ್ಟುಕೊಂಡು ಬಂದಿರುವ ಎಲ್ಲಾ ಲೆಕ್ಕಪತ್ರಗಳು ಮತ್ತು ರಿಜಿಸ್ಟರುಗಳು, ಮತ್ತು ಯಾವನೇ ವ್ಯವಹಾರಿಯ ಸರಕುಗಳ ದಾಸ್ತಾನು ಅಥವಾ ಅವನು ಮಾಡಿದ ಸರಕುಗಳ ಖರೀದಿಗಳು, ಮಾರಾಟಗಳು ಮತ್ತು ವಶಾವಣೆಗಳು, ಅದರ ಸ್ವಾಧೀನದಲ್ಲಿರುವ ಸರಕುಗಳು ಮತ್ತು ಅವರ ಕಛೇರಿಗಳು, ಅಂಗಡಿಗಳು, ಗೋದಾಮುಗಳು, ಹಡಗುಗಳು, ಸಂಪುಟಗಳು ಅಥವಾ ವಾಹನಗಳು ಇವುಗಳಿಗೆ ಸಂಬಂಧಪಟ್ಟ ದಸ್ತಾವೇಜುಗಳು ಈ ಬಗ್ಗೆ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗಳಿಂದ ಎಲ್ಲ ಯುಕ್ತ ಕಾಲಗಳಲ್ಲಿ ಪರಿಶೀಲನೆಗೆ ಒಳಪಟ್ಟಿರತಕ್ಕದ್ದು.

29. ಅಪರಾಧಗಳು ಮತ್ತು ದಂಡನೆಗಳು :- (1) ಯಾವನೇ ವ್ಯಕ್ತಿಯು, -

(ಎ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಮೂಲಕ ಅಗತ್ಯರಡಿಸಿದಂತ ವಿವರಪಟ್ಟಿಯನ್ನು ಒಪ್ಪಿಸಲು ತಪ್ಪಿದಲ್ಲಿ; ಅಥವಾ

(ಬಿ) (ಸಿ) 14ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅವನಿಗೆ ಕೊಡಲಾದ ನೋಟೀಸಿನ ನಿಬಂಧನೆಗಳಿಗೆ ಅಪ್ರಾಮಾಣಿಕವಾಗಿ ಅಕ್ಷೇಪಿಸಿದರೆ ಅಥವಾ ಅದನ್ನು ಪಾಲಿಸುವಲ್ಲಿ ತಪ್ಪಿದರೆ ಅಥವಾ

(ಡಿ) ಈ ಅಧಿನಿಯಮದ ಮೇರೆಗೆ ಅವನ ಬಗ್ಗೆ ನಿರ್ಧರಿಸಿದ ಯಾವುದೇ ತೆರಿಗೆಯನ್ನು ಅಥವಾ ಅವನಿಗೆ ವಿಧಿಸಿದ ದಂಡವನ್ನು ಅನುಮತಿಸಲಾದ ಕಾಲದೊಳಗೆ ಸಂದಾಯ ಮಾಡಲು ತಪ್ಪಿದರೆ; ಅಥವಾ

(ಇ) ನಿಜವಾದ ಮತ್ತು ಪೂರ್ಣವಾದ ಲೆಕ್ಕಪತ್ರಗಳನ್ನು ಇಡಲು ತಪ್ಪಿದರೆ;

(ಎಫ್) ವ್ಯವಹಾರಿ ಅಥವಾ ಗಿರಣಿದಾರನಾಗಿದ್ದು ಅವನು ವ್ಯವಹಾರಿಯಾಗಲಿ ಅಥವಾ ಆಗಿಲ್ಲದೇ ಇರಲಿ 28ನೇ ಪ್ರಕರಣದ (1) ಉಪಪ್ರಕರಣದ ಮೂಲಕ ಕೊಟ್ಟ ನೋಟೀಸನ್ನು ಪಾಲಿಸಲು ತಪ್ಪಿದರೆ; ಅಥವಾ

(ಜಿ) 12 ಖ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಿದಂತೆ ವಿವರ ಪತ್ರವನ್ನು ಒಪ್ಪಿಸಲು ತಪ್ಪಿದರೆ;

- ಎರಡನೇ ದರ್ಜೆ ಮ್ಯಾಜಿಸ್ಟ್ರೇಟನಿಗಿಂತ ಕಡಿಮೆಯಿಲ್ಲದ ಮ್ಯಾಜಿಸ್ಟ್ರೇಟನಿಂದ ಅಪರಾಧ ನಿರ್ಣಯವಾದ ಮೇಲೆ ಐದು ನೂರು ರೂಪಾಯಿಗಳಿಗೆ ಕಡಿಮೆಯಿಲ್ಲದ ಆದರೆ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಗೆ ಗುರಿಯಾಗತಕ್ಕದ್ದು.

(2) (ಎ) ನಿಜವಲ್ಲದ ವಿವರ ಪಟ್ಟಿಯನ್ನು ಉದ್ದೇಶಪೂರ್ವಕವಾಗಿ ಒಪ್ಪಿಸುವ ಅಥವಾ ಈ ಅಧಿನಿಯಮದ ಮೇರೆಗೆ ಈಗಾಗಲೇ ತೆರಿಗೆದಾರನಿಗಿಲ್ಲದೆ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳ ಮೂಲಕ ಅಗತ್ಯಪಡಿಸಿದಂತೆ ವಿವರ ಪಟ್ಟಿಕೆಯನ್ನು ಒಪ್ಪಿಸಲು ತಪ್ಪುವ; ಅಥವಾ

(ಎ ಎ) 10ಕ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ತಗಾದೆ ಮಾಡಿದ ಭದ್ರತೆಯನ್ನು ಒದಗಿಸಿದೆಯೆ ವ್ಯವಹಾರಿಯಾಗಿ ವ್ಯವಹಾರವನ್ನು ನಡೆಸುವ; ಅಥವಾ

(ಎ ಎ ಎ) 12 ಖ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಜವಲ್ಲದ ವಿವರ ಪತ್ರವನ್ನು ಉದ್ದೇಶಪೂರ್ವಕವಾಗಿ ಒಪ್ಪಿಸುವ; ಅಥವಾ

(ಎ ಎ ಎ ಎ) 10ನೇ ಪ್ರಕರಣದ ಮೇರೆಗೆ ತನ್ನನ್ನು ನೋಂದಾಯಿಸಿಕೊಳ್ಳಲು ಹೊಣೆಗಾರನಾದ ವ್ಯಕ್ತಿಯಾಗಿದ್ದು ತನ್ನನ್ನು ನೋಂದಾಯಿಸಿಕೊಳ್ಳದೇ ಇರುವ: ಅಥವಾ

(ಬ) ಈ ಅಧಿನಿಯಮದ ಮೇರೆಗೆ ಶಕ್ತಿಗೊಳಿಸಿದ ಅಧಿಕಾರಿಯು ಪರಿಶೀಲನೆ, ಪ್ರವೇಶ, ಶೋಧನೆ ಅಥವಾ ಅಭಿಗ್ರಹಣ ಮಾಡುವುದನ್ನು ತಡೆಗಟ್ಟುವ ಅಥವಾ ಅಡ್ಡಿಪಡಿಸುವ; ಅಥವಾ

(ಬ ಬ) ಯಾವುದೇ ವಾಹನ ಅಥವಾ ನೌಕೆ ಅಥವಾ ಅನ್ಯಥಾ ಸಾಗಿಸಲಾದ ಸರಕುಗಳ ಪರಿಶೀಲನೆಯನ್ನು ಅಥವಾ ಚೆಕ್‌ಪೋಸ್ಟ್ ಅಥವಾ ಸುಂಕದ ಕಟ್ಟೆಯ ಪ್ರಭಾರದಲ್ಲಿರುವ ಅಧಿಕಾರಿ ಅಥವಾ ಈ ಅಧಿನಿಯಮದ ಮೇರೆಗೆ ಶಕ್ತಿಗೊಳಿಸಲಾದ ಯಾವನೇ ಅಧಿಕಾರಿಯು ಸರಕುಗಳನೇನು ಅಭಿಗ್ರಹಿಸುವುದು ತಡೆಗಟ್ಟುವ ಅಥವಾ ಅಡ್ಡಿಪಡಿಸುವ ಅಥವಾ

(ಬ ಬ ಬ) 28ನೇ ಪ್ರಕರಣದ (2)ನೇ ಉಪ-ಪ್ರಕರಣದ (ii) ನೇ ಖಂಡದ ಅಡಿಯಲ್ಲಿ ಹಾಕಿದ ಯಾವುದೇ ಮೊಹರನ್ನು ದುರುಪಯೋಗಪಡಿಸುವ; ಅಥವಾ

(ಸ) ಈ ಅಧಿನಿಯಮದ ಮೇರೆಗೆ ಅವನು ಸಂದಾಯ ಮಾಡಬೇಕಾದ ಯಾವುದೇ ತೆರಿಗೆಯನ್ನು ಅಥವಾ ಇತರ ಮೊಬಲಗಿನ ಸಂದಾಯವನ್ನು ಮೋಸದಿಂದ ತಪ್ಪಿಸುವ; ಅಥವಾ

(ಸ ಸ) 18ನೇ ಪ್ರಕರಣದ (1) ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದ ಉಲ್ಲಂಘನೆಯಲ್ಲಿ ತೆರಿಗೆಯ ಸ್ವರೂಪದಲ್ಲಿ ಅಥವಾ ತೆರಿಗೆ ಸ್ವರೂಪವೆಂಬುದಾಗಿ ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸುವ ಅಥವಾ

(ಸ ಸಸ) 18ನೇ ಪ್ರಕರಣದ (3)ನೇ ಉಪಪ್ರಕರಣದ ಉಲ್ಲಂಘನೆಯಲ್ಲಿ ಮಾರಾಟದ ಹಣದ ತೆರಿಗೆಯ ರೂಪದಲ್ಲಿ ಅಥವಾ ಮಾರಾಟದ ಹಣದ ತೆರಿಗೆಯ ರೂಪದ್ದೆಂಬುದಾಗಿ ತಾತ್ಪರ್ಯವಾಗಿ ಯಾವುದೇ ಮೊಬಲಗನ್ನು ಸಂಗ್ರಹಿಸುವ ಅಥವಾ

(ಡಿ) ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಉಲ್ಲಂಘನೆಯಲ್ಲಿ ಉದ್ದೇಶಪೂರ್ವಕವಾಗಿ ಕಾರ್ಯಮಾಡುವ,

(ಇ) 19-ಎ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಕಳೆಯಲು ತಪ್ಪುವ ಅಥವಾ ಹಾಗೆ ಕಳೆದ ತರುವಾಯ ಆ ಪ್ರಕರಣದ (7)ನೇ ಉಪ-ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ತೆರಿಗೆಯನ್ನು ಕಟ್ಟಲು ತಪ್ಪುವಅಥವಾಹಾಗೆ ತೆರಿಗೆಯನೇನು ಕಳೆದ ಮೇಲೆ 19-ಎ ಪ್ರಕರಣದ (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣಪತ್ರವನ್ನು ನೀಡಲು ತಪ್ಪುವ; ಅಥವಾ

(ಇ) ಯಾವನೇ ವ್ಯಕ್ತಿಯ ಅಪರಾಧವು ನಿರ್ಣಯವಾದ ಮೇಲೆ ಅವನಿಂದ ಬಾಕಿಯಾಗಿರಬಹುದಾದ ಯಾವುದೇ ತೆರಿಗೆ ಅಥವಾ ಇತರ ಮೊಬಲಗಿನ ವಸೂಲಿಯ ಜೊತೆಗೆ ಹನ್ನೆರಡು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರವಾಸ ಅಥವಾ ಐದು ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದಂಥ ಆದರೆಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆ ಅಥವಾ ಅವೆರಡರಿಂದಲೂ ಮತ್ತು ಅಪರಾಧವು ಮುಂದುವರಿಯುತ್ತಿರುವ ಅಪರಾದವಾಗಿದ್ದಾಗ ಆ ಅಪರಾಧವು ಮುಂದುವರೆಯುತ್ತಿರುವ ಅವಧಿಯಲ್ಲಿ ಒಂದು ನೂರು ರೂಪಾಯಿಗಳಿಗೆ ಮೀರದ ದೈನಿಕ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

ಎರಡನೇ ಅನುಸೂಚಿ

ಕ್ರಮ ಸಂಖ್ಯೆ	ವಸ್ತುಗಳ ವಿವರ	ಇರುವ ತೆರಿಗೆ ದರ(%)
1	2	3
	ಭಾಗ -ಎ	
1.	ಗೋಂದು, ಗ್ಲೂ ಮತ್ತು ರೆಸಿನ್ ಸೇರಿದಂತೆ ಎಲ್ಲಾ ರೀತಿಯ ಅಂಟುಗಳು.	8
2.	ಎರೋಪ್ಲೇನುಗಳು, ಹೆಲಿಕ್ಯಾಪ್ಟರುಗಳು, ಜೆಟ್, ಪ್ಲೇನುಗಳು, ಗ್ಲೈಡರುಗಳು ಮತ್ತು ಎಲ್ಲಾ ಹಾರುವ ಯಂತ್ರಗಳು (ಬಲೂನುಗಳು ಬಿಟ್ಟು) ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು.	12
4.	ಏರ್ ಕೂಲರ್‌ಗಳು, ಏರ್ ಕಂಡೀಷನರ್‌ಗಳು ಮತ್ತು ಏರ್ ಕಂಡೀಷನರ್ ಸ್ಥಾವರಗಳು, ಶೈತ್ಯಾಗಾರಗಳು ಮತ್ತು ಉಪಕರಣಗಳು, ಭಾಗಗಳು ಮತ್ತು ಉಪಸಾಧನಗಳು.	12
5.	ಅಲ್ಯೂಮಿನಿಯಂ ಎಂದರೆ, -	
	(i) ಅಲ್ಯೂಮಿನಿಯಂ ಸೆಮಿಸ್ (ಎಲ್ಲಾ ಗುಣಮಟ್ಟ, ಆಕಾರ ಮತ್ತು ಗಾತ್ರಗಳ ಗಟ್ಟಿಗಳು, ಹಲಗೆಗಳು ಮತ್ತು ತುಂಡುಗಳು)	8
	(ii) ಅಲ್ಯೂಮಿನಿಯಂ ಷೀಟುಗಳು, ಸರ್ಕಲ್ಲುಗಳು, ಹೂವುಗಳು, ಸ್ಟ್ರಿಪ್ಪುಗಳು ಮತ್ತು ರೋಲುಗಳು.	8
	(iii) ಅಲ್ಯೂಮಿನಿಯಂ ಬಾರುಗಳು (ಸುರುಳಿ ಮತ್ತು ಸಲಾಕೆ ರೂಪದ ಕಂಬಿಗಳು, ದುಂಡುಗಳು, ಚೌಕಾಕೃತಿಗಳು, ಅಷ್ಟಕೋನಾಕೃತಿಗಳು, ಷಡ್ರೇಕಾಕೃತಿಗಳು)	8
	(iv) ಅಲ್ಯೂಮಿನಿಯಂ ಕೊಳವೆಗಳು (ದುಂಡುಗಳು ಮತ್ತು ಚೌಕಾಕೃತಿಗಳು) ಕೊಳವೆಗಳೂ ಸೇರಿದಂತೆ ಎಲ್ಲಾ ವ್ಯಾಸ ಮತ್ತು ಉದ್ದದ ಕೊಳವೆಗಳು.	8
	(v) ಸುತ್ತಿದ ಅಥವಾ ಉದ್ದದ ಅಲ್ಯೂಮಿನಿಯಂ ಕಂಬಿ ಸರಳುಗಳು ಮತ್ತು ತಂತಿಗಳು.	8
	(vi) ಅಲ್ಯೂಮಿನಿಯಂ ಆಕೃತಿಗಳು (ಆ್ಯಂಗಲ್‌ಗಳು, ಜಾಯಿಂಟುಗಳು, ಚಾನಲುಗಳು, ಟೀಗಳು, ಷೀಟ್ ಪೈಲಿಂಗ್ ಸೆಕ್ಷನ್ನುಗಳು, ಜೆಡ್ ಸೆಕ್ಷನ್ನುಗಳು ಅಥವಾ ಇತರ ಎಕ್ಸ್‌ಟ್ರೂಡೆಡ್ ಸೆಕ್ಷನ್ನುಗಳು)	8

7.	ಆರ್ಕ್ ಕಾರ್ಬನ್ನುಗಳು.	8
9.	ಬಂದೂಕು, ರೈಫಲ್‌ಗಳು, ರಿವಾಲ್ವರುಗಳು, ಪಿಸ್ತೂಲುಗಳು ಮತ್ತು ಮದ್ದುಗುಂಡು ಸೇರಿದಂತೆ ಎಲ್ಲಾ ರೀತಿಯ ಶಸ್ತ್ರಾಸ್ತ್ರಗಳು	12

ಭಾಗ-ಬಿ

2.	ಬ್ಯಾಟರಿಗಳು ಮತ್ತು ಅದರ ಭಾಗಗಳು ಡೈಸೆಲ್ ಮತ್ತು ಡ್ರೈಸೆಲ್ಲಿನ ಬ್ಯಾಟರಿಗಳ ಹೊರತಾಗಿ.	12
4.	ಬೇರಿಂಗ್‌ಗಳು ಎಂದರೆ ಬಾಲ್ ಅಥವಾ ರೋಲರ್ ಬೇರಿಂಗ್‌ಗಳು (ಎಲ್ಲಾ ರೀತಿಯವು)	8
8.	ಹಿತ್ತಾಳೆ, ಎಂದರೆ, -	
	(i) ಹಿತ್ತಾಳೆ ಸರ್ಕಲ್ಲುಗಳು, ಷೀಟುಗಳು, ಮತ್ತು ಸ್ಟಿಪ್ಪುಗಳು	8
	(ii) ಹಿತ್ತಾಳೆಯ ಪಾತ್ರೆಗಳು (ಅಡಿಗೆ ಸಲಕರಣೆಗಳು)	8
	(iii) ಹಿತ್ತಾಳೆಯ ರಾಡುಗಳು, ರೌಂಡುಗಳು ಸ್ಕ್ವೇರುಗಳು ಮತ್ತು ಫ್ಲಾಟುಗಳೂ ಸೇರಿದಂತೆ ಆದರೆ (i) ಮತ್ತು (ii) ನೇ ಬಾಬುಗಳಲ್ಲಿ ಹಾಗೂ ಬೇರೆ ಎಲ್ಲಿಯೂ ನಿರ್ದಿಷ್ಟ ಪಡಿಸಿದವುಗಳನ್ನು ಹೊರತುಪಡಿಸಿ ಹಿತ್ತಾಳೆಯಲ್ಲಿ ಮಾಡಿದಂಥ ವಸ್ತುಗಳು.	8
10.	ಕಂಚು, ಎಂದರೆ, -	
	(i) ಕಂಚಿನ ಪಾತ್ರೆಗಳು (ಅಡಿಗೆ ಸಲಕರಣೆಗಳು)	8
	(ii) ಕಂಚಿನ ರಾಡುಗಳು, ರೌಂಡುಗಳು, ಸ್ಕ್ವೇರುಗಳು ಮತ್ತು ಫ್ಲಾಟುಗಳೂ ಸೇರಿದಂತೆ ಆದರೆ (i) ನೇ ಬಾಬಿನಲ್ಲಿ ಹಾಗೂ ಬೇರೆ ಎಲ್ಲಿಯೂ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಕಂಚಿನಲ್ಲಿ ಮಾಡಿದಂಥ ವಸ್ತುಗಳು.	8
12.	ಬೆಣ್ಣೆ ಮತ್ತು ತುಪ್ಪ	8

ಭಾಗ -ಸಿ

1.	ಎಲ್ಲಾ ವಿಧವಾದ ಕರ್ಪೂರ	8
3.	ಕಾರ್ಪೆಟ್ಟುಗಳು	12
5.	(i) ಕ್ಯಾಸೆಟ್ ಟೇಪ್ ರೆಕಾರ್ಡರುಗಳು (ಆಡಿಯೋ ಮತ್ತು ವಿಡಿಯೋ) ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	8

	(ii)	(ಅ) ಖಾಲಿ ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳು	8
		(ಆ) ಆಡಿಯೋ ಮತ್ತು ವಿಡಿಯೋ ಮುದ್ರಿತ ಕ್ಯಾಸೆಟ್‌ಗಳು	8
		(ಇ) ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್‌ಗಳ ಬಿಡಿ ಭಾಗಗಳು ಮತ್ತು ಉಪಸಾಧನಗಳು	8
		(ಈ) ಆಡಿಯೋ ಮತ್ತು ವಿಡಿಯೋ ಮ್ಯಾಗ್ನಟಿಕ್ ಟೇಪುಗಳು	8
	(iii)	ಆಡಿಯೋ ಮತ್ತು ವಿಡಿಯೋ ಟೇಪ್ ರೆಕಾರ್ಡರುಗಳ ಹೆಡ್ ಕ್ಲೀನರ್‌ಗಳು ಮತ್ತು ವಿಶೇಷವಾಗಿ ಎಲೆಕ್ಟ್ರಾನಿಕ್ ವಸ್ತುಗಳಲ್ಲಿ ಉಪಯೋಗಿಸುವ ಕೀಲಿಣ್ಣೆ	8
8- ಎ.		ಗಿಣ್ಣು	8
9.		ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ ಚೈನಾವೇರ್, ಪೋರ್ಸಲಿನ್‌ವೇರ್, ಸ್ಟೋನ್‌ವೇರ್ ವಸ್ತುಗಳು	12
13.		ಸಿಗರೇಟು ಫಿಲ್ಟರುಗಳು	12
14.		ಸಿಗಾರ್ ಮತ್ತು ಸಿಗರೇಟು ಕೇಸುಗಳು, ಹೊಲ್ಡರ್‌ಗಳು ಮತ್ತು ಲೈಟರುಗಳು, ತಂಬಾಕು ಪೈಪುಗಳು	12
15.		ಸಿನಿಮಾಟೋಗ್ರಾಫಿಕ್, ಫೊಟೋಗ್ರಾಫಿಕ್ ಮತ್ತಿತರ ಕ್ಯಾಮರಗಳು, ಪ್ರೊಜೆಕ್ಟರುಗಳು, ಎನ್‌ಲಾರ್ಜರುಗಳು ಲೆನ್ಸುಗಳು ಮತ್ತು ಅಂಥ ಕ್ಯಾಮರಗಳ ಸಿನಿಮಾಟೋಗ್ರಾಫ್ ಪ್ರೊಜೆಕ್ಟರುಗಳ ಮತ್ತು ಎನ್‌ಲಾರ್ಜರುಗಳ ಭಾಗಗಳು ಮತ್ತು ಉಪಸಾಧನಗಳು ಮತ್ತು ಅವುಗಳ ಜೊತೆಗೆ ಬಳಕೆಗೆ ಅಗತ್ಯವಿರುವ ಪ್ಲೇಟುಗಳ ಮತ್ತು ಬಟ್ಟೆ	8
16.		ಗಡಿಯಾರ, ಟೈಂ ಪೀಸುಗಳು ಮತ್ತು ಕೈಗಡಿಯಾರಗಳು (ಎಲ್ಲಾ ರೀತಿಯವು) ಮತ್ತು ಅವುಗಳ ಬ್ರೇಸ್‌ಲೆಟ್, ವಾಚ್ ಸ್ಟ್ರಾಪ್‌ಗಳು, ಚೈನ್‌ಗಳು ಸೇರಿ (ನೋಬಲ್ ಮೆಟಲ್‌ಗಳಿಂದ ಮಾಡಿರುವುಗಳನ್ನು ಬಿಟ್ಟು) ಭಾಗಗಳು	8
17.		ಕೋಕೋ ಕಾಯಿ, ಬೀಜ ಮತ್ತು ಪುಡಿ	8
18.	(i)	ಫ್ರೆಂಚ್ ಕಾಫಿ, ಕಾಫಿ ಪಾನೀಯ ಮತ್ತು ಇನ್‌ಸ್ಟಂಟ್ ಕಾಫಿ ಬಿಟ್ಟು ಕಾಫಿ ಪುಡಿ.	12
	(ii)	ಇನ್‌ಸ್ಟಂಟ್ ಕಾಫಿ	12
	(iii)	ಫ್ರೆಂಚ್ ಕಾಫಿ.	12

19.	ರಬ್ಬರ್ ಯುಕ್ತ ಕಾಯರ್ ಉತ್ಪನ್ನಗಳು.	8
20.	(i) ಕಂಪ್ಯೂಟರ್‌ಗಳು, ಮೈಕ್ರೊ ಕಂಪ್ಯೂಟರ್‌ಗಳು, ಮೈಕ್ರೋ ಪ್ರೋಸೆಸರ್‌ಗಳು, ಕಂಪ್ಯೂಟರ್ ಪೆರಿಫೆರಲ್‌ಗಳು ಮತ್ತು ಅದರ ಭಾಗಗಳು ಹಾಗೂ ಬಿಡಿ ಭಾಗಗಳು.	4
21.	(i) ಕನ್‌ಫೆಕ್ಷನರಿ ಮತ್ತು ಕೇಕುಗಳು.	12
	(ii) ಬಿಸ್ಕತ್ತುಗಳು	8
22.	ನೇಯ್ದ ಪ್ಲಾಸ್ಟಿಕ್ ಚೀಲಗಳು.	4
22-ಎ	ಅಡುಗೆ ಅನಿಲ ಅನುಸೂಚಿಯಲ್ಲಿ ಬೇರೆ ಕಡೆ ನಿರ್ದಿಷ್ಟ ಪಡಿಸಿದವುಗಳನ್ನು ಬಿಟ್ಟು,	8
23.	ತಾಮ್ರ ಎಂದರೆ, -	
	(i) ತಾಮ್ರದ ಸರ್ಕಲ್ಲುಗಳು, ಷೀಟ್‌ಗಳು ಮತ್ತು ಸ್ಟ್ರಿಪ್ಪುಗಳು	8
	(ii) ತಾಮ್ರದ ಪಾತ್ರೆಗಳು (ಅಡಿಗೆ ಸಲಕರಣೆ)	8
	(iii) ತಾಮ್ರದ ಗಟ್ಟಿಗಳು ಮತ್ತು ತಾಮ್ರದ ತಂತಿ (ಇನ್ಸುಲೇಟೆಡ್ ತಂತಿಗಳನ್ನು ಬಿಟ್ಟು)	8
	(iv) ಮೇಲಿನ (i) ರಿಂದ (iii)ನೇ ಬಾಬುಗಳಲ್ಲಿ ನಿರ್ದಿಷ್ಟ ಪಡಿಸಿದವುಗಳನ್ನು ಮತ್ತು ಬೇರೆ ಕಡೆ ನಿರ್ದಿಷ್ಟ ಪಡಿಸಿದವುಗಳನ್ನು ಬಿಟ್ಟು ತಾಮ್ರದ ಸಲಾಕಿಗಳು, ಗುಂಡುಗಳು, ಚೌಕಗಳು ಮತ್ತು ಚಪ್ಪಟೆಗಳೂ ಸೇರಿ ತಾಮ್ರದ ವಸ್ತುಗಳು	8
26.	ಕ್ರಾಕರಿ, ಕಟ್ಲರಿ, ಮೇಜು ಮತ್ತು ಗೃಹಪಯೋಗಿ ಗಾಜಿನ ವಸ್ತುಗಳು	12

ಭಾಗ - ಡಿ

1.	ಯಾವುದೇ ಇತರ ನಮೂದಿನ ಅಡಿಯಲ್ಲಿ ಬಾರದ ದುರ್ಗಂಧ ನಿವಾರಕಗಳು, ಸೋಂಕು ನಿವಾರಕಗಳು, ಜೀವಾಣು ನಾಶಕಗಳು	12
2.	ಡಿಕ್ಟಾಫೋನುಗಳು ಮತ್ತು ಧ್ವನಿ ಮುದ್ರಣದ ಅಂಥ ಇತರ ಉಪಕರಣಗಳು ಮತ್ತು ಅದರ ಭಾಗಗಳು	8
3.	ಡೀಸೆಲ್ ಎಂಜಿನ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	8
4.	ಡೈಸೆಲ್ಲುಗಳು ಮತ್ತು ಡೈಸೆಲ್ ಬ್ಯಾಟರಿಗಳು	12
6.	ಡ್ರಗೆಟ್ಟುಗಳು ಮತ್ತು ಡರ್ರಿಗಳು	8

ಭಾಗ - ಇ

2. ಎಲೆಕ್ಟ್ರಿಕಲ್ ವಸ್ತುಗಳು, ಎಂದರೆ,-

(i) ಗ್ರೈಂಡರುಗಳು, ಮಿಕ್ಸರುಗಳು, ಬೈಂಡರ್‌ಗಳು, ಹೇರ್ ಡ್ರೈಯರ್‌ಗಳು, ಷೇವರ್‌ಗಳು , ವಾಶಿಂಗ್ ಮಿಷಿನ್‌ಗಳು, ಹೀಟರ್‌ಗಳು, ಕುಕಿಂಗ್ ರೇಂಜ್‌ಗಳು, ಬಾಯ್ಲರ್‌ಗಳು, ಓವನ್‌ಗಳು, ಹಾಟ್ ಪ್ಲೇಟುಗಳು, ಕಾಯಿಲ್ ಸ್ಪ್ರಿಂಗ್‌ಗಳು, ಗೀಸರ್‌ಗಳು, ವ್ಯಾಕ್ಯೂಮ್ ಕ್ಲೀನರ್‌ಗಳು,ಫ್ಲೋರ್ ಪಾಲಿಷರ್‌ಗಳು, ಜ್ಯೂಸ್ ಎಕ್ಸ್‌ಟ್ರಾಕ್ಟರ್‌ಗಳು, ಕ್ರೀಮ್ ವಿಪ್ಪರ್‌ಗಳು, ಎಗ್ ಬೀಟರ್‌ಗಳು, ಐರ್ನರ್‌ಗಳು, ಮಸಾಜ್ ಅಪರೇಟಸ್‌ಗಳು, ಕೆಟಲ್‌ಗಳು, ಸಾಸ್ ಪ್ಯಾನುಗಳು, ಸ್ಟೀಮರ್‌ಗಳು, ಕಾಫಿ ಮೇಕರ್‌ಗಳು, ಕುಕ್ಕರ್‌ಗಳು, ಎಗ್ ಬಾಯ್ಲರ್‌ಗಳು, ಡ್ರೈಯಿಂಗ್ ಪ್ಯಾನುಗಳು, ಟೋಸ್ಟರಗಳು, ಕಾಫಿ ಬೀಜ ಹುರಿಯುವ ಯಂತ್ರಗಳು, ರೂಮ್ ಹೀಟರ್‌ಗಳು ಮತ್ತು ಐಸ್ ಕ್ರೀಮ್ ಚರ್ನರ್‌ಗಳು ಮತ್ತು ಅಂಥ ವಸ್ತುಗಳ ಭಾಗಗಳು ಮತ್ತು ಉಪಸಾಧನಗಳು. 12

(ii) ಎಲೆಕ್ಟ್ರಿಕಲ್ ಅರ್ಥನವೇರ್ ಮತ್ತು ಪೋರ್ಸಲಿನ್ 12

(iii) ಎಲೆಕ್ಟ್ರಿಕಲ್ ವಸ್ತುಗಳು, ಸಾಧನಗಳು, ಉಪಕರಣಗಳು ಮತ್ತು ಉಪಸಾಮಾಗ್ರಿಗಳು (ಮೇಲಿನ (i) ನೇ ಬಾಬಿನ ಅಡಿಯಲ್ಲಿ ಬರುವ ಉಪಸಾಮಾಗ್ರಿಗಳಿಗೆ ಹೊರತಾದ) ಆದರೆ ಫ್ಯಾನುಗಳು ಮತ್ತು ಟ್ಯೂಬ್‌ಲೈಟುಗಳು ಮತ್ತು ಭಾಗಗಳು ಮತ್ತು ಉಪಸಾಧನಗಳನ್ನು ಒಳಗೊಂಡು. 12

(iv) ಎಲೆಕ್ಟ್ರಿಕ್ ಬಲ್ಬುಗಳು 8

3. ಎಲೆಕ್ಟ್ರೋಡುಗಳು, ಎಂದರೆ, ಎಲ್ಲಾ ಬಗೆಯ ವೆಲ್ಡಿಂಗ್ ಎಲೆಕ್ಟ್ರೋಡುಗಳು, ಆನೋಡ್‌ಗಳು, ವೆಲ್ಡಿಂಗ್ ರಾಡ್‌ಗಳು ಸಾಲ್ಡರಿಂಗ್ ರಾಡ್‌ಗಳು ಮತ್ತು ಸಾಲ್ಡರಿಂಗ್ ವೈರುಗಳು ಸೇರಿ ಗ್ರಾಫೈಟ್ ಎಲೆಕ್ಟ್ರೋಡುಗಳು 8

4. ಈ ಅನುಸೂಚಿಯ ಯಾವುದೇ ಇತರ ನಮೂದಿನ ಅಡಿಯಲ್ಲಿ ಬರುವ ವಸ್ತುಗಳನ್ನು ಬಿಟ್ಟು ಎಲೆಕ್ಟ್ರಾನಿಕ್ ವಸ್ತುಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು 8

ಭಾಗ - ಎಫ್

1. ಫೈಬರ್ ಗ್ಲಾಸಿನ ಶೀಟುಗಳು ಮತ್ತು ಹೆಲ್‌ಮೆಟ್‌ಗಳನ್ನು ಬಿಟ್ಟು ಫೈಬರ್ ಗ್ಲಾಸಿನ ವಸ್ತುಗಳು 12

3. ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು ಅಗ್ನಿಶಾಮಕ ಉಪಕರಣಗಳು ಮತ್ತು ಸಾಧನಗಳು 8

4.	ಸೌದೆ (ಮನೆ ಬಳಕೆಗೆ ಹೊರತುಪಡಿಸಿ)	4
5.	ಪಟಾಕಿ ವಸ್ತುಗಳು.	8
6.	ಫೋಮ್ ರಬ್ಬರ್, ಪ್ಲಾಸ್ಟಿಕ್ ಫೋಮ್ ಅಥವಾ ಯಾವುದೇ ಇತರ ಸಿಂಥೆಟಿಕ್ ಫೋಮ್ ವಸ್ತುಗಳು ಅಂದರೆ ಷೀಟುಗಳು, ಕುಷನ್‌ಗಳು, ಪಿಲ್ಲೋಗಳು, ಮ್ಯಾಟ್ರಸ್‌ಗಳು ಮುಂತಾದವು.	12
7.	(i) ತೋಟ ಮತ್ತು ಕಡಲ ತೀರದಲ್ಲಿ ಬಳಸುವ ಕೊಡೆಗಳು ಮತ್ತು ಅದರ ಭಾಗಗಳು	8
8.	ಆಹಾರ ಮತ್ತು ಮದ್ಯಸಾರೇತರ ಪಾನೀಯಗಳು, ಎಂದರೆ, -	
	(i) ಸೇವನೆಗೆ ಸಿದ್ಧವಾದ ಆಹಾರ, ಸಂಸ್ಕರಿತ ಆಹಾರ, ಅರೆಬೆಂದ ಅಥವಾ ಅರೆಸಂಸ್ಕರಿತ ಆಹಾರ ಪದಾರ್ಥಗಳು, ಹಣ್ಣುಗಳು, (ಬಾದಾಮಿ, ವಾಲ್‌ನಟ್‌ಗಳು ಮತ್ತು ಪಿಸ್ತಾ ಸೇರಿ, ಒಣ ಹಣ್ಣುಗಳನ್ನು ಬಿಟ್ಟು) ಒಣಗಿಸಿದ ತರಕಾರಿಗಳು (ಬೇಯಿಸಿದ ಅಥವಾ ಬೇಯಿಸಿಲ್ಲದ), ಹಣ್ಣುಗಳು ಮತ್ತು ತರಕಾರಿ ಉತ್ಪನ್ನಗಳು (ಈ ಕೆಳಗಿನ (ii)(iii) ಮತ್ತು (iv) ನೇ ಬಾಬುಗಳ ಅಡಿಯಲ್ಲಿ ಬರುವ ಉತ್ಪನ್ನಗಳನ್ನು ಬಿಟ್ಟು) ಡಬ್ಬಿಗಳು, ಕ್ಯಾನುಗಳು, ಶೀಸೆಗಳು ಅಥವಾ ಯಾವುದೇ ಇತರ ರೀತಿಯ ಮೊಹರಾದ ಧಾರಕಗಳಲ್ಲಿ ಮಾರುವಾಗ.	8
	(ii) ರುಚಿಗೊಳಿಸಿದ ಅಥವಾ ಸಿಹಿಗೊಳಿಸಿದ ಅಥವಾ ಇಲ್ಲದ ಮತ್ತು ತರಕಾರಿ ಅಥವಾ ಹಣ್ಣಿನ ರಸ ಅಥವಾ ಹಣ್ಣಿನ ತಿರುಳು ಒಳಗೊಂಡಿರುವ ಅಥವಾ ಒಳಗೊಂಡಿರದ ಆದರೆ ಸೌಮ್ಯ ಪಾನೀಯಗಳ ಹೊರತುಪಡಿಸಿ ಇಂಗಾಲಾಮ್ಲ ಕಾನ್ಸಂಟ್ರೇಟ್‌ಗಳನ್ನು ಮಿಶ್ರಿತ ನೀರನ್ನು ಶೀಷೆಗಳಲ್ಲಿ, ಟಿನ್‌ಗಳಲ್ಲಿ ಅಥವಾ ಯಾವುದೇ ರೀತಿಯ ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ	12
	(iii) ಇನ್‌ಸ್ಟೆಂಟ್ ಮಕ್ಸ್, ಎಂದರೆ ಜಾಮುನ್ ಮಿಕ್ಸ್, ಇಡ್ಲಿ ಮಿಕ್ಸ್, ಐಸ್ ಕ್ರೀಮ್ ಮಿಕ್ಸ್, ಜೆಲ್ಲಿ ಮಿಕ್ಸ್, ಮುಂತಾದವು, ಸಾಂಬಾರ್ ಮತ್ತು ರಸಮ್ ಪುಡಿ ಮತ್ತು ಗೊಜ್ಜು, ಮಸಾಲೆ ಪುಡಿ ಮತ್ತು ಗೊಜ್ಜು, ಸಾರಿನ ಪುಡಿ, ಮುಂತಾದವು; ದ್ರವ ಅಥವಾ ಪುಡಿ ಅಥವಾ ಹರಳಿನ ರೂಪದಲ್ಲಿರುವಂಥ ಸೌಮ್ಯ ಪಾನೀಯಗಳು (ಹಣ್ಣು ಮತ್ತು ತರಕಾರಿ ಪಾನೀಯಗಳನ್ನು ಹೊರತುಪಡಿಸಿ)	8
	(iv) ಸಿಹಿತಿಂಡಿಗಳು ಮತ್ತು ಸಿಹಿ ಮಿಠಾಯಿಗಳೂ ಸೇರಿ ಆದರೆ ಮೇಲಿನ (i) ರಿಂದ (iv) ನೇ ಬಾಬುಗಳಲ್ಲಿ ಬರುವ ಮತ್ತು	8

(ಎ) ಈ ಅನುಸೂಚಿಯಲ್ಲಿ ಯಾವುದೇ ನಮೂದಿನಲ್ಲಿ ಬರುವಂತಹವುಗಳನ್ನು ಹೊರತುಪಡಿಸಿ	8
(ಬಿ) ಆಹಾರ ಪದಾರ್ಥಗಳು ಮತ್ತು ಪಾನೀಯಗಳನ್ನು ಮಾರಾಟ ಮಾಡಿದಾಗ (ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಮನ್ನಣೆ ನೀಡಿದ ತ್ರೀಸ್ಟಾರ್, ಫೋರ್ ಸ್ಟಾರ್, ಫೈವ್ ಸ್ಟಾರ್ ಹೋಟೆಲುಗಳನ್ನು ಹೊರತುಪಡಿಸಿ)	8
(vi) ಸೋಯಮಿಲ್ಕ್	8
9. ಆಹಾರ ಸುರಕ್ಷಾ ವಸ್ತುಗಳು, ಅಡಿಗೆ ಬಣ್ಣಗಳು ಮತ್ತು ಆಹಾರ ಸುವಾಸನೆಗೊಳಿಸುವ ಎಸೆನ್ಸುಗಳು.	8
10 (i) ಬ್ರಾಂಡ್ ಹೆಸರಿನಲ್ಲಿ ಮಾರುವ ಪಾದರಕ್ಷೆಗಳು.	8
(ii) ಮೇಲೆ ನಮೂದಿತ (i)ರ ಅಡಿಯಲ್ಲಿ ಬಾರದ ಪಾದರಕ್ಷೆಗಳು	4
11. ಪಾದರಕ್ಷೆ ಪಾಲಿಶ್‌ಗಳು	8
11-ಎ. ಫರನೇಶ್ ಎಣ್ಣೆ, ಟ್ರಾನ್ಸ್‌ಫಾರ್ಮರ್ ಎಣ್ಣೆ ಮತ್ತು ಕೂಲೆಂಟುಗಳು	12
12. ಎಲ್ಲಾ ಬಗ್ಗೆ ಪೀಠೋಪಕರಣಗಳು, ತಿಜೋರಿ ಮತ್ತು ಅದರ ಬಿಡಿ ಭಾಗಗಳನ್ನು ಮತ್ತು ಉಪಸಾಧನಗಳನ್ನು ಒಳಗೊಂಡಂತೆ	8
13. ತುಪ್ಪಳ ಮತ್ತು ತೊಗಲುಗಳು (ನಾಲ್ಕನೇ ಅನುಸೂಚಿಯಲ್ಲಿ ಬರುವುವುಗಳನ್ನು ಹೊರತುಪಡಿಸಿ) ಮತ್ತು ಅನುಗಳಿಂದ ತಯಾರಿಸಿದ ವಸ್ತುಗಳು, ಆದರೆ ಯಾವುದೇ ಇತರ ನಮೂದಿನಲ್ಲಿ ಬರುವವುಗಳನ್ನು ಹೊರತುಪಡಿಸಿ.	12
14. ಫಾಕ್ಸ್ ಯಂತ್ರಗಳು ಮತ್ತು ಅವುಗಳ ಉಪಸಾಧನಗಳು ಮತ್ತು ಭಾಗಗಳು.	8

ಭಾಗ-ಜಿ

1. ಸತುಲೇಪಿತ ಕಬ್ಬಿಣದ ಬಕೆಟ್‌ಗಳು	8
2. ಗಾಜಿನ ಶೀಟ್‌ಗಳು, ಗಾಜಿನಿಂದ ಮಾಡಿದ ಎಲ್ಲಾ ವಸ್ತುಗಳು, ಆದರೆ ಗಾಜಿನ ಶೀಷೆಗಳು, ಮೇಜು ಮತ್ತು ಗೃಹ ಉಪಯೋಗಿಸಿ ಗಾಜಿನ ವಸ್ತುಗಳನ್ನು ಹೊರತುಪಡಿಸಿ.	12
3. ಗ್ಲಿಸರಿನ್	8
5. ಪ್ರತಿಯೊಂದು ವಿವರಣೆಯ ಗ್ರಾಮಫೋನ್ (ರೇಡಿಯೋ ಗ್ರಾಮಫೋನ್‌ಗಳು ಸೇರಿದಂತೆ) ಅದರ ಉಪಸಾಧನಗಳು ಮತ್ತು ಭಾಗಗಳು ಸೇರಿ.	8

6.	ಗ್ರಾಮಫೋನಿನ ರೆಕಾರ್ಡ್‌ಗಳು, ಕಾಂಪ್ಯಾಕ್ಟ್ ಡಿಸ್ಕ್‌ಗಳು ಮತ್ತು ಗ್ರಾಮಫೋನ್ ಸೂಜಿಗಳು	8

ಭಾಗ -ಹೆಚ್

1.	ಕಬ್ಬಿಣದ ವಸ್ತುಗಳು, ಎಂದರೆ, -	
	(i) ಬೋಲ್ಟ್‌ಗಳು, ಬೋಲ್ಟ್‌ಹೆಡ್‌ಗಳು, ರಿವೆಟ್‌ಗಳು, ನಟ್ಟುಗಳು, ಹಿಂಜುಗಳು, ಸ್ಕ್ರೂಗಳು, ಸ್ಕ್ರೂಹುಕ್‌ಗಳು, ಸ್ಕ್ರೂ ರಿಂಗ್‌ಗಳು, ಸ್ಕ್ರೂ ಸ್ಟಡಿಂಗ್‌ಗಳು ಸೆಲ್ಫ್ ಟ್ಯಾಪ್‌ಡ್ ಸ್ಕ್ರೂಗಳು, ಡೋರ್ ಕ್ಲೋಸರ್‌ಗಳು, ವೀಲ್‌ಗಳು, ಬ್ಲಾಕ್‌ಗಳು, ಕ್ಲಾಂಪ್‌ಗಳು, ಗನ್ ಮೆಟಲ್ ಫಿಟ್ಟಿಂಗ್‌ಗಳು, ಕರ್ಟನ್ ರಾಡ್‌ಗಳು, ಗ್ರೈಂಡಿಂಗ್ ಸ್ಟೋನ್‌ಗಳು, ಎಲ್ಲಾ ವಿಧವಾದ ಬೀಗ ಮತ್ತು ಪ್ಯಾಡ್ ಲಾಕ್‌ಗಳು, ವಾಷರ್‌ಗಳು, ಸ್ಪ್ರಿಂಗ್‌ಗಳು, ಸ್ಪ್ರಿಂಗ್ ವಾಷರ್‌ಗಳು, ಪ್ಯಾನಲ್ ಪಿನ್‌ಗಳು, ಗ್ಲಾಸ್ ವುಲ್, ಸ್ಟೀಲ್ ವುಲ್, ಅಬ್ರೆಸೀವ್‌ಗಳು, ಮೊಳೆಗಳು, ವೈರ್ ಮೊಳೆಗಳು ಮೂಲಲೋಹ ಮತ್ತು ಮಿಶ್ರಲೋಹಗಳಿಂದ ತಯಾರಾದವುಗಳು.	8
	(ii) ಇತರೆ ಕಡೆ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು (ಮೂಲ ಲೋಹ ಅಥವಾ ಮಿಶ್ರ ಲೋಹದಿಂದ ಮಾಡಿದ) ಬಾಗಿಲುಗಳು, ಕಿಟಕಿಗಳು ಮತ್ತು ಪೀಠೋಪಕರಣಗಳ ಜೋಡಣೆಗಳು.	8
	(iii) ಮೆಟಾಲಿಕ್ ಬಾರ್ಬಡ್‌ವೈರ್, ವೈರ್ ಮೆಶ್, ಪ್ಲಾಸ್ಟರ್ ಮೆಶ್‌ಗಳು ಮತ್ತು ಮೆಟಾಲಿಕ್ ವೈರ್ ನೆಟ್ಟಿಂಗ್ಸ್.	8
	(iv) ಪೇಂಟ್ ಬ್ರಶ್‌ಗಳು	8

ಭಾಗ-ಐ

1.	ಐಸ್, ಐಸ್ ಪ್ರೊಟ್, ಐಸ್ ಕ್ಯಾಂಡಿ ಮತ್ತು ಎಲ್ಲಾ ವಿಧದ ಐಸ್ ಕ್ರೀಮುಗಳು.	8
3.	ಕೈಗಾರಿಕಾ ಗ್ಯಾಸ್ ಎಂದರೆ ಆಮ್ಲಜನಕ, ಅಸಿಟಿಲಿನ್, ನೈಟ್ರೋಜಿನ್ ಮುಂತಾದವು.	12
4.	ಎಲ್ಲಾ ಬಗೆಯ ಇಂಕ್‌ಗಳು	8
6.	ದಂತ ಹಾಗೂ ಗಂಧದ ಮರದ ವಸ್ತುಗಳು	8

ಭಾಗ-ಜೆ

2.	ಒಡವೆಗಳು ಎಂದರೆ - ಚಿನ್ನ ಮತ್ತು ಬೆಳ್ಳಿ ಅಮೂಲ್ಯ ಹರಳುಗಳು ಇರುವ ಅಥವಾ ಇಲ್ಲದಿರುವ ವಸ್ತುಗಳು	12

3.	ಸೆಣಬು ಸೇರಿದ ಪಾಲಿಪ್ರೊಪಲೀನ್ ಹೊದಿಕೆ ವಸ್ತುಗಳು	8

ಭಾಗ-ಕೆ

1.	ಪಡಿತರ ವ್ಯವಸ್ಥೆಗೆ ಒಳಪಡದ ಸೀಮೆ ಎಣ್ಣೆ	8
2.	ಅಡುಗೆಗೆ ಹಾಗೂ ಬಡಿಸಲು ಉಪಯೋಗಿಸುವ ಶಾಖನಿರೋಧಕ ಲೇಪನದ ಅಡುಗೆ ಪಾತ್ರೆಗಳು	8
3.	ಅಲ್ಯೂಮಿನಿಯಂ ಅಥವಾ ಕಬ್ಬಿಣೇತರ ಲೋಹಗಳಿಂದ ಮಾಡಿದ ಮತ್ತು ಅಂಟು ನಿರೋಧಕ ಲೇಪನದ ಅಡುಗೆ ಪಾತ್ರೆಗಳು	8

ಭಾಗ- ಎಲ್

1.	ಲ್ಯಾಮಿನೇಟೆಡ್, ಇಂಪ್ರೆಗ್ನೇಟೆಡ್ ಅಥವಾ ಲೇಪಿತ ಹಾಸುಗಳು ಎಂದರೆ ಸಾಮಾನ್ಯವಾಗಿ ನೆಲದ ಮೇಲೆ ಹಾಸಲು ಬಳಸಲಾಗುವ ಲಿನೋಲಯಂ, ಪಿವಿಸಿ (ವಿನೈಲ್) ವಸ್ತುಗಳು ಸೇರಿದಂತೆ (ನೆಲದ ಟೈಲ್‌ಗಳ ಹೊರತಾಗಿ)	12
3.	ಐದನೇ ಅನುಸೂಚಿಯ ಕ್ರಮಸಂಖ್ಯೆ 28 ರಲ್ಲಿ ಬರುವ ಮತ್ತು ಬೇರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಚರ್ಮದ ವಸ್ತುಗಳು.	8
4.	ವಿದ್ಯುಚ್ಛಕ್ತಿಯಿಂದ ಅಥವಾ ಹೈಡ್ರಾಲಿಕ್ ಶಕ್ತಿಯಿಂದ ನಡೆಸಲಾಗುವ ಲಿಫ್ಟ್‌ಗಳು.	12

ಭಾಗ - ಎಮ್

1.	(ಎ) ಅರ್ತ್‌ಮೂವರ್‌ಗಳ ಭಾಗಗಳು ಮತ್ತು ಉಪಸಾಧನಗಳು (ಡೀಜಲ್ ಎಂಜಿನ್ ಮತ್ತು ಅದರ ಭಾಗಗಳು, ಬ್ಯಾಟರಿಗಳು ಮತ್ತು ಟೈರುಗಳು, ಟ್ಯೂಬ್‌ಗಳು ಮತ್ತು ಫ್ಲಾಪ್‌ಗಳ ಹೊರತಾಗಿ)	8
(iii)	(ಎ) ಎಲ್ಲಾ ಬಗೆಯ ಯಂತ್ರೋಪಕರಣಗಳು ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ.	8
	(ಸಿ) ಹೊಲಿಗೆ ಯಂತ್ರಗಳು ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು	8
	(ಡಿ) ಎಲ್ಲಾ ಬಗೆಯ ತೂಕದ ಯಂತ್ರಗಳು	8
4.	ಮಾರ್ಬಲ್ ಸ್ಲ್ಯಾಬ್‌ಗಳು ಮತ್ತು ಮಾರ್ಬಲ್‌ನಿಂದ ಮಾಡಿದ ವಸ್ತುಗಳು	12

5. ಮೆಡಿಸಿನಲ್ ಮತ್ತು ಫಾರ್ಮಾಸ್ಯೂಟಿಕಲ್ ತಯಾರಿಕೆಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ)	8
6. ಪಾದರಸ	8
7. ಲೋಹದ ಕ್ಯಾಪ್‌ಗಳು, ದೀಪದ ಲೋಹದ ಕ್ಯಾಪ್‌ಗಳನ್ನು ಹೊರತುಪಡಿಸಿ	8
7-ಎ. ದೀಪದ ಲೋಹದ ಕ್ಯಾಪ್‌ಗಳು	12
9. ಮೊಹರು ಮಾಡಿದ ಧಾರಕಗಳು ಅಥವಾ ಸ್ಯಾಚೆಟ್‌ಗಳಲ್ಲಿ ಮಾರಲ್ಪಡುವ ಖನಿಜ ಜಲ, ಡಿಸ್ಟಿಲ್ಡ್ ಜಲ ಮತ್ತು ಇನ್ನಾವುದೇ ಸಂಸ್ಕರಿಸಿದ ನೀರು	12
10. ಕಾಕಂಬಿ	12
11. ಸೊಳ್ಳೆನಿವಾರಕಗಳು, ಸಾಧನಗಳು ಮತ್ತು ಭಾಗ ಮತ್ತು ಉಪ ಭಾಗಗಳು	8
13. ಮೋಟಾರ್ ವಾಹನಗಳು, ಎಂದರೆ, -	
(i) ಮೋಟಾರ್ ಕಾರುಗಳು, ಮೋಟಾರ್ ಟ್ಯಾಕ್ಸಿ ಕ್ಯಾಬ್‌ಗಳು ಸೇರಿ	8
(ii) ಮೋಟಾರ್ ಸೈಕಲ್‌ಗಳು, ಮೋಟಾರ್ ಸ್ಕೂಟರ್‌ಗಳು ಮೋಟಾರೆಟ್‌ಗಳು, ಮೊಪೆಡ್‌ಗಳು ಮತ್ತು ಸೈಕಲ್ ಜೋಡಣೆಗಳು ಸೇರಿ.	8
(iii) ಪೆಟ್ರೋಲ್‌ನಿಂದ ಓಡಿಸುವಂಥ ಎಲ್ಲಾ ಜೀಪ್‌ಗಳು, ಟ್ರಕ್ಕರ್‌ಗಳು ವ್ಯಾನುಗಳು	8
(iv) ಲಘು ಡೀಸೆಲ್ ವಾಹನಗಳು	8
(v) ಮೋಟಾರ್ ಲಾರಿಗಳು, ಮೋಟಾರು ಅಮ್ನಿ ಬಸ್‌ಗಳೂ ಸೇರಿ.	8
(vii) ಮೇಲಿನ ಬಾಬುಗಳಲ್ಲಿ ಬಾರದ ಯಾವುದೇ ಇತರ ಮೋಟಾರು ವಾಹನ (ಆಟೋರಿಕ್ಷಾಗಳನ್ನು ಹೊತುಪಡಿಸಿ)	8
14. ಮೋಟಾರ್ ವಾಹನಗಳ ಭಾಗಗಳು ಮತ್ತು ಉಪಸಾಧನಗಳು, ಎಂದರೆ, -	
(i) ಸಾಮಾನ್ಯವಾಗಿ ಮೋಟಾರು ವಾಹನಗಳ ಭಾಗಗಳು ಮತ್ತು ಉಪಸಾಧನಗಳಾಗಿ ಬಳಸುವ ವಸ್ತುಗಳು, ಆದರೆ ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬ್‌ಗಳು ಮತ್ತು ಪ್ಲಾಪ್‌ಗಳು ಬ್ಯಾಟರಿಗಳು ಮತ್ತು ಡೀಸೆಲ್ ಎಂಜಿನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ	8
(iii) ಮೋಟಾರು ವಾಹನಗಳ ಛಾಸಿಗಳ ಮೇಲೆ ಕಟ್ಟಿದ ಬಾಡಿಗಳು.	8

ಭಾಗ - ಓ

3. ಚಾಕ್ಷುಷ ವಸ್ತುಗಳು ಎಂದರೆ, -

(i) ಬೈನಾಕುಲರ್‌ಗಳು, ಓಪೆರ ಗ್ಲಾಸ್‌ಗಳು, ಟೆಲಿಸ್ಕೋಪ್‌ಗಳು, ಮೈಕ್ರೋಸ್ಕೋಪ್‌ಗಳು, ಮತ್ತು ಅವುಗಳ ಭಾಗಗಳು ಹಾಗೂ ಉಪಸಾಧನಗಳು. 8

(ii) ಕನ್ನಡಕಗಳು, ಸನ್‌ಗ್ಲಾಸ್‌ಗಳು, ಗಾಗಲ್‌ಗಳು, ಲೆನ್ಸುಗಳು ಮತ್ತು ಫ್ರೇಮುಗಳು, ಅವುಗಳ ಜೋಡಣೆಗಳು, ಭಾಗಗಳು ಮತ್ತು ಉಪಸಾಧನಗಳು ಸೇರಿ. 8

ಭಾಗ-ಪಿ

1. (i) ಪೇಂಟುಗಳು, ವರ್ಣಗಳು, ವಾರ್ನಿಷ್‌ಗಳು, ಪಿಗ್‌ಮೆಂಟ್‌ಗಳು, ಪಾಲಿಷ್‌ಗಳು, ಇಂಡಿಗೊ, ಎನಾಮೆಲ್, ಪಟ್ಟಿ, ಬೇಲ್ ಆಯಿಲ್, ಬಿಳಿ ಎಣ್ಣೆ, ಟರ್ಪೆನ್ ಟೈನ್ (ಎಲ್ಲಾ ಬಗೆಯ) ಥಿನ್ನರ್‌ಗಳು, 12

ಪೈಮರ್‌ಗಳು ಆದರೆ (ii) ರಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಬಿಟ್ಟು, 12

(ii) ಅಕ್ರಿಲಿಕ್ ಪೈಂಟುಗಳು ಮತ್ತು ಬಣ್ಣಗಳು, ಪ್ಲಾಸ್ಟಿಕ್ ಎಮಲ್ಷನ್ ಪೈಂಟುಗಳು ಮತ್ತು ಎಲ್ಲಾ ಬಗೆಯ ಲ್ಯಾಕ್ಕರುಗಳು. 4

3. ಕಾರ್ಬನ್ ಕಾಗದ, ಬ್ಲಾಟಿಂಗ್ ಕಾಗದ ವಾಟರ್‌ಪ್ರೂಫ್ ಪಿ.ವಿ.ಸಿ. ಕೋಡೆಡ್ ಕಾಗದ, ಫೆರೋಕಾಗದ, ಅಮೋನಿಯಾ ಕಾಗದ ಪೆನ್ಸಿಲ್ ಕಾಗದ (ಫೋಟೋಗ್ರಾಫಿಕ್ ಕಾಗದವನ್ನು ಹೊರತು ಪಡಿಸಿ ಪಲ್ಪ್ ಬೋರ್ಡುಗಳು, ಆಡ್ ಬೋರ್ಡ್‌ಗಳು, ಡೂಪ್ಲೆಕ್ಸ್ ಬೋರ್ಡುಗಳು, ಟ್ರಿಪ್ಲೆಕ್ಸ್ ಬೋರ್ಡುಗಳು, ಕಾರ್ಡ್ ಬೋರ್ಡುಗಳು, ಪ್ಯಾಬೋರ್ಡುಗಳು, ಕೊರೋಗೇಡೆಡ್ ಬೋರ್ಡುಗಳು ಮತ್ತು ಅಂಥವುಗಳನ್ನು ಒಳಗೊಂಡಂತೆ ಕಾಗದ (ಎಲ್ಲಬಗೆಯ) ಸೆಲೋಫಿನ್ 12

5. ಪೆಟ್ರೋಲಿಯಂ ಉತ್ಪನ್ನಗಳು, ಎಂದರೆ,-

(ii) ಬ್ರೇಕ್ ಫ್ಲೂಯಿಡ್, ಗ್ರೀಸನ್ನು ಸೇರಿದಂತೆ ಲೂಬ್ರಿಕೇಟಿಂಗ್ ಎಣ್ಣೆ, ಸಾಲ್ವೆಂಟ್ ಎಣ್ಣೆ, ಪೆಟ್ರೋಲಿಯಂ ಜೆಲ್ಲಿ, (ಎಲ್ಲಾ ದರ್ಜೆಯ), ನ್ಯಾಫ್ತ, ಸ್ಪೈ ಆಯಿಲ್, ಮೆಥನಾಲ್, ಆರೋಮ್ಯಾಕ್ಸ್, (ಆರೋಮ್ಯಾಟಿಕ್) ಮಸ್ಕಿಟೋ ಲಾರ್ವಿಸೈಡಲ್ ಆಯಿಲ್, ಲೋ ಲಸ್ಪರ್ ಹೆವಿ ಸ್ಪಾಕ್, ಗ್ಲಾಸ್ ಕ್ಲೀನರ್, ಬೆನ್ ಜೀನ್, ಟಾಲೀನ್, ಷಲ್ ಹೆಕ್ಷನ್, ಸ್ಪೆಷಲ್ ಬಾಯ್ಲಿಂಗ್ ಪಾಯಿಂಟ್ ಸ್ಪಿರಿಟ್

(iii)	ಲಿಕ್ವಡ್ ಪೆಟ್ರೋಲಿಯಂ ಗ್ಯಾಸ್ ಎಂದರೆ ಬರ್ಮೇನ್, ಕಾಲ್ ಗ್ಯಾಸ್, ಇಂಡೇನ್ ಮುಂತಾದವು.	12
6.	ಪೈಪುಗಳು, ಟ್ಯೂಬ್‌ಗಳು ಮತ್ತು ಜೋಡಣೆಗಳು ಕಬ್ಬಿಣ, (ನಾಲ್ಕನೇ ಅನುಸೂಚಿಯಲ್ಲಿ ಬಾರವು) ಸೀಮೆಂಟ್, ಕಲ್ಲು ಮತ್ತು ಆಸ್ ಬೆಸ್ಟಾಸ್ ಇವುಗಳಿಂದ ಮಾಡಿರುವವು.	8
7.	(iii) ಪ್ಲಾಸ್ಟಿಕ್ ಶೀಟುಗಳು, ಪ್ಲಾಸ್ಟಿಕ್ ಗ್ರ್ಯಾನ್ಯೂಲ್‌ಗಳು, ಮತ್ತು ಎಲ್ಲಾ ಸ್ವರೂಪದ ಪ್ಲಾಸ್ಟಿಕ್‌ನಿಂದ ಮಾಡಲಾದ ವಸ್ತುಗಳು, ಪಾಲಿಥೀನ್ ಪಾಲಿವಿನಿಲ್ ಕ್ಲೋರೈಡ್ , ಪಾಲಿಪ್ರಾಪೇಲೀನ್, ಪಾಲಿಯೆಸ್ಟರೀನ್ ಮತ್ತು ಅದೇ ಬಗೆಯ ಸಾಮಗ್ರಿಯಿಂದ ತಯಾರಿಸಿದ ವಸ್ತುಗಳೂ ಸೇರಿ ಆದರೆ 2ನೇ ಅನುಸೂಚಿಯ ಪಿ ಭಾಗದ 7ನೇ ಕ್ರಮಾಂಕದ (ii) ನೇ ಉಪಕ್ರಮಾಂಕವನ್ನು ಹೊರತುಪಡಿಸಿ.	8
8.	ಪ್ರತಿಯೊಂದು ಬಗೆಯ ಪ್ಲೇಯಿಂಗ್ ಕಾರ್ಡುಗಳು	12
10.	ಪ್ರೆಶರ್ ಕುಕ್ಕರ್‌ಗಳು, ಅವುಗಳ ಭಾಗಗಳು ಮತ್ತು ಉಪಸಾಧನಗಳು	8
11.	ಮುದ್ರಿತ ಸಾಮಗ್ರಿ, ಓದುವ ಪುಸ್ತಕಗಳನ್ನು ಹೊರತುಪಡಿಸಿ.	8
12.	(ii) 10 ಅಶ್ವ ಶಕ್ತಿಗಿಂತ ಹೆಚ್ಚು ಇರುವ ಆಯಿಲ್ ಇಂಜಿನ್‌ಗಳ ಪಂಪುಸೆಟ್ಟುಗಳು.	8
	(iii) ಹತ್ತು ಅಶ್ವಶಕ್ತಿಗಿಂತ ಹೆಚ್ಚಿರುವ ವಿದ್ಯುತ್ ಶಕ್ತಿ ಮೋಟಾರುಳ್ಳ ಪಂಪ್‌ಸೆಟ್‌ಗಳು.	12

ಭಾಗ -ಆರ್

2.	ರೈಲ್ ಕೋಚ್‌ಗಳು ಮತ್ತು ಅದರ ಭಾಗಗಳು ಮತ್ತು ಉಪಸಾಧನಗಳು	8
4.	ರೇಜರ್ ಮತ್ತು ರೇಜರ್ ಬ್ಲೇಡುಗಳು	8
5-ಎ.	ರಿಫ್ರ್ಯಾಕ್ಟರಿ ಇಟ್ಟಿಗೆಗಳು ಮತ್ತು ಅಂತಹವುದೇ ಇಟ್ಟಿಗೆಗಳು	12
6.	(i) ರೆಫ್ರಿಜಿರೇಟರುಗಳು, ಡೀಪ್ ಫ್ರೀಸರ್‌ಗಳು, ಬಾಟಲ್ ಕೂಲರ್‌ಗಳು, ವಾಟರ್ ಕೂಲರ್‌ಗಳು ಮತ್ತು ಅಂತಹವುಗಳು ಹಾಗೂ ಅವುಗಳ ಭಾಗಗಳೂ ಸೇರಿದಂತೆ.	12
8.	ಕೈಯಿಂದ, ಯಂತ್ರದಿಂದ ಅಥವಾ ವಿದ್ಯುತ್‌ನಿಂದ ನಡೆಸಲಾಗುವ ರೋಲಿಂಗ್ ಶಟರ್‌ಗಳು ಮತ್ತು ಕೊಲ್ಯಾಪ್ಸಬಲ್ ಗೇಟುಗಳು ಮತ್ತು ಅವುಗಳ ಭಾಗಗಳು.	8

9. ರೂಫಿಂಗ್ ಲೈಟ್‌ರೂಫಿಂಗ್ ಮತ್ತು ಫಾಲ್ಸ್‌ರೂಫಿಂಗ್ ವಸ್ತುಗಳು, ಸಿಮೆಂಟ್ ಮತ್ತು ಆಸ್‌ಬೆಸ್ಟಾಸ್ ಶೀಟುಗಳು, ಅಸ್ಬಾಲ್ಟ್ ಶೀಟುಗಳು, ಹಾರ್ಡ್ ಬೋರ್ಡುಗಳು, ಸಾಫ್ಟ್ ಬೋರ್ಡುಗಳು, ಪ್ಲೈವುಡ್, ವಿನಿಯರ್ಡ್ ಬೋರ್ಡುಗಳು ಮತ್ತು ಪ್ಯಾನೆಲ್‌ಗಳು, ಮತ್ತು ಲ್ಯಾಮಿನೇಟೆಡ್ ಶೀಟುಗಳು ಸೇರಿ ಆದರೆ ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ. 12

10. ರಬ್ಬರ್ ಎಂದರೆ, -

(i) ವಲ್ಕನೈಸ್ ಮಾಡಿದ ಅಥವಾ ಮಾಡದ ಮತ್ತು ಯಾವುದೇ ಜವಳಿ ಸಾಮಾಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ, ಗಟ್ಟಿಗೊಳಿಸದ ರಬ್ಬರ್ ಪ್ಲೇಟುಗಳು, ಶೀಟ್‌ಗಳು ಮತ್ತು ಸ್ಟ್ರಿಪ್‌ಗಳು. 8

(ii) ವಲ್ಕನೈಸ್ ಮಾಡಿದ್ದು ಗಟ್ಟಿಗೊಳಿಸಿಲ್ಲದ ಪೈಪಿಂಗ್ ಮತ್ತು ಟ್ಯೂಬಿಂಗ್. 8

(iv) ಯಾವುದೇ ಜವಳಿ ಸಾಮಗ್ರಿಯೊಂದಿಗೆ ಸಂಯೋಜಿಸಿದ ಅಥವಾ ಸಂಯೋಜಿಸಿಲ್ಲದ ವಲ್ಕನೈಸ್ ಮಾಡಿದ ರಬ್ಬರಿನ ಟ್ರಾನ್ಸ್ ಮಿಷನ್, ಕನ್ವೇಯರ್ ಅಥವಾ ಎಲಿವೇಟರ್ ಬೆಲ್ಟ್‌ಗಳು ಅಥವಾ ಬೆಲ್ಟಿಂಗ್ 8

(v) ಸಿಂಥೆಟಿಕ್ ರಬ್ಬರ್, ಬೂಟಾಡೀನ್ ಸೇರಿ ಅಕ್ರಿಲೋನೈಟ್ರೆಲ್ ರಬ್ಬರ್, ಸ್ಟೈರಿಯರ್ ಬೂಟಾಡೀನ್ ರಬ್ಬರ್ ಮತ್ತು ಬುತೈಲ್ ರಬ್ಬರ್, ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಪ್ರಿವಲ್ಕನೈಸಡ್ ಸಿಂಥೆಟಿಕ್ ರಬ್ಬರ್ ಲೇಟೆಕ್ಸ್ ಸೇರಿ. 8

11. ರಬ್ಬರ್ ವಸ್ತುಗಳು, ಎಂದರೆ ಸಂಪೂರ್ಣವಾಗಿ ರಬ್ಬರ್‌ನಿಂದ ತಯಾರಿಸಿದ ವಸ್ತುಗಳು (ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ) 8

12. ರಬ್ಬರ್ ಮತ್ತು ಇತರ ಟೈರುಗಳು, ಟ್ಯೂಬುಗಳು ಮತ್ತು ಫ್ಲಾಪ್‌ಗಳು ನಾಲ್ಕನೇ ಅನುಸೂಚಿಯಲ್ಲಿ ಬಾರದವುಗಳನ್ನು ಇತರೆಡೆ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ.

ಭಾಗ- ಎಸ್

2. ಗಂಧದ ಎಣ್ಣೆ 12

3. ಪ್ರತಿಯೊಂದು ಬಗೆಯ ಸ್ಯಾನಿಟರಿ ಜೋಡಣೆಗಳು, ಕಲ್ಲು, ಸಿಮೆಂಟ್ ಮತ್ತು ಕಬ್ಬಣ ಹಾಗೂ ಉಕ್ಕಿನ ಪೈಪುಗಳು ಮತ್ತು ಜೋಡಣೆಗಳನ್ನು ಹೊರತುಪಡಿಸಿ. 12

4. ಸ್ಯಾನಿಟರಿ ಟವಲ್‌ಗಳು, ಸ್ಯಾನಿಟರಿ ನ್ಯಾಪ್‌ಕಿನ್‌ಗಳು, ಬೆಲ್ಟ್ ರಹಿತ ನ್ಯಾಪ್‌ಕಿನ್‌ಗಳು ಮತ್ತು ಟ್ಯಾಂಪನ್‌ಗಳು 8

5.	ಸುಗಂಧಿತ ಸುಪಾರಿ	8
7.	ಸ್ಲಾಟೆಡ್ ಆ್ಯಂಗಲಗಳು ಮತ್ತು ಸ್ಟೀಲ್ ರ್ಯಾಕ್‌ಗಳ ಜೋಡಣೆಗೆ ಸಿದ್ಧ ಭಾಗಗಳು.	8
9.	ಸೋಪುಗಳು ಎಂದರೆ,-	
	(i) ಟಾಯ್‌ಲೆಟ್ ಸೋಪುಗಳು (ಸ್ನಾನಕ್ಕಾಗಿ ಬಳಸುವ)	12
	(ii) ಶಾಂಪು ದ್ರವ ಮತ್ತು ಜೆಲ್ ರೂಪದಲ್ಲಿ, ಹರ್ಬಲ್ ಮತ್ತು ಮೆಡಿಸನಲ್ ತಯಾರಿಕೆಗಳನ್ನು ಸೇರಿ	12
	(iii) ಬಟ್ಟೆಸೋಪು, ಸೋಪು ಫ್ಲೇಕುಗಳು, ಸೋಪು ಪೌಡರ್‌ಗಳು.	8
	(iv) ಡಿಟರ್ಜೆಂಟ್ ಪೌಡರ್‌ಗಳು ಮತ್ತು ಬಿಲ್ಲೆಗಳು, ದ್ರವಗಳು ಮತ್ತು ಲಾಂಡ್ರಿ ಬ್ಲೈಟನರ್‌ಗಳು ಸೇರಿ.	8
10.	ಧ್ವನಿ ಪ್ರಸಾರಣಾ ಸಾಧನ ಸಾಮಗ್ರಿಗಳು, ಲೌಡ್ ಸ್ಪೀಕರ್‌ಗಳು ಮತ್ತು ಅವುಗಳ ಭಾಗಗಳು ಸೇರಿ, ಆದರೆ ಟೆಲಿಫೋನ್ ಮತ್ತು ಅದರ ಭಾಗಗಳನ್ನು ಹೊರತುಪಡಿಸಿ.	8
12.	ಮದ್ಯ ಸಾರಗಳು ಮತ್ತು ಆಲ್ಕೋಹಾಲ್ ಎಂದರೆ, -	
	(i) ಡಿನೇಚರ್ಡ್ ಸ್ಪಿರಿಟ್	12
	(iii) ಎಥಿಲ್ ಆಲ್ಕೋಹಾಲ್.	12
15.	ಲೇಖನ ಸಾಮಗ್ರಿಗಳು ಎಂದರೆ, -	
	(i) ಲೆಕ್ಕದ ಪುಸ್ತಕಗಳು, ಪೇಪರ್ ಎನ್ವೆಲಪ್‌ಗಳು, ಡೈರಿಗಳು, ಕ್ಯಾಲೆಂಡರ್‌ಗಳು, ರೇಸ್ ಕಾರ್ಡುಗಳು, ಕ್ಯಾಟ್‌ಲಾಗುಗಳು, ಶುಭಾಶಯ ಕಾರ್ಡುಗಳು, ಆಮಂತ್ರಣ ಕಾರ್ಡುಗಳು, ವಿನೋದ ಪೋಸ್ಟ್‌ಕಾರ್ಡುಗಳು ಚಿತ್ರಮಯ ಪೋಸ್ಟ್‌ಕಾರ್ಡುಗಳು, ವಿಶೇಷ ಸಂದರ್ಭಗಳ ಕಾರ್ಡ್‌ಗಳು, ಫೋಟೋ ಮತ್ತು ಸ್ಟಾಂಪ್ ಆಲ್ಬಂಮ್‌ಗಳು.	8
	(ii) ಕಛೇರಿ ಡೆಸ್ಕ್ ಸಾಮಗ್ರಿಗಳು, ಪಂಚಿಂಗ್ ಮೆಷಿನ್ ಮತ್ತು ಸ್ಟಾಪಲ್‌ರ್ ಮೆಷೀನ್‌ಗಳು ಸೇರಿದಂತೆ	8
17.	ಕಲ್ಲುಗಳು ಎಂದರೆ, -	
	(i) ಗ್ರಾನೈಟ್ ಕಲ್ಲುಗಳು ಮತ್ತು ಚೂರುಗಳು -	
	(ಅ) ಪಾಲಿಷ್ ಮಾಡಿದ್ದು.	12

	(ಆ) ಪಾಲಿಷ್ ಮಾಡಿಲ್ಲದಿರುವುದು	12
	(ಇ) ಚೂರುಗಳು	12
18.	ಸ್ಟೌವ್‌ಗಳು, ಎಂದರೆ, ಗ್ಯಾಸ್ ಸ್ಟೌವ್‌ಗಳು ಮತ್ತು ಸೀಮೆ ಎಣ್ಣೆ ಸ್ಟೌವ್‌ಗಳು ಮತ್ತು ಅವುಗಳ ಭಾಗಗಳು ಮತ್ತು ಉಪಸಾಧನಗಳು.	8
19.	ಸೂಟ್ ಕೇಸ್‌ಗಳು ಬ್ರೀಫ್ ಕೇಸುಗಳು, ಅಟ್ಯಾಚ್ ಕೇಸುಗಳು ಮತ್ತು ಡೆಸ್ ಪ್ಯಾಚ್ ಕೇಸುಗಳು ಚರ್ಮದಿಂದ ಮಾಡಿದವು ಸೇರಿ, ಆದರೆ ಸ್ಟೀಲ್ ಟ್ರಂಕುಗಳನ್ನು ಬಿಟ್ಟು,	12
21.	ಶಸ್ತ್ರಚಿಕಿತ್ಸೆ ಮತ್ತು ದಂತ ಚಿಕಿತ್ಸೆ ಉಪಕರಣಗಳು ಮತ್ತು ಸಲಕರಣೆಗಳು, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳೂ ಸೇರಿದಂತೆ, ಸಿರೆಂಜ್‌ಗಳು ಮತ್ತು ಸೂಜಿಗಳು; ಶಸ್ತ್ರ ಚಿಕಿತ್ಸಾಗಾರದ ಉಪಕರಣಗಳು, ನೆರಳು ದೀಪಗಳು ಮತ್ತು ಟ್ಯೂಬ್ಸ್, ಶಸ್ತ್ರಚಿಕಿತ್ಸೆ ಮತ್ತು ತಪಾಸಣೆ ಟೇಬಲ್‌ಗಳು ಮತ್ತು ಮಂಚಗಳು ಮತ್ತು ಹೀರುವ ಉಪಕರಣಗಳು; ಸ್ಟಾಂಡ್‌ಗಳು, ಸ್ಪಕ್ಟರ್‌ಗಳು, ಟ್ರಾಲಿಗಳು, ಡೆಂಟಲ್ ಚೇರುಗಳು, ಲ್ಯಾಬೋರೇಟರಿ ಉಪಕರಣಗಳು ಮತ್ತು ಗಾಜಿನ ಉಪಕರಣಗಳು, ಸ್ಪೆಥೆಸ್ಕೋಪ್‌ಗಳು, ಥರ್ಮಾಮೀಟರ್‌ಗಳು, ಲ್ಯಾಕ್ಟೋ ಮೀಟರ್‌ಗಳು, ರಕ್ತ ಒತ್ತಡ ಮಾಪನಗಳು, ಸರ್ಜಿಕಲ್ ಕಾಟನ್‌ವುಲ್, ಎನೀಮೋ ಕ್ಯಾನ್‌ಗಳು, ಬೆಡ್‌ಪ್ಯಾನುಗಳು, ಕಿಡ್ನಿಟ್ರೇಗಳು ಮತ್ತು ಅಂತಹುದೇ ಇತರೆ ಆಸ್ಪತ್ರೆಯ ಸಲಕರಣೆಗಳು, ಸರ್ಜಿಕಲ್ ಗ್ಲೌಸ್‌ಗಳು, ಎಪ್ರನ್‌ಗಳು, ಆಪರೇಷನ್ ಸೂಟ್ಸ್‌ಗಳು, ರಬ್ಬರ್ ಶೀಟುಗಳು, ಕಾತೆಟರ್‌ಗಳು, ಐವಿ ಸೆಟ್ಟುಗಳು ಮತ್ತು ಇತರೆ ಅಂತಹವುಗಳು, ಸರ್ಜಿಕಲ್ ಕಾಲರುಗಳು, ಅಬ್ಡಾಮಿನಲ್ ಪಟ್ಟಿಗಳು ಮತ್ತು ಇತರೆ ಅಂತಹವುಗಳು.	8
23.	ಈ ಅನುಸೂಚಿಯಲ್ಲಿ ಬೇರೆ ಎಲ್ಲೂ ನಮೂದಿಸದೆ ಇರುವ ಇತರೆ ಸ್ಟೈನ್‌ಲೆಸ್ ಸ್ಟೀಲ್ ಪದಾರ್ಥಗಳು.	8

ಭಾಗ - ಟಿ

1.	ಟ್ಯಾಬುಲೇಟಿಂಗ್ ಯಂತ್ರಗಳು, ಗಣಕ ಯಂತ್ರಗಳು (ಎಲ್ಲಾ ಬಗೆಯ ಯಾಂತ್ರಿಕ ಅಥವಾ ವಿದ್ಯುತ್ ಚಾಲಿತ ಗಣಕ ಯಂತ್ರಗಳು ಸೇರಿ) ಡೂಪ್ಲಿಕೇಟಿಂಗ್ ಯಂತ್ರಗಳು, ರೋನಿಯೋ ಯಂತ್ರಗಳು, ಅವುಗಳ ಭಾಗಗಳು ಮತ್ತು ಉಪ ಸಾಧನಗಳು.	8

1-ಎ.	ಟೈಲರಿಂಗ್ ಸಾಮಗ್ರಿಗಳು, ಸೂಜಿಗಳು , ಕತ್ತರಿಗಳು, ಹುಕ್ಕುಗಳು, ಬಟನ್‌ಗಳು, ಜಿಪ್‌ಗಳು, ಬಕಲ್‌ಗಳು, ಅಳತೆ ಟೇಪುಗಳು ಮತ್ತು ಅಳತೆ ಪಟ್ಟಿ, ಕಾಲರ್‌ಗಳು ಮತ್ತು ಕಾಲರ್ ಬೋನ್‌ಗಳು.	8
3.	ಹದ ಮಾಡಲು ಬಳಸುವ ತೊಗಟೆಗಳು	8
5.	(i) ಬ್ರಾಂಡ್ ಹೆಸರಿನಡಿಯಲ್ಲಿ ಮಾರಾಟ ಮಾಡುವ ಚಹಾ.	12
	(ii) ಬ್ರಾಂಡ್ ಉಳ್ಳ ಚಹಾವನ್ನು ಬಿಟ್ಟು ಉಳಿದ ಚಹಾ.	8
6.	ಪ್ರತಿಯೊಂದು ಬಗೆಯ ದೂರವಾಣಿಗಳು ಮತ್ತು ಭಾಗಗಳು	8
7.	ಟೆಲಿವಿಷನ್ ಸೆಟ್ಟುಗಳು ಮತ್ತು ಅದರ ಘಟಕ ಭಾಗಗಳು ಮತ್ತು ಉಪ ಸಾಧನಗಳು.	8
8.	ಟೈಲುಗಳು,-	
	(i) ಮೊಸಾಯಿಕ್ ಟೈಲುಗಳು ಮತ್ತು ಚೂರುಗಳು.	12
	(ii) ಸೆರಾಮಿಕ್ ಮತ್ತು ಹೊಳೆಯುವ ನೆಲ ಮತ್ತು ಗೋಡೆಯ ಟೈಲುಗಳು	12
	(iv) ಮೇಲ್ಕಂಡ (i) ಮತ್ತು (iii) ನೇ ಬಾಬುಗಳಲ್ಲಿ ಬಾರದ ಇತರ ಟೈಲುಗಳು.	12
	(v) ಸಿಮೆಂಟನ್ನು ಬಿಟ್ಟು ಸಂದುಗಾರೆ ಪುಡಿ ಮತ್ತು ಮೇಲೆ ನಿರ್ದಿಷ್ಟಪಡಿಸಿದ ಟೈಲುಗಳು ಮತ್ತು ಚೂರುಗಳನ್ನು ಹಾಸಲು ಬಳಸುವ ಸಿಟು ಮಿಶ್ರಣ.	12
9.	ಬಾಗಿಲು ಚೌಕಟ್ಟು ಕಿಟಕಿ ಚೌಕಟ್ಟುಗಳು ಮತ್ತು ಬಾಗಿಲುಗಳನ್ನೊಳಗೊಂಡಂತೆ ಆದರೆ ಪೀಠೋಪಕರಣಗಳನ್ನು ಹೊರತುಪಡಿಸಿ ಎಲ್ಲಾ ತರದ ಮರ ಮಟ್ಟುಗಳು	12
10.	ಪ್ರಸಾಧನ ವಸ್ತುಗಳು (ಔಷದಯುಕ್ತ ಅಥವಾ ಇಲ್ಲದ) ಅಂದರೆ,	
	(i) ಸುಗಂಧ ದ್ರವ್ಯಗಳು, ಯುಡಿಕ್ಯಲಾನ್, ಸಾಲಿಡಕ್ಯಲಾನ್, ಸೌಂದರ್ಯ ಪೆಟ್ಟಿಗೆಗಳು, ಫೇಸ್ ಪ್ಯಾಕ್‌ಗಳು, ಕ್ಲೆನ್ಸಿಂಗ್ ದ್ರವಗಳು, ಮಾಯಿಶ್ಚರೈಸರ್‌ಗಳು, ಮೇಕಪ್ ಸಾಮಗ್ರಿಗಳು, (ಟಾಲ್ಕಂ ಪೌಡರ್ ಹೊರತುಪಡಿಸಿ) ಕಾಂಪ್ಲೆಕ್ಷನ್ ರೂಜ್, ಬ್ಲೀಚಿಂಗ್ ಏಜೆಂಟ್ಸ್, ಹೇರ್ ಡೈಸ್, ಹೇರ್ ಸ್ಪೇಯರ್‌ಗಳು, ಹೇರ್ ರಿಮೂವರ್, ಹೇರ್ ಕ್ರೀಂಗಳು, ಲಿಪ್ ಸ್ಟಿಕ್‌ಗಳು, ನೈಲ್ ಪಾಲಿಷ್ಗಳು ಮತ್ತು ವಾರ್ನಿಷ್‌ಗಳು, ಪಾಲಿಷ್ ನಿವಾರಕಗಳು, ಐಲೈನರ್‌ಗಳು, ಆಫ್ಟರ್ ಶೇವ್‌ಲೋಶನ್ ಮತ್ತು ದೇಹ ದುರ್ಗಂಧ ನಾಶಕಗಳು.	12

(ii) ಮೇಲ್ಕಂಡ (i)ನೇ ಬಾಬಿನಲ್ಲಿ ನಿರ್ದಿಷ್ಟಪಡಿಸಿರುವ ಸಾಮಗ್ರಿಗಳನ್ನು ಹೊರತುಪಡಿಸಿ, ಟಾಯಲೆಟ್ ಸೋಪುಗಳು ಮತ್ತು ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟ ಪಡಿಸಬಹುದಾದಂಥ ಇತರ ಪ್ರಸಾಧನ ವಸ್ತುಗಳು. 12

10-ಎ. ಸ್ಪಾನರ್‌ಗಳು, ಸ್ಕ್ರೂಡ್ರೈವರ್‌ಗಳು, ಅರಗಳು, ಕಟಿಂಗ್ ಪ್ಲೇಯರ್‌ಗಳು, ಸುತ್ತಿಗೆಗಳು ಮುಂತಾದ ಕೈಯಲ್ಲಿ ಬಳಸುವಂತಹ ಉಪಕರಣಗಳು. 8

10-ಬಿ. ಎಲ್ಲಾ ಬಗೆಯ ಆಟಿಕೆಗಳು, ಎಲೆಕ್ಟ್ರಾನಿಕ್ ಮತ್ತು ವಿದ್ಯುತ್ ಚಾಲಿತ ಆಟಿಕೆಗಳು ಸೇರಿದಂತೆ. 8

11. (i) ಬೆರಳಚ್ಚು ಯಂತ್ರಗಳು, ಬೆರಳಚ್ಚು ಯಂತ್ರಗಳ ಭಾಗಗಳು ಮತ್ತು ಉಪಸಾಧನಗಳು, ಬೆರಳಚ್ಚು ಯಂತ್ರದ ರಿಬ್ಬನ್, ಕನ್ನಡ ಬೆರಳಚ್ಚು ಯಂತ್ರಗಳನ್ನು ಹೊರತುಪಡಿಸಿ. 12

ಭಾಗ-ಎ

1. ವ್ಯಾಂಕ್ಯೂಪ್ಲಾಸ್ಕ್‌ಗಳು, ಥರ್ಮೋವೇರ್ ಪದಾರ್ಥಗಳು ಮತ್ತು ಅವುಗಳ ರೀಫಿಲ್‌ಗಳು. 8

2. ಮೋಟಾರು ವಾಹನಗಳಲ್ಲಿ ಬಿಡಿ ಭಾಗಗಳಾಗಿ ಉಪಯೋಗಿಸುವ ವಾಲ್ವುಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವಾಲ್ವುಗಳು. 8

ಭಾಗ- ಡಬ್ಲ್ಯು

3. ಜಲ ಮತ್ತು ಹವಾಮಾನ ನಿರೋಧಕ ಸಂಯುಕ್ತಗಳು. 12

4. ಜಲ ಮಾಪಕಗಳು 8

4-ಎ. ಫೈಬರ್ ಗ್ಲಾಸ್, ಪ್ಲಾಸ್ಟಿಕ್ ಅಥವಾ ಇನ್ನು ಯಾವುದೇ ಸಿಂತೆಟಿಕ್ ವಸ್ತುಗಳಿಂದ ಮಾಡಿದಂಥ ನೀರು ಸಂಗ್ರಹಣಾ ಟ್ಯಾಂಕುಗಳು. 8

5. ತೂಕಗಳು ಮತ್ತು ಅಳತೆಗಳು 8

6. (i) ವೈರ್ ಲೆಸ್ ರಿಸೆಪ್ಷನ್ ಉಪಕರಣಗಳು ಮತ್ತು ಸಲಕರಣೆಗಳು ಮತ್ತು ಅವುಗಳ ಘಟಕ ಭಾಗಗಳು ನಿಸ್ತಂತು ಗ್ರಹಣದ ಹೊರತಾದ ಉದ್ದೇಶಗಳಿಗೆ ನಿರ್ದಿಷ್ಟವಾಗಿ ವಿನ್ಯಾಸಗೊಳಿಸದಿರುವ ಎಲ್ಲಾ ಎಲೆಕ್ಟ್ರಿಕಲ್ ವಾಲ್ವ್‌ಗಳು ಅಕ್ಯುಮುಲೇಟರ್‌ಗಳು, ಆಂಪ್ಲಿಫೈಯರ್‌ಗಳು ಮತ್ತು ಲೌಡ್ ಸ್ಪೀಕರುಗಳೂ ಸೇರಿ. 8

(ii) ಪೇಜರ್ ಮತ್ತು ಅದರ ಭಾಗಗಳು 8

7.	ಮರ, ಎಂದರೆ,-	
	ನೀಲಗಿರಿ ಮತ್ತು ಸರ್ವೆ ಮರ ಯಾವುದೇ ಆಕಾರ ಮತ್ತು ಅಳತೆಯವು.	12
8.	ಎಲ್ಲಾ ಬಗೆಯ ಮೇಣಗಳು	8

ಭಾಗ- ಎಕ್ಸ್

1.	ಕ್ಷ-ಕಿರಣ ಉಪಕರಣಗಳು, ವೈದ್ಯ ಸೇವೆಯಲ್ಲಿ ಉಪಯೋಗಿಸುವ ಚಿತ್ರ ಗ್ರಾಹಕ, ಪತ್ತೆ ಹಚ್ಚುವ ಮತ್ತು ಗುಣಪಡಿಸುವ ಯಂತ್ರಗಳು.	8

ಮೂರನೇ ಅನುಸೂಚಿ

1.	ಬಾಕ್ಸೈಟ್, ಕ್ರೋಮೈಟ್, ಕಬ್ಬಿಣ, ಮ್ಯಾಂಗನೀಸ್ ಮತ್ತು ಇತರೆ ಅದಿರುಗಳು ಉಂಡೆ ಮತ್ತು ಕಣಗಳನ್ನೊಳಗೊಂಡಂತೆ.	8
6.	ಕಬ್ಬು:	
	(i) ವರ್ಷಕ್ಕೆ 5 ಲಕ್ಷಕ್ಕೂ ಹೆಚ್ಚು ವಹಿವಾಟುಳ್ಳ ಬೆಲ್ಲದ ತಯಾರಕರು ಖರೀದಿಸಿದಾಗ.	6
	(ii) ಸಂಸ್ಕರಿಸಿದ ಕಬ್ಬಿನ ರಸದ ತಯಾರಕರು ಖರೀದಿಸಿದಾಗ	6

ನಾಲ್ಕನೇ ಅನುಸೂಚಿ

5.	ಕಡಲೆಕಾಯಿ ಅಥವಾ ಸೇಂಗಾಬೀಜವೂ ಸೇರಿದಂತೆ ಕಡಲೆ ಕಾಯಿ ಅಥವಾ ಸೇಂಗಾ	ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾದ ರಾಜ್ಯ ದಲ್ಲಿನ	2
	ಎ. (i) ಕರ್ನಾಟಕದೊಳಗೆ ಖರೀದಿಸಿದ್ದು	ಮೊದಲನೆ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿ ಮುಂದಿನ ವ್ಯಾಪಾರಿಯು ಖರೀದಿಸಿದ್ದು	
	(ii) ಕರ್ನಾಟಕದ ಹೊರಗಡೆಯಿಂದ ಪಡೆದಿದ್ದು	ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾದ ರಾಜ್ಯದಲ್ಲಿನ ಮೊದಲನೆ ವ್ಯಾಪಾರಿ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿ ಮುಂಚಿನ ವ್ಯಾಪಾರಿಯು ಮಾರಾಟ ಮಾಡಿದ್ದು.	2
	ಬಿ) ಸೇಂಗಾ, ತೆಂಗಿನಕಾಯಿಗಳು (ಎಂದರೆ ಎಳೆನೀರನ್ನು ಹೊರತುಪಡಿಸಿ ಕೊಬ್ಬರಿ) ಸಾಸಿವೆ ಅಥವಾ ಎಳ್ಳು (ಜಿಂಟಲಿ) ಕಾಳುಗಳು, ಕುಸುಮೆ (ಕರಡಿ) ಕಾಳುಗಳು) ಕುಸುಬೆ, ಹುಚ್ಚೆಳ್ಳು (ರಾಮ್‌ತಿಲ್) ಹರಳು ಬೀಜಗಳು, ಕಾರಂಜಾ , ಪೊಂಗಂ, ಹೊಂಗೆ ಬೀಜಗಳು ಮತ್ತು ಬೇವು ಅಥವಾ ಪೇಷಾ ಬೀಜಗಳು.	ಈ ಅಧಿನಿಯಮದ ಅಡಿಯಲ್ಲಿ ತೆರಿಗೆಗೆ ಗುರಿಯಾದ ರಾಜ್ಯದಲ್ಲಿನ ಮೊದಲನೆ ವ್ಯಾಪಾರಿ ಅಥವಾ ಕ್ರಮಾನುಗತ ವ್ಯಾಪಾರಿಗಳ ಪೈಕಿ ಅತಿಮುಂಚಿನ ವ್ಯಾಪಾರಿಯು ಖರೀದಿಸಿದ್ದು		

ಐದನೇಯ ಅನುಸೂಚಿ

8ನೇ ಪ್ರಕರಣದ ಮೇರೆಗೆ ತೆರಿಗೆಯಿಂದ ವಿನಾಯಿತಿಗೊಳಿಸಿದ ಸರಕುಗಳು

ಕ್ರ.ಸಂ.	ಸರಕುಗಳ ವಿವರಣೆ
1	2
1.	ಕುಂಕುಮ
2.	ಗಾಜು ಮತ್ತು ಪ್ಲಾಸ್ಟಿಕ್ ಬಳೆಗಳು
3.	ಒಂದಕ್ಕೆ 5000 ರೂಪಾಯಿಗಳನ್ನು ಮೀರಿದ ಬೆಲೆಗೆ ಮಾರಿದಾಗ ಮದುವೆಯ ಸಂದರ್ಭದಲ್ಲಿ ವಧು ಧರಿಸಿದ ಮಂಗಲಸೂತ್ರ ಅಥವಾ ಯಾವುದೇ ಇತರ ಸಾಂಕೇತಿಕ ಅಥವಾ ಪವಿತ್ರ ಅಭರಣ
4.	ಉಪ್ಪು
4ಎ.	ಮನುಷ್ಯರಕ್ತ
5	ಈರುಳ್ಳಿ ಬೀಜಗಳನ್ನು ಒಳಗೊಂಡು ತರಕಾರಿಗಳು ಮತ್ತು ತರಕಾರಿ ಬೀಜಗಳು ಆದರೆ ತರಕಾರಿಗಳು ಮತ್ತು ನಿರ್ಜಲೀಕೃತ ತರಕಾರಿಗಳನ್ನು ಹೊರತುಪಡಿಸಿ.
5ಎ.	ತಾಜಾ ಹಣ್ಣುಗಳು ಮತ್ತು ಹಣ್ಣಿನ ಬೀಜಗಳು (ಬಿತ್ತನೆ)
6.	ಮೊಹರು ಮಾಡಿದ ಧಾರಕಗಳಲ್ಲಿ ಮಾಡಿದಾಗ ಹೊರತು , ಮೊಟ್ಟೆಗಳು ಮತ್ತು ಮಾಂಸ.
6ಎ.	ಮೊಹರು ಮಾಡಿದ ಧಾರಕಗಳಲ್ಲಿ ಮಾರಾಟ ಮಾಡಿದಾಗ ಹೊರತು ಸೀಗಡಿಗಳು, ವ್ಯಾನ್‌ಗಳು ಮತ್ತು ಏಡಿಗಳನ್ನು ಹೊರತುಪಡಿಸಿ ಮೀನುಗಳು
7	ತಾಜಾ ಹಾಲು, ಮೊಸರು ಮತ್ತು ಮಜ್ಜಿಗೆ
7 ಎ.	ಆಲೂಗಡ್ಡೆ, ಗೆಣಸು, ಈರುಳ್ಳಿ, ಬೆಳ್ಳುಳ್ಳಿ ಮತ್ತು ಶುಂಠಿ
7ಬಿ.	ಹಸಿರು ಮೆಣಸಿನಕಾಯಿ
8.	ಕೈಮಗ್ಗಗಳಲ್ಲಿ ನೇಯ್ದ ಕಂಬಳಿಗಳು
8ಎ.	ಎಲುಬುಗಳಲ್ಲಿ , ವಿದ್ಯುಚ್ಚಾಲಿತ ಮಗ್ಗಗಳಲ್ಲಿ ಅಥವಾ ಕೈಮಗ್ಗಗಳಲ್ಲಿ ತಯಾರಿಸಿದ ಎಲ್ಲ ಬಗೆಯ ಜವಳಿಗಳು ಅಂದರೆ ರೇಯಾನ್ ಅಥವಾ ನೈಲಾನನ್ನು ಒಳಗೊಂಡು ಹತ್ತಿ, ಉಣ್ಣೆ ಅಥವಾ ಕೃತಕ ರೇಷ್ಮೆ ಮತ್ತು ಉದ್ದದ ಥಾನುಗಳಲ್ಲಿನ ಉಡುಪಿನ ಬಟ್ಟೆ

1	2
8ಬಿ.	ಗೊಟ್ಪ ಮತ್ತು ನಕ್ಕಿ
9.	ಹತ್ತಿ ಅಥವಾ ಉಣ್ಣೆಯ ನೂಲಿನಿಂದ ಕೈಯಿಂದ ನೂತ ನೂಲು ಮತ್ತು ಕೈಯಿಂದ ನೂತ ನೂಲಿನಿಂದ ಅನನ್ಯವಾಗಿ ಕೈಮಗ್ಗಗಳ ಮೇಲೆ ನೇಯ್ದ ಎಲ್ಲ ಬಟ್ಟೆ ಮತ್ತು ಅಂಥ ಬಟ್ಟೆಯಿಂದ ಮಾಡಲಾದ ಮತ್ತು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಪ್ರಮಾಣೀಕರಿಸಿದ ವ್ಯಕ್ತಿಗಳಿಂದ ಮಾರಾಟವಾದ ವಸ್ತುಗಳು
10.	ಅಂಬರ್ ಚರಖಾಗಳನ್ನು ಒಳಗೊಂಡು ಚರಖಾಗಳು ಮತ್ತು ಅವುಗಳ ಭಾಗಗಳು, ಹಂಜಿಗಳು ಮತ್ತು ತಂತುಗಳು
11.	ಹೂವುಗಳು ಮತ್ತು ವೀಳ್ಯದೆಲೆಗಳು
12.	ಸಸಿಗಳು
13.	ರಾಜ್ಯದಲ್ಲಿ ಸಂಸತ್ತಿನ ಸದನಗಳು, ರಾಜ್ಯ ವಿಧಾನಮಂಡಲ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಚುನಾವಣೆಗಳ ಉದ್ದೇಶಗಳಿಗಾಗಿ ಮಾರಾಟ ಮಾಡಿದ ಮತ ಪೆಟ್ಟಿಗೆಗಳು.
14.	ಕಮಿಷನರು ಮನ್ನಣೆ ಮಾಡಿದ ರಾಜ್ಯದಲ್ಲಿನ ಕೈಗಾರಿಕಾ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮತ್ತು ತರಬೇತಿ ಪಡೆಯುವವರು ಮಾಡಿದ ವಸ್ತುಗಳು ಮೊದಲ ಬಾರಿಗೆ ಮಾರಾಟ ಮಾಡಿದಾಗ
15.	ರಾಜ್ಯ ಸರ್ಕಾರವು ಮನ್ನಣೆ ಮಾಡಿದ ಮೊಟ್ಟೆ ತಯಾರಕರು ಮಾರಾಟ ಮಾಡಿದ ರೇಷ್ಮೆ ಹುಳು ಮೊಟ್ಟೆಗಳು.
16.	ರೇಷ್ಮೆ ಗೂಡುಗಳು.
16ಎ.	ರೇಷ್ಮೆಹುಳು ವ್ಯಾಪಾರಿಗಳು
17.	ಔಷಧಾಲಯಗಳ ಒಡೆಯರಾದ ವೈದ್ಯಕೀಯ ವೃತ್ತಿಗರು ಅವರ ರೋಗಿಗಳಿಗಾಗಿ ವಿತರಣೆ ಮಾಡಿದ ಔಷಧಗಳು.
18.	ರಾಜ್ಯ ಸರ್ಕಾರವು ಮನ್ನಣೆ ಮಾಡಿದ ಕೈಗಾರಿಕಾ ತರಬೇತಿ ಸಂಸ್ಥೆಗಳ ತರಬೇತಿ ಪಡೆಯುವವರು ಮಾಡಿದ ವಸ್ತುಗಳು ಮೊದಲ ಬಾರಿಗೆ ಮಾರಾಟ ಮಾಡಿದಾಗ.
19.	ಕಮೀಷನರು ಕೈಯಿಂದ ಮಾಡಿದ ಕಾಗದವೆಂದು ಮನ್ನಣೆ ಮಾಡಿದಂಥ ಕಾಗದ.
20.	ಸ್ಟಾಂಪುಗಳಿಗೆ ಸಂಬಂಧಿಸಿದ ಯಾವುದೇ ಕಾನೂನಿನ ಉಪಬಂಧುಗಳ ಮೇರೆಗೆ ಕ್ರಮ ಬದ್ಧವಾಗಿ ಅಧಿಕೃತರಾದ ವೆಂಡರುಗಳ ಮಾರಾಟ ಮಾಡಿದ ಸ್ಟಾಂಪ್ ಪೇಪರು.
20ಎ.	ಲಾಟರಿ ಟಿಕೆಟು

1	2
21.	ಇಂಗಾಲ ಮಿಶ್ರಿತ ಖನಿಜ ನೀರು ಡಿಸಿಲ್ಡ್ ನೀರು ಮತ್ತು ಮೊಹರು ಮಾಡಿದ ಧಾರಕಗಳಲ್ಲಿ ಮತ್ತು ಚೀಲಗಳಲ್ಲಿ ಮಾರಾಟ ಮಾಡುವ ಯಾವುದೇ ಇತರ ಸಂಸ್ಕರಿತ ನೀರನ್ನು ಹೊರತುಪಡಿಸಿದ ನೀರು.
22.	(i) ಕಮೀಷನರು ಮನ್ನಣೆ ಮಾಡಿದ ಶೈಕ್ಷಣಿಕ ಸಂಸ್ಥೆಗಳು ನಡೆಸುತ್ತಿರುವ ಕ್ಯಾಂಟೀನುಗಳು ಅಥವಾ ಹಾಸ್ಟೆಲುಗಳು ಮಾರಾಟ ಮಾಡಿದ, ಸರಬರಾಜು ಮಾಡಿದ ಅಥವಾ ವಿತರಣೆ ಮಾಡಿದ ಆಹಾರ ಮತ್ತು ಪಾನೀಯ ವಸ್ತುಗಳು. ಅಂಥ ವಸ್ತುಗಳನ್ನು ಸಂಬಂಧಪಟ್ಟ ಸಂಸ್ಥೆಯ ಸದಸ್ಯರುಗಳಿಗೆ ಅನನ್ಯವಾಗಿ ಮಾರಾಟ ಮಾಡಿದಾಗ, ಸರಬರಾಜು ಮಾಡಿದಾಗ ಅಥವಾ ವಿತರಣೆ ಮಾಡಿದಾಗ;
	(ii) ಕಮೀಷನರನು ಮನ್ನಣೆ ಮಾಡಿದ ಧರ್ಮಾರ್ಥ ಸಂಸ್ಥೆಯು ನಡೆಸುವ ಹಾಸ್ಟೆಲುಗಳು ಮಾರಾಟ ಮಾಡಿದ, ಸರಬರಾಜು ಮಾಡಿದ ಅಥವಾ ವಿತರಣೆ ಮಾಡಿದ ಆಹಾರ ಮತ್ತು ಪಾನೀಯ ವಸ್ತುಗಳು, ಅಂಥ ವಸ್ತುಗಳನ್ನು ಸಂಬಂಧಪಟ್ಟ ಹಾಸ್ಟೆಲುಗಳಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ಅನನ್ಯವಾಗಿ ಮಾರಾಟ ಮಾಡಿದಾಗ ಸರಬರಾಜು ಮಾಡಿದಾಗ ಅಥವಾ ವಿತರಣೆ ಮಾಡಿದಾಗ;
	(iii) ಕೇಂದ್ರ ಅಥವಾ ರಾಜ್ಯ ಸರ್ಕಾರದ ಕಚೇರಿಗಳಲ್ಲಿ ನಿಯೋಜಿತರಾದ ಸಿಬ್ಬಂದಿ ಸದಸ್ಯರುಗಳಿಗಾಗಿ ಲಾಭರಹಿತ ಆಧಾರದ ಮೇಲೆ ಒದಗಿಸಿದ ಸೌಕರ್ಯವೆಂದು ಕಮೀಷನರನು ಮನ್ನಣೆ ಮಾಡಿದ ಕ್ಯಾಂಟೀನುಗಳು ಮಾರಾಟ ಮಾಡಿದ ಸರಬರಾಜು ಮಾಡಿದ ಅಥವಾ ವಿತರಣೆ ಮಾಡಿದ ಆಹಾರ ಮತ್ತು ಪಾನೀಯ ವಸ್ತುಗಳು, ಅಂಥ ವಸ್ತುಗಳನ್ನು ಅಂಥ ಸದಸ್ಯರಿಗೆ ಮಾರಾಟ ಮಾಡಿದಾಗ, ಸರಬರಾಜು ಮಾಡಿದಾಗ ಅಥವಾ ವಿತರಣೆ ಮಾಡಿದಾಗ;
	(iv) ಕಾರ್ಖಾನೆಗಳ ಅಧಿನಿಯಮದ ಉಪಬಂಧಗಳ ಮೇರೆಗೆ ಲಾಭರಹಿತ ಆಧಾರದ ಮೇಲೆ ಕಾರ್ಖಾನೆಗಳ ಅಥವಾ ಸಂಸ್ಥೆಗಳ ನಿಯೋಜಿತರಾಗಿ ಒದಗಿಸಿದ ಸೌಕರ್ಯವೆಂಬಂತೆ ನಡೆಸಲಾಗುತ್ತಿರುವಂಥ ಕ್ಯಾಂಟೀನುಗಳು ಮಾರಾಟ ಮಾಡಿದ, ಸರಬರಾಜು ಮಾಡಿದ ಅಥವಾ ವಿತರಣೆ ಅಂಥ ನಿಯೋಜಿತರಾಗಿ ಮಾರಾಟ ಮಾಡಿದಾಗ, ಸರಬರಾಜು ಮಾಡಿದಾಗ ವಿತರಣೆ ಮಾಡಿದಾಗ;
	(v) ಇಲಾಖೆಯ ಅಥವಾ ನಿಯೋಜಿತರ ಸಹಕಾರ ಸಂಘಗಳು ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರವು ಸ್ಥಾಪಿಸಿದ ಸ್ಥಾಯಿತ್ತ ಅಥವಾ ಶಾಸನಬದ್ಧ ನಿಕಾಯಗಳು, ಅವುಗಳ ಸಿಬ್ಬಂದಿ ಸದಸ್ಯರಿಗಾಗಿ ಸೌಕರ್ಯವೆಂಬಂತೆ ನಡೆಸುತ್ತಿರುವ ಕ್ಯಾಂಟೀನುಗಳು , ಮಾರಾಟ ಮಾಡಿದ ಸರಬರಾಜು ಮಾಡಿದ ಅಥವಾ ವಿತರಣೆ ಮಾಡಿದ ಆಹಾರ ಮತ್ತು ಪಾನೀಯ ವಸ್ತುಗಳು.
23.	ದೇಶೀಯ ಎತ್ತಿನ ಗಾಡಿಗಳು ಮತ್ತು ಅವುಗಳ ಬಿಡಿ ಭಾಗಗಳು.

1	2

24. ಗೃಹ ಕೈಗಾರಿಕೆ ಎಂದರೆ ಕಾರ್ಖಾನೆಯಲ್ಲದ, ಮನೆಯಲ್ಲಿ ವ್ಯಕ್ತಿಯು ನಡೆಸುತ್ತಿರುವ ಯಾವುದೇ ಕೈಗಾರಿಕೆಯ ಉತ್ಪಾದಿತ ವಸ್ತುಗಳಾಗಿರುವಂಥ ಕೃಷಿ ಉಪಕರಣಗಳು.

25. ಕಮೀಷನರನು ಮನ್ನಣೆ ಮಾಡಿದ ರಾಜ್ಯದಲ್ಲಿನ ಗೃಹ ಕೈಗಾರಿಕಾ ಸಹಕಾರ ಸಂಘಗಳ ಸದಸ್ಯರು ಉತ್ಪಾದಿಸಿದ ವಸ್ತುಗಳು.

26. ತಾಳೆ ಬೆಲ್ಲ ಕೈಗಾರಿಕೆ ಮತ್ತು ಅಂಥ ವ್ಯಾಪಾರಿ ಸರಕುಗಳನ್ನು ಉತ್ಪಾದಿಸಿದ ರಾಜ್ಯದಲ್ಲಿನ ಸಹಕಾರ ಸಂಘಗಳು ಮಾರಾಟ ಮಾಡಿದ ತಾಳೆಗರಿಗಳಿಂದ ತಯಾರಿಸಿದ ಪೊರಕೆಗಳು ಬುಟ್ಟಿಗಳು, ಚಾಪೆಗಳು, ಬ್ರಶ್‌ಗಳು ಮತ್ತು ಬೀಸಣಿಕೆಗಳಂಥ ವಸ್ತುಗಳ ಉತ್ಪಾದನೆಗಳು.

27. ಸರ್ವ ಸೇವಾ ಸಂಘ ಮತ್ತು ಅದರ ಅಧಿಕೃತ ಏಜನ್ಸಿಗಳು ಮತ್ತು ಕರ್ನಾಟಕ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಅಥವಾ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗವು ಮಾರಾಟ ಮಾಡಿದ ನೂಲುವ ಮತ್ತು ಇತರ ಕುಶಲ ಸಾಧನ ಸಾಮಗ್ರಿಗಳು.

28. ಕಮೀಷನರನು ಮನ್ನಣೆ ಮಾಡಿದ ನಿಜವಾದ ಉತ್ಪಾದಕನು ಮಾರಾಟ ಮಾಡಿದಾಗ ನಿಯಮಿಸಿದ ಷರತ್ತುಗಳು ಮತ್ತು ಪರಿಮಿತಿಗಳನ್ನು ಪೂರೈಸುವಂಥ ನಿಯಮಿಸಿದ ಗ್ರಾಮ ಕೈಗಾರಿಕೆಗಳ ಉತ್ಪಾದನೆಗಳು.

29. (ಹೋಟಿಲುಗಳನ್ನು ಹೊರತುಪಡಿಸಿ) ಗೃಹೋಪಯೋಗಕ್ಕಾಗಿ ಮಾರಾಟ ಮಾಡಿದಾಗ ಸೌದೆ ಅಥವಾ ಇದ್ದಿಲು.

30. ಸ್ಲೇಟುಗಳು ಮತ್ತು ಬಳಪಗಳು.

31. ★ ★ ★ ★

31ಎ. ಹೊಗೆಸೊಪ್ಪು ಮತ್ತು ಅದರ ಎಲ್ಲಾ ಉತ್ಪಾದನೆಗಳು

31ಬಿ. 1957ರ ಹೆಚ್ಚುವರಿ ಅಬ್ಕಾರಿ ಶುಲ್ಕಗಳು ವಿಶೇಷ ಮಹತ್ವದ ಸರಕುಗಳು ಅಧಿನಿಯಮದ ಮೊದಲನೇ ಅನುಸೂಚಿಯ 3ನೇ ಅಂಕಣದಲ್ಲಿ ವಿವರಿಸಲಾದಂತೆ ಸಕ್ಕರೆ. ಆದರೆ ಮಿಠಾಯಿ ಮತ್ತು ಅಂಥವುಗಳನ್ನು ಹೊರತುಪಡಿಸಿ.

32. ★ ★ ★ ★

33. ವಿದ್ಯುಚ್ಛಕ್ತಿ

34. (i) ಭಾರತ ಸರ್ಕಾರ ಕ್ಯಾಂಟೀನ್ ಸ್ಟೋರ್‌ಗಳ ಇಲಾಖೆಗೆ ಮಾರಾಟ ಮಾಡಿದ ಕ್ಯಾಂಟೀನ್ ಸ್ಟೋರ್‌ಗಳು ಮತ್ತು ಸದರಿ ಇಲಾಖೆಗಳು ರನ್ ಕ್ಯಾಂಟೀನುಗಳಿಗೆ ಮಾರಾಟ ಮಾಡಿದ ಅಂಥ ಸ್ಟೋರುಗಳು.

1	2
	(ii) ರಾಜ್ಯದಲ್ಲಿನ ಸಶಸ್ತ್ರ ಬಲಗಳಿಗೆ ರೆಜಿಮೆಂಟ್ ಅಥವಾ ಯುನಿಟ್ ರನ್ ಕ್ಯಾಂಟೀನುಗಳು ಮಾರಾಟ ಮಾಡಿದ ಕ್ಯಾಂಟೀನ್ ಸ್ಟೋರುಗಳು, ಪರಂತು, ಭಾರತ ಸರ್ಕಾರದ ಕ್ಯಾಂಟೀನ್ ಸ್ಟೋರುಗಳ ಇಲಾಖೆಯಿಂದ ಪಡೆದಂಥವುಗಳಾಗಿರಬೇಕು ಮತ್ತು ಮಾರಾಟದ ಬೆಲೆಯು ಭಾರತ ಸರ್ಕಾರವು ನಿಗದಿ ಪಡಿಸಿದ ಮಾರಾಟದ ಬೆಲೆಯನ್ನು ಮೀರಕೂಡದು.
34ಎ.	ನೇಪಾಳದಲ್ಲಿ ಭಾರತದಿಂದ ನೆರವು ಪಡೆದ ಯೋಜನೆಗಳಿಗಾಗಿ ಅಗತ್ಯವೆಂಬುದಾಗಿ ಭಾರತ ನೆರವು ನಿಯೋಗ ಮಂಡಲಿ ನೇಪಾಳ ಇದರ ನಿರ್ದೇಶಕರು ಪ್ರಮಾಣೀಕರಿಸಿದ ಸದರಿ ಮಂಡಲಿಗೆ ಮಾರಾಟ ಮಾಡಿದ ಸರಕುಗಳು.
35.	ಓದುವುದಕ್ಕಾಗಿನ ಪುಸ್ತಕಗಳು.
36.	ಅವುಗಳ ಅಧಿಕೃತ ಉಪಯೋಗಕ್ಕಾಗಿ ವಿಶ್ವ ಆರೋಗ್ಯ ಸಂಸ್ಥೆ ಮತ್ತು ಸಂಯುಕ್ತ ರಾಷ್ಟ್ರಗಳ ಅಂತರರಾಷ್ಟ್ರೀಯ ತುರ್ತುನಿಧಿಗೆ ಮಾರಾಟ ಮಾಡಿದ ಸರಕುಗಳು.
36ಎ.	ಯುನಿಸಫ್ ಗ್ರೀಟಿಂಗ್ ಕಾರ್ಡ್‌ಗಳು ಮತ್ತು ಕಾಲೆಂಡರುಗಳು.
37.	ಬಾಳೆ ಎಲೆ ಮತ್ತು ಪತ್ರಾವಳಿ (ಊಟದ ಎಲೆಗಳು) ಮತ್ತು ಅದರ ಉತ್ಪನ್ನಗಳು.
38.	ಪ್ರತಿಯೊಂದಕ್ಕೆ ಒಂದು ನೂರು ರೂಪಾಯಿಗಳನ್ನು ಮೀರಿದ ಬೆಲೆಗೆ ಮಾರಾಟ ಮಾಡಿದಾಗ, ಕೈಮಗ್ಗಗಳಲ್ಲಿ ನೇಯ್ದ ಜಮಖಾನೆಗಳು.
38ಎ.	ದೇಶದ ಹೊರಗಿನಿಂದ ಆಮದು ಮಾಡಿಕೊಂಡವುಗಳನ್ನು ಹೊರತುಪಡಿಸಿ, ಕಚ್ಚಾರೇಷ್ಮೆ ನೂಲು ಸೇರಿದಂತೆ ಕಚ್ಚಾರೇಷ್ಮೆ ಮತ್ತು ರೇಷ್ಮೆ ನೂಲು (ಹುರಿ ಮಾಡಿದ ಅಥವಾ ತೋನ್ ರೇಷ್ಮೆ ನೂಲು, ಸ್ಪನ್ ಸಿಲ್ಕ್ ನೂಲು ಮತ್ತು ನೋಯೆಲಲ್ ರೇಷ್ಮೆ ನೂಲು) ಕೈಮಗ್ಗಗಳಲ್ಲಿ ನೇಯ್ದ ಜಮಖಾನೆಗಳು.
39.	ಕಮೀಷನರನು ಅಂಥವೆಂದು ಪ್ರಮಾಣೀಕರಿಸಿದ ಶೈಕ್ಷಣಿಕ ಚಲನಚಿತ್ರಗಳು.
40.	★ ★ ★ ★ ★
40ಎ.	ರಾಗಿ, ಜೋಳ ಅಥವಾ ಮಿಲೋ ಮುಸುಕಿನ ಜೋಳ, ಬತ್ತ, ಬಾಜ್ರಾ, ನವಣೆ, ಸಾಮೆ, ಕೊಡನ್ ಮತ್ತು ಕುಟುಕಿ.
41.	★ ★ ★ ★ ★
42.	ವೈದ್ಯಕೀಯ, ದಂತ, ಔಷಧಶಾಸ್ತ್ರ, ಪಶುವೈದ್ಯ, ಇಂಜಿನಿಯರಿಂಗ್ ಮತ್ತು ಕೃಷಿ ಶಿಕ್ಷಣ ಸಂಸ್ಥೆಗಳು ಮತ್ತು ಮೋಟಾರು ಚಾಲನ ಶಾಲೆಗಳು ಇವುಗಳನ್ನು ಹೊರತುಪಡಿಸಿ ರಾಜ್ಯಸರ್ಕಾರವು ಮನ್ನಣೆ ಮಾಡಿದ ಅಥವಾ ರಾಜ್ಯದಲ್ಲಿ ಕಾನೂನಿನ ಮೂಲಕ ಸ್ಥಾಪಿಸಿದ ವಿಶ್ವವಿದ್ಯಾಲಯಕ್ಕೆ ಸುಲಗ್ನಗೊಂಡ ಶೈಕ್ಷಣಿಕ ಸಂಸ್ಥೆಗಳಿಗೆ ಮಾರಾಟ ಮಾಡಿದ ಯಾಂತ್ರಿಕ ಬೋಧನಾ ಸಹಾಯಕಗಳು.

1	2
43.	ಗರ್ಭನಿರೋಧಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ಮುದ್ರಿತ ಜಾಹೀರಾತು ವಿಷಯಗಳು.
44.	ಪ್ರತಿಯೊಂದು ಬಾಬಿಗೆ ಇಪ್ಪತ್ತು ರೂಪಾಯಿಗಳಿಗಿಂತ ಹೆಚ್ಚಿಲ್ಲದ ಬೆಲೆಯುಳ್ಳ ಮಕ್ಕಳ ಆಟಿಕೆಗಳು.
44ಎ.	ವಿಷಲೇಪಿತ ಎಂಬುದಾಗಿ ಗುರುತು ಮಾಡಲಾಗಿರುವ ಪ್ರಮೋನಿಕೃತ ಮತ್ತು ಸಂಸ್ಕರಿಸಲಾದ ದ್ವಿದಳ ಧಾನ್ಯ ಬೀಜಗಳು ಮತ್ತು ಬೇಳೆಗಳು ಮತ್ತು ವಿಷಲೇಪಿತ ಎಂಬುದಾಗಿ ವ್ಯಾಪಕವಾಗಿ ಪಟ್ಟಿ ಮಾಡಿರುವ ದ್ವಿದಳ ಧಾನ್ಯಗಳ ಬೀಜಗಳು ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳ ಬೀಜಗಳು (ವಿಷಪೂರಿತವೆಂದು ಗುರುತಿಸಿರಲಿ ಅಥವಾ ಇಲ್ಲದಿರಲಿ)
44ಬಿ.	ಹೂಬೀಜಗಳು ಮತ್ತು ಹುಲ್ಲು ಬೀಜಗಳು (ವಿಷಪೂರಿತ)
45.	ನೇಗಿಲನ್ನು ಒಳಗೊಂಡ ಕೈಯಿಂದ ನಡೆಸುವ ಅಥವಾ ಪ್ರಾಣಿಯು ಎಳೆಯುವ ಎಲ್ಲ ಕೃಷಿ ಉಪಕರಣಗಳು, ಬೀಜ ಹಾಗೂ ರಸಗೊಬ್ಬರ ಕೂರಿಕೆಗಳು , ಕೀಟನಾಶಕಗಳು ಮತ್ತು ಕ್ರಿಮಿನಾಶಕಗಳನ್ನು ಬೀಜ ಹಾಗೂ ರಸಗೊಬ್ಬರ ಕೂರಿಕೆಗಳು , ಕೀಟನಾಶಕಗಳು ಮತ್ತು ಕ್ರಿಮಿನಾಶಕಗಳನ್ನು ಉದುರಿಸುವುದಕ್ಕಾಗಿ ಅಥವಾ ಸಿಂಪಡಿಸುವುದಕ್ಕಾಗಿ ಉಪಯೋಗಿಸುವ ಡಸ್ಟರುಗಳು ಮತ್ತು ಸ್ಪೇಯರುಗಳು (ಮೋಟಾರುಗಳಿಂದ ಚಾಲಿತವಾದವುಗಳನ್ನು ಹೊರತುಪಡಿಸಿ) ಪಿಕಾಸಿಗಳು , ಮಮಟಿಗಳು ಮತ್ತು ಅಂಥವು.
46.	ಗೋಬರ್ ಗ್ಯಾಸ್ ಸ್ಥಿರ ಯಂತ್ರಗಳು ಮತ್ತು ಅವುಗಳ ಭಾಗಗಳು, ಉಪಸಾಧನಗಳು.
47.	ಹೆಂಡ.
47ಎ.	ಸಾರಾಯಿ.
48.	ಅಂಗವಿಕಲ ವ್ಯಕ್ತಿಗಳಾಗಿ ರೂಪಿಸಿದ ಕೈಯಿಂದ ನಡೆಸುವ ಟ್ರೈಸಿಕಲ್‌ಗಳು.
49.	ಕುದುರೆಗಳನ್ನು ಹೊರತುಪಡಿಸಿ ಅದರೆ ಕೋಳಿಗಳನ್ನು ಪಶುಸಂಪತ್ತು.
	ವಿವರಣೆ: 28ನೇ ಬಾಬಿನಲ್ಲಿ
ಎ.	★ ★ ★ ★ ★
ಬಿ.	ನಿಜ ಉತ್ಪಾದಕನು ಗ್ರಾಮೋದ್ಯೋಗದ ಉತ್ಪಾದನೆಗಳಲ್ಲದಂಥ ಯಾವುದೇ ಸರಕುಗಳನ್ನು ಉತ್ಪಾದಿಸುವ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.
	ವಿವರಣೆ
50.	ರಾಷ್ಟ್ರಧ್ವಜಗಳು

1	2
51.	ವೀರ್ಯ
52.	ಸಂಗೀತವಾದ್ಯಗಳು (ಎಲೆಕ್ಟ್ರಾನಿಕ್ ಸಂಗೀತ ವಾದ್ಯಗಳನ್ನು ಹೊರತುಪಡಿಸಿ)
53.	ಸೌದೆ ಒಲೆಗಳು ಅದರ ಭಾಗಗಳು ಮತ್ತು ಬಿಡಿ ಭಾಗಗಳು
54.	ಅಂಗವಿಕಲರು ಮತ್ತು ಕಾಯಿಲೆ ವ್ಯಕ್ತಿಗಳು ಬಳಸುವ ವೀಲ್ ಕುರ್ಚಿಗಳು ಮತ್ತು ಕ್ರಚ್‌ಗಳು
55.	ಮನುಷ್ಯರ ನಿರುಪಯುಕ್ತ ಕೂದಲು
55 (ಎ).	ಮೂಳೆಗಳು ಮತ್ತು ಕೊಂಬುಗಳು
56.	ಜೈವಿಕ ಗೊಬ್ಬರಗಳು
57.	ಗೋಧಿ ಮತ್ತು ಆಟ್ಟಾ, ಮೈದಾ ಮತ್ತು ಗೋಧಿ ರವೆ
58.	ಕಂಪೋಸ್ಟ್ ಗೊಬ್ಬರ, ಸಾವಯವ ಗೊಬ್ಬರ, ಮೀನು ಗೊಬ್ಬರ, ಕೋಳಿಗೊಬ್ಬರ
59.	ಎಳನೀರು
60.	ಕ್ಯಾಂಡಲುಗಳು
61.	ಬೈಲ್ ವಾಚುಗಳು
62.	ಜೇನು ಸಾಕಾಣಿ ಪೆಟ್ಟಿಗೆಗಳು
63.	ಜೈವಿಕ ನಿಯಂತ್ರಣ ಏಜೆಂಟುಗಳು ಎಂದರೆ ಪ್ಯಾರಾಸಿಟಾಯ್ಡ್‌ಗಳು, ಪ್ರಿಡೇಟರುಗಳು, ಪ್ಯಾಥೋಜನ್‌ಗಳು ಮತ್ತು ಫರ್ಮೋನುಗಳು
64.	ಕೃತಕ ಕಾಲುಗಳು
65.	ಶ್ರವಣ ಸಾಧನಗಳು, ಸ್ಪೀಚ್ ಟ್ರೈನರುಗಳು ಮತ್ತು ಅವುಗಳ ಭಾಗಗಳು
66.	ನಾಡ ಇಟ್ಟಿಗೆಗಳು ಮತ್ತು ನಾಡ ಹೆಂಚಗಳು
67.	ಫ್ಲ್ಯಾಟ್ ಪ್ಲೇಟ್ ಸೋಲಾರ್ ಕಲೆಕ್ಟರುಗಳು, ಕಾಂನನ್‌ಟ್ರೇಟಿಂಗ್ ಮತ್ತು ಟೈಪ್ ಟೈಪ್ ಸೋಲಾರ್ ಕಲೆಕ್ಟರುಗಳು, ಸೋಲಾರ್ ಕುಕ್ಕರುಗಳು, ಸೋಲಾರ್ ವಾಟರ್ ಹೀಟರುಗಳು ಮತ್ತು ಸಿಸ್ಟಂಗಳು, ಸೋಲಾರ್ ಶಕ್ತಿಯ ಬಳಕೆಯ ಮೇಲೆ ಆಧರಿತವಾದ ಗಾಳಿ/ ಅನಿಲ/ ದ್ರವ ಸೀಟಿಂಗ್ ವ್ಯವಸ್ಥೆಗಳು, ಸೋಲಾರ್ ಕ್ರಾಪ್ ಡ್ರೈಯರುಗಳು ಮತ್ತು ಸಿಸ್ಟಂಗಳು, ಸೋಲಾರ್ ಸ್ಟೀಲ್‌ಗಳು ಮತ್ತು ಕ್ಷಾರ ನಿವಾರಣ ಸಿಸ್ಟಂಗಳು, ಸೋಲಾರ್ ಥರ್ಮಲ್ ಮತ್ತು ಸೋಲಾರ್ ಫೋಟೋ ವೋಲ್ಟೈಕ್ ಕನ್‌ವರ್ಷನ್ ಮೇಲೆ ಆಧಾರಿತ ಸೋಲಾರ್ ಪಂಪುಗಳು, ವಾಟರ್ ಪಂಪಿಂಗ್‌ಗಾಗಿ ಸೋಲಾರ್ ಫೋಟೋವೋಲ್ಟೈಕ್ ಮಾಡ್ಯೂಲ್‌ಗಳು ಮತ್ತು ಪೇನಲ್‌ಗಳು ಮತ್ತು ಇತರ ಬಳಕೆಗಳು

1	2
68.	ವಿಂಡ್ ಮಿಲ್ಲುಗಳು ಮತ್ತು ವಾಯುಶಕ್ತಿಯಿಂದ ನಡೆಸಲಾಗುವ ವಿದ್ಯುತ್ ಜನರೇಟರುಗಳು ಮತ್ತು ಪಂಪುಗಳು ಸೇರಿದಂತೆ ವಿಂಡ್ ಮಿಲ್ಲುಗಳಿಂದ ನಡೆಯುವ ವಿಶೇಷವಾಗಿ ರೂಪಿಸಲಾದ ಸಾಧನಗಳು
69.	ಸಾಗರ ಅಲೆಗಳು ಮತ್ತು ಸಾಗರಗಳಲ್ಲಿ ಶಾಖೋತ್ಪನ್ನ ಶಕ್ತಿಯನ್ನು ಬಳಸಿಕೊಳ್ಳುವ ಉಪಕರಣಗಳು
70.	ಕರ್ನಾಟಕದ ಸ್ಪಾಸ್ಟಿಕ್ ಸೊಸೈಟಿಗಳು ಮಾಡುವ ಮಾರಾಟಗಳು

ಆರನೇ ಅನುಸೂಚಿ

1	2	3
1.	ಸ್ಥಿರಯಂತ್ರ ಮತ್ತು ಯಂತ್ರ ಸಾಮಗ್ರಿಯ ನಿರ್ಮಾಣ ಮತ್ತು ಸ್ಥಾಪನೆ	8
3.	ಕ್ರೇನುಗಳು ಮತ್ತು ಎತ್ತಿಗೆಗಳ ನಿರ್ಮಾಣ ಮತ್ತು ಸ್ಥಾಪನೆ	8
4.	ಎಲಿವೇಟರುಗಳು (ಲಿಫ್ಟ್‌ಗಳು) ಮತ್ತು ಎಸ್ಕಲೇಟರುಗಳು ನಿರ್ಮಾಣ ಮತ್ತು ಸ್ಥಾಪನೆ	12
5.	ರೋಲಿಂಗ್ ಷಟರುಗಳು ಮತ್ತು ಮಡಿಸಲಾಗುವ ಗೇಟುಗಳ ನಿರ್ಮಾಣ ಮತ್ತು ಸ್ಥಾಪನೆ	8
6.	ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಇತ್ಯಾದಿಗಳ ನಿರ್ಮಾಣಗಳಂಥ ಸಿವಿಲ್ ಕಾಮಗಾರಿಗಳು	8
7.	ಬಾಗಿಲುಗಳು, ಬಾಗಿಲು, ಚೌಕಟ್ಟುಗಳು, ಕಿಟಕಿಗಳು, ಕಿಟಕಿಗಳ ಚೌಕಟ್ಟುಗಳು ಮತ್ತು ಗ್ರಿಲ್‌ಗಳ ಸ್ಥಾಪನೆ	8
8.	(i) ಮೊಸಾಯಿಕ್ ಟೈಲುಗಳ ಸರಬರಾಜು ಮಾಡುವುದು ಮತ್ತು ಕೂಡಿಸುವುದು	12
	(ii) ಅಮೃತ ಶಿಲೆಯ ಚಪ್ಪಡಿ, ಪಾಲಿಶ್ ಮಾಡಿದ ಗ್ರಾನೈಟ್ ಕಲ್ಲು ಮತ್ತು ಟೈಲುಗಳ (ಮೊಸಾಯಿಕ್ ಟೈಲುಗಳನ್ನು ಬಿಟ್ಟು) ಸರಬರಾಜು ಮಾಡುವುದು	12
9.	ಹವಾ ನಿಯಂತ್ರಣ ಉಪಕರಣಗಳು, ಡೀಪ್ ಫ್ರಿಜರ್‌ಗಳನ್ನೊಳಗೊಂಡಂತೆ ಶೈತ್ಯಗಾರ ಸ್ಥಿರಯಂತ್ರಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು	12
10.	ಹವಾನಿಯಂತ್ರಕಗಳು ಮತ್ತು ಹವಾ ಶೀತಕಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು.	12

1	2	3
11.	ವಿದ್ಯುತ್ ಸರಕುಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು ಟ್ರಾನ್ಸ್‌ಫಾರ್ಮರುಗಳನ್ನು ಒಳಗೊಂಡು ವಿದ್ಯುತ್ ಸಾಧನ ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ	
12.	ಒಳ ಅಲಂಕಾರಗಳಿಗಾಗಿನ ಕರಾರುಗಳನ್ನು ಒಳಗೊಂಡು ಪೀಠೋಪಕರಣಗಳು ಮತ್ತು ಜೋಡಣೆಗಳು, ವಿಭಾಗಕಗಳನ್ನು ಸರಬರಾಜು ಮಾಡುವುದು ಮತ್ತು ಜೋಡಿಸುವುದು	12
13.	ರೈಲ್ವೆಗಳು ಸರಬರಾಜು ಮಾಡಿದ ಕೆಳಗಾಡಿಗಳ ಮೇಲೆ ರೈಲ್ವೆ ಕೋಚ್‌ಗಳ ನಿರ್ಮಾಣ	8
14.	ಹರಿಗೋಲುಗಳು, ದೋಣಿಗಳು, ಜಗ್ಗುಹಡಗುಗಳು, ಬಲೆ ದೋಣಿಗಳು ಮತ್ತು ಹೂಳೆತ್ತುವ ಯಂತ್ರಗಳ ನಿರ್ಮಾಣವನ್ನು ಒಳಗೊಂಡು ಹಡಗು ಮತ್ತು ದೋಣಿಯನ್ನು ನಿರ್ಮಿಸುವುದು	8
15.	ಕೊಳಾಯಿ ಕೆಲಸಕ್ಕಾಗಿ, ಚರಂಡಿ ವ್ಯವಸ್ಥೆ ಇತ್ಯಾದಿಗಳಿಗಾಗಿ ನೈರ್ಮಲ್ಯ ಜೋಡಣೆಗಳು	8
16.	ಬಣ್ಣ ಬಳಿಯುವುದು ಮತ್ತು ಹೊಳಪು ಮಾಡುವುದು	12
17.	ವಿಮಾನಗಳು ಮತ್ತು ಹೆಲಿಕಾಪ್ಟರುಗಳ ನಿರ್ಮಾಣ, ದುರಸ್ತಿ, ಮೇಲ್ಪಾಟು ಮತ್ತು ಪೂರ್ಣ ದುರಸ್ತಿ.	12
18.	ಮೋಟಾರು ವಾಹನಗಳ ಬಾಡಿಗಳ ನಿರ್ಮಾಣ ಮತ್ತು ಟ್ರೈಲರುಗಳ ನಿರ್ಮಾಣ	12
19.	ಸ್ಥಿರ ಯಂತ್ರ ಮತ್ತು ಯಂತ್ರಗಳ ಉಪಕರಣಗಳು, ಸಾಮಗ್ರಿಗಳು ಮತ್ತು ಕಟ್ಟಡಗಳನ್ನು ಇನ್ಸುಲೇಟ್ (ಅವಾಹಕಗೋಳಿಸುವುದು) ಮತ್ತು ಲೈನಿಂಗ್ ಮಾಡುವುದು.	8
20.	(i) ಪೈಪುಗಳ (ಸ್ಟೀಲ್ ಪೈಪುಗಳನ್ನು ಬಿಟ್ಟು) ಸರಬರಾಜು ಮಾಡುವಿಕೆ ಮತ್ತು ಹಾಯಿಸಿವಿಕೆ (ಕೊಳಾಯಿ ಕೆಲಸ ಚರಂಡಿ ವ್ಯವಸ್ಥೆ, ಇತ್ಯಾದಿ, ನೈರ್ಮಲ್ಯ ಜೋಡಣೆಗಳನ್ನು ಹೊರತುಪಡಿಸಿ	
21.	ಸ್ಥಿರ ಯಂತ್ರ, ಯಂತ್ರೋಪಕರಣಗಳು ಮತ್ತು ಸಾಮಗ್ರಿಗಳ ಪೂರ್ಣ ಸೇವೆ ಮತ್ತು ನಿರ್ವಹಣೆ	8
24.	ಟೈರ್ ರೀಟ್ರೇಡಿಂಗ್ ಮಾಡವುದು	8
25.	ಛಾಯಾ ಚಿತ್ರ, ಮುದ್ರಿತ ಛಾಯಾ ಚಿತ್ರಗಳ ಸಂಸ್ಕರಣೆ ಮತ್ತು ಸರಬರಾಜು	8

1	2	3
26.	ಎಲೆಕ್ಟ್ರಾನಿಕ್ ಉಪಕರಣಗಳು, ಸಾಮಗ್ರಿಗಳು, ಸಲಕರಣೆಗಳು ಮತ್ತು ಸಾಧನಗಳ ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು	8
27.	ಅಗ್ನಿಶಾಮಕ ಉಪಕರಣಗಳು ಮತ್ತು ಸಾಧನಗಳ ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು	8
30.	ಲ್ಯಾಮಿನೇಷನ್ ಮತ್ತು ರಬ್ಬರೀಕರಣ, ಲೇಪಿಸುವಿಕೆ ಮತ್ತು ಇತರೆ ಸಂಸ್ಕರಣೆಗಳು	8
31.	ಮುದ್ರಣ ಮತ್ತು ಅಚ್ಚುಗಳನ್ನು ಮಾಡುವುದು	8
32.	ತೂಕ ಮಾಡುವ ಯಂತ್ರಗಳ ಹಾಗೂ ತೂಕ ಮಾಡುವ ಸೇತುವೆಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು	8
33.	ಸಬರ್ಸಿಬಲ್ ಮತ್ತು ಸೆಂಟ್ರಿಫ್ಯೂಗಲ್ ಮೋಟಾರು ಪಂಪುಸೆಟ್ಟುಗಳನ್ನು ಸರಬರಾಜು ಮಾಡುವುದು ಮತ್ತು ಸ್ಥಾಪಿಸುವುದು	8
34.	ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಮುದ್ರಿಸುವುದು.	8
35.	ಮೋಟಾರು ವಾಹನಗಳ ಮೇಲೆ ಟ್ಯಾಂಕರುಗಳನ್ನು ನಿರ್ಮಿಸುವುದು.	8
36.	ವೆನಿಶಿಯನ್ ಬ್ಲೈಂಡ್ ಮತ್ತು ಪರದೆಗಳನ್ನು ಒಳಗೊಂಡಂತೆ ಬಾಗಿಲುಗಳಿಗೆ ಮತ್ತು ಕಿಟಕಿಗಳ ಪರದೆಗಳನ್ನು ಸರಬರಾಜು ಮಾಡಿ ಜೋಡಿಸುವುದು.	8
39.	ಶಬ್ದ ನಿವಾರಕಗಳು (ಅಕೌಸ್ಟಿಕ್ ಇನ್ಸುಲೇಷನ್) ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳು	8
40.	ಕೂಲಿಂಗ್ ಟವರುಗಳ ಸರಬರಾಜು ಮತ್ತು ಸ್ಥಾಪನೆ	12
41.	ಜೆಲ್ಲಿ ಕಲ್ಲುಗಳ ಸರಬರಾಜು ಮತ್ತು ಸ್ಥಾಪನೆ.	12
42.	ಎಲೆಕ್ಟ್ರಿಕ್ ಮೋಟಾರುಗಳ ರೀ-ವೈಂಡಿಂಗ್	8
43.	ಆರನೇ ಅನುಸೂಚಿಯಲ್ಲಿ ಬೇರೆಲ್ಲಿಯೂ ನಮೂದಿಸದೇ ಇರುವ ಇತರೆ ಗುತ್ತಿಗೆ ಕಾಮಗಾರಿಗಳು.	8
44.	ಆರನೇ ಅನುಸೂಚಿಯಲ್ಲಿ ಇರುವ 2 ಅಥವಾ ಹೆಚ್ಚಿನ ರೀತಿಯ ಗುತ್ತಿಗೆಗಳನ್ನು ಒಳಗೊಂಡ ಸಂಯುಕ್ತ ಕಾಮಗಾರಿಗಳು	8
	ಎಂಟನೇ ಅನುಸೂಚಿ	
1.	ಹೆಂಡ, ಸಾರಾಯಿ, ವೈನ್ ಮತ್ತು ಫೆನ್ನಿಯನ್ನು ಹೊರತುಪಡಿಸಿ ಮಾನವ ಸೇವನೆಗೆ ಅರ್ಹವಾದ ಇತರೆ ಮದ್ಯಗಳು	8

ಅನುಬಂಧ - III

ಕರ್ನಾಟಕ ವಿಧಾನ ಸಭೆ

ಹತ್ತನೇಯ ವಿಧಾನ ಸಭೆ

(ಏಳನೇ ಅಧಿವೇಶನ)

ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 1998

(1998ರ ವಿಧಾನ ಸಭಾ ವಿಧೇಯಕ ಸಂಖ್ಯೆ 8)

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-(1) ಈ ಅಧಿನಿಯಮವನ್ನು ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು 1998ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 3ಬಿ ಪ್ರಕರಣದ ತಿದ್ದುಪಡಿ.-(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗುವ) ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 3ಬಿ ಪ್ರಕರಣದಲ್ಲಿ,-

(ಎ) (1)ನೇ ಉಪ-ಪ್ರಕರಣದಲ್ಲಿ,-

(i) "ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ" ಎಂಬ ಪದಗಳಿಗೆ "ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದಲ್ಲಿ ಬಂಡವಾಳವನ್ನು ಉಪಯೋಗಿಸುವ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) "ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಗಳೊಳಗೆ ಇರುವ"-ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(iii) "ವಿಧಿಸತಕ್ಕದು" ಎಂಬ ಪದಗಳಿಗೆ "1998ರ ಏಪ್ರಿಲ್ ಒಂದನೇ ದಿನದಿಂದ ಎರಡು ವರ್ಷಗಳ ಅವಧಿಗೆ" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.

(ಬ) ಕೊನೆಯಲ್ಲಿರುವ ವಿವರಣೆಯನ್ನು ಬಿಟ್ಟುಬಿಡತಕ್ಕದ್ದು.

3. 9ನೇ ಪ್ರಕರಣದ ತಿದ್ದುಪಡಿ.-ಮೂಲ ಅಧಿನಿಯಮದ 9ನೇ ಪ್ರಕರಣದಲ್ಲಿ,-(1) (1)ನೇ ಉಪ-ಪ್ರಕರಣದಲ್ಲಿ,-

(i) (ಎ) ಖಂಡದಲ್ಲಿ "ಉತ್ತರಾನ್ವೇಷಣೆಯಾಗಿಯೇ ಆಗಲಿ ಅಥವಾ ಪೂರ್ವಾನ್ವಯವಾಗಿಯೇ ಆಗಲಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು" ಎಂಬ ಪದಗಳಿಗೆ "ಶೇಕಡ ಐವತ್ತರವರೆಗೆ ಕಡಿಮೆ ಮಾಡಬಹುದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಎ) ಖಂಡದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ: "ಪರಂತು ರಾಜ್ಯ ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಲ್ಲಿ,-

(i) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆಗಳು ಸಂಕೀರ್ಣ ಉಪಬಂಧಗಳ ಅಧಿನಿಯಮ 1974ರಲ್ಲಿ (1975ರ ಅಧಿನಿಯಮ 2) ಪರಿಭಾಷಿಸಲಾದಂತೆ, ಯಾರೇ ವ್ಯಕ್ತಿಯು ಕೃಷಿ ಉದ್ದೇಶಕ್ಕಾಗಿ; ಮತ್ತು

(ii) ಸಾರ್ವಜನಿಕ ವಲಯ ಉದ್ಯಮವು ಅದು ಸ್ಥಾಪಿತವಾದ ಉದ್ದೇಶಕ್ಕಾಗಿ ಸಾಲ ಪಡೆಯಲು ಬರೆದಿಕೊಡಲಾದ ಲಿಖಿತ ಪತ್ರದ ಮೇಲೆ ಸಂದಾಯ ಮಾಡತಕ್ಕ ಸಂಪೂರ್ಣ ಸ್ಟ್ಯಾಂಪ್ ಶುಲ್ಕವನ್ನು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು .

(2) (1)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:- "(1ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ ಸ್ಟ್ಯಾಂಪ್ ಶುಲ್ಕವನ್ನು ಕಡಿಮೆ ಮಾಡುವುದನ್ನು ಅಥವಾ ಮಾಫಿ ಮಾಡುವುದನ್ನು, (1)ನೇ ಉಪ-ಪ್ರಕರಣಕ್ಕೆ ಅನುಸಾರವಾಗಿ ಅಧಿಸೂಚಿಸಿದ ಹೊರತು ಅನುಮತಿಸತಕ್ಕದ್ದಲ್ಲ.

4. 45ಎ ಪ್ರಕರಣದ ತಿದ್ದುಪಡಿ.-ಮೂಲ ಅಧಿನಿಯಮದ 45ಎ ಪ್ರಕರಣದಲ್ಲಿ ಅಥವಾ ಪಾಲುಗಾರಿಕೆಯ ವಿಘಟನೆ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲ, 5ನೇ ಅನುಚ್ಛೇದದ (ಇ) ಮತ್ತು (ಎಫ್) ಖಂಡದ (1)ನೇ ಉಪ-ಖಂಡದ ಅಡಿಯಲ್ಲಿ ಒಳಗೊಳ್ಳುವ ಪಾಲುಗಾರಿಕೆಯ ವಿಘಟನೆ, ಒಂದು ಮಾರಾಟ ಒಪ್ಪಂದ, 30ನೇ ಅನುಚ್ಛೇದದ (1)ನೇ ಖಂಡದ (ಎ) ಉಪ-ಖಂಡದ (i)ನೇ ಬಾಬಿನ, (ಬಿ) ಉಪ-ಖಂಡದ (ii)ನೇ ಬಾಬಿನ, (ಸಿ) ಉಪ-ಖಂಡದ (ii)ನೇ ಬಾಬಿನ ಅಡಿಯಲ್ಲಿ ಒಳಗೊಳ್ಳುವ ಒಂದು ಗೇಣಿ ಅಥವಾ 41ನೇ ಅನುಚ್ಛೇದದ (ಇ ಎ) ಅಥವಾ (ಇಬಿ) ಖಂಡದಲ್ಲಿ ಒಳಗೊಳ್ಳುವ ಒಂದು ಅಧಿಕಾರಪತ್ರ" ಎಂಬ ಪದಗಳನ್ನು ಅರ್ಧವಿರಾಮಗಳನ್ನು ಆವರಣಗಳನ್ನು, ಅಂಕಿಗಳನ್ನು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

5. ಅನುಸೂಚಿಯ ತಿದ್ದುಪಡಿ.- ಮೂಲ ಅಧಿನಿಯಮದ ಅನುಸೂಚಿಯಲ್ಲಿ, (1) 5ನೇ ಅನುಚ್ಛೇದದಲ್ಲಿ

(ಎ) (ಎಫ್) ಖಂಡದಲ್ಲಿ 3ನೇ ಅಂಕಣದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''ಒಪ್ಪಂದದ ವಿಷಯವಾಗಿರುವಂಥ ಸ್ವತ್ತಿನ ಮಾರುಕಟ್ಟೆ ಬೆಲೆ ಮೇಲೆ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ನಾಲ್ಕು ರೂಪಾಯಿ ಆದರೆ, ಗರಿಷ್ಠ ನಾಲ್ಕು ಲಕ್ಷ ರೂಪಾಯಿಗಳಿಗೆ ಒಳಪಟ್ಟು''

(ಬ) ವಿವರಣೆ (1)ನ್ನು ಬಿಟ್ಟುಬಿಡತಕ್ಕದ್ದು.

(2) 6ನೇ ಅನುಚ್ಛೇದ (2)ನೇ ಖಂಡದ 3ನೇ ಅಂಕಣದಲ್ಲಿ ಈ ಮುಂದಿನ ಪರಂತುಕವನ್ನು ಕೊನೆಯಲ್ಲಿ ಸೇರಿಸತಕ್ಕದ್ದು ಎಂದರೆ:-

''ಪರಂತು, ಸಾಲದ ರೂಪದಲ್ಲಿ ಈಗಾಗಲೇ ಕೊಟ್ಟ ಹಣದ ಮರುಸಂದಾಯಕ್ಕಾಗಿ ಅವೇ ಪಕ್ಷಕಾರರ ನಡುವೆ ಮತ್ತು ಅದೇ ಉದ್ದೇಶಕ್ಕಾಗಿ ಮತ್ತು ಅದೇ ಮೊಬಲಗಿಗಾಗಿ ಹೊಸದಾಗಿ ಚರ ಸ್ವತ್ತಿನ ಅಡಮಾನದ ಗಿರವಿಯ ಅಥವಾ ಒತ್ತೆಯ ಲಿಖಿತ ಪತ್ರವನ್ನು ಬರೆದುಕೊಡಲಾಗಿದ್ದರೆ ಮತ್ತು ಹಿಂದಿನ ಲಿಖಿತ ಪತ್ರದ ಸಂಬಂಧದಲ್ಲಿ ಶುಲ್ಕವನ್ನು ಸಂದಾಯ ಮಾಡಿದ್ದರೆ, ಅಂಥ ಹೊಸ ಲಿಖಿತ ಪತ್ರದ ಮೇಲೆ ವಿಧಿಸಬಹುದಾದ ಶುಲ್ಕವು ಈ ಅನುಸೂಚಿಯ ಅನುಚ್ಛೇದ (5) (1)ರ ಮೇರೆಗೆ ವಿಧಿಸತಕ್ಕದ್ದಾಗಿರುತ್ತದೆ''.

ಅನುಚ್ಛೇದ 30ರಲ್ಲಿ,-

(1) ಖಂಡ (1)ರಲ್ಲಿ

(ಎ) (ಎ) ಉಪ-ಖಂಡದಲ್ಲಿ (i)ರಿಂದ (iii)ರವರೆಗಿನ ಬಾಬುಗಳಿಗೆ ಈ ಮುಂದಿನವುಗಳನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(1) ಗೇಣಿಯ, ಅವಲಂಬಿತ ಅಥವಾ ಇತರ ರೀತಿಯ ನವೀಕರಣ ಖಂಡದಿಂದ ಕೂಡಿದ ಅಥವಾ ಕೂಡಿಲ್ಲದ, ಹತ್ತು ವರ್ಷಗಳಿಗೆ ಮೀರಿದ ಅವಧಿಗಾಗಿ ಅಥವಾ ಶಾಶ್ವತ ಅವಧಿಗಾಗಿ ಇರುವುದೆಂದು ತಾತ್ಪರ್ಯ ವಾಗುವಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಾಗಿ ಇರುವುದೆಂದು ತಾತ್ಪರ್ಯ ವಾಗದಿರುವಲ್ಲಿ	ಗೇಣಿಯ ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಮೇಲೆ ಪ್ರತಿ ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐದು ರೂಪಾಯಿ.

(ಬ) (ಬಿ) ಮತ್ತು (ಸಿ) ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಬಿ) ಜುಲ್ಮಾನೆಗಾಗಿ ಅಥವಾ ಪ್ರೀಮಿಯಂ ಗಾಗಿ ಅಥವಾ ಸಾಲ ಕೊಟ್ಟ ಹಣಕ್ಕಾಗಿ ಗೇಣಿಗೆ ಕೊಟ್ಟಿದ್ದಲ್ಲಿ ಮತ್ತು ಯಾವುದೇ ಬಾಡಿಗೆಯನ್ನು ಕಾಯ್ದಿರಿಸದೆ ಇರುವಲ್ಲಿ	
(i) ಗೇಣಿಯು ಹತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯ ವಾಗುವಲ್ಲಿ,	ಗೇಣಿಯಲ್ಲಿ ವಿವರಿಸಲಾದಂಥ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ಸಾಲದ ಮೊಬಲಗು ಅಥವಾ ಬೆಲೆಗೆ ಸಮನಾದ

	ಮಾರುಕಟ್ಟೆ ಬೆಲೆಗಾಗಿನ ಹಸ್ತಾಂತರಣ ಅನುಚ್ಛೇದ ಸಂಖ್ಯೆ 20ರ ಖಂಡ (1) ಎಂಬಂತೆ ಅದೇ ಶುಲ್ಕ.
(ii) ಗೇಣಿಯು ಅವಲಂಬಿತ ಅಥವಾ ಇತರ ರೀತಿಯ ನವೀಕರಣ ಖಂಡದಿಂದ ಕೂಡಿದ ಅಥವಾ ಕೂಡಿಲ್ಲದ, ಹತ್ತು ವರ್ಷಗಳಿಗೆ ಮೀರಿದ ಅವಧಿಗಾಗಿ ಅಥವಾ ಶಾಶ್ವತ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗುವಲ್ಲಿ ಅಥವಾ ಯಾವುದೇ ನಿರ್ದಿಷ್ಟ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗದಿರುವಲ್ಲಿ	ಗೇಣಿಯ ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಬೆಲೆಯ ಮೇಲೆ ಪ್ರತಿ ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐದು ರೂಪಾಯಿ.
(ಸಿ) ಗೇಣಿಯನ್ನು ಜುಲ್ಮಾನೆಗಾಗಿ ಅಥವಾ ಪ್ರೀಮಿಯಂಗಾಗಿ ಅಥವಾ ಸಾಲ ಕೊಟ್ಟ ಹಣಕ್ಕಾಗಿ ಕಾಯ್ದಿರಿಸಲಾದ ಬಾಡಿಗೆಯ ಜೊತೆಗೆ ಕೊಟ್ಟಿದ್ದಲ್ಲಿ-	
(i) ಗೇಣಿಯು ಹತ್ತು ವರ್ಷಗಳಿಗೆ ಮೀರದ ಅವಧಿಗೆ ಇರುವುದೆಂದು ತಾತ್ಪರ್ಯವಾಗುವಲ್ಲಿ	ಯಾವುದೇ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ಸಾಲವನ್ನು ಸಂದಾಯ ಮಾಡದಿದ್ದರೆ ಅಥವಾ ವಶಾವಣೆ ಮಾಡದಿದ್ದರೆ ಅಂಥ ಗೇಣಿಯ ಮೇಲೆ ಸಂದಾಯ ಮಾಡಬಹುದಾಗಿದ್ದಂಥ ಶುಲ್ಕದ ಜೊತೆಗೆ, ಗೇಣಿಯಲ್ಲಿ ಹೇಳಲಾದಂತೆ ಅಂಥ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ಸಾಲದ ಮೊಬಲಗು ಅಥವಾ ಬೆಲೆಗೆ ಸಮನಾದ ಮಾರುಕಟ್ಟೆ ಬೆಲೆಗಾಗಿನ ಹಸ್ತಾಂತರಣ (ಅನುಚ್ಛೇದ ಸಂಖ್ಯೆ 20ರ (1)ನೇ ಉಪಖಂಡ) ಎಂಬಂತೆ ಅದೇ ಶುಲ್ಕ
(ii) ಗೇಣಿಯ ಅವಲಂಬಿತ ಅಥವಾ ಇತರ ರೀತಿಯ ನವೀಕರಣ ಖಂಡದಿಂದ ಕೂಡಿದ ಅಥವಾ ಕೂಡಿಲ್ಲದ, ಹತ್ತು ವರ್ಷಗಳಿಗೆ ಮೀರಿದ ಅವಧಿಗಾಗಿ ಅಥವಾ ಶಾಶ್ವತ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗುವಲ್ಲಿ ಅಥವಾ ಯಾವುದೇ ನಿರ್ದಿಷ್ಟ	ಗೇಣಿಯ ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಬೆಲೆಯ ಮೇಲೆ ಪ್ರತಿ ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ಐದು ರೂಪಾಯಿ. ಪರಂತು ಗೇಣಿಯ ಒಪ್ಪಂದಕ್ಕೆ ಗೇಣಿಗೆ ಅಗತ್ಯವಾದ ಮೌಲ್ಯಾನುಸಾರ ಸ್ಟಾಂಪನ್ನು

ಅವಧಿಗಾಗಿ ಇರುವುದೆಂದು ತಾತ್ಪರ್ಯ ಹಚ್ಚಿರುವಾಗ ಮತ್ತು ಅಂಥ ಒಪ್ಪಂದದ ಮಾಗದಿರುವಲ್ಲಿ. ಅನುಸರಣೆಯಲ್ಲಿ ತರುವಾಯ ಗೇಣಿಯನ್ನು ಬರೆದು ಕೊಟ್ಟಿರುವ ಸಂದರ್ಭದಲ್ಲಿ ಅಂಥ ಗೇಣಿಯ ಮೇಲಿನ ಶುಲ್ಕವು ಹತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ

(ii) (2)ನೇ ಖಂಡದಲ್ಲಿ, 3ನೇ ಅಂಕಣದಲ್ಲಿ

(ಎ) ಪರಂತುಕದಲ್ಲಿ ''ಪರಂತು'' ಎಂಬ ಪದಗಳಿಗೆ, ''ಮತ್ತು ಪರಂತು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಹಾಗೆ ತಿದ್ದುಪಡಿಯಾದ ಪರಂತುಕಕ್ಕೆ ಮೊದಲು, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

''ಪರಂತು, ಔದ್ಯಮಿಕ ಯಂತ್ರೋಪಕರಣಗಳ ಸಂಬಂಧದಲ್ಲಿ ವಿಧಿಸಬಹುದಾದ ಗರಿಷ್ಠ ಶುಲ್ಕ ಹತ್ತು ಸಾವಿರ ರೂಪಾಯಿಗಳಾಗಿರತಕ್ಕದ್ದು.

(4) 34ನೇ ಅನುಚ್ಛೇದದಲ್ಲಿ (ಬಿ) ಖಂಡದಲ್ಲಿ 3ನೇ ಅಂಕಣದ ನಮೂದುಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

''ಅಂಥ ಪತ್ರದಿಂದ ಪ್ರಾಪ್ತವಾಗುವ ಮೊಬಲಗಿನ ಪ್ರತಿ ನೂರು ರೂಪಾಯಿಗಳು ಅಥವಾ ಅದರ ಭಾಗಕ್ಕೆ ನೂರು ರೂಪಾಯಿ, ಆದರೆ ಗರಿಷ್ಠ ಮೂರು ಲಕ್ಷ ರೂಪಾಯಿಗಳಿಗೆ ಒಳಪಟ್ಟು,''

(5) (ಎ) 41ನೇ ಅನುಚ್ಛೇದದಲ್ಲಿ (ಇ-ಎ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

''(ಇ-ಬಿ) ಬರೆದುಕೊಟ್ಟ ವ್ಯಕ್ತಿಯ ತಂದೆ, ತಾಯಿ, ಹೆಂಡತಿ ಅಥವಾ ಗಂಡ, ಮಗ ಅಥವಾ ಮಗಳ ಹೊರತಾದ ಅಂಥ ಇತರ ವ್ಯಕ್ತಿಗೆ ಸ್ಥಿರಸ್ವತ್ತಿನ ಮಾರಾಟಕ್ಕಾಗಿ ಅಧಿಕಾರ ನೀಡುವಾಗ ಅಧಿಕಾರ ಪತ್ರದ ವಿಷಯವಾದ ಆಸ್ತಿಯ ಮಾರುಕಟ್ಟೆ ಬೆಲೆಯ ಮೇಲೆ, ಪ್ರತಿ ನೂರು ರೂಪಾಯಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿ.

ಪರಂತು, ಅಂಥ ಲಿಖಿತ ಪತ್ರದ ಮೇಲೆ ಸಂದಾಯ ಮಾಡಲಾದ ಶುಲ್ಕವನ್ನು ಅಧಿಕಾರ ಪತ್ರದಾರಕನ ಅಥವಾ ಇತರ ವ್ಯಕ್ತಿಯ ಹೆಸರಿಗೆ ಆ ತರುವಾಯ ಬರೆದುಕೊಡಲಾದ ಕ್ರಯ ಪತ್ರಕ್ಕೆ ಸರಿ ಹೊಂದಿಸತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಮುದ್ರಾಂಕ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ ಹಾಗೂ ಕೆಲವು ಅನುಷಂಗಿಕ ತಿದ್ದುಪಡಿಗಳನ್ನು ಸಹ ಪ್ರಸ್ತಾಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಸುಮಾರು ಮೂವತ್ತು ಕೋಟಿ ರೂಪಾಯಿಗಳಷ್ಟು ಆದಾಯ ಉಂಟಾಗುತ್ತದೆ.

ಜೆ. ಹೆಚ್. ಪಟೀಲ್,
ಮುಖ್ಯಮಂತ್ರಿ.

ಯಾಕೂಬ್ ಷರೀಫ್,
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

"3.ಬಿ. ಕೆಲವು ಲಿಖಿತ ಪತ್ರಗಳಿಗೆ ಹೆಚ್ಚುವರಿ ಸುಂಕವನ್ನು ವಿಧಿಸಬಹುದು.-(1) ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ ಅನುಸೂಚಿಯ ಅನುಚ್ಛೇದಗಳೊಂದಿಗೆ ಓದಿಕೊಂಡ 3ನೇ ಪ್ರಕರಣದ ಅಡಿಯಲ್ಲಿ ಸುಂಕ ವಿಧಿಸಬಹುದಾಗಿರುವ ನಗರ ಯೋಜನಾ ಪ್ರದೇಶದ ಮಿತಿಗಳೊಳಗೆ ಇರುವ ಒಂದು ಸ್ಥಿರ ಸ್ವತ್ತಿನ ಹಸ್ತಾಂತರಣ, ವಿನಿಮಯ, ಒಪ್ಪಂದ, ದಾನ ಅಥವಾ ನಿರಂತರ ಗುತ್ತಿಗೆಗೆ ಅಂಥ ಹಸ್ತಾಂತರಣ, ವಿನಿಮಯ, ದಾನ, ಒಪ್ಪಂದ ಮತ್ತು ನಿರಂತರ ಗುತ್ತಿಗೆಯ ಮೇಲೆ ವಿಧಿಸಬಹುದಾದ ಅಂಥ ಸುಂಕದ ಮೇಲೆ ಶೇಕಡಾ ಐದರ ದರದಲ್ಲಿ ಹೆಚ್ಚುವರಿ ಸುಂಕವನ್ನು ವಿಧಿಸಬಹುದು.

9. ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿ ಮಾಡಿಕೊಳ್ಳಲು ಅಧಿಕಾರ.-(1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ.-

(ಕ) ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆಂದು ಅಭಿಪ್ರಾಯಪಟ್ಟರೆ, ಕರ್ನಾಟಕ ರಾಜ್ಯದಾದ್ಯಂತ ಅಥವಾ ಅದರ ಯಾವುದೇ ಭಾಗದಲ್ಲಿ ಲಿಖಿತಗಳ ಅಥವಾ ಅಂಥ ವರ್ಗಕ್ಕೆ ಸೇರಿದ ಯಾವುದೇ ಲಿಖಿತ ಅಥವಾ ವ್ಯಕ್ತಿಗಳ ಯಾವುದೇ ವಿಶಿಷ್ಟ ವರ್ಗದಿಂದ ಅಥವಾ ಅದರ ಪರವಾಗಿ ಅಥವಾ ಅಂಥ ವರ್ಗದ ಯಾರೇ ಸದಸ್ಯರಿಂದ ಅಥವಾ ಅವರ ಪರವಾಗಿ ಬರೆದುಕೊಟ್ಟಾಗ ಯಾವುದೇ ಲಿಖಿತಗಳಿಗೆ ವಿಧಿಸಬಹುದಾದಂಥ ಸುಂಕಗಳನ್ನು ಉತ್ತರಾನ್ವಯವಾಗಿಯೇ ಆಗಲಿ ಅಥವಾ ಪೂರ್ವಾನ್ವಯವಾಗಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು ; ಮತ್ತು

45.ಕ. ಕಡಿಮೆ ಮೌಲ್ಯದ ಹಸ್ತಾಂತರಣ ಲಿಖಿತ, ಇತ್ಯಾದಿಗಳೊಂದಿಗೆ ವ್ಯವಹರಿಸುವ ಬಗೆ.-(1) ನೋಂದಣಿ ಅಧಿನಿಯಮ, 1908ರ (ಕೇಂದ್ರ ಅಧಿನಿಯಮ 1908ರ XVI) ಮೇರೆಗೆ ನೇಮಕಗೊಂಡ ನೋಂದಣಿ ಅಧಿಕಾರಿಯು, ಹಸ್ತಾಂತರಣ ವಿನಿಮಯ ಅಥವಾ ದಾನದ ಯಾವುದೇ ಲಿಖಿತವನ್ನು ನೋಂದಾಯಿಸುವಾಗ ಹಸ್ತಾಂತರಣ ವಿನಿಮಯ ಅಥವಾ ವಸ್ತು ವಿಷಯವಾದಂಥ ಸ್ವತ್ತಿನ ಮಾರುಕಟ್ಟೆ ಮೌಲ್ಯವನ್ನು ಆ ಲಿಖಿತದಲ್ಲಿ ಸರಿಯಾಗಿ ನಮೂದಿಸಿಲ್ಲ ಎಂದು ನಂಬಲು ಕಾರಣವಿದ್ದರೆ, ಅವನು ಅಂಥ

(5) (2)ನೇ ಉಪ ಪ್ರಕರಣ ಅಥವಾ (3)ನೇ ಉಪ ಪ್ರಕರಣದ ಮೇರೆಗಿನ ಡೆಪ್ಯುಟಿ ಕಮೀಷನರನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಜಿಲ್ಲಾ ನ್ಯಾಯಾಧೀಶನ ಮುಂದೆ ಅಪೀಲನ್ನು ಹೂಡಬಹುದು ಮತ್ತು ಎಲ್ಲ ಅಂಥ ಅಪೀಲುಗಳನ್ನು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಬಹುದಾದಂಥ ಕಾಲದೊಳಗೆ ಹೂಡತಕ್ಕದ್ದು ಮತ್ತು ಅಂಥ ರೀತಿಯಲ್ಲಿ ಚುನಾವಣೆ ಮಾಡತಕ್ಕದ್ದು ಮತ್ತು ವಿಲೇ ಮಾಡತಕ್ಕದ್ದು.

ಅನುಸೂಚಿ

ಲಿಖಿತ ಪತ್ರಗಳ ಮೇಲೆ ಸ್ಟಾಂಪು ಶುಲ್ಕ

ಅನುಚ್ಛೇದ ಸಂಖ್ಯೆ	ಲಿಖಿತ ಪತ್ರದ ವಿವರ	ಸೂಕ್ತ ಸ್ಟಾಂಪ್ ಶುಲ್ಕ
5	ಅದರ ದಾಖಲೆಯ ಒಪ್ಪಂದ ಅಥವಾ ಒಂದು ಒಪ್ಪಂದದ ಜ್ಞಾಪನ ಪತ್ರ	
(ಎಫ್)	ನಿರ್ಮಾಣ ಅಥವಾ ಅಭಿವೃದ್ಧಿಗಾಗಿ ಅಥವಾ ಮಾರಾಟ ಅಥವಾ ವರ್ಗಾವಣೆಗಾಗಿ (ಯಾವುದೇ ರೀತಿಯಿಂದಾಗಲಿ) ಯಾವುದೇ ಹೆಸರಿನಿಂದ ಕರೆಯಲಾಗುವ ಪ್ರವರ್ತಕ ಅಥವಾ ಅಭಿವೃದ್ಧಿದಾರನಿಗೆ ಯಾವುದೇ ಚರಸ್ವತ್ತಿನ ಪ್ರಾಧಿಕಾರ ಅಥವಾ ಅಧಿಕಾರವನ್ನು ನೀಡುವುದಕ್ಕೆ ಸಂಬಂಧಿಸಿರುವಲ್ಲಿ,	ಒಪ್ಪಂದದ ವಿಷಯವಾಗಿರುವ ಸ್ವತ್ತಿನ ಮಾರುಕಟ್ಟೆ ಬೆಲೆಯ ಮೇಲೆ ಪ್ರತಿ ನೂರು ರೂಪಾಯಿ ಅಥವಾ ಅದರ ಭಾಗಕ್ಕೆ ಆರು ರೂಪಾಯಿಗಳು.

6(2)ಸಾಲದ ರೂಪದಲ್ಲಿ ಕೊಟ್ಟ ಅಥವಾ ಕೊಡ ಬೇಕಾದ ಹಣ ಅಥವಾ ಅಸ್ತಿತ್ವದಲ್ಲಿರುವ ಅಥವಾ ಭವಿಷ್ಯ ಋಣದ ಮರುಸಂದಾಯಕ್ಕಾಗಿ ಭದ್ರತೆಯ ರೂಪದಲ್ಲಿ ಅಂಥ ಠೇವಣಿ, ಗಿರವಿ ಅಥವಾ ಒತ್ತೆಯನ್ನು ಅಥವಾ ಅಡಮಾನವನ್ನು ಮಾಡಲಾಗಿರುವಲ್ಲಿ ಚರಸ್ವತ್ತಿನ ಗಿರವಿ ಅಥವಾ ಒತ್ತೆ ಅಥವಾ ಅಡಮಾನ	
(ಕ)	
(ಬಿ)ಅಂಥ ಸಾಲ ಅಥವಾ ಋಣವನ್ನು ತಗಾದೆ ಮಾಡಿದಾಗ ಅಥವಾ ಆ ಒಪ್ಪಂದವನ್ನು ರುಜುವಾತುಪಡಿಸಿದ ಲಿಖಿತ ಪತ್ರವನ್ನು ಬರೆದುಕೊಟ್ಟ ದಿನಾಂಕದಿಂದ ಮೂರು ತಿಂಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಸಂದಾಯ ಮಾಡಬೇಕಾಗಿದ್ದಲ್ಲಿ,	ಪ್ರತಿ ನೂರು ರೂಪಾಯಿ ಅಥವಾ ಅದರ ಭಾಗಕ್ಕೆ ಐವತ್ತು ಪೈಸೆ ಆದರೆ ಗರಿಷ್ಠ ಎರಡು ಲಕ್ಷ ರೂಪಾಯಿಗೆ ಒಳಪಟ್ಟು.
30(1) ಒಳಗೇಣಿ ಅಥವಾ ಉಪಗೇಣಿಯನ್ನು ಒಳಗೊಂಡಂತೆ ಗೇಣಿ ಮತ್ತು ಬಾಡಿಗೆ ಅಥವಾ ಒಳಬಾಡಿಗೆಗೆ ಕೊಡಲು ಯಾವುದೇ ಒಪ್ಪಂದ	
(IV) ಗೇಣಿಯು ಹತ್ತು ವರ್ಷಗಳಿಗೆ ಮೀರಿದ, ಆದರೆ ಇಪ್ಪತ್ತು ವರ್ಷಗಳನ್ನು ಮೀರಿದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ	ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ಎರಡರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ.
(V) ಗೇಣಿಯು ಇಪ್ಪತ್ತು ವರ್ಷಗಳಿಗೆ, ಮೀರಿದ ಆದರೆ ಮೂವತ್ತು ವರ್ಷಗಳನ್ನು ಮೀರಿದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ	ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ಮೂರರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ.

(i) ಗೇಣಿಯ ಮೂವತ್ತು ವರ್ಷಗಳಿಗೆ ಮೀರಿದ ಆದರೆ ಒಂದು ನೂರು ವರ್ಷಗಳಿಗೆ ಮೀರಿದ ಅವಧಿಗಾಗಿ ಇದೆಯೆಂದು ತಾತ್ಪರ್ಯವಾಗುವಲ್ಲಿ

ಕಾದಿಟ್ಟ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗು ಅಥವಾ ಮೌಲ್ಯದ ನಾಲ್ಕರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ.

(ii) ಗೇಣಿಯು ಒಂದು ನೂರು ವರ್ಷಗಳಿಗೆ ಮೀರಿದ ಅವಧಿ ಅಥವಾ ಶಾಶ್ವತವಾಗಿ ಇರುವುದಾಗಿ ತಾತ್ಪರ್ಯವಾಗುವಲ್ಲಿ

ಗೇಣಿಯ ಮೊದಲ ಐವತ್ತು ವರ್ಷಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾ-ಗುವಂಥ ಅಥವಾ ವಶಾವಣೆ ಮಾಡಬೇಕಾಗುವಂಥ ಬಾಡಿಗೆಗಳ ಪೂರ್ಣ ಮೊಬಲಗಿನ ಆರನೇ ಒಂದು ಭಾಗಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂಖ್ಯೆ 20) ಎಂಬಂತೆ ಅದೇ ಸುಂಕ.

(viii) ಗೇಣಿಯು ಯಾವುದೇ ನಿಶ್ಚಿತ ಅವಧಿಗಾಗಿ ಇರುವುದೆಂದು ತಾತ್ಪರ್ಯವಾಗದಿರುವಲ್ಲಿ

ಗೇಣಿಯು ಹತ್ತು ವರ್ಷಗಳ ಕಾಲ ಮುಂದುವರೆದರೆ ಆ ಮೊದಲ ಹತ್ತು ವರ್ಷಕ್ಕಾಗಿ ಸಂದಾಯ ಮಾಡಬೇಕಾಗುವ ಅಥವಾ ವಶಾವಣೆ ಮಾಡಬೇಕಾಗಿರುವಂಥ ಸರಾಸರಿ ವಾರ್ಷಿಕ ಬಾಡಿಗೆಯ ಮೊಬಲಗಿನ ಅಥವಾ ಮೌಲ್ಯದ ಮೂರರಷ್ಟಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ.

(ಖ) ಗೇಣಿಯನ್ನು ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡವಾಗಿ ಕೊಟ್ಟ ಹಣಕ್ಕೆ ಮಂಜೂರು ಮಾಡಿರುವಲ್ಲಿ ಮತ್ತು ಯಾವುದೇ ಬಾಡಿಗೆಯನ್ನು ಕಾಯ್ದಿರಿಸದೇ ಇರುವಲ್ಲಿ

ಗೇಣಿಯಲ್ಲಿ ವಿವರಿಸಲಾದಂಥ ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡದ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿನ ಹಸ್ತಾಂತರಣ (ಸಂ. 20) ಎಂಬಂತೆ ಅದೇ ಸುಂಕ.

(ಗ) ಗೇಣಿಯನ್ನು ರುಸುಮು ಅಥವಾ ಪ್ರೀಮಿಯಂ ಅಥವಾ ಕಾಯ್ದಿಟ್ಟ ಬಾಡಿಗೆಯ ಜೊತೆಗೆ ಕೊಟ್ಟ ಹಣಕ್ಕಾಗಿ ಕೊಟ್ಟಿರುವಲ್ಲಿ

ಯಾವುದೇ ರುಸುಮು ಅಥವಾ ಪ್ರೀಮಿಯಂ ಅಥವಾ ಮುಂಗಡವನ್ನು ಸಂದಾಯ ಅಥವಾ ವಶಾವಣೆ ಮಾಡದಿದ್ದರೆ ಅಂಥ ಗೇಣಿಯ ಮೇಲೆ ಸಂದಾಯ ಮಾಡಬಹುದಾಗಿದ್ದಂಥ ಸುಂಕದ ಜೊತೆಗೆ ಗೇಣಿಯಲ್ಲಿ ಹೇಳಲಾದಂತೆ ಅಥವಾ ರುಸುಮು ಅಥವಾ ಪ್ರೀಮಿಯಂ ಅಥವಾ

ಮುಂಗಡದ ಮೊಬಲಗು ಅಥವಾ ಮೌಲ್ಯಕ್ಕೆ ಸಮನಾದ ಮಾರುಕಟ್ಟೆ ಮೌಲ್ಯಕ್ಕಾಗಿ ಹಸ್ತಾಂತರಣ (ಸಂ.20) ಎಂಬಂತೆ ಅದೇ ಸುಂಕ. ಪರಂತು ಗೇಣಿಯ ಒಪ್ಪಂದಕ್ಕೆ ಗೇಣಿಗೆ ಅಗತ್ಯವಾದ ಮೌಲ್ಯಾನುಸಾರವಾದ ಸ್ಟ್ಯಾಂಪನ್ನು ಹಚ್ಚಿರುವಾಗ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ಗೇಣಿಯನ್ನು ತರುವಾಯದಲ್ಲಿ ಬರೆದುಕೊಟ್ಟಿರುವ ಯಾವುದೇ ಸಂದರ್ಭದಲ್ಲಿ ಅಂಥ ಗೇಣಿಯ ಮೇಲಿನ ಸುಂಕವು ಎರಡು ರೂಪಾಯಿ ಇಪ್ಪತ್ತೈದು ಪೈಸೆಗಳನ್ನು ಮೀರತಕ್ಕುದಲ್ಲ.

(2) ಗೇಣಿ ಅಥವಾ ಉಪ-ಗೇಣಿಯನ್ನು ಒಳಗೊಂಡಂತೆ ಚರಸ್ವತ್ತಿನ ಗೇಣಿ ಮತ್ತು ಬಾಡಿಗೆ ಅಥವಾ ಒಳ ಬಾಡಿಗೆಗೆ ಕೊಡುವ ಯಾವುದೇ ಒಪ್ಪಂದ.

(ಎ)

(ಬಿ) ಗೇಣಿಯನ್ನು ಜುಲ್ಮಾನೆಗಾಗಿ ಅಥವಾ ಪ್ರೀಮಿಯಂಗಾಗಿ ಅಥವಾ ಸಾಲ ಕೊಟ್ಟ ಹಣಕ್ಕಾಗಿ ಕಾಯ್ದಿರಿಸಲಾದ ಬಾಡಿಗೆಯ ಜೊತೆಗೆ ಕೊಟ್ಟಿದ್ದಲ್ಲಿ,

ಯಾವುದೇ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ಸಾಲದ ಮೊಬಲಗನ್ನು ಸಂದಾಯ ಮಾಡದಿದ್ದಿರೆ ಅಥವಾ ಕೊಡದಿದ್ದರೆ, ಅಂಥ ಗೇಣಿಯ ಮೇಲೆ ಸಂದಾಯ ಮಾಡಬಹುದಾಗಿದ್ದಂಥ ಶುಲ್ಕದ ಜೊತೆಗೆ, ಗೇಣಿಯಲ್ಲಿ ಹೇಳಲಾದಂತೆ ಅಂಥ ಜುಲ್ಮಾನೆ ಅಥವಾ ಪ್ರೀಮಿಯಂ ಅಥವಾ ಸಾಲದ ಮೊಬಲಗಿನ ಮೇಲೆ ಪ್ರತಿ ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ ಐವತ್ತು ಪೈಸೆ ಆದರೆ ಎರಡು ಲಕ್ಷ ರೂಪಾಯಿಗಳ ಗರಿಷ್ಠ ಮೊಬಲಗಿಗೆ ಒಳಪಟ್ಟು, ಪರಂತು ಗೇಣಿಯ ಒಪ್ಪಂದಕ್ಕೆ ಗೇಣಿಗೆ ಅಗತ್ಯವಾದ ಮೌಲ್ಯಾನುಸಾರ ಸ್ಟ್ಯಾಂಪನ್ನು ಹಚ್ಚಿರುವಾಗ ಮತ್ತು ಅಂಥ ಒಪ್ಪಂದದ ಅನುಸರಣೆಯಲ್ಲಿ ಗೇಣಿಯನ್ನು ತರುವಾಯ ಬರೆದುಕೊಟ್ಟಿರುವಲ್ಲಿ ಅಂಥ ಗೇಣಿಯ ಮೇಲಿನ ಶುಲ್ಕವು ಹದಿನೈದು ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(ಸಂಖ್ಯೆ 47) ಇವುಗಳಿಗೆ ಸಂಬಂಧಪಟ್ಟ ಒಪ್ಪಂದವಲ್ಲದ

ಅಡಮಾನ ಪತ್ರ.

(ಗ)

(ಖ) ಹಿಂದೆ ಹೇಳಿದಂತೆ ಸ್ವಾಧೀನವನ್ನು ಕೊಟ್ಟಿಲ್ಲದಿರುವಾಗ ಅಥವಾ ಕೊಡಲು ಒಪ್ಪದಿರುವಾಗ

ಎರಡು ಲಕ್ಷ ಐವತ್ತು ಸಾವಿರ ರೂಪಾಯಿಗಳ ಗರಿಷ್ಠ ಮೊಬಲಗಿಗೆ ಒಳಪಟ್ಟು ಅಂಥ ಪತ್ರದ ಮೂಲಕ ಭದ್ರತೆಗೊಳಿಸಿದ ಮೊಬಲಗಾಗಿನ ಬಂಧಪತ್ರ (ಸಂಖ್ಯೆ 12) ಎಂಬಂತೆ ಅದೇ ಸುಂಕ.

41. ಮೊಖ್ತಾರನಾಮೆಗಳು-ಪ್ರತಿನಿಧಿ ಪತ್ರವಲ್ಲದ (2(1)(ಸಿ) ಪ್ರಕರಣದ ಮೂಲಕ ಪರಿಭಾಷಿಸಿದಂತೆ)

ವಿವರಣೆ: ಈ ಅನುಚ್ಛೇದದ ಉದ್ದೇಶಕ್ಕಾಗಿ ಒಂದೇ ಫರ್ಮಿಗೆ ಸಂಬಂಧಪಟ್ಟ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಯನ್ನು ಒಬ್ಬ ವ್ಯಕ್ತಿಯೆಂದು ಭಾವಿಸತಕ್ಕದ್ದು.

ಅನುಬಂಧ - IV

ಕರ್ನಾಟಕ ವಿಧಾನ ಸಭೆ

ಹತ್ತನೇ ವಿಧಾನ ಸಭೆ

(ಏಳನೇ ಅಧಿವೇಶನ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 1998

(1998ರ ವಿಧಾನ ಸಭಾ ವಿಧೇಯಕ ಸಂಖ್ಯೆ 10)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡುವ ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ನಲವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ. -

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 1998 ಎಂದು ಕರೆಯತಕ್ಕದ್ದು.

(2) ಇದು 1998ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 3ಎ ಪ್ರಕರಣದ ತಿದ್ದುಪಡಿ :- ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) 3ಎ ಪ್ರಕರಣದಲ್ಲಿ, -

(ಅ) 1ನೇ ಉಪ-ಪ್ರಕರಣದಲ್ಲಿ "ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ, ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಯೊಳಗೆ" ಎಂಬ ಪದಗಳಿಗೆ "ಕರ್ನಾಟಕ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ಬಂಡವಾಳದಲ್ಲಿ ಉಪಯೋಗಿಸುವ ಉದ್ದೇಶಕ್ಕಾಗಿ 1998ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಆ) ಈ ಪ್ರಕರಣದ ವಿವರಣೆಯನ್ನು ಬಿಟ್ಟು ಬಿಡತಕ್ಕದ್ದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಆಯವ್ಯಯದ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಕಾರ್ಯಗತಗೊಳಿಸಲು ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 35) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದಾಗಿ ಸುಮಾರು ಹದಿನೈದು ಕೋಟಿ ರೂಪಾಯಿಗಳಷ್ಟು ಆದಾಯವು ಉಂಟಾಗುತ್ತದೆ.

ಪಿ.ಜಿ.ಆರ್. ಸಿಂಧ್ಯಾ
ಸಾರಿಗೆ ಸಚಿವರು

ಯಾಕೂಬ್ ಷರೀಫ್
ಕಾರ್ಯದರ್ಶಿ.

ಅನುಬಂಧ

ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) ಉದ್ಧೃತ ಭಾಗಗಳು.

"3ಎ. ಉಪ ಕರವನ್ನು ವಿಧಿಸುವುದು:- (ಅ) ಬೆಂಗಳೂರು ಸಮೂಹ ತ್ವರಿತ ಸಾರಿಗೆ ವ್ಯವಸ್ಥೆಯ ಉದ್ದೇಶಕ್ಕಾಗಿ, ಬೆಂಗಳೂರು ನಗರ ಯೋಜನಾ ಪ್ರದೇಶದ ಮಿತಿಯೊಳಗೆ ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) ಅಡಿ ನೊಂದಾಯಿತವಾದ ಮೋಟಾರು ವಾಹನಗಳ ಮೇಲೆ 3ನೇ ಪ್ರಕರಣದಡಿ ವಿಧಿಸಲಾಗುವ ತೆರಿಗೆಯ ಶೇಕಡ 5ರ ದರದಂತೆ ಉಪಕರದ ರೂಪದಲ್ಲಿ ತೆರಿಗೆ ವಿಧಿಸತಕ್ಕದ್ದು ಮತ್ತು ವಸೂಲು ಮಾಡತಕ್ಕದ್ದು.

(ಆ) (1)ನೇ ಉಪ ಪ್ರಕರಣದಡಿ ವಿಧಿಸಲಾದ ಉಪಕರ 3ನೇ ಪ್ರಕರಣದಡಿ ವಿಧಿಸಲಾದ ಯಾವುದೇ ತೆರಿಗೆಗೆ ಹೆಚ್ಚಿಗೆಯಾಗಿರತಕ್ಕದ್ದು.

(ಇ) ತೆರಿಗೆಯ ಮರುಸಂದಾಯ ಮತ್ತು ವಿನಾಯಿತಿಗೆ ಸಂಬಂಧಿಸಿದ ಉಪಬಂಧಗಳು ಮತ್ತು ನಿಯಮಗಳನ್ನೊಳಗೊಂಡಂತೆ ಈ ಅಧಿನಿಯಮ ಉಪಬಂಧಗಳು ಮತ್ತು ಅದರಡಿ ಮಾಡಿದ ನಿಯಮಗಳು, ಈ ಅಧಿನಿಯಮದ ಅಡಿಯಲ್ಲಿ ಮೋಟಾರು ವಾಹನಗಳ ತೆರಿಗೆ ವಿಧಿಸುವಿಕೆ, ನಿರ್ಧರಣೆ ಮತ್ತು ವಸೂಲಿಗೆ ಅನ್ವಯವಾಗುವಷ್ಟರ ಮಟ್ಟಿಗೆ (1)ನೇ ಉಪ - ಪ್ರಕರಣದ ಅಡಿಯಲ್ಲಿ ಸಂದಾಯಮಾಡತಕ್ಕ ಉಪಕರದ ವಿಧಿಸುವಿಕೆ, ನಿರ್ಧರಣೆ ಮತ್ತು ವಸೂಲಿಯ ಸಂಬಂಧದಲ್ಲೂ ಅನ್ವಯವಾಗತಕ್ಕದ್ದು.

ವಿವರಣೆ :- ಈ ಪ್ರಕರಣದ ಉದ್ದೇಶಕ್ಕಾಗಿ, ಬೆಂಗಳೂರು ನಗರ ಯೋಜನಾ ಪ್ರದೇಶ ಎಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11) 4ಎ ಪ್ರಕರಣದ ಅಡಿ ಘೋಷಿಸಲಾದಂತೆ ಬೆಂಗಳೂರು ನಗರ ಯೋಜನಾ ಪ್ರದೇಶ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು, ತುಮಕೂರು, ಕಾಸೂ. 47 - 350 ಪುಸ್ತಕಗಳು ದಿನಾಂಕ 07-11-2001

(B)025216

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,ಸಶಾಮು. ತುಮಕೂರು.